ನವಯುಗ

1—9—1966



೨೦ ಪೈಸೆ

ಕಥಾ ಪ್ರಪಂಚ

ಪೂಜಾ ಫಲ

ಬರೆದವರು
ಶ್ರೀ ಸ. ನಾರಾಯಣ

ಪ್ರಸಾದ ಕುರ್ಚಿಯಲ್ಲಿ ಕುಳಿತು ಯೋಚನಾ ಮಗ್ನನಾಗಿದ್ದ. ಓದುವುದಕ್ಕೆ ಬರೆಯುವುದಕ್ಕಿರಲಿ ಊಟ, ತಿಂಡಿ, ವಿಶ್ರಾಂತಿಗೂ ಅವನ ಗಮನ ಹರಿದಿರಲಿಲ್ಲ. ನಿಮುಖವಾಗಿ ಬಂದಿದ್ದ ಪರಿಸ್ಥಿತಿ ಅವನನ್ನು ಕಂಗೆಡಿಸಿತ್ತು.

ಪ್ರಸಾದ ಎಂದಿನಂತೆ ಉಲ್ಲಾಸಗೊಂಡಿರದೆ ಯಾವುದೋ ಚಿಂತೆಯಲ್ಲಿ ಮುಳುಗಿದ್ದಾನೆ ಎನ್ನುವ ಯೋಚನೆ ಅವನ ಪತ್ನಿ ವಾಣಿಗೆ ಅರಿವಾಗದಿರಲಿಲ್ಲ. ಊಟಕ್ಕೆ ಬಾರದಿದ್ದ ಪತಿಯನ್ನು ಊಟದ ಸಮಯ ಮೀರಿತೆಂದು ಎಚ್ಚರಿಸಲುವಾಗಿ ಪತಿಯ ಕೋಣೆಗೆ ಬಂದಳು.

ವಾಣಿ ಕುರ್ಚಿಯ ಪಕ್ಕದಲ್ಲಿ ನಿಂತರೂ ಪ್ರಸಾದನಿಗೆ ಆಲೋಚನೆಯ ಗಮನ ಬಗೆ ಹರಿಯಲಿಲ್ಲ. ಸ್ವಲ್ಪ ಹೊತ್ತಿನ ವರೆಗೆ ಕಾದು ನಿಂತ ವಾಣಿ ಕೊನೆಗೆ "ಊಟದ ಹೊತ್ತಾದರೂ ಬರುವುದು ಬೇಡವೆ ಏಳಿ' ಎಂದಳು.

ಪ್ರಸಾದ ಅನ್ಯ ಮನಸ್ಕನಾಗಿ ಕುಳಿತೇ ಇದ್ದ. ವಾಣಿಗೆ ಗಾಭರಿಯೂ ಆಯಿತು. ಆತಂಕಗೊಂಡವಳಂತೆ "ಯಾವುದೋ ಚಿಂತೆಯನ್ನು ಹಚ್ಚಿಕೊಂಡು ಕೋಣೆಯಲ್ಲಿ ಕುಳಿತರೆ ಆಗುತ್ತದೆಯೇ. ಮೊದಲು ಊಟ ಮಾಡಿ ಅನಂತರ ಯೋಚಿಸಿ" ಎಂದಳು.

ಪ್ರಸಾದ ಪ್ರತಿ ಹೇಳದೆ ಮೌನದಿಂದಲೇ ಹೆಂಡತಿಯನ್ನು ಹಿಂಬಾಲಿಸಿದ.

ತನ್ನೊಂದಿಗೆ ನಿತ್ಯವೂ ಕೆಲ ಗಂಟೆಗಳ ಕಾಲ ಇದರಲ್ಲಿಯೂ ಉಳಿದ ವೇಳೆಯಲ್ಲಿ ವಿನೋದದಿಂದ, ಸಹಜ ಸಂಭಾಷಣೆ ತೊಡಗಿರುತ್ತಿದ್ದ ಯಜಮಾನರು ಇಂದು ಮಾತು ಬಾರದವರಂತೆ ಮೌನ ವಹಿಸಿರುವುದನ್ನು ಕಂಡು ತಾಳಲಾರದೆ ವಾಣಿ "ನಿಮ್ಮ ನೊಂದ ಮುಖ, ಈ ಮೌನವನ್ನು ನೋಡಲಾರೆ. ನಿಮಗೆ ಇಂದು ಏನಾಗಿದೆ ಹೇಳಿ" ಎಂದು ಮೆಲ್ಲಗೆ ಪ್ರಶ್ನಿಸಿದಳು.

"ನನಗೊಬ್ಬನಿಗೇ ಆ ಚಿಂತೆ ಸಾಕು ವಾಣಿ, ನಿನಗೆ ಆ ವಿಷಯವನ್ನು ಹೇಳಿ ನಿನಗೇಕೆ ಬೇಸರ ಪಡಿಸಲಿ. ಅದು ನನ್ನ ದುರ್ದೃಷ್ಟ. ನಿನಗೇಕೆ ವೃಥಾ ತೊಂದರೆ" ಎಂದ ಪ್ರಸಾದ.

ಪತಿಯನ್ನು ಯಾವುದೋ ಬಲವಾದ ಸಮಸ್ಯೆ ಕಾಡಿದೆ ಎಂಬುದನ್ನು ಗ್ರಹಿಸಿದಳು ವಾಣಿ. ಅವಳ ಬಾಯಿಂದ ಮಾತೇ ಹೊರಡದಾಯಿತು.

ಪ್ರಸಾದ ಅನ್ಯ ಮನಸ್ಕನಾಗಿಯೇ ಊಟ ಮುಗಿಸಿದ.

ಒಲವಿನ ಪತಿ ಚಿಂತೆಯಲ್ಲಿ ನೊಂದು ಅನುಭವಿಸುತ್ತಿರುವ ಮೂಕ ವೇದನೆಯನ್ನು ನೆನಪು ಮಾಡಿಕೊಂಡೊಡನೆಯೇ ವಾಣಿಯ ಕಣ್ಣಲ್ಲಿ ನೀರು ತುಂಬಿತು. ಊಟವ ಶಾಸ್ತ್ರ ಮುಗಿಸಿ, ಮನೆಗೆಲಸವನ್ನು ಅವಸರದಿಂದ ಪೂರೈಸಿ ಕೋಣೆಗೆ ಬಂದಳು ವಾಣಿ.

ಪ್ರಸಾದ ಚಿಂತೆಯ ಹೊರೆ ಹೊತ್ತು ಮೇಜಿನ ಮೇಲೆ ತಲೆ ಇಟ್ಟು ಮಲಗಿದ್ದ. ಚಿಂತೆಯ ಹೊರೆಯೇ ವಿಶೇಷವಾಗಿದ್ದುದರಿಂದ ಅವನ ಬಳಿ ನಿದ್ದೆ ಸುಳಿದಿರಲಿಲ್ಲ. ಮೇಜಿನ ಮೇಲೆ ಹಾಲಿನ ಲೋಟವನ್ನಿಟ್ಟ ವಾಣಿ ಪತಿಗೆ ಎಚ್ಚರವಾಗುವಂತೆ ಮೆಲ್ಲಗೆ "ರೀ ಹಾಲಿಟ್ಟಿದ್ದೇನೆ ತೆಗೆದುಕೊಳ್ಳಿ ಆರಿ ಹೋಗುತ್ತದೆ' ಎಂದಳು.

ಪ್ರಸಾದ ಮಿಸುಕಲಿಲ್ಲ, ಒಮ್ಮೆ ಕಣ್ಣು ಬಿಟ್ಟು ಹೆಂಡತಿಯನ್ನು ನೋಡಿ ಮತ್ತೆ ಕಣ್ಣು ಮುಚ್ಚಿದ. ವಾಣಿ ಮಂಚದ ಮೇಲಿನ ಹಾಸಿಗೆಯನ್ನು ಸರಿಪಡಿಸಿ ಪತಿಯ ಕುರ್ಚಿಯ ಬಳಿ ಬಂದು ನಿಂತಳು.

ವಾಣಿ ಪತಿಯ ಬೆನ್ನ ಮೇಲೆ ಕೈ ಹಾಕಿ ಮೃದುವಾಗಿ "ರೀ" ಎಂದಳು. ಪ್ರಸಾದ ಕತ್ತೆತ್ತಿ "ಕುಳಿತುಕೋ ವಾಣಿ ನಿಂತೇ ಇದ್ದೀಯಲ್ಲ" ಎಂದ. ವಾಣಿ ಹಾಲಿನ ಲೋಟದ ಕಡೆಗೆ ನೋಡುತ್ತಾ "ಹಾಲು ಕುಡಿಯಲೇ ಇಲ್ಲವಲ್ಲ" ಎಂದಾಗ ಪ್ರಸಾದ "ನನಗೇನೂ ಬೇಡ ವಾಣಿ ನೀನೇ ಕುಡಿದು ಬಿಡು" ಎಂದ.

ಪತಿಯ ಅಂದಿನ ವಿಚಿತ್ರ ವರ್ತನೆಯಿಂದ ವಾಣಿಯ ಹೃದಯ ಕಡೆಯುದಾಗಿ ದುಃಖ ಉಕ್ಕಿ ಬಂತು. ಕೂಡಲೇ ಅಲ್ಲಿಂದೆದ್ದು ಮಂಚದ ಮೇಲೆ ಕುಳಿತು ಬಿಕ್ಕಿ ಬಿಕ್ಕಿ ಅಳಲಾರಂಭಿಸಿದಳು. ಪ್ರಸಾದನಿಗೆ ಗಾಬರಿಯಾಯಿತು. ಕೂಡಲೇ ಹೆಂಡತಿಯ ಪಕ್ಕದಲ್ಲಿ ಕುಳಿತು "ಅಳಬೇಡ ವಾಣಿ... ಏನಾಯ್ತು' ಅಂದ.

ವಾಣಿ ಬಿಕ್ಕುತ್ತಲೇ "ನನ್ನಲ್ಲಿ ನಿಮಗೆ ನಂಬಿಕೆ, ಪ್ರೀತಿಯೇ ಇಲ್ಲ. ನಿಮ್ಮ ಮನಸ್ಸಿನ ನೋವು ದುಗುಡ ನೋಡಲಾರದೆ ಪ್ರಶ್ನಿಸಿದುದಕ್ಕೆ ನೀವು ಉತ್ತರವನ್ನೇ ಕೊಡಲಿಲ್ಲ. ನನಗೆ ಹೇಳಬಾರದಂತಹ ಸಂಗತಿಯೇ ಅದು... ಈಗ್ಗೆ ಕೆಲವಾರು ದಿನಗಳಿಂದಲೂ ನಿಮಗೆ ಯಾವುದೋ ಮಂಕು ಕವಿದಿದೆ. ನಾನು ನಿಮ್ಮ ಅರ್ಧಾಂಗಿಯಲ್ಲವೆ__ ನನಗೆ ನಿಮ್ಮ ಸುಖದಂತೆ ದುಃಖದಲ್ಲಿಯೂ ಭಾಗಿಯಾಗುವ ಅರ್ಹತೆ ಇಲ್ಲವೆ?" ಎಂದಳು.

ಪ್ರಸಾದ ಹೆಂಡತಿಯ ಕಣ್ಣೀರನ್ನು ತಡೆಯುತ್ತಾ "ನಾನು ಅನುಭವಿಸುತ್ತಿರುವ ನೋವೇ ಸಾಕು. ನಿನಗೇಕೆ ಅದರ ಗೋಳು ಎಂದು ಹೇಳಲಿಲ್ಲ ಅಷ್ಟೆ ವಾಣಿ" ಎಂದು ಗಂಭೀರವಾಗಿ ನುಡಿದ.

ವಾಣಿ ಪತಿಯನ್ನಪ್ಪಿಕೊಂಡು, ಮನಸ್ಸಮಾಧಾನದೊರೆಯುವ ವರೆಗೆ ಅತ್ತಳು.

೨

ಪ್ರಸಾದ ಬೆಂಗಳೂರಿನ ಪ್ರಸಿದ್ಧ ಪತ್ರಿಕೆಯೊಂದರಲ್ಲಿ ಸಹ ಸಂಪಾದಕನಾಗಿ ದುಡಿಯುತ್ತಿದ್ದ. ಅವನು ತನ್ನ ಪ್ರತಿಭಾಶಕ್ತಿಯಿಂದ ತನ್ನ ವೃತ್ತಿ ಕ್ಷೇತ್ರದಲ್ಲಿ ಸಹೋದ್ಯೋಗಿಗಳ, ಅಭಿಮಾನಿಗಳ ಪ್ರೇಮ ವಿಶ್ವಾಸಕ್ಕೆ ಪಾತ್ರನಾಗಿದ್ದ. ಪ್ರಸಾದನಲ್ಲಿ ಸ್ವಾಭಿಮಾನ, ಸಂಕೋಚ ಪ್ರವೃತ್ತಿ, ನಿರ್ವ್ಯಸನತ್ವ ಹುಟ್ಟಿನೊಂದಿಗೇ ಮೈಗೂಡಿ ಬಂದಿದ್ದುವು. ಬೇರೆಯವರ ನೋವನ್ನು ತಾನು ಪಡೆದು ತನ್ನ ಸುಖ-ಸಂತೋಷವನ್ನು ದುಃಖಿಗಳಿಗೆ ಹಂಚಿ ಸಂತೋಷಿಸುವಂತಹ ಉದಾರ ಉನ್ನತ ಸ್ವಭಾವ ಪ್ರಸಾದನದು.

ದೀನ ದಲಿತರ, ನಿಸ್ಸಹಾಯಕರ ಸೇವೆಗೆ ಕೈ ಮೀರಿ ಹಣವನ್ನು ಖರ್ಚು ಮಾಡುತ್ತಿದ್ದ ಪ್ರಸಾದ. ಅವನ ದುಡಿಮೆಯ ಬಹುಭಾಗ ಅನಾಥಾಲಯದ ಮಕ್ಕಳಿಗೆ, ಬಡ ವಿದ್ಯಾರ್ಥಿಗಳಿಗೆ ವಿನಿಯೋಗವಾಗುತ್ತಿತ್ತು. ಸರಳ ವ್ಯಕ್ತಿತ್ವ ನಿರಾಡಂಬರ ಜೀವನ ಪ್ರಸಾದನದು.

ತನ್ನ ಹಲವಾರು ಲೇಖನ, ಕಥೆ, ನಾಟಕಗಳಿಂದ ಸಾಹಿತ್ಯ ಪ್ರಿಯರಿಗೆ ಚಿರಪರಿಚಿತನಾಗಿದ್ದ ಪ್ರಸಾದ ತಾನು ಬರಹಗಾರನೆನ್ನುವ ಅಹಂಕಾರ ಪ್ರಸಾದನಿಗಿರಲಿಲ್ಲ. ನಾನು ಸಾಹಿತ್ಯ ಸರಸ್ವತಿಯ ಸೇವಕನೆನ್ನುವ ಹೆಮ್ಮೆ ಅವನಿಗಿತ್ತು.

ಪ್ರಸಾದನ ತಂದೆತಾಯಿಗಳು ದೂರದ ಹಳ್ಳಿಯೊಂದರಲ್ಲಿ ನೆಮ್ಮದಿಯಿಂದ ಜೀವನ ಸಾಗಿಸಿಕೊಂಡು ಹೋಗಿದ್ದರು. ತಂದೆತಾಯಿಗಳ ಆಸರೆ ಮಗನಿಗಾಗಲಿ, ಮಗನ ಅವಶ್ಯಕತೆ ತಂದೆಗಾಗಲಿ ಇರಲಿಲ್ಲ. ಒಂದು ವಿಧದಲ್ಲಿ ಪ್ರಸಾದ ತಂದೆತಾಯಿಗಳ ಇಚ್ಛೆಗೆ ವಿರೋಧವಾಗಿಯೇ ತನ್ನ ವಿದ್ಯಾಭ್ಯಾಸದ ಒಂದು ಹಂತ ತಲುಪಿದೊಡನೆಯೇ ಸಾಹಿತ್ಯ ಕ್ಷೇತ್ರದ ಪರಿಚಯ ಮಾಡಿಕೊಂಡು ಪತ್ರಿಕಾರಂಗಕ್ಕೆ ಅಡಿ ಇರಿಸಿದ್ದ. ಅವನ ಸಾಹಿತ್ಯ ಸೇವೆ ಅವ್ಯಾಹತವಾಗಿ ಸಾಗಿತ್ತು. ಪ್ರಸಾದ ಓದುಗರ ಅಭಿಮಾನ, ವಿಶ್ವಾಸಕ್ಕೆ ಪಾತ್ರನಾಗದಿರಲಿಲ್ಲ.

ಪ್ರಸಾದನ ಅಲ್ಪ ಕೀರ್ತಿ, ನಿಷ್ಕಲ್ಮಷ ಸರಳ ವರ್ತನೆ, ಉದಾರ ಗುಣ, ಪ್ರತಿಭಾಪೂರ್ಣ ಸಾಹಿತ್ಯ ಸೇವೆಗೆ ಮನಸೋತು ವಾಣಿ ತಾನಾಗಿಯೇ ಒಲಿದು ಅವನ ಮಡದಿಯಾದಳು. ವಾಣಿಯ ಆಗಮನ ಪ್ರಸಾದನ ಜೀವನದಲ್ಲಿ ಎಷ್ಟು ಅನಿರೀಕ್ಷಿತವಾಗಿತ್ತೋ ಅಷ್ಟೇ ಅವನ ಜೀವನದಲ್ಲಿ ನೆಮ್ಮದಿಯನ್ನು ನೀಡುವ ತಾಣವೂ ಆಯಿತು.

ವಾಣಿ ಹಿರಿಯ ಅಡ್ವೋಕೇಟ್ ಕೇಶವ ರಾಯರ ಪುತ್ರಿ. ಸಭೆಯೊಂದರಲ್ಲಿ ಪ್ರಸಾದನ ಪರಿಚಯ ಕೇಶವ ರಾಯರಿಗಾಯಿತು. ಕ್ರಮೇಣ ಸ್ನೇಹವಾಯಿತು. ಪ್ರಸಾದನ ಉದಾತ್ತ ನೀತಿ, ನಡತೆ, ಸರಳ ಜೀವನ ರಾಯರನ್ನೂ ಆಕರ್ಷಿಸಿತು. ಪ್ರಸಾದನಿಗೆ ಅವರ ಮನೆಯವರೆಲ್ಲರ ಪರಿಚಯವೂ ಆಯಿತು. ಪ್ರಸಾದನ ಸಾಹಿತ್ಯಾರಾಧಕಳಾಗಿದ್ದ ವಾಣಿ ಪ್ರಸಾದನ ಆರಾಧಕಳೂ ಆದಳು.

ವಾಣಿ ಪ್ರಸಾದನವಿನಃ ಯಾರನ್ನೂ ಮದುವೆಯಾಗುವುದಿಲ್ಲವೆಂದು ಹಟ ಹಿಡಿದಳು. ಕೇಶವರಾಯರಿಗೂ ಮಗಳ ಅಭಿಪ್ರಾಯ ಮಾನ್ಯವಾಗಿತ್ತು. ವಾಣಿಯ ತಾಯಿ ಜಲಜಮ್ಮ ವಿರೋಧ ವ್ಯಕ್ತ ಪಡಿಸದಿರಲಿಲ್ಲ. ಜಲಜಮ್ಮನವರಿಗೆ ಮಗಳು ಐ. ಎ. ಎಸ್. ಅಧಿಕಾರಿಯ ಅಥವಾ ಡಾಕ್ಟರು, ಇಂಜನಿಯರ್, ಐಶ್ವರ್ಯವಂತ ಪುತ್ರರ ಮಡದಿಯಾಗಲಿ ಎಂಬ ಹಿರಿಯಾಸೆಯಿತ್ತು. ಮಗಳು ತಾಯಿಯ ಆಶಾಸೌಧವನ್ನು ಭಗ್ನಗೊಳಿಸಿದಳು.

ಕೊನೆಗೆ ವಾಣಿಯ ಹಟಕ್ಕೆ ಎಲ್ಲರೂ ತಲೆಬಾಗಬೇಕಾಯಿತು.

ವಾಣಿ ಪ್ರಸಾದನ ಧರ್ಮ ಪತ್ನಿಯಾದಳು. ಸ್ವಾಭಿಮಾನದ ಮೂರ್ತಿಯಾಗಿದ್ದ ಪ್ರಸಾದ ಹಣವಂತರಾದ ಮಾವನ ಮನೆಯಿಂದ ಹೆಂಡತಿಯ ವಿನಃ ಬೇರೊಂದು ವಸ್ತುವನ್ನೂ ಪಡೆಯಲಿಲ್ಲ. ಅಳಿಯನಿಗಾಗಿ ಕೇಶವ ರಾಯರು ಕೊಟ್ಟ ಬಳುವಳಿ, ಉಡುಗರೆ, ಉಪಚಾರದ ವಸ್ತುಗಳು ಅವರ ಮನೆಯಲ್ಲಿಯೇ ಉಳಿದವು. ಕೇಶವರಾಯರು ನಿಸ್ಸಹಾಯಕರಾಗಿ ಅಳಿಯನ ಮಾತಿಗೆ ಸಮ್ಮತಿಸಲೇ ಬೇಕಾಯಿತು. ಪತಿಯ ವರ್ತನೆಯ ಬಗ್ಗೆ ವಾಣಿಗೆ ಅಪಾರ ಅಭಿಮಾನ, ಹೆಮ್ಮೆ ಮೂಡಿತು.

ನವ ದಂಪತಿಗಳ ಅಚ್ಚುಕಟ್ಟಾದ ನೂತನ ಸಂಸಾರದ ರಥ ಮುಂದಡಿ ಇಟ್ಟಿತು. ವಾಣಿಗೆ ಸಂಸಾರದಲ್ಲಾಗಲಿ, ಪತಿಯ ವ್ಯವಹಾರದಲ್ಲಾಗಲಿ ಬೇಸರವೇ ಇರಲಿಲ್ಲ. ದೇಹವೆರಡು ಮನಸ್ಸು ಒಂದು ಎನ್ನುವ ಮಟ್ಟಿನ ಜೀವನ ಅವರದಾಗಿತ್ತು. ಇಬ್ಬರೂ ಒಬ್ಬರ ಮನಸ್ಸಿಗೆ ಇನ್ನೊಬ್ಬರಿಂದ ಬೇಸರ, ನೋವು ಉಂಟಾಗದಂತೆ ಎಚ್ಚರಿಕೆ ವಹಿಸಿ ವರ್ತಿಸುತ್ತಿದ್ದರು.

'ತನ್ನಂತಹ ಭಾಗ್ಯಶಾಲಿ ಬೇರಿಲ್ಲ' ಎಂದುಕೊಂಡಳು ವಾಣಿ. ಎಂದೂ ಕಣ್ಣೀರು ಹರಿಸದಿದ್ದ ವಾಣಿ ಅಂದು ಪತಿಯ ಯೋಚನಾಪೂರ್ಣ ಮುಖವನ್ನು ಕಂಡು ಕಂಬನಿಗರೆದಳು.

ಹೆಂಡತಿಯ ಉತ್ಕಟ ಅಭಿಮಾನಕ್ಕೆ ಪ್ರಸಾದನ ಹೃದಯ ತುಂಬಿತು.

೩

ವಿಶ್ವವಿಖ್ಯಾತವಾದ ಕನ್ನಡ ನಾಡಿನ ಶಿಲ್ಪಕಲೆಯ ಕಲಾಪೂರ್ಣ ಮಂದಿರಗಳನ್ನು ನಿರ್ಮಿಸಿದ ಹೊಯ್ಸಳ ವಿಷ್ಣುವರ್ಧನ ಹಾಗೂ ಶಾಂತಲಾ ದೇವಿಯರ ವಿಷಯಗಳ ಬಗ್ಗೆ ವಿಷಯ ಸಂಗ್ರಹಿಸಿ ಬೃಹತ್ ಕಾದಂಬರಿಯೊಂದನ್ನು ರಚಿಸಲು ಸಿದ್ಧತೆ ನಡೆಸಿದ ಪ್ರಸಾದ.

ಪ್ರಸಾದ ಪತ್ನಿ ವಾಣಿಯೊಂದಿಗೆ ಬೇಲೂರು, ಹಳೇಬೀಡು, ಶ್ರವಣಬೆಳಗೊಳ ಮೊದಲಾದ ಐತಿಹಾಸಿಕ ಕ್ಷೇತ್ರಗಳಿಗೆ ಭೇಟಿಯಿತ್ತು ತಾನು ರಚಿಸಲಿರುವ ಕಾದಂಬರಿಗೆ ಸಾಕಷ್ಟು ಸಾಕ್ಷ್ಯ ಆಧಾರಗಳನ್ನು ಸಂಗ್ರಹಿಸಿದ. ಅವನ ದುಡಿಮೆಗೆ ವಾಣಿ ಸಾಕಷ್ಟು ಸಹಕಾರ ನೀಡಿದಳು.

ಎರಡು ತಿಂಗಳ ಅವಿಶ್ರಾಂತ ದುಡಿಮೆಯ ದೆಸೆಯಿಂದ "ಕಲಾಮಾತೆ" ಕಾದಂಬರಿ ರೂಪುಗೊಂಡಿತು. ಬೃಹತ್ ಕಾದಂಬರಿಯನ್ನು ಪ್ರಕಟಿಸಲು ಒಬ್ಬೊಬ್ಬ ಪ್ರಕಾಶಕರು ಮುಂದೆ ಬಂದು ಕೈಬಿಟ್ಟರು. ಒಂದಿಬ್ಬರು ಚರಿತ್ರಾರ್ಹ ಕಾದಂಬರಿ ಪ್ರಸಾರ ನೂತನ ಸಾಹಸ. ಈ ಕಾಲದಲ್ಲಿ ಸಾಮಾಜಿಕ ಕಾದಂಬರಿಗಳಿಗೆ ಬೇಡಿಕೆಯಿದೆ ಎಂದು ಮೌನ ತಾಳಿದರು.

ಪ್ರಸಾದನ ನೂತನ ಐತಿಹಾಸಿಕ ಕಾದಂಬರಿ "ಕಲಾಮಾತೆ'ಯನ್ನು ಪ್ರಕಟಿಸಲು ಮಹಾಬಲಯ್ಯ ಮುಂದೆ ಬಂದ. ಪ್ರಸಾದ ಬರೆದಂದು, ಬಾರಿ ಮಹಾಬಲಯ್ಯನನ್ನೂ ಕಂಡು ತನ್ನ ಕಷ್ಟ ಕಾದಂಬರಿ ರಚನೆಯ ಶ್ರಮ, ಕಾದಂಬರಿಯ ಕಥಾವಸ್ತು, ರಚನಾ ಕೌಶಲ್ಯವನ್ನು ನಿರೂಪಿಸಿದ ಮೇಲೆ ಪ್ರಸಾದನನ್ನೇ ಉದ್ಧರಿಸುವವನಂತೆ ಒಪ್ಪಿಕೊಂಡ.

ಪ್ರಸಾದನ ನೂತನ ಕಾದಂಬರಿಯ ಮುದ್ರಣ ಕಾರ್ಯ, ಮೇಲ್ವಿಚಾರಣೆ, ಸಲಹೆ ಎಲ್ಲವೂ ಅವನ ಪಾಲಿಗೆ ಒಪ್ಪಿಸಿ ಮುದ್ರಣ ಕಾರ್ಯದ ನಂತರ ಹಣ ಒದಗಿಸಲು ಒಪ್ಪಿಗೆಯನ್ನಿತ್ತ ಮಹಾಬಲಯ್ಯ. ಕಲಾಮಾತೆಯ ಹಸ್ತಪ್ರತಿ ಅಚ್ಚಿನ ಮನೆ ಸೇರಿತು.

ಮುದ್ರಣಕಾರ್ಯ ಮುಗಿಯುವ ವರೆಗೆ ಪ್ರಸಾದ ಆಸಕ್ತಿಯಿಂದ ದುಡಿದ, ಪ್ರತಿ

(ಹದಿನೈದನೇ ಪುಟ ನೋಡಿರಿ)

ನಲ್ವತ್ತಾರನೆ ವರ್ಷ
Telephone 226.

ನವಯುಗ

ಸಂಪುಟ ೪೬	ಉಡುಪಿ	Vol. 46
ಸಂಚಿಕೆ ೧	೧—೯—೧೯೬೬	No. 1

Estd. 1921
NAVAYUGA
Leading Kannada Weekly
UDIPI, S. Kanara

ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ
ನವಯುಗ
ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ
ಉಡುಪಿ, ದ. ಕನ್ನಡ.

ಸಂಚಾಲಕ—ಸಂಪಾದಕ:
ಕೆ. ಹೊನ್ನಯ್ಯ ಶೆಟ್ಟಿ

ವಾರ್ಷಿಕ ಚಂದಾ:
ಮೂರು ವಿಶೇಷ ಸಂಚಿಕೆಗಳು ಸೇರಿ ಅಂಚೆ ವೆಚ್ಚ ಸಹಿತ ಮುಂಗಡ
ಸ್ವದೇಶ ರೂ. ೧೦
ವಿದೇಶ ರೂ. ೧೮

ಜಾಹೀರಾತು ದರಗಳು:
ಅನಿಯಮಿತ (ಕೆಜುವಲ್)
ಕಲಂ ಸೆಂಟಿಮೀಟರಿಗೆ ರೂ. 2-00
ನಿಯಮಿತ (ಕಂಟ್ರಾಕ್ಟ್)
ಕಲಂ ಸೆಂಟಿಮೀಟರಿಗೆ ರೂ. 1-50

ಸೂಚನೆಗಳು
ಲೇಖಕ ಬಂಧುಗಳಿಗೆ
ಲೇಖನವು ಕಿರಿದಾಗಿದ್ದು ಹಿರಿದರ್ಥದಿಂದ ಕೂಡಿರಬೇಕು. ಕಾಲು ತಾವಿನ ಪ್ರಮಾಣದ ಹಾಳೆಯ ಒಂದೇ ಮಗ್ಗುಲಲ್ಲಿ ಬದಿಯಂಚುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು. ಆಧಾರಿತ, ಅನುವಾದಿತವಾದರೆ ಅವುಗಳ ಮೂಲವನ್ನೂ ತಿಳಿಸಬೇಕು.

ಚಂದಾದಾರರಿಗೆ—
ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಮುಖಪತ್ರದಲ್ಲಿ:

ಅಮೆರಿಕೆಯಲ್ಲಿ (ನ್ಯೂ ಓರ್ಲಿಯನ್ಸ್) ಆರ್ಚ್ ಬಿಷಪರಾಗಿ ನಿಯುಕ್ತರಾದ ಮೊತ್ತಮೊದಲ ನೀಗ್ರೋ ಮಾನ್ಯ ಹರೋಲ್ಡ್ ಪೇರಿ.

ಸೀಗೆಯೊಳಗಣ ಬಾಳೆ

ತಾಷ್ಕೆಂಟ್ ಘೋಷಣೆಯನ್ನು ಅಕ್ಷರಶಃ ಪಾಲಿಸಲು ಬದ್ಧವಾದ ಭಾರತ ಮತ್ತು ಕಾಶ್ಮೀರವನ್ನು ನುಂಗಲು ನೆರವಾಗುವುದಾದರೆ ಮಾತ್ರ ಅದನ್ನು ಅನುಸರಿಸಲು ಒಪ್ಪುವ ಪಾಕಿಸ್ತಾನಗಳ ನಡುವಣ ವಿರಸ ಸರಸವಾಗುವ ಸಲ್ಲಕ್ಷಣಗಳು ಅಗೋಚರವಾಗ ತೊಡಗಿವೆ. ಘೋಷಣೆಯ ಆರಂಭದಲ್ಲಿ ಅಧ್ಯಕ್ಷ ಅಯ್ಯೂಬಖಾನರು ತೋರಿದ ಉತ್ಸಾಹ ಮತ್ತೆ ಮೂಡಿ ಬರಲಿಲ್ಲ; ಆದರ ಒರತೆ ಬರಡಾಗುತ್ತಲೇ ನಡೆದಿದೆ. ಅಯ್ಯೂಬರ ಈಗಿನ ವರ್ತನೆಯನ್ನು ಕಾಣುವಾಗ ಅವರು ಸಂಯುಕ್ತ ರಾಷ್ಟ್ರ ಸಂಸ್ಥೆಯ ಗೊತ್ತುವಳಿಗೆ ಕೊಟ್ಟ ಕೊನೆಗಾದರೂ ಸೈಗುಟ್ಟಿದ್ದು, ತಾಷ್ಕೆಂಟ್ ಘೋಷಣೆಗೆ ಸಹಿ ಹಾಕಿದ್ದು—ಎಲ್ಲವೂ ಕಾಲಹರಣಕ್ಕೆ ಹೇತುವೆಂದೇ ಹೇಳಬೇಕಾಗುತ್ತದೆ. ಅವರು ಅಂದು ಸಮರ ವಿರಾಮಕ್ಕೆ ಒಪ್ಪದೆ ಹೋಗಿದ್ದರೆ, ಭಾರತದ ಸಜೇಯ ಶಕ್ತಿಯೆದುರು ಹೇಳ ಹೆಸರಿಲ್ಲದಂತಾಗುತಿದ್ದರೆಂಬುದರಲ್ಲಿ ಸಂದೇಹವಿಲ್ಲ.

ಪಾಕ್ ಅಧ್ಯಕ್ಷರು ಕಾಶ್ಮೀರವನ್ನು ನುಂಗುವ ತಮ್ಮ ಹೇರಾಸೆಯನ್ನು ತ್ಯಜಿಸಲು ಸಿದ್ಧರಿಲ್ಲ. ಪಾಕ್ ಅಧಿಕಾರಿಗಳ ಏಕವೇವ ಗುರಿಯದೇ. ದೇಶದ ನಾಗರಿಕರು ದುಃಖ ದಾರಿದ್ರ್ಯಗಳಿಂದ ನರಳುತ್ತಿದ್ದರೂ ಭಾರತದ ಕಾಶ್ಮೀರವನ್ನು ತಂದು ಅವನ್ನು ದೂರಮಾಡುವ ಭರವಸೆಯನ್ನು ಪಾಕ್ ನಾಯಕರು ಕೊಡುತ್ತಾರೆ—ಮಂದಮತಿ ಪ್ರಜಾಜನರು ಅಷ್ಟರಿಂದಲೇ ತೃಪ್ತರಾಗುತ್ತಾರೆ. ಮತೀಯ ನೆಲೆಯಲ್ಲೇ ರಚಿತಗೊಂಡ, ಮತೀಯ ತಳಹದಿಯಲ್ಲೇ ಬೆಳೆದು ಬರುತ್ತಿರುವ ಪಾಕಿಸ್ತಾನದ ಉಳಿವು ಅಳಿವಿನ ಪ್ರಶ್ನೆಯೇ ಕಾಶ್ಮೀರನೆಂದಾಗಿದೆ. ಆದುದರಿಂದ ಯಾವುದೇ ಒಡಂಬಡಿಕೆಯಾಗಬೇಕಾಗಿದ್ದರೂ 'ಕಾಶ್ಮೀರ' ಸಮಸ್ಯೆ ಬಗೆಹರಿಯ ಬೇಕೆನ್ನುತ್ತಾರೆ, ಅಯ್ಯೂಬಖಾನ್. ಆದರೆ, ತನ್ನ ದೇಹದ ಒಂದು ಭಾಗದ ಮೇಲೆ ಮತ್ತೊಬ್ಬನ ಅಧಿಕಾರವನ್ನು ಭಾರತವೊಪ್ಪಲಾರದು; ಒಪ್ಪಲೂ ಬಾರದು. ಇದನ್ನು ಕಂಡ ಅಯ್ಯೂಬಖಾನರ ತಲೆಯೀಗ ಬಹುದೂರ ಹರಿದಿದೆ. ಭಾರತದ ಭಿನ್ನಮತೀಯರನ್ನು ಅವರು ಹುಡುಕ ಹೊರಟಿದ್ದಾರೆ. ಮತಾಂಧತೆಯ ಗುಂಗಿನಲ್ಲಿ ಇನ್ನೂ ಸುತ್ತುತ್ತಿರುವ ಅರಬ ಜಗತ್ತಿನತ್ತಲೂ ಆವರದೊಂದ ಕಣ್ಣಿದೆ. ಎಲ್ಲಿಂದ ಹೇಗೆ ಸಾಧ್ಯವೋ ಅಲ್ಲಿಂದ ಹಾಗೆ ಸೈನಿಕ ಶಕ್ತಿ ಸಂಗ್ರಹ ಮಾಡುವಲ್ಲಿ ಫೀಲ್ಡ್ ಮಾರ್ಶಲ್ ಅಯ್ಯೂಬಖಾನ್ ಮುಂದುವರಿದಿದ್ದಾರೆ. ಅದು ಅದರ ನೀತಿಯನ್ನು ಕಾರ್ಯರೂಪಕ್ಕೆ ತರಲು ಮಾಡಬೇಕಾದ ಕರ್ತವ್ಯ—ದೂರುವಂತಿಲ್ಲ.

ಆದರೆ, ನಾವೇನು ಮಾಡುತಿದ್ದೇವೆ? ದೇಶದ ತುಂಬ ಪಾಕಿಸ್ತಾನಿ ಗುಪ್ತಚಾರ ಪಡೆ ಹರಡಿವೆಯೆಂಬುದೀಗವ್ಯಕ್ತವಾಗಿದೆ. ದೇಶದಲ್ಲಿನ ಕಮ್ಯೂನಿಸ್ಟರಲ್ಲಿ ಒಂದು ಪಂಗಡ ಕೆಂಪು ಚೀನೀ ಪರವಿದೆಯೆಂಬುದು ಎಂದೋ ಗೊತ್ತಾಗಿದೆ. ಪ್ರಜಾಸತ್ತಾತ್ಮಕವಾದ ಆಡಳಿತೆಯಲ್ಲಿ ರಹಸ್ಯಗಳಿಗೆ ಅವಕಾಶ ಕಡಿಮೆ. ಹಾಗಾಗಿ ಎಲ್ಲವೂ ಬಹಿರಂಗವಾಗುತ್ತದೆ. ಗುಪ್ತ ಪರ್ಯಾಲೋಚನೆಗಳ ವರದಿಯೂ ಬಹಿರಂಗವಾಗುವಂತಹ ರಾಮನ ದೇಶ ನಮ್ಮದು! ಹಾಗಿರುವಾಗ, ನಮ್ಮ ಸೈನಿಕ ಶಕ್ತಿ, ಮುಂಜಾಗ್ರತೆ—ಶಕ್ತಿ ಸಂಗ್ರಹ ವಿಧಾನ—ಎಲ್ಲವೂ ನಮ್ಮ ಶತ್ರುಗಳಿಗೆ ದೊರೆಯುವುದು ವಿಸ್ಮಯಕಾರಕವಲ್ಲ. ಗುಪ್ತಚಾರರ ಜಾಲಕ್ಕೆ ಆಶ್ರಯ ನೀಡುವ, ಅದನ್ನು ಪ್ರೋತ್ಸಾಹಿಸುವ ಪಂಚಮ ದಲೀಯರೂ ನಮ್ಮಲ್ಲಿದ್ದಾರೆಂಬುದೀಗ ಬೇಕಷ್ಟು ಬೆಳಕಿಗೆ ಬಂದಿದೆ. ಇಂತಿರುವಾಗ ನಾವು ಎಚ್ಚರಾಗ ಬೇಡವೇ?

ಭಾರತದ ನೀತಿಯು ಕೆಲವು ಮಹಾ ರಾಷ್ಟ್ರಗಳಿಗೆ ಹಿತವೆನಿಸುವುದಿಲ್ಲ. ಅವು ಭಾರತದ ವಿರುದ್ಧ ಪಾಕಿಸ್ತಾನವನ್ನು ಎತ್ತಿ ಕಟ್ಟಿ ಅದಕ್ಕೆ ಸರ್ವ ರೀತಿಯ ನೆರವು ನೀಡುತ್ತ ತಾವು ತಮಾಷೆ ನೋಡ ಹೊಂಟಿವೆ. ಭಾರತದ ವಿಯತನಾಮ ನೀತಿಯಿಂದ ಅಮೆರಿಕೆಗೆ ಬೇಸರವಾಗಿದೆ. ರಶ್ಯದೊಂದಿಗಿನ ಅತಿ ಸ್ನೇಹದಿಂದ ಕೆನೆಡಾ, ಪಶ್ಚಿಮ ಜರ್ಮನಿ, ಇಂಗ್ಲೆಂಡು....ಗಳು ನೊಂದಿವೆ. ಜಾತ್ಯತೀತ ನೀತಿಯಿಂದ ಇರಾಣವು ರೊಚ್ಚಿಗೆದ್ದಿದೆ; ಹಿಮಾಲಯದಿಂದ ಕಾಲು ಕೀಳದ ಭಾರತೀಯ ದೇಶ ಪ್ರೇಮದಿಂದ ಕೆಂಪು ಚೀನಾ ಕೆರಳಿದೆ—ಹೀಗೆ ಇವೆಲ್ಲವೂ ಪಾಕಿಸ್ತಾನಕ್ಕೆ ಪ್ರತ್ಯಕ್ಷವಾಗಿ—ಪರೋಕ್ಷವಾಗಿ ಭಾರತದ ವಿರುದ್ಧ ಕೈಯೆತ್ತುವ ಶಕ್ತಿಯನ್ನು ದಾನಮಾಡುತ್ತಲೇ ಇವೆ—ಎಂತಲೇ ಚೀನಾ—ಪಾಕಿಸ್ತಾನಗಳು ಕೂಡಿ ಮತ್ತೆ ಆಕ್ರಮಣ ಮಾಡುವ ಸಂಚು ಕಾರ್ಯರೂಪಕ್ಕೆ ಬರುವ ಸಂಭವವಿದೆ. ಕೆಂಪು ಚೀನಾ ಇತ್ತೀಚೆಗೆ ಪ್ರತ್ಯಕ್ಷವಾಗಿ ನೆರವು-ತರಬೇತಿ ನೀಡತೊಡಗಿದೆ — ಇರಾಣದ ವಿಮಾನಗಳು ಅಕ್ರಮವಾಗಿ ಪಾಕಿಸ್ತಾನದಲ್ಲಿ ತಳವೂರಿವೆ. ಕೆನೆಡಾದ ಈ ವಿಮಾನಗಳನ್ನು ತಾನು ಕೊಂಡು, ಪಶ್ಚಿಮ ಜರ್ಮನಿಯು ಇರಾಣಕ್ಕೆ ಮಾರಿತ್ತು. ಅಮೆರಿಕೆಯು ಪಾಕಿಸ್ತಾನಕ್ಕೆ ಶಸ್ತ್ರಾಸ್ತ್ರ ಸಹಾಯದ ಬಗ್ಗಿನ ತಡೆಯಾಜ್ಞೆಯನ್ನು ಹಿಂತೆಗೆದುಕೊಳ್ಳುವುದಾಗಿಯೂ ಗೊತ್ತಾಗಿದೆ. ನಮ್ಮ ಸುತ್ತ ಸೀಗೆಯ ಮುಳ್ಳುಬಳ್ಳಿ ಹರಡಿದೆ. ಅದರೊಳಗಿನ ಬಾಳೆಯಂತಾಗಿದ್ದೇವೆ, ನಾವು. ನಮ್ಮ ರಕ್ಷಣೆಯ ಬಗ್ಗೆ ಆಗತ್ಯವಿರುವ ಎಲ್ಲ ಕಾರ್ಯಕ್ರಮಗಳನ್ನೂ ಕಟ್ಟುನಿಟ್ಟಾಗಿ ನಾವು ಅನುಸರಿಸದೆ ಹೋದರೆ ಮುಂದೆ ಮರುಗ ಬೇಕಾಗುತ್ತದೆ. ಸ್ವಾತಂತ್ರ್ಯ ರಕ್ಷಣೆಯೊಡನೆ ದೇಶ ರಕ್ಷಣೆ ನಮ್ಮ ರಕ್ಷಣೆ.

ಹೊಸ ವರುಷ

ಈ ಸಂಚಿಕೆಯೊಡನೆ 'ನವಯುಗ'ವು ೪೬ನೆಯ ವರ್ಷವನ್ನು ಆರಂಭಿಸುತ್ತದೆ. ಪ್ರಾದೇಶಿಕ ಭಾಷೆಯ ನಿಯತ ಕಾಲಿಕೆಗಳ ಆಯುಷ್ಯದಲ್ಲಿ ಇದು ಪರಾಕಾಷ್ಠೆಯೆನಿಸಬಹುದಾದರೂ ನಿಮ್ಮೆಲ್ಲರ ಸಹಕಾರ ಹಸ್ತ ಬಲದಿಂದ 'ನವಯುಗ' ಇದನ್ನು ಮುಟ್ಟಲು ಸಮರ್ಥವಾಗಿದೆ. ಇದು ಸಾಹಸಮಯ ಚಿತ್ರವೇ ಸರಿ. ಈ ಸುದೀರ್ಘ ಕಾಲದಲ್ಲಿ 'ನವಯುಗ' ಬೆಳಕು ಕಂಡು ಪತ್ರಿಕಾ ಪ್ರಪಂಚದಲ್ಲಿ ತನ್ನದೇ ಸ್ಥಾನವನ್ನು ಗಳಿಸಿಕೊಂಡಿದೆ.

ಈ ಯಶಕ್ಕೆ ಕಾರಣೀಭೂತರಾದವರು ನೀವು— ಓದುಗರು, ಚಂದಾದಾರರು, ಜಾಹಿರಾತುದಾರರು ಮತ್ತು ಹಿತೈಷಿ ಲೇಖಕ ಮಹಾಶಯರು. ನಿಮ್ಮೆಲ್ಲರ ಸಹಾಯ-ಸಹಕಾರಗಳಿಂದಲೇ 'ನವಯುಗ' ನಡೆದು ಬಂದಿದೆ. ಮುಂದೆಯೂ ನಡೆಯಬೇಕಾಗಿದೆ. ಹೊಸ ವರುಷದ ಈ ಸಂದರ್ಭದಲ್ಲಿ ನಿಮ್ಮ ಇದು ವರೆಗಿನ ಸಹಾಯ—ಸಹಾನುಭೂತಿಗಳಿಗೆ ಕೃತಜ್ಞತೆಯನ್ನು ಅರ್ಪಿಸುತ್ತೇವೆ. ಮುಂದೆ ಅದು ಇನ್ನೂ ಹೆಚ್ಚಾಗಿ ದೊರೆಯುವುದೆಂದು ನಂಬುತ್ತೇವೆ.

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

S. C. Suit No. 143/1966.

ನೆಲ್ಯಾಡಿ ಮಾದಯ್ಯ ಶೆಟ್ಟಿ — ವಾದಿ
ಅಕ್ಕಣ ಸದ್ದಿ ಕೂಡಾ —ಪ್ರತಿವಾದಿರು.

ಸದ್ರಿದಾವೆಯಲ್ಲಿ 2ನೇ ಪ್ರತಿವಾದಿ ಕೃಷ್ಣ ಶೆಟ್ಟಿ. 3ನೇ ಪ್ರತಿವಾದಿ ರಾಮಯ್ಯ ಶೆಟ್ಟಿ.

ತಿಮ್ಮಯ್ಯ ಸೆಟ್ರ ಮನೆ ಪೊಂಬು ಸೆಟ್ಟರ ಮಕ್ಕಳು, ಕುಂದಾಪುರ ತಾಲ್ಲೂಕು ಉಪ್ಪುಂದ ಗ್ರಾಮದಲ್ಲಿರುವವರು— ಇವರಿಗೆ—

ಮೇಲ್ಕಂಡ ವಾದಿಗೆ ನೀವು ಕೂಡಾ ತಾ. 31-1-1961ರಲ್ಲಿ ಬರಸಿಕೊಟ್ಟ ಚಾಲಗೇಣಿ ಎಗ್ರಿಮೆಂಟಿಗೆ ಕಾರಣವಾದ ಸ್ಥಳಗಳ ಬಾಬ್ತು ಕಳೆದ ಶುಭಕೃತು, ಶೋಭಕೃತು, ಕ್ರೋಧಿ ಸಂ|ರಗಳಿಗೆ ವರ್ಷ1ರಗೇಣಿ ಅಕ್ಕಿ ಮೂಡೆಗೆ ನಾಲ್ಕು ನಗದು ರೂ. 1.00ರ ಪ್ರಕಾರ ಬರತಕ್ಕ ಸಂಪೂರ್ಣ ಅಸಲು ಬಡ್ಡಿ ಬಾಕಿ ರೂ. 324-55 ಪೈಸೆಗಳನ್ನು ಬರಮಾಡಿಕೊಳ್ಳುವರೇ ಸದ್ರಿದಾವೆಯನ್ನು ದಾಖಲುಮಾಡಿರುತ್ತಾನೆ. ಆ ಕುರಿತು ನಿಮ್ಮ ಆಕ್ಷೇಪಗಳೇನಾದರೂ ಇದ್ದಲ್ಲಿ ಈ ಕೋರ್ಟಿನ ಮುಂದೆ ಇದೇ ತಾ. 19-9-1966ರಲ್ಲು ಬೆಳಗ್ಗೆ 11ಗಂಟೆಗೆ ನೀವು ಸ್ವತಹ ವ ಪ್ಲೀಡರ್ ಮೂಲಕ ಹಾಜರಾಗಿ ಜವಾಬು ಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ನಿಮ್ಮ ಗೈರು ಹಾಜರಿಯಲ್ಲಿ ದಾವೆಯನ್ನು ಏಕ ಪಕ್ಷವಾಗಿ ತೀರ್ಮಾನಿಸಲಾದೀತು ಎಂತ ತಿಳಿಯಪಡಿಸಿರುತ್ತದೆ.

(ಕೋರ್ಟು ಹುಕುಂ ಪ್ರಕಾರ)

ಎ. ರಾಜೀವ ಶೆಟ್ಟಿ ಬಿ. ಎ., ಬಿ ಕಾಂ., ಬಿ. ಎಲ್.
ವಾದಿಯ ಪರ ಎಡ್ವಕೇಟ್.
ಕುಂದಾಪುರ, ತಾ. 27—8—1966.

ಬೇಕಾಗಿದ್ದಾರೆ

ಪ್ರಿಂಟ್ ಕೆಲಸಗಾರರೂ, ತರಬೇತಿಗಾಗಿ 8ನೇ ತರಗತಿ ಯ ಪೆಟ್ಟಿಗೆ ಓದಿದ ಹುಡುಗರೂ ಬೇಕಾಗಿದ್ದಾರೆ.

ಹೆಚ್ಚಿನ ವಿವರಕ್ಕೆ ವಿಚಾರಿಸಿರಿ
ನವಯುಗ ಪ್ರೆಸ್, ಉಡುಪಿ.

ಗೇಹ ರಾಜ್ಯದಲ್ಲಿ

ಮಡ್ಡಿ ಅನ್ನಕೆ ತಕ್ಕ ಗೊಡ್ಡು ಸಾರು

"ಆಸೆಗೆ ಅಂತ್ಯವಿಲ್ಲ; ಪಾಶಕ್ಕೆ ಕಡೆಯಿಲ್ಲ; ಆಸೆ ತಂದಿವೆ ಹೊರತು ಆಯುಷ್ಯ ತರಲಿಲ್ಲ। ಆಗಾಯುವಿದ್ದವನು ಉಡುಂಡು ಸಾಯಲಿಲ್ಲ; ಸಾಲವಿದ್ದವನು ತೀರಿಸಿ ಸಾಯಲಿಲ್ಲ......॥"

"ಭಲೆ, ಭಲೆ.... ಏನಿದು, ಸೊಗಸಾದ ಕಲಕಂಠದಿಂದ ಹಾಡೋಕೆ ಆರಂಭಿಸಿದ್ದು?"

"ಕಂಡ ಕಂಡ ದೇವರಿಗೆ ಕೈಗಳನು ಮುಗಿದರೂ ಗಂಡನಿಲ್ಲದೆ ಮಕ್ಕಳಾಗುವುದೆ ಇಲ್ಲ..."

'ಏಯ್, ಏನೇ ಇದು? ಹೀಗೆಲ್ಲಾ ಪುಸ್ತಕವನ್ನು ಹೊತ್ತು ಹಾಕಿದರೆ, ಮತ್ತೆ ನಾಳ್ಕೇ ದಿನದಲ್ಲಿ ನಷ್ಟವಾಗುತ್ತೆ....'

'ಮತ್ತೆಂಥದು? ಆವನು ಏನೇನೋ ಬರೆದಿರೋದು?"

"ಪಾಪ, ಇಲ್ಲದ್ದೇನು ಬರೆದಿದ್ದಾನೆ? ನ್ಯಾಯವಾಗಿರೋದನ್ನು ಬರೆದಿದ್ದಾನೆ. ಅದಕ್ಕೆ ರೇಗಿಕೊಂಡರೆ ಅವನದೇನು ತಪ್ಪು?'

"ತಪ್ಪು ಬರೆಯುವವರದ್ದಲ್ಲ; ಅವ್ರು ಬರೆದದ್ದನ್ನೆಲ್ಲಾ ಓದುತ್ತಾರೆ ನೋಡಿ, ಅಂಥವ್ರದ್ದು...'

'ಹ್ಞೂಂ....ಆದ್ರೆ ನೋಡು. ನೀನು ಈ ಮಾತನ್ನು ಪೂರ್ಣ ಹೃದಯದಿಂದ ಅಂದ್ರೆ ಒಪ್ಪಿಕೋ ಬಹುದು; ಆದರೆ...'

'ಹೌದಪ್ಪ, ಪೂರ್ಣ ಹೃದಯ ಇರೋದು ನಿಮಗೊಬ್ಬರಿಗೆ ಮಾತ್ರ...ಉಳಿದವ್ರದ್ದೆಲ್ಲಾ ಬರಿದೋ ಬಂದು.'

"ಅದೂ ಖರೇನ್ನು. ನೀನೇ ಈಗ ಅಂದಯಲ್ಲ?"

'ಏನೂಂತ?'

"ಆಸೆಗೆ ಅಂತ್ಯವಿಲ್ಲಾಂತ...."

"ಹೌದು ನೋಡಿ....ನಮ್ಮ ಶೀನಪ್ಪ ಇದ್ದಾನಲಾ...',

'ಏನು? ಇರ್ಬಾರ್ದ?"

"ನೋಡಿ, ನೀವು ಹೀಗೆಲ್ಲಾ ಉಲ್ಟ ಮಾತಾಡಿದ್ರೆ ನಾನೇನನ್ನೋದು? ನಾನು ಮಾತಾಡೋದು ಇಷ್ಟವಿಲ್ಲಾಂತಂದ್ರೆ ಸಾಫಾಗಿ ಅಂದು ಬಿಡಿ. ಬಾಯ್ಮುಚ್ಚಿ ತೆಪ್ಪಗೆ ಕೂತಿರ್ತೇನೆ....'

'ಹೂ ಯಾವಾಗಲೂ ನಗು ನಗುತ್ತಲೇ ಇರಬೇಕು....ಆಗ ಇತರರೂ ಆದನ್ನು ಕಂಡು ನಗ್ತಾರೆ...."

"ಹೌದು, ಆದರೆ ಏನು ಮಾಡೋದು? ಹೂ ಅರಳುತ್ತದೆ, ಸುತ್ತ ಕಂಪು ಪಸರಿಸುತ್ತದೆ; ಕಂಡ ಕಂಡವರ ಮನವೊಗ್ಗೆಯನ್ನು ಬಿರಿಯುವಂತೆ ಮಾಡುತ್ತದೆ. ಆದರೆ ಅದೆಷ್ಟು ಸಮಯ? ಒಂದೋ....ಎರಡೋ ದಿನ..."

'ಹ್ಞಾಂ..ಅದೂ ನಿಜಾನ್ನು. ಆಸೆ ತಂದೇವೇ ಹೊರತು, ಆಯುಷ್ಯತರಲಿಲ್ಲವಲ್ಲಾ?"

"ಆಯುಷ್ಯ ತಾರದೆಇದ್ರೂ ಆಸೆಯನ್ನು ಬಿಟ್ಟು ನಿಡೋಕೆ ಯಾರೂ ಸಿದ್ಧನಿಲ್ಲ...'

"ಯಾರು ಯಾರು ಏಕವ್ವಾ, ನೀನು ಸಿದ್ಧವಾಗಿದ್ದೀಯ?"

'ಯಾರು? ನಾನೆ?.... ಓ ನಾನೊಬ್ಬೇ ಸಿದ್ಧವಾಗಿರೋಕೆ ಅಧಿಕಾರವೆಲ್ಲಿ?"

"ಇದು ಪ್ರಜಾತಂತ್ರ. ಪ್ರತಿಯೊಬ್ಬ ಪ್ರಜೆಗೂ ಸಮಾನಾಧಿಕಾರವಿದೆ. ಹಾಗಿರುವಾಗ ನಿನಗೆ ಅಧಿಕಾರವಿಲ್ಲಾಂತಂದ್ರೆ ಯಾರಾದರೂ ನಕ್ಕಾರು...."

"ನಗಲಿ, ಅದರಿಂದ ಅವ್ರಿಗಾದ್ರೂ ತೃಪ್ತಿಯಾದ್ರೆ ಅಷ್ಟೇ ಸಾಕು...."

"ಓ, ಭಾರಿ ದೊಡ್ಡ ತತ್ತ್ವಜ್ಞಾನಿಯಂತೆ ಮಾತಾಡ್ತಿಯಲ್ಲ?'

'ಅದೆಲ್ಲಾ ನಂಗೊತ್ತಿಲ್ಲ. ಏನೋ ಅನ್ನಿಸ್ತು ಅಂದ್ಬಿಟ್ಟೆ....'

'ಇರ್ಲಿ, ಈಗ ನೋಡು, ಪುರುಷ–ಸ್ತ್ರೀಯರಿಗೆ ಸಮಾನಾಧಿಕಾರವಲ್ವೆ?"

'ಅಯ್ಯೋ, ಇದ್ರಲ್ಲಿ ವಿಶೇಷವೇನೂಂತ?'

'ಯಾಕೆ? ಕಡೆಗಣಿಸಲ್ಪಟ್ಟ ಸ್ತ್ರೀಯರಿಗೂ ಪುರುಷರಂತೆಯೇ ಸಮಾನತೆಯನ್ನು ಒದಗಿಸಿ ಕೊಟ್ಟ ನಮ್ಮ ಸಂವಿಧಾನ ಆದರ್ಶದ ಪರಾಕಷ್ಠೆಯೆನಿಸಿದೆ....'

"ಅದೆಲ್ಲಾ ನಂಗೊತ್ತಿಲ್ಲ.ಆದ್ರೂ ನೋಡಿ, ನಮ್ಮ ಧರ್ಮ—ಸಂಸ್ಕೃತಿ ಕೈಹಿಡಿದವಳಿಗೆ ಅರ್ಧಾಂಗಿ ಎಂದೇ ಕರೆಯುತ್ತದೆ. ಆಗ ಆಕೆಗೆ ಅರ್ಧ ಅಧಿಕಾರ ಇತ್ತೋ ಇಲ್ಲವೋ...'

"ಇಷ್ಟೊಂತನ್ನಬೇಕು....'

'ಮತ್ತೆಂಥದು ನೀವು ಅನ್ನೋದು? ಮತ್ತೆ ನೋಡಿ, ನಿಮ್ಮ ಸಂವಿಧಾನದಲ್ಲಿ ಹೇಳಿರೋ ಒಂದೊಂದು ಮಾತನ್ನೂ ಕಾರ್ಯಗತ ಮಾಡಿ ತೋರಿಸೋಕೆ ತುಂಬ ಪ್ರಯಾಸ ಪಡಬೇಕು; ಆಗಲೇ ಕೃತಕತೆ ಆರಂಭವಾಗುತ್ತದೆ..."

"ಅಂದರೆ?"

"ನೋಡಿ, ಚುನಾವಣೆಗಳಲ್ಲಿ ಸ್ಪರ್ಧಿಸಲು ಹುರಿಯಾಳುಗಳನ್ನು ಆರಿಸೋಕೆ ತೊಡಗಿದ್ದಾರಂತೆ....'

"ಹೌದು...."

'ಎಲ್ಲರೂ ಸಮಾನರು — ಪುರುಷ—ಸ್ತ್ರೀ, ದೀನ—ದಲಿತ, ಅಮೀರ—ಗರೀಬ, ಉಚ್ಚ—ನೀಚ—ಎಲ್ಲರೂ ಸರ್ವಸಮವೆಂದು ಸಾರುವ ನಿಮ್ಮಂಥವರು ಏನು ಮಾಡುತಿದ್ದಾರ?'

'ನೀನೇ ಹೇಳಬಾರದೆ?'

"ಅದನ್ನ ನೀವ್ಯಾಕೆ ಹೇಳ್ತೀರಿ?'

"ಅಲ್ಲಮ್ಮಾ, ನನ್ನ ಮೇಲೆ ಬಾಣ ಬಿಡೋಕೆ ಸಂಧಾನ ಮಾಡಿ ರಡಿಯಾಗಿರೋವಾಗ ಅದನ್ನ ಬಿಟ್ಟು ಬಿಡೋದೇ ವಾಸಿಯಲ್ವೆ?"

"ಹೌದು, ನಾನು ಅಂದ್ರೆ ನಿಮಗ ಅಷ್ಟು ಸಸಾರ... ನೀವು ಏನು ಮಾಡಿದ್ರೂ ಹೇಳಿದ್ರೂ ಸುಮ್ನೆ ಮರದಂತೆ ಕುಂತಿರ್ಬೇಕು...."

ಮರವೆಲ್ಲಿ ಕೂತಿರುತ್ತೆ?'

"ಇಲ್ಲ.... ನಿಂತಿರುತ್ತೆ, ಇಲ್ವೇ ಮಲಗಿರುತ್ತೆ. ಅಯ್ತಲ್ಲ!"

'ಆಗೋದೇನು? ಅವರವರ ಯೋಗ್ಯತೆಗೆ ಅವರವರ ಗುಣಗಳಿಗೆ ಅವರವರ ಸಂಸ್ಕೃತಿಗೆ ತಕ್ಕ ಜೊತೆ ದೊರಕುವುದು."

'ಹೇಗೆ?'

"ಎಳೆಯೆಂಬ ರಾಯನಿಗೆ ತುಳಿಯೆಂಬುವಾ ಮಂತ್ರಿ..."

"ಸರಿಯೇ....'

"ಕುಜೋದ್ಯದಾ ಅರಸನಿಗೆ ಕುಣಿಗೇಡಿ ಮಂತ್ರಿ..."

"ಅದೂ ಹೌದ. ಆದರೆ, ಈಗ ರಾಜರೇ ಇಲ್ಲವಲ್ಲಾ?'

"ಪ್ರಜಾಸತ್ತೆಯಲ್ಲಿ ಪ್ರಜೆಗಳೇ ರಾಜರು...."

"ಹ್ಞೂಂ, ಅದೂ ಹೌದೂನ್ನಿ. ನಿಮ್ಮ ಪ್ರಜೆಗಳ ಯೋಗ್ಯತೆ. ಗುಣ, ಸಂಸ್ಕೃತಿಗೆ ಸರಿಯಾಗಿಯೇ ನಮಗೆ ಸರಕಾರ ಇದೆ...."

"ಡೊಳ್ಳು ಗಣಪತಿಗೆ ತರಗೆಲೆಯ ಲಡ್ಡಿಗೆಯು...."

"ಇದೀಗ ಸರಿ...."

'ಯಾಕೆ?'

"ಮತ್ತೆ ಈ ವರ್ಷ ಗಣಪತಿಯ ಡೊಳ್ಳು ತುಂಬುವುದಾದರೂ ಹೇಗೆ?'

'ಹ್ಞಾಂ......ಮಳೆಗಾಲ ಮುಗೀಲಿಲ್ಲಾಂತ ಎಲ್ಲಾದರೂ ಕೊಳೆತು ನಾರುವ ತರಗಲೆಯಾದರೂ ಸಿಕ್ಕಬಹುದು. ಇಲ್ಲವಾದರೆ ಅದಕ್ಕೂ ಗತಿಯಿಲ್ಲದೆ ಗಣಪತಿ ಇಲಿಯನ್ನೇ ತಿನ್ನುತಿದ್ದನೋ ಏನೋ....'

'ಭಾರಿ ಚಲೋದಾಗಿತ್ತೂನ್ನಿ...'

'ಯಾಕೆ?'

'ಹಾಗಾದ್ರೂ ಇಲಿಗಳ ನಾಶ ಆದ್ರೆ ಅವುಗಳ ಹೊಟ್ಟೆ ಸೇರೋ ಆಹಾರಾದ್ರೂ ಮನುಷ್ಯರಿಗೆ ದೊರೆಯುತಿತ್ತು".

"ನೀನು ಏನನ್ನೋದು? ಒಂದು ದಿನ ಬರುತ್ತೆ—ಕಳ್ಳರನ್ನೇ ಸುಲಿಯೋ ಪೋಲೀಸರು....'

'ಹ್ಞಾಂ...ಪ್ರಜೆಗಳನ್ನೇ ಸುಲಿಯೋ ಮಂತ್ರಿಗಳು —.. ಅಲ್ಲ, ಈಗಲೇ ಇಂತಹ ಕಾಲ ಬಂದಿದೆ ನೋಡಿ. ಇನ್ನೇನು ನಿಮ್ಮ ಸರಕಾರ ಜನ್ಮ ಒಂದಿಪ್ಪತ್ತು ವರ್ಷ ನಡೆದ್ರೆ..."

"ಏ, ಈಗಿರೋದು ನನ್ನ ಅಲ್ಲ—ನಮ್ಮ ಸರಕಾರ."

'ಆಯ್ತಪ್ಪ, ಅದ್ರಲ್ಲಿ ಚರ್ಚೆಯೇಕೆ? ಆದ್ರೂ ಒಂದು ಮಾತು ಹೇಳಬೇಕೆನಿಸುತ್ತೆ—ಮೇಟಿ ಬಲವಿದ್ದರೆ ಕೋಟೆಯನ್ನು ಗೆಲಬಹುದು। ವಿವೇಕದಿಂದ ವಿಧಿಯನು ಗೆಲ್ಲಬಹುದು॥'

"ಅಲ್ವೆ, ನಿನ್ನವೆಲ್ಲಾ ಈ ಹಳೆ ಕಾಲದ ಮಾತು ಈಗ ಎಲ್ಲಿ ನಡೆಯುತ್ತದೆ?"

'ಹೌದಪ್ಪ, ನಿಮ್ಮ ಹೊಸ ಕಾಲಕೆ ಹೊಸ ಮಾತೇ ಬೇಕು—ಆಯ್ತು ತಗೊಳ್ಳಿ—"

"ಎಷ್ಟದ?'

'ಕುರುಡಿಯೂ ಕುಣಿತಕ್ಕೆ ತಪರ ಗಣ್ಣೆಯ ತಾಳ। ತರಲೆ ಹೆಂಗಸಿಗೆ ತಾಪತ್ರಯದ ಗಂಡ॥ ಕೊಳೆದ ಕುಂಬಳ ಕಾಯ್ಗೆ ಕೆಟ್ಟ ತೆಂಗಿನ ಕಾಯಿ। ಮಡ್ಡಿ ಅನ್ನಕೆ ತಕ್ಕ ಗೊಡ್ಡು ಸಾರು। —ಆಯ್ತಲ್ಲಾ...."

'ನೋಡೋಣ, ಗೊಡ್ಡು ಸಾರಾದ್ರೂ ಹೇಗಿದೆಂತ..."

"ಅಬ್ಬಾ ನೀವೇ...."

'ಹ್ಞಾಂ.......ಭಾರಿ ರುಚಿಯಾಗಿದೆಯಲ್ವೆ?"

"ಗೊಡ್ಡು ಸಾರಿಗೂ ಮಡ್ಡಿ ಅನ್ನ ರುಚಿಯಾಗದೆ ಇರುವುದುಂಟೆ?"

"ಪರ್ವಾಗಿಲ್ಲ ಕಣೇ...ಅವರವರ ಯೋಗ್ಯತೆಗೆ..."

'ಅಲ್ಲವೇನು?...?

—ಗೋರಾ

ಕುಂದಾಪುರ ಮುನ್ಸಿಫ್
ಕೋರ್ಟಿನಲ್ಲಿ

R. L. P. 701/65.
in O. S. 368/34.

ಗಂಗಮ್ಮ — ಅಜಿದಾರರು.

ಮತ್ತು

ವಿನಾಯಕಯ್ಯ ಸಿಯಾ — ಎದುರು.

ಕುಂದಾಪುರ ತಾಲೂಕು ನಂಬ್ರ 1ನೇ ಶಿರೂರು ಗ್ರಾಮದಲ್ಲಿರುವ ಪಿರ್ತನಾಥಯ್ಯನವರ ಮಗ 4ನೇ ಎದ್ರಿ ಕೃಷ್ಣಪ್ಪಯ್ಯಗೆ ಈ ಮೂಲಕ ತಿಳಿಸುವುದೇನೆಂದರೆ—

ಹಿಂದಿನ ಆಸಾಮಿಯ ಬಾಕಿ ಸಲ್ಲದ ಕುರಿತು ಮಾಡಿದ ಮೇಲಿನ ಅಮಲ್ದಾರಿಯಲ್ಲಿ ನಿಮ್ಮ ಬಾಬ್ತು ಸ್ಥಿರಾಸ್ತಿ ಯಾಲಮ್ ಇಸ್ತಾರ್ ನಿರ್ಣಯದ ಗೊತ್ತಾಗ ತಾರೀಕು 9—9—65ಕ್ಕೆ ಇಟ್ಟಿರುತ್ತದೆ. ಆ ಕುರಿತು ನಿಮ್ಮದೇನಾದರೂ ಆಕ್ಷೇಪವಿದ್ದಲ್ಲಿ ನೀವು ಸ್ವತಹಾ ಯಾ ವಕೀಲರ ಮೂಲಕ ಹಾಜರಾಗತಕ್ಕದ್ದು. ತಪ್ಪಿದಲ್ಲಿ ನಿಮ್ಮ ಗೈರು ಹಾಜರಿಯಲ್ಲಿ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಕೋರ್ಟ್ ಅಪ್ಪಣೆ ಮೇರೆಗೆ

(Sd) M. M. URAL
ಅರ್ಜಿದಾರರ ಪರ ಎಡ್ವೋಕೇಟ್

ಕುಂದಾಪುರ, 9—8—65.

ಮೈಸೂರು ಸರಕಾರದಿಂದ ಸಂಭಾವನೆ ಪಡೆದ ಗ್ರಂಥ

ಭಾರತದ ವೀರಾಂಗನೆಯರು

(ಐತಿಹಾಸಿಕ ಜೀವನದ ಘಟನೆಗಳು)

ಗ್ರಂಥಕರ್ತ— ಕೆ. ಎನ್. ಭಟ್, ಶಿರಾಡಿಪಾಲ್

........"ಈ ಗ್ರಂಥದಲ್ಲಿನ ವೀರ ಮಹಿಳೆಯರಲ್ಲಿ ಝಾನ್ಸಿ ಲಕ್ಷ್ಮೀಬಾಯಿಯ ಹೊರತು ಮಿಕ್ಕವರ ಜೀವನೇತಿಹಾಸ ಇದುತನಕ ಸಮಗ್ರವಾಗಿ ಕನ್ನಡ ಸಾಹಿತ್ಯದ ಮೂಲಕ ಬೆಳಕಿಗೆ ಬಂದಿಲ್ಲ. ಆದುದರಿಂದ ಕನ್ನಡಿಗರಿಗೆ ಈ ಜೀವನ ಘಟನೆಗಳು ಮೆಚ್ಚಿಗೆಯಾಗುವುದೆಂಬುದರಲ್ಲಿ ಸಂದೇಹವಿಲ್ಲ. ಶ್ರೀ ಶಿರಾಡಿಪಾಲರು ತಮ್ಮ ವೀರ ಶೈಲಿಯಲ್ಲಿಯೇ ವೀರಾಂಗನೆಯರ ಕುರಿತು ಬರೆದಿದ್ದಾರೆ......................"

(ಶ್ರೀ ಕೆ. ಕೆ. ಪೈಗಳ ಮುನ್ನುಡಿಯಿಂದ)

ಕಣ್ಮನ ಸೆಳೆವ ತ್ರಿವರ್ಣ ಮುಖಪತ್ರ

ಬಿಳಿ ಕಾಗದ! 120 ಪುಟಗಳು! ಬೆಲೆ ರೂ. 1-50

ಒಂದು ಪ್ರತಿ ಬೇಕಾದವರು ರೂ. 1–75 ಮನಿಯಾರ್ಡರು ಮಾಡಿ ತರಿಸಿಕೊಳ್ಳಬಹುದು.

ಪ್ರತಿಗಳಿಗೆ ಬರೆಯಿರಿ:—

ನವಭಾರತ ಬುಕ್ ಡಿಪೋ, ಪಾಲುಕೋಟೆ, ಉಡುಪಿ.

ಯಾಜ್ಞಸೇನಿ-ದ್ರೌಪದಿ

ಯಜ್ಞ ಕುಂಡದಲ್ಲಿ ಉದಿಸಿ ಬಂದ ದ್ರೌಪದಿ ಯಾಗಾಗ್ನಿಯಂತೆಯೇ ತೇಜೋಪುಂಜ, ಪರಮ ಪವಿತ್ರ, ಶಕ್ತಿ ಶಾಲಿನಿ, ಧೃತಿಮತಿ ಶೀಲೆ. ಆಕೆಯಿಂದಲೇ ಕುರುಕ್ಷೇತ್ರವಾಯಿತು — ಅದೇ ಧರ್ಮ ಕ್ಷೇತ್ರವೂ ಆಯಿತು.

ಬರೆದವರು: ಶ್ರೀ ಸ. ನಾರಾಯಣ.

ಪಾಂಡವರ ಪಟ್ಟಮಹಿಷಿ ಪಾಂಚಾಲಿಯ ಪರಿಚಯವಿಲ್ಲದ ಭಾರತೀಯರಿಲ್ಲ. ಮಹರ್ಷಿ ವ್ಯಾಸರ ಮಹಾಭಾರತದಲ್ಲಿ, ಕುಮಾರವ್ಯಾಸನ ಕರ್ನಾಟಕ ಭಾರತ ಕಥಾಮಂಜರಿಯಲ್ಲಿ ದ್ರೌಪದಿಯ ಪಾತ್ರ ಯಥಾವತ್ತಾಗಿ ನಿರೂಪಿಸಲ್ಪಟ್ಟಿದೆ. ದ್ರುಪದ ನಂದಿನಿ ಮಹಾಭಾರತದ ಕಥಾನಾಯಕಿ. ಪಂಚ ಪಾಂಡವರ ಧರ್ಮಪತ್ನಿ. ಜಗನ್ನಾಟಕಸೂತ್ರಧಾರಿ ಶ್ರೀ ಕೃಷ್ಣನ ಮೆಚ್ಚಿನ ಸೋದರಿ. ಮಹಾಭಾರತದ ಕಥೆಗೆ ದ್ರೌಪದಿಯೇ ಮೂಲವೆಂದೂ ಹೇಳಬಹುದು. ಭಾರತದ ಕಥೆ ಬೃಹದಾಕಾರ ತಾಳಲು ಈ ವೀರ ನಾರಿಯೇ ಕಾರಣ.

ದ್ರೌಪದಿ ಪಂಚ ಮಹಾ ಪತಿವ್ರತೆಯರ ಸಾಲಿನಲ್ಲಿ ನಿಂತ ಸ್ತ್ರೀ ರತ್ನ. ಭಾರತೀಯ ಸ್ತ್ರೀಯರಿಗೆ ಆದರ್ಶ ಮಹಿಳೆ. ಬಾಳೆಲ್ಲವನ್ನು ಕಷ್ಟ ನಷ್ಟ, ನೋವುಗಳಲ್ಲಿ ಕಳೆದರೂ ತನ್ನ ಶೀಲ, ಶಕ್ತಿ, ಸಂಯಮವನ್ನು ಕಳೆದುಕೊಳ್ಳದೆ, ತನ್ನ ಭಕ್ತಿ, ನಿಶ್ಚಲ ಮನೋಭಾವದಿಂದ ದೊಡ್ಡವಳಾಗಿಯೇ ಉಳಿಯುತ್ತಾಳೆ. ಆಕೆ ಬೆಂಕಿಯಲ್ಲಿ ಹುಟ್ಟಿ ಬಂದವಳು. ಬೆಂಕಿಯಂತೆಯೇ ತೇಜಸ್ವಿನಿ.

ದ್ರುಪದ ಚಕ್ರವರ್ತಿ ತನಗಾದ ಅಪಮಾನಕ್ಕೆ ಸೇಡು ತೀರಿಸಿಕೊಳ್ಳಬೇಕೆಂಬ ಆಸೆಯಿಂದ ತಪಸ್ಸು ಮಾಡಿದ. ಆ ತಪಸ್ಸಿನ ಉದ್ದೇಶ್ಯ ಆಚಾರ್ಯ ದ್ರೋಣನನ್ನು ವಧೆಗೈಯುವಂತಹ ಮಗ, ಲೋಕೈಕ ವೀರ ಪಾರ್ಥನನ್ನು ವರಿಸುವಂತಹ ಕುವರಿ ಜನಿಸಬೇಕೆಂದು. ದ್ರುಪದನ ಯಾಗದಿಂದ ತೃಪ್ತರಾದ ದೇವತೆಗಳು ಅವನಿಗೆ ಸಂತಾನ ಸೌಭಾಗ್ಯವನ್ನು ಕರುಣಿಸಿದರು. ಅವರೇ ದ್ರೌಪದಿ ಮತ್ತು ಅವಳ ಅಣ್ಣ ದೃಷ್ಟದ್ಯುಮ್ನ. ಇಬ್ಬರೂ ಯಜ್ಞ ಕುಂಡದ ಅಗ್ನಿ ಜ್ವಾಲೆಯಲ್ಲಿ ಉದಿಸಿ ಬಂದವರು. ಹುಟ್ಟುತ್ತಲೇ ಯೌವನ ಪಡೆದವರು. ತೇಜಸ್ಸು, ಸೌಂದರ್ಯ, ಶಕ್ತಿಗಳನ್ನು ಪಡೆದಿದ್ದವರು.

ದ್ರೌಪದಿ ಅಸಾಮಾನ್ಯ ಸ್ತ್ರೀ. ಆಕೆ ವಾಯು ಪತ್ನಿ ಭಾರತೀ ದೇವಿಯ ಅವತಾರ. ಮೇಲಾಗಿ ಪಾರ್ವತಿ, ಶಚಿ, ಶ್ಯಾಮಲ, ಉಷಾ ದೇವಿಯರ ಅಂಶ ಸಂಭೂತಳು. ಸ್ವಯಂವರದಲ್ಲಿ ಮತ್ಸ್ಯಯಂತ್ರವನ್ನು ಯಾವ ಅತಿರಥ ಮಹಾರಥರೂ ಭೇದಿಸದಿದ್ದಾಗ, ವಿಪ್ರವೇಷದಲ್ಲಿದ್ದ ವಿಜಯ ಭೇದಿಸಿ ದ್ರುಪದ ನಂದನಿಯನ್ನು ಗೆದ್ದ. ತಾಯಿಯ ಅಪ್ಪಣೆಯ ಮೇರೆಗೆ ಧರ್ಮನಂದನ, ಭೀಮ, ಫಲ್ಗುಣ, ನಕುಲ, ಸಹದೇವ ಐದು ಮಂದಿಯೂ ಆಕೆಯನ್ನು ಪತ್ನಿಯನ್ನಾಗಿ ಸ್ವೀಕರಿಸಿದರು. ಭಾರತದ ಕಥೆಯಲ್ಲಿ ಮಾತ್ರವಲ್ಲದೆ, ಭಾರತೀಯ ಇತಿಹಾಸದಲ್ಲಿಯೇ ಇದೊಂದು ರಮ್ಯೋಜ್ವಲ ಅಧ್ಯಾಯ.

ದಾಯಾದಿಗಳ ದ್ವೇಷಾಗ್ನಿಗೆ ತುತ್ತಾಗಿದ್ದ ಪಂಚ ಪಾಂಡವರು, ತಮ್ಮ ಶಕ್ತಿ, ಸದ್ವರ್ತನೆ, ದೈವ ಭಕ್ತಿ, ಬಾಹುಬಲ, ಬುದ್ಧಿ ಬಲಗಳಿಂದ ಸಾವಿನ ದವಡೆಯಿಂದ ಪಾರಾಗಿ ದ್ರುಪದ ನಂದಿನಿಯನ್ನು ವಿವಾಹವಾದರು. ಅಲ್ಲಿಗೆ ಪಾಂಡವರ ಬಾಳುವೆಯಲ್ಲಿ ಒಂದು ಅಧ್ಯಾಯ ಮುಗಿದು ಹೊಸ ಅಧ್ಯಾಯ ಆರಂಭವಾಯಿತು.

ಪಾಂಡವರು ತಮ್ಮ ಅರ್ಧ ರಾಜ್ಯದ ಅಧಿಪತಿಗಳಾಗಿ ಇಂದ್ರಪ್ರಸ್ಥಪುರವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಸುಖವಾಗಿದ್ದರು. ಆಗಲೇ ದ್ರುಪದ ನಂದಿನಿ ಐವರು ಮಕ್ಕಳ ತಾಯಿಯಾದಳು. ಪ್ರತಿವಿಂಧ್ಯ, ಶ್ರುತಸೋಮ, ಶ್ರುತಕೀರ್ತಿ, ಶತಾನೀಕ ಮತ್ತು ಶ್ರುತಸೇನ ಇವರೇ ಆ ಪ್ರಸಿದ್ಧ ಕುವರರು.

ಪಾಂಡು ರಾಜನ ಸದ್ಗತಿಗಾಗಿ ಧರ್ಮನಂದನ ಮತ್ತು ಅವನ ಸಹೋದರರು ಶ್ರೀ ಕೃಷ್ಣನ ನೆರವಿನಿಂದ ಲೋಕ ವಿಖ್ಯಾತ ರಾಜಸೂಯ ಯಾಗವನ್ನು ನಡೆಸಿದರು. ಅಗ್ರ ಪೂಜೆಯ ವಿಷಯದಲ್ಲಿ ಹಟ ಹಿಡಿದ, ಶತ ಅಪರಾಧಗಳನ್ನು ಮುಗಿಸಿ ಶಿಶುಪಾಲ ಸುದರ್ಶನಕ್ಕೆ ಶಿರಸ್ಸು ಒಪ್ಪಿಸಿದ. ಯಾಗ ನೆರವೇರಿತು. ಪಾಂಡವರ ಭವ್ಯತೆ, ಅಜೇಯ ಶಕ್ತಿ, ಸಿರಿ-ಸಂಪತ್ತನ್ನು ಕಂಡು ಮಾನಧನ ಸುಯೋಧನ ಕರುಬಿದ.

ದೇವ ಶಿಲ್ಪಿ ಮಯಾಸುರ ನಿರ್ಮಿತ, ನೀಲ ಮಣಿಮಯ ಶೋಭಿತ, ಭವ್ಯ ಸಭಾಂಗಣದಲ್ಲಿ ಕೊನೆಯ ದಿನ ದುರ್ಯೋಧನ ತನ್ನ ವಿಪರೀತ ನಡವಳಿಕೆಯಿಂದ ಎಲ್ಲರ ನಗೆಗೆ ಗುರಿಯಾದ. ನೆಲವನ್ನು ನೀರೆಂದು, ಬಾಗಿಲನ್ನು ಗೋಡೆಯೆಂದು, ಗೋಡೆಯನ್ನು ತೆರೆ ಎಂದು, ನೀರನ್ನು ನೆಲವೆಂದು ಭ್ರಮಿಸಿ ಅಪಹಾಸ್ಯಕ್ಕೆ ಈಡಾದ. ನೆಲವೆಂದು ಭಾವಿಸಿ ನಡೆದು ನೀರಿನಲ್ಲಿ ಬಿದ್ದಾಗ ಶ್ರೀಕೃಷ್ಣ, ಸತ್ಯಭಾಮೆ, ಧರ್ಮನಂದನ, ವಲಲ, ಪಾಂಚಾಲಿ ಆದಿಯಾಗಿ ಎಲ್ಲರೂ ನಕ್ಕರು. ಮೊದಲೇ ಮತ್ಸರದಿಂದ ಕುದಿಯುತ್ತಿದ್ದ. ಫಣಿಕೇತನ ತನಗೆ ಅವಮಾನ ಮಾಡುವ ಸಲುವಾಗಿಯೇ ಈ ಯಾಗ ನಡೆದಿದೆ ಎಂದು ತೀರ್ಮಾನಿಸಿ, ಸೇಡು ತೀರಿಸಿಕೊಳ್ಳಲು ನಿರ್ಧರಿಸಿ, ಯಾವ ಉಪಚಾರ, ಸಮಾಧಾನದ ನುಡಿಗಳಿಗೂ ಮಣಿಯದೆ ಹಸ್ತಿನಾವತಿಗೆ ಪ್ರಯಾಣ ಬೆಳೆಸಿದ. ಅವನ ಹೃದಯದಲ್ಲಿ ಭೀಮ—ಪಾಂಚಾಲಿಯರ ನಗು ಉಳಿದು—ಕೆಣಕ ತೊಡಗಿತು. ಸೇಡಿಗಾಗಿ ಬುಸುಗುಟ್ಟುವ ನಾಗರವಾದ ಸುಯೋಧನ. ತನ್ನ ಆಪ್ತರಾದ ಶಕುನಿ, ದುಶ್ಶಾಸನ, ಕರ್ಣರೊಂದಿಗೆ ಸಮಾಲೋಚನೆ ನಡೆಸಿದ.

ಶಕುನಿಯ ಕುತಂತ್ರದ ನುಡಿಗೆ ಮರುಳಾಗಿ ತನ್ನ ಸಮಸ್ತ ಸಿರಿ, ರಾಜ್ಯ ಹೋದವರನು ಕೊನೆಗೆ ದ್ರೌಪದಿಯನ್ನು ಧರ್ಮರಾಯ ಕಳೆದುಕೊಂಡ. ಅಕ್ಷ ಕ್ರೀಡೆಯಲ್ಲಿ ಶಕುನಿ ಗಟ್ಟಿಗ. ದಾಳವನ್ನು ವಶಪಡಿಸಿಕೊಂಡು, ಸಂಚಿನಲ್ಲಿ ಪಾಂಡವರನ್ನು ಕೌರವನಿಗೆ ಮಣಿಸಿದ.

ಕೃತ್ರಿಮ ದ್ಯೂತದಲ್ಲಿ ಪಾಂಡವ ಹಿರಿಯ ಸಮಸ್ತವನ್ನು ಕಳೆದುಕೊಂಡು ದೇಸಿಗನಾಗಿ ಕುಳಿತ. ಪಾಂಡವರ ಮೇಲೆ ಇದ್ದಷ್ಟೇ ಕಿಚ್ಚು ದ್ರೌಪದಿಯ ಮೇಲೂ ದುರ್ಯೋಧನನಿಗೆ ಇತ್ತು. ಸೋತ ಪಾಂಡವರನ್ನು ಕಡೆಗಣಿಸಿ, ತನ್ನ ವಶವಾದ ದ್ರೌಪದಿಯನ್ನು ಸಭೆಗೆ ಕರೆತರುವಂತೆ ಸೇವಕನಿಗೆ ಆಜ್ಞೆ ನೀಡಿದ ಕೌರವ. "ತನ್ನನ್ನೇ ಸೋತ ಮೇಲೆ ನನ್ನನ್ನು ಸೋಲುವ, ಪಣವಾಗಿ ಒಡ್ಡುವ ಅವಕಾಶವೆಲ್ಲಿದೆ' ಎಂದು ಧರ್ಮ ಸೂಕ್ಷ್ಮವನ್ನು ಮುಂದು ಮಾಡಿ ಸೇವಕನನ್ನು ಕಳುಹಿಸಿದಳು ದ್ರುಪದನಂದಿನಿ. ಫಣಿಕೇತನು ಕೆರಳಿ ತಮ್ಮನಿಗೆ 'ದ್ರೌಪದಿಯನ್ನು ಸಭೆಗೆ ಎಳೆ ತರುವಂತೆ' ಅಪ್ಪಣೆ ಮಾಡಿದ. ಧರ್ಮ, ನೀತಿ, ನ್ಯಾಯಗಳನ್ನು ಮರೆತು ಮೆರೆಯುತ್ತಿದ್ದ ದುಶ್ಶಾಸನ ಬಿರುಗಾಳಿಯಂತೆ ಬಂದು, ಅತ್ತಿಗೆಗೆ ಬಿರುನುಡಿಗಳನ್ನಾಡಿ, ಅವಳ ಮಾತಿಗೆ ಅವಕಾಶ ಕೊಡದೆ, ಅಣ್ಣನ ಆಜ್ಞೆಯನ್ನು ಪಾಲಿಸುವ ಸಲುವಾಗಿ ಪಾಂಚಾಲಿಯ ಶ್ರೀ ಮುಡಿಗೆ ಕೈ ಹಾಕಿದ. ಅವಳನ್ನು ರಾಜ ಸಭೆಗೆ ಕರುಣೆ ಇಲ್ಲದೆ ಎಳೆ ತಂದ. ದ್ರೌಪದಿ ಸಭೆಯಲ್ಲಿ ತನ್ನ ಧರ್ಮ ಸೂಕ್ಷ್ಮವನ್ನು ಮುಂದೆ ಮಾಡಿ ನುಡಿದಳು. ಕರ್ಣ, ಶಕುನಿಗಳು ಸಭೆಗೆ ಗೌರವ ಬಾರದಂತಹ ಮಾತುಗಳನ್ನಾಡಿದರು. ಭೀಷ್ಮ, ವಿದುರ, ದ್ರೋಣರ ಉಪದೇಶ ವ್ಯರ್ಥವಾಯಿತು.

ಸುಯೋಧನ ಮುಂದುವರಿದು ಪಾಂಡವರ ಉಡುಗೆ—ತೊಡುಗೆ—ಅಲಂಕಾರಗಳನ್ನು ತೆಗೆದಿಡುವಂತೆ ಹೇಳಿದ. ಪಾಂಡವರು ಆಭರಣ, ಅಲಂಕಾರಗಳನ್ನು ತೆಗೆದೊಗೆದು ದೇಸಿಗರಂತೆ ನೆಲದ ಮೇಲೆ ಕುಳಿತರು. ಅಣ್ಣನ ಆಜ್ಞೆಯಂತೆ ದುಶ್ಶಾಸನ ದ್ರೌಪದಿಯ ಸೀರೆಯ ಸೆರಗು ಹಿಡಿದು ಅವಳನ್ನು ಎಳೆಯ ತೊಡಗಿದ. ತನ್ನ ಮಾನ ಸಂರಕ್ಷಣೆಗಾಗಿ ದ್ರುಪದ ನಂದಿನಿ ಸಭೆಯಲ್ಲಿ ಇರುವವರನ್ನೆಲ್ಲ ಹಲ ಬಗೆಯಲ್ಲಿ ಬೇಡಿಕೊಂಡಳು. ಪ್ರಯೋಜನವಾಗಲಿಲ್ಲ. ತನ್ನ ಅಧಿದೈವ ಶ್ರೀಕೃಷ್ಣನನ್ನು ಭಕ್ತಿಯಿಂದ ಬೇಡಿದಳು. ಉಪಯೋಗವಾಗಲಿಲ್ಲ. ದುಶ್ಶಾಸನನ ಕ್ರೌರ್ಯ ಮುಂದುವರಿಯುತ್ತಲೇ ಇತ್ತು. ಕೊನೆಗೆ 'ದೀನ ಸಂರಕ್ಷಕ, ಶ್ರೀಕೃಷ್ಣ ಮಾನಾಪಮಾನ ನಿನ್ನದು' ಎಂದು ದ್ರೌಪದಿ ಕರ ಜೋಡಿಸಿ ನಿಂತಳು. ದುಶ್ಶಾಸನ ಸೆರಗು ಎಳೆಯುತ್ತಲೇ ಹೋದ. ಸೀರೆ ಬೆಳೆಯುತ್ತಲೇ ಹೋಯಿತು. ಮಹಾ ಪತಿವ್ರತೆಯ ಭಕ್ತಿಗೆ ಭಗವಂತ ಮಣಿದು ಅವಳ ಮಾನವನ್ನು ತುಂಬಿದ ಸಭೆಯಲ್ಲಿ ಕಾಪಾಡಿದ. ಕೌರವ ಅಲಕ್ಷ್ಯದಿಂದ "ತೊಟಿಲನು" ಎಂದು ಕರೆದಾಗ ದ್ರೌಪದಿ ಬೆಂಕಿಯ ಕಿಡಿಯಾಗಿ "ತೊಡೆ ಮುರಿದು ಸಾಯಿ," ಎಂದು ಶಪಿಸಿದಳು. ಭೀಮ ಪ್ರತಿಜ್ಞೆಯು ಸಭೆಯಲ್ಲಿ ಮೊಳಗಿತು.

ಒಂದು ಕುತ್ತ ಮುಗಿದು ಶುಭ್ರವಾದ ಮರುಕ್ಷಣದಲ್ಲಿಯೇ ಮತ್ತೊಂದು ಕುತ್ತು ಬಂತು. ಮತ್ತೊಂದು ಕಪಟ ದ್ಯೂತದಲ್ಲಿ ಪಾಂಡವರಾಯ ರಾಜ್ಯವನ್ನು ಸೋ

(ಮುಂದಿನ ಪುಟ ನೋಡಿ)

FOR MODERN MAN AN ACCURATE WRIST WATCH IS AN ESSENTIAL TOOL!

FOR ALL TYPES OF
- WATCHES
- CLOCKS
- TIMEPIECES

VISIT OUR NEW ENTERPRISE

KARNATAK WATCH CO.,
13, GUNBOW STREET,
BOMBAY-1



- We undertake all sorts of repairings of all types of watches, clocks, timepieces etc., under supervision of experts.

Prop: Kadekar Krishna N. Shetty

ಕೃಷಿಕರಿಗೆ

ಹೊಸ ರೀತಿಯಲ್ಲಿ ನೇಜಿ ತಯಾರಿಸಿರಿ

ಬರೆದವರು: ಶ್ರೀ ನಯಂಪಳ್ಳಿ ರಾಮರಾವ್

ಹಲವು ಜಾತಿಯ ಬೀಜಗಳ ಹೆಸರು ನಿಮಗೆ ಹೇಳಿದ್ದೇನೆ. ಈ ಬೀಜಗಳನ್ನು ನೀವು ಪರಿಶುದ್ಧಗೊಳಿಸುವುದು ಹೇಗೆಂಬುದು ಒಂದು ಮುಖ್ಯ ವಿಚಾರವಾಗಿದೆ.

ಹತ್ತು ಹನ್ನೆರಡು ವರ್ಷಗಳ ಹಿಂದೆ, ನಮ್ಮ ಕೃಷಿಕರಲ್ಲಿ ಮಾರ್ಚಿ ತಿಂಗಳ ಮೂರನೆಯ ವಾರದ ಬೀಜ ಹಾಕಿದ "ಮಾಯಿ" ನೇಜಿಯೇ ಅತ್ಯುತ್ತಮವೆಂಬ ನಂಬಿಕೆ ಇತ್ತು. ಆ ನೇಜಿಗೆ ಕೀಟಾದಿಗಳ ಬಾಧೆಯಿಲ್ಲವೆಂದೂ ಅವರು ಹೇಳುತಿದ್ದರು. ಅದು ಹಾಗಲ್ಲವೆಂದು ನಮ್ಮ ರೈತರೇ ತಿಳಿದುಕೊಂಡಿದ್ದಾರೆ. "ಸುಗ್ಗಿ" ಮತ್ತು "ಪಗ್ಗು" ನೇಜಿಗಳು ಅನಂತರದ ಸ್ಥಾನದವು. ಕೊನೆಯ ವಿಧವೆಂದರೆ ನೀರುನೇಜಿ. ಮಳೆ ಸುರಿದ ಬಳಿಕ ಗದ್ದೆಯನ್ನು ಉತ್ತು ತುಂಬಿದ ನೀರಿಗೆ ಬಿತ್ತಿದ ನೇಜಿ. ಇದಕ್ಕೆ ಯಾವಾಗಲೂ ನೀರು ಇರಲೇಬೇಕು. ಇದರಿಂದ ಇದು ಎಲ್ಲರಿಗೂ ಸಾಧ್ಯವಿಲ್ಲ. ಇದು ಉತ್ತಮ ನೇಜಿ ಎಂದೂ ಇದನ್ನು 30 ದಿನಗಳೊಳಗೆ ತೆಗೆದು ನೆಡಬೇಕೆಂದೂ ನಮ್ಮ ಹಿಂದಿನವರು ಹೇಳುತ್ತಿದ್ದರು.

ಮಾಯಿ ನೇಜಿಯಲ್ಲಾದರೆ ಬಿತ್ತಿದಂದಿನಿಂದ ನೆಡುವ ವರೆಗೆ 85ರಿಂದ 90 ದಿನಗಳೂ ಹೋಗಬಹುದು. ಸುಗ್ಗಿ, ಪಗ್ಗು ನೇಜಿಗಳಾದರೆ 60 ಮತ್ತು 45 ದಿನಗಳು ಬೇಕಾಗುತ್ತವೆ. ಆದರೆ ಜಪಾನು ನೇಜಿಯಾದರೆ, ನಾಲ್ಕು ಎಲೆಗಳಾಗಿ, ಐದನೆ ಎಲೆ ಮೂಡುವಾಗ ತೆಗೆದು ನೆಡಲು ಯೋಗ್ಯವಾಗುತ್ತದೆ. ಇದರ ಬೆಳವಣಿಗೆ 18ರಿಂದ 23 ದಿನಗಳು ಮಾತ್ರ. ಮೂವತ್ತು ದಿನಗಳ ಒಳಗಿನ ನೇಜಿಗಳು ಕೋಮಲವಾಗಿದ್ದು, ಶಕ್ತಿಯಿಲ್ಲದ್ದರಿಂದ ಕೀಟಾದಿಗಳಿಗೆ ಬಲಿಯಾಗುತ್ತವೆ ಎಂಬ ತಪ್ಪು ಭಾವನೆಯೊಂದು ರೈತರಲ್ಲಿ ಇದೆ. ಇದು ನಿಜವಲ್ಲ. ನಾಲ್ಕನೆ ಎಲೆಯಾಗಿ, ಐದನೆ ಎಲೆಯು ಮೂಡುವಾಗ ಜಪಾನು ನೇಜಿಯು ಸಂಪೂರ್ಣ ಬೆಳೆದಿದ್ದು ಬಲಿಷ್ಟವಾಗಿರುತ್ತದೆ. ಜಪಾನು ನೇಜಿಯು ನಟ್ಟ ನಾಲ್ಕನೆಯ ದಿನದಿಂದಲೇ ಆಹಾರ ತೆಗೆದುಕೊಂಡು ಬೆಳೆಯುತ್ತದೆ. ಉಳಿದ ನೇಜಿಗಳಾದರೆ ಏಳು ಎಂಟು ದಿನಗಳ ಬಳಿಕ ಹೀಗೆ ಮಾಡುತ್ತವೆ.

ಒಂದು ಎಕ್ರೆ ಭೂಮಿಗೆ ಸುಮಾರು 51ರಿಂದ 42 ಪೌಂಡುಗಳಷ್ಟು ಇಲ್ಲವೆ 1½ಯಿಂದ 2 ಕಳಸಿಗೆಯಷ್ಟು ಬೀಜ ಬೇಕಾಗುತ್ತದೆ. ಆದರೆ, ಇದರ ಬದಲಿಗೆ ನಮ್ಮ ರೈತರು 63ರಿಂದ 84 ಪೌಂಡುಗಳಷ್ಟು ಇಲ್ಲವೆ 3ರಿಂದ 4 ಕಳಸಿಗೆಗಳಷ್ಟು ಬೀಜ ಹಾಕುತ್ತಾರೆ. ನಡುವಾದ ಮೂರು ನೇಜಿಗಳ ಬದಲಿಗೆ ಎರಡೇ ನೇಜಿಗಳನ್ನು ನಟ್ಟರೆ, ಬೀಜವನ್ನು ಒಂದು ಕಳಸಿಗೆಗೆ ತರಬಹುದು. 9 ಇಂಚುಗಳ ದೂರದಲ್ಲಿ ನಡುವಾಗ ಈ ಕ್ರಮವನ್ನು ಉಪಯೋಗಿಸಬೇಕು. ಉತ್ತಮವಾದ ಬೀಜಗಳಾದರೆ ಹತ್ತು ಹನ್ನೆರಡು ಇಂಚು ದೂರ ನಡಬೇಕು. ಅವುಗಳಲ್ಲೂ ಸಿ. ಓ—25ಯೂ ಜೀರಾ ಬೀಜಗಳಾದರೆ ಹೀಗೆ ಮಾಡುವುದು ಒಳಿತು. ಇದರಿಂದಾಗಿ ಬೀಜವರಿಯು ಕಡಿಮೆಯಾಗುವುದು ಜಪಾನಿಯವರು ತಮ್ಮ ಒಂದು ಎಕ್ರೆ ಹೊಲದಲ್ಲಿ 5 ಪೌಂಡು ಅಥವಾ 3—3½ ಸೇರು ಬೀಜ ಉಪಯೋಗಿಸುತ್ತಾರೆಂಬುದನ್ನು ಭಾವಿಸಬೇಕು. ನೀವೆಲ್ಲರೂ ಸಹಕರಿಸಿದರೆ, ದೇವರ ದಯೆಯಿಂದ, ಹತ್ತು—ಹನ್ನೆರಡು ಇಂಚು ದೂರ ನೆಡುವುದರಿಂದ ನಾವು ಕೂಡ ನಮ್ಮ ಬೀಜವರಿಯನ್ನು ಕಡಿಮೆ ಮಾಡಿದರೆ, ವರ್ಷಕ್ಕೆ ನಾವು 3ರಿಂದ 3½ ಲಕ್ಷ ಮುಡಿಗಳಷ್ಟು ಅಕ್ಕಿ ಉಳಿಸಿದಂತಾಗುವುದು.

ಜಪಾನು ಪದ್ಧತಿಯಂತೆ ನೇಜಿ ತಯಾರಿಸುವುದಾದರೆ ಬೀಜದಲ್ಲಿ ಉಳಿತಾಯವಾಗುವುದಲ್ಲದೆ, ಅದಕ್ಕೆ ವೆಚ್ಚವು ಕೂಡ ಕಡಿಮೆಯಾಗುವುದು. ಹಳೆ ಪದ್ಧತಿಯಂತಾದರೆ ನೀವು ಐದು ಸಾಲು ಉತ್ತು ಚೆನ್ನಾಗಿ ಗೊಬ್ಬರ ಹಾಕುತ್ತೀರಿ. ನೀವು ಒಂದೆರಡು ಸಾಲು ಉತ್ತರೆ ಸಾಕು. ಇದನ್ನೇ ನಮ್ಮ ಹಿಂದಿನವರು 'ಒಂದ್ಲಾ-ಇರಾ್ಲ' ಅನ್ನುತಿದ್ದರು, ಉಳುವ ಮೊದಲು ಗೊಬ್ಬರ ಹಾಕುವುದೇ ಬೇಡ, ಆ ಗೊಬ್ಬರವನ್ನು ನೀವು ನೇಜಿ ಬೆಳೆಯುವ ಕಾಲದಲ್ಲಿ ಉಪಯೋಗಿಸಬಹುದು. ಉತ್ತು ಹದಮಾಡಿದ ಮೇಲೆ ನಿಮ್ಮ ಗದ್ದೆಯಲ್ಲಿ ನಾಲ್ಕು ಅಡಿಗಳ ಬೀಜಹಾಕುವ ಕಳಗಳನ್ನು ಮಾಡಿರಿ. ಈ ಕಳಗಳ ಉದ್ದವು ಗದ್ದೆಗಳ ಉದ್ದದಷ್ಟೇ ಇರುವುದು. ಇದಕ್ಕೆ ಹೆಚ್ಚು ಕೆಲಸವೆಂದು ಜನರು ನಂಬುತ್ತಾರೆ. ಆದರೆ ನಿಜವಾಗಿಯೂ ಕೆಲಸವೇನೂ ಹೆಚ್ಚಿಲ್ಲ. ಮೊದಲು ಎರಡು ಕುಟ್ಟಿ ಹೊಡೆದು ಒಂದು ಹಗ್ಗ ಕಟ್ಟಿ, ಹಾರೆಯಿಂದ, ತಲೆಯಿಂದ ತಲೆಗೆ, ಒಂದು ಕಣಿ ಮಾಡಿರಿ. ಆದರೆ ಬೀಜಹಾಕುವ ಕಳವು ಮಾತ್ರ ನಾಲ್ಕು ಅಡಿಗಳ ಅಗಲವಿರುವಂತೆ ಜಾಗ್ರತೆ ಮಾಡಬೇಕು. ಕಣಿಯಿಂದ ತೆಗೆದ ಮಣ್ಣನ್ನು ಆಚೆ ಈಚೆ ಕಳಗಳಿಗೆ ಹಾಕಿ, ನೀರಿನ ಮಟ್ಟದಿಂದ ಕಳಗಳು 4 ಯಾ 5 ಅಂಗುಲಗಳಷ್ಟು ಎತ್ತರ ಮಾಡಬೇಕು. ಕಳವು ಎಷ್ಟಕ್ಕೂ 4 ಅಡಿಗಳಿಗಿಂತ ಅಗಲವಾಗಬಾರದು. ಈ ಕಳದಲ್ಲಿ ಕಳೆಯಾಗಲೀ ಹುಲ್ಲಾಗಲೀ ಬೆಳೆದರೆ ಅದನ್ನು ಏರಿಯಲ್ಲೇ ನಡೆದು, ಕೈಯಿಂದಲೇ ಕೀಳಬಹುದು. ಆಗ ಕಳವನ್ನು ಮೆಟ್ಟದಂತೆ ಜಾಗ್ರತೆ ವಹಿಸಬೇಕು. ಕಳವನ್ನು ಮೆಟ್ಟಿದರೆ ಅದು ಗಟ್ಟಿಯಾಗುತ್ತದೆ.

ಕಳಗಳು ತಯಾರಾಗುವ ಹೊತ್ತಿಗೆ, ನೀವು ಒಣಗಿದ ಸೆಗಣಿಯ ಹುಡಿಮಾಡಿ ಕುಟ್ಟಿ ತಯಾರಿಸಿಟ್ಟುಕೊಳ್ಳಬೇಕು. ಒಂದೂವರೆ-ಎರಡು ಕಳಸಿಗೆ ಬೀಜಕ್ಕೆ ಐದು-ಆರು ಮುಡಿ ಬುಕ್ಕೆಗಳಷ್ಟು ಕುಟ್ಟಿ ಸಾಕು. ಆ ಮೇಲೆ ನೆಲಗಡಲೆ ಹಿಂಡಿ ಮತ್ತು ಎಮೋನಿಯುಮ್ ಸಲ್ಫೇಟುಗಳಿಂದ ಮಿಶ್ರಣ ತಯಾರಿಸಬೇಕು. ಉಪಯೋಗಿಸುವ ಬೀಜದ ಪರಿಮಾಣವನ್ನು ಹೊಂದಿಕೊಂಡು ಈ ಕುಟ್ಟಿಯ ಪರಿಮಾಣವಿರುತ್ತದೆ. ಒಂದು ಸೇರು ಭತ್ತವು 1½ ಪೌಂಡು ಭಾರವಾಗುತ್ತದೆಂದು ನಿಮಗೆ ಗೊತ್ತಿದೆ. ನೀವು 14 ಸೇರು ಬೀಜ ಹಾಕುವುದಾದರೆ ಅದಕ್ಕೆ 42 ಪೌಂಡುಗಳಷ್ಟು ಮಿಶ್ರಣ ಬೇಕು. ಎಂದರೆ ಬೀಜದ ಭಾರವಷ್ಟೇ ಆದರ ಎರಡರಷ್ಟು ಈ ಮಿಶ್ರಣ ಉಪಯೋಗಿಸಬೇಕು. ಈ 42 ಪೌಂಡುಗಳನ್ನು 5ರಿಂದ ಭಾಗಿಸಿದರೆ ಸುಮಾರು 8 ಬರುತ್ತದೆ. ಆದ್ದರಿಂದ ನಿಮಗೆ 8 ಪೌಂಡುಗಳಷ್ಟು ಎಮೋನಿಯುಮ್ ಸಲ್ಫೇಟು ಬೇಕೆಂದು ಆಯಿತು. ನೀವೀಗ ಕಿಲೋಗಳಲ್ಲಿ ಅಳತೆಮಾಡಲು ಕಲಿತಿದ್ದರೆ, ಒಂದು ಸೇರು ಹತ್ತವಾಗಿ ಅಳೆದ ಎಮೋನಿಯುಮ್ ಸಲ್ಫೇಟು ಒಂದು ಕಿಲೋ ಆಗುತ್ತದೆ. ಆದ್ದರಿಂದ ನಿಮಗೆ ಮೂರುವರೆ ಸೇರಿನಿಂದ ನಾಲ್ಕು ಸೇರಿನಷ್ಟು ಎಮೋನಿಯುಮ್ ಸಲ್ಫೇಟು ಬೇಕೆಂದಾಯಿತು. ಈ ಎಲ್ಲ ವಿವರಗಳು ಏಕೆಂದರೆ— ಎಮೋನಿಯುಮ್ ಸಲ್ಫೇಟಿನ ಪ್ರಮಾಣವನ್ನು ತಿಳಿಯುವುದಕ್ಕಾಗಿ. ನೆಲಗಡಲೆ ಹಿಂಡಿಯಾದರೆ 34 ಪೌಂಡುಗಳೇ ಆಗಬೇಕೆಂದಿಲ್ಲ; 50 ಪೌಂಡುಗಳೂ ಆಗಬಹುದು. ನಿಮ್ಮ ಗದ್ದೆಗಳಿಗೆ ನಾಯಿ-ನರಿಗಳ ಬಾಧೆ ಇರುವುದಾದರೆ ನೆಲಗಡಲೆ ಹಿಂಡಿ ಹಾಕಬೇಡಿ ಬರೇ ಸೆಗಣಿ ಕುಟ್ಟಿಯನ್ನೇ ಉಪಯೋಗಿಸಿರಿ.

ಬೀಜದ ಕಳಗಳ ಮಣ್ಣು ಎತ್ತರಗಳಿದ್ದರೆ, ಆದರ ತಲೆಯನ್ನೆಲ್ಲ ಹಾರಿಸಿ ಸಮತಟ್ಟಾಗಿ ಮಾಡಬೇಕು. ಹಾಗೆ ಮಾಡುವಾಗಲು ಬೀಜದ ಕಳಗಳೇ ಗಟ್ಟಿಯಾಗದಂತೆ ನೋಡಿಕೊಳ್ಳಬೇಕು.

ಈಗ ಮೊತ್ತಮೊದಲು ಕುಟ್ಟಿಯನ್ನು ಕಳದಲ್ಲಿ ಬಿಂಕಿ ಬಿಡಿ. ಹಾಗೆ ಕುಟ್ಟಿ ಹಾಕುವಾಗ ಕಳದಲ್ಲೆಲ್ಲ ಒಂದೇ ಸಮನಾಗಿ ಬೀಳುವಂತೆ ಜಾಗ್ರತೆ ಮಾಡಬೇಕು. ಈ ಕುಟ್ಟಿಯು ಕಾಫಿ ಹುಡಿಯಂತೆ ನಯವಾಗಿರಬೇಕಾಗಿಲ್ಲ. ದೊಡ್ಡ ಹೆಂಟೆಗಳಿದ್ದರೆ ನೀವು ಅದನ್ನು ಕೈಯಿಂದಲೇ ಹುಡಿ ಮಾಡಬಹುದು. ಈ ಕುಟ್ಟಿಯ ಮೇಲೆ ತೆಳ್ಳಗಿನ ಬಟ್ಟೆ ಹಾಸಿದಂತೆ ಬೂದಿ ಹಾರಿಸಿರಿ. ಅದು ಕೂಡ ಎಲ್ಲಾ ಕಡೆಯಲ್ಲೂ ಒಂದೇ ರೀತಿಯಾಗಿರಬೇಕು. ಕೊನೆಗೆ ನೀವು ತಯಾರಿಸಿದ ಮಿಶ್ರಣವನ್ನೂ ಇದರಂತೆ ಆದರ ಮೇಲೆ ಹಾರಿಸಿರಿ. ಈಗ, ಮೊಳಕೆ ಬಂದ ಬೀಜವನ್ನು ಬಿತ್ತಲು ತಯಾರಾದಿರಿ—ಎಂದಾಯಿತು.

ನಾಲ್ಕು ಅಡಿಗಳ ಒಂದು ಕೋಲನ್ನು ತೆಗೆದುಕೊಂಡು ಅಂತಹ ಒಂಭತ್ತು ಕೋಲಿನಷ್ಟು ಕಳವನ್ನು ಗುರುತು ಮಾಡಿಕೊಳ್ಳಿರಿ. ಆ ಸ್ಥಳದಲ್ಲಿ ಒಂದು ಪಾವು ಮೊಳಕೆ ಬೀಜ (ಅಗೆ)ವನ್ನು ತೆಳ್ಳಗಾಗಿ ಬಿತ್ತಿರಿ. ಈ ರೀತಿಯಲ್ಲಿ ಒಂದು ಸೆಂಟ್ ಸ್ಥಳಕ್ಕೆ ಮುಕ್ಕಾಲು ಸೇರು ಬೀಜ ಸಾಕು. ಬೇಕಾದರೆ ಒಂದು ಸೇರಿನಷ್ಟೂ ಉಪಯೋಗಿಸಬಹುದು. ಬಿತ್ತಿದ ಮೇಲೆ ಬೀಜವೇನಾದರೂ ಉಳಿದಲ್ಲಿ, ಅದನ್ನು ಮತ್ತೆ ತೆಳ್ಳಗಿದ್ದ ಸ್ಥಳದಲ್ಲಿ ಬಿತ್ತಿಬಿಡಿ. ಹಾಗೆ ಉಳಿದ ಬೀಜವನ್ನೆಲ್ಲ ಎಲ್ಲ ಕಳಗಳಿಗೂ ಸರಿಯಾಗಿ ಬಿತ್ತಿಬಿಡಿ. ಬಿತ್ತಿ ಆದೊಡನೆ ಮಳೆ ಬಾರದಿದ್ದರೆ, ಏರಿಯನ್ನು ಸ್ವಲ್ಪ ಕಡಿದು ಬಿಟ್ಟರೆ, ಕಳಗಳಲ್ಲಿ ನೀರು ಬತ್ತಿ ಹೋಗುವುದು. ಇದರಿಂದ ಬೀಜದ ಮೇಲೆ ಮಣ್ಣು ಬಿದ್ದಂತಾಗಿ, ಬೀಜವನ್ನು ಹಕ್ಕಿಗಳು ಹೆಕ್ಕಲಾರವು.

ಅಗೆಯನ್ನು ತಯಾರಿಸುವ ಮೊದಲು ಬೀಜವನ್ನು ಶುದ್ಧ ಮಾಡುವುದು ಅತಿ ಮುಖ್ಯವಾಗಿದೆ. ಅದಕ್ಕಾಗಿ ಅಗಲ ಬಾಯಿಯ ಒಂದು ತೊಟ್ಟಿನಲ್ಲಿ 3 ಯಾ 4 ಗಲನ್ ನೀರು ಹಾಕಿರಿ. ಇದು ಸುಮಾರು ದೊಡ್ಡ ಕೊಡಪಾನದಲ್ಲಿ ಒಂದು ಕೊಡಪಾನದಷ್ಟು ಆಗುವುದು. ಈ ನೀರಿಗೆ ಅರ್ಧ ಪಾವಿನಷ್ಟು ಉಪ್ಪನ್ನು ಹಾಕಿರಿ. ಆ ಮೇಲೆ ಅದನ್ನು ಕೈಯಿಂದ ಕಲಕಿ ಉಪ್ಪು ನೀರಲ್ಲಿ ಕರಗುವಂತೆ ಮಾಡಿ. ಈ ಉಪ್ಪು ನೀರಿಗೆ ಬೀಜವನ್ನು 2 ಯಾ 3 ಅಡಿಗಳಷ್ಟು ಎತ್ತರದಿಂದ ನಿಧಾನವಾಗಿ ಸುರಿಯಬೇಕು. ಹಾಳು ಬೀಜಗಳು ಉಪ್ಪು ನೀರಲ್ಲಿ ತೇಲುತ್ತವೆ. ಅವನ್ನು ತೆಗೆದು ಬಿಸಾಡಿ ಪುನಃ ಪಾತ್ರೆಗೆ ಕೈ ಹಾಕಿ ಚೆನ್ನಾಗಿ ಕಲಕಿಸಬೇಕು. ಆಗಲೂ ಪೊಟ್ಟು ಬೀಜಗಳು ತೇಲುವುವು. ಅವನ್ನೆಲ್ಲ ತೆಗೆದ ಮೇಲೆ ಪಾತ್ರೆಯ ತಳದಲ್ಲಿ ಉಳಿಯುವ ಬೀಜವು ನೂರಕ್ಕೆ ನೂರರಷ್ಟು ಶುದ್ಧವಾದ ಬೀಜ.

ನೇಜಿಯನ್ನು ನೆಡಲು ಗದ್ದೆಗಳು ಯಾವಾಗ ಸಿದ್ಧವಾಗಬೇಕೆಂಬ ವಿಚಾರ ನಮ್ಮ ಕೃಷಿಕರಿಗೆ ಅನುಭವದಿಂದ ಗೊತ್ತಿದೆ. ಪ್ರತಿ ವರ್ಷ ಸಾಮಾನ್ಯವಾಗಿ ಜೂನ್ 15 ಅಥ

(ಹತ್ತನೇ ಪುಟ ನೋಡಿರಿ)

ಸುವ್ಯವಸ್ಥಿತ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್
ವ್ಯವಹಾರಗಳಿಗೆ ತನ್ನ 62 ಶಾಖೆಗಳಿಂದ ಹಬ್ಬಿರುವ
"ವಿಜಯ ಬ್ಯಾಂಕಿ"ನಲ್ಲಿ ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 8% ವರೆಗಿನ ಬಡ್ಡಿ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ಹೆ. ಆಫೀಸು—"ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—3

ಚಾರುಚಯನ

ಇರಾಣವು ಕುತಂತ್ರ ಹೂಡಿತೆ?

ತೃತೀಯ ಸಾರ್ವತ್ರಿಕ ಚುನಾವಣಾನಂತರ ಕರ್ನಾಟಕದಲ್ಲಿ 'ಭರತ ಸರಕಾರ' ರಚಿತವಾದ ಕೆಲಸಮಯದ ಮೇಲೆ 'ರಾಮನ ಪುನರಾಗಮನ'ವಾಯಿತು. ಆಗ ಸ್ಥಾಪಿತವಾದ ಸಚಿವ ಸಂಪುಟವು ಗಾತ್ರದಲ್ಲಿ ಭಾರಿ ದೊಡ್ಡದು ಎಂದು ಟೀಕೆಯೂ ಹೊರಟಿತ್ತು. ಸರಕಾರಿ ವೆಚ್ಚದಲ್ಲಿ ಮಿತವ್ಯಯ ಸಾಧಿಸಬೇಕಾದ, ದೇಶವೂ ರಾಜ್ಯವೂ ಕಠಿನ ಆರ್ಥಿಕ ಸ್ಥಿತಿಗತಿಗಳನ್ನು ಎದುರಿಸಬೇಕಾದ ಸಮಯದಲ್ಲಿ ಪಕ್ಷದ ವಿವಿಧ ಗುಂಪುಗಳಿಗೆ ಯಥೋಚಿತ ಪ್ರಾತಿನಿಧ್ಯ ನೀಡುವ ಸಲುವಾಗಿದ್ದ ವಿಶಾಲ ತಳಹದಿಯ ಸಂಪುಟ ರಚನೆಯನ್ನು ವಿರೋಧಿಸಲಾಗಿತ್ತು. ಆದರೆ, ಅದೆಲ್ಲವೂ ನೀರ ಮೇಲಣ ಹೋಮವಾಯಿತು.

ನಿಜಲಿಂಗಪ್ಪನವರ ಸಚಿವ ಸಂಪುಟ ರಚನೆಯಾದಂದಿನಿಂದ ಶಂಸುದ್ದೀನರು ದಿವಂಗತರಾದರು, ಯಶೋಧರಮ್ಮ ದಾಸಪ್ಪನವರು ಪಾನ ಪ್ರತಿಬಂಧ ಶಾಸನ ಸಡಿಲುಗೊಳಿಸುವ ವಿಚಾರದಲ್ಲಿ ಸರಕಾರದ ನೀತಿಯನ್ನು ಪ್ರತಿಭಟಿಸಿ ರಾಜಿನಾಮೆ ನೀಡಿದರು. ಇದೀಗ ಕೊಡಗು ಜಿಲ್ಲೆಯ ಕಿತ್ತೂರಿನ ಮಲ್ಲಪ್ಪನವರೂ ಓಗೊಡದ ನಾಡಿಗೆ ತೆರಳಿದುದರಿಂದ ಮತ್ತೊಂದು ಸ್ಥಾನ ಕಡಿಮೆಯಾಯಿತು. ಆದರೆ, ಜನಮತವರಿತಿರುವ ಮುಖ್ಯ ಮಂತ್ರಿಗಳು ಬೇರೆ ಮಂತ್ರಿಯನ್ನು ಸೇರಿಸಿಕೊಳ್ಳದೆ, ಅವರು ನೋಡಿಕೊಳ್ಳುತ್ತಿದ್ದ ಕೈಗಾರಿಕೆ ಶಾಖೆಯನ್ನು ತನ್ನ ಕೈಗಳಿಗೆ ತೆಗೆದುಕೊಂಡಿದ್ದಾರೆ. ಚುನಾವಣೆಯು ಹಿನ್ನಲೆಯಲ್ಲದರೂ ಇಂತಹ ಕ್ರಮ ಅಗತ್ಯದ್ದಾಗುತ್ತದೆ.

ದಿವಂಗತ ಮಲ್ಲಪ್ಪನವರಿಗೆ ಮರಣ ಕಾಲದಲ್ಲಿ ೫೬ ವರ್ಷ, ಅಂದರೆ ಅವರು ಹುಟ್ಟಿದ್ದು ೧೯೧೦ರಲ್ಲಿ, ಚೆಡಗಿನ ಕೊಡಗಿನ ಕಿತ್ತೂರಿನಲ್ಲಿ. ಆಗಿನ ಕಾಲದ ಅವಶ್ಯಕತೆಯಂತೆ ಬೆಂಗಳೂರು—ಮದ್ರಾಸುಗಳಲ್ಲಿ ಪ್ರೌಢ ವಿದ್ಯಾಭ್ಯಾಸ ಮಾಡಿ ವಕೀಲರಾಗಿ ಮಡಿಕೇರಿಯಲ್ಲಿ ದುಡಿಯ ತೊಡಗಿದರು; ಅವರು ೧೯೫೨ರಲ್ಲಿ ಕೊಡಗುರಾಜ್ಯದಲ್ಲಿ ಮಂತ್ರಿಯಾಗುವ ತನಕವೂ ಮಲ್ಲಪ್ಪನವರು ತಮ್ಮ ವೃತ್ತಿಯಿಂದವಿಮುಖರಾಗಲಿಲ್ಲ. ಮಲ್ಲಪ್ಪನವರಿಗೆ ಸಾರ್ವಜನಿಕ ಸೇವೆಯ ಸೋಂಕು ಗಾಳಿ ಬೀಸಿದುದು ೧೯೩೬ರಲ್ಲಿ. ಅಂದಿನಿಂದಲೂ ಅವರು ಜನಸೇವೆಯಲ್ಲಿ ಹಾಸು ಹೊಕ್ಕಾಗಿದ್ದಾರೆ. ೧೯೩೭ರಲ್ಲಿಯೇ ಕೊಡಗು ವಿಧಾನ ಸಭೆಯ ಸದಸ್ಯರಾದರು ಇವರು. ಹತ್ತು ವರ್ಷಗಳ ಕಾಲ ಇವರು ಈ ಪದದಲ್ಲಿ ವಿರಾಜಿಸಿದ್ದರು. ೧೯೪೫ರಿಂದ ೧೯೫೨ರ ವರೆಗೆ ಮಡಿಕೇರಿ ನಗರ ಸಭಾಪತಿಯಾಗಿ ಸೇವೆ ಮಾಡಿದರು. ಪ್ರಥಮ ಸಾರ್ವತ್ರಿಕ ಚುನಾವಣೆಯಲ್ಲಿ ಪ್ರಾಂತದ ವಿಧಾನ ಸಭೆಗೆ ಚುನಾಯಿತರಾದ ಮಲ್ಲಪ್ಪನವರು ಕಾನೂನು—ಸುವ್ಯವಸ್ಥೆ ಶಾಖೆಯ ಮಂತ್ರಿಯಾದರು. ರಾಜ್ಯ ಪುನರ್ಘಟನಾನಂತರ ಮಂತ್ರಿ ಪದವಿಯಿಂದ ನಿವೃತ್ತರಾದರೂ ಮುಂದೆಯೂ ವಿಧಾನ ಸಭೆಯ ಸದಸ್ಯರಾಗಿಯೇ ಆಯ್ಕೆಗೊಂಡರು. ೧೯೬೨ರ ಚುನಾವಣೆಗಳಲ್ಲಿ ಮೂರನೆಯ ಬಾರಿಯೂ ಗೆದ್ದು ಬಂದ ಮಲ್ಲಪ್ಪನವರು ಭರತ ಸಚಿವ ಸಂಪುಟದಲ್ಲಿಯೇ ಕೈಗಾರಿಕೆ—ವಾಣಿಜ್ಯ ಮಂತ್ರಿಯಾದರು, ರಾಮನೂ ಇವರ ಕೈ ಬಿಡಲಿಲ್ಲ.

ಮಲ್ಲಪ್ಪನವರಿಗೆ ಸಹಕಾರ ಆಂದೋಲನದಲ್ಲಿ ಆಸಕ್ತಿ ಹೆಚ್ಚು. ಕೊಡಗಿನಲ್ಲಿ ಸಹಕಾರಿ ಆಂದೋಲನವು ಬಿಗಿಗೊಳ್ಳುವಂತೆ, ಅದು ಭರದಿಂದ ಮುಂದುವರಿಯುವಂತೆ ಇವರು ಶ್ರಮಿಸಿದ್ದರು. ಕಳೆದ ಐದು ವರ್ಷಗಳಲ್ಲಿ ರಾಜ್ಯದಲ್ಲಿ ಸ್ಥಾಪಿತವಾಗಿ ಬೆಳೆದು ಬಂದಿರುವ ಕೈಗಾರಿಕೋದ್ಯಮದ ಯಶಸ್ಸಿಗೆ ದಿ। ಮಲ್ಲಪ್ಪನವರೇ ಕಾರಣೀಭೂತರು. ಉದ್ಯೋಗೀಕರಣವೇ ಯಶಸ್ಸಿನ ರಹಸ್ಯವೆಂದು ತಿಳಿದು ಕೊಂಡ ಮಲ್ಲಪ್ಪನವರಲ್ಲಿ ಮುಂದಿನ ಪ್ರಗತಿಯ ಬಗೆಯೂ ಹಲವಾರು ಯೋಜನೆಗಳಿದ್ದುವು. ಅವನ್ನು ಕಾರ್ಯರೂಪಕ್ಕೆ ತರುವ ಜವಾಬ್ದಾರಿ ನಮ್ಮ ತಲೆಗೆ ಹೊರಿಸಿ ತಾವು ಕೈ ತೊಳೆದು ಹೊರಟು ಹೋದರು, ಮಲ್ಲಪ್ಪನವರು.

ಮಲ್ಲಪ್ಪನವರದು, ಮಲ್ಲ ಜೀವ, ಮಲ್ಲ ವಿಚಾರ. ಅವರಿಗೆ ದೊರಕುದೂ ಮಲ್ಲ ಶಾಖೆಯೇ. ತನ್ನ ಜೀವಾವಧಿ ಆವಶ್ಯಕತೆಯನ್ನು ಅರಿತು ಕೊಂಡೇ ಮುಂದಡಿಯಿಟ್ಟ ಕೆಲವೇ ಮಲ್ಲಮಂತ್ರಿಗಳಲ್ಲಿ ಮಲ್ಲಪ್ಪನವರೂ ಒಬ್ಬರು. ಜನನ—ಮರಣ ಪ್ರಕೃತಿ ಸಹಜ ಗುಣ. ಇದೀಗ ಮಲ್ಲಪ್ಪನವರ ಮಲ್ಲ ದೇಹ ನಮ್ಮನಗಲಿತು. ಆದರ ಮಲ್ಲಾತ್ಮ ನಮ್ಮ ಬಳಿಯೇ ಸುಳಿದಾಡಿ ನಮಗೆ ಮಲ್ಲ ಪ್ರೇರಣೆ ನೀಡುವುದು. ಅದನ್ನು ನಾವು ಅರಿತುಕೊಳ್ಳಬೇಕು; ಅದರಂತೆ ನಡೆಯಬೇಕು.

○ ○ ○

ಬಹಳ ದಿನಗಳಿಗೆ ಮೊದಲೇ ಕೆನೆಡಾವು ಪಶ್ಚಿಮ ಜರ್ಮನಿಗೆ ಮಾರಿದ್ದ ಎಫ್—೮೬ ವಿಮಾನಗಳನ್ನು ಜರ್ಮನಿಯು ಕೆನೆಡಾದ ಅನುಮತಿ ಪಡೆದು ಇರಾಣಕ್ಕೆ ಮಾರಿತ್ತು. ಆದರೆ ಈ ವಿಮಾನಗಳು ಇಂದು ಇರಾಣದಲ್ಲಿರದೆ ಪಾಕಿಸ್ತಾನದಲ್ಲಿ ಇವೆ. ಇದು ಹೇಗೆ ಸಂಭವಿಸಿತು? ಪಶ್ಚಿಮ ಜರ್ಮನಿಯು ಇರಾಣಕ್ಕೆಂದು ಸುಳ್ಳು ಹೇಳಿ ಪಾಕಿಸ್ತಾನಕ್ಕೆ ಮಾರಿ ಬಿಟ್ಟಿತೆ, ಅಥವಾ ಇರಾಣವೇ ತನ್ನ ಧರ್ಮೀಯ ರಾಷ್ಟ್ರ ಪಾಕಿಸ್ತಾನಕ್ಕೆ ಮಾರಿತೆ, ದಾನ ಮಾಡಿತೆ, ಎರವಲು ನೀಡಿತೆ?—ಇದು ಯಕ್ಷ ಪ್ರಶ್ನೆಯೆನಿಸಿದೆ.

ಭಾರತ—ಪಾಕಿಸ್ತಾನಗಳ ನಡುವೆ ಎದ್ದಿರುವ ಮನಸ್ತಾಪವು ತಿಳಿಯಾಗಲಿಲ್ಲ. ತಾಷ್ಕೆಂಟ್ ಘೋಷಣೆಯು ಈ ಬಗೆಗೆ ಆಶೆ ವ್ಯಕ್ತಪಡಿಸಿದ್ದರೂ ಅದರ ಮೇಲಿನ ಪಾಕ್ ವರ್ತನೆ ನಿರಾಶೆಗೇನೇ ದಾರಿ ಮಾಡಿ ಕೊಡುತ್ತಿದೆ. ಪಾಕಿಸ್ತಾನವು ಎಲ್ಲೆಂದರಲ್ಲಿಂದ ಸೈನಿಕ ಸಹಾಯವನ್ನು ಪಡೆದು ತನ್ನ ಶಕ್ತಿ ಸಂವರ್ಧನೆಯನ್ನು ಆದು ಮಾಡ ತೊಡಗಿದೆ. ಕಳೆದ ಸಪ್ಟಂಬರದಲ್ಲಿ ಭಾರತ—ಪಾಕ್ ಹೋರಾಟವು ತೀವ್ರವಿದ್ದಾಗ ಪಾಕಿಸ್ತಾನಕ್ಕೆ ಶಸ್ತ್ರಾಸ್ತ್ರ ಪೂರೈಸಲು ಇರಾಣ ಮತ್ತು ಇಂಡೋನೇಶ್ಯಗಳು ಮುಂದ ಬಂದಿದ್ದನ್ನು ನಾವು ಮರೆಯುವಂತಿಲ್ಲ. ಹಾಗಾಗಿ ಇರಾಣವೇ ಪಾಕಿಸ್ತಾನಕ್ಕೆ ಕೆನೆಡಾ ಮೂಲದ ವಿಮಾನಗಳನ್ನು ಕೊಟ್ಟಿದ್ದರೂ ಇರಬಹುದು.

ಆದರೆ, ಈ ಬಗೆಯ ಕ್ರಮದಿಂದ ಭಾರತದ ಭದ್ರತೆ ಅಭದ್ರವಾಗುತ್ತದೆ. ಈ ಸಂಬಂಧದ ವಿಚಾರಣೆ ನಡೆದಾಗ ಕೆಲವು ಸ್ವಾರಸ್ಯ ಸಂಗತಿಗಳು ಬಹಿರಂಗವಾದುವು. ಪಶ್ಚಿಮ ಜರ್ಮನಿಯ ವಿವರಣೆ ಬಹುಹಾಸ್ಯಾಸ್ಪದವಿದೆ. ಎಫ್—೮೬ ವಿಮಾನಗಳು ರಿಪೇರಿಯ ಬಗ್ಗೆ ಪಾಕಿಸ್ತಾನಕ್ಕೆ ಬಂದಿದವಂತೆ! ಯಾವುದರ ರಿಪೇರಿ? ಭಾರತದಿಂದ ಗಾಯಗೊಂಡ ಪಾಕ್ ಸೇನೆಯ ರಿಪೇರಿಗಾಗಿಯೇ? ಅದೇನಿದ್ದರೂ ಕೆನಡಾದ ಅನುಮತಿ ಪಡೆಯದೆ ಇವನ್ನು ಹಸ್ತಾಂತರ ಮಾಡುವ ಅಧಿಕಾರ ಇರಾಣಕ್ಕಿಲ್ಲ. ಈಗ ಇರುವ ದಾರಿಯೊಂದೇ. ಪಾಕಿಸ್ತಾನದಲ್ಲಿರುವ ವಿಮಾನಗಳನ್ನು ಅವುಗಳ ಮೂಲಕ ರಾಷ್ಟ್ರಕ್ಕೆ ಮರಳಿಸುವುದು. ಸಂಬಂಧಪಟ್ಟ ರಾಷ್ಟ್ರ

(ಹತ್ತನೇ ಪುಟ ನೋಡಿ)

ನಿಮ್ಮ ಹಣ ಸರ್ಪಗಾವಲಿನಲ್ಲಿ.......



ಹಿಂದಿನ ಕಾಲದ ತುಂಡರಸರು, ಧನಿಕರು, ವರ್ತಕರು ತಮ್ಮ ಮುಂದಿನ ಪೀಳಿಗೆಯವರ ಅನುಭೋಗಕ್ಕಾಗಿ ನಿಧಿಯನ್ನು ಸಂಚಯಿಸಿಟ್ಟು ಕೊಂಡಿದ್ದರು. ರಾಜ್ಯಗಳು ಪಾಳು ಬಿದ್ದಾಗ ಅವು ಭೂಗರ್ಭ ಸೇರಿಕೊಂಡವು. ಮಣ್ಣಿನಲ್ಲಿ ಹೂತಿರುವ ಈ ಕೊಪ್ಪರಿಗೆಗಳು, ಅವುಗಳ ಒಡೆಯರು ಅಪೇಕ್ಷಿಸಿದ್ದ ಮಂದಿಗಲ್ಲದೆ ಅನ್ಯರ ವಶ ಹೋಗದಂತೆ ಸರ್ಪಗಳು ಅವುಗಳ ಸುತ್ತ ಕಾವಲಿರಿಸಿಕೊಂಡಿವೆಯೆಂಬ ಪ್ರತೀತಿಯಿದೆ. ಈ ಸರ್ಪಗಾವಲು ಸಂಪತ್ತಿನ ಭದ್ರತೆಗೆ ನಿಸರ್ಗದ ವರವೆನಿಸಿದೆ.

ನಮ್ಮ ಕಾಲದ ಜನರು ತಾವು ಗಳಿಸಿ, ಕೂಡಿಟ್ಟ ಹಣಕ್ಕೆ
ಸರ್ಪಗಾವಲಿನಷ್ಟೇ ಸುರಕ್ಷಿತತೆ ಬಯಸುವುದು ಸಹಜ.

ಸಿಂಡಿಕೇಟ್ ಬ್ಯಾಂಕಿನ ಯಾವುದಾದರೊಂದು ಉಳಿತಾಯ ಖಾತೆಯಲ್ಲಿ ನೀವು ಕೂಡಿಟ್ಟ ಹಣ ಸರ್ಪಗಾವಲಿನಲ್ಲಿರಿಸಿದ ಸಂಪತ್ತಿನಂತೆ. ಅದು ಅಷ್ಟು ಭದ್ರವಾಗಿಯೂ ಸುರಕ್ಷಿತವಾಗಿಯೂ ಉಳಿದು, ಕಾಲ ಸರಿದಂತೆ ಬೆಳೆದು, ನಿಮ್ಮ ಮುಂದಿನ ದಿನಗಳ ಅವಶ್ಯಕತೆಗೆ ಇಲ್ಲವೆ ನಿಮ್ಮ ಮಕ್ಕಳ ಜೀವನಕ್ಕೆ ಅದು ದೊರಕುವುದು.

ಸಂಪತ್ತಿನ ಭದ್ರತೆ ಮತ್ತು ಸುರಕ್ಷಿತತೆಗೆ ನೀವು ಆರಿಸಬೇಕಾದ ಸಂಸ್ಥೆ

FAITHFUL FRIENDLY SB

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು. ಮಣಿಪಾಲು ಮೈಸೂರು ರಾಜ್ಯ.

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

O P. 16/1906

1. ಕಾವು ಸೆಟ್ಟಿ ಯಾನೆ ಶಪ್ಪಲಂಮ— ಪುಟ್ಟಂಮ ಸೆಟ್ಟಿ ಮಗಳು—

4. ಜಲಜಾಕ್ಷಿ ಸೆಟ್ಟಿ—1ನೇ ಅರ್ಜಿದಾರಳ ಮಗಳು....ಉಡುಪಿ ತಾಲ್ಲೂಕು ಅಂಬಲಪಾಡಿ ಗ್ರಾಮ— ಅರ್ಜಿದಾರರು.

ಯಾ ಮುಂದ್ಲ್ಯ ಸಮಸ್ತ ಜನರಿಗೆ ತಿಳಿಯಪಡಿಸುವುದೇನೆಂದರೆ—

ಮೇಲ್ಕಂಡ ಅರ್ಜಿಯು 1ನೇ ಅರ್ಜಿದಾರಳ ಗಂಡ 4ನೇ ಅರ್ಜಿದಾರಳ ತಂದೆ— ಯಾನೆ ಳ ಮುಹಾಬಲ ಸೆಟ್ರು—ತಾ. 10—x—1955ರಲ್ಲಿ ಸ್ವರ್ಗಸ್ಥರಾಗಿರುವದ್ರಿಂದ—ಅವರಿಗೆ ಬರತಕ್ಕ ಅರ್ಜಿಯಲ್ಲಿ ವಿವರಿಸಿದ—ಡಿಪೋಜಿಟ್ ಅಯ್ಯವಜು ಪೈಸೂ ಮಾಡುವರೆ—ತಾ. 29-7-1946ರಲ್ಲು ರೀ ನಿರಿಂ ಬರೆದಿಟ್ಟ ವೀಲು ಪ್ರಕಾರ ತಾವು ಮಾತ್ರ ಹಕ್ಕುದಾರರಂತಲ್ಲೂ ಆ ಕುರಿತು ಸಕ್ಸೆಸನ್ ಸರ್ಟಿಫಿಕೇಟು ಕೊಡಿಸಬೇಕಾಗಿ ದಾಖಲ್ಲು ಮಾಡಿದ ಅರ್ಜಿಯು ತಾ 2-9-1966ಕ್ಕೆ ತನಿಖೆಗ ಇಟ್ಟಿರುವದ್ರಿಂದ— ಆಕ್ಷೇಪ ಹೇಳತಕ್ಕವರು ಯಿದ್ರೆ ಆ ದಿವಸ ಪೂರ್ವಾಹ್ನ 11ಗಂಟೆಗೆ— ಮೇಲ್ಕಂಡ ಕೋರ್ಟಿನ ಮುಂದೆ ಹಾಜರಾಗಿ ಹೇಳು ಮಾಡಿ ಕೊಳ್ಳತಕ್ಕದ್ದುಯೆಂಬ ಸಂಗ್ತಿ ತಿಳಿಸಿಯದೆ.

N. V. Kamath
Advocate for Petitioners

ಉಡುಪಿ, 20-8-66.

ಪ್ರಗತಿಪ

ನಮ್ಮ ಸಮುದ್ರ

ಲೇಖಕರು: ಗೇ



ಅಮೆರಿಕೆಯ ಸುವಿಖ್ಯಾತ ಜಾಜ್ ವಾದ್ಯವಾದಕ ಲೂಯಿಸ್ ಆರ್ಮ್‌ಸ್ಟ್ರಾಂಗ್. ಇವನಿಗೆ ವರ್ಷದ ಸುಪ್ರಸಿದ್ಧ ವ್ಯಕ್ತಿಯೆನ್ನುವ ಪ್ರಶಸ್ತಿಯನ್ನು ವಿವಿಧ ಕಲಾವಿದರ ಸಂಘವು ನೀಡಿ ಗೌರವಿಸಿತು, ನ್ಯೂಯಾರ್ಕಿನಲ್ಲಿ.

೧೯೬೩ರಲ್ಲಿ ಭಾರತೀಯ ಹಡಗುಗಳ ಸಾಗಾಣಿಕೆ ಸಾಮರ್ಥ್ಯ ಒಂದು ಲಕ್ಷ ಟನ್ ಅಂಕಿಯನ್ನು ಮೀರಿದಾಗ, ನಮ್ಮ ಸಮುದ್ರ ಸಂಚಾರ ಸಾಮರ್ಥ್ಯವು ಪ್ರೌಢಾವಸ್ಥೆಯನ್ನು ತಲುಪಿತು. ೧೯೬೪ ಏಪ್ರಿಲ್ ೫ರಂದು ಪ್ರಥಮ ಸಲ ಭಾರತೀಯ ರಾಷ್ಟ್ರೀಯ ಸಮುದ್ರಸಂಚಾರಸಂಬಂಧ ದಿನಾಚರಣೆಯನ್ನು ಆಚರಿಸಲಾಯಿತು. ದೇಶದ ಆರ್ಥಿಕ ಅಭಿವೃದ್ಧಿಗೆ ಕಾರಣವಾದ ರಾಷ್ಟ್ರದ ವ್ಯಾಪಾರೀ ಹಡಗುಗಳ ಅಭಿವೃದ್ಧಿಯಂತಹ ಮಹತ್ವದ ಪ್ರಶ್ನೆಯ ಕಡೆಗೆ ದೇಶದ ಜನತೆಯ ಲಕ್ಷ್ಯ ಸೆಳೆಯಲು ಪ್ರತಿವರ್ಷ ಏಪ್ರಿಲ್ ೫ರಂದು ಈ ದಿನಾಚರಣೆಯನ್ನು ಆಚರಿಸಲಾಗುತ್ತಿದೆ.

ಟನ್ ಮಾನ ವಿಸ್ತರಣೆ

ನಮಗೆ ೧೯೪೭ರಲ್ಲಿ ಸ್ವಾತಂತ್ರ್ಯ ದೊರೆತಾಗ ಭಾರತದ ಬಳಿ ೨,೫೦,೦೦೦ ಜಿ. ಆರ್. ಟಿ. ವ್ಯಾಪಾರೀ ಹಡಗುಗಳಿದ್ದವು. ಮತ್ತು ಈ ಹಡಗುಗಳೆಲ್ಲ ಭಾರತದ ಕರಾವಳಿಯಲ್ಲಿ ಮಾತ್ರ ಸಂಚಾರ ಮಾಡುತ್ತಿದ್ದವು. ಇಂತು ಅಲ್ಪ ಪ್ರಮಾಣದ ಟನ್ ಮಾನದಿಂದ ನಮ್ಮ ಹಡಗುಗಳು ಬೆಳೆದು ಅಂತಾರಾಷ್ಟ್ರೀಯ ವ್ಯಾಪಾರದ ಸಂಚಾರ ಕಾರ್ಯಕ್ಕೆ ಸಿದ್ಧವಾಗಬೇಕಾಯಿತು. ಬಾಲ್ಯಾವಸ್ಥೆಯಲ್ಲಿದ್ದ ನಮ್ಮ ಹಡಗು ಉದ್ಯಮಕ್ಕೆ ಸರಕಾರದವರು ಕ್ರಿಯಾತ್ಮಕ ಸತ್ವಶಾಲೀ ಧೋರಣೆಯನ್ನು ತಳೆದು ಎಲ್ಲ ಬಗೆಯ ಸಹಾಯ ನೀಡಿದ್ದರಿಂದ ಭಾರತೀಯ ಹಡಗುಗಳ ಟನ್‌ಮಾನವು ಕಳೆದ ಹದಿನೆಂಟು ವರ್ಷಗಳಿಂದ ಅಭಿವೃದ್ಧಿ ಹೊಂದಿದೆ. ೧೯೬೭ರ ಏಪ್ರಿಲ್ ೫ರಂದು ಭಾರತೀಯ ಹಡಗುಗಳ ಟನ್ ಮಾನವು ೧೫,೩೧,೦೦೦ ಜಿ. ಆರ್. ಟಿ. ಯಷ್ಟಿದೆ. ನಾವು ಈ ದಿನ ೧೯೪೭ರ ಟನ್ ಮಾನದ ಎಂಟರಷ್ಟು ಟನ್ ಮಾನ ಪಡೆದಿರುವುದು ಒಂದು ಹೆಮ್ಮೆಯ ಸಾಧನೆ. ಮೂರನೇ ಯೋಜನೆಯ ಪ್ರಾರಂಭಕ್ಕೆ ನಮ್ಮ ಹಡಗುಗಳ ಟನ್ ಮಾನ ೮.೫೭ ಲಕ್ಷ ಜಿ. ಆರ್. ಟಿ. ಮಾತ್ರವಿತ್ತು.

ನಮ್ಮ ವ್ಯಾಪಾರಿ ಹಡಗುಗಳ ಸಮುದಾಯಕ್ಕೆ ಸೇರಿಸಲು ನಾವೀಗಾಗಲೇ ಕೊಟ್ಟ ಹಡಗುಗಳ ಬೇಡಿಕೆಗಳನ್ನು ಗಣನೆಗೆ ತಂದುಕೊಂಡರೆ ನಮ್ಮ ಹಡಗುಗಳ ಟನ್ ಮಾನ ಎರಡು ದಶಲಕ್ಷ ಜಿ. ಆರ್. ಟಿ. ಯಷ್ಟಾಗುವುದು. ಯೋಜನಾ ಆಯೋಗವು ಮೂರನೇ ಯೋಜನೆಯ ಕೊನೆಗೆ ೧.೧ ದಶಲಕ್ಷ ಜಿ. ಆರ್. ಟಿ. ಯ ಗುರಿಯನ್ನಿಟ್ಟುಕೊಂಡಿತ್ತು; ಮತ್ತು ಅದಕ್ಕಾಗಿ ೫೧ ಕೋಟಿ ರೂ. ಗಳನ್ನು ತೆಗೆದಿರಿಸಲಾಗಿತ್ತು. ಅಷ್ಟೇ ಹಣದ ವೆಚ್ಚದಿಂದ ಇಂದು ಎರಡು ದಶಲಕ್ಷ ಟನ್ ಮಾನದ ಗುರಿಯನ್ನು ತಲುಪಿದ್ದು ಒಂದು ಸಾಧನೆಯೇ ಸರಿ.

ಸಮತೋಲನ

ಸಾಗರೋತ್ತರ ಸಂಚಾರಕ್ಕೆ ಮತ್ತು ನಮ್ಮ ಕರಾವಳಿಯ ಸಂಚಾರಕ್ಕೆ ಬೇಕಾಗುವ ವ್ಯಾಪಾರೀ ಹಡಗುಗಳು ಸಮತೋಲನದ ಸಂಖ್ಯೆಯಲ್ಲಿವೆ. ಒಣ ವಸ್ತುಗಳನ್ನು ಕರಾವಳಿಗುಂಟ ಸಾಗಿಸುವ ಕಾರ್ಯವನ್ನೆಲ್ಲ ನಮ್ಮ ಹಡಗುಗಳೇ ಮಾಡುತ್ತಿದ್ದು ಶೇಕಡ ೨೦ರಷ್ಟು ತೈಲ ವಸ್ತುಗಳ ಸಾಗಾಟವನ್ನು ಸಹ ಕೈಗೊಂಡಿವೆ. ನಮ್ಮ ಸಾಗರೋತ್ತರ ಹಡಗು ಪಡೆಯಲ್ಲಿ ಸೂಪರ್ ಟ್ಯಾಂಕರುಗಳು, ಬೃಹತ್ ಕ್ಯಾರಿಯರ್‌ಗಳ ಆದಿಯಾಗಿ ತೈಲವಾಹಕಗಳು, ಟ್ರ್ಯಾಂಪ್‌ಗಳು, ಪ್ರಯಾಣಿಕ ಮತ್ತು ಸರಕುಗಳ ಹಡಗುಗಳು ಮತ್ತು ಇತರ ಹಡಗುಗಳಿವೆ. ನಮ್ಮ ಕರಾವಳಿ ಸಂಚಾರದ ಹಡಗುಗಳು ಹತ್ತು ವರುಷದಷ್ಟು ಹಳೆಯವು ಇವೆ. ಕಲ್ಲಿದ್ದಲು ಸಾಗಾಟಕ್ಕೆ ಬೇಕಾಗುವ ಹಡಗುಗಳನ್ನು ಪಡೆಯಲು ಈಗಾಗಲೇ ಸಕಾಲಿಕ ಬೇಡಿಕೆಗಳನ್ನು ಕಳುಹಿಸಲಾಗಿದೆ. ನಮ್ಮ ಸಾಗರೋತ್ತರ ಹಡಗು ಪಡೆಯು ವಿಸ್ತಾರಗೊಂಡಿದ್ದರೂ ನಮ್ಮ ವಿದೇಶ ವ್ಯಾಪಾರದ ಶೇಕಡ ೧೨ರಿಂದ ೧೫ರಷ್ಟನ್ನು ಮಾತ್ರ ನಮ್ಮ ಹಡಗುಗಳು ನಿರ್ವಹಿಸಲು ಶಕ್ಯವಾಗಿವೆ. ನಮ್ಮ ವಿದೇಶ ವ್ಯಾಪಾರವು ಗಣನೀಯವಾಗಿ ಬೆಳೆದುದರಿಂದ ನಮ್ಮ ಹಡಗುಗಳ ಸಂಚಾರ ಸಾಮರ್ಥ್ಯ ಸಾಲದಾಗಿದೆ. ಹೀಗಿದ್ದರೂ ವಿದೇಶ ವ್ಯಾಪಾರ ನಿರ್ವಹಣೆಯಿಂದ ಭಾರತದ ಸಾಗರೋತ್ತರ ಹಡಗು ಪಡೆಯು ವರ್ಷಕ್ಕೆ ೫೦ ಕೋಟಿ ರೂ. ಗಳಷ್ಟು ವಿದೇಶ ವಿನಿಮಯವನ್ನು ಪಡೆಯುತ್ತಿದೆ. ಈ ಗಳಿಕೆಯೇ ಕಡಿಮೆ ಸಾಧನೆಯೆಂದೆನಿಸುವುದಿಲ್ಲ.

ಕರಾವಳಿಯ ಹಡಗು ಸಾರಿಗೆ

ವಿದೇಶೀ ವಿನಿಮಯದ ತೀವ್ರ ಕೊರತೆಯ ಮೂಲಕ ನಮ್ಮ ಕರಾವಳಿ ಹಡಗು ಪಡೆಯನ್ನು ಆಧುನೀಕರಿಸುವ, ಅಭಿವೃದ್ಧಿಗೊಳಿಸುವ ಕಾರ್ಯಕ್ರಮವನ್ನು ಕೈಗೊಳ್ಳಲು ಸಾಧ್ಯವಾಗಿಲ್ಲ. ಏಕೆಂದರೆ ಕರಾವಳೀ ಸಾಗಾಟದಲ್ಲಿ ವಿದೇಶ ವಿನಿಮಯದ ಪ್ರಶ್ನೆ ಇಲ್ಲ. ಆದರೆ ವಿದೇಶೀ ವಿನಿಮಯವನ್ನು ಗಳಿಸುವ ಸಾಗರೋತ್ತರ ಹಡಗುಗಳನ್ನು ಸಾಲದ ಮೇಲೆ ಪಡೆಯಲು ಸಾಧ್ಯವಾಗಿದೆ. ಕಾರಣ ಕರಾವಳಿ ಹಡಗುಗಳು ಅಸ್ತಿತ್ವದಲ್ಲಿ ಉಳಿದು, ಅವು ಅಭಿವೃದ್ಧಿ ಹೊಂದಲು ಏನಾದರೂ ಸಕಾಲಿಕ ಯೋಜನೆಗಳನ್ನು ಕಾರ್ಯಗತ ಮಾಡಲೇ ಬೇಕಾಗಿದೆ.

ಹಡಗು ಕಟ್ಟುವ ಕಾರ್ಖಾನೆ

ನಮ್ಮ ಬೆಳೆಯುತ್ತಿರುವ ವ್ಯಾಪಾರ ಮಾನದ ಮೇಲಿಂದ ಹಡಗು ಕಟ್ಟುವ ಉದ್ಯಮ ಶೀಘ್ರ ಪ್ರಗತಿ ಹೊಂದಬೇಕಾಗಿದೆ. ವಿಶಾಖಪಟ್ಟಣದ ಹಡಗು ಕಟ್ಟುವ ಕಾರ್ಖಾನೆಯು ಪ್ರಗತಿಯಲ್ಲಿದೆ, ಆದರೂ ಆದರ ಸಾಮರ್ಥ್ಯ ನಮ್ಮ ಬೇಡಿಕೆಯನ್ನು ಪೂರೈಸಲಾರದು. ಕೊಚಿನ್ ನೌಕಾಂಗಣವು ಅಭಿವೃದ್ಧಿ ಹೊಂದುತ್ತಿದೆ. ಹಡಗುಗಳ ದುರಸ್ತಿಗಾಗಿ, ನಾವು ಬಹಳಷ್ಟು ವಿದೇಶೀ ವಿನಿಮಯದ ಹಣವನ್ನು ಉಪಯೋಗಿಸಿ, ವಿದೇಶಗಳಿಗೆ ನಮ್ಮ ಹಡಗುಗಳನ್ನು ಕಳಿಸುತ್ತಿದ್ದೇವೆ. ಇವನ್ನು ತಪ್ಪಿಸಲು ನಮ್ಮ ಕರಾವಳಿ ಗುಂಟ ಮುಖ್ಯ ಮುಖ್ಯ ಬಂದರುಗಳಲ್ಲಿ ದುರಸ್ತಿ ಕೆಲಸದ ಘಟಕಗಳನ್ನು ನಾವು ಸ್ಥಾಪಿಬೇಕು. ವಿಶಾಲವಾಗಿ ಹಬ್ಬುತ್ತಿರುವ ನಮ್ಮ ಹಡಗು ಪಡೆಗೆ ನೌಕಾ ರಕ್ಷಣೆ ಘಟಕವನ್ನು ಪಡೆಯ ಬೇಕಾದದ್ದು ತೀರ ಅವಶ್ಯಕವಾಗಿದೆ.

ನಮ್ಮ ಬಂದರಗಳು

ನಮ್ಮ ಉದ್ಯಮಗಳು ವಿಕಾಸಗೊಂಡಂತೆ, ವ್ಯಾಪಾರವು ಊರ್ಜಿತವಾದಂತೆ ಸಮುದ್ರ ಸಾಗಾಟದ ಮಹತ್ವವು ಕಂಡುಬರತೊಡಗುವುದು. ಇದಕ್ಕಾಗಿ ಉತ್ತಮ ಬಂದರುಗಳ ಆವಶ್ಯಕತೆಯು ಹೆಚ್ಚುವುದು. ನಿರುಪಯೋಗಿ ಸಾಧನ ಸಲಕರಣೆಯಿಂದ ಕೂಡಿದ, ಸುಸಜ್ಜಿತವಲ್ಲದ ಬಂದರುಗಳು ವ್ಯಾಪಾರದ ಸುಗಮ ಸಾಗಾಟಕ್ಕೆ ವ್ಯತ್ಯಯ ತಂದು, ಆರ್ಥಿಕ ಅಭಿವೃದ್ಧಿಯನ್ನು ಕುಂಠಿತಗೊಳಿಸುತ್ತದೆ. ಆದುದರಿಂದ ನಮ್ಮ ಯೋಜನೆಗಳಲ್ಲಿ ಬಂ



ಭೂಮಿಯ ನಿಜವಾದ ಪ್ರಮಾಣವೆಷ್ಟು? ಈ ಸಂಬಂಧದ ಸಂಶೋಧನಾ ಯಂತ್ರವೊಂದು ದಕ್ಷಿಣ ಧ್ರುವ ಖಂಡದ ಏಕಾಂತ ಹಿಮಾಚ್ಛಾದಿತ ಪ್ರದೇಶದಲ್ಲಿ ಹಗಲಿರುಳು ದುಡಿಯುತ್ತಿದೆ. ಇಂದಿನ ಕಾಲ್ಪನಿಕ ಅಂಕೆಸಂಖ್ಯೆಗಳು ಬಾಧ ಮೇಲಾಗುವ ದಿನಗಳು ಸಧ್ಯವೇ ಬರಲಿವೆ.

ನ್ಯೂಯಾರ್ಕಿನಿಂದ ಪ್ಯಾ
ವಾಯುಯಾತ್ರೆ ಮಾಡಿದ ಚಾ
ಬಲ್ಲಿರು? ಆತನ ಸುಪುತ್ರ
ಲಿಂಡಬರ್ಗನಾಗಲಿದ್ದಾನೆ.
ಡಲಿಯ ಸಂಶೋಧನಾ ಕಾರ್ಯ

...ಥದಲ್ಲಿ

...ಕಾರ ಸಾಮರ್ಥ್ಯ

...ೀಂದ್ರ ಸಿಂಗ್.

...ದರುಗಳ ಅಭಿವೃದ್ಧಿಗೆ ಹೆಚ್ಚಿನ ಗಮನ ಕೊಟ್ಟಿದ್ದೇವೆ.

ನಮ್ಮಲ್ಲಿಂದು ಕಲ್ಕತ್ತ, ಮುಂಬೈ, ಮದ್ರಾಸ್, ವಿಶಾಖಪಟ್ಟಣ, ಕೊಚಿನ್, ಕಾಂಡ್ಲಾ ಮತ್ತು ಮರ್ಮಗೋವಾ, ಇವು ಪ್ರಮುಖ ಬಂದರುಗಳಾಗಿದ್ದು, ೧೯೫೦-೫೧ರಲ್ಲಿ ಈ ಬಂದರುಗಳಲ್ಲಿ ಒಟ್ಟು ೧೯.೩ ದಶಲಕ್ಷ ಟನ್ನನ್ನು ಸರಕುಗಳ ಸಾಗಾಟವಾಗಿದ್ದರೆ ೧೯೬೪—೬೫ರಲ್ಲಿ ೪೮.೪ ದಶಲಕ್ಷ ಟನ್ನಿನಷ್ಟು ಆಗಿದೆ. ಕಾಂಡ್ಲಾ ಮತ್ತು ಮುಂಬೈ ಬಂದರುಗಳ ಸರ್ವತೋಮುಖ ಅಭಿವೃದ್ಧಿಯ ಪರಿಣಾಮವಾಗಿ ಇಷ್ಟು ಹೆಚ್ಚಿನ ಸಂಖ್ಯೆಯ ಸರಕುಗಳನ್ನು ಸಾಗಿಸಲು ನಾವು ಶಕ್ತರಾಗಿದ್ದೇವೆ ನಮ್ಮ ಬಂದರುಗಳ ಸರಕು ನಿರ್ವಹಣೆಯ ಸಾಮರ್ಥ್ಯ ಸಮಾಧಾನಕರವಾಗಿದೆ.

೧೯೬೪—೬೫ನೇ ಸಾಲಿನಲ್ಲಿ ಪಾರಾದೀಪ್ ಬಂದರು ಪೂರ್ಣಗೊಂಡಿದೆ. ವಿಶಾಖ ಪಟ್ಟಣದಲ್ಲಿ ಅದಿರು ಸಾಗಾಟದ ಘಟಕವು ಕಾರ್ಯಾರಂಭ ಮಾಡಿದೆ. ೭ ದಶಲಕ್ಷ ಟನ್ನಿನಷ್ಟು ಅದಿರನ್ನು ಸಾಗಿಸಿ ಮರ್ಮಗೋವಾ ಬಂದರು ಶ್ಲಾಘನೀಯದ ಕೆಲಸ ಮಾಡಿದೆ. ನಮ್ಮ ಬಂದರುಗಳು ಎಂಟು ದಶಲಕ್ಷ ಟನ್ನಿನಷ್ಟು ಆಹಾರ ಧಾನ್ಯಗಳನ್ನು ಬರಮಾಡಿಕೊಂಡಿವೆ. ಈಗ ಪ್ರತಿ ತಿಂಗಳೂ ೧ ೨ ದಶಲಕ್ಷ ಟನ್ ಆಹಾರ ಧಾನ್ಯಗಳನ್ನು ನಮ್ಮ ಬಂದರುಗಳಲ್ಲಿ ಇಳಿಸಬೇಕಾಗಬಹುದು.

ಮಂಗಳೂರು ಮತ್ತಿತರ ಬಂದರುಗಳು

ಹಾಲ್ದಿಯಾ, ಟುಟಿಕೋರಿನ್ ಮತ್ತು ಮಂಗಳೂರು ಬಂದರು ಯೋಜನೆಯ ಕಾರ್ಯ ಪ್ರಗತಿಯಲ್ಲಿದೆ. ಮುಂಬೈ ನೌಕಾಂಗಣದ ವಿಸ್ತರಣೆಯ ಯೋಜನೆ ಕಾರ್ಯಗತವಾಗುತ್ತಲಿದೆ ಮದ್ರಾಸ್ ಮತ್ತು ಮರ್ಮಗೋವಾ ಬಂದರುಗಳ ಆಧುನೀಕರಣದ ಕೆಲಸ ಸಾಗಿದೆ.

ನಮ್ಮ ಮೂರನೆಯ ಯೋಜನೆಯ ಕೊನೆಗೆ ಪ್ರಮುಖ ಬಂದರುಗಳಾದ ಕಲ್ಕತ್ತ, ಮುಂಬೈ, ಮದ್ರಾಸ್, ಕೊಚಿನ್, ವೈಶಾಖಪಟ್ಟಣ, ಕಾಂಡ್ಲಾ ಮತ್ತು ಮರ್ಮಗೋವಾ ಇವುಗಳು ಒಟ್ಟು ೬೦.೨೦ ದಶಲಕ್ಷ ಟನ್ ಸರಕುಗಳನ್ನು ಸಾಗಿಸುವ ಸಾಮರ್ಥ್ಯವನ್ನು ಪಡೆದಿದೆ. ಪಾರದೀಪ ಬಂದರು ಕಾರ್ಯಾಚರಣೆಯಲ್ಲಿ ಬಂದಾಗ ಈ ಸಾಮರ್ಥ್ಯ ಇನ್ನೂ ಎರಡು ದಶಲಕ್ಷ ಟನ್ನಿನಿಂದ ಹೆಚ್ಚಾಗುವುದು. ಸದ್ಯಕ್ಕೆ ಕೈಗೊಂಡ ಎಲ್ಲ ಬಂದರುಗಳ ಯೋಜನೆಗಳು ನಾಲ್ಕನೇ ಯೋಜನೆಯಲ್ಲಿ ಪೂರ್ಣಗೊಂಡಾಗ ಸಾಗಾಟ ಸಾಮರ್ಥ್ಯ ೮೦ ದಶಲಕ್ಷ ಟನ್ನಿನಷ್ಟಾಗಬಹುದು. ನಮ್ಮ ದೇಶದಲ್ಲ ಚಿಕ್ಕಪುಟ್ಟ ಬಂದರುಗಳ ಸಂಖ್ಯೆ ೧೭೦ ಇವೆ. ಈ ಚಿಕ್ಕ ಬಂದರುಗಳು ದೇಶದ ಒಂದು ಏಳಾಂಶದಷ್ಟು ಸರಕುಗಳ ಸಾಗಾಟವನ್ನು ನಿರ್ವಹಿಸಿವೆ.

ನಾವು ಈ ದಿಶೆಯಲ್ಲಿ ಸಾಧಿಸಿದ ಪ್ರಗತಿ ಮಹತ್ವಪೂರ್ಣವಾಗಿದ್ದರೂ, ಸಾಧಿಸಬೇಕಾದ ಕಾರ್ಯ ಇನ್ನು ಬಹಳಷ್ಟಿದೆ. ಹೊಸ ಹಡಗುಗಳನ್ನು ಕೊಳ್ಳಲು ವಿದೇಶ ವಿನಿಮಯದ ಕೊರತ ತೀವ್ರವಿದೆ ಈ ಕೊರತೆಯನ್ನು ನೀಗಿಸಲು ನಾವು ಕ್ರಮ ಕೈಗೊಂಡು ನಮ್ಮ ವ್ಯಾಪಾರೀ ಹಡಗು ಪಡೆಯನ್ನು ಬೆಳಸಬೇಕಾಗಿದೆ. ದೇಶದ ಭದ್ರತೆಯ ದೃಷ್ಟಿಯಿಂದ ಹಿತದ ದೃಷ್ಟಿಯಿಂದ, ನಮ್ಮ ವ್ಯಾಪಾರಿ ಹಡಗು ಪಡೆಯನ್ನು ವಿಪುಲವಾಗಿ ಬೆಳೆಯಿಸಿ ೧೯೭೦ರ ಏಳನೆಯ ರಾಷ್ಟ್ರೀಯ ಸಮುದ್ರ ಸಂಚಾರ ಸಂಬಂಧ ದಿನಾಚರಣೆಯ ವೇಳೆಗೆ ಹಡಗುಗಳ ಟನ್ ಮಾನವು ಮೂರು ದಶಲಕ್ಷ ಟನ್ನಿನಷ್ಟಾದರೆ, ಒಂದು ಉತ್ತಮ ಕಾರ್ಯ ಸಾಧನೆಯನ್ನು ಸಾಧಿಸಿರುವೆವೆಂದು ನಾವು ನಿರ್ಭಯವಾಗಿ ಹೆಮ್ಮೆಪಟ್ಟುಕೊಳ್ಳಬಹುದು.



ಕಾರಖಾನೆಗಳನ್ನು ನಡೆದು ನೋಡುವುದರ ಬದಲು ಗಾಡಿಯಲ್ಲಿ ಕುಳಿತು, ಅದು ಹೋಗುತ್ತಿರುವಾಗಲೇ ಪ್ರತೀಕ್ಷಿಸಬಹುದು. ೨೪ ಜನರು ಕುಳಿತು ಸರಿಯಾಗಿ ನೋಡಬಲ್ಲ ವಾಹನವಿದು ಹಿನ್ನೆಲೆಯಲ್ಲಿ ನ್ಯೂ ಒರ್ಲಿಯನ್ಸ್‌ನ ಒಂದು ಸಟರ್ನ್—೫ ಬೂಸ್ಟರ್ ತಯಾರಿಸುವ ಕಾರಖಾನೆಯಿದೆ.

...ಲ್ಲಿಯೂ ತಂಗದೆ ಐತಿಹಾಸಿಕ...ನ ಹೆಸರನ್ನುಳಿದು ಮರೆಯ...ಲಿಂಡಬರ್ಗ್ ನೀಗ ಎರಡನೆಯ...ರಾವಳಿಯ ಗುಂಟೆ ಸಮುದ್ರ...ರಾಗಿದ್ದಾನೆ.

ಕವಲು ದಾರಿ ಕೆಂಪು ದೀಪ

ನಾವೆತ್ತ ನಡೆಯುತ್ತಿದ್ದೇವೆ

ನಾವೆತ್ತ ಬೇಕು?

ಈ ಪ್ರಶ್ನೆಗಿಂತ ಮುಖ್ಯವಾದ ಬೇರೊಂದು ಪ್ರಶ್ನೆ:

ನಾವೆತ್ತ ಸಾಗುತ್ತಿದ್ದೇವೆ?

ಇದಕ್ಕೆ ಒಂದಲ್ಲ ನೂರು ಉತ್ತರ:

ಪ್ರಗತಿ ಪಥದತ್ತ—

ಔದ್ಯೋಗೀಕರಣದತ್ತ—

ಉನ್ನತಿಯ ದಾರಿಯಲ್ಲಿ—

ರಾಜಕೀಯ ಸ್ವಾತಂತ್ರ್ಯದಿಂದ ಆರ್ಥಿಕ ಸ್ವಾತಂತ್ರ್ಯದತ್ತ—

ಹೌದು, ಆದರೆ, ಇವು ಮಾತ್ರ ಉತ್ತರವೇ?

ಸರಕಾರದ ಗಮನ ಗುರಿ ಸಾಧನೆಯತ್ತ ಇವೆಯೆಂದು ಸರಕಾರಿ ಪಕ್ಷವ ಸಾರುತ್ತಿದೆ.

—ವಿನಾಶದತ್ತ ನಡೆದಿದೆಯೆನ್ನುತ್ತವೆ ವಿರೋಧಿ ಪಕ್ಷಗಳು ಸಾಮೂಹಿಕವಾಗಿ.

ದುರ್ಭಾಗ್ಯವಶದಿಂದ ವಿರೋಧಿ ಪಕ್ಷಗಳ ಸದಸ್ಯರ ಬಾಯಿಬಲ ಹೆಚ್ಚಿದ್ದರೂ ಸಂಖ್ಯಾಬಲ ಅಷ್ಟಿಲ್ಲ. ಅವರ ಅಭಿಪ್ರಾಯಗಳೆಲ್ಲ ಹಾರಿಸಿದ ಗುಂಡು.

ಆದುದರಿಂದ ನಾವೆತ್ತ ಸಾಗುತ್ತಿದ್ದೇವೆ?—ಈ ಪ್ರಶ್ನೆಗೆ ಸರಕಾರಿ ಪಕ್ಷದ ಉತ್ತರ ಗೆಲ್ಲುತ್ತದೆ— ಬಹುಮತದ ಬಲದಿಂದ.

ನ್ಯಾಯಾಲಯಗಳಲ್ಲಿಯೂ ಕೆಲವೊಮ್ಮೆ ಬಹುಮತದ ನಿರ್ಧಾರ ಹೊರಡುವ ಅನಿವಾರ್ಯ ಪ್ರಸಂಗ ಬರುತ್ತದೆ—ಶಾಸಕಾಂಗದಲ್ಲಿ—ಪ್ರಜಾಪ್ರಭುತ್ವದಲ್ಲಿ ಅದು ಅನಿವಾರ್ಯ ಅದೇ ಉಳಿದು ಹೋದರೆ ಮತ್ತೆ ಪ್ರಜಾಸತ್ತೆಯೆಲ್ಲಿ?

ಆದರೆ, ಒಂದು ಮಾತು—

ಸತ್ಯಾಸತ್ಯಗಳನ್ನು ಬಹುಮತದಿಂದ ನಿರ್ಧರಿಸಲಾಗುವುದಿಲ್ಲ — ಇದು ಆತ್ಮಶೋಧನೆಯಿಂದ ಗೊತ್ತಾಗುತ್ತದೆ.

ಲೌಕಿಕ ವಸ್ತು ನಿಸ್ಸಾರವಾದದಲ್ಲಿ ಮೈಮರೆತಿರುವವರು ಆತ್ಮ—ಪರಮಾತ್ಮನತ್ತ ಮನ ಹರಿಸುವುದು ಹೇಗೆ ಸಾಧ್ಯ?

— ಅವರವರ ಸತ್ಯ—ಧರ್ಮ ಅವರವರಿಗೆ.

—ನಿಜ, ನಾನೂರು ಜನರ ಸತ್ಯ—ಧರ್ಮದಿಂದ ೪೫ ಕೋಟಿ ಜನರ ಭವಿಷ್ಯ ಬರೆಯ ಹೊರಟಿವೆ—ಎಲ್ಲಿ ಉಳಿಯಿತು ಅವರವರ ಸತ್ಯ—ಧರ್ಮ!

ನಾವಿಂದು ಯಾವ ದಾರಿಯಲ್ಲಿ ನಡೆಯುತ್ತಿದ್ದೇವೆ!

ಒಂದೇ ಮಾತಿನಲ್ಲಿ ಹೇಳುವುದಾದರೆ, ಅತಿರೇಕದ ದಾರಿಯಲ್ಲಿ!—

ಪ್ರತಿಯೊಂದೂ ಅತಿರೇಕ— ಅಥವಾ ಮಹತ್ಸಾಧನೆಯ ಕನಸು!

ಗಿಡದಡಿ ಹಕ್ಕಿಯಾಸೆಯಿಂದ ಕೈಯ ಹಕ್ಕಿಯನ್ನು ಹಾರಿಸಲೂ ನಾವು ಸಿದ್ಧರು!

ಭಾಷಾನುಗುಣ ರಾಜ್ಯ ರಚನೆಯನ್ನು ಮಾಡಿದವು—ನಿಜ, ಒಳ್ಳೆಯದೇ ಸರಿಯಾಗಿ ಕಾರ್ಯ ಸಾಗಿದ್ದರೆ—ಆದರೆ ಪರಿಣಾಮವೇನು?

—ರಾಜ್ಯಗಳ ನಡುವೆ ವೈಮನಸ್ಸು! ಗಡಿತಂಟೆ—ಕೌರವ ಪಾಂಡವರೂ ಎಬ್ಬಿಸದ ಲೂಟಿ, ಮಾಡದ ರಂಪಾಟ!

ರಾಜ್ಯ ಭಾಷೆಯಲ್ಲಾದರೂ ಸರಕಾರಿ ಕಾರ್ಯ ನಡೆದಿದೆಯೆ?

ಕನ್ನಡ ಬಾರದ ಅಧಿಕಾರಿಗಳು ಕನ್ನಡದ ಮೇಲೆ ಅಧಿಕಾರ ನಡೆಸುತ್ತಾರೆಯೇ? ಕನ್ನಡ ಬರುವವರೂ ಕನ್ನಡದಲ್ಲಿ ಮಾತನಾಡುವುದು ಅಪಮಾನವೆಂದು ಬಗೆಯುತ್ತಾರೆಯೆ?

ಮತ್ತೆ ಯಾರಿಗಾಗಿ ಕನ್ನಡರಾಜ್ಯ?

ಇಂತಹ ಪರಿಸ್ಥಿತಿಯಲ್ಲಿ ಅತಿರೇಕವಾದಿಗಳ ಅತಿರೇಕ ಕಂಡವರು ಈ ತತ್ವವು ಸರಿಯಾದುದಲ್ಲ ಎಂದು ಒಪ್ಪತೊಡಗಿದ್ದರೆ— ಕಲ್ಪನೆಯು ವ್ಯವಹಾರ್ಯವಾಗದುದೇ ಇದಕ್ಕೆ ಕಾರಣ.

ಇದೀಗ ಕೇಂದ್ರ ಲೋಕ ಸೇವಾ ಆಯೋಗವು ಎಲ್ಲ ಪ್ರಾದೇಶಿಕ ಭಾಷೆಗಳ ಮಾಧ್ಯಮದಲ್ಲಿಯೂ ಸ್ಪರ್ಧಾತ್ಮಕ ಪರೀಕ್ಷೆ ಮಾಡಲು ನಿರ್ಧರಿಸುವುದು—

ಮತ್ತೆ ಹೇಗಿದೆಯಂತೆ — ಗುದ್ದಾಟಕ್ಕೆ ನಾಂದಿ ಹಾಡಿತೆ?

ನಾವೆತ್ತ ಸಾಗುತ್ತಿದ್ದೇವೆ?

ಬ್ರಿಟಿಷರು ಪರಿಹಾರಾಗಿದ್ದ ಭಾರತವನ್ನು ಏಕಸೂತ್ರದಲ್ಲಿ ಬಂಧಿಸಿ ಮತ್ತೆ ಎರಡು ಹೋಳು ಮಾಡಿ ಒಂದನ್ನು ನಮಗಿತ್ತರು.

(ಹದಿಮೂರನೇ ಪುಟ ನೋಡಿರಿ)

ಹೊಸ ರೀತಿಯಲ್ಲಿ ನೇಜಿ ತಯಾರಿಸಿರಿ

(ಆರನೇ ಪುಟದಿಂದ)

ವಾ 20ರೊಳಗೆ ಗದ್ದೆಗಳು ನಾಟಿಗೆ ತಯಾರಾಗಬೇಕು. ಮಳೆ ಬಾರದಿದ್ದಲ್ಲಿ, ನಿಮಗೆ ನೀರಿನ ಅನುಕೂಲತೆ ಚೆನ್ನಾಗಿ ಇದ್ದರೆ, ಪಂಪು ಸೆಟ್ಟು ಇದ್ದರೆ ನೀವು ಮೊದಲೇ ನಾಟಿಗೆ ಇಳಿಯಬಹುದು. ನೀವು ಉಪಯೋಗಿಸುವ ಬೀಜವು 130 ಯಾ 135 ದಿನಗಳಲ್ಲಿ ಕೊಯ್ಲಿಗೆ ಬರುವುದಾದರೆ, ಮೊದಲೇ ನಾಟಿ ಮಾಡುವುದು ಉತ್ತಮ.

ಕಳೆದ 32 ವರ್ಷಗಳಲ್ಲಿ ನಾನು ಮೇ ತಿಂಗಳಲ್ಲಿ ಮೊದಲ ಮಳೆ ಬಂದೊಡನೆಯೇ—ಎಂದರೆ ಮೇ ತಿಂಗಳ 25ನೇ 26ನೇ ಅಥವಾ 27ನೇ ತಾರೀಕಿನಲ್ಲೇ ನೇಜಿ ಹಾಕುತಿದ್ದೆ. ಆದರೆ ಕಳೆದ ವರ್ಷ ಮಾತ್ರ ಎಲ್ಲರಂತೆ ನಾನು, ನೇಜಿ ಹಾಕುವಾಗಲೂ ತಡವಾಯಿತು.

ಜಪಾನು ನೇಜಿಗೆ ಸದಾ ನೀರು ಬೇಕಾಗಿರುವುದಿಲ್ಲ. ವಾರಕ್ಕೊಮ್ಮೆ ಯಾ ಎರಡು ಸಲ ಮಳೆ ಸುರಿದರೆ ಸಾಕು. ಆದರೆ ಮಳೆಯೇ ಬಾರದಿದ್ದರೆ, ತೋಟಕ್ಕೆ ನೀರು ಸುರಿಸುವಂತೆ ನೇಜಿಯ ಕಳಗಳ ಮೇಲೂ ನೀರು ಸುರಿಸಿ, ಅವು ತೇವವಾಗಿರುವಂತೆ ಮಾಡುವುದು ಅಗತ್ಯ. ನಿಮಗೆ ಬೇಕಾದರೆ ಅದನ್ನು ನೀರು ನೇಜಿಯಾಗಿಯೂ ಮಾಡಬಹುದು. ಹುಡಿಯಾದರೂ ಒದ್ದೆಯಾದರೂ ಜಪಾನು ನೇಜಿ ಒಂದೇ ರೀತಿ ಇರುತ್ತದೆ.

ಹತ್ತು ಹನ್ನೆರಡು ದಿನಗಳಲ್ಲಿ ನೇಜಿ ನಿಮ್ಮ ಅಂದಾಜಿನಷ್ಟು ಬೆಳೆಯದಿದ್ದರೆ, ಅಮೋನಿಯಮ್ ಸಲ್ಫೇಟು ಮತ್ತು ಉಪ್ಪಿಯನ್ನು ಮಿಶ್ರಮಾಡಿ, ಹಾರಿಸಿ ಬಿಡಿರಿ. ಈ ಸಲ ಮೊದಲ ಸಲ, ಉಪಯೋಗಿಸಿದರ ಅರ್ಧದಷ್ಟು ಉಪಯೋಗಿಸಿದರೆ ಸಾಕು. 20 ಯಾ 21 ದಿನಗಳಲ್ಲಿ ನೇಜಿಯು ಮ್ಯಾಜಿಕ್ ಮಾಡದಂತೆ ಬೆಳೆದು ಬರುತ್ತದೆ. ನಾಟಿಯ ಕಾಲಕ್ಕೆ ತುದಿ ಕತ್ತರಿಸುವಷ್ಟು ಚೆನ್ನಾಗಿ ಬೆಳೆಯುತ್ತದೆ. ಒಂದು ಎಕ್ರೆಗೆ ಬೇಕಾದ ನೇಜಿಯನ್ನು 30ಸೆಂಟ್ಸ್‌ಗಳಲ್ಲೇ ತಯಾರಿಸಬಹುದು.

ಈ ದೀರ್ಘವಾದ ಬರಹ ಓದಿ, ನೇಜಿ ತಯಾರಿಸುವುದು ಒಂದು ಕಷ್ಟದ ಕೆಲಸವೆಂದು ಭಾವಿಸಬೇಡಿ. ಬರೆದ ಕ್ರಮವನ್ನು ಓದಿಕೊಳ್ಳುವಾಗ ಹಾಗೆ ಕಂಡರೂ, ಆ ಮೇಲೆ ಕೆಲಸ ಮಾಡುವಾಗ ಎಲ್ಲ ಬೇಗನೇ ಆಗುವುದು. ನೀವು ಈ ಹೊಸ ಪದ್ಧತಿಯನ್ನು ಅನುಸರಿಸಿ ಮಾಡಿದಾಗ, ಅದು ಸುಲಭವಾಗಿಯೇ ಆಗುತ್ತದೆಂಬುದು ನನ್ನ ಅನುಭವ.

ಈ ಲೇಖನ ಓದಿ ನನ್ನ ಕೃಷಿಕ ಗೆಳೆಯರಿಗೆ ಸಂದೇಹವುಂಟಾದಲ್ಲಿ, ಅವುಗಳ ಕುರಿತು ಈ ಪತ್ರಿಕೆಯ ಸಂಪಾದಕರಿಗೆ ಬರೆಯಿರಿ. ನಾನು ಅವುಗಳಿಗೆಲ್ಲ ಸರಿಯಾದ ಉತ್ತರ ಬರೆಯುತ್ತೇನೆ.

(ಗ್ರಾಮ ಸೇವಕದ ಕೃಪೆಯಿಂದ)

"NAVAYUGA" Kannada Weekly is recommended for High Schools and Public Libraries by the Director of Public Instruction in Mysore, Bangalore vide their letter No. CL-4.17-4/65-66 dated 26—4—1966.

ಇರಾಣವು ಕುತಂತ್ರ ಹೂಡಿತೆ?

(ಏಳನೇ ಪುಟದಿಂದ)

ಗಳು ಈ ಬಗ್ಗೆ ಉಚಿತ ಕ್ರಮ ಕೈಗೊಳ್ಳುತ್ತವೆಯೆಂದು ಸುದ್ದಿ ಬಂದಿದೆ. ಇದು ಉಚಿತ.

ದೇಶದಲ್ಲಿ ಇಂದು ಬೇಹುಗಾರಿಕೆಯ ಜಾಲ ಹರಡಿದೆಯೆಂದು ವರ್ತಮಾನ. ಇವು ದೇಶದ ಅಹಿತಕ್ಕೆ ಕಾರಣ. ಇಂತಹ ಪಂಚಮದಳವನ್ನು ಹತ್ತಿಕ್ಕದೆ ನಮ್ಮ ಬೇಹುಗಾರಿಕೆ ಯಶ ಗಳಿಸುವುದಿಲ್ಲ. ಹನ್ನೊಂದು ಬಡಿದಾಗಲೇ ನಮಗೆ ಸುದ್ದಿ ಬರುವುದು—ನಾವು ಅಣಿಯಾಗುವಷ್ಟರಲ್ಲೇ ಸರ್ವನಾಶವಾಗುವುದು. ಈ ಬಗ್ಗೆ ತೀವ್ರ ಗಂಭೀರ ಎಚ್ಚರಿಕೆಯ ಕ್ರಮ ಅತ್ಯಗತ್ಯ.

೦ ೦ ೦ ೦

ಒಂದು ವರ್ಷಗಳ ಕಾಲ ಕಠಿನ ತಪಸ್ಸನ್ನಾಚರಿಸಿ ಇದೀಗ ಭಕ್ತಜನರ ಮುಂದೆ ಪ್ರತ್ಯಕ್ಷರಾದ ನವ ಕಲ್ಯಾಣ ಮಠದ ಶ್ರೀ ಕುಮಾರ ಸ್ವಾಮಿಗಳೊಂದು ಭವಿಷ್ಯವನ್ನು ನುಡಿದಿದ್ದಾರೆ. ಅವರೆನ್ನುವುದು—ಪಾಶವೀ ಶಕ್ತಿಯು ಕೈಮೇಲಾಗಿ ದೈವೀ ಶಕ್ತಿಯು ತೀವ್ರ ಕುಂಠಿತವಾಗುತ್ತದೆ—ಆರಂಭಕ್ಕೆ ಪಾಶವೀ ಶಕ್ತಿಯು ಕೈಮೇಲಾದರೂ ಮುಂದೆ ದೈವೀ ಶಕ್ತಿಯು ಮೆರೆಯುತ್ತದೆ. ಶ್ರೀ ಕುಮಾರ ಸ್ವಾಮಿಗಳು ಈ ಘಟನೆಗಳ ಕಾಲಾವಧಿಯು ೧೯೬೬ರಿಂದ ೧೯೭೦ರ ವರೆಗೆ ಎಂದು ಹೇಳಿದ್ದಾರೆ.

ಇಂತಹ ಅನಿಷ್ಟ ಯೋಗಕ್ಕೆ ಕಾರಣ ಅನಿಷ್ಟ ಗ್ರಹಗಳ ಪರಿಭ್ರಮಣ. ಅನಿಷ್ಟ ಗ್ರಹಗಳು ಗೋಚರವಾಗುವಾಗ ಜಗತ್ತಿನ ಮೇಲೆ ಅನಿಷ್ಟ ಪರಿಣಾಮ ಬೀರುವುದು ಸಹಜವೇ. ಜಾಗತಿಕ ಸಂಸ್ಕೃತಿ—ನಾಗರಿಕತೆಗಳಿಗೆ ಆಳಿಗಾಲ ಬಂದಂತೆ ಭಾಸವಾಗುವುದು. ಆದರೂ ಮುಂದೆ ಅಂತಿಮವಾಗಿ ಎಲ್ಲವೂ ಶುಭವಾಗುವುದು. ಅಂದರೆ, ಬಿರುಗಾಳಿ ಬೀಸುವುದು, ತನ್ನ ಆರ್ಭಟ ನಡೆಸುವುದು, ಮುಂದೊಂದು ದಿನ ಶಾಂತವೂ ಆಗುವುದು.

ಇಂದಿನ ಜಾಗತಿಕ ಪರಿಸ್ಥಿತಿಯನ್ನು ಅವಲೋಕಿಸುವಾಗ ಈ ಭವಿಷ್ಯವನ್ನು ಅಲಕ್ಷಿಸುವಂತಿಲ್ಲ. ಸುಳ್ಳೆನ್ನುವಂತೆಯೂ ಇಲ್ಲ. ಈ ಅನಿಷ್ಟದ ಗಾಳಿ ಎತ್ತಗಡೆಯಿಂದ ಬೀಸುತ್ತದೆ? ಏಶ್ಯಾದಿಂದಲೇ ಎಂಬುದು ರಾಜಕೀಯ ವೀಕ್ಷಕರ ಅಂಬೋಣ. ಉಳಿದವರು ಏನನ್ನುತ್ತಾರೆ?

—ರಾಶಿ

ಸಾಹಿತ್ಯ ಸಂಪದ

ನಾರಿ ಸಕಲರಿಗೆ ಹಿತಕಾರಿ

ಬರೆದವರು
ಶ್ರೀ 'ಕವಿತಾಕೃಷ್ಣ' (ಕೆ. ಕೆ. ರಾಜಣ್ಣ) ಕ್ಯಾತ್ಸಂದ್ರ.

ಸರ್ವಜ್ಞನೆಂಬುವದು ।
ಗರ್ವದಿಂದಾದವನೆ
ಸರ್ವರೊಳೊಂದೊಂದು ನುಡಿಗಲಿತು,
ವಿದ್ಯದ ।
ಪರ್ವತವೆ ಆದ ಸರ್ವಜ್ಞ ॥

ಎಂದು ಕರ್ನಾಟಕದ ಚಿರಪರಿಚಿತ ಸಂತ ಕವಿ ಸರ್ವಜ್ಞ ತನ್ನ ವಿಶಾಲ ಭಾವತೆಯನ್ನು ವ್ಯಕ್ತಪಡಿಸಿದ್ದಾನೆ. ಈತನ ವಿಚಾರವಾಗಿ ಹೆಚ್ಚೇನು ಹೇಳಬೇಕಾಗಿಲ್ಲ. ಕನ್ನಡಿಗರ ನಾಲಿಗೆಯ ತುದಿಯಲ್ಲಿ ಅಚ್ಚಳಿಯದೆ "ಅಮರನಾಗಿ ನಿಂತಿದ್ದಾನೆ."

ಸರ್ವಜ್ಞನು ವಚನಗಳಲ್ಲಿ ಆರ್ಥಿಕ, ನೈತಿಕ, ಆಧ್ಯಾತ್ಮಿಕವಲ್ಲದೆ ಸಾಮಾಜಿಕ ಹಿನ್ನೆಲೆಯನ್ನು ಚೆನ್ನಾಗಿ ಚಿತ್ರಿಸಿದ್ದಾನೆ. ಧರ್ಮ, ಕರ್ಮ, ಪ್ರೇಮಸಾರವಲ್ಲ ಕಾಮಕಲಾ ಸಾರವನ್ನು ತನ್ನ ಅನುಭವದಿಂದ "ಹೆಣ್ಣಿನ ವಶವಾಗಿ ನುಗ್ಗುನುಸಿಯಾದೆ" ಎಂದು ಹೇಳಿ ರಸಾನುವರ್ಣನೆ ಸಾಕಷ್ಟು ನೀಡಿದ್ದಾನೆ!

ಸಣ್ಣವಿಲ್ಲದ ವೀಳ್ಯೆ ।
ಬಣ್ಣವಿಲ್ಲದ ಮದುವೆ
ಹೆಣ್ಣಿಲ್ಲದವನ ಸಂಸಾರ ಮಳಲೊಳಗೆ।
ಎಣ್ಣೆ ಹೊಯ್ದಂತೆ ಸರ್ವಜ್ಞ ॥

ಮದುವೆಯಾಗದೆ, ಹೆಂಡತಿಯನ್ನು ಪಡೆಯದೆ ಇರುವವನ ಬಾಳು ವೀಳ್ಯಕ್ಕೆ ಸುಣ್ಣವಿಲ್ಲದಂತೆ, ನಿರಾಡಂಬರದಿಂದ ಮಾಡಿದ ಮದುವೆಯಂತೆ; ಉಸುಕು ಮಣ್ಣಿಗೆ ಎಣ್ಣೆ ಹೊಯ್ದರೆ ವ್ಯರ್ಥವಾಗುವಂತೆ ಅವನ ಬಾಳು ಬರಡಾಗುತ್ತದೆ. ಅಂದರೆ ಸರ್ವಜ್ಞನು "ಸಂಸಾರಿಯಾಗಲೇ ಬೇಕೆಂದು ತಿಳಿಸಿದ್ದಾನೆ." ಅಲ್ಲದೆ ಕೈ ಹಿಡಿಯುವಳ ಬಗ್ಗೆ ಕೆಲವು ಸೂಕ್ತಿಗಳನ್ನು ಹೇಳಿದ್ದಾನೆ.

"ಒಲೆಯುವಳು ಹಸ್ತಿನಿಯು ।
ಸುಲಿಯುವಳು ಚಿತ್ತಿನಿಯು
ತಲೆವಾಗಿ ನಡೆವಳು ಶಂಖಿನಿಯು,
ಪದ್ಮಿನಿಯು ।
ಸುಲಭವಾಗಿಹಳು ಸರ್ವಜ್ಞ ॥"

ಸ್ತ್ರೀಯರಲ್ಲಿ ಹಸ್ತಿನಿ, ಚಿತ್ತಿನಿ, ಶಂಖಿನಿ ಮತ್ತು ಪದ್ಮಿನಿ ಎಂಬ ನಾಲ್ಕು ಪಂಗಡವುಂಟು. ಹಸ್ತಿನಿ ಅತಿಕಾಮಿಯಾದ್ದರಿಂದ ಬೇಗ ಒಲೆಯುವಳು, ಚಿತ್ತಿನ ಆಲಸಿಯಾದ್ದರಿಂದ ಮಲಗಿ ಬಿಡುವಳು, ಶಂಖಿನಿ ಕುಟಿಲೆಯಾದುದರಿಂದ ತಲೆ ಬಾಗಿ ನಡೆವಳು. ಆದರೆ ಪದ್ಮಿನಿಯು ಸರಳವಾಗಿ ಸರ್ವಭೋಗವನ್ನು ಈಯುವಳು. ಇವರಲ್ಲಿ "ಪದ್ಮಿನಿಯು ಅತಿ ಶ್ರೇಷ್ಠಳು". ಸ್ತ್ರೀಯರಂತೆ ಪುರುಷರಲ್ಲೂ ಹಲವು ಪಂಗಡವುಂಟು. ಅವರಿಗನುಗುಣವಾಗಿ ಜೋಡಿಯನ್ನು ಮಾಡಿದ್ದಾನೆ.

ಎತ್ತಲಾರದ ಕಾಯ ।
ಮುಸ್ತಕವು ಮಧ್ಯವೂ ॥
ಮತ್ತೆ ಕಕ್ಕಸವು ಕೇಳುವರಿಗಾ ಪುರುಷ।
ಹಸ್ತಿನಿಗೆ ಮೇಳ ಸರ್ವಜ್ಞ ॥

ಸ್ಥೂಲವಾದ ಶರೀರ ಉಳ್ಳವನೂ, ವಿಶಾಲವಾದ ಹೊಟ್ಟೆಯಿದ್ದು ಬಡಕಲಾದವನಂತೆ ಉಸಿರಾಡುವವನೂ ಆದ ಪುರುಷನನ್ನು 'ಹಸ್ತಿನಿ ಕೈ ಹಿಡಿಯಲು ಯೋಗ್ಯಳು".

ಅಕ್ಕಲಿಸಿದ ಹೊಟ್ಟೆ ।
ಚಿಕ್ಕಗಣ್ಣಿನ ಮೋರೆ
ಅಕ್ಕುಳಿಯ ತುಂಬ ಕಡುಕೋಪಿ
ಪುರುಷನು ।
ಚಿತ್ತಿನಿಗೆ ಮೇಳ ಸರ್ವಜ್ಞ ॥

ಕುಗ್ಗಿದ ಹೊಟ್ಟೆಯುಳ್ಳವನೂ, ಚಿಕ್ಕದಾದ ಕಣ್ಣುಳ್ಳವನೂ ಅಂಜುಬುರುಕನು 'ಚಿತ್ತಿನಿಯು ಕೈ ಹಿಡಿಯಲು ಯೋಗ್ಯನು".

ಇಂಬಾದ ದೇಹಕ್ಕೆ ।
ಮುಂಬೆಳಗು ಸಂಭ್ರಮಿಸಿ
ತುಂಬ ನೇರಾದ ಮಧ್ಯದ ಪುರುಷನು।
ಶಂಖಿನಿಗೆ ಮೇಳ ಸರ್ವಜ್ಞ ॥

ತುಂಬು ಯೌವನದಿಂದ ತುಂಬಿದ ಮಧ್ಯ ವಯಸ್ಸಿನ ಪುರುಷನು "ಶಂಖಿನಿ ಕೈಹಿಡಿಯಲು ಸೂಕ್ತನು"

ಮದವೆದ್ದ ಮಂದಗಜದಿಂದಿರು
ತಿರ್ದು ।
ವಿಧವಿಧದ ಪ್ರೌಢ ನುಡಿಗಳನು
ನುಡಿವನು ।
ಪದ್ಮಿನಿಗೆ ಮೇಳ ಸರ್ವಜ್ಞ ॥

"ತಾರುಣ್ಯ ತುಂಬಿ ತುಳುಕುವ ಮದವೇರಿದಾನೆಯಂತಿದ್ದು, ಅರ್ಥ ತುಂಬಿದ ಹಾಗೂ ಮಾತಿನಿಂದ ಮನ ಸೆಳೆವ ಪುರುಷನಿಗೆ "ಪದ್ಮಿನಿಯು ಸಲ್ಲಲು ಅರ್ಹಳು'.

ಹೀಗೆ ಜೊತೆಗೂಡಿಸಿದ ಸರ್ವಜ್ಞನು ಒಂದು ಪರೀಕ್ಷಾ ಸೂತ್ರ ರಚಿಸಿರುವನು. ಇದರಿಂದು ನಾಲ್ಕು ವಿಧಗಳ ಮೂಲವರಿಯಬಹುದು.

ನಾಲ್ವೆರಳು ಹಸ್ತಿನಿಗೆ ।
ಮೂವೆರಳು ಚಿತ್ತಿನಿಗೆ ।
ಇರ್ವೆರಳು ಕುಚ ಮಧ್ಯ ಶಂಖಿನಿಗೆ,
ಪದ್ಮಿನಿಗೆ ।
ಒಳ್ವೆರಳು ನೋಡ ಸರ್ವಜ್ಞ ॥

"ಸ್ತ್ರೀಗೆ ದುಂಡಾದ ಸ್ತನಗಳು ಅವಳ

(ಹದಿಮೂರನೇ ಪುಟ ನೋಡಿರಿ)

ರೈತ ಭಾಂದವರ ಜೀವನ ಸಂಗಾತಿ..........

ಇಮಾನಿ ಕ್ರೂಡ್ ಆಯಿಲ್ ಇಂಜಿನ್
(5, 7, 10 & 13 H. P.) ಮತ್ತು ಪಂಪು ಸೆಟ್ಟುಗಳು..........

ಎಸ್. ಇ. ಐ. ಇಲೆಕ್ಟ್ರಿಕ್ ಮೋಟಾರು
(¼ H.P. ಯಿಂದ 2. H.P. ವರೇಗೆ) ಮತ್ತು ಪಂಪು ಸೆಟ್ಟುಗಳು......

ಬ್ಲೂ ಪೀಟರ್ ಸ್ಟಾರ್ಟರುಗಳು.........

ಪ್ರಪ್ರಥಮ ವಿಮಾ ರಕ್ಷಣೆಗೆ ಒಳಪಟ್ಟಿರುವ ಸ್ಟಾರ್ಟರ್‌ಗಳು.

ಏಕೈಕ ವಿತರಕರು:—

ಸ್ವಾಮಿ ಇಲೆಕ್ಟ್ರಿಕಲ್ಸ್,

ರಿ. ಆಫೀಸು: ಕಾರ್ಕಳ. ಮಾರಾಟ ವಿಭಾಗ: ಬಲ್ಮಠ ರಸ್ತೆ, ಮಂಗಳೂರು-1

ಕೃತಿ ಪರಿಚಯ

ವಿಮರ್ಶೆಗಾಗಿ ಪುಸ್ತಕಗಳನ್ನು ಕಳಿಸುವವರು ದಯಮಾಡಿ ಎರಡೆರಡು ಪ್ರತಿಗಳನ್ನು ಕಳಿಸಬೇಕಾಗಿ ವಿನಂತಿ. —ಸಂ. ನ.

ಹೃದಯ ಕುಸುಮ:— ಲೇಖಕರು: ಶ್ರೀ ಮುಡಿಯೂರು ನಾರಾಯಣ ಭಟ್. ಪ್ರಕಾಶಕರು: ಲೋಕಸೇವಾ ವೃಂದ, ಸತ್ಯ ಸಾಯಿ ವಿಹಾರ, ಅಳಿಕೆ. (ವಯಾ ವಿಟ್ಲ) ಪುಟಗಳು: ೧೪+೧೩೮. ಬೆಲೆ. ರೂ. ೩-೫೦.

ಎಂಟು ಕಥೆಗಳ ಸಂಕಲನ ಹೃದಯ ಕುಸುಮ— "ಭಾರತೀಯ ಸಂಸ್ಕೃತಿಯ ಪುಷ್ಟ ಭೂಮಿಯ ಮೇಲೆ ರಚಿತವಾದ ಚಿಕ್ಕ ಹಾಗೂ ದೀರ್ಘ ಕಥೆಗಳ ಸಂಕಲನ. ಬಡತನದಲ್ಲೂ ದಾಂಪತ್ಯದ ಸಿರಿತನದಿಂದ ಮೆರೆಯುವ ಸರೋಜಾ—ರಾಮನ್ ಕುಟ್ಟಿ (ಆರುಡ) ಮೀನಾಕ್ಷಿಯಂತಹ ನೂರಾರು ಬುದ್ಧಿ ಜೀವಿಗಳಿಗೆ "ಹೃದಯ ಸಂಗಮ" ಮಾಡಿಸಬಲ್ಲಳು— ಇದು ಮೊದಲಿನ ಕಥೆ "ಹೃದಯ ಸಂಗಮ"ದ ಚರಮ ಸಂದೇಶ. ಭಾರತೀಯ ನಾರಿ ಒಮ್ಮೆ ಜೀವನಸಮುದ್ರಕ್ಕೆ ಮುಳುಗಿದಳೆಂದರೆ, ಆಳ್ಕೆ ಪಾತಾಳವಿರಲಿ, ಸ್ವರ್ಗವಿರಲಿ ಕುಳಿವನ್ನೇ ಕಂಡು ವಿನಗಳೆಯಬೇಕು. ಸರೋಜ ಹಾರಿದ್ದು ಪಾತಾಳಕ್ಕಲ್ಲ; ಭೂಮಿಗೇನೇ. ಅಲ್ಲಿಯೇ ತನ್ನ ಬದುಕನ್ನು ಬಂಗಾರ ಮಾಡಿಕೊಂಡಳು—ಪಂಚ ಮಹಾ ಪತಿವ್ರತೆ ಯರಿಗೂ ಮಿಗಿಲೆನಿಸಿಕೊಂಡಳು ಮೀನಾಕ್ಷಿಯ ಮುಂದೆ!

'ಎಂದಿದ್ದಲ್ಲಿನ ಹಾ'ನ'ವೆಂಬ ಕೃತಿಯು ಹಿನ್ನೆಲೆಯಲ್ಲಿ 'ಮಂಜನಾಥನ ಸನ್ನಿಧಿಯಲ್ಲಿ' ಇದೆ. ಯೌವನದಲ್ಲಿ ಕಟ್ಟ ನವರಂತೆಯೇ ವರ್ತಿಸಿದ ಶಾಮಣ್ಣಾಚಾರಿ ಮಗಳಿಗಾಗಿ ಮಂಜನಾಥನಿಗೆ ಅರ್ಪಿಸಿದ ಹರಕೆಗಿಂತಲೂ ಅತನಿಂದ ಹರಕೆ ಸಲ್ಲಿಸಿದ. ಆ 'ಅಜ್ಞಾತ ಪುರುಷನ ಹೃದಯ ಕುಸುಮ ಕಂಪನ್ನು ಬೀರುತ್ತದೆ. ಸೇವಾದೀಕ್ಷೆಯನ್ನು ಕೊಡಬಯಸಿದ ಯುವಕನೊಬ್ಬ ಸಾಂಸಾರಿಕ ದ್ವಂದ್ವಗಳಿಂದ ವಿಮೋಚನೆ ಹೊಂದಿದ ಘಟನೆ, ಬಂಧವಿಮೋಚನೆ ಸಾಕ್ಷಿದೆ. 'ಜಿಮ್ಮಿಯ ಆತ್ಮಕಥೆ' ಒಂದು ನಾಯಿಯ ಸಾಮಾನ್ಯ ಚರಿತ್ರೆ—ಜಿಮ್ಮಿಗೆ ತಾನು ನಾಯಿಯೆಂಬುದರ ಸರಿಯಾದ ಪ್ರಜ್ಞೆ ಪ್ರಜ್ಞೆಯಿದೆ. ಇಂಥಹ ಮಾನವರೆಷ್ಟು ಮಂದಿಯಿಲ್ಲ?

"ಒಡೆದ ಗಾಜು'—ಸುಮಾರು ೫೫ ಪುಟಗಳಷ್ಟು ಓಡುವ ದೀರ್ಘ ಕಥೆ. ವಿರಾಗಿಯನ್ನು, ನಿವೃತ್ತಿ ಪಥಗಾಮಿಯನ್ನು ರಾಗಿಗಳು, ಪ್ರವೃತ್ತಿ ಮಾರ್ಗವೇ ಮೇರುವೆನ್ನುವವರು ಯಾವರೀತಿ ಕಾಣುತ್ತಾರೆ ಎಂಬುದನ್ನು, ಇಂತಹ ಹಿಂದೂ ಪ್ರವೃತ್ತಿರಾಗಿಗಳು ಹಿಂದೂ ಸಂಸ್ಕೃತಿಯ ಮೇಲೆ ಪರಕೀಯ ಆಕ್ರಮಣಕ್ಕೆ ಹೇಗೆ ದಾರಿ ಮಾಡಿಕೊಡುತ್ತಾರೆಂಬುದನ್ನು ಇಲ್ಲಿ ಸೊಗಸಾಗಿ ನಾವು ನೋಡುತ್ತೇವೆ. ರಾಮಮೋಹನನಿಗೆ ಜುಗುಪ್ಸೆ ಬಂದಿತು— ಅದನ್ನು ಜೀಸಿಯ ಸಂಬಂಧಿ. ಆ ಆಧುನಿಕ ಕಾಲದಲ್ಲೂ ಹಿಂದೂ ಸಮಾಜದಲ್ಲಿಲ್ಲ. ಆದರೂ ರಾಮಮೋಹನನಿಗೆ ಸಾಧಿಸಲಾಗದುದನ್ನು ಆ ಸ್ವಾಮೀ ರಾಮಮೋಹನನಾಗಿ ಸಾಧಿಸಿದ! ಅತನಿಂದ ಅದು ಸಾಧ್ಯವಾಯಿತು— ಅಂತಹ ಉನ್ನತ ಜೀವ ರಾಮಮೋಹನ!

'ಅನಾಥಾಲಯದ ಅಂಗಳದಲ್ಲಿ'— ಸೇವೆಗಾಗಿ ಆತ್ಮಾರ್ಪಣ ಮಾಡಿದ ರಾಮನಾಥನ ಕರುಣ ಕಥೆ—ಆತನ ಬಲಿದಾನದಿಂದಲೇ ಪತ್ನಿ ಸಿನೆಮಾತಾರೆ ಗೌರಿ "ಪತಿವ್ರತೆ"ಯಾಗಿ ಪರಿವರ್ತಿಸಿದ ಘಟನೆ. ದೀನದಲಿತರ ಸೇವೆಯಲ್ಲಿ ಆಸಕ್ತಳಾದ ಪಾರ್ವತಿ ಪತಿಯ ವಿರೋಧದಿಂದ ಮಾಡಿದ 'ಅದಮ್ಯ ಹೋರಾಟ"—ಪಾರ್ವತಿ ಮುಕ್ತಿ ಪಡೆದಳು—ಅನಾಥ ಮಕ್ಕಳನ್ನು ತಬ್ಬಿಕೊಂಡು. ಆಶೆ—ಆಮಿಷಗಳ ಬಲದಿಂದ ಹಳ್ಳಿಗಳಿಂದ ಪಟ್ಟಣಕ್ಕೆ ಹೆಣ್ಮಕ್ಕಳನ್ನು ಮಾರಾಟ ಮಾಡುವ ಸಮಾಜದ್ರೋಹಿಗಳ ನೈಜ ಚಿತ್ರ "ಗಡ್ಡದ ಮುದುಕ."—ಸಾಕಷ್ಟು ಉದ್ದವಿದೆ.

ಇಲ್ಲಿನ ಎಲ್ಲ ಕಥೆಗಳೂ ಆದರ್ಶದ ಕುದುರೆಯ ಮೇಲೆ ಸವಾರಿ ಮಾಡಿವೆ—ಕೆಲವೊಮ್ಮೆ ಇದರ ಔನ್ನತ್ಯ ಮಿತಿಮೀರಿದ್ದೆಂದು ಅನಿಸಿದರೂ ಅನಿಸಬಹುದು. ಆದರ್ಶ ಜೀವಿಗಳ ವಿಚಾರ ಆದರ್ಶವಾಗಿಯೇ ಇರತ್ತದೆ. ಅವರ ಆಚಾರ—ಲೇಖನ ಭೂಷಣಗಳೆಲ್ಲವೂ ಆದರ್ಶವಾಗಿರುತ್ತವೆ. ಶ್ರೀ ನಾರಾಯಣ ಭಟ್ಟರು ಇಂತಹರಲ್ಲಿ ಒಬ್ಬರು. ಇಲ್ಲಿನ ಆದರ್ಶ ಕಥೆಗಳಿಂದ ನಮ್ಮ ಸಮಾಜ ತಿಲಾಂಶದಷ್ಟಾದರೂ ಪಡೆದುಕೊಂಡರೆ, ಅದರ ಬಹಳಷ್ಟು ಸಮಸ್ಯೆಗಳು ದೂರವಾಗುವುದು ಖಂಡಿತ. ಕಥೆಗಳು ಮನಸ್ಸಿಗೆ ಹಿಡಿಯುತ್ತವೆ— ಬೌದ್ಧಿಕ ವಾದದ ದ್ವಂದ್ವಗಳಲ್ಲಿ ನರಳುವವರೂ ಆದರ್ಶ ವಾದದಲ್ಲೂ ಸತ್ಯವಿದೆ—ಸತ್ವವಿದೆಯೆಂದು ಕಂಡುಕೊಳ್ಳುವಂತಿವೆ.

ಕಥೆಗಳಲ್ಲಿ ಮಿತವಾದ ಪಾತ್ರಗಳ ಸರಳವಾದ ಶೈಲಿ,— ಆಂತರಿಕ ದ್ವಂದ್ವ—ಸಂಘರ್ಷ— ಪರಿಣಾಮವೆಲ್ಲವೂ ಉಚ್ಚ ಉಚ್ಚ ಮಟ್ಟದಲ್ಲಿವೆ. ಇನ್ನು ಶೈಲಿ—ತಂತ್ರಗಳು—ಇಲ್ಲಿ ಕೃತಕತೆಯಿಲ್ಲ; ಸಹಜ ಮಾತುಗಳು ಸಹಜವಾಗಿಯೇ ಮೂಡಿಬಂದಿವೆ. ಹೆಣ್ಣು ಗಂಡುಗಳ ಸಮಸ್ಯೆ ಇಲ್ಲಿಯೂ ಇಲ್ಲವೆಂದು ಹೇಳಲಾಗದು. 'ಹೃದಯ ಸಂಗಮ', 'ಬಂಧವಿಮೋಚನೆ', 'ಒಡೆದ ಗಾಜು' ಮೊದಲಾಗಿ ಎಲ್ಲವುಗಳಲ್ಲಿಯೂ ಇದು ಅವ್ಯಕ್ತವಾಗಿಯೇ ಹೆಚ್ಚಾಗಿ ಹೊರಪಟ್ಟಿದೆ. ಆದರೆ, ಭಾರತೀಯ ಸಂಸ್ಕೃತಿಯ ಪತನ— ಉತ್ಥಾನಗಳ ಸಮಸ್ಯೆ ಇದಕ್ಕಿಂತಲೂ ಮಿಗಿಲೆಂಬುದನ್ನು ಇಲ್ಲಿನ ಕಥೆಗಳು ಸಾರುತ್ತವೆ. ಪರಕೀಯ ಸಂಸ್ಕೃತಿಯಿಂದ ಪ್ರಭಾವಿತವಾದ ಜನಾಂಗ "ಜಿಮ್ಮಿಯ ಆದರ್ಶವನ್ನಾದರೂ ಹಿಡಿದರೆ, ಭಾರತೀಯರು ಧನ್ಯರಲ್ಲವೆ?

—ಗೋರಾ.

ಜೀವನದ ನಾನಾ ಮುಖಗಳನ್ನು ಚಿತ್ರಿಸುವ ನವೀನ ಕಥಾಸಂಕಲನ

ಮೀರಿ ಕೊಟ್ಟ ಬೆಂಡೋಲಿ

"ಪ್ರಾದೇಶಿಕ ಮೆರುಗು — ಸೊಬಗು ಮೆಚ್ಚುವಂಥಾದ್ದು, ಅದನ್ನು ಸವಿಯಲು ದಕ್ಷಿಣ ಕನ್ನಡದವರೇ ಆಗಬೇಕೆಂದಿಲ್ಲ, ಇಡಿಯ ನಾಡಿಗೇ ಅದು ಕಾಣ್ಕೆ."

– ನಿರಂಜನ (ಮುನ್ನುಡಿ)

ವರ್ಣರಂಜಿತ ಮುಖಪತ್ರ

ಬೆಲೆ: ರೂ. ೧-೮೦

ಪ್ರತಿಗಳಿಗೆ

ನವಯುಗ ಪ್ರೆಸ್, ಉಡುಪಿ

(ಅಥವಾ)

ನವಭಾರತ ಪುಸ್ತಕ ಭಂಡಾರ, ಉಡುಪಿ

ಯಾಜ್ಞಸೇನಿ—ದ್ರೌಪದಿ

(ಐದನೇ ಪುಟದಿಂದ)

ತು ನಿಬಂಧನೆಯಂತೆ "೧೨ ವರ್ಷ ವನವಾಸ ೧ ವರ್ಷ ಅಜ್ಞಾತ ವಾಸಕ್ಕಾಗಿ" ಪತ್ನಿ, ಸೋದರರೊಂದಿಗೆ ತೆರಳಿದ.

ವನವಾಸದ ಅವಧಿಯಲ್ಲಿ ಭಾಸ್ಕರ ಅಕ್ಷಯ ಪಾತ್ರೆ ಅವರನ್ನು ಸಂರಕ್ಷಿಸಿತು. ದೂರ್ವಾಸರ ಆಗಮನದಿಂದ ಪಾಂಡವರ ವಂಶವೇ ಕ್ಷಯವಾಗಬೇಕಾದ ಸಂದರ್ಭದಲ್ಲಿ ಶ್ರೀ ಕೃಷ್ಣ ಓಡಿಬಂದು ಅವರನ್ನು ರಕ್ಷಿಸಿದ. ವೇದೋಪನಿಷತ್ತುಗಳ ಸ್ತುತಿಗೆ ಸಿಲುಕದ, ಋಷಿ ಯೋಗಿಗಳ ತಪಸ್ಸಿಗೆ ಮಣಿಯದ ಭಗವಾನ್ ಶ್ರೀ ಕೃಷ್ಣ ಸೋದರಿ ದ್ರೌಪದಿಯ ಆತ್ಮಾರ್ಪಣಾ ಮನೋಭಾವದ ಭಕ್ತಿಯ ಕರೆಗೆ ಓಡೋಡಿ ಬರುತ್ತಿದ್ದ.

ಘೋಷಯಾತ್ರೆಯ ನೆಪದಲ್ಲಿ ದುರ್ಯೋಧನಾದಿಗಳು ಬಂದು ಗಂಧರ್ವರಿಂದ ಭಂಗ ಹೊಂದಿ ಸೋತು ಹೋದರು. ಅವರನ್ನು ಉಳಿಸಿಕೊಳ್ಳಲು ಭೀಮ–ಪಾರ್ಥರು ಹೋಗಬೇಕಾಯಿತು. ಪಟ್ಟುಗಳನ್ನು ಬಿಡಿಸಲು ದ್ರೌಪದಿಯ ಪಾದಸ್ಪರ್ಶವಾಗಬೇಕಾಯಿತು. ಜಯದ್ರಥ ದ್ರೌಪದಿಯ ಮನ ಒಲಿಸಿಕೊಳ್ಳಲು ಪ್ರಯತ್ನಿಸಿ, ಕೊನೆಗೆ ಅಪಹಾರ ಯತ್ನ ಮಾಡಿ ಭೀಮಾದಿಗಳ ಕೈಗೆ ಸಿಕ್ಕು ಪರಾಜಿತನಾಗಿ ಓಡಿ ಹೋದ. ಇವುಗಳೆಲ್ಲವುಗಳಿಂದಲೂ ದ್ರೌಪದಿಯ ಭಕ್ತಿ—ಶಕ್ತಿ—ಶೀಲದ ಬೆಲೆ ಬಲವಾಯಿತು.

ಹನ್ನೆರಡು ವರ್ಷಗಳ ಅರಣ್ಯವಾಸ ಮುಗಿಸಿ ಉಳಿದ ಒಂದು ವರ್ಷದ ಅಜ್ಞಾತವಾಸದ ಅವಧಿಯನ್ನು ಮುಗಿಸಲು ಪಾಂಡವರು ಬೇರೆ ಬೇರೆ ಹೆಸರು, ವೇಷಗಳಿಂದ ವಿರಾಟರಾಯನ ರಾಜ್ಯದಲ್ಲಿ ಬಂದು ಸೇರುತ್ತಾರೆ. ದ್ರೌಪದಿ ಸೈರಂಧ್ರಿ ಎಂಬ ಹೆಸರಿನಿಂದ ವಿರಾಟನ ಅರಸಿ ಸುಧೇಷ್ಣೆಯ ಓಲಗದ ಪಾಳಿಗೆ ನಿಲ್ಲುತ್ತಾಳೆ. ಅಜ್ಞಾತವಾಸದ ಅವಧಿ ಮುಗಿಯಲು ಕೆಲವು ದಿನಗಳಿರುವಾಗ ಸುಧೇಷ್ಣೆಯ ಸೋದರ ಮಹಾಬಲಶಾಲಿ ಕೀಚಕ ಸೈರಂಧ್ರಿಯ ಸೌಂದರ್ಯಕ್ಕೆ ಸೋತು ಅವಳನ್ನು ಪಡೆಯಲು ಹೆಣಗುತ್ತಾನೆ. ಸೈರಂಧ್ರಿ ಅವನ ಕಾಮದ ದೃಷ್ಟಿಯಿಂದ ದೂರವಾಗಲು ಪ್ರಯತ್ನಿಸಿ ವಿಫಲಳಾಗುತ್ತಾಳೆ. ಕೀಚಕ ಅವಳನ್ನು ತನ್ನವಳನ್ನಾಗಿ ಮಾಡಿಕೊಳ್ಳಲು ಪ್ರಯತ್ನಿಸಿ, ಅವಳು ದೂರವಾಗಲು ಯತ್ನಿಸಿದಾಗ ಹಿಡಿದು ಸಭೆಯ ಎದುರಿನಲ್ಲಿ ಒದೆಯುತ್ತಾನೆ. ಈ ದುಷ್ಕೃತ್ಯಕ್ಕೆ ರಾಜನೂ ಪ್ರತಿ ಹೇಳಲಿಲ್ಲ. ದ್ರೌಪದಿ ಭೀಮನ ಮೊರೆ ಹೊಕ್ಕಳು. ಭೀಮನ ಸಲಹೆಯಂತೆ ದ್ರೌಪದಿ ಕೀಚಕನನ್ನು ರಾತ್ರಿ ಗರಡಿಯ ಮನೆಗೆ ಬರುವಂತೆ ಆಹ್ವಾನಿಸಿದಳು. ಭೀಮ ಕೀಚಕನನ್ನು ಅಂತಕನ ಮನೆಗೆ ಕಳುಹಿಸಿದ. ಅಣ್ಣನ ಸಾವಿಗೆ ಸೇಡು ತೀರಿಸಿಕೊಳ್ಳಲು ಬಂದು ದ್ರೌಪದಿಯನ್ನು ಪೀಡಿಸಲು ಹೊರಟ ಉಪಕೀಚಕರೂ ಅಣ್ಣನ ಹಾದಿ ಹಿಡಿದರು.

ಉತ್ತರ ಗೋಗ್ರಹಣದ ನೆಪದಲ್ಲಿ ಕೌರವರು ಪಾಂಡವರನ್ನು ಮತ್ತೊಮ್ಮೆ ಅವಧಿ ತೀರುವ ಮುಂಚೆಯೇ ನೋಡಿ ಅಡವಿಗಟ್ಟಲು ಪ್ರಯತ್ನಿಸಿದರು. ಕೌರವರು ಪಾಂಡವರನ್ನು ಗುರುತಿಸುವ ವೇಳೆಗೆ ಅಜ್ಞಾತವಾಸದ ಅವಧಿ ಮುಗಿದಿತ್ತು. ಭೀಮ ಪಾರ್ಥರು ಕೌರವಾದಿಗಳಿಗೆ ಬಲವಾದ ಪೆಟ್ಟು ಕೊಟ್ಟರು. ವಿರಾಟ ರಾಯನ ಗೋವುಗಳು ಮರಳಿದವು. ಉತ್ತರೆ ಮತ್ತು ಅಭಿಮನ್ಯು ವಿವಾಹದೊಂದಿಗೆ ಪಾಂಡವರ ಕಷ್ಟದ ದಿನಗಳು ಕಳೆದು ಸುಖದ ದಿನಗಳು ಆರಂಭವಾದುವು.

ಧರ್ಮಮೂರ್ತಿ, ಪಾಂಡವ ಪಕ್ಷಪಾತಿ ಶ್ರೀ ಕೃಷ್ಣ ಪಾಂಡವರಿಗೆ ನ್ಯಾಯವಾಗಿ ಬರಬೇಕಾದ ಅರ್ಧ ರಾಜ್ಯವನ್ನು ಕೊಡಬೇಕಾಗಿ ತುಂಬಿದ ಸಭೆಯಲ್ಲಿ ವಿಚಾರ ಮಂಡಿಸಿದ. ಪಾಂಡವ ಪಕ್ಷಪಾತಿ ಬಂಧುಗಳು, ಮಿತ್ರರು ಆ ಸಭೆಯಲ್ಲಿ ಹಾಜರಿದ್ದರು. ಸಂಧಾನ ಸೂತ್ರಗಳಿಗೆ ಒಪ್ಪದೆ, ನ್ಯಾಯ, ನೀತಿ, ಧರ್ಮಗಳಿಗೆ ತಲೆ ಬಾಗದ, ಛಲದಂಕ ಮಲ್ಲ, ಮಾನಧನ, ಸುಯೋಧನ "ಪಾಂಡವರು ಶಕ್ತಿ ಇದ್ದರೆ ಬಾಹುಬಲದಿಂದ ರಾಜ್ಯವನ್ನು ಪಡೆದುಕೊಳ್ಳಲಿ. ಸೂಜಿ ಮೊನೆಯಷ್ಟು ನೆಲವನ್ನು ಬಿಟ್ಟು ಕೊಡಲಾರೆ" ಎಂದು ಹೇಳಿ ಯುದ್ಧ ಸಿದ್ಧತೆಗೆ ತೊಡಗಿದ.

ಮಹಾಭಾರತ ಯುದ್ಧ ನಡೆಯದೆ ಇರುವುದು ಅನಿವಾರ್ಯವಾಯಿತು. ಶ್ರೀ ಕೃಷ್ಣ ಪಾರ್ಥನ ಸಾರಥಿಯಾಗಿ ಪಾಂಡವ ಪಕ್ಷದ ಬೆಂಬಲಿಗನಾಗಿ ಉಳಿದ. ಯಾದವ ಸೈನ್ಯ ಕೌರವನ ಹಿಂದೆ ನಿಂತಿತು. ಯುದ್ಧ ನಡೆಯುವ ಮುಂಚೆ ಶ್ರೀ ಕೃಷ್ಣ ಪಾಂಡವರ ಪರವಾಗಿ ಸಂಧಾನಕ್ಕೆ ಹಸ್ತಿನಾವತಿಗೆ ನಡೆಯುವ ಮುಂಚೆ ದ್ರುಪದ ನಂದಿನಿ ತನ್ನ ಮನದಳಲನ್ನು ಶ್ರೀ ಕೃಷ್ಣನಲ್ಲಿ ತೋಡಿಕೊಂಡು "ಅವರನ್ನು ಸಂಧಾನಕ್ಕೆ ಒಪ್ಪಿಸದೆ, ಯುದ್ಧ ಮಾಡುವಂತೆ ಏರ್ಪಾಡು ಮಾಡಿಬಾ, ನನ್ನ ದುಃಖ ಇನ್ನು ಆರಿಲ್ಲ" ಎಂದಳು. ಕೃಷ್ಣೆಯ ದುಃಖದ ಕೂಗನ್ನು ಶ್ರೀ ಕೃಷ್ಣ ಮರೆತಿರಲಿಲ್ಲ. ದಾನವಾಂತಕ, ದೇವಕೀಸುತ ತುಂಬಿದ ಸಭೆಯಲ್ಲಿ ದುರ್ಯೋಧನನನ್ನು ಕೆರಳಿಸಿ ಯುದ್ಧಕ್ಕೆ ಬಲವಾದ ಅಡಿಪಾಯ ಹಾಕಿ ಬಂದ. ಶತ್ರುಗಳ ನಾಶಕ್ಕಾಗಿ ಕಂಕಣ ತೊಟ್ಟು ನಿಂತ ಕಂಸಾರಿ ಅತಿ ಸೂಕ್ಷ್ಮಗ್ರಾಹಿ.

ಧರ್ಮ ಕ್ಷೇತ್ರವಾದ, ಕುರುಕ್ಷೇತ್ರ ರಣ ಭೂಮಿಯಲ್ಲಿ ಕೌರವರ ಹನ್ನೊಂದು ಅಕ್ಷೋಹಿಣಿ, ಪಾಂಡವರ ಏಳು ಅಕ್ಷೋಹಿಣಿ ಸೈನ್ಯ ಯುದ್ಧಕ್ಕಾಗಿ ಸಜ್ಜಾಗಿ ನಿಂತಿತು. ಭೀಕರ ಸಮರ ಹದಿನೆಂಟು ದಿನಗಳ ವರೆಗೆ ನಡೆಯಿತು. ತುಂಬಿದ ಸಭೆಯಲ್ಲಿ ಮಾನಿನಿಯ ಮಾನಭಂಗದೊಂದಿಗೆ ಆರಂಭವಾದ ಅಧರ್ಮ—ಅನ್ಯಾಯಗಳ ಪರಂಪರೆ ಕುರುಕ್ಷೇತ್ರ ರಂಗದಲ್ಲಿ ಅಂತ್ಯವಾಯಿತು. ದುರ್ಯೋಧನ ಅವನ ಸಹೋದರರು, ಸೈನ್ಯದ ಸಹಿತ ಮಣ್ಣಿನಲ್ಲಿ ಸೇರಿ ಹೋದ.

ಕೌರವರೆಲ್ಲರೂ ಭೀಮನ ಗದೆಯ ಹೊಡೆತಕ್ಕೆ ನುಚ್ಚು ನೂರಾದರು. ತುಂಬಿದ ಸಭೆಯಲ್ಲಿ ಪತಿವ್ರತೆಯ ಮಾನಭಂಗ ಮಾಡಲು ಯತ್ನಿಸಿದ ದುಶ್ಶಾಸನನನ್ನು ಹಿಡಿದು ಅವನ ದೇಹ ಬಗಿದು ಬಿಸಿನೆತ್ತರಿನಲ್ಲಿ ಪಾಂಚಾಲಿಯ ಕೇಶವನ್ನು ಅದ್ದಿ ಅವನ ದಂತಪಂಕ್ತಿಯಿಂದ ಆಕೆಯ ತಲೆ ಬಾಚಿ ಬೈತಲೆಯನ್ನು ತೆಗೆದು ಮುಡಿಕಟ್ಟಿದನು ಬಲ ಭೀಮ. ಅಲ್ಲಿಗೆ ಭೀಮ ಮತ್ತು ಅವನ ಭಾಮೆಯ ಪ್ರತಿಜ್ಞೆ ನೆರವೇರಿತು. "ನಿನ್ನ ಕೇಶವೇ ಕುರುಕುಲ ವಿಲಯಕ್ಕೆ ಕಾರಣವಾಯಿತು. ಈ ಸಮಸ್ತ ಸೈನ್ಯವೂ ಅಸುರರೂ ನಿನ್ನ ಕೆದರಿದ ಕೇಶದಿಂದಲೇ ನಾಶವನ್ನೈದಿದರು. ಅದರಿಂದಲೇ ನನ್ನ ಕಲಿತನಕ್ಕೆ ಕಾವುಂಟಾಯಿತು. ದೇವಿ ನಿನ್ನ ಮುಡಿಯೇ ಈ ಕುರುಕ್ಷೇತ್ರದ ಮಹಾ ಸಂಗ್ರಾಮಕ್ಕೆ ಮೂಲ ಕಾರಣ" ಎಂದು ಭೀಮ ಭಾಮೆಯ ಕೇಶಪಾಶವನ್ನು ಹೊಗಳಿದನು.

ಸಮಸ್ತ ಸೋದರರನ್ನು, ಸಿರಿಯನ್ನು, ಸೈನ್ಯವನ್ನು ಕಳೆದುಕೊಂಡು ಹಟ ಸಾಧನೆಯಿಂದ ವಿಶ್ರಾಂತಿ ಪಡೆದು ಮತ್ತೆ ತನ್ನ ಗದೆಗೆ ಪಾಂಡವರನ್ನು ಆಹುತಿ ತೆಗೆದುಕೊಳ್ಳಬೇಕೆಂದು ವೈಶಂಪಾಯನ ಸರೋವರದಲ್ಲಿ ಜಲಸ್ತಂಭನ ಮಂತ್ರ ಪಠಿಸುತ್ತಾ ಅಡಗಿದ್ದ ಕೌರವನನ್ನು ಭೀಮನ ನುಡಿಗಳು ಕೆರಳಿಸಿದವು. ಬಿರುನುಡಿಗೆ ಸುಯೋಧನ ನಿರಿವಕ್ಷಿಯೇ ಬಿವತನಂತೆ. ಗದೆಯೊಂದಿಗೆ ಹೊರಬಂದ ಉರಗ ಪತಾಕ ಭೀಮನೊಂದಿಗೆ ಗದಾ ಯುದ್ಧಕ್ಕೆ ನಿಂತ. ಅವರದು ಅಪೂರ್ವ ಗದಾಯುದ್ಧ ಇಬ್ಬರೂ ಸಮ ಬಲರು. ಕೊನೆಯಲ್ಲಿ ಭೀಮ ತನ್ನ ಪ್ರತಿಜ್ಞೆಯನ್ನು ನೆನಪು ಮಾಡಿಕೊಂಡು ಕೌರವನ ತೊಡೆಯನ್ನು ಜಜ್ಜಿ ಹಾಕಿದ. ಸರೋವರದ ತೀರದಲ್ಲಿ ನೇಶಿಗನಂತೆ ಸುಯೋಧನ ತೊಡೆ ಮುರಿದು ಉರುಳಿದ. ಅಲ್ಲಿಗೆ ಪಾಂಚಾಲಿಯ ಶಾಪ ಫಲಿಸಿತು.

ಉಳಿದ ಪ್ರಜೆಗಳು ತಮ್ಮ ಧರ್ಮ ಪ್ರಭು ಧರ್ಮನಂದನನನ್ನು ಆದರದಿಂದ ಬರ ಮಾಡಿಕೊಂಡರು. ದ್ರೌಪದಿ, ಧರ್ಮರಾಯ ಶುಭ ಮಹೂರ್ತದಲ್ಲಿ ಶ್ರೀ ಕೃಷ್ಣನ ದಕ್ಷ ಮುಂದಾಳುತನದಲ್ಲಿ ಸಿಂಹಾಸನವನ್ನೇರಿದರು.

ವ್ಯಾಸರ ದೃಷ್ಟಿ, ಕುಮಾರ ವ್ಯಾಸನ ದೃಷ್ಟಿ, ಪಂಪನ ದೃಷ್ಟಿ, ರನ್ನನ ದೃಷ್ಟಿ ದ್ರೌಪದಿಯ ಬಗ್ಗೆ ಭಿನ್ನವಾಗಿರಬಹುದು. ಆದರೆ ಪಾಂಚಾಲಿಯ ತೇಜಸ್ಸು, ಪ್ರತಿಭೆ ಹಿರಿದು. ಭಾರತೀಯ ಪತಿವ್ರತೆಯರ ಭವ್ಯ ಪರಂಪರೆಯಲ್ಲಿ ಉಜ್ವಲ, ಉನ್ನತ ಸ್ಥಾನ ಈ ವೀರ ಮಹಿಳೆ ಪಾಂಚಾಲಿಯದು. ಆ ಎತ್ತರವನ್ನು ಅಳೆಯಲು ಸಾಧ್ಯವಿಲ್ಲ. ಅರಿಯಬಹುದಷ್ಟೆ.

ಪುತ್ತೂರು ಮುನ್ಸಿಫ್ ಕೋರ್ಟಿನಲ್ಲಿ

R. E. P. 265/66
O.S. 373/56.

ಡಿ. ಕೃಷ್ಣಭಟ್ಟ — ಅರ್ಜಿದಾರ.

ಮಹಾಬಲ ಭಟ್ಟ ಸಹಾ — ಎದ್ರಿರು.

2. ಗೌರಮ್ಮ, 5. ಲಲಿತಮ್ಮ — ಗಣೇಶ ಭಟ್ಟರ ವಿಧವೆಯರು.

6. ರತ್ನಾವತಿ ಗಣೇಶಭಟ್ಟರ ಮಗಳು— ಎಲ್ಲರೂ ಬಂಟ್ವಾಳ ತಾಲೂಕು ಮಾಣಿಲಗ್ರಾಮದಲ್ಲಿ—

ಇವರಿಗೆ ಕೋರ್ಟು ಹುಕುಂ ಪ್ರಕಾರ ತಿಳಿಸುವುದೇನೆಂದರೆ —

ಮೇಲ್ಕಂಡ ಡಿಕ್ರಿ ಮೇಲೆ ಅರ್ಜಿದಾರನು ಮಾಡಿದ ಮೇಲ್ಕಂಡ ಅಮಲ್ಜಾರಿಯು ತಾ. 20—9—66ಕ್ಕೆ ಇಟ್ಟಿರುವುದರಿಂದ ಅದ್ಕೆ ಆಕ್ಷೇಪಣೆ ಇದ್ದ ಸದ್ರಿ ದಿವಸ ಮಜ್ಕೂರು ಕೋರ್ಟು ಮುಂದೆ ನೀವು ಸ್ವತಃ ಯಾ ವಕೀಲರ ದ್ವಾರಾ ಹಾಜರಾಗಿ ಉಜರ್ ಪಡಿಸಿ ಕೊಳ್ಳತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮ ಗೈರು ಹಾಜರಿಯಲ್ಲಿ ತೀರ್ಮಾನಿಸಲಾಗುವುದು — ಎಂತ ಈ ಮೂಲಕ ತಿಳಿಸಲಾಗಿದೆ.

(Sd) C. V. Shastry
Advocate for Petr.

ಪುತ್ತೂರು, ತಾ. 22—8—66

ಅತ್ಯಾಧುನಿಕ ಸಲಕರಣೆ — ಸೌಕರ್ಯಗಳಿಂದ ಕೂಡಿದ
ಭೋಜನ, ಉಪಾಹಾರ ಮತ್ತು ವಸತಿ ಗೃಹ



ಹೋಟೆಲ್ ಶಿವಪ್ರಸಾದ

ಫೋನ್: 77 ಕುಂದಾಪುರ, ದ. ಕ.

ಚಂದಾದಾರರಲ್ಲಿ ವಿನಂತಿ

ಕಳೆದ ಆಗೋಸ್ತು ತಿಂಗಳಾಂತ್ಯಕ್ಕೆ "ನವಯುಗ"ದ 45ನೇ ವರ್ಷವು ಕೊನೆಗೊಂಡು ಸಪ್ಟಂಬರಾದಿಯಿಂದ 46ನೇ ಹೊಸ ವರ್ಷಾರಂಭವಾಗಿದೆ. ಈ ಅವಧಿಗೆ ಚಂದಾ ಅವಧಿ ಮುಗಿಯುವ ಹಾಗೂ ಚಂದಾ ಹಣ ಬಾಕಿಯಿರುವ ನಮ್ಮ ಚಂದಾದಾರ ಬಂಧುಗಳು ತಮ್ಮ ಚಂದಾ ಹಣವನ್ನು ದಯಮಾಡಿ ಆದಷ್ಟು ತ್ವರೆಯ ಮನಿಯಾರ್ಡರು ದ್ವಾರಾ ಯಾ ಸಿಂಡಿಕೇಟ್ ಬ್ಯಾಂಕಿನ ಸಮೀಪದ ಶಾಖೆಯಲ್ಲಿ "ನವಯುಗ"ದ ಖಾತೆಗೆ ಜಮೆ ಮಾಡುವುದರ ಮೂಲಕ ಕಳುಹಿಸಿಕೊಟ್ಟು ಸಹಕರಿಸುವಂತೆ ವಿನಂತಿಸುತ್ತೇವೆ.

ಅಂತೂ ಚಂದಾಹಣವು ಸಕಾಲದಲ್ಲಿ ಬಾರದಿದ್ದಲ್ಲಿ ನಾವು ಕ್ರಮಶಃ ಮುಂದಿನ ಸಂಚಿಕೆಯನ್ನು ವಿ. ಪಿ. ಮೂಲಕ ಕಳುಹಿಸುತ್ತೇವೆ. ಅದನ್ನು ಅವಶ್ಯ ಸ್ವೀಕರಿಸುವಂತೆ ಬಿನ್ನಹಿಸುತ್ತೇವೆ.

ಮೆನೇಜರ್,
ನವಯುಗ, ಉಡುಪಿ.

ನಾರಿ ಸಕಲರಿಗೆ ಹಿತಕಾರಿ

(ಹತ್ತನೇ ಪುಟದಿಂದ)

ಸೌಂದರ್ಯವನ್ನು ಇಮ್ಮಡಿಗೊಳಿಸುವ್ವು. ಹೀಗೆ ಎರಡು ಸ್ತನಗಳ ಮಧ್ಯೆ 'ನಾಲ್ಕು ಬೆರಳು ಅಂತರವಿದ್ದರೆ ಆಕೆ ಹಸ್ತಿನಿ, ಮೂರು ಬೆರಳಿದ್ದರೆ ಚಿತ್ತಿನಿ, ಎರಡು ಬೆರಳಿದರೆ ಶಂಖಿನಿ, ಒಂದೇ ಒಂದು ಬೆರಳಂತರವಿದ್ದರೆ ಆಕೆಯೇ ಪದ್ಮಿನಿ'.

ಸರ್ವಜ್ಞ ಕಾಮ ಶಾಸ್ತ್ರದಲ್ಲಿ ಬಹು ಅನುಭವಿ ಎಂದರೆ ತಪ್ಪಾಗಲಾರದು. ಆತ ಹೆಣ್ಣಿನ ಗುಣ ರೂಪರೇಖೆ ತಿಳಿಸಿರುವುದಲ್ಲದೆ ಬೇಕಾದವಳ ಒಲಿಸಿಕೊಳ್ಳುವ ಮಂತ್ರವನ್ನು ಹೇಳಿರುವನು.

ಹಲವು ಬಂಧನ ಕೂಟ |
ಕಲೆಯು ಭೇದನವರಿತು |
ಪತಿಯುದನು ಸವಿದು ಬಳಸಿದರೆ
ಹಸ್ತಿನಿಯು |
ಒಲಿವಳಾಕ್ಷಣದಿ ಸರ್ವಜ್ಞ ||

"ಕಾಮ ಕಲಾ ಶಾಸ್ತ್ರದ ಸೂತ್ರಗಳನ್ನು ರತಿಕ್ರೀಡೆಯಲ್ಲಿ ಬಳಸಿದರೆ ಆತನನ್ನು ಮಹಾಪುರುಷನೆಂದು ಎಣಿಸಿ ಒಪ್ಪಲಿ ಹಸ್ತಿನಿ ಅವನ ಕೈವಶವಾಗುವಳು."

ಹರಿಣಾಕ್ಷಿ ಚಿತ್ತಿನಿ|
ಕರ್ಣೇಂದ್ರಿಯಗಳಿಂದು
ಕರುಣ ರಸವೆಂಬ ಸದ್ಗುಣದ ನೆರೆದರೆ|
ಮಣಿಸುವಳು ಸರ್ವಜ್ಞ||

ಪ್ರೇಮಕರುಣೆಯನ್ನು ತೋರುತ್ತ ಆ ವಳಿಗೆ ಹಿತವಾದ ಉತ್ತಮವಚನಗಳಿಂದಿದರೆ "ಮಹಾರಸಿಕ"ನೆಂದೆಣಿಸಿ ಜಿಂಕೆಯ ನೋಟದ ಚಲುವೆ ಚಿತ್ತನಿ ಅವನ ಕೈವಶವಾಗಿ ಸಂತೋಷದಿಂದ ಕೂಡುವಳು."

ನೋಟಬೇಟಗಳಲ್ಲಿ|
ಮಾಟದಿ ದೃಢ ಪ್ರೀ
ಕೂಟದಲಿ ಕೇಳದ ಕೊನೆವರೆಗೂ ತ
ಶಂಖಿನಿಯು|
ನಾಟಕದ ಬಿಡಳು ಸರ್ವಜ್ಞ||

ಪ್ರೇಮ ನುಡಿಗರೆಯುತ್ತ ಒತ್ತಿ ನೋಡಿದರೆ "ಕಪಟ ಕ್ರೋಧ"ವನು ತೋರುವಳು. ಅಷ್ಟಕ್ಕೆ ನಿಲ್ಲಿಸದೆ ಮುಂದುವರಿಸಿದರೆ ಕಾಮಾಗಿ ಶಂಖಿನಿಯು ಕೈ ವಶ ವಾಗುವಳು.

ಮಂಗುರುಳು ಪಿಡಿದಾಡಿ |
ಭಂಗಿಸುತ ಕಚಕವಿದ |
ರಂಗುತ ಟಗಳು ಅಚ್ಚಿದರೆ ಪದ್ಮಿನಿಯು |
ಸಂಗವನು ಬಿಡಳು ಸರ್ವಜ್ಞ||

ನಾಚಿಕೆ ನುಡಿಯಿಂದ ಒತ್ತಿ ಮೊಗ ಮಾಡಿಸಿ, ಆಗಾಗ ಹೆಗಲಿಗೆ ಕೈ ಎರಿಸಿ ಅವಳ ತುಟಿಗಳಿಗೆ ಕೆಂಪೇರಿಸುತಿದ್ದು ಮುಂಗುರುಳು ಹಿಡಿದುತಲಿದ್ದರೆ ಪದ್ಮಿನಿಯು ಆವನ್ನ ಪರಿಯಂತ ಅಧೀನಳಾಗಿಯೂ ಗುವಳು.

ಹೀಗೆ ಸರ್ವಜ್ಞನು ಸರಳ ಹಾಗೂ ಸುಶೀಲವಾದ ಮಾರ್ಗ ದಾಕಿ ಕೊಟ್ಟಿರುವನು ಆದರೂ ಕೆಲವರು ವಿರೋಧಿಸಿದಂತೆ, ಆಗ.

ನಲ್ಲೆಯನು ಒಲ್ಲೆಂಬ |
ಸೊಲ್ಲು ನುಲಿಗ ಹೂಲೆಯ |
ಬಲ್ಲವ ಶ್ರವಣ ಸನ್ಯಾಸಿ ಇವರುಗಳು
ಎಲ್ಲ ಉಪಸಿದರು ಸರ್ವಜ್ಞ||

ಹೆಂಡತಿಯ (ಮದುವೆ) ಬೇಡ ಎಂದುವವನ ನಾಲಿಗೆ ಹೊಲೆಯ ಸರಿ. ಹಂಡತಿ ಆಯ್ಕೆ ವಿಚಾರದಲ್ಲಿ ತಿಳಿವು ತಿಳುಗನನ್ನು ವಿರೋಧಿಸುವವನು ಮಹಾ ಅಯೋಗ್ಯನೇ ಸರಿ. ಹೀಗೆ ವಿರೋಧಿಸುವ ಶ್ರವಣ ಎಲ್ಲಿಂದ ಜನಿಸಿದನು? ಅಂದರೆ ಹೆಣ್ಣಿಂದಲೇ ಎಂದು ಉಕ್ತಿಸಿ ಬ ಯ್ದು ಬಿಟ್ಟಿರುವನು.

ನಾರಿ ಪರಿಹರಿಸು |
ನಾರಿ ಸ್ವರ್ಗಕೆ ದಾರಿ|
ನಾರಿ ಸಂಕಲರಿಗೆ ಹಿತಕಾರಿ ಎಂದೆರು|
ನಾರಿಯು ಮಾರಿ ಸರ್ವಜ್ಞ ||

ಸ್ತ್ರೀಯು ಒಲಿದರೆ ಎಲ್ಲ ಉಪಕಾರಿ ಯಾಗುವಳು, ಸ್ವರ್ಗ ದಾರಿ ತೋರ್ವಳು, ತನ್ನವರೆಲ್ಲರಿಗೂ ಹಿತವೇಗುವಳು. ಅದರೆ ಆಕೆ ಒಲಿಯದಿದ್ದರೆ ನನ್ನ ವಿಲಿಗೆ ಮಾರಿಯಾಗುವಳು. ಅಂದರೆ ಭಕ್ಷಿಸಿ ಯಾಗುವಳು. ಎಂದು ಸುಜ್ಞಾನ ತತ್ವವನರಿಗಚ್ಚರಿಸಿರುವನು.

ನಾವೆತ್ತ ನಡೆಯುತಿದ್ದೇವೆ

(ಒಂಭತ್ತನೇ ಪುಟದಿಂದ)

ನಾವಾ ಹೋಳನ್ನು ಮತ್ತೆ ಮತ್ತೆ ಹಂಚುವ ದಾರಿಯಲ್ಲಿ ನಡೆಯುತ್ತಿದ್ದೇವೆಯೆ? ನಿಶಕ್ತಿಯಿಂದ ಅನೇಕತೆ ಮತ್ತೆ ಧಾವಿಸುತ್ತಿದ್ದೇವೆಯೆ?

ಸೌಂಸ್ಕೃತಿಕ — ಆಧ್ಯಾತ್ಮಿಕಗಳನ್ನ ಮರೆತು ಬರಿಯ ಭೌತಿಕವಾದದಲ್ಲೇ ಪ್ರೈವರಿಯುವ ಭಾರತೀಯರು ತಮ್ಮ ಪೂರ್ವಜರು ಮೂಡಿದ ಮಾರ್ಗ ಸರಿದಾರಿಯಲ್ಲಿ ನಡೆದು ಬರುವುದು ಯಾರಿ?

ಸ್ವಾತಂತ್ರ್ಯ ದಿನೋತ್ಸವ

ಶಿರ್ವ, ಇಲ್ಲಿಯ ಹಿಂದೂ ಹಾಯರ್ ಸೆಕೆಂಡರಿ ಶಾಲೆಯಲ್ಲಿ ಸ್ವಾತಂತ್ರ್ಯ ದಿನಾಚರಣೆಯು ಶಾಲೆಯ ವಿಧಾನಸಭಾ ಸದಸ್ಯ ಶ್ರೀ ಬಿ. ಭಾಸ್ಕರ ಶೆಟ್ಟಿ ಅಧ್ಯಕ್ಷತೆಯಲ್ಲಿ ಜರಗಿತು. ಡಾ| ಕೆ. ಆರ್. ಶೆಣೈ ಅವರು ಧ್ವಜಾರೋಹಣ ಶ್ರೀ ಜಿ ಜಯಲಕ್ಷ್ಮಿ ಶೆಟ್ಟಿ "ವಿದ್ಯಾರ್ಥಿಯ ರಾಷ್ಟ್ರಕ್ಕೆ ಸಮರ್ಪಣೆ ಮೊದಲಾದ ಕಾರ್ಯಕ್ರಮಗಳೊಂದಿಗೆ ಆಚರಿಸಲಾಯಿತು. ಶ್ರೀ ಬಿ. ಜಯರಾಮ ಶೆಟ್ಟಿ ಸ್ವಾಗತಿಸಿ, ಶ್ರೀ ಕೆ. ಎಸ್. ರಾಮರಾವ್ ಧನ್ಯವಾದವಿತ್ತರು.

ಕೃತಜ್ಞತೆಗಳು.

ನನ್ನ ಪುತ್ರಿ ಕುಮಾರಿ ಪ್ರಮೋದ ಚಂದ್ರಳ ವಿವಾಹವು ತಾ 21—8—66ನೇ ಆದಿತ್ಯವಾರ ದಿವಂಗತ ಬಾಡೂರು ಸುಂದರರೈಗಳವರ ಪುತ್ರ ಶ್ರೀ ತೇಜ಼ ಸುಂದರ ರೈಗಳೊಡನೆ ಮಂಗಳೂರು ಡೋನ್ ಬೋಸ್ಕೊ ಹೋಲಿನಲ್ಲಿ ನೆರವೇರಿದ ಸಂದರ್ಭದಲ್ಲಿ ವಧೂವರರನ್ನು ಆಶೀರ್ವದಿಸಿದ, ಉಡುಗೊರೆಗಳನ್ನಿತ್ತ, ಹಾಗೂ ಶುಭಕೋರಿಕೆಯನ್ನು ಕಳುಹಿಸಿಕೊಟ್ಟ ಮಹನೀಯರಿಗೆಲ್ಲ ಕೃತಜ್ಞತೆಗನ್ನರ್ಪಿಸುತ್ತೇನೆ.

ಮಾಲ್ಕಿ ಮಂಜಯ ಭಂಡಾರಿ
ರಿಟಾಯರ್ಡ್ ಮೆನೇಜರ್,
ವಿಜಯಾ ಬ್ಯಾಂಕ್ ಲಿಮಿಟೆಡ್, ಕಾರ್ಕಳ.

ಸ್ವಾತಂತ್ರ್ಯ ದಿನೋತ್ಸವ

ಕಡಿಯಾಳಿ, ಯು. ಕಮಲಾ ಬಾಯಿ ಹೈಸ್ಕೂಲಿನಲ್ಲಿ ತಾ. 16ರಂದು ಸ್ವಾತಂತ್ರ್ಯ ದಿನೋತ್ಸವವನ್ನು ಯುಕ್ತ ಮಂದಿಂದ ನೇತೃತ್ವದಲ್ಲಿ ಆಚರಿಸಲಾಯಿತು. ಉಡುಪಿಯ ಹಿಂದೀಸೇವಾ ಸದನದ ಸಂಚಾಲಕರಾದ ಶ್ರೀ ಉ. ಅಪ್ಪಣಾಚಾರ್ಯರು ಧ್ವಜಾರೋಹಣ ಮಾಡಿದರು. ಅಧ್ಯಕ್ಷತೆ ವಹಿಸಿದ್ದರು. ಮಾಧ್ಯಮಿಕ ನಾಯಕ ಕುಮಾರ ಕೆ. ಅನಂತ ಪ್ರಭುವರು ಸ್ವಾಗತ ಭಾಷಣ ಮಾಡಿದರು. ಶ್ರೀ ಗೋವಿಂದರಾಜ ವಾರಂಬಳ್ಳಿಯವರು ಸ್ವಾತಂತ್ರ್ಯ ದಿನದ ಮಹತ್ವವನ್ನು ವಿವರಿಸಿ ಪರಿಶ್ರಮದಿಂದ ಎಲ್ಲರೂ ಸಹಯೋಗ ನೀಡಬೇಕೆಂದು ತಿಳಿಸಿದರು. ವಿದ್ಯಾರ್ಥಿಗಳಲ್ಲಿ ಕುಮಾರ ಕಿಶೋರ ಪ್ರಭು, ಕೆ. ಇಂದಿರಾ, ಜೇಬಿ ಸರಸ್ವತಿ ಮತ್ತು ಕುಮಾರರಾದ ಗಣಪತಿ ಶೆಟ್ಟಿ, ರಾಜೇಂದ್ರ ಆಚಾರ್ ಇವರು ಸ್ವಾತಂತ್ರ್ಯ ಸಮರದ ನಾಯಕರ ಪರಿಚಯವನ್ನು ಮಾಡಿಕೊಟ್ಟರು. ಅಧ್ಯಕ್ಷರು ಮಾತನಾಡಿ ಶತ್ರುಗಳಿಂದ ದೇಶವನ್ನು ಉಳಿಸುವಲ್ಲಿ, ಸ್ವಾತಂತ್ರ್ಯವನ್ನು ಉಳಿಸಿ ಬೆಳೆಸುವಲ್ಲಿ ವಿದ್ಯಾರ್ಥಿಗಳು ಮುಂದಾಳುಗಳಂತೆ ಎಚ್ಚರವಿರಬೇಕೆಂದು ಹೇಳಿದರು. ಮುಂದಿನ ಉಪನ್ಯಾಸಕಿ ಕುಮಾರಿ ಯು. ಲಕ್ಷ್ಮಿಯವರು ಧನ್ಯವಾದವನ್ನಿತ್ತರು.

ಸಮಾರಂಭದ ಅಂತ್ಯದಲ್ಲಿ ನ ಡೆ ಸಿ ದ ಪ್ರಬಂಧ ಸ್ಪರ್ಧೆ ಯ ಲ್ಲಿ ಯ ಶ ಗ ಳಿ ಸಿ ದ ಕುಮಾರಿಯರಾದ ರಾಧಾ ಕೃಷ್ಣ ಭಟ್ಟ ಮತ್ತು ಕೆ. ರಾಜೀವಿ, ಭಟ್ಟ ಹಾಗೂ ರಾಜ ಪ್ರಭುವರ ಗೀತೆ ಹಾಡುವ ಸ್ಪರ್ಧೆಯಲ್ಲಿ ಯಶಗಳಿಸಿದ ಕುಮಾರಿ ಶ್ಯಾಮಲಾ ಮತ್ತು ಕುಮಾರ ಬ ಮುತ್ತು ಯು ಛಗವೇಗ ಪ್ರಶಸ್ತಿ ಪತ್ರವನ್ನು ಅಧ್ಯಕ್ಷರು ವಿತರಿಸಿದರು.

ಮತದಾರರ ಪಟ್ಟಿ ಪ್ರಕಟಣೆ

ಉಡುಪಿ ಬ್ರಹ್ಮಾವರ, ಕುಂದಾಪುರ, ಕಾರ್ಕಳ ತಾಲೂಕು ಕ್ಷೇತ್ರಗಳ ಮತದಾರರ ಪಟ್ಟಿಗಳನ್ನು ಸಾರ್ವಜನಿಕರ ಅವಗಾಹನೆಗಾಗಿ ಆಯಾ ಕ್ಷೇತ್ರಗಳ ತಾಲೂಕು ಆಫೀಸ್ ಮತ್ತು ಸಂಬಂಧಪಟ್ಟ ಕಚೇರಿಗಳಲ್ಲಿ ಪ್ರಕಟಿಸಲಾಗಿದೆ. ಈ ಪಟ್ಟಿಗಳಲ್ಲಿ ಸೇರಿಸಬೇಕಾದ ಹೆಸರುಗಳನ್ನು, ಸರಿಪಡಿಸಬೇಕಾದ ಸಂಬಂಧಪಟ್ಟ ಅಕ್ಷೇಪಗಳನ್ನು ನಿರ್ದಿಷ್ಟ ಫಾರಂನಲ್ಲಿ ಅರ್ಜಿಯನ್ನು ಸಲ್ಲಿಸಬೇಕಾಗಿ ಇಲೆಕ್ಟೋರಲ್ ರಿಜಿಸ್ಟ್ರೇಶನ್ ಆಫೀಸರ್ ಹಾಗೂ ಡೆಪ್ಯುಟಿ ಅಸಿಸ್ಟೆಂಟ್ ಕಮಿಷನರು ತಿಳಿಸುತ್ತಾರೆ.

ಎ. ಬಿ. ಶೆಟ್ಟಿ ಸ್ಮಾರಕ ವಿದ್ಯಾರ್ಥಿ ನಿಲಯ

... ಸಾಚಾಪಟ್ಟ ಹಿಮ ... ದಲ್ಲಿ ರುವ ಎ. ಬಿ ಶೆಟ್ಟಿ ಸ್ಮಾರಕ ವಿದ್ಯಾರ್ಥಿ ನಿಲಯದ ವಿದ್ಯಾರ್ಥಿ ಸಂಘದ ಆರಂಭ ಭಾಷಣವನ್ನು ತಾ. 16ರಂದು ನಡೆಯಿತು. ಬೆಳಿಗ್ಗೆ ಶ್ರೀ ದಿನಾಕರ ಹೆಗ್ಡೆಯವರು ಧ್ವಜಾರೋಹಣ ಮಾಡಿದರು. ಸಂಜೆ ಶ್ರೀ ಕೆ. ದೇಜು ಶೆಟ್ಟರ ಅಧ್ಯಕ್ಷತೆಯಲ್ಲಿ ಜರಗಿದ ಸಭೆಯಲ್ಲಿ ವಿದ್ಯಾರ್ಥಿ ಸಂಘದ ಉಪಾಧ್ಯಕ್ಷ ಶ್ರೀ ಎಸ್. ನರೇಂದ್ರ ನಾಥ ಶೆಟ್ಟರು ಸ್ವಾಗತ ಭಾಷಣ ಮಾಡಿದರು. ಶ್ರೀ ಬೆಳ್ತಿ ತರಾಸೀರಾಮ್‌ರಾವರು ಆರಂಭ ಭಾಷಣ ಮಾಡುತ್ತಾ ಸ್ವಾತಂತ್ರ್ಯಾನಂತರ ದೇಶ ಸಾಕಷ್ಟು ಪ್ರಗತಿ ಸಾಧಿಸಿಲ್ಲವಾದರೂ ಈ ಮಾರ್ಗದಲ್ಲಿ ಮುಂದೆ ಹೋಗಬೇಕೆಂದರೆ, ಸ್ವತಂತ್ರ ಭಾರತದಲ್ಲಿ ವಿದ್ಯಾರ್ಥಿಗಳ ಪಾತ್ರ ಹಿರಿದಾದುದೆಂದರು.

ನಿಲಯದ ಕಾರ್ಯದರ್ಶಿ ಶ್ರೀ ಎ. ರಾಮಣ್ಣ ನವರು ಮಾತನಾಡಿ ವಿದ್ಯಾರ್ಥಿಗಳು ತಮ್ಮ ಸಂಘದ ಆರಂಭ ಭಾಷಣ ಹಾಗೂ ಮುಖ್ಯ ಭಾಷಣಗಳ್ಳಿ ಈ ಸ ಮಾಗದ ಹಲವಾರು ಉಪಯುಕ್ತ ಪರಿಣಾಮವನ್ನು ಉಪ್ಪಿ ಕೊಳ್ಳಬೇಕೆಂದರು. ವಿದ್ಯಾರ್ಥಿಗಳು ಚೆನ್ನಾಗಿ ಓದಿ ಉತ್ತಮ ಶ್ರೇಣಿಯಲ್ಲಿ ಪಾಸಾಗಬೇಕೆಂದರು.

ಶ್ರೀ ದಿ ಪಿಕರ ಹೆಗ್ಡೆಯವರ ಭಾಷಣ ಮಾಡಿದ ನಂತರ ಅಧ್ಯಕ್ಷ ಭಾಷಣವಾಗಿ ಕಾರ್ಯದರ್ಶಿ ಶ್ರೀ ಕೆ ಶ್ರೀಧರ ಕುಮಾರ ವಂದಿಸಿದರು. ಯವರು ವಂದನೆಗಳನ್ನರ್ಪಿಸಿದರು.

ಬೋರ್ಡ್ ಗರ್ಲ್ಸ್ ಹೈಸ್ಕೂಲಿನ ಉದ್ಘಾಟನೆ

ಉಡುಪಿ ತಾಲೂಕು ಬೋರ್ಡಿನ ಆಶ್ರಯದಲ್ಲಿ ಕೆಂಜನಾಪುರದಲ್ಲಿ ಸ್ಥಾಪಿಸಲ್ಪಟ್ಟಿರುವ ಬೋರ್ಡ್ ಗರ್ಲ್ಸ್ ಹೈಸ್ಕೂಲಿನ ಉದ್ಘಾಟನಾ ಸಮಾರಂಭವು ಜಿಲ್ಲಾಧಿಕಾರಿ ಶ್ರೀ ಎಚ್. ಎಲ್. ನಾಗೇಗೌಡರಿಂದ ನೆರವೇರಿತು. ಶ್ರೀ ಎಂ. ಮಧ್ವರಾಜ ಎಂ.ಎಲ್.ಎ. ಅವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

ಪ್ರಾರಂಭದಲ್ಲಿ ಡಾ| ಬಿ. ಎಸ್. ಕಲ್ಕೂರರು ಸ್ವಾಗತಿಸಿದರು. ಶ್ರೀ ಕೆ. ಶ್ರೀನಿವಾಸ ನಾರಾಯಣ ವರದಿಯೊಪ್ಪಿಸಿದರು. ಮುಖ್ಯೋಪಾಧ್ಯಾಯಿನಿ ಶ್ರೀಮತಿ ರತ್ನಾಬಾಯಿಯವರು ಸಂದೇಶಗಳನ್ನೋದಿದರು. ಶ್ರೀ ಎ. ಜೆ. ಅಲ್ಸೆಯವರು ಪ್ರಸ್ತಾವನೆಗೈದರು.

ಜಿಲ್ಲಾಧಿಕಾರಿಗಳು ಉದ್ಘಾಟಿಸುತ್ತಾ, ಗ್ರಾಮಾಂತರ ಪ್ರದೇಶಗಳಲ್ಲಿ ಇಂಥ ಪ್ರೌಢಶಾಲೆಗಳನ್ನು ತೆರೆಯುವುದರಿಂದ ಗ್ರಾಂಥಿಕಜ ತತ್ವದಂತೆ ಆಯಾಯ ಪ್ರದೇಶಗಳು ಮುಂದೆ ಬರಲು ಸಾಧ್ಯವಿದೆಯೆಂದರು. ಅಧ್ಯಕ್ಷ ಭಾಷಣದ ನಂತರ ಶ್ರೀ ಕೆ. ಶ್ರೀನಿವಾಸರಾಯರು ವಂದನಾರ್ಪಣೆಗೈದರು.

ತಿದ್ದುಪಡಿ

ಕಳೆದ ಸಂಚಿಕೆಯ 14ನೇ ಪುಟದಲ್ಲಿ ಪ್ರಕಟವಾದ ಉಡುಪಿ ಮುನ್ಸಿಫ್ ಕೋರ್ಟಿನ O. P. ನಂಬ್ರ 17/66ರ ಎದ್ವರ್ಟೈಸ್ಮೆಂಟಿನಲ್ಲಿ ... ವಿಶ್ವನಾಥ ಹೆಗ್ಡೆಯವರ ನೋಟೀಸಿನ 7ನೇ ಪಕ್ಷಕಾರರಲ್ಲಿ ... ಎಂದು ಓದಿಕೊಳ್ಳಬೇಕಾಗಿದೆ. (ಸಂ. ಸ.)

ಶ್ರೀ ಕೆ. ಕೆ. ಶೆಟ್ಟಿ, ಎಂ.ಎಲ್.ಸಿ. ಯವರ
ನವಕಾಲ ಕೈಗೊಟ್ಟ ಪುಸ್ತಕಗಳು

ದೇಶ ಭಕ್ತ	1=25
ಪ್ರೇಮ ವಿಷಯ	1=00
ಮುಂದಿನ ದೇವರು	0=25
ವ್ಯಭಿಚಾರಿಣಿ ಯಾರು?	1=00
ಹುಡುಗಿ ಗಂಡನಾದರೆ?	0=25
ಪುರುಷವಧು	0=25
ಸನ್ಯಾಸಿಯ ಸೋಗಿನಲ್ಲಿ	0=75
ಸಂಶಯ ಪಿಶಾಚಿ	0=75
ಕುಶಲವ	0=50
ಚಿತ್ರಾಂಗದೆ	0=60

ಪ್ರತಿಗಳು ಸಿಗುವ ಸ್ಥಳಗಳು:—
ನವಯುಗ ಪ್ರೆಸ್, ಉಡುಪಿ.
ನವಭಾರತ ಬುಕ್ ಡಿಪೊ, ಉಡುಪಿ.

ಬೆಳ್ತಂಗಡಿ ಮುನ್ಸಿಫ್ ಕೋರ್ಟಿನಲ್ಲಿ

O. S. 65/66.

ತಿಮ್ಮಯ ಅಜಿಲ — ವಾದಿ
ಮತ್ತು
ಧನಕೀರ್ತಿ ಶೆಟ್ಟಿ — ಎದ್ರಿ.

ಬೆಳ್ತಂಗಡಿ ತಾಲ್ಲೂಕು ... ಗ್ರಾಮದ ಪಾಂಡಿ ಎಂಬಲ್ಲಿರುವ ಸಂಕಪ್ಪ ಶೆಟ್ರು ಮಗ ಧನಕೀರ್ತಿ ಶೆಟ್ಟಿಯವರಿಗೆ—

ಕೋರ್ಟು ಮುಖಾಂತ್ರ ತಿಳಿಯಪಡಿಸುವುದೇನೆಂದ್ರೆ—

ನಿಮ್ಮ ಮೇಲಿನ ವ್ಯಾಜ್ಯವು ತಾ. 14.9.66ಕ್ಕೆ ಇಟ್ಟಿರುತ್ತದೆ. ನೀವು ಆ ದಿವಸ ಹಾಜರಾಗಿ ನಿಮ್ಮ ಆಕ್ಷೇಪಣೆ ಏನಾದರೂ ಇದ್ದರೆ ಬೆಳಿಗ್ಗೆ 11 ಗಂಟೆಗೆ ಸ್ವತಹ ಯಾ ವಕೀಲರ ಮುಖಾಂತ್ರ ಹಾಜರಾಗತಕ್ಕದ್ದು. ತಪ್ಪಿದಲ್ಲಿ ನಿಮ್ಮನ್ನು ಗೈರು ಹಾಜರು ಮಾಡಿ ಮೇಲಿನ ದಾವೆಯನ್ನು ತೀರ್ಮಾನಿಸಲಾಗುವುದು.

(Sd) N. J KADAMBA
Advocate for Plaintiff
ಬೆಳ್ತಂಗಡಿ, 24—8—66.

In the Court of the Principal Munsiff, Puttur, S. K.

S. C. No. 59/1966.

K. Kunhali Beary ... Plaintiff
Vs.
Narayana Rai ... Defendant.

Please take notice that the above suit filed against you is stands posted to 14—9—1966 for your appearance. If you fail to appear in Court at 11-00 A. M. on that day the same will be decided in your absence.

(By order of Court)

K. P. Abdullah,
Advocate for Plff.
Puttur, S. K. 26-8-1966.

ಬಿಜಾಪುರದಲ್ಲಿ ಕೆನರಾ ಅಸೋಸಿಯೇಶನ್

ಬಿಜಾಪುರ, ದಿನಾಂಕ 15—8—66

ಬಿಜಾಪುರದಲ್ಲಿರುವ ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡದ ಜನರು ಶ್ರೀಯುತ ಆರ್. ಆರ್. ಕೊಡಿಕಲ್ ವಕೀಲರ ಅಧ್ಯಕ್ಷತೆಯಲ್ಲಿ ಸಭೆ ಸೇರಿ 'ದಿ ಕೆನರಾ ಅಸೋಸಿಯೇಶನ್' ಎಂಬ ಸಂಘವನ್ನು ಸ್ಥಾಪಿಸಿದರು. 1966-67 ನೇ ವರ್ಷದ ಕಾರ್ಯಕಾರೀ ಸಮಿತಿಯು ಈ ಕೆಳಗಿನಂತೆ ಅವಿರೋಧವಾಗಿ ಆರಿಸಲ್ಪಟ್ಟಿತು.

ಶ್ರೀಗಳಾದ ಆರ್. ಆರ್. ಕೊಡಿಕಲ್ (ಅಧ್ಯಕ್ಷ), ಎಂ. ಸದಾಶಿವ ಉಡ್ಪಿಕರ್ (ಉಪಾಧ್ಯಕ್ಷ), ಕೆ. ರಾಮಚಂದ್ರ ಭಕ್ತ (ಕಾರ್ಯದರ್ಶಿ), ಕೆ. ರಾಮಚಂದ್ರ ಭಟ್ (ಜತೆ ಕಾರ್ಯದರ್ಶಿ), ಕೆ. ಚಂದ್ರಶೇಖರ ಅಡಿಲ (ಕೋಶಾಧಿಕಾರಿ), ಕೆ. ಬಾಬುರಾವ್, ಕೆ. ಅನಂತ ಭಟ್ ಬಿ. ಉಮೇಶರಾವ್, ಎಂ. ಅಡಮುಡ್, ವಿ. ಎಸ್. ರ್‍ಯಾನುಭೋಗ್, ಶ್ರೀಮತಿ ರಾಧಾ ಎಸ್. ಬೋಳಾರ್ (ಸದಸ್ಯರು)

ಲಘೂಪಹಾರ ಮತ್ತು ಸಂಗೀತ, ನೃತ್ಯ ಮೊದಲಾದ ಮನರಂಜನಾ ಕಾರ್ಯಕ್ರಮಗಳ ನಂತರ ಜನಗಣಮನದೊಂದಿಗೆ ಸಭೆಯು ಮುಕ್ತಾಯಗೊಂಡಿತು.

ಆಡಳಿತೆ ಕಮಿಟಿ ಸಭೆ

ಮಂಗಳೂರು, ತಾ 18—8—66ರಂದು ಸೌತ್ ಕೆನರ್ ಚೇಂಬರ್ ಆಫ್ ಅಗ್ರಿಕಲ್ಚರಿನ ಆಡಳಿತೆ ಸಮಿತಿಯ ಸಭೆಯು ಅಧ್ಯಕ್ಷ ಶ್ರೀ ಕೆ. ಕೆ. ಶೆಟ್ಟಿ ಎಂ. ಎಲ್. ಸಿ. ಇವರ ಅಧ್ಯಕ್ಷತೆಯಲ್ಲಿ ಜರಗಿತು. ಕಾರ್ಯದರ್ಶಿ ಶ್ರೀ ಕೆ. ಸಿ. ಶೆಟ್ಟರು ಚೇಂಬರಿನ ಕಾರ್ಯಚಟುವಟಿಕೆಗಳ ವರದಿಯನ್ನೊಪ್ಪಿಸಿದ ಬಳಿಕ ಈ ಕೆಳಗಿನ ರಣವುಗಳು ಸರ್ವಾನುಮದಿಂದ ಮಂಜೂರಾದವು.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ "ಪವರ್ ಟಿಲ್ಲರ್" ಉಳುವ ಯಂತ್ರವನ್ನು ಕೃಷಿಕರು ಉಪಯೋಗಿಸಿಕೊಂಡು, ಆ ಮೂಲಕ ಕೃಷಿ ಉತ್ಪತ್ತಿಯನ್ನು ಹೆಚ್ಚಿಸಿಕೊಳ್ಳಲು ಬಹಳ ಅನುಕೂಲವಿರುವುದರಿಂದ ಹಾಗೂ ಜಿಲ್ಲೆಯಾದ್ಯಂತ ನೂರಾರು ಟಿಲ್ಲರುಗಳಿಗೆ ಬೇಡಿಕೆಯಿರುವುದರಿಂದ, ಜಿಲ್ಲೆಯ ರೈತರಿಗೆ ಕೂಡಲೇ ಕಡಿಮೆ ಪಕ್ಷ 500 ಪವರ್ ಟಿಲ್ಲರ್ ಗಳನ್ನು ಒದಗಿಸಬೇಕೆಂದೂ ಅಧಿಕ ಕೃಷಿ ಉತ್ಪಾದನಾ ದೃಷ್ಟಿಯಿಂದ ಸರಕಾರವು ಈ ಜಿಲ್ಲೆಯ ರೈತರಿಗೆ ಆದಷ್ಟು ಹೆಚ್ಚಿನ, ವಿದ್ಯುಚ್ಛಕ್ತಿ ಮತ್ತು ಡೀಸಿಲ್ ಚಾಲಿತ ಪಂಪು ಸೆಟ್ಟುಗಳನ್ನು ಕೂಡಲೇ ಒದಗಿಸಿಕೊಡುವ ಏರ್ಪಾಡನ್ನು ಕೈಗೊಳ್ಳಬೇಕೆಂದೂ, ಅದೇ ರೀತಿ ಕೃಷಿ ಕೆಲಸಕ್ಕೆ ಸರಿಯಾಗಿ ವಿದ್ಯುಚ್ಛಕ್ತಿಯನ್ನು ಒದಗಿಸಿಕೊಡುವ ವಿಶೇಷ ಏರ್ಪಾಡನ್ನು, ಇವುಗಳಿಗೆ ಬೇಕಾಗುವ ಹಣವನ್ನು ಕೂಡಲೇ ಮಂಜೂರು ಮಾಡಬೇಕೆಂದೂ ಲೆವಿ ಪಡಕೊಳ್ಳುವುದೆ ಆದಲ್ಲಿ, ಕನಿಷ್ಠ ಕರಗತಿಯ ಭತ್ತಕ್ಕೆ ಕ್ವಿಂಟಾಲು 10 ರೂಪಾಯಿ

85/- ಆದರೂ ನಿಗದಿ ಮಾಡುವಂತೆಯೂ, ಈ ಜಿಲ್ಲೆಯ ಮಟ್ಟಿಗೆ, ರೈತ ಬಯಸಿದಲ್ಲಿ, ಹಾಗೂ ಲೆವಿ ಮಾಡುವುದೇ ಆದಲ್ಲಿ ಅದನ್ನು ಅಕ್ಕಿಯ ರೂಪದಲ್ಲಿ ಪಡೆಯುವ ನಿರ್ಧಾರವನ್ನು ಜ್ಯಾರಿಗೆ ತರಬೇಕೆಂದೂ ಸರಕಾರವನ್ನು ಕೇಳಿಕೊಳ್ಳುವ ನಿರ್ಣಯಗಳಾದುವು.

ಚೇಂಬರಿನ ವತಿಯಿಂದ ಸ್ಥಾಪಿಸಿ ನಡೆಸಲಾಗುವ "ಮಾದರಿ ಕೃಷಿ ಕ್ಷೇತ್ರ"ಕ್ಕೋಸ್ಕರ ಆರಿಸಿರುವ ಸುಮಾರು 200 ಎಕ್ರೆ ವಿಸ್ತೀರ್ಣದ ಜಾಗವನ್ನು ಕೃಷಿ ಇಲಾಖೆಯ ಡೆಪ್ಯೂಟಿ ಡೈರೆಕ್ಟರರವರು ಸಂದರ್ಶಿಸಿ ವ್ಯಕ್ತಪಡಿಸಿರುವ ಅಭಿಪ್ರಾಯವು ತುಂಬಾ ಉತ್ತೇಜನಕಾರಿಯಾಗಿರುವುದರಿಂದ, ಈ ಕ್ಷೇತ್ರವನ್ನು ಅಭಿವೃದ್ಧಿಪಡಿಸುವ ಬಗ್ಗೆ ಬೇಕಾದ ಸೂಕ್ತ ಕ್ರಮಗಳನ್ನು ಕೂಡಲೇ ಕೈಗೊಳ್ಳುವುದೆಂದು ತೀರ್ಮಾನಿಸಲಾಯಿತು.

ಚಿಕ್ಕಮಗಳೂರಲ್ಲಿ 'ಭಾರತ್ ಕ್ಲಿನಿಕ್'ನ ಪ್ರಾರಂಭೋತ್ಸವ

ತಾ. 27—8—66ರಂದು ಡಾ. ಎ. ಎಂ. ಶೆಟ್ಟಿ, ಬೀರೂರು ಇವರು ಚಿಕ್ಕಮಗಳೂರಲ್ಲಿ ನೂತನವಾಗಿ ತೆರೆದ 'ಭಾರತ್ ಕ್ಲಿನಿಕ್' ಎಂಬ ದವಾಖಾನೆಯ ಪ್ರಾರಂಭೋತ್ಸವವು ವಿಜೃಂಭಣೆಯಿಂದ ಜರಗಿತು. ಊರು ಪರವೂರುಗಳಿಂದ ಹಲವಾರು ವೈದ್ಯರೂ ಗಣ್ಯವ್ಯಕ್ತಿಗಳೂ ಆಗಮಿಸಿದ್ದರು.

"ಕೃಷಾನತರಂಗ"ೋದ್ಘಾಟನೆ

ಕಟೀಲು, "ಯುಗಪುರುಷ" ಪ್ರಕಟಣಾಲಯದ ೨೩ನೆಯ ಪ್ರಕಟಣೆಯಾದ ಶ್ರೀಮತಿ "ಗಿರಿಬಾಲೆ"ಯವರ ಶ್ರೀ ವಾದಿರಾಜ ಗುರುವರ ಕೃಷಾನತರಂಗವೆಂಬ ಸತ್ಕೃತಿಯ ಉದ್ಘಾಟನಾ ಸಮಾರಂಭವು ತಾ. ೨೦-೮-೬೬ ರಂದು ಕಟೀಲು ಶ್ರೀ ದುರ್ಗಾಪರಮೇಶ್ವರೀ ದೇವಾಲಯದಲ್ಲಿ ಆಡಳ್ತೆ ಮೊಕ್ತೇಸರ ಶ್ರೀ ಕೆ. ಶ್ರೀಧರ ಸೆಟ್ಟರ ಅಧ್ಯಕ್ಷತೆಯಲ್ಲಿ ಪ್ರಧಾನ ಅರ್ಚಕ ಶ್ರೀ ಗೋಪಾಲಕೃಷ್ಣ ಅಸ್ರಣ್ಣರ ಹಸ್ತದಿಂದ ನೆರವೇರಿಸಲ್ಪಟ್ಟಿತು.

ದಿ ವಿಜಯಾ ಬೇಂಕ್ ಲಿಮಿಟೆಡ್, ಬೈಂದೂರು.

ರಿಜಿಸ್ಟರ್ಡ್ ಆಫೀಸು: ಲೈಟ್ ಹೌಸ್ ಹಿಲ್ ರೋಡು, ಮಂಗಳೂರು-3.

ಏಲಂ ನೋಟಿಸು

ಈ ಕೆಳಗೆ ಹೆಸರು ಕಾಣಿಸಿದ ಮಹನೀಯರು ನಮ್ಮ ಶಾಖೆಯಿಂದ ಚಿನ್ನಾಭರಣ ನಗಗಳ ಈಡಿನ ಮೇಲೆ ಪಡೆದ ಸಾಲವನ್ನು ವ್ಯಾದೆಗೆ ಸರಿಯಾಗಿ ಮರುಪಾವತಿ ಮಾಡದೆ ಇದ್ದುದರಿಂದ ಸದ್ರಿಯವರಿಗೆ ರಿಜಿಸ್ಟ್ರಿ ನೋಟೀಸು ಮೂಲಕ ಕೇಳಿಕೊಂಡಿದ್ದಕ್ಕೆ ಕೆಲವರಿಗೆ ಬಿಟ್ಟ ರಿಜಿಸ್ಟ್ರಿ ನೋಟೀಸುಗಳು ಕಾಗಹಾಂತರಗಳಿಂದ ನಮಗೇನೇ ವಾಪಾಸು ಬಂದಿರುವುದರಿಂದಲೂ, ಇನ್ನು ಕೆಲವರು ಯಾವುದೇ ರೀತಿಯ ಕ್ರಮ ತೆಗೆದುಕೊಳ್ಳದೆ ಇದ್ದುದರಿಂದಲೂ, ಸದ್ರಿಯವರಿಗೆ—ವ—ಅವರ ವಾರೀಸುದಾರರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ಸಾಲದ ಬಾಬ್ತು ಬೇಂಕಿಗೆ ಸಲ್ಲತಕ್ಕ ಮೊಬಲಗನ್ನು ಇದೇ ಬರುವ ತಿಂಗಳ ತಾರೀಕು 15—9—66 ಒಳಗಾಗಿ ಬೇಂಕಿಗೆ ಮರುಪಾವತಿ ಮಾಡಲು ತಪ್ಪಿದಲ್ಲಿ, ಸದ್ರಿಯವರು ನಮ್ಮಲ್ಲಿ ಅಡವಿಟ್ಟ ನಗಗಳನ್ನು ತಾರೀಕು 22—9—1966 ಅಪರಾಹ್ನ ಗಂಟೆ 3ಕ್ಕೆ ಸರಿಯಾಗಿ ಬೇಂಕಿನ ವಠಾರದಲ್ಲಿ ಬಹಿರಂಗ ಹರಾಜು ಮಾಡಲಾದೀತು—ಯಾ—ಬೇಂಕಿಗೆ ಯುಕ್ತ ಕಂಡ ಇತರ ದಿನಗಳಲ್ಲಿ ಪುನಃ ನೋಟೀಸು ಕೊಡದೇನೇ ಬಹಿರಂಗ—ಯಾ—ಖಾಸಗಿಯಾಗಿ ಹರಾಜು ಮಾಡಲಾದೀತು. ಈ ಸಂಬಂಧ ಬೇಂಕಿಗೆ ಉಂಟಾಗಬಹುದಾದ ಸಕಲ ಖರ್ಚು—ವ—ನಷ್ಟವನ್ನು ತೆರಲು ಸದ್ರಿ ಸಾಲಗಾರರು ಜವಾಬುದಾರರಾಗುತ್ತಾರೆ. ತಿಳಿದಿರಲಿ.

ಸಾಲದ ಜಂಚಾ ನಂಬರು	ಸಾಲಗಾರನ ಹೆಸರು ಮತ್ತು ವಿಳಾಸ	ಮೊಬಲಗು ಬಡ್ಡಿ ಸಮೇತ 30-6-66ರ ವರೆಗೆ ರೂ. ಪೈ.
567/64	ನಾರಾಯಣ ಶೇರೆಗಾರ, ಶ್ರೀ ಉಗ್ರಾಣಿ ತಿಮ್ಮಪ್ಪ ಶೇರೆಗಾರರ ಮಗ ಬೀಜೂರು ಗ್ರಾಮ, ಪೋಸ್ಟ್ ಬೀಜೂರು. (ದ. ಕ.)	18 - 90
585/64	ಶ್ರೀ ಚಿಕ್ಕ, ಅಬ್ಬಕ್ಕನ ಮಗ, ಹೆರಂಜಾಲು ಬಲನಾಡಿ ಮನೆ ಹೆರಂಜಾಲು ಗ್ರಾಮ, P. O. ಹೆರಂಜಾಲು. (ದ. ಕ.)	21 - 55
599/64	ಶ್ರೀ ನಾಗಯ್ಯ ಶೆಟ್ಟಿ, ವೆಂಕಪ್ಪ ಶೆಟ್ರ ಅಳಿಯ ಬೀಜೂರು ಗ್ರಾಮ, P. O. ಬೀಜೂರು. (ದ. ಕ.)	203 - 65
678/64	ಶ್ರೀ H. ಗಣಪಯ್ಯ ಶೇರೆಗಾರ್, ಶ್ರೀ ಬೊಗ್ಗಯ್ಯ ಶೇರೆಗಾರರ ಮಗ, ಮಯ್ಯಾಡಿ, ಬೈಂದೂರು ಗ್ರಾಮ P.O. ಮಯ್ಯಾಡಿ (ದ. ಕ.)	28 - 90
741/64	ಶ್ರೀ ಮಂಜ, ಬೇಡುವಿನ ಅಳಿಯ, ಬೀಜೂರು ಗ್ರಾಮ. P. O. ಬೀಜೂರು. (ದ. ಕ.)	225 - 60
71/65	ಅಪ್ಪಯ್ಯನ ನಾಗಪ್ಪ ಶೇರೆಗಾರ, ತಿಮ್ಮಪ್ಪ ಶೇರೆಗಾರರ ಮಗ ಪಡುವರಿ ಗ್ರಾಮ. P. O. ಪಡುವರಿ. (ದ. ಕ.)	50 - 75
81/65	ಶ್ರೀ ಮಿರ್ಜಾ ಮೀರಾ ಬೇಗ್, ಶ್ರೀ ಮಿರ್ಜಾ ಬುಡಾನ್ ಬೇಗರ ಮಗ, ಮುಸ್ಲಿಮರ ಕೇರಿ, P. O. ಶೀರೂರು (ದ. ಕ.)	31 - 30
82/65	ಹೊನ್ನಯ್ಯನ ಮಾಳ್ಯಯ್ಯ ಶೇರೆಗಾರ್, ಶ್ರೀ ಅಣ್ಣಪ್ಪ ಶೇರೆಗಾರರ ಮಗ, ಹೊನ್ನಯ್ಯನ ಮನೆ, ಎಡ್ತರೆ ಗ್ರಾಮ, P.O. ಎಡ್ತರೆ (ದ. ಕ.)	36 - 55
148/65	ಡೇವಿಸ್ ನಜ್ರೆತ್, ಶ್ರೀ ಡಿಯೊಗ್ ನಜ್ರೆತ್‌ರ ಮಗ, ಪಡುವರಿ ಗ್ರಾಮದ ಕಳ್ವಾರ ಹಿತ್ತಲು, P. O. ಪಡುವರಿ (ದ. ಕ.)	43 - 35
223/65	ಅನಂತ ಆಚಾರಿ, ಶ್ರೀ ವೆಂಕಪ್ಪ ಆಚಾರಿಯವರ ಮಗ, ಕಿರಿಮಂಜೇಶ್ವರ ಗ್ರಾಮದ ವೆಂಕಪ್ಪಾಚಾರಿಯವರ ಮನೆ, P. O. ಕಿರಿಮಂಜೇಶ್ವರ (ದ. ಕ.)	150 - 95
241/65	ಕೃಷ್ಣ, ತಿಮ್ಮಪ್ಪನವರ ಮಗ, ಪಡುವರಿ ಗ್ರಾಮದ ಸುಕ್ಕಿನುಂಡೆ ಮನೆ, P. O. ಪಡುವರಿ (ದ. ಕ.)	82 - 05
247/65	ಶ್ರೀ ಮಂಜಯ್ಯ ಬಿಲ್ಲವ, ಮರ್ಲ ಬಿಲ್ಲವನ ಅಳಿಯ, ಶಶಿ ಹಿತ್ತಲು, ಬೈಂದೂರು ಗ್ರಾಮ, P. O. ಮಯ್ಯಾಡಿ (ದ. ಕ.)	37 - 75
268/65	ಶ್ರೀ ಮರ್ಲ, ಮಂಜಯ್ಯನವರ ಅಳಿಯ, ಪಡುವರಿ ಗ್ರಾಮದ ಶಿಲ್ಲಕುಳಿ ಮನೆ, P. O. ಪಡುವರಿ (ದ. ಕ.)	82 - 00
285/65	ಪೊಂಗೆ ಹಸನ, ಅಬ್ದುಲ್ ಕಾದರನವರ ಮಗ, ಶಿರೂರು ಗ್ರಾಮದ ಕಳಿಹಿತ್ತಲು, P.O. Shiroor (ದ. ಕ.)	25 - 70
289/65	ಶ್ರೀ ನಾಗಪ್ಪ ಶೇರೆಗಾರ, ವೆಂಕಟರಮಣ ಶೇರೆಗಾರರ ಮಗ, ಬೈಂದೂರು ಗ್ರಾಮದ, ಗದ್ದೆ ಮನೆ, P.O. ಮಯ್ಯಾಡಿ	81 - 95
307/65	ಅನಂತ ಆಚಾರಿ, ವೆಂಕಪ್ಪ ಆಚಾರಿಯವರ ಮಗ ಕಿರಿಮಂಜೇಶ್ವರ ಗ್ರಾಮದ ನಾಗೂರು. P. O. ಕಿರಿಮಂಜೇಶ್ವರ	60 - 30
338/65	ಶ್ರೀ ಕಟ್ಟೆ ಅಹಮ್ಮದ್, ಈಸೂಪ್ ಸಾಹೇಬರ ಮಗ, ಹಡುವಿನ ಕೋಡಿ, ಶಿರೂರು ಗ್ರಾಮ, P. O. ಶಿರೂರು, (ದ. ಕ.)	31 - 80
356/65	ಲಿಯೋನ್ ಸಂತಾನ ರೆಬೆರೊ, ಅಂತೋಣಿ ರೆಬೇರ ಮಗ, ಪಡುವರಿ ಗ್ರಾಮದ ಕಳ್ವಾರಿ ಹಿತ್ತಲು, P. O. ಪಡುವರಿ. (ದ. ಕ.)	37 - 80

ಆಫೀಸು:— ಬೈಂದೂರು, 25—8—1966

ಎ. ವಿಠಲ ಶೆಟ್ಟಿ, ಮೇನೇಜರ್.

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

S. C. 256/1966

ಯಡ್ತರೆ ಕೃಷ್ಣಪ್ಪ ಶೆಟ್ಟಿ ಬ್ರದರ್ಸ್ ಮತ್ತು ಕಂಪೆನಿ ಬಗ್ಗೆ ಪ್ರೊಪ್ರೈಟರ್ Y. ನಾರ್ಯಣ ಶೆಟ್ಟಿ —ವಾದಿರು.

ಕುರಿತು

ಯಂಕ್ರು ಹೆಂಗ್ಸು ಕೂಡಾ ಪ್ರತಿವಾದಿರು.

ಸದ್ರಿ ವ್ಯವಹಾರದಲ್ಲಿ,

2ನೇ ಪ್ರತಿವಾದಿ ಡೊಟ್ಟಯ್ಯ, ಮಲ್ಲಿ ಹೆಂಗ್ಸಿನ ಮಗ, ಕುಂದಾಪುರ ತಾಲ್ಲೂಕು ಪಡುವರಿ ಗ್ರಾಮದ ದೊಂಬೆ, ಇವರಿಗೆ—

ನೀವು ಮೇಲ್ಕಂಡ ವಾದಿಯ ಬಾಬ್ತು ಅಂಗಡಿಯಲ್ಲಿ ತಾ. 7—8—1963ರಲ್ಲಿ ನಡೆಸಿದ ಲೇವಾದೇವಿ ಬಾಬ್ತು ಸಾಲ ಬಂದದ್ದು ಹೋಗ್ತ ವಿ.ಕ್ಕ ಅಸಲು ಬಡ್ಡಿ ಹಣ ರೂ. 164—90 ಪೈಸೆಗಳ ಬಗ್ಗೆ ಸದ್ರಿಯವರು ಮೇಲ್ಕಂಡ ಕೋರ್ಟಿನಲ್ಲಿ ದಾವಾ ದಾಖಲು ಮಾಡಿದ್ದು, ಸದ್ರಿ ದಾವೆಯು ಇದೇ ತಾ. 22—9—1966ಕ್ಕೆ ನಿಮ್ಮ ಹಾಜರಾತಿ ಬಗ್ಗೆ ಇಟ್ಟಿರುತ್ತದೆ. ಈ ಕುರಿತು ನಿಮ್ಮ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಸದ್ರಿ ದಿವಸ ಹಗಲು 11ಗಂಟೆಗೆ ನೀವು ಸ್ವತಹ ಪ್ಲೀಡರ್ ಮೂಲಕ ಹಾಜರಾಗಿ ಜವಾಬು ಕೊಡತಕ್ಕದ್ದು. ತಪ್ಪಿದಲ್ಲಿ ನಿಮ್ಮ ಗೈರು ಹಾಜರಿಯಲ್ಲಿ ದಾವೆಯನ್ನು ಏಕಪಕ್ಷವಾಗಿ ತೀರ್ಮಾನಿಸಲಾದೀತು, ಎಂತ ತಿಳಿದಿರಲಿ.

(ಕೋರ್ಟು ಹುಕುಂ ಮೇರೆಗೆ)

ಎ. ರಾಜೀವ ಶೆಟ್ಟಿ, ಬಿ. ಎ., ಬಿ. ಕಾಂ., ಬಿ. ಎಲ್.,
ವಾದಿಯ ಪರ ಎಡ್ವಕೇಟ್,
ಕುಂದಾಪುರ, ತಾ. 27—8—66.

ಉಡುಪಿ ಕರ್ನಾಟಕ ಸಂಘದ

ಒಂದೊಂದು ರೂಪಾಯಿ ಬೆಲೆಯ

ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ

ಯು. ರಾಘವೇಂದ್ರ ಆಚಾರ್ಯ, ಎಂ.ಎ.

ಸಾಮಾನ್ಯ ರೋಗಗಳು

ಡಾ| ಕೆ.ಎಲ್.ಐತಾಳ, ಎಂ.ಬಿ.ಬಿ.ಎಸ್.

ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯ ಸೂಚಿಸುವ ಉಪಯುಕ್ತ ಪುಸ್ತಕ

ಭೌತಿಕ ದರ್ಶನ

ಬಡೆಕ್ಕಿಲ ಕೃಷ್ಣ ಭಟ್ಟ, ಎಲ್. ಎಲ್. ಬಿ.

ಉಡುಪಿಯಲ್ಲಿ ಪ್ರತಿಗಳು ಸಿಗುವ ಸ್ಥಳ—
ನವಭಾರತ ಪುಸ್ತಕ ಭಂಡಾರ, ಉಡುಪಿ

ಯಾವತ್ತೂ ವಾಚನ ಭಂಡಾರಗಳಿಗೆ

ಯೋಗ್ಯವಾದ ನವೀನ ಪುಸ್ತಕಗಳು

ಬಿರಿದ ಮುಗುಳು	1—50
ಅನುವಾದಿತ ಕತೆಗಳು	1—20
ಪಂಚ ಸುಮನ	1—20
ಮುತ್ತಿನ ಮಾಲೆ	1—80
ಹೂ ಗೊಂಚಲು	1—75
ಪಂಚಗಜ್ಜಾಯ	1—75
ಏಕಾಂಕ ನಾಟಕಗಳು	1—00
ಭಾರತದ ನಾಲ್ಕುಮುಖಿಗಳು	1—00
ದೇಶ ವಿದೇಶದ ಮಹಾಜೀವಿಗಳು	1—80
ಹೆಂಗುಸರ ಕತೆಗಳು	2—00
ನುಡಿಮುತ್ತುಗಳು	1—20

ಕಟಲಾಗಿಗೆ ಬರೆಯಿರಿ

ನವಭಾರತ ಪುಸ್ತಕ ಭಂಡಾರ,
ಉಡುಪಿ.

ಪೂಜಾ ಫಲ

(ಎರಡನೇ ಪುಟದಿಂದ)

ಫಲಕಾರಿಯಾಗಲಿಲ್ಲ. ಸಾಹಿತ್ಯ ಪ್ರಿಯರಿಗೆ ಪ್ರಿಯವಾದ ಒಂದು ಕನ್ನಡ ಸಾಹಿತ್ಯ ಸರಸ್ವತಿ ಶ್ರೇಷ್ಠ ಪುಷ್ಪವೊಂದನ್ನು ಧರಿಸಲೆಂದು. ಮುದ್ರಣಾಲಯದವರು ಮಹಾಬಲಯ್ಯನ ಭರವಸೆ, ಪ್ರಸಾದನ ನಂಬಿಕೆಯ ಮೇಲೆ ಮುದ್ರಣಕಾರ್ಯ ಮುಗಿಸಿ ಪ್ರತಿಗಳನ್ನು ಸಿದ್ಧ ಪಡಿಸಿದರು.

ಮುದ್ರಣಾಲಯದಿಂದ ಕಾದಂಬರಿಯ ಪ್ರತಿಗಳು ಹೊರ ಬರುವ ಮುಂಚೆಯೇ ಮಹಾಬಲಯ್ಯ ಹಣ ಕೊಡಲು ನಿರಾಕರಿಸಿದ. ಪ್ರಸಾದ ದಿಗ್ಭ್ರಾಂತನಾದ. ಅವನ ಬೇಡಿಕೆಗೆ ಬೆಲೆ ಬರಲಿಲ್ಲ. ಪ್ರಸಾದನನ್ನು ದೊಡ್ಡ ಚಿಂತೆ ಆವರಿಸಿತು. ಹಣ ಒದಗಿಸುವ ಬಗೆ ಹೇಗೆ? ಇಲ್ಲವಾದಲ್ಲಿ ಗೌರವ, ಘನತೆ, ನಂಬಿಕೆ, ಹಾನಿ ಎಂದು. ಮಹಾಬಲಯ್ಯ ಮೊದಲು ಭರವಸೆ ಕೊಟ್ಟು ವಂಚಿಸಿದ ಘಟನೆಗಳು ಬೇರಾದಷ್ಟಿದ್ದವು. ಮುದ್ರಣಾಲಯದ ಮಾಲೀಕರು ಪ್ರಸಾದನಿಗೆ "ಹಣವನ್ನು ಸಕಾಲದಲ್ಲಿ ತಲುಪಿಸಿ, ಪ್ರತಿಗಳನ್ನು ಕೊಂಡು ಹೋಗಿ" ಎಂದು ತಿಳಿಸಿದರು. ಕ್ರಮೇಣ ಪ್ರಸಾದನಿಗೆ ತನ್ನ ಅಭ್ಯುದಯವನ್ನು ಸಹಿಸದ ಕೆಲವು ಹಿರಿಯ ಸಾಹಿತಿಗಳು ಮಹಾಬಲಯ್ಯನಿಗೆ ನೆರವು ನೀಡಿದ್ದಾರೆ ಎಂದು ತಿಳಿಯ ಬಂತು.

ಪ್ರಸಾದ ನಿಸ್ಸಹಾಯಕನಾಗಿದ್ದ. ಕೆಲವು ಪ್ರತಿಗಳೊಂದಿಗೆ ಹತ್ತಾರು ಪ್ರಕಾಶಕರ ಅಂಗಡಿ ಬಾಗಿಲಿಗೆ ಅಲೆದ. ಬೇರೆ ಊರಿನ ಹತ್ತಾರು ಪ್ರಕಾಶಕರಿಗೆ ಪ್ರತಿಗಳನ್ನು ಹಂಚಿ ತನ್ನನ್ನು ಕೈ ಬಿಡದೆ ಕಾಪಾಡ ಬೇಕೆಂದು ಪ್ರಾರ್ಥಿಸಿದ. ಅವನ ಬೇಡಿಕೆಗೆ ಸಾವಿರ ರೂಪಾಯಿಗಳನ್ನು ಕೊಡಲು ಕೇಶವಯ್ಯನವರು ಸಿದ್ಧವಿದ್ದರು. ಆದರೆ ಸ್ವಾಭಿಮಾನಿಯಾದ ಪ್ರಸಾದ ಉತ್ತರಿಸಲಿಲ್ಲ.

ಹಣ ದೂರವಾದ, ಹಣವನ್ನು ಪಡೆಯುವ ಬೇರೆ ದಾರಿಯೂ ಕಾಣದ ಪ್ರಸಾದ ಹುಚ್ಚನಂತಾದ. ಹಣದ ಚಿಂತೆ ಅವನನ್ನು ಸದಾ ಕೊರೆಯುತ್ತಿತ್ತು. ಒಂದು ದಿನ ಅದೇ ಯೋಚನೆಯಲ್ಲಿ ಮೈಮರೆತಿದ್ದಾಗಲೇ ಅವನ ಪತ್ನಿ ವಾಣಿ ಕಣ್ಣೀರು ಹರಿಸಿದಳು.

ಪತ್ನಿಯ ಮನದಾಳವನ್ನು ನೋಡಲಾರದ ಪ್ರಸಾದ ಗತ್ಯಂತರವಿಲ್ಲದೆ ಎಲ್ಲ ಸಂಗತಿಯನ್ನು ವಿವರಿಸಿದ. ಇದರಿಂದ ಪ್ರಸಾದನಿಗೆ ಮಾತ್ರವಲ್ಲ ವಾಣಿಗೂ ಒಂದು ಬಗೆಯ ನೆಮ್ಮದಿ ದೊರೆಯಿತು.

ವಾಣಿ ಕಂಬನಿಯನ್ನು ಸೆರಗಿನಿಂದ ಒರೆಸಿ ಕೊಳ್ಳುತ್ತ 'ನಿಮ್ಮದು ಮೊದಲಿಂದಲೂ ಸಂಕೋಚ, ಸ್ವಾಭಿಮಾನದ ಪ್ರಕೃತಿ. ಈಗ ಆಗಿರುವುದಾದರೂ ಏನು? ಇಂದಲ್ಲ ನಾಳೆ ನಿಮ್ಮ ಕೃತಿಗೆ ಬೆಲೆ ದೊರೆತು ಹಣ ಬರುತ್ತದೆ. ಅಲ್ಲಿಯ ವರೆಗೆ ಕಾಯಲೇಕಾದುದಿಲ್ಲ. ಅಪ್ಪನನ್ನು ಕೇಳಿ ಎರಡು ಸಾವಿರ ಹಣ ತರುತ್ತೇನೆ. ನಿಮ್ಮ ಮುದ್ರಕರಿಗೆ ಕೊಟ್ಟು ಕೃತಿ ತೆಗೆದು ಕೊಳ್ಳಿ' ಎಂದಳು.

'ನೀನು ಹಣವಂತರ ಮಗಳು. ನಿಮ್ಮಪ್ಪ ಸಾವಿರ ರೂಪಾಯಿಗಳನ್ನು ಕೊಡ ಬಹುದು ವಾಣಿ, ಆದರೆ ನನಗೆ ಆ ಹಂಗಿನ ಹಣ ಬೇಡ. ದಯವಿಟ್ಟು ಈ ವಿಷಯದಲ್ಲಿ ಒತ್ತಾಯ ಪಡಿಸ ಬೇಡ'

'ಹಣವನ್ನು ಸಾಲದ ರೂಪದಲ್ಲಿ ಪಡೆದು ಹಿಂತಿರುಗಿಸ ಬಹುದಲ್ಲ'

'ಬೇಡ ವಾಣಿ ನಿನಗೆ ಗೊತ್ತಿಲ್ಲ ಹಣದ ವ್ಯವಹಾರ... ಒತ್ತಾಯಿಸ ಬೇಡ'

'ಹಾಗಾದರೆ ಏನು ಮಾಡೋದು? ದುಃಖದಿಂದಲೇ ಪ್ರಶ್ನಿಸಿದಳು ವಾಣಿ.

"ನನಗೂ ಒಂದೂ ತೋಚುತ್ತಿಲ್ಲ.. ಆ ತಾಯಿಯ ಇಚ್ಛೆ ಇದ್ದಂತಾಗಲಿ' ಎಂದು ನಿಟ್ಟುಸಿರು ಬಿಟ್ಟ, ಪ್ರಸಾದ.

ವಾಣಿ ಮುಖ ಮುಚ್ಚಿಕೊಂಡು ದುಃಖಿಸುತ್ತಲೇ ಮಲಗಿದಳು. ಪ್ರಸಾದ ಶಿಲಾವಿಗ್ರಹದಂತೆ ಕುಳಿತೇ ಇದ್ದ.

೪

ಪ್ರಸಾದ ಮರುದಿನ ಅನ್ಯಮನಸ್ಕನಾಗಿಯೇ ಕಛೇರಿಗೆ ಹೊರಟ. ಹೊರಡುವ ಮುಂಚೆ "ನಾನು ಹೋಗಿ ಬರುತ್ತೇನೆ ವಾಣಿ" ಎಂದ. ವಾಣಿ ಕೆಲಸವನ್ನು ಬಿಟ್ಟು ಹೊರಕ್ಕೆ ಬಂದು ನಿಂತು ಪತಿಯನ್ನೇ ದಿಟ್ಟಿಸುತ್ತಾ 'ನಾನು ನಿಮ್ಮ ಧರ್ಮ ಪತ್ನಿ ಹೌದೋ ಅಲ್ಲವೋ" ಎಂದಳು.

ಅತ್ತು ಕೆಂಪಾಗಿದ್ದ ಹೆಂಡತಿಯ ಕಣ್ಣನ್ನೇ ನೋಡಿ ಪ್ರಸಾದ "ಇದೇನು ವಿಚಿತ್ರ ಪ್ರಶ್ನೆ ವಾಣಿ' ಎಂದ.

'ವಿಚಿತ್ರ ಸಚಿತ್ರ ಏನೂ ಇಲ್ಲ ಹೇಳಿ".

"ಧರ್ಮ ಪತ್ನಿ ಅಷ್ಟೇ ಅಲ್ಲ ನೀನು ನನ್ನ ಬಾಳ ಗೆಳತಿ".

"ನಿಮ್ಮ ಮಾತು ನಿಜ ತಾನೆ".

"ಸತ್ಯವಾಗಿಯೂ".

'ಸ್ವಲ್ಪ ತಾಳಿ' ಎಂದು ಒಳಕ್ಕೆ ನಡೆದ ವಾಣಿ ಸ್ವಲ್ಪ ಹೊತ್ತಿನಲ್ಲಿಯೇ ಪುಟ್ಟ ಗಂಟಿನೊಂದಿಗೆ ಹಿಂದಿರುಗಿ ಪತಿಯ ಕೈಗೆ ಕೊಡುತ್ತಾ "ಈ ವಿಷಯದಲ್ಲಿ ನೀವು ಏನನ್ನೂ ಹೇಳಬೇಕಾದ್ದಿಲ್ಲ. ನನ್ನ ಆತ್ಮ ಸಂತೋಷದಿಂದ ಒಪ್ಪಿಸುತ್ತಿದ್ದೇನೆ. ನಾನು ನೀವು ಬೇರೆ ಬೇರೆಯಲ್ಲ. ನಿಮಗಿಂತಲೂ ಮಿಗಿಲಾದ ಆಭರಣ ಬೇರಿಲ್ಲ. ಈ ಆಭರಣಗಳು ನಿಮ್ಮ ಸಮಯಕ್ಕೆ ಸಹಾಯವಾದರೆ, ನನಗೆ ಅಷ್ಟೇ ತೃಪ್ತಿ" ಎಂದು ನುಡಿದಳು.

ಪ್ರಸಾದನ ಕಣ್ಣಂಚಿನಲ್ಲಿ ಪತ್ನಿಯ ಅಪ್ರತಿಮ ಅಭಿಮಾನಕ್ಕೆ ನೀರು ತುಂಬಿತು. ಯಾವ ಮಾತನ್ನೂ ಆಡದ ಮೌನವಾಗಿ ನಡೆದ. ವಾಣಿ ನೀರು ತುಂಬಿದ ಕಣ್ಣಿಂದ ನೋಡುತ್ತಲೇ ನಿಂತಿದ್ದಳು.

ಅನ್ಯಮನಸ್ಕನಾಗಿ ಕಾರ್ಯನಿರತನಾಗಿದ್ದ ಪ್ರಸಾದನನ್ನು ಕಂಡು ಸಹೋದ್ಯೋಗಿಗಳು ಬೆರಗಾದರು. ಅವರಿಗೆ ಕಾರಣವೇ ತಿಳಿಯಲಿಲ್ಲ. ಅವರ ಯಾವ ಮಾತೂ ಅವನ ಕಿವಿ ತಾಕಲಿಲ್ಲ. ಸಂಪಾದಕ ಚಕ್ರಪಾಣಿ—"ಸ್ವಸ್ಥವಿಲ್ಲದಾಗಲೂ ದುಡಿಯಬೇಕೆ ಪ್ರಸಾದ'.... ಸ್ವಲ್ಪ ವಿಶ್ರಾಂತಿ ತೆಗೆದುಕೊಳ್ಳಿ... ನಿಮಗೆ ಕೆಲಸವಿದ್ದರೆ ಮುಗಿಯಿತು..... ಹುಡುಗ ಬುದ್ಧಿ" ಎಂದು ಬುದ್ಧಿವಾದ ಹೇಳಿ ಮನೆಗೆ ಹೋಗಲು ಅನುಮತಿ ಕೊಟ್ಟರು.

ಪತ್ನಿ ಕೊಟ್ಟ ಆಭರಣಗಳನ್ನು ಮಾರಲು ಜವಾಹರಿ ಅಂಗಡಿಯ ವರೆಗೆ ಪ್ರಸಾದನ ಕಾಲುಗಳು ಬಂದರೂ ಒಳಕ್ಕೆ ಕಾಲಿಡಲಾಗಲಿಲ್ಲ. ಮಾರುವುದೇ ಬೇಡವೆಂದು ಗಟ್ಟಿ ಮನಸ್ಸು ಮಾಡಿ ಮನೆಯ ದಾರಿ ಹಿಡಿದ ಪ್ರಸಾದ.

ನಿರಾಶಾ ಭಾವನೆಯಿಂದಲೇ ಮನೆಯ ಬಾಗಿಲಿಗೆ ಬಂದಾಗ ವಾಣಿ ಪತಿಯನ್ನು ನಗು ಮೊಗದಿಂದಲೇ ಸ್ವಾಗತಿಸಿದಳು. ಪ್ರಸಾದನಿಗೆ ಒಗಟಾಗಿ ಕಾಣ ಬಂತು. ಪ್ರಸಾದ ಒಳಕ್ಕೆ ಬಂದೊಡನೆಯೇ ವಾಣಿ 'ಈ ನಿಮ್ಮ ದುಃಖ ಭಾವದ ಮುಖವನ್ನು ನೋಡಲಾರೆ ಸಧ್ಯ ಇನ್ನು ಮೇಲಾದರೂ ನಗು ನಗುತ್ತಿರಿ" ಎಂದು ನಕ್ಕಳು.

'ನಾನು ಆಭರಣಗಳನ್ನು ಮಾರಿ ಹಣ ತಂದಿದ್ದೇನೆ ಎಂದ ಇವಳಿಗೆ ಸಂಭ್ರಮ' ಎಂದು ಕೊಂಡ ಪ್ರಸಾದ ಪತಿ ತೆಗೆದು ಕೊಟ್ಟದ್ದನ್ನು ಕೈಗೆ ತೆಗೆದು ಕೊಳ್ಳುತ್ತಾ ವಾಣಿ "ಒಂದು ಸಂತೋಷದ ಸುದ್ದಿ ಹೇಳುತ್ತೇನೆ, ಏನು ಬಹುಮಾನ ಕೊಡುತ್ತೀರ' ಎಂದಳು.

"ಕೊಡುವುದಕ್ಕೆ ನನ್ನ ಬಳಿ ಏನಿದೆ ವಾಣಿ, ನಾನು ಸದಾ ಬರಿಗೈ ದಾಸ. ಅಲ್ಲದೆ ನಾನು ಬೇರೆ ನೀನು ಬೇರೆಯೆ?' ಎಂದು ಪತ್ನಿಯ ಮನಸ್ಸಿಗೆ ನೋವಾಗದಿರಲೆಂದು ತಿಳಿಸಿದ.

'ಈ ಕಣ್ಣು ಒರೆಸುವ ಮಾತು ಬೇಡ.. ಹೇಳಿ ಏನು ಕೊಡುತ್ತೀರ".

"ನಿನಗೆ ಹುಡುಗಾಟ ವಾಣಿ....ನೀನು ನನ್ನ ಮನಸ್ಸು ಅರ್ಥಮಾಡಿ ಕೊಳ್ಳಲಾರೆ". ವಾಣಿ ಹುಸಿ ಕೋಪದಿಂದ 'ನೀವು ಸದಾ ಹೀಗೆ' ಎಂದಳು.

"ಕೊಡುವುದಕ್ಕೆ ಏನಿದೆ ಅಂದೆ ವಾಣಿ. ನೀ ಕೊಟ್ಟ ಒಡವೆಗಳನ್ನು ಮಾರಲು ಮನಸ್ಸು ಒಪ್ಪಲಿಲ್ಲ ತೆಗೆದುಕೋ' ಎಂದು ಜೇಬಿನಿಂದ ಎತ್ತಿ ಕೊಟ್ಟ ಪ್ರಸಾದ.

"ಸಂತೋಷದ ಸುದ್ದಿ ಹೇಳುವ ಮುಂಚೆಯೇ ಬಹುಮಾನ" ಎಂದು ಪ್ರಸಾದನ ಕೈಗಳನ್ನು ಕಣ್ಣಿಗೊತ್ತಿಕೊಂಡಳು ವಾಣಿ. ಪ್ರಸಾದ ಆಶ್ಚರ್ಯದಿಂದ ನೋಡುತ್ತಿದ್ದ.

ವಾಣಿ ಕೋಣೆಗೆ ಹೋಗಿ ಒಂದು ಪತ್ರದೊಂದಿಗೆ ಹಿಂದಿರುಗಿ ಬಂದು ಪ್ರಸಾದನ ಕೈಗಿತ್ತಳು. ಪ್ರಸಾದ ಪತ್ರ ಓದತೊಡಗಿದ. ಅವನ ಮುಖದಲ್ಲಿ ಸಂತೋಷ, ಆಶ್ಚರ್ಯ. ಹೆಮ್ಮೆ ಒಂದೇ ಬಾರಿಗೆ ಮೂಡಿ ಮಾತೇ ಹೊರಡದಾಯಿತು. ಪತ್ನಿಯನ್ನೇ ಅಭಿಮಾನದಿಂದ ನೋಡಿದ.

ದುಃಖ ನಿರಾಶೆಯಿಂದ ನೊಂದಿದ್ದ ದಂಪತಿಗಳ ಹೃದಯದಲ್ಲಿ ಸಂತಸದ ಹೊಳೆ ಹರಿದಿತ್ತು. ಮೈಸೂರಿನ ಹಿರಿಯ ಸಾಹಿತ್ಯಾಭಿಮಾನಿಗಳೂ ಪ್ರಕಾಶಕರೂ ಆಗಿದ್ದ ರಂಗರಾಯರು ಪ್ರಸಾದನ 'ಕಲಾಮಾತೆ' ಕಾದಂಬರಿಯನ್ನು ಓದಿ ಮುಗ್ಧರಾಗಿ ಪತ್ರ ಬರೆದಿದ್ದರು. ಪತ್ರದ ಒಟ್ಟು ಪ್ರಮಾಣ ನಾಲ್ಕು ಪುಟವಿದ್ದರೂ ಅದರ ಮುಖ್ಯ ಸಾರಾಂಶ ಕೆಳ ಕಂಡಂತಿತ್ತು.

'ಪ್ರಸಾದರೆ, ಕಲಾಮಾತೆ ಕಾದಂಬರಿ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿಯೇ ಒಂದು ಮೈಲಿಗಲ್ಲು, ಇದಕ್ಕಾಗಿ ನೀವು ವಹಿಸಿರುವ ಶ್ರಮ, ನಡೆಸಿರುವ ಸಾಧನೆ ಸ್ತುತ್ಯಾರ್ಹ. ಇಂತಹ ಶ್ರೇಷ್ಠ ಕೃತಿಗೆ ಪ್ರಕಾಶಕರಿಂದ ಬಲ ಸಹಕಾರ, ಬೆಂಬಲ ದೊರೆಯಲಿಲ್ಲವೆಂದರೆ ನಾಚಿಕೆಗೇಡು. ನನ್ನ ಮಿತ್ರರೊಬ್ಬರು ಮುದ್ರಣಾಲಯದ ಮಾಲೀಕರ ಬಳಿ ಇದ್ದ ಕಾದಂಬರಿಯ ಪ್ರತಿಯೊಂದನ್ನು ಪಡೆದು, ನಡೆದ ಸಂಗತಿಯನ್ನು ಸಂಗ್ರಹಿಸಿ ನನಗೆ ವರದಿ ಮಾಡಿರುವರು. ಈ ಕಾದಂಬರಿಗಳ ಪೂರ್ಣ ಮಾರಾಟದ ಹೊಣೆಯನ್ನೂ ನಾನು ಹೊರುವುದಲ್ಲದೆ ನಿಮಗೆ ಗೌರವ ಧನದ ರೂಪದಲ್ಲಿ ಇಂದೇ ಎರಡು ಸಾವಿರ ರೂಪಾಯಿಗಳ ಚೆಕ್ (Check) ಒಂದನ್ನು ಕಳುಹಿಸಿದ್ದೇನೆ. ಹಣವನ್ನು ಮುದ್ರಣಾಲಯಕ್ಕೆ ಒಪ್ಪಿಸಿ ಮುದ್ರಿತ ಪ್ರತಿಗಳನ್ನು ಪಡೆಯುವುದಕ್ಕೆ ಅನುಮತಿಯನ್ನು, ಮುಂದಿನ ಕಾದಂಬರಿಯನ್ನು ಪ್ರಕಟಿಸಲು ನೀವು ಭರವಸೆ ಕೊಟ್ಟು ಬರೆದು ಕೊಡಬೇಕಾಗಿಯೂ ಪ್ರಾರ್ಥಿಸುತ್ತೇನೆ.

ಪ್ರತಿಗಳು ಮಾರಾಟವಾಗಲಾರಂಭಿಸಿದ ನಂತರ ಹಣ ಕಳುಹಿಸುತ್ತೇನೆ. ನಿಮ್ಮ ಸಾಹಿತ್ಯ ಸೇವೆಗೆ ಸಹಕಾರಿಯಾಗುತ್ತೇನೆ ಎಂಬುದಷ್ಟೇ ಹೆಮ್ಮೆ. ನಿಮ್ಮ ದುಡಿಮೆಯ ಯಶಸ್ಸು ಗಳಿಸಲಿ" ಎಂದು ಹೃತ್ಪೂರ್ವಕವಾಗಿ ಆಶಿಸಿದ್ದರು. ರಂಗರಾಯರು.

"ನಾನು ಬದುಕಿದೆ ವಾಣಿ.... ಭಗವಂತ ದೊಡ್ಡವನು ಕಣ್ಣು ಬಿಟ್ಟ ಎಲ್ಲ ನಿನ್ನ ಕೈ ಹಿಡಿದುದರ ಫಲ' ಎಂದು ಹೆಮ್ಮೆಯಿಂದ ನುಡಿದ ಪ್ರಸಾದ. ವಾಣಿ ನಾಚಿ—"ಅಷ್ಟು ದೊಡ್ಡ ಮಾತು ಬೇಡಿ... ನಿಮ್ಮ ಅದೃಷ್ಟ ದೊಡ್ಡದು ನಿಮ್ಮ ಸೇವೆ ಮಾಡುವ ಭಾಗ್ಯ ನನಗಿದೆಯಲ್ಲ ಅಷ್ಟೇ ಸಾಕು...... ಅಂದ ಹಾಗೆ ಮರೆತಿದ್ದೆ. ಇವತ್ತು ಶುಕ್ರವಾರ, ಲಲಿತಾ ಪೂಜೆ ಮಾಡಿದ್ದೇನೆ... ಬಳಲಿ ಬಂದವರಿಗೆ ಉಪಚಾರ ಮಾಡದೆ ನಿಲ್ಲಿಸಿದ್ದೇನೆ. ಕಾಲು ತೊಳೆದು ಬನ್ನಿ. ತೀರ್ಥ ಪ್ರಸಾದ ಕೊಡುತ್ತೇನೆ' ಎಂದಳು.

"ಎಲ್ಲ ನೀನು ಪೂಜಿಸಿದ ಮಹಾತಾಯಿಯ ಪೂಜೆಯ ಫಲ' ಎಂದು ಪ್ರಸಾದ ಅವ್ಯಕ್ತ ಶಕ್ತಿಗೆ ತಲೆಬಾಗಿ ನಮಿಸಿದ. ಕೋಣೆಯಲ್ಲಿ ಸರ್ವಮಂಗಳೆಯ ಎದುರಿನ ಜೋಡಿ ನೀಲಾಂಜನಗಳು ಪ್ರಕಾಶಮಾನವಾಗಿ ಬೆಳಕು ಬೀರುತ್ತಿದ್ದವು

ಕಾರ್ಕಳ ಮುನ್ಸಿಫ್ ಕೋರ್ಟಿನಲ್ಲಿ

O S. No 160/1966

ಸೀತ ಶೆಡ್ತಿ —ವಾದಿಳು.

ಮತ್ತು

ಗಿರಿಯಮ್ಮ ಶೆಡ್ತಿ ಸಹಾ—ಪ್ರತಿವಾದಿರು.

ಇವರೊಳಗೆ

ಈ ಮೂಲಕ ಸದ್ರಿ ದಾವೆಯ 2ನೇ ಪ್ರತಿವಾದಿ ಕುಟ್ಟಿ B. ಶೆಟ್ಟಿ, 1ನೇ ಪ್ರ. ಗಿರಿಯಮ್ಮ ಶೆಡ್ತಿಯ ಮಗ, ಉಡುಪಿ ತಾಲ್ಲೂಕು ಕುತ್ಯಾರು ಗ್ರಾಮದ ಮೂಡುಇರಂದಾಡಿ ಕಡಬರ ಮನೆಯಲ್ಲಿರುವವ, Post Kuthyar ಇವರಿಗೆ ಈ ಮೂಲಕ ತಿಳಿಸುವದೇನಂದರೆ,

ವಾದಿಳು ನೀವು ಕೂಡಾ 2 ಜನರ ಮೇಲೆ ಮಾಡಿದ ಮೇಲಿನ ದಾವಾ ನಿಂಯು ಹಾಜರಿ ದಿಗ್ಗೆ ತಾರೀಕು 16—9—1966ಕ್ಕೆ ಇಟ್ಟದೆ. ಸದ್ರಿ ದಿನ ಬೆಳಿಗ್ಗೆ 10 ಗಂಟೆಗೆ ನೀವು ಮೇಲ್ಕಂಡ ಕೋರ್ಟಿನ ಮುಂದೆ ಸ್ವತಹಾ ಯಾ ವಕೀಲು ದ್ವಾರಾ ಹಾಜರಾಗಿ ಉತ್ತರಿಸತಕ್ಕದ್ದು. ತಪ್ಪಿದಲ್ಲಿ ನಿಮ್ಮನ್ನು ಸಿವಾಡಿ ಮಾಡಿ ಸದ್ರಿ ದಾವಾ ಏಕ ಪಕ್ಷವಾಗಿ ತೀರ್ಮಾನಿಸಲಾದೀತು.

By order of the Court

N. M. Adyanthaya

Advocate for Plaintiff

Karkala, 20—8—1966.

READ &
ADVERTISE IN
NAVAYUGA WEEKLY



NAVAYUGA 1-9-1966
Registered with the Registrar
of News Papers for India
under No. K. N. 3546/'57

REGD. No. B. G. 176
LICENCE No. 31
Licensed to Post without Prepayment

ವಿಜ್ಞಾನ ವಿಸ್ಮಯ

ಭೂಮಿಗೆ ಉಪಗ್ರಹಗಳೆಷ್ಟು?

ಚಂದ್ರನ ಹೊರತು ಬೇರಾವ ನೈಸರ್ಗಿಕ ಉಪಗ್ರಹವೂ ಭೂಮಿಗೆ ಇರಲಾರದೆಂದು ಒಮ್ಮೆ ಭಾವಿಸಲಾಗುತ್ತಿತ್ತು; ಆದರೆ ೧೯೬೧—೬೨ರಲ್ಲಿ ಈ ಅಭಿಪ್ರಾಯವನ್ನು ಪೋಲೆಂಡಿನ ಖಗೋಳ ವಿಜ್ಞಾನಿ ಕೊರ್ಡಿಲೆವ್‌ಸ್ಕಿಯವರು ತಿರಸ್ಕರಿಸಿದರು. ಧೂಳು ಮುಚ್ಚಿದ ಮೂರು ಉಪಗ್ರಹಗಳನ್ನು ಅವರು ಕಂಡು ಹಿಡಿದರು.

ಇದು ಅನಿರೀಕ್ಷಿತವಾದುದೇನೂ ಅಲ್ಲ; ಏಕೆಂದರೆ, ಅದಕ್ಕೂ ಮೊದಲೇ, ಮಹಾ ಗಣಿತಜ್ಞ ಲಗ್ರಾಂಜಿಯವರು ಮೂರು ಕಾಯಗಳ ತಥಾಕಥಿತ ಸೀಮಿತ ಸಮಸ್ಯೆಯನ್ನು ಬಗೆಹರಿಸಿದ್ದರು. ಅಲ್ಪ ರಾಶಿಯ ಒಂದು ಕಾಯದ ಚಲನೆಯು ಅಧಿಕ ರಾಶಿಯ ಎರಡು ಇತರ ಕಾಯಗಳ ಪ್ರಭಾವಕ್ಕೊಳಪಟ್ಟಿರುವ ಸಮಸ್ಯೆಯನ್ನು ಅವರು ಪರಿಶೀಲಿಸಿದ್ದರು. ಎಲ್ಲ ಕಕ್ಷೆಗಳೂ ವೃತ್ತಾಕಾರವಾಗಿದೆಯೆಂದು ಊಹಿಸಿದ ಪಕ್ಷದಲ್ಲಿ ತೃತೀಯ ಕಾಯವು ವ್ಯೂಹದಲ್ಲಿ ತನ್ನ ಸ್ಥಾನವನ್ನು ಉಳಿಸಿಕೊಳ್ಳುವ ಸ್ಥಿರತೆಯನ್ನು ತೋರಿಸುವ ಬಿಂದುಗಳಿರಲೇಬೇಕೆಂದು ಅವರು ತೀರ್ಮಾನಿಸಿದರು.

ಹೊಸ ಸಂಶೋಧನೆಯಲ್ಲ

ಹಾಗೆಂದರೆ ಅರ್ಥವೇನು? ಬಹುಶಃ ಗುರು ಗ್ರಹದ ಕಕ್ಷೆಯಲ್ಲಿ ಕಣಗಳಿವೆಯೆಂದು ಭಾವಿಸಿಕೊಳ್ಳಿ. (ಗುರು ಗ್ರಹದ ಸುತ್ತೂ ಧೂಳು ಮುಚ್ಚಿದ ಉಪಗ್ರಹಗಳೆಂಬ ಅಂಶವನ್ನು ಎಲ್ಲಕ್ಕೂ ಮೊದಲು ಕಂಡು ಹಿಡಿಯಲಾಯಿತು) ಗ್ರಹದ ಮತ್ತು ಸೂರ್ಯನ ಪ್ರಭಾವಕ್ಕೊಳಪಟ್ಟ ಸಮತೂಕ ಸ್ಥಿತಿಯ ಬಿಂದುಗಳಲ್ಲಿ—ಎಂದರೆ 'ಗುರುತ್ವಾಕರ್ಷಣದ ಬೋನುಗಳಲ್ಲಿ"—ಅವು ಸಂಗ್ರಹವಾಗಲೇ ಬೇಕಾಗುತ್ತವೆ. ವಸ್ತುತಃ ಗುರುಗ್ರಹದ ಕಕ್ಷೆಯ ಕ್ಷುದ್ರ ಗ್ರಹಗಳು ಎರಡು ಗುಂಪುಗಳಾಗಿ ಏಕತ್ರಿತವಾಗುತ್ತವೆ. ಭೂಮಿಯ ಧೂಳಧೂಸರಿತ ಉಪಗ್ರಹಗಳ ವಿಷಯದಲ್ಲಿಯೂ ನಾಲ್ಕನೆಯ ಕಾಯವಾದ ಚಂದ್ರನ ಗುರುತ್ವಾಕರ್ಷಣವನ್ನೂ ಲೆಕ್ಕಕ್ಕೆ ತೆಗೆದುಕೊಂಡ ಪಕ್ಷದಲ್ಲಿ—ಇದೇ ಬಗೆಯ ಚಿತ್ರ ಗಮನಕ್ಕೆ ಬರುತ್ತದೆ. ಈ ಕಾರಣದಿಂದಲೇ ಖಗೋಳ ವಿಜ್ಞಾನಿಗಳು ಬಹು ಕಾಲದಿಂದ ಈ ವ್ಯೂಹದಲ್ಲಿ "ಗುರುತ್ವಾಕರ್ಷಣದ ಬೋನುಗಳ" ಸಂಶೋಧನೆಗಾಗಿ ಕಾಯುತ್ತಾ ಬಂದಿದ್ದಾರೆ.

ಆದರೂ ಧೂಳು ಮುಚ್ಚಿದ ಮೋಡಗಳನ್ನು ಕಂಡು ಹಿಡಿಯಲು ಬಹಳ ಸಮಯ ಬೇಕಾಯಿತು. ಏಕೆಂದರೆ, ಅವು ಸೂರ್ಯನಿಗೆ ಎದುರಾಗಿರುವ ಮೋಡದ ಮೇಲಿನ ಪ್ರಭಾವಳಿಯ ಬಿಂದುವಿಗೆ ಹತ್ತಿರವಾಗಿರುವಾಗ ಅವುಗಳ ಸಮೀಕ್ಷೆ ಸಾಧ್ಯವಾಗುವುದಿಲ್ಲ. ಇದಲ್ಲದೆ ಈ ಬಿಂದು ಭೂಮಿಯ ಪಥಕ್ಕೆ ಸಮೀಪವಾಗಿರಲೂ ಕೂಡದು. ಚಂದ್ರನಿಲ್ಲದ ರಾತ್ರಿಯಲ್ಲೇ ಈ ಸಮೀಕ್ಷೆಗಳು ನಡೆಯಬೇಕಾಗುತ್ತದೆ. ಇಂತಹ ಅನುಕೂಲಕರ ಪರಿಸ್ಥಿತಿಯು ಅತ್ಯಂತ ಅಪರೂಪ.

ಖಗೋಳ ವಿಜ್ಞಾನಿಗಳು ವಿತ್ಕೊವ್‌ಸ್ಕಿ ಮತ್ತು ಕರ್ಡಿಲೆವ್‌ಸ್ಕಿಯವರು ಹತ್ತು ವರ್ಷಗಳ ಹಿಂದೆಯೇ ಉಪ-ಗ್ರಹಗಳ ಸಂಶೋಧನೆಯನ್ನು ಕೈಗೊಂಡರು. ಐದು ವರ್ಷಗಳ ಸಮೀಕ್ಷೆಯ ತರುವಾಯ ಮಾತ್ರವೇ ಅವರು ಧೂಳು ಮುಚ್ಚಿದ ಮೋಡಗಳ—ಎಂದರೆ ಧೂಳು ಮುಚ್ಚಿದ ಉಪಗ್ರಹಗಳ—ಪ್ರಥಮ ಛಾಯಾ ಚಿತ್ರಗಳನ್ನು ಪಡೆಯುವುದು ಸಾಧ್ಯವಾಯಿತು. ಅಮೆರಿಕನ್ ಖಗೋಳ ವಿಜ್ಞಾನಿಗಳು ವೆಸ್ಲಿ ಸಿಂಪ್ಸನ್ ಮತ್ತು ರೇ ವಿಲ್ಲಂ ಅವರು ನಡೆಸಿದ ಸಮೀಕ್ಷೆಗಳು ಭೂಮಿಯ ಇಂತಹ ಅಸಾಧಾರಣ ಪ್ರಾಕೃತಿಕ ಉಪಗ್ರಹಗಳ ಅಸ್ತಿತ್ವಕ್ಕೆ ಸಮರ್ಥನೆ ನೀಡುವ ಇನ್ನೊಂದು ಮುಖ್ಯ ನಿದರ್ಶನವಾಗಿವೆ.

ಭೂಮಿಯಷ್ಟೇ ದೊಡ್ಡದು

ಹೊಸದಾಗಿ ಕಂಡು ಹಿಡಿಯಲಾದ ಉಪಗ್ರಹಗಳು ಚಂದ್ರ ಮಂಡಲದಂತೆಯೇ ಕಲೆಗಳನ್ನು ಹೊಂದಿವೆ. ಸೂರ್ಯನಿಗೂ ಭೂಮಂಡಲದ ಮೇಲಿರುವ ಸಮೀಕ್ಷಕರಿಗೂ ಸಾಪೇಕ್ಷಿಕವಾದ ಸ್ಥಾನಕ್ಕೆ ತಕ್ಕಂತೆ ಅವುಗಳ ಕಾಂತಿಯು ಬದಲಾಯಿಸುತ್ತಿರುತ್ತದೆ, ಅವುಗಳ ಕಲೆಗಳು ಚಂದ್ರನ ಕಲೆಗಳಿಗೆ ಹೊಂದಿಕೊಂಡಿವೆ. ಐದು ದಿನ ಮುಂದು ಅಥವಾ ಐದು ದಿನ ಹಿಂದೆಂಬುದಷ್ಟೇ ವ್ಯತ್ಯಾಸ.

ಪ್ರತಿಯೊಂದು ಧೂಳು ಮೋಡ ಉಪಗ್ರಹವೂ ಪ್ರಾಯಶಃ ಭೂಮಿಯಷ್ಟೇ ವ್ಯಾಸವುಳ್ಳದ್ದಾಗಿರುತ್ತದೆ. ಆದರೂ ಮೋಡಗಳ ಸಂಯೋಜನೆ ಅತ್ಯಂತ ವಿರಳ. ಒಂದು ಘನ ಕಿಲೋ ಮೀಟರಿಗೆ ಒಂದೇ ಧೂಳಿ—ಕಣ ಇರುತ್ತದೆ. ೧೨ನೆಯ ಪರಿಮಾಣದ ನಕ್ಷತ್ರದ ಹೊಳಪನ್ನು ಮೀರಿಸುವ ವಸ್ತುಗಳು ಯಾವುವೂ ಕೊರ್ಡಿಲೆವ್‌ಸ್ಕಿಯವರ ಸಮೀಕ್ಷೆಗಳಲ್ಲಿ ಕಂಡು ಬರಲಿಲ್ಲ. ಎಂದರೆ ಆ ಮೋಡದಲ್ಲಿ ೨೦ ಮೀಟರುಗಳಿಗಿಂತಲೂ ಹೆಚ್ಚು ಅಡ್ಡಕೊಯ್ತದ ಅಳತೆಯ ಕಾಯಗಳು ಯಾವುವೂ ಇಲ್ಲ. ಅದರ ಒಟ್ಟು ರಾಶಿ ಸುಮಾರು ೨೦,೦೦೦ ಟನ್. ತುಲನಾತ್ಮಕವಾಗಿ ಅದು ಹೆಚ್ಚೇನೂ ಅಲ್ಲ.

ಭೂಮಿಯ ನೈಸರ್ಗಿಕ ಉಪಗ್ರಹಗಳು ಚಂದ್ರಮಂಡಲ ಮಾರ್ಗಗಾಮಿಗಳಾದ ಆಕಾಶ ನೌಕೆಗಳ ಕಕ್ಷೆಗಳಿಗೆ ದೂರವಾಗಿವೆ. ಆದರೂ ಕೂಡ, ಆಕಾಶ ಯಾತ್ರೆಗಳು ಮುಂದುವರಿದಂತೆ ಈ ಮಾರ್ಗಗಳನ್ನು ಬದಲಾಯಿಸುವುದು ಅನಿರೀಕ್ಷಿತವೇನೂ ಅಲ್ಲ.

ಸಾಲಿಸ್ ಸ್ಮಾರಕ ಭವನದ ಉದ್ಘಾಟನೆ

ಉಡುಪಿ ಕ್ರಿಶ್ಚಿಯನ್ ಹೈಸ್ಕೂಲಿನಲ್ಲಿ ಮಾಜಿ ಮುಖ್ಯೋಪಾಧ್ಯಾಯರಾದ ಶ್ರೀ ಎಸ್. ಇ. ಸಾಲಿಸ್‌ರವರ ಸ್ಮಾರಕಾರ್ಥವಾಗಿ ರಚಿಸಲ್ಪಟ್ಟಿರುವ ಎಸ್. ಇ. ಸಾಲೀಸ್ ಮೆಮೋರಿಯಲ್ ಹಾಲಿನ ಉದ್ಘಾಟನಾ ಸಮಾರಂಭವು ಶ್ರೀ ಟಿ. ಎ. ಪೈಗಳವರಿಂದ, ತಾ. 15 ರಂದು, ಡಾ| ಟಿ. ಮಾಧವ ಪೈಗಳ ಅಧ್ಯಕ್ಷತೆಯಲ್ಲಿ ನೆರವೇರಿತು.

ಆರಂಭದಲ್ಲಿ ಹೈಸ್ಕೂಲಿನ ಮುಖ್ಯೋಪಾಧ್ಯಾಯ ಶ್ರೀ ಎಲ್. ಬಿ. ಅಮ್ಮಣ್ಣವರು ಸ್ವಾಗತಿಸುತ್ತಾ, ದಿವಂಗತ ಸಾಲೀಸ್‌ರವರು ಸಲ್ಲಿಸಿದ ಸೇವೆಯನ್ನು ಶ್ಲಾಘಿಸುತ್ತಾ, ಅವರ ಸ್ಮಾರಕಾರ್ಥವಾಗಿ ಕಟ್ಟಿಸಿರುವ ಈ ಹಾಲ್ ಅವರ ಸೇವೆಗೆ ಸಲ್ಲಿಸುವ ಕೃತಾರ್ಥವಾದ ಸ್ಮಾರಕವಾಗಿದೆಯೆಂದು ನುಡಿದರು. ಶ್ರೀ ಟಿ. ಎ. ಪೈಗಳು ಉದ್ಘಾಟಿಸುತ್ತಾ ಶೈಕ್ಷಣಿಕ ಪ್ರಗತಿಯಲ್ಲಿ ಸಾರ್ವಜನಿಕರೂ ಸರಕಾರದೊಡನೆ ಸಮಭಾಗಿಗಳು, ಆದಕ್ಕಾಗಿ ಅವರು ದುಡಿಯಬೇಕು ಎಂದು ಹೇಳಿದರು. ಈ ಸಂಧರ್ಭದಲ್ಲಿ, ಶ್ರೀ ಆರೂರುಲಕ್ಷ್ಮೀನಾರಾಯಣರಾಯರು ದಿ|| ಸಾಲೀಸ್‌ರವರ ಭಾವಚಿತ್ರ ಅನಾವರಣ ಗೈದರು. ಅಧ್ಯಕ್ಷರು ಮಾತನಾಡುತ್ತಾ ರಾಷ್ಟ್ರೀಯ ಸಮಸ್ಯೆಗಳನ್ನು ನಿವಾರಿಸುವಲ್ಲಿ ಸಾರ್ವಜನಿಕರುಮುಂದೆ ಬಂದು ಸಹಕರಿಸಬೇಕಾದುದು ಅವಶ್ಯವೆಂದು ನುಡಿದರು.

ಕೊನೆಯಲ್ಲಿ ಶ್ರೀ ಕೆ. ಸುಬ್ರಾಯ ಆಚಾರ್ಯರು ವಂದನಾರ್ಪಣೆ ಗೈದರು.

ಸ್ವಾತಂತ್ರ್ಯೋತ್ಸವ

ದೇಶದ 19ನೇ ಸ್ವಾತಂತ್ರ್ಯ ದಿನಾಚರಣೆಯು ಮಂಗಳೂರಿನ ಹ್ಯಾಗ್ ಬಜಾರ್ ವಾರ್ಡಿನಲ್ಲಿ ಜೈಹಿಂದ್ ಯುವಕ ಸಭೆಯವರು ಡಾ| ನವೀನಚಂದ್ರ ಕೆ. ಶಿಂಗಳಾಯ M. A. Ph. D ಇವರ ಅಧ್ಯಕ್ಷತೆಯಲ್ಲಿ ಆಚರಿಸಿದರು. ಬೆಳಗ್ಗೆ ಧ್ವಜಾರೋಹಣವಾದ ಬಳಿಕ ಶ್ರೀಜ್ಞಾನೋದಯ ಸಮಾಜ ಮಂದಿರದಲ್ಲಿ ಶಾಲಾ ಮಕ್ಕಳಿಗೆ ಸಿಹಿತಿಂಡಿ ಹಂಚಲಾಯಿತು. ಸಭೆಯಲ್ಲಿ ಶ್ರೀಗಳಾದ ಪುರುಷೋತ್ತಮ ನಾಯಕ್, ಶ್ರೀನಿವಾಸ ಮತ್ತು ಕೆ. ಆರ್. ಆಚಾರ್ ಇವರು ಭಾಷಣಮಾಡಿದರು. ಅಧ್ಯಕ್ಷತೆ ವಹಿಸಿದ ಡಾ| ಶಿಂಗಳಾಯರು 'ನಾವು ನಡೆದು ಬಂದ ದಾರಿ ಮತ್ತು ಮುಂದಿನ ಗುರಿ"ಯ ಕುರಿತು ಭಾಷಣ ಮಾಡಿದರು. ಬಳಿಕ ಶ್ರೀ ಪ್ರೇಮಚಂದ್ರರು ಧನ್ಯವಾದ ಸಮರ್ಪಣೆ ಮಾಡಿದರು.

ವಿದ್ಯಾರ್ಥಿಗಳಿಗೆ ಕರೆ

ಮಣಿಪಾಲ, ಆ. ೯—೧೩ ದಿನಗಳ ಕಾಲ ವಿದ್ಯಾರ್ಥಿಗಳ ನಡುವೆ ಘರ್ಷಣೆ ನಡೆದದ್ದರಿಂದ ಮುಚ್ಚಲಾಗಿದ್ದ ಇಲ್ಲಿಯ ಮೆಡಿಕಲ್ ಮತ್ತು ಇಂಜಿನಿಯರಿಂಗ್ ಕಾಲೇಜುಗಳು ನಿನ್ನೆ ಪುನರಾರಂಭವಾದಾಗ ಪರಿಸ್ಥಿತಿ ಶಾಂತವಾಗಿತ್ತು.

ವಿದ್ಯಾರ್ಥಿಗಳು ತಮ್ಮ ಸಮಸ್ಯೆಗಳನ್ನು ಕಾಲೇಜು ಅಧಿಕಾರಿಗಳಿಂದ ಬಗೆಹರಿಸಿಕೊಳ್ಳಬೇಕೆಂದೂ, ಚೆನ್ನಾಗಿ ಅಧ್ಯಯನ ನಡೆಸಬೇಕೆಂದೂ ಎಕಾಡೆಮಿ ಆಫ್ ಜನರಲ್ ಎಜುಕೇಶನಿನ ಅಧ್ಯಕ್ಷ ಹಾಗೂ ರಿಜಿಸ್ಟ್ರಾರ್ ಡಾ|| ಟಿ. ಎಂ. ಎ. ಪೈಯವರು ವಿದ್ಯಾರ್ಥಿಗಳನ್ನುದ್ದೇಶಿಸಿ ಭಾಷಣ ಮಾಡುತ್ತಾ ಒತ್ತಿ ನುಡಿದರು.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ದಿ| ಶ್ರೀ ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ.ಎರಡು. ಉತ್ತಮ ಪ್ರತಿ:ರೂ.ಎರಡೂವರೆ(ಟ.ಖ. ಪ್ರತ್ಯೇಕ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ

ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ:ರೂ. 1-25 (ಟ.ಖ.ಪ್ರತ್ಯೇಕ)

ಹೊಸಕೆರೆ ಚಿದಂಬರಯ್ಯನವರ
ಶ್ರೀಮದ್ಭಗವದ್ಗೀತೆಯ ಸಮೂಲ ಭಾಷಾಂತರ

ಗೀತೆಯ ಕೈಗನ್ನಡಿ

300 ಪುಟಗಳಿಗೂ ಮಿಕ್ಕಿದೆ. ಕೈಹೊತ್ತಗೆಯ ಆಕಾರದಲ್ಲಿದೆ.
ಬೆಲೆ: ಸಾದಾ ಪ್ರತಿ ರೂ. ೧
ಗೀತೆಯ ಕೈಗನ್ನಡಿಯ ಒಂದು ಪ್ರತಿ ಬೇಕಾದವರು ರೂ. 1-50ನ್ನು
ಮನಿಯಾರ್ಡರು ಮಾಡಿ ತರಿಸಿಕೊಳ್ಳಬಹುದು.
—ಪ್ರತಿಗಳಿಗೆ ಬರೆಯಿರಿ—
ನವಭಾರತ ಪುಸ್ತಕ ಭಂಡಾರ, ಉಡುಪಿ. ಅಥವಾ
ನವಯುಗ ಪ್ರೆಸ್, ಉಡುಪಿ.

ನವಯುಗಕ್ಕೆ
ಚಂದಾದಾರರಾಗಿ ಪ್ರೋತ್ಸಾಹಿಸಿರಿ.
ವಾರ್ಷಿಕ ಚಂದಾ ರೂ. ೧೦

Edited. Printed & Published by K. H. Shetty at the Navayuga Press, Udipi, S. India.

ನವಯುಗ

8—9—1966

೨೦
ಪೈಸೆ

ಕಥಾ ಪ್ರಪಂಚ

ಆಫೀಸ್ ಕನ್ಯೆ

ಕಥೆಗಾರರು
ಶ್ರೀ ಸುರತ್ಕಲ್ ರಾಮಕೃಷ್ಣ ಹೆಬ್ಬಾರ್

ಅದೊಂದು ಸುಮುಹೂರ್ತ (?) ದಲ್ಲಿಯೇ ಈ ಸನ್ನಿವೇಶ ನಡೆಯಿತು. ಚಲಚ್ಚಿತ್ರಗಳಲ್ಲಿ, ನಾಟಕಗಳಲ್ಲಿ, ತರುಣ—ತರುಣಿಯರು ಮನಸ್ಸಿಗೆ ಮೆಚ್ಚುವ ಪ್ರಸಂಗಗಳನ್ನು ಅದೆಷ್ಟು ರಸವತ್ತಾಗಿ, ಅಕಸ್ಮಾತ್ತಾಗಿ ... ಸೃಷ್ಟಿಸುತ್ತಾರೋ, ಅಂತೆಯೇ ಆ ಒಂದು ಸನ್ನಿವೇಶವು ಜರಗಿತು.

ದೆಹಲೀ ನಗರದಲ್ಲಿ ದೊಡ್ಡ ದೊಡ್ಡ ಹೋಟೆಲುಗಳಿಗೂ, ಊಟದ ಗೃಹಗಳಿಗೂ ಏನೂ ಕೊರತೆಯಿಲ್ಲ. ಅಂತೆಯೇ ಅದೊಂದು ದೊಡ್ಡ ಊಟದ ಗೃಹ. ಮಾಮೂಲಿನಂತೆ ಹೋಟೇಲಿನಲ್ಲಿ ಗದ್ದಲವಡಗಿತ್ತು. ಪ್ಲೇಟುಗಳ, ಲೋಟಗಳ ಕಟ—ಲಟ ಶಬ್ದಗಳು, ರೇಡಿಯೋದಿಂದ ಆಗಾಗ ಹೊರಡುವ ಪ್ರೇಮಗೀತಗಳು—ಇವುಗಳಿಂದ ಕೂಡಿದ್ದು ವಿವಾಹ ಮಹೋತ್ಸವದ ಊಟವನ್ನುಣ್ಣುವರೋ ಎಂಬಂತೆ ಕಾಣುತ್ತಿತ್ತು.

ಕುರ್ಚಿಯಲ್ಲಿ ಕುಳಿತುಕೊಂಡು ಮೇಜಿನ ಮೇಲಿರಿಸಲಾದ ಊಟದ ತಟ್ಟೆಯಿಂದ ಉಣ್ಣುವ ಕ್ರಮವೂ, ನೋಡಲು ಒಂದು ರೀತಿಯ ಶೈಲಿಯಿಂದ ಕೂಡಿತ್ತು. ಅಲ್ಲಿ ಒಂದು ಮೇಜಿನ ಬಳಿ ಸದ್ಗೃಹಸ್ಥರಾಯರ ಕನ್ಯಾಮಣಿಯೊಬ್ಬಳು ಕುಳಿತು ಊಟ ಮಾಡುತ್ತಿದ್ದಳು. ಕಪ್ಪು ಕೂದಲಿನ, ಕುಣಿಯುತ್ತಿರುವ ಕಣ್ಣುಗಳುಳ್ಳ, ಬಳುಕುವ ದೇಹದಿಂದ ಕೂಡಿದ್ದು—ಒಂದು ರೀತಿಯ ಮಾಧುರ್ಯವು ಅವಳ ಸುತ್ತಲೂ ತುಂಬಿತ್ತು. ಅಂತೆಯೇ ಅವಳ ಮೇಜಿನಿಂದ ಸ್ವಲ್ಪ ದೂರದಲ್ಲಿಯೇ ಉತ್ತಮ ಆರೋಗ್ಯವಂತನೂ, ದೃಢಕಾಯನೂ, ನವೀನ ಉಡುಗೆ ತೊಡುಗೆಗಳಿಂದ ಕೂಡಿದವನೂ ಐಶ್ವರ್ಯವಂತನೂ ಆದ ತರುಣನೂ—ಪುರಾಣದಲ್ಲಿ ಹೇಳಲ್ಪಟ್ಟ ದೇವರೋ ಎಂಬಷ್ಟು ಸುಂದರ ರೂಪದಿಂದ ಶೋಭಿಸುತ್ತಾ, ಒಮ್ಮೆ ಊಟದ ಬಟ್ಟಲನ್ನೂ, ಒಮ್ಮೆ ಅವಳನ್ನೂ ದೃಷ್ಟಿಸುತ್ತಿದ್ದನು.

ಅವಳು ಕೂಡಾ ತಾನು ಊಟಮಾಡುತ್ತಿದ್ದಲ್ಲಿಂದಲೇ ಒಮ್ಮೆಲೇ ತಿರುಗಿದಳು. ಏಕೆಂದು ಈ ತರುಣನಿಗೂ ಹೊಳೆಯಲಿಲ್ಲ. ಅವಳು ತಿರುಗಿದ ಒಡನೆಯೇ— ಈ ತರುಣನು ತನ್ನ ಕನ್ನೆಯನ್ನು ಮುಟ್ಟಿ ನೋಡತೊಡಗಿದನು. ಅದೇನೋ ಆತನ ಕೆನ್ನೆಗೆ ನೀರು ಹಾರಿ ಒದ್ದೆಯಾಗಿತ್ತು. ಆಗ ಅವಳು— 'ಸ್ಸಾರಿ, ಅಕಸ್ಮಾತ್ ನಡೆದು ಹೋಯಿತು....' ಎಂದಳು.

"ಏನು? ಹೊರಗೆ ಜೋರಾಗಿ ಮಳೆ ಬರುತ್ತಿದೆಯೇ?" ಎನ್ನುತ್ತಾ ತನ್ನ ಕೆನ್ನೆಯನ್ನು ಸವರುತ್ತಾ ಹೇಳಿದನು.

"ನಾನು ಹೇಳಿದುದು ನಿಮಗಿನ್ನೂ ಅರ್ಥವಾಗಿಲ್ಲ ನೋಡಿ ಈ ಬಟಾಟೆಯು ಇಡಿಯಾಗಿತ್ತು. ಅದನ್ನು ನನ್ನ ಕೈಯಿಂದ ತುಂಡು ಮಾಡುತ್ತಿದ್ದಾಗ, ಪಕ್ಕನೆ ಜಾರಿತು. ಹಾಗೇ ನಿಮ್ಮ ಮೇಲೆ ನೀರೇನಾದರೂ ಹಾರಿರಬಹುದು. ಸ್ಸಾರಿ...."

"ಒಂದು ಬಟಾಟೆಯನ್ನು ತುಂಡು ಮಾಡುತ್ತಿರುವಾಗ ಹಾಗೆ ಬೀಸಾಡುವುದುಂಟರೇನು? ನನ್ನ ಕನ್ನೆಯ ಮೇಲೆ ಅದೂ ಕೂಡಾ...! ನಿಮ್ಮ ಹತ್ತಿರ ಕುಳಿತುದೇ ನನ್ನ ತಪ್ಪು" ಎಂದು ಅವಳನ್ನು ಬೇಕೆಂದೇ ಕೆಣಕಿದನು.

"ಪ್ಲೀಸ್, ತಪ್ಪೆಣಿಸಬೇಡಿ. ನಾನು ಬಿಸಾಡಿದುದಲ್ಲ."

"ಅಯ್ಯೋ.... ನನ್ನ ಕೆನ್ನೆಯಲ್ಲಿ ಇದೇನಿದು ರಕ್ತವೇ? ನನಗೆ ಅಲ್ಲಿ ಗಾಯವೂ ಇತ್ತು. ನೀವು ಆ ಬಿಸಿಯಾದ ಸಾಂಬಾರನ್ನು ಇತ್ತಕಡೆ ಹಾರಿಸಿ ನನ್ನ ಕೆನ್ನೆಯನ್ನು ತೆಗೆದಿರಷ್ಟೆ?'

"ನನ್ನ ಸೋಲು." ಎನ್ನುತ್ತಾ ತನ್ನ ಕೈಚೀಲವನ್ನು ಹಿಡಿದುಕೊಂಡು ಅವನ ಬಳಿ ಬಂದು ತನ್ನ ಕೈಚೀಲದಿಂದ ಕರವಸ್ತ್ರವನ್ನು ತೆಗೆದು ಆತನ ಕೆನ್ನೆಯನ್ನು ನಡುಗುತ್ತಿರುವ ಕರಗಳಿಂದ ಒರಸಿದಳು. "ಐ ಯೇಮ್ ಸೋ ಸ್ಸಾರಿ" ಎಂದಳು.

"ಥೇಂಕ್ಸ್, ಥೇಂಕ್ಸ್. ಕ್ಷೌರಾಗಾರದಲ್ಲಿ ಕ್ಷೌರಿಕನು ಗಡ್ಡವನ್ನು ತೆಗೆದ ನಂತರ, ಕರವಸ್ತ್ರದಿಂದ ಒರಸಿದರೆ ಅದೆಷ್ಟು ಮನಸ್ಸಿಗಾನಂದವಾಗುವುದೋ ಅಷ್ಟೇ ಆನಂದ ನನಗಾಗುತ್ತಿದೆ. ಅದು ಗಾಯವೂ ಅಲ್ಲ; ರಕ್ತವೂ ಅಲ್ಲ. ಬರೇ ಟೊಮೇಟೋ ಸಾಂಬಾರು ಮುಖದ ಮೇಲೆ ಬಿದ್ದಿತ್ತು ಅಷ್ಟೆ" ಎಂದನು.

ಇದನ್ನು ಕೇಳಿ ಅವಳಿಗೆ ತುಂಬಾ ಸಿಟ್ಟು ಬಂದಿತು. ಒಡನೆಯೇ ನಾಗಿಣಿಯಂತೆ ಬುಸುಗುಡುತ್ತಾ ತನ್ನ ಮೇಜಿನ ಬಳಿ ನಡೆದಳು. ಆ ಕೂಡಲೇ ಈ ಯುವಕನು ತನ್ನ ಮೇಜಿನ ಬಳಿಯಿದ್ದ ಅವಳ ಕೈಚೀಲವನ್ನು ತನ್ನಲ್ಲಿ ಅಡಗಿಸಿಟ್ಟನು. ಅವಳು 'ಇಂದು ನನ್ನ ಸೋಲಿನ ದಿನ' ಎಂದಳು.

"ರಾತ್ರಿ-ಹಗಲು, ದುಃಖ-ಸಂತೋಷ, ಜಯ-ಸೋಲು, ಇವುಗಳೆಲ್ಲಾ ಒಂದೇ ರೀತಿ ಯಾವಾಗಲೂ ಇರಲಾರವು. ಯಾಯಾವಾಗಲೂ ಮನುಷ್ಯನಿಗೆ ಗೆಲುವುದೊರಕೀತೇ?' ಎಂದನು ಯುವಕ.

"ಹಾದೇ? ಇಂತಹ ಸಂದರ್ಭ ಬಂದಾಗ ನಾನೇನು ಮಾಡಬೇಕು? ಅದನ್ನು ಹೇಳಲಿಕ್ಕೇ ನನಗೆ ತಿಳಿಯುವುದಿಲ್ಲ. ಓ, ನನ್ನ ಕೈಚೀಲವನ್ನು ನಾನು ಮರೆತು ಬಂದಿರಬೇಕು. ಓ ಮೈ ಗಾಡ್!" ಎಂದು ಹೇಳುತ್ತಾ ಕುರ್ಚಿಯಲ್ಲಿ ದೊಪ್ಪನೆ ಒರಗಿದಳು. ಕೆಲವೇ ಸೆಕೆಂಡುಗಳ ಹಿಂದೆ ಆ ಕೈಚೀಲದಿಂದ ಕರವಸ್ತ್ರವನ್ನು ತೆಗೆದಿದ್ದರೂ, ಅವಳಿಗೆ ಈ ಉಭಯ ಮೇಜಿನ ಮಧ್ಯದಲ್ಲಿ ಎಲ್ಲವೂ ಮರೆತೇ ಹೋಯಿತು.

ಆಗ ಆ ಯುವಕನು ತನ್ನ ಮೇಜಿನ ಬಳಿಗೆ ಅವಳನ್ನು ಕರೆದು, ತನ್ನ ಮುಂದಿರುವ ಕುರ್ಚಿಯಲ್ಲಿ ಕುಳಿತುಕೊಳ್ಳಲು ಹೇಳಿದನು. "ಕೈಚೀಲದ ಸಲುವಾಗಿ ನಾನು ನಿಮಗಾಗಿ ಏನು ಕೊಡಬೇಕು?"

"ಅಯ್ಯೋ, ವಟೀಸ್ ಯುವರ್ ಕೊಶ್ಚನ್? ನಾನೀಗ ಬಿಲ್ ಹೇಗೆ ಕಟ್ಟಲಿ?'

"ಅಷ್ಟೇನಾ, ನಾನು ಕೊಡುತ್ತೇನೆ.'

"ಆದರೆ ನನ್ನ ಬಿಲ್ ನೀವು ಕೊಡುವುದು... ನನಗೆ.. ಮ....ನ....ಸ್ಸು........ ಒಪ್ಪದು."

"ಸಂಕೋಚ ಬೇಡ. ಐ ವಿಲ್ ಪೇ ದಿ ಬಿಲ್. ಇನ್ನು ನಿಮ್ಮಿಂದ ಯಾವ ಮಾತೂ ಆ ಕುರಿತು ಬೇಡ. ಅಸಹಾಯ ಸ್ಥಿತಿಯಲ್ಲಿರುವಾಗ ಮನುಷ್ಯನಿಗೆ ಸಹಾಯ ಮಾಡದಿದ್ದರೆ ಅವನು ಮನುಷ್ಯನೇ? ಅದೂ ಕೂಡಾ ಒಂದು ಹೆಣ್ಣಿಗೆ...."

"ಸಾಕು, ಒಳ್ಳೆಯ ಹಾಸ್ಯಗಾರನಂತಿದ್ದೀರಿ! ತುಂಬಾ ಥೇಂಕ್ಸ್. ನಿಮ್ಮ ಹಣವನ್ನು ನಾನು ಹಿಂದೆ ಕೊಡಲೇ ಬೇಕು. ಅದಕ್ಕಾಗಿ ತಮ್ಮ ವಿಳಾಸವನ್ನು ದಯವಿಟ್ಟು ಕೊಡಲೇ ಬೇಕು. ಅದಕ್ಕಾಗಿ ತಮ್ಮ ವಿಳಾಸವನ್ನು ದಯವಿಟ್ಟು ಕೊಡುವಿರಾ?

"ನಾನು ಹೇಳಿಲ್ಲವೇ ಇನ್ನೊಂದು ಶಬ್ದ ಬರಬಾರದೆಂದು?'

ಆಗ ಅವಳು ನಗುತ್ತಾ—"ನೀವು ಪರಪೂರಿನವರೋ, ಈ ಊರಿನವರೋ?'

ಪರಪೂರಿನವನೇನಲ್ಲ ಇಲ್ಲಿಯೇ ಕರೋಲ್ ಬಾಗ್‌ನಲ್ಲಿಯೇ ನಮ್ಮ ಮನೆಯಿದೆ. ಲೈಬ್ರೇರಿಯನ್ ಆಗಿ ಕೆಲಸಮಾಡುತ್ತಿದ್ದೇನೆ ಅದೇನೇ ಇರಲಿ ನಾವಿಬ್ಬರು ಪರಿಚಿತರಾದುದಕ್ಕೆ ನನಗೆ ತುಂಬಾ ಸಂತೋಷವಾಗುತ್ತಿದೆ. ಸರಿ ನೀವೇನು ಮಾಡುತ್ತಿದ್ದೀರಿ?'

"ನಾನು ಮೂರ್ ಫಾರಂ ಮತ್ತು ಮೋಹನ್ ಲಿಮಿಟೆಡ್ ಕಂಪೆನಿಯಲ್ಲಿ ಕೆಲಸ ಮಾಡುತ್ತಿದ್ದೇನೆ. ಅಲ್ಲಿನ ಆಫೀಸ್‌ನಲ್ಲಿ ಅಸಿಸ್ಟೆಂಟ್ ಕ್ಲಾರ್ಕ್ ಆಗಿದ್ದೇನೆ" ಎಂದಳು.

"ಹಾಗಿದ್ದಲ್ಲಿ ತಮ್ಮ ಹೆಸರು ಕೂಡಾ ಸುಂದರವಾಗಿಯೇ ಇರಬಹುದಲ್ಲವೇ? ಏನದು?"

ನಾಚುಗೆಯಿಂದಲೇ ಅವಳು ಹೇಳಿದಳು.— "ರೋಮೋಲಾ ಕಪೂರ್.'

"ಐ ಸೀ, ಅಷ್ಟು ನಿಧಾನವೇಕೆ? ನಿಮ್ಮ ಹೆಸರು ನಿಮಗೆ ಚಂದ ಕಾಣುವುದಿಲ್ಲವೇ? ಹಾಗಾದರೆ ನಿಮ್ಮ ಹೆಸರನ್ನೇ ಬೇರೆ ಮಾಡಿ ಬಿಡಿ ನನ್ನ ಹೆಸರೇನೆಂದು ಮತ್ತೆ ಕೇಳಬೇಡಿ. ಸುರೇಶ ಎಂದು ನನಗೆ ಹೆಸರಿಟ್ಟಿದ್ದಾರೆ.'

'ಉತ್ತಮವಾದ ಹೆಸರು." ಎಂದಳು. ಸ್ವಲ್ಪ ಹೊತ್ತು ಅವರಿಬ್ಬರಲ್ಲೂ ಮೌನ ಅಡಗಿತು. ಅಷ್ಟರಲ್ಲೇ ಸಪ್ಲೈ ಹುಡುಗನು ಬಿಲ್ ತಂದು ಅವರ ಮುಂದಿರಿಸಿದನು. ಬಿಲ್ಲಿನ ಹಣ ತೀರಿಸಿಯಾಯಿತು.

"ಓ, ನಿಮ್ಮ ಕೈಚೀಲ ನನ್ನ ಕಾಲ ಬುಡದಲ್ಲೇ ಇದೆ.' ಎಂದು ತಾನೊಂದು ಮಹತ್ಕಾರ್ಯವೆಸಗಿದಂತೆ ಆ ಕೈಚೀಲವನ್ನು ಅವಳ ಮುಂದೆ ಹಿಡಿದನು.

"ಇಷ್ಟು ಹೊತ್ತಿನ ತನಕ ಏಕೆ ಹೇಳಲಿಲ್ಲ?" ಎಂದಳು.

'ನನಗೂ ಮರೆತೇ ಹೋಗಿತ್ತು'.

"ಆಗಲಿ, ಸಿಕ್ಕಿತಲ್ಲ. ಈಗ ನಾನೆಷ್ಟು ನಿಮಗೆ ಕೊಡಲಿಕ್ಕಿದೆ?'

'ನಿಮ್ಮನ್ನು ಕಾಣಿಸಿದ್ದಕ್ಕೆ ನಾನೇ ಕೊಡಬೇಕು..."

"ಓ, ಗಂಟೆ ಎರಡಾಯಿತು. ನನಗೆ ಆಫೀಸಿಗೆ ಹೊತ್ತಾಯ್ತು. ಆಗಲಿ...... ಗಾಡ್ ಬ್ಲೆಸ್ ಯು...ಬರುತ್ತೇನೆ...' ಎಂದು ಹೇಳುತ್ತಾ ಹೊರಟಳು. ರೋಮೊಲಾ ನಗುತ್ತಾ ಅಂದು ಆಫೀಸಿಗೆ ತೆರಳಿದಳು.

ೲ ೲ ೲ ೲ

ವಿವಾಹವಾದರೆ ಅವಳನ್ನೇ ವಿವಾಹವಾಗಬೇಕೆಂದು—ಸುರೇಶನ ಬಯಕೆಯು ಹೆಚ್ಚಿತು. ತಾನೆಂದು ಬಗೆದಂತೆ ನಡೆದೀತೇ? ಅತ್ತ ತಂದೆಯ ಕೋಪಾಗ್ನಿಯಿದೆ. ಇತ್ತ ತನ್ನ ಪ್ರೇಮದ ಅಗ್ನಿಯು ತಣಿಯಲಿಕ್ಕೂ ಇಲ್ಲ. ಸುರೇಶನು ಒದ್ದಾಡತೊಡಗಿದನು ತಂದೆತಾಯಂದಿರ ಏಕಮಾತ್ರ ಪುತ್ರ ಸುರೇಶನಾಗಿದ್ದನು. ವಿಧೇಯನಾದ ಹುಡುಗನಾಗಿದ್ದನು ಸುರೇಶ. ಹಿರಿಯರಿಗೆ ವಿರೋಧವಾಗಿ ಈ ರೀತಿ ಮಾಡಬಹುದೇ ಎಂಬುದೇ ಆತನಿಗೆ ದೊಡ್ಡ ಸಮಸ್ಯೆಯಾಯಿತು.

(ಹದಿನೈದನೇ ಪುಟ ನೋಡಿರಿ)



ಅತ್ಯಾಧುನಿಕ ಸಲಕರಣೆ — ಸೌಕರ್ಯಗಳಿಂದ ಕೂಡಿದ
ಭೋಜನ, ಉಪಾಹಾರ ಮತ್ತು ವಸತಿ ಗೃಹ



ಹೋಟೆಲ್ ಶಿವಪ್ರಸಾದ

ಫೋನ್: 77 ಕುಂದಾಪುರ, ದ. ಕ.

ನಲ್ವತ್ತಾರನೆ ವರ್ಷ
Telephone 226.

Estd. 1921

NAVAYUGA

Leading Kannada Weekly

UDIPI, S. Kanara

ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಉಡುಪಿ, ದ. ಕನ್ನಡ.

++

ಸಂಚಾಲಕ—ಸಂಪಾದಕ:

ಕೆ. ಹೊನ್ನಯ್ಯ ಶೆಟ್ಟಿ

++

ವಾರ್ಷಿಕ ಚಂದಾ:

ಮೂರು ವಿಶೇಷ ಸಂಚಿಕೆಗಳು ಸೇರಿ
ಅಂಚೆ ವೆಚ್ಚ ಸಹಿತ ಮುಂಗಡ
ಸ್ವದೇಶ ರೂ. ೧೦
ವಿದೇಶ ರೂ. ೧೮

++

ಜಾಹೀರಾತು ದರಗಳು:

ಅನಿಯಮಿತ (ಕೆಜುವಲ್)
ಕಲಂ ಸೆಂಟಿಮೀಟರಿಗೆ ರೂ. 2-00
ನಿಯಮಿತ (ಕಂಟ್ರಾಕ್ಟ್)
ಕಲಂ ಸೆಂಟಿಮೀಟರಿಗೆ ರೂ. 1-50

++

ಸೂಚನೆಗಳು

ಲೇಖಕ ಬಂಧುಗಳಿಗೆ

ಲೇಖನವು ಕಿರಿದಾಗಿದ್ದು ಹಿರಿದರ್ಥದಿಂದ ಕೂಡಿರಬೇಕು. ಕಾಲು ಕಾವಿನ ಪ್ರಮಾಣದ ಹಾಳೆಯ ಒಂದೇ ಮಗ್ಗುಲಲ್ಲಿ ಬದಿಯಿಂಬುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು. ಆಧಾರಿತ, ಅನುವಾದಿತವಾದರೆ ಅವುಗಳ ಮೂಲವನ್ನೂ ತಿಳಿಸಬೇಕು.

ಚಂದಾದಾರರಿಗೆ—

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಮುಖಪತ್ರದಲ್ಲಿ:

ಅಮೆರಿಕನ್ ಸೇನೆಯ ಸಾರ್ಜೆಂಟ್ ಥಾಮಸ್ ಮೆಕ್‌ನಿಫ್ ಎಂಬವನು ಕಂಠನಾಳ ಪರೀಕ್ಷೆಗಾಗಿ ಬಂದವಿಯತ್ನಾಮು ಹುಡುಗಿಯೊಬ್ಬಳಿಗೆ, ಬಾಯಿಯನ್ನು ಅಗಲವಾಗಿ ತೆರೆಯುವಂತೆ ತನ್ನ ಬಾಯಿಯನ್ನು ತೆರೆದು ತೋರಿಸಿ ಹೇಳುತ್ತಿದ್ದಾನೆ.

ನವಯುಗ

ಸಂಪುಟ ೪೬	ಉಡುಪಿ	Vol. 46
ಸಂಚಿಕೆ ೨	೮—೯—೧೯೬೬	No. 2

ಸ್ವರ್ಣ ವಿನಿಯಂತ್ರಣ

ಪ್ರಧಾನಿ ಇಂದಿರಾ ಗಾಂಧಿಯವರು ಸಂಸತ್ತಿನ ಉಭಯ ಸಭೆಗಳಲ್ಲೂ ಸುವರ್ಣ ನಿಯಂತ್ರಣ ಶಾಸನವನ್ನು ತಿದ್ದಿ ಅಧಿಕ ಶುದ್ಧತೆಯ ಆಭರಣವನ್ನು ಮಾಡಲು ಅನುಮತಿ ನೀಡುವ ಬಗ್ಗೆ ಸರಕಾರದ ನಿರ್ಧಾರವನ್ನು ಘೋಷಿಸುವಾಗ ಸಂಸತ್ತು ತೋರ್ಪಡಿಸಿದ ಪ್ರತಿಕ್ರಿಯೆಯು ದೇಶದ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸುತ್ತದೆ. ಸಂಸತ್ ಸದಸ್ಯರು ತೀವ್ರಹರ್ಷೋದ್ಗಾರಗಳಿಂದ ಸರಕಾರದ ನೀತಿಯನ್ನು ಸ್ವಾಗತಿಸಿದರು. ಇದರೊಂದಿಗೆ ನಾಲ್ಕು ವರ್ಷಗಳ ಹಿಂದೆ ವ್ಯವಹಾರಕ್ಕೆ ಬಂದು ಅನೇಕರ ಟೀಕೆ—ಟಿಪ್ಪಣಿಗಳಿಗೆ ಒಳಗಾದ ಕಷ್ಟ ಕಾರ್ಪಣ್ಯಗಳಿಗೆ ಎಡೆಮಾಡಿದ ಸ್ವರ್ಣ ನಿಯಂತ್ರಣ ಶಾಸನವು ಬಹ್ವಂಶ ಜನತೆಯ ಇಚ್ಛೆಯಂತಾಗುವುದು. ನಿಯಂತ್ರಣದ ವೇಳೆಯೇ ಇದಕ್ಕೆ ಪ್ರತಿಭಟನೆ ಸಂದಿತ್ತು. ಆದರೆ,ಮುರಾರ್ಜಿಭಾಯಿಯವರ ದೃಢತೆಯಿಂದ ನಿಯಂತ್ರಣ ವ್ಯವಹೃತವಾಯ್ತು. ಟಿ.ಟಿ.ಕೆಯವರ ಕಾಲದಲ್ಲಿ ಹಳೆಯ ಆಭರಣಗಳನ್ನು ಕರಗಿಸಿ ಅದಕ್ಕೆ ಶುದ್ಧತೆಯ ಆಭರಣಗಳಾಗಿ ಮಾಡುವ ಅವಕಾಶ ದೊರೆತರೆ, ಈ ಒಂಬತ್ತು ತಿಂಗಳ ಅರ್ಥಮಂತ್ರಿ ಸಚೀಂದ್ರ ಚೌಧರಿಯವರ ಕಾಲ ಸರಕಾರ ಹಿಂದೆ ಸರಿಲಿಕ್ಕಬೇಕಾಯಿತು. ವ್ಯಕ್ತಿಗತವಾಗಿ ಎಲ್ಲರೂ ಸ್ವರ್ಣ ನಿಯಂತ್ರಣವನ್ನು ಬೆಂಬಲಿಸುವವರೇ, ಆದರೆ ಸಾಮೂಹಿಕವಾಗಿ ವಿರೋಧಿಸುವವರು—ಬಹುಮತದ ಮುಂದೆ ತಲೆವಾಗುವುದು ಪ್ರಜಾಸತ್ತೆಯ ಸತ್ ಪರಂಪರೆ. ಚುನಾವಣೆಯ ಹಿನ್ನೆಲೆಯಲ್ಲೇ ಈ ಹೆಜ್ಜೆಯನ್ನು ಸರಕಾರ ಇಟ್ಟಿರುವುದು ಗಮನೀಯ. ಸ್ವರ್ಣ ನಿಯಂತ್ರಣದ ಬಗ್ಗೆ ನಿಯುಕ್ತವಾದ ಉಪಸಮಿತಿಯೂ ದರೂ ತನ್ನ ವರದಿಯಲ್ಲಿ ಹೇಳಿದೆ—ನಿಯಂತ್ರಣವನ್ನು ಇನ್ನೂ ಕಟ್ಟುನಿಟ್ಟಾಗಿ ಪಾಲಿಸಬೇಕು ಎಂದು. ಇದಕ್ಕೆ ವಿರುದ್ಧವಾಗಿಯೇ ಸರಕಾರ ಕ್ರಮ ಕೈಗೊಂಡಂತಾಯಿತು. ಇಂತಹ ಘಟನೆಗಳು ಈ ಮೊದಲೂ ಹಲವು ನಡೆದಿವೆ. ಇರಲಿ.

ನಿಯಂತ್ರಣವನ್ನು ಆರಂಭಿಸುವಾಗ ಇದ್ದ ಮುಖ್ಯ ಉದ್ದೇಶವೇದರೆ, ಚಿನ್ನದ ಮೇಲಿನ ವ್ಯಾಮೋಹವನ್ನು ಕಡಿಮೆ ಮಾಡುವುದು ಮತ್ತು ಚಿನ್ನದ ಕಳ್ಳ ವ್ಯಾಪಾರವನ್ನು ನಿಲ್ಲಿಸುವುದು;ಇವೆರಡರಿಂದ ದೇಶದ ವಿದೇಶಿ ವಿನಿಮಯವನ್ನು ಉಳಿಸುವುದು. ಆದರೆ, ಕಳೆದ ನಾಲ್ಕು ವರ್ಷಗಳಲ್ಲಿ ನಡೆದುದೇನು? ೧೪ ಕ್ಯಾರೆಟ್ ಆಭರಣಗಳು ಎಷ್ಟು ಜನಪ್ರಿಯವಾಗಿವೆ? ಜನತೆ ಬಂಗಾರದ ಮೋಹವನ್ನು ಬಿಡಲಿಲ್ಲ. ಬಹಿರಂಗವಾಗಿ ಇದಕ್ಕೆ ಅವಕಾಶ ದೊರೆಯದೆ ಹೋದರೆ ತಾನಾಗಿಯೇ ಕಳ್ಳ ಪೇಟೆಗಳು ಹುಟ್ಟಿಕೊಳ್ಳುತ್ತವೆ. ಹಾಗಾಗಿ ಎಲ್ಲೆಲ್ಲೂ ಬಂಗಾರದ ಕಳ್ಳ ಪೇಟೆ ತೆರೆಯಿತು—ಬೆಲೆಯೇರಿತು. ಯಾವುದೇ ಶಾಸನವಾದರೂ ಜನತೆಯ ಸಹಯೋಗವಿರದೆ ಹೋದರೆ, ವ್ಯವಹಾರಕ್ಕೆ ತರುವುದು ಕಷ್ಟಸಾಧ್ಯ. ಹಾಗಾಗಿ ಸರಕಾರವು ನಿಯಂತ್ರಣ ಹೇರಿದಂತೆಯೇ ಬೆಲೆ ನಿಯಂತ್ರಣವೂ ತಪ್ಪಿ ಹೋಯಿತು. ಕಳ್ಳ ಪೇಟೆಗಾರರು, ಕಳ್ಳ ಕೆಲಸಗಾರರು ಇಂತಹ ಬಂಗಾರಪ್ರಿಯರನ್ನು ಸುಲಿದೇ ತಮ್ಮ ಹೊಟ್ಟೆ ಬೆಳೆಸಿಕೊಂಡರು.

ಇದರಿಂದ ಸರಕಾರಕ್ಕಾದರೂ ಆದ ಲಾಭವೇನು? ಕೆಲಸ ಕಳೆದುಕೊಂಡ ಸ್ವರ್ಣಕಾರರಿಗೆ ಪರಿಹಾರ ನೀಡುವಲ್ಲಿ ಎಷ್ಟು ಹಣ ಸಾರ್ವಜನಿಕ ಬೊಕ್ಕಸದಿಂದ ಹೋಗಿಲ್ಲ? ಅವರಿಗೆ ಭೂಮಿ ಒದಗಿಸುವ ನೆವದಲ್ಲಿ ಎಷ್ಟು ಭೂಮಿ ಹೋಗಿಲ್ಲ? ಅವರ ಮಕ್ಕಳಿಗೆ ಶಿಷ್ಯವೃತ್ತಿ ನೀಡಲು ಸರಕಾರ ಎಷ್ಟು ವೆಚ್ಚ ಮಾಡಿಲ್ಲ? ಬಂಗಾರದ ಮಾರಾಟವೂ ಕೆಲಸವೂ 'ಬಂದ್' ಆದುದರಿಂದ ಎಷ್ಟು ಮೊತ್ತದ ಕರವು ಕೈತಪ್ಪಲಿಲ್ಲ? ಇಷ್ಟಾದರೂ ನಿಯಂತ್ರಣದ ಉದ್ದೇಶ ಸಫಲವಾಗದಿರುವುದು ಸರ್ವವೇದ್ಯವಿರುವಾಗ ಸರಕಾರದ ಮುಂದಿರುವ ದಾರಿಗಳು ಎರಡೇ: ಶಾಸನವನ್ನು ಜನಪ್ರಿಯಗೊಳಿಸಿ, ಅದು ಕಟ್ಟುನಿಟ್ಟಾಗಿ ವ್ಯವಹೃತವಾಗುವಂತೆ ಜನಶಕ್ತಿಯನ್ನು ಕೇಂದ್ರೀಕರಿಸುವುದೊಂದು, ಇದು ಸಾಧ್ಯವಿಲ್ಲದಾಗ ಕೈಬಿಡುವುದು ಮತ್ತೊಂದು. ಸರಕಾರ ಎರಡನೆಯ ಹಾದಿ ಹಿಡಿಯಿತು; ಅನ್ಯಾಯವೇನೂ ಇಲ್ಲ. ಆದರೆ, ಸರಕಾರದಲ್ಲಿ ಜನಶಕ್ತಿ ಸಂಘಟನಾಶಕ್ತಿ ಹ್ರಾಸವಾಗುತ್ತಿದೆ ಎಂಬುದು ಮಾತ್ರ ಇದರಿಂದ ವ್ಯಕ್ತವಾಯಿತು. ಇರಲಿ, ಬಹಿರಂಗ ಪೇಟೆಯು ಇನ್ನು ಆರಂಭವಾಗುವುದರಿಂದ ಸರಕಾರದ ಬಂದಾದ ಆದಾಯದ ಕೆಲ ಬಾಗಿಲು ಮತ್ತೆ ತೆರೆದಂತಾಯಿತು—ಇದೇ ಸದ್ಯ ಸಮಾಧಾನ. ಸ್ವರ್ಣ ನಿಯಂತ್ರಣದಿಂದ ಲಾಭ ಪಡೆದವರು ಕೆಲವರಿದ್ದಾರೆ. ಸರಕಾರದ ಅಸ್ಥಿರ ನಿಲುಮೆಯಿಂದ ಸಂಪೂರ್ಣ ಲಾಭ ಪಡೆದವರೂ ಇದ್ದಾರೆ. ಒಮ್ಮೆ ಕೊಟ್ಟ ಭೂಮಿಯನ್ನು ಮರಳಿ ಪಡೆಯಲಾಗುತ್ತದೆಯೆ? ಭಾಗ್ಯದ ಬಾಗಿಲು ಎಲ್ಲರಿಗೂ ತೆರೆಯುವುದಿಲ್ಲ.

ಇದರಂತೆಯೇ ಚರ್ಚಾಸ್ಪದವಾಗಿರುವ ಇನ್ನೊಂದು ಶಾಸನ ಅಂದರೆ, ಪಾನಪ್ರತಿಬಂಧ. ಅಖಿಲ ಭಾರತದ ಒಂದೊಂದು ರಾಜ್ಯದಲ್ಲಿ ಈ ಶಾಸನ ಒಂದೊಂದು ರೀತಿಯಿದೆ; ಒಂದು ರಾಜ್ಯದಲ್ಲಿ ಕೆಲವೆಡೆ ಶಾಸನವಿದ್ದರೆ, ಮತ್ತೆ ಕೆಲವೆಡೆ ಇರುವುದಿಲ್ಲ. ಜನತೆಯ ಬುದ್ಧಿಕೆಡಿಸಿ ಗಳಿಸುವ ಹಣ ನಮಗೆಬೇಡ—ಎಂಬ ಕಾಂಗ್ರೆಸ್ ನೀತಿಯಿಂದ ಇದು ಇನ್ನೂ ಜೀವಂತವಿದೆ. ಆದರೆ, ಇದರಿಂದ ಸರಕಾರದ ಬೊಕ್ಕಸಕ್ಕಾಗುವ ನಷ್ಟ—ಕಳ್ಳ ಪೇಟೆಯ ಪ್ರಮಾಣ—ಇವು ವಿಮರ್ಶನೆಗೆ ಕಾರಣವಿವೆ. ಆದರ್ಶವನ್ನು ಪಾಲಿಸುವ ಶಕ್ತಿ ನಮಗಿದ್ದಂತೆ ತೋರುವುದಿಲ್ಲ. ಲಂಚ—ರುಷುವತ್ತು, ಪ್ರಭಾವಗಳ ಬಲೆಯೊಳಗಿಂದ ಸರಕಾರಿ ಅಧಿಕಾರಿ—ಅನಧಿಕಾರಿಗಳು ಬಿಡುಗಡೆಯಾಗದೆ ಯಾವುದೇ ಶಾಸನ ಕಟ್ಟುನಿಟ್ಟಾಗಿ ವ್ಯವಹಾರಕ್ಕೆ ಬಾರದು. ಸಾಮಾನ್ಯ ಜನತೆಗೆ ಬೇಕಾಗಿರಲಿ, ಬೇಡವಾಗಿರಲಿ, ಪಾನಪ್ರತಿಬಂಧ ಸ್ವಾತಂತ್ರ್ಯನಂತರದಲ್ಲಿ ಜ್ಯಾರಿಗೆ ಬಂದಿದೆ—ಏನೋ ಒಂದು ರೀತಿಯಲ್ಲಿ ಮುಂದುವರಿಯುತ್ತಿದೆ, ಆದರೂ ಈ ಸಂಬಂಧದಲ್ಲಾದರೂ ಸರಕಾರ ಶಾಸನವನ್ನು ಸಡಿ

(ಹದಿನಾಲ್ಕನೇ ಪುಟ ನೋಡಿರಿ)

ವಚನ ಸುಧೆ

ಸತ್ಕೃತಾಶ್ಚ ಕೃತಾರ್ಥಾಶ್ಚ |
ಮಿತ್ರಾಣಾಂ ನ ಭವಂತಿಯೇ ||
ತಾನ್ ಮೃತಾನಪಿ ಕ್ರವ್ಯಾದಾ:
ಕೃತಘ್ನಾನ್ನೋಪ ಭುಂಜತೇ ||

ಮಿತ್ರರಿಂದ ಸತ್ಕೃತನಾಗಿ ಸಹಕೃತನಾಗಿದ್ದರೂ ಅವರಿಗೆ ಎರಡು ಬಗೆಯುವ ಕೃತಘ್ನನು ಸತ್ತಮೇಲೆ ಅವನ ಮಾಂಸವನ್ನು ಮಾಂಸ ತಿನ್ನುವವುಗಳೂ ಮುಟ್ಟುವುದಿಲ್ಲ.

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

O. S. 68/1962

ವಾದಿ.— ಶಿವರಾಮ ಹೆಗ್ಗಡೆ.

ಪ್ರತಿವಾದಿರು— ಉಪೇಂದ್ರ ಎಸ್. ನಾಯ್ಕ ಕೂಡಾ 18ಜನರು.

ಸದ್ರಿ ದಾವೆಯ ನಪ್ಲಿಮೆಂಟು 18ನೇ ಪ್ರತಿವಾದಿಗೆ ತಿಳಿಸುವದೇನೆಂದರೆ—

ನಪ್ಲಿಮೆಂಟು 18ನೇ ಪ್ರತಿವಾದಿ. ರಾಮ. 6ನೇ ಪ್ರ. ಉಪ್ಪಾರ ಮಂಜಮ್ಮನ, ಕುಂದಾಪುರ ತಾಲ್ಲೂಕ ನಂಬ್ರ 1ನೇ ಶಿರೂರು ಗ್ರಾಮಸ್ತ.

ವಾದಿಯು ನಿಮ್ಮ ವಗೈರರ ಮೇಲೆ ಮೇಲ್ಕಂಡ ದಾವೆಯನ್ನು ದಾಕಲು ಮಾಡಿರುತ್ತಾನೆ. ಸದ್ರಿದಾವೆಯು ತಾರೀಕು 19—9—66 ಕ್ಕೆ ತನ್ಕಿಗೆ ಯಿಟ್ಟಿರುವದ್ರಿಂದ ಸದ್ರಿ ದಾವೆಯಲ್ಲಿ ನಿಂಮ ಕಡೆಯಿಂದ ಉದಾಹರಣೆಯಿದ್ದ ಪಕ್ಷದಲ್ಲಿ ಸದ್ರಿ ತಾರೀಕಿನ ದಿವಸ ಹಗಲು 11ಗಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ಹಾಜ್ರು ಆಗಿ ಜಾಹೀರು ಮಾಡಿ ಕೊಳ್ಳತಕ್ಕದ್ದು. ತಪ್ಪಿದಲ್ಲಿ ಸದ್ರಿ ದಾವೆಯನ್ನು ನಿಂಮ ಗೈರು ಹಾಜರಿಯಲ್ಲಿ ಕೇಳಿ ಪೈಸಲು ಮಾಡೋಣಾದೀತೆಂತ ಯಿದ ಮೂಲಕ ತಿಳಿಸಲಾಗುತ್ತದೆ.

M. Madhava Rao
Advocate for Plaintiff.

ತಾರೀಕು, 2—9—66.

ನರಸಣ್ಣನ ಸರಸ



"ಕೊಡಬೇಕಾದ್ದು ನಾನು ನಿಜ, ಆದರೆ ನೋಡು ನನ್ನ ಸಾಕ್ಷಿದಾರರು.. ನೀನೇ ಕೊಡಬೇಕಾದ್ದು ಅಂತ ಸಾರುತ್ತಿರುವಾಗ..."

ಗೇಹ ರಾಜ್ಯದಲ್ಲಿ

ಮಂದಭಾಗ್ಯನಿಗೆ ದಾರಿದ್ರ್ಯ ಬಿಡದು

"ಹಣೆಯ ಬರಹವು ಹಾಡಿಕೊಂಡು ಅತ್ತರೂ ಬಿಡದು, ಎತ್ತ ಹೋದರೂ ಮೃತ್ಯು ಬೆನ್ನ ಬಿಡದು..."

"ನಿಜ ಕಣೆ....ಖಂಡಿತಕ್ಕೂ... ಹಾಡು ನೋಡೋಣ..."

"ರಾಮೇಶ್ವರಕ್ಕೆ ಹೋದರೂ ಶನೀಶ್ವರ ಬಿಡದು ನಾಡೆಲ್ಲ ಬಿಟ್ಟರೂ, ಸುಡುಗಾಡು ಬಿಡದು....'

'ಭಾರೀ ಚಲೋದಿದೆ...ಅಲ್ಲಾ ಕವಿಗಳಿಗೆಲ್ಲ ನಾಳೆ ಆಗೋದು ಇವತ್ತೇ ಹೇಗೆ ಗೊತ್ತಾಗುತ್ತೇಂತ..."

'ಹೇಗೇಂತ ಅವ್ರನ್ನೇ ಕೇಳಬೇಕು... ಏನೋ. ದೂರದರ್ಶಿ—ಭವಿಷ್ಯದರ್ಶಿ, ಪವಾಡಪುರುಷ ಅಂತಾರಲ್ಲಾ...ಹಾಗೆ...'

'ಅದು ಸರೀನ್ನು. 'ನಾನೃಷಿ ಕುರುತೇ ಕಾವ್ಯಂ" ಅಂದಿದ್ದಾರೆ ನಮ್ಮ ಹಿಂದಿನವರು...."

'ಆದ್ದರಿಂದಲೇ ಅವರ ಕಾವ್ಯ ಇಂದುವೂ ಯುವಾಗ್ತಾ ಇರೋದು...."

"ಏನಂದೆ?"

'ಮತ್ತೆಂಥದ್ರಿ? ನೋಡಿ, ನಿಮ್ಮ ಮಹಾಋಷಿ ಕವಿಗಳ ಕಾವ್ಯಗಳ ಗತಿ ಏನಾಗಿದೇಂತ."

"ಏನಾಗಿದೆ?" ವಾರಪುಸ್ತಕಗಳನ್ನ ತುಸು ಅಡಿಮೇಲು ಮಾಡಿದ್ರೆ ಗೊತ್ತಾಗುತ್ತೆ..."

'ಯಾಕೆ? ಏನಾಯ್ತು?'

"ನೋಡಿ, ನಮ್ಮ ವೆಂಕ್ಟ ಬಂದಿದ್ದ. ಅವ ಹೇಳ್ತಾನೆ—ನಿಮ್ಮ ಆದಿಕವಿ ಪಂಪನಿದ್ದಾನೆ ನೋಡಿ, ಅವನದ್ದು ನಾಲ್ಕು ಪದ್ಯ ಏಳನೆ ತರಗತಿಯಲ್ಲಿ ಕಲ್ತರೆ, ಸರಿ. ಮುಗೀತಂತೆ. ಮತ್ತೆ ಡಿಗ್ರಿ ಡಿಗ್ರಿಗನಾದ್ರೂ ಬಂದ್ರೆ ಸಂಗ್ರಹ—ಸಂಗ್ರಹದ ಸಂಗ್ರಹ ಮಾಡಿ ಬಿಡ್ತಾರಂತೆ ..'

"ಮತ್ತೆ ಎಲ್ಲಾ ಕವಿಗಳ ಕೃತಿಗಳನ್ನೂ ಓದಿಸೋಕೆ ಸಾಧ್ಯವೆ? ಎಲ್ಲಾ ಸ್ಥಾಲೀಪುಲಾಕನ್ಯಾಯ...."

"ಅದೇ ಅಂದದ್ದು. ಇಂತಹ ಸ್ಥಿತಿಯಲ್ಲಿ ಪಂಪನು ಬನವಾಸಿ ದೇಶವೆಂಬ ಕಾವ್ಯ ಬರೆದನೋಂತಂದ್ರೆ ತಪ್ಪಾದ್ರೂ ಏನು?'

'ತಪ್ಪು ಅನ್ನೋದು ಮಹಾ ತಪ್ಪು ಕಣೆ...'

"ಮತ್ತೆ ನಮ್ಮ ಗತಿ ಹೀಗಾಗುತ್ತ ಹೋದರೆ ಅದ್ರಲ್ಲಿ ವಿಶೇಷವೇನು?"

'ಏನೂ ಇಲ್ಲ ಬಿಡು. ಮರಿದುಂಬಿಯಾಗಿ, ಕೋಗಿಲೆಯಾಗಿ, ಮಲ್ಲಿಗೆಯಾಗಿ ಕನ್ನಡ ನಾಡಿನಲ್ಲಿ ಜನ್ಮಜನ್ಮಾಂತರವಾಗ ಬಯಸಿರುವಾಗ ನಾವು....?"

'ಓಯ್, ಏನೇ ಆಗ್ಲಿ, ನಮ್ಗೆ ಮರುಜನ್ಮಾನೇ ಬೇಡ; ಭಾರತದಲ್ಲಂತೂ ಇಷ್ಟವಿಲ್ಲ; ಇನ್ನು ಇಲ್ಲೇ ಆಗುವುದಾದ್ರೂ ನೋಡಿ, ದಕ್ಷಿಣ ಭಾರತದಲ್ಲಿ ಬೇಡ ಅದೂ ಅಗ್ಲೇ ಬೇಕೂಂತಿದ್ರೂ ಕರ್ನಾಟಕದಲ್ಲಂತೂ ಬೇಡವೇ ಬೇಡ....'

"ಯಾಕೆ"

"ಈ ಕರಿನಾಡಿನಲ್ಲಿ ಹುಟ್ಟಿ ಆಜನ್ಮ ಕರಿನೀರಿನ ಕರಕರ ಯಾಕೆ ಪಡಬೇಕ್ರಿ?"

"ಅಂದ್ರೆ ನನ್ಗೆ ಕರಕರಿಯಾಗೋಲ್ಲ.."

"ಇಲ್ಲ...."

'ಪರಿಶ್ರಮ ಪಡೋರು ಯಾಕೆ ಕರಕರಿ ಮಾಡ್ತಾರೆ?'

'ಅಂದ್ರೆ?'

'ಕೆಲ್ಸ ಮಾಡ್ತಾ ಇದ್ರೆ ಪಿರಿ ಪಿರಿ ಅನ್ನೋಕೂ ಸಮಯವಿಲ್ಲ; ಅನ್ನೋದನ್ನು ಕೇಳೋಕೂ ಬಿಡುವಿಲ್ಲ...."

'ಭಾರಿ ಬುದ್ಧಿವಂತರು ನೀವು. ನನ್ನನ್ನ ಕೆಲಸಕ್ಕೆ ಬಾರದವಳೂಂತ ಮಾಡಿಬಿಟ್ರಲ್ಲಾ...'

"ಅಲ್ವೆ, ಕಷ್ಟ ಪಡೋಕೆ ಇಷ್ಟವಿಲ್ಲದೆ ನಿನ್ನ ಹಾಗೆ ಹಾಯಾಗಿ ತಿನ್ನೋರು ತುಂಬಿದ್ದರಿಂದ್ಲೇ ಕನ್ನಡಿಗರ ಪಾಡು ನಾಯಿ ಪಾಡು ಆಗಿದೆ—'

"ಹ್ಞಾಂ, ಅನ್ನಿ. ಅಂದ್ಮೇಲೆ ನೀವೇಕೆ ನಾನಿರುವಾಗ ಅನ್ನೋರಿಗೇನು?"

"ನೋಡು, ನಮ್ಮತಿ ಎಲ್ಲಿವರೆಗೆ ಬಂತೂಂತ...."

'ಅಂಥದ್ದು ಮುಳುಗಿ ಹೋಗೋದೇನು'

'ಏನು? ಏನೂ ಇಲ್ಲ....'

'ಯಾಕೆ ಅಷ್ಟು ವೈರಾಗ್ಯ?'

'ಯಾರಿಗೆ?"

"ನಿಮಗೆ..."

'ನಾನು ವೈರಾಗ್ಯ ಹೊಂದಿದ್ರೆ ನಿನ್ನ ಯಾಕ ತುಂಬಿಕೊಳ್ತಿದ್ದೆ?"

'ಅಲ್ಲಾನ್ರಿ. ನನಗೇ ವೈರಾಗ್ಯ...'

"ಹ್ಞಾಂ......ಅದು........ಉದರ ವೈರಾಗ್ಯ...."

'ಎಂಥದ್ದಾದ್ರೆ ಏನು? ವೈರಾಗ್ಯವಂತೂ ಹೌದಲ್ಲ!'

"ಹ್ಞಾಂ...ಅಯ್ತಪ್ಪ, ಕೇಳು—ಭಾರತಕ್ಕೆ ಚೀನೀ—ಪಾಕಿಸ್ತಾನಿಗಳ ಆಕ್ರಮಣದ ಭೀತಿ ನಮಗೆ ನಮ್ಮ ಸಂರಕ್ಷಣಾ ಮಂತ್ರಿ ಚವನರ ಭೀತಿ...'

'ಅಂದರೆ?'

"ಭಾರತದ ಮೇಲೆ ಶತ್ರು ಸೇನೆ ಆಕ್ರಮಣ ಮಾಡಬಯಸಿದರೆ, ಕನ್ನಡದ ಮೇಲೆ ಚವನರು ಆಕ್ರಮಣ ಮಾಡ ಹೊರಟಿದ್ದಾರೆ..."

"ಎಂಥದಿದು? ಒಗಟು ನುಡಿದಂತೆ ಆಂದ್ರೆ...ಬಿಡಿಸಿ ಹೇಳೀಂದ್ರೆ..."

"ನೋಡಮ್ಮ, ಗೋವೆಯ ಭವಿಷ್ಯ ನಿರ್ಧರಿಸುವುದಕ್ಕೆ ಪ್ರಧಾನಿ ಇಂದಿರಾ ಗಾಂಧಿ— ಕಾಂಗ್ರೆಸ್ ಅಧ್ಯಕ್ಷ ಕಾಮರಾಜರು ಈಗ ಒಪ್ಪಿ ಕಾಂಗ್ರೆಸ್ ಕಾರ್ಯಕಾರಿಣಿಯನ್ನು ಕರೆಯಲಿದ್ದಾರೆ..."

"ಏನಂದಿರಿ? ಇದು ನಿಜವೆ?"

'ಹೌದಮ್ಮ, ಖಂಡಿತಕ್ಕೂ ಗೋವೆಯ ಭವಿಷ್ಯ ಈ ಬಾರಿ ನಿರ್ಧಾರವಾಗಿಯೇ ತೀರುವುದು— ಅದು... ಅದು.... ಮಹಾ ರಾಷ್ಟ್ರಕ್ಕೆ ಸೇರುವುದು"

"ಅದೇನು ಹಾಗೆ ಅನ್ನುತ್ತೀರಿ?'

"ಹಿಂದೆಯೇ ಗೊತ್ತಾದ ನಿರ್ಧಾರ ಅದು. ನಾಂದಿಯಾಗಿತ್ತು. ಮದುವೆ ಮಾತ್ರ ಮುಂದೆ ಬಿದ್ದಿತ್ತು....ಇನ್ನೇನು ಗೋವೆಯನ್ನು ಎತ್ತಿ ಮಹಾರಾಷ್ಟ್ರ ಪುರುಷನಿಗೆ ಕೊಡುವ ಮುಹೂರ್ತವೂ ಬೇಗನೇ ಬರಬಹುದು—ಪಂಜಾಬ ವಿಭಜನೆಯೊಂದಿಗೇನೇ ಗೋವೆಯ ವಿಲಯನವಾದರೂ ಆಗಬಹುದು....'

"ನಮ್ಮ ನಾಯಕರೇನು ಮಾಡುತಿದ್ದಾರೆ?"

"ಅವರು ಸುಮ್ಮನೆ ಕುಳಿತಾರೆ? ತಕ್ಷಣ ದಿಲ್ಲಿಗೆ ಹಾರಿದ್ದಾರೆ....'

"ಏನು ಪ್ರಯೋಜನ?"

'ಲಾಭ—ಹಾನಿ ಆ ಗೊಡವೆ ನಮಗಿಲ್ಲ ನಾವು ಉದಾರರು—ಅತಿ ಉದಾರರು. ನಮ್ಮದು ಎಂಬುದು ಏನಿದೆ? ನಾವು ಪರಾವಲಂಬನದಲ್ಲಿ ಅಗ್ರಗಣ್ಯರಲ್ಲವೆ?'

'ಯಾಕೆ ಹಾಗನ್ನುತ್ತೀರಿ?"

"ನೋಡಮ್ಮ, ನಮಗೆ ಸರಕಾರ ಎಲ್ಲವನ್ನೂ ಪುಕ್ಕಟೆ ಒದಗಿಸಬೇಕು—ನಮ್ಮ ಮೇಲೆ ಪೈಸ ಕರವನ್ನೂ ಹೇರಬಾರದು—ಅಂತಹ ಸರಕಾರ ಬಂದರೆ ನಮಗೆ ಖುಶಿ. ಅದು ಹೊರತಾಗಿ ಕ್ರಮ ಕೈಗೊಂಡರೆ ಮುಂದೆ ಹಂತಹಂತ—ಸತ್ಯಾಗ್ರಹ.."

"ಅದು ಹೌದ್ರಿ...ಮೊನ್ನೆ ರೇಲು ಸತ್ಯಾಗ್ರಹ ನಡೆಯಿತು. ಈಗ ಬಸ್ಸು ಸತ್ಯಾಗ್ರಹ ಆರಂಭವಾಗಿದೆ. ಇನ್ನು ಕಾರು ಸತ್ಯಾಗ್ರಹ, ಟಾಂಗಾ ಸತ್ಯಾಗ್ರಹ....ಎಲ್ಲಾ ಮಾಡಲಾಗಬಹುದು....'

"ಯಾಕಾಗಬಾರದು? ರೇಲು ಸತ್ಯಾಗ್ರಹ ಜನತೆಯ ಅಂತರ್ಯದಿಂದ ಹೊರಟದ್ದು ಅಂದು ಉದ್ಗರಿಸಿದ್ದ ಮಂತ್ರಿ ಮಾಗಧರು ಬಸ್ ಸತ್ಯಾಗ್ರಹವೂ ಹಾಗೆಯೇ ಹುಟ್ಟಿದ್ದು ಅಂದುಕೊಂಡು ಏರಿಗೆ ದರಗಳನ್ನು ಯಾಕೆ ಇಳಿಸಬಾರದು?"

"ಇಳಿಸಿದರೆ ಮತ್ತೆ ಕೊರತೆ ತುಂಬುವುದೆಲ್ಲಿಂದ?"

ಸರಕಾರದ ಮುಂದೆ ಕೈಚಾಚುವುದು...."

"ಹ್ಞಾಂ.... ಆದರಿಂದಲೇ ನಮ್ಮ ಮಾತಿಗೆ ಬೆಲೆಯಿಲ್ಲವಾದುದು. ಇಲ್ಲವಾದರೆ, ಮರಾಠಿಗರ ಕುತಂತ್ರವನ್ನು ಕುತಂತ್ರವೆಂದು ತಿಳಿದಿದ್ದರೂ ಅವರ ತಾಳಕ್ಕೆ ಸರಿಯಾಗಿ ಕೇಂದ್ರ ನಾಯಕರು ಕುಣಿಯುತ್ತಾರಲ್ಲಾ...."

'ಕುಣಿಸುವ ತಾಕತ್ತು ಇರುವವರು ಕುಣಿಯುತ್ತಾರೆ. ಎಷ್ಟಾದರೂ ನಾವು ರಾಮದಾಸ ಹನುಮನುದಿಸಿದ ನಾಡವರು ನಮಗೆ ಕೈಮುಗಿಯುದೇ ಗೊತ್ತು...."

"ಅಂದ್ರೆ, ಗಟ್ಟಿಯಾಗಿ ಏನಾದ್ರೂ ಯಾರಾದ್ರೂ ಹೇಳಿದ್ರೆ ಕೂಡ್ಲೆ ಒಪ್ಪಿಕೊಳ್ತೆವೆ.

"ಅಲ್ಲವೆ? ನಾವು ದಾಸರು. ಮಾತ್ರವಲ್ಲ, ದಾಸಾನು ದಾಸರು, ಭಕ್ತಭೃತ್ಯರು.'

'ಹ್ಞಾಂ ಹೀಗಿರುವಾಗ ಗೋವೆ ನಮ್ಮ ಕೈಬಿಟ್ಟರೆ ಆಶ್ಚರ್ಯವೇನು?"

"ಕೈ ಬಿಡುವುದರಲ್ಲಿ ಆಶ್ಚರ್ಯವಿಲ್ಲ. ಅದು ಹಾಗೇ ಆಗದೆ ಇದ್ರೆ ಅದೇ ಎಂಟನೆಯ ಆಶ್ಚರ್ಯ..."

"ನೋಡ್ರಿ, ಪಂಡಿತ ನೆಹರು ಹತ್ತು ವರ್ಷ ಗೋವೆಯಲ್ಲಿ ಯಥಾಸ್ಥಿತಿ ಮುಂದುವರಿಯುವುದು ಅಂದಿದ್ದರಲ್ಲ....'

"ಭಾರತವೊಂದು ಪ್ರಜಾಸತ್ತೆ....ಅಭಿಪ್ರಾಯ ಬದಲಾವಣೆ ಬೆಳೆಯುತ್ತಿರುವ ಬುದ್ಧಿವಾದಿ ಜೀವನದಲ್ಲಿ ಸಹಜ....'

"ತುಂಡು ಮಾಡಿದರು ನೀರೊಂದಾಗದೆ ಬಿಡದು | ಹಂದಿಯನು ತೊಳೆದರೂ ಕೆಸರ ಬಿಡದು | ಬಂಧುಗಳ ಪ್ರೀತಿ ತಾನೆಂದೆಂದಿಗೂ ಬಿಡದು | ಮಂದ ಭಾಗ್ಯನಿಗೆ ದಾರಿದ್ರ್ಯ ಬಿಡದು || "

"ನಾವು ಮಂದ ಭಾಗ್ಯರು. ನಮಗೆ ದಾರಿದ್ರ್ಯ ಬಿಡುವುದಿಲ್ಲವಮ್ಮ. ಬೆಳಗಾವಿ ನಿಪ್ಪಾಣಿ—ಕಾರವಾರ—ಗೋವೆ—ಕಾಸರಗೋಡು.... ಎಲ್ಲವೂ ಶ್ರೀ ಮಹಾರಾಷ್ಟ್ರ ಮಸ್ತು....'

"ಇದನ್ನು ತಿಳಿದೇ ಕವಿ ಹಾಡಿರಬೇಕು—ಎಲ್ಲಾದರು ಇರು ಎಂತಾದರು ಇರು, ಎಲ್ಲಿದ್ದರು ನೀ ಕನ್ನಡವಾಗಿರು..'

'ಏನು ಕನ್ನಡವಾಗಿರೋದು? ಸೂಳೆಗೇರಿಯಲ್ಲಿ ನೆಲಸಿ ಪತಿವ್ರತಾ ವ್ರತ ಧರಿಸಿದವಳಂತ... ಹೋಗ್ಲಿ ಬಿಡಿ ಸದ್ಯ ದಾರಿದ್ರ್ಯದಲಷ್ಟಾದರೂ ಸುಖ ಕಾಣೋಣ....

"ಹ್ಞಾಂ.... ಇಂದಿನ ದಿನ ಹೀಗೇ ಆಗ್ಲಿ...! ನೋಡಿ, ಬಾಗಿಲ ಬಳಿಯೇ ಇದೆ ತಂಬಿಗೆ.... ಬೇಗ ಬಂದು ಬಿಡಿ..."

"ಹ್ಞಾಂ....'

—ಗೋರಾ

TENDER NOTICE

Sealed Tenders are invited and will be received by the Chairman, Coondapoor Taluk Agricultural Produce Cooperative Marketing Society Ltd., Coondapur on 30—9—1966 upto 4 P. M. in the Office of the Society and will be opened on the same day at 4-30 P. M.

Further particulars can be obtained from the Society on any working day during office hours. The form of tendering is to quote at less or above or at estimate cost.

NAME OF THE WORK:

1. Construction of buildings for one Ton Capacity Rice Mill and 400 ton capacity godown, a pump-house cum overhead Tank and a 10' diameter well at Tallur of Coondapoor Taluk.
2. Total estimated cost of the work: Rs. 1,29,100—00
3. Earnest Money Deposit ... ... : Rs. 3,228—00

Coondapoor
31—8—1966

Y. Manjaya Shetty, *B.A.,LL.B.,M.L.A.*,
Chairman,
Coondapoor Taluk Agricultural Produce
Cooperative Marketing Society Ltd.,
Coondapoor.

ದಯವಿಟ್ಟು ನಿಮ್ಮ

ಚಂದಾಹಣವನ್ನು

ಕಳುಹಿಸಿಕೊಡಿರಿ

ಜ್ಯೋತಿಷ ಪ್ರಪಂಚ

ಜ್ಯೋತಿಶ್ಶಾಸ್ತ್ರದ ಹಿರಿಮೆ

ಪ್ರೊ. ಬಿ. ವಿ. ರಾಮನ್‌ರ ವಿವರಣೆ

ಬೆಂಗಳೂರಿನ ಆಸ್ಟ್ರಲಾಜಿಕಲ್ ಮ್ಯಾಗಜೀನ್ ಸಂಪಾದಕರಾದ ಪ್ರೊ. ಬಿ. ವಿ. ರಾಮನ್ ಅವರು ಸೆಂಟ್ರಲ್ ಎಲೆಕ್ಟ್ರೋ-ಕೆಮಿಕಲ್ ರಿಸರ್ಚ್ ಇನ್‌ಸ್ಟಿಟ್ಯೂಟ್ ಸಂಸ್ಥೆಯಲ್ಲಿ "ಜ್ಯೋತಿಷ ಮತ್ತು ಆಧುನಿಕ ವಿಚಾರಗಳು" ಎಂಬ ವಿಷಯವಾಗಿ ಭಾಷಣ ಮಾಡುತ್ತ, "ಇವತ್ತು ಮನೋವಿಜ್ಞಾನದ ಅಧ್ಯಯನದಲ್ಲಿ ಮನುಷ್ಯನ ಸ್ವಭಾವ ಮತ್ತು ಮನೋಧರ್ಮ, ಆತನ ಸಹಜ ಪ್ರವೃತ್ತಿ ಮತ್ತು ಸಾಮರ್ಥ್ಯ ಇವನ್ನು ಕುರಿತ ಪರಿಶೀಲನೆಯೂ ಒಂದು ಪ್ರಧಾನ ಅಂಗವಾಗಿದೆ. ಸಮಕಾಲೀನ ವಿಜ್ಞಾನದ ಈ ವಿಭಾಗಕ್ಕೆ ಜ್ಯೋತಿಷವು ಸಲ್ಲಿಸಬೇಕಾದ ದೊಡ್ಡ ಕಾಣಿಕೆಯಿದೆ— ಎಂಬುದನ್ನು ಕೇಳಿ ಹಲವರು ಆಶ್ಚರ್ಯ ಪಡಬಹುದು. ಇವತ್ತಿನ ಜನಜೀವನದ ಹಲವಾರು ಪ್ರಕಾರಗಳಲ್ಲಿ— ಅಂದರೆ ಶಿಕ್ಷಣ, ವ್ಯಾಪಾರ, ಆಡಳಿತವೇ ಮುಂತಾದ ವಿಷಯಗಳಲ್ಲಿ ಮನುಷ್ಯರ ವ್ಯಕ್ತಿಗತವಾದ ವಿಶಿಷ್ಟ ಲಕ್ಷಣಗಳನ್ನು ಗೊತ್ತು ಹಚ್ಚುವ ನಿದಾನ ವಿಜ್ಞಾನವೂ ನಿದಾನ ಕಲೆಯೂ ಮಹತ್ವದ ಪ್ರಯೋಜನಕಾರಿಯಾಗಲಿವೆ. ಜಾತಕವು ಆಯಾ ವ್ಯಕ್ತಿಯ ಮನಸ್ಸಿನ ಸ್ಥೂಲ ಸ್ವಭಾವ, ಇಷ್ಟಾನಿಷ್ಟಗಳು, ಪ್ರವೃತ್ತಿ ಸಾಮರ್ಥ್ಯಗಳು, ಚಿತ್ತಸ್ಥಿತಿಗತಿಗಳು, ಚಿಚ್ಛಕ್ತಿ ದೌರ್ಬಲ್ಯಗಳು ಇವೆಲ್ಲ ಕುರಿತು ಸಂಕ್ಷೇಪ ಕುರಿತೇಟಾಗಿ ನಿರೂಪಿಸಬಲ್ಲುದು" ಎಂದು ಹೇಳಿದರು.

ಪ್ರೊ. ರಾಮನ್ ಅವರು ಮುಂದುವರಿಯುತ್ತ, ವ್ಯಕ್ತಿಯ ಸ್ವರೂಪವನ್ನು ಕುರಿತು ಜ್ಯೋತಿಷವು ನೀಡುವ ಸಾಮಗ್ರಿಯನ್ನು ಸಾಧಾರಣವಾಗಿ ಮನೋವಿಜ್ಞಾನವು ವ್ಯಕ್ತಿಯ ಪ್ರವೃತ್ತಿ ಪರೀಕ್ಷೆ, ಬುದ್ಧಿಶಕ್ತಿಯ ಪರೀಕ್ಷೆ ಮುಂತಾದ ವಿಧಾನಗಳಿಂದ ಪಡೆಯುವ ಸಾಮಗ್ರಿಯೊಡನೆ ಪೂರಕವಾಗಿ ಬಳಸಿಕೊಳ್ಳಬಹುದು ಎಂಬ ಭಾವನೆಯನ್ನು ವ್ಯಕ್ತಪಡಿಸಿದರು. ಶಿಕ್ಷಣ ಸಂಸ್ಥೆಗಳಲ್ಲಿ ವಿದ್ಯಾರ್ಥಿಗಳು ತಮ್ಮ ಸ್ವಭಾವಕ್ಕೆ ಒಗ್ಗುವ ಅಧ್ಯಯನ ವಿಷಯವನ್ನು ಚುನಾಯಿಸಿಕೊಳ್ಳಲು ಇದರಿಂದ ಸಹಾಯವಾಗುತ್ತದೆ. ಕೈಗಾರಿಕೆಯಲ್ಲಿ ನಾನಾ ರೀತಿಯ ಕೆಲಸಗಾರರಿಗೆ ಅವರವರ ಸ್ವಭಾವಕ್ಕೆ ಅನುಗುಣವಾದ ಕೆಲಸವನ್ನು ಹೊಂಚಿಸಿಕೊಡಲು ನೆರವಾಗುತ್ತದೆ. ಮೇಲಾಗಿ, ವ್ಯಕ್ತಿಯು ತನ್ನ ಸಭಾವ ಲಕ್ಷಣಗಳಿಗೆ ಅನುವಾಗುವ ಯೋಜನೆಗಳನ್ನೂ ವೃತ್ತಿಗಳನ್ನೂ ಚುನಾಯಿಸಿಕೊಳ್ಳುವುದಕ್ಕೂ ತನ್ನ ಪ್ರವೃತ್ತಿಗೆ ಸಲ್ಲದ ಜಾಬುಗಳನ್ನು ಕೈಬಿಡುವುದಕ್ಕೂ ಸಹಾಯಕವಾಗುತ್ತದೆ—ಎಂದರು.

ವಸ್ತುನಿಷ್ಠೆ (Objectivity) ಯನ್ನು ಅವಲಂಬಿಸಬೇಕೆಂದು ತಿಳಿಸುತ್ತ ಪ್ರೊ. ರಾಮನ್ ಅವರು, ಜನನ ಕಾಲದ ಗ್ರಹ, ನಕ್ಷತ್ರಗಳ ಸ್ಥಿತ್ಯಂತರಗಳ ದೆಸೆಯಿಂದಾಗಿ ವ್ಯಕ್ತಿಗಳಲ್ಲಿ ಕಂಡು ಬರುವ ಸಹಜವಾದ ಸಾಧಾರಣ ಪ್ರವೃತ್ತಿ ಲಕ್ಷಣಗಳನ್ನು ಜ್ಯೋತಿಷವು ತೋರ್ಪಡಿಸುತ್ತದೆ— ಎಂದು ವಿವರಿಸಿದರು. ಇದನ್ನು ನಾವು ಬದುಕಿನ ವ್ಯವಹಾರಗಳಲ್ಲಿ ಜಾಣ್ಮೆಯಿಂದ ಉಪಯೋಗ ಪಡಿಸಿಕೊಂಡು ನಮ್ಮ ನಮ್ಮ ಶಕ್ತಿ ಸಾಮರ್ಥ್ಯಗಳ ಪರಮೋನ್ನತ ಪ್ರಯೋಜನವನ್ನು ಸಾಧಿಸಬಹುದು. ಉದಾಹರಣೆಗೆ, ಅಷ್ಟಮಿಯ ದಿವಸ ಧನಿಷ್ಠಾ ನಕ್ಷತ್ರದಲ್ಲಿ ಹುಟ್ಟಿದ ವ್ಯಕ್ತಿಯು ಕ್ರೂರಿ, ಸೇಡು ಕೋರ, ಸ್ವೇಚ್ಛಾಪ್ರಿಯನಾಗುತ್ತಾನೆ. ಇತರ ಕೆಲ ಗ್ರಹಾಧಿಪತ್ಯಗಳೂ ಸೇರಿದರೆ ಇದೇ ವ್ಯಕ್ತಿ ಜನ ಕಂಟಕನಾಗುತ್ತಾನೆ. ಜಾತಕದಿಂದ ಇದನ್ನು ತಿಳಿದುಕೊಂಡು ಇತರರು ಇಂಥ ವ್ಯಕ್ತಿಯ ಬಗ್ಗೆ ಎಚ್ಚರ ತಾಳಬಹುದು ಅಥವಾ ಇಂಥಾ ವ್ಯಕ್ತಿಯೇ ತನ್ನ ದುಷ್ಟ ಸ್ವಭಾವವನ್ನು ಮನಗಂಡು ಅದನ್ನು ಹತೋಟಿಯಲ್ಲಿಟ್ಟುಕೊಳ್ಳಬಹುದು.

ಬುಧ ದೋಷಕ್ಕೂ ಮನೋವಿಕಾರಗಳಿಗೂ ಸ್ಪಷ್ಟವಾದ ತಾಳಿಕೆಯಿರುವುದನ್ನು ಪಾಶ್ಚಾತ್ಯ ಮನೋಚಿಕಿತ್ಸಕರನೇಕರು ಕಂಡುಕೊಂಡಿದ್ದಾರೆಂದು ಪ್ರೊ. ರಾಮನ್ ಅವರು ಉದಹರಿಸಿದರು. ಈ ಅಂಶವನ್ನು ನಮ್ಮ ಪೂರ್ವಿಕರೇ ಸಾರಿದ್ದಾರೆ—ಬುಧ ಚಂದ್ರ ಸಂಬಂಧದಿಂದ ಮನೋವಿಕಾರ ಭ್ರಾಂತಿಗಳುಂಟಾಗುತ್ತವೆ ಎಂದು.

ಬುದ್ಧಿ ವಿಕಲ್ಪದ ಚಿಕಿತ್ಸೆಯಲ್ಲಲ್ಲದೆ (Psychiatry) ಸಾಧಾರಣ ವೈದ್ಯದಲ್ಲೂ ಜ್ಯೋತಿಷವು ಉಪಯುಕ್ತವಾಗಿದೆಯೆಂದು ಪ್ರೊ. ರಾಮನ್ ಮುಂದುವರಿಸಿದರು. ಪೂರ್ವಕಾಲದಿಂದ ಆಯುರ್ವೇದ ವೈದ್ಯರು ಜ್ಯೋತಿಷಿಯಾಗ ಬೇಕಾದ ಅವಶ್ಯಕತೆಯನ್ನು ಮನಗಂಡಿದ್ದರು. ಇವತ್ತು ಮತ್ತೆ ಜ್ಯೋತಿಷವು ಮುಂದೆ ಬರುತ್ತಿದೆ. ವಾಷಿಂಗ್‌ಟನ್ನಿನ ಡಾಕ್ಟರ್ ರಸಲ್, ಫೀಲ್ಡ್ ಕುಜ ಚಂದ್ರರೊಡನೆ ಶನಿ ಕೆಲವು ಬಗೆಯ ಸಂಬಂಧವನ್ನು ಪಡೆದದ್ದೇ ಆದರೆ ಅರ್ಬುದ ವ್ಯಾಧಿಯೂ (cancer) ಉಂಟಾಗುತ್ತದೆ ಎಂದು ಸ್ಪಷ್ಟ ಅಭಿಪ್ರಾಯವನ್ನು ಪಡೆದಿದ್ದಾರೆ. ಅದೇ ರೀತಿಯಲ್ಲಿ ಡಾಕ್ಟರ್ ವೆಬ್‌ಸ್ಟರ್ ಎಂಬ ವೈದ್ಯರು ಗ್ರಂಥಿ ರೋಗಗಳ, ಚರ್ಮರೋಗ ಮುಂತಾದ ವ್ಯಾಧಿಗಳು ಶುಕ್ರನ ಸೂರ್ಯ ಕೇಂದ್ರಕ ಅವಧಿಗೆಸರಿಯಾಗುವಂತೆ ಏಳೂವರೆ ತಿಂಗಳ ಅಂತರದಲ್ಲಿ ಉಲ್ಬಣ ತಾಳುವುದೆಂದು ಕಂಡು ಹಿಡಿದಿದ್ದಾರೆ. ಸೌರ ಜ್ವಾಲೆಗಳು ಒದಗುವುದಕ್ಕೂ ಹೃದ್ರೋಗಗಳು ಸಂಭವಿಸುವುದಕ್ಕೂ ಇರುವ ತಾಳಿಕೆಯೂ ಕಡೆಗಣಿಸಲಾರದಷ್ಟು ಸ್ಪಷ್ಟವಾಗಿ ಎದ್ದು ಕಾಣುತ್ತದೆ. ಸೂರ್ಯನೇ ಮುಂತಾದ ಗ್ರಹಗತಿಗಳಿಗೆ ಮನುಷ್ಯರು ಒಳಗಾಗುವವರೆಂಬ ನಮ್ಮ ಪ್ರಾಚೀನ ನಂಬಿಕೆಯನ್ನು ಇದು ಸಮರ್ಥಿಸುತ್ತದೆ.

ಪ್ರಾಚೀನ ಜ್ಯೋತಿಷ್ಕರು ಗೋಚಾರ ಎನ್ನುತ್ತಿದ್ದರೆ, ಅದನ್ನೇ ಆಧುನಿಕ ವಿಜ್ಞಾನಿಗಳು ಖಗೋಳ ಕಾರ್ಯಗಳಿಂದ ಹೊರಬರುವ ವಿದ್ಯುತ್ ಪ್ರಭಾವವು ಅಥವಾ ಆಯಸ್ಕಾಂತ ಪ್ರಭಾವವು ಮನುಷ್ಯರನ್ನು ವಿಶೇಷತಃ ಪರಿಣಾಮಗೊಳಿಸುತ್ತವೆ ಎನ್ನುತ್ತಿದ್ದಾರೆ—ಎಂದು ಪ್ರೊ. ರಾಮನ್ ವಿವೇಚಿಸಿದರು.

ತಮ್ಮ ಭಾಷಣವನ್ನು ಮುಕ್ತಾಯ ಮಾಡುತ್ತ ಪ್ರೊ. ರಾಮನ್ ಅವರು 'ಜ್ಯೋತಿಷವು ಎನ್ನದೇ ಆದ ಎವ ರ್ಧನಯನ್ನು ಪಡೆದಿದ್ದು, ಬದುಕಿನಲ್ಲಿ ತನ್ನದೇ ಆದ ಪ್ರಯೋಜನವನ್ನು ಸ್ಥಾಪಿಸಿಕೊಂಡಿದೆ. ಜ್ಯೋತಿಷವು ವಿಜ್ಞಾನವೂ ಹೌದು, ಕಲೆಯೂ ಹೌದು. ಜ್ಯೋತಿಷದ ಹಿರಿಮೆಯನ್ನು ಸಂದರ್ಯಾಕ್ತರಂತ ಮುಗ್ಧಮತಿಗಳು, ತೋರಿಕೆಯ ವಿದ್ಯಾವಂತರೂ ಹಳಿಯುವುದಕ್ಕೆ ಯಾವ ಕಾರಣವೂ ಇಲ್ಲ" ಎಂದರು.

ಆಧುನಿಕರೆಂದ ಸಂಶಯ ಮನಗಳು ತಮ್ಮ ತಪ್ಪು ತಿಳಿಕೈ ನೇರವಾದ ಪೂರ್ವಕಲ್ಪಿತ ಅಭಿಪ್ರಾಯಗಳ ಆಧಾರದ ಮೇಲೆ ಹೇಳುವರಲ್ಲದೆ ಸಾಧ್ಯವೇ ಇಲ್ಲದಷ್ಟು ಲೋಕ ವ್ಯಾಪಕವೂ ಅನುಭವವೂ ಆದ ಸಾಕಷ್ಟು ಪ್ರಮಾಣಗಳನ್ನು ಜ್ಯೋತಿಶ್ಶಾಸ್ತ್ರವು ಪಡೆದಿದೆ ಎಂದು ಪ್ರೊ. ರಾಮನ್ ಅವರು ಘೋಷಿಸಿದರು.

ಬೆಳ್ತಂಗಡಿ ಮುನ್ಸೀಫ್ ಕೋರ್ಟಿನಲ್ಲಿ

R. E. P. 61/66
in O. S. 161/64.

ರಾಮಕೃಷ್ಣ ಪ್ರಭು— ಅರ್ಜಿದಾರ (ವಾದಿ)
ಸಾಯಿನಾರಾಯಣ ಭಟ್ಟ ಸಹಾ—
—ಎದುರು (ಪ್ರತಿವಾದಿದು)

2ನೇ ಎದುರು (ಪ್ರತಿವಾದಿ) ಸೀತಾರಾಮ ಭಟ್ಟ ಬಿನ್ ಗೋಪಾಲಕೃಷ್ಣ ಭಟ್ಟ ನಾಗ, ಪರ್ಗದಾರ, ಹಿಂದೆ, ಕಲ್ಮಂಜ ಗ್ರಾಮದಲ್ಲಿ ರುವವರಿಗೆ ಕೋರ್ಟು ಹುಕುಂ ಪ್ರಕಾರ ಈ ಮೂಲಕ ತಿಳಿಯಪಡಿಸುವದೇನೆಂದರೆ—

ಅರ್ಜಿದಾರರ (ವಾದಿಗೆ) ಬರತಕ್ಕ ಹಣಗಳ ಕುರಿತು ಪಡದ ಫೈನಲ್ ಡಿಕ್ರಿ ಪ್ರಕಾರ ಅಡವಿನ ಆಸ್ತಿಯನ್ನು ಏಲಂಗೆ ಅಪೇಕ್ಷಿಸಿಯೂ, ದಂಖಾಸ್ತಿಗೆ ಸಲ್ಲುವರೇ ತನಗೂ ಪರ್ಮಿಶನ್ ಕೊಡಬೇಕಾಗಿಯೂ ಅರ್ಜಿದಾರನು ಅರ್ಜಿ ಮಾಡಿಕೊಂಡಿರುತ್ತಾನೆ. ಸದ್ರಿ ಅರ್ಜಿಯು ನಿಮ್ಮ ಹಾಜರಾತಿ ಬಗ್ಗೆ ತಾ. 16—9—1966ಕ್ಕೆ ಇಟ್ಟಿರುತ್ತದೆ. ಸದ್ರಿ ದಿವಸ ನಿಮ್ಮದೇನಾದರೂ ಆಕ್ಷೇಪವಿದ್ದಲ್ಲಿ ಸ್ವತಃ ಯಾ ವಕೀಲರ ಮುಖಾಂತರ ಹಾಜರಿರತಕ್ಕದ್ದು. ತಪ್ಪಿದಲ್ಲಿ ನಿಮ್ಮ ಗೈರು ಮೇಲಿನ ಅರ್ಜಿಯನ್ನು ಕೋರ್ಟಿಗೆ ಯುಕ್ತ ಕಂಡ ರೀತಿಯಲ್ಲಿ ತೀರ್ಮಾನಿಸಲಾದೀತು.

B. K. Suryanarayana Rao.
Advocate, Belthangady, S. K.
ಬೆಳ್ತಂಗಡಿ, ತಾ. 26—8—66.

ಬೆಳ್ತಂಗಡಿ ಮುನ್ಸೀಫ್ ಕೋರ್ಟಿನಲ್ಲಿ

O. S. 166/64.

ಪಿ. ಕೆ. ಉಪಾಧ್ಯಾಯ (ರೀಸೀವರ್)—
—ವಾದಿ

ನೀಲ ಬಂಗ್ಯ ಸಹಾ —ಪ್ರತಿವಾದಿಗಳು.

ಕೋರ್ಟು ಹುಕುಂ ಪ್ರಕಾರ ತಿಳಿಯಪಡಿಸುವುದೇನೆಂದರೆ—

ಮೇಲಿನ ದಾವೆಯು ತಾ. 16—9—1966ಕ್ಕೆ ನಿಮ್ಮ ಹಾಜರಾತಿ ಬಗ್ಗೆ ಇಟ್ಟಿರುತ್ತದೆ. ನಿಮ್ಮ ಆಕ್ಷೇಪಣೆ ಏನಾದರೂ ಇದ್ದರೆ ನಿಗದಿತ ದಿನ ಬೆಳಗ್ಗೆ 11 ಗಂಟೆಗೆ ಸ್ವತಃ ಯಾ ವಕೀಲರ ಮುಖಾಂತರ ಹಾಜರಾಗತಕ್ಕದ್ದು. ತಪ್ಪಿದಲ್ಲಿ ನಿಮ್ಮನ್ನು ಮೇಲಿನ ದಾವೆಯಲ್ಲಿ ಏಕಪಕ್ಷ ಮಾಡಿ ಮುಂದುವರಿಸಲಾದೀತು.

N. I. KADAMBA
Advocate, Belthangady
ಬೆಳ್ತಂಗಡಿ, 27—8—66.

ಸಿಂಡಿಕೇಟ್ ಬ್ಯಾಂಕು

ಜಿಲ್ಲೆಯ ಕೃಷಿಕರಿಗೆ ನೀಡುವ ಇನ್ನೊಂದು ಕಾಣಿಕೆ:

—ಉಳುಮೆ ಯಂತ್ರದ ಖರೀದಿಗೆ ನೆರವು

ಸಾಗುವಳಿ ಪದ್ಧತಿಯಲ್ಲಿ ಕ್ರಾಂತಿಕಾರಕ ಬದಲಾವಣೆ ಮಾಡಬಲ್ಲ ಉಳುಮೆ ಯಂತ್ರವನ್ನು (ಪವರ್ ಟಿಲ್ಲರ್) ಕೊಂಡುಕೊಳ್ಳುವ ಬಯಕೆಯಿದ್ದರೆ ನಮ್ಮ ಬ್ಯಾಂಕಿನ ಈ ಕೆಳಗಿನ ಹೊಸ ಯೋಜನೆಯ ಪ್ರಯೋಜನವನ್ನು ಪಡೆಯಬಹುದು

ಉಳುಮೆ ಯಂತ್ರದ ಬೆಲೆಯ 25% ಹಣವನ್ನು (ಸುಮಾರು ರೂ. 1500) ನೀವು ಜಿಲ್ಲೆಯಲ್ಲಿರುವ ನಮ್ಮ ಬ್ಯಾಂಕಿನ ಯಾವುದಾದರೊಂದು ಶಾಖೆಯಲ್ಲಿ 12ರಿಂದ 24 ಮಾಸಿಕ ಕಂತುಗಳಲ್ಲಿ ಅಥವಾ 4ರಿಂದ 8 ತ್ರೈಮಾಸಿಕ ಕಂತುಗಳಲ್ಲಿ ಉಳಿಸುತ್ತಾ ಬಂದರೆ, ಯಂತ್ರ ಪಡೆಯಲು ಬೇಕಾದ ಉಳಿದ 75% ಹಣವನ್ನು ಬ್ಯಾಂಕು ನಿಮಗೆ ಸಾಲದ ರೂಪದಲ್ಲಿ ಕೊಡುವುದು.

ಹೆಚ್ಚಿನ ಮಾಹಿತಿಯನ್ನು ಜಿಲ್ಲೆಯ ನಮ್ಮ ಬ್ಯಾಂಕಿನ ಯಾವುದಾದರೂ ಶಾಖೆಯಿಂದ ಇಲ್ಲವೆ ಮಣಿಪಾಲದಲ್ಲಿರುವ ಬ್ಯಾಂಕಿನ ಪ್ರಧಾನ ಕಚೇರಿಯಿಂದ ಪಡೆಯಬಹುದು.

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಮಣಿಪಾಲ, ಮೈಸೂರು ರಾಜ್ಯ.

ಸಾರಸ್ವತ ಪ್ರಪಂಚ

ಗೀತ ಗೋವಿಂದ ಮತ್ತು ಜಯದೇವ

ಬರೆದವರು
ಶ್ರೀ ಸ. ನಾರಾಯಣ, ಚಿತ್ರದುರ್ಗ

ಸಂಸ್ಕೃತ ಸಾಹಿತ್ಯ ಸಾಗರದಲ್ಲಿ ಅಡಗಿರುವ ಅನರ್ಘ್ಯ ರತ್ನಗಳು ಹಲವಾರು; ಅವುಗಳಲ್ಲಿ 'ಗೀತಗೋವಿಂದವೂ' ಒಂದು. ಈ ಕೃತಿಯ ಕರ್ತೃ ಜಯದೇವ ಕವಿ.

ಜಯದೇವನ ಕಾಲ ಕ್ರಿ. ಶ. ೧೧೭೦ ಎಂದೂ, ಇವನು ವಂಗದೇಶದ ಅರಸು ಲಕ್ಷ್ಮಣ ಸೇನನ (೧೧೧೯) ಆಸ್ಥಾನದ ಕವಿ ರತ್ನಗಳಲ್ಲಿ ಶ್ರೇಷ್ಠನೆಂದೂ ಇತಿಹಾಸದ ಆಧಾರಗಳಿಂದ ತಿಳಿದು ಬರುತ್ತದೆ. ಕವಿ ತನ್ನ ಸಮಕಾಲೀನರಾದ ಉಮಾಪತಿಧರ, ಶರಣ, ಗೋವರ್ಧನ, ಧೋಯಿ ಮೊದಲಾದವರ ಹೆಸರನ್ನು ಪ್ರಸ್ತಾಪಿಸಿರುವುದು ಅವನ ಕಾಲವನ್ನು ತಿಳಿಯಲು ಸಹಕಾರಿಯಾಗಿದೆ.

ಕವಿಯ ಹುಟ್ಟೂರು ವಂಗದೇಶದ ಬೀರಭೂಮ್ ಜಿಲ್ಲೆಯಲ್ಲಿ ಅಜಯ ನದಿ ತೀರದ ಕೆಂದು ಬಿಲ್ವ ಎಂಬ ಗ್ರಾಮ. (ಕೆಂದೂಲಿ ಎಂಬ ಹೆಸರಿನಿಂದ ಇಂದಿಗೂ ಖ್ಯಾತ) ಜಯದೇವನ ತಂದೆ ಭೋಜದೇವ; ತಾಯಿ ರಾಮಾದೇವಿ. ಕವಿ ತನ್ನ ರಮಣೀಯ ಕಾವ್ಯದಿಂದ ಅಮರನಾಗಿದ್ದಾನೆ.

ಜಯದೇವ ಮಹಾ ಭಕ್ತ ಮತ್ತು ಸಂತ. ಅವನ ಮಹಿಮೆ, ಪವಾಡಗಳನ್ನು ಬಣ್ಣಿಸುವ ಗ್ರಂಥಗಳೂ ಹಲವಿವೆ, ಅವರಲ್ಲಿ 'ಭಕ್ತ ಮಾಲಾ' ಎಂಬ ಗ್ರಂಥ ಮುಖ್ಯವಾದುದು. 'ಗೀತ ಗೋವಿಂದ' ಕಾವ್ಯ ವಿಶೇಷ: ಹಿಮಾಚಲ ಪಂಡಿತರ, ಸಂಗೀತಗಾರರ, ಭಾಗವತರ, ಸಹೃದಯರ, ರಸಿಕರ, ನಟರ ಮನವನ್ನೂ ಮುದಗೊಳಿಸಿದೆ. ಅಪೂರ್ವ ಕಾಂತಿಯುತವಾದ ಈ ಕೃತಿಯಲ್ಲಿ ಶೃಂಗಾರ ರಸದ ಹೊನಲು ಹರಿದಿದೆ. ಶೃಂಗಾರ ರಸಕ್ಕೆ ಕಾವ್ಯದಲ್ಲಿ ಪ್ರಾಮುಖ್ಯತೆ ಇರುವುದಾದರೂ ಆತ್ಮವನ್ನೇ ಪರಮಾತ್ಮನಿಗೆ ಅರ್ಪಿಸಿದ ಅನನ್ಯ ಭಕ್ತಿಯ ಭಾವಪೂರ್ಣ ಶೃಂಗಾರ ಕೃತಿಯಲ್ಲಿ ಅಡಗಿದೆ ಎಂಬುದು ಸ್ಮರಣೀಯ.

ಗೀತ ಗೋವಿಂದ ಒಂದು ಅಪೂರ್ವ ಕೃತಿ. ಅದರ ಸುಂದ ಸ್ವರೂಪ ಅಜ್ಞಾನಿಯ ಮನವನ್ನೂ ಅರಳಿಸುತ್ತದೆ. ಸಂಸ್ಕೃತ ಸಾಹಿತ್ಯದಲ್ಲಿ ಶೃಂಗಾರ ಕಾವ್ಯಗಳಂ ಬಹುದು. ಇವೆ, ಆದರೆ ಗೀತ ಗೋವಿಂದದ ಸ್ಥಾನ, ಕಾವ್ಯದ ಪ್ರೌಢಿಮೆ ಮತ್ತೊಂದಕ್ಕೆ ಸಾಟಿ ಬಾರಲಾರದು.

ಜಯದೇವ ಓರ್ವ ಮಹಾಪುರುಷ, ಅವನಲ್ಲಿ ದೈವದತ್ತವಾದ ಕವಿತಾ ಶಕ್ತಿಯೊಂದಿಗೆ ಪಾಂಡಿತ್ಯ, ಪ್ರತಿಭೆಯೂ ಅಡಗಿತ್ತು. ಜನ್ಮ ಜನ್ಮಗಳ ಸಂಸ್ಕಾರ ಬಲ ಭಗವದ್ಭಕ್ತಿ ಅವನ ನಾಲಿಗೆಯಲ್ಲಿ ಜೇನು ಹೊಳೆಯಂತೆ ಉಕ್ಕಿ ಹರಿದಿದೆ. ಆ ಹೊಳೆಯೇ ನಮಗೆ ದೊರೆತಿರುವ "ಗೀತ ಗೋವಿಂದ" ಕಾವ್ಯ.

ಅಮರ ಪ್ರೇಮದ ಪ್ರತಿರೂಪಿಗಳಾದ ರಾಧಾ ಕೃಷ್ಣರ ಮಧುರ ಮೈತ್ರಿಯ ಭಕ್ತಿ ಭಾವದಲ್ಲಿ ವ್ಯ ಮನ ಮನಗಳನ್ನು ಮರೆತು ಅಲೆ ಪಾರಿಯಂತೆ ಅಲೆಯುತ್ತಾ ಒಂದು ಕೊನೆಗೆ ಪುರಿಯ ಜಗನ್ನಾಥ ಕ್ಷೇತ್ರದಲ್ಲಿ ಕುಟೀರ ಒಂದನ್ನು ಕಟ್ಟಿಕೊಂಡು ವಾಸವಾಗಿದ್ದನಂತೆ ಜಯದೇವ.

ದೇವ ಶರ್ಮ ಓರ್ವ ಬ್ರಾಹ್ಮಣ. ಸಂತಾನ ವಿಹೀನನಾದ ದೇವಶರ್ಮ "ತನಗಾಗುವ ಸಂತಾನವನ್ನು ದೇವನ ಅಡಿದಾವರೆಗಳಿಗೆ ಅರ್ಪಿಸುವುದಾಗಿ ಜಗನ್ನಾಥನಲ್ಲಿ ಹರಕೆ ಹೊತ್ತ. ಕಾಲಕ್ರಮೇಣ ಹೆಣ್ಣು ಮಗುವೊಂದು ಅವನ ಪತ್ನಿಯ ಗರ್ಭಾಂಬುಧಿಯಲ್ಲಿ ಜನಿಸಿ ಮನೆ ಮನಗಳನ್ನು ಬೆಳಗಿತು. ದೇವ ಶರ್ಮನ ಕುವರಿ 'ಪದ್ಮಾವತಿ' ಕನ್ಯೆಯಾದಳು. ಪದ್ಮಾವತಿಗೆ ವಿವಾಹದ ವಯಸ್ಸಾದುದನ್ನು ಗಮನಿಸಿದ ದೇವಶರ್ಮ ಮಗಳನ್ನು ಜಗನ್ನಾಥನ ಸನ್ನಿಧಿಗೆ ಕರೆದೊಯ್ದು ದೇವ ದೇವನಲ್ಲಿ ಬಿನ್ನಹ ಮಾಡಿಕೊಂಡ. "ನಾನು ನಿನ್ನ ಕುವರಿಯನ್ನು ಸ್ವೀಕರಿಸಿದ್ದೇನೆ. ನನ್ನ ಅಪರ ಸ್ವರೂಪನಾದ ಜಯದೇವನಿಗೆ ಆಕೆಯನ್ನು ಕೊಟ್ಟು ಲಗ್ನ ಮಾಡು" ಎಂದು ಅಶರೀರ ವಾಣಿಯಾಯಿತಂತೆ.

ದೇವಶರ್ಮ ಜಯದೇವನನ್ನ ಕಂಡು ಕಷ್ಟ ಪಟ್ಟು ಒಪ್ಪಿಸಿ ಪದ್ಮಾವತಿಯನ್ನು ಅವನಿಗೆ ಧಾರೆ ಎರೆದ.

ಜಯದೇವ— ಪದ್ಮಾವತಿಯರು ನರ್ತನ, ಕೀರ್ತನ, ಭಜನೆಗಳಲ್ಲಿ ತಮ್ಮ ಕಾಲವನ್ನು ಕಳೆಯತೊಡಗಿದರು.

ಕವಿ ಜಯದೇವನ ಭಕ್ತಿಗೆ ಜಗನ್ನಾಥ ಪರವಶನಾಗಿದ್ದ, ಒಲಿದಿದ್ದ—ನಲಿದಿದ್ದ. ಒಮ್ಮೆ ಜಯದೇವ ಭಗವಂತನ ಮೇಲೆ ಆರೋಪಿಸಲು ಹಿಂಜರಿದ. ಕಾವ್ಯ ರಚನೆಯ ಕಾಲದಲ್ಲ. ಪ್ರಣಯ ಪ್ರಸಂಗಕ್ಕೆ ಪಶ್ಚಾತ್ತಾಪಗೊಂಡ ಕೃಷ್ಣ ರಾಧೆಗೆ 'ನನ್ನ ತಲೆಯ ಮೇಲೆ ನಿನ್ನ ಪಾದವನ್ನಿಡು' ಎಂಬ ಭಾವಬಲವಂತ ಬರಲು, ಪ್ರಯತ್ನಿಸಿದ. ಆದರೆ ಬರೆಯಲು ಕವಿಯ ಕೈ ಹಿಂಜರಿಯಿತು. ಬರೆಯುವುದನ್ನು ನಿಲ್ಲಿಸಿ ಸ್ನಾನಕ್ಕೆ ತೆರಳಿದ. ಜಗನ್ನಾಥ ಜಯದೇವನ ರೂಪದಲ್ಲಿ ಬಂದು ಆ ಸಾಲನ್ನು ಮುಗಿಸಿ ಮರೆಯಾದನಂತೆ.

ಜಯದೇವನ ಗೀತ ಗೋವಿಂದ ಕಾವ್ಯ ಸರ್ವ ಜನಾದರಣೀಯ ಕಾವ್ಯವಾಯಿತು. ಕಾವ್ಯದ ಕೀರ್ತಿ ಎಲ್ಲೆಡೆಯಲ್ಲಿಯೂ ಹರಡಿತು. ದೊರೆಗೆ ಏಕೋ ಸಹಿಸಲಾಗಲಿಲ್ಲ. ಪ್ರತಿ ಗೀತ ಗೋವಿಂದವನ್ನೂ ರಚಿಸಿ ರಾಜ್ಯದ ಪ್ರತಿ ಪ್ರಜೆಯೂ ತನ್ನ ಗೀತ ಗೋವಿಂದವನ್ನೇ ಹಾಡಬೇಕೆಂಬ ಆಜ್ಞೆ ಮಾಡಿದನಂತೆ. ಪ್ರಜೆಗಳು ರಾಜನ ಆಜ್ಞೆಯನ್ನು ಪಾಲಿಸಿದರೂ ಜಯದೇವ ಮಾತ್ರ ರಾಜಾಜ್ಞೆಯನ್ನು ಪಾಲಿಸಲಿಲ್ಲ. ರಾಜ ಎರಡು ಕೃತಿಗಳ ಹಿರಿಮೆಯನ್ನು ಪರೀಕ್ಷಿಸಲು 'ಎರಡು ಕೃತಿಗಳನ್ನು ದೇವಸ್ಥಾನದಲ್ಲಿ ದೇವನೆದುರಿನಲ್ಲಿಟ್ಟು ಬಾಗಿಲ ಮುಚ್ಚೋಣ, ಯಾರ ಕೃತಿ ಮೇಲಿರುತ್ತದೆಯೋ ಅದೇ ಮಾನ್ಯ" ಎಂದನಂತೆ. ಅದರಂತೆ ಪರೀಕ್ಷೆಯೂ ನಡೆಯಿತು. ಜಯದೇವನ ಗೀತ ಗೋವಿಂದ ಕೃತಿ ರಾಜನ ಕೃತಿಯ ಮೇಲಿತ್ತು. ರಾಜ ತಲೆ ಬಾಗಿಸಿದ ಒಂದು ಬಾರಿ ಬದನೆಕಾಯಿ ಮಾರುವ ಹೆಂಗಸು ಗೀತ ಗೋವಿಂದದ ಶ್ಲೋಕಗಳನ್ನು ಹಾಡುತ್ತಾ ಬದನೆಕಾಯಿ ಕೀಳುತ್ತಿರುವಾಗ ಜಗನ್ನಾಥ ಅವಳ ರಾಗವನ್ನು ಅನುಸರಿಸಿ ನಡೆದು ಬಟ್ಟೆಗಳನ್ನು ಹರಿದುಕೊಂಡು ಅರ್ಚಕರಿಗೆ ಅಚ್ಚರಿಯನ್ನುಂಟು ಮಾಡಿದನಂತೆ. ಹೀಗೆ ಗೀತ ಗೋವಿಂದ ಮತ್ತು ಜಯದೇವ ಕವಿಯ ಬಗ್ಗೆ ಪವಾಡಗಳು ಹಲವಾರಿವೆ.

ಗೀತ ಗೋವಿಂದದ ಕಥಾವಸ್ತು ರಾಧಾಕೃಷ್ಣರ ಲೀಲಾ ವಿಲಾಸ; ಮಂಜುಳನಾದದಿಂದ ಸಾಗುತ್ತಿರುವ ಯಮುನೆ ತೀರದ ಮನೋಹರ ಬೃಂದಾವನ ವಿಹಾರಿಗಳಾದ ಗೋಪ—ಗೋಪಿಯರು, ಮಂದ ಮಾರುತ, ವಸಂತ ಋತು, ಪೂರ್ಣ ಚಂದ್ರನ ಬೆಳ್ದಿಂಗಳು, ವನರಾಜ, ಲತಾಕುಂಜಗಳು ಇವೆಲ್ಲವುಗಳೂ ಚೇತೋಹಾರಿ ದೃಶ್ಯಗಳು. ಇವುಗಳೊಂದಿಗೆ ಘನಶ್ಯಾಮಸುಂದರ— ಅವನ ಮುರಲಿನಾದ, ಮಾಧವನ ಆಗಮನಾಕಾಂಕ್ಷಿಯಾಗಿ ಕಾತರಿಸುತ್ತಿರುವ ರಾಧೆ, ಇವರ ಪಾತ್ರಗಳೂ ರಾಧಾ ಮಾಧವರ ಪ್ರಣಯ ಲೀಲೆಯಲ್ಲಿ ಕಾಣ ಬರುವ ಆಸೆ-ನಿರಾಸೆ, ವಿರಹ—ವಿನೋದ, ಸಮಾಗಮ-ಆನಂದ, ಕೋಪ—ತಾಪ, ಮಾನ—ಅವಮಾನ, ಇವೇ ಕೃತಿಯ ಜೀವನಾಡಿಗಳು. ಕಾವ್ಯದ ಒಂದೊಂದು ಶ್ಲೋಕ—ಚರಣವೂ ವ್ಯಕ್ತಿಯ ಹೃದಯದಲ್ಲಿ ಆನಂದವನ್ನು ಮೂಡಿಸುತ್ತವೆ.

ಗೀತಗೋವಿಂದ ಮಹಾ ಕಾವ್ಯವಲ್ಲ. ಆದರೆ ಅದರಲ್ಲಿ ಅಡಗಿರುವ ಅರ್ಥ ಅಪಾರ. ರಾಧಾ ಮಾಧವರ ಶೃಂಗಾರ ಲೀಲಾವಿಲಾಸ ವೈಭವಗಳ ವರ್ಣನೆಯಲ್ಲಿ ಕವಿ ತನ್ನ ಕವಿತಾ ಶಕ್ತಿಯನ್ನು ಹೊಂದಿಸಿ ಮನರಂಜಿಸಿದ್ದಾನೆ. ಪ್ರಕೃತಿಯ ಅನಂತ ರೂಪಲಾವಣ್ಯ ವಿನ್ಯಾಸಗಳನ್ನು ತೆರೆದು ತೋರಿದ್ದಾನೆ ತನ್ನ ಕಾವ್ಯಾವಳಿ. ಕಾವ್ಯದಲ್ಲಿ ೧೨ ವರ್ಗಗಳಿವೆ ಮತ್ತು ೨೪ ಪ್ರಬಂಧಗಳಿವೆ. ಪ್ರತಿ ಪ್ರಬಂಧವಲ್ಲಿಯೂ ಎಂಟೆಂಟು ಪದಗಳಿಂದಾದ ಹಾಡುಗಳು ಅಥವಾ ಅಷ್ಟಪದಿ. ಗೀತ ಗೋವಿಂದದ ಶ್ಲೋಕಗಳೆಲ್ಲ ಅಷ್ಟಪದಿ ಎನ್ನುವ ಹೆಸರಿನಲ್ಲಿಯೇ ಹೆಚ್ಚು ಜನಪ್ರಿಯವಾಗಿವೆ.

ಮಾಧವ, ರಾಧೆ ಮತ್ತು ಅವಳ ಸಖಿ ಈ ಮೂವರಲ್ಲಿ ಗೀತಗೋವಿಂದದಲ್ಲಿ ಬರುವ ಪ್ರಮುಖ ಪಾತ್ರಧಾರಿಗಳು. ಮಾಧವನೇ ಪರಮಾತ್ಮ, ರಾಧೆಯೇ ಜೀವಾತ್ಮ, ಸಖಿಯೇ ಸತ್ಪ್ರೇರಣೆ, ರಾಧೆಯ ಸಮಾಗಮ ಕಾತುರವೇ ಜೀವಾತ್ಮ ಪರಮಾತ್ಮನ ಬಯಕೆಯ ಪ್ರತಿರೂಪ ಎಂಬುದು ಕವಿ ನಿರೂಪಿಸಿರುವ ಕೃತಿಯ ಅಂತರಂಗ ಸಂಕೇತ.

ಆದಿಪ್ರಾಸ, ಮಧ್ಯಪ್ರಾಸ, ಅಂತ್ಯಪ್ರಾಸಗಳು ಒಂದಕ್ಕೊಂದು ಹೆಣೆದುಕೊಂಡು ರಚನೆಯ ಅರ್ಥ, ಭಾವ, ಲಾಲಿತ್ಯಗಳನ್ನು ಸುಂದರಗೊಳಿಸಿರುವುದು ಕವಿಯ ಕಲ್ಪನೆ ಮತ್ತು ಕವಿತಾ ಸಾಮರ್ಥ್ಯಕ್ಕೆ ಉದಾಹರಣೆ. ಕವಿಗೆ ಸಂಗೀತ ಜ್ಞಾನ, ಭಾಷಾ ಜ್ಞಾನ, ಸಾಹಿತ್ಯಾಭಿರುಚಿ ಇತ್ತೆಂಬುದು—ಸಂಸ್ಕೃತ ಸಾಹಿತ್ಯದ ಮಹಾನ್ ಕೃತಿಗಳ ಪರಿಚಯ ದೊರೆತಿತ್ತೆಂಬುದು ನಿರ್ವಿವಾದ. ಇದಕ್ಕೆ ಗ್ರಂಥದಲ್ಲಿ ಬಳಸಿರುವ ಭಾಷೆ, ಶೈಲಿಯೇ ಸಾಕ್ಷಿ. ಕವಿ ತನ್ನ ಕೃತಿಯಲ್ಲಿ ಕಲ್ಪನೆಯ ಚಿತ್ರವನ್ನು ಮೂಡಿಸಿಲ್ಲ; ಚಂದವಾದ ಶೃಂಗಾರ ರಸಪೂರ್ಣ ರಾಧಾಮಾಧವರ ಅನಂತ ಮಧುರ ಮೈತ್ರಿಯ ಸುಂದರ ಚಿತ್ರಗಳನ್ನು ರಚಿಸಿದ್ದಾನೆ. ಗೀತಗೋವಿಂದದ ಒಂದೊಂದು ಸಾಲು ಒಂದೊಂದು ಪದ ಕಿವಿಯನ್ನು ಮಾತ್ರವೇ ಮುಟ್ಟುವುದಲ್ಲ, ಹೃದಯವನ್ನೇ ಮುಟ್ಟುತ್ತದೆ. ಗೀತ ಗೋವಿಂದದಲ್ಲಿ ಹರಿದಿರುವ ಶೃಂಗಾರ ರಸವಾಹಿನಿ ಶ್ರಾವಕರ, ಓದುಗನ ಮನದ ಕೊಳೆಯನ್ನು ಕಳೆಯುತ್ತದೆ; ಹೃದಯವನ್ನೂ ಅರಳಿಸುತ್ತದೆ.

ಗೀತ ಗೋವಿಂದ ಕೃತಿ ರೂಪುಗೊಂಡು ನೂರಾರು ವರ್ಷಗಳು ಕಳೆದಿವೆ. ಆದರೆ ಕೃತಿಯ ಶಕ್ತಿ, ಕೃತಿಯ ಸೌಂದರ್ಯ ನಿತ್ಯ ನೂತನವಾಗಿದೆ. ಸಂಸ್ಕೃತ ಮಹಾಕಾವ್ಯವಾರಿಧಿಯಲ್ಲ ಮೆರೆವ ಸುಂದರ ಪುಷ್ಪ 'ಗೀತ ಗೋವಿಂದ'. ರಸಿಕರ ಮನಸ್ಸಿಗೆ ಆನಂದ, ಸಹೃದಯರ ಹೃದಯಕ್ಕೆ ವಿಕಾಸಭಾವ, ನೃತ್ಯ ಗೀತ ಪ್ರಿಯರಿಗೆ ಕಲಾಸ್ಫೂರ್ತಿ ನೀಡುವ ಕೃತಿ ಗೀತ ಗೋವಿಂದ.

ಭಕ್ತಿ, ಭಾವ, ರಾಗ, ಅಲಂಕಾರ, ಗೀತ, ನಾಟ್ಯ, ಮೊದಲಾದ ಅಂಗಗಳೆಲ್ಲವೂ ಗೀತ ಗೋವಿಂದದಲ್ಲಿ ಸಮಪ್ರಮಾಣದಲ್ಲಿ ಬೆರೆತಿವೆ. ಕವಿ ತನ್ನ ಕೃತಿಯನ್ನು ಅಂದಗೊಳಿಸಲು ಪ್ರಯತ್ನಿಸಿದನೋ ಇಲ್ಲವೋ ಆದರೆ ಕೃತಿಯಿಂದ ಸೌಂದರ್ಯ ಹೊರ ಹೊಮ್ಮಿ, ಸಂಸ್ಕೃತ ಸಾಹಿತ್ಯದಲ್ಲಿ ಕವಿ ಜಯದೇವನದು ಸ್ವತಂತ್ರ ಶೈಲಿ; ಸುಂದರವಾದ ಶೈಲಿ.

'ಗೀತ ಗೋವಿಂದ' ಕೃತಿ ಕವಿ ಜಯದೇವ ಸಂಸ್ಕೃತ ಸಾಹಿತ್ಯ ಸರಸ್ವತಿಯ ಕಂಠಕ್ಕೆ ತೊಡಿಸಿದ ರತ್ನಹಾರ. ಅದರ ಬೆಲೆಯೂ ಹಿರಿದು; ಬೆಳಕೂ ಹಿರಿದು.

(ವಿವಿಧ ಮೂಲಗಳಿಂದ)

ಸುವ್ಯವಸ್ಥಿತ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್
ವ್ಯವಹಾರಗಳಿಗೆ ತನ್ನ 62 ಶಾಖೆಗಳಿಂದ ಹಬ್ಬಿರುವ
"ವಿಜಯ ಬ್ಯಾಂಕಿ"ನಲ್ಲಿ ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 8% ವರೆಗಿನ ಬಡ್ಡಿ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ಪ್ರ. ಆಫೀಸು—"ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—3

ಚಾರುಚರ್ಯೆನ

ಸುಬ್ರಹ್ಮಣ್ಯಂರ ಭೀಷ್ಮಪ್ರತಿಜ್ಞೆ

ಬಹು ದಿನಗಳಿಂದ ಅರ್ಭಟಿಸುತ್ತ ಲೋಕ ಸಭೆ—ರಾಜ್ಯ ಸಭೆಗಳನ್ನು ಅಲ್ಲ ಕಲ್ಲೋಲ ಮಾಡಿದ ಸುಬ್ರಹ್ಮಣ್ಯಂ ಪ್ರಕರಣಕ್ಕೆ ಸದ್ಯ ಅರ್ಧವಿರಾಮ ಬಿತ್ತೆಂದು ಹೇಳಬಹುದು. ಹಿಂದಿನ ವರಿಷ್ಠ ನ್ಯಾಯಾಧೀಶರಾದ ಶ್ರೀ ಎ. ಕೆ. ಸರಕಾರರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ನೇಮಿಸಿ, ಅದಕ್ಕೆ ಸರಕಾರಿ ಲೆಕ್ಕಪತ್ರ ಸಮಿತಿಯ ವರದಿಯಲ್ಲಿ ಎತ್ತಲಾದ ಎಲ್ಲ ಉಕ್ಕಿನ ವ್ಯವಹಾರಗಳ ಬಗ್ಗೆ ಸಂಪೂರ್ಣ—ಪರಿಶೀಲನೆ ಮಾಡುವ ಅಧಿಕಾರವನ್ನೂ ಕೇಂದ್ರ ಸರಕಾರವು ನೀಡುವು ದೆಂದು ಪ್ರಧಾನಿ ಇಂದಿರಾ ಗಾಂಧಿಯವರು ಘೋಷಿಸಿದರು. ಲೋಕ ಸೇವಾ ಆಯೋಗದ ಹಿಂದಿನ ಅಧ್ಯಕ್ಷ ಶ್ರೀ ವಿ. ಎಸ್. ಹೆಜಮಾಡಿ ಮತ್ತು ಹಿಂದಿನ ಕಂದಾಯ ಸಂಬಂಧದ ಕೇಂದ್ರ ಮಂಡಲದ ಅಧ್ಯಕ್ಷರೂ ಸಹಾಯಕ ನಿಯಂತ್ರಕ ಮತ್ತು ಲೇಖ ಪರೀಕ್ಷಕರಾಗಿದ್ದ ಶ್ರೀ ಪಿ. ಸಿ. ಪಡಿಯವರೂ ನಿಯೋಜಿತ ಸಮಿತಿಯ ಇತರ ಸದಸ್ಯರಾಗಿರುವರು. ಇದರ ಪರಿಣಾಮವಾಗಿ ಎಲ್ಲೆಲ್ಲೂ ವ್ಯಾಪಿಸಿದ ಸುಂಟರ ಗಾಳಿ ಒಮ್ಮೆಗೆ ತಣ್ಣಗಾದಂತಾಯಿತು. ಶ್ರೀ ಸುಬ್ರಹ್ಮಣ್ಯಂರನ್ನು ಟೀಕಿಸುವ ಸರಕಾರಿ ಲೆಕ್ಕ ಪತ್ರ ಸಮಿತಿಯ ವರದಿಯ ಮೇಲೆ ಸದ್ಯ ಚರ್ಚೆ ಮುಕ್ತಾಯವಾಯಿತು. ಈ ವರದಿಯು ಮಾಡಿರುವ ಟೀಕೆಗಳು ನಿಜವೆಂದು ಸಾರುವ ಅಥವಾ ವಿಚಾರಣಾ ಸಮಿತಿಯನ್ನು ನೇಮಿಸಬೇಕೆಂದು ಕೇಳುವ ವಿರೋಧಿ ಸದಸ್ಯರ ಗೊತ್ತುವಳಿಯನ್ನು ರಾಜ್ಯಸಭೆಯಲ್ಲಿ ಹಿಂತೆಗೆದುಕೊಳ್ಳಲಾಯಿತು.

ಶ್ರೀ ಸುಬ್ರಹ್ಮಣ್ಯಂರವರು ತಾವು ಉಕ್ಕಿನ ಮಂತ್ರಿಯಾಗಿದ್ದಾಗ ಅಮೀನಚಂದ ಪ್ಯಾರೇಲಾಲ ಕಂಪೆನಿಗ ಅನುಚಿತ ರಿಯಾಯತಿ ತೋರಿಸಿದ್ದಾರೆಂಬ ಅರ್ಥದ ಆರೋಪವನ್ನು ಸರಕಾರಿ ಲೆಕ್ಕ ಪತ್ರ ವರದಿಯು ಹೊರಿಸಿದೆ. ಈ ಕಂಪೆನಿಗೆ ಸಂಬಂಧಿಸಿದಂತೆ ಒಮ್ಮೆ ಕೈಕೊಂಡ ನಿರ್ಣಯವನ್ನು ಸಾಕಷ್ಟು ಬಲವಾದ ಕಾರಣಗಳಿಲ್ಲದೆ ಅವರು ಮತ್ತೆ ಬದಲಿಸಿದರು ಎಂದದು ಸಾರಿದೆ. ಯಾವುದೇ ಒಂದು ಹುಳುಕನ್ನು ಎತ್ತಿ ರಂಪಾಟವೆಬ್ಬಿಸುವ ನಮ್ಮ ವಿರೋಧಿ ಪಕ್ಷಗಳು ಇದನ್ನು ಎತ್ತಿಕೊಂಡರು—ಲೋಕ ಸಭೆ, ರಾಜ್ಯ ಸಭೆಗಳನ್ನು ಪ್ರಕ್ಷುಬ್ಧ ಸಾಗರವನ್ನಾಗಿಸಿದರು. ಪ್ರಜಾಸತ್ತೆಗೆ ಕಲಂಕವನ್ನೂ ತರುವಂತಹ ವಿಧ್ವಂಸಕ ಕೃತಿಗಳನ್ನೂ ಗೆಯ್ದ ಉದಾಹರಣೆಗಳುಂಟು. ಇದು ಯಾರಿಗೆ ಶೋಭೆ?

ಸುಬ್ರಹ್ಮಣ್ಯಂ—ನಿಜವಾಗಿ ಅಪರಾಧಿಗಳಾಗಿರಬಹುದು—ಅಲ್ಲವಾಗಿರಲೂ ಸಾಕು. ಇವರ ಮೇಲಿನ ಆರೋಪವನ್ನು ಕೂಲಂಕಷವಾಗಿ ವಿಚಾರಿಸಲು ವಿಚಾರಣಾ ಸಮಿತಿಯೊಂದನ್ನು ನೇಮಿಸುವ ಕುರಿತಾಗಿ ಪ್ರಧಾನಿಯವರು ಆರಂಭದಿಂದಲೇ ಅನುಕೂಲಾಭಿಪ್ರಾಯ ಪಟ್ಟಿದ್ದರು. ಶ್ರೀ ಸುಬ್ರಹ್ಮಣ್ಯಂರವರೂ ಅದಕ್ಕೆ ಒಂದೇ ಮಾತಿನಲ್ಲಿ ಒಪ್ಪಿದ್ದರು. ಹಾಗಿದ್ದರೂ ವಿರೋಧಿ ಪಕ್ಷಗಳ ದುರ್ವರ್ತನೆ ದುಷ್ಟ ಪರಂಪರೆಗೆ ನಾಂದಿ ಹಾಕಿದಂತಾಯಿತು. ಸ್ವಯಂ ಇಂದಿರಾ ಗಾಂಧಿಯವರೇ ಹೇಳುತ್ತಾರೆ—ಭ್ರಷ್ಟಾಚಾರದ ಅಪರಾಧ ಇದ್ದರೆ ತಪ್ಪು ಮಾಡಿದ ಯಾವುದೇ ವ್ಯಕ್ತಿಯನ್ನು ಶಿಕ್ಷಿಸಬೇಕೆನ್ನುವವಳು ಪ್ರಧಾನಿಯವರೂ ಮೊತ್ತಮೊದಲಿಗರು ಆದರೆ, ಎಲ್ಲ ಮಂತ್ರಿಗಳೂ ಅಧಿಕಾರಿಗಳೂ ಭ್ರಷ್ಟಾಚಾರಿಗಳೆಂದು ಆರೋಪ ಹೊರಿಸಿ ವ್ಯರ್ಥವಾಗಿ ಗೊಂದಲವೆಬ್ಬಿಸುವುದರಲ್ಲಿ ಏನೇನೂ ಅರ್ಥವಿಲ್ಲ. ಸತ್ಸಂಪ್ರದಾಯಗಳನ್ನು ಕಾಯ್ದುಕೊಂಡು ಒರಬೇಕಾದ ಪಾರ್ಲಿಮೆಂಟು ವಕೀಲರಂಗಳ ಶಬ್ದದಿಂದ ಹರಿಯತೊಡಗಿದರೆ ದೇಶದ ಗೌರವಕ್ಕೆ ಕುಂದು. ಸರಕಾರವು ವಿಚಾರಣಾ ಸಮಿತಿಯನ್ನು ನೇಮಿಸಲು ಅನವಶ್ಯಕ ಸಿದ್ಧರೆ, ಅಥವಾ ಸುಬ್ರಹ್ಮಣ್ಯಂ ವಿಚಾರಣೆಗೊಳಪಡಲು ನಿರಾಕರಿಸಿದ್ದರೆ ವಿರೋಧಿ ಪಕ್ಷಗಳ ಕೂಗಾಟಕ್ಕೊಂದು ನೆಲೆಯಾದರೂ ಇತ್ತು. ಈಗ ಅಂತಹದೇನೂ ಇರುವುದಿಲ್ಲ.

ಸಮರ್ಥ ಆಡಳಿತಗಾರರೆಂದು ಹೆಸರಾದ ಸುಬ್ರಹ್ಮಣ್ಯಂ ತನ್ನ ನಿಷ್ಪೃಹತೆಗೂ ಹೆಸರಾಗಿದ್ದಾರೆ. ಅವರು ತನ್ನ ನಿಲುವನ್ನು ಹಿಂದೆಯೇ ಸ್ಪಷ್ಟ ಶಬ್ದಗಳಲ್ಲಿ ಸಾರಿದ್ದಾರೆ—"ಅನುಚಿತ ಲಾಭ ಪಡೆದು, ರಾಷ್ಟ್ರಹಿತವನ್ನು ಕಡೆಗಣಿಸಿ, ದೇಶದ್ರೋಹ ಮಾಡಿಲ್ಲ. ಯಾವುದೇ ವಿಚಾರಣೆ ಈ ಸಂಬಂಧದಲ್ಲಿ ನಡೆದರೂ ತಲೆ ಒಪ್ಪುತ್ತೇನೆ." ಮೊನ್ನೆ ಕೊಟ್ಟ ಕೊನೆಯದಾಗಿ ಅವರು ಭೀಷ್ಮ ಪ್ರತಿಜ್ಞೆಯನ್ನೂ ರಾಜ್ಯ ಸಭಾಸದರ ಸಮಕ್ಷದಲ್ಲಿ ಮಾಡಿದರು: "ವೈಯಕ್ತಿಕ ಲಾಭ ಮತ್ತು ಹಿತಕ್ಕಾಗಿ ನನ್ನ ಸ್ಥಾನಮಾನವನ್ನು ಉಪಯೋಗಿಸಿ ಒಂದಾದರೂ ಕೃತಿಯನ್ನು ನಡೆಸಿದ್ದೇನಾದರೆ, ನಾನು ಸಾರ್ವಜನಿಕ ರಂಗದಿಂದ ಸಂಪೂರ್ಣವಾಗಿ ನಿವೃತ್ತನಾಗಿ ಕೊಂಪೆ ಸೇರುತ್ತೇನೆ" ಸುಬ್ರಹ್ಮಣ್ಯಂ ಇಂತಹ ವೀರ ಪ್ರತಿಜ್ಞೆ ಮಾಡುವುದು ಸಹಜ.

ಈ ಬಾರಿಯ ಪಾರ್ಲಿಮೆಂಟ್ ಅಧಿವೇಶದಲ್ಲಿ ಎದ್ದ ಸುಬ್ರಹ್ಮಣ್ಯಂ ಪ್ರಕರಣ ಮುಂದಿನ ಚುನಾವಣೆಗಳಲ್ಲಿ ಕಾಂಗ್ರೆಸ್ಸ್ ಜಯಭೇರಿ ಹೊಡೆಯಲು ಒಳ್ಳೆಯ ವಾತಾವರಣವೊದಗಿಸುವುದು.

ಂ ಂ ಂ

ಮಹಾರಾಷ್ಟ್ರದ ಮುಖ್ಯ ಮಂತ್ರಿ ಶ್ರೀ ವಿ. ಪಿ. ನಾಯಕರಿಗೆ ಹೊಸ ಸಮಸ್ಯೆಯನ್ನು ಎದುರಿಸಬೇಕಾಗಿದೆ. ಇತ್ತೀಚೆಗೆ ಮುಂಬಯಿ ಮಹಾನಗರದಲ್ಲಿ ನಡೆದ "ಮುಂಬಯಿ ಬಂದ" "ಸಚಿವಾಲಯ ಬಂದ" ಅರ್ಥಹೀನ ಚಳುವಳಿಯ ಕಾಲದಲ್ಲಿ ನಾಗರಿಕರಿಗೆ ಸಮರ್ಥ ರಕ್ಷಣೆಯನ್ನು ನೀಡುವಲ್ಲಿ ಸರಕಾರವು ವಿಫಲವಾಗಿದೆ ಎಂದು ನೊಂದ ಕೆಲ ಮಂತ್ರಿಗಳು, ಇವರಲ್ಲಿ ಒಬ್ಬರು ಕಾನೂನು ಮತ್ತು ನ್ಯಾಯ ಶಾಖೆಯವರು, ಮತ್ತು ಮುಂಬಯಿಂದ ಆಯ್ಕೆ ಹೊಂದಿದ್ದ ಹಲವರು ಶಾಸಕರು ರಾಜೀನಾಮೆ ನೀಡಿ ಹೊಸ ಸಮಸ್ಯೆಯನ್ನು ತಂದು ಹಾಕಿದರು.

ಈ ರಾಜೀನಾಮೆ ಪ್ರಕರಣದ ಹಿನ್ನೆಲೆಯೇನು ಎಂಬುದು ಇದು ವರೆಗೆ ಪ್ರಕಟವಾಗಿಲ್ಲ. ಆದರೆ, ಚಳುವಳಿಗಾರರಿಂದ ನಾಗರಿಕರು ಅನುಭವಿಸಿದುದು, ಸಾರ್ವಜನಿಕ ವಿತ್ತ—ಸಂಪತ್ತುಗಳು ನಷ್ಟವಾದದ್ದು — ಇವೆಲ್ಲವುಗಳಿಂದಲೇ ರಾಜೀನಾಮೆ ಪ್ರೇರಿತವಾಗಿದೆಯೆಂದರೆ, ಅದು ನಂಬತಕ್ಕದ್ದಲ್ಲ. ಕೇಂದ್ರ ರೇಲು ಶಾಖಾ ಮಂತ್ರಿ ಎಸ್. ಕೆ. ಪಾಟೀಲರು ಮುಂಬಯಿ ಶಾಸಕರ ನೀತಿಯನ್ನು ಸಮರ್ಥಿಸಿ ಮಾಡಿದರೆಂದು ಈಗ ತಿಳಿಯುತ್ತದೆ. ಅಂದರೆ, ನಾಯಕರ ವಿರುದ್ಧ ಗುಂಪೊಂದು ಮುಂಬಯಿಯಲ್ಲಿ ಕಟ್ಟಲ್ಪಡುತ್ತಿದೆ—ಚಳುವಳಿಯೊಂದು ಹುರುಳಿಲ್ಲದ ನೆವನ ಮಾತ್ರ.

ಮಾಜಿ ಸಂರಕ್ಷಣಾ ಮಂತ್ರಿ ವಿ. ಕೆ. ಕೃಷ್ಣಮೆನನ್ನರಿಗೆ ಮುಂಬಯಿಯ ಯಾವುದೇ ಕ್ಷೇತ್ರದಿಂದ ಸ್ಪರ್ಧಿಸಲು ಬಿಡಬಾರದು ಎಂಬ ಒಂದು ದೊಡ್ಡ ಗುಂಪು ಎಂ. ಪಿ. ಸಿ. ಸಿ. ಯಲ್ಲಿದೆ. ಆದರೆ, ಕೇಂದ್ರದ ನಾಯಕರಲ್ಲಿ ಕೆಲವರು ಇದನ್ನು ಒಪ್ಪದೆಯೂ ಇದ್ದಾರೆ. ಪವಿತ್ರಸ್ತ ಮಂತ್ರಿಯಾಗಿಹೋರುಂದ ಕೃಷ್ಣಮೆನನರಿಗೆ ಸ್ಥಾನ ಕೊಡಬೇಕೇ ಬೇಡವೇ ಎಂಬ ಪ್ರಶ್ನೆ ಅಲಾಯಿದ. ಕೆಲವರು ಅವರೂ ಪಾರ್ಲಿಮೆಂಟಿನಲ್ಲಿರಬೇಕೆಂದು ಬಯಸಿದರೆ, ಅದು ಮಹಾಪರಾಧವಾಗಲಾರದು. ಕರ್ನಾಟಕ—ಮಹಾರಾಷ್ಟ್ರ ಗಡಿ ವಿವಾದದಲ್ಲಿ ಸಹೋದಾರವಾದ ಸರಣಿ ಚಂದವಿದೆ. ಅವರು ಕನ್ನಡಿಗರಿಗೆ ಉಪದೇಶ ನೀಡುತ್ತಾರೆ: ನೀವು ಸುಮ್ಮನೆ ಕುಳಿತಿರಿ; ಇಲ್ಲವಾದರೆ, ಈಗ ನಿಮ್ಮ ಕೈಯಲ್ಲಿರುವ ಭೂಮಿಯೂ ಹೋದೀತು.

ಈಯೆಲ್ಲಾ ಹಿನ್ನೆಲೆಗಳಿಂದ ಪರಿಶೀಲಿಸುವಾಗ ಮುಂಬಯಿ ಶಾಸಕರ ಸಾಮೂಹಿಕ ರಾಜೀನಾಮೆ ವಿ. ಪಿ. ನಾಯಕರ ಮೇಲೆ ಎಸೆದ ಬ್ರಹ್ಮಾಸ್ತ್ರ. ಇದನ್ನವರು ಹೇಗೆ ಸಹಿಸುವರೆಂದು ಕಾದು ನೋಡಬೇಕು.

ಂ ಂ ಂ

ಸುವರ್ಣ ನಿಯಂತ್ರಣ ಶಾಸನವನ್ನು ರದ್ದುಪಡಿಸಬೇಕು—ಎಂಬ ಬೇಡಿಕೆ ಇಂದು ನಿನ್ನೆಯದಲ್ಲ, ಮುರಾರ್ಜಿ ಭಾಯಿ ತಂದ ಈ ಶಾಸನದಿಂದ ಯಾವ ಪ್ರಯೋಜನವೂ ಆಗಿಲ್ಲವೆಂಬುದು ವಿರೋಧಿಗಳ ಅಂಬೋಣ. ಇದೂ ನಿಜವೇ. ಬಂಗಾರದ ಕಳ್ಳ ಆಯಾತವನ್ನು ತಡೆಗಟ್ಟುವುದು, ಬಂಗಾರದ ಮೇಲಿನ ಮೋಹವನ್ನು ತ್ಯಜಿಸುವಂತೆ ಮಾಡುವುದು ಇತ್ಯಾದಿ ಇತ್ಯಾದಿ— ಈ ಶಾಸನದ ಉದ್ದೇಶವಾಗಿದ್ದುವು. ಆದರೆ, ಇವುಗಳು ಅಲ್ಪ ಪ್ರಮಾಣದಲ್ಲಾದರೂ ಸಾಧಿಸಿವೆಯೆ? ಬಂಗಾರದ ಕಳ್ಳ ಮಾರುಕಟ್ಟೆ ಕಳ್ಳ ಭಟ್ಟಿಯಂತೆಯೇ ಸರ್ವತ್ರ ವ್ಯಾಪಿಸಿವೆ. ಇದರಿಂದಾಗಿಯೇ ಬಂಗಾರದ ಬೆಲೆಯೂ ಏರಿದೆ. ಕೆಲಸ ಕಳೆದುಕೊಂಡವರೆಂಬ ನೆಪ(ನಿಜವಾಗಿ ಇವರು ಇಂದಿಗೂ ಅದೇ ಕೆಲಸವೂ ಮಾಡುತ್ತಾರೆ)ದಿಂದ ಅಕ್ಕಸಾಲಿಗರು ಒಂದಲ್ಲ ಹಲವು ಬಗೆಯ ಸೌಲಭ್ಯಗಳನ್ನು ಪಡೆಯುತ್ತಾರೆ. ಇವರಿಂದ ಸಾರ್ವಜನಿಕ ಬೊಕ್ಕಸಕ್ಕೆ ಎಷ್ಟು ಹಾನಿ ಆಗುತ್ತಿದೆ? ಮದ್ಯಪಾನ ಪ್ರತಿಬಂಧ ಶಾಸನದಂತೆಯೇ ಸುವರ್ಣ ನಿಯಂತ್ರಣ ಶಾಸನವೂ ವಿಫಲವಾಗಿದೆ ಎಂದು ಹೆಚ್ಚಿನವರ ಅಭಿಪ್ರಾಯ—ಇದನ್ನು ಅಲ್ಲಗಳೆಯುವುದು ಸಾಧ್ಯವಿಲ್ಲ.

ಶಾಸನವನ್ನು ಹಿಂತೆಗೆದುಕೊಳ್ಳುವುದು ಮಾನ ಪ್ರತಿಷ್ಠೆಗೆ ಕುಂದು—ಆದರ್ಶದಿಂದ ಹಿಂದಸರಿದಂತೆ—ನಿಜ. ಆದರೆ, ಶಾಸನವನ್ನು ಕಟ್ಟುನಿಟ್ಟಾಗಿ ಪಾಲಿಸುವಂತ ನೋಡಿಕೊಳ್ಳುವ ಶಕ್ತಿಯಿಲ್ಲದ ಅದನ್ನು ಜೀವನ್ಮೃತವಾಗಿ ಮಾಡುವುದು ದೇಶಕ್ಕೆ ಅಹಿತಕಾರಿ. ಮದ್ಯಪಾನ ಪ್ರತಿಬಂಧ ಶಾಸನವನ್ನು ವ್ಯವಹಾರಕ್ಕೆ ತರಲಾಗದೆ ತೊಳಲಾಡುವ ರಾಜ್ಯ ಸರಕಾರಗಳು ಏನು ಮಾಡಿದುವು? ಶಾಸನವನ್ನು ಸಡಿಲುಗೊಳಿಸುತ್ತ ಬಂದವು—ಇನ್ನು ಸಡಿಲಾಗುವ ಸಂಭವವೇ ಹೆಚ್ಚು—ಹಾಗೆಯೇ ಸ್ವರ್ಣ ನಿಯಂತ್ರಣ ಶಾಸನ—ನಮ್ಮ ಸರಕಾರದಲ್ಲಿ ಶಾಸನ ಮಾಡುವ ಶಕ್ತಿಯಿದೆ; ಅದನ್ನು ಸಮುಚಿತವಾಗಿ ವ್ಯವಹಾರಕ್ಕೆ ತರುವ ಶಕ್ತಿಯಿಲ್ಲ. ಇದೇಕೆ ಹೀಗೆ?—ಆತ್ಮ ಶೋಧನೆ ನಡೆಸಿ ನಿರ್ಧಾರಕ್ಕೆ ಬರಬೇಕಾದ ಸಮಯವೀಗ ಬಂದಿದೆ.

— ರಾಕಿ.

ಕುಂದಾಪುರದ ಮುನ್ಸಿಫ್ ಕೋರ್ಟಿನಲ್ಲಿ

S. E. P. 146/66 in S. C. 274/63

Y. ನಾರಾಯಣ ಶೆಟ್ಟಿ —ಅರ್ಜಿದಾರ

ಮತ್ತು

ಶೇಷಿ ಶೆಡ್ತಿ ಸಹಾ —ಎದುರು.

ಕುಂದಾಪುರ ತಾಲ್ಲೂಕು ಬೈಂದೂರು ಗ್ರಾಮ್ದ ಸೂರ್ಕುಂದದಲ್ಲಿರುವ 1ನೇ ಎದುರು ಶೇಷಿ ಶೆಡ್ತಿ ಯಾನೆ 3ನೇ ಎದುರು ಶೇಷಿಟ್ಟಿ, 1,7ನೇ ಎದುರು ಯೆಂಕಮ್ಮ ಶೆಡ್ತಿ ಯಾನೆ 8ನೇ ಎದುರು ರಾಮಯ್ಯ ಶೆಟ್ಟಿ |ಕೂಡಾ 2 ಜನರಿಗೆ ಈ ಮೂಲಕ ತಿಳಿಸುವದೇನೆಂದ್ರೆ—

ಅರ್ಜಿದಾರನು, ನೀವು ಕೂಡಾ ಜನರ ಮೇಲೆ ಪಡೆದ ಈ ಕೋರ್ಟಿನ S. C. 274/63 ನೇ ಡಿಕ್ರಿ ಮೇಲೆ ನಡೆಸಿದ ಸದ್ರಿ ಅಮಲ್ಜಾರಿಯು ಅಮ್ಮೈರ ತನ್ನ ಬಗ್ಗೆ ತಾ. 21_9_66 ಕ್ಕೆ ಇಟ್ಟಿದೆ.

ಆದ್ದರಿಂದ ನೀವು ಸ್ವತಃ ಯಾ ವಕೀಲರ ಮೂಲಕ ಸದ್ರಿ ದಿನ ಹಗಲು 11 ಗಂಟೆಗೆ ಕೋರ್ಟಿನ ಮುಂದೆ ಹಾಜರಾಗಿ ಆಕ್ಷೇಪಣೆ ಇದ್ದಲ್ಲಿ ಹಾಜರ್ಪಡಿಸುವರೇ ತಪ್ಪಿದಲ್ಲಿ, ನಿಮ್ಮ ಗೈರು ಹಾಜರಿಯಲ್ಲಿ ಮೇಲಿನ ಅಮಲ್ಜಾರಿಯಲ್ಲಿ ಮುಂದಿನ ಕ್ರಮ ಕೈಗೊಳ್ಳಲಾಗುವುದು.

(ಕೋರ್ಟಿನ ಅಪ್ಪಣೆ ಮೇರೆಗೆ)

G. Kushala Hegde

ಅರ್ಜಿದಾರನ ಪರ ಎಡ್ವೊಕೇಟು

ಕುಂದಾಪುರ, 24—8—66.

ಟೆಲಿಗ್ರಾಂ: 'ಸುದರ್ಶನ'. ಸ್ಥಾಪನೆ. 1914 ಫೋನ್ 3428

ಜಗತ್ಪ್ರಸಿದ್ಧವಾದ **ಜೈಹಿಂದ್ ಹಂಚು**ಗಳನ್ನೇ

ಸದಾ ಉಪಯೋಗಿಸಿರಿ.

ತಯಾರಕರು: ಸುದರ್ಶನ ಟೈಲ್ ವರ್ಕ್ಸ್, ಬೋಳಾರ, ಮಂಗಳೂರು–೧

ನವಯುಗಕ್ಕೆ

ಚಂದಾದಾರರಾಗಿ ಪ್ರೋತ್ಸಾಹಿಸಿರಿ.

ವಾರ್ಷಿಕ ಚಂದಾ ರೂ. ೧೦

ಚಿಕ್ಕ ಬುಟ್ಟಿಯಿಂದ ಹೊರಬಿದ್ದಾಗ...

ಬರೆದವರು: ಶ್ರೀ ಶಿವಶಂಕರ

'ಇಂದು ನಿಜವಾಗಿ ಸರಕಾರ ಅಸಹಾಯಕ ಪರಿಸ್ಥಿತಿಯಲ್ಲಿರುವದಿಲ್ಲ. ಅಸಹಾಯಕ ಪರಿಸ್ಥಿತಿಯಲ್ಲಿರುವದು ಶ್ರೀ ಭಕ್ತವತ್ಸಲಂ.' ಈ ರೀತಿ ೨೫—೮—೧೯೬೮ರ ಸಂಚಿಕೆಯ "ಅಸಹಾಯಕ ಸರಕಾರ' ಲೇಖನದಲ್ಲಿ ತಿಳಿಯಪಡಿಸಲಾಗಿತ್ತಲ್ಲದೆ, "ಅವರು ಸರಕಾರ ಅಸಹಾಯಕ ಪರಿಸ್ಥಿತಿಯಲ್ಲಿದೆಯೆಂದು ಹೇಳಿ ತನ್ನ ಮುಖ ಉಳಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆಯೆ?' ಪ್ರಶ್ನೆಯನ್ನೂ ಕೇಳಲಾಗಿತ್ತು. ಅದೆಷ್ಟರ ಮಟ್ಟಿಗೆ ಸತ್ಯವೆಂಬುದನ್ನು "ಚಿಕ್ಕ ಬುಟ್ಟಿಯಿಂದ ಹೊರಬಿದ್ದಾಗ" ಕಾಣಬಹುದು.

ಕೆಲಸಮಯದ ಹಿಂದೆ, ಮದ್ರಾಸು [ಚೆನ್ನೈ] ನಗರದಲ್ಲಿರುವ ಪ್ರಭಾವೀ ಪ್ರಮುಖ ತಮಿಳು ವಾರಪತ್ರಿಕೆಯೊಂದು ಮತೀಯ ಮುಖಂಡನೋರ್ವನ ಕುರಿತು ಒಂದು ಲೇಖನ ಪ್ರಕಟಿಸಿತ್ತು. ಅದರಲ್ಲಿ "ಮನ ನೋಯಿಸುವಂತಹ" ವಿಷಯವಿದೆಯೆಂದು ಒಂದು ಕೋಮಿನ ವ್ಯಕ್ತಿ ಇಲ್ಲಿಯ ವಿಧಾನ ಸಭೆಯಲ್ಲಿ ವಿಷಯ ಪ್ರಸ್ತಾಪನೆ ಮಾಡಿತು. ಒಡನೆ ಇದೇ ಮುಖ್ಯಮಂತ್ರಿಯವರು ಆ ಪತ್ರಿಕೆಯವರ ಬಳಿ ಏನದೆಂದು ಕೇಳಿದರು. ಅವರು ಲೇಖನವನ್ನು ತೋರಿಸಿ ಅಂತಹ ವಿಷಯವೇನೂ ಇಲ್ಲವೆಂದೂ, ಕೇವಲ ಸತ್ಯ ಸಂಗತಿಗಳು ಮಾತ್ರ ಅದರಲ್ಲಿವೆಯೆಂದು ತಿಳಿಸಿದರು. ಆದರೂ ಆ ಕೋಮಿನವರ ಬಲವಂತಕ್ಕೊಳಗಾದ ಮುಖ್ಯ ಮಂತ್ರಿಯವರು ಸಂಬಂಧಪಟ್ಟ ಪತ್ರಿಕೆಯು 'ಕ್ಷಮೆ'ಯ ರೀತಿಯಲ್ಲಿ ಏನಾದರೂ ಪ್ರಕಟಿಸಬೇಕೆಂದು ಆಗ್ರಹಪಡಿಸಿದರು. 'ಕ್ಷಮೆ'ಯ ನಾಟಕವೂ ಸಾಂಗವಾಗಿ ನಡೆಯಿತು. ಈ ಘಟನೆಯನ್ನು ಜ್ಞಾಪಿಸಿಕೊಳ್ಳುವಾಗ ಆಗ ಮಾತ್ರ ಈ ಸರಕಾರಕ್ಕೆ ಅಧಿಕಾರವಿತ್ತು, ಅನಂತರ ಯಾರೋ ಆ ಹಕ್ಕನ್ನು ಕಿತ್ತು ಬಿಟ್ಟಿರುವರೆಂದಾಗುತ್ತದೆ. ಆದರೆ ನಿಜವಾಗಿ ಇಂದೂ ಸರಕಾರ ಅಸಹಾಯಕ ಪರಿಸ್ಥಿತಿಯಲ್ಲಿರುವದಿಲ್ಲ. ಅಸಹಾಯ ಪರಿಸ್ಥಿತಿಯಲ್ಲಿ ಇರುವದು ಶ್ರೀ ಭಕ್ತವತ್ಸಲಂ ಎಂಬುದನ್ನು ವಿಚಾರಶೀಲರು ಕಂಡುಕೊಳ್ಳಬಹುದು.

ಇತ್ತೀಚೆಗಿನ ಎರಡು ರಾಜಕೀಯ ಪಕ್ಷಗಳು—ಸ್ವತಂತ್ರ ಪಾರ್ಟಿ ಮತ್ತು ದ್ರಾವಿಡ ಮುನ್ನೇಟ್ರ ಕಳಗಂ—ಭುಜಕ್ಕೆ ಭುಜಕೊಟ್ಟಿರುವಂತೆ, ಕಾಂಗ್ರೆಸ್ ಹಾಗೂ ದ್ರಾವಿಡ ಕಳಗಂ ಕೂಡಾ ಒಂದಾಗಿರುತ್ತವೆ. ಇದು ನಿಜವಾದರೂ ಹಾಗನ್ನುವುದಕ್ಕಿಂತ ತಿರು ಕಾಮರಾಜ ಹಾಗೂ ತಿರು ರಾಮಸ್ವಾಮಿ ನಾಯ್ಕರ್ ಒಂದುಗೂಡಿದ್ದಾರೆನ್ನಬಹುದು. ಯಾಕೆಂದರೆ ಚುನಾವಣೆ ಮುಗಿದ ಮೇಲೆ ದ್ರಾವಿಡ ನಾಡಿಗಾಗಿ ಕಾಂಗ್ರೆಸ್ಸನ್ನು ತಾವು ಎದುರಿಸುವದಾಗಿ ತಿರು ರಾಮಸ್ವಾಮಿ ನಾಯ್ಕರ್ ಬಹಿರಂಗಪಡಿಸಿರುವದೇ ಕಾರಣವಿದೆ.

ಇದರಿಂದ ತಿರು ರಾಮಸ್ವಾಮಿನಾಯ್ಕರ್‌ರವರು ಕಾಂಗ್ರೆಸ್ಸಿಗೆ ಬೆಂಬಲವನ್ನೀಯಿದೆ ಕೇವಲ ತಿರುಕಾಮರಾಜನಾದಾರವರೆಗೆ ಮಾತ್ರ ಬೆಂಬಲವನ್ನೀಯುತ್ತಿದ್ದಾರೆಂದಾಗುತ್ತದೆ. ಅಷ್ಟೇ ಅಲ್ಲ ಶ್ರೀ ಭಕ್ತವತ್ಸಲಂರವರ ಸೋಲಿಗಾಗಿ ತಾವು ಪ್ರಯತ್ನಿಸುವದಾಗಿಯೂ ಅವರು ಅಂದಿದ್ದರು. ಶ್ರೀ ಭಕ್ತವತ್ಸಲಂ ಬೆದರಿದ್ದು ಇಲ್ಲ. ಕಳೆದ ಸಲ, ಅಧಿಕಾರ ತನ್ನ ಕೈಯಲ್ಲಿದ್ದರೂ ಆರಿಸಿ ಬರಲು ಅವರು ಪಟ್ಟಿದ್ದ ಕಷ್ಟ ಅಷ್ಟಿಷ್ಟಲ್ಲ. ಮತಕಟ್ಟೆಯ ಮಲ್ಲಯುದ್ಧ ಮುಗಿದರೂ ನ್ಯಾಯಾಲಯದ ನೆರಳು ಅವರನ್ನು ಬಿಡಲಿಲ್ಲ. ಅಂತೂ ತಪ್ಪಿಸಿಕೊಂಡದ್ದೇನೋ ನಿಜವಾದರೂ ಈ ಸಲವೂ ಹಾಗೆನೇ ಹೊರಬರುವುದು ಅಷ್ಟು ಸುಲಭ ಸಾಧ್ಯವಲ್ಲ. ಮತಕಟ್ಟೆಯ ಮಾರಾಮಾರಿಯಲ್ಲಿ ದ್ರಾವಿಡ-ಕಳಗವಿುನ ಅನಾಮಧೇಯ ಮಲ್ಲನನ್ನು ಮಣ್ಣು ಮುಕ್ಕಿಸುವ ಧೈರ್ಯ—ತಂತ್ರ ಶ್ರೀ ಭಕ್ತವತ್ಸಲಂರವರಲ್ಲಿಂಬಹುದಾದರೂ, ಈ ಕಾಲದಲ್ಲಿ, ಮತಕಟ್ಟೆಯತ್ತ ಹೋಗುವ ದಾರಿಯಾದರೂ ಗೊತ್ತಿಂಬೇಕಲ್ಲವೆ? ೧೯೬೩ರ ಹೊಸ ಕಾಮರಾಜಯೋಜನೆಯ ಪ್ರವಾಹದಲ್ಲಿ ತಾವು ಕೊಚ್ಚಿಕೊಂಡು ಹೋದಲ್ಲಿ? ಶ್ರೀ ಭಕ್ತವತ್ಸಲಂರವರಿಗೆ ಈ ಹೆದರಿಕೆ ಇದ್ದೇ ಇದೆ. ಶ್ರೀ ಮದ್ರಾಮಾಯಣದ ಕುರಿತು ಖಂಡನೀಯ ರೀತಿಯಲ್ಲಿ ದ್ರಾವಿಡ ಕಳಗಮಿನವರು ವರ್ತಿಸಿದಾಗ, ಅವರ ಮೇಲೆ ಕ್ರಮ ಕೆಗೆದುಕೊಂಡಲ್ಲಿ ಒಡನೆ ತಿರು ರಾಮಸ್ವಾಮಿ ನಾಯ್ಕರವರು ತಿರು ಕಾಮರಾಜರ ಕಟ್ಟೆ ಒಡೆದು ಬಿಡುತ್ತಾರೆ. ಆಗ ಹೊಸ ಪ್ರವಾಹ ಹರಿದು ಬರುತ್ತದೆ. ಅದರಲ್ಲಿ ಶ್ರೀ ಭಕ್ತವತ್ಸಲಂ ಕೊಚ್ಚಿಕೊಂಡು ಹೋಗುತ್ತಾರೆ. ಹೀಗೆ ಆಗದಂತೆ ನೋಡಿಕೊಳ್ಳಬೇಕಾದಲ್ಲಿ ಕಹಿ ಗುಳಿಗೆಯನ್ನು ನುಂಗಿಕೊಳ್ಳಲೇ ಬೇಕು. ಶ್ರೀ ಭಕ್ತವತ್ಸಲಂ ದೇವಸ್ಥಾನ ಜೀರ್ಣೋದ್ಧಾರ ಇಲಾಖೆ ಮಂತ್ರಿಯಾಗಿದ್ದು ಹಲವಾರು ದೇವಸ್ಥಾನಗಳ ಜೀರ್ಣೋದ್ಧಾರ ಸಮಾರಂಭಗಳಲ್ಲಿ ಅಧ್ಯಕ್ಷ ಸ್ಥಾನವನ್ನಲಂಕರಿಸಿರುವದೇ ತಿರು ರಾಮಸ್ವಾಮಿ ನಾಯ್ಕರ್ ಹಾಗೂ ಅವರ ಅನುಯಾಯಿಗಳಿಗೆ ಅತೀವ ಕೋಪ ಬರಿಸಿರುತ್ತದೆ. ಅದರ ಪ್ರತಿಫಲವನ್ನು ತೀರಿಸಿಕೊಳ್ಳಲು ಅವರು ಹವಣಿಸುತ್ತಿದ್ದು, ತಮ್ಮ ರೋಷವನ್ನು ವ್ಯಕ್ತಪಡಿಸಿದ್ದರು. ಶ್ರೀ ಭಕ್ತವತ್ಸಲಂರವರ ರಾಜಕೀಯ ಅಥವಾ ಪದವಿಯ ಭದ್ರತೆಯ ಬುಡಕ್ಕಿಟ್ಟ ಸುರಂಗ ಇದೆಂದು ಮತದಾರರು ತಿಳಿದುಕೊಂಡಿದ್ದರು. ತಾವು ಜೀರ್ಣೋದ್ಧಾರ ಕಾರ್ಯದಲ್ಲಿ ಭಾಗವಹಿಸಿದ್ದ ದೇವಸ್ಥಾನಗಳ ತೀರ್ಥಯಾತ್ರೆಯಲ್ಲೇ ಶ್ರೀ ಭಕ್ತವತ್ಸಲಂ ತಮ್ಮ ಇನ್ನು ಮುಂದೆ ಕಳೆಯಬೇಕಾಗುತ್ತದೆಂದು ಭಕ್ತರು ನಂಬಿಕೊಂಡಿದ್ದರು. ಆದರೆ ಕಾಲಚಕ್ರ ಯಾವಾಗಲೂ ಒಂದೇ ರೀತಿ ಇರುವದಿಲ್ಲ.

ರಾಜಕೀಯ ರಂಗದಲ್ಲಿ ಶ್ರೀ ಭಕ್ತವತ್ಸಲಂರವರನ್ನು ಬಡಿದೇ ಬಿಡುತ್ತೇನೆಂದು ಬಡಾಯಿಕೊಚ್ಚಿಕೊಳ್ಳುತ್ತಿದ್ದ ತಿರು ರಾಮಸ್ವಾಮಿ ನಾಯ್ಕರ್‌ರವರು ಶ್ರೀ ಭಕ್ತವತ್ಸಲಂರವರ ಭಕ್ತರಿಗೆ ಬಹಳ ಆಶ್ಚರ್ಯವನ್ನುಂಟು ಮಾಡಿಬಿಟ್ಟರು. ಪರಪನೇರಿಯಲ್ಲಿ ನಡೆದ ಸಭೆಯೊಂದರಲ್ಲಿ ತಮ್ಮ ಅಭಿಪ್ರಾಯವನ್ನು ತಿರು ರಾಮಸ್ವಾಮಿ ನಾಯ್ಕರ್ ತಿಳಿಸಿ ಬಿಟ್ಟರು. ಬೆಕ್ಕು ಆಗ ಬುಟ್ಟಿಯಿಂದ ಹೊರ ಬಿತ್ತು. ಮುಖ್ಯಮಂತ್ರಿ ಶ್ರೀ ಭಕ್ತವತ್ಸಲಂರವರು ದ್ರಾವಿಡ ಕಳಗಮಿನ ವಿಷಯದಲ್ಲಿ ಹೇಗೆಂತು ವರ್ತಿಸಿದ್ದರೂ ಮುಂದಿನ ಚುನಾವಣೆಯಲ್ಲಿ ಅವರಿಗೆ ದ್ರಾವಿಡ ಕಳಗಮಿನ ಹಾಗೂ ತನ್ನ ಪೂರ್ಣ ಬೆಂಬಲವಿದೆಯೆಂದವರು ಹೇಳಿದರು. ಅದೆಂತಹ ಬದಲಾವಣೆ! ಯಾರನ್ನು ಬಗ್ಗುಬಡಿಯಬೇಕೆಂದು ಹೋರಾಟ ನಡೆಸಿಕೊಂಡು ಬರಲಾಗಿತ್ತೋ, ಅವರನ್ನು ವಾತ್ಸಲ್ಯದಿಂದ ಕಾಣುವ ನಾಟಕ ಇದು! ನಾಟಕದ ಯಶಸ್ಸೀ ನಾಟಕದ ಪೂರ್ವ ಸಿದ್ಧತೆ ನಡೆಯಿತ್ತು.

ತಮ್ಮ ಮತದಾರ ಭಕ್ತರ ವಾತ್ಸಲ್ಯಕ್ಕಾಗಿ ಮುಖ್ಯ ಮಂತ್ರಿ ಶ್ರೀ ಭಕ್ತವತ್ಸಲಂ ತೆತ್ತ ಬೆಲೆ ಏನು? ಮೊದಲನೆಯದಾಗಿ ರಾಷ್ಟ್ರಾಭಿಮಾನಕ್ಕೆ ತಿಲಾಂಜಲಿ; ಎರಡನೆಯದಾಗಿ ಸರಕಾರದ ಶಕ್ತಿಯ ಅವಹೇಳನೆ. ರಾಷ್ಟ್ರದ ವೀರ ಪುರುಷರ, ಆದರ್ಶ ಪುರುಷರ, ಮಹಾತ್ಮರ ಕುರಿತು



ಮಿಸಿಸ್ಸಿಪಿ ನದೀ ದಡದ ಸೈಂಟ್ ಲೂಯಿಸ್ ಅಮೆರಿಕೆಯ ಪಶ್ಚಿಮ ಭಾಗದ ಪ್ರಗತಿಯ ಸಂಕೇತ. ಇದಕ್ಕೆಂದೇ ನಗರದ ಆಗಸೆಯ ಬಳಿಯಲ್ಲಿ ೧೯೨ ಮೀಟರ್ ಎತ್ತರದ ಪ್ರವೇಶ ಕಮಾನು ರಚಿತವಾಗಿದೆ. ಇದನ್ನೂ ನಗರದ ಪಕ್ಷಿನೋಟವೊಂದನ್ನೂ ಇಲ್ಲಿ ಕಾಣಿರಿ.



ಚಂದ್ರನತ್ತ ಹಾರುವ ಉಪಗ್ರಹ ನೆಗೆಯಲು ಕ್ರಾಲ್ ಟ್ರಾನ್ಸ್‌ಪೋರ್ಟರಿನ ಚಿತ್ರವಿದು (ಎದುರುಗಡೆ). ಇದರ ಭಾರವೇನು ಬಲ್ಲಿರಾ? ೩,೦೦೦ ಟನ್ನುಗಳು! ಹಿನ್ನೆಲೆಯಲ್ಲಿ ತೋರುವುದು ಭವ್ಯವಾದ ವೆರ್ಟಿಕಲ್ ಎಸೆಂಬ್ಲಿ ಭವನ. ಇಲ್ಲಿಯೇ ಅಮೆರಿಕೆಯ ಮಹಾ ಉಪಗ್ರಹ ಅಪೆಲ್ಲೋ ಜೋಡಿಸಲ್ಪಡುತ್ತಿದೆ.



ಟೆನೆಸ್ಸಿಯ ಪ್ರೌಢಶಾಲಾ ವಿದ್ಯಾರ್ಥಿ ರಿಚಾರ್ಡ್ ಜಾನ್ಸ 'ಜೀವದ ಮೂಲ'ದ ಕುರಿತಾದ ಸ್ಪರ್ಧಾತ್ಮಕ ಸಂಶೋಧನೆಯಲ್ಲೀ ವ್ಯವಹರಿಸಿದ್ದಾನೆ. ಈ ತಲ್ಲೀನತೆಯಿಂದಲೇ ತನ್ನ ಸಾಧನೆಯಲ್ಲಿ ಜಯಶೀಲನಾಗಿ ಬಹುಮಾನವನ್ನು ಗಳಿಸಿದ್ದಾನೆ.

ಯಾರಾದರೂ ಲಘುವಾಗಿ ಮಾತನಾಡಿದಲ್ಲಿ ರಾಷ್ಟ್ರಾಭಿಮಾನ ಉಳ್ಳವನ್ಯಾರೂ ಸಹಿಸಿಕೊಳ್ಳಲಾರನು ಅದರಲ್ಲೂ ಅಧಿಕಾರದಲ್ಲಿ ಇರುವವರಂತೂ ಸಹಿಸಿಕೊಳ್ಳುವದು ಆಶ್ಚರ್ಯದ ಸಂಗತಿಯೇ ಸರಿ! ಅಮೇರಿಕದಲ್ಲಿ ಅಬ್ರಹಾಂ ಲಿಂಕನ್, ರಷ್ಯಾದಲ್ಲಿ ಲೆನಿನ್ ಹೀಗೆ ಆಯಾ ಯಾ ದೇಶದ ಮುಖಂಡರ ಕುರಿತು ಹೀನಾಯವಾಗಿ ಮಾತನಾಡಿದಲ್ಲಿ ಆ ದೇಶದವರು ಸುಮ್ಮಗುಳಿದ್ದಾರೇ? ಆದರೂ ಭಾರತದಲ್ಲಿದು ಇಂದು ನಡೆಯುತ್ತಿದೆ.

ಅದಕ್ಕಿಂತಲೂ ತನ್ನ ಮುಖವನ್ನುಳಿಸಿಕೊಳ್ಳಲು ಸರಕಾರದ ಮುಖವಾಡವನ್ನು ಹಾಕಿಕೊಳ್ಳುವದು ಖಂಡನೀಯವೇ ಸರಿ; ಆದರಲ್ಲೂ ಸರಕಾರವನ್ನು ಅಸಹಾಯನೆಂದು ಒಪ್ಪಿಸಿ ಅದರ ಹಿಂದುಗಡೆ ಮುಖವುಳಿಸಿಕೊಳ್ಳಲು ಪ್ರಯತ್ನಿಸುವವರ ಹೀನಕಾರ್ಯವನ್ನು ಬಹಿರಂಗ ಪಡಿಸಲೇಬೇಕು. ಇಂತಹವರೆಂದೆಂದೂ ಅಹಂಕಾರದ ಲಗಾಮನ್ನು ಹಿಡಿದುಕೊಂಡಿರಬಾರದು. ಭಾರತ ಸರಕಾರ ಅಸಹಾಯಕ ಇರುವದಿಲ್ಲ. ಅದು ಒಳಗಿನ ದ್ರಾವಿಡ ಕಝಗಂ ಮುನ್ನೇತ್ರ ಕಝಗಂ, ಮುಸ್ಲಿಂ ಲೀಗ್, ಕಮ್ಯೂನಿಸ್ಟ್, ಅಕಾಲಿ, ಬಂಡುಗಾರನಾಗಾ—ಮಿಝೋ ಮುಂತಾದ ದುಃಶಕ್ತಿಗಳನ್ನೇ ನೆಲಸಮ ಮಾಡಲು ಶಕ್ತವಾಗಿದೆ. ಮಾತ್ರವಲ್ಲ, ಹೊರಗಿನ ಚೈನೀ—ಪಾಕಿಸ್ತಾನ ಇತ್ಯಾದಿ ಆಕ್ರಮಣಕಾರಿ ದುಃಶ್ಶಕ್ತಿಗಳನ್ನೆದುರಿಸಿ ಹಿಮ್ಮೆಟ್ಟಿಸಲೂ ಸರ್ವಶಕ್ತವಾಗಿದೆ. ಇಲ್ಲಿಯ ಅಭಿಮಾನೀ ರಾಷ್ಟ್ರೀಯ ಶಕ್ತಿ ಸುಮ್ಮಗಿಲ್ಲ. ಅದು ಅಂತಹ ಸಮರ್ಥ



ಮಕ್ಕಳ ಕಲ್ಯಾಣಕ್ಕಾಗಿ ದುಡಿಯುತ್ತಿರುವ ಯುನಿಸೆಫ್‌ಗೆ ೧೯೬೫ರ ನೊಬೆಲ್ ಬಹುಮಾನ ಸಿಕ್ಕಿತು. ಯುನಿಸೆಫ್ ರೋಗ ನಿಯಂತ್ರಣ, ಶಿಕ್ಷಣ, ಔದ್ಯೋಗಿಕ ಸಲಹೆ ಸೂಚನೆ ಆಪತ್ತುಗಳಿಂದ ಸಂರಕ್ಷಣೆ ಮೊದಲಾದ ಕಾರ್ಯಕ್ರಮಗಳಿಂದ ಮಕ್ಕಳ ಕಲ್ಯಾಣ ಸಾಧಿಸುತ್ತಿದೆ. ಚಿತ್ರದಲ್ಲಿ ದಕ್ಷಿಣ ಜಾರ್ಡನ ಯುನಿಸೆಫ್ ಶಾಲೆಯೊಂದರಲ್ಲಿ ಮಕ್ಕಳು ಹಾಲು ಮತ್ತು ಆಹಾರದ ಬಗ್ಗೆ ಅಧ್ಯಯನ ನಡೆಸುತ್ತಿರುವುದನ್ನು ನೋಡಬಹುದು.

ಕವಲು ದಾರಿ — ಕೆಂಪು ದೀಪ

ಮತದಾತನ ಕಿವಿಮಾತು

ಮುಂದಿನ ಫೆಬ್ರವರಿ—ಸಾರ್ವತ್ರಿಕ ಚುನಾವಣೆಯ ಗಡಿಬಿಡಿ—ಸಡಗರ.

ಇದೀಗ ಆರಂಭವಾಗಿದೆ—ಟೀಕೆ ಟಿಪ್ಪಣೆಗಳ ಸುರಿಮಳೆ, ನಾಮಪತ್ರ ಸಿಫಾರಸು ಪತ್ರಗಳ ಜಡಿಮಳೆ—

ಒಂದು ಪಕ್ಷ ಇನ್ನೊಂದು ಪಕ್ಷವನ್ನು ಹೀನಾಯವಾಗಿ ಖಂಡಿಸುವುದಕ್ಕೂ ಹೊರಟಿದೆ ತಮ್ಮ ಧ್ಯೇಯ— ನೀತಿಗಳನ್ನು ಕಸದ ಬುಟ್ಟಿಗೆಸೆದು ಚುನಾವಣೆಗಳಲ್ಲಿ ಗೆಲ್ಲುವುದನ್ನು ಮಾತ್ರ ತಮ್ಮ ಗುರಿಯನ್ನಾಗಿಸಿಕೊಂಡು ಅಲ್ಲಲ್ಲಿ ಸಂಯುಕ್ತ ರಂಗಗಳೂ ತಯಾರಾಗಿವೆ.

ತಪಸ್ವಿಗಳ ತೇಜೋ ಪ್ರಭಾವದಿಂದ ಹುಲಿ—ಆವುಗಳು— ಸರ್ಪ— ಗರುಡಗಳು; ಬೆಕ್ಕು—ಇಲಿಗಳು ಒಂದೆಡೆಯಲ್ಲೇ ಸೇರುತ್ತಿದ್ದವಂತೆ— ಇದು ಗ್ರಂಥಗಳ ಮಾತು.

ಇಂದು ರಾಜಕೀಯ ಮಹಾಪುರುಷರ ತೇಜೋ ಪ್ರಭಾವದಿಂದ ರಾಷ್ಟ್ರೀಯವಾದಿಗಳೂ ಪರರಾಷ್ಟ್ರವಾದಿಗಳೂ ಒಂದಾಗಿದ್ದಾರೆ, ಭೂಸ ಧಾರಣಾ ವಾದಿಗಳೂ ಅದರ ವಿರೋಧಿಗಳೂ ಒಂದಾಗಿದ್ದಾರೆ. ಪರಾಕ್ರಮಣವನ್ನು ಬೆಂಬಲಿಸುವವರೂ, ವಿರೋಧಿಸುವವರೂ ಮಿತ್ರರಾಗಿದ್ದಾರೆ. ..

ತಮ್ಮ ಭೇದಭಾವ ನಿವಾರಣೆಗೆ ಒಂದೇ ಉದ್ದೇಶ—ಅಧಿಕಾರದಲ್ಲಿರುವ ಕಾಂಗ್ರೆಸ್ಸನ್ನು ಸೋಲಿಸಬೇಕು—

ಅವರು ಕರೆನೀಡುತ್ತಾರೆ—ದೇಶದಲ್ಲಿ ಕಾಂಗ್ರೆಸ್ಸಿನ ಆಳಿಕೆ ಕೊನೆಗೊಳ್ಳಬೇಕು. ಇದೇ ದೇಶದ ಎಲ್ಲ ಸಮಸ್ಯೆಗಳಿಗೆ ಪರಿಹಾರ. ಚಳವಳಿ, ಕ್ರಾಂತಿಗಳಿಂದ ಸಮಸ್ಯೆ ಪರಿಹಾರವಾಗುವುದಿಲ್ಲ; ಮತದಾರರು ಸದಸದ್ವಿವೇಕದಿಂದ ಯೋಗ್ಯ ಪಕ್ಷ ಮತ್ತು ವ್ಯಕ್ತಿಗೆ ಮತವಿತ್ತರೆ, ಆಗ ಮಹತ್ತರ ಕ್ರಾಂತಿಯಾಗುವುದು.

ಅಲ್ಲವೆ? ನೂರಕ್ಕೆ ನೂರರಷ್ಟು ಸತ್ಯ.

ಇದನ್ನು ಗಮನಿಸಿಯೇ ಮತದಾರರು ಮತ ಚಲಾಯಿಸಿದ್ದಾರೆ. ಕಾಂಗ್ರೆಸ್ಸು ಬಹುಮತ—ಪ್ರಚಂಡ—ಪಡೆದಿದೆ. ಅವರ ದೃಷ್ಟಿಯಲ್ಲಿ ಕಾಂಗ್ರೆಸ್ ಪಕ್ಷ—ಕಾಂಗ್ರೆಸ್ ಹುರಿಯಾಳು ಯೋಗ್ಯವೆಂದು ಕಂಡಿತು.

ಇಂದಿಗ ಪರಿಸ್ಥಿತಿ ಹೇಗಿದೆ?

ಜನತೆಯ ಅಭಿಪ್ರಾಯವನ್ನು ಈಗಲೇ ಹೇಳುವುದು ಕಷ್ಟ ಸಾಧ್ಯ. ಆದರೂ ಜ್ಯೋತಿಷಿಗಳು ಹೇಳುತ್ತಾರೆ—ಕಾಂಗ್ರೆಸ್‌ಗೆ ಹಚ್ಚಿನ ರಾಜ್ಯಗಳಲ್ಲಿ ಪ್ರಚಂಡ ಜಯ, ಕೆಲವೆಡೆ ತೊಂದರೆಯಿಂದಲೇ ಯಶಸ್ಸು, ಉಳಿದೆಡೆ ಯಶಸ್ಸು ಕಿಂಚಿ

ಸರಕಾರದ ಶಕ್ತಿಪೂರ್ಣ ಬೆನ್ನೆಲುಬಿದೆ ಸರ್ವ ಶಕ್ತಿವಂತ ಭಗವಂತನೇ ನಮ್ಮ ಈ ರಾಷ್ಟ್ರಕ್ಕೆ ಉಳಿದ ವಿಶ್ವದಿಂದ ಜಯಿಸಲಾಗದಂತಹ ಶಕ್ತಿಯನ್ನೂ, ಸಮ್ಮತಿಯನ್ನೂ, ರಾಷ್ಟ್ರಾಭಿಮಾನವನ್ನೂ ದಯಪಾಲಿಸಲಿ. ಅಂದು ಅರ್ಜುನನಿಗೆ ಜ್ಞಾನೋದಯವನ್ನುಂಟುಮಾಡಿದ್ದ ಶ್ರೀ ಕೃಷ್ಣನೇ ಇಂದೂ ಆ ಪಾವನ ಕಾರ್ಯವನ್ನು ಮಾಡಲಾರೆಯಾ?

ಯದು..

ಇದನ್ನು ಯಾರೂ ಹೇಳಬಹುದು— ಆದರೆ ಜೋಯಿಸರು ಇನ್ನೂ ಒಂದು ಹೆಜ್ಜೆ ಮುಂದುವರಿದು ಹೇಳುತ್ತಾರೆ— ಕರ್ನಾಟಕದಲ್ಲಿ ಕಾಂಗ್ರೆಸ್ಸಿಗೆ ಪ್ರಚಂಡ ವಿಜಯ .

—ಇದರಲ್ಲೇನು ವಿಶೇಷವೆನ್ನುತ್ತೀರಾ?

—ಕಾಂಗ್ರೆಸ್ಸಿಗೆ ಬಿಟ್ಟರೆ ಮತ್ಯಾರಿಗೆ ನಾವು ಮತ ಹಾಕಬೇಕು ಅನ್ನುತ್ತೀರಾ?

—ನಿಮ್ಮ ಎರಡನೆ ಪ್ರಶ್ನೆಗೆ ಉತ್ತರ ಕೊಡುವ ತಾಕತ್ತು ಕಾಂಗ್ರೆಸ್ಸಿಗೊಂದಕ್ಕೇ ಇದೆ, ಉಳಿದ ಯಾವುದಕ್ಕೂ ಇಲ್ಲ

—ಹತ್ತು ಸಮಗಾರರು ಒಂದಾಗಿ ಮೋಚು ಹೊಲಿಯ ಕೂತರ ಗತಿಯೇನು? ಚರ್ಮದ ಹದ ಹೋಯಿತು—ಮೋಚಂತೂ ಇಲ್ಲವೇ ಇಲ್ಲ..

ರಾಜ್ಯದ ವಿಧಾನ ಸಭೆ—ಕೇಂದ್ರದ ಲೋಕಸಭೆಯ ಎಲ್ಲ ಸ್ಥಾನಗಳಿಗೂ ಹುರಿಯಾಳುಗಳನ್ನು ನಿಲ್ಲಿಸುವ ಶಕ್ತಿಹೊಂದದ ಅಸಮರ್ಥ ರಾಜಕೀಯ ಪಕ್ಷಗಳೇ ತುಂಬಿದ ಭಾರತಕ್ಕೆ ಮತ್ಯಾರೂ ಗತಿಯಿಲ್ಲ—ಅನ್ಯಥಾ ಶರಣಂನಾಸ್ತಿ—ಎಂತಲೇ, ಜನಕೆಲವೊಮ್ಮೆ ತ್ವಮೇವ ಶರಣಂ ಮಮ ಎಂದು ಬಸವನನ್ನೇ ನಮ್ಮ ಬೇಕಾತ್ತದೆ.

ಚುನಾವಣಾರಂಗದ ವ್ಯೆತ್ರಿ ಗೆಲ್ಲುವವರೆಗೆ—ಸೋತರೆ ಮುಗಿಯಿತು. ಗೆದ್ದರೆ?

ಮೈತ್ರಿಯ ಸೂತ್ರ ಕಡಿದ ಮೇಲೆ ಆ ರಾಜಕತೆ— ಇದರಿಂದ ಏನನ್ನು ಸಾಧಿಸಿದ ಹಾಗಾಯಿತು?

ಪರಸ್ಪರ ವಿರುದ್ಧ ನೀತಿಯನ್ನು ತಳೆದಿರುವ ಪಕ್ಷಗಳು ಏಕ ನೀತಿಯಿಂದ ಆಡಳಿತೆ ನಡೆಸುವುದು ಸಾಧ್ಯವೆ?

ಆಗ ಎಂದೂ ಇಲ್ಲದ ಹೊಸ ಸಮಸ್ಯೆ ಉದ್ಭವಿಸುವುದು. ಹಿಂದಿನ ಸಮಸ್ಯೆಗಳನ್ನು ಮೆಟ್ಟಿ ನಿಲ್ಲುವುದು—

ಈ ಹೊಸ ಸಮಸ್ಯೆ ಪರಿಹಾರವಾಗಲು ಮತ್ತೆ ಕಾಂಗ್ರೆಸ್ ಬರಬೇಕಾದೀತು

—ಇಂದು ನಮ್ಮ ವಿರೋಧೀ ಪಕ್ಷಗಳು ಗಮನಿಸಬೇಕಾದ ಅಂಶವೆರಡು.—

—ಅಧಿಕಾರದಿಂದ ಕಾಂಗ್ರೆಸ್ಸನ್ನು ಕೆಳುವ ಮಹತ್ವಾಕಾಂಕ್ಷೆಯನ್ನು ಇಡಬಾರದು—ಏಕೆಂದರೆ, ಮಹತ್ವಾಕಾಂಕ್ಷೆ ಹಿಟ್ಲರನ ಈ ಮಹತ್ವಾಕಾಂಕ್ಷೆಗಿಂತ ಕಡಿಮೆಯದಲ್ಲ— ಹಾಸ್ಯಾಸ್ಪದವಾದುದಲ್ಲ.

—ಸದ್ಯ ತಮ್ಮ ತಮ್ಮ ಪಕ್ಷಗಳನ್ನು ಬಲಗೊಳಿಸುವಲ್ಲಿ ಅತ್ಯಧಿಕ ಸ್ಥಾನಗಳಿಗ ಅಭ್ಯರ್ಥಿಗಳನ್ನು ನಿಲ್ಲಿಸುವಲ್ಲಿ, ನಾಗರಿಕರಲ್ಲಿ ಜಾಗೃತಿ ಉಂಟುಮಾಡುವಲ್ಲಿ ಕಾರ್ಯಪ್ರವೃತ್ತವಾಗಬೇಕು — ಏರುವಾನೆಯ ಬೆನ್ನಿಗೆ ಬೀಳುವಳುಕೂ ಇರುವುದಿಲ್ಲ.

—ತನ್ನ ಧ್ಯೇಯವನ್ನು ಸಾಧಿಸಿ ಹೊರಡಬೇಕು.—ಹೀಗಾದಲ್ಲಿ ಇನ್ನೂ ಕೆಲವು ಚುನಾವಣೆಗಳು ನಡೆಯುವಷ್ಟರಲ್ಲಾದರೂ ಒಂದು ಪ್ರಬಲ ವಿರೋಧಿ ಪಕ್ಷ ನಿರ್ಮಾಣವಾದೀತು —ಆಗ ಕಾಂಗ್ರೆಸ್ಸನ್ನು ಅಧಿಕಾರದಿಂದ ಉರುಳಿಸಲು ಒಂದಾದರೂ ಪಕ್ಷ ಶಕ್ತವಾದೀತು.

(ಹದಿನಾರನೇ ಪುಟ ನೋಡಿರಿ)

ವಿಜ್ಞಾನ ಪ್ರಪಂಚ

ನಭೋಯಾತ್ರೆಯಿಂದ ಮಾನವ ಸೇವೆ

ನಭೋಯಾತ್ರೆಯು ಮಾನವನ ಇಂದಿನ ಕೆಲವು ನಿರ್ದಿಷ್ಟ ಆವಶ್ಯಕತೆಗಳನ್ನು ಒದಗಿಸುವುದಕ್ಕೆ ವಿಶೇಷ ಉಪಯೋಗಿಯಾಗಿದೆ. ಆಕಾಶ ಸಂಶೋಧನೆಯ ವಿಕಾಸದೊಂದಿಗೆ ನೌಕಾಯಾನ, ಸಂಪರ್ಕಗಳ ಭೂಕ್ಷೇತ್ರ ರೇಖಾ ಶಾಸ್ತ್ರ ಮತ್ತು ವಾತಾವರಣ ಶಾಸ್ತ್ರಗಳಲ್ಲಿ ಅಪಾರ ವಿಜಯವನ್ನು ಸಾಧಿಸುವುದೂ ಸಾಧ್ಯವಾಗಿದೆ.

ನೌಕಾಯಾನೋಪಗ್ರಹಗಳನ್ನು ನೌಕೆಗಳ ಮತ್ತು ವಾಯು ವಿಮಾನಗಳ ಯಾನ ವ್ಯವಸ್ಥೆಗೆ ತನಿಖೆಯ ಬಿಂದುಗಳಾಗಿ ಬಳಸಲಾಗುತ್ತದೆ. ನೌಕಾಯಾನೋಪಗ್ರಹಗಳ ಕಕ್ಷೆಯ ಮೂಲಾಂಶಗಳನ್ನು ನಿರಂತರವೂ ನಿರೂಪಿಸಲಾಗುತ್ತದೆಯಾದ ಕಾರಣ, ಅವುಗಳ ಸಹಾಯದಿಂದ ಸುಮಾರು ೨೦೦ ಮೀಟರುಗಳಷ್ಟು ನಿಷ್ಕೃತಿಯಿಂದ ಸಮಾನ ಸ್ಥಾನಗಳನ್ನು ನಿರ್ಣಯಿಸಬಹುದು.

ಪ್ರೇಷಿತ ಸಮಾಚಾರ ವಿಸ್ತಾರದ ಅವಶ್ಯಕತೆಯು ಆಧುನಿಕ ದೀರ್ಘ, ಅತಿದೀರ್ಘ ದೂರದ 'ರೇಡಿಯೋ" ಸಂಪರ್ಕ ವಿಧಾನಗಳ ಅತ್ಯಂತ ಮುಖ್ಯ ಸಮಸ್ಯೆಗಳಲ್ಲೊಂದಾಗಿದೆ. ಸಂಪರ್ಕೋದ್ದೇಶದ ಮಾನವ—ನಿರ್ಮಿತ ಭೂ—ಉಪಗ್ರಹಗಳ (ಅವುಗಳಲ್ಲಿ ಯುರೋಪು ಮತ್ತು ದೂರ ಪ್ರಾಚ್ಯ ಖಂಡಗಳ ಮಧ್ಯೆ ಸಂಬಂಧ ಕಲ್ಪಿಸಿದ, ಫ್ರಾನ್ಸ್ ಮತ್ತು ಸೋವಿಯೆತ್ ದೇಶಗಳ ಮಧ್ಯೆ ದೂರ ದರ್ಶನವನ್ನು (ಟೆಲಿವಿಜನ್) ಸಾಧ್ಯಗೊಳಿಸಿದ "ಮೊಲ್ನಿಯ—೧" ಉಪಗ್ರಹ ಪ್ರಯೋಗಗಳೂ ಸೇರಿವೆ) — ಮತ್ತು ಅಮೆರಿಕನ್ ಸಂಪರ್ಕಗಳ ಬಳಕೆಯು, ಅತ್ಯಂತ ಸಮೀಪ ಭವಿಷ್ಯತ್ತಿನಲ್ಲಿ ಖಂಡಾಂತರದ ಮತ್ತು ಜಗತ್—ವ್ಯಾಪೀ ವಿಶಾಲ ತರಂಗ ಪಟ್ಟಿಯ ಬಾನುಲಿ ಸಂಪರ್ಕಗಳ ಸಮಸ್ಯೆಯನ್ನು ಉಪಗ್ರಹಾಧಾರದ ಸಂಪರ್ಕ ವ್ಯವಸ್ಥೆಯ ಸ್ಥಾಪನೆಯ ಮೂಲಕ ಬಗೆಹರಿಸಲಾಗುವುದೆಂಬ ಅಂಶವನ್ನು ಸತ್ಯವಾಗಿಸಿವೆ. ಅವು ದೂರದರ್ಶನ ಕಾರ್ಯಕ್ರಮಗಳನ್ನೂ, ದೂರವಾಣಿ ಕರೆಗಳನ್ನೂ, ತಂತಿ ಸಮಾಚಾರಗಳನ್ನೂ, ಇನ್ನಿತರ ವಿಷಯಗಳನ್ನೂ ಪ್ರಸಾರಗೊಳಿಸುವುವು. ಉಪಗ್ರಹಾಧರಿತ ಸಂಪರ್ಕ ವ್ಯವಸ್ಥೆಯು ಈಗ ಅಸ್ತಿತ್ವದಲ್ಲಿರುವ ವ್ಯವಸ್ಥೆಗಳಿಗೆ ಪೂರಕವಾಗಿರುವುದು. ಸುಗಮ ಪ್ರವೇಶಕ್ಕೆ ಸಾಧ್ಯವಲ್ಲದ ಭೂಮಿಯ ಕ್ಷೇತ್ರಗಳಲ್ಲೂ ಜಾಗತಿಕ ಸಾಗರ ಕ್ಷೇತ್ರಗಳಲ್ಲೂ ಕಾರ್ಯತಃ ಬಳಸಲಾಗದ ಬಾನುಲಿಯ ಮರುಪ್ರಸಾರ ಮಾರ್ಗಗಳಿಗೆ ಬದಲಾಗಿ ಈ ವ್ಯವಸ್ಥೆಯನ್ನು ಉಪಯೋಗಿಸಬಹುದು.

ಮನೆಗಳಲ್ಲಿ ಬಳಸಲಾಗುವ ಬಾನುಲಿ ಮತ್ತು ದೂರದರ್ಶನ ಯಂತ್ರಗಳ ಸಂಪರ್ಕೋಪಗ್ರಹಗಳ ಪ್ರಸಾರವನ್ನು ನೇರವಾಗಿ ಪಡೆಯುವುದು ಸಾಧ್ಯವೆಂಬುದು ವಿಶಿಷ್ಟತಃ ಸ್ವಾರಸ್ಯಕರವಾದ ವಿಷಯ. ಬ್ರೆಜಿಲ್ಲಿನಲ್ಲಿ ನಡೆಯುತ್ತಿರುವ ಫುಟ್‌ಬಾಲ್ ಪಂದ್ಯವನ್ನು ಮಾಸ್ಕೊ ನಿವಾಸಿಗಳು ತಮ್ಮ ದೂರದರ್ಶನ ಯಂತ್ರಗಳ ತೆರೆಗಳ ಮೇಲೆ ಕಾಣುವ ಸಮಯವಿನ್ನು ದೂರವಿಲ್ಲ. ಅಮೆರಿಕನ್ನರು ಮಾಸ್ಕೋದ ಬಲ್ಷೋಯ್ ನಾಟಕಶಾಲೆಯದ ಕಾರ್ಯಕ್ರಮ ಪ್ರಸಾರಗಳನ್ನು ತಮ್ಮ ದೂರದರ್ಶನ ಯಂತ್ರಗಳಲ್ಲಿ ಪರೀಕ್ಷಿಸಬಹುದು.

ಹವಾಮಾನದ ಮುನ್ಸೂಚನೆ

ಮಾನವ ನಿರ್ಮಿತ ಉಪಗ್ರಹಗಳು ಭೂಮಿಯ ಆಕಾರವನ್ನೂ, ಪರಿಮಾಣಗಳನ್ನೂ ಹಾಗೂ ನಮ್ಮ ಗ್ರಹದ ವಿಭಿನ್ನ ಸ್ಥಳಗಳ ಸ್ಥಾನ ನಿರ್ದೇಶಕಾಂಶಗಳನ್ನೂ ನಿರೂಪಿಸುವುದಕ್ಕೆ ಅತ್ಯಂತ ಸಹಾಯಕವಾಗುತ್ತವೆ. ಅವುಗಳನ್ನು ಭೂಕ್ಷೇತ್ರ ರೇಖಾಶಾಸ್ತ್ರೀಯ ಉಪಗ್ರಹಗಳೆಂದು ಕರೆಯಲಾಗುತ್ತದೆ. ಉಪಗ್ರಹಗಳ ಮತ್ತು ಅಂತರಿಕ್ಷಾನ್ವೇಷಕಗಳ ಕಕ್ಷೆಗಳ ಮೇಲೆ ಗುರುತ್ವಾಕರ್ಷಣ ಶಕ್ತಿಯ ಪರಿಣಾಮವನ್ನು ಪರಿಶೀಲಿಸುವುದಕ್ಕ ಅವು ಅವಕಾಶ ಮಾಡಿಕೊಡುತ್ತವೆ. ಅತ್ಯಂತ ಸಮರ್ಪಕವಾದ ಭೂಪಟಗಳನ್ನು ತಯಾರಿಸುವುದಕ್ಕೂ ಅವುಗಳನ್ನು ಬಳಸಬಹುದು.

ಕರಾರುವಾಕ್ಕಾದ ಹವಾಗುಣದ ಮುನ್ಸೂಚನೆಯಿಂದ ಸುಗ್ಗಿಗಳಿಗೆ ಬಹುಮಟ್ಟಿಗೆ ಸಹಾಯವಾಗುತ್ತದೆ. ಈಗ ಕ್ರಮಶಃ ಕಾರ್ಯನಿರತವಾಗಿರುವ ವಾತಾವರಣ ಸಮೀಕ್ಷಾ ಕೇಂದ್ರಗಳ ಕಾರ್ಯಕ್ಷೇತ್ರವು ಪೃಥ್ವಿಯ ಮೇಲ್ಮೈಯಲ್ಲಿ ಸೇಕಡಾ ೨೦ರಷ್ಟು ಸ್ಥಳಕ್ಕೆ ಮಾತ್ರವೇ ಸೀಮಿತವಾಗಿದೆ. ಧ್ರುವಪ್ರದೇಶಗಳಲ್ಲೂ, ಜಾಗತಿಕ ಸಮುದ್ರಗಳಲ್ಲೂ ಅವು ಇಲ್ಲ. ಈ ಕ್ಷೇತ್ರಗಳು ಹವಾಮಾನದ ಮೇಲೆ ನಿರ್ಣಾಯಕ ಪ್ರಭಾವವನ್ನು ಬೀರುತ್ತವೆಯೆಂಬುದು ಸುವಿದಿತವೇ. ವಾತಾವರಣ ಶಾಸ್ತ್ರೀಯ ಸಮೀಕ್ಷೆಗಳಿಗೆ ಕೃತಕ ಭೂ-ಉಪಗ್ರಹಗಳನ್ನು ಬಳಸುವುದರಿಂದ ಭೂಗೋಳ ಪ್ರಮಾಣದಲ್ಲಿ ಶಾಶ್ವತ ಸಮೀಕ್ಷೆ ಕಾರ್ಯಗಳನ್ನು ನೆಲೆಗೊಳಿಸುವ ಸಮಸ್ಯೆಯನ್ನು ಹೊಸ ರೀತಿಯಲ್ಲಿ ಬಗೆಹರಿಸಲಾಗುವುದು.

ಚಂಡಮಾರುತಗಳ ಕುರಿತು ಮುನ್ನೆಚ್ಚರಿಕೆಯನ್ನು ಭೂಮಿಯ ಕೆಲವು ಕ್ಷೇತ್ರಗಳಿಗೆ ನೀಡಲೇಬೇಕಾದ ಅವಶ್ಯಕತೆಯಿದೆ. ಅಮೆರಿಕದ ಪ್ರಥಮ 'ಟೈರೋಸ್' ವಾತಾವರಣ ಶಾಸ್ತ್ರೀಯ ಉಪಗ್ರಹಗಳು 'ತುಫಾನು' ಮುನ್ನೆಚ್ಚರಿಕೆಯ ಸೇವೆಯನ್ನು ಸುಧಾರಿಸಲು ತುಂಬ ಸಹಾಯಕವಾಗಿವೆ.. ಅಮೆರಿಕದ ವಾತಾವರಣ ಶಾಸ್ತ್ರೀಯ ಉಪಗ್ರಹಗಳ ವಿಸ್ತೃತ ಉಪಯೋಗವನ್ನು ಆಸ್ಟ್ರೇಲಿಯ ಮತ್ತು ಜಪಾನ್ ದೇಶಗಳು ಮಾಡಿಕೊಳ್ಳುತ್ತಿವೆ.

ಏಕೀಕೃತ ಜಾಗತಿಕ ಸೇವೆ

ಏಕೀಕೃತ ಜಾಗತಿಕ ವಾತಾವರಣಸೇವೆಯ ನಿರ್ಮಾಣ ಕಾರ್ಯವನ್ನು ಕೈಗೊಳ್ಳಲಾಗಿದೆ. ತತ್ಪರಿಣಾಮವಾಗಿ, ಹವಾಗುಣದ ಮೇಲೆ ಪರಿಣಾಮವನ್ನು ಬೀರುವ ಪ್ರಕ್ರಿಯೆಗಳನ್ನು ಉಪಗ್ರಹಗಳ ಸಹಾಯದಿಂದ ಪರಿಶೀಲಿಸಿ, ಹವಾಗುಣ ಚೆನ್ನಾಗಿರದ ಪ್ರದೇಶಗಳಲ್ಲಿಬೇಕಾದ ಹವೆಯನ್ನು ರೂಪಿಸುವುದಕ್ಕೆ ಸಕ್ರಿಯ ಸೇವೆ ಸಲ್ಲಿಸಲು ಸಾಧ್ಯವಾಗುವುದು.

ಸರಕುಗಳನ್ನೂ, ಪ್ರಯಾಣಿಕರನ್ನೂ ಸುದೂರ ಪ್ರದೇಶಗಳಿಗೆ ವೇಗವಾಗಿ ಸಾಗಿಸಬೇಕು. ವಾಯುಯಾನ ವ್ಯವಸ್ಥೆಯು ತಥಾಕಥಿತ ಶಾಖಪ್ರತಿಬಂಧವನ್ನು ದಾಟುವ ಸಮಸ್ಯೆಯನ್ನು ಎದುರಿಸುತ್ತದೆ. ವಾತಾವರಣದೊಡನೆಯ ತಿಕ್ಕಾಟದಿಂದ ವಾಯುಯಾನವು ಬಿಸಿಯಾಗುತ್ತದೆ. ಕಕ್ಷೆಯ ಉಡ್ಡಯನಗಳನ್ನು ಕೈಗೊಳ್ಳುವುದರಿಂದ ಮಾತ್ರವೇ ಪ್ರಯಾಣದ ವೇಗಗಳನ್ನು ತೀವ್ರವಾಗಿ (ಗಂಟೆಗೆ 20,000-28,000 ಕಿಲೋಮೀಟರುಗಳ ವರೆಗೆ) ಹೆಚ್ಚಿಸುವುದು ಸಾಧ್ಯ. ಸಮೀಪ ಭವಿಷ್ಯತ್ತಿನಲ್ಲಿ ಪ್ರಾಯಶಃ ಬೇರೆ ಬೇರೆ ಸಾಗಾಣಿಕೆಗಳಿಗೆ 'ರಾಕೆಟ್' ವಿಮಾನಗಳನ್ನೂ, 'ಕಾಸ್ಮೊ'—ವಿಮಾನಗಳನ್ನೂ ವ್ಯಾಪಕ ರೂಪದಲ್ಲಿ ಬಳಸುವುದನ್ನು ಕಾಣಬಹುದು.

ಅಂತರಿಕ್ಷ ಯಾತ್ರೆಯ ಯಂತ್ರ ಶಿಲ್ಪ ವಿಕಾಸವು ಅತಿ ಸೂಕ್ಷ್ಮವಾದ, ಹೊರೆಕ್ತದ ರೇಡಿಯೋ—ಎಲೆಕ್ಟ್ರಾನಿಕ್ ಉಪಕರಣಗಳ ಮತ್ತು ಸಂಯುಕ್ತ ಆವರ್ತಗಳ, ಸ್ವಾಭಾವಿಕ ಕ್ರಿಯೆಗಳ ಸಾಧನಗಳ ತಯಾರಿಕೆಯಲ್ಲಿಯೂ ಮುಖ್ಯ ಸಫಲತೆಗಳಿಗೆ ಒತ್ತಾಸೆಯನ್ನು ನೀಡಿದೆ. ಕೈಗಾರಿಕೆಯಲ್ಲಿಯೂ ಮತ್ತು ಮನೆಗಳಲ್ಲಿಯೂ (ಟ್ರಾನ್‌ಸಿಸ್ಟರ್ ರೇಡಿಯೋ, ರೆಕಾರ್ಡ್ ಪ್ಲೇಯರ್, ಟೆಲಿವಿಜನ್ ಸೆಟ್, ಗಣಕ ಯಂತ್ರ, ಇತ್ಯಾದಿ) ಅವುಗಳನ್ನು ಬಳಸಬಹುದು. ಅತ್ಯಂತ ನಿರೋಧಕ ಶಕ್ತಿಯ ಹಗುರವಾದ ಮತ್ತು ಬಾಹ್ಯ ಪರಿಣಾಮ ನಿರೋಧಕವಾದ ಯಾನ ರಚನಾ ವಸ್ತುಗಳನ್ನು ವಿಕಾಸಗೊಳಿಸಲಾಗುತ್ತಿದೆ. ದೂರದ, ಅತಿ ದೂರದ ಸಂಪರ್ಕ ಸೌಕರ್ಯಗಳನ್ನು ಪರಿಪೂರ್ಣಗೊಳಿಸಲಾಗುತ್ತಿದೆ. ನೂತನ ಶಕ್ತಿ ಮೂಲಾಧಾರಗಳನ್ನು—ಇಂಧನದ ರಾಸಾಯನಿಕ ಶಕ್ತಿಯನ್ನು ನೇರವಾಗಿ ವಿದ್ಯುಚ್ಛಕ್ತಿಯಾಗಿ ಪರಿವರ್ತಿಸುವ ಇಂಧನ ಮೂಲಾಂಶಗಳನ್ನು—ವಿಕಾಸಗೊಳಿಸಲಾಗುತ್ತಿದೆ.

ಅಂತರಿಕ್ಷ ಸಂಶೋಧನೆಯು ಅಂತಾರಾಷ್ಟ್ರೀಯ ಸಹಕಾರ ವಿಕಾಸಕ್ಕೂ ರಾಷ್ಟ್ರಗಳ, ರಾಜ್ಯಗಳ ಪರಸ್ಪರ ಸೌಮನಸ್ಯಕ್ಕೂ, ಬೇರೆ ಬೇರೆ ದೇಶಗಳ ಜನತೆಯ ಹಿತಗಳ ಸಲುವಾಗಿ ಸಂಪರ್ಕ ವಿಸ್ತಾರಕ್ಕೂ, ಮರು-ಮೈತ್ರಿಗೂ ಒತ್ತಾಸೆಯನ್ನು ನೀಡುತ್ತದೆ.

ನಭೋಯಾತ್ರಾ ವಿಜ್ಞಾನವು ವಿಕಾಸಗೊಂಡಂತೆ ಅದರ ಉಪಯೋಗಗಳೂ ಕೂಡ ಬೆಳೆಯುವುವು. ಇದು ಅಂತರಿಕ್ಷ ಸಂಶೋಧನೆಯ ಅಧಿಕ ತ್ವರಿತ ವಿಕಾಸಕ್ಕೆ ಸಹಾಯಕವಾಗುತ್ತದೆ ಕೂಡ.

ಬೇಕಾಗಿದ್ದಾರೆ

ಪ್ರೆಸ್ ಕೆಲಸಗಾರರೂ, ತರಬೇತಿಗಾಗಿ 8ನೇ ತರಗತಿ ಯಾ ಹೆಚ್ಚಿಗೆ ಓದಿದ ಹುಡುಗರೂ ಬೇಕಾಗಿದ್ದಾರೆ.

ಹೆಚ್ಚಿನ ವಿವರಕ್ಕೆ ವಿಚಾರಿಸಿರಿ

ನವಯುಗ ಪ್ರೆಸ್, ಉಡುಪಿ.

ಹೈಸ್ಕೂಲುಗಳಿಗೆ

ನವಯುಗ

ರಾಜ್ಯದ ಡಿ. ಪಿ. ಐ. ಯವರು ನವಯುಗ ವಾರಪತ್ರಿಕೆಯನ್ನು ರಾಜ್ಯದ ಹೈಸ್ಕೂಲು ಮತ್ತು ಸಾರ್ವಜನಿಕ ವಾಚನ ಭಂಡಾರಗಳಿಗೆ ತಮ್ಮ ನಂ. ಸಿ. ಎಲ್. 4. 17–4/65–66ರ ಪತ್ರದಂತೆ ಸಿಫಾರಸು ಮಾಡಿದ್ದಾರೆಂದು ತಿಳಿಸಲು ಸಂತೋಷಪಡುತ್ತೇವೆ. ಈ ವರೆಗೆ ಚಂದಾದಾರರಾಗಿಂದ ಎಲ್ಲಾ ಹೈಸ್ಕೂಲಿನವರೂ ನವಯುಗವನ್ನು ತರಿಸಿಕೊಂಡು ಪ್ರೋತ್ಸಾಹಿಸುವಂತೆ ವಿನಂತಿಸುತ್ತೇವೆ.

ವಾರ್ಷಿಕ ಚಂದಾ ರೂ. 10/- ಮಾತ್ರ.

ಮೆನೇಜರ್, ನವಯುಗ, ಉಡುಪಿ

'ನಾಡಪ್ರೇಮಿ'

ಕನ್ನಡ ವಾರ ಪತ್ರಿಕೆ. ಬೆಲೆ-10 ಪೈಸೆ

ವಾರ್ಷಿಕ ಚಂದಾ—ರೂ. 5—50.

ಕಾಸರಗೋಡು, ಕೇರಳ.

ಕಾಸರಗೋಡಿನ ಎರಡೂವರೆ ಲಕ್ಷ ಕನ್ನಡಿಗರು ಕೇರಳದಲ್ಲಿದ್ದು ಪಡುತ್ತಿರುವ ಕಷ್ಟ ಕಾರ್ಪಣ್ಯಗಳನ್ನು ಎಲ್ಲಾ ಕನ್ನಡಿಗರಿಗೆ ತಿಳಿಸಲು ಹಾಗೂ ಕಾಸರಗೋಡು ಕರ್ನಾಟಕದೊಂದಿಗೆ ಸೇರುವ ಒಂದೇ ಉದ್ದೇಶದಿಂದ ಎರಡೂವರೆ ವರ್ಷಗಳಿಂದ ಚಳವಳ ನಡೆಸುತ್ತಿರುವ, ಕೇರಳದ ಏಕೈಕ ಕನ್ನಡ ವಾರಪತ್ರಿಕೆ—'ನಾಡಪ್ರೇಮಿ"ಯನ್ನು ಓದಿರಿ, ಚಂದಾದಾರರಾಗಿ, ಲೇಖಕರಾಗಿ, ಜಾಹೀರಾತುದಾರರಾಗಿ ಸಹಕರಿಸಿರಿ.

ಅಲ್ಲದೆ ನವೆಂಬರ 1ನೇ ತಾರೀಕಿಗೆ "ನಾಡಪ್ರೇಮಿ"ಯ ಮೂರನೇ ಹುಟ್ಟು ಹಬ್ಬದ ಸಲುವಾಗಿ ಒಂದು ವಿಶೇಷಾಂಕವನ್ನು ಪ್ರಕಟಿಸಬೇಕೆಂದು ನಿರ್ಧರಿಸಿದ್ದೇವೆ. ಅದಕ್ಕೂ ತಮ್ಮೆಲ್ಲರ ಸಹಕಾರವನ್ನು ಕೋರುತ್ತೇವೆ.

ಸಂಪಾದಕ.

"ನಾಡಪ್ರೇಮಿ"

ಕಾಸರಗೋಡು.

ಶ್ರೀ ಕೆ. ಕೆ. ಶೆಟ್ಟಿ, ಎಂ. ಎಲ್. ಸಿ. ಯವರ

ನವಕಾಲಕ್ಕೊಪ್ಪುವ ಪುಸ್ತಕಗಳು

ದೇಶ ಭಕ್ತ	1=25
ಪ್ರೇಮ ವಿಜಯ	1=00
ಮುಂದಿನ ದೇವರು	0=25
ವ್ಯಭಿಚಾರಿಣಿ ಯಾರು?	1=00
ಹೆಂಡ್ತಿ ಗಂಡನಾದಳೆ?	0=25
ಪುರುಷವಧು	0=25
ಸನ್ಯಾಸಿಯ ಸೋಗಿನಲ್ಲಿ!	0=75
ಸಂಶಯ ಪಿಶಾಚಿ	0=75
ಕುಶಲವ	0=50
ಚಿತ್ರಾಂಗದೆ	0=60

ಪ್ರತಿಗಳು ಸಿಗುವ ಸ್ಥಳಗಳು:—

ನವಯುಗ ಪ್ರೆಸ್, ಉಡುಪಿ.

ನವಭಾರತ ಬುಕ್ ಡಿಪೊ, ಉಡುಪಿ.

ಕೃಷಿಕ ಪ್ರಪಂಚ

ಹೊಸ ರೀತಿಯಲ್ಲಿ ನೇಜಿ ನೆಡುವುದು

— ಶ್ರೀ ನಯಂಪಳ್ಳಿ ರಾಮರಾವ್

ಉತ್ತಮ ನೇಜಿಯನ್ನು ಮಾಡಿದ ಮೇಲೆ ಕೃಷಿಕನು ಉತ್ತಮ ರೀತಿಯಲ್ಲಿ ನಾಟಿಮಾಡಬೇಕು. ಈ ಲೇಖನದಲ್ಲಿ ಸುಲಭ ರೀತಿಯ ನಾಟಿ ಕ್ರಮವನ್ನು ಹೇಳುತ್ತೇನೆ. 1953ರಲ್ಲಿ ಮೊತ್ತಮೊದಲು ಹೊಸ ರೀತಿಯ ನಾಟಿಯನ್ನು ಮಾಡುವಾಗ ಎರಡೂ ಕಡೆಯಿಂದ ಒಳ ಉಳುಮೆ ಮಾಡಬೇಕೆಂದು ಹೇಳಿದರು. ಆದ್ದರಿಂದ ನೇಜಿ ನೆಡುವಾಗ ಒಂದು ಗುರುತು ಮಾಡಿದ ಹಗ್ಗವಾಗಲೀ ಕರಪಣಿಯಾಗಲಿ ಬೇಕು. ಗದ್ದೆಯು ಆಯತಾಕಾರವಾಗಿರದಿದ್ದರೆ, ಆಯತಾಕಾರದಲ್ಲಿ ಕೋನಗಳೆಲ್ಲ ಸರಿಯಾಗಿರುವಂತೆ ಗುರುತು ಮಾಡಿಕೊಳ್ಳಬೇಕು. ಇದು ಕಷ್ಟ ಕೆಲಸವೇನೂ ಅಲ್ಲ. ನನಗೀಗ ಆಗಿರುವ ಅನುಭವದಿಂದ ಅದೆಲ್ಲ ಸುಲಭವಾಗಿದೆ. ಎರಡು ಸಲ ಒಳ ಉಳುಮೆ ಮಾಡುವ ಆಗತ್ಯವಿಲ್ಲ. ಒಂದೇ ಒಂದು ಹಗ್ಗವಿದ್ದರೆ ಸಾಕು.

ಮೊತ್ತಮೊದಲು 20 ಯಾ 25 ಮಾರಿನ ಇಲ್ಲವೆ 80 ಯಾ 100 ಅಡಿಗಳ ಒಂದು ಚೇರಿ ಹಗ್ಗವನ್ನು ಕೊಂಡುಕೊಳ್ಳಿರಿ. ಅದಕ್ಕೆ ಸುಮಾರು ಆರೇಳು ರೂಪಾಯಿ ಬೇಕಾದೀತು. ಅದನ್ನು ಉಪಯೋಗಿಸಿದ ಮೇಲೆ ತೊಳೆದು ಒಣಗಿಸಿ ಇಟ್ಟುಕೊಳ್ಳಿ. ಹಾಗೆ ಮಾಡಿದರೆ ಬಹಳ ಕಾಲ ಉಪಯೋಗಕ್ಕೆ ಬಂದೀತು.

ಇಂದು ಹಳ್ಳಿಗಳಲ್ಲಿ ಕೆಲಸಕ್ಕೆ ಜನಸಿಗುವುದಿಲ್ಲವೆಂಬ ದೂರು ಇದೆ. ಆದರೂ ನಾಟಿಗೆ 8 ಜನ, ಹಗ್ಗ ಹಿಡಿಯಲು 2 ಜನ ಹೀಗೆ 10 ಜನವಿದ್ದರೆ ಸಾಕು. ಹೆಚ್ಚು ಜನರಾದಂತೆ ಹೆಚ್ಚು ಸಮಯವು ಹಾಳಾಗುವುದು. 20 ಜನರಿದ್ದಾಗ ಒಬ್ಬನು ಸ್ವಲ್ಪ ಹಿಂದೆ ಬಿದ್ದರೆ, 19 ಜನರೂ ವಿಳಂಬ ಮಾಡಬೇಕಾಗುತ್ತದೆ. ಹೀಗೆ ಸಮಯ ಹಾಳಾಗುತ್ತದೆ. ಎಂಟೇ ಜನರಿದ್ದರೆ ಹಾಗಲ್ಲ. ಒಬ್ಬರು ಹಿಂದೆ ಬಿದ್ದರೆ, ಹಿಂದೆ ಬಿದ್ದವರು ಇತರರೊಂದಿಗೇ ಸೇರಬೇಕೆಂದು, ತಮ್ಮನ್ನು ತಿದ್ದಿಕೊಳ್ಳುತ್ತಾರೆ

ನೇಜಿಯನ್ನು 9 ಇಂಚುಗಳಷ್ಟು ದೂರದಲ್ಲಿ ನೆಡಬೇಕೆಂದು ನೀವು ನಿರ್ಣಯ ಮಾಡಿದರೆ, 9 ಇಂಚುಗಳ ಎರಡು ಸಲಿಕೆಯನ್ನು ಮಾಡಿ, ಹಗ್ಗ ಹಿಡಿಯುವ ಇಬ್ಬರ ಕೈಯಲ್ಲಿ ಕೊಡಿ. ಮೊತ್ತ ಮೊದಲು ಗದ್ದೆಯ ಬದಿಯಲ್ಲಿ ಹಗ್ಗವನ್ನು ತಲೆಯಿಂದ ತಲೆಗೆ ನೆಟ್ಟಗೆ ಹಿಡಿಯಿರಿ. ಆ ಮೇಲೆ ಹಗ್ಗದ ಬದಿಯಲ್ಲೇ ನೇಜಿ ಹಾಕುತ್ತಾ ಹೋಗಿ. ಇದರಿಂದ ನೇಜಿನೆಡುವವರು 10ರಿಂದ 16 ಸಲ ನೆಡುವುದಕ್ಕೆ ಹೆಚ್ಚು ಸಮಯ ತೆಗೆದುಕೊಳ್ಳುವುದಿಲ್ಲ. ಹಗ್ಗದಲ್ಲಿ ಗುರುತು ಮಾಡದಿದ್ದರೆ, ಅವರು 8 ಯಾ 9 ಇಂಚುಗಳ ದೂರದಲ್ಲಿ ನೆಡಬೇಕೆಂದು ತಿಳಿಸಬೇಕು. ನಾವು ಕೈ ಬಿಡಿಸಿದಾಗ ಹೆಬ್ಬೆರಳಿನ ತುದಿಯಿಂದ ಕಿರುಬೆರಳಿನ ತುದಿಯ ವರೆಗೆ ಸಾಮಾನ್ಯ ಎಂಟು ಇಂಚು ಆಗುತ್ತದೆ. ಇದನ್ನು ಒಂದು ಗೇಣು ಎಂದೂ ಹೇಳುತ್ತಾರೆ. ಒಂದು ಗೇಣಿನಷ್ಟು ದೂರದಲ್ಲಿ ನಡುತ್ತಾ ಹೋಗಿ ಎಂದು ಹೇಳಿದರೆ, ಅವರು ನೆಟ್ಟಾಗ, ಅದು ಎಂಟರಿಂದ ಒಂಭತ್ತೂವರೆ ಇಂಚಿನಷ್ಟು ದೂರವಾಗಬಹುದು. ಒಂದು ಹಿಡಿಗೆ ಮೂರು ನೇಜಿಗಿಂತ ಹೆಚ್ಚು ನೆಡಬಾರದು. ನೇಜಿಯು ಚೆನ್ನಾಗಿದ್ದರೆ ಎರಡೇ ನೇಜಿಯನ್ನು ನೆಟ್ಟರೆ ಸಾಕು. ಈ ದರದಲ್ಲಿ ನೇಜಿ ನೆಟ್ಟರೆ, ಒಂದು ಕಳಸಿಗೆ, ಯಾ 20 ಸೆಂಟ್ಸ್ ಗದ್ದೆಗೆ 140 ಸೂಡಿ ನೇಜಿ ಸಾಕಾಗುತ್ತದೆ. ನೀವು 10 ಇಂಚುಗಳಷ್ಟು ದೂರ ನೆಟ್ಟರೆ, ನೇಜಿ ಇನ್ನೂ ಕಡಿಮೆ ಸಾಕು.

ನೇಜಿ ನೆಡುವ ಮೊದಲು ಗದ್ದೆ ಹುಣಿಯ ಬದಿಗೆ ಸರಿಯಾಗಿ, ಹಗ್ಗ ಹಿಡಿದವರು ಹುಣಿಗೆ ನೇರವಾಗಿ ಹಗ್ಗ ಹಿಡಿದು ಎರಡು ಗೂಟಗಳನ್ನು 9 ಇಂಚೋ, 10 ಇಂಚೋ, 12 ಇಂಚೋ—ಎಷ್ಟು ಬೇಕೋ ಅಷ್ಟು ಸ್ಥಳ ಬಿಟ್ಟು ಊರಬೇಕು. ಆ ಮೇಲೆ ಹಗ್ಗಕ್ಕೆ ತಾಗಿ ತುದಿಯಿಂದ ತುದಿಗೆ ನಾಟಿ ಮಾಡಿಸಬೇಕು. ಹಗ್ಗದಲ್ಲಿ ಒಂದು ಸಾಲು ನಾಟಿ ಆದೊಡನೆ, ಹಗ್ಗ ಹಿಡಿದವರು ಹಗ್ಗವನ್ನು ಪಕ್ಕನೆ ಇನ್ನೊಂದು ಗೂಟಕ್ಕೆ ಹಿಡಿಯಬೇಕು. ಆಗ ಎರಡನೇ ಸಾಲು ನಡುವ ಕೆಲಸ ಸಾಗಬೇಕು. ಹೀಗೆ ಎರಡು ಸಾಲು ನೆಡುವ ವೇಳೆಗೆ ಸ್ಥಳದ ವ್ಯವಸ್ಥೆಯಾಗುತ್ತದೆ. ಇನ್ನೊಂದು ರೀತಿಯಲ್ಲೂ ಸುಲಭವಾಗಿ ಎಷ್ಟು ದೂರ ನೆಡಬೇಕೆಂಬ ಸ್ಥಳದ ವ್ಯವಸ್ಥೆ ಮಾಡಬಹುದು. ಮೊದಲು ಎರಡು ಹುಣಿಗಳಲ್ಲಿ ಗುರುತು ಮಾಡಿಕೊಂಡು ಅನಂತರ ಮಾಮೂಲಿಯಾಗಿ ನೇಜಿ ನೆಡಬೇಕು. ಹೀಗೆ ಗುರುತಿನಿಂದ ಗುರುತಿಗೆ ಹಗ್ಗ ಹಿಡಿಯುತ್ತ ನೆಡುವ ಕೆಲಸವು ಸುಲಭವಾಗಿಯೂ ವೇಗವಾಗಿಯೂ ಸಾಗುವುದು.

ಗದ್ದೆಯು ದೊಡ್ಡದಾಗಿದ್ದಲ್ಲಿ, ಹಿಡಿದ ಹಗ್ಗವು ಬಗ್ಗಿ ಹೋಗುವುದುಂಟು. ಆದಕ್ಕಾಗಿ ದೊಡ್ಡ ಗದ್ದೆಯ ಮಧ್ಯದಲ್ಲಿ ಬೇರೊಂದು ಹಗ್ಗವನ್ನು ಕಟ್ಟಿ, ಎರಡು ಭಾಗ ಮಾಡಿಕೊಂಡು ನೇಜಿ ನೆಡಬೇಕು. ನೆಡುವವರಿಗೆ ಹಗ್ಗ ಕಾಣುವಷ್ಟು ಎತ್ತರದಲ್ಲಿರಬೇಕು. ಅದು ಗದ್ದೆಯ ನೀರಿನಲ್ಲಿ ಮುಳುಗಿ ಹೋಗದಂತೆ ನೋಡಿಕೊಳ್ಳಬೇಕು.

ಕೆಲವು ದೊಡ್ಡ ಗದ್ದೆಗಳನ್ನು ಭಾಗ ಮಾಡಿ ಸಣ್ಣದಾಗಿ ಮಾಡಿಕೊಳ್ಳುವುದಕ್ಕೆ ನಮ್ಮಲ್ಲಿರುವ ಕೆಲವು ನಂಬುಗೆಗಳು ಅಡ್ಡಿಯಾಗುತ್ತವೆ. ಬಾಕಿಮಾರು ಗದ್ದೆಗಳನ್ನು ಹೀಗೆ ಸಣ್ಣ ಹುಣಿ ಹಾಕಿ, ವಿಂಗಡಿಸುವುದಕ್ಕೆ ಕೆಲವರು ಒಪ್ಪುವುದಿಲ್ಲ. ಆದರೂ ತಾತ್ಕಾಲಿಕ ಹುಣಿಮಾಡಿ, ಒಂದು ಭಾಗದಲ್ಲಿ ನಾಟಿ ಆದೊಡನೆ ಆ ಹುಣಿಯನ್ನು ಕಾಲಿನಿಂದಲೇ ಅಳಿಸಿಬಿಡಬಹುದು. ಕೆಲವರು ಬಾಕಿಮಾರಿನಲ್ಲಿ ನಾಟಿ ಪ್ರಾರಂಭಿಸಿದರೆ, ಪೂರ್ಣ ನಟ್ಟು ಆಗುವ ವರೆಗೂ ಉಪವಾಸವಿರುವುದುಂಟು. ನಾಟಿಯು ಬೇಗನೇ ಆಗಬೇಕೆಂದು ಅವಸರದಿಂದ ಅಸ್ತವ್ಯಸ್ತವಾಗಿ ನಡೆಯುವುದೂ ಉಂಟು. ಇದೆಲ್ಲ ಸರಿಯಲ್ಲ. ನಾವು ನಮ್ಮ ಕೆಲವು ನಂಬಿಕೆಗಳನ್ನು ಬಿಡುವುದೂ ಒಳಿತಲ್ಲವೇ? ಕಾಲಧರ್ಮಕ್ಕೆ ಅನುಗುಣವಾಗಿ ನಾವಿಂದು ನಂಬಿಕೆಗಳನ್ನು ಬದಲಾಯಿಸುವುದಕ್ಕೂ ಬಿಡುವುದಕ್ಕೂ ಸಿದ್ಧರಾಗಬೇಕು. ಗದ್ದೆಗಳು ಸಣ್ಣದಿದ್ದರೆ, ಉಳುವುದೂ ನೆಡುವುದೂ ಉತ್ತಮವಾಗುತ್ತದೆ. ಗದ್ದೆಯು ಚೆನ್ನಾಗಿ ಹುಡಿಯಾಗಿ ಮಣ್ಣು ನೀರು ಒಂದೇ ರೀತಿಯಾಗದಿದ್ದರೆ, ನೆಟ್ಟ ನೇಜಿಗೆ ಬಾಧಕವಾಗುತ್ತದೆ.

ಜಪಾನು ನೇಜಿಯಾದರೆ ಅದರ ಬುಡದಲ್ಲಿ ಹೆಚ್ಚು ಮಣ್ಣು ನಿಲ್ಲುವುದಿಲ್ಲ. ಹೀಗಾಗಿ ನೇಜಿ ತೆಗೆದಾಗ ಅದರ ಬುಡವನ್ನು ಜಾಡಿಸಿ, ಮಣ್ಣು ತೆಗೆಯುವ ಅಗತ್ಯವೇ ಇಲ್ಲ. ನೇಜಿ ಕೀಳುವಾಗಲೂ ಕಷ್ಟವಿಲ್ಲ. ಸುಲಭವಾಗಿ ಕೀಳುವುದಕ್ಕೂ ಆಗುತ್ತದೆ. ಬೇರು ತುಂಡಾಗದಂತೆ ನೆಟ್ಟಗೆ ಎಳೆದರೆ ನೇಜಿ ಸುಲಭವಾಗಿ ಬರುತ್ತದೆ. ಚೆನ್ನಾಗಿ ಹದಮಾಡಿದ ನೇಜಿ ಕಳವಾದರೆ ನೇಜಿಯ ಬೇರು ಹಾಳಾಗದಂತೆ ಕೀಳುವುದಕ್ಕೆ ಆಗುತ್ತದೆ.

(ಗ್ರಾಮ ಸೇವಕದಿಂದ)

In the Court of Munsif Kundapur

S C. 206/66

Potail Cherdayya Bhatta ... Plaintiff

versus

Nagi Hengsu & 3 others ... Defendants

To

4th Defendant Govinda, son of Kattegadde Devadiga Manji Hengsu, Kergal village, Kundapur Taluk.

Please take notice that the suit filed by the plaintiff for recovery of amounts due under pronote executed on 21–6–63 stands pasted to 27–9–66 for your appearance at 11 A M. On your failure to answer the claim on the said date, the suit will be decided in your absence.

By order of Court.

K. Narayana Kamath,
Advocate for Plaintiff.

Kundapur, 30–8–66.

ಚಿಕ್ಕ ಹಿಡುವಳಿದಾರರಿಗೆ ಉತ್ತಮ ಕೊಡುಗೆ

ವರ್ಜಿನ್ ಕ್ರೂಡ್ ಆಯಿಲ್
3 H. P. ಪಂಪು ಸೆಟ್ಟುಗಳು.......

ಧನ ಇಲೆಕ್ಟ್ರಿಕ್ ಮೋಟಾರು ಮತ್ತು
(¼ H.P. to 30 H.P.) ಪಂಪು ಸೆಟ್ಟುಗಳು.......

ವಿತರಣೆಗಾರರು. —

ನಿತ್ಯಾನಂದ ಇಂಡಸ್ಟ್ರಿಯಲ್ ಏಜನ್ಸಿಸ್

ಕಾರ್ಕಳ (ದ. ಕ.)

ಅಮೃತ ಬಿಂದು

ಯೌವನ ವಿಷಯಾಸಕ್ತಿಗಳು ತುಂಬನಕ್ಕೆ ಆದರ ಮಾಧುರ್ಯವನ್ನು ನೀಡಿದರೆ, ಪ್ರೇಮವೇ ಅದನ್ನು ಪವಿತ್ರವನ್ನಾಗಿಸುತ್ತದೆ.

ೲ ೲ ೲ

ಚುರುಕು ಬುದ್ಧಿಯು ದೊಡ್ಡ ಕೆಲಸಗಳನ್ನು ನಿರೂಪಿಸಬಹುದು. ಆದರೆ ಅವುಗಳನ್ನು ಪೂರೈಸಲು ಮೈಬಗ್ಗಿ ದುಡಿಯುವವನೇ ಬೇಕು.

ೲ ೲ ೲ

ಭೂಮಿ ಹಾಗೂ ಎಲ್ಲ ಆಸ್ತಿಯೂ ಯಾವನು ಅದಕ್ಕಾಗಿ ದುಡಿಯುವನೋ ಅವನದೇ ಇರುವುದು.

ೲ ೲ ೲ

ಸತ್ಯಕ್ಕಾಗಿ ಅಹಿಂಸಾತ್ಮಕವಾಗಿ ನಡೆಸುವ ಯುದ್ಧವೇ ಧರ್ಮ ಯುದ್ಧ.

ೲ ೲ ೲ

ಹೋರಾಟವಿಲ್ಲದ ಜೀವನವು ನೀರಸ. ಇಂತಹ ಅಪೇಕ್ಷೆಯನ್ನೇ ಮಾಡಬಾರದು. ಜೀವನದ ವಿಷಮತೆಗಳನ್ನು ಸಹಿಸಿಕೊಳ್ಳುವುದರಲ್ಲಿಯೇ ಜಾಣತನವಿದೆ.

ಯಾವತ್ತೂ ವಾಚನ ಭಂಡಾರಗಳಿಗೆ

ಯೋಗ್ಯವಾದ ನವೀನ ಪುಸ್ತಕಗಳು

ಬರೆದ ಮುಗುಳು	1—50
ಅನುವಾದಿತ ಕತೆಗಳು	1—20
ಪಂಚ ಸುಮನ	1—20
ಮುತ್ತಿನ ಮಾಲೆ	1—80
ಹೂ ಗೊಂಚಲು	1—75
ಪಂಚಗಜ್ಜಾಯ	1—75
ಏಕಾಂಕ ನಾಟಕಗಳು	1—00
ಭಾರತದ ನಾಲ್ಕುಮುಖಿಗಳು	1—00
ದೇಶವಿದೇಶದ ಮಹಾ ಜೀವಿಗಳು	1—80
ಹೆಂಗುಸರ ಕತೆಗಳು	2—00
ನುಡಿಮುತ್ತುಗಳು	1—20
ವಿಚಿತ್ರ ಕಳ್ಳಪೇಟೆ	1—50
ಭಾರತದ ವೀರಾಂಗನೆಯರು	1—50
ಮೇರಿಕೊಟ್ಟ ಬೆಂಡೋಲೆ	1—80
ಶಿಲ್ಪಿ	1—50
ಪ್ರತಿಜ್ಞಾ ಪೂರ್ತಿ	1—00
ಘಂಟಮಾರಾ	2—00
ನೀತಿ ವಿನೋದ ಕತೆಗಳು	1—00

ಕೆಟಲಾಗಿಗೆ ಬರೆಯಿರಿ

ನವಭಾರತ ಪುಸ್ತಕ ಭಂಡಾರ,
ಉಡುಪಿ.

ಗಾಂಧೀಜಿಯವರು ಹೇಳಿದ

ಜನ್ಮ ಮೃತ್ಯುಗಳ ರಹಸ್ಯ

ಲೇಖಕರು
ಎಸ್. ಆರ್. ಹೆಬ್ಬಾರ್

ರಾಷ್ಟ್ರಪಿತ ಮಹಾತ್ಮಾ ಗಾಂಧೀಜಿಯವರು ಭಗವದ್ಗೀತೆಯ ಪರಮ ಭಕ್ತರಾಗಿದ್ದರು. 'ಗೀತಾಗ್ರಂಥವು ನನಗೆ ಯಾವಾಗಲೂ ಮಾರ್ಗದರ್ಶಕವಾಗಿದೆ. ಗೀತೆಯ ಆಧಾರವಿಲ್ಲದಿದ್ದರೆ ನಾನು ಆ ಕೃತ್ಯವನ್ನೇ ಮಾಡುವುದಿಲ್ಲ' ಎಂಬುದಾಗಿ ಗಾಂಧೀಜಿಯವರೇ ತಿಳಿಸಿದ್ದಾರೆ.

ದೇಶಬಂಧು ದಾಸರ ಶ್ರಾದ್ಧದ ದಿನ ಗೀತೆಯ ಒಂದು ಶ್ಲೋಕದ ಮೇಲೆ ಪ್ರವಚನ ಮಾಡಬೇಕೆಂದು ಮಹಾತ್ಮಾಜಿಯವರಿಗೆ ತಿಳಿಸಲು ಅವರು ಮಾಡಿದ ಪ್ರವಚನದ ಸಾರಾಂಶವೇ 'ಜನ್ಮ ಮೃತ್ಯುಗಳ ರಹಸ್ಯ'ವಾಗಿದೆ.

ಮರಣದ ಬಗ್ಗೆ ಶೋಕಿಸಬಾರದು:-

'ಮೃತ್ಯುವಿನ ಬಗ್ಗೆ ಶೋಕಿಸಬಾರದೆಂದು ಗೀತೆಯು ಸ್ಪಷ್ಟವಾಗಿ ಹೇಳಿದೆ. ಭಗವದ್ಗೀತೆಯು ಒಂದು ಮಹಾರೂಪಕವೆಂದು ನಾನು ಅನೇಕ ಸಲ ಹೇಳಿರುವೆನು. ಅದರಲ್ಲಿ ಎರಡು ಪಕ್ಷಗಳ ನಡುವೆ ನಡೆದ ಯುದ್ಧದ ವರ್ಣನೆಯಿದೆಯೆಂದು ನನಗೆ ತೋರುವುದಿಲ್ಲ. ಜೈಲಿನಲ್ಲಿ ಮಹಾಭಾರತವನ್ನು ಓದಿದ ಮೇಲೆ ನನ್ನ ಈ ಅಭಿಪ್ರಾಯವು ದೃಢವಾಗಿದೆ. ಮಹಾಭಾರತವೇ ಒಂದು ದೊಡ್ಡ ಧರ್ಮ ಗ್ರಂಥವೆಂದು ನನಗೆ ತೋರುತ್ತದೆ. ಅದರಲ್ಲಿ ಐತಿಹಾಸಿಕ ಪ್ರಸಂಗಗಳಿವೆ. ಆದರೆ ಅದು ಇತಿಹಾಸವಲ್ಲ. ಗೀತೆಯಲ್ಲಿ ನಮ್ಮ ಹೃದಯದಲ್ಲಿ ನಡೆಯುತ್ತಿರುವ ಯುದ್ಧದ ವರ್ಣನೆಯಿದೆ.

'ನಾನು ಈ ದಿನ ಮೃತ್ಯುವಿನ ರಹಸ್ಯದ ಕುರಿತು ಕೆಲವು ಮಾತುಗಳನ್ನು ಹೇಳಲು ಹೊರಟಿರುವೆನು. ನಾವು ಶರೀರದ ಎಲ್ಲಾ ವ್ಯವಹಾರಗಳನ್ನು ಶಾಶ್ವತವೆಂದೆಣಿಸಿ ನಡೆಯುತ್ತಿದ್ದೇವೆ. ನಾವು ಶರೀರವನ್ನು ಪೂಜಿಸುತ್ತೇವೆ, ಅದರ ಆಸಕ್ತಿಯನ್ನು ಹಿಡಿಯುತ್ತೇವೆ. ಇದೆಲ್ಲಾ ಹಿಂದೂ ಧರ್ಮದ ವಿರುದ್ಧವಾಗಿದೆ. ಹಿಂದೂ ಧರ್ಮದಲ್ಲಿ ಸೂರ್ಯನಂತೆ ಸ್ಪಷ್ಟವಾಗಿರುವ ಯಾವುದಾದರೊಂದು ಸಂಗತಿಯಿದ್ದರೆ ಅದು ಶರೀರವೂ ದೃಶ್ಯ ಪದಾರ್ಥಗಳೂ 'ಅಸತ್' ಎಂಬ ಸಿದ್ಧಾಂತವು. ಆದರೆ ಹೀಗಿದ್ದರೂ ಮೃತ್ಯುವೆಂದರೆ ನಾವು ಹೆದರುತ್ತೇವೆ; ಶೋಕಿಸುತ್ತೇವೆ. ಮೃತರಿಗೋಸ್ಕರ ಅಳುವುದರಿಂದ ಮೃತರ ಆತ್ಮಕ್ಕೆ ದುಃಖವಾಗುವುದೆಂದು ಮಹಾಭಾರತದಲ್ಲಿ ಹೇಳಿದೆ. ಗೀತೆಯ ಪ್ರವೃತ್ತಿಯು ಮೃತ್ಯುವಿನ ಭೀಷಣತೆಯ ಕಲ್ಪನೆಯನ್ನು ತೆಗೆದು ಹಾಕುವಂತಹುದಾಗಿದೆ. ಅಶಾಶ್ವತವಾದ ವಸ್ತುವಿನ ಕುರಿತು ಚಿಂತೆ ಮಾಡುವುದು ವ್ಯರ್ಥವೆಂದು ಗೀತೆಯು ಹೇಳುತ್ತಿದೆ.

"ಮನುಷ್ಯರು ಮಾಡಿದ ಒಳ್ಳೇ ಕೆಲಸವು ಅವರೊಡನೆ ಭಸ್ಮವಾಗುತ್ತದೆಂದೂ, ಅವರ ದುಷ್ಕೃತ್ಯಗಳನ್ನು ಮಾತ್ರ ಲೋಕವು ಮರೆಯುವುದಿಲ್ಲವೆಂದೂ ಶೇಕ್ಸ್‌ಪಿಯರ್ ಕವಿಯು ಹೇಳಿರುವರು. ಈ ಮಾತು ನಿಜವಲ್ಲ. ಶುಭ ಮತ್ತು ಸತ್ ವಸ್ತುಗಳೇ ಚಿರಂಜೀವಿಗಳಾಗಿವೆ. ಜಗತ್ತು ಕೆಟ್ಟುದನ್ನು ಬೇಗ ಮರೆಯುತ್ತದೆ. ಒಳ್ಳೆಯದನ್ನು ಬೇಗ ಜಾಗ್ರತೆಯಿಂದ ಕಾಪಾಡಿಕೊಳ್ಳುತ್ತದೆ. ರಾಮನು ಅವತಾರಿಯೆಂದು ನಾನು ತಿಳಿಯುತ್ತೇನೆ. ಅವನು ಶರೀರಧಾರಿಯಾಗಿರುವಾಗ ಅವನ ಕೈಯಿಂದ ಒಂದಾದರೂ ದೋಷವಾಗಲಿಲ್ಲವೆಂದು ನಾನು ಎಣಿಸುವುದಿಲ್ಲ. ಆದರೂ ನೀವು ಅವನನ್ನು ಪೂರ್ಣನೆಂದು ತಿಳಿಯುತ್ತೀರಿ. ಕೃಷ್ಣನನ್ನು ಪೂರ್ಣಾವತಾರನೆಂದು ನಾವು ತಿಳಿಯುತ್ತೇವೆ. ಕೋಟಿಗಟ್ಟಳೆ ಹಿಂದುಗಳಲ್ಲಿ ಶ್ರೀರಾಮಕೃಷ್ಣರ ದೋಷಗಳನ್ನು ಸೂಚಿಸುವ ಒಬ್ಬ ಹಿಂದುವಾದರೂ ಇಂದು ದೊರೆಯಲಾರ.

'ಗೀತೆಯು ಕಂಠೋಕ್ತವಾಗಿ ಹೇಳುವುದೇನೆಂದರೆ, ನಿಮ್ಮ ಜೀವನವನ್ನು ಸತ್ಯಮಯವಾಗಿ ಮಾಡಿರಿ. ಅಸತ್ಯ ಮತ್ತು ದುಷ್ಟತನ ಇವುಗಳ ತ್ಯಾಗವನ್ನು ಮಾಡಿರಿ. ವಾಣಿಯು ಅನೇಕ ಸಲ ಅಸತ್ಯಮಯವಾಗಿರುತ್ತದೆ. ಕ್ರೋಧ, ಕಾಮ, ಮೋಹ, ಮದಾದಿಗಳೂ ಅಸತ್ಯವೇ. ಇವುಗಳೆಲ್ಲಾ ಆತ್ಮ ನಾಶವನ್ನು ತಂದೊಡ್ಡುವುದಾಗಿ ಹೆದರಿಸುತ್ತವೆ. ಆದರೆ ಆತ್ಮವು ನಾಶವಾಗುವುದಿಲ್ಲ, ಅದು ಅವಿನಾಶಿನಿಯಾಗಿದೆ. ಸತ್ ಎಂದರೇನೆಂದು ನಿಮಗೆ ತಿಳಿದರೆ ಜನ್ಮ ಮೃತ್ಯುವಿನ ರಹಸ್ಯ ತಿಳಿಯುವುದು. ಮೇಣದ ಬತ್ತಿಯು ಉರಿಯುವಾಗ ಯಾವ ದ್ರವ್ಯವೂ ನಾಶವಾಗುವುದಿಲ್ಲವೆಂದು ಶಾಸ್ತ್ರಜ್ಞರು ಹೇಳುವರು. ಹಾಗೇ ಶರೀರವು ಸತ್ತರೆ ಅಥವಾ ಸುಟ್ಟು ಭಸ್ಮವಾದರೆ ಏನೂ ನಾಶವಾಗುವುದಿಲ್ಲ. ಜನ್ಮ ಮತ್ತು ಮರಣಗಳು ಒಂದೇ ವಸ್ತುವಿನ ಎರಡು ಅವಸ್ಥೆಗಳು."

(ಸಂಗ್ರಹ)

ಕೃತಿ ಪರಿಚಯ

ವಿಮರ್ಶೆಗಾಗಿ ಪುಸ್ತಕಗಳನ್ನು ಕಳಿಸುವವರು ದಯಮಾಡಿ ಎರಡೆರಡು ಪ್ರತಿಗಳನ್ನು ಕಳಿಸಬೇಕಾಗಿ ವಿನಂತಿ. ಸಂ. ನ.

ವಿಜ್ಞಾನ ವಾಗ್ವನಿತೆಯರು: ಲೇಖಕರು "ಹರಿಚರಣ." ಪ್ರಕಾಶನ: ಪುಟಗಳು: ೨೪. ಬೆಲೆ: ರೂ. 0—೪೦.

ವಿಜ್ಞಾನವಿಂದು ಭರದಿಂದ ಮುಂದುವರಿಯುತ್ತಿರುವ ರಂಗ. ಇದರಲ್ಲಿ ಪುರುಷರಂತೆಯೇ ಸ್ತ್ರೀಯರೂ ಶ್ರಮಿಸಿದ್ದಾರೆ, ಶ್ರಮಿಸುತ್ತಾರೆ. ವಿಶೇಷವಾಗಿ ಜೀವನವಾದಕ್ಕಿಂತ ವಸ್ತುನಿಷ್ಠವಾದಕ್ಕೆ ಮಹತ್ವ ಕೊಡುವ, ತಮ್ಮನ್ನು ಬುದ್ಧಿ ಜೀವಿಗಳೆಂದು, ಭೌತಿಕವಾದಿಗಳೆಂದು ಕರೆದುಕೊಳ್ಳುವ ಪಾಶ್ಚಾತ್ಯರೇ ಈ ದಿಸೆಯಲ್ಲಿ ಮುಂದುವರಿದಿದ್ದಾರೆ.

ಪ್ರಸ್ತುತದ ಈ ಕಿರುಹೊತ್ತಗೆಯಲ್ಲಿ ವಿಜ್ಞಾನದ ರಂಗದಲ್ಲಿ ಅಹರ್ನಿಶಿ ದುಡಿದು ಯಶಸ್ವೀ ಸಂಶೋಧನೆಗಳಿಂದ ಮಾನವ ಕಲ್ಯಾಣ ಸಾಧನೆಯ ದಾರಿಯನ್ನು ಸುಗಮಗೊಳಿಸಿದ ಡೋರತಿ ಹಾಡ್ಗ್‌ಕಿನ್, ಗರ್ಟ್‌ಫೆರಸ ಕೋರಿ, ಮೇಡಂ ಕ್ಯೂರಿ ಎಂಬ ಮೂವರು ವನಿತಾ ಮಣಿಗಳ ಪರಿಚಯವನ್ನು 'ಹರಿಚರಣ'ರು ಮಾಡಿಕೊಟ್ಟಿದ್ದಾರೆ, ಉಪಕಾರ ಮಾಡಿದ್ದಾರೆ. ನಿರಂತರ ಸಾಧನೆ—ಪರಿಶ್ರಮ—ಏಕಾಗ್ರತೆಗಳು ಮುಪ್ಪುರಿಗೊಂಡ ತಪಶ್ಚರ್ಯೆಯೇ ಸಿದ್ಧಿ ಕಾರಣ. ಇದನ್ನು ಅವರೀಯರೂ ಸಾರಿದ್ದಾರೆ, ಯಶಸ್ವೀ ಜೀವಗಳ ಸಾಧನೆಯ ಗುಟ್ಟೂ ಇದೇ.

ಶ್ರೀ "ಹರಿಚರಣ"ರ ಭಾಷೆ ಸರಳವಾಗಿದೆ. ಕೆಲವೆಡೆ ಕನ್ನಡ ಭಾಷೆಯಲ್ಲಿ ವೈಜ್ಞಾನಿಕ ಗ್ರಂಥ ಬರೆಯುವಾಗ ಎದುರಿಸಬೇಕಾಗಿ ಬರುವ ಸಮಸ್ಯೆಯನ್ನು ಇವರೂ ಎದುರಿಸಿದಂತೆ, ಅದಕ್ಕೆ ತನ್ನದೇ ಪರಿಹಾರವರಸಿದಂತೆ ಭಾಸವಾಗುತ್ತದೆ. ಇಂತಹ ಪರಿಹಾರ ವಿಧಾನದಲ್ಲಿ ಏಕರೂಪತೆಯಿದ್ದರೆ, ಕನ್ನಡಿಗರಿಗೆ ತುಂಬ ಉಪಕಾರವಾಗುತ್ತದೆ. ಈ ಪುಟ್ಟ ಪುಸ್ತಕ ಅತ್ಯಂತ ಉಪಾದೇಯ; ಶ್ರೀ ಹರಿಚರಣರು ಈ ದಿಸೆಯಲ್ಲಿ ಮುಂದುವರಿದು ಕನ್ನಡಿಗರಿಗೆ ವಿಜ್ಞಾನಿ - ವಿಜ್ಞಾನಗಳ ಪರಿಚಯವನ್ನು ಇನ್ನೂ ಮಾಡಿಕೊಡಲಿ— ಅವರಲ್ಲೂ ವೈಜ್ಞಾನಿಕಾಸಕ್ತಿಯನ್ನು ಕೆರಳಿಸಲಿ.

ಜ್ಯೋತಿಷ ಪಂಚಾಭ್ಯುದಯ:— ಲೇಖಕರು: ಶ್ರೀ ಕೆ. ವಿ. ಕೃಷ್ಣಪ್ಪ. ಪ್ರಕಾಶಕರು: ಜ್ಯೋತಿಷ್ಯ ಸಂಶೋಧನಾ ಕೇಂದ್ರ, ನಂ. 150, ರಂಗಸ್ವಾಮಿ ಗುಡಿ ಬೀದಿ, ಬೆಂಗಳೂರು—2. ಪುಟಗಳು: ೯೬. ಬೆಲೆ: ರೂ. ೧—೨೫.

ಇದು ಜ್ಯೋತಿಷ್ಯಕ್ಕೆ ಸಂಬಂಧಿಸಿದ ಗ್ರಂಥ. ಸೂರ್ಯನಿಗೆ ಸಂಬಂಧಿಸಿದ ಮಹಾನಕ್ಷತ್ರೋದಯ, ಸೂರ್ಯ ರಾಶ್ಯೋದಯ, ಅಂಶೋದಯ, ದಿನೋದಯ ಮತ್ತು ಭಾಗೋದಯ— ಈ ಪಂಚಾಭ್ಯುದಯ ಸೂತ್ರಗಳನ್ನು ಹೊಂದಿಸಿ ಇಲ್ಲಿ ಅಭ್ಯುದಯ ವಿಚಾರವನ್ನು ವಿವರಿಸಲಾಗಿದೆ. ಪ್ರಾಚೀನ ಗ್ರಂಥಗಳ ಆಧಾರದಿಂದಲೂ ಆಧುನಿಕ ಕಾಲದ ಅನುಭವಗಳಿಂದಲೂ ಈ ಗ್ರಂಥವನ್ನು ಬರೆಯುವಾಗ ವಿಷಯ ಸಂಗ್ರಹ ಮಾಡಿದ್ದೇನೆನ್ನುತ್ತಾರೆ, ಲೇಖಕರು. ಪೂರ್ವಪುಣ್ಯ—ಪಾಪಗಳಲ್ಲಿ ವಿಶ್ವಾಸವಿಡುವ ಜ್ಯೋತಿಷ್ಯ ಹೇಳುವ ಸುಖ—ದುಃಖಗಳು ಯಾವ ಮಂತ್ರತಂತ್ರಗಳಿಂದಲೂ ಗುಣವಾಗುವುದಿಲ್ಲ—ಆದರೆ, ಜೀವನದ ಕರುಡು ನಕ್ಷೆಯನ್ನು ಸಂಯೋಗ ನೋಡಿಕೊಂಡು ಮನುಷ್ಯನಿಗೆ ಮುನ್ನಡೆಯಲು—ಎಚ್ಚರಿಕೆಯಿಂದ— ಅದು ಸಹಾಯ ಮಾಡುತ್ತದೆ. ಹಾಗಾಗಿ ಕಾಲು ಜಾರುವ ಸಂದರ್ಭಗಳು ಕಡಿಮೆಯಾಗುತ್ತವೆ.

ಕನ್ನಡದಲ್ಲಿ ಜ್ಯೋತಿಷ್ಯ ಗ್ರಂಥಗಳ ಅಭಾವವನ್ನು ಹೋಗಲಾಡಿಸುವಲ್ಲಿ 'ಜ್ಯೋತಿಷ್ಯ ಪಂಚಾಭ್ಯುದಯ" ಸಹಾಯವಾಗಿದೆ. ಶ್ರೀಕೃಷ್ಣಪ್ಪನವರ ಶ್ರಮ ಸಾರ್ಥಕವಾಗಿದೆ.

—ಗೋರಾ.

ಕಾರ್ಕಳ ಮುನ್ಸಿಫ್ ಕೋರ್ಟಿನಲ್ಲಿ

S. C. S. No 91/1966.

ದೋಗು ಶೆಟ್ಟಿ —ವಾದಿ.

ಮತ್ತು

ವೆಂಕಪ್ಪ ಪೂಜಾರಿ —ಪ್ರತಿವಾದಿ

ಇವರೊಳಗೆ

ಈ ಮೂಲಕ ಸದ್ರಿ ದಾವೆಯ ಪ್ರತಿವಾದಿ ವೆಂಕಪ್ಪ ಪೂಜಾರಿ—ಬಾಗಿ ಪೂಜಾರ್ತಿಮಗ, ಬೆಳ್ತಂಗಡಿ ತಾಲ್ಲೂಕು ಗುಂಡೂರಿಗ್ರಾಮದ ಪೊಕ್ಕಿ ಎಂಬಲ್ಲಿರುವವ Post Venur. ಇವರಿಗೆ ಈ ಮೂಲಕ ತಿಳಿಸುವುದೇನೆಂದರೆ—

ವಾದಿ ನಿಮ್ಮ ಮೇಲೆ ಮಾಡಿದ ಮೇಲಿನ ದಾವೆ ನಿಂಮ ಹಾಜರಿ ಬಗ್ಗೆ ತಾರೀಕು 21-9-66ಕ್ಕೆ ಇಟ್ಟಿದೆ. ಸದ್ರಿ ದಿನ ಬೆಳಿಗ್ಗೆ 10½ ಗಂಟೆಗೆ ನೀವು ಸ್ವತಹಾ ಯಾ ವಕೀಲರ ದ್ವಾರಾ ಹಾಜರಾಗಿ ಉತ್ತರಿಸತಕ್ಕದ್ದು. ತಪ್ಪಿದಲ್ಲಿ ನಿಮ್ಮನ್ನು ಗೈರ್ವಾ ಮಾಡಿ ಸದ್ರಿ ದಾವೆಯ ಏಕಪಕ್ಷವಾಗಿ ತೀರ್ಮಾನಿಸಲಾದೀತು.

By order of the Court

N. M. Adyanthaya
Advocate for Plaintiff,

Karkala, 30—8—1966.

READ & ADVERTISE IN NAVAYUGA WEEKLY

ಸಿಟಿ ಬ್ಯಾಂಕ್ — ವಿಜಯ ಬ್ಯಾಂಕ್ ವಿಲಯನದ ಸಮಾರಂಭ

ಬ್ಯಾಂಕುಗಳು ಒಕ್ಕಲುತನಕ್ಕೆ ಸಾಲ ನೀಡಬೇಕು

ಆರೋಗ್ಯ ಮಂತ್ರಿ ಡಾ। ಅಳ್ವರ ಸೂಚನೆ



ಕಳೆದ ತಾ. 28ರಂದು ಹುಬ್ಬಳ್ಳಿ ಸಿಟಿ ಬ್ಯಾಂಕು ವಿಜಯ ಬ್ಯಾಂಕಿನೊಡನೆ ವಿಲೀನಗೊಂಡ ಬಗ್ಗೆ ಹುಬ್ಬಳ್ಳಿ ನಗರ ಭವನದಲ್ಲಿ ಸೇರಿದ ಸಭೆಯಲ್ಲಿ ಮಾತನಾಡುತ್ತಾ ಆರೋಗ್ಯ ಮಂತ್ರಿ ಡಾ| ಕೆ. ನಾಗಪ್ಪ ಆಳ್ವಾರವರು, ಬ್ಯಾಂಕುಗಳು ನಗರಗಳಲ್ಲಿ ವಿಸ್ತೃತವಾಗಿ ಉದ್ದಿಮೆ ವಾಣಿಜ್ಯಗಳ ಅಭಿವೃದ್ಧಿ ಸಹಾಯ ನೀಡುತ್ತ ಬಂದು ಉದ್ದಿಮೆಗಳಬೆಳವಣಿಗೆಗೆಮುಖ್ಯ ಕಾರಣಗಳಾಗಿದೆ, ಬ್ಯಾಂಕುಗಳು ತಮ್ಮ ಸೇವೆಯನ್ನು ಪ್ರತಿಯೊಂದು ಚಿಕ್ಕ ನಗರ ಹಾಗೂ ಗ್ರಾಮಗಳಲ್ಲಿ ವಿಸ್ತರಿಸಬೇಕು. ಗ್ರಾಮಸ್ಥರಿಗೆ ಸಹಾಯ ನೀಡಲು ಹಿಂಜರಿಯಬಾರದು. ಖಾಸಗಿಯಾಗಿ ಸಾಲ ಕೊಡುವ ಸಾಹುಕಾರರು ಮಿತಿಮೀರಿದ ಬಡ್ಡಿದರದಿಂದ ಸಾಲನೀಡುತ್ತಿರುವುದರಿಂದಾಗಿ ಅನೇಕರು ಸಾಲದ ಹೊರೆಯಲ್ಲಿಯೇ ಕೊಳೆಯುತ್ತಿರಬೇಕಾಗುತ್ತದೆ ಇದರಿಂದಾಗಿ ಅಗತ್ಯವುಳ್ಳವರಿಗೆ ಬ್ಯಾಂಕುಗಳು ನೆರವು ನೀಡಿ ಈ ಅನಿಷ್ಟ ಕ್ರಮ ದೂರವಾಗುವಂತೆ ಮಾಡಬೇಕು ಎಂದು ನುಡಿದರು. ಮಾತ್ರವಲ್ಲದೇ, ಒಕ್ಕಲುತನ ಹಾಗೂ ಗ್ರಾಮೀಣ ಉದ್ದಿಮೆಗಳಿಗೂ ಬ್ಯಾಂಕುಗಳು ಉದಾರವಾಗಿ ಸಾಲ ನೀಡಿ ಸಹಕರಿಸಬೇಕೆಂದು ಒತ್ತಿ ಹೇಳಿದರು.

ಕೊನೆಯಲ್ಲಿ ಹುಬ್ಬಳ್ಳಿ ಸಿಟಿ ಬ್ಯಾಂಕು ಅತ್ಯುತ್ತಮ ಬ್ಯಾಂಕುಗಳಲ್ಲೊಂದಾದ ವಿಜಯ ಬ್ಯಾಂಕಿನೊಂದಿಗೆ ವಿಲಯನ ಹೊಂದಿದುದರಿಂದ ಇನ್ನು ಹೆಚ್ಚಿನ ಸೇವೆಗೆ ಅನುಕೂಲ ಹಾಗೂ ಅವಕಾಶ ಇದೆ ಎಂದು ಹೇಳಿ ಬ್ಯಾಂಕಿಗೆ ಶುಭಕೋರಿದರು.

ಪ್ರಾರಂಭದಲ್ಲಿ ವಿಜಯಾ ಬ್ಯಾಂಕಿನ ದಕ್ಷ ಕಾರ್ಯದರ್ಶಿಗಳಾದ ಶ್ರೀ. ಪಿ. ಜಯರಾಮ ಶೆಟ್ಟರು 35 ವರ್ಷಗಳ ಹಿಂದೆ ಜಿಲ್ಲೆಯ ಮುಂದಾಳು ದಿ| ಎ. ಬಿ. ಶೆಟ್ಟಿ ರಿಂದ ಮಂಗಳೂರಲ್ಲಿ ಸ್ಥಾಪಿಸಲ್ಪಟ್ಟ ವಿಜಯಾ ಬ್ಯಾಂಕು ಮೈಸೂರು, ಮಹಾರಾಷ್ಟ್ರ, ಕೇರಳ ಮತ್ತು ಮದ್ರಾಸು ರಾಜ್ಯಗಳಲ್ಲಿ 60 ಶಾಖೆಗಳನ್ನು ಹೊಂದಿದ್ದು ಅದು ಸಲ್ಲಿಸುತ್ತಿರುವ ಸೇವೆಯನ್ನೂ ಗಳಿಸಿರುವ ಜನಪ್ರಿಯತೆಯನ್ನೂ ವಿವರಿಸಿದರು. ಕೊನೆಯಲ್ಲಿ ವಿಲೀನಗೊಂಡ ಸಿಟಿ ಬ್ಯಾಂಕಿನ ಅಧ್ಯಕ್ಷ ಶ್ರೀ ಬಿ. ಎ. ದೇಸಾಯಿಯವರು ತಮಗೆ ಹಾಗೂ ತಮ್ಮ ಬ್ಯಾಂಕಿಗೆ ಈ ತನಕ ದೊರೆತ ಸಹಕಾರಕ್ಕಾಗಿ ಜನತೆಗೆ ಕೃತಜ್ಞತೆ ಸಲ್ಲಿಸಿದರು. ರಾಷ್ಟ್ರಗೀತೆಯೊಂದಿಗೆ ಸಭಾಂತ್ಯವಾಯಿತು. ಸಮಾರಂಭಕ್ಕೆ ಗಣ್ಯ ವ್ಯಕ್ತಿಗಳನೇಕರು ಆಗಮಿಸಿದ್ದರು.

ಮತದಾತನ ಕಿವಿಮಾತು

(ಒಂಭತ್ತನೇ ಪುಟದಿಂದ)

ಈಗ ಕಾಂಗ್ರೆಸ್ಸನ್ನು ಅಧಿಕಾರದಿಂದ ಕಿತ್ತೊಗೆಯಬೇಕು ಎಂದು ಘೋಷಿಸುವಾಗ ಸದಸ್ಯರನ್ನೇಕೆ ಮತದಾರ ಕೇಳಿಯೇ ಕೇಳುತ್ತಾನೆ — ಮತ್ಯಾರನ್ನು ಏರಿಸಬೇಕು ಸ್ವಾಮೀ?

ಇದಕ್ಕನುತ್ತರ?—ಸಮರ್ಪಕ ಉತ್ತರವಾವುದು?

ಇದನ್ನು ಎಲ್ಲರೂ ಗಂಭೀರವಾಗಿ ಯೋಚಿಸಬೇಕು — ಅರಾಜಕತೆಗೆ ಅವಕಾಶ ನೀಡಬಾರದು.

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

O.S. No. 332/1962 R.L.P.25/1966

ಅರ್ಜಿದಾರ—ಚಿಕ್ಕಯ್ಯ ಸೆಟ್ಟಿ

ಯದ್ರು ಲಚ್ಚಮ್ಮ ಸೆಟ್ಟಿ ಕುಂದಾ

ಈ ಅಪ್ಲಿಕ್ಯಾಂಟ್ 6ನೇ ಯದ್ರು ಬಚ್ಚಿ ಸೆಟ್ಟಿ ಮಗಳು ಗಿಂದಮ್ಮ ಸೆಟ್ಟಿ, ಕುಂಭಾಶಿ ಗ್ರಾಮದಲ್ಲಿರುವವಳು ಯಾವಳಿಗ ಈ ಮೂಲಕ ತಿಳಿಯಪಡಿಸುವದೇನೆಂದ್ರೆ—

ಮೇಲೆ ಕಂಡ ಅಪ್ಲಿಕ್ಯಾಶಿಯಲ್ಲಿ ಅರ್ಜಿದಾರನು ಮೇಲಿನ ಯದ್ರುರು ವಿರುದ್ಧ ಹಾಕಿದ R.E.P. 25/1966ನೇ ವ್ಯವಹಾರದಲ್ಲಿ ಅಸ್ತಿ ಯೇಲಂಮ್ಮನ ಕುರಿತು ಮಾಸ್ತಿಹಾರು ಪತ್ರ ನಿರ್ಣಯ್ಸುವರ ಮೇಲಿನ ಅಪ್ಲಿಕ್ಯಾಶಿಯು ತಾರೀಕು 28-9-1966ಕ್ಕೆ ಮೇಲಿನ ಕೋರ್ಟಿನಲ್ಲಿ ತನ್ನಿಗೆ ಯಿಟ್ಟಿರುತ್ತದೆ. ಆ ಕುರಿತು ಯೇನಾದ್ರೂ ಅಕ್ಷೇಪಗಳಿದ್ದರೆ ಸದ್ರಿ ಕೋರ್ಟಿನಲ್ಲಿ ತನ್ನಿ ದಿವ್ಸ ತಾರೀಕು 28—9—1966ನೇ ಹಗಲು ಗಂಟೆ 11ಕ್ಕೆ ಹಾಜ್ರಾಗಿ ಬ್ಯಾಹೀರು ಮಾಡಿಕೊಳ್ಳತಕ್ಕದ್ದು ಯೆಂದು ಸಂಗ್ತಿ ಈ ಮೂಲಕ ತಿಳಿಯಪಡ್ಸಲಾಗಿದೆ. ಯಿಲ್ಲವಾದಲ್ಲಿ ನಿಮ್ಮನ್ನು ಯಕ್ಸಪಾರ್ಟೆಯಂತೆ ತೀರ್ಮಾನಿಸಲಾದೀತು.

K. Raghunath Shenoi

Advocate for Petitioner

ತಾ. 28-8-66, ಮೊಕ್ಕಾಂ ಕುಂದಾಪುರ

ಲಾ ಕಾಲೇಜ್ ಯೂನಿಯನ್ ಉದ್ಘಾಟನೆ

ಉಡುಪಿ ಲಾ ಕಾಲೇಜ್ ಯೂನಿಯನ್ನಿನ ಉದ್ಘಾಟನೆಯು ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿಯ ಸದಸ್ಯ ಶ್ರೀ ಪಿ. ಕೋದಂಡರಾಯರಿಂದ ಎಂ.ಜಿ.ಎಂ. ಕಾಲೇಜಿನ ಪ್ರಿನ್ಸಿಪಾಲ್ ಶ್ರೀ ಕು.ಶಿ. ಹರಿದಾಸ ಭಟ್ಟರ ಅಧ್ಯಕ್ಷತೆಯಲ್ಲಿ ಕಳೆದ ತಾ. 27ರಂದು ನೆರವೇರಿತು. ಪ್ರಾರಂಭದಲ್ಲಿ ಯೂನಿಯನ್ ಅಧ್ಯಕ್ಷ ಶ್ರೀ ಸಿ. ಐ. ಅಲೆಕ್ಸಾಂಡರ್‌ರವರು ಸ್ವಾಗತಿಸಿದ ನಂತರ ಕಾರ್ಯದರ್ಶಿ ಶ್ರೀ ಕೆ. ಅಪ್ಪು ಶೆಟ್ಟರು ಸಮಾರಂಭಕ್ಕೆ ಶುಭಕೋರಿ ಬಂದ ಸಂದೇಶಗಳನ್ನೋದಿದರು. ಕಾಲೇಜಿನ ಪ್ರಿನ್ಸಿಪಾಲ್ ಡಿ. ಜಿ. ದೇಶಪಾಂಡೆಯವರು ಮಾನ್ಯ ಅತಿಥಿಗಳ ಪರಿಚಯ ಮಾಡಿಕೊಟ್ಟರು.

ಶ್ರೀ ಪಿ. ಕೋದಂಡ ರಾಯರು ಮಾತನಾಡುತ್ತಾ, ನ್ಯಾಯಾಲಯಗಳು ತಮ್ಮ ಕಾರ್ಯ ನಿರ್ವಹಣೆಯಲ್ಲಿ ಸತ್ಪರಂಪರೆಯನ್ನು ಹೊಂದಬೇಕಾಗಿದ್ದರೆ ನ್ಯಾಯಮೂರ್ತಿಗಳ ನೇಮಕವು ರಾಜಕೀಯವಾಗಬಾರದೆಂದೂ ನ್ಯಾಯಮೂರ್ತಿಗಳ ಪರಿಸ್ಥಿತಿ ತುಂಬಾ ಸುಧಾರಿಸಬೇಕೆಂದೂ ನುಡಿದರು.

ಅಧ್ಯಕ್ಷರು ಭಾಷಣದ ನಂತರ ಕಾರ್ಯದರ್ಶಿ ಶ್ರೀ ಅಪ್ಪು ಶೆಟ್ಟರು ವಂದನಾರ್ಪಣೆಗೈದರು.

ಮಂಗಳೂರು ಮತ್ತು ಬಂಟ್ವಾಳದಲ್ಲಿ ಸೈನ್ಯಕ್ಕೆ ಭರ್ತಿ

ಭಾರತೀಯ ಸೈನ್ಯ ಮತ್ತು ನೌಕಾದಳಗಳಿಗೆ ಭರ್ತಿ ಮಾಡಲು ಮಂಗಳೂರು ಮತ್ತು ಬಂಟ್ವಾಳದಲ್ಲಿ ಆಯ್ಕೆ ನಡೆಸಲಾಗುವುದು. ತಾ. 7—9—66ರಂದು ಬಂಟ್ವಾಳದ ಪ್ರವಾಸೀ ಮಂದಿರದಲ್ಲೂ ತಾ. 8—9—66 ಮತ್ತು 9—9—66ರಂದು ಮಂಗಳೂರಿನ ಪಾಂಡೇಶ್ವರದ ಮುನಿಸಿಪಲ್ ಪ್ರವಾಸೀ ಮಂದಿರದಲ್ಲೂ ಭರ್ತಿಮಾಡಲಾಗುವುದು. ಸೇರಲಿಚ್ಛಿಸುವವರು ಅವರ ಶಾಲೆಯ ಹಾಗೂ ನಡತೆಯ ಸರ್ಟಿಫಿಕೇಟುಗಳನ್ನು ತಮ್ಮೊಂದಿಗೆ ತರಬೇಕು.

ನಿವೃತ್ತ ಸೈನಿಕರನ್ನೂ ಎನ್.ಸಿ.ಸಿ. ಮತ್ತು ರಕ್ಷಾದಳಕ್ಕೂ ಆಯ್ಕೆ ನಡೆಸಲಾಗುವುದು. ಯುವ ಜನರು ಮತ್ತು ನಿವೃತ್ತ ಸೈನಿಕರು ಈ ಸಂದರ್ಭವನ್ನು ಉಪಯೋಗಿಸಬೇಕಾಗಿ ಕೇಳಿಕೊಳ್ಳಲಾಗಿದೆ.

ದಕ್ಷಿಣ ಕನ್ನಡ ಜಿಲ್ಲಾ ನಾಟಕ ಸ್ಪರ್ಧೆ

"ಕಲಾ ಭವನ" (ರಜಿಸ್ಟರ್ಡ್) ಇದರ ವತಿಯಿಂದ ಜಿಲ್ಲಾ ಮಟ್ಟದ ನಾಟಕ ಸ್ಪರ್ಧೆಯು ಇದೇ ಅಕ್ಟೋಬರ ತಾ. 16ನೇ ಆದಿತ್ಯವಾರದಿಂದ ತಾ. 23ನೇ ರವಿವಾರದ ವರೆಗೆ ಮಂಗಳೂರಿನ ಡಾನ್ ಬೋಸ್ಕೊ ಹಾಲ್‌ನಲ್ಲಿ ನಡೆಸಲ್ಪಡುವುದು.

ಸ್ಪರ್ಧೆಯಲ್ಲಿ ಭಾಗವಹಿಸಲಿಚ್ಛಿಸುವ ನಾಟಕ ಸಂಸ್ಥೆಗಳು ನಿಯಮಾವಳಿಗನುಸಾರ ಪ್ರವೇಶ ಪತ್ರವನ್ನು ತುಂಬಿಸಿ, 10—9—1966ನೇ ಶನಿವಾರದೊಳಗೆ ಕಲಾಭವನಕ್ಕೆ ತಲುಪಿಸತಕ್ಕದ್ದು. ಸ್ಪರ್ಧೆಗೆ ಬಂದ ನಾಟಕಗಳನ್ನು ಪರಿಶೀಲಿಸಿ, ಆಯ್ಕೆಗಳನ್ನು ತಾ. 18—9—66ರಂದು ಪ್ರಕಟ ಗೊಳಿಸಲಾಗುವುದು. ಉತ್ತಮ ನಾಟಕಗಳಿಗೆ ರೂ. 300, ರೂ. 200, ರೂ. 100ರ ಮೂರು ಮತ್ತು ಇತರ ಬಹುಮಾನಗಳನ್ನು ಕೊಡಲಾಗುವುದು. ಹೆಚ್ಚಿನ ವಿವರಗಳಿಗೆ— ಕಾರ್ಯದರ್ಶಿ, ಕಲಾಭವನ, ಕೆ. ಎಸ್. ರಾವ್ ರೋಡು, ಮಂಗಳೂರು—1.

ಹಾಜೀಯಾತ್ರೆಯ ನಿರ್ಬಂಧನೆಗಳು

ಈ ವರ್ಷ ಸೌದೀ ಅರೇಬಿಯಾಕ್ಕೆ ಹಾಜೀ ಯಾತ್ರೆಗೆ ಹೋಗುವ ಯಾತ್ರಿಕರ ಮೇಲೆ ಕೇಂದ್ರ ಸರಕಾರವು ಕೆಲವು ನಿರ್ಬಂಧನೆಗಳನ್ನು ಹೊರಿಸಿದೆ. ಯಾತ್ರೆಗೆ ರೂ. 600ಕ್ಕಿಂತ ಕಡಿಮೆ ತೆಗೆದುಕೊಂಡು ಹೋಗುವವರು, ರೋಗವುಳ್ಳವರು, 5—14 ವರ್ಷ ಪ್ರಾಯದೊಳಗಿರುವವರು ಮತ್ತು ಗರ್ಭಿಣಿಯರು ಯಾತ್ರೆ ಕೈಗೊಳ್ಳಲು ಬಿಡಲಾಗುವುದಿಲ್ಲ. ಯಾತ್ರೆಯನ್ನು ಕೈಗೊಳ್ಳುವವರು, ರಿಜಿಸ್ಟರ್ಡ್ ವೈದ್ಯರಿಂದ, ತಾವು ಯಾವುದೇ ರೋಗದಿಂದ ಬಳಲುವುದಿಲ್ಲವೆಂದು ಸರ್ಟಿಫಿಕೇಟನ್ನು ತರಬೇಕು. ಮತ್ತು ಕಳೆದ 5 ವರ್ಷಗಳಿಂದ ಹಾಜೀ ಯಾತ್ರೆಯನ್ನು ಕೈಗೊಳ್ಳಲಿಲ್ಲವೆಂದು ಮ್ಯಾಜಿಸ್ಟ್ರೇಟ್, ತಹಸೀಲ್ದಾರ್ ಗಜೆಟೆಡ್ ಆಫೀಸರ್ ಅಥವಾ ಮುಂಬಯಿಯ ಹಾಜೀ ಕಮಿಟಿಯ ಸದಸ್ಯರ ಮುಂದೆ ಹೇಳಿಕೆಯನ್ನು ಬರೆದು ಒದಗಿಸಬೇಕು.

ಆಹಾರದ ಅಭಾವವು ಯಾತ್ರಿಕರಿಗೆ ತುಂಬಾ ಇರುವುದರಿಂದ ಮುಂಬಯಿಯ ಪೋರ್ಟ್ ಹಾಜ ಕಮಿಟಿಯು ಭಾರತದ ಆಹಾರದ ಪಾಕೇಟುಗಳನ್ನು, ಸೌದೀ ಅರೇಬಿಯಾಕ್ಕೆ ಹೋಗುವ ಯಾತ್ರಿಕರಿಗಾಗಿ ಕೊಂಡು ಹೋಗಿ, ಜೆಡ್ಡಾದಲ್ಲಿ ಅವರಿಗೆ ತಲುಪಿಸುವುದು. ಹೆಚ್ಚು ಯಾತ್ರಿಕರು ಇದನ್ನು ತೆಗೆದು ಕೊಳ್ಳದೆ ಸೌದೀ ಅರೇಬಿಯಾದಲ್ಲಿ ದೊರೆಯುವ ಆಹಾರದ ಮೇಲೆ ಹೊಂದಿ ಕೊಂಡಿರುತ್ತಾರೆ. ಅಲ್ಲಿ ಆಹಾರದ ಕೊರತೆಯಿರುವುದರಿಂದ ಮತ್ತು ಹೆಚ್ಚು ಬೆಲೆ ಕೊಡಬೇಕಾದುದರಿಂದ ಯಾತ್ರಿಕರು ಹೆಚ್ಚು ಕಷ್ಟಕ್ಕೆ ಗುರಿಯಾಗುತ್ತಾರೆ. ಈ ಪಾಕೆಟುಗಳನ್ನು ಯಾತ್ರಿಕರು ಕಡ್ಡಾಯವಾಗಿ ತೆಗೆದುಕೊಳ್ಳಬೇಕೆಂದು ನಿರ್ಬಂಧಿಸಲಾಗಿದೆ.

ಶ್ರಮದಾನ

ಮಿತ್ತ ಬಾಗಿಲು, ತಾ. 28—8—1966ರಲ್ಲಿ ಮಿತ್ತಬಾಗಿಲು ಬೋರ್ಡ್ ಎಲಿಮೆಂಟರಿ ಶಾಲೆಯ ಆವರಣ ರಚಿಸುವ ಬಗ್ಗೆ ಗ್ರಾಮ ಪಂಚಾಯತ್, ಶಾಲಾಭಿವೃದ್ಧಿ ಸಮಿತಿ, ಯುವಕ ಮಂಡಲಗಳ ಸದಸ್ಯರು, ಬಂಗಾಡಿ ಮತ್ತು ಮಿತ್ತ ಬಾಗಿಲು ಗ್ರಾಮಸೇವಕರು, ಬೇಸಿಕ್ ಹೆಲ್ತ್ ವರ್ಕರು, ನೆರೆಕರೆ ಶಾಲೆಯ ಉಪಾಧ್ಯಾಯರುಗಳೂ, ಊರ ಪರವೂರ ವರ್ಗದವರು, ರೈತ ಬಂಧುಗಳು, ಕೃಷಿಕಾರ್ಮಿಕರೂ ಒಟ್ಟು 44 ಮಂದಿ ಶ್ರಮದಾನ ಕಾರ್ಯ ನೆರವೇರಿಸಿದರು. ಶ್ರೀ ವಿ.ರಾಮಪ್ಪಯ್ಯನವರಿಂದ ಧ್ವಜ ಅರಳಿಸಲ್ಪಟ್ಟು ಶ್ರಮದಾನ ಪ್ರಾರ್ಥನೆಯೊಡನೆ ಕಾರ್ಯಾರಂಭ ಮಾಡಿ ಕೊನೆಗೆ ರಾಷ್ಟ್ರಗೀತೆಯೊಂದಿಗೆ ಕಾರ್ಯ ಮುಗಿಯಿತು. ಆ ದಿನ ಜರಗಿದ ಶ್ರಮದಾನದಿಂದ ಒಟ್ಟು ಒಂದು ನೂರೈವತ್ತು ಕೆಲ್ಸ ಸಂಪೂರ್ಣಗೊಂಡು ಶಾಲೆಯ ಭದ್ರವಾದ ಆವರಣ ನಿರ್ಮಾಣವಾಗಿರುತ್ತದೆ.

ದಯಮಾಡಿ ವಿಚಾರಿಸಿರಿ

ಶಾಲೆಗಳಿಗೆ ಬೇಕಾಗುವ

ರಿಜಿಸ್ಟ್ರಿ ಫಾರ್ಮುಗಳಿಗೆ—

ವ್ಯಾಪಾರಿಗಳಿಗೆ ಬೇಕಾಗುವ

ವರ್ಗ, ಊಳಿಗ ಮೊದಲಾದ

ಎಕೌಂಟು ಪುಸ್ತಕಗಳಿಗೆ—

ಕೋರ್ಟುಗಳಿಗೆ ಬೇಕಾಗುವ ಎಲ್ಲಾ ತರದ

ಫಾರ್ಮುಗಳಿಗೆ ವಿಚಾರಿಸಿರಿ

ನವಯುಗ ಪ್ರೆಸ್

ಮುದ್ರಕರು ಮತ್ತು ಪ್ರಕಾಶಕರು,

ಪಾಲುಕೋಟೆ, ಉಡುಪಿ, ದ. ಕನ್ನಡ.

ವೈಷ್ಣವ ಶಿಖಾಮಣಿ

ಕನಕದಾಸ ರಚಿತ

ಹರಿಭಕ್ತಿಸಾರ

ಎಂಬ ಅಮೂಲ್ಯ ಕೃತಿಯನ್ನು

ನೀವು ಓದಿರುವಿರಾ?

ಚಂಚಲವಾದ ಮನಸ್ಸನ್ನು ಶುಭಕರವಾದ ವಿಷಯದ ಮೇಲೆ ಕೇಂದ್ರೀಕರಿಸಿ ಸತ್ಕಾರ್ಯಗಳಲ್ಲಿಯೇ ತತ್ಪರವಾಗುವಂತೆ ಮಾಡುವ ಕೃತಿ.

ಬೆಲೆ: 0-19 ಪೈಸ:

0-30 ಪೈಸೆ ಸ್ಟಾಂಪು ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಿನಿಂದ ಕಳಿಸಬಹುದು. ರಖಂ ಪ್ರತಿಗಳಿಗೆ ವಿಚಾರಿಸಿರಿ.

ನವಯುಗ ಪ್ರೆಸ್, ಉಡುಪಿ.

ಹುಬ್ಬಳ್ಳಿ ... ಶ್ರೀ ...

ಓದಿಸಿ ಮೂರ್ತಿ

(ಮೂರನೇ ಪುಟದಿಂದ)

ಲುಗೊಳಿಸುತ್ತ ಬರುವುದನ್ನು ಕೈಬಿಟ್ಟು ಬಿಗಿಗೊಳಿಸಬೇಕು—ಉಗ್ರಾತಿಉಗ್ರ ನೀತಿಯನ್ನಾದರೂ ತಳೆಯಬೇಕು. ಬಂಗಾರ ಪಡೆಯುವುದರಿಂದ ಹುಚ್ಚರಾಗುತ್ತಾರೆ; ಮದ್ಯ ಕುಡಿಯುವುದರಿಂದ ಮರುಳರಾಗುತ್ತಾರೆ ಮಾತ್ರವಲ್ಲ ತನ್ನನ್ನೂ ಇತರರನ್ನೂ ಸಮಾಜವನ್ನೂ ಅವರು ಕೆಡಿಸುತ್ತಾರೆ.

ಪದ್ಮಶ್ರೀ ಗೋಕಾಕ

ಕನ್ನಡದ ಸವ್ಯಸಾಚಿಗಳಲ್ಲಿ ಒಬ್ಬರಾದ ಶ್ರೀ ವಿನಾಯಕ ಕೃಷ್ಣ ಗೋಕಾಕರನ್ನು ಬೆಂಗಳೂರು ವಿಶ್ವವಿದ್ಯಾಲಯದ ಉಪಕುಲಪತಿಗಳಾಗಿ ಆಯ್ಕೆ ಮಾಡಿದುದು ಸ್ವಾಗತಾರ್ಹವೇ. ಕೊನೆಗೂ ಈ ಸರಸ್ವತೀ ಮಂದಿರದ ಪ್ರಧಾನಾರ್ಚಕ ಹುದ್ದೆಗೆ ಒಬ್ಬ ಕನ್ನಡಿಗನೇ ಅರ್ಹನೆನಿಸುವ ಪ್ರಮೇಯ ಒದಗಿ ಬಂದುದು ಕನ್ನಡಿಗರ ಅದೃಷ್ಟ. ಸದ್ಯ ಹೈದರಾಬಾದದ ಇಂಗ್ಲಿಷ್ ಸಂಶೋಧನಾ ಸಂಸ್ಥೆಯ ಡೈರೆಕ್ಟರರಾಗಿರುವ ಇವರು ಪ್ರಜ್ಞಾವಂತ ಕನ್ನಡಿಗರಲ್ಲಿ ಒಬ್ಬರು. ಇಂಗ್ಲಿಷ್ ಪ್ರಾಧ್ಯಾಪಕರಾದರೂ ಅದಕ್ಕಿಂತ ಹೆಚ್ಚು ಕನ್ನಡದ ಮೇಲೆ ಅಧೀನತೆಯಿರುವವರು, ಉತ್ತಮ ಕಾದಂಬರಿಕಾರರು, ಕವಿಗಳು, ನಾಟಕಕಾರರು, ವಿಮರ್ಶಕರೂ ಹೌದು. ಸಾಹಿತ್ಯದ ಮೌಲ್ಯಮಾಪನದಲ್ಲಿ ಇವರು ಸಿದ್ಧಹಸ್ತರು. ಇಂತಹ ಕನ್ನಡದ ವರಪುತ್ರನಿಗೆ ಹೊಸತಾಗಿ ಸ್ಥಾಪಿತವಾದ, ಮುಂದೆ ಕೇಂದ್ರ ಸರಕಾರವು ವಹಿಸಿಕೊಳ್ಳುವ ನಿರೀಕ್ಷೆಯಿರುವ, ಬಹಳಷ್ಟು ಬೆಳೆದು ಬರಬೇಕಾದ, ಸರಸ್ವತಿಯ ಸಂಪೂರ್ಣ ಸಾನ್ನಿಧ್ಯವನ್ನು ರೂಪಿಸುವ ಅಗತ್ಯವಿರುವ ವಿಶ್ವವಿದ್ಯಾಲಯದ ಉಪಕುಲಪತಿ ಪದ ದೊರೆತುದು ನಮ್ಮ ಸೌಭಾಗ್ಯ. ಹಲವು ಪ್ರಶಸ್ತಿಗಳನ್ನೂ ಗಳಿಸಿರುವ ಪದ್ಮಶ್ರೀ ಗೋಕಾಕರು ಶಿಕ್ಷಣ ಕ್ಷೇತ್ರದಲ್ಲಿ ಆಯುಷ್ಯ ತೇದವರು. ಅವರಿಗೆ ಈ ಹೊಸ ಹುದ್ದೆಯು ಸುಖಪ್ರದವಾಗಲಿ ಜನತೆಯ ಆಶೋತ್ತರಗಳನ್ನು ಅವರು ಪೂರೈಸಲಿ.

ಕಾರ್ಕಳ ಮುನ್ಸಿಫ್ ಕೋರ್ಟಿನಲ್ಲಿ

O. S. 204/1966.

ಬಾಯಮ್ಮ ಯಾನೆ ಸರಸ್ವತಿ ಅಮ್ಮ—
—ವಾದಿಳು

ಬೆಪ್ರ್ ಮೈಲಿ ಸಹಾ—ಪ್ರತಿವಾದಿಗಳು,

6. ಕುತ್ಲು ಯಾನೆ ಕಾಮೂರು, 7. ಭೋಜ ಮೈಲಿ—ಚೀಂಕು ಮೈಲಿಗಳ ಮಕ್ಕಳು, ಕಾರ್ಕಳ ತಾಲ್ಲೂಕು ಪಾಲಡ್ಕ ಗ್ರಾಮದ ದುಗ್ಗು ಬೆಟ್ಟು ಎಂಬಲ್ಲಿರುವವರು—

ನೀವು ದ ಮಿಕ್ಕ ಪ್ರತಿವಾದಿರು ವಾದಿ ವಳಗೆ ಚಾಲ ಗೇಣಿಗೆ ಅನುಭವಿಸಿ ಬರುವ ಆಸ್ತಿ ಬಾಬ್ತು ವಾದಿಳಿಗೆ ಕಳೆದ ಕ್ರೋಧಿ ಸಂವತ್ಸರದ ಅಂತ್ಯಕ್ಕೆ ಬರತಕ್ಕ ಬಾಲಗೇಣಿ ಗೇಣಿ ಬಡ್ಡಿ ಕೂಡಾ ರೂ. 748—80ಕ್ಕೆ ವಾದಿಳು ನಿಮ್ಮ ಮೇರೆ ದಾಕ್ಲು ಮಾಡಿದ ಸದ್ರಿ ದಾವೆಯು ತಾರೀಕು 16—9—1966ಕ್ಕೆ ನಿಮಗೆ ಅಕ್ಬರ ನೋಟೀಸಿಗೆ ಇಟ್ಟಿದೆ. ಆಕ್ಷೇಪಣೆ ಇದ್ರೆ ಸದ್ರಿ ದಿನ ಬೆಳಗ್ಗೆ 10 ಘಂಟೆಗೆ ನೀವು ಮೇಲ್ಕಂಡ ಕೋರ್ಟು ಮುಂದೆ ಹಾಜರಾಗಿ ಉದಾರ ರಪೆ ಕೊಡತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರುಹಾಜ್ರಿಯಲ್ಲಿ ದಾವಾ ತೀರ್ಮಾನವಾಗುವದು ಎಂತ ಕೋರ್ಟು ಹುಕುಂ ಪ್ರಕಾರ ತಿಳಿಸಿಯದೆ.

K. S. Kamath
ವಾದಿಳ ಕಡೆ ಎಡ್ವೋಕೇಟ್

ಕಾರ್ಕಳ, 3—9—66.

ಸುಗಮ ಪಥದತ್ತ ಮುನ್ನಡೆ!

ಶ್ರೀ ಸುಬ್ಬರಾವ್ ಪೈಯವರ ಮುಂದಾಲೋಚನೆಯ ಪ್ರತೀಕವಾಗಿ ಸ್ಥಾಪಿಸಲ್ಪಟ್ಟ ಕೆನರಾ ಬ್ಯಾಂಕು—ಕೇವಲ ಬ್ಯಾಂಕು ವ್ಯವಹಾರಿಕ ಸಂಸ್ಥೆಯಾಗಿರದೆ ಎಲ್ಲಾ ವ್ಯವಹಾರಿಕ ಸಂಸ್ಥೆಗಳ ಮೇಲೆ ತನ್ನ ವರ್ಚಸ್ಸನ್ನು ಹರಿಸಿ—ಮೇಲ್ಮೆಯನ್ನು ಏರಿ ನಿಂತಿದೆ. ರಾಷ್ಟ್ರಾಭಿವೃದ್ಧಿಯ ಕಾರ್ಯದಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತಿದೆ.
ತನ್ನ ಪ್ರಥಮ ಹೆಜ್ಜೆಯಲ್ಲಿ ಕೇವಲ ಒಂದು ಲಕ್ಷಕ್ಕಿಂತಲೂ ಕಡಿಮೆ ಬಂಡವಾಳದಿಂದ ಸ್ಥಾಪಿಸಲ್ಪಟ್ಟ ಕೆನರಾ ಬ್ಯಾಂಕು—ಇಂದವರ ಇನ್ನೂರು ಪಟ್ಟಿಗಿಂತಲೂ ಅಧಿಕ ಬಂಡವಾಳವನ್ನೊಳಗೊಂಡಿರುವುದು, ಬ್ಯಾಂಕಿಗೆ ಅಭಿಮಾನಾಸ್ಪದವಾದ ವಿಷಯ!
ಕೇವಲ 4 ಮಂದಿಯನ್ನೊಳಗೊಂಡು!—ಒಂದೇ ಒಂದು ಶಾಖೆಯನ್ನು ಪಡೆದು!—1906ರಲ್ಲಿ ಸ್ಥಾಪಿತವಾದ ಬ್ಯಾಂಕು—ಇಂದು 240ಕ್ಕಿಂತಲೂ ಹೆಚ್ಚಿನ ಶಾಖೆಗಳನ್ನು ಪಡೆದು—5000ಕ್ಕಿಂತಲೂ ಹೆಚ್ಚು ಮಂದಿ ಕೆಲಸಗಾರರನ್ನು ಒಳಗೊಂಡಿದೆ! ದಕ್ಷಿಣ ಭಾರತದಲ್ಲಿ ಅತೀ ದೊಡ್ಡದೆಂದು ಪ್ರಸಿದ್ಧಿಯನ್ನು ಪಡೆದು, ಬ್ಯಾಂಕುಗಳ ಪೈಕಿ ಭಾರತದಲ್ಲಿ 7ನೆಯ ಸ್ಥಾನವನ್ನು ಪಡೆದಿದೆ.
ಊಹನಾತೀತವಾದ ಪ್ರಗತಿ ಹಸ್ತಗತವಾಗಲು ಪ್ರಮುಖ ಕಾರಣ—ಬ್ಯಾಂಕು ಅನುಸರಿಸಿದ ವಿಚಾರಪೂರಿತ ಹೆಜ್ಜೆ!—ಅನುಸರಿಸುತ್ತಿರುವ ವಿಚಾರವಂದಿತ ಹೆಜ್ಜೆ! ಅದ್ಭುತ ಪ್ರಗತಿ—ಅಖಂಡ ಸಾಧನೆಯಿಂದಲೆ ಕೈವಶ—ಎಂಬುದಕ್ಕೆ ಸಾಕ್ಷಿ ಕೆನರಾ ಬ್ಯಾಂಕ!

ಚಲಾವಣಾ ಸಂಪತ್ತು 110 ಕೋಟಿ ರೂಪಾಯಿಗಳಿಗೂ ಮೀರಿದೆ!
— 240ಕ್ಕೂ ಹೆಚ್ಚು ಶಾಖೆಗಳು!
— ಜಗತ್ತಿನಾದ್ಯಂತ ವ್ಯವಹಾರ!

SERVING TO GROW GROWING TO SERVE · CANARA BANK LTD 1906 1966

60 ವರ್ಷಗಳ ಅವಿರತ ಸೇವೆ—1ನೇ ಜುಲ್ಯಾ 1906—1ನೇ ಜುಲೈ 1966
ಅಖಿಲ ಭಾರತ ವಜ್ರ ಮಹೋತ್ಸವ ಸಮಾರಂಭ
ಜುಲ್ಯಾ—ಡಿಸೆಂಬರ್, 1966

ಕೆನರಾ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸ್: ಲೈಟ್‌ಹೌಸ್ ಹಿಲ್, ಮಂಗಳೂರು
ಆಡಳಿತಾ ಕಚೇರಿ:
112, ಜಯಚಾಮರಾಜೇಂದ್ರ ರೋಡ್, ಬೆಂಗಳೂರು



SISTA'S CB 9 KN

ಮಂತ್ರಿ ಡಾ. ಆಳ್ವರ ಜಿಲ್ಲಾ ಸಂಚಾರ

ಮೈಸೂರು ಸರಕಾರದ ಆರೋಗ್ಯ ಮಂತ್ರಿ ಡಾ। ಕೆ. ನಾಗಪ್ಪ ಆಳ್ವರು ಇದೇ ತಾ12 ರಿಂದ 16ರ ತನಕ ಜಿಲ್ಲಾ ಸಂಚಾರ ಕೈಗೊಳ್ಳುವರೆಂದೂ ಪುತ್ತೂರು, ಮಂಗಳೂರು, ಕಾರ್ಕಳ, ಅಜೆಕಾರು, ಕುಂದಾಪುರ, ಉಡುಪಿ, ಕಟಪಾಡಿ, ಕಾಪು, ಮೂಲ್ಕಿ, ಸುರತ್ಕಲ್, ಮೂಡುಬಿದ್ರೆ, ಬಿ. ಸಿ. ರೋಡು ಮೊದಲಾದ ಕಡೆಗಳಲ್ಲಿ ಸಂಚಾರ ಕಾರ್ಯಕ್ರಮವನ್ನಿಟ್ಟುಕೊಂಡಿರುವರೆಂದೂ ತಿಳಿದುಬರುತ್ತದೆ.

ಶ್ರೀ ಪೊಳಲಿ ಶೀನಪ್ಪ ಹೆಗ್ಡೆಯರ ನಿಧನ

ಹಿರಿಯ ಕಾಂಗ್ರೆಸ್ [illegible] ಹಾಗೂ ತುಳು ಸಾಹಿತ್ಯ ಸಂಸ್ಕೃತಿಗಳ ಅಭಿವೃದ್ಧಿಗಾಗಿ ದುಡಿದು ಸೇವೆಸಲ್ಲಿಸಿದವರೂ ಆದ ಶ್ರೀ ಪೊಳಲಿ ಶೀನಪ್ಪ ಹೆಗ್ಡೆಯವರು ಇದೇ ತಾ. 3ರಂದು ಮಂಗಳೂರು ಗೋರಿಗುಡ್ಡೆಯ ತಮ್ಮ ನಿವಾಸದಲ್ಲಿ 80ನೇ ವಯಸ್ಸಿನಲ್ಲಿ ಹೃತ್ಕ್ರಿಯೆ ನಿಂತು ನಿಧನರಾದರು.

ಆಫೀಸ್ ಕನ್ಯೆ

(ಎರಡನೇ ಪುಟದಿಂದ)

ಆ ದಿನವೂ ಇದನ್ನೇ ಆಲೋಚಿಸುತ್ತಾ ರಸ್ತೆಯ ಬದಿಯ ಒಂದು ಹೋಟೆಲಿಗೆ ತೆರಳಿದನು. ಅಲ್ಲಿ ಇಡ್ಲಿ ಮತ್ತು ಕಾಫಿಗೆ ಹೇಳಿದನು. ಅಲ್ಲಿಯೇ ಸ್ವಲ್ಪ ದೂರದಲ್ಲಿ ತರುಣಿಯೊಬ್ಬಳು ಕಾಫಿ ಹೀರುತ್ತಿದ್ದಳು. ಅವಳ ತಲೆಕೂದಲನ್ನು ನೋಡಿದೊಡನೆಯೇ ಅವಳು ರೋಮೋಲಾಳೆಂದು ಕಂಡು ಹಿಡಿಯಲು ಆತನಿಗೇನೂ ಕಷ್ಟವಾಗಲಿಲ್ಲ. 'ಹಲೋ, ರೋಮೋಲಾ, ನಾನೂ ನಿನ್ನೊಂದಿಗೆ ಸೇರಲೋ?"

ಇಬ್ಬರೂ ಜೊತೆಯಾಗಿ ಕಾಫಿ-ತಿಂಡಿ ಸೇವಿಸಿದರು. ಮಾತುಕತೆಗೆ ಮೊದಲು ಮಾಡಿದರು. ಕೊನೆಗೆ ಮಾತು ಪ್ರೀತಿಗೆ ಮೊದಲಾಯಿತು. 'ರೋಮೋಲಾ ನಾನು ನಿನ್ನನ್ನು ಇಚ್ಛಿಸುತ್ತೇನೆ. ಇದು ನಿನಗೆ ಸಮ್ಮತವೇ?"

ಐದು ನಿಮಿಷ ಇಬ್ಬರೂ ಮೌನವ್ರತ ತಾಳಿದರು. ಆಗ ಸುರೇಶನು—"ನಿನಗೆ ಮನಸ್ಸು ಇಲ್ಲದಿದ್ದರೆ ಹೇಳು" ಎಂದನು.

"ಹಾಗೇನಲ್ಲ. ನಾನು ಆಗಲೇ ನಿಮ್ಮ ಮೇಲೆ ಇಚ್ಛೆಪಟ್ಟಾಗಿದೆ. ಆದರೆ ನಮ್ಮ ತಂದೆ-ತಾಯಂದಿರು ಇದಕ್ಕೆ ಒಪ್ಪಲಾರರೆಂದು ನನ್ನ..."

'ಅದು ಸರಿ. ಓರ್ವ ತರುಣಿಗೆ ತಂದೆ ತಾಯಂದಿರೊಂದಿಗೆ ತನಗೆ ಇಂತವನೇ ಪತಿಯೆಂದು ಹೇಳಿ ಒಪ್ಪಿಸುವುದು ಈಗಿನ ಕಾಲದಲ್ಲಿ ಅಸಾಧ್ಯವಿದೆ. ನಿನಗೆ ತಿಳಿದಿರಬಹುದು. ಹಿಂದೆ ಅಂದರೆ ಪೌರಾಣಿಕ ಯುಗದಲ್ಲಿ ದಮಯಂತಿ, ಸೀತೆ ಇವರೆಲ್ಲಾ ತಾವು ಇಚ್ಛಿಸಿದ ಪತಿಯನ್ನು ಪಡೆದಿದ್ದಾರೆ. ಆಗ ಸ್ವಯಂವರವು ರೂಢಿಯಲ್ಲಿತ್ತು. ಹಾಗೆಂದು ಈಗಲೂ ಅದೇ ರೀತಿ ಮಾಡಲು ನಮಗೆ ಸಾಧ್ಯವಿಲ್ಲ. ಏಕೆಂದರೆ ಕಾಲವು ಬದಲಾಗಿದೆ. ಆದರೂ ತಂದೆ ತಾಯಂದಿರೊಂದಿಗೆ ಸಮಾಲೋಚಿಸಿ ನೋಡು. ನನ್ನ ಫೋನ್ ನಂಬ್ರವನ್ನು ನಿನಗೆ ಕೊಡುತ್ತೇನೆ. ನಿನಗಾಗಿ ಕಾದಿರುತ್ತೇನೆ.' ಎಂದು ಹೇಳುತ್ತಾ ಒಂದು ಕಾಗದದಲ್ಲಿ ತನ್ನ ಫೋನ್ ನಂಬ್ರವನ್ನು ಬರೆದು ಕೊಟ್ಟನು.

o o o o

'ರುಮ್ಮಿ, ನೀನು ಪ್ರಾಯಪ್ರಬುದ್ಧೆಯಾದ ಹುಡುಗಿ. ಬರುವ ವರ್ಷದೊಳಗೆ ನಿನಗೆ ವಿವಾಹವಾಗಬೇಕು."

'ಅಪ್ಪಾ" ಎನ್ನುತ್ತಾ ರೋಮೋಲಾ ಅಳಹತ್ತಿದಳು. ಅನಂತರ ಹೀಗೆಂದಳು "ಅಪ್ಪಾ, ನಿನಗೆ ತಿಳಿಯದ ವಿಷಯವಲ್ಲ. ನಾನು ಆಫೀಸ್‌ನಲ್ಲಿ ಕೆಲಸ ಮಾಡುವವಳು. ಹೀಗೆ ದಿನಾಲೂ ನಾನು ಹೊರಗಿನ ವ್ಯವಹಾರದಲ್ಲಿ ತೊಡಗಿರಲು ಹಲವಾರು ಜನರನ್ನು ನಾನು ಎದುರುಗೊಳ್ಳುವೆನು. ಮಾತನಾಡುವೆನು. ಹಾಗೇ ನಾನು ನನಗಿಚ್ಛೆಯಾದವರನ್ನು ಕಂಡುಹಿಡಿದಲ್ಲಿ ನನ್ನದೇನು ತಪ್ಪು?"

"ತಪ್ಪೋ, ಒಪ್ಪೋ, ಅದೆಲ್ಲಾ ನನಗೆ ತಿಳಿಯದು. ತಂದೆಯಾದವನು ಮಗಳಿಗೆ ಯೋಗ್ಯ ವರನನ್ನು ಕಂಡುಹಿಡಿದು ವಿವಾಹ ಮಾಡಿಕೊಡುವುದು ಧರ್ಮ. 'ಕೊಡಬೇಕುತ್ತಮನಾದವರಿಗೆ ಮಗಳಂ' ಎಂದು ಓರ್ವ ಕವಿಯು ಹೇಳಿದಂತೆಯೇ ನಿನಗೆ ಸುಂದರ ರೂಪಿನಿಂದ ಕೂಡಿರುವವನನ್ನೇ ಆರಿಸಿದ್ದೇನೆ. ನಾನೇಕೆ ಅವನನ್ನು ವರ್ಣಿಸಲಿ? ನೀನೇ ನೋಡು. ಇದೋ ಅವನ ಹಾಫ್ ಸೈಝ್ ಫೋಟೋ" ಎಂದು ಫೋಟೋವನ್ನು ಅವಳ ಮುಂದಿರಿಸಿದ.

ಇನ್ನು ವಾದ ಮಾಡಿ ಉಪಯೋಗವಿಲ್ಲ. ತಂದೆಗೆ ವಿರೋಧವಾಗಿ ನಡೆಯಬಾರದು. ಎಂದು ಫೋಟೋವನ್ನು ಒಂದು ಬಾರಿ ನೋಡಿಯೇ ಬಿಟ್ಟಳು. ಯಾರಿಗಾಗಿ ಆಶಿಸಿದ್ದಳೋ ಅವನೇ ಆ ಫೋಟೋದಲ್ಲಿ ಕಂಡು ಬರಲು ಅವಳ ಸಂತಸಕ್ಕೆ ಮಿತಿಯೇ ಇಲ್ಲ. ಕಣ್ಣೀರು ಸುರಿಸುವುದನ್ನು ನಿಲ್ಲಿಸಿ "ಆಗಲಿ, ಅಪ್ಪಾ. ನಿಮಗೆ ವಿರೋಧವಾಗಿ ನಡೆಯಲಾರೆ. ನಾನು ಆತನನ್ನೇ ವಿವಾಹವಾಗುವೆನು" ಎಂದಳು. ತಂದೆಯು ಕೂಡಲೇ ಆನಂದದಿಂದ ಮಗಳನ್ನು ಬರಸೆಳೆದು ಬೆನ್ನಿಗೆರಡೇಟು ಕೊಟ್ಟನು.

o o o o

ಅತ್ತ ಕರೋಲ್‌ಭಾಗ್‌ನಲ್ಲಿ ಸುರೇಶನೊಂದಿಗೆ ಅವನ ತಂದೆ-ತಾಯಂದಿರು ಸಮಾಲೋಚನೆ ನಡೆಸುತ್ತಿದ್ದಾರೆ. ಆಗ ಅವನ ತಾಯಿಯು ಅವನ ಮುಂದೆ ಬಂದು "ಸುರೇಶ, ನಿನ್ನ ತಂದೆಗೆ ವಿರುದ್ಧವಾಗಿ ನಡೆಯಬೇಡ. ಹೇಳಿದಂತೆ ಕೇಳು. ಹುಡುಗಿಯು ಚಂದವಾಗಿದ್ದಾಳೆ, ವಿದ್ಯೆ ಕಲಿತ್ತಿದ್ದಾಳೆ, ಆಫೀಸ್‌ನಲ್ಲಿ ದುಡಿಯುತ್ತಾಳೆ. ಸ್ವಭಾವವೂ ಶಾಂತವಾಗಿದೆಯಂತೆ. ಅವಳೇ ಈ ಗೃಹದ ಲಕ್ಷ್ಮಿಯಾಗಲಿ' ಎಂದು ಹೇಳುತ್ತಾ ತಾನು ಬಳಗಿಟ್ಟಿದ್ದ ಅವಳ ಫೋಟೋವನ್ನು ತಂದು, "ನೋಡು! ಎಷ್ಟು ಚಂದವಿದ್ದಾಳೆ"! ಎಂದು ತೋರಿಸಲು ಸುರೇಶನು ಸಿಟ್ಟಿನಿಂದ ಅತ್ತ ಕಡೆಗೆ ಮುಖವನ್ನು ತಿರುಗಿಸಿದನು. ಆಗ ತಾಯಿಯು 'ನೋಡು, ನೋಡು, ಇದು ಅವಳದೇ ಪ್ರತಿರೂಪ." ಎನ್ನಲು ಸುರೇಶನು ಕೊನೆಗೆ ಹೇಗೂ ಆ ಫೋಟೋವನ್ನು ನೋಡಿದನು. ಆದರೆ ಐದು ನಿಮಿಷಗಳ ತನಕ ಆತನಿಗೆ ಮಾತೇ ಹೊರಡಲಿಲ್ಲ. ಆಗ ಆತನ ತಾಯಿಯು ತಲೆಯಲುಗಾಡಿಸುತ್ತಾ—'ನನಗೆ ಗೊತ್ತು ನೀನು ಅವಳನ್ನು ನೋಡಿದ ಮಾತ್ರದಲ್ಲೇ ಒಲಿಯುವಿಯೆಂದು. ಅದಲ್ಲದೆ ಅವಳಿಗೆ ಚಂದವಾದ ಹೆಸರೂ ಇದೆ." ಎಂದು ಹಾಸ್ಯ ಮಾಡಿದಳು.

ಸುರೇಶನಿಗೆ ಮಾತೇ ಹೊರಡಲಿಲ್ಲ. "ಅವಳ ಹೆಸರು ರೋಮೋಲಾ' ಎಂದು ಅವನ ತಾಯಿ ಅಂದಳು. ಅಲ್ಲದೆ 'ಅವಳನ್ನು ಬಿಟ್ಟರೆ ನಿನಗೆ ಅಂತಹ ವಧು ಬೇರೆ ಸಿಗಲಾರದು" ಎಂದೂ ಎತ್ತಿ ಹೇಳಿದಳು.

ಸುರೇಶನಿಗೆ ತನ್ನ ಮನೆಯು ಗರಗಂನೆ ತಿರುಗುತ್ತಿರುವಂತೆ ಭಾಸವಾಯಿತು. ತಲೆ ತಿರುಗಿದಂತಾಯಿತು. ಕಣ್ಣು ಕತ್ತಲೆ ಬಂದು, ಒಂದು ರೀತಿಯ ಆನಂದದೊಂದಿಗ, ಕೋಲಾಹಲದೊಂದಿಗೆ ಕುಳಿತುಕೊಳ್ಳಲು ಕುರ್ಚಿಗಾಗಿ ತಡಕಾಡಿದನು.

(ಆಂಗ್ಲ ಕಥೆಯ ಆಧಾರದಿಂದ.)

ಕಲಾತ್ಮಕ ರಕ್ಷಾಕವಚ

ಬೆಲೆ: ರೂ. 1—50

ನವಯುಗ ಪ್ರೆಸ್, ಉಡುಪಿ – ಅಥವಾ – ನವಭಾರತ ಪುಸ್ತಕ ಭಂಡಾರ, ಉಡುಪಿ

ಬೆಳ್ತಂಗಡಿ ಮುನ್ಸಿಫ್ ಕೋರ್ಟಿನಲ್ಲಿ

O. S. 168/64.

ವಿ. ವಿ. ಉಪಾಧ್ಯಾಯ (ರಿಸೀವರ್)—ವಾದಿ

Vs.

ಮುತ್ತಪ್ಪ ಮೂಲ್ಯ —ಪ್ರತಿವಾದಿ.

2ನೇ ಪ್ರತಿ ಕನ್ನಿ ಯಾನೆ ಚೆನ್ನಲಕ್ಷಿಹೆಂಗಸು ಬಾಕು ಹೆಂಗ್ಸನ ಮಗಳು. ಹೊಸಂಗಡಿ ಗ್ರಾಮದ ಬಾಲನಗುತ್ತು ಎಂಬಲ್ಲಿರುವವಳು—

ಕೋರ್ಟು ಮುಖಾಂತ ಪ್ರಕಾರ ತಿಳಿಸುವುದೇನೆಂದರೆ—

ಮೇಲಿನ ವ್ಯಾಜ್ಯವು ತಾ. 16—9—66 ಕ್ಕೆ ನಿಮ್ಮ ಹಾಜರಾತಿ ಬಗ್ಗೆ ಇಟ್ಟಿರುತ್ತದೆ. ನಿಮ್ಮ ಆಕ್ಷೇಪಣೆ ಏನಾದರೂ ಇದ್ದರೆ ಸದ್ರಿ ದಿನ ಬೆಳಗ್ಗೆ 11 ಗಂಟೆಗೆ [illegible] ಪ್ಲೀಡರ ಮುಖಾಂತ್ರ [illegible] ತಪ್ಪಿದಲ್ಲಿ ನಿಮ್ಮನ್ನು ಮೇಲಿನ ವ್ಯಾಜ್ಯದಲ್ಲಿ ಏಕ್ಸ್‌ಪಾರ್ಟಿ ಮಾಡಿ ಮುಂದುವರಿಸಲಾಗುವುದು.

N. J. KADAMBA
Advocate, Belthangaby
ಬೆಳ್ತಂಗಡಿ, 27—8—66.

NAVAYUGA 8—9—1966.

Registered with the Registrar
of News Papers for India
under No. R. N. 3546/'57

REGD. No. B. G. 176
LICENCF No. 31
Licensed to Post without Prepayment

ಪರಿಚಯ

ರಾಷ್ಟ್ರೀಯ ಕ್ಷಯರೋಗ ನಿರೋಧ ಸಂಸ್ಥೆ

ಭಾರತದ ಸರಕಾರದವರು ರಾಷ್ಟ್ರೀಯ ಕ್ಷಯರೋಗ ನಿರೋಧ ಸಂಸ್ಥೆಯನ್ನು ಸ್ಥಾಪಿಸಿದ್ದೇ ೧೯೫೯ ಬೇಸಿಗೆಯಲ್ಲಿ. ನಗರದ ಒಂದು ಮೂಲೆಯಲ್ಲಿರುವ ಹೋಟೆಲ್ ಒಂದರ ಚಿಕ್ಕ ಕೊಠಡಿಯಲ್ಲೇ ಈ ಸಂಸ್ಥೆಯು ಆರಂಭವಾಯಿತು. ವಿಶ್ವ ಆರೋಗ್ಯ ಸಂಸ್ಥೆ ಮತ್ತು ವಿಶ್ವ ಸಂಸ್ಥೆಯ ಮಕ್ಕಳ ನಿಧಿ (ಯುನಿಸೆಫ್) ಸಂಸ್ಥೆಯವರು ಈ ಸಂಸ್ಥೆಯ ಸ್ಥಾಪನೆಗೆ ನೆರವಾದರು. ಇತ್ತೀಚಿನ ಎಲ್ಲಾ ರಾಷ್ಟ್ರೀಯ ಕ್ಷಯರೋಗ ನಿರೋಧ ಕಾರ್ಯಕ್ರಮಗಳಿಗೆ ಮಾರ್ಗದರ್ಶನ ಮಾಡಲು ಅಗತ್ಯವಾದ ಸಂಶೋಧನೆ ನಡೆಸುವ ಹೊಣೆಯನ್ನು ಈ ಸಂಸ್ಥೆಗೆ ವಹಿಸಿಕೊಡಲಾಯಿತು.

ರಾಷ್ಟ್ರೀಯ ಕ್ಷಯರೋಗ ನಿರೋಧ ಸಂಸ್ಥೆಯು ತಕ್ಷಣ ಕಾರ್ಯಾರಂಭ ಮಾಡಿತು. ಅಖಿಲ ಭಾರತ ಬಿ. ಸಿ. ಜಿ. ಅಧ್ಯಯನ ತಂಡದವರ ಸಹಯೋಗ ಪಡೆದು ೧೦ರಿಂದ ೧೪ ವರ್ಷ ವಯೋಮಿತಿಯಲ್ಲಿರುವ ಮಕ್ಕಳು ರೋಗಕ್ಕೀಡಾಗುವ ಪ್ರಮಾಣವನ್ನು ಪರಿಶೀಲಿಸ ತೊಡಗಿತು. ಈ ಕಾರ್ಯಕ್ಕಾಗಿ ಐಕ್ಯಗೊಂಡ ರಾಷ್ಟ್ರೀಯ ಸಿಬ್ಬಂದಿಗೆ, ವಿಶ್ವ ಆರೋಗ್ಯ ಸಂಸ್ಥೆ ಮತ್ತು ಯೂನಿಸೆಫ್ ಪ್ರಶಂಸನೀಯ ನೆರವು ನೀಡಿದವು.

ಮೈಸೂರಿನ ಮಹಾರಾಜರು ಉದಾರವಾಗಿ ನೀಡಿದ "ಅವಲಾನ್" ಅರಮನೆ ರಾಷ್ಟ್ರೀಯ ಕ್ಷಯರೋಗ ಸಂಸ್ಥೆಯ ಹೊಸ ಮನೆಯಾಯಿತು. ದಿವಂಗತ ಪ್ರಧಾನ ಮಂತ್ರಿ ಜವಾಹರ್‌ಲಾಲ್ ನೆಹರೂ ಅವರು ೧೯೬೦ರ ಸೆಪ್ಟೆಂಬರ್ ತಿಂಗಳಲ್ಲಿ ಈ ಸಂಸ್ಥೆಯನ್ನು ಔಪಚಾರಿಕವಾಗಿ ಉದ್ಘಾಟಿಸಿದರು. ನೆಹರೂ ಅವರು ಈ ಸಂದರ್ಭದಲ್ಲಿ ಮಾತನಾಡುತ್ತಾ 'ಈ ಸಮಾರಂಭದ ಉದ್ದೇಶವು ಹೊಸ ಕಟ್ಟಡ ಒಂದರ ಉದ್ಘಾಟನೆಯಲ್ಲವೆಂದೂ ಕ್ಷಯರೋಗ ನಿರೋಧಕ್ಕಾಗಿ ಸಾಮುದಾಯಿಕ ತಳಹದಿಯ ಮೇಲೆ, ಹೊಸ ವಿಚಾರವೊಂದರ ಉದ್ಘಾಟನೆ ಎಂದೂ ನಮಗೆ ತಿಳಿದು ಬಂತು. ನಿಜಕ್ಕೂ ಇದೊಂದು ಅಪೂರ್ವ ವಿಚಾರ. ಈ ಸಂಸ್ಥೆಯು ಕೇವಲ ಕ್ಷಯರೋಗಿಗಳ ಚಿಕಿತ್ಸೆ ಮಾಡುವ ಸಂಸ್ಥೆಯೂ ಅಗಿರದೆ ವಿಶಿಷ್ಟ ಮಹತ್ವದ ಸಂಸ್ಥೆಯಾಗಿದೆ ಎಂದು ಹೇಳಿದರು.

ಇಲ್ಲಿ ಎರಡು ವರ್ಷಗಳ ಕಾಲ ನಿರಂತರ ಸಂಶೋಧನೆ ನಡೆಸಲಾಯಿತು. ಈ ಅವಧಿಯಲ್ಲಿ ಕ್ಷಯರೋಗ ಪ್ರಸಂಗಗಳ ಪತ್ತೆ ಮಾಡುವುದು, ಮತ್ತು ಈ ರೋಗದ ಚಿಕಿತ್ಸೆ ವಿಧಾನವನ್ನು ಕಂಡು ಹಿಡಿಯುವುದು ಇವೇ ಮೊದಲಾದವುಗಳ ಫಲವಾಗಿ ರಾಷ್ಟ್ರೀಯ ಕ್ಷಯರೋಗ ನಿರೋಧ ಸಂಸ್ಥೆ ಬೆಳಗ ಬಂದಿತು. ೧೯೬೧ರಲ್ಲಿ ಆಂಧ್ರ ಪ್ರದೇಶದ ಅನಂತಪುರ ಜಿಲ್ಲೆಯನ್ನು ಪ್ರಾಯೋಗಿಕ ಕ್ಷಯರೋಗ ನಿರೋಧಕ ಕಾರ್ಯಕ್ರಮಕ್ಕಾಗಿ ಆರಿಸಿಕೊಳ್ಳಲಾಯಿತು. ಜೊತೆಗೆ ಕ್ಷಯರೋಗ ಕಾರ್ಯಕರ್ತರಿಗೆ ತರಬೇತಿ ನೀಡುವ ಕೆಲಸವೂ ಆರಂಭವಾಯಿತು. ಅಭ್ಯರ್ಥಿಗಳಿಗೆ ವಸತಿ ಸೌಕರ್ಯ ಕಲ್ಪಿಸಲು ತಾತ್ಕಾಲಿಕ ಶಿಬಿರಗಳು ರಚಿತವಾದವು. ದೇಶಾದ್ಯಂತ ಕ್ಷಯರೋಗ ನಿಯಂತ್ರಣ ಹಾಗೂ ಆಂಧ್ರ ಪ್ರದೇಶ, ಕೇರಳ, ಮೈಸೂರು ಮತ್ತು ಮದ್ರಾಸ್ ರಾಜ್ಯಗಳಲ್ಲಿ ಜಿಲ್ಲಾ ಕ್ಷಯರೋಗ ನಿರೋಧ ಕಾರ್ಯಕ್ರಮದ ಅನುಷ್ಠಾನ ಇವು ಕ್ಷಯರೋಗ ಸಂಸ್ಥೆಯ ಎರಡು ಪ್ರಧಾನ ಕಾರ್ಯಗಳಾಗಿವೆ.

ಕ್ಷಯರೋಗ ಕುರಿತ ಸಂಶೋಧನೆ ಮತ್ತು ಕ್ಷಯರೋಗ ನಿರೋಧ ಕ್ಷೇತ್ರಗಳಲ್ಲಿ ಈ ಸಂಸ್ಥೆಯ ಸಾಧನ ಅದ್ಭುತವೆನಿಸಿದೆ. ಕ್ಷಯರೋಗಕ್ಕೆ ಸಂಬಂಧಿಸಿದಂತೆ, ಜನಸಾಮಾನ್ಯರ ವಿಚಾರಗಳಲ್ಲಿ ಪರಿವರ್ತನೆ ಸಾಧಿಸಿರುವುದು, ಸಾರ್ವಜನಿಕ ಆರೋಗ್ಯ ದೃಷ್ಟಿಯಿಂದ ಕ್ಷಯರೋಗ ನಿರೋಧಕ್ರಮಕ್ಕೆ ಪ್ರಾಧಾನ್ಯ ದೊರೆತಿರುವುದು ಈ ಸಂಸ್ಥೆಯ ಎರಡು ಮಹತ್ಸಾಧನಗಳಾಗಿವೆ.

೧೯೬೪ರಲ್ಲಿ ವಿಶ್ವ ಆರೋಗ್ಯ ಸಂಸ್ಥೆಯ ತಜ್ಞರ ಸಮಿತಿಯ ವರದಿ ಪ್ರಕಟಗೊಂಡಿತು. ಈ ಸಮಿತಿಯ ವರದಿಯು ಭಾರತದಲ್ಲಿ ಕ್ಷಯರೋಗ ನಿಯಂತ್ರಣದ ಬಗ್ಗೆ ಜನ ಸಾಮಾನ್ಯರ ದೃಷ್ಟಿಕೋನದಲ್ಲಿ ಕಂಡು ಬಂದಿರುವ ಕ್ರಾಂತಿಕಾರಿ ಬದಲಾವಣೆಯನ್ನು ಸೂಚಿಸುತ್ತದೆ.

೧೯೬೨ನೇ ವರ್ಷದಿಂದಲೂ, ಕ್ಷಯರೋಗ ನಿರೋಧಕ್ಕಾಗಿ ಪ್ರತಿವರ್ಷ ೧೨ ವಾರಗಳ ಅವಧಿಯ ತರಬೇತಿ ವರ್ಗಗಳನ್ನು ಏರ್ಪಡಿಸಲಾಗುತ್ತಿದೆ. ಜೊತೆಗೆ ಕ್ಷಯರೋಗ ನಿರೋಧಕಾರ್ಯದಲ್ಲಿ ನಿರತರಾಗಿರುವ ವಿಶ್ವವಿದ್ಯಾನಿಲಯಗಳಲ್ಲಿನ ಹಿರಿಯ ಕಾರ್ಯಕರ್ತರು ಮತ್ತು ಪ್ರಾಧ್ಯಾಪಕರಿಗಾಗಿ ವಿಚಾರಗೋಷ್ಠಿಗಳನ್ನು ವ್ಯವಸ್ಥೆಗೊಳಿಸಲಾಗುತ್ತಿದೆ ೧೯೬೫ರ ಅಂತ್ಯದ ವರೆವಿಗಿನ ಅವಧಿಯಲ್ಲಿ ಇಂತಹ ೧೧ ತರಬೇತಿ ವರ್ಗಗಳು ನಡೆದವು. ಈ ವರ್ಗದಲ್ಲಿ ೨೦೨ ಮಂದಿ ಬಿ. ಸಿ. ಜಿ. ತಜ್ಞರೂ ಸೇರಿಒಟ್ಟು ೧೧೩೪ ಜನರು ತರಬೇತಿ ಪಡೆದರು. ಭಾರತೀಯರಲ್ಲದೆ, ಫಾರ್ಮೋಸಾ ಇಂಡೋನೇಷ್ಯಾ, ಥೈಲ್ಯಾಂಡ್‌ಗಳ ಎಂಟು ಜನವೈದ್ಯಕೀಯ ಅಧಿಕಾರಿಗಳು ಈ ವರ್ಗಗಳಲ್ಲಿ ತರಬೇತಿ ಪಡೆದರು. ಈ ವರೆವಿಗೆ ೧೬೨ ಕ್ಷಯ ರೋಗ ನಿರೋಧತಂಡಗಳಿಗೆ ತರಬೇತಿ ಕೊಡಲಾಗಿದೆ. ಇದರಿಂದ ಅಖೈರಾಗಿ ದೇಶದ ೩೩೦ ಜಿಲ್ಲೆಗಳಿಗೂ ಒಂದೊಂದು ಕ್ಷಯ ರೋಗ ನಿರೋಧತಂಡವನ್ನು ಕಳುಹಿಸಲು ಸಾಧ್ಯವಾಗುತ್ತದೆ.

ಏಷ್ಯಾದ ಕೆಲವು ರಾಷ್ಟ್ರಗಳು ಈ ಸಂಸ್ಥೆಯ ೧೨ನೆಯ ತರಬೇತಿ ವರ್ಗಕ್ಕೆ ಅಭ್ಯರ್ಥಿಗಳನ್ನು ಕಳುಹಿಸಿವೆ. ಅಫ್ಘಾನಿಸ್ತಾನ್, ಸಿಲೋನ್, ಮತ್ತು ಥೈಲ್ಯಾಂಡ್‌ಗಳು ಇಂತಹ ರಾಷ್ಟ್ರಗಳಲ್ಲಿ ಮುಖ್ಯವಾಗಿವೆ. ಪ್ರಾಗ್‌ನಲ್ಲಿ ಅಂತರಾಷ್ಟ್ರೀಯ ತರಬೇತಿ ವರ್ಗ ನಡೆಸುವ ವಿಶ್ವ ಆರೋಗ್ಯ ಸಂಸ್ಥೆಯ ಅಭ್ಯರ್ಥಿಗಳು ೧೯೬೫ರ ಆಗಸ್ಟ್ ತಿಂಗಳಲ್ಲಿ ಈ ಸಂಸ್ಥೆಯಲ್ಲಿ ತರಬೇತಿ ಪಡೆಯುವರು. ಬೆಂಗಳೂರಿನ ರಾಷ್ಟ್ರೀಯ ಕ್ಷಯರೋಗನಿರೋಧ ಸಂಸ್ಥೆಯಲ್ಲಿ ಸಂಶೋಧನೆ ಹಾಗೂ ತರಬೇತಿ ಕಾರ್ಯಕ್ರಮಕ್ಕೆ ಭದ್ರವಾದ ತಳಹದಿಯನ್ನು ಹಾಕಲಾಗಿದೆ. ಈ ಸಂಸ್ಥೆಯು ಆರು ವರ್ಷಗಳ ಅಲ್ಪಾವಧಿಯಲ್ಲಿ ಸಾಧಿಸಿದ ಪ್ರಗತಿ ತೃಪ್ತಿಕರವಾಗಿದೆ.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ದಿ| ಶ್ರೀ ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—
ಆಂಗ್ಲ ಸ್ವಯಂಬೋಧಿನಿ

ಸುಲಭದಲ್ಲಿ ಇಂಗ್ಲಿಷ್

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ.ಎರಡು. ಉತ್ತಮ ಪ್ರತಿ:ರೂ.ಎರಡೂವರೆ(ಟ.ಖ. ಪ್ರತ್ಯೇಕ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ

ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ:ರೂ. 1-25 (ಟ.ಖ.ಪ್ರತ್ಯೇಕ)

ಹೊಸಕೆರೆ ಚಿದಂಬರಯ್ಯನವರ
ಶ್ರೀಮದ್ಭಗವದ್ಗೀತೆಯ ಸಮೂಲ ಭಾಷಾಂತರ

ಗೀತೆಯ ಕೈಗನ್ನಡಿ

300 ಪುಟಗಳಿಗೂ ಮಿಕ್ಕಿದೆ. ಕೈಹೊತ್ತಗೆಯ ಆಕಾರದಲ್ಲಿದೆ.
ಬೆಲೆ: ಸಾದಾ ಪ್ರತಿ ರೂ. ೧
ಗೀತೆಯ ಕೈಗನ್ನಡಿಯ ಒಂದು ಪ್ರತಿ ಬೇಕಾದವರು ರೂ. 1-50ನ್ನು
ಮನಿಯಾರ್ಡರು ಮಾಡಿ ತರಿಸಿಕೊಳ್ಳಬಹುದು.
—ಪ್ರತಿಗಳಿಗೆ ಬರೆಯಿರಿ—
ನವಭಾರತ ಪುಸ್ತಕ ಭಂಡಾರ, ಉಡುಪಿ. ಅಥವಾ
ನವಯುಗ ಪ್ರೆಸ್, ಉಡುಪಿ.

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

O. S. 157/66.

ವನಜಾಕ್ಷಿ ಅಮ್ಮ —ವಾದಿಳು.
ನಂದ್ಯಪ್ಪ ಶೆಟ್ಟಿ ಸಹ —ಪ್ರತಿವಾದಿರು.

ಸದ್ರಿ ವಾದಿಳ ಕಡೆಯಿಂದ ಈ ಮೂಲಕ ಜಾಹೀರ ಮಾಡಿಕೊಳ್ಳುವದೇನೆಂದ್ರೆ.

೬ ಮುತ್ತಕ್ಕ ಶೆಡ್ತಿ—ದಾರಮ್ಮ ಶೆಡ್ತಿ ಮಗಳು, ನುಂಜಾಡಿ ಗ್ರಾಮದ ಬಗ್ವಾಡಿ ಪಡುಮನೆ.

ವಾದಿಳಿಗೆ ಪ್ರತಿವಾದಿರಿಂದ ಬರತಕ್ಕ ಮೂಲಗೇಣಿ ರೂ. 618—12ಕ್ಕೆ ಮಾಡಿದ ದಾವೆಯು ತಾ. 22—9—66ಕ್ಕೆ ಅಖೈರ ತನ್ಖಿಗೆ ಇಡೋಣಾಗಿಯದೆ. ಆ ಕುರಿತು ನಿಮ್ಮ ಉದಾರವೆ ಇದ್ರೆ ಸದ್ರಿ ದಿನ್ನ ಮೇಲ್ಕಂಡ ಕೋರ್ಟು ಮುಂದ ಸ್ವತಹಾ ವ ವಕೀಲರ ದ್ವಾರಾ ಹಾಜ್ರಾಗಿ ಜಾಹೀರ ಮಾಡಿಕೊಳ್ಳತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರ ಹಾಜರಿಯಲ್ಲಿ ಏಕಪಕ್ಷವಾಗಿ ತೀರ್ಮಾನಿಸಲ್ಪಡುವದೆಂಬ ಸಂಗ್ತಿ ಈ ಮೂಲಕ ತಿಳಿಯಪಡ್ಸಿದೆ.

M. M. Hebbar,
Advocate for Plaintiff,
Kundapur, Date 24—8—66.

ಚಂದಾದಾರರಲ್ಲಿ ವಿನಂತಿ

ಕಳೆದ ಆಗೋಸ್ತು ತಿಂಗಳಾಂತ್ಯಕ್ಕೆ "ನವಯುಗ"ದ 45ನೇ ವರ್ಷವು ಕೊನೆಗೊಂಡು ಸಪ್ಟಂಬರಾದಿಯಿಂದ 46ನೇ ಹೊಸ ವರ್ಷಾರಂಭವಾಗಿದೆ. ಈ ಅವಧಿಗೆ ಚಂದಾ ಅವಧಿ ಮುಗಿಯುವ ಹಾಗೂ ಚಂದಾ ಹಣ ಬಾಕಿಯಿರುವ ನಮ್ಮ ಚಂದಾದಾರ ಬಂಧುಗಳು ತಮ್ಮ ಚಂದಾ ಹಣವನ್ನು ದಯಮಾಡಿ ಆದಷ್ಟು ತ್ವರಿತ ಮನಿಯಾರ್ಡರು ದ್ವಾರಾ ಯಾ ಸಿಂಡಿಕೇಟ್ ಬ್ಯಾಂಕಿನ ಸಮೀಪದ ಶಾಖೆಯಲ್ಲಿ ನವಯುಗ"ದ ಖಾತೆಗೆ ಜಮೆ ಮಾಡುವುದರ ಮೂಲಕ ಕಳುಹಿಸಿಕೊಟ್ಟು ಸಹಕರಿಸುವಂತೆ ವಿನಂತಿಸುತ್ತೇವೆ.

ಅಂತೂ ಚಂದಾಹಣವು ಸಕಾಲದಲ್ಲಿ ಬಾರದಿದ್ದಲ್ಲಿ ನಾವು ಕ್ರಮಶಃ ಮುಂದಿನ ಸಂಚಿಕೆಯನ್ನು ವಿ. ಪಿ. ಮೂಲಕ ಕಳುಹಿಸುತ್ತೇವೆ. ಅದನ್ನು ಅವಶ್ಯ ಸ್ವೀಕರಿಸುವಂತೆ ಬಿನ್ನವಿಸುತ್ತೇವೆ.

ಮೆನೇಜರ್,
ನವಯುಗ, ಉಡುಪಿ.

Edited, Printed & Published by K. H. Shetty at the Navayuga Press, Udipi, S. India.

నవయుగ

15—9—1966

NAVAYUGA

౨౦ పైసే

ಕಥಾ ಪ್ರಪಂಚ

ಪುನರ್ಮಿಲನ

ಶ್ರೀ ಪದವು ಪ್ರಕಾಶ ಶೆಣ್ಯಾ, ಕಾಸರಗೋಡು.

ನೆರೆಮನೆಯ ಶ್ಯಾಮರಾಯರಲ್ಲಿ ಅಂದು ಗದ್ದಲವೇ ಗದ್ದಲ! ಸಂಭ್ರಮವೇ ಸಂಭ್ರಮ! ಸಡಗರವೇ ಸಡಗರ! ರಾಯರು ತಮ್ಮ ಮನೆಯ ಮುಂದೆ ಹಿರಿದಾದ ಚಪ್ಪರವನ್ನು ಹಾಕಿಸಿ ವಿದ್ಯುದ್ದೀಪಗಳಿಂದ ಅಲಂಕರಿಸಿದ್ದರು. ರಾಯರ ಆಮಂತ್ರಣದ ಮೇರೆಗೆ ಬಂಧು ಬಾಂಧವರು, ಸ್ನೇಹಿತರು, ಹಿತೈಷಿಗಳು ಒಡನಾಡಿಗಳೂ ಎಲ್ಲರೂ ಆಗಮಿಸಿದ್ದರು. ಜನಸ್ತೋಮದ ಮಧ್ಯೆ ಕಂಗೊಳಿಸುತ್ತಿದ್ದರು ನವದಂಪತಿಗಳಾದ ಶ್ಯಾಮರಾಯರ ಪುತ್ರ ಚಂದ್ರಕಾಂತ ಮತ್ತು ಆಗರ್ಭ ಶ್ರೀಮಂತರಾದ ಶ್ರೀಪತಿರಾಯರ ಸುಪುತ್ರಿ ಶ್ರೀಮತಿ. ಅದೇ ದಿನ ಶುಭವಾದ ಮುಹೂರ್ತದಲ್ಲಿ ಅವರಿಬ್ಬರ ವಿವಾಹ ವೈದಿಕ ರೀತಿಯಲ್ಲಿ ನೆರವೇರಿತ್ತು.

ಸಂಜೆ ರಾಯರು ಸಂಗೀತ ಕಛೇರಿಯನ್ನೇರ್ಪಡಿಸಿದ್ದರು. ವಿಶಾಲವಾದ ಪಡಸಾಲೆಯಲ್ಲಿ ನವದಂಪತಿಗಳು ಸೋಫಾದಲ್ಲಿ ಶೋಭಿಸುತ್ತಿದ್ದರು. ಅನೇಕರು ದಂಪತಿಗಳಿಗೆ ಉಡುಗೊರೆಗಳನ್ನು ಅರ್ಪಿಸುತ್ತಿದ್ದರು. ಇತ್ತ ಶ್ಯಾಮರಾಯರು ಬಂದ ಅತಿಥಿಗಳನ್ನು ಆದರದಿಂದ ಸ್ವಾಗತಿಸಿ ಪುಷ್ಪ ತಾಂಬೂಲಾದಿಗಳನ್ನು ಕೊಟ್ಟು ಸತ್ಕರಿಸುತ್ತಿದ್ದರು. ಅಂತೂ ಸಂತೋಷ ಸಾಗರದಲ್ಲಿ ತಲ್ಲೀನರಾದ ರಾಯರಿಗೆ ಇಹಲೋಕದ ಪರಿಜ್ಞಾನವೇ ಇರಲಿಲ್ಲ. ಚಂದ್ರಕಾಂತನ ವಿವಾಹವು ವಿಜೃಂಭಣೆಯಿಂದ ನೆರವೇರಿತು.

ಬೀಗರು ಮದುವೆಯಾದ ಮೂರು ದಿನಗಳ ಬಳಿಕ ಹೊರಡಲು ಅನುವಾದರು. ಮೂರು ನಾಲ್ಕು ದಿನಗಳಿಂದ ಆವರಿಸಲ್ಪಟ್ಟ ಸಂತೋಷವು ಮಾಯವಾಗಿ ಈಗ ಪ್ರಶಾಂತ ವಾತಾವರಣವು ಆವರಿಸಿತು. ರಾಯರ ಮನೆಯಲ್ಲಿ ನವೀನ ದಂಪತಿಗಳು ಮತ್ತು ಕಿರಿಯ ಮಗ ರಾಜಾರಾಮ ಇವರು ನಾಲ್ವರೆ. ರಾಯರ ಸಹಧರ್ಮಿಣಿಯವರು ಕೆಲವು ವರುಷಗಳ ಹಿಂದೆ ಪರಂಧಾಮವನ್ನೈದಿದ್ದರು. ಪತ್ನಿವಿಯೋಗರಾದ ಶ್ಯಾಮರಾಯರು ಕಥಾಶ್ರವಣಗಳಲ್ಲಿ ಲೀನರಾಗಿದ್ದರು. ಮಕ್ಕಳಿಬ್ಬರು ಬಂಗಳೂರಿನಲ್ಲಿ ವಿದ್ಯಾಭ್ಯಾಸಂಗ ಮಾಡಲು ತೆರಳಿದ್ದರು.

ಇಂಟರ್ ಪರೀಕ್ಷೆಯನ್ನು ಪಾಸು ಮಾಡಿದ ಚಂದ್ರಕಾಂತನು ತನ್ನ ಓದನ್ನು ಅಲ್ಲಿಗೆ ನಿಲ್ಲಿಸಿದನು. ಆದರೆ ತಮ್ಮನಾದ ರಾಜಾರಾಮನು ಡಾಕ್ಟರ್ ಪರೀಕ್ಷೆಗಾಗಿ ಮದ್ರಾಸಿಗೆ ತೆರಳಿದನು. ಎಪ್ಪತ್ತರ ಹೊಸ್ತಿಲನ್ನು ದಾಟಿದ ಶ್ಯಾಮರಾಯರಿಗೆ ಈ ಸುಖ ಸಂತೋಷದಲ್ಲಿ ಭಾಗಿಯಾಗುವ ಭಾಗ್ಯವಿರಲಿಲ್ಲ. ಎಂದಿನಂತೆ ಕಾಡುತ್ತಿದ್ದ ಉಬ್ಬಸವು ಉಲ್ಬಣಾವಸ್ಥೆಗೇರಿತು.

ಒಂದು ದಿನ ಮಧ್ಯಾಹ್ನ ರಾಯರು ಊಟ ಮಾಡಿ ಮಂಚದ ಮೇಲೆ ಮಲಗಿದ್ದರು. ಮನೆಯಲ್ಲಿ ಶ್ರೀಮತಿಯ ಹೊರತು ಬೇರೆ ಯಾರೂ ಇರಲಿಲ್ಲ. ಅಷ್ಟರಲ್ಲಿ ರಾಯರು 'ಚಂದ್ರಕಾಂತ...ಎಲ್ಲಿ ಏನು... ಬಾ... ನಿನ್ನನ್ನು... ಮನಸಾ... ನೋಡುತ್ತೇನೆ" ಎಂದು ಏನೇನೋ ಅಸಂಬದ್ಧವಾಗಿ ಮಾತನಾಡತೊಡಗಿದರು. ಅದೇ ಹೊತ್ತಿನಲ್ಲಿ ಚಂದ್ರಕಾಂತನು ಬಂದನು. ತಂದೆಯ ಪರಿಸ್ಥಿತಿಯನ್ನು ಕಂಡು ಮರುಗಿದನು. ಡಾಕ್ಟರಿಗೆ ಕರೆ ಹೇಳಿದನು. ಅವರು ಹೇಳಿದ ಮದ್ದನ್ನು ತರಿಸಿ ಕೊಟ್ಟನು ಆದರೆ ಅದರಿಂದ ಗುಣ ಉಂಟಾಗಲಿಲ್ಲ ರಾತ್ರಿ ಗಂಟೆ ಹನ್ನೆರಡಾಯಿತು. ಚಂದ್ರಕಾಂತನು ಮಂಚದ ಪಕ್ಕದಲ್ಲೇ ಇದ್ದನು "ಚಂದ್ರಕಾಂತ . ತಮ್ಮನನ್ನು... ಎಂದೆಂದಿಗೂ . ಬಿ....ಡದಿರು" ಎನ್ನುವಷ್ಟರಲ್ಲೇ ರಾಯರ ಪ್ರಾಣ ಜ್ಯೋತಿಯು ಹಾರಿಹೋಯಿತು

ತಂದೆಯ ಮರಣದಿಂದ ಚಂದ್ರಕಾಂತನಿಗೆ ದಿಕ್ಕೇ ತೋಚದಂತಾಯಿತು. ಈ ಸುದ್ದಿಯನ್ನು ಕೇಳಿದ ರಾಜುವಿಗಂತೂ ದುಃಖವುಕ್ಕಿ ಉಕ್ಕಿ ಬಂತು. ತಂದೆಯ ಕೊನೆಯ ದೃಷ್ಟಿಗಾಗಿ ವಿಮಾನ ಮಾರ್ಗವಾಗಿ ಬಂದನು. ತಂದೆಯ ಉತ್ತರ ಕ್ರಿಯೆಗಳನ್ನೆಲ್ಲಾ ನಡೆಯಿಸಿ ಪುನಃ ಹಿಂತಿರುಗಿದನು.

ರಾಜಾರಾಮನು ತಂದೆಯು ಕೂಡಿಟ್ಟ ಹಣದಿಂದ ತನ್ನ ಶಿಕ್ಷಣವನ್ನು ಮುಗಿಯಿಸಿ ಬೆಂಗಳೂರಿನ ಸರಕಾರೀ ಆಸ್ಪತ್ರೆಯಲ್ಲಿ ಡಾಕ್ಟರು ಆದ ಚಂದ್ರಕಾಂತನು ಅಲ್ಲಿಯೇ ಒಂದು ಜೀನಸಿನ ಅಂಗಡಿಯನ್ನು ಇಟ್ಟಿದ್ದನು. ಇದ್ದಕ್ಕಿದ್ದಂತೆಯೇ ಸರಕಾರದವರು ಅಕ್ಕಿ ಸಕ್ಕರೆಗಳ ಮೇಲೆ ಕಂಟ್ರೋಲ್‌ನ್ನು ಹೇರಿಸಿದರು. ಚಂದ್ರಕಾಂತನು ಅವುಗಳೆಲ್ಲವನ್ನು ಶೇಖರಿಸಿದ್ದನು. ಅಂತೂ ಚಂದ್ರನು ಎಲ್ಲಾ ವರ್ತಕರಂತೆ ತಾನೂ ಕಳ್ಳ ಸಂತೆಗೆ ಸದಸ್ಯನಾದ ಸರಿ! ಒಂದಕ್ಕೆ ಹತ್ತುಪಾಲಷ್ಟು ಲಾಭ ದೊರಕಿತು. ಇವುಗಳೆಲ್ಲವನ್ನು ಕಂಡು ರಾಜುವಿನ ಮನಸ್ಸು ರೋಸಿ ಹೋಯಿತು ಚಂದ್ರಕಾಂತನ ನಿರ್ಲಕ್ಷ್ಯ ಅಹಂಕಾರದ ತಲೆ ತಿರುಗುವಿಕೆಯಲ್ಲಿ ರಾಜಾರಾಮನ ಹಿತನುಡಿಗಳು ಎಲ್ಲಿ ನುಸುಳಿ ಹೋದುವೋ! ರಾಜುವಿಗೆ ದಿಕ್ಕೇ ತೋಚದಂತಾಯಿತು

ಪಾಪ! ಆ ವ್ಯಾಪಾರದ ಸೋಗು ಚಂದ್ರಕಾಂತನಿಗೆ ಅರಿವಾಗುವುದೆಂದು? ಶೇಖರಿಸಿದ್ದ ಆಹಾರ ಪದಾರ್ಥಗಳನ್ನು ಇತರರಿಗೆ ಸ್ವಲ್ಪವೂ ಅರ್ಥವಾಗದಂತೆ ಬಹು ಜಾಗರೂಕತೆಯಿಂದ ನೋಡುತ್ತಿದ್ದನು. ಪ್ರತಿ ದಿನವೂ ಎಷ್ಟೋ ಜನರು, ಹಸಿವಿನ ಬೇಗೆ ತಾಳಲಾರದೆಯೋ ರೋಗಿಯ ಮರಣ ಸಂಕಟವನ್ನು ನೋಡಲಾರದೆಯೋ ನೊಂದು ಬೆಂದು ಬೇಗೆಯಂತಾಗಿ ಮನವಿಲ್ಲದ ಮನದಿಂದ ಒಂದಕ್ಕೆ ನಾಲ್ಕರಷ್ಟು ಹಣತೆತ್ತು ತಮಗೆ ಆವಶ್ಯವಾದ ವಸ್ತುಗಳನ್ನು ಕೊಂಡುಕೊಳ್ಳುತ್ತಿದ್ದರು

ಒಂದು ದಿನ ಮಧ್ಯಾಹ್ನ ಚಂದ್ರಕಾಂತನು ಮನೆಗೆ ಊಟಕ್ಕೆಂದು ಹೋದಾಗ 'ಅಮ್ಮಾ' ಎಂಬ ಕರುಣಾ ಸ್ವರವನ್ನು ಕೇಳಿದ. ಹೊರಬಂದು ನೋಡಿದಾಗ ಒಬ್ಬ ವ್ಯಕ್ತಿಯು ನಿಂತಿದ್ದನು ಆತನ ಅವಸ್ಥೆ ಶೋಚನೀಯವಾದುದು. ಉಣಲು ಆಹಾರವಿಲ್ಲದೆ ಉಡಲು ಒಟ್ಟೆಯಿಲ್ಲದೆ ಚಳಿಯಿಂದ ಗಡಗಡನೆ ನಡುಗುತ್ತಿದ್ದನು. ತುತ್ತು ಅನ್ನವನ್ನು ಬೇಡಲು ಬಂದಿದ್ದನು.

ಆದರೆ!—ಆದರೆ!

ದುಷ್ಟನಾದ ಚಂದ್ರಕಾಂತನು ಭಿಕ್ಷುಕನನ್ನು ಬೈದು ಭಂಗಿಸಿದನು. ಮನೆಯಿಂದ ಹೊರಕ್ಕೆ ಅಟ್ಟಿದನು. ಇದೇ ರೀತಿ ಎಷ್ಟೋ ನೊಂದ ಜನರು ಬಂದು ಕಾಲಿಗೆ ಬಿದ್ದರೂ ಎಷ್ಟು ಬೇಡಿ ಕಾಡಿದರೂ ನಿಷ್ಕಾರುಣ್ಯದ ಮಾತುಗಳನ್ನಾಡಿ ಹಿಂತಿರುಗಿಸುವಂತೆ ಮಾಡುತ್ತಿದ್ದ ಕ್ರೂರ ವ್ಯಕ್ತಿ ಆತ. ಧನ ಮೋಹಕ್ಕೆ ಬಲಿಯಾದ ಅವನ ಚರ್ಯೆಗಳೆಲ್ಲವನ್ನು ಕಂಡು ರಾಜಾರಾಮನ ಮನಸ್ಸು ಕರಗಿ ನೀರಾಗಿ ಹೋಯಿತು ಅಣ್ಣನಿಗೆ ಯಾವ ರೀತಿಯಲ್ಲಾದರೂ ನೀತಿ ಹೇಳಬೇಕೆಂದು ಅವನ ಮನಸ್ಸು ತವತವಿಸುತ್ತಿತ್ತು.

ಒಂದು ದಿನ ಚಂದ್ರಕಾಂತನು ಸಂತೋಷದಿಂದ ಓಲಾಡುತ್ತಿದ್ದಾಗ ಧೈರ್ಯ ಮಾಡಿ ರಾಜುವು.... "ಏನಣ್ಣಾ! ಈ ನಡುವೆ ವ್ಯಾಪಾರ ಬಹು ಬಿರುಸಾಗಿ ನಡೆಯುತ್ತಿತ್ತು ಅಂತ ಕಾಣುತ್ತೆ. ಮನೆ ಬರುವಾಗ ತಡವಾಗುತ್ತಿತ್ತು. ಗಿರಾಕಿಗಳು ಹೆಚ್ಚು ಎಂದು ಕಾಣುತ್ತೆ' ಎಂದನು

"ಏನು ಮಾಡೋದು! ದೇವರು ಕೊಟ್ಟ ಈ ಉದರಕ್ಕೆ ಎಷ್ಟಿದ್ದರೂ ಸಾಲದು. ಇಲ್ಲದಿದ್ದರೆ ಈ ರೇಶನ್ ಕಾಲದಲ್ಲಿ ಒಂದು ಹಿಡಿ ಅಕ್ಕಿ, ಬೇಕೆಂದರೆ ಯಾರಯ್ಯಾ ಕೊಡುವವರು? ನೀನು ಅಂದರೆ ಡಾಕ್ಟರ್. ನೂರೆಂಟು ಜನರು ಬರುತ್ತಾರೆ. ಅಷ್ಟು ಇಷ್ಟು ತೆಗೆಯಬಹುದು. ಹಾಗೆ ನನಗೆ ಯಾರಯ್ಯಾ ಕೊಡುತ್ತಾರೆ?" ಎಂದು ಪ್ರತ್ಯುತ್ತರಿಸಿದ ಚಂದ್ರಕಾಂತ.

ಚಂದ್ರಕಾಂತನ ಅರಿವಿಲ್ಲದ, ನಿಂದಾರ್ಹವಾದ ಚುಚ್ಚು ನುಡಿಗಳು ರಾಜಾರಾಮನಿಗೆ ವಿಷ ಬಾಣದಂತೆ ನಾಟಿತು. ರೋಗಿಗಳನ್ನು ಚಿಕಿತ್ಸೆ ಮಾಡುವುದರಲ್ಲಿ ಈತನ ಧೈರ್ಯ, ಸಹನೆ, ಕಾರ್ಯತತ್ಪರತೆ ಇವುಗಳು ನಿವರಿಸಲು ಅಸದಳ. ತನ್ನ ಶಕ್ತಿ ಸಾಮರ್ಥ್ಯದಿಂದ ತನ್ನನ್ನೇ ತಾನು ಬೆಳಕಿಗೆ ಬರುವಂತೆ ಮಾಡಿದ್ದನು. ರೋಗಿಗಳಿಗೆ ಈತನು ಕಗ್ಗತ್ತಲೆಯಲ್ಲಿ ಜ್ಯೋತಿಯೊಂದು ಕಂಡಂತೆ. ಈ ಅಣ್ಣನ ಮಾತುಗಳನ್ನು ಕೇಳಿದ ರಾಜಾರಾಮನು—

"ಅಣ್ಣಾ! ಏತಕ್ಕಾಗಿ ನೀನು ಈ ರೀತಿ ಮಾತನಾಡುವೆ? ಮೊದಲೆ ತಂದೆ ತಾಯಿಯರ ದುಃಖದಿಂದ ನರಳುತ್ತಿದ್ದ ನನ್ನನ್ನು ಅಗ್ನಿಯ ಮೇಲೆ ನೀರು ಎರೆದಂತೆ, ಪುನಃ ಪುನಃ ನನ್ನನ್ನು ಕಾಡುವೆಯಾ? ನಾನು ಬಡವರಿಂದ ಶ್ರೀಮಂತರಿಂದ ಲಂಚವನ್ನು ಪಡೆದುಕೊಳ್ಳುತ್ತೇನೆಂಬುದರಲ್ಲಿ ನಿನಗೇನಂಬಿಕೆಯೆ? . ..ಅಣ್ಣಾ ನಿನ್ನ ಮಾತುಗಳೊಂದೂ ಅರ್ಥವಾಗುತ್ತಿಲ್ಲ. ಅಣ್ಣಾ . ಅಣ್ಣಾ. .ಇನ್ನು ಇನ್ನು ಅಂತಹ ಮಾತುಗಳನ್ನು ಆಡಬೇಡ" ಎಂದು ತನ್ನ ಅದೃಷ್ಟಕ್ಕಾಗಿ ಹಳಿದನು ಕುಪಿತನಾದ ಚಂದ್ರಕಾಂತನು, ಮುನಿದ ಮಾರಿಯಂತೆ, ಗುಡುಗಿ—'ಇಷ್ಟರ ತನಕ ಅಣ್ಣನ ಮಾತನ್ನು ಪಾಲಿಸುತ್ತ ಬಂದೆ. ಆದರೆ ..ಈಗ ನನ್ನ ಬಾಯನ್ನು ಮುಚ್ಚಬೇಕೆನ್ನುತ್ತೀಯಾ? ಸಾಕು ...ಸಾಕು .ಇನ್ನು ಮುಂದ ನನ್ನ ಮನೆಯಲ್ಲಿ ಇರಕೂಡದು. ಹೂಂ.. ತೊಲಗು .. ತೊಲಗು. ..ಇಲ್ಲಿಂದ' ಕಟ್ಟಾಜ್ಞೆಯನ್ನಿತ್ತನು.

ಪಾಪ! ರಾಜುವಿಗೆ ಅಷ್ಟು ದಿನಗಳಿಂದ ಬೆಳೆಯಿಸಿಕೊಂಡು ಬಂದ ಅಕ್ಕರೆ ಅರಗಳಿಗೆಯಲ್ಲಿ ಮಾಯವಾಯಿತು. ಆತನು ನಿರಾಶೆಯಿಂದ ಮನೆಬಿಟ್ಟನು. ಪಿತೃಶೋಕದಿಂದ ಮರುಗುತ್ತಿದ್ದ ರಾಜು ತನ್ನ ಈಗಿನ ಪರಿಸ್ಥಿತಿಯನ್ನು ನೆನೆ ನೆನೆದು ದುಃಖಿಸಿದನು 'ತಮ್ಮನ ಕೈ ಬಿಡುವುದಿಲ್ಲಾ' ಎಂದು ತಂದೆಗೆ ವಾಗ್ದಾನವಿತ್ತ ಅಣ್ಣ ಇಂದು ತನ್ನ ಕೈಬಿಟ್ಟನಲ್ಲಾ ಎಂದು ಬಗೆ ಬಗೆಯಾಗಿ ಪರಿತಪಿಸಿದನು.

ಆದರೆ ಇಂದಿನ ದುಃಖವನ್ನು ದೂರವಾಗುವಂತೆ ಮಾಡಿ ಆತನ ಕಾರ್ಯದಲ್ಲಿ ಭಾಗಿಯಾದವಳು ಡಾ| ವಸಂತಿ ಬೃ... ಶ್ರೀಮಂತರೋರ್ವರ ಸುತೆಯಾದ ಈಕೆ

(ಹನ್ನೊಂದನೇ ಪುಟ ನೋಡಿರಿ)

ಅತ್ಯಾಧುನಿಕ ಸಲಕರಣೆ — ಸೌಕರ್ಯಗಳಿಂದ ಕೂಡಿದ
ಭೋಜನ, ಉಪಾಹಾರ ಮತ್ತು ವಸತಿ ಗೃಹ



ಹೊಟೆಲ್ ಶಿವಪ್ರಸಾದ

ಫೋನ್: 77

ಕುಂದಾಪುರ, ದ. ಕ.

ನಲ್ವತ್ತಾರನೆ ವರ್ಷ
Telephone 226.

ನವಯುಗ

ಸಂಪುಟ ೪೬	ಉಡುಪಿ	Vol. 46
ಸಂಚಿಕೆ ೩	೧೫—೯—೧೯೬೬	No. 3

Estd. 1921

NAVAYUGA

Leading Kannada Weekly
UDIPI, S. Kanara

ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ
ಉಡುಪಿ, ದ. ಕನ್ನಡ.

ಸಂಚಾಲಕ—ಸಂಪಾದಕ:
ಕೆ. ಹೊನ್ನಯ್ಯ ಶೆಟ್ಟಿ

ವಾರ್ಷಿಕ ಚಂದಾ:
ಮೂರು ವಿಶೇಷ ಸಂಚಿಕೆಗಳು ಸೇರಿ ಅಂಚೆ ವೆಚ್ಚ ಸಹಿತ ಮುಂಗಡ
ಸ್ವದೇಶ ರೂ. ೧೦
ವಿದೇಶ ರೂ. ೧೮

ಜಾಹೀರಾತು ದರಗಳು:
ಅನಿಯಮಿತ (ಕೆಜುವಲ್)
ಕಲಂ ಸೆಂಟಿಮೀಟರಿಗೆ ರೂ. 2-00
ನಿಯಮಿತ (ಕಂಟ್ರಾಕ್ಟ್)
ಕಲಂ ಸೆಂಟಿಮೀಟರಿಗೆ ರೂ. 1-50

ಸೂಚನೆಗಳು

ಲೇಖಕ ಬಂಧುಗಳಿಗೆ

ಲೇಖನವು ಕಿರಿದಾಗಿದ್ದು ಹಿರಿದರ್ಥದಿಂದ ಕೂಡಿರಬೇಕು ಕಾಲು ಕಾವಿನ ಪ್ರಮಾಣದ ಹಾಳೆಯ ಒಂದೇ ಮಗ್ಗುಲಲ್ಲಿ ಬದಿಯಂಚುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು. ಆಧಾರಿತ, ಅನುವಾದಿತವಾದರೆ ಅವುಗಳ ಮೂಲವನ್ನೂ ತಿಳಿಸಬೇಕು.

ಚಂದಾದಾರರಿಗೆ—

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಮುಖಪತ್ರದಲ್ಲಿ:

ಮಹಿಳೆಯರೂ ಉದ್ದಿಮೆಗಳಲ್ಲಿ ಮಿಂಚಬಲ್ಲರು. ಬರ್ಲಿಂಗ್‌ಟನ್ ಇಂಡಸ್ಟ್ರೀಸ್‌ನಲ್ಲಿ ಪ್ಯಾಕಿಂಗ್ ಕಾರ್ಯತತ್ಪರೆಯಾಗಿರುವ ಕತ್ರಿ ಎಲ್ಕ ಒಬ್ಬಾಕೆ ಆದರ್ಶ ದುಡಿಮೆಗಾರ್ತಿ.

ಎಚ್ಚರಿಕೆಯಿರಲಿ

ಚುನಾವಣೆಗಳ ಹಿನ್ನೆಲೆಯಲ್ಲಿ ಕಾರ್ಯತತ್ಪರರಾಗಬೇಕಾದ ಕಾಂಗ್ರೆಸ್ಸು ಇದೀಗ ಬಹು ದೊಡ್ಡ ಆಂತರಿಕ ಸಮಸ್ಯೆಯನ್ನು ಎದುರಿಸಬೇಕಾಗಿ ಬಂದಿದೆ. ಈ ಸಮಸ್ಯೆಯನ್ನು ಹೀಗೆಯೇ ಉಳಿಯಗೊಟ್ಟರೆ ಅದು ಉಲ್ಬಣಿಸಿ, ಕಾಂಗ್ರೆಸ್ಸಿನ ನಾಶಕ್ಕೂ ಜತೆಗೆ ದೇಶದ ಅರಾಜಕತೆಗೂ ಕಾರಣವಾಗಬಹುದು. ಏಕೆಂದರೆ, ಇಂದು ನಮ್ಮ ದೇಶದಲ್ಲಿ ಆಡಳಿತ ಸೂತ್ರವನ್ನು ಹಿಡಿದು ಸರಿದಾರಿಯಲ್ಲಿ ನಡೆಸಬಲ್ಲ ಪಕ್ಷ ಕಾಂಗ್ರೆಸ್ ಒಂದೇ. ಉಳಿದ ವಿರೋಧಿ ಪಕ್ಷಗಳು ಸಂಖ್ಯೆಯಲ್ಲಿ ಬೆಳೆದು ಬಂದಿವೆಯೇನೋ ನಿಜ; ಆದರೆ ಪ್ರಮಾಣದಲ್ಲಿ ಚಿಕ್ಕದಾಗುತ್ತಲೇ ಬರುತ್ತಿವೆ. ಈಗ ಏಳುತ್ತಿರುವ ಬಿರುಕಿಗೆ ಕಾರಣವೇನು ಎಂಬುದನ್ನು ಕಾಂಗ್ರೆಸ್ ಅಧ್ಯಕ್ಷ ಕಾಮರಾಜರು ಕಂಡುಕೊಳ್ಳಬೇಕು. ಪ್ರೊ| ಹುಮಾಯೂನ ಕಬೀರರಂತಹ ಮಾಜಿ ಮಂತ್ರಿಗಳೇ ಕಾಂಗ್ರೆಸ್ಸನ್ನು ನಿಂದಿಸಿ ಮುಂದೆ ಬಂಗಲಾ ಕಾಂಗ್ರೆಸ್ಸನ್ನು ಸೇರುವರೆಂಬುವಾಗ, ಇದೇ ಗಾಳಿ ಎಲ್ಲೆಲ್ಲಿ ಯಾಕೆ ಬೀಸಬಾರದು ಎಂಬ ಸಂದೇಹವೇಳುತ್ತದೆ.

ಪ್ರೊ| ಕಬೀರರು ಹಲವಾರು ಆರೋಪಗಳನ್ನು ಕಾಂಗ್ರೆಸ್ಸಿನ ಮೇಲೆ ಹೊರಿಸಿದ್ದಾರೆ. "ವರಿಷ್ಠರು ಕಾಂಗ್ರೆಸ್ ಸಂಸ್ಥೆಯನ್ನು ತಮ್ಮ ಬಿಗಿ ಮುಷ್ಟಿಯಲ್ಲಿಟ್ಟುಕೊಂಡಿದ್ದಾರೆ; ಸಂವಿಧಾನಕ್ಕನುಗುಣವಾದ ಪ್ರಗತಿಯಲ್ಲಿ ಸಾಮಾನ್ಯ ಮನುಷ್ಯನಿಗಿರುವ ವಿಶ್ವಾಸವನ್ನು ತುಚ್ಛೀಕರಿಸಿದ್ದಾರೆ." ಆಂತರಿಕವಾಗಿ ಸುಧಾರಿಸುವ ಪ್ರಯತ್ನಗಳು ಸದ್ಯ ಯಶಸ್ವಿಯಾಗಲಾರವು ಎಂಬ ನಿರಾಶೆಯಿಂದ ಪ್ರೊಫೆಸರರು ಕಾಂಗ್ರೆಸ್ಸಿನಿಂದ ಸಿಡಿದು ಹೋಗುವುದಾಗಿಯೂ ತನ್ನ ಮೂಲಭೂತ ತತ್ವಗಳನ್ನು ಚಾಚೂ ತಪ್ಪದ ಆಚರಣೆಯಲ್ಲಿ ತರಬಲ್ಲ ಹೊಸ ಕಾಂಗ್ರೆಸ್ ಸಂಸ್ಥೆಯನ್ನು ಕಟ್ಟುವುದಾಗಿಯೂ ಹೇಳುತ್ತಾರೆ. ದಿ| ನೆಹರೂ ಮತ್ತು ಲಾಲ ಬಹದೂರರ ಮಂತ್ರಿ ಮಂಡಳದಲ್ಲಿ ಗಣ್ಯ ಮಂತ್ರಿಗಳಾಗಿದ್ದ ಹುಮಾಯೂನ ಕಬೀರರ ನಿರ್ಗಮನ ಮತ್ತವರ ಅಭಿಪ್ರಾಯಗಳನ್ನು ಕಾಂಗ್ರೆಸ್ಸು ಕಡೆಗಣಿಸಿ ಕೂತುಕೊಳ್ಳುವಂತಿಲ್ಲ. ಪ್ರೊ| ಕಬೀರರು ಬಂಗಾಲಕ್ಕೆ ಸೇರಿದವರು. ಆದಿಯಿಂದಲೂ ಬಂಗಾಳ ಹುಲಿಗಳ ನಾಡು. ಇಲ್ಲಿನ ಅನೇಕಾನೇಕ ಹುಲಿಗಳು ದೇಶಕ್ಕೆ ಕೀರ್ತಿ ತಂದವು; ಕ್ರಾಂತಿಯೆಬ್ಬಿಸಿವೆ; ಯಶಗಳಿಸಿವೆ. ಬಂಗಾಳ ವಿಭಜನೆಯ ಸಾಮ್ರಾಜ್ಯಶಾಹಿ ನೀತಿಯನ್ನು ಪ್ರತಿಭಟಿಸಿ ವಿಜಯ ಗಳಿಸಿವೆ. ಮಾತ್ರವಲ್ಲ ಸ್ವಾತಂತ್ರ್ಯೋತ್ತರ ಕಾಲದಲ್ಲಿ ವಿರೋಧ ಪಕ್ಷಗಳ ಬಲವೂ ಅಲ್ಲಿ ಹೆಚ್ಚಿದೆ. ಕೇರಳವನ್ನು ಬಿಟ್ಟರೆ ಕಮ್ಯುನಿಸ್ಟರು ಪ್ರಬಲರಾಗಿರುವ ಇನ್ನೊಂದು ರಾಜ್ಯವೆಂದರೆ ಬಂಗಾಳ. ಅಲ್ಲಿನ ಆಡಳಿತೆಯೂ ತುಸು ಸಮಸ್ಯಾತ್ಮಕವೆಂದೇ ಹೇಳಬೇಕು. ಕಾಂಗ್ರೆಸ್ಸಿಗೆ ಬಹುಮತವಿದ್ದರೂ ಅದನ್ನು ತಲೆಕೆಳಗು ಮಾಡುವ ಪ್ರಯತ್ನ ನಡೆದೇ ಇತ್ತು. ಡಾ| ಬಿ. ಸಿ. ರಾಯ್‌ರವರ ಅಧಿಕಾರದ ವೇಳೆ ಅವರು ಎಲ್ಲವನ್ನೂ ಸಹಿಸಿದ್ದರು, ಎದುರಿಸಿದ್ದರು. ಈ ಕಾರಣದಿಂದಲೇ ಅವರ ಮಾತು, ಕ್ರಮಗಳಿಗೆ ಪಂ| ನೆಹರುರವರೂ ಮಾರು ಹೋಗುತ್ತಿದ್ದರು. ಆದರೆ, ಇಂದಿನ ಸೇನ ಸರಕಾರ ದುರ್ಬಲವಾಗಿದೆ. ಇಂತಹ ರಾಜ್ಯದಲ್ಲಿ ಬಂಗಲಾ ಕಾಂಗ್ರೆಸ್ಸು ಕಾಂಗ್ರೆಸ್ ಪಕ್ಷದೆದುರಿಗೆ ಸೆಡ್ಡು ಹೊಡೆದು ಗೆದ್ದು ಬರುವ ಪ್ರಸಂಗವೂ ಹೆಚ್ಚು.

ಮೂರು ವರ್ಷಗಳಿಗೆ ಮೊದಲು ಕೇರಳದಲ್ಲಿ ಬಂಡುಗಾರ ಕಾಂಗ್ರೆಸ್ಸು ರೂಪುಗೊಂಡಿತು. ಅದರ ಪರಿಣಾಮವನ್ನು ನಾವು ಮಧ್ಯಾವಧಿ ಚುನಾವಣೆಗಳಲ್ಲಿ ಕಂಡೆವು. ಕರ್ನಾಟಕದಲ್ಲಿ ಅತೃಪ್ತ ಕಾಂಗ್ರೆಸಿಗರೆಲ್ಲರೂ ಒಂದು ಸೇರಿ ಜನತಾ ಪಕ್ಷವನ್ನು ಕಟ್ಟಿದರು. ಬಂಗಾಳದಲ್ಲಿ ಬಂಗಾಳ ಕಾಂಗ್ರೆಸ್ಸು ಈಗಾಗಲೇ ರೂಪುಗೊಂಡಿದೆ. ಪ್ರೊ| ಕಬೀರರಂತಹ ಪ್ರಭಾವಿ ವ್ಯಕ್ತಿಗಳಿಂದ ಇದು ಬೆಳೆದು ಬರುವುದೂ ಖಂಡಿತ. ಇಂತಹ ವಿಶ್ವಾಸದಿಂದಲೇ ಅವರು ಕಾಂಗ್ರೆಸ್ ಅಧ್ಯಕ್ಷರಿಗೆ ಎಚ್ಚರಿಕೆ ನೀಡಿದ್ದಾರೆ: ಕೆಲವೆಡೆ ಕಾಂಗ್ರೆಸ್ಸು ಚುನಾವಣೆಗಳಲ್ಲಿ ಸೋಲಲಿದ್ದೀತು—ಎಂದು. ಒರಿಸ್ಸಾದಲ್ಲಿ ಮುಖ್ಯಮಂತ್ರಿ ಶ್ರೀ ಸದಾಶಿವ ತ್ರಿಪಾಠಿಯವರ ವಿರುದ್ಧ ಅವರ ಮಂತ್ರಿ—ಉಪಮಂತ್ರಿಗಳು ನಡೆಸಿದ ಕಾರಸ್ಥಾನ ಇನ್ನೊಂದು ಉದಾಹರಣೆ. ರಾಜಿನಾಮೆಯನ್ನು ಹಿಂತೆಗೆದುಕೊಳ್ಳಬೇಕೆಂಬ ಕಳಕಳಿಯ ವಿನಂತಿಯನ್ನೂ ಅವರು ತಿರಸ್ಕರಿಸಿ ಹೊಸತೊಂದು ಸಮಸ್ಯೆಯನ್ನು ತಂದಿಟ್ಟಿದ್ದಾರೆ. ಮಾಜಿ ಮುಖ್ಯಮಂತ್ರಿ ಶ್ರೀ ಬಿಜೂ ಪಟ್ನಾಯಕರ ಕೈವಾಡವೂ ಇದರಲ್ಲಿದೆಯೆಂದರೆ, ಇದೊಂದು ಮಹಾ ಸಂಚೆನ್ನದೆ ಗತ್ಯಂತರವಿಲ್ಲ. ಮಹಾರಾಷ್ಟ್ರದಲ್ಲಿ ಎದ್ದ ಬಿರುಗಾಳಿ ಅಲ್ಲಿಯೇ ಶಾಂತಗೊಂಡಿತು. ಇವೆಲ್ಲಾ ಹಿನ್ನಲೆಯಲ್ಲಿ ತಲೆದೋರಿರುವ ಸಮಸ್ಯೆಯನ್ನು ಪರಿಶೀಲಿಸುವಾಗ ಇದು ಉಗ್ರರೂಪ ತಾಳುವ ಎಲ್ಲ ಚಿಹ್ನೆಗಳಿವೆ. ಕೇರಳ ಕಾಂಗ್ರೆಸ್ಸು ಹುಟ್ಟುವಾಗಲೇ ನಾವು ಈ ಉದ್ಭವಿಸಿರುವ ಪ್ರಶ್ನೆ ಏಳುವ ಸಾಧ್ಯತೆಯನ್ನು ಸೂಚಿಸಿದ್ದೆವು. ಅದೀಗ ಸತ್ಯವಾಗಿದೆ. ಹೀಗೆ ಪ್ರತಿ ರಾಜ್ಯದಲ್ಲೂ ಅತೃಪ್ತರ ಕಾಂಗ್ರೆಸ್ (ಇಂದಿನ ಅಧಿಕಾರ ವ್ಯಾಮೋಹಿಗಳೂ ಮುಂದೆ ಅತೃಪ್ತರಾಗಬಹುದು) ಮತ್ತು ಕಾಂಗ್ರೆಸ್ (ಮುಂದೆ ಕಾಲಗಳ ಆಳುವ ಪಕ್ಷ?) ಎಂದು ಹಬ್ಬಿಸಿದರೆ, ಅದಕ್ಕಿಂತ ದೊಡ್ಡ ದುರಂತ ಭಾರತಕ್ಕೆ ಬೇರೆಯಿಲ್ಲ. ಈ ದುರಂತದಿಂದ ದೇಶವನ್ನು ಸಂರಕ್ಷಿಸುವುದಕ್ಕಾಗಿ ಕಾಂಗ್ರೆಸ್ಸು ಮುಂದೆ ಬರಬೇಕು. ಯಾವ ಬೆಲೆ ತೆತ್ತಾದರೂ ದೇಶದ ಉಳಿವಿಗಾಗಿ, ಬೆಳವಿಗಾಗಿ ಅದು ದುಡಿಯಬೇಕು.

ವೆರ್‌ವರ್ಡರ ದುರಂತ

ಊರಿನ ದಾರಿಯನ್ನಳೆದು ಸ್ನೇಹದ ದಾರಿಯನ್ನು ನಿರ್ಮಿಸಿದ ದಕ್ಷಿಣ ಆಫ್ರಿಕೆಯ

(೯ನೇ ಪುಟ ನೋಡಿರಿ)

ಶ್ರೀ ಬಿ. ಎ. ದೇಸಾಯಿಯವರಿಂದ

ವಿಜಯ ಬ್ಯಾಂಕಿನ ಪ್ರಶಂಸೆ

ಸ್ವೀಕಾರದಲ್ಲಿ ಅತ್ಯುದಾರತೆ—ಎನ್ನುತ್ತಾರೆ ಹುಬ್ಬಳ್ಳಿ ಸಿಟಿ ಬ್ಯಾಂಕಿನ ಅಧ್ಯಕ್ಷರು.

ಹುಬ್ಬಳ್ಳಿ, ಆಗೋಸ್ತು 28
(ನಮ್ಮ ಪ್ರತಿನಿಧಿಗಳಿಂದ)

ಹುಬ್ಬಳ್ಳಿ ಸಿಟಿ ಬ್ಯಾಂಕ್ ಲಿಮಿಟೆಡನ್ನು ವಿಜಯ ಬ್ಯಾಂಕ್ ಲಿಮಿಟೆಡ್ ಇದರೊಂದಿಗೆ ಸಮಾವೇಶಗೊಳಿಸುವ ಸಮಾರಂಭದಲ್ಲಿ ಹುಬ್ಬಳ್ಳಿ ಸಿಟಿ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಬಿ. ಎ. ದೇಸಾಯಿಯವರು ಮಾತಾಡುತ್ತಾ ವಿಜಯ ಬ್ಯಾಂಕಿನ ಅದ್ಭುತ ಪ್ರಗತಿಯನ್ನು ಮುಕ್ತಕಂಠದಿಂದ ಕೊಂಡಾಡಿದರು.

ಹುಬ್ಬಳ್ಳಿ ಸಿಟಿ ಬ್ಯಾಂಕನ್ನು ಕಟ್ಟಿ ಬೆಳೆಸಲು ಕಾರಣರಾದವರಿಗೆ ಕೃತಜ್ಞತೆಯನ್ನು ಸಲ್ಲಿಸುತ್ತಾ ಶ್ರೀ ದೇಸಾಯಿಯವರು "ನಮ್ಮ ನಿಯಂತ್ರಣಕ್ಕೆ ಮೀರಿದ ಕಾರಣಗಳಿಗಾಗಿ ನಾವು ಈ ಸಂಸ್ಥೆಯನ್ನು ಪ್ರಗತಿಶೀಲವಾದ ದೊಡ್ಡ ಬ್ಯಾಂಕು ದಿ ವಿಜಯ ಬ್ಯಾಂಕ್ ಲಿಮಿಟೆಡ್, ಮಂಗಳೂರು ಇದಕ್ಕೆ ವಹಿಸುತ್ತಿದ್ದೇವೆ. ನಮ್ಮ ಈ ಶಿಶುವನ್ನು ಯೋಗ್ಯ ಕೈಗಳಿಗೊಪ್ಪಿಸುತ್ತಿರುವೆವೆಂದು ನನಗೂ ನನ್ನ ಡೈರೆಕ್ಟರುಗಳಿಗೂ ಸಂತೋಷವಾಗಿದೆ."

ಪ್ರಭಾವಶಾಲಿ ಮುಂದಾಳುತನ

ವಿಜಯ ಎಂಬ ಹೆಸರೇ ನಮಗೆಲ್ಲ ಜಯಸೂಚಕವಾಗಿದೆ. ವಿಜಯ ಬ್ಯಾಂಕು ೩೫ ವರ್ಷಗಳ ಹಿಂದೆ ಅಸ್ತಿತ್ವಕ್ಕೆ ಬಂತು. ನನ್ನ ಸ್ನೇಹಿತರೂ ಆ ಬ್ಯಾಂಕಿನ ಅಧ್ಯಕ್ಷರೂ ಆಗಿರುವ ಶ್ರೀ ಎಂ. ಸುಂದರರಾಮ್ ಶೆಟ್ಟರ ಪ್ರಭಾವಶಾಲಿ ಮುಂದಾಳುತನದಲ್ಲಿ ಅದು ಗಮನಾರ್ಹ ಪ್ರಗತಿಪಡೆದಿದೆ."

ಶ್ರೀ ಸುಂದರರಾಮ ಶೆಟ್ಟಿ ಮತ್ತವರ ಡೈರೆಕ್ಟರರು ಹುಬ್ಬಳ್ಳಿ ಸಿಟಿ ಬ್ಯಾಂಕಿನ ಸಿಬ್ಬಂದಿ ಮತ್ತು ಪಾಲುದಾರರನ್ನು ಅವರಿಗೆ ತಕ್ಕುದಾದ ಉದಾರತೆ ಮತ್ತು ಸರಳ ಮನೋಭಾವದಿಂದ ಉಪಚರಿಸಿದ್ದಾರೆ. ನಾವು ಆಶಿಸಿದುದಕ್ಕಿಂತಲೂ ಹೆಚ್ಚಿನ ಲಾಭ ನಮಗಾಗಿದೆ! ನಾವು ಅವರಿಗೆ ಋಣಿಗಳಾಗಿರುವೆವು. ಹುಬ್ಬಳ್ಳಿ ಸಿಟಿ ಬೇಂಕಿನ ಗ್ರಾಹಕರು ಮತ್ತು ಠೇವಣಿದಾರರಿಗೆ ಅದೇರೀತಿಯ ಉದಾರ ಉಪಚಾರವು ವಿಜಯ ಬ್ಯಾಂಕಿನ ಆಡಳಿತ ವರ್ಗ ಮತ್ತು ಸಿಬ್ಬಂದಿಯವರಿಂದ ದೊರೆಯುವುದೆಂದು ನಂಬಿದ್ದೇವೆ.

ಮಹಾ ಪ್ರಗತಿ

ಮೈಸೂರು ರಾಜ್ಯದ ಆರೋಗ್ಯ ಮಂತ್ರಿಗಳಾದ ಡಾ| ಕೆ. ನಾಗಪ್ಪ ಆಳ್ವರು ನಮ್ಮ ಮುಖ್ಯ ಅತಿಥಿಗಳಾಗಿ ಸಮ್ಮೇಳನಕ್ಕೆ ದೂರದ ಬೆಂಗಳೂರಿನಿಂದ ಬಂದಿರುವರು. ಈ ಶುಭ ಸಮಾರಂಭದಲ್ಲಿ ಭಾಗವಹಿಸಲಿಕ್ಕಾಗಿ ಅವರು ಕೈಗೊಂಡ ಕಠಿಣ ಪ್ರಯಾಣದ ಕಷ್ಟಸಹಿಷ್ಣುತೆಗೆ ನಾವು ಕೃತಜ್ಞರು.

ತಮ್ಮ ಅಮೂಲ್ಯ ಸಮಯವನ್ನು ಇಲ್ಲಿ ಹಾಜರಿರಲು ವ್ಯಯಿಸಿದ ಸರ್ವರಿಗೂ ನಾನು, ನನ್ನ ಮಿತ್ರ ಹಿಂದಿನ ಹುಬ್ಬಳ್ಳಿ ಸಿಟಿ ಬ್ಯಾಂಕಿನ ಪಾಲುದಾರರ ಮತ್ತು ಡೈರೆಕ್ಟರರ ಪರವಾಗಿ ಹೃತ್ಪೂರ್ವಕವಾಗಿ ವಂದಿಸುತ್ತೇನೆ. ನಮ್ಮ ಬ್ಯಾಂಕನ್ನು ವಹಿಸಿಕೊಂಡ ವಿಜಯ ಬ್ಯಾಂಕಿಗೆ ನಮ್ಮ ಆಶೀರ್ವಾದವನ್ನೂ, ಮುಂದಿನ ದಿನಗಳಲ್ಲಿ ಹೆಚ್ಚಿನ ಜಯವನ್ನೂ ಹಾರೈಸುತ್ತೇನೆ.

ಗೇಣ ರಾಜ್ಯದಲ್ಲಿ

ಇಲೆಕ್ಷನ್ನಿಗೆ ನಿಂತು ಬಿಡೇ...

'ಏನ್ರಿ ಇವತ್ತು ಇಷ್ಟು ಹೊತ್ತಾದ್ದ?'

"ಎಷ್ಟಾದ್ರೆ ಏನಂತೆ? ಏನೋ ತುಸು ಕೆಲ್ಸವಿತ್ತು ನನ್ಗೆ....'

"ಅದು ಗೊತ್ತಾಗ್ರಿ. ಕೆಲ್ಸವಿಲ್ದೆ ಸುಮ್ಸುಮ್ನೆ ತಡ ಮಾಡೋರಲ್ಲ ನೀವು. ಆದ್ರೆ, ಆದ್ಯಾವ ಮಹತ್ವದ ಕೆಲ್ಸಾಂತ ಕೇಳಬಹುದೆ?'

'ಓಹೋ, ಕೇಳೋಕೆ ಏನಂತೆ? ಹೊಲತಿಯರ. ಹಂಸ್ಚಂದ್ರನಿಂದ ಶ್ವೇತಚ್ಛತ್ರವನ್ನು ಕೇಳಿಲ್ಲವೆ?'

"ಹ್ಞಾಂ...ಅರ್ಥವಾಯ್ತು ಬಿಡಿ. ನೀವು ಹೇಳೋದಿಲ್ಲಾಂತಾದ ಮೇಲೆ ನಾನು ಕೇಳಿಯೂದ್ರೂ ಏನ. ಪ್ರಯೋಜನ?"

"ಅಲ್ವೆ, ನಿನ್ನನ್ನ ಈ ಬಾರಿ ಇಲೆಕ್ಷನ್ನಿಗೆ ನಿಲ್ಲಿಸ್ಬೇಕು...'

"ನನ್ನನ್ನ ಯಾಕೆ? ನೀವೇ ನಿಂತ್ಬಿಡಿ..."

'ಯಾಕೆ ಅಂತೆ.... ನೋಡು, ನೀನು ನಿಂತ್ರೇನೇ ಗೆಲ್ಲೋ ಸಂಭವ ಹೆಚ್ಚು. ಯಾಕೆ ಅಂತೀಯ?'

"ಹ್ಞಾಂ.... ಹೊಡೀರಿ ನಗಾರಿ....'

'ನೋಡು, ಮೊದಲನೆಯದಾಗಿ ನಿನ್ನದು ಸ್ತ್ರೀಲಿಂಗ. ಅಭ್ಯರ್ಥಿಗಳಲ್ಲಿ ಮಹಿಳೆಯರಿಗೆ ಸ್ಥಾನವೀಯುವ ಸರ್ಕ್-ಪರಿವಾರದಿಂದ ನಿನ್ನಂತಹ ಸಾಕಷ್ಟು ಅಕ್ಷರಾಭ್ಯಾಸ ಮಾಡಿದವಳಿಗೆ ಟಿಕೇಟು ಖಂಡಿತ.... ಕಾಂಗ್ರೆಸಿದ್ದು ಸಿಗಲಿಲ್ಲಾಂತಾದ್ರೆ ಉಳಿದವ್ರದ್ದು ಇದೆ ತಾನೆ?'

'ಅಂದ್ರೆ, ನೀವನ್ನೋದೇನು? ಯಾವ ಪಕ್ಷವಾದ್ರೂ ಚಿಂತಿಲ್ಲಾಂತ...'

"ನೋಡವ್ವ, ಇದು ಚುನಾವಣಾ ವರ್ಷ. ಈಗ ನಿಮ್ಮ ಗುರಿ ಒಂದೇ—ಗೆಲ್ಲೋದು, ಗೆಲ್ಲೋದು, ಗೆಲ್ಲೋದು...."

'ಹೇಗೆ?'

"ನೋಡು, ಒಂದು ಕಾಲವಿತ್ತು. ಗಂಡ ಹೆಂಡ್ತಿಯೊಡನೆ ತಲ್ಲಾಖ ತಲ್ಲಾಖ ತಲ್ಲಾಖ ಅಂತ ಮೂರು ಬಾರಿ ಅಂದುಬಿಟ್ರೆ ಮುಗೀತು—ದಾಂಪತ್ಯ ವಿಚ್ಛೇದನವಾಯಿತು. ಆದರೆ, ಈಗ ನಿನ್ನ ಹಾಗೆನೇ ಎಲ್ಲರೂ ಯಾಕೇ ಅಂತ ಕೇಳ್ಲಿಕ್ಕೆ ಶುರು ಮಾಡಿದರೆ, ಗಂಡನೆಂಬೋ ಪ್ರಾಣಿ ಯಾವ ಉತ್ತರವನ್ನು ಕೊಡಬೇಕು?"

'ಅಂದ್ರೆ, ಗಂಡ ಹೇಳಿದ್ದನ್ನೆಲ್ಲಾ ಕೇಳಿಕೊಂಡು ಸುಮ್ನೆ ಇರ್ಬೇಕೇನು?"

"ಪತಿಭಕ್ತ ಪರಾಯಣೆಯಾಗಿರಬೇಕು."

"ಅಂದರೆ?"

'ಇಲೆಕ್ಷನ್‌ನಲ್ಲಿ ವಿಜಯ ಪರಾಯಣರಾಗಿ ಅಭ್ಯರ್ಥಿಗಳು ಇರೋದಿಲ್ವೆ ಹಾಗೆ...."

'ಅಂದ್ರೆ ಗಂಡ ಕುಣಿಸುವ ಹಾಗೆ ನಾವು ಕುಣಿಬೇಕು..."

"ಅದಕ್ಕೆ ಮನಸ್ಸಿಲ್ಲಾಂತಾದ್ರೆ ನೀವು ಕುಣಿದಂತೆ ಗಂಡ ಹಗ್ಗ ಎಳೆದಂತೆ ಮಾಡ್ಬೇಕು—ಇಲ್ಲಾ ತಲ್ಲಾಖ್ ತಲ್ಲಾಖ್.."

"ತಡೀರಿ ಸ್ವಲ್ಪ...ಅಲ್ಲ, ಇಲೆಕ್ಷನ್ನಿಗೆ ನೀವೆ ನಿಂತು ಬಿಡೀಂದ್ರೆ...."

'ನೋಡು, ಇವತ್ತು ನಾನು ನಿಂತು ಗೆದ್ರೆ ನನ್ನೊಬ್ಬನ ಹೆಸ್ರು ಮಾತ್ರ ಬಂತು. ನಿನ್ನದಾದ್ರೆ ಹಾಗಲ್ಲಾ. ನಾನೂ ನೀನೂ ಇಬ್ರು ಗೆದ್ದಂತೆ...."

"ಅದು ಹೇಗ್ರಿ? ಒಬ್ರು ಗೆದ್ರೆ ಇಬ್ರು ಗೆಲ್ಲೋದು ಹೇಗೆ?"

"ನೋಡ್, ನೀನು ಗೆದ್ದು ಬಿಟ್ರೆ, ಯಾರು ಗೆದ್ದಂತೆ ಗೊತ್ತಾ....?"

"ಹೇಳಿಬಿಡಿ...'

'ಅದೇ ಅನ್ನೋದು. ನೀನು ಬರಿಯ ಮೊದ್ದು...'

'ನಿಮ್ಮ ಪುರುಷ ಜಾತಿಯೇ ಹಾಗೆ. ಹೆಂಡಂದಿರನ್ನ ಮೊದ್ದು, ಪೆದ್ದು ಎಂತ ಹಂಗಿಸೋಕೋ ಹುಟ್ಟಿದ್ದು...'

"ಮತ್ತೆಂಥದು? ನೀವು ಹಂಗಿಸಿಕೊಳ್ಳೋಕೆ ಹುಟ್ಟಿರುವಾಗ ನಾವು ಹಂಗಿಸದೆ ಇರೋದಕ್ಕೆ ಸಾಧ್ಯವೆ?'

'ಅಯ್ಯಯ್ಯೋ, ದೊಡ್ಡಸ್ತನವೆ? ಕಟ್ಟಿಡಿ ನೋಡೋಣ...."

"ಎಂಥದನ್ನ?"

"ಅದೇ ನಿಮ್ಮ ದೊಡ್ಡಸ್ತನಾನ್ನ....'

'ಏನಂತೆ? ಮೊಸ್ರು ಕುಡ್ಕೆ ಇನ್ನೂ ಮುಗೀಲಿಲ್ಲಾ?'

"ಎಲ್ಲಾ ಮುಗಿದಿದೆ ಮೊನ್ನೇನೇ...."

"ಏನೋ! ನಿನ್ನ ಮುಖ ಕಾಣೋವಾಗ ಇನ್ನೂ ಶೇಷ ಇದೇಂತ.."

"......."

"ಏನಂತೆ? ಬೇಸರವಾಯ್ತೇನು? ಅಯ್ಯೋ ಪಾಪವೆ...ಇಲ್ಲವ್ವಾ...'

'ಹೋಗಿ ಅತ್ಲಾಗೆ...'

"ಇದು ಮಹಾರಾಣಿಯರ ಆಜ್ಞೆ....'

"ಇರಬಹುದು..."

"ಮಂಥರೆಯಿಂದ ಪ್ರೇರಿತಳಾಗಿ ಕೋಪ ಭವನ ಹೊಕ್ಕ ಕೈಕೇಯಿಯನ್ನಾ ಮೀರಿಸಿ ಬಿಟ್ಟೆಯಲ್ಲಾ...."

"ಹ್ಞಾಂ...'

"ಅದನ್ರಾ ನಂಗೊತ್ತು..."

'ಏನು?"

'ಖುಲೀ ಪಲಕ್ ಮೇ ಝೂಟಾ ಗುಸ್ಸಾ ಬಂದ್ ಪಲಕ್ ಮೇ....ಪ್ಯಾರ್...'

"ಶುರುವಾಯ್ತು....ಅಂತೂ ನಮಗೆ ಬದುಕ್ಲಿಕ್ಕೂ ಇಲ್ಲ, ಸಾಯ್ಲಿಕ್ಕೂ ಇಲ್ಲ.'

"ಜೀನಾ ಭೀ ಮುಷ್ಕಿಲ್, ಮರನಾ ಭೀ ಮುಷ್ಕಿಲ್...'

"ಅದೆಲ್ಲಾ ಇರ್ಲಿ....ಅಲ್ಲ, ನಾನು ಗೆದ್ರೆ ಇಬ್ರು ಗೆದ್ದಂತೆ ಅಂದ್ರಲ್ಲಾ ಹೇಗೆ?"

"ಯಶೋಧರಮ್ಮ ಮಂತ್ರಿಯಾದಾಗ ದಾಸಪ್ಪನವ್ರೂ ಮಂತ್ರಿಯಾಗ್ಲಿಲ್ವೇ ಹಾಗೆ...."

"ಓ....ಹಾಗೆ... ಆಗ್ಲಿ. ಥಿಂಪ್ಗೆಲಾ ಟೋಪೀವಾಲಾರು ಇದ್ದಾರೆ. ನನಗೆ ಯಾರು ಟಿಕೇಟು ಕೊಡ್ತಾರೆ?'

'ಅಯ್ಯೊ, ಅದಕ್ಯಾಕೆ ಚಿಂತೆ? ಈ ಬಾರಿ ಮಹಿಳಾ ಪ್ರಧಾನಿಯಿರೋದು ಹಿಂದುಳಿದ ಮಹಿಳೆಯರನ್ನು ಭಾರಿ ಮುಂದೆ ತರಬೇಕು. ಆದ್ರ ಮೇಲೆ ಹೊಸ ಮುಖಗಳ ಬೇಟೆ ಬೇರೆ... ಹೀಗೆಲ್ಲಾ ಇರುವಾಗ...."

'ನೀವು ಏನೇ ಅನ್ನಿ ಇಲೆಕ್ಷನ್ನು ನಮಗೆ ಯಾಕೆ?"

"ಮತ್ತೆಂಥದು ಇಂಜೆಕ್ಷನ್ನು ಬೇಕೆ?"

"ಅದು ಮೊದಲು ಬೇಕು ನಿಂನಂಥವರಿಗೆ ಸುಮ್ಸುಮ್ನೆ ರಾಜಕೀಯದಲ್ಲಿ ತಲೆ ಹರಟೆ ಪ್ರಾವೀಣ್ಯ ಪ್ರದರ್ಶನ ಮಾಡುವ ರೋಗ ತಡೆಯೋಕೆ..."

'ಆಗ್ಲಿ...ಏನೋ ಒಂದು ನಾಲ್ಕು ಕಾಸು ಸಂಪಾದಿಸೋ ವಿದೆ ಕಲೀಂದ್ರೆ ಬೇಡ ಅಂತೀಯಲ್ಲಾ....ಹೋಗ್ಲಿ....ಅಂಬಲಿ ಉಣ್ಣೋದನ್ನು ಹಣೆಯಲ್ಲಿ ಬರೆದಿರುವಾಗ.'

'ಸಾಕೊಂದ್ರೆ....ನಿಮ್ಮ ಹಣೇಲೇ ಬರ್ದಿದೆ—ಕೈ ಹಿಡಿದವ್ಳಿಗೆ ಅಂಬಲಿ ಕುಡಿಸೂಂತ. ಮತ್ತೆ"

'ಅಂಥವನನ್ನೆ ಕೈ ಹಿಡಿ ಅಂತ ನಿನ್ನ ಹಣೆಯಲ್ಲಿ...."

"ನಾನೆಲ್ಲಿ ಕೈ ಹಿಡಿದಿದ್ದೇನೆ? ನೀವೇ ಅಲ್ವೆ ಆ ಮಧ್ಯಾಹ್ನದ ಉರಿ ಬಿಸ್ಲಲ್ಲಿ..."

'ಅಯ್ಯೋ ಪಾಪವೆ.... ಯಾಕೆ ಹಾಗಂದಿ?'

'ಆ ಬಾಡಿದ ಮುಖ, ಬರತ ಬಾಯಿ, ಪಾಡಳಿತ ಮತಿ— ಇವನ್ನೆಲ್ಲಾ ಕಂಡು......."

"ಆಷ್ಟ್ಯಾಕೆ ಕನಿಕರ.... ಕೀಚಕನನ್ನು ಭೀಮ ಕೊಂದು ಪಿಂಡ ಮಾಡಿದಾಗ ಅವನ್ನು ಕಂಡು ದ್ರೌಪದಿ ನೀರು ಸುರಿದಳಂತೆ—ಕಣ್ಣಲ್ಲಿ....'

"ಎಷ್ಟಾದ್ರೂ ಕೋಮಲ ಹೃದಯ ತಾನೆ?

"ಆ ಕೋಮಲತೆ ಈಗ ದೂರ ಕೋಮಲಾಂಗಿಯರು ಮಾತ್ರ ಕೋಮಲೆಯರು. ಈಗ ಪಮೂಜವಾದದ ಯುಗ, ಎಲ್ಲರೂ ಕಠೋರರು..."

"ಸರಿಯೇ, ಹುಟ್ಟುವುದರಲ್ಲಿ ಮತ್ತು ಸಾಯುವುದರಲ್ಲಿ..."

"ಅದು ಸರಿ ಕಣೇ. ನಮ್ಮ ತೀ.ನಂ. ಶ್ರೀಕಂಠಯ್ಯ ಏಳನೇ ತಾರೀಕಿನಂದು ದಿವಂಗತರಾದರಂತೆ..."

'ಆ್ಞಂ...ಏನಂದ್ರಿ? ಯಾವ ಶ್ರೀಕಂಠಯ್ಯ?"

"ಅದೇ ಅವ್ರು ತೀ.ನಂ. ಶ್ರೀ...."

'ಅಂದ್ರೆ......ಆ ನಿಘಂಟುವಿನ ಕೆಲ್ಸ ಮಾಡ್ತಿದ್ದವ್ರು...'

"ಹ್ಞಾಂ... ಬಿ. ಎಂ. ಶ್ರೀಯಂತೆ ಈ ತೀ.ನಂ. ಶ್ರೀ ಯವರು ಕನ್ನಡದ ಶ್ರೀಮುಡಿಗೆ ಕಂಪಿನರಳು ತಂಬಿದ ಕೃಪಾಪಾತ್ರ ಕಲಕತ್ರಿಗೆ ಮಗನನ್ನು ಕಾಣಲು ಹೋದಲ್ಲಿಯೇ ವ್ಯಕಿರಾದರು..."

'ಅದ್ರೆ ಯಾರಿಂದಲ್ಲ ಎಲ್ಲಿಯೂ ಶೋಕ ಪ್ರದರ್ಶನವಾಗಿಲ್ಲ....'

'ಮಂತ್ರಿಯಾಗಿದ್ರ ಆಗಿತ್ತು. ರಾಜಕೀಯಕ್ಕೆ ಈ ಸಾಹಿತ್ಯ- ಅಧ್ಯಾಪಕರನ್ನು ಯಾರು ಕೇಳ್ತಾರೆ? ಅವ್ರು ಇದ್ರೂ ಒಂದೇ, ಸತ್ರೂ ಒಂದೇ .."

'ಅಂದರೆ, ಜೀವನ್ಮೃತರು....'

"ಅದೂ ಸರೀನ್ನು. ಅವರು ಜೀವಂತರಿರುವಾಗ ಮೃತರಂತೆಯೇ ಇರುತ್ತಾರೆ, ಮೃತರಾದ ಮೇಲೂ ಜೀವಂತರಂತಿರುತ್ತಾರೆ..."

(ಒಂಭತ್ತನೇ ಪುಟ ನೋಡಿರಿ)

ಉಡ್ಪಿ ಮುನ್ಸಿಫ್ ಕೋರ್ಟಿನಲ್ಲಿ

O. S. No. 110/66.

ಸಿಂಡಿಕೇಟ್ ಬೇಂಕ್ ಲಿಮಿಟೆಡ್ ಮಣಿಪಾಳ ಇದರ ರಿಕವರಿ ಆಫೀಸರ M. S. ಭಂಡಾರಿ —ವಾದಿ

ಮತ್ತು

ಅಂಬಾ ಹೆಗ್ಗಡ್ತಿ ಕೂಡಾ—ಪ್ರತಿವಾದಿರು.

ಇವರೊಳಗೆ

ಪ್ರತಿವಾದಿರ್ಯ:

1. ಅಂಬಾ ಹೆಗ್ಗಡ್ತಿ-H. ರಾಮಣ್ಣ ಶೆಟ್ಟರ ಹೆಂಡ್ತಿ, 2. B. ದಿವಾಕರ ಹೆಗ್ಡೆ-H. ರಾಮಣ್ಣ ಶೆಟ್ಟರ ಮಗ, ಬಾಳಕಟ್ಟ ಬೀಡು, ಹಿರೇಬೆಟ್ಟು ಗ್ರಾಮ, ಉಡ್ಪಿ ತಾಲೂಕಿನಲ್ಲಿ ವಾಸಿಸುವವರು.

ಪ್ರತಿವಾದಿರಿಗೆ ತಿಳಿಯಪಡಿಸುವುದೇನೆಂದರೆ ನೀವು ತಾ. 15—4—1966ರಲ್ಲು ವಾದಿರಿಗೆ ಬರಕೊಟ್ಟ ಪ್ರೋಮಿಸರಿ ನೋಟಿನ ಅಸಲು ವ ತಾ. 1—7—65ರ ಲಾಗಾಯ್ತಿನ ಬಡ್ಡಿ ಕೇಳಿ ನಿಮ್ಮ ಮೇಲೆ ದಾವಾ ಮಾಡಿದ್ದಾರೆ. ಸದ್ರಿ ದಾವೆಯು ನಿಮ್ಮ ನೋಟೀಸಿನ ಬಗ್ಗೆ ತಾ. 19—9—66ಕ್ಕೆ ಇಟ್ಟಿದೆ. ಆ ಕುರಿತು ನೀವೇನಾದರೂ ಉದಾಹರಿಸುವದಿದ್ದರೆ ಆ ದಿವಸ ಹಗಲು 11 ಗಂಟೆಗೆ ಸರಿಯಾಗಿ ಈ ಕೋರ್ಟು ಮುಂದೆ ಬಂದು ಹಾಜ್ರಾಗಿ ಜಾಹೀರು ಮಾಡಿ ಕೊಳ್ಳ ತಕ್ಕದ್ದು

(By order of Court)

M. Damoder Kamath

Advocate for Plaintiff.

Udipi, Dated 8—9—1966.

ಪುತ್ತೂರು ಪ್ರಿನ್ಸಿಪಾಲ್ ಮುನ್ಸಿಫ್ ಕೋರ್ಟಿನಲ್ಲಿ

O. S. No. 43/1966

ಕೊಡಂಚಿ ಕರಿಯಪ್ಪ ಗೌಡ —ವಾದಿ.

ಮತ್ತು

ವೆಂಕಪ್ಪ ಪೂಜಾರಿ ಕೂಡಾ —ಪ್ರತಿವಾದಿರು.

ಸದ್ರಿ ವಾದಿ ಕಡೆಯಿಂದ.

3 ನೇ ಪ್ರತಿವಾದಿ ಬಂಗಾರುಪೂಜಾರಿ, ಕೊರಗಿತಿ ಹೆಂಗ್ಸಿನ ಮಗ. ಪುತ್ತೂರು ತಾಲ್ಲೂಕು ಕೊಡಾಜೆ ಗ್ರಾಮದಲ್ಲಿರುವವನೀಗೆ ಈ ಮೂಲಕ ತಿಳಿಯಪಡಿಸುವದೇನಂದರೆ—

ಮೇಲ್ಕಂಡ ಕೋರ್ಟಿನಲ್ಲಿ ವಾದಿಯು ದಾಖಲು ಮಾಡಿದ ಕೈಫೀತು ತಾರೀಕು 20—9—66ಕ್ಕೆ ಇಟ್ಟಿದೆ. ಆ ದಿವಸ ನೀವು ಸ್ವತಹಾ ವ ವಕೀಲರ ಮುಖಾಂತರ ಹಾಜ್ರಾಗಿ ಉಪಸ್ಥಿತರಾಗಿ ಕೊಳ್ಳತಕ್ಕದ್ದು. ತಪ್ಪಿದ್ದಲ್ಲಿ ನಿಂಮ ಗೈರು ಹಾಜರಿಯಿಂದ ಕೋರ್ಟಿನವರಿಗ ಯುಕ್ತ ಕಂಡಂತೆ ವ್ಯಾಜ್ಯವು ಪೈಸಲು ಮಾಡೋಣಾದೀತೆಂತ ತಿಳಿಯತಕ್ಕದ್ದು

(By Court order)

K. Subramanya Gowda

Advocate for Plaintiff

Puttur, 27—8—66.

ಪುತ್ತೂರು II ಎಡಿಶನಲ್ ಮುನ್ಸಿಫ್ ಕೋರ್ಟಿನಲ್ಲಿ

R. I. A. 695/66

in O. S. 87/64.

ಪರಮೇಶ್ವರಿ —ಅರ್ಜಿದಾರಳು.

ಮತ್ತು

ಪುಕ್ರಪ್ಪ ರೈ ಕೂಡಾ —ಎದ್ರಿರು.

2 ನೇ ಎದ್ರಿ ಲಕ್ಷ್ಮಿ ಹೆಂಗ್ಸಿಗೆ—

Laxmi Hengsu, wife of Sheshappa Rai, residing at H. No. 622 VIXI Block, Bangalore—11

ಮೇಲಿನ ದಾವೆಯಲ್ಲಾದ ಪ್ರಿಲಿಮಿನರಿ ಡಿಕ್ರಿ ಪ್ರಕಾರ ಜವಾಬ್ದಾರಿ ಆಸ್ತಿ ವಿಂಗಡಿಸಿಕೊಳ್ಳುವ ಕುರಿತು ವಾದಿ—ಅರ್ಜಿದಾರಳು ನಿಮ್ಮ ಮೇಲೆ ಕೂಡಾ ಮಾಡಿದ ಮೇಲಿನ ಅರ್ಜಿಯು ತಾ. 19—9—66ಕ್ಕೆ ನಿಮ್ಮ ಹಾಜರಾತಿ ಬಗ್ಗೆ ವ ಆಕ್ಷೇಪಗಳಿದ್ದಲ್ಲಿ ತಿಳಿಸುವುದಕ್ಕೆ ನ್ಯಾಯ ಇರುತ್ತದೆ. ಅದುದರಿಂದ ನೀವು ಆ ದಿವಸ ಬೆಳಗ್ಗೆ 11 ಗಂಟೆಗೆ ಸರಿಯಾಗಿ ಮೇಲ್ಕಾಣಿಸಿದ ಕೋರ್ಟು ಮುಂದೆ ಹಾಜರಾಗಿ ಉದಾಹರಿಸಿಕೊಳ್ಳಲು ತಪ್ಪಿದಲ್ಲಿ ನಿಮ್ಮನ್ನು ಏಕ್ಸ್‌ಪಾರ್ಟಿ ಮಾಡಿ ಮುಂದುವರಿಸಲಾದೀತೆಂತ ಕೋರ್ಟು ಹುಕ್ಮಿಂ ಮೇರೆಗೆ ನಿಮಗೆ ತಿಳಿಸೋಣಾಗಿಯದೆ.

(Sd) K. T. Bhat

Advocate for Peti.

ಪುತ್ತೂರು, 29—8—66.

ಒಂದು ಸಲಹೆ

ನಿಮಗೆ ಮನೆ ಬೇಕೆ?

ಬರೆದವರು
ಶ್ರೀ ಶಿವಶಂಕರ

ಮನೆ ಸಿಗಬಹುದೇ? ಮನೆ ಸಿಗಬಹುದೇ? ಕೇಳುತ್ತ ಮಾರ್ಗದಲ್ಲಿ ತಿರುಗಾಡುತ್ತಿರುವ ಮಂದಿಗಳಿಗೇನೂ ಬರಗಾಲ ಬಂದಿಲ್ಲ. ಅಬ್ಬಾ! ಮನೆಗಾಗಿ ಕಷ್ಟಪಡುತ್ತಿರುವ ಜನಗಳೇ! ಹೌದು. ಮನೆ ಬಾಡಿಗೆಗೆ ಕಂಡು ಹಿಡಿಯುವದು ದೊಡ್ಡ ದೊಡ್ಡ ಪಟ್ಟಣಗಳಲ್ಲಂತೂ ಬಾರೀ ಪ್ರಯಾಸದ ಕೆಲಸವೇ ಸರಿ. ಆದರೆ ಅದೆಷ್ಟು ಸುಲಭದ ಕೆಲಸವೆಂಬುದೀಗ ಬಯಲಾಗಿರುತ್ತದೆ.

ಕೆಲ ದಿನಗಳ ಹಿಂದೆ ಭಾರತದ ರಾಜ್ಯಸಭೆಯಲ್ಲಿ ಮನೆಗೆ ಸಂಬಂಧಪಟ್ಟ ಸಂಶಯವೊಂದು ಪ್ರಶ್ನೆಯು ರೂಪತಾಳಿತು. ಎದುರು ಪಕ್ಷಗಳವರು ಕಾಂಗ್ರೆಸ್ಸಿಗರ ಅಥವಾ ಆಳುವ ಪಕ್ಷಕ್ಕೆ ಸೇರಿದವರತ್ತ ಕೈ ತೋರಿಸಿದರು. ಅನರು ಕಮ್ಯೂನಿಸ್ಟ ಪಕ್ಷದವರತ್ತ ಬೊಟ್ಟು ತೋರಿಸಿದರು. ಅವರು ಮುಷ್ಟಿಯನ್ನೆತ್ತಿದೊಡನೆ 'ಹಾಗಲ್ಲ ಮಾರಾಯಾ, ಹೀಗೆ' ಎಂದು ಸಂತೈಸಿದರು ಕಾಂಗ್ರೆಸ್ಸಿಗರು.

ದೆಹಲಿಯಲ್ಲಿ ಸರಕಾರೀ ವಾಸಸ್ಥಾನಗಳಿವೆ ಅವನ್ನು ರಾಜಕೀಯ ಪಕ್ಷಗಳ ಮುಖಂಡರಿಗೆ ಅಂದರೆ ಅಧ್ಯಕ್ಷರಿಗಾಗಿ ಆ ವಾಸಸ್ಥಾನಗಳನ್ನು ಸರಕಾರ ಕಟ್ಟಿಸಿರುತ್ತದೆ. ಅವನ್ನು ಪುಕ್ಕಟೆಯಾಗಿ ಬಿಟ್ಟುಕೊಡುವದಿಲ್ಲವಾದರೂ, ದೆಹಲಿಯಲ್ಲಿ, ಅಷ್ಟು ಕಡಿಮೆ ಬಾಡಿಗೆಗೆ, ರಾಜಭೋಗ ಸಿಗಬೇಕಲ್ಲಾ! ಭಾರತದಲ್ಲಿ ಅದೆಷ್ಟು ರಾಜಕೀಯ ಪಕ್ಷಗಳಿವೆ, ಅವುಗಳಲ್ಲಿ ಅದ್ಯಾವ ಪಕ್ಷಗಳ ಪ್ರಮುಖರಿಗೆ ವಾಸಸ್ಥಾನ ಬೇಕು....ಈ ರೀತಿ ಸರಕಾರ ಪರಿಶೋಧನೆ ನಡಿಸಿ ಅವರನ್ನು ಕರೆದು ಆಮಂತ್ರಿಸಿ ಗೃಹಸ್ಥರನ್ನಾಗಿಸಿ ಮಾಡುವ ಸಂಪೂರ್ಣ ಜವಾಬ್ದಾರಿ ಸರಕಾರದ ಮೇಲಿರುವದಿಲ್ಲ. ಅಗತ್ಯ ಇರುವವರು, ತಮಗೆ ಮನೆಬೇಕೆಂದು ಮನವಿ ಸಲ್ಲಿಸಿ ಕೇಳಿಕೊಂಡಲ್ಲಿ ಅವರ ಯೋಗ್ಯತೆಯನ್ನು ಪರೀಕ್ಷಿಸಿ ನಂತರ ಮನೆ ಕೊಡಲಾಗುತ್ತದೆ. ಈ ಯೋಗ್ಯತೆಯ ರಹಸ್ಯ ಮಾತ್ರ ಯಾರಿಗೂ ಹೇಳುವಂತಹದ್ದಿರುವದಿಲ್ಲ. ಯಾರಿಗೆ ಮನೆಬೇಕೋ, ಅವರು ಅಖಿಲ ಭಾರತೀಯ ಪಕ್ಷದ ಪ್ರಮುಖರಾಗಿದ್ದಲ್ಲಿ ಅವರ ಕೇಳಿಕೆಗೆ ಮನ್ನಣೆ ಕೊಡಬೇಕೆಂದು ಎದುರು ಪಕ್ಷದವರು ಕೇಳಿಕೊಂಡಿದ್ದಾರೆ. ಅದಕ್ಕೆ ಮಂತ್ರಿ ಮಹಾಶಯರೂ ಒಪ್ಪಿಕೊಂಡಿದ್ದಾರೆ. ಇದು ಸಮಾಜವಾದದ ಸ್ವರವೆತ್ತುತ್ತಿರುವ ಸರಕಾರಕ್ಕೆ ಉತ್ತರವೇ ಎನ್ನುವ ಪ್ರಶ್ನೆ ಬರುತ್ತದೆ. ರಾಜಕೀಯ ಬಂಡವಾಳಶಾಹಿ ಎನ್ನುವಾಗ ದೊಡ್ಡ ಭಾರೀ ಪಕ್ಷಗಳತ್ತ ಕೈ ತೋರಿಸುವದು ನ್ಯಾಯವಲ್ಲವೇ? ಬಡ ಚಿಕ್ಕಪುಟ್ಟ ಪಕ್ಷಗಳಿಗೆ ನಾವು ಸಹಾಯ ಮಾಡದೆ ದೊಡ್ಡ ಶ್ರೀಮಂತ ಪಕ್ಷಗಳಿಗೆ ಆಶ್ರಯವನ್ನೀಡುವದು ಸಮಾಜವಾದ ಸ್ವರ ಎತ್ತುತ್ತಿರುವವರಿಗೆ ಸಮರ್ಪಕವಾಗಿದೆಯೇ? ಒಂದು ದೊಡ್ಡ ಪಕ್ಷದ ಪ್ರಮುಖನಿಗೆ ಮನೆಯ ಅವಶ್ಯಕತೆಯೊದರೂ ಏನು?—ಅದರಲ್ಲೂ ಸರಕಾರೀ ಮನೆ ಅವನಿಗೇತಕ್ಕೆ? ಅವನಿಗೆ ದೇಶದ ನಾನಾ ಭಾಗಗಳಲ್ಲಿ ಸಂಚರಿಸಿ ಪಕ್ಷಕ್ಕೆ ಮಾರ್ಗದರ್ಶನ ಮಾಡಬೇಕಾಗಿರುತ್ತದೆ. ಪ್ರಮಾಣದಲ್ಲೇ ತನ್ನ ಪ್ರಾಯದ ಯಾನ ನಡೆಯುತ್ತಿರುತ್ತದೆ. ಅಂತಹವನಿಗೆ ಮನೆ—ಮಠ ಏತಕ್ಕೆ? ಚಿಕ್ಕಪುಟ್ಟ ಪಕ್ಷದ ಪ್ರಮುಖನಿಗಾದರೋ ಕೆಲವೇ ದಿನಗಳಲ್ಲಿ ಪಕ್ಷದ ಪ್ರಮುಖ ಸ್ಥಳಗಳಿದ್ದಲ್ಲಿ ಅಲ್ಲಿಗೆ. ಹೋಗಿ ರಾಜೋಚಿತ ಮರ್ಯಾದೆ-ಸತ್ಕಾರ ಸ್ವೀಕರಿಸಿ ದೆಹಲಿಯ ಮನೆಗೆ ಬಂದು ಆರಾಮ ಪಡೆಯಲು ಅದು ಅತ್ಯಾವಶ್ಯಕವಾಗಿರುತ್ತದೆ. ಅವನ ಪಕ್ಷ ಬಡ ಪಕ್ಷವಾಗಿರುವದರಿಂದ ದೆಹಲಿಯಂತಹ ರಾಜಧಾನಿಯ ವೈಭವಯುಕ್ತ ದುಭಾರೀ ವೆಚ್ಚದ ಸ್ಥಳಗಳಲ್ಲಿರಲು ಅವನಿಗೆ ಸಾಧ್ಯವಾಗಲಿಕ್ಕಿಲ್ಲ. ಹಾಗಿರುವದರಿಂದ ಸರಕಾರೀ ಮನೆ ಅವನಿಗೆ ಬೇಕೇಬೇಕು. ಸಮಾಜವಾದದ ಸ್ವರ ಎತ್ತುತ್ತಿರುವ ಸರಕಾರ ಸಹಾ ಅತ್ತ ಗಮನಕೊಡಲೇಬೇಕು. ಮನೆಯ ಅವಶ್ಯಕತೆ ಇರುವವರು ಸಂಬಂಧಪಟ್ಟವರಿಗೆ ಈ ಕುರಿತು ತಿಳಿಸಬಹುದು. ಅಲ್ಲದೆ ಎಲ್ಲಾ ರಂಗಗಳಲ್ಲೂ 'ಹಿಂದುಳಿದವರಿ'ಗೆ ಪ್ರಾಶಸ್ತ್ಯ ಕೊಡುತ್ತಿರುವಾಗ ಇಲ್ಲಿ ಮಾತ್ರ ಹೀಗೇತಕ್ಕೆ? 'ಹಿಂದುಳಿದ' ಪಕ್ಷದ ಹಿಂದಾಳುವಿಗೆ ಹಿರಿದಾದ ಮನೆ ಕೊಡುವದು ಸರಿಯೋ ಸರಿ. ಅದನ್ನು ಬಿಟ್ಟು ಮುಂದರಿದಿರುವ ಪಕ್ಷಗಳ ಮುಂದಾಳುಗಳಿಗೆ ಮುಂಚೆ ಮನೆ ಕೊಡುವದು ಅದ್ಯಾವ ನ್ಯಾಯ? ನ್ಯಾಯಕ್ಕಾಗಿ ಹೋರಾಟ ನಡೆಸುವವರಿಗೆ ಇದೊಂದು ಸುವರ್ಣ ಸಂಧಿಯೇ ಸರಿ. ದೆಹಲಿಯಲ್ಲಿ ಮನೆಯ ಅವಶ್ಯಕತೆ ಇರುವವರು ಒಡನೆ ಒಂದು ಗುಡಿ ಪಕ್ಷವನ್ನು ಸ್ಥಾಪಿಸಿ (ಇಷ್ಟರ ವರೆಗೆ ಅಂತಹದಿಲ್ಲವಾದಲ್ಲಿ) ನ್ಯಾಯಕ್ಕಾಗಿ ದೆಹಲಿಗೆ ಹೋಗಬಹುದು. ಅಲ್ಲದೆ ಅದರಲ್ಲಿ ಇನ್ನು ಒಂದು ವಿಷಯ. ಈಗಿನ ಚುನಾವಣಾ ವೈಚಿತ್ರ್ಯದಿಂದ ಬಂದಿರುವ ಬುದ್ಧಿ ಅದು. ಬಾರೀ ಬಾರೀ ರಾಜಕೀಯ ಪಕ್ಷಗಳ ಪ್ರಮುಖರಿಗೆ ರಾಜಧಾನಿ ಡಿಲ್ಲಿಯಲ್ಲಿ ಮನೆ ಕೊಡುವಾಗ ಚಿಕ್ಕಪುಟ್ಟ ರಾಜಕೀಯ ಪಕ್ಷಗಳಪ್ರಮುಖರಿಗೆ ಅಲ್ಲಲ್ಲಿ ಯಾದರೂ ಒಂದುಮನೆ ಕಟ್ಟಿಸಿಕೊಡುವದು ನ್ಯಾಯದೃಷ್ಟಿಯುಳ್ಳ ಸರಕಾರದ ಜವಾಬ್ದಾರಿಯಲ್ಲವೇ? ಆಗ ಚಿಕ್ಕಪುಟ್ಟ ಪಕ್ಷಗಳು ಚುನಾವಣಾ ಮಂತ್ರಿಯ ಸ್ನೀತಿಯನ್ನು ಅಲ್ಲೂ ಅನುಸರಿಸಬಹುದು. ಡಿಲ್ಲಿಯಲ್ಲಿ ಅವರು ಮನೆ ಕೇಳುವದಿಲ್ಲ. ಹಳ್ಳಿಯಲ್ಲಿ ಮಹಾ ಪುಂಖಂಡರು ಮನೆ ಕೇಳಬಾರದು. ಆಗ ಸರಕಾರೀ ಮನೆಗಾಗಿ ಪಕ್ಷಗಳ ಪ್ರಮುಖರಿಂದ ಹೋರಾಟ ಅಥವಾ ತೀವ್ರ ಸ್ಪರ್ಧೆ ನಡೆಯಲಾರದು. ಆದರೆ ಇವೆಲ್ಲಾ ಕೇವಲ ಕನಸಿನ ಮಂಡಿಗೆಯೆಂಬುದನ್ನು ರಾಜ್ಯಸಭೆ ಸ್ಪಷ್ಟಪಡಿಸಿರುತ್ತದೆ. ದೆಹಲಿಯ ಸರಕಾರೀ ಮನೆಗಾಗಿ ಪಕ್ಷಕಟ್ಟಿ ಅಡಿಯ ಮುಂದಿಡೆ (ದೆಹಲಿಯ) ಸ್ವರ್ಗ ಸಿಗಬಹುದೆಂದು ಭಾವಿಸಿಕೊಂಡಲ್ಲಿ ನಿರಾಶೆಯೇ ಸಿಗಬಹುದು; ಮತ್ತೆ ಆ ಮನೆಗಳ್ಯಾರಿಗಾಗಿ, ಏತಕ್ಕಾಗಿ ಇವೆಯೆಂಬುದನ್ನು ಮಾತ್ರ ಚೆನ್ನಾಗಿ ತಿಳಿದುಕೊಂಡರೆ ಸರಿ.

ರಾಜ್ಯಸಭೆಯಲ್ಲಿ ಶ್ರೀ ಭೂಪೇಶ ಗುಪ್ತರು ಸರಕಾರೀ ಮನೆಗಳ ಕುರಿತು ಕೇಳಿದ ಪ್ರಶ್ನೆಗೆ ಮಂತ್ರಿ ಮಹಾಶಯ ಶ್ರೀ ಮೆಹರ್‌ಚಂದ ಖನ್ನಾರವರು ಉತ್ತರ ನೀಯುತ್ತ, ರಾಜಕೀಯ ಪಕ್ಷಗಳ ಧ್ಯಕ್ಷರು ಸರಕಾರೀ ವಾಸಸ್ಥಾನಕ್ಕಾಗಿ ಮನವಿ ಸಲ್ಲಿಸಿದಲ್ಲಿ ಅದನ್ನು ಯೋಗ್ಯತಾನುಸಾರ ಗಮನಿಸಲಾಗುವದೆಂದರು. ಮಂತ್ರಿ ಮಹಾಶಯರೆಂದರೆ ಅದ್ಯಾವ ಖಾತೆಯ ಮಂತ್ರಿಯೆಂಬ ಪ್ರಶ್ನೆ ಬರುವದು ಸ್ವಾಭಾವಿಕವೇ ಸರಿ. ಶ್ರೀ ಮೆಹರ್ ಚಂದ ಖನ್ನಾರವರು ವರ್ಕ್ಸ್ ಮತ್ತು ಹೌಸಿಂಗ್ ಮಿನಿಸ್ಟರ್ ಇದ್ದಾರೆ. ಕನ್ನಡದಲ್ಲಿ ಹೇಗೆ ಬರೆಯುವದೆಂದು ತಲೆ ತುರಿಸಿಕೊಂಡು, ನಿಘಂಟು ಹುಡುಕ ತೆರೆಯಬೇಕಾಯಿತು. ಅಲ್ಲಿ ವರ್ಕ್ಸ್ ಶಬ್ದ ಇಲ್ಲದಿದ್ದರೂ ವರ್ಕ್ ಪದವಿದೆ. ವರ್ಕನ್ನು ಕನ್ನಡದಲ್ಲಿ ಕೆಲಸ; ಮಾಡಿದ ವಸ್ತು ಅಥವಾ ಗ್ರಂಥವೆನ್ನಬಹುದು. ಹಾಗಾದರೆ ಶ್ರೀ ಖನ್ನಾರವರು ಕೆಲಸದ ಅಮಾತ್ಯರೇನು? ಅಥವಾ ಇವರಿಗೆ ಮಾತ್ರ ಕೆಲಸ ಇರುವದು, ಬೇರೆ ಅಮಾತ್ಯರಿಗಿಲ್ಲ ಆರಾಮವೇನು? ಛೆ! ಛೆ! ಹಾಗೆ ಹೇಳುವದು ಸರಿಯಲ್ಲ. ಹಾಗಾದರೆ ಇವರನ್ನು ಮಾಡಿದ ವಸ್ತು ಮಂತ್ರಿಯೆನ್ನಬಹುದೇ? ಅದೂ ಬೇಡವಾದಲ್ಲಿ ಗ್ರಂಥ ಮಂತ್ರಿಯೆಂದು ಹೇಳಬೇಕಾಗುತ್ತದೆ. ಇವರ್ಯಾವ ಗ್ರಂಥದ ಮಂತ್ರಿಗಳೆಂದು ಗ್ರಂಥಕರ್ತರು ಗದರಿಸಬಹುದು, ಸದ್ಯ ಇದಕ್ಕೆ ಸರಿಯಾಗಿ ಮಾಡುವ ಶಬ್ದ ಇಲ್ಲ. ಬೇಡ, ಹೋಗಲಿ. ಹೌಸಿಂಗ್ ಎಂದರೇನು? ಕುದುರೆಯ ಹೊದಿಕೆಯ ವಸ್ತ್ರ! ಇದಕ್ಕೆ ಬೇರೆ ಅರ್ಥವೇ ಇಲ್ಲ. ಹಾಗಾದರೆ ಈ ಮಂತ್ರಿ ಮಹಾಶಯರೊಂದಿಗೆ ಕುದುರೆಯ ಹೊದಿಕೆಯ ವಸ್ತ್ರವಿದೆಯೇ? ನಿಜವಾಗಿ ಅವರಿಗೆ ವಸ್ತ್ರ ಇಲ್ಲ ಬೇಕೆಂದೇನಿಲ್ಲ. ಅವರಿದರ ಅಮಾತ್ಯರೆಂಬಹುದ, ಅಷ್ಟೇ. ಹಾಗಿರಬಹುದಾದರೂ ಈ ಸಂಭವಕ್ಕೂ ಇದಕ್ಕೂ ಏನು ಸಂಬಂಧ? ಸದ್ಯಕ್ಕೀಗ ಬೇಕಾಗಿರುವದು ಸರಕಾರೀ ಮನೆ ತಾನೇ? ಒಂದು ವೇಳೆ ಹೀಗೂ ಇರಬಹುದೇ? ಕುದುರೆಯ ಹೊದಿಕೆಯ ವಸ್ತ್ರದ ಮನೆಯು ಹಾಗೂ ಅದರ ಕೆಲಸ ಮಾಡುವ ಖಾತೆಯ ಮಂತ್ರಿ ಶ್ರೀ ಮೆಹರ್ ಚಂದ್ ಖನ್ನಾ ಇರಬಹುದೇ? ಅದನ್ನು ಮನೆಯಾಚಕ ರಾಜಕೀಯ ಪಕ್ಷಗಳ ಪ್ರಮುಖರಿಗನೇ ಬಿಟ್ಟು ಬಿಡುವ.

ಇಷ್ಟರ ವರೆಗೆ ಅಂತಹ ಐದು ಮನೆಗಳನ್ನು ರಾಜಕೀಯ ಪಕ್ಷಗಳಿಗೆ ಸಂಬಂಧಪಟ್ಟವರಿಗೆ ಕೊಡಲಾಗಿರುತ್ತದೆಂದು ಶ್ರೀ ಖನ್ನಾರವರು ಮಜ್ದೂರ್ ಮುಂದಾಳು ಶ್ರೀ ದತ್ತೋಪಂತ ಠೇಂಗಡಿಯವರಿಗೆ ರಾಜ್ಯಸಭೆಯಲ್ಲಿ ಹೇಳಿದರು. ಶ್ರೀ ಕಾಮರಾಜ (ಕಾಂಗ್ರೆಸ್ಸಿನ ಧ್ಯಕ್ಷ)

(ಎಂಟನೇ ಪುಟ ನೋಡಿರಿ)

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ತನ್ನ ನೂತನ ಶಾಖೆಯೊಂದನ್ನು
ಕೊಲ್ಲಾ ಬಜಾರ್,
ಮೈನ್ ರೋಡ್,
ವಿಜಯ ನಗರಂ
(ಆಂಧ್ರಪ್ರದೇಶ)
ಇಲ್ಲಿ ಸಪ್ಟಂಬರ 10, 1966ರಂದು
ತೆರೆದಿದೆಯೆಂದು ತಿಳಿಸಲು ಸಂತೋಷ ಪಡುತ್ತದೆ.
ಇನ್ನೊಂದು ಹೊಸ ಶಾಖೆಯನ್ನು
ಸಪ್ಟಂಬರ 16, 1966ರಂದು
ಕೋಟೇಕಾರ್
(ಮಂಗಳೂರು ತಾಲೂಕು) ಎಂಬಲ್ಲಿ
ತೆರೆಯಲಿರುವುದು.

ಬ್ಯಾಂಕು ಸದ್ಯವೇ ತೆರೆಯಲಿರುವ ಮತ್ತೆರಡು ಶಾಖೆಗಳು:

ಯಾಡಿಕಿ (ಆಂಧ್ರ ಪ್ರದೇಶ)	ಅನಂತಪುರ ಜಿಲ್ಲೆ
ಸುಪರ್ ಬಜಾರ್ ಡಿಲ್ಲಿ	ಕೊನಟ್ ಸರ್ಕಸ್ ನವದೆಹಲಿ

ವ್ಯಾಪಕ ಪ್ರಮಾಣದ ಪರಿಪೂರ್ಣ ಆರ್ಥಿಕ ಸೇವೆಗೆ

FAITHFUL SB FRIENDLY

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಮಣಿಪಾಲ, ಮೈಸೂರು ರಾಜ್ಯ.

ಸಾಧನ ಸಂಪತ್ತು: ರೂ. 80 ಕೋಟಿ.
ಶಾಖೆಗಳು: 200ಕ್ಕೂ ಮಿಕ್ಕಿ.

ಈ ಚಿತ್ರದಲ್ಲಿ ಸಿಸ್ಸಿವೆಂದಾದ ಓಲಿಂಪಿಕ್ ವಿಜೇತರಾದ ಇರ್ವರು ಅಮೆರಿಕನ್ನರು. ಕನೆಕ್ಟಿಕಟ್‌ಗೆ ಸೇರಿದ ಇವರಲ್ಲಿ ಶ್ರೀ ಸ್ಕ್ವಾಲ್ ಲೆಂಡರ್ ಬಂಗಾರದ ನಾಲ್ಕು ಪದಕಗಳನ್ನೂ ಶ್ರೀಮತಿ ವೆರೋನಾ ಎರಡು ಪದಕಗಳನ್ನೂ ಟೋಕಿಯೋದಲ್ಲಿ ನಡೆದ ಓಲಿಂಪಿಕ್ ಆಟಗಳಲ್ಲಿ ಗಳಿಸಿದ್ದಾರೆ.

ಕೃಷಿ ಅಭಿವೃದ್ಧಿ

ಬರೆದವರು :

ಕೃಷಿ ಮಾನವನ ಅತ್ಯಂತ ಪ್ರಾಚೀನ ಉದ್ಯೋಗ. ಇತರ ವ್ಯವಸಾಯಗಳಿಗಿಂತ ಇದರ ಪ್ರಗತಿ ತುಂಬ ನಿಧಾನವಾಗಿದೆ. ಭಾರತದಂತಹ ಬೇಸಾಯ ಪ್ರಧಾನವಾದ ದೇಶಗಳಲ್ಲಿ ಈ ಬಗೆಯ ಮಂದ ಪ್ರಗತಿಯನ್ನು ಕಾಣುತ್ತೇವೆ. ಜನ ಸಂಖ್ಯೆಯಲ್ಲಿ ತ್ವರಿತ ಹೆಚ್ಚಳ ಹಾಗೂ ಎಕರವಾರು ಉತ್ಪಾದನೆಯಲ್ಲಿ ಇಳುವರಿ, ಇವು ಇಂದು ನಾವು ಎದುರಿಸುತ್ತಿರುವ ಎರಡು ಮುಖ್ಯ ಸಮಸ್ಯೆಗಳು. ಸಾಮಾಜಿಕ ಅಭಿವೃದ್ಧಿಗಾಗಿ ವಿಜ್ಞಾನವನ್ನು ಬಳಸಿಕೊಂಡ ರೀತಿಯಿಂದಲೇ ಈ ಸಮಸ್ಯೆಗಳು ಉದ್ಭವಿಸಿವೆ. ಕಳೆದ ಕೆಲವು ದಶಕಗಳಲ್ಲಿ ವೈದ್ಯ ವಿಜ್ಞಾನ ಕ್ಷೇತ್ರದಲ್ಲಿ ಅದ್ಭುತ ಪ್ರಗತಿಯಾಗಿರುವುದರಿಂದ ಮಾನವನ ಆರೋಗ್ಯ ಸ್ಥಿತಿಗತಿ ಸುಧಾರಿಸಿದೆ. ಅವನ ಸರಾಸರಿ ಆಯುಮಾನದಲ್ಲಿ ಸಾಕಷ್ಟು ಹೆಚ್ಚಳ ಕಂಡು ಬಂದಿದೆ. ಇಷ್ಟಲ್ಲವೂ ಅಲ್ಪಾವಧಿಯಲ್ಲಿ ಸಾಧ್ಯವಾಗಿದೆ. ನಾವು ಇದನ್ನೇ ವಿಜ್ಞಾನದ ಒಂದು ವರದಾನವೆಂದು ಹೇಳಬಹುದು.

ಆದರೆ, ಕೃಷಿ ಅಭಿವೃದ್ಧಿಗೆ ವಿಜ್ಞಾನವು ಸಾಕಷ್ಟು ನೆರವಾಗಿದೆಯೆ? ವಿಜ್ಞಾನವು ವಾಸ್ತವವಾಗಿ ಈ ಕ್ಷೇತ್ರದಲ್ಲಿ ಸಲ್ಲಿಸುವ ನೆರವು ತೃಪ್ತಿಕರವಾಗಿಲ್ಲ. ನಮ್ಮ ಕೃಷಿ ವ್ಯವಸ್ಥೆಯ ಸುಧಾರಣೆಗಾಗಿ ನಾವು ವಿಜ್ಞಾನವನ್ನು ಮತ್ತು ತಂತ್ರಶಾಸ್ತ್ರವನ್ನು ಅಷ್ಟಾಗಿ ಬಳಸಿಕೊಂಡಿಲ್ಲ. ವಿಜ್ಞಾನವು ಜನಸಂಖ್ಯೆ ಹೆಚ್ಚಳಕ್ಕೆ ಮಾತ್ರ ಕಾರಣವಾಗದೆಯೇ ಏನೂ ಉತ್ಪಾದಕತೆಯ ಅಭಿವೃದ್ಧಿಗೆ ಕಾರಣವಾಗಿಲ್ಲ. ಇದೇ ಬಗೆಯ ಪರಿಸ್ಥಿತಿ ಮುಂದುವರಿದದ್ದೇ ಆದರೆ, ನಾವು ಕೃಷಿ ಉತ್ಪಾದನೆಯಲ್ಲಿ ಸ್ವಸಂಪೂರ್ಣತೆ ಸಾಧಿಸಲಾರೆವು ಎಂಬ ನಿತ್ಯ ಇತ್ತೀಚೆಗೆ ಮನವರಿಕೆಯಾಗತೊಡಗಿದೆ. ಜೊತೆಗೆ ಬೇಸಾಯ ಉತ್ಪಾದನೆಯನ್ನು ಹೆಚ್ಚಿಸಲು ರಾಸಾಯನಿಕ ಗೊಬ್ಬರ ಮತ್ತಿತರ ಸಾಧನ ಸಾಮಗ್ರಿಗಳು ಅಗತ್ಯವೆಂದು ಭಾವಿಸಲಾಗಿದೆ. ಫಲಸ್ವರೂಪವಾಗಿ ಹೊಸ ಬಗೆಯ ಬೀಜಗಳನ್ನು, ಹೈಬ್ರಿಡ್‌ಗಳನ್ನು ರಾಸಾಯನಿಕ ಗೊಬ್ಬರ, ಕೀಟನಾಶಕ ಔಷಧಿಗಳು, ಸಸ್ಯರಕ್ಷಕ ಔಷಧಿಗಳು ಮತ್ತು ಸುಧಾರಿಸಿದ ನಮೂನೆಯ ಬೇಸಾಯ ಉಪಕರಣಗಳ ತಯಾರಿಕೆ ಅಥವಾ ಕೊಳ್ಳುವ ಕಲಸ ಬಿರುಸಿನಿಂದ ನಡೆದಿದೆ.

ಅಭಿವೃದ್ಧಿ ಯೋಜನೆಯಲ್ಲಿ ಸಾಮಾನ್ಯವಾಗಿ ಬೇಸಾಯ ಉತ್ಪಾದನೆ ಹೆಚ್ಚಿಸುವ ವಸ್ತುಗಳ ಗಾತ್ರಕ್ಕೆ ಪ್ರಾಧಾನ್ಯ ದೊರೆತಿದೆ. ಈ ವಸ್ತುಗಳನ್ನು ಅಧಿಕವಾಗಿ ಬಳಸುವುದರಿಂದಲೇ ಉತ್ಪಾದನೆ ಹೆಚ್ಚಿಸುವುದು ಸಾಧ್ಯ ಎಂದು ಭಾವಿಸಲಾಗಿದೆ. ಗಾತ್ರಕ್ಕಿಂತ ಅದರ ಗುಣಾಂಶ ಮಹತ್ವದ್ದು. ಉತ್ತಮ ಗುಣಾಂಶದ ರಾಸಾಯನಿಕ ಗೊಬ್ಬರ ಕೀಟನಾಶಕ ಔಷಧಿಗಳು ಮತ್ತಿತರ ವಸ್ತುಗಳ ಬಳಕೆಯಿಂದ ನಾವು ಹೆಚ್ಚು ಉತ್ಪಾದನೆಯನ್ನು ಮರಮಾನವನ್ನು ನಿರೀಕ್ಷಿಸಬಹುದಾಗಿದೆ. ಉತ್ತಮ ನಮೂನೆಯ ಬೀಜ ರಾಸಾಯನಿಕ ಗೊಬ್ಬರ ಮತ್ತು ನೀರಿನ ಪೂರೈಕೆಯಿಂದ ಬೇಸಾಯ ಉತ್ಪಾದನೆ ಯಾವ ರೀತಿ ಹೆಚ್ಚುತ್ತದೆ, ಎಂಬುದನ್ನು ಇಲ್ಲಿ ವಿವರಿಸುತ್ತೇನೆ.

ದೇಶದ ೮೦ ದಶಲಕ್ಷ ಎಕರೆಗಳಷ್ಟು ಪ್ರದೇಶಗಳಲ್ಲಿ ಭತ್ತ ಬೆಳೆಯುತ್ತಿದೆ. ಭಾರತವು ವಿಶ್ವದಲ್ಲಿ ಅಧಿಕ ಭತ್ತ ಬೆಳೆಯುವ ದೇಶಗಳಲ್ಲಿ ಒಂದಾಗಿದೆ ತಂ ಭೂಮಿಯಲ್ಲಿ ಭತ್ತ ಬೆಳೆಯುವ ಪದ್ಧತಿ ಸಹಸ್ರಾರು ವರ್ಷಗಳಿಂದ ಬದಲಾಗದೇ ಉಳಿದಿದೆ ಈ ಪ್ರದೇಶಗಳಲ್ಲಿ ಭೂಮಿಯನ್ನು ಸಾಗುವಳಿ ಮಾಡಿದನಂತರ ಭತ್ತದ ಸಸಿಗಳನ್ನು ಸಾಕಷ್ಟು ನೀರಿನಲ್ಲಿ ಬೆಳೆಸಲಾಗುತ್ತದೆ. ಭತ್ತವು ಹೂ ಬಿಡುವ ವರೆಗೂ ಈ ರೀತಿ ನೀರಿನಲ್ಲಿರುವುದು. ಇಂತಹ ಪರಿಸ್ಥಿತಿಯಲ್ಲಿ ಬೆಳೆಗೆ ಆತಂಕ ಉಂಟು ಮಾಡುವ ಸಸ್ಯಗಳ ನಿವಾರಣೆ ಸಾಧ್ಯವಾಗುತ್ತದೆ ವಾಸ್ತವವಾಗಿ, ಈ ಕಾರಣದಿಂದಲೇ ಭತ್ತದ ಗದ್ದೆಗಳಲ್ಲಿ ಆಗ ಸಾಕಷ್ಟು ನೀರನ್ನು ಹಾಯಿಸುತ್ತಾರೆ. ಹೂವುಗಳು ಉದುರಿ, ಕಾಳುಗಳಾಗ ತೊಡಗಿದಾಗ ಗದ್ದೆಗಳಲ್ಲಿನ ನೀರನ್ನು ಕ್ರಮಶಃ ಕಡಿಮೆ ಮಾಡಲಾಗುತ್ತದೆ. ಕಾಳು ಒಣಗುವ ಸಮಯಕ್ಕೆ ಗದ್ದೆಗಳಲ್ಲಿ ಸ್ವಲ್ಪವೂ ನೀರಿರುವುದಿಲ್ಲ. ಈಗ ನಾವು ಬೆಳೆಯುತ್ತಿರುವ ಸರ್ವ ಸಾಮಾನ್ಯವಾದ ಭತ್ತದ ನಮೂನೆಗಳಿಗೆ ಈ ಬಗೆಯ ಕ್ರಮಗಳು ಅಗತ್ಯವಾಗುತ್ತವೆ. ಆದರೆ, ಸಸ್ಯಗಳ ಬೆಳವಣಿಗೆ ದೃಷ್ಟಿಯಿಂದ ನೋಡಿದಾಗ ವಿಶೇಷವಾಗಿ ಭತ್ತಕ್ಕೆ ಹೆಚ್ಚು ನೀರಾವರಿ ಸೌಲಭ್ಯ ಬೇಕಾಗುತ್ತದೆ.

ಭತ್ತದ ಬೆಳೆಗೆ ಆರಂಭದ ಹಂತದಲ್ಲಿ ಕಡಿಮೆ ನೀರನ್ನು ಪೂರೈಸಬೇಕು. ಅದು ಕಾಳಾಗುವ ಹೊತ್ತಿಗೆ, ಸಾಕಷ್ಟು ನೀರಿನ ಪೂರೈಕೆಯಾಗಬೇಕು. ಈ ಬೆಳೆಗೆ ಹಾಕಲಾಗುವ ರಾಸಾಯನಿಕ ಗೊಬ್ಬರದ ಪ್ರಮಾಣದಲ್ಲಿ ಯಾವುದೇ ಬದಲಾವಣೆಯಾಗದಿದ್ದರೆ, ಭತ್ತದ ಉತ್ಪಾದನೆ, ಶೇಕಡ ೫೦ರಷ್ಟು ಹೆಚ್ಚಬಹುದಾಗಿದೆ. ಕೆಲವೊಂದು ಹಳೆಯ ನಮೂನೆಯ ಭತ್ತದ ಬೆಳೆಗಳ ವಿಷಯದಲ್ಲಿ ಈಗಿರುವ ನೀರಾವರಿ ಪದ್ಧತಿಗಳನ್ನು ಬದಲಿಸುವುದು ಅಸಾಧ್ಯವಾಗಿದ್ದರೂ, ತೈಚುಂಗ್, ನೇಟೀವ್ —1, ಅಥವಾ ತೈನಾನ್ —3, ಮತ್ತು ತೈಚುಂಗ್ —೬5 ಇವೇ ಮೊದಲಾದ ಹೊಸ ನಮೂನೆಯ ಭತ್ತವನ್ನು ಬೆಳೆಸುವ ಮೂಲಕ ಉತ್ಪಾದನೆಯನ್ನು ಹೆಚ್ಚಿಸಲು ಸಾಧ್ಯವಾಗುತ್ತದೆ. ಈ ಜಾತಿಯ ಭತ್ತಗಳ ಬಿತ್ತನೆಯಲ್ಲಿ ಹೊಸ ವಿಧಾನಗಳನ್ನು ಅನುಸರಿಸಬಹುದಾಗಿದೆ.

ತಕ್ಕಮಟ್ಟಿಗೆ ಆರ್ದ್ರತೆಯುಳ್ಳ ಭೂಮಿಯಲ್ಲಿ ಗೋಧಿಯನ್ನು ಬಿತ್ತಲಾಗುತ್ತದೆ. ಗೋಧಿಯನ್ನು ಬಿತ್ತಿದ ಬಳಿಕ ಎರಡು ಅಥವಾ ಮೂರನೆ ವಾರದಲ್ಲಿ ಮೊದಲನೆಯ ಬಾರಿ ನೀರನ್ನು ಹಾಯಿಸಬೇಕು. ಇದರಿಂದಾಗಿ ಗೋಧಿಯ ಸಸಿಗಳು ತೀವ್ರವಾಗಿ ಬೆಳೆಯುತ್ತವಲ್ಲದೇ ಗೋಧಿ ಹೆಚ್ಚು ಉತ್ಪಾದನಾ ಸಾಮರ್ಥ್ಯವನ್ನು ಹೊಂದುತ್ತದೆ. ಈ ಬೆಳೆಯ ಬೆಳವಣಿಗೆಯ ಕ್ರಮದಲ್ಲಿ ನೀರಾವರಿ ಅಗತ್ಯವಾಗಿದೆ. ಉತ್ತರ ಭಾರತದ ಪ್ರದೇಶಗಳಲ್ಲಿ ಮಾರ್ಚ್ ಮತ್ತು ಏಪ್ರಿಲ್ ತಿಂಗಳಲ್ಲಿ ಗೋಧಿಗೆ ನೀರಿನ ಪೂರೈಕೆಯ ಅಗತ್ಯ ಹೆಚ್ಚುತ್ತದೆ. ಗೋಧಿಯ ಬೆಳೆ ಪೂರ್ಣಗೊಳ್ಳುವ ಹೊತ್ತಿಗೆ, ನೀರಾವರಿ ಸೌಕರ್ಯ ಅಷ್ಟೊಂದು ಅನಿವಾರ್ಯವಾಗುವುದಿಲ್ಲ. ಗಿಡ್ಡ ಜಾತಿಯ ಗೋಧಿಯನ್ನು ಬೆಳೆಯುವಾಗ ನಾವು ಹೊಸ ವಿಧಾನವನ್ನು ಅನುಸರಿಸಬಹುದಾಗಿದೆ. ಗೋಧಿಯ ಬೆಳೆಯಲ್ಲಿ ಮೊದಲ ನೀರಾವರಿ ಮತ್ತು ಕೊನೆಯ ನೀರಾವರಿ ಹೆಚ್ಚು ಪ್ರಭಾವ ಬೀರುತ್ತವೆ. ಈ ನೀರಾವರಿ ಸೌಲಭ್ಯವನ್ನು ಒದಗಿಸುವ ಕಾಲ ಮಹತ್ವಪೂರ್ಣವಾಗಿದೆ. ಸೂಕ್ತ ಕಾಲದಲ್ಲಿ ಈ ಸೌಲಭ್ಯವನ್ನು ಒದಗಿಸಿದರೆ, ಹೆಚ್ಚು ಬೆಳೆ ಬರುತ್ತದೆ. ರಾಸಾಯನಿಕ ಗೊಬ್ಬರದ ಪ್ರಮಾಣದಲ್ಲಿ ಯಾವುದೇ ವ್ಯತ್ಯಾಸವಾಗದಿದ್ದರೆ, ನಾವು ನೀರಾವರಿ ಸೌಕರ್ಯವನ್ನು ಹೇಗೆ ಬಳಸುತ್ತೇವೆ ಎಂಬುದು ಉತ್ಪಾದನೆ ಅಭಿವೃದ್ಧಿಯ ನಿರ್ಣಾಯಕ ಅಂಶವಾಗುತ್ತದೆ.

ರಾಸಾಯನಿಕ ಗೊಬ್ಬರಗಳನ್ನು ಒದಗಿಸುವ ಸಮಯ, ಪದ್ಧತಿ ಮತ್ತು ಪ್ರಮಾಣ ಇವುಗಳು ಉತ್ಪಾದನೆಯ ಮೇಲೆ ಪರಿಣಾಮ ಬೀರುತ್ತವೆ. ಮಣ್ಣಿನ ಉತ್ಪಾದನಾ ಸಾಮರ್ಥ್ಯವು ಅನೇಕ ಅಂಶಗಳನ್ನು ಅವಲಂಬಿಸಿವೆ. ಮಣ್ಣಿನ ಆಳ ಆರ್ದ್ರತೆಯ ಪ್ರಮಾಣ, ವಾತಾವರಣ ಮತ್ತು ಪೌಷ್ಟಿಕಾಂಶಗಳು ಇವುಗಳಲ್ಲಿ ಮುಖ್ಯವಾಗಿವೆ. ರೈತನಿಗೆ ಆಹಾರ ಧಾನ್ಯಗಳ ಉತ್ಪಾದನೆಯನ್ನು ಹೆಚ್ಚಿಸಲು ಉತ್ತೇಜನ ನೀಡುವಾಗ ಅವನ ಉತ್ಪಾದನಾ ವೆಚ್ಚದ ಬಗ್ಗೆ ಲಕ್ಷ್ಯ ಕೊಡಬೇಕು. ರಾಸಾಯನಿಕ ಗೊಬ್ಬರ ಮತ್ತು ಇತರ



ಗುಂಡನ್ನು ಎಸೆಯು...
ಮೀರಿಸಿ ನಿಂತ ಕೆಲಿಫೋ...
...ತ್ತಿ ಅಡಿ ಒಂದು ಇಂಚು

ವಿಜ್ಞಾನದ ಬಳಕೆ

ಸ್ವಾಮಿನಾದನ್

ಬೇಸಾಯ ವಸ್ತುಗಳಿಗಾಗಿ ಆವನು ಮಾಡುವ ವೆಚ್ಚಕ್ಕೆ ಯೋಗ್ಯ ಪ್ರತಿಫಲ ದೊರೆಯುವಂತಾಗಬೇಕು. ಯೋಗ್ಯ ವೈಜ್ಞಾನಿಕ ಮಾಹಿತಿಯನ್ನು ಪೂರೈಸಿದರೆ, ಪ್ರತಿ ಹೆಕ್ಟಾರಿಗೆ ೫ರಿಂದ ೬ ಟನ್‌ಗಳಷ್ಟು ಆಹಾರ ಧಾನ್ಯಗಳನ್ನು ಬೆಳೆಯಲು ಸಾಧ್ಯವಾಗುತ್ತದೆ. ಬೆಳೆಯ ಪೋಷಣೆಗೆ ಅಗತ್ಯವಾದ ರಾಸಾಯನಿಕ ಗೊಬ್ಬರ, ಕೀಟನಾಶಕಗಳು, ಇವೇ ಮೊದಲಾದವು ಸಾಕಷ್ಟು ಪ್ರಮಾಣದಲ್ಲಿ ದೊರೆಯಬೇಕು.

ಇಂದಿನ ಸಂಶೋಧನಾ ಕಾರ್ಯಕ್ರಮದಲ್ಲಿ ಅಲ್ಪಾವಧಿಯಲ್ಲೇ ಅಧಿಕ ಉತ್ಪಾದನೆ ನೀಡುವ ಬೆಳೆಗಳಿಗೆ ಪ್ರಾಧಾನ್ಯ ದೊರೆತಿದೆ. ಬೆಳೆಗಳ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸಲು ಹೊಸ ಹೊಸ ವಿಧಾನಗಳನ್ನು ಅನುಸರಿಸಲಾಗುತ್ತಿದೆ. ಹೊಸ ಬಗೆಯ ಬಿತ್ತನೆಯ ಬೀಜಗಳನ್ನು ಕಂಡುಹಿಡಿಯುವ ಮೂಲಕ ನೀರಾವರಿ ಪ್ರದೇಶಗಳಲ್ಲಿ ಹೊಸ ಸಾಗುವಳಿ ಕೈಗೊಳ್ಳಬಹುದಾಗಿದೆ. ಸೋನೋರ್—೬೪ ಜಾತಿಯ ಗೋಧಿಯು ಪ್ರತಿ ಹೆಕ್ಟಾರಿಗೆ ೩-೫ ಟನ್ನುಗಳಷ್ಟು ಉತ್ಪಾದನೆಯನ್ನು ನೀಡುತ್ತದೆ. ಈ ಗೋಧಿಯನ್ನು ಮುಖ್ಯವಾಗಿ ಡಿಸೆಂಬರ್ ತಿಂಗಳ ಕೊನೆಯ ಹೊತ್ತಿಗೆ ಅಥವಾ ಜನವರಿ ತಿಂಗಳ ಮೊದಲ ಭಾಗದಲ್ಲಿ ಬಿತ್ತಲಾಗುತ್ತದೆ.

ಕಪ್ಪು ಭೂಮಿಯಲ್ಲಿ ಉತ್ತಮ ಬೆಳೆಯನ್ನು ಬೆಳೆಯಲು ಸಾಧ್ಯವೆಂದು ಭಾರತೀಯ ಕೃಷಿ ಸಂಶೋಧನಾ ಸಂಸ್ಥೆಯವರು ನಡೆಸಿದ ಪ್ರಯೋಗಗಳಿಂದ ವ್ಯಕ್ತಪಟ್ಟಿದೆ. ಮುಂದಿನ ಕೆಲವು ವರ್ಷಗಳಲ್ಲಿ ನಾವು ಬೇಸಾಯ ಕ್ಷೇತ್ರದಲ್ಲಿ ಅನೇಕ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ.

ಸಸ್ಯಗಳ ಪೋಷಣಾ ಕ್ರಮದಲ್ಲಿ ಸುಧಾರಣೆಯಾದಂತೆಲ್ಲಾ ಉತ್ಪಾದನೆಯು ಹೆಚ್ಚುತ್ತದೆ. ಜೊತೆಗೆ ಕೀಟಗಳ ಹಾವಳಿಯು ಅಧಿಕಗೊಳ್ಳುತ್ತದೆ. ಇದರಿಂದಾಗಿ ಸಸ್ಯಗಳ ರೋಗ ಪ್ರತಿಬಂಧಕ ಸಾಮರ್ಥ್ಯ ಕುಂಠಿತವಾಗುತ್ತದೆ. ಕೃಷಿ ಉತ್ಪಾದನೆಯಲ್ಲಿ ಅಭಿವೃದ್ಧಿ ಸಾಧಿಸಲು ನಾವು ಕೆಲವು ಕ್ರಮಗಳನ್ನು ಕೈಗೊಳ್ಳುವುದು ಅಗತ್ಯವಾಗಿದೆ. ಮಣ್ಣಿನ ಸಂರಕ್ಷಣೆ, ಪೌಷ್ಟಿಕಾಂಶಗಳ ರಕ್ಷಣೆ, ಈ ಕ್ರಮಗಳಲ್ಲಿ ಮುಖ್ಯವಾಗಿವೆ.



ಕ್ರಿ. ಶ. ೧೮೮೩ರಲ್ಲಿ ಕಟ್ಟಲಾದ ನ್ಯೂಯಾರ್ಕಿನ ಮೆಟ್ರೊಪೊಲಿಟನ್ ಆಪೇರಾದಲ್ಲಿ ಕೊನೆಯ ಕಾರ್ಯಕ್ರಮ ನಡೆಯಿತು. ಹೊಸದಾಗಿ ಕಟ್ಟಿಸಲಾದ ಭವನಕ್ಕೆ ಸ್ಥಾನಾಂತರಗೊಳ್ಳುವುದಕ್ಕೆ ಮೊದಲು ಏರ್ಪಡಿಸಿದ ಸಮಾರಂಭವೊಂದರ ದೃಶ್ಯವಿದು

ಇತ್ತೀಚಿನ ವರ್ಷಗಳಲ್ಲಿ ಕೃಷಿ ವಿಜ್ಞಾನದಲ್ಲಿ ಅದ್ಭುತ ಪ್ರಗತಿ ಸಾಧ್ಯವಾಗಿದೆ. ಈ ಪ್ರಗತಿಯಿಂದ ನಾವು ಪರಮಾವಧಿ ಪ್ರಯೋಜನ ಪಡೆದುಕೊಳ್ಳಬೇಕು. ದೇಶದ ಜನರ ಆರೋಗ್ಯ ಸ್ಥಿತಿಗತಿಗಳನ್ನು ಸುಧಾರಿಸಲು ಸಹಾಯಕವಾದ ವಿಜ್ಞಾನವು ಆಹಾರ ಧಾನ್ಯಗಳ ಅಧಿಕ ಉತ್ಪಾದನೆಗೂ ಸಹಾಯಕವಾಗಬಲ್ಲದು. ವಿಜ್ಞಾನದ ಬಳಕೆಯಿಂದ ದೇಶವು ತ್ವರಿತಗತಿಯಲ್ಲಿ ಸ್ವಾವಲಂಬನೆ ಸಾಧಿಸಿ ಇತರರಿಗೆ ಆದರ್ಶಪ್ರಾಯವಾಗಬಹುದಾಗಿದೆ.

ಕವಲು ದಾರಿ — ಕೆಂಪು ದೀಪ

ನಮ್ಮ ಹೆಣ್ಣಿಗೆ ಬೇರೆಯೇ ಗಂಡು

ನನೆಗುದಿಗೆ ಬಿದ್ದಿದ್ದ ಗೋವೆಯ ಪ್ರಶ್ನೆಗಂತೂ ಪೂರ್ಣವಿರಾಮವನ್ನು ಕಾಂಗ್ರೆಸ್ ಕಾರ್ಯಕಾರಿಣಿಯು ಹಾಕಿತು.

—ಗೋವೆಯ ಭವಿಷ್ಯವನ್ನು ಗೋಮಾಂತಕರೇ ನಿರ್ಧರಿಸಬೇಕು ಎಂಬುದಕ್ಕೆ ಬೆಲೆ ಬಂತು.

—ಈ ನಿರ್ಣಯದ ಹಿಂದೆ ಮಹಾರಾಷ್ಟ್ರದ ಪ್ರಭಾವ, ಒತ್ತಾಯ ಇನ್ನೂ ಏನೇನೋ ಬೇಕಾದಷ್ಟಿದ್ದವು, ಇವೆ. ಇದು ಹೊಸ ಸಂಗತಿಯೇನೂ ಅಲ್ಲ. ಆದರೆ, ಈ ನಿರ್ಧಾರದಿಂದ ಕನ್ನಡಿಗರೂ ತೃಪ್ತಿಪಟ್ಟಿದ್ದಾರೆಯೆ?

ಗೋವೆಯು ಮಹಾರಾಷ್ಟ್ರದಲ್ಲಿ ಸೇರಬೇಕು ಎಂಬುದು ಪ್ರಬಲವಾದ ವಾದ. ಪಂಡಿತ ನೆಹರೂರವರು ವಿಶ್ವಾಸವಿಟ್ಟಂತೆ ಹತ್ತು ವರ್ಷಗಳ ತನಕ ಯಥಾಸ್ಥಿತಿಯನ್ನು ಕಾದುಕೊಂಡು ಮುಂದದರ ಭವಿಷ್ಯ ನಿರ್ಮಿಸಬೇಕು— ಇದು ಇನ್ನೊಂದು ವಾದ.

ಕರ್ನಾಟಕವು ಮೊದಲಿನಿಂದಲೂ ಬೆಂಬಲಿಸುತ್ತ ಬಂದಿರುವುದು ಎರಡನೆಯದನ್ನು. ಆದರೆ, ಮಹಾರಾಷ್ಟ್ರವು ಗೋವೆಯ ಮೇಲೆ ತನ್ನ ಅಧಿಕಾರವನ್ನು ಜಮಾಯಿಸುವಾಗ, ತನ್ನ ಕೇಳಿಕೆಯನ್ನೂ ಪರಿಶೀಲಿಸಬೇಕು—ಇದು ಕನ್ನಡದ ನಿಲುವು.

ಆದರೂ ಗೋವೆ ಸಾಂಸ್ಕೃತಿಕವಾಗಿ, ಐತಿಹಾಸಿಕವಾಗಿ, ಭೌಗೋಳಿಕವಾಗಿ, ಎಲ್ಲ ರೀತಿಯಾಗಿ ಕನ್ನಡಕ್ಕೆ ಸೇರಿದ್ದು—ಇದು ನಮ್ಮ ನಿಲುವು.

—ನಮಗೇನು ಬೆಲೆ ಬಂತು? ನಮ್ಮ ನಿಲುವೆಯನ್ನು ಯಾರು ಅರ್ಥವಿಸಿಕೊಂಡರು?

—ಜನಮತಗಣನೆಯ ನಿರ್ಧಾರವಾಯ್ತು, ಮುಂದಿನ ಸಾರ್ವತ್ರಿಕ ಚುನಾವಣೆಯ ವೇಳೆಯೇ ಭವಿಷ್ಯ ನಿರ್ಮಾಣದ ಅಭಿಪ್ರಾಯವನ್ನೂ ಸಂಗ್ರಹಿಸಲಾಗುವುದು—ಚುನಾವಣಾ ಆಯೋಗವು ಸೂಕ್ತ ವ್ಯವಸ್ಥೆ ಕೈಗೊಳ್ಳುವುದು—ಮತಗಣನೆ ಯಾವುದಕ್ಕೆ ನಡೆಯಲಿದೆ? ಎಷ್ಟು ಜನ ಅಭ್ಯರ್ಥಿಗಳು?

ಮೊದಲನೆಯ ಪ್ರಬಲ ಅಭ್ಯರ್ಥಿ ಮಹಾರಾಷ್ಟ್ರವಾದ — ಇನ್ನೊಂದು ಯಥಾಸ್ಥಿತಿ ಕಾಯ್ದುಕೊಳ್ಳುವ ವಾದ. ಇವರಿಬ್ಬರೇ ಹೊಡೆದಾಡಲು ತೊಡಗಿದರೆ, ಸ್ಪರ್ಧೆಯು ತುರುಸಿನದಾಗುವುದು—ಹೊಡೆದಾಟ—ಬಡಿದಾಟಗಳೂ ಕಂಡು ಬರಬಹುದು. ವಿಜಯ ಯಾರಿಗೆಂದು ಹೇಳುವುದು ಬಹಳ ಕಠಿನವಾಗುವುದು.

—ಎರಡೂ ಪಕ್ಷಗಳೂ ತಮಗೇ ಜಯವೆಂದು ಅದು ವರೆಗೆ ಹುಯಿಲೆಬ್ಬಿಸಬಹುದು (ಅದೇನೇ ಇದ್ದರೂ ಗೋವೆಯು ಮುಂದೆ ಮಹಾರಾಷ್ಟ್ರದೊಡನೆ ಆಗುವುದು ಸಂಭವನೀಯ.)

ಎರಡರೊಡನೆ ಮೂರನೆಯ ವಾದವನ್ನೂ ಚುನಾವಣಾ ರಂಗಕ್ಕೆ ಎಳೆದು ತಂದರೆ, ಆಗ ಮಹಾರಾಷ್ಟ್ರವಾದಿಗಳು ಖಂಡಿತ ಕಕ್ಕಾಬಿಕ್ಕಿಯಾಗಬಲ್ಲರು. ಗೋವೆಯನ್ನು ಕರ್ನಾಟಕಕ್ಕೆ ಸೇರಬೇಕೆಂಬ ವಾದವೇ ಮೂರನೆಯದು. ತ್ರಿಮುಖ ಸ್ಪರ್ಧೆಯಲ್ಲಿ ಕನ್ನಡಿಗರು ಮಾಗೂ ಕಳೆದುಕೊಳ್ಳುವ ನಿರೀಕ್ಷೆ ಹೆಚ್ಚು.

ಇದನ್ನು ಅರಿತುಕೊಂಡೇ ಕನ್ನಡದ ನಾಯಕರು ಮೌನವಾಗಿಯೇ ಇದ್ದಾರೆ. ಗೋವಾ ಸಮಸ್ಯಾ ಪರಿಹಾರಕ್ಕೆ ಆವ್ಯಕ್ತ ಸಮ್ಮತಿ ನೀಡಿದ್ದಾರೆ.—ಇಂದು ಕೇಂದ್ರವು ಕನ್ನಡಿಗರ ದುರ್ಬಲತೆಯನ್ನು ಸರಿಯಾಗಿ ಅರ್ಥ ಮಾಡಿಕೊಂಡಿದೆ—ನಿಮ್ಮಲ್ಲಿ ನ್ಯಾಯವಿದ್ದರೆ ಯಾಕೆ ಆಯೋಗಕ್ಕೆ ಹೆದರುತ್ತೀರಿ ಎಂದು ಕೇಳಿದಂತೆಯೇ ಯಾವಾಗಲೂ ಕೇಳಬಹುದು., ಕೇಳುತ್ತಾರೆ.

ಆಯೋಗ—ಮತಗಣನೆಗಳ ಹಿನ್ನೆಲೆ ಮಾತ್ರ ಕ್ರೂರ ಭೀಕರವಾಗುವುದೆಂದು ಅವರಿಗೆ ಗೊತ್ತಿಲ್ಲದಿಲ್ಲ.

ಅಂತೂ ಗೋವೆಯ ಭವಿಷ್ಯ ನಿರ್ಧಾರವಾಗುವುದು. ಚುನಾವಣಾ ಆಯೋಗಕ್ಕೆ ಈ ಸಂಬಂಧದಲ್ಲಿ ಅಧಿಕಾರವಿಲ್ಲವೆಂಬ ವಾದ ಗದ್ದರೂ ಅನ್ಯ ವಿಧಾನಗಳಿಂದ ಚುನಾವಣೆ ನಡೆಯುವುದು. ಅದು ಮಹಾರಾಷ್ಟ್ರಕ್ಕೆ ಸೇರಲಿ, ಯಥಾಸ್ಥಿತಿಯನ್ನು ಕಷ್ಟಪಟ್ಟು ಉಳಿಸಿ ಕೊಳ್ಳಲಿ, ಕನ್ನಡಿಗರಿಗದು ಗಗನಕುಸುಮ ಮಾತ್ರ —ಹೀಗೇಕೆ ಆಗುವುದೆಂದು ಹಂಪೆಯೇ ತಿಳಿದಿತ್ತೇನೋ.

ಗೋವೆ ಕನ್ನಡಕ್ಕೆ ಹೊರನಾಡು. ಆದನ್ನು ಪಡೆಯುವುದರಲ್ಲಿ ಸಾಧ್ಯತೆಯಿಲ್ಲ. ಆದರೆ, ಅಚ್ಚಗನ್ನಡ ಪ್ರದೇಶಗಳನ್ನಾದರೂ ಪಡೆಯುವ ಪ್ರಯತ್ನ ನಾವು ಮಾಡುತ್ತಿದ್ದೇವೆಯೇ? ಗೋವೆಗೆ ಜನಮತಗಣನೆಯ ಪದ್ಧತಿಯನ್ನು ಅನುಸರಿಸುತ್ತ ಬೆಳಗಾವಿ, ನಿಪ್ಪಾಣಿಗಳಿಗೂ ಅನುಸರಿಸುವ ಬಗ್ಗೆ

(ಐವತ್ತನೇ ಪುಟ ನೋಡಿ)



ಬಂಗಿಕ ದಾಖಲೆಗಳನ್ನು ನ್ನೊಲಿ. ಈತನ ದಾಖಲೆ

ನಿಮಗೆ ಮನೆ ಬೇಕೆ?

(ಐದನೇ ಪುಟದಿಂದ)

ಅಂತಹ ಮನೆಗಳಲ್ಲಿ ರಿಯಾಯತಿ ಬಾಡಿಗೆಯಲ್ಲಿದ್ದಾರೆ. ಶ್ರೀ ಕಾಮರಾಜರು ಅದೆಲ್ಲೂ ಕಂಟ್ರಾಕ್ಟುದಾರ, ಉದ್ಯಮಗಾರ ಅಥವಾ ವ್ಯಾಪಾರಿಯಾಗಿರಲಿಲ್ಲವಾದುದರಿಂದಲೋ, ಅಥವಾ ಆಡಳಿತ ಪಕ್ಷದ ಪ್ರಮುಖರಿರುವ ಕಾರಣದಿಂದಲೋ ಆ ರಿಯಾಯತಿ ಅವರಿಗೆ ಸಿಕ್ಕಿರುತ್ತದೆ. ಈ ಮಾತನ್ನು ಕೇಳಿದೊಡನೆ ಇತರ ಪಕ್ಷಗಳವರು ತಮ್ಮ ಪಕ್ಷಗಳ ಪ್ರಮುಖರಿಗೇಕೆ ಮನೆ ಮಾಡಿಕೊಟ್ಟಿಲ್ಲವೆಂದು ಕೇಳಿದರು. ಯಾರಾದರೂ ಅರ್ಜಿ ಅರ್ಪಿಸಿದಲ್ಲಿ ಅದರ ಮೇಲೆ ಯೋಚಿಸಲಾಗುತ್ತದೆಂದು ಶ್ರೀ ಮೆಹರ್ ಚಂದ್ ಖನ್ನಾ ಹೇಳಿದರಾದರೂ ಕಮ್ಯೂನಿಸ್ಟ್ ಪಕ್ಷದ ಅಧ್ಯಕ್ಷ ಶ್ರೀ ಡಾಂಗೆಯವರಿಗೇತಕ್ಕೆ ಮನೆ ಬಿಟ್ಟುಕೊಟ್ಟಿಲ್ಲವೆಂದು ಶ್ರೀ ಭೂಪೇಶಗುಪ್ತ ಕೇಳಿದಕ್ಕೆ ಸರಿಯಾಗಿ ಉತ್ತರಕೊಡಲಿಕ್ಕೆ ಅವರಿಂದಾಗದೆ ತಮ್ಮ "ಅಸ್ತ್ರಪ್ರಯೋಗ" ಮಾಡಿದರು. ಅಲ್ಲ! ಡಾಂಗೆಯವರ ವಿಷಯ ಹಾಗಿರಲಿ ಅವರಿಗೆ ಮನೆ ಹಾಗಿರಲಿ, ಕಾಲಿನ ಮೊನೆಯಿರಲೂ ಕಮ್ಯೂನಿಷ್ಟರು, ಸ್ಥಳ ಕೊಡಲು ಒಪ್ಪದಿರುವಾಗ ಸರಕಾರವಾದರೂ ಯಾವ ಯೋಗ್ಯತೆಯ ಮೇಲೆ ಕೊಡುವದು. "ನಿಮಗೆ ಕೊಡುತ್ತೇವೆಂದು ಹೇಳಿರುವೆವಲ್ಲ"ವೆಂದು ಹೇಳಿದ ಮಂತ್ರಿಗಳು, ಅನ್ಯತ ವಿಷಯ ನಿಮಗೇತಕ್ಕೆಂದು ಗುಪ್ತವಾಗಿ ಶ್ರೀ ಭೂಪೇಶರಿಗೆ ಹೇಳಿರಲೂ ಬಹುದು. ಈ ಮಾತು ಅವರಿಗೆ ಕೋಪ ಬರಿಸಿತು. ತನಗೆನೇ ಪಂಗನಾಮ ಹಾಕಿರುವದು ಮಾತ್ರವಲ್ಲ ನಮ್ಮನ್ನು ಕಾಂಗ್ರೆಸ್ಸಿನ ಜೋಡೆತ್ತುಗಳನ್ನಾಗಿ ಮಾಡುತ್ತಾರಲ್ಲಾ! ಎರಡು ವರ್ಷಗಳ ಹಿಂದೆಯೇ ಶ್ರೀ ಭೂಪೇಶಗುಪ್ತರವರು ಅರ್ಜಿ ಹಾಕಿದ್ದರೂ, ಅವರಿಗಿನ್ನು ಅರ್ಜಿ ತಲುಪಿರುವ ಕುರಿತು ಕೂಡಾ, ಉತ್ತರ ಬಂದಿಲ್ಲವೆಂಬ ಗುಪ್ತ ಸಂಗತಿಯನ್ನವರು ಬಯಲಿಗೆಳೆದರು. ಶ್ರೀ ಖನ್ನಾ ಕುಣಿದಾಡಬೇಕಾಯಿತು. ಅನಂತರ ಅವರು ಅದಾಗಲೇ ಶ್ರೀ ಗೋಪಾಲನ್‌ರವರಿಗೆ ಮನೆಕೊಟ್ಟಿರುವದಲ್ಲದೆ ಶ್ರೀ ಹಿರೆನ್ ಮುಖರ್ಜಿಯವರಿಗೂ ಕೊಡುವೆವೆಂದು ತಿಳಿಸಿರುತ್ತದೆಂದೂ ಕಮ್ಯೂನಿಷ್ಟರಲ್ಲಿ ಎರಡು ಒಡಕುಗಳಿರುವದರಿಂದ ತೊಂದರೆ ಬರುತ್ತದೆಂದೂ ಹೇಳಿದರು. ಸಚಿವರು ತೊಂದರೆಯಲ್ಲಿ ಸಿಕ್ಕಿಕೊಂಡಿದ್ದಾಗಲೇ ಅವರನ್ನು ಎಚ್ಚರಿಸಬೇಕಾಯಿತು. "ಮಂತ್ರಿ ಮಹಾಶಯರೇ, ತಾವು ಸಂಪತ್ತಿನಲ್ಲಿರುವ ಪ್ರಮುಖರ ಕುರಿತು ಕಾಪಾಡುತ್ತಿದ್ದೀರಿ. ವಿಷಯ ರಾಜಕೀಯ ಪಕ್ಷಗಳ ಅಧ್ಯಕ್ಷರಿಗೆ ಸಂಬಂಧ ಪಟ್ಟದ್ದಿದೆ." ಮಂಡೆಯ ಮೇಲೆ ಮಂಜಿಟ್ಟಂತಾಯಿತು. 'ಹೌದು, ಹೌದು, ಶ್ರೀ ಡಾಂಗೆಯವರು ಅರ್ಜಿಹಾಕಲಿ. ಅವರಿಗೆ ಮಾರುಕಟ್ಟೆಯ ಬಾಡಿಗೆಯ ಮೇಲೆ ಮನೆ ಕೊಡುತ್ತೇವೆ"ಂದು ಶ್ರೀ ಖನ್ನಾ ಹೇಳಿದರು. ಅಂತೂ ಕಮ್ಯೂನಿಷ್ಟರಿಗೆ ಕರೆ ಕರೆದು ಕಾಂಗ್ರೆಸ್ಸಿನವರೇ ಆಶ್ರಯ ಕೊಡುತ್ತಿದ್ದೇವೆಂಬುದನ್ನು ಕಾಂಗ್ರೆಸ್ಸ್ ಸಚಿವರೊಪ್ಪಿಕೊಂಡರು. ಆದರೆ ಕಾಂಗ್ರೆಸ್ಸಿನ ಅಧ್ಯಕ್ಷರಿಗೆ ರಿಯಾಯತಿ ದರದ ಬಾಡಿಗೆ! ಕಮ್ಯೂನಿಷ್ಟರ ಅಧ್ಯಕ್ಷರಿಗೆ ಮಾರುಕಟ್ಟೆ ದರದ ಬಾಡಿಗೆ! ಈ ಅಸಮಾನತೆಗೇನು ಕಾರಣ? ಆಳುವ ಪಕ್ಷಕ್ಕೆ ಶ್ರೀ ಕಾಮರಾಜರು ಅಧ್ಯಕ್ಷರಾಗಿರುವದೇ ಕಾರಣವೇನು? ಕಮ್ಯೂನಿಸಂ ಮಾರುಕಟ್ಟೆಯಲ್ಲಿ ಭಾರತವನ್ನು ಪಕ್ಕಕ್ಕೆ ಮಾರಲು ಕಮ್ಯೂನಿಷ್ಟರು ಕುತಂತ್ರ ನಡೆಸುತ್ತಿರುವದರಿಂದ ಶ್ರೀ ಡಾಂಗೆಯವರಿಗೆ ಮಾರುಕಟ್ಟೆಯ ದರದ ಬಾಡಿಗೆಯೆ? ಇವೆಲ್ಲಾ ಗುಪ್ತವಾಗಿರಬೇಕೆಂಬುದೇ ಶ್ರೀ ಭೂಪೇಶ ಗುಪ್ತರ ಆಶೆ ಇರಬಹುದು. ಇರಲಿ. ಕಮ್ಯೂನಿಷ್ಟರಿಗೆ ಕಾಂಗ್ರೆಸ್ಸಿಗರು ಕರೆಕರೆದು ಆಶ್ರಯಕೊಡುತ್ತಿದ್ದರೆಂಬುದನ್ನು ಮಾತ್ರ ಅದ್ಯಾಕಿಂದಲೂ ಗುಪ್ತವಾಗಿಡಲಿನ್ನು ಮೇಲೆ ಸಾಧ್ಯವೇ ಇಲ್ಲ.

ಇದು ಕೇವಲ ಡಿಲ್ಲಿಯ ಸರಕಾರೀ ಮನೆಗೆ ಮಾತ್ರ ಸಂಬಂಧಿಸಿದ ವಿಷಯವಲ್ಲ. ಕಾಂಗ್ರೆಸ್ಸಿನ ವೇಷದಲ್ಲಿ ಕಾಂಗ್ರೆಸ್ಸಿನೊಳಗೆನೇ ಇರುವ ಸ| ಶ್ರೀ ಕೃಷ್ಣ ಮನನ್, ಕೆ. ಡಿ. ಮಾಲವೀಯ, ಅರ್ಜುನ ಅರೋರಾ, ಅಥವಾ ಸುಭದ್ರಾ ಜೋಷಿಗಳ ಕುರಿತು ಮಾತ್ರವಲ್ಲ. ಕಮ್ಯೂನಿಸ್ಟ್ ಪಕ್ಷದಲ್ಲಿದ್ದು ತಮ್ಮ ಆಜ್ಞೆಯನ್ನು ತುಚ್ಛೀಕರಿಸಿರುವವರೊಬ್ಬರಿಗೆ ಪುನಃ ಕರೆದು, ಅಧಿಕಾರ ಕೊಡುವಂತಹ ವಿಷಯವಿದೆ. ಇದಕ್ಕೆ ಮದ್ರಾಸಿನ ಶ್ರೀ ಮೋಹನ ಕುಮಾರಮಂಗಲಂ ಒಂದು ಉದಾಹರಣೆ. ದೇಶದ್ವೇಷಿ ಕಮ್ಯೂನಿಷ್ಟರು ಅದೆಂತು ಅನ್ಯಾನ್ಯ ಸರಕಾರೀ ಅಂಗಗಳಲ್ಲಿ ಸೇರಿಕೊಂಡು ಆಡಳಿತ ಸೂತ್ರವನ್ನು ಕಡಿದೊಗೆಯಲು ಪ್ರಯತ್ನಿಸುತ್ತಿರುವರೆಂಬ ಕುರಿತು ಭಾರತದ ಗೃಹ ಮಂತ್ರಿ ಶ್ರೀ ನಂದಾ ಕೂಡಾ ಸ್ಪಷ್ಟವಾಗಿ ಜನತೆಗೆ ತಿಳಿಸಿದ್ದಾರೆ. ಇತ್ತೀಚೆಗೆ ಲೋಕ ಸಭೆಯಲ್ಲಿ ಮಾತಾಡುತ್ತ ಕಾಂಗ್ರೆಸ್ಸಿನ ಸದಸ್ಯ ಶ್ರೀ ಶಿವನಾರಾಯಣರು ರೈಲ್ವೆ ಖಾತೆಯಲ್ಲೂ ಬಹಳಷ್ಟು ಮಂದಿ ಕಮ್ಯೂನಿಷ್ಟರಿದ್ದು, ಅವರು ರೈಲು ಅಪಘಾತ ಮುಂತಾದ ಹೀನ ಕೃತ್ಯಗಳನ್ನು ನಡೆಸುತ್ತಿದ್ದಾರೆ, ಅನ್ಯರನ್ನು ಪ್ರೋತ್ಸಾಹಿಸುತ್ತಿದ್ದಾರೆಂದು ಹೇಳಿ, ಜಾಗ್ರತೆಯಿಂದಿರಬೇಕೆಂದು ಎಚ್ಚರಿಕೆ ಕೊಟ್ಟಿರುವರು. ಎಚ್ಚರಿಕೆಯಿಂದ ಯಾರಿರಬೇಕು? ಅವರಿಗೆ ಕರೆ ಕರೆದು ಆಶ್ರಯ ಕೊಡುತ್ತಿರುವ ಕಾಂಗ್ರೆಸ್ಸಿನ ಮುಖಂಡರೋ ಬಡ ಜನತೆಯೋ? ಕಾಂಗ್ರೆಸ್ಸ್ ಅಧ್ಯಕ್ಷರು ಇತ್ತೀಚೆಗೆ ರಷ್ಯಾಕ್ಕೆ ಹೋಗಿ ಬಂದ ಮೇಲಂತೂ ಸಮಾಜವಾದದಿಂದಲೇ ನಮಗೆ ಮುಕ್ತಿಯೆಂದಾಡುತ್ತಿದ್ದು ಕಮ್ಯೂನಿಷ್ಟರನ್ನು 'ಬಾ ನೊಣವೆ, ಬಾ ನೊಣವೇ, ನನ್ನ ಮನೆಗೆಂ"ದು ಆಹ್ವಾನಿಸುತ್ತಿದ್ದು, ಬಂದವರಿಗೆ 'ಹಸೆ ಇದೆ, ಮಣೆ ಇದೆ"ಯೆಂದು ಸತ್ಕರಿಸುತ್ತಿದ್ದಾರೆ. ಹೀಗಿರುವಾಗ ಎಚ್ಚರಿಕೆಯೆಂಬುದು ಬೋರ್ಗಲ್ಲ ಮೇಲೆ ಮಳೆ ಸುರಿದಂತೆಯೇ ಸರಿ.

ಈಗ ಅರ್ಥವಾಗಿರಬಹುದು ನಿಮಗೆ ಮನೆ ಬೇಕಾಗಿದ್ದಲ್ಲಿ ಏನು ಮಾಡಬೇಕೆಂದು. ಚಿಕ್ಕ ಒಂದು ರಾಜಕೀಯ ಪಕ್ಷ ಕಟ್ಟಿಕೊಂಡು ಹಿಂದುಳಿದ ಪಕ್ಷಕ್ಕೆ ಪ್ರೋತ್ಸಾಹ ಕೇಳುವದು ಇಲ್ಲವೇ ಕಾಂಗ್ರೆಸ್ಸಿನ ಅಧ್ಯಕ್ಷರಾಗುವದು, ಅಥವಾ ಕಮ್ಯೂನಿಸ್ಟ್ ಪಕ್ಷದ (ಸಾಧ್ಯವಾಗದಿದ್ದಲ್ಲಿ ಹೊಸ ಗುಂಪೆಂದು ಹೆಸರಿಟ್ಟುಕೊಂಡು) ಅಧ್ಯಕ್ಷರಾಗುವದೇ ಅತೀ ಸುಲಭದ ದಾರಿ.

ಭಾರತ ದರ್ಶನ

ಮೆಟ್ಟೂರಿನ ಸುರಂಗ ವಿದ್ಯುದಾಗಾರ

ಇದೇ ಸೆಪ್ಟೆಂಬರ್ ೧ನೇ ತಾರೀಖು ಕಾರ್ಯವನ್ನಾರಂಭಿಸಿದ ಮೆಟ್ಟೂರು ಸುರಂಗ ವಿದ್ಯುದಾಗಾರದ ಹೊಸ ಘಟಕದ ಬಗ್ಗೆ ಮದರಾಸು ರಾಜ್ಯದ ಮುಖ್ಯ ಮಂತ್ರಿಗಳಾದ ಶ್ರೀ ಎಂ. ಭಕ್ತವತ್ಸಲಂರವರು ಕೆಳಗಿನಂತೆ ಸಂದೇಶ ನೀಡಿದ್ದಾರೆ:

"ಸೋವಿಯೆತ್ ಒಕ್ಕೂಟದ ನೆರವಿನಿಂದ ನಿರ್ಮಿತವಾಗಿರುವ ನೆಯ್ವೇಲಿ ಉಷ್ಣ ವಿದ್ಯುತ್ ಕೇಂದ್ರದ ೭ನೆಯ ಘಟಕ ಮತ್ತು ಮೆಟ್ಟೂರು ವಿದ್ಯುತ್ ಯೋಜನೆಯ ಎರಡು, ಮೂರು ಮತ್ತು ನಾಲ್ಕನೆಯ ಯೂನಿಟ್‌ಗಳು ಚಾಲ್ತಿಯಲ್ಲಿ ಬರಲಿರುವುದು ನನಗೆ ತುಂಬಾ ಸಂತೋಷ ಉಂಟು ಮಾಡಿದೆ. ಈ ಹೊಸ ಘಟಕಗಳಿಗೆ ತಾಂತ್ರಿಕ ನೆರವು ನೀಡುವುದರ ಜತೆಗೆ ಸೋವಿಯೆತ್ ಒಕ್ಕೂಟವು ಜನರೇಟರುಗಳಿಗೆ ಬೇಕಾದ ಎಲ್ಲ ಯಂತ್ರಗಳನ್ನೂ ನೀಡಿರುವುದು ತೃಪ್ತಿ ನೀಡುವ ಅಂಶವಾಗಿದೆ. ನೆಯ್ವೇಲಿ ವಿದ್ಯುತ್ ಯೋಜನೆಯ ಹೊಸ ಘಟಕ ಮದರಾಸು ಗ್ರಿಡ್‌ಗೆ ೧೦೦ ಮೆಗಾವಾಟ್ ವಿದ್ಯುತ್ ಒದಗಿಸುತ್ತದೆ. ಮತ್ತು ಮೆಟ್ಟೂರು ಯೋಜನೆಯ ಮೂರು ಹೊಸ ಘಟಕಗಳು ೧೫೦ ಮೆಗಾವಾಟ್ ವಿದ್ಯುತ್ ಒದಗಿಸುತ್ತದೆ. ಈ ರಾಜ್ಯದಲ್ಲಿ ವಿದ್ಯುತ್ ಉತ್ಪಾದನೆಗೆ ಇವೆರಡೂ ಸಾಕಷ್ಟು ಪರಿಣಾಮಕಾರಿಯಾಗಿರುತ್ತವೆ.

ಈ ಹೊಸ ಘಟಕಗಳ ನಿರ್ಮಾಣವನ್ನು ಯಶಸ್ವಿಯಾಗಿ ಪೂರಯಿಸಿರುವ ಮತ್ತು ಮದರಾಸು ರಾಜ್ಯದಲ್ಲಿ ವಿದ್ಯುಚ್ಛಕ್ತಿ ಅಭಿವೃದ್ಧಿಗೆ ನೆರವಾಗಿರುವ ಸೋವಿಯತ್ ಇಂಜಿನಿಯರುಗಳು, ತಾಂತ್ರಿಕ ವರ್ಗದವರು ಮತ್ತು ಕೆಲಸಗಾರರಿಗೆ ನನ್ನ ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಮೆಟ್ಟೂರಿನಲ್ಲಿ ನಿರ್ಮಿತವಾಗಿರುವ ಹೊಸ ವಿದ್ಯುದಾಗರವು ಒಂದು ಅಸದೃಶವಾದ ವಿದ್ಯುದಾಗರ. ಹಳೆಯ ವಿದ್ಯುದಾಗರ ತಯಾರಿಸುವುದಕ್ಕಿಂತ ಐದು ಪಟ್ಟು ಹೆಚ್ಚು ವಿದ್ಯುಚ್ಛಕ್ತಿ ಉತ್ಪಾದಿಸುತ್ತದೆ. ಸೋವಿಯತ್ ತಾಂತ್ರಿಕ ಸಹಕಾರದಿಂದ ಇದು ನಿರ್ಮಿತವಾಗಿದೆ. ನಮ್ಮ ದೇಶದಲ್ಲಿ ಸೋವಿಯತ್ ಒಕ್ಕೂಟವು ನಿರ್ಮಿಸುತ್ತಿರುವ ಹದಿಮೂರು ವಿದ್ಯುತ್ಕೇಂದ್ರಗಳಲ್ಲಿ ಇದೊಂದು. ಈ ಗ್ರಿಡ್‌ನಲ್ಲಿ ಇದೇ ಅತ್ಯಂತ ದೊಡ್ಡ ಜಲ ವಿದ್ಯುತ್ಕೇಂದ್ರ. ಟರ್ಬೈನ್‌ಗಳು, ಜನರೇಟರುಗಳು, ಟ್ರಾನ್ಸ್‌ಫಾರ್ಮರುಗಳು, ಮತ್ತಿತರ ಎಲ್ಲ ಸರಂಜಾಮುಗಳೂ ಸೋವಿಯತ್ ಒಕ್ಕೂಟದಿಂದ ಬಂದಿವೆ. ಸೋವಿಯತ್ ತಜ್ಞರ ಮಾರ್ಗದರ್ಶನ ಮತ್ತು ಉಸ್ತುವಾರಿಯಲ್ಲಿ ಅವೆಲ್ಲವನ್ನೂ ಇಲ್ಲಿ ಜೋಡಿಸಿ ನಿರ್ಮಿಸಲಾಯಿತು. ಅದೇ ಸಮಯದಲ್ಲಿ ಭಾರತೀಯ ಸಲಕರಣೆಗಳ ಮತ್ತು ನಿಪುಣತೆಯ ಸಂಪೂರ್ಣ ಬಳಕೆಯಾಗಿದೆ ಇಲ್ಲಿ.

ಈ ಹೊಸ ವಿದ್ಯುದಾಗರದಿಂದ ಮೆಟ್ಟೂರು ಹೊಸ ಅರ್ಥ ಹಾಗೂ ಮಹತ್ವವನ್ನು ಪಡೆದುಕೊಂಡಿದೆ. ಅದು ಈಗ ಕೈಗಾರಿಕೋದ್ಯಮ ಚಟುವಟಿಕೆಗೆ ಕೇಂದ್ರವಾಗಿದೆ. ಮದರಾಸಿನ ವಿದ್ಯುಚ್ಛಕ್ತಿ ಅಭಾವವನ್ನು ಪೂರೈಸಲು ಇದು ವರ್ಷಂಪ್ರತಿ ೫೮೭ ಮಿಲಿಯ ಯೂನಿಟ್‌ಗಳು ಅಧಿಕ ವಿದ್ಯುಚ್ಛಕ್ತಿ ಒದಗಿಸುತ್ತದೆ. ಇದು ಮದರಾಸಿನ ವಿದ್ಯುತ್ ಸರಬರಾಜು ಪರಿಸ್ಥಿತಿಯನ್ನು ಸಾಕಷ್ಟು ಸುಧಾರಿಸುತ್ತದೆ ಮತ್ತು ರಾಜ್ಯದಲ್ಲಿ ಔದ್ಯೋಗಿಕ ಮತ್ತು ಕೃಷಿ ಅಭಿವೃದ್ಧಿಯ ವೇಗವನ್ನು ಹೆಚ್ಚಿಸುತ್ತದೆ.

ಹಳೆಯ ವಿದ್ಯುದಾಗರದ ಉತ್ಪಾದನಾ ಪ್ರಮಾಣ ಕೇವಲ ೪0 ಮೆಗಾವಾಟ್. ಆದರೆ ಹೊಸ ವಿದ್ಯುದಾಗಾರದ ನಾಲ್ಕು ಜನರೇಟರುಗಳು ಪ್ರತಿಯೊಂದೂ ೫೦ ಮೆಗಾವಾಟ್ ಪ್ರಮಾಣದ್ದಾಗಿವೆ. ಅಂದರೆ ಒಟ್ಟು ವಿದ್ಯುತ್ ಉತ್ಪಾದನಾ ಪ್ರಮಾಣವು ೨00 ಮೆಗಾವಾಟ್ ಆಗಿರುತ್ತದೆ.

ಈ ವಿದ್ಯುತ್ ಕೇಂದ್ರದಿಂದ ಉತ್ಪಾದಿತವಾದ ವಿದ್ಯುಚ್ಛಕ್ತಿಯು ವರ್ಷಂಪ್ರತಿ ೨00,000 ಟನ್ ಆಹಾರ ಧಾನ್ಯಗಳನ್ನು ಉತ್ಪಾದಿಸುವ, ೧೪೦,೦೦೦ ಎಕರೆ ಭೂಮಿಗೆ ನೀರೆರೆಯುವ ೩೫,೦೦೦ ಕೃಷಿ ಪಂಪ್ ಸೆಟ್‌ಗಳನ್ನು ಚಾಲ್ತಿಗೆ ತರುತ್ತವೆ. ಇದರ ಜತೆಗೆ ಸಣ್ಣ ಕೈಗಾರಿಕೆಗಳಿಗೂ ವಿದ್ಯುತ್ ಒದಗಿಸುತ್ತದೆ.

(ಹನ್ನೆರಡನೇ ಪುಟ ನೋಡಿರಿ)

ಸುವ್ಯವಸ್ಥಿತ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್
ವ್ಯವಹಾರಗಳಿಗೆ ತನ್ನ 62 ಶಾಖೆಗಳಿಂದ ಹಬ್ಬಿರುವ
"ವಿಜಯ ಬ್ಯಾಂಕಿ"ನಲ್ಲಿ ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 8% ವರೆಗಿನ ಬಡ್ಡಿ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿ. ಆಫೀಸು— "ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—3

ಇಲೆಕ್ಷನ್ನಿಗೆ ನಿಂತು ಬಿಡೇ....

(ನಾಲ್ಕನೇ ಪುಟದಿಂದ)

'ಇದು ಒಳ್ಳೆಯ ವೇದಾಂತ.'

'ಈ ವೇದಾಂತವನ್ನ ಅವರು ತಿಳಿದಿದ್ದರಿಂದಲೇ ಎಲ್ಲರ ದಿನವನ್ನ ಒಂದಾಗಿ ಆಚರಿಸ್ತಾರೆ....'

"ಹೋಗ್ಲಿ ಬಿಡಿ....ನಿಮ್ಮ ಟೋಪಿ ಸರಕಾರಕ್ಕೆ ಬುದ್ಧಿಯಿಲ್ಲ...."

"ಯಾಕೆ?"

'ನೋಡಿ, ತಮ್ಮ ಟೋಪಿ ಬಲವಾಗಿ ತಲೇಲಿ ನಿಲ್ಬೇಕಾದ್ರೆ ಅಧ್ಯಾಪಕರ ವೇತನ—ಸಾರಿಗೆಗಳನ್ನ ಏರಿಸ ಬೇಕು. ಅಂದಾಗಲೇ ಅವರು ಸರಕಾರದ ನೀತಿಯಿಂದ ತೃಪ್ತರಾಗಿರುವ ಸಮಾಜವನ್ನು ರೂಪಿಸುವರು. ಇಲ್ಲವಾದ್ರೆ, ಟೋಪಿಯವ್ರಿಗೆ ವಿರುದ್ಧ ಎತ್ತಿಕಟ್ಟಿದ್ರೆ ತಪ್ಪೇನು?

'ನೋಡಮ್ಮ, ಅದಕ್ಕೇ ನಿನ್ನನ್ನ ಇಲೆಕ್ಷನ್ನಿಗೆ ನಿಲ್ಲೂಂತ ಅಂದಿದ್ದು....'

"ನಿಮ್ಮ ಮಾತನ್ನ ಕೇಳುವಾಗ ನಿಂತು ಬಿಡೋಣಾಂತ ಅನ್ನಿಸುತ್ತೆ. ಆದ್ರೆ...."

"ಏಕೆ? ಪ್ರಭಾಷಿಯವರಂತೂ ...."

"ಅದೆಲ್ಲಾ ಸರೀನ್ನಿ. ಆದ್ರೆ, ಮತದಾರರ ಪಟ್ಟಿಯಲ್ಲೇ ನನ್ನ ಹೆಸ್ರು ಇನ್ನೂ ಬೀಳ್ಲಿಲ್ಲ .."

"ಹ್ಹ ಹ್ಹ ಹ್ಹ ...., ಅದು ಮರ್ತೇ ಹೋಯ್ತು ಕಣೇ. ನಾಳೇನೇ ಹೋಗಿ ಸೇರ್ಸಿ ಬರ್ತೇನೆ ....'

"ಹೂಂ ಅಂದ್ರೆ ಇವತ್ತು ಏಳ್ಪಹುದಲ್ಲಾ?

'ಮತ್ತೆ, ಮಾಡೋದಾದ್ರೂ ಏನು?"

'ಹೂಂ....'

—ಗೋರಾ.

ನಮ್ಮ ಹೆಣ್ಣಿಗೆ ಬೇರೆಯೇ ಗಂಡು

(ಏಳನೇ ಪುಟದಿಂದ)

ಮಹಾಂತಸ್ವಾಮಿಗಳಲ್ಲಿ ಅನುಕೂಲಾಭಿಪ್ರಾಯ ಹುಟ್ಟಿದೆ. ನಿಯೋಜಿತ ಆಯೋಗದ ಕಾರ್ಯವ್ಯಾಪ್ತಿಯನ್ನು ಒಮ್ಮತದಿಂದ ನಿರ್ಧರಿಸಲಾಗದ ಮಹಾರಾಷ್ಟ್ರ—ಕರ್ನಾಟಕದ ಮುಖ್ಯಮಂತ್ರಿಗಳಿಗೆ ಕಾಂಗ್ರೆಸ್ ಕಾರ್ಯಕಾರಿಣಿ ಹೊಸದಾರಿ ತೋರಿಸಿತು.

—ಪಂಚಾಯಿತಿ ವಾಗದ ಎಲ್ಲಗಡಿ ಸಮಸ್ಯೆಗಳಿಗೂ ಜನಮತ ಗಣನೆ—

ಈ ನಿರ್ಧಾರವೇ ಅಂತಿಮವಾಗುವುದೆ? —ಜನಮತ ಸಂಗ್ರಹದ ವೇಳೆ ಅನೈತಿಕ ವ್ಯವಹಾರಗಳು ನಡೆಯುವುದಿಲ್ಲವೆಂಬುದಕ್ಕೆ ನಿಃಕಷ್ಟ ಆಧಾರವೇನಿದೆ? ಐದು ವರ್ಷಗಳ ಆಧಾರಾರ ಕದಕ್ಕಾಗಿ ಮಾಡಬಾರದಷ್ಟು ಅನ್ಯಾಯ ಮಾಡುವುತ್ತಿರುವಾಗ ಭವಿಷ್ಯ ನಿರ್ಧಾರದ ದಾರಿ ಹೇಗೆ ತುಳಿಯಲ್ಪಟ್ಟೀತು?— ಕಲ್ಪನಾತೀತ.

ಗೋವೆಯು ಮ್ಹಾಲಿನ ಮೋಹವನ್ನು ಕನ್ನಡಿಗರು ಎಂದೋ ಬಿಟ್ಟಿದ್ದಾರೆ. ಅದು ನಿಪ್ಪಾಣಿಯ ಹೆಣ್ಣೆಂದು ಅವರಿಗೆ ಗೊತ್ತು. ಆದರೂ ತಮ್ಮ ಬಯಕೆಯನ್ನು ತಿಳಿಸದ ಹೋದರೆ ತಮ್ಮನ್ನು ಅನಾಸಕ್ತರೆಂದು ತಿಳಿದಾರೆಂಬ ಹೆದರಿಕೆ ಇತ್ತು.

ಗೋಗಟೆಯವರು—ನಮ್ಮ ಪ್ರಾರ್ಥನಾ ಪತ್ರವನ್ನೂ ಸ್ವೀಕರಿಸಿರಿ. ನಮ್ಮದು ಪೂರ್ವ ಜನ್ಮದ ಗೆಳೆತನ.

ಅದಕ್ಕೀಗ ಬೆಲೆಯಿಲ್ಲ.

ಹೋಗಲಿ, ಈಗ ಕನ್ನಡಿಗರು ಧೀಮಂತರಾಗ ಬೇಕು. ಶುದ್ಧ ಕನ್ನಡದ ಪ್ರದೇಶಗಳನ್ನ ಪಡೆಯುವುದಕ್ಕೆ ಕಟಿಬದ್ಧರಾಗ ಬೇಕು. ಕೈಯಲ್ಲಿರುವ ಭೂಮಿಯನ್ನು ಬಿಟ್ಟುಕೊಡದೆ ಕೈಗೆ ಬರಬೇಕಾದುವನ್ನು ಪಡೆಯಬೇಕು. ಇದಕ್ಕೆ ಸೂಕ್ತಕ್ರಮ ಕೈಗೊಳ್ಳಲು ಅಂಜಬಾರದು; ಅಳುಕಬಾರದು. ಎದೆಗಾರಿಕೆಯಿದ್ದವರು ಮಾತ್ರ ಇಂದು ಗೆಲ್ಲಬಹುದು

ತಂದೆ ನೀಡಿದ ಭರವಸೆಯನ್ನು ಮಗಳು ತೆಗೆದು ಹಾಕಿದಳು—ರಾಜಕೀಯದಲ್ಲಿ ಯಾವುದು ಯಾವಾಗ ಏನಾಗುತ್ತದೆ ಎಂದು ಹೇಳುವುದು ದುಸ್ತರ. ವ್ಯೆಯೆಲ್ಲ ಕಣ್ಣಾಗಿ ಕೃತ್ಯೈತ್ಪನ್ನ ಮತಿಯಾಗಿ ಇದ್ದರೆ ಮಾತ್ರ ಏನಾದರೂ ಆದೀತು.

ಉದ್ಘಾಟನಾ ಸಮಾರಂಭ

ವಿಟ್ಲ. ಸ್ಥಳೀಯ ವಿರಲ ಬಾಲಿಕಾ ಪ್ರೌಢಮಾಧ್ಯಮಿಕ ಶಾಲೆಯನ್ನು ಇದೇ ತಾ. ಒಂದರಂದು ಭಗಿನೀ ಸಮಾಜದ ಗೌರವ ಕಾರ್ಯದರ್ಶಿಗಳಾದ ಶ್ರೀಮತಿ ಕಲ್ಯಾಣಿ ಡಿ. ಶೆಟ್ಟಿ ಇವರ ಅಧ್ಯಕ್ಷತೆಯಲ್ಲಿ ಶ್ರೀಮತಿ ಭಾಗ್ಯಲಕ್ಷ್ಮಿ ಮಿತ್ರ, ಉದ್ಘಾಟಿಸಿದರು. ವಿರಲ ವಿದ್ಯಾ ಸಂಘದ ಕಾರ್ಯದರ್ಶಿ ಶ್ರೀ ಕೆ. ವೆಂಕಪ್ಪಯ್ಯನವರು ಅತಿಥಿಗಳನ್ನು ಬರಮಾಡಿಕೊಂಡ ಬಳಿಕ ಶ್ರೀ ಸಿ. ಕೃಷ್ಣಶಾಸ್ತ್ರಿ ಇವರು ಸ್ವಾಗತಿಸಿದರು. ಮುಖ್ಯೋಪಾಧ್ಯಾಯಿನಿ ಶ್ರೀಮತಿ ಜಿ ನಿರ್ಮಲಾ ಶೆಟ್ಟಿ ಇವರು ಅತಿಥಿಗಳ ಪರಿಚಯ ಮಾಡಿಸಿ, ಸಂದೇಶಗಳನ್ನು ಓದಿದರು. ಶಾಲಾ ಕರೆಸ್ಪಾಂಡೆಂಟ್ ಶ್ರೀ ಎನ್. ನಾರಾಯಣಭಟ್ಟರು ಸಹಕರಿಸಿದವರನ್ನು ಅಭಿನಂದಿಸಿದರು. ಉದ್ಘಾಟಕರಾದ ಶ್ರೀಮತಿ ಭಾಗ್ಯಲಕ್ಷ್ಮೀ ಮಿತ್ರರವರು ಭಾಷಣ ಮಾಡಿ, ಅಹಲ್ಯಾ, ಸೀತಾ, ತಾರಾ, ಲಕ್ಷ್ಮೀಬಾಯಿ ಮುಂತಾದ ಸ್ತ್ರೀ ಶಿರೋಮಣಿಯರನ್ನು ಸ್ಮರಿಸಿ ಈ ಬಾಲಿಕಾ ಶಾಲೆಯು ಅಂತಹ ವೀರವನಿತೆಯರಿಗೇ ಜನ್ಮವೀಯಲಿ ಎಂದು ಆಶಿಸಿ, ಶಾಲೆಗ ಶುಭವನ್ನು ಕೋರಿದರು. ಅತಿಥಿಗಳಾಗಿ ಭಾಗವಹಿಸಿದ ಸುಪ್ರಸಿದ್ಧ ಸಾಹಿತಿ ಡಾ| ಶಿವರಾಮ ಕಾರಂತರು ಮಾತನಾಡಿ, ಶಾಲೆಗೆ ಉಜ್ವಲ ಭವಿಷ್ಯವನ್ನು ಕೋರಿ ಶಾಲೆಯನ್ನು ಹರಸಿದರು. ಅಧ್ಯಕ್ಷರು ಈ ಬಾಲಿಕ ಪ್ರೌಢ ವಿದ್ಯಾಮಂದಿರವನ್ನು ರೂಪಿಸಿದ ವಿಟ್ಲದ ಕಾರ್ಯಕರ್ತರನ್ನೂ, ವಿರಲ ವಿದ್ಯಾಸಂಘವನ್ನೂ ಹಾರ್ದಿಕವಾಗಿ ಶ್ಲಾಘಿಸಿ, ಈ ಶಾಲೆ ಇತರರಿಗೆ ಭವ್ಯ ಆದರ್ಶವನ್ನು ನೀಡಲಿ; ಇಲ್ಲಿನ ಬಾಲಕಿಯರೆಲ್ಲಾ ವಿದ್ಯಾವಂತರಾಗಿ, ಉತ್ತಮ ಗೃಹಿಣಿಯರಾಗಿ ದೇಶಕ್ಕೆ ತಮ್ಮ ಸೇವೆ ಸಲ್ಲಿಸಲಿ ಎಂದು ಹೇಳಿ ಶಾಲೆಗೆ ಹಿತವನ್ನು ಹಾರೈಸಿದರು. ಶ್ರೀ ಯನ್. ನಾರಾಯಣ ಭಟ್ಟರು ಧನ್ಯವಾದ ಸಮರ್ಪಿಸಿದರು.



ಸ್ವಲ್ಪ ವೆಪೋರಬ್‌ನ್ನು ಮೆತ್ತನೆ ತಿಕ್ಕಿರಿ
ಅಂದರೆ ಕೂಡಲೆ ಅಗರ ಉಷ್ಣತೆಯಿಂದ
ಮಗುವಿಗೆ ಆರಾಮ ಎನಿಸುವುದು
ನಿರಾತಂಕವಾಗಿ ಉಸಿರಾಡುವುದು
ಇಡೀ ರಾತ್ರಿ ಸುಖವಾಗಿ ಮಲಗುವದು

ವಿಕ್ಸ್ ವೆಪೋರಬ್ ನೆಗಡಿಗೆ ಇಂದೇ ರಾತ್ರಿ ತಿಕ್ಕಿರಿ

ಎಲ್ಲೆಲ್ಲಿ ಏನೇನು?

ಮಹಾಸಭೆ

"ನವಂಬಯಿಯ" ಬಂಟರ ಯಾನೆ ನಾಡವರ ಸಂಘದ ಮೂವತ್ತೆಂಟನೆಯ ವಾರ್ಷಿಕ ಮಹಾ ಸಭೆಯು ತಾರೀಕು 28-8-66ರಂದು ಸಂಘದ ಅಧ್ಯಕ್ಷ ಡಾ. ಯಚ್. ಬಾಲಕೃಷ್ಣ ಶೆಟ್ರ ಅಧ್ಯಕ್ಷತನದಲ್ಲಿ ದಾದರಿನಲ್ಲಿರುವ ಶೆಟ್ಟಿ ಭಂಡಾರಿ ಹಾಲ್‌ನಲ್ಲಿ ಜರಗಿತು. 1966-67ನೇಯ ವರ್ಷದ ಕಾರ್ಯಕಾರಿ ಸಮಿತಿಗೆ ಈ ಕೆಳಗಿನವರನ್ನೊಳಗೊಂಡ ಮೂವತ್ತೈದು ಮಂದಿ ಸದಸ್ಯರು ಚುನಾಯಿಸಲ್ಪಟ್ಟರು.

ಡಾ. ಯಚ್. ಬಾಲಕೃಷ್ಣ ಶೆಟ್ಟಿ, (ಅಧ್ಯಕ್ಷ), ಶ್ರೀ ಯಸ್. ಕೃಷ್ಣದಾಸ್ ಶೆಟ್ಟಿ (ಉಪಾಧ್ಯಕ್ಷ), ಶ್ರೀ ಯನ್. ಗೋಪಾಲ ಶೆಟ್ಟಿ (ಗೌ. ಪ್ರ. ಕಾರ್ಯದರ್ಶಿ), ಶ್ರೀ ಕೆ. ಕರುಣಾಕರ ಶೆಟ್ಟಿ (ಗೌ. ಉಪಕಾರ್ಯದರ್ಶಿ), ಶ್ರೀ ವೈ. ರಘು ಶೆಟ್ಟಿ (ಗೌ. ಕೋಶಾಧಿಕಾರಿ), ಮತ್ತು ವೈ ಮುದ್ದು ಶೆಟ್ಟಿ (ಗೌ ಉಪಕೋಶಾಧಿಕಾರಿ).

(ಮೂರನೇ ಪುಟದಿಂದ)

ಪ್ರಧಾನ ಮಂತ್ರಿ ವರ್ಣಭೇದ ನೀತಿಯ ಪ್ರಬಲ ಸಮರ್ಥಕ ವೆರ್‌ವರ್ಡ್ ಮಹನೀಯರು ಬಿಳಿಯನೊಬ್ಬನಿಂದಲೇ ಚೂರಿಯ ಇರಿತಕ್ಕೆ ಗುರಿಯಾಗಿ ಅಸುನೀಗುವಂತಾದುದು ನಿಜಕ್ಕೂ ದುರ್ದೈವ. ನೆಲಕ್ಕುರುಳಿದ ಭಲಕ್ಕಾಗಿ ಕೊನೆಯವರೆಗೂ ಇಂದ ದುರ್ಯೋಧನನಂತೆ ವರ್ಣಭೇದ ನೀತಿಗಾಗಿಯೇ ಇದ್ದ ವೆರ್‌ವರ್ಡರ ಕೊನೆ ಹೀಗಾದೀತೆಂದು ಊಹಿಸಿರಲ್ಲಿಲ್ಲ. ಕಾಮನ್‌ವೆಲ್ತ್‌ನಿಂದ ಹೊರಬಂದು ಅವಶ್ಯ ಕಂಡರೆ ಸಂಯುಕ್ತ ರಾಷ್ಟ್ರ ಸಂಘದಿಂದಲೂ ಹೊರಬರಲು ಸಿದ್ಧನಾದ ವೆರ್‌ವರ್ಡರ ಕೊಲೆಯಿಂದ ದಕ್ಷಿಣ ಆಫ್ರಿಕೆಯ ಸಂಕಾರದ ನೀತಿಯಲ್ಲಿ ನಾವು ಪರಿವರ್ತನೆಯನ್ನು ನಿರೀಕ್ಷಿಸ ಬಾರದು. ಕರಿಯರನ್ನು ತುಳಿಯುವ ಬಿಳಿಯರ ನೀತಿ ಜಗಜ್ಜನಿತ. ಆದರೂ ವೆರ್‌ವರ್ಡರ ದುರಂತದಿಂದ ಮುಂದಿನವರು ಪಾಠ ಕಲಿಯುವುದು ಒಳಿತು. ಸರ್ವಸಮಾನತ್ವದ ಅಮರ ತತ್ವದತ್ತ ಜಾಗತಿಕ ಒಲವು ಬೆಳೆಯುತ್ತಿರುವಾಗ, ದಕ್ಷಿಣ ಆಫ್ರಿಕೆ ಬರ್ಬರ ನೀತಿಯನ್ನೇ ಅವಲಂಬಿಸುವುದು ನಾಚಿಗೆಕೇಡು.

ಕಾರ್ಕಳ ಮುನ್ಸಿಫ್ ಕೋರ್ಟಿನಲ್ಲಿ

O. S. No. 114/1966.

ಸಂಕಯ್ಯ ಶೆಟ್ಟಿ — ವಾದಿ.

ಮತ್ತು

ದುಗ್ಗಪ್ಪ ಶೆಟ್ಟಿ ಸಹಾ — ಪ್ರತಿವಾದಿಗಳು.

ಇವರೊಳಗೆ

ಈ ಮೂಲಕ ಸದ್ರಿ ದಾವೆಯ 6ನೆ ಪ್ರತಿವಾದಿಳು ಸೇಸಿ ಶೆಟ್ತಿ—ನಾಗಮ್ಮ ಶೆಟ್ತಿರ ಮಗಳು, ಕಾರ್ಕಳ ತಾಲ್ಲೂಕು ಮುದ್ರಾಡಿ ಗ್ರಾಮಸ್ಥಳು, Post Mudradi.

ಇವರಿಗೆ ತಿಳಿಸುವದೇನಂದ್ರೆ —

ವಾದಿ ನೀವು ವಗೈರೆರ ಮೇಲೆ ಮಾಡಿದ ಮೇಲಿನ ದಾವಾ ವಿಚಾರಣೆ ಹಾಜರಿ ಬಗೆ ತಾರೀಕು 7-10-1966ಕ್ಕೆ ಇಟ್ಟಿದೆ. ಸದ್ರಿ ದಿನ ಬೆಳಗ್ಗೆ 10 ಗಂಟೆಗೆ ನೀವು ಮೇಲ್ಕಂಡ ಕೋರ್ಟಿಗೆ ಸ್ವತಹಾ ಯಾ ವಕೀಲ್ ದ್ವಾರಾ ಹಾಜ್ರಾಗಿ ಉದಯರ್ಪತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮನ್ನು ಬಿಟ್ಟು ಮಾಡಿ ಸದ್ರಿ ದಾವಾ ಏಕಪಕ್ಷವಾಗಿ ತೀರ್ಮಾನಿಸಲಾಗುತ್ತದೆ.

(By order of the Court)

N. M. Adyanthaya,
Advocate for Plaintiff.

Karkala, 9—9—66.

ಮಹಾಸಭೆ

ಶಿರ್ವ, ಸ್ಥಳೀಯ ವಿದ್ಯಾವರ್ಧಕ ಸಂಘದ ಮಹಾ ಸಭೆಯು ತಾ. 4-9-1966ರಂದು ಶ್ರೀ ಯಡ್ತರೆ ಮಂಜಯ್ಯ ಶೆಟ್ಟಿ, ಎಂ. ಎಲ್. ಎ. ಕುಂದಾಪುರ—ಇವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಪಿ ಶಿವಾಜಿ ಶೆಟ್ರು ಸ್ವಾಗತ ಭಾಷಣಮಾಡಿದರು. ಶ್ರೀ ಕೆ. ವಾಸುದೇವ ಶೆಟ್ರು ಲೆಕ್ಕಪತ್ರಗಳನ್ನೊಪ್ಪಿಸಿದರು. ಶ್ರೀ ಎಸ್. ಎಸ್ ಕೊಳ್ಕೆಬೈಲ್ ಎಂ ಎಲ್. ಎ. ಮತ್ತು ಕುಂದಾಪುರ ತಾಲೂಕು ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಶ್ರೀ ಎಮ್. ಎಮ್. ಹೆಗ್ಡೆಯವರು ಉಪಸ್ಥಿತರಿದ್ದು ಸೂಕ್ತ ಸಲಹೆಗಳನ್ನಿತ್ತರು.

ಈ ಕೆಳಗಿನ ಸದಸ್ಯರನ್ನೊಳಗೊಂಡ ಹೊಸ ಆಡಳಿತ ಮಂಡಳಿಯನ್ನು ಚುನಾಯಿಸಲಾಯ್ತು. ಶ್ರೀಯುತರುಗಳಾದ ಪಿ. ಶಿವಾಜಿ ಶೆಟ್ಟಿ (ಅಧ್ಯಕ್ಷ ಮತ್ತು ಶಾಲೆಗಳ ಕರೆಸ್ಪಾಂಡೆಂಟ್), ಶಿರ್ವ ದುಗ್ಗಪ್ಪ ಹೆಗ್ಡೆ (ಉಪಾಧ್ಯಕ್ಷ) ಕೆ. ವಾಸುದೇವ ಶೆಟ್ಟಿ (ಕಾರ್ಯದರ್ಶಿ) ಮಧುಸೂದನ ಶೆಟ್ಟಿ (ಉಪಕಾರ್ಯದರ್ಶಿ) ಬಿ. ಜಯರಾಮಶೆಟ್ಟಿ (ಕೋಶಾಧಿಕಾರಿ), ವಾಸು ಶೆಟ್ಟಿ, ಡಾ. ಎಂ ರಾಜಶೇಖರ ಹೆಗ್ಡೆ, ಎಮ್. ಸದಾಶಿವ ಹೆಗ್ಡೆ, ಬಿ. ಚಂದ್ರಹಾಸ ಹೆಗ್ಡೆ, ಎಮ್. ಲೋಕಯ್ಯ ಶೆಟ್ಟಿ, ಕೆ. ತಿಮ್ಮಪ್ಪ ಶೆಟ್ಟಿ, ಕೆ. ಭೋಜ ಶೆಟ್ಟಿ ಮತ್ತು ಕೆ. ನಾರಾಯಣ ಶೆಟ್ಟಿ (ಸದಸ್ಯರು.)

ನಿಧಿಸಂಗ್ರಹಕ್ಕಾಗಿಯೂ ಒಂದು ಉಪಸಮಿತಿಯನ್ನು ರಚಿಸಲಾಯ್ತು.

ವಿಜಯನಗರಮ್‌ನಲ್ಲಿ ಸಿಂಡಿಕೇಟ್ ಬ್ಯಾಂಕಿನ ಹೊಸ ಶಾಖೆ

ಮಣಿಪಾಲ, ಸಪ್ಟಂಬರ 11: ಸಿಂಡಿಕೇಟ್ ಬ್ಯಾಂಕಿನ 218ನೇ ಶಾಖೆಯು ವಿಜಯನಗರಮ್ (ವಿಶಾಖಪಟ್ಣಂ ಜಿಲ್ಲೆ, ಆಂಧ್ರ ಪ್ರದೇಶ ಎಂಬಲ್ಲಿ ಕೋಲ್ಲಾ ಬಜಾರ್, ಮೈನ್ ರೋಡ್ಡ್‌ನಲ್ಲಿ ನಿನ್ನೆ ತೆರೆಯಲ್ಪಟ್ಟಿತು. ಈ ಹೊಸ ಶಾಖೆಯು ಸಿಂಡಿಕೇಟ್ ಬ್ಯಾಂಕ್ ಈ ವರ್ಷ ತೆರೆದ ಶಾಖೆಗಳಲ್ಲಿ ಎಂಟನೆಯದಾಗಿದೆ. ಹೊಸ ಶಾಖೆಯನ್ನೊಳಗೊಂಡು ಆಂಧ್ರ ಪ್ರದೇಶದಲ್ಲಿ ಸಿಂಡಿಕೇಟ್ ಬ್ಯಾಂಕಿನ 24 ಶಾಖೆಗಳಿವೆ.

ಸಿಂಡಿಕೇಟ್ ಬ್ಯಾಂಕಿನ 219ನೇ ಶಾಖೆಯು ಕೋಟೇಶ್ವರ (ದ. ಕ.)ನಲ್ಲಿ ಇದೇ ತಿಂಗಳ ದಿನಾಂಕ 16ರಂದು ತೆರೆಯಲ್ಪಡುವುದಲ್ಲದೆ, ಯಡಿಕಿ (ಆಂಧ್ರ), ನವದೆಹಲಿಯ ಸುಪರ್ ಬಜಾರ್ (ಕನಾಟ್ ಸರ್ಕಸ್) ಮತ್ತು ಬೆಂಗಳೂರು ಎಚ್. ಎ ಎಲ್.— ಈ ಸ್ಥಳಗಳಲ್ಲಿ ಸಹಾ ಹೊಸ ಶಾಖೆಗಳನ್ನು ಶೀಘ್ರವೇ ತೆರೆಯಲಾಗುವುದು.

ದಕ್ಷ ಹಾಗೂ ಸರ್ವತೋಮುಖ ಬ್ಯಾಂಕಿಂಗ್ ಸೇವೆಗೆ ಖ್ಯಾತಿಗೊಂಡಿರುವ ಸಿಂಡಿಕೇಟ್ ಬ್ಯಾಂಕಿನ ವಿಶಿಷ್ಟ ಸೇವಾ ಸೌಲಭ್ಯಗಳು ಹೊಸ ಹೊಸ ಜನತೆಗೆ ಲಭ್ಯವಾಗುತ್ತಿರುವುದು, ಬ್ಯಾಂಕ್ ಸಾಧಿಸುತ್ತಿರುವ ಸರ್ವಾಂಗೀಣ ಪ್ರಗತಿಯ ಸೂಚಕವಾಗಿದೆ.

ದೇವಾಡಿಗರ ಸೇವಾಸಂಘ

ಉಡುಪಿ: ಸಪ್ಟಂಬರ್ 2: ದೇವಾಡಿಗರ ಸೇವಾಸಂಘ (ರಿ) ಉಡುಪಿ ಇವರ ಆಡಳಿತ ಕಮಿಟಿ ಸಭೆಯು ತಾ. 28—8—66ರಂದು ಜರಗಿದಾಗ ಅಧ್ಯಕ್ಷ ಶ್ರೀ ಕೆ. ಸಂಜೀವದೇವಾಡಿಗರು ಸಮೂಹದಸಮೂಹಉತ್ಕೃಷ್ಟ ನಾಲ್ಕು ಬಡ ವಿದ್ಯಾರ್ಥಿ ಹಾಗೂ ವಿದ್ಯಾರ್ಥಿನಿಯರಿಗೆ ಸಂಘದ ವತಿಯಿಂದ 1966—67ನೇ ವರದಿ ವರ್ಷದ ವಿದ್ಯಾರ್ಥಿ ವೇತನವನ್ನು ವಿತರಣೆಗೊಳಿಸಿ ಸಂಘವು ಇತ್ತೀಚೆಗೆ ಕೆಲವು ವರ್ಷಗಳಿಂದ ಅಭಿವೃದ್ಧಿ ಪಥದಲ್ಲಿ ಸಾಗುತ್ತಿರುವುದನ್ನು ಶ್ಲಾಘಿಸಿ ಇನ್ನು ಮುಂದೆಯೂ ಅದು ತನ್ನ ಧ್ಯೇಯ ಸಾಧನೆಗಳಿಗಾಗಿ ಶ್ರಮಪಟ್ಟು ದುಡಿದು ಆದರ್ಶ ಸಮಾಜವನ್ನು ಕಟ್ಟಬೇಕೆಂದು ಕೇಳಿಕೊಂಡರು.

ಕೊನೆಯದಾಗಿ ಕಾರ್ಯದರ್ಶಿ ಶ್ರೀ ಯು. ಕೇಶವ ದೇವಾಡಿಗರು ಧನ್ಯವಾದ ಸಮರ್ಪಿಸಿದರು.

ಗೋವಿಂದ ಪೈ ವಾಙ್ಮಯ ದರ್ಶನ ಗ್ರಂಥ ಉದ್ಘಾಟನೆ

ಉಡುಪಿ ಎಂ. ಜಿ. ಎಂ. ಕಾಲೇಜಿನವರು ತಮ್ಮ ಗೋವಿಂದ ಪೈ ಸಂಶೋಧನಾ ಕೇಂದ್ರದ ಮೂಲಕ ಶ್ರೀ ಶ್ರೀನಿವಾಸ ಹಾವನೂರ ಮತ್ತು ಶ್ರೀ ಮು. ವಿ. ನಾಯಕರಿಂದ ಸಿದ್ಧಪಡಿಸಲಾದ ಗೋವಿಂದ ಪೈ ವಾಙ್ಮಯ ದರ್ಶನ ಗ್ರಂಥ ಉದ್ಘಾಟನಾ ಸಮಾರಂಭವನ್ನು ಮದ್ರಾಸಿನ ಪ್ರೊ. ಮರಿಯಪ್ಪ ಭಟ್ಟರಿಂದ ನೆರವೇರಿಸಿದರು, ಜಿಲ್ಲಾಧಿಕಾರಿ ಶ್ರೀ ಎಚ್. ಎಲ್. ನಾಗೇಗೌಡರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಪ್ರಾರಂಭದಲ್ಲಿ ಸಂಶೋಧನ ಕೇಂದ್ರದ ನಿರ್ದೇಶಕರೂ, ಕಾಲೇಜಿನ ಪ್ರಿನ್ಸಿಪಾಲರೂ ಆದ ಶ್ರೀ ಕು. ಶಿ. ಹರಿದಾಸ ಭಟ್ಟರು ಸ್ವಾಗತಿಸಿ ಮಾನ್ಯ ಅತಿಥಿಗಳ ಪರಿಚಯ ಮಾಡಿಕೊಟ್ಟರು. ಶ್ರೀನಿವಾಸ ಹಾವನೂರು ಅವರು ಗೋವಿಂದ ಪೈಯವರ ಭಾವಚಿತ್ರವನ್ನು ಅನಾವರಣಗೈಯುತ್ತಾ, ಗೋವಿಂದ ಪೈಗಳ ಕೃತಿಯ ದರ್ಶನದೊಂದಿಗೆ ಅವರ ಜೀವನದರ್ಶನವೂ ಆಗಲೆಂದು ಹಾರೈಸಿದರು.

ಪ್ರೊ| ಮರಿಯಪ್ಪ ಭಟ್ಟರು ಶ್ರೀ ಗೋವಿಂದ ಪೈ ವಾಙ್ಮಯ ದರ್ಶನದ ಉದ್ಘಾಟನೆ ಗೈಯುತ್ತಾ, ಶ್ರೀ ಪೈಗಳ ಮಹತ್ವವನ್ನೂ ಅವರ ಕೆಲವು ಕವಿತಾ ಪುಸ್ತಕಗಳ ಹಿರಿಮೆಯನ್ನು ವಿವರಿಸಿ ಇದು ಆದರ್ಶ ಕೇಂದ್ರವಾಗಲಿಯೆಂದು ಹಾರೈಸಿದರು.

ಅಧ್ಯಕ್ಷರು ಮಾತನಾಡುತ್ತಾ, ಪುಸ್ತಕಭಂಡಾರ ಸಂಪಾದನಾ ಶಕ್ತಿ ಮತ್ತು ಸಂಶೋಧನಾ ಕೇಂದ್ರಗಳಲ್ಲಿ ಮಾಡಿರುವ ಗೋವಿಂದ ಪೈಗಳ ಕೆಲಸ ಅಗಾಧವಾದುದು. ಇದು ನಮ್ಮ ದೇಶಕ್ಕೆ ಅಗತ್ಯವಾಗಿದೆ ಎಂದು ಹೇಳಿದರು ಮಾತ್ರವಲ್ಲದೇ ಪ್ರಾಚ್ಯವಸ್ತುಗಳನ್ನು ಸಂಗ್ರಹಿಸುವ ಅವಶ್ಯಕತೆಯನ್ನು ಒತ್ತಿ ಹೇಳಿ, ಈ ಮಾರ್ಗದಲ್ಲಿ ಕಾರ್ಯವೆಸಗುತ್ತಿರುವ ಶ್ರೀ ಕಾ. ರಾ. ಕೃ. ರವರನ್ನು ಅಭಿನಂದಿಸಿದರು.

ಕೊನೆಯಲ್ಲಿ ಶ್ರೀ ಮಧುಸೂಧನ ಭಾಗವತರು ಧನ್ಯವಾದ ಸಮರ್ಪಿಸಿದರು.

ಗ್ರಂಥದ ಬಿಡುಗಡೆ

ತಾ. 16-9-66ರಂದು ಸಂಜೆ 6 ಗಂಟೆಗೆ ಮಂಗಳೂರಿನ ಪುರಭವನದಲ್ಲಿ ಡಾ|| ಕೆ. ಎಲ್. ಶ್ರೀವಾಲಿಯರು ಜಿಲ್ಲಾಧಿಕಾರಿ ಶ್ರೀ ಎಚ್. ಎಲ್ ನಾಗೇ ಗೌಡರ "ಪ್ರವಾಸಿ ಕಂಡ ಇಂಡಿಯಾ' ಎಂಬ ಗ್ರಂಥದ 3ನೇ ಸಂಪುಟವನ್ನು ಬಿಡುಗಡೆ ಮಾಡಲಿರುವರೆಂದೂ ತಾ. 14, 15 ಮತ್ತು 16ರಂದು ಪುಸ್ತಕ ಪ್ರದರ್ಶನವ ಏರ್ಪಡಿಸಲಾಗಿದೆ ಎಂದೂ ಪ್ರಸಾರಾಂಗದ ಡೈರೆಕ್ಟರ್ ಶ್ರೀ ಪ್ರಭುಶಂಕರ ಅವರು ತಿಳಿಸುತ್ತಾರೆ.

ಸೌಕೂರು ಅಂತಣ್ಣ ಶೆಟ್ರ ನಿಧನ

ಪಟೇಲರಾಗಿ, ಪಂಚಾಯತ್ ಅಧ್ಯಕ್ಷರಾಗಿ, ತಾಲೂಕು ಬೋರ್ಡ್ ಮತ್ತು ಜಿಲ್ಲಾ ಬೋರ್ಡ್ ಸದಸ್ಯರಾಗಿ ಬಹು ಮುಖ ಸೇವೆ ಸಲ್ಲಿಸಿದ್ದ ಶ್ರೀ ಸೌಕೂರು ಅಂತಣ್ಣ ಶೆಟ್ರು ತಮ್ಮ 85ನೇ ವರ್ಷದಲ್ಲಿ ತಾ. 6-9-66 ರಂದು ಕೊಳ್ಕೆಬೈಲು ತಮ್ಮ ಹೆಂಡತಿ ಮನೆಯಲ್ಲಿ ನಿಧನರಾದರೆಂದು ತಿಳಿಸಲು ವಿಷಾದವಾಗುತ್ತದೆ.

— ನಿಮಗೂ ಗೊತ್ತಿರಲಿ —
ಕಡಿಮೆಯಾಗುತ್ತಿರುವ ದಿನಮಾನ

ಭೂಮಿ ದೈನಂದಿನ ಪರಿಭ್ರಮಣವು ಏಕರೂಪವಾಗಿಲ್ಲವೆಂದೂ, ದಿನಗಳು ದೀರ್ಘತರವಾಗಿಯೂ, ಹ್ರಸ್ವತರವಾಗಿಯೂ ಇರಬಹುದೆಂದೂ ಅಂತರಾಷ್ಟ್ರೀಯ ಸಮಯ ಸೇವಾ ಸಂಸ್ಥೆಯು ವರದಿ ಮಾಡುತ್ತದೆ.

ನೇರ ಅಫನಸ್ಯೇವ, ಯೂರಿ ಕಲೀನಿನ್ ಎವ್ಗೆನಿಯಿ ಮೊಗೀಲೆವ್‌ಸ್ಕಿ— ಈ ಸೋವಿಯೆತ್ ಸಂಶೋಧಕರು ಈ ವ್ಯತ್ಯಾಸಗಳ ಕಾರಣಗಳ ಕುರಿತು ಒಂದು ಆಧಾರ ಕಲ್ಪನೆಯನ್ನು ಮಂಡಿಸಿದ್ದಾರೆ.

ಅವರ ಅಭಿಪ್ರಾಯದಲ್ಲಿ ಭೂಮಿಯ ಅಸಮರೂಪದ ಪರಿಭ್ರಮಣಕ್ಕೆ ಸೌರ ಪ್ಲಾವಕ ವಸ್ತುವಿನ (ಪ್ಲಾಸ್ಮ) ಮೋಡಗಳೇ ಕಾರಣ. ಅವು ತಮ್ಮ ಸ್ವಂತ ಕಾಂತಕ್ಷೇತ್ರಗಳನ್ನು ಹೊಂದಿದ್ದು, ನಮ್ಮ ಭೂಗ್ರಹದ ಕಾಂತಕ್ಷೇತ್ರದ ಮೇಲೆ ಪ್ರತಿಕ್ರಿಯೆಯನ್ನು ಉಂಟುಮಾಡುತ್ತವೆಯೆಂದು ಅವರು ಹೇಳುತ್ತಾರೆ.

ಉದಾಹರಣೆಗೆ ಹೇಳುವುದಾದರೆ, ಲೋಹದ ಒಂದು ಗುಂಡನ್ನು ತೆಳುವಾದ ದಾರಕ್ಕೆ ಕಟ್ಟಿ ತೂಗಹಾಕಿ, ಅಯಸ್ಕಾಂತವೊಂದನ್ನು ಸಮತಲದಲ್ಲಿ ಅದರ ಹತ್ತಿರಕ್ಕೆ ತಂದರೆ, ಅಯಸ್ಕಾಂತದ ಚಲನೆಯ ಕಾರಣ ಉಂಟಾದ ಕಾಂತಕ್ಷೇತ್ರವು ಚೆಂಡನ್ನು ತಿರುಗಿಸುತ್ತದೆ. ದಾರದ ಪ್ರತಿರೋಧವು ಚಲನೆಯನ್ನು ತಡೆಗಟ್ಟುವವರೆಗೂ ಗುಂಡು ಯಾವುದೋ ಒಂದು ಕೋನದಲ್ಲಿ ಸುತ್ತುತ್ತದೆ. ಅಯಸ್ಕಾಂತಕ್ಕೆ ಅತ್ಯಂತ ಸಮೀಪವಾಗಿರುವ ಭಾಗವು ಅದರ ಕಡೆಗೆ ಸರಿಯುವಂತಹ ಕೋನದಲ್ಲಿ ಅದು ಸುತ್ತುತ್ತಿರುತ್ತದೆ.

ಅದೇ ರೀತಿಯಾಗಿ ಸೌರ ಪ್ಲಾವಕ ವಸ್ತುವಿನ ಮೋಡಗಳು ಭೂಮಿಯ ಬಳಿಯಲ್ಲಿ 'ಮುಂದೆಯಾಗಲೀ ಅಥವಾ 'ಹಿಂದೆ'ಯಾಗಲೀ ಹಾಯುತ್ತಿರುತ್ತವೆ. ಮೊದಲನೆಯ ಸಂದರ್ಭದಲ್ಲುಂಟಾದ ಶಕ್ತಿಯು ಭೂಮಿಯ ಪರಿಭ್ರಮಣ ವೇಗವನ್ನು ಕಡಿಮೆ ಮಾಡುತ್ತದೆ. ಎರಡನೆಯದು ವರ್ಧಿಸುತ್ತದೆ.

ಈ ಆಧಾರ ಕಲ್ಪನೆಯು ಕರ್ತೃಗಳು ಮಾಡಿರುವ ಮೊದಲ ಅಂದಾಜುಗಳ ಪ್ರಕಾರ, ಭೂಮಿಯ ದೈನಿಕ ಪರಿಭ್ರಮಣ ವೇಗದಲ್ಲಿ ಕಂಡುಬರುವ ವ್ಯತ್ಯಾಸಗಳನ್ನು ಉಂಟುಮಾಡುವುದಕ್ಕೆ ಪ್ಲಾವಕ ವಸ್ತುವಿನ ಮೋಡಗಳ ಕಾಂತಕ್ಷೇತ್ರದ ಚೈತನ್ಯವು ಸಾಕಾಗುತ್ತದೆ.

In the Court of Munsif Kundapur

S. C. 338/66

Alvegadde Govinda — Plaintiff

vs

Akkani Shedthi & others — Defendants

To

1st Defendant Akkani Shedthi, daughter of Pommu Shedthi
2nd deft. Gulabi Shedthi, d/o Venkamma Shedthi.
Hosamane of Shiroor village, Kundapur Tq.

Sirs,

The case filed by plaintiff for recovery of rentals against you has been posted to 6—10—66 at 11 A. M. for your appearance. The case will be decided in your absence in case you fail to answer the claim on the said date.

By order of the Court.

K. Narayana Kamath,
Advocate.

Coondapoor, 12—9—66.

ಬೇಕಾಗಿದ್ದಾರೆ

ಪ್ರೆಸ್ ಕೆಲಸಗಾರರೂ, ಕರಬೇಕಿಗಾಗಿ 8ನೇ ತರಗತಿ ಯಾ ಹೆಚ್ಚಿಗೆ ಓದಿದ ಹುಡುಗರೂ ಬೇಕಾಗಿದ್ದಾರೆ.

ಹೆಚ್ಚಿನ ವಿವರಕ್ಕೆ ವಿಚಾರಿಸಿರಿ
ನವಯುಗ ಪ್ರೆಸ್, ಉಡುಪಿ.

ಪುನರ್ಮಿಲನ

(ಎರಡನೇ ಪುಟದಿಂದ)

ತಂದೆ ತಾಯಿಯ ಮೇಲಿನ ಪ್ರೀತಿಗಿಂತಲೂ ಹೆಚ್ಚಾಗಿ ರಾಜುವನ್ನು ಪ್ರೀತಿಸಿ ತನ್ನ ಹೃದಯದ ಆರಾಧ್ಯ ದೇವತೆ ಎಂದು ತಿಳಿದವಳು. ರಮೆಯೆ ಅವನಿಗೂ ಅವಳ ಸೌಂದರ್ಯ ಸ್ವಭಾವಕ್ಕೂ ಹಸ್ತ ಕೌಶಲ್ಯತೆಗಳಿಗೆ ಬೆರಗಾದ ರಾಜುವಿಗೆ ಅವಳಲ್ಲಿ ಮೋಹವಿತ್ತು.

ಒಂದೊಮ್ಮೆ ಚಂದ್ರಕಾಂತನು ತನ್ನ ಅಂಗಡಿಯಲ್ಲಿ ಕಳ್ಳಸಂತೆ ವ್ಯಾಪಾರವನ್ನು ಪ್ರಾರಂಭಿಸಿದಾಗ ಥಟ್ಟನೆ ಒಬ್ಬ ವ್ಯಕ್ತಿಯು ಬಂದು— "ಅರ್ಜೆಂಟಾಗಿ ಎರಡು ಕಿಲೋ ಸಕ್ಕರೆ ಕೊಡಿ, ಬೆಲೆ ಎಷ್ಟಾದರೂ ಪರವಾಯಿಲ್ಲ. ನಾನು ಕೊಡೋಕೆ ಸಿದ್ಧನಿರುವೆನು" ಎಂದನು. ಬಂದ ಗಿರಾಕಿಯನ್ನು ಅಲ್ಲಿಯೆ ಕೂತುಕೊಳ್ಳಿಸಿ ಚಂದ್ರಕಾಂತನು ಗೋದಾಮಿಗೆ ತೆರಳಿದನು. ಆದರೆ! ಆ ವ್ಯಕ್ತಿ ಅಲ್ಲಿಯೆ ನಿಲ್ಲದೆ ಮಾಲೀಕರನ್ನು ಹಿಂಬಾಲಿಸಿ ಹೋಗಿ ಗೋದಾಮನ್ನು ಪ್ರವೇಶಿಸಿ, ಅಲ್ಲಿ ಶೇಖರಿಸಿದ್ದ ಆಹಾರ ಸಾಮಗ್ರಿಗಳನ್ನು ನೋಡಿ ತನ್ನ ಕಾರ್ಯ ಸಫಲನಾದೆನು ಎಂದು ಮನಸ್ಸಿನಲ್ಲಿಯೆ ಹಿಗ್ಗಿದನು. ಚಂದ್ರಕಾಂತನು ತನ್ನನ್ನು ಹಿಂಬಾಲಿಸಿ ಬಂದ ವ್ಯಕ್ತಿಯನ್ನು ಕಂಡು ನಖಶಿಖಾಂತವಾಗಿ ಉರಿದು ಸಿಟ್ಟಿನಿಂದ ಕಿಡಿಕಿಡಿಯಾಗಿ—

"ನಿಲ್ಲಲ್ಲಿ! ಏಕೆ ಒಳ ಪ್ರವೇಶಿಸಿದೆ?" ಎಂದು ಗದರಿಸಿದನು. "ನಿನ್ನನ್ನು ಹಿಡಿದೊಯ್ಯುವುದಕ್ಕೆ" ಎಂದನು ಆಗಂತುಕನು. ತಕ್ಷಣವೆ ತನ್ನ ಬಳಿಯಲ್ಲಿದ್ದ ಸೀಟಿಯನ್ನು ಊದಿದನು. ಆಗಲೇ ನಾಲ್ಕೈದು ಪೋಲೀಸರು ಬಂದು ಆತನನ್ನು ಬಂಧಿಸಿದರು.

ಬಂಧಿತನಾದ ಚಂದ್ರಕಾಂತನನ್ನು ನ್ಯಾಯ ವಿಚಾರಣೆಗೆ ಗುರಿ ಮಾಡಿದಾಗ ಆತನ ನ್ಯಾಯ ಬಾಹಿರತನಕ್ಕೆ ಐನೂರು ರೂಪಾಯಿ ಇಲ್ಲವೇ ಏಳು ವರ್ಷಗಳ ಸಜೆಯನ್ನು ವಿಧಿಸಿದರು.

ವಿಚಾರವನ್ನರಿತ ರಾಜುವು ಓಡಿ ಬಂದು ತನ್ನ ಅಣ್ಣನು ಮಾಡಲು ಮಾಡಿದ್ದ ಉಪಕಾರವನ್ನು ನೆನೆದು, ಅತ್ತಿಗೆ ಸ್ಥಿತಿಯನ್ನು ನೆನೆದು, ಹಂಬಲಿಸಿ, ಅಣ್ಣನು ಕೂಡಿಟ್ಟ ಹಣ ಮತ್ತು ತಾನು ಸ್ವಲ್ಪ ಸೇರಿಸಿ ದುಃಖಿಸುತ್ತ ಅಣ್ಣನನ್ನು ಬಂಧವಿಮುಕ್ತಗೊಳಿಸಿದನು.. ಚಂದ್ರಕಾಂತನು ತನ್ನ ಅನ್ಯಾಯಕ್ಕೆ ತಮ್ಮ ಕಾಣುತ್ತಿದ್ದ ಅವಿಶ್ವಾಸವನ್ನೆಲ್ಲ ನೆನೆದು ತಲೆ ತಗ್ಗಿಸಿದನು. ಸದಾ ತುಂಬಿದ ವಿಶ್ವಾಸದಿಂದ ಕಾಣುತ್ತಿದ್ದ ರಾಜುವು "ಅಣ್ಣಾ" ಎಂದು ಕರೆದನು. ತಮ್ಮನ ಮಹದುಪಕಾರವನ್ನು ನೆನೆದು, ತನ್ನ ತಪ್ಪನ್ನು ಒಪ್ಪಿಕೊಂಡು, ತಮ್ಮನನ್ನು ಅಪ್ಪಿಕೊಂಡು ಆನಂದ ಬಾಷ್ಪಗಳನ್ನು ಸುರಿಸಿದನು. ತನ್ನ ಪತಿಯನ್ನು ಮರಳಿ ಮನೆಗೆ ಬರುವಂತೆ ಮಾಡಿದ ರಾಜುವನ್ನು ಶ್ರೀಮತಿಯು ಮನಸಾರೆ ಶ್ಲಾಘಿಸಿದಳು.

ರಾಜು-ರಮಾರ ವಿವಾಹ ಆತನ ಪ್ರೇಮ ಮೂರ್ತಿಯಾದ ರಮಾ | ವಸಂತ ಬ್ಯಾರರ ಆಸೆ ನೆರವೇರಿತು. ಹಿಂದೆ ಮಾಡಿದ್ದ ತಪ್ಪುಗಳೆಲ್ಲವನ್ನೂ ಮರೆತು ಈಗ ಚಂದ್ರಕಾಂತ ಶ್ರೀಮತಿ, ರಾಜು-ರಮಾ ಮತ್ತು ಶ್ರೀ ವಸಂತ ಬ್ಯಾರರವರು ಸುಖ ಸಂತೋಷದಿಂದ ಸುಂದರವಾದ "ಲಕ್ಷ್ಮೀ ವಾಸ"ದಲ್ಲಿ ಜೀವನವನ್ನು ಸುಗಮವಾಗಿ ಸಾಗಿಸುತ್ತಿದ್ದಾರೆ.

ನಂಬಿದರೆ ನಂಬಿ

ಗಾಳಿಯಲ್ಲಿ ತೇಲುವ ದೋಣಿ

ಡೀಟರ್ ಜೆನ್‌ಸೆನ್ ಎಂಬ ಪ್ರಿಸಿಷನ್ ಇಂಜನಿಯರೊಬ್ಬರು ಜರ್ಮನಿಯ ದಕ್ಷಿಣ ಭಾಗದಲ್ಲಿ ನಿವಸಿಸುತ್ತಿದ್ದಾರೆ. ಇವರು ಒಂದು ಹೊಸ ಮಾದರಿಯ ಹೋವರ್ ಕ್ರಾಫ್ಟ್ ಒಂದನ್ನು ತಯಾರಿಸಿದ್ದಾರೆ. ಇದರಲ್ಲಿನ ಮುಖ್ಯಾಂಶವು ಗಾಳಿಯ ಸಮ್ಮರ್ಧನ ಶಕ್ತಿಯ ಮೇಲೆ ಆಧಾರಪಟ್ಟಿದೆ. ದೋಣಿಯ ಕೆಳ ಭಾಗದಲ್ಲಿನ ಎರಡು ಚಪ್ಪಟೆಯಾದ ಕೊಳವೆಗಳಿಂದ ಗಾಳಿಯು ಪ್ರವೇಶಿಸಿ ಪೂರ್ಣವಾಗಿ ಆವರಿಸುತ್ತದೆ. ಈ ರೀತಿಯ ಗಾಳಿಯ ಮೊತ್ತವು ದೋಣಿಯನ್ನು ಮೇಲಕ್ಕೆ ಎತ್ತುವಂತೆ ಮಾಡುತ್ತದೆ. ಆ ಇಂಜನಿಯರು ಈ ರೀತಿಯಲ್ಲಿ ಗಾಳಿಯಲ್ಲಿ ತೇಲುವ ದೋಣಿಯನ್ನು ತಯಾರಿಸಲು ೨೦೦೦ ಘಂಟೆಗಳ ಕೆಲಸ ಮಾಡಿರುವುದೂ ಅಲ್ಲದೆ ೫೫೦೦ ಮಾರ್ಕ್ಸ್ (೬೫೫ ಡಾಲರ್)ಗಳನ್ನು ವೆಚ್ಚ ಮಾಡಿದ್ದಾರೆ. ಈ ಮಾದರಿಯ ದೋಣಿಯು ೨ ಮೀಟರುಗಳ ಉದ್ದವಿದೆ. ಇದೆ ರೀತಿಯ ದೊಡ್ಡ ದೋಣಿಯನ್ನು ತಯಾರಿಸಿ ೫೦೦ ಜನರನ್ನು ಹಿಡಿಯುವಂತೆಯೂ ೯೦ ಎಚ್. ಪಿ. ಶಕ್ತಿಯಿಂದ ಕೂಡಿದ ಇಂಜನನ್ನು ಅಳವಡಿಸಲು ಈಗಾಗಲೇ ಯೋಜನೆ ನಡೆದಿದೆ. ದೇಶೀಯ ದೋಣಿ ನಿರ್ಮಾಪಕರೂ ಈ ರೀತಿಯ ದೋಣಿಗಳ ತಯಾರಿಕೆಯಲ್ಲಿ ಉತ್ಸಾಹ ತೋರುತ್ತಿದ್ದಾರೆ.

ಬೆಲೂನ್‌ನಲ್ಲಿ ಪ್ರದರ್ಶನ ಶಾಲೆ

ಗಾಳಿಯಿಂದಲೇ ಎತ್ತಿಹಿಡಿದಿರುವ ಪ್ರದರ್ಶನ ಶಾಲಾ ವಿಭಾಗವನ್ನು ಜರ್ಮನ್ ಫೆಡರಲ್ ರಿಪಬ್ಲಿಕ್‌ನಲ್ಲಿ ಕೃಷಿ ಸಂಸ್ಥೆಯೊಂದು ಕೈಗಾರಿಕಾ ನೂತನ ವಸ್ತು ಪ್ರದರ್ಶನ ಶಾಲೆಯನ್ನು ತೆರೆದಿದೆ. ಹ್ಯಾನೋವರ್‌ನಲ್ಲಿ ನಡೆದ ಇಂಡಸ್ಟ್ರಿಯಲ್ ಫೇರ್ ಈ ಆವರಣದಲ್ಲಿ ನಡೆಯಿತು. ಗಾಳಿಯ ಒತ್ತಡ ಶಕ್ತಿಯಿಂದಲೇ ಬಲೂನಿನಂತಿರುವ ಛಾವಣಿಯು ಎತ್ತಿ ಹಿಡಿದಿದೆ. ಪ್ಲಾಸ್ಟಿಕ್‌ನಿಂದ ತಯಾರಿಸಿರುವ ಛಾವಣಿಯು ಕೇವಲ ಕೆಲವು ಮಿಲಿಮೀಟರುಗಳ ದಪ್ಪ ಮಾತ್ರ ಇದೆ. ಯುರೋಪಿನಲ್ಲಿಯೇ ವಿಸ್ತಾರವಾದ ಛಾವಣಿ ಎನ್ನಲ್ಪಡುತ್ತಿದೆ. ಇದರ ಒಳ ವಿಸ್ತಾರವು ೩,೦೦೦ ಚದುರ ಮೀಟರುಗಳು. ಇದು ಒಂದು ಫುಟ್‌ಬಾಲ್ ಮೈದಾನದಷ್ಟು ವಿಸ್ತಾರವಾಗಿರುತ್ತದೆ. ಎತ್ತರವು ೧೫ ಮೀಟರುಗಳು, ಅಗಲ ೩೫ ಮೀಟರುಗಳು. ಈ ಛಾವಣಿಯು ತಗ್ಗಿನಲ್ಲಿದ್ದರೂ ಯಾವ ವಿಧದ ಆಧಾರವೂ ಇಲ್ಲ. ಈ ರೀತಿಯ ಛಾವಣಿಗಳನ್ನು ಅನೇಕ ಅಳತೆಗಳಲ್ಲಿ ಮಾಡಬಹುದು ಮತ್ತು ಅನೇಕ ಸ್ಥಳಗಳಲ್ಲಿ ದಾಸ್ತಾನುಗಳ ಹೊದಿಕೆಯಾಗಿಯೂ, ಮನೆಗಳನ್ನು ಕಟ್ಟುವ ಸ್ಥಳಗಳಲ್ಲಿ ನೆರಳು ಕೊಡುವುದಕ್ಕೂ, ಗುಡಾರಗಳಂತೆಯೂ ಉಪಯೋಗಿಸಬಹುದು.

ಹಂದಿ ಚರ್ಮದಿಂದ ಗಾಯಗಳಿಗೆ ಚಿಕಿತ್ಸೆ

ಪಶ್ಚಿಮ ಜರ್ಮನಿಯ ಫ್ರೀಬರ್ಗ್ ವಿಶ್ವವಿದ್ಯಾನಿಲಯದ ಸರ್ಜನ್‌ರವರಾದ ಡಾಕ್ಟರ್ ಎಚ್. ಇ. ಕೋಹೆನ್‌ಲೀನ್‌ರವರು ತೀವ್ರವಾದ ಸುಟ್ಟ ಗಾಯಗಳನ್ನು ಗುಣಪಡಿಸಲು ಹೊಸರೀತಿಯ ಚಿಕಿತ್ಸೆಯನ್ನು ಕಂಡು ಹಿಡಿದಿದ್ದಾರೆ. ಹಂದಿಯ ಚರ್ಮವನ್ನು ಗಾಯಗಳಿಗೆ ಸೇರಿಸಿ ಶಸ್ತ್ರ ಚಿಕಿತ್ಸೆಯನ್ನು ನಡೆಸಿ ಉತ್ತಮವಾದ ಫಲವನ್ನು ಪಡೆದಿದ್ದಾರೆ. ಹಂದಿಯ ಚರ್ಮವು ಮನುಷ್ಯನ ಚರ್ಮವನ್ನು ಹೋಲುವುದೂ ಅಲ್ಲದೆ, ಹೆಚ್ಚು ಶಕ್ತಿದಾಯಕವಾಗಿಯೂ ಇರುತ್ತದೆ. ಡಾ. ಕೋಹೆನ್‌ಲೀನ್‌ರವರು ಎಂಟು ಜನ ಚರ್ಮವನ್ನು ಸುಟ್ಟ ರೋಗಿಗಳ ಮೇಲೆ ಈ ಪ್ರಯೋಗವನ್ನು ನಡೆಸಿದ್ದಾರೆ. ಅತಿ ಶೀಘ್ರವಾದ ಗುಣವನ್ನೂ ಅಲ್ಲದೆ ಒಳ್ಳೆಯ ಫಲವನ್ನೂ ಕೊಟ್ಟಿರುವುದು ವ್ಯಕ್ತವಾಗಿದೆ. ಪೂರ್ಣವಾಗಿ ಬೆಳೆಯದೆ ಹುಟ್ಟಿದ ಮಗುವೊಂದಕ್ಕೆ ಹಂದಿಯ ಚರ್ಮವನ್ನು ಅಂಟಿಸಲಾಯಿತು. ಅದು ಕೇವಲ ನಾಲ್ಕು ತಿಂಗಳುಗಳಲ್ಲಿಯೇ ನಿಜವಾದ ಚರ್ಮದೊಂದಿಗೆ ಸೇರಿಕೊಂಡಿತು. ಡಾ. ಕೋಹೆನ್‌ಲೀನ್‌ರವರ ಫಲಕಾರಿಯಾದ ಪ್ರಯೋಗವು ವೈದ್ಯರಂಗಕ್ಕೆ ಒಂದು ಹೊಸ ಆವಿಷ್ಕಾರವನ್ನು ಕೊಟ್ಟಿದೆ.

ಮಾವನವರ ಜಿಪುಣತನ

ಏನು ಜಿಪುಣರೆ ನಿನ್ನ ಹೆತ್ತವರು ಎನ್ನರಸಿ? !
ಮೊದಲಿಂದ ನೋಡುತಿಹೆನು !
ನಾವು ನಿಮ್ಮೂರಲ್ಲಿ ಇಳಿದ ಬಳಿಕೀವರೆಗು
ಕಳೆದಳೆದು ಕೂಡುತಿಹೆನು !

ಎಂದು ಹೇಳಿದೆ ಮೊದಲ ರಾತ್ರಿಯಲಿ ಮುದದಿಂದ
ಮುಗುದೆ ಮೂಗನು ಕೆರಳಿಸಿ !
"ಏನ ಕಂಡಿರಿ?" ಎಂದು ಬಿಂಕದಲಿ ಕೇಳಿದನು
ನನ್ನವಳು ಕಣ್ಣರಳಿಸಿ !

ನಮ್ಮೂರ ಬಂಡಿಯಿಂದಿಳಿದಾಗ ನಿನ್ನವರು
ತಿನ್ನಲಾಗದ ತೆಂಗನೂ—
ಬಣ್ಣ ಬಳಿದಿತ್ತಾಗ ಕಂಡು ಕೊಂಡೆನು ನಾನು
ನಿಮ್ಮ ಧಾರಾಳವನ್ನೂ !

ಆ ಬಳಿಕ ಕಾಶಿಯಾತ್ರೆಗೆ ನಾನು ಹೊರಟಾಗ
ಕರಿಯದಿಹ ಕೊಡೆ ಬಳಿಯ !
ಕಿವಿಗೆ ತೊಡಿಸಿದರವರು ! ಮೆಲ್ಲಬಹುದೇ ಅವನು?
ಬೇಸಿದರು ನಿನ್ನ ಬಲಿಯ !

ಭೂಮದಲಿ ಹತ್ತಾರು ಹಣ್ಣುಗಳ ತುಂಬಿದರು
ಉಣ್ಣುವುದು ಎಂತೆದುರಲೀ !
ಪಕ್ಕದಲಿ ಕುಳಿತಾಕೆ ತುತ್ತಿಡದೆ ಇರುವಾಗ
ನಾನೆಂತು ತಿನ್ನುತಿರಲೀ !

ಧಾರೆ ರಾತ್ರಿಯ ಊಟ ಒಂದು ಘಂಟೆಯ ಬಳಿಕ
ಇಲ್ಲವೇ ಹೊತ್ತು—ಗೊತ್ತು ?
ಹೂಗೆದುಂಬಿದಕ್ಷಿಯಲಿ ತಮದ ಜೋಲಿಯ ಆಟ !
ಊಟಕ್ಕೆ ಕಲ್ಲು ಬಿತ್ತು !

ಈ ರಾತ್ರಿ ಕೋಣೆಯಲಿ ನವರಾತ್ರಿ ಬೊಂಬೆಗಳು
ತಿಂಡಿಗಳು ರೀತಿಯಲ್ಲಿ !
ತಿನ್ನಲೆಂತಾಗುವುದು ನೀನೆ ಹೇಳೇ ಅರಸಿ
ನೀನಿರುವೆ ಎದುರಿನಲ್ಲಿ !!

—"ತ್ರಿಮೂರ್ತಿ"

ರೈತ ಭಾಂದವರ ಜೀವನ ಸಂಗಾತಿ.............

ಇಮಾನಿ ಕ್ರೂಡ್ ಆಯಿಲ್ ಇಂಜಿನ್
(5, 7, 10 & 13 H. P.) ಮತ್ತು ಪಂಪು ಸೆಟ್ಟುಗಳು...........

ಎಸ್. ಇ. ಐ. ಇಲೆಕ್ಟ್ರಿಕ್ ಮೋಟಾರು
(¼ H.P. ಯಿಂದ 2. H.P. ವರೆಗೆ) ಮತ್ತು ಪಂಪು ಸೆಟ್ಟುಗಳು......

ಬ್ಲೂ ಪೀಟರ್ ಸ್ಟಾರ್ಟರುಗಳು.........

ಪ್ರಪ್ರಥಮ ವಿಮಾ ರಕ್ಷಣೆಗೆ ಒಳಪಟ್ಟಿರುವ ಸ್ಟಾರ್ಟರ್‌ಗಳು.

ಏಕೈಕ ವಿತರಕರು.—

ಸ್ವಾಮಿ ಇಲೆಕ್ಟ್ರಿಕಲ್ಸ್,

ರಿ. ಆಫೀಸು: ಕಾರ್ಕಳ. ಮಾರಾಟ ವಿಭಾಗ: ಬಲ್ಮಠ ರಸ್ತೆ, ಮಂಗಳೂರು. 1

ನವಯುಗಕ್ಕೆ

ಚಂದಾದಾರರಾಗಿ ಪ್ರೋತ್ಸಾಹಿಸಿರಿ.

ವಾರ್ಷಿಕ ಚಂದಾ ರೂ. ೧೦

NAVAYUGA 15—9—1966
Registered with the Registrar
of News Papers for India
under No. R. N. 3546/'57

REGD. No: B. G. 176
LICENCE No. 31
Licensed to Post without Prepayment

ಹೇಳುವಾಗಲೇ ನಿಮಗೆ ನಗು ಬರಬಹುದು ಆದರೆ....

ಬೊಜ್ಜು

ಲೇಖಕರು: ಸುರತ್ಕಲ್ ರಾಮಕೃಷ್ಣ ಹೆಬ್ಬಾರ್.

ಬೊಜ್ಜು ಬಂದವರ ಬವಣೆಯನ್ನು ಕಂಡರೆ ಅದು ವೈರಿಗಳಿಗೂ ಬೇಡ ಎನ್ನಲೇ ಬೇಕು. ಬೊಜ್ಜು ಬೆಳೆಯುವುದೂ ಸುಲಭ, ಆದರೆ ಅದು ಹೋಗಲು ಬಹಳ ಕಷ್ಟವಿದೆ. ಶ್ರೀಮಂತರೂ, ಶೇರ್‌ಗಳೂ, ವ್ಯಾಪಾರಿಗಳೂ, ಗುಮಾಸ್ತರೂ, ಬಂಗಲೆಯಲ್ಲಿಯೇ ವಾಸಮಾಡುವವರೂ, ಬಾಯಿ ತೆರೆದೊಡನೆ ಓಡಿಬರುವ ಆಳುಕಾಳುಗಳು ಇರುವವರೂ, ಭರ್ರೆಂದು ಓಡಾಡುವ ಕಾರುಗಳಿರುವವರೂ—ಈ 'ಬೊಜ್ಜು' ಎಂಬ ಬಿರುದಿಗೆ ಒಳಗಾಗಿ ಕಷ್ಟಪಡುವ ಸಂಭವ ಹೆಚ್ಚೆಂದು ಪ್ರತೀತಿ! ಏನಿದ್ದರೇನ:—ದೇಹದ ಸ್ಥಿತಿ ಉತ್ತಮವಿಲ್ಲದಿದ್ದರೆ ಎಲ್ಲಾ ವ್ಯರ್ಥ. ಸುಖದಲ್ಲಿಯೇ ಬೆಳೆದ ದೇಹ ಇರಬೇಕಾದ ರೀತಿಯಲ್ಲಿರದೆ—ಬೇಕಾದಂತೆ ಬೆಳೆದರೆ ಆಗುವ ವ್ಯಸನ, ದಿಂದ ಸಿಗುವ ಸುಖಗಳೆಲ್ಲವನ್ನೂ ನುಂಗಿಬಿಡುತ್ತದೆ.

ಒಬ್ಬರು ವಕೀಲರಿದ್ದರಂತೆ. ನ್ಯಾಯಶಾಸ್ತ್ರಗಳನ್ನು ಎದುರಿಗೆ ಇರಿಸಿಕೊಂಡು ಓದಿ ಓದಿ—ಅದರಲ್ಲಿಯೇ ಮುಳುಗಿ ಹೋಗಿ ಕೊನೆಗೆ ದೇಹದ ಸಮತೋಲನವನ್ನೇ ಕಳೆದುಕೊಂಡು, ಮನಸ್ಸಿನ ಶಾಂತಿ—ಪಚನ ಶಕ್ತಿ—ಎಲ್ಲವನ್ನೂ ಕಳೆದುಕೊಂಡರಂತೆ. ಇವೆಲ್ಲಾ ಕಳೆದರೂ ಒಂದು ಮಾತ್ರ ಹೆಚ್ಚುತ್ತಾ ಬರತೊಡಗಿತಂತೆ. ಅದುವೇ ಬೊಜ್ಜು! ಡಾಕ್ಟರರ ಬಳಿಗೆ ಹೋದಾಗ ಡಾಕ್ಟರರು—ದೇಹಶ್ರಮದ ಕೆಲಸಗಳಿಂದ ಮಾತ್ರ ಬೊಜ್ಜು ಕರಗಿಸಬಹುದಲ್ಲದೆ ಬೇರೆ ಮದ್ದಿಲ್ಲವೆಂದು ನುಡಿಯಲು, ವಕೀಲರಿಗೆ ವ್ಯಾಯಾಮ ಶಾಲೆಗೆ ಹೋಗಿ ಬೈರಕ್ ಹೊಡೆಯಲು ನಾಚಿಕೆಯೆನಿಸಿತು. ತಕ್ಷಣವೇ ಕಾರನ್ನೇರಿ, ಬಹುದೂರ ಸಾಗಿ, ಕಾಡೊಂದರ ಬಳಿ ಕಾರನ್ನು ನಿಲ್ಲಿಸಿದರು. ಅಲ್ಲಿನ ಫಾರೆಸ್ಟ್ ರೇಂಜರ ಬಂಗಲೆಗೆ ಧಾವಿಸಿದರು. ಅವರು ವಕೀಲರ ಆಪ್ತ ಸ್ನೇಹಿತರಂತೆ. "ನಿಮ್ಮ ಕಾಡಿನಲ್ಲಿ ಮರ ಕಡಿಯುವ ಕೆಲಸಕ್ಕೆ ನನಗ ಅಪ್ಪಣೆ ಕೊಡಿಸಬೇಕು" ಎಂದು ವಕೀಲರು ಅವರೊಂದಿಗೆ ಕೇಳಲು, ವಕೀಲರ ಅಂತಸ್ತನ್ನು ತಿಳಿದಿದ್ದ ರೇಂಜರರು ಪ್ರಾರಂಭದಲ್ಲಿ ಅದಕ್ಕೆ ಸಮ್ಮತಿಸಲಿಲ್ಲ. ಕೊನೆಗೆ ಒಪ್ಪಲೇ ಬೇಕಾಯಿತು.

ರೇಂಜರರಿಗೆ ಇದರಿಂದಾಗಿ ಹೊಸ ಉಪಾಯವೊಂದು ತೋರಿತು. ಮರ ಕಡಿಯುವ ಕೆಲಸಗಾರರ ಅಭಾವವಿದ್ದುದರಿಂದಾಗಿ ಪತ್ರಿಕೆಗಳಿಗೆ ಜಾಹೀರಾತು ನೀಡಿದರು—"ಕುಳಿತು ಕೆಲಸ ಮಾಡಿ ಬೇಸರವಾಗಿದ್ದರೆ ನಮ್ಮ ಕಾಡಿಗೆ ಬಂದು ಮರ ಕಡಿಯುವುದರೊಂದಿಗೆ ಸಂಪಾದನೆಯನ್ನೂ ಆರೋಗ್ಯವನ್ನೂ ಕೊಂಡು ಹೋಗಿರಿ!" ಎಂದೇ ಆ ಜಾಹೀರಾತು. ಆ ಮೇಲೆ ಕೇಳುವುದೇನು? ನೂರಾರು ಅರ್ಜಿಗಳು ಬಂದುವು. ಅವುಗಳ ಹಿಂದೆಯೇ ದೊಡ್ಡ ದೊಡ್ಡ ಹೊಟ್ಟೆಯವರು ಕಾರುಗಳಲ್ಲಿ, ರೈಲುಗಳಲ್ಲಿ, ವಿಮಾನಗಳಿಂದಲೂ ಬಂದು ತುಂಬಿದರಂತೆ. ರೇಂಜರರ ಯುಕ್ತಿಯೂ ಫಲಿಸಿತು.

ಅದರಂತೆಯೇ ಒಬ್ಬ ರಾಜನಿಗೆ ಬೊಜ್ಜು ಬೆಳೆದು ತಡೆಯಲಾರದ ಸಂಕಷ್ಟಗಳಿಗೆ ಸಿಲುಕಿ ಕೊನೆಗೆ ಹಲವಾರು ವೈದ್ಯರುಗಳಿಂದ ಮದ್ದು ಮಾಡಿಸಿದ. ಆದರೂ ಗುಣವಾಗಲಿಲ್ಲ. ಯಾರು ಗುಣಪಡಿಸುವರೋ ಅವರಿಗೆ ಸಾವಿರ ಸಾವಿರ ರೂಪಾಯಿಗಳನ್ನು ಬಹುಮಾನ ಕೊಡುವೆನೆಂದೂ ಸಾರಿದ. ಹಲವಾರು ವೈದ್ಯರು ಬಂದರೂ ಗುಣಪಡಿಸಲಿಕ್ಕಾಗಲಿಲ್ಲ. ಕೊನೆಗೆ ಒಬ್ಬನು ಜ್ಯೋತಿಷ್ಯ ಶಾಸ್ತ್ರಜ್ಞನಂತೆ ವೇಷ ಹಾಕಿಕೊಂಡು ಬಂದು ಜಾತಕ ನೋಡುವೆನೆಂದು ಹೇಳಿದ. "ಇನ್ನು ನಲುವತ್ತು ದಿನಗಳಲ್ಲಿ ಸಾಯುವಿರಿ. ಹಾಗೆ ಸಾಯದಿದ್ದಲ್ಲಿ ನಲುವತ್ತೊಂದನೆಯ ದಿನ ನನ್ನನ್ನು ಗಲ್ಲಿಗೇರಿಸಿರಿ" ಎಂದ. ಇದರಿಂದ ರಾಜನು ದುಃಖದಿಂದ ಕೊರಗಿ ಕೊರಗಿ ನಲುವತ್ತನೇ ದಿನಗಳೊಳಗೆ ಬಹಳ ಕ್ಷೀಣವಾಗಿ ಬಿಟ್ಟನಲ್ಲದೆ— ಅವನ ಬೊಜ್ಜು ಪೂರ್ಣ ಇಳಿದು ಬಿಟ್ಟಿತ್ತು. ಮಾರನೆಯ ದಿನ ಬಂಧನದಲ್ಲಿರಿಸಿದ್ದ ಜ್ಯೋತಿಷಿಯನ್ನು ಬಿಡುಗಡೆ ಮಾಡಿ ಅವನಿಗೆ ಹಲವು ಬಹುಮಾನಗಳನ್ನಿತ್ತು ಕಳುಹಿಸಿದ.

ಬೆಳಗ್ಗೆಯಿಂದ ಸಂಜೆಯ ತನಕ ಕುಳಿತೇ ಇದ್ದು ಝಣ ಝಣ ಹಣವು ಕೈ ಸೇರುವ ಭಸದಲ್ಲಿ ಬೊಜ್ಜು ಬೆಳೆಯುವುದು ತಿಳಿಯುವುದೇ ಇಲ್ಲ. ದೇಹ ಮಣ ಭಾರವಾದಾಗ ಅವರನ್ನು ನಡೆಯಿಸಲು ನಾಲ್ಕು ಜನರೇ ಬೇಕಾದಾಗ ಅದರ ಅಪಾಯ ತಿಳಿಯುತ್ತದೆಯೆಂದು ಬೊಜ್ಜಿನ ಮಹಾತ್ಮೆಯು ಹೇಳುವ ಸಾರವಾಗಿದೆ. ಬೊಜ್ಜು ಬಹಳ ಅಪಾಯಕಾರಿಯಾದುದು. ಹೀಗಿದೆ ಬೊಜ್ಜಿನ ಮಹಿಮೆ!

— —

ಮೆಟ್ಟೂರಿನ ಸುರಂಗ ವಿದ್ಯುದಾಗಾರ

(ಎಂಟನೇ ಪುಟದಿಂದ)

ಈ ವಿದ್ಯುತ್ ಕೇಂದ್ರದ ಇನ್ನೊಂದು ವಿಶೇಷಾಂಶವೆಂದರೆ ಇಲ್ಲಿ ಉತ್ಪಾದನೆಯಾಗುವ ವಿದ್ಯುಚ್ಛಕ್ತಿಯ ಬೆಲೆ ಹೋಲಿಸಿ ನೋಡಿದಲ್ಲಿ ಅಗ್ಗ. ಅದು ಜಲಾಶಯದಿಂದ ನೀರಾವರಿಗೆ ಬಿಡುತ್ತಿದ್ದ ನೀರು ಟರ್ಬೈನಗಳನ್ನು ಸುತ್ತಲು ೩೦,೦೦೦ ಕ್ಯೂಸೆಕ್ಸ್ ನೀರನ್ನು ಬಳಸುತ್ತದೆ. ಹೀಗೆ ನೀರಾವರಿಗಾಗಿ ಮಾತ್ರವೇ ಬಳಸುತ್ತಿದ್ದ ನೀರನ್ನು ಈಗ ವಿದ್ಯುಚ್ಛಕ್ತಿ ಉತ್ಪಾದನೆಗೆ ಬಳಸಲಾಗುತ್ತಿದೆ. ಈ ನೀರನ್ನು ೪೫ ಅಡಿ ವ್ಯಾಸವುಳ್ಳ ೧೨೩೫.೪ ಅಡಿ ಉದ್ದ ಸುರಂಗದ ಮೂಲಕ ಅಣೆಕಟ್ಟಿನಿಂದ ೬೦೦ ಅಡಿ ದೂರದಿಂದ ತರಲಾಗುತ್ತದೆ. ಈ ಸುರಂಗವು ಕುದುರೆ ಲಾಳದ ಆಕಾರ ಹೊಂದಿದೆ.

ಈ ಯೋಜನೆಯ ಅಂದಾಜು ವೆಚ್ಚ ೧೬ ಕೋಟಿ ರೂಪಾಯಿ. ಇದರಲ್ಲಿ ಸೋವಿಯೆಟ್ ಒಕ್ಕೂಟದ ಯಂತ್ರಗಳಿಗಾಗಿ ೪ ಕೋಟಿ ರೂಪಾಯಿಗಳು ವಿನಿಯೋಗವಾಗಿವೆ. ಇನ್ನೊಂದು ಅಂಶವೆಂದರೆ ಸೋವಿಯೆಟ್ ಯಂತ್ರಗಳಿಗೆ ವಿದೇಶೀ ವಿನಿಮಯ ನೀಡಬೇಕಾಗಿಲ್ಲ. ರೂಪಾಯಿಗಳಲ್ಲೇ ಪಾವತಿ ಮಾಡಿದರೆ ಸಾಕು. ಎಲ್ಲ ನಾಲ್ಕು ಘಟಕಗಳು ನಿರ್ಮಾಣಕಾರ್ಯವನ್ನು ಒಂದೇ ಘಟ್ಟದಲ್ಲಿ ಪೂರಯಿಸಿರುವುದರಿಂದ ರೂ. ೫೦ ಲಕ್ಷಕ್ಕೂ ಹೆಚ್ಚು ಹಣ ಉಳಿತಾಯವಾಗಿದೆ. ಈ ಯೋಜನೆಗಾಗಿರುವ ಖರ್ಚನ್ನು ಎರಡು ವರ್ಷಗಳಲ್ಲಿ ವಾಪಸು ಪಡೆದುಕೊಳ್ಳಬಹುದೆಂದು ನಿರೀಕ್ಷಿಸಲಾಗಿದೆ. ಹೀಗೆ ವಿದ್ಯುತ್ ಕೇಂದ್ರದಿಂದ ಉತ್ಪಾದನೆಯಾಗುವ ವಿದ್ಯುಚ್ಛಕ್ತಿಯು ಅಂದಾಜು ಮಾಡಿರುವಂತೆ ಕಿಲೋವಾಟ್ ಗಂಟೆಗೆ ೧.೮೭ ಪೈಸೆ ದರದಲ್ಲಿ ದೊರಕುತ್ತದೆ.

ಇನ್ನೊಂದು ಗಮನಾರ್ಹವಾದ ಅಂಶವೆಂದರೆ ಈ ವಿದ್ಯುದಾಗರಕ್ಕೆ ಎಲ್ಲ ಯಂತ್ರಗಳೂ ಸೋವಿಯೆತ್ ಒಕ್ಕೂಟದಿಂದ ಬಂದಿವೆ. ಸೋವಿಯೆತ್ ಒಕ್ಕೂಟದ ಮೆಷಿನೆಕ್ಸ್‌ಪೋರ್ಟ್ ಮತ್ತು ಮದರಾಸು ರಾಜ್ಯ ವಿದ್ಯುಚ್ಛಕ್ತಿ ಮಂಡಲಿಗಳ ನಡುವಿನ ಒಪ್ಪಂದಕ್ಕನುಸಾರವಾಗಿ ಈ ಯಂತ್ರಗಳು ಅತ್ಯಲ್ಪ ಕಾಲದಲ್ಲಿ ಬಂದುವು. ಟರ್ಬೈನ್‌ಗಳು ಲೆನಿನ್‌ಗ್ರಾಡ್ ಲೋಹ ಕಾರ್ಖಾನೆಯಲ್ಲು ಕಿರೋವ ವಿದ್ಯುತ್ ಕಾರ್ಖಾನೆಯಲ್ಲಿ ಜನರೇಟರುಗಳೂ ತಯಾರಾದುವು.

ಮೆಟ್ಟೂರಿನ ಅತ್ಯಂತ ಮಹತ್ವಪೂರ್ಣವಾದ ಅಂಶವೆಂದರೆ ಭಾರತ ಮತ್ತು ಸೋವಿಯೆತ್ ಒಕ್ಕೂಟದ ನಡುವೆ ಮೈತ್ರಿಯು ದೃಢಗೊಂಡಿರುವುದು. ಅದು ಇದಕ್ಕೆ ಹೊಸ ರೂಪವನ್ನಿತ್ತಿದೆ. ಅತ್ಯಲ್ಪ ಕಾಲದಲ್ಲಿ ನಿಕಟ ಸಹಕಾರದಿಂದ ಕೆಲಸ ಮಾಡಿದ ಸೋವಿಯತ್ ಮತ್ತು ಭಾರತೀಯ ಇಂಜಿನಿಯರುಗಳ ಕ್ರಿಯಾತ್ಮಕ ಪ್ರಯತ್ನಗಳ ಶಾಶ್ವತವಾದ ಸ್ಮಾರಕವಾಗಿದೆ ಮೆಟ್ಟೂರು ವಿದ್ಯುದಾಗಾರ.

ಚಂದಾದಾರರಲ್ಲಿ ವಿನಂತಿ

ಕಳೆದ ಆಗೋಸ್ತು ತಿಂಗಳಾಂತ್ಯಕ್ಕೆ "ನವಯುಗ"ದ 45ನೇ ವರ್ಷವು ಕೊನೆಗೊಂಡು ಸಪ್ಟಂಬರಾದಿಯಿಂದ 46ನೇ ಹೊಸ ವರ್ಷಾರಂಭವಾಗಿದೆ. ಈ ಅವಧಿಗೆ ಚಂದಾ ಅವಧಿ ಮುಗಿಯುವ ಹಾಗೂ ಚಂದಾ ಹಣ ಬಾಕಿಯಿರುವ ನಮ್ಮ ಚಂದಾದಾರ ಬಂಧುಗಳು ತಮ್ಮ ಚಂದಾ ಹಣವನ್ನು ದಯಮಾಡಿ ಅದಷ್ಟು ತ್ವರಿತ ಮನಿಯಾರ್ಡರು ದ್ವಾರಾ ಯಾ ಸಿಂಡಿಕೇಟ್ ಬ್ಯಾಂಕಿನ ಸಮೀಪದ ಶಾಖೆಯಲ್ಲಿ "ನವಯುಗ"ದ ಖಾತೆಗೆ ಜಮೆ ಮಾಡುವುದರ ಮೂಲಕ ಕಳುಹಿಸಿಕೊಟ್ಟು ಸಹಕರಿಸುವಂತೆ ವಿನಂತಿಸುತ್ತೇವೆ.

ಅಂತೂ ಚಂದಾಹಣವು ಸಕಾಲದಲ್ಲಿ ಬಾರದಿದ್ದಲ್ಲಿ ನಾವು ಕ್ರಮಶಃ ಮುಂದಿನ ಸಂಚಿಕೆಯನ್ನು ವಿ. ಪಿ. ಮೂಲಕ ಕಳುಹಿಸುತ್ತೇವೆ. ಅದನ್ನು ಅವಶ್ಯ ಸ್ವೀಕರಿಸುವಂತೆ ಬಿನ್ನಹಿಸುತ್ತೇವೆ.

ಮೆನೇಜರ್,
ನವಯುಗ, ಉಡುಪಿ.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ದಿ| ಶ್ರೀ ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—
ಆಂಗ್ಲ ಸ್ವಯಂಬೋಧಿನಿ

ಸುಲಭದಲ್ಲಿ ಇಂಗ್ಲಿಷ್

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ.ಎರಡು. ಉತ್ತಮ ಪ್ರತಿ:ರೂ.ಎರಡೂವರೆ(ಟ.ಖ. ಪ್ರತ್ಯೇಕ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ

ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ:ರೂ. 1-25 (ಟ.ಖ.ಪ್ರತ್ಯೇಕ)

ಹೊಸಕೆರೆ ಚಿದಂಬರಯ್ಯನವರ
ಶ್ರೀಮದ್ಭಗವದ್ಗೀತೆಯ ಸಮೂಲ ಭಾಷಾಂತರ

ಗೀತೆಯ ಕೈಗನ್ನಡಿ

300 ಪುಟಗಳಿಗೂ ಮಿಕ್ಕಿದೆ. ಕೈಹೊತ್ತಗೆಯ ಆಕಾರದಲ್ಲಿದೆ.
ಬೆಲೆ: ಸಾದಾ ಪ್ರತಿ ರೂ. ೧
ಗೀತೆಯ ಕೈಗನ್ನಡಿಯ ಒಂದು ಪ್ರತಿ ಬೇಕಾದವರು ರೂ. 1-50ನ್ನು
ಮನಿಯಾರ್ಡರು ಮಾಡಿ ತರಿಸಿಕೊಳ್ಳಬಹುದು.
—ಪ್ರತಿಗಳಿಗೆ ಬರೆಯಿರಿ—
ನವಭಾರತ ಪುಸ್ತಕ ಭಂಡಾರ, ಉಡುಪಿ. ಅಥವಾ
ನವಯುಗ ಪ್ರೆಸ್, ಉಡುಪಿ.

ನವಯುಗ

22—9—1966

NAVAY

೨೦
ಪೈಸೆ

ಮಲತಾಯಿ ತಾಯಿಯಾದಾಳೆ?

ಬರೆದವರು
ಶ್ರೀ ಎಚ್. ಎಂ. ಅಡಿಗ

ತಾಯಿಯನ್ನು ಕಾಣುವ ಹಂಬಲದಿಂದ ವಿನೋದ ಅಡಿಗೆ ಮನೆಯತ್ತ ತೆರಳಿದಳು. ಅಲ್ಲಿ ಕಾಣದೆ ಹೊರ ಜಗಲಿಗೆ ಬಂದಳು, ಅಳುತ್ತಾ ಮನೆಯೊಳಗೆಲ್ಲಾ ಸುತ್ತಿ ತನ್ನ ತಂದೆಯ ಸನಿಹಕ್ಕೆ ಬಂದಳು.

"ಅಪ್ಪಾ, ಅಮ್ಮ ಎಲ್ಲಿ?" ಎಂದು ಪ್ರಶ್ನಿಸಿದಳು.

ಮಗಳನ್ನು ಸಮಾಧಾನಿಸುತ್ತಾ, "ನಿನ್ನ ತಾಯಿಯು ಪಾತ್ರೆಗಳನ್ನು ತೊಳೆಯಲು ಕೆರೆಯ ಕಡೆಗೆ ಹೋಗಿದ್ದಾಳಮ್ಮಾ. ಸುಮ್ಮನಿರಮ್ಮಾ! ಈಗ ಬರುತ್ತಾಳೆ. ವಿನೋದ, ಇಲ್ಲಿ ನೋಡು— ಇದು ಆಟದ ಬೊಂಬೆ ಎಷ್ಟು ಚೆನ್ನಾಗಿದೆ! ನಿನ್ನಂತೆಯೇ ಇರುವ ಹುಡುಗಿ ತಾನೆ" ಎಂದು ಮಾತನ್ನು ಬದಲಾಯಿಸಿ ತಾಯಿಯ ನೆನಪನ್ನು ಕಡಮೆ ಮಾಡಲು ಮಾಧವ ರಾಯರು ಪ್ರಯತ್ನಿಸಿದಾಗ, ಆ ಹಸು ಮಗು ಕ್ಷಣಕಾಲ ಆ ಬೊಂಬೆಯೊಡನೆ ತನ್ನ ಚಿಕ್ಕಂದದ ನುಡಿಗಳನ್ನು ಆಡುತ್ತಾ ಇತ್ತು. ಪುನಃ ತಾಯಿಯ ನೆನಪಾದಾಗ ತಂದೆಯೊಡನೆ ಅದೇ ಪ್ರಶ್ನೆ—"ಅಪ್ಪಾ! ಅಮ್ಮ ಎಲ್ಲಿ?........"

ಇದು ದಿನಾಲು ಮಾಧವ ರಾಯರು ತನ್ನ ಮನೆಯಲ್ಲಿ ಕಾಣುವ ಚಿತ್ರ. ತನ್ನ ಪ್ರೀತಿಯ ಹೆಂಡತಿ ಮಾಲತಿಯ ಆಕಸ್ಮಿಕ ಮರಣದಿಂದ ಅವರು ಇಂದು ಅನುಭವಿಸುವ ನರಕಯಾತನೆ. ವಿನೋದಳು "ತಾಯಿಯನ್ನು ತೋರಿಸಪ್ಪಾ—ಅಮ್ಮ ಎಲ್ಲಿ" ಎಂದು ಪ್ರಶ್ನೆ ಕೇಳಿದೊಡನೆ ಹೃದಯಾಂತರಾಳದಿಂದ ಉದ್ಭವಿಸಿ ಬರುವ ಆ ದುಃಖದ ಆ ಸವಿ ನೆನಪಿಗಾಗಿ ಕಣ್ಣಿನಲ್ಲಿ ನೀರ ಹನಿ ತುಂಬಿ ಪಟಪಟನೆ ಕೆಲ ಮೇಲೆ ಬಿದ್ದು ಧಾರೆಯಾಗಿ ನೆಲದ ಮೇಲೆ ಹರಿದು ಹೋಗುತ್ತಿತ್ತು.

ಮಾಧವ ರಾಯರಿಗೆ ಇನ್ನೂ ಮೂವತ್ತರ ಹರೆಯ. ತನ್ನ ಮೊದಲ ಹೆಂಡತಿಯ ಪ್ರೇಮದ ಕಾಣಿಕೆಯಾಗಿ, ವಿನೋದಳನ್ನು ಕೊಟ್ಟು ತೀರಿಕೊಂಡಿದ್ದಳು. ಮಾಲತಿಯ ಮರಣದಿಂದ ಮಾಧವ ರಾಯರಿಗೆ ಈ ಜಗತ್ತೆ ಬರಿ ಶೂನ್ಯವಾಗಿ ಪರಿಣಮಿಸಿತ್ತು. ಊಟವನ್ನು ಸಹಾ ಸರಿಯಾಗಿ ಮಾಡುತ್ತಿರಲಿಲ್ಲ. ದೇಹವು ದಿನದಿಂದ ದಿನಕ್ಕೆ ಕ್ಷೀಣ ರೂಪವನ್ನು ತಾಳುತ್ತಿತ್ತು. ಅವರು ಅನುಭವಿಸುವ ಈ ಕಷ್ಟ ಕಾರ್ಪಣ್ಯಗಳನ್ನು ನೋಡಲಾರದ ಅವರ ಸ್ನೇಹಿತರು, 'ಇನ್ನೊಂದು ಮದುವೆ ಮಾಡಿಕೊಳ್ಳಿ ರಾಯರೆ" ಎಂದು ವಿಧವಿಧವಾಗಿ ಒತ್ತಾಯಿಸುತ್ತಿದ್ದರು. "ಯಾವ ರೀತಿಯ ಹುಡುಗಿ ಸಿಗುತ್ತಾಳೋ? ಬಂದವಳು ನನ್ನ ಪ್ರೇಮ ಪತ್ನಿಯಾದ ಮಾಲತಿಯ ಪ್ರೇಮ ಫಲವಾದ ವಿನೋದಳಿಗೆ ಮಲತಾಯಿಯಾಗುವವಳು, ಅವಳು ವಿನೋದಳನ್ನು ಬೇರೆ ರೀತಿಯಲ್ಲಿ ಕಂಡರೆ, ವಿನೋದಳ ಜೀವನವೇ ಮಣ್ಣುಗೂಡಿ ಹಾಳಾಗಬಹುದು" ಎಂದು ತನ್ನ ಗೆಳೆಯರಿಗೆ ಉತ್ತರಿಸುತ್ತಿದ್ದರು ರಾಯರು.

ಸ್ವಲ್ಪ ಸಮಯದ ನಂತರ ತಾವೇ ಮನೆಯ ಎಲ್ಲಾ ಕೆಲಸಗಳನ್ನು ಮಾಡಿಕೊಳ್ಳುತ್ತಿದ್ದರು. ದಿನ, ಉರುಳಿತು, ಮಾಸ ಕಳೆಯಿತು. ಆಯಾಸ, ಬೇಸರ ದಿನೇ ದಿನೇ ಹೆಚ್ಚುತ್ತಲಿತ್ತು. ಏಳು ತಿಂಗಳು ಕಳೆಯಿತು

ಒಂದು ದಿನ ಬೆಳಿಗ್ಗೆ ರಾಯರ ಮೊದಲ ಮದುವೆ ಮಾಡಿಸಿದ ಪುರೋಹಿತ ಶಾಸ್ತ್ರಿಗಳು ಬಂದರು. ರಾಯರ ವಿಷಯ ತಿಳಿದ ಶಾಸ್ತ್ರಿಗಳು, ಎರಡನೆ ಮದುವೆಯ ಪ್ರಸ್ತಾಪವೆತ್ತಿದರು. ಹೆಣ್ಣಿನ ಅನ್ವೇಷಣೆಯ ಕಾರ್ಯದಲ್ಲಿ ಶಾಸ್ತ್ರಿಗಳು ಮುಂದಾದರು. ದಿನಕ್ಕೆ ಹತ್ತಾರು ಮನೆಗಳನ್ನು ಸುತ್ತಿ ಇಳಿಯುವ ಇಂತಹ ಪುರೋಹಿತರ ವರ್ಗದವರಿಂದಲೇ ಈ ಕೆಲಸ ನಡೆಯುವುದು ಹೆಚ್ಚು— ಉದುರುವುದು ಅಷ್ಟೇ!

ಕಮಲಳ ಕೊರಳಿಗೆ ಮಾಂಗಲ್ಯವನ್ನು ಮಾಧವರಾಯರು ಕಟ್ಟಿದರು. ಕಣ್ಣಿನಲ್ಲಿ ನೀರು ತುಂಬಿ ಒಂದೊಂದೆ ಹನಿ ಉದುರುತ್ತಿತ್ತು ಮದುವೆಯ ಮಂಟಪದಲ್ಲಿ.

ಕಮಲ ತನ್ನ ಗಂಡನ ಮನೆಯನ್ನು ತುಂಬಿಸಿದಳು. ಮೂಲೆ ಮೂಲೆಗಳಲ್ಲಿ ಬಿದ್ದಿರುವ ಪಾತ್ರೆಗಳನ್ನು ಓರಣವಾಗಿರಿಸಿದಳು. ಚೆಲ್ಲಾಪಿಲ್ಲಿಯಾಗಿ ಬಿದ್ದಿರುವ ಬಟ್ಟೆಗಳನ್ನು ಕ್ರಮವಾಗಿರಿಸಿದಳು. ಮನೆಯಲ್ಲಿ ದುಃಖ ಹೋಗಿ, ನಗು ಮೂಡಿ ಬರುವಂತಾಯಿತು. ವಿನೋದಳ ಮಲತಾಯಿಯಾಗಿ ಬಂದಳು, ಕಮಲ. ಪ್ರೀತಿಯ ಮಾತಿನಲ್ಲಿ ವಿನೋದಳನ್ನು ಮುದ್ದಿಸಿದಳು. ಮಗು ನಿಜ ತಾಯಿಯನ್ನು ಮರೆತು ಮಲತಾಯಿಯ ಮರೆ ಹೊಕ್ಕಿತ.

ವರುಷ ಕಳೆಯಿತು....

ಇಂದು ಕಮಲ ಒಂದು ಮಗುವಿನ ತಾಯಿಯಾದಳು. ತನ್ನ ಹೊಟ್ಟೆಯಲ್ಲಿ ಹುಟ್ಟಿದ ಮಗುವಿಗಿಂತಲೂ, ಕಮಲ ವಿನೋದಳ ಮೇಲೆ ಪ್ರೀತಿಯನ್ನು ಹೆಚ್ಚು ತೋರಿಸಿದ್ದಳು. ರಾಯರು ಇದನ್ನು ನೋಡಿ ಸಂತೋಷಗೊಂಡಿದ್ದರು. ಅಳುವ ಸಂಸಾರ ನಗುವ ದಾರಿಯನ್ನು ಹಿಡಿಯಿತು.

ಮಾಧವರಾಯರ ನೆರೆಮನೆಯೆಂದರೆ ಗಂಗಮ್ಮನವರ ಮನೆ ಗಂಡನ ಮರಣಾನಂತರ ಗಂಗಮ್ಮ ಒಬ್ಬರೇ ಮನೆಯಲ್ಲಿ ವಾಸಮಾಡಿಕೊಂಡಿದ್ದರು. ಮತ್ಸರದಲ್ಲಿಯೇ ಹುಟ್ಟಿ ಬೆಳೆದು ಅದರಲ್ಲಿಯೇ ಅಂತ್ಯವನ್ನು ಕಾಣಬೇಕೆನ್ನುವರು. ದಿನಕ್ಕೊಂದು ಊಟ ಮಾತ್ರ. ಇದು ಅವರ ಪದ್ಧತಿ. ಊಟ ಮುಗಿದೊಡನೆ ಪರಿ, ಮುಂದೆ ಕೆಲಸವೇ ಕಾರ್ಯವೇ? ಹೇಗೂ ಮಕ್ಕಳಿಲ್ಲದ ಮನೆ. ಬೇಸರವನ್ನು ಹೋಗಲಾಡಿಸುವುದಕ್ಕಾಗಿ ಹೊರ ಜಗಲಿಯಲ್ಲಿ ಕುಳಿತು, ಪಕ್ಕದ ಮನೆಯ ಸುಬ್ಬಮ್ಮ, ಮಾಚಮ್ಮನವರೊಡನೆ ಹರಟೆ ಹೊಡೆಯಲು ಪ್ರಾರಂಭಿಸುತ್ತಿದ್ದರು. ಆ ಮನೆಯಲ್ಲಿ ಹಾಗೆ—ಹೀಗೆ ಇಲ್ಲಿಂದ ಪ್ರಾರಂಭವಾದ ಸಂಭಾಷಣೆ, ನಿಮ್ಮಲ್ಲಿ ಊಟಕ್ಕೆ ಏನು ಮಾಡಿದ್ದೀರಿ ಸಾರೋ, ಹುಳಿಯೋ ಎನ್ನುವಲ್ಲಿಗೆ ಆ ದಿನದ ಸಭೆಯು ಮುಕ್ತಾಯ. ಧನ್ಯವಾದವೂ ಗಂಗಮ್ಮನವರೇ ಕೊಡಬೇಕಾಗುತಿತ್ತು.

....ಒಂದು ದಿನ ಗಂಗಮ್ಮನವರ ಮನೆಯ ಎದುರು ಮಾರ್ಗದಲ್ಲಿ ವಿನೋದಳು ಆಟವಾಡುತ್ತಿದ್ದಳು. ಗಂಗಮ್ಮ ಕರೆದು, 'ಏನು ವಿನೋದ, ನೀನು ಈಗ ನಮ್ಮ ಮನೆಯ ಕಡೆಗೆ ಬರುವುದಿಲ್ಲ? ಕಮಲಮ್ಮ ಏನು ಮಾಡುತ್ತಿದ್ದಾರೆ. ನಿನ್ನೆ ನಿಮ್ಮಲ್ಲಿ ಏನು ಮಾಡಿದ್ದರು? ಹಲ್ವ, ಚಿರೋಟಿ ಏನಾದರೂ ಮಾಡಿದ್ದರೆ..'

'ಏನೂ ಮಾಡಲಿಲ್ಲ' ದೃಢವಾಗಿ ಉತ್ತರಿಸಿದಳು ವಿನೋದ.

"ನಿನಗೆ ಹೇಗೆ ಕೊಡುತ್ತಾಳೆ! ನೀನು ಹೇಗೂ ಅವಳ ಮಗಳಲ್ಲ."

'ಹಾಗಾದರೆ ನನ್ನ ತಾಯಿ ಅವಳಲ್ಲವೆ? ಮತ್ತಾರು ಗಂಗಮ್ಮನವರೇ? ಆಶ್ಚರ್ಯದಿಂದ ಕೇಳಿದಳು ವಿನೋದ. ಮಗು ಚಿಕ್ಕದಾದರೂ ಜ್ಞಾನ ಸೂಕ್ಷ್ಮವಾಗಿತ್ತು.

"ನಿನ್ನ ತಾಯಿ ನೀನು ಚಿಕ್ಕವಳಿದ್ದಾಗಲೇ ತೀರಿಕೊಂಡಿದ್ದಳು. ಆದ್ದರಿಂದಲೇ ನಿನ್ನ ತಂದೆ ಎರಡನೇಯ ಮದುವೆ ಮಾಡಿಕೊಂಡರು. ಕಮಲ ನಿನ್ನ ತಾಯಿ ಅಲ್ಲ—ಬದಲು 'ಮಲತಾಯಿ' ಎಂದ ಚುಚ್ಚು ಮಾತಿನಿಂದಲೇ ಅರಿವು ಮಾಡಿಕೊಟ್ಟರು, ಗಂಗಮ್ಮ.

ಆಟವಾಡುವುದನ್ನು ನಿಲ್ಲಿಸಿ, ಮುಂದ ಮನಸ್ಸಿನಿಂದ ಮನೆಯತ್ತ ವಿನೋದ ನಡೆದಳು.

ಸಂತೋಷದ ಸುಗ್ಗಿಯ ಕಾಲವನ್ನು ಅನುಭವಿಸುತ್ತಿದ್ದ ಮಾಧವರಾಯರಿಗೆ ಈಗ ಪುನಃ ದುಃಖ ಪ್ರಾರಂಭವಾಯಿತು. ಗಂಗಮ್ಮನವರು ಬಿತ್ತಿದ ಮತ್ಸರದ ಬೀಜವು ಮೊಳಕೆ ಬಂದಿತು. ಮನೆಯಲ್ಲಿ 'ಟಿಕೆಟ್' ಪ್ರಾರಂಭವಾಯಿತು. ವಿನೋದ ಹಿಂದೆ ಪ್ರೀತಿಯಿಂದ ಕಮಲಳನ್ನು "ಅಮ್ಮಾ" ಎಂದು ಎಷ್ಟು ಬಾರಿ ತಾಯ್ತನದ ವಾತ್ಸಲ್ಯದ ಕರೆಯನ್ನು ಕೊಡುತ್ತಿದ್ದಳೋ ಅದೆಲ್ಲಾ ನಿಂತಿತು. ಬರು ಬರುತ್ತಾ ವಾತ್ಸಲ್ಯ ಕಡಿಮೆಯಾಯಿತು. ಇದರ ಕಾರಣ ಕಮಲಳಿಗೆ ತಿಳಿಯಿತು.

ವಿನೋದಳಿಗೆ ಇಂದು ಹದಿನೆಂಟು ತುಂಬಿತ್ತು. ಅವಳ ಸರ್ವಾಂಗಗಳಲ್ಲಿಯೂ ಯೌವ್ವನ ತುಂಬಿ, ಚೆಲುತುಂಬಿ, ಕಣ್ಣಾಲಿಯ ಎದುರು ಗಂಡುವ್ಯಕ್ತಿಯನ್ನು ಹುಡುಕುತ್ತಲಿತ್ತು. ಮಾಧವರಾಯರಿಗೆ ಇದೇ ಯೋಚನೆ ತಲೆಯನ್ನು ಕೊರೆಯುತ್ತಲಿತ್ತು. "ಮಲತಾಯಿ ಎಂದ, ಈ ರೀತಿಯ ರಂಪಾಟ ಮಾಡಿಕೊಳ್ಳುವುದಕ್ಕಿಂತ ವಿನೋದಳನ್ನು ಮದುವೆಮಾಡಿ ಗಂಡನ ಮನೆಗೆ ಕಳುಹಿಸಿ ಕೊಡುವುದು ಉತ್ತಮ, ಆ ಮೇಲೆ ಎಲ್ಲಾ ಸರಿಹೋಗುತ್ತದೆಂದು, ವಿನೋದಳಿಗಾಗಿ ಗಂಡನ್ನು ಹುಡುಕಲು ಪ್ರಯತ್ನಿಸುತ್ತಿದ್ದರು.

ವಿನೋದಳು ಉದ್ದವಾಗಿದ್ದಳು. ಸಾಧಾರಣ ಕಪ್ಪು. ಕಪ್ಪಾಗಿದ್ದರೂ, ಬಣ್ಣದಲ್ಲೊಂದು ಆಕರ್ಷಕ ಶಕ್ತಿ, ಯಾರ ಮನಸ್ಸನ್ನೂ ಸೆಳೆಯುತ್ತಿತ್ತು. ನಿಡಿದಾದ ಕಣ್ಣಿವೆಗಳು— ಮುಖಕ್ಕೆ ಶೋಭಾಯಮಾನವಾಗಿದ್ದುವು. ಚಿಕ್ಕದಾದ ಮೂಗು— ಮುಖದ ಅಲಂಕಾರ ಹೆಚ್ಚಿಸುತ್ತಿತ್ತು. ಕೆಂದುಟಿ— ಸಂಜೆ ಮುಗುಳು ನೇಸರಿನ ಪ್ರಭೆಯಂತೆ ಕಾಣುತ್ತಿತ್ತು. ಮಲ್ಲಿಗೆ ಮೊಗ್ಗೆಯಂತೆ ಓರಣವಾಗಿರುವ ದಂತ ಪಂಕ್ತಿ—ವಿನೋದಳ ಕಾಂತಿಯನ್ನು ಹೆಚ್ಚಿಸುತ್ತಲಿತ್ತು.

ರಾಯರು ಹುಡುಕಿ, ಹುಡುಕಿ ಕೊನೆಗೆ ಬೊಂಬಾಯಿಯಲ್ಲಿಒಂದು ಬ್ಯಾಂಕಿನಲ್ಲಿ ಕೆಲಸಮಾಡಿಕೊಂಡಿರುವ ಗುಮಾಸ್ತನಿಗೆ ವಿನೋದಳನ್ನು ಧಾರೆಯೆರೆದು ಕೊಟ್ಟು ಕಳುಹಿಸಿದರು.

ಅಳಿಯಮಯ್ಯನ ಪತ್ರ ಬರುತ್ತಲಿತ್ತು ಅದರಲ್ಲಿ ಒಂದು ಅಕ್ಷರ ಸಹಾ ಕಮಲಳ ವಿಷಯ ಬರೆದಿಲ್ಲ. ಇದನ್ನು ನೋಡಿದ ಕಮಲಳಿಗೆ ಈ ಜಗತ್ತೇ ಬೇಡವಾಗಿತ್ತು. ತನ್ನ ಹೊಟ್ಟೆಯಲ್ಲಿ ಹುಟ್ಟಿದ ಮಗುವಿಗಿಂತಲೂ ವಿನೋದಳನ್ನು ಪ್ರೀತಿಸುತ್ತಿದ್ದರೂ ಇಂದು ಅವರು ನನಗೆ ಕೊಡುವ ಗೌರವ

(ಹನ್ನೊಂದನೇ ಪುಟ ನೋಡಿರಿ)

ಅತ್ಯಾಧುನಿಕ ಸಲಕರಣೆ — ಸೌಕರ್ಯಗಳಿಂದ ಕೂಡಿದ
ಭೋಜನ, ಉಪಾಹಾರ ಮತ್ತು ವಸತಿ ಗೃಹ



ಹೋಟೆಲ್ ಶಿವಪ್ರಸಾದ
ಫೋನ್: 77
ಕುಂದಾಪುರ, ದ. ಕ.



ನಲ್ವತ್ತಾರನೆ ವರ್ಷ
Telephone 226.

ನವಯುಗ

ಸಂಪುಟ ೪೬ | ಉಡುಪಿ | Vol. 46
ಸಂಚಿಕೆ ೪ | ೨೨—೯—೧೯೬೬ | No. 4

Estd. 1921
NAVAYUGA
Leading Kannada Weekly
UDIPI, S. Kanara

ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ
ಉಡುಪಿ, ದ. ಕನ್ನಡ.

ಸಂಚಾಲಕ—ಸಂಪಾದಕ:
ಕೆ. ಹೊನ್ನಯ್ಯ ಶೆಟ್ಟಿ

ವಾರ್ಷಿಕ ಚಂದಾ:
ಮೂರು ವಿಶೇಷ ಸಂಚಿಕೆಗಳು ಸೇರಿ ಅಂಚೆ ವೆಚ್ಚ ಸಹಿತ ಮುಂಗಡ
ಸ್ವದೇಶ ರೂ. ೧೦
ವಿದೇಶ ರೂ. ೧೮

ಜಾಹೀರಾತು ದರಗಳು:
ಅನಿಯಮಿತ (ಕ್ಯಾಜುವಲ್)
ಕಲಂ ಸೆಂಟಿಮೀಟರಿಗೆ ರೂ. 2-00
ನಿಯಮಿತ (ಕಂಟ್ರಾಕ್ಟ್)
ಕಲಂ ಸೆಂಟಿಮೀಟರಿಗೆ ರೂ 1-50

ಸೂಚನೆಗಳು

ಲೇಖಕ ಬಂಧುಗಳಿಗೆ
ಲೇಖನವು ಕಿರಿದಾಗಿದ್ದು ಹಿರಿದರ್ಥದಿಂದ ಕೂಡಿರಬೇಕು. ಕಾಲು ತಾವಿನ ಪ್ರಮಾಣದ ಹಾಳೆಯ ಒಂದೇ ಮಗ್ಗುಲಲ್ಲಿ ಬದಿಯಂಚುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು. ಆಧಾರಿತ, ಅನುವಾದಿತವಾದರೆ ಅವುಗಳ ಮೂಲವನ್ನೂ ತಿಳಿಸಬೇಕು.

ಚಂದಾದಾರರಿಗೆ—
ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬ್ಯಾಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಮುಖಪತ್ರದಲ್ಲಿ:

ಬಲ್ಗೇರಿಯಾದ ಒಂದು ಮನಮೋಹಕ ನೃತ್ಯ

ನಾಟಕದ ಒಂದಂಕ

ಭಾರತೀಯ ಸೇನೆಯ ಮಹಾ ದಂಡನಾಯಕ ಕುಮಾರ ಮಂಗಲಂ ಸೋವಿಯತ್ ನಾಡಿನ ಹದಿನೈದು ದಿನಗಳ ಸಂಚಾರದ ಮೇಲೆ ಹೊರಟರು. ಅವರು ಸೇನಾ ಚಾಲನೆಯಲ್ಲಿ ಸೋವಿಯೆತ್ ತಂತ್ರವನ್ನೂ ಅರಿತುಕೊಂಡು ಬಾರದುಳಿಯರು. ಅವರ ಪ್ರಯಾಣವು ಸುಖಕರವಾಗಲಿ ಎಂದು ಸಮಸ್ತರೂ ಹಾರೈಸುತ್ತಾರೆ. ಇದಕ್ಕೆ ಪೂರ್ವಭಾವಿಯಾಗಿ ಕುಮಾರ ಮಂಗಲಂ ಒಂದು ಸಿದ್ಧಿಯನ್ನು ಪಡೆದಿರುತ್ತಾರೆ. ಪಾಕಿಸ್ತಾನದ ಮಹಾದಂಡನಾಯಕರ ಕಾರ್ಯನಿರ್ವಹಿಸುತ್ತಿರುವ ಯಹ್ಯಾಖಾನರನ್ನು ನವದೆಹಲಿಗೆ ಆಮಂತ್ರಿಸಿ ಅವರೊಡನೆ ಸಮಾಲೋಚನೆ ನಡೆಸಿ ಭಾರತ—ಪಾಕ್ ಗಡಿಯಲ್ಲಿ ಶಾಂತ ಪರಿಸ್ಥಿತಿಯನ್ನು ಕಾಯ್ದುಕೊಳ್ಳುವ ಸಂಬಂಧದಲ್ಲಿ ಒಂದು ಒಡಂಬಡಿಕೆಯನ್ನವರು ಸಾಧಿಸಿದ್ದಾರೆ. ಅವಶ್ಯಕಂಡಾಗ ಯಾವುದೇ ಮಟ್ಟದಲ್ಲಿ ಸಭೆ ಸೇರಬೇಕೆಂಬ ತಾಷ್ಕೆಂಟ್ ಘೋಷಣೆಯ ಮೇರೆಗೆ ಈ ಸಭೆಯು ಸೇರಿತ್ತು; ಒಡಂಬಡಿಕೆಯೂ ಆಯಿತು. ಗಡಿಗುಂಟ ಪಾಕ್ ಸೇನೆಯ ಚಲನವಲನಗಳ ಮಿತಿ ಮೀರಿದೆಯೆಂಬ ವರದಿಯನ್ನು ಯಹ್ಯಾಖಾನರು ವಿರೋಧಿಸಲಿಲ್ಲವಾದರೂ ಅವು ತೀರ ಸಾಮಾನ್ಯವಾದುವು ಎಂದರು. ಸೇನಾ ಠಾಣೆಗಳನ್ನು ಎಲ್ಲೆಲ್ಲಿ ಇಡಬೇಕೆಂಬುದರ ಬಗ್ಗೆ ಒಂದು ತೀರ್ಮಾನಕ್ಕೆ ಬಂದರು. ಮುಂದೆ ಸೇನೆಯ ಸಾಮಾನ್ಯ ಚಲನವಲನ ನಡೆಸುವುದಾದರೆ, ಪರಸ್ಪರ ಸೂಚನೆ ಮೊದಲೇ ಕೊಡುವುದಕ್ಕೆ ಒಪ್ಪಿದರು. ಅಂತೂ ಒಟ್ಟಿನಲ್ಲಿ ಈ ಒಡಂಬಡಿಕೆ ಇದ್ದಕ್ಕಿದ್ದಂತೆ ವ್ಯವಹಾರಕ್ಕೆ ಬಂದರೆ, ಅದೊಂದು ದೊಡ್ಡ ಸಾಧನೆ. ಯಹ್ಯಾಖಾನರೂ ಒಪ್ಪಿಕೊಂಡ ತತ್ತ್ವವನ್ನು ಅಕ್ಷರಶಃ ಪಾಲಿಸಲು ಅಧ್ಯಕ್ಷ ಅಯ್ಯೂಬಖಾನರು ಸಿದ್ಧರಿದ್ದಾರೆ?

ಇದುವರೆಗಿನ ಅನುಭವದಿಂದ ಹೇಳುವುದಾದರೆ ಇದರ ಉತ್ತರ ನಕಾರಾತ್ಮಕವೇ. ಮಾತು ಮಾತಿಗೆ ಕಾಶ್ಮೀರವನ್ನು ಕಬಳಿಸುವ ವಿಚಾರ ಮುಂದೊಡ್ಡುವ ಪಾಕಿಸ್ತಾನದ ನಾಗರಿಕ ಅಧಿಕಾರಿಗಳು ಈ ಸೈನಿಕ ಮಟ್ಟದ ಒಡಂಬಡಿಕೆಯನ್ನು ಗಾಳಿಗೆ ತೂರುವ ದಿನ ದೂರವಿರದು. ತಾಷ್ಕೆಂಟ್ ಘೋಷಣೆಯಿಂದಾಗಿ ಕಾಶ್ಮೀರದ ಅಪಹರಣ ಸಾಧ್ಯವಾಗುವುದಾದರೆ ಮಾತ್ರ ಅವರಿಗೆ ಅದು ಬೇಕು; ಇಲ್ಲವಾದರೆ ಯಾವ ಪುರುಷಾರ್ಥಕ್ಕೆ? ಉಭಯ ದೇಶಗಳ ಮಂತ್ರಿ ಮಟ್ಟದ ಸಭೆಯು ಎರಡನೆ ಬಾರಿಗೆ ಸೇರಬೇಕೆಂಬ ಭಾರತದ ಸಲಹೆ ಎಲ್ಲುಳಿಯಿತು? ಕಾಶ್ಮೀರದ ಸಂಬಂಧ ಚರ್ಚೆಯು ನಡೆಯುವುದಾದರೆ, ಈ ಸಂಬಂಧದಲ್ಲಿ ಒಂದು ಸಮುಚಿತ ನಿರ್ಧಾರಕ್ಕೆ ಬರುವುದು ಸಾಧ್ಯವಾದರೆ ಮಾತ್ರ ಮಂತ್ರಿ ಮಟ್ಟದ ಸಭೆಯ ಹೊಗಳಿಕೆ ಎನ್ನುವ ಅಯ್ಯೂಬಖಾನರು ಯಾವ ಕನಸು ಕಾಣುತಿದ್ದಾರೆ ಎಂದು ಯಾರಾದರೂ ಊಹಿಸಬಹುದು. ಕಾಶ್ಮೀರಕ್ಕಾಗಿ ತನ್ನ ಎಲ್ಲ ಸಜ್ಜನಿಕೆಯ ನೀತಿಗಳನ್ನು ಕಸದ ಬುಟ್ಟಿಗೆಸೆದು ಕಿಪ್ಪೆಗೂ ಹಾರಲು ಸಿದ್ಧವಿರುವ ಪಾಕ್ ನಾಯಕರು ಸೇನಾ ಮಟ್ಟದ ಒಡಂಬಡಿಕೆಗೆ ಆತಂಕವಿಡದಿರುವುದು ಸಾಧ್ಯವಿಲ್ಲ. ಇಂದು ಪಾಕ್ ನಾಯಕರು ತಾಷ್ಕೆಂಟ್ ಒಡಂಬಡಿಕೆಯನ್ನು ಕಾರ್ಯರೂಪಕ್ಕೆ ತರುತ್ತಿರುವಂತೆ ತೋರಿಸಬೇಕು; ಆದರೆ ತರುತ್ತಿರಬಾರದು— ಈ ನಾಟಕದ ಒಂದಂಕವನ್ನು ಯಹ್ಯಾಖಾನರ ಮೂಲಕ ಅಯ್ಯೂಬಖಾನರು ಆಡಿಸಿದರೆ? ಏಕೆಂದರೆ, ಭಾರತದೊಡನೆ ಸ್ನೇಹದಿಂದ, ಮೈತ್ರಿಯಿಂದ ಬೇಕಾದಲ್ಲಿ, ಕಾಶ್ಮೀರ ಪ್ರಶ್ನೆ ಬಗೆಹರಿಯಬೇಕು— ಎನ್ನುವವರು ಶಾಂತಿಯನ್ನು ಬಯಸುತ್ತಾರೆಯೆ? ಜಾಗತಿಕ ಮಾರುಕಟ್ಟೆಯಲ್ಲಿ ಸಮರೋಪಕರಣಗಳಿಗಾಗಿ ಕೈಚಾಚುತ್ತಿರುವ ಅವರು ಶಾಂತಿಯ ಸಾಧಕರೆ? ಕಾಮನ್‌ವೆಲ್ತಿನಂತಹ ಒಂದು ಮಿತ್ರಕೂಟದಲ್ಲಿಯೂ ಸಂಪ್ರದಾಯವನ್ನು ಮುರಿದು ಕಾಶ್ಮೀರ ಪ್ರಶ್ನೆಯನ್ನು ಎತ್ತುವ ಹೀನ ಕಾರ್ಯ ಮಾಡುವ ಇವರೇನು ಮಾಡುತ್ತಿದ್ದಾರೆ? ಭಾರತದ ಮೇಲೆ ವ್ಯರ್ಥ ದ್ವೇಷ ಕಾರುವ ಪಾಕ್ ನಾಯಕರು ಒಂದು ಮುಂದೊಂದು ಒಡಂಬಡಿಕೆಗೆ ಅಸ್ತು ಎನ್ನುವುದನ್ನೂ ಬಲ್ಲರು, ಅದನ್ನು ಮುರಿಯಲೂ ಬಲ್ಲರು.

ಆದುದರಿಂದ ನಾವು ನೆಮ್ಮದಿಯಿಂದಿರುವುದು ಸಾಧ್ಯವಿಲ್ಲ. ಒಡಂಬಡಿಕೆ ನಡೆದುದು ಸರಿಯೇ— ನಮ್ಮ ತಾಷ್ಕೆಂಟ್ ವಿಶ್ವಾಸದ ಜ್ವಲಂತ ಪ್ರತೀಕ. ಇಷ್ಟರಿಂದಲೇ ನಾವು ತೃಪ್ತಿಯುಸಿರು ಬಿಡುವುದು ಸರಿಯಲ್ಲ. ಒಡಂಬಡಿಕೆಯನ್ನು ಪೂರ್ಣರೂಪೇಣ ಕಾರ್ಯರೂಪಕ್ಕೆ ತರುವುದು ನಮ್ಮ ಧರ್ಮ, ಜತೆಗೆ ಆಕ್ರಮಣಶೀಲರಿಂದ ಆತ್ಮರಕ್ಷಣೆಗಾಗಿ ಸದಾ ಸಿದ್ಧರಿರುವುದೂ ನಮ್ಮ ಪರಮ ಕರ್ತವ್ಯ. ಕೆಂಪು ಚೀನಾದಿಂದ ಉತ್ತೇಜಿತವಾಗುತ್ತಿದೆ ಇಂದು ಪಾಕಿಸ್ತಾನ. ಈ ಮೈತ್ರಿ ಇಂಡೋನೇಶ್ಯಾದ ಘಟ್ಟಕ್ಕೆ ಬಂದು ನಿಲ್ಲುವುದಿಲ್ಲವೆಂದೇನು ಭರವಸೆ? ಅದೇನೇ ಇರಲಿ, ನಾವು ಎಚ್ಚರವಿರಬೇಕು. ಬರಿಯ ಒಡಂಬಡಿಕೆಗಳ ಗುಂಗಿನಲ್ಲಿ ಮೈಮರೆತು ಕೈಕಟ್ಟಿ ಕುಳಿತಿರುವುದು ತರವಲ್ಲ. ಇದನ್ನು ನಮ್ಮ ನಾಗರಿಕ ನಾಯಕರೂ ಸೇನಾ ನಾಯಕರೂ ತಿಳಿದಿದ್ದಾರೆ.

ನೀರಸ ಸಮ್ಮೇಳನ

ಈ ಬಾರಿಯ ಕಾಮನ್‌ವೆಲ್ತ್ ಪ್ರಧಾನಿಗಳ ಸಮ್ಮೇಳನವು ಬರಿಯ ರೊಡೇಶಿಯಾ ಚರ್ಚೆಯಲ್ಲಿಯೇ ಪರ್ಯವಸಾನವಾಯ್ತೆಂದು ಹೇಳಬಹುದು. ಪ್ರಧಾನಿಗಳ ಸಮ್ಮೇಳನವೆಂಬುದೀಗ ಬರಿಯ ಮಾತಿಗಷ್ಟೆ ಉಳಿದಿದೆಯೆಂದರೂ ಆಶ್ಚರ್ಯವಿಲ್ಲ. ಪ್ರಧಾನಿಗಳಾದರೂ ಇದರಲ್ಲಿ ಭಾಗವಹಿಸಲು ಹಿಂದಿನಷ್ಟು ಉತ್ಸಾಹ ತೋರಿಸುವುದಿಲ್ಲ; ಬಂದವರೂ ಅಷ್ಟೆ. ರೋಡೇಸಿಯಾದ ಸ್ಮಿತ್ ಸರಕಾರದ ಮೇಲೆ ಎಲ್ಲ ಆಫ್ರೋ

(ಹತ್ತನೇ ಪುಟ ನೋಡಿರಿ)

> **ವಚನ ಸುಧೆ**
> ಮಹಾನ ಪ್ಯೇಕಜೋ ವೃಕ್ಷೋ
> ಬಲವಾನ್ ಸುಪ್ರತಿಷ್ಠಿತಃ
> ಪ್ರಸಹ್ಯ ಏವ ವಾತೇನ
> ಸಸ್ಕಂಧೋ ಮರ್ದಿತುಂ ಕ್ಷಣಾತ್||
> ಬಲವಂತವೂ ದೃಢಮೂಲವೂ ದಪ್ಪಗಾಯವೂ ಆಗಿದ್ದರೂ ಏಕಾಕಿಯಾಗಿ ನಿಂತಿರುವ ಮರವನ್ನು ಬಿರುಗಾಳಿಯು ಆಮೂಲ ಉರುಳಿಸಿ ಬಿಡಬಲ್ಲುದು.

ಪುತ್ತೂರು ಮುನ್ಸಿಫ್ ಕೋರ್ಟಿನಲ್ಲಿ
O.P. 22/66. ಕನ್ನಿ ತಾರೀಕು 5-10-66
ಶಂಭಟ್ಟ —ಅರ್ಜಿದಾರ
ಮತ್ತು
1. ಕೇಶವ ಭಟ್ಟ, 2. ಈಶ್ವರ ಭಟ್ಟ, 3. ನಾರಾಯಣ ಭಟ್ಟ 4. ಕೃಷ್ಣ ಭಟ್ಟ—ಎದ್ರಿರು.

ಸದ್ರಿ ಎದ್ರಿರಿಗೆ ಮತ್ತು ಎಲ್ಲಾ ಜನರಿಗೆ ಈ ಮೂಲಕ ತಿಳಿಸುವುದೇನೆಂದ್ರೆ—

ಸದ್ರಿ ಅರ್ಜಿದಾರನ, ಪಾಲಿ ಮೃತಪಟ್ಟ ತನ್ನ ತಂದೆ ಕರೋಪಾಡಿ ಗ್ರಾಮದ ಬೋಂಟಾಡಿ ಬೈಲು ನಾರಾಯಣ ಭಟ್ಟ ಮಗ ಸುಬ್ರಾಯ ಭಟ್ಟರು ಬರಸಿಕೊಂಡ ಡಿ.ಪ್ರೋ ನೋಟು ವಗೈರೆಗಳ ಸಾಲ ವಸೂಲಿನಲ್ಲಿ ತನಗಿರುವ 1/5 ಅಂಶ ಸಾಲ ವಸೂಲಿ ಕುರಿತು ವಾರೀಸು ಸರ್ಟಿಫಿಕೇಟು ಕೊಡಬೇಕಾಗಿ ಮೇಲ್ಕಂಡ ಅರ್ಜಿ ದಾಖಲು ಮಾಡಿರುತ್ತಾನೆ.

ಆದುದರಿಂದ ಸದ್ರಿ ಅರ್ಜಿಯಲ್ಲಿ ಹೇಳಿದಂತೆ ಅರ್ಜಿದಾರಗೆ ವಾರೀಸು ಸರ್ಟಿಫಿಕೇಟು ಕೊಡುವಲ್ಲಿ ಆಕ್ಷೇಪಗಳು ಇದ್ದರೆ ಮೇಲ್ಕಂಡ ಕೋರ್ಟಿನಲ್ಲಿ ತಾರೀಕು 5-10-66ನೇ ದಿನ 10 ಗಂಟೆಗೆ ಸರಿಯಾಗಿ ವಕೀಲರ ಮುಖಾಂತರವಾಗಲೀ ಸ್ವತಹಾ ಆಗಲೀ ಹಾಜರು ಆಗಿ ವು ದಹರಿಸಿಕೊಳ್ಳತಕ್ಕದ್ದು. ಇದಕ್ಕೆ ತಪ್ಪಿದರೆ ನಿಮ್ಮನ್ನು ಶಿಷ್ಟವಾಡಿ ಏಕಪಕ್ಷ ವಿಚಾರಣೆಯಿಂದ ಸದ್ರಿ ಅರ್ಜಿಯನ್ನು ತೀರ್ಮಾನಿಸಲಾಗುವುದು. ತಿಳಿದಿರಲಿ.

(By order of the Court)
Badekila Ishwara Bhat
Advocate for Petitioner,
ಪುತ್ತೂರು, 19—9—66.

ನರಸಣ್ಣನ ಸರಸ



'ದಕ್ಷಿಣ ಆಫ್ರಿಕೆಯ ಹೊಸ ಪ್ರಧಾನಿ ಜಾನ್ ವೋರ್ಸ್ಟರ್ ವರ್ಣಭೇದ ನೀತಿಯನ್ನು ಬಲವಾಗಿ ಸಮರ್ಥಿಸಿ ಕೊಂಡರು....'

'ಪಾಕಿಸ್ತಾನಕ್ಕೆ ಕಾಶ್ಮೀರ ಪ್ರಶ್ನೆ ಇದೆಯಲ್ಲ, ಹಾಗೆ..'

ಗೇಹ ರಾಜ್ಯದಲ್ಲಿ

ಇದೀಗ್ಗ ಇಲೆಕ್ಷನ್ನಿನ ಘರ್ಷಪಲ್ಲಿ?

"ಛೆ... ಛೆ.. ಛೆ.. ಧ್ಯಂಥ್ಸನ್ನಿವೊಂದ್ರಿ..."

"ಏನ ?"

"ಇಲ್ಲಿ ನೋಡ್ರಿ, ಎನ್‌ಜಿವೋಗಳು ಪ್ರತಿ ತಿಂಗಳೂ ರೂ. ೭೫ ಸಾಲ ಮಾಡುತ್ತಾರಂತೆ..."

"ಯಾರು ಹೇಳಿದ್ರಿ? ಹ್ಯಾಗೆಲ್ಲಾ ಸಾಲ ಮಾಡಿದ್ರೆ ಅದನ್ನ ತೀರಿಸೋದು ಹ್ಯಾಗೆ?"

"ಅದನ್ನೇ ನೋಡ್ರಿ, ಅವ್ರು ಹೇಳ್ತಾರೋದು."

'ಅಲ್ಲೋ, ಅವ್ರಿಗೆ ಸಾಲ ಕೊಡೋರ್ಯಾರು ಇದ್ದಾರು?"

"ಯಾರು? ಯಾರು-ಹಬ್ಬ ಹರಿದಿನಗಳ ಮುಂಗಡ್ಗ ಕೊಡೋದಕ್ಕಾಗಿ ಕಳ್ತಾರಿ ಹಾಕೋ ನಿಮ್ಮ ಸರ್ಕಾರ್ದ ಕಂತ್ರಿಕ್ಕೆ ಇಲ್ಲ ....."

"ಪುನಃ ಸಂರುವಾಡಿದೆಯಲ್ಲಾ?'

'ಏನು?'

'ಏನೂ ಇಲ್ಲ; ಬಿಡಾಣೆ...... ಅದ್ರೆ ನೋಡು ಒಂದು ಮಾತು....'

'ಏನದು?'

"ನೀನು ಹೇಳೋ ಹಾಗ್ಗ ಯಾರೂ ಸಾಲ ಮಾಡುತ್ತಿಲ್ಲ..."

"ಅಂದ್ರೆ ಮತ್ತೆ ಉಪವಾಸ್ವ ಬಿದ್ದು ಗೋಳಾಡ್ತಾರೆ..."

"ಅಂತೂ ತುಸು ಕಷ್ಟ ಅನ್ನು. ನೋಡು, ಅವ್ರ ಅಧ್ಯಕ್ಷ ದೇವಾಸಿಯೂ ಮೊನ್ನೆ ಅಂಕಿಸಂಖ್ಯೆ ಕೊಟ್ರು. ಸಂಸಾರಿ ಒಬ್ಬನಿಗೆ ಪ್ರತಿ ವೇತನ ಬಂದ್ರು, ಅವನ ಸಂಸಾರ್ದ ಮೂವರು ದೊಡ್ಡವ್ರು, ಎಂಡರು ಮಕ್ಕಳು ಇದ್ರೆ ನೀನು ಹೇಳಿದಂತೆ ಕಡಿಮೆ ಎಂದ್ರೆ ರೂ. ೭೫ ಸಾಲವಾಗುತ್ತಂತೆ...."

'ಇನ್ನು ತಂದೆ-ತಾಯಿ ಇದ್ಬಿಟ್ಟನೂ ಮತ್ತೆ ತಂಗಿ-ತಮ್ಮಂದಿರು ಇದ್ದ್ರೂ ಇದ್ದ್ರ ಬಿಟ್ರೆ, ಮಕ್ಕಳುಗಳು ಹೆಚ್ಚಿದ್ದು ಬಿಟ್ರೆ ದೇವ್ರೇಗತಿ..."

"ಇದು ಸರಾಸರಿ ಲೆಕ್ಕಚಾರ ನನ್ನು. ಆದ್ರೆ ನೋಡು, ಇದಕ್ಕಿಂತ ಕ್ಷಿಣಿಸ್ಸಿನ ತನ ಖಡೆಯೋರು ಇಲ್ವಾ?"

"ಇದ್ದಾರೇನ್ನಿ-ಆದ್ರೆ ಎನ್‌ಜಿವೋಗಳು ತಮ್ಮ ಮಾನಮರ್ಯಾದಗಳನ್ನೇ ಕಾಪಾಡಿಕೊಂಡು ಬರಬೇಕಾಗುತ್ತೆ..."

"ಸರಿ! ಹೌದೂನ್ನು ಆದ್ರೆ ನೋಡು, ಸರಕಾರ ಅವ್ರ ಸಂಸಾರ್ದ ಹೊಣೆ ಹೊತ್ತಿಲ್ಲ; ಹಾರೋಕೆ ಸಾಧ್ಯವೂ ಇಲ್ಲ. ಅದು ಅವನಿಗ ಸಂಬ್ಳ ಕೊಡೋದು-ಅವನ ದುಡಿಮೆಗೆ ಪ್ರತಿಫಲವಾಗಿ. ಯಾರ್ಯಾರ ಮನೇಲಿ ಎಷ್ಟೆಷ್ಟು ಜನ ಇದ್ದಾರೆ, ಎಷ್ಟು ಅದ್ದಾರೆ ನಡೆಯುತ್ತೆ ಅದನ್ನ ಸರಿದೂಗಿಸೋ ಜವಾಬ್ದಾರಿ ಯಾರಿಗಿದೆ?"

'ಅಲ್ಲ, ನೀವು ಕ್ಯಾನೂನಿನ ಲೆಕ್ಕಾಚಾರ ಮಾಡಬೇಡಿ! ಸರಕಾರ್ದ ನಿರ್ವಹಣೆ ಪ್ರತಿಯೊಬ್ಬನ ಹೊಣೆಗಾರಿಕೆ ಅನ್ನುವುದ್ದಾ ದೂಡ್ಡ ದಿರಬಹುದು, ಕಲವ್ರದ್ದು ಚಿಣ್ಣದಿರಬಹುದು. ಆದ್ರೂ ಸರ್ವರೂ ಸ್ಪಾವಾನ್ನು ಹೇಗಂತ ಇಲ್ಲವ? ಅವ್ರ ಹೊಟ್ಟೆ ತುಂಬಸೋ ಚಿಂತೆಯುಳ್ಳ ಪರಿಸ್ಥಿತಿಯನ್ನಿಟ್ಟ ಸಣಕಾ ರನನ್ನ ಸಂಸಾರ ನಡೆಸೋ ಸ್ಥಿತಿಗಡಬಲ್ಲರಾ ಕೊಂಡಿದೆಯೇ?"

'ಅದು ಏನೇನ್ನು ಭ್ರಷ್ಟಾಚಾರ ಪ್ರಬಲವಾಗಿ ಬಳೆಸ್ತಿರೋದಕ್ಕೆ ಇದೂ ಒಂದು ಕಾರಣ ಸ್ವಾ.'

'ಹೌದ, ನಿಮ್ಮ ಮಂತ್ರಿ-ಮಹೋದಯರು ಯಾರಿಗಾದರೂ ಏನಾದರೂ ಮಾಡಿದ್ರೆ ಅದು "ಫೇವರ್" ಮತ್ತ್ ನೌಕರರು ಮಾಡಿದ್ರೆ ಅದು ಭ್ರಷ್ಟಾಚಾರ. ಅಬ್ಬಬ್ಬಾ ನಿಮ್ಮ ಲೆಕ್ಕಾಚಾರವೇನೆ?"

"ಹೌದ್ಹೌದು... ನೋಡು, ಸೂರ್ಯನ ಕಿರಣ ಇದೆ ತನಕ"

"ಇಲ್ಲದೇನಂತೆ?"

"ನೋಡು, ಹಾಗೆಲ್ಲಾ ಅವಟಿಗಷ್ಟು ಕಡೆ ಗಣಿಸ ಬೇಡ. ನಾನು ಹೇಳೋದನ್ನ ತುಸು ಮನಸಿಗೊಟ್ಟು ಕೇಳು..."

"ಹೌದು, ಮುತ್ಸ್ಯಂಗೆ ನಾನು ಪವನ್ಸ್ ಕೊಡಬೇಕು?"

"ಅದೇಸ್ಯೆ ಮಹಾರಾಯ್ತಾ... ಸಾಕು ಹೋಡು 'ನೋಡು' ಮಹೋಲತಃ ಸೂರ್ಯನ ಕಿರಣ ಬಿಯೋವುದರ ಮೇಲೆ ಬೀಳುತ್ತೆ ಅದರ ಬಣ್ಣವನ್ನೇ ಹೋಲುತ್ತೆ. ಹಾಗೆನ್ನೇ ಮೊಹಿಳರ್ ಆಚಾರ ಬಂದೇ ಆದ್ರೆ ಆ ಕಾರ್ಯನ ಪ್ರತಿಸ್ಥಾನ ಮಾನೆ ಗೇಲೆನ್ಸ್ 'ಹೊರದ್' ಕೊಂಡು ಆದರ ಅವತಾರ ಬೇರೆ ಬೇರೆ ಆಗುತ್ತೆ. ಆಲ್ಲೋ, ತನ್ನ ನೌಕರರು ಜೀವಿಸೋ ಹಾದಿಲವ ಅವಕಾಶ ಮಾಡಿಕೊಡದ ಸರಕಾರ ಯಾರ್ಯಾರಿಗೆ ಬುದ್ಧಿ ಹೇಳುತ್ತೆ? ನೌಕರರಿಗೆ ಸಾಲಬ್ಯ ಹೆಚ್ಚಾಗುತ್ತಿರುವಂತೆ ಕಾನೂನು ಮೊಡ್ತದೆ. ಉದ್ಯೋಗಿಗಳಿಗೇ ಜೋಸನ್ ಹೆಚ್ಚಳ ಬೇಕು ಎಂದು ಹೇಳುತ್ತಿದ್ದರೆ..."

"ಹೌದು, ಅದೂ ಬೇಕಲ್ಲವೆ?"

"ಅಹ್, ನೋಡಿ, ತನ್ನ ನೌಕರರ ಬಗ್ಗೆ ಬರಿಯ ಸಹಾನುಭೂತಿ ತೋರಿಸಿಯೇ ಕೈಕಟ್ಟಿ ಕುಳಿತಿರುವ ಸರಕಾರ ಬೇರೆ ಯಾವುದಕ್ಕೂ ಆದರ್ಶವೇನು ಮಾಡೀತು? ಕೈಲಿದ್ದ ಹೊಣೆಯನ್ನು ಅನಾಥರಿಗೆ ಕೊಡುವ ಸಂಸ್ಥೆಯ ಬೊಕ್ಕಸ ಮಾಡೋಕೆ ಹೊರಟನಂತೆ..."

"ನಾನು ಪುಸ್ತಕ ತಿದ್ದದಿದ್ದೇನೇನು ನಿನ್ನ ಭಾಷೆ ಭ್ರಷ್ಟ ಆಗಿ ಬಿಟ್ಟಿಯಲ್ಲಾ...'

"ಅಯ್ಯೋ, ನೀವ್ಯಾಕೆ ತಪ್ಪು ತಿಳ್ಕೋತೀರಿ? ನಾನೇನೂ ನಿಮ್ಮ ವಿಷ್ಯ ಎತ್ತಿಲ್ಲ.'

'ಸಾಕು ಕಣೇ ...ಮುಖ್ಯ ನಾಲ್ಕು ಬಾರ್ಸ್ಲೋ ಮತ್ತೆ ನೋಡಾಯ್ತೋ ಆ ನ್ನೋ ಪಾಶ್ಚಾತ್ಯ ಸಂಸ್ಕೃತಿ ನನ್ಗೆ ಸರಿಕಾಣೋಲ್ಲ..."

"ಆಯ್ತು...... ಸುಂಸುಮ್ನೆ ಏನೇನೋ ಅನ್ಬೇಡಿ. ನಿಮ್ಮೊಡನೆ ಬಾಳೋಕೆ ನಾ ತುಂಬ ಪುಣ್ಯ ಮಾಡಿದ್ದೀನಿ. ಆದ್ರೆ ಇಲ್ಲ...'

"ಅದು ಸರಿಯ್ಯೇ. ಇಲ್ವಾದ್ರೆ ಈಯೆಲ್ಲಾ ಸುಖ ಎಲ್ಲಿಂದ ಬರಬೇಕು ಅನ್ನು. ಏನೇ, ದೇವ್ರಿಗೆ ನನ್ಮೇಲೆ ದಯವಿದ್ದೇ ಇದೆ. ನಾವೂ ಇದ್ದೀವೆ.... ಸಾಲ ಸೋಲ ಇಲ್ಲದೆ.... ಇಲ್ವಾದ್ರೆ ಎನ್‌ಜಿವೋಗಳಿಗಿಂತ್ಲೂ ನಮ್ದು ಕಡೆ ಗೋಳು..."

'ಅಲ್ರಿ, ನನಗೊಂದು ವಿಚಾರ ಹೊಳೆಯುತ್ತೆ....'

'ಏನನು?'

'ನೋಡಿ, ಸರಕಾರ ಕಚೇರಿ ನೌಕರರ ಗ್ಳಾರರ ಸ್ಥಾನದ ಕೈ ಚಾಚೋದೂ ಸಾಧ್ಯ, ತಮ್ಮ ಕೈ ಬೆಚ್ಚಗೆ ಮಾಡಿಕೊಳ್ಳೋದೂ ಸಾಧ್ಯ. ಆದ್ರೆ ಪಾಪ್ಪ ಮುಂದಿನ ಭವ್ಯ ಜನಾಂಗದ ರೂಪಕರಾದ ಅಧ್ಯಾಪಕರು ಏನು ಮಾಡ್ಬೇಕು?'

"ಅದೂ ಹೌದು, ಅವ್ರ ಆದಾಯ ಎನ್‌ಜಿವೋಗಳಿಗಿಂತ ಹೆಚ್ಚೇನೂ ಇಲ್ಲಾನು. ಮತ್ತೆ ದಾನ ಧರ್ಮಗಳು ಕಾಡುವವ್ರ ಕಾಟ ಬೇರೆ. ಮೊನ್ನೆ ಒಬ್ರು ಹೇಳ್ತಿದ್ರು, ಮೊಸ್ರು ಕುಡ್ಯೇ ದಿನ ಹದಿನೈದು ರೂಪಾಯಿಗ ಚಕ್ರ ಬಂತಂತೆ—ಅದೂ ಕಡಗಿ ಕೊತ್ಕೊಂಡು ಇನ್ನು ಆರು ದಿವ್ಸ ಅಂಬ್ಲಿ ನೀರೇ ಗತಿ ಅಂನ್ತಾರೆ ... ..."

"ನೋಡಿ, ಸಮಾಜ ಅವ್ರನ್ನ ಯಾವ ದೃಷ್ಟಿಯಲ್ಲಿ ನೋಡುತ್ತೆ ನೋಡಿ....ಅವ್ರ ಬಗ್ಗೆ ಸರಕಾರ ಉದ್ದುದ್ದ ಲೆಕ್ಚರ್ರು ಬಿಡ್ತದೆ-ಮುಗೀತು. ಕೊಡೋ ಮಾರು ಕಾಸನ್ನೂ ಸರಿಯಾಗಿ ಕೊಡೋಲ್ಲ. ಮತ್ತೆ ಇಂತಹ ನೀತಿ ಮುಂದುವರಿದ್ರೆ ನಮ್ಮ ಜನಾಂಗ...'

"ಈದುರವಸ್ಥೇಲಿ ಮಕ್ಕನ್ನ ಬೆಳೆಸೋ ಕೆಲಸಂಗ ಮನಸ್ಸಿಲ್ಲಾಂತ...."

"ಅಯ್ಯೋ, ಎಂಥ ಅಬದ್ಧ ಆಡ್ತೀರಿ? ನನಗೇನು ಅಸಯಿಲ್ವೇ..."

'ಇಲ್ಲಾಂತ ಯಾರು ಅನ್ನಾರೇ ತುಂಬ ಇದೆ. ಆದ್ರೇನು ಮಾಡೋದು? ಪಡೆದಷ್ಟಲ್ಲದೆ ಬರುವುದೆ?

"ಹಣ್ಣಿಂ" ನೋಡಿ, ಒಂದು ಮಾತು ಹೇಳ್ತೀನಿ ನಿಮ್ಮ ಸರಕಾರ ಶಿಕ್ಷಕರಿಗೆ ಸಾಕ್ಷರ ಎನ್ನದೆ ಇದ್ರೆ, ನಾವು ಕಂಡಿತಕ್ಕೂ ಕೆಟ್ಟೇ ಹೋಗ್ತೀವೆ. ಮತ್ತೆ ನೌಕರರ ಬಗ್ಗೆ ಕ್ರಮ ಕೈಕೊಳ್ಳದೆ ಹೋದ್ರೆ ಸರಕಾರ ಮುಗ್ಗರಿಸುತ್ತೆ. ಇದನ್ನು ಎಷ್ಟು ಬೇಗ ಸರಕಾರ ತಿಳಿದು ಕೊಳ್ಳುತ್ತೋ ಅಷ್ಟು ಕ್ಷೇಮ. ಮತ್ತೊಂದು ಸಂಗತಿ ಗೊತ್ತಾ ಸರ್ಕಾರದ್ದು,

'ಏನು?'

'ನೋಡಿ, ಮೊನ್ನೆ ಎಲ್ಲಾ ಪೇಪ್ರುತಿದ್ದೋಕೆ ಹೋದ್ರಲ್ಲಾ....ಬೆಂಗ್ಳೂರಿಗೆ, ದಾವಾದಕ್ಕೆ ಅಂತ....'

'ಹ್ಹೂಂ.... ಹೌದು....'

'ಅಲ್ಲಿ ನೋಡಿ ಬೆಡ್ಡೊಂದಕ್ಕೆ ಎರಡು ರೂಪಾಯಿ, ಊಟವೊಂದಕ್ಕೆ ಒಂದೂವರೆ ರೂಪಾಯಿ ಕಾಫಿಯೊಂದಕ್ಕ ಇಪ್ಪತ್ತೈದು ಪೈಸೆ ತೆತ್ತು ಎರಡು ರೂಪಾಯಿ ಡಿ.ಎ. ತಕ್ಕೊಂಡು ಬಂದ್ರಂತೆ—ಹೀಗೆಲ್ಲಾ ಮಾಡಿದ್ರೆ ಹೇಗೆ? ಮಂತ್ರಿ ಅಧಿಕಾರಿಗಳಿಗೆ ಕೊಟ್ಟ್ರೆ ಚಿಂತೆ ಇರೋಲ್ಲ.

"ಡಿನ್ನರ್, ಒನರ್ ಪಾರ್ಟಿ ಸಿಗುತ್ತ ಅಲ್ಲಾ,....

'ಅಂಥ ಮಾತ್ರಕ್ಕೆ ಈ ಬಡ ಮೇಷ್ಟ್ರಿಗೆ ಯಾರು ಪುಕ್ಕಟೆ ಜಾಗ ಕೊಡ್ತಾರೆ, ಯಾರು ಬಿಟ್ಟಿ ಊಟ—ಕಾಫಿ ಹಾಕ್ತಾರೆ?..'

'ಅದೆಲ್ಲಾ ರಾಮಾಯಣ ಬೇಡ್ವೇ. ಅದಕ್ಕೆ ನಿನ್ನನ್ನ ಇಲೆಕ್ಷನ್ನಿಗೆ ನಿಂತುಬಿಡು ಅಂದದ್ದು...,

'ನೋಡೋಣ....ಈ ಇಲೆಕ್ಷನ್ನಿನ ಪರ್ವದಲ್ಲಿ ಅಧಿಕಾರದ ರಕ್ಷಕರು ಏನೇನು ಚಪ್ಪಿಟ್ಟಾರೆ ಇಸ್ತಾರೇಂತ....'

'ನಮ್ಮ ಡಬ್ಬಿ ಅಗಿಂದಾನೇ ಖಾಲ್ಸಾದೆಯಲ್ಲಾ...'

"ಖಾಲಿ ಹಾಗಾದ್ರೆ, ನೀರು ತುಂಬಿಸ್ಲಿ ನಿ...'

'ಹ್ಹೂಂ....'

—ಗೋಲಾ,

"ಕುಂದಾಪುರ ಮುನ್ಸಿಫ್ಫ್ ಕೋರ್ಟಿನಲ್ಲಿ.

O S. 198/66

ಶಿವ ಬಟ್ಟ —ವಾದಿ

ರಾಮಕೃಷ್ಣ ಮೇಟ್ಟಿ ಸಹಾ

—ಪ್ರತಿವಾದಿಯ.

ಸದ್ರಿ ವಾದಿ ಕಡೆಯಿಂದ ಈ ಮೂಲ್ಕ ಜಾಹೀರ ನಾಡಿಕೊಳ್ಳುವದೇನೆಂದ್ರೆ —

ಆನಂದ ಮೇಟ್ಟಿ, ೩ ಚಂದ್ರಶೇಖರ ಮೇಟ್ಟಿ — ರಾಮಕೃಷ್ಣ ಮೇಟ್ಟರ ಮಕ್ಕಳ ಕುಂದಾಪುರ ತಾಲ್ಲೂಕು ಹೆರಂಜಾಲು ಗ್ರಾಮದಲ್ಲಿರುವವರು—

ಪ್ರತಿವಾದಿಗೆ ೧ನೇ ಪ್ರತಿವಾದಿಯು ಬರೆಕೊಟ್ಟ ಡಿಮಾಂಡ್ ನೋಟಿನ ಅಸಲು ಬಡ್ಡಿ ೬೮೬— ೮೦ಕ್ಕೆ ವಾದಿಸಿದ ದಾವೆಯು ತಾ. ೬—೧೦—೬೬ಕ್ಕೆ ತಪ್ಪಿಗೆ ಇಟ್ಟಿದೆ ಆ ಕುರಿತು ನಿಮ್ಮ ದೇನಾದ್ರು ಉದಾಹರಣೆ ಇದ್ರೆ ಸದ್ರಿ ದಿವಸ ಸ್ವತಹ ವಕೀಲರ ದ್ವಾರಾ ಹಾಜರಾಗಿ ಜಾಹಿರಮಾಡಿಕೊಳ್ಳತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮ ಗೈರ ಹಾಜರಿಯಲ್ಲಿ ಏಕ ಪಕ್ಷವಾಗಿ ತೀರ್ಮಾನಿಸಲ್ಪಡುವುದೆಂಬ ಸಂಗತಿ ವಾದಿ ಕಡೆಯಿಂದ ಈ ಮೂಲ್ಕ ತಿಳಿಸಿ ಸಲ್ಪಡಿದ.

M M. Hebbar
Advocate for Plff.
Kundapur, Date 14—9—66.

ಸುಸ್ಥಿರವಾದ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್

ವ್ಯವಹಾರಗಳಿಗೆ ತನ್ನ 62 ಶಾಖೆಗಳಿಂದ ಹಬ್ಬಿರುವ

"ವಿಜಯ ಬ್ಯಾಂಕಿ"ನಲ್ಲಿ ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 8% ವರೆಗಿನ ಬಡ್ಡಿ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4 ½% ಬಡ್ಡಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ಹೆ. ಆಫೀಸ್— "ವಿಜಯ ಬ್ಯಾಂಕ್ ಬಿಲ್ಡಿಂಗ್", ಲೈಟ್ ಹೌಸ್ ಹಿಲ್ ರೋಡ್,

ಮಂಗಳೂರು—3

ಸಾಹಿತ್ಯ ಸಂಸದ

ಕನ್ನಡ ಕಾದಂಬರಿಗಳು

ಬರೆದವರು
ಶ್ರೀ ಸ. ನಾರಾಯಣ, ಚಿತ್ರದುರ್ಗ.

ಸುಮಾರು ಐದು ದಶಕಗಳಿಂದ ಕನ್ನಡ ಸಾಹಿತ್ಯದಲ್ಲಿ ಹಲವಾರು ಪ್ರಯೋಗಗಳು ನಡೆದಿವೆ. ಭಾಷೆಯ ಬೆಳವಣಿಗೆಯಲ್ಲಿ ಹಲವಾರು ಮಾರ್ಪಾಡುಗಳಾಗಿವೆ. ಕನ್ನಡ ಸಾಹಿತ್ಯ ನಿರೀಕ್ಷಿಸಿದ ಮಟ್ಟಿಗೆ ಅಲ್ಲವಾದರೂ, ಉತ್ತಮ ರೀತಿಯಲ್ಲಿಯೇ ಪ್ರಗತಿಯ ಹಾದಿಯಲ್ಲಿ ನಡೆದಿದೆ. ಕನ್ನಡ ಭಾಷೆ ಮತ್ತು ಸಾಹಿತ್ಯದ ಬೆಳವಣಿಗೆಗೆ–ಯಶಸ್ಸಿಗೆ ಹಲವಾರು ವರ್ಷಗಳ ಸತತ ಶ್ರಮ, ಸಾಧನೆ, ಶ್ರದ್ಧೆಗಳು ಸೇರಿವೆ. ಸೋದರ ಭಾಷಾ ಸಾಹಿತ್ಯದ ಮಟ್ಟಕ್ಕೆ ಕನ್ನಡ ಸಾಹಿತ್ಯವನ್ನು ನಿಲ್ಲಿಸಿ ತುಲನೆ ಮಾಡಿದಾಗ ಕನ್ನಡ ಸಾಹಿತ್ಯದ ತೂಕ ಸಂಖ್ಯೆಯ ದೃಷ್ಟಿಯಿಂದ ಸ್ವಲ್ಪ ಕಡಿಮೆ ಇರಬಹುದು. ಆದರೆ ಮೌಲ್ಯ, ಗುಣದ ದೃಷ್ಟಿಯಿಂದ ಕಳಪೆಯಲ್ಲ.

ಕಥೆ, ಕಾದಂಬರಿ, ಲೇಖನ, ಪ್ರಬಂಧ, ಹರಟೆ, ನಾಟಕ ಕವನ ಮೊದಲಾದ ಹಲವಾರು ಸಾಹಿತ್ಯದ ಪ್ರಾಕಾರಗಳು ಬೆಳಕಿಗೆ ಬಂದಿವೆ. ಜನಪ್ರಿಯವಾಗಿವೆ. ಆಯಾ ಕ್ಷೇತ್ರದಲ್ಲಿ ಪೂರ್ಣ ಅನುಭವ, ಪಡೆದ ಶ್ರದ್ಧಾವಂತ ಸಾಹಸಿ ಬರಹಗಾರರು ತಮ್ಮ ಬರಹಗಳಿಂದ ಕನ್ನಡ ಸಾಹಿತ್ಯದ ಬೆಲೆಯನ್ನು ಹೆಚ್ಚಿಸಿದ್ದಾರೆ. ಕೇವಲ ಕೆಲವೇ ದಶಕಗಳಲ್ಲಿ ಕನ್ನಡ ಸಾಹಿತ್ಯದಲ್ಲಿ ಮುಖ್ಯವಾಗಿ ಕನ್ನಡ ಕಾದಂಬರಿಗಳು—ಕನ್ನಡದ ಚಿಕ್ಕ ಕಥೆಗಳು ಗಳಿಸಿರುವ ಜನಪ್ರಿಯತೆ, ಯಶಸ್ಸನ್ನು ಗಮನಿಸಿದಾಗ ಹೆಮ್ಮೆ ಎನಿಸದಿರದು.

ಪ್ರಸ್ತುತ ಲೇಖನದಲ್ಲಿ ಕನ್ನಡದಲ್ಲಿ ಆರಂಭದ ದಿನಗಳಿಂದ ಈ ವರೆವಿಗೂ ಬೆಳೆಬಂದ ಕನ್ನಡ ಕಾದಂಬರಿಗಳ ಬೆಳವಣಿಗೆ ಮತ್ತು ಪ್ರಗತಿಯನ್ನು ಸೂಕ್ಷ್ಮವಾಗಿ ಪ್ರಸ್ತಾಪಿಸುತ್ತೇನೆ. ಕನ್ನಡ ನಾಡಿನಲ್ಲಿಯ ಪ್ರಖ್ಯಾತ ಕಾದಂಬರಿಕಾರರು ಕೆಲವರು. ಬೆರಳಲ್ಲಿ ಎಣಿಸುವಷ್ಟು ಮಂದಿ. ಅವರ ಪ್ರಯತ್ನ ಮತ್ತು ಪರಿಚಯ ಇಲ್ಲಿ ಅಪ್ರಕೃತವಲ್ಲ. ಅಗತ್ಯ.

೧೯೩೦ರ ವರೆಗೆ ಕನ್ನಡ ನಾಡಿನಲ್ಲಿ ಕಾದಂಬರಿಗಳ ಬೆಳವಣಿಗೆ ಕುಂಠಿತವಾಗಿತ್ತು. ಕರ್ನಾಟಕಕ್ಕೆ ಮೊಟ್ಟಮೊದಲಿಗೆ ಕಾದಂಬರಿಗಳ ಪರಿಚಯ ಮಾಡಿಸಿಕೊಟ್ಟವರು ಮೈಸೂರಿನಲ್ಲಿ ಬಿ. ವೆಂಕಟಾಚಾರ್ಯರು. ಉತ್ತರ ಕರ್ನಾಟಕದಲ್ಲಿ ಗಳಗನಾಥರು. ಬಿ. ವೆಂಕಟಾಚಾರ್ಯರು ಬಂಗಾಳಿ ಕಾದಂಬರಿಗಳನ್ನೂ, ಗಳಗನಾಥರು ಮರಾಠಿ ಕಾದಂಬರಿಗಳನ್ನೂ ಕನ್ನಡಕ್ಕೆ ಅನುವಾದಿಸಿ ಉಪಕಾರ ಮಾಡಿದ್ದಾರೆ. ಈ ಬರಹಗಾರರು ಮೂಲ ಕಾದಂಬರಿಗಳ ಶೈಲಿ, ಸಂಪ್ರದಾಯ, ಸೌಂದರ್ಯಕ್ಕೆ ಭಂಗ ತಾರದೆ ಭಾಷಾಂತರಿಸಿರುವುದು ಮತ್ತೊಂದು ವೈಶಿಷ್ಟ್ಯ. ಅನಂತರ ಗಳಗನಾಥರು ವಿಜಯನಗರ ಸಾಮ್ರಾಜ್ಯ ಸ್ಥಾಪಕರಾದ ವಿದ್ಯಾರಣ್ಯರ ಜೀವನ ಕಥೆಯನ್ನು ಆಧಾರವಾಗಿಟ್ಟುಕೊಂಡು ಬರೆದ 'ಮಾಧವ ಕರುಣಾ ವಿಲಾಸ' ಉಜ್ವಲ ಐತಿಹಾಸಿಕ ಕಾದಂಬರಿ, ಮೈಸೂರು ಜೀವನದ ವಾಸ್ತವಿಕ ಚಿತ್ರಣವಿರುವ ಎಂ. ಎಸ್. ಪುಟ್ಟಣ್ಣನವರ 'ಮುಸುಕು ತೆಗೆಯೇ ಮಾಯಾಂಗನೆ" ಮತ್ತು 'ಮಾಡಿದ್ದುಣ್ಣೋ ಮಹಾರಾಯ' ಅಲ್ಲದೆ ಉತ್ತರ ಕರ್ನಾಟಕದ ಜೀವನವನ್ನು ಪರಿಚಯ ಮಾಡಿಕೊಡುವ ಕೆರೂರ ವಾಸುದೇವಾಚಾರ್ಯರ "ಇಂದಿರೆ" ಮೊದಲಾದ ಗ್ರಂಥಗಳು ಕನ್ನಡದಲ್ಲಿ ಪ್ರಕಟವಾದ ಮೊದಲ ಸಾಮಾಜಿಕ ಕಾದಂಬರಿಗಳು. ಅವರೆವಿಗೂ ಐತಿಹಾಸಿಕ ಅಥವಾ ಸ್ವಾತಂತ್ರ್ಯ ಹೋರಾಟದ ಕಥಾವಸ್ತುವಿನ ಆಧಾರದ ಮೇಲೆ ರೂಪುಗೊಳ್ಳುತ್ತಿದ್ದ ಕಾದಂಬರಿಗಳು ಕ್ರಮೇಣ ಸಾಮಾಜಿಕ ಜೀವನದ ವಿವಿಧ ಮುಖಗಳನ್ನು ಪರಿಚಯ ಮಾಡಿಕೊಡಲಾರಂಭಿಸಿದವು.

ಹಲವಾರು ಪತ್ರಿಕೆಗಳೂ ಪ್ರಕಾಶಕರು ಸಾಮಾಜಿಕ ಕಾದಂಬರಿಗಳಿಗೆ ಅವಕಾಶ ನೀಡಿದರು, ಸ್ವಾಗತಿಸಿದರು. ಸಾಮಾಜಿಕ ಕಥಾವಸ್ತುವಿನ ಹಿನ್ನಲೆಯಲ್ಲಿ ರೂಪುಗೊಂಡ ಕಾದಂಬರಿಗಳ ಕಡೆಗೆ ಓದುಗರ ದೃಷ್ಟಿ ಹರಿದು ಸಾಮಾಜಿಕ ಕಾದಂಬರಿಗಳು ಜನಪ್ರಿಯವಾದುವು. ಓದುಗರಿಗೆ ಪ್ರಿಯವಾದವು. ಕನ್ನಡ ಸಾಹಿತ್ಯದಲ್ಲಿ ಕಾದಂಬರಿಗಳು ಜನ್ಮ ತಾಳಿದ ದಿನದಿಂದ ಇಂದಿನ ವರೆಗೂ ಅನೇಕ ಪ್ರಯೋಗಗಳು ಕಾದಂಬರಿ ಕ್ಷೇತ್ರದಲ್ಲಿ ನಡೆದಿವೆ. ಕಾದಂಬರಿ ಜನಪ್ರಿಯವಾಗಲು ಅವುಗಳ ಕಥಾವಸ್ತು, ಶೈಲಿ, ನಿರೂಪಣಾ ಸಾಮರ್ಥ್ಯ, ವಿಶಾಲ ವ್ಯಾಪಕತೆ ಮುಖ್ಯ ಕಾರಣ. ಇಂದಿಗೂ ಓದುಗರ ಗಮನ–ಅಭಿಮಾನ ಒಲವು, ಕಾದಂಬರಿಗಳ ಕಡೆಗೆ. ಕಾದಂಬರಿಗಳಲ್ಲಿ ಸಾಮಾಜಿಕ ಕಾದಂಬರಿಗಳ ಕಡೆಗೆ ಓದುಗರ ಗಮನ ಇರುವಷ್ಟು ಮಿಕ್ಕ ನಾಟಕ, ಪ್ರಬಂಧ, ಕವನ, ಚಿಕ್ಕ ಕಥೆಗಳ ಕಡೆಗಿಲ್ಲ. ರಾಷ್ಟ್ರಕವಿ ಕು.ವೆಂ.ಪು. ರವರು ಹೇಳುವ ಮಾತಿನಲ್ಲಿಯೇ ಹೇಳುವುದಾದರೆ "ಕಾದಂಬರಿ ಕರತಾಲ ರಂಗಭೂಮಿ, ಅಂಗ್ಲ ಮೇಲಣ ನಾಟಕ ಶಾಲೆ. ಆದ್ದರಿಂದ ಕಾದಂಬರಿ ಓದುವ ವಾಚಕರು ನಾಟಕವನ್ನು ನೋಡಿದ ಪ್ರೇಕ್ಷಕರೂ ಆಗಬೇಕಾಗುತ್ತದೆ. ವಾಚಕರು ಪ್ರೇಕ್ಷಕರಾಗುವುದು ಮಾತ್ರವೇ ಅಲ್ಲ, ನಾಟಕವನ್ನಾಡುವ ನಟರೂ ಆಗಬೇಕಾಗುತ್ತದೆ." ನಾಡಿನ ಹಿರಿಯ ಬರಹಗಾರರಲ್ಲೊಬ್ಬರಾದ ಪ್ರೊ. ಎಂ. ವಿ. ಸೀತಾರಾಮಯ್ಯನವರು ಸಾಹಿತ್ಯದ ಬಗ್ಗೆ ವಿವೇಚಿಸುತ್ತಾ "ವಿಲಾಸವತಿಯ ಕೊರಳಿನ ಪುಷ್ಪ ಮಾಲಿಕೆಯೇ ಅಲ್ಲ ಸಾಹಿತ್ಯ, ಮಾನವ ಜೀವನದ ಪುನರ್ನಿರ್ಮಾಣ ಕಾರ್ಯದಲ್ಲಿ ಬದ್ಧಕಂಕಣವಾಗಿರುವ ವೀರನ ಕೈಯ ಖಡ್ಗವೂ ಹೌದು" ಎಂಬ ಮಾತು ಕಾದಂಬರಿಗಳಿಗೆ ವಿಶೇಷವಾಗಿ ಅನ್ವಯಿಸುತ್ತದೆ.

ವಿಜ್ಞಾನದ ದೃಷ್ಟಿಯಿಂದ ವಿಶ್ವ ಅಣುಯುಗ, ಸ್ಪುಟ್ನಿಕ್, ರಾಕೆಟ್ ಯುಗ ಇರಬಹುದು. ಸಾಹಿತ್ಯದ ದೃಷ್ಟಿಯಲ್ಲಿ ಕಾದಂಬರಿ ಯುಗ. ಇಂದು ಕಾದಂಬರಿಗಳಿಗೆ ವಿಶೇಷ ಮನ್ನಣೆಇದೆ. ಇಂದು ಕಾದಂಬರಿಗಳನ್ನು ಓದುವವರ, ಬರೆಯುವವರ, ಪ್ರಕಟಿಸುವವರ ಸಂಖ್ಯೆ ಅಧಿಕ. ಕಾದಂಬರಿ ರಚನೆ ಎಂದರೆ ಆವಕ್ಕೆ ಕುದುರೆಯ ಮೇಲೆ ಕುಳಿತು ವಿಶಾಲ ಬಯಲಿನಲ್ಲಿ ಸವಾರಿ ಮಾಡಿದಂತೆ. ಚಿಕ್ಕ ಕಥೆಯ ರಚನೆ ಸರ್ಕಸಿನಲ್ಲಿ ಒಂದೇ ತಂತಿಯ ಮೇಲೆ ನಡೆದಂತೆ

ಚಿಕ್ಕ ಕಥೆಯ ರಚನೆಗೆ ಇರುವಂತೆಯೇ ಕಾದಂಬರಿ ರಚನೆಗೆ ವಿಶಿಷ್ಟವಾದ ಕೆಲವು ನಿಯಮ—ನಿರ್ಬಂಧನೆಗಳಿವೆ. ಕಾದಂಬರಿ ರಚನೆಗೆ ಅನುಭವ, ಅಭ್ಯಾಸ, ಶೈಲಿ, ವಿವೇಚನೆ ಎಲ್ಲವೂ ಬೇಕು. ಸತ್ಯವನ್ನು ಪ್ರತಿಪಾದಿಸುವ ಸಾಮರ್ಥ್ಯ, ಸಮಾಜದ ಹತ್ತು ಸಮಸ್ಯೆಗಳನ್ನು ಸೃಷ್ಟಿಸಿ, ಬಿಚ್ಚಿ ತೋರಿಸುವ ಶಕ್ತಿಯೂ ಬೇಕು. ಇತ್ತೀಚಿನ ಕೆಲವು ಬರಹಗಾರರು ಹೆಚ್ಚು ಪುಟಗಳ ಕಥೆಯೇ ಕಾದಂಬರಿ ಎಂಬ ಭಾವನೆಯನ್ನು ಬೆಳೆಸಿಕೊಂಡಿದ್ದಾರೆ. ಕಾದಂಬರಿಯ ತಂತ್ರ, ಸೂತ್ರಗಳನ್ನು ಅಭ್ಯಸಿಸಲು ದೇಶ–ವಿದೇಶೀಯ ಹೆಸರಾಂತ ಕಾದಂಬರಿಗಳನ್ನು, ಸಾಹಿತ್ಯ ಕೃತಿಗಳನ್ನು ಅಭ್ಯಸಿಸುವುದು ಅಗತ್ಯ.

ಕಾದಂಬರಿ ಕಥಾವಸ್ತು ಆರುನೂರು ಪುಟಗಳ ವರೆಗೆ ವಿಸ್ತರಿಸಬಹುದು, ಅಥವಾ ನೂರು ಪುಟಗಳಲ್ಲಿಯೇ ಮುಕ್ತಾಯಗೊಂಡಿರಬಹುದು. ಆದರೆ ಪುಟಗಳ ಸಂಖ್ಯೆಯಿಂದಲೇ ಕಾದಂಬರಿಯ ಗುಣವನ್ನು, ಶೈಲಿ-ಶಕ್ತಿಗಳನ್ನು ಅಳೆಯಲು ಸಾಧ್ಯವಿಲ್ಲ. ಕು. ವೆಂ. ಪು.ರವರ "ಕಾನೂರು ಸುಬ್ಬಮ್ಮ ಹೆಗ್ಗಡತಿ' ಕನ್ನಡದಲ್ಲಿ ಪ್ರಕಟವಾಗಿರುವ ಬೃಹತ್ ಕಾದಂಬರಿ ಎಂದು ಹೇಳಬಹುದು. ಈ ಕಾದಂಬರಿಯಲ್ಲಿ ಮಲೆನಾಡ ಜನ ಜೀವನವನ್ನು ಕಣ್ಣ ಮುಂದೆ ನಿಲ್ಲಿಸಿದ್ದಾರೆ, ಕಾದಂಬರಿಕಾರರು. ಕನ್ನಡದಲ್ಲಿ ನೂರು ಪುಟಗಳ ಕಾದಂಬರಿಗಳು ಇವೆ. ನೂರಾರು ಪುಟಗಳ ಕಾದಂಬರಿಗಳು ಇವೆ. ಅಂದ ಮಾತ್ರಕ್ಕೆ ಕಾದಂಬರಿ ರಚನೆಗೆ ಶೈಲಿ ತಂತ್ರ ಸೂತ್ರಗಳಿಲ್ಲವೆಂದು ಹೇಳುವಂತಿಲ್ಲ.

ಇಂದು ಪ್ರಖ್ಯಾತ ಕಾದಂಬರಿಕಾರರೆಂದು ಕೀರ್ತಿ ಗಳಿಸಿರುವ ಎಲ್ಲ ಕಾದಂಬರಿಕಾರರೂ ಸಾಹಿತ್ಯ ಕ್ಷೇತ್ರದ ಇತರ ಪ್ರಾಕಾರಗಳ ಪರಿಚಯವುಳ್ಳವರು. ಶ್ರದ್ಧೆ ಸಾಧನಗಳಿಂದ ಶೈಲಿಯನ್ನು ಗಳಿಸಿಕೊಂಡವರು. ಅನುಭವವಿಲ್ಲದ ಕಾದಂಬರಿ ರಚನೆಯ ಸೂತ್ರವರಿಯದ, ಶೈಲಿಯ ಬಲವಿಲ್ಲದ ಅನೇಕ ಜನ ತಾವು ಕಾದಂಬರಿಗಳನ್ನು ಬರೆದು ಬೆಳಕಿಗೆ ತಂದಿದ್ದಾರೆ. ಅವರ ಕಾದಂಬರಿಗಳು ಪ್ರಕಟವಾಗಿವೆ! ಅದೃಷ್ಟಬಲ!! ಅವುಗಳು ಕಾದಂಬರಿಯೇ ಎಂಬ ಸಮಸ್ಯೆ ಓದುಗರನ್ನು ಮೊದಲ ಪುಟದಲ್ಲಿಯೇ ಕಾಡಲಾರಂಭಿಸುತ್ತದೆ. ಅನುಭವವಿಲ್ಲದೆ, ಪ್ರತಿಭೆ ಸಂಪಾದಿಸದೆ ಕಾದಂಬರಿ ಬರೆದು ಕೀರ್ತಿ ಗಳಿಸುತ್ತೇನೆ ಎಂಬ ಮಾತು ಭ್ರಾಂತಿ. ಸತತಾಭ್ಯಾಸಿಸಿ ಸಾಧನೆಗಳಿಂದ ಆ ಕ್ಷೇತ್ರದಲ್ಲಿ ಮುಂದುವರಿಯುವುದು ಸೂಕ್ತ.

ಕೇವಲ ಲೇಖಕರು ಮಾತ್ರವೇ ಅಲ್ಲದೆ ಅನೇಕ ಲೇಖಕಿಯರೂ ಕನ್ನಡದಲ್ಲಿ ಕಾದಂಬರಿಗಳನ್ನು ಬರೆದು ಕೀರ್ತಿ ಗಳಿಸಿದ್ದಾರೆ. ಕನ್ನಡ ಕಾದಂಬರಿಗಳ ಕೀರ್ತಿಯನ್ನು ಹೆಚ್ಚಿಸಿದ್ದಾರೆ. ಕಾದಂಬರಿಗಳ

(ಎಂಟನೇ ಪುಟ ನೋಡಿರಿ)

ಸಿಂಡಿಕೇಟ್ ಬ್ಯಾಂಕ್

ಇವರ

ಕೋಟೇಕಾರ್ ಶಾಖೆಯು

(ಮಂಗಳೂರು ತಾಲೂಕು)

ಇದೇ ತಾ. 16—9—1966ರಂದು ತೆರೆಯಲ್ಪಟ್ಟಿರುವುದೆಂದು ತಿಳಿಸಲು ಹರ್ಷ ಪಡುತ್ತೇವೆ.

ಬ್ಯಾಂಕು ಸದ್ಯವೇ ತೆರೆಯಲಿರುವ ಶಾಖೆಗಳು :

ಯಾಡಿಕಿ (ಆಂಧ್ರ ಪ್ರದೇಶ)
ನವದೆಹಲಿ (ಕೊನಟ್ ಸರ್ಕಸ್)
ಪೂನಾ ....

ವ್ಯಾಪಕ ಪ್ರಮಾಣದ ಪರಿಪೂರ್ಣ ಆರ್ಥಿಕ ಸೇವೆಗೆ

FAITHFUL SB FRIENDLY

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಮಣಿಪಾಲ, ಮೈಸೂರು ರಾಜ್ಯ.

ಸಾಧನ ಸಂಪತ್ತು: ರೂ. 80 ಕೋಟಿ.

ಶಾಖೆಗಳು 210ಕ್ಕೂ ಮಿಕ್ಕಿ.

ದಕ್ಷಿಣ ಕ

ಸಮಸ್ಯಾ ಪರಿಹಾರ:

ಬರೆದವರ್ಟಿ.

ಪ್ರಾಕೃತಿಕ ಚೆಲುವಿನ ಪರಿಗಳನ್ನು ಪಡೆದ ದಕ್ಷಿಣ ಕನ್ನಡ ಜಿಲ್ಲೆಯು ಕರ್ನಾಟಕದ, ಯೂಕೆ ಭಾರತದ ಒಂದು ಸುದೃಢ ಅಂಗ. ಇಲ್ಲಿಯ ಜನರು ಪ್ರಾಮಾಣಿಕರೂ, ಕ್ರಿಯಾಶೀಲರೂ, ನಿಷ್ಠಾವಂತರೂ ಆಗಿದ್ದಾರೆ. ಸರಿಯಾದ ಅವಕಾಶ ದೊರಿತರೆ ನಮ್ಮ ಜಿಲ್ಲೆಯ ನಿಮ್ನ ವರ್ಗದವರಾಧಿಯಾಗಿ ಎಲ್ಲಾ ವರ್ಗದ ಯುವಕರು ಜೀವನದಲ್ಲಿ ಯಶಸ್ವಿಯಾಗುತ್ತಿದ್ದಾರೆಂಬುದು ನನಗೆ ಸಂತೋಷ ತಂದಿದೆ. ಉದ್ಯೋಗಕ್ಕಾಗಿ ರಾಷ್ಟ್ರದಾದ್ಯಂತ ನಮ್ಮ ಜನರು ಹೋಗುತ್ತಿರುವರಾದುದರಿಂದ ಇವರು ಸ್ವಾಭಾವಿಕವಾಗಿಯೇ ವಿಶಾಲ ಮನಸ್ಸಿನವರೂ ಆಗಿರುತ್ತಾರೆ. ದೇಶವೇ ಇವರ ಮನೆಯಾಗಿದೆ. ಹೋದಲ್ಲೆಲ್ಲ ಜನಜೀವನದಲ್ಲಿ ಹಾಸುಹೊಕ್ಕಾಗಿದ್ದು ಜಿಲ್ಲೆಗೆ ಕೀರ್ತಿಯನ್ನು ತರುತ್ತಿದ್ದಾರೆ.

ವಿದ್ಯಾವಂತ ನಿರುದ್ಯೋಗಿಗಳು

ಜಿಲ್ಲೆಯಲ್ಲೂ ಕಳೆದ ಹದಿನೈದು ವರುಷಗಳಲ್ಲಿ ಅನೇಕ ಸಮಸ್ಯೆಗಳನ್ನು—ಅದರಲ್ಲೂ ಮುಖ್ಯವಾಗಿ ಸಂಪರ್ಕ ಹಾಗೂ ಸಾರಿಗೆ ವ್ಯವಸ್ಥೆ, ಉನ್ನತ ಶಿಕ್ಷಣ ಸೌಲಭ್ಯ ವ್ಯವಸ್ಥೆಯ ಸಮಸ್ಯೆಗಳನ್ನು—ನೀಗಿಕೊಂಡಿದ್ದೇವೆ. ಆದರೆ ಪರಿಹಾರ ಕ್ರಮದಲ್ಲೂ ಕೆಲವು ದೌರ್ಬಲ್ಯಗಳು ಉದ್ಭವಿಸಿವೆ. ಉದಾಹರಣೆಗಾಗಿ, ನಮ್ಮ ವಿದ್ಯಾ ಸಂಸ್ಥೆಗಳಿಂದ ಸಾವಿರಾರು ಮಂದಿ ಯುವಕ, ಯುವತಿಯರು ವಿದ್ಯಾವಂತರಾಗುತ್ತಿದ್ದಾರೆ. ಮುಂದಿನ ಐದು ವರುಷಗಳಲ್ಲಿ ಇಂತಹ ವಿದ್ಯಾವಂತರ ಸಂಖ್ಯೆಯು ಕನಿಷ್ಟ ೩೦,೦೦೦ವಾದರೂ ಆಗಬಹುದು. ಅವರಿಗೆ ನಾವು ಉದ್ಯೋಗ ಒದಗಿಸಬೇಡವೆ? ಇದುವರೆಗೆ ಅವರಿಗೆ ಉದ್ಯೋಗ ಅವಕಾಶ ನೀಡುತ್ತಿದ್ದ ಮುಂಬಯಿ, ಮದರಾಸು, ಬೆಂಗಳೂರು ಇನ್ನು ಮುಂದೆ ಹಾಗೆಯೇ ಒದಗಿಸುವುದೆಂದು ನಂಬಲಾಗುವುದಿಲ್ಲ.

ಬಡತನದ ಬೀಡು

ಅಲ್ಲದೆ ದೀನದರಿದ್ರಾವಸ್ಥೆಯಲ್ಲಿ ಕಷ್ಟಪಡುತ್ತಿರುವ ಸಹಸ್ರಾರು ಮಂದಿ ಜಿಲ್ಲೆಯಲ್ಲಿ ಇನ್ನೂ ಇದ್ದಾರೆ. ಐದು ವರುಷಗಳ ಹಿಂದೆ ಉದಿಯಾವರದಲ್ಲಿ ನೆರೆ ಹಾವಳಿಯುಂಟಾಗಿದ್ದಾಗ ಕೊಚ್ಚಿಹೋಗಿದ್ದ ವಸತಿಗಳ ಸಮೀಕ್ಷೆಯನ್ನು ನಡೆಸಿದ್ದೆ. ನಮ್ಮ ಹಳ್ಳಿಗಳಲ್ಲಿ ಇನ್ನೂ ೨೫—೩೦ ರೂಪಾಯಿಗಳ ವೆಚ್ಚದಲ್ಲಿ ಗುಡಿಸಲು ಕಟ್ಟಿಕೊಂಡು ವಾಸಿಸುವ ಕುಟುಂಬಗಳಿವೆಯೆಂಬ ಸತ್ಯವನ್ನು ಮನಗಂಡಿದ್ದೆ. ಇಂತಹ ಸಾವಿರಾರು ಕುಟುಂಬಗಳು ನಮ್ಮ ಜಿಲ್ಲೆಯಲ್ಲಿವೆಯೆಂಬುದನ್ನು ನಮ್ಮಲ್ಲಿ ಎಷ್ಟು ಜನರು ತಿಳಿದುಕೊಂಡಿದ್ದಾರೆ? ಶತಮಾನಗಳಿಂದ ಅವರು ಈ ರೀತಿ ವಾಸಿಸುತ್ತಿದ್ದಾರೆಂಬ ಕಾರಣದಿಂದ ಇದೆಲ್ಲ ಸ್ವಾಭಾವಿಕವಾಗಿ ನಮಗೆ ಕಾಣುತ್ತಿದೆ.

ಅಳಿದ ವೃತ್ತಿಗಳು

ನಮ್ಮ ಗ್ರಾಮೀಣ ಆರ್ಥಿಕ ಸ್ಥಿತಿ ತೀರ ಶಿಥಿಲವಾಗಿದೆ. ನಮ್ಮ ಆಧುನಿಕ ಅಭಿವೃದ್ಧಿಯ ಕವಸಿನಲ್ಲಿ ಚಮ್ಮಾರ-ಕಮ್ಮಾರ, ಬಡಗಿ, ಕುಂಬಾರ ಮೊದಲಾದ ವೃತ್ತಿಗಳು, ಕೈಮಗ್ಗದ್ಯ ಉದ್ಯಮ, ಕುಟೀರ ಉದ್ಯಮ ಅಕ್ಕಿಯೇ ಮೊದಲಾದ ಹಳ್ಳಿಗಾಡಿನ ಕಸುಬುಗಳು ಹೇಳಹೆಸರಿಲ್ಲದೆ ಮಾಯವಾಗಿವೆ. ಈ ವೃತ್ತಿಯನ್ನನುಸರಿಸುತ್ತಿದ್ದ ಕುಟುಂಬಗಳು ನಿರ್ಗತಿಕವಾಗಿದ್ದು ನಿರುದ್ಯೋಗಿಗಳ ಸಾಲನ್ನು ಸೇರಿದ್ದಾರೆ. ಅವರ ಮಕ್ಕಳು ಇಂದು ವಿದ್ಯಾವಂತರಾಗಿರಬಹುದಾದರೂ ಇತರ ಮುಂದುವರಿದ ವರ್ಗದ ಮಕ್ಕಳಿಗೆ ಲಭ್ಯವಿರುವ ಪರಿಸರದ ಪ್ರಯೋಜನವಿಲ್ಲದೆ ತತ್ತರಿಸುತಿದ್ದಾರೆ.

ಪಾನ ನಿರೋಧದ ದುಷ್ಫಲ

ಪಾನ ನಿರೋಧ ಕಾರ್ಯಕ್ರಮ ಒಂದರಿಂದಲೆ ಮುರ್ತಿಯ ಕೆಲಸದಲ್ಲಿದ್ದ ಸಾವಿರಾರು ಮಂದಿ ನಿರುದ್ಯೋಗಿಗಳಾಗುವಂತಾಯಿತು. ತಾಳೆಬೆಲ್ಲ ತಯಾರಿ, ನೀರಾ ಪಾರ್ಲರ್‌ಗಳನ್ನು ಒದಗಿಸಿಕೊಟ್ಟಿರುವುದು ಈ ಉದ್ದಿಮೆಯಲ್ಲಿದ್ದವರಿಗೆ ವ್ಯಾಪಕ ಪರಿಹಾರವಾಗದು. ಈ ಸೌಲಭ್ಯಗಳನ್ನು ಉಳಿಸಿಕೊಳ್ಳಲು ವರುಷ ವರುಷ ಅವರು ನಮ್ಮ ಧುರೀಣರೆಡೆಗೆ ಯಾತ್ರೆ ಮಾಡಬೇಕಾಗಿದೆ. ಕೆಲವು ವರುಷಗಳ ಹಿಂದೆ ಎರ್ಮಾಳಿನಲ್ಲಿ ನಾನು ಮರ್ತಿಬಾರರ ಮನೆ ಮನೆಗೆ ಹೋಗಿ ಅವರ ಜೀವನ ಹೇಗಿತ್ತೆಂಬುದನ್ನು ಅಭ್ಯಾಸಿಸಿದ್ದೆ. ಅವರದು ಬಡತನದ ಬೀಡಾಗಿತ್ತು. ಇವರು ಕಳ್ಳಬಟ್ಟಿ ಇಳಿಸುತ್ತಿದ್ದಾರೆಂಬ ಅಪವಾದನೆ ಇದೆ. ಪೋಲಿಸರ ದಬ್ಬಾಳಿಕೆಯಲ್ಲಿ ದಿನ ದೂಡುತ್ತಿರುವ ಈ ವರ್ಗದವರನ್ನು ಶೋಷಿಸಿ ಕೆಲವರು ತಮ್ಮ ಉದ್ಧಾರವನ್ನು ಮಾಡಿಕೊಂಡಿರಬಹುದು. ಆದರೆ ಇವರ ಸಾಮೂಹಿಕ ದರಿದ್ರಾವಸ್ಥೆ ಹಿಂದಿನಂತೆಯೇ ಇದೆ.

ಭೂ ಶಾಸನದ ಅನಿಶ್ಚಿತತೆ

ಮೇಲಾಗಿ, ಜಿಲ್ಲೆಯ ಆಗು ಹೋಗುಗಳ ವಿವೇಚನೆಯಿಂದ ರೂಪಿಸಲ್ಪಡದ ನಮ್ಮ ಭೂ ಶಾಸನವೂ ಹಲವು ಸಮಸ್ಯೆಗಳನ್ನು ನಿರ್ಮಿಸಿದೆ. ಕಳೆದ ೧೫ ವರುಷಗಳಿಂದ ಈ ಶಾಸನದ ಅನಿಶ್ಚಿತತೆಯಿಂದಾಗಿ ನಮ್ಮ ಕೃಷಿಯು ಹಿಂತಡೆಯಲ್ಪಟ್ಟಿದೆ. ಇದು ಖಂಡಿತ. ಬೇಸಾಯದ ಮೇಲೆ ಜಿಲ್ಲೆಯ ನೂರರಲ್ಲಿ ತೊಂಬತ್ತು ಮಂದಿ ಹೊಂದಿಕೊಂಡಿದ್ದಾರೆ. ಇವರಲ್ಲಿ ಹೆಚ್ಚಿನವರು ಗದ್ದೆಯಲ್ಲಿ ದುಡಿಯುವ ಬದಲಿಗೆ ನ್ಯಾಯಾಲಯಗಳಲ್ಲಿ ಹೊಡೆದಾಡುತ್ತಿದ್ದಾರೆ. ಸಣ್ಣ ಹಿಡುವಳಿದಾರರಿಗೂ ಒಕ್ಕಲುಗಳಿಗೂ ನ್ಯಾಯ ಸಿಗುವ ರೀತಿಯಲ್ಲಿ ಭೂ ಸಮಸ್ಯೆಯನ್ನು ಬಗೆಹರಿಸಬೇಕು. ಭೂಮಾಲಕರಿಗೆ ನ್ಯಾಯಸಮ್ಮತ ಪರಿಹಾರ ಸಿಗಬೇಕಲ್ಲದೆ ಕಾನೂನಿನ ಯಾವುದೇ ತೊಡಕುಗಳಿಂದ ಅವರಿಗೆ ಅನ್ಯಾಯವಾಗಬಾರದು. ಪರಿಹಾರದ ಕ್ರಮವು ತೃಪ್ತಿಕರವಿಲ್ಲದೆ ಅನೇಕ ಭೂಮಾಲಕರು ಬಗೆಬಗೆಯ ಕಷ್ಟಕ್ಕೀಡಾಗಿದ್ದಾರೆ. ಇವರಲ್ಲಿ ಸಣ್ಣಪುಟ್ಟ ಹಿಡುವಳಿದಾರರೂ ಇದ್ದಾರೆಂಬುದನ್ನು ಮರೆಯಬಾರದು. ಹಿಡುವಳಿದಾರರಿಗೆ ನ್ಯಾಯ ದೊರಕಿಸಿ, ಅದರೊಂದಿಗೆ ಒಕ್ಕಲುಗಳಿಗೆ ಬೇಕಾದ ಸೌಲಭ್ಯಗಳನ್ನು ಒದಗಿಸಿ ಅವರಿಂದ ಅತಿ ಹೆಚ್ಚಿನ ಉತ್ಪತ್ತಿ ದೊರೆಯುವಂತೆ ಪ್ರಯತ್ನಿಸಬೇಕಲ್ಲದೆ, ಬೇಸಾಯಗಾರರ ವರ್ಗವು ಸಂಪತ್ತು, ಸಮೃದ್ಧಿಯಿಂದ ಕೂಡಿರುವಂತೆ ಮಾಡಬೇಕು. ಬೆಳೆಯ ಮೇಲೆ ವಿಮಾ ಯೋಜನೆಯು ಅತ್ಯಾವಶ್ಯಕ. ಬೇಸಾಯ ಮಾಡಿದರೆ ಯೋಗ್ಯ ಮಟ್ಟದ ಜೀವನ ನಡೆಸಬಹುದೆಂಬ ವಿಶ್ವಾಸ ಅವರಲ್ಲಿ ಬರಬೇಡವೆ? ಇಂತಹ ವಿಶ್ವಾಸವಿಲ್ಲದೆ ಅವರು ಗದ್ದೆಯಲ್ಲಿ ದುಡಿಯದಿದ್ದರೆ ಜಿಲ್ಲೆಯ ಅಭಿವೃದ್ಧಿಯಾದರೂ ಹೇಗಾಗಬಹುದು?

ಶ್ರೀ ಟಿ. ಎ. ಪೈ

ಕೈಗಾರೀಕೀಕರಣ

ಕೃಷಿ ಕ್ಷೇತ್ರದ ಅಭಿವೃದ್ಧಿಯಾಗದೆ ನಮ್ಮ ಕೈಗಾರಿಕೆಗಳು ಹೇಗೆ ಬೆಳೆದಾವು? ಕೈಗಾರಿಕೆಗಳು ಬೆಳೆಯದೆ ಜನರಿಗೆ ಉದ್ಯೋಗ ಅವಕಾಶವನ್ನು ಹೇಗೆ ದೊರಕಿಸಬಹುದು? ಮಾನವ ಶಕ್ತಿಯೇ ನಮ್ಮ ಸಂಪತ್ತು. ಈ ಶಕ್ತಿಯನ್ನು ಬಳಸಿಕೊಳ್ಳಲು ಬಹು ದೊಡ್ಡ ಪ್ರಯತ್ನ ಮಾಡಬೇಕಾಗಿದೆ. ಒಂದು ತೈಲ ಶುದ್ಧಿಕರಣ ಕೇಂದ್ರ, ಒಂದು ರಾಸಾಯನಿಕ ಗೊಬ್ಬರ ಕಾರ್ಖಾನೆಯಿಂದ ನಮ್ಮ ಉದ್ಧಾರವಾಗದು. ಇಂತಹ ದೊಡ್ಡ ಉದ್ದಿಮೆಗಳಿಂದ ಒಂದೆರಡು ಸಾವಿರ ಜನರಿಗೆ ಉದ್ಯೋಗ ಸಿಗಬಹುದು. ಆದರೆ ನಮ್ಮ ಜನರು ದೈವದತ್ತವಾಗಿ ಬಂದಿರುವ ತಮ್ಮ ಬುದ್ಧಿಶಕ್ತಿಯನ್ನು ಉಪಯೋಗಿಸಿ, ಜಿಲ್ಲೆಯ ಕೈಗಾರೀಕೀರಣದಲ್ಲಿ ಸಹಭಾಗಿಗಳಾಗುವಂತೆ ಸರಕಾರ ನೆರವು ನೀಡಿ ಉತ್ತೇಜಿಸುವುದರಲ್ಲಿ ನಮ್ಮ ಭವಿಷ್ಯ ಅಡಕವಾಗಿದೆಯಲ್ಲದೆ ಸರಕಾರ ಒಂದೆರಡು ಮಹೋದ್ಯಮಗಳನ್ನು ತೊಡಗುವುದರಲ್ಲಿ ಅಲ್ಲ. ಸರಕಾರ ಇಂತಹ ಬೃಹತ್ ಕೈಗಾರಿಕೆಗಳನ್ನು ಸ್ಥಾಪಿಸುವಾಗ ಹೊಸ ಸಮಸ್ಯೆಗಳು ಉದ್ಭವಿಸಬಹುದು. ಪಶ್ಚಿಮ ಕರಾವಳಿಯ ರಸ್ತೆ, ರೈಲು ದಾರಿ, ಬಂದರವೇ ಮೊದಲಾದ ವಿಚಾರಗಳಲ್ಲಿ ಸಾಗು ಭೂಮಿಯನ್ನು ಕಸಿದುಕೊಂಡು—ಅತ್ತ ಕೃಷಿ ಉತ್ಪತ್ತಿಗೂ ಏಟು, ಇತ್ತ ಜನರಿಗೂ ಅನಾವಶ್ಯಕ ಸಂಕಷ್ಟ ಉಂಟು ಮಾಡಿದುದನ್ನು ಮರೆಯುವಂತಿಲ್ಲ. ಇವೆಲ್ಲ ಯೋಜನೆಗಳು ಅನಾವಶ್ಯಕವಲ್ಲ. ಜನರ ಉಪಯೋಗಕ್ಕಾಗಿ, ಕಲ್ಯಾಣಕ್ಕಾಗಿ ಚಿಂತಿಸಲ್ಪಟ್ಟ ಯೋಜನೆಗಳವು ನಿಜ. ಆದರೆ ಅಂತಹ ಯೋಜನೆಗಳಿಂದ ಜನರು ತೃಪ್ತಿಪಡುವ ಬದಲು ಒಂದಿಷ್ಟಾದರೂ ಸಂಕಷ್ಟಕ್ಕೀಡಾಗುವ ಪ್ರಸಂಗ ಬಂದಿತೆಂದರೆ, ಅಂತಹ ಸಂಕಷ್ಟಗಳು ಬಾರದಂತೆ ನೋಡಿಕೊಳ್ಳುವ ಜಾಗರೂಕತೆ ಸರಕಾರಕ್ಕಿರಬೇಡವೆ? ಸರಿಯಾದ ಧೋರಣೆ ಮತ್ತು ಕ್ಕನುಗುಣವಾದ ಆಡಳಿತ ಕಾರ್ಯಕ್ರಮಗಳಿಂದ ಮಾತ್ರ ಜನತೆಗೆ ಸಾರ್ವತ್ರಿಕ ಪ್ರಯೋಜನ ಲಭಿಸುವುದು.

ಕೈಗಾರಿಕೆಗಳನ್ನು ವಿಸ್ತರಿಸಲು ಬೇಕಷ್ಟು ಅವಕಾಶಗಳು ನಮ್ಮ ಜಿಲ್ಲೆಯಲ್ಲಿ ಇವೆ. ದಕ್ಷಿಣ ಕನ್ನಡ ಮೀನುಗಾರಿಕೆಯ ಉದ್ಯಮವನ್ನು ಪಶ್ಚಿಮ ಕರಾವಳಿಯ ಮಹೋನ್ನತ ರಾಷ್ಟ್ರೀಯ ಉದ್ಯಮವಾಗಿ ಗರಿಷ್ಟ ಮಿತಿಯ ವರೆಗೆ ಬೆಳೆಸಬೇಕು. ಇದರಿಂದ ಕೆಲವೇ ವರುಷಗಳಲ್ಲಿ ಹೆಚ್ಚೆಚ್ಚು ಮೀನುಗಾರರೂ, ಆ ಪ್ರದೇಶದ ಜನರೂ ಪ್ರಯೋಜನ ಪಡೆಯುವಂತೆ ನಮ್ಮ ಧೋರಣೆಯನ್ನು ರೂಪಿಸಬೇಕು.

ಈ ಎಲ್ಲ ಕೆಲಸಗಳನ್ನು ಹೇಗೆ ಮಾಡಬಹುದು? ಯಾರು ಮಾಡಬೇಕು? ಇದು ನಮ್ಮ ಮುಂದಿರುವ ಮುಖ್ಯ ಪ್ರಶ್ನೆ.

ಸಮಸ್ಯೆಗಳ ಕುರಿತು ಜನಜಾಗೃತಿ

ನಮ್ಮ ಜಿಲ್ಲೆಯ ಸಮಸ್ಯೆಗಳು ದೇಶದ ಸಮಸ್ಯೆಗಳನ್ನೆ ಪ್ರತಿಬಿಂಬಿಸುತ್ತವೆ—ಸ್ವಲ್ಪ ಹೆಚ್ಚು, ಕಡಿಮೆ ಅಷ್ಟೆ. ಈ ಸಮಸ್ಯೆಗಳನ್ನು ಬಗೆಹರಿಸುವುದು ಸರಕಾರದ ಜವಾಬ್ದಾರಿ ಮಾತ್ರವಲ್ಲ. ದೇಶದ ಜನಸಮೂಹದ ಸಂಘಟನೆಯನ್ನು ವ್ಯಾಪಕವಾಗಿ ಮಾಡಬೇಕಾಗಿದೆ. ಈ ಕೆಲಸವನ್ನು ನಮ್ಮ ವಿದ್ಯಾವಂತರು ನಿರ್ವಹಿಸಬೇಕು. ಸಮಸ್ಯೆಗಳನ್ನು ಯಥಾರ್ಥ ರೂಪದಲ್ಲಿ ಅರಿತುಕೊಂಡು ಜನತೆಗೆ ಮಾರ್ಗದರ್ಶನ ನೀಡಬೇಕು.

ರಚನಾತ್ಮಕ ಟೀಕೆ ಸ್ವಾಗತ

ಈ ಜವಾಬ್ದಾರಿ ನಮ್ಮ ರಾಜಕೀಯ ಪಕ್ಷಗಳ ಮೇಲೆ ಇದೆ. ಆದರೆ ನಮ್ಮ ದುರ್ವಿಧಿಯೆಂಬಂತೆ ಎಲ್ಲಾ ರಾಜಕೀಯ ಪಕ್ಷಗಳು ಹಾಡುತ್ತಿರುವ ಸೊಲ್ಲು ಒಂದೇ ಆಗಿದೆ. ಸರಕಾರವನ್ನು ಟೀಕಿಸುವುದರಲ್ಲೇ ಪ್ರತಿ ಪಕ್ಷಗಳು ಮುಂದಾಗಿವೆಯಲ್ಲದೆ, ಹೊಸ ದಾರಿ ಏನೆಂಬುದನ್ನು ತೋರಿಸುವ

ಡ ಜಿಲ್ಲೆ — ಜನಜಾಗೃತಿ ಅವಶ್ಯ

ಎ. ಪೈ

ಸಾಹಸ ಮಾಡುತ್ತಿಲ್ಲ. ಪರಿಸ್ಥಿತಿಯನ್ನು ಸ್ಪಷ್ಟವಾಗಿ, ನೇರವಾಗಿ ಹೇಳುವ ಧೈರ್ಯವೇ ನಮಗಿಲ್ಲವಾಗಿದೆ; ಇದ್ದುದನ್ನು ಇದ್ದ ಹಾಗೆ ಹೇಳಿದರೆ ಅವರಿಗೊ, ಇವರಿಗೊ ನೋವಾಗಬಹುದೆಂಬ ಅಂಜಿಕೆಯೇ ಈ ಅಭ್ಯಾಸಕ್ಕೆ ಕಾರಣ.

ನಿರಕ್ಷರಿಗಳಾದರೂ ಅವಿವೇಕಿಗಳಲ್ಲ

ಪ್ರಜಾಪ್ರಭುತ್ವದಲ್ಲಿ ವಾಸ್ತವಿಕ ವಿಷಯಗಳನ್ನು ಸ್ಪಷ್ಟವಾಗಿ ಹೇಳದಿದ್ದರೆ ಜನತೆಯ ವಿಶ್ವಾಸವನ್ನು ಹೇಗೆ ಗಳಿಸಲು ಸಾಧ್ಯ? ಹೀಗೆ ಹೇಳುವುದನ್ನು ಸರಕಾರದ ಟೀಕೆಯೆಂದು ಭಾವಿಸಬಾರದು. ಟೀಕೆ ಹೌದಾದರೂ ಅದು ರಚನಾತ್ಮಕವಾಗಿರಬೇಕು, ಅದರ ಉದ್ದೇಶವು ಉನ್ನತವಾಗಿರಬೇಕು. ಇದರಿಂದ ಸರಕಾರಕ್ಕೆ ತನ್ನ ತಪ್ಪನ್ನು ತಿದ್ದಿಕೊಳ್ಳಲು ಸಾಧ್ಯವಾಗುತ್ತದೆ. ಸರಕಾರವನ್ನು ನಿರ್ಮಿಸಿದುದು ಜನತೆ. ಜನತೆ ವಿಚಾರವಂತರಾಗಿ ದೇಶದ, ರಾಷ್ಟ್ರದ ತತ್ವ, ಧೋರಣೆಗಳನ್ನು ರೂಪಿಸುವ ಪರಿಚಿತ್ರತೆ ಬಂಬೇಕಾದರೆ ನಮ್ಮ ಸಮಸ್ಯೆಗಳೇನು, ಅವುಗಳಿಗೆ ಪರಿಹಾರ ಹೇಗೆ ಸಾಧ್ಯವೆಂಬ ವಿಷಯಗಳು ಸಾರ್ವಜನಿಕವಾಗಿಯೇ ಚರ್ಚಿಸಲ್ಪಡಬೇಕು. ಆಗ ಮಾತ್ರ ರಾಷ್ಟ್ರದ ತತ್ವ, ಧೋರಣೆಗಳ ಸಿದ್ಧಿಯಲ್ಲಿ ಜನತೆಯೂ ಸಹಭಾಗಿಯಾಗುವುದು. ನಮ್ಮ ಜನರು ಅವಿದ್ಯಾವಂತರೆಂಬ ಹೆದರಿಕೆ ಬೇಡ. ನಿರಕ್ಷರ ಕುಕ್ಷಿಗಳೂ ವಿಶ್ವವಿದ್ಯಾನಿಲಯದ ಪದವೀಧರರಿಗಿಂತ ಹೆಚ್ಚಿನ ತಿಳುವಳಿಕೆಯನ್ನು ಅನೇಕ ಸಂದರ್ಭಗಳಲ್ಲಿ ಪ್ರದರ್ಶಿಸಿದ್ದಾರೆ. ಇದರಿಂದ ನಮ್ಮ ವಯಸ್ಕರ ಮತದಾನ ಪದ್ಧತಿಯಲ್ಲಿ ನಾನು ಅನನ್ಯ ವಿಶ್ವಾಸವುಳ್ಳವನಾಗಿದ್ದೇನೆ. ವಿದ್ಯಾವಂತ-ಅವಿದ್ಯಾವಂತರೆಂಬ ಭೇದಗಳು ಇರಕೂಡದು. ವಿದ್ಯಾವಂತರು ಸಮಸ್ಯೆಗಳನ್ನು ಅಭ್ಯಸಿಸಿ ಯೋಗ್ಯ ಮಾರ್ಗದರ್ಶನ ನೀಡಬೇಕು, ನಿರಕ್ಷರಿಗಳ ಸಹಕಾರದಿಂದ ಸಮಸ್ಯೆಗಳನ್ನು ಬಿಡಿಸಬೇಕು.

ಆಹಾರದ ಸಮಸ್ಯೆಯ ಮೂಲ

ಆಹಾರ ಧಾನ್ಯ ಕಾರ್ಪೊರೇಶನ್‌ನ ಅಧ್ಯಕ್ಷನಾಗಿದ್ದಾಗ ನಾನು ಮನಗಂಡಿದ್ದ ನಿಜ್ಯವಿದು. ಈ ಜವಾಬ್ದಾರಿಯನ್ನು ನಾನು ವಹಿಸಿಕೊಳ್ಳುವಾಗ ನನ್ನ ಅನೇಕ ಮಿತ್ರರು ನನ್ನನ್ನು ಎಚ್ಚರಿಸಿದ್ದರು— 'ಒಂದು ವರುಷದಲ್ಲಿ ಏನು ಮಾಡಲೂ ಸಾಧ್ಯವಿಲ್ಲ. ಆದುದರಿಂದ ನಿಮಗದು ಬೇಡವೆಂದು' ಕೆಲವರು ಹೇಳಿದ್ದರೆ, ರಾಜಾಜಿಯಂತಹ ಅನುಭವಿಗಳು "ಒಂದು ವರುಷ ಅಧಿಕಾರದಲ್ಲಿದ್ದರೆ ನೀವು ಮುಂದೆಯೂ ಅಧಿಕಾರದಲ್ಲಿ ಉಳಿಯ ಬಯಸುವಿರಿ. ಅಧಿಕಾರದ ಸವಿ ಅಂತಹದು" ಎಂದಿದ್ದಾರೆ. ಒಂದು ವರುಷ ಸಂಬಳವಿಲ್ಲದೆ ಕೆಲಸ ಮಾಡಲು ನಾನು ಅಪೇಕ್ಷಿಸಿದ್ದರೆ ಅದಕ್ಕೆ ಮುಖ್ಯ ಕಾರಣ ನಾನು ನನ್ನ ಸ್ವಾತಂತ್ರ್ಯವನ್ನು ಕಳೆದು ಕೊಳ್ಳಲು ಬಯಸಲಿಲ್ಲ. ಒಂದು ವರುಷದಲ್ಲಿ ಆಹಾರದ ಸಮಸ್ಯೆಯನ್ನು ಬಗೆಹರಿಸಲು ಆಗದ ಮಾತೆಂಬುದನ್ನು ನಾನು ಮೆಚ್ಚಿದ್ದೆ. ಈ ಒಂದು ವರುಷದಲ್ಲಿ ಸಮಸ್ಯೆಯ ಮೂಲವನ್ನರಿತು, ಜನತೆಯನ್ನು ವಿಶ್ವಾಸಕ್ಕೆ ತೆಗೆದುಕೊಂಡು ಅದನ್ನು ಬಗೆಹರಿಸುವ ನಮ್ಮ ಕೆಲಸದಲ್ಲಿ ಜನರ ಆಸಕ್ತಿಯನ್ನು ಕೆರಳಿಸಿ ಕೆಲವೊಂದು ಮೂಲಭೂತ ಧೋರಣೆಗಳು ಮತ್ತು ಆಡಳಿತೆಯ ದೃಷ್ಟಿಯನ್ನು ಬದಲಾಯಿಸಲು ಒಂದು ವರುಷ ಸಾಕಲ್ಲವೆ? ಇದನ್ನು ಒಂದು ವರುಷದಲ್ಲಿ ಮಾಡಲಾರದವಾದರೆ ಹದಿನೈದು ವರುಷಗಳು ಕಳೆದರೂ ಇದು ನಮ್ಮಿಂದ ಸಾಧ್ಯವೆ? ಎಂಬ ಭಾವನೆ ನನ್ನಲ್ಲಿ ಇತ್ತು.

ಅಂತೆಯೇ ಆ ಒಂದು ವರುಷದಲ್ಲಿ ಆಹಾರದ ಸಮಸ್ಯೆಯನ್ನು ನಾನು ರಾಷ್ಟ್ರದ ಮುಂದಿರಿಸಿದ್ದೇನೆ. ನನ್ನ ಅನೇಕ ಸಲಹೆಗಳು ಒಂದೊಂದಾಗಿ ಕಾರ್ಯಗತಗೊಳ್ಳುತ್ತಿವೆ. ಜನತೆಯೂ ಎಚ್ಚೆತ್ತಿದೆ. ಮತ್ತೆ ಮೂರು ವರುಷಗಳ ತನಕ ನಾನು ಈ ಹುದ್ದೆಯಲ್ಲಿ ಮುಂದುವರಿಯಬೇಕೆಂಬ ಒತ್ತಾಯವಿದ್ದರೂ ನಾನು ಒಡಂಬಡಲಿಲ್ಲ. ಏಕೆಂದರೆ ಸಮಸ್ಯೆಯ ಪರಿಹಾರದ ಮೂಲವು ಬೇಸಾಯಗಾರರ ಕೈಯಲ್ಲಿದೆ. ಅವರನ್ನು ಪ್ರೋತ್ಸಾಹಿಸುವುದೇ ನನ್ನ ಕರ್ತವ್ಯವೆಂಬ ದೃಷ್ಟಿ ನನ್ನದು.

ಶಾಸಕನಾಗಿ

ನನಗೆ ಈ ಕೆಲಸವೇನೂ ಹೊಸತಲ್ಲ. ೧೯೫೨ರಿಂದ ೧೯೫೭ರ ತನಕ ನಾನು ಶಾಸಕನಾಗಿದ್ದೆ. ಶಾಸನ ಸಭೆಯಲ್ಲಿ ಪ್ರಜ್ಞೆಯಿಂದ ನನ್ನ ಕರ್ತವ್ಯ ಮಾಡಿದೆನಲ್ಲದೆ, ಜಿಲ್ಲೆಯ ಅಭಿವೃದ್ಧಿ ಕಾರ್ಯಗಳಲ್ಲೂ ಆಸಕ್ತಿಯಿಂದ ಜನರೊಂದಿಗೆ ದುಡಿದೆ. ಪ್ರತಿಫಲವಾಗಿ ಜನತೆ ನನ್ನ ಮೇಲಿಟ್ಟ ಮಮತೆಯು ಅಸಾಧಾರಣವಾದುದು. ಮುಂದಿನ ಹತ್ತು ವರುಷಗಳಲ್ಲಿ ನಾನು ಶಾಸನ ಸಭೆಯಿಂದ ಹೊರಗಿದ್ದಿದ್ದರೆ ಅದಕ್ಕೆ ವಿವಿಧ ಸಮಸ್ಯೆಗಳನ್ನು ಸಾರ್ವಜನಿಕರು ಯಾವ ದೃಷ್ಟಿಯಿಂದ ಅಳೆಯುತ್ತಿದ್ದಾರೆಂಬುದನ್ನು ಶಾಸಕನಲ್ಲದೆ ತಿಳಿದುಕೊಳ್ಳಬೇಕೆಂದು ನನ್ನಲ್ಲಿದ್ದ ಹಂಬಲವೇ ಮುಖ್ಯ ಕಾರಣವಾಗಿತ್ತು. ನಾನು ಅಪೇಕ್ಷಿಸಿದ್ದರೆ ಕಾಂಗ್ರೆಸ್ಸು ನನಗೆ ಚುನಾವಣೆಯಲ್ಲಿ ಸ್ಪರ್ಧಿಸಲು ಟಿಕೇಟು ಕೊಡುತ್ತಿತ್ತು. ಅಲ್ಪ ಸಂಖ್ಯಾತರಿಗೆ ಸೀಟನ್ನು ಒದಗಿಸಿ ಕೊಡುವುದು ಅಂದು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷನಾಗಿದ್ದ ನನ್ನ ಹೊಣೆಯಾಗಿತ್ತು. ನನ್ನ ಉಮೇದ್ವಾರಿಕೆಯು ಶ್ರೀ ಪಿಂಟೋ ಅಥವಾ ಶ್ರೀ ಮಧ್ವರಾಜರ ಹುರಿಯಾಳತನಕ್ಕೆ ಆತಂಕವಾಗಬಹುದೆಂಬ ಗ್ರಹಿಕೆಯಿಂದ ನಾನು ಹಿಂದೆ ಸರಿದೆ. ಇದು ಪಾರ್ಲಿಮೆಂಟರಿ ಬೋರ್ಡಿನ ಅನೇಕ ಸದಸ್ಯರಿಗೆ ಆಶ್ಚರ್ಯವನ್ನುಂಟುಮಾಡಿತ್ತು. ಇರಲಿ.

ಜಾತ್ಯಾತೀತ, ವರ್ಗಾತೀತ ಧೋರಣೆ

ಶಾಸನ ಸಭೆಯಲ್ಲಿಲ್ಲದಿದ್ದರೂ ಜಿಲ್ಲೆಯ ಜನತೆಗೆ ಸೇವೆಯನ್ನು ಸಲ್ಲಿಸಲು ನನಗೆ ಬೇಕಷ್ಟು ಅವಕಾಶಗಳು ದೊರೆತಿದ್ದುವು. ಜನತೆಗೆ ಸಹಾಯಕವಾಗುವ ಯಾವುದೇ ಅವಕಾಶವನ್ನು ನಾನು ಉಪಯೋಗಿಸದೆ ಇರಲಿಲ್ಲ. ನನ್ನ ಸಾರ್ವಜನಿಕ ಜೀವನದಲ್ಲಿ ಯಾವುದೇ ಅವಕಾಶವನ್ನು ನನ್ನ ಸ್ವಾರ್ಥಕ್ಕಾಗಿ ಉಪಯೋಗಿಸಿದ್ದೇನೆಂದು ಹೇಳುವವರು ಅದನ್ನು ಸಾರ್ವಜನಿಕವಾಗಿ ರುಜುಪಡಿಸಲಿ. ಜಾತ್ಯಾತೀತ, ವರ್ಗಾತೀತ ಸಮಾಜದ ರಚನೆಯನ್ನೂ ನಂಬಿದ್ದೇನೆ. ಮಾನವ ವ್ಯಕ್ತಿತ್ವ ವಿಕಾಸಕ್ಕೆ ಆವಶ್ಯಕವಾದ ಸೌಲಭ್ಯಗಳನ್ನು ಅವರವರೆನ್ನದೆ ಯೋಗ್ಯರೀತಿಯ ಪ್ರತಿಯೊಬ್ಬ ಪ್ರಜೆಗೂ ನೀಡುವುದು ಹುಟ್ಟಿನಿಂದಾಗಿ ಮುಂದುವರಿದ ವರ್ಗವೆಂದು ಪರಿಗಣಿಸಲ್ಪಟ್ಟ ನನ್ನಂಥವರ ಧರ್ಮವಾಗಿದೆ; ರಾಷ್ಟ್ರದ ಉನ್ನತಿಗೆ ಇಂತಹ ಭಾವನೆ ಅಗತ್ಯವೆಂಬುದನ್ನು ನಾನು ಮನಗಂಡಿದ್ದೇನೆ. ಈ ತತ್ವವನ್ನು ಎಲ್ಲರೂ ಒಪ್ಪುತ್ತಾರೆ, ಆದರೆ ಹೆಚ್ಚಾಗಿ ಬಾಯಿ ಮಾತಿನಲ್ಲಿ ಮಾತ್ರವೆಂಬುದು ದುಃಖದ ವಿಚಾರ.

ಇದು ಹೀಗಾಗಬಾರದಾದರೆ ನಮ್ಮ ಯುವ ಜನರು ಪ್ರಾಮಾಣಿಕತತ್ವಾದರ್ಶಗಳೊಂದಿಗೆ ಸಾರ್ವಜನಿಕ ರಂಗದಲ್ಲಿ ದುಡಿಯಬೇಕೆಂಬುದೇ ನನ್ನ ಸಲಹೆ.

ಲೋಕಸಭೆಗೆ ಕಾಂಗ್ರೆಸ್ ಅಭ್ಯರ್ಥಿ

ನಮ್ಮ ಜಿಲ್ಲೆಯ ಅಭಿವೃದ್ಧಿಯ ಕಾರಣ ಕರ್ತೃಗಳಲ್ಲೊಬ್ಬರಾದ ಶ್ರೀ ಯು. ಶ್ರೀನಿವಾಸ ಮಲ್ಯರ ನಿಧನದ ಬಳಿಕ ನನ್ನ ಅನೇಕ ಸನ್ಮಿತ್ರರು ನಾನು ಲೋಕಸಭೆಯ ಸದಸ್ಯನಾಗಬೇಕೆಂದು ಒತ್ತಾಯಿಸುತ್ತಿದ್ದಾರೆ. ಇದರಿಂದ ನಾನು ನನ್ನ ಸ್ವಾತಂತ್ರ್ಯವನ್ನು ಕಳೆದ ಕೊಳ್ಳುವೆನಾದರೂ, ಜನತೆ ನಾನು ಲೋಕಸಭಾ ಸದಸ್ಯನಾಗಬೇಕೆಂದು ಬಯಸುವುದಾದರೆ ನಾನು ಅಲ್ಲವೆನ್ನಲಾರೆ. ನಾನು ಯಾರನ್ನು ಪ್ರತಿನಿಧೀಕರಿಸುವೆನೊ, ಆ ಜನತೆಯ ಆಗುಹೋಗುಗಳನ್ನು ರಾಷ್ಟ್ರ ಕಲ್ಯಾಣದ ದೃಷ್ಟಿಯಿಂದ ನಿರ್ಭಯವಾಗಿ ಪ್ರತಿಪಾದಿಸುವುದೇ ನನ್ನ ಧರ್ಮವೆಂದು ನಾನು ತಿಳಿಯುತ್ತೇನೆ. ನಾನು ಹೀಗೆ ಮಾಡಲಾರೆನಾದರೆ ನಾನಲ್ಲಿದ್ದೂ ಪ್ರಯೋಜನವಾಗಲಾರದೆಂಬುದನ್ನು ನಾನು ಬಲ್ಲೆ. ಜನತೆ ಮತ್ತು ಸರಕಾರದಲ್ಲಿರುವ ಧೋರಣೆಗಳ ಸಮನ್ವೀಕರಣವು ಇಂದೇ ಅತಿ ಅಗತ್ಯದ ವಿಷಯವಾಗಿದೆ. ಈ ದೃಷ್ಟಿಯಲ್ಲಿ ನಾನು ಪ್ರಾದೇಶಿಕ ಕಾಂಗ್ರೆಸ್ ಸಮಿತಿಗೆ ನನ್ನ ಅರ್ಜಿಯನ್ನು ಸಲ್ಲಿಸುತ್ತೇನೆ. ಕಾಂಗ್ರೆಸ್ ನನ್ನನ್ನು ಆರಿಸುವುದಾದರೆ ನಾನು ನಿಷ್ಠೆಯಿಂದ ಮುಂದಿನ ಕೆಲಸವನ್ನು ನಿರ್ವಹಿಸುವೆನು.

— —

ಸೃಷ್ಟಿಯ ವೈಚಿತ್ರ್ಯ
ಕೆಸರಿನ ಜ್ವಾಲಾಮುಖಿಗಳು

ನಮ್ಮ ಕಣ್ಣಮುಂದೆಯೇ ಒಂದು ಜ್ವಾಲಾಮುಖಿ ಜಾಗೃತವಾಯಿತು. ಜೇಡಿ ಪದರಗಳಿಂದ ತುಂಬಿದ್ದ ಮರುಭೂಮಿಯಲ್ಲಿ ಒಮ್ಮೆಗೇ ಬಿರುಕುಂಟಾಯಿತು. ಒಂದೆರಡು ಕ್ಷಣಗಳ ತರುವಾಯ ಅದರಿಂದ ಕೆಸರಿನ ಊಟೆಯೇ ಮೇಲಕ್ಕೆ ಚಿಮ್ಮತೊಡಗಿತು. ಕೆಲವೇ ನಿಮಿಷಗಳಲ್ಲಿ ಬೂದುಗೆಸರಿನ ದಿಬ್ಬವೊಂದು ರೂಪುಗೊಂಡಿತು.

ಮೂರು ದಿನಗಳ ತರುವಾಯ ನಾವು ಅದೇ ಮಾರ್ಗವಾಗಿ ಹಿಂದಿರುಗಿದೆವು. ದಿಬ್ಬವು ಇನ್ನೂ ದೊಡ್ಡದಾಗಿ, ಎತ್ತರವಾಗಿ ಬೆಳೆದಿತ್ತು. ಅದರ ಇಳಿಜಾರಿನ ಮೇಲೆ ಕೆಲವು ಕಡೆ ತಿಳಿಗೆಸರು ಹರಿದು ಬರುತ್ತಿತ್ತು. ಬಿಸಿಲಿನ ಬೇಗೆಯಿಂದ ಗಾಳಿಯಿಂದ ಕೆಸರು ಒಣಗಿತ್ತು. ನಾವು ಸುಲಭವಾಗಿಯೇ ಆ ದಿಬ್ಬದ ಮೇಲಕ್ಕೆ ಹತ್ತುವುದು ಸಾಧ್ಯವಾಯಿತು. ಅಲ್ಲಿ ನಾವು ಜ್ವಾಲಾಮುಖಿಯ ಕುಳಿಯಂತಹುದನ್ನು ತುದಿಯಲ್ಲಿ ಕಂಡೆವು. ಕುಳಿಹಳ್ಳದ ತಳದಲ್ಲಿ ಕೆಸರು ತುಂಬಿತ್ತು.

ಅಜರ್‌ಬೈಜಾನಿನ ಪೂರ್ವ ಭಾಗದಲ್ಲಿ ಇಂತಹ ಇನ್ನೂರೈವತ್ತು ಕೆಸರು ಜ್ವಾಲಾಮುಖಿಗಳಿವೆ. ಅವು ಸೃಷ್ಟಿ ವೈಚಿತ್ರ್ಯಗಳು. ೧೮೧೦ರಿಂದೀಚೆಗೆ ಅಜರ್‌ಬೈಜಾನಿನಲ್ಲಿ ಸುಮಾರು ೧೫೦ ಭಾರಿ ಕೆಸರು ಜ್ವಾಲಾಮುಖಿ ಸ್ಫೋಟಗಳನ್ನು ದಾಖಲೆಗೊಳಿಸಲಾಗಿದೆ. ಅವುಗಳೊಂದರ ವಿವರಣೆ ಹೀಗಿದೆ

೧೯೬೧ರ ಅಕ್ಟೋಬರ್ ದಿನಾಂಕ ೭ರ ರಾತ್ರಿ ಅಕ್ಟುಲಾಗ್‌ರ ಜ್ಯಕ್ಕಿಷಿಕೋಸ್ಸದ ಹಳ್ಳಿಯ ನಿವಾಸಿಗಳು ಭೂಗರ್ಭದಲ್ಲಾದ ದೀರ್ಘವಾದ ಗಡಗಡ ಸಪ್ಪಳದಿಂದ ಎಚ್ಚತ್ತರು. ಅವರಲ್ಲನೇಕರು ಮನೆಗಳಿಂದ ಹೊರಕ್ಕೆ ಓಡಿಬಂದರು. ಸುತ್ತುಮುತ್ತಲಿನ ಕ್ಷೇತ್ರದಲ್ಲಿ ಕೆಂಪುಕಾಂತಿಯು ಹರಡಿತು. ಸುಮಾರು ಇನ್ನೂರು ಮೀಟರ್ ಎತ್ತರವಾದ ಜ್ವಾಲಾಸ್ತಂಭವು ಬೆಟ್ಟದ ತುದಿಯಲ್ಲಿ ಕಂಡುಬಂದಿತು. ಹಗಲು ಹೊತ್ತಿನಲ್ಲಿದ್ದಂತೆ ಬೀದಿಯಲ್ಲಿ ಬೆಳಕಾಯಿತು.

ಜ್ವಾಲೆಯೊಡನೆ ಕಲ್ಲುಗಳೂ, ಕೆಸರೂ ಹೊರಬಂದುವು. ಇಳಿಜಾರುಗಳ ಮೇಲೆ ಕೆನ್ನಾಲಗೆಗಳು ಹರಿದು ಬಂದವು. ಕೆಳಗಿದ್ದ ಹಳ್ಳವೊಂದು ತುಂಬಿಕೊಂಡಿತು. ಜ್ವಾಲಾಮುಖಿಯು ಈ 'ಲಾವಾ' ಪ್ರವಾಹವು ಸುತ್ತಲೂ ತನ್ನ ಶಾಖ ಹಬ್ಬಿಸಿತು.

(ಐಂಭತ್ತನೇ ಪುಟ ನೋಡಿರಿ)

ಕನ್ನಡ ಕಾದಂಬರಿಗಳು

(ಐದನೇ ಪುಟದಿಂದ)

ನ್ನು ಮುಖ್ಯವಾಗಿ ಮೂರು ಗುಂಪುಗಳಾಗಿ ವಿಂಗಡಿಸಬಹುದು. ಪೌರಾಣಿಕ ಕಾದಂಬರಿಗಳು ಐತಿಹಾಸಿಕ ಕಾದಂಬರಿಗಳು ಕೊನೆಯದಾಗಿ ಸಾಮಾಜಿಕ ಕಾದಂಬರಿಗಳು. ದೇವುಡುರವರ ಮಹಾಕ್ಷತ್ರಿಯ ಮಹಾ ಬ್ರಾಹ್ಮಣ ಕಾದಂಬರಿಗಳನ್ನು ಪೌರಾಣಿಕ ಕಾದಂಬರಿಗಳಿಗೆ ಉದಾಹರಿಸಬಹುದಾಗಿದೆ. ವೀರಕೇಸರಿಯವರ ದೌಲತ್; ಮಾಸ್ತಿಯವರ 'ಚನ್ನ ಬಸವ ನಾಯಕ', ಕೊರಟಿಯವರ "ಚಾಲುಕ್ಯ ವಿಕ್ರಮ" ಕೆ. ವಿ. ಅಯ್ಯರವರ "ಶಾಂತಲ." ಕೆರೂರ ವಾಸುದೇವಾಚಾರ್ಯರ "ಯದುರಾಯ" ಅ. ನ ಕೃ.ರವರ 'ವಿಜಯ ವಿದ್ಯಾರಣ್ಯ" ಮತ್ತು ಅವರ ಮುಂದಿನ ಭಾಗಗಳು. ತ. ರಾ. ಸುರವರ "ಸಿಡಿಲ ಮೊಗ್ಗು", ಕೀರ್ತಿ ನಾರಾಯಣ, ಶಿಲ್ಪಶ್ರೀ, ನೃಪತುಂಗ, ಮತ್ತು ಚಿತ್ರದುರ್ಗ ಇತಿಹಾಸದ ಮೇಲೆ ಬರೆದ ಕಂಬನಿಕುಯಿಲು ಮೊದಲಾದ ಕಾದಂಬರಿಗಳು, ಬಿ. ಪುಟ್ಟಸ್ವಾಮಯ್ಯನವರ "ಮುಗಿದ ಕನಸು" ಅವಕ್ಕೆ ಸಂಬಂಧಿಸಿದ ಭಾಗಗಳು ಮೊದಲಾದುವು ಮುಖ್ಯ ಐತಿಹಾಸಿಕ ಕಾದಂಬರಿಗಳು ಇವುಗಳಲ್ಲದ ಇನ್ನೂ ಅನೇಕ ಐತಿಹಾಸಿಕ ಕಾದಂಬರಿಗಳು ಚಿರಪರಿಚಿತವಾಗಿವೆ. ಜನಪ್ರಿಯತೆ ಗಳಿಸಿವೆ.

ಇಂದಿನ ಅನೇಕ ಪರಿಸ್ಥಿತಿ, ಸನ್ನಿವೇಶ, ಘಟನೆಗಳ ಹಿನ್ನೆಲೆಯಲ್ಲಿ ರೂಪುಗೊಂಡ ಸಾಮಾಜಿಕ ಕಥಾವಸ್ತುವುಳ್ಳ ಕಾದಂಬರಿಗಳು ಇಂದು ಮುಖ್ಯವೆಂದವು. ಈ ವರವಿಗೂ ಅನೇಕ—ಹಿರಿಯ ಕಿರಿಯ ಕಾದಂಬರಿಕಾರರು ನೂರಾರು ಕಾದಂಬರಿಗಳನ್ನು ಕನ್ನಡ ಸಾಹಿತ್ಯ ಭಂಡಾರಕ್ಕೆ ಅರ್ಪಿಸಿದ್ದಾರೆ. ಎಲ್ಲವೂ ಶ್ರೇಷ್ಠ ಕಾದಂಬರಿಗಳಲ್ಲವಾದರೂ ಹತ್ತಾರು ಕಾದಂಬರಿಗಳು ಕನ್ನಡ ಸಾಹಿತ್ಯದ ಕೀರ್ತಿಯನ್ನು ಉಳಿಸಲು ಸಾಮರ್ಥ್ಯ ಪಡೆದಿವೆ. ಹಲವಾರು ಭಾಷೆಗಳಿಗೆ ಭಾಷಾಂತರಗೊಂಡಿವೆ.

ವೈವಿಧ್ಯಪೂರ್ಣ ಸಮಸ್ಯೆ—ಸಂಗತಿಗಳನ್ನು ಆಯ್ದುಕೊಂಡು, ಅವುಗಳಿಗೆ ತಮ್ಮ ಅನುಭವದ ಒಪ್ಪ ಕೊಟ್ಟು, ಅವುಗಳನ್ನು ಸಮಾಜದ ಹಿತದ ದೃಷ್ಟಿಯಿಂದ ನೋಡಿ, ಅನಂತರ ಕಾದಂಬರಿಗಳನ್ನು ರಚಿಸಿ ಯಶಸ್ಸು ಗಳಿಸಿದವರು ಕೆಲವೇ ಮಂದಿ. ಅವರಿಗೆ ಕಲ್ಪನಾಶಕ್ತಿ, ಅನುಭವ, ಅಭಿಮಾನ, ಶೈಲಿ, ನಿರೂಪಣಾ ಸಾಮರ್ಥ್ಯ ವಿಶೇಷವಾಗಿದೆ ಎಂದು ಧಾರಾಳವಾಗಿ ಹೇಳಬಹುದಾಗಿದೆ.

ಕನ್ನಡದಲ್ಲಿ ಮೊದಲಿಗೆ ಸಾಮಾಜಿಕ ಕಾದಂಬರಿ ರಚನೆಗೆ ನಾಂದಿ ಹಾಕಿದವರು ಶಿವರಾಮ ಕಾರಂತರು. ಅನಂತರ ಅ. ನ. ಕೃಷ್ಣರಾಯರು ಆ ಸಂಪ್ರದಾಯವನ್ನು ಅನುಸರಿಸಿದರು. ಮುಂದೆ ತ. ರಾ. ಸುಬ್ಬರಾಯರು ಆ ಹಾದಿಯಲ್ಲಿ ಮುಂದುವರಿದರು. ಇವರಲ್ಲದೆ ಮಾಸ್ತಿ, ಮ. ನ. ಮೂರ್ತಿ, ಕೃಷ್ಣಮೂರ್ತಿ ಪುರಾಣಿಕ, ನಿರಂಜನ, ಗೋಕಾಕ, ಬಸವರಾಜ ಕಟ್ಟೀಮನಿ, ಮಿರ್ಜಿ ಅಣ್ಣಾರಾಯ, ಎಂ. ವಿ ಸೀತಾರಾಮಯ್ಯ, ಇನಾಂದಾರ್, ಬೀ.Chi. ಮೊದಲಾದವರು. ಸ್ತ್ರೀಯರ ಪೈಕಿ ತ್ರಿವೇಣಿ, ಎಂ. ಕ. ಜಯಲಕ್ಷ್ಮಿ, ವಾಣಿ, ಎಂ. ಕೆ ಇಂದಿರಾ, ಉಷಾದೇವಿ, ಜಯಲಕ್ಷ್ಮಿ ಶ್ರೀನಿವಾಸನ್, ಹೆಚ್. ಎ. ಸಾವಿತ್ರಮ್ಮ, ಅನುಪಮಾ ನಿರಂಜನ, ಆರ್ಯಾಂಬಾ ಪಟ್ಟಾಭಿ ಮೊದಲಾದವರು ಕೀರ್ತಿಶಾಲಿಗಳಾದವರಲ್ಲಿ ಮುಖ್ಯರು.

ಕನ್ನಡ ಕಾದಂಬರಿ ಸಾರ್ವಭೌಮ ಅ. ನ. ಕೃಷ್ಣರಾಯರ ಸಂಧ್ಯಾರಾಗ, ಜೀವನದಿ, ಕಂಕಣ ಪ್ರಸಾದ, ಮಂಗಳ ಸೂತ್ರ, ನಟ ಸಾರ್ವಭೌಮ, ಗಾಂಧಿ ಮಗಳ ಮನೆ, ಕಣ್ಣೀರು ಕಾದಂಬರಿಗಳನ್ನೂ, ತ. ರಾ. ಸು.ರವರ ಹಂಸ ಗೀತೆ, ಚಂದವಳ್ಳಿ ತೋಟ, ಮರಳ ಸೇತುವೆ, ಶಿಲ್ಪಶ್ರೀ; ಸಿಡಿಲ ಮೊಗ್ಗು, ರಕ್ತ ತರ್ಪಣ, ನೃಪತುಂಗ ಕಾದಂಬರಿಗಳನ್ನೂ, ಕೃಷ್ಣಮೂರ್ತಿ ಪುರಾಣಿಕರ ಹಬ್ಬಿದ ಬಳ್ಳಿ, ಪಾವನ ಗಂಗಾ, ಮುತ್ತೈದೆ, ಬೆವರಿನ ಬೆಲೆ ಕಾದಂಬರಿಗಳನ್ನೂ, ಶಿ ಕಾರಂತರ ಚೋಮನ ದುಡಿ, ಮರಳಿ ಮಣ್ಣಿಗೆ, ಬೆಟ್ಟದ ಜೀವ, ಔದಾರ್ಯದ ಉರುಳಲ್ಲಿ ಕಾದಂಬರಿಗಳನ್ನೂ, ತ್ರಿವೇಣಿಯವರ ಬೆಕ್ಕಿನ ಕಣ್ಣು, ಬೆಳ್ಳಿ ಮೋಡ, ಶರಪಂಜರ ಕೊಳ, ಹಣ್ಣೆಲೆ ಚಿಗುರಿದಾಗ, ಕಾಶೀಯಾತ್ರೆ, ಸೂತ್ರದ ಬೊಂಬೆ, ಶರ ಪಂಜರ ಮೊದಲಾದ ಕಾದಂಬರಿಗಳನ್ನೂ ಯಾವ ಓದುಗನೂ ಮರೆಯಲಾರ.

ಪ್ರಕಟವಾಗಿ ಕನ್ನಡ ಸಾಹಿತ್ಯದ ಪ್ರಕಟಿತ ಗ್ರಂಥಗಳ ಪಟ್ಟಿಯಲ್ಲಿ ಸೇರಿರುವ ಅನೇಕ ಹಿರಿಯ-ಕಿರಿಯ ಕಾದಂಬರಿಕಾರರ ಕಾದಂಬರಿಗಳನ್ನು ಪರಿಶೀಲಿಸಿದಾಗ ಹಲವಾರು ಉತ್ತಮ ಕೃತಿಗಳು ದೊರೆಯುತ್ತವೆ. ಅನೇಕ ಲೇಖಕಿಯರ ಉತ್ತಮ ಕಾದಂಬರಿಗಳು ನಾಡಿನಲ್ಲಿ ಜನಪ್ರಿಯತೆ ಗಳಿಸಿರುವುದು ವೈಶಿಷ್ಟ್ಯಪೂರ್ಣ ವಿಚಾರ, ಹೆಮ್ಮೆಯ ಸಂಗತಿ.

ಚಿರಪರಿಚಿತ—ಅಪರಿಚಿತ, ಹಿರಿಯ-ಕಿರಿಯ, ಲೇಖಕ—ಲೇಖಕಿಯರ ಕಾದಂಬರಿಗಳು ಪ್ರಕಟವಾಗಿವೆ. ಗಣನೀಯ ಪ್ರಮಾಣದಲ್ಲಿ ಅಲ್ಪವಾದರೂ, ಅಲ್ಪ ಸಂಖ್ಯೆಯಲ್ಲಿ ಉತ್ತಮ ಕೃತಿಗಳು ಬೆಳಕಿಗೆ ಬಂದಿವೆ ಎಂಬುದು ಸಮಾಧಾನಕರ ಸಂಗತಿ. ಮುಂದೆ ಬರಲಿರುವ ಕಾದಂಬರಿಗಳ ಸಂಖ್ಯೆಯೂ ಅಲ್ಪವಲ್ಲ. ಅಲ್ಪವಾಗುವುದು ಬೇಡ. ಸಂಖ್ಯೆಯಿಂದ ಮಾತ್ರವೇ ಅಲ್ಲದೆ ಸರ್ವ ವಿಧದಿಂದಲೂ ಪ್ರಬಲವಾಗಲಿರುವ ಕಾದಂಬರಿಗಳ ಶಕ್ತಿ—ಕೀರ್ತಿ—ಸೌಂದರ್ಯ ಹೆಚ್ಚಲಿ. ಕನ್ನಡ ಸಾಹಿತ್ಯದ ಬೆಳೆ ಹುಲುಸಾಗಲಿ.

— —

ನವರಸಯುಕ್ತವಾದ ಪಂಚಮ ವೇದ—

ಭರತನಾಟ್ಯ

ಸಂಗ್ರಹಿಸಿದವರು: ಸುರತ್ಕಲ್ ರಾಮಕೃಷ್ಣ ಹೆಬ್ಬಾರ್.

"ತ್ರೇತಾ ಯುಗದಲ್ಲಿ ವೈವಸ್ವತ ಮನ್ವಂತರವು ನಡೆಯುತ್ತಿರುವಾಗ ಜನರು ವಿಶೇಷವಾದ ಕಾಮ, ಕ್ರೋಧ, ಲೋಭ, ಮೋಹಾದಿಗಳಿಗೆ ಒಳಗೊಂಡು ಪರಸ್ಪರ ಕಾದಾಡುತ್ತಿದ್ದರು. ಅಲ್ಲದೆ ಜಂಬೂ ದ್ವೀಪವು ದೈತ್ಯ—ದಾನವರಿಂದ ಆಕ್ರಮಿಸಲ್ಪಟ್ಟು ಅನೇಕರು ಆ ದುಷ್ಟರ ಬಾಧೆಗಳಿಗೊಳಗಾಗಿ ನಾನಾ ದುಃಖಗಳಿಗೀಡಾದರು. ದೇವೇಂದ್ರನಿಗೆ ಇದರಿಂದಾಗಿ ಚಿಂತೆ ಹುಟ್ಟಿ ಬ್ರಹ್ಮದೇವನ ಬಳಿಗೆ ಹೋಗಿ ದೈತ್ಯ — ದಾನವ — ಮಾನವರೆಲ್ಲರಿಗೂ ಮನಸ್ಸಂತೋಷವಾಗುವಂತೆ, ಧರ್ಮ—ನೀತಿಗಳು ಅವರ ಮನಸ್ಸಿನಲ್ಲಿ ಮುಟ್ಟಿ ಸರ್ವರಿಗೂ ನೀತಿ ಬೋಧಕವಾದ ಆಟವನ್ನು ಕಲ್ಪಿಸಲು ಐದನೆಯ ವೇದವನ್ನು ಸೃಜಿಸಬೇಕೆಂದು ಪ್ರಾರ್ಥಿಸಿದನು. ಇದಕ್ಕೊಪ್ಪಿದ ಬ್ರಹ್ಮದೇವನು ಋಗ್ವೇದದಿಂದ ಸಾಹಿತ್ಯವನ್ನೂ, ಯಜುರ್ವೇದದಿಂದ ಅಭಿನಯವನ್ನೂ, ಸಾಮ ವೇದದಿಂದ ಗಾನವನ್ನೂ, ಅಥರ್ವ ವೇದದಿಂದ ರಸಗಳನ್ನೂ ಸಂಗ್ರಹಿಸಿ ನಾಟ್ಯ ವೇದವೆಂಬ ಐದನೆಯ ವೇದವನ್ನು ಸೃಷ್ಟಿಸಿದನು.

ಈ ನಾಟ್ಯ ವೇದವನ್ನು ಯಶಸ್ಸಿಗೆ ತರಲು ಬುದ್ಧಿವಂತರು ಬೇಕೆಂದು ಇಂದ್ರನು ಭರತ ಮುನಿಯನ್ನೇ ಈ ಕಾರ್ಯಕ್ಕೆ ನಿಯಮಿಸಿದನು. ಭರತನು ತನ್ನ ನೂರು ಮಂದಿ ಪುತ್ರರಾದ ಶಾಂಡಿಲ್ಯ, ವಾತ್ಸ್ಯ, ಕೋಹಲ ಮುಂತಾದವರಿಗೆ ನಾಟ್ಯ ಶಾಸ್ತ್ರವನ್ನು ಅಭ್ಯಾಸ ಮಾಡಿಸಿ ಭಾರತಿ, ಸಾತ್ವತೀ, ಆರಭಟ ಎಂಬ ಮೂರು ನೃತ್ಯಗಳ ಪ್ರಯೋಗಗಳನ್ನು ಬೋಧಿಸಿದನು. ಆನೇದಾದ ಕೈಶಿಕೀ ವೃತ್ತಿಯು ನಾಟ್ಯಕ್ಕೆ ಬಹು ನಯವೂ, ಸುಕುಮಾರವೂ ಆಗಿದೆ. ಆ ವೃತ್ತಿಯಲ್ಲಿ ಅಭಿನಯ ಮಾಡಲು ಸ್ತ್ರೀಯರಿಗೆ ಮಾತ್ರವೇ ಸಾಧ್ಯ. ಆದುದರಿಂದ ಭರತ ಮುನಿಯು ಕೈಶಿಕೀ ವೃತ್ತಿಯ ಅಭಿನಯಗಳನ್ನು ಪುರುಷರಾದ ತನ್ನ ಕುಮಾರರಿಗೆ ಕಲಿಸಲಿಲ್ಲ. ಇದನ್ನು ತಿಳಿದ ಬ್ರಹ್ಮದೇವನು ಶಿವತಾಂಡವದಲ್ಲಿ ತಾನು ಈ ಕೈಶಿಕೀ ವೃತ್ತಿಯ ಅಭಿನಯಗಳನ್ನು ನೋಡಿರುವುದಾಗಿಯೂ, ಅಂತಹ ಅಂದವಾದ ನಾಟ್ಯವನ್ನು ಬಿಡಕೂಡದೆಂದೂ ಹೇಳಿ, ಮಂಜು ಕೇಶಿ, ಸುಕೇಶಿ, ಮಿಶ್ರಕೇಶಿ ಮೊದಲಾದ ಇಪ್ಪತ್ತನಾಲ್ಕು ಮಂದಿ ಅಪ್ಸರ ಸ್ತ್ರೀಯರನ್ನು ಸೃಷ್ಟಿಸಿ ಅವರಿಗೆ ಕೈಶಿಕೀ ವೃತ್ತಿಯ ನಾಟ್ಯದ ಶಿಕ್ಷಣ ಕೊಡಿಸುವರೆ ಭರತನನ್ನೇ ನೇಮಿಸಿದನು. ಭರತ ನಾಟ್ಯದ ಹುಟ್ಟು ಹೀಗಾಯಿತು.

ನರ್ತನಗಳ ಮೂಲಕ ನಾಟಕಗಳನ್ನು

ಚಿಕ್ಕ ಹಿಡುವಳಿದಾರರಿಗೆ ಉತ್ತಮ ಕೊಡುಗೆ

ವರ್ಜಿನ್ ಕ್ರೂಡ್ ಆಯಿಲ್
3 H. P. ಪಂಪು ಸೆಟ್ಟುಗಳು........

ಧನ ಇಲೆಕ್ಟ್ರಿಕ್ ಮೋಟಾರು ಮತ್ತು
(½ H.P. to 30 H.P.) ಪಂಪು ಸೆಟ್ಟುಗಳು........

ವಿತರಣೆಗಾರರು:—

ಸಿತ್ಯಾನಂದ ಇಂಡಸ್ಟ್ರಿಯಲ್ ಏಜನ್ಸಿಸ್

ಕಾರ್ಕಳ (ದ. ಕ.)

ಅಭಿನಯಿಸುವರು. ಆಂಧ್ರ ಪ್ರದೇಶದ ಕುಚ್ಚಿಪುಡಿ ಎಂಬ ಹಳ್ಳಿಯಲ್ಲಿ ನರ್ತನಾಭಿನಯಗಳಿಂದ ನಾಟಕವನ್ನು ಅಭಿನಯಿಸುವರು. ಇದು ಕುಚ್ಚಿಪುಡಿ ನೃತ್ಯವೆಂದು ಪ್ರಸಿದ್ಧವಾಗಿದೆ. ಶಿವನು ನಾಟ್ಯಕಲೆಯ ಜನಕನಾದುದರಿಂದಲೇ ನಟರಾಜನೆಂದು ಪ್ರಸಿದ್ಧನಾಗಿದ್ದಾನೆ. ಕೃಷ್ಣನು ಕೊಳಲು ಬಾರಿಸುತ್ತ ನರ್ತನ ಮಾಡುವ ಹಲವು ಭಂಗಿಗಳನ್ನು ದೇವಾಲಯಗಳಲ್ಲಿ ಕಾಣುತ್ತೇವೆ.

ದಕ್ಷಿಣ ಭಾರತದಲ್ಲಿ ದೇವಾಲಯಗಳಲ್ಲಿ ನೃತ್ಯ ಮಾಡುವವರನ್ನು "ದೇವದಾಸಿ"ಗಳೆನ್ನುವರು. ಇವರು ಭಗವತ್ಕಾರ್ಯದಲ್ಲಿ ನಿರತರಾದ ಸ್ತ್ರೀಯರಾಗಿರುವರು.

"ರಾಜದಾಸಿ"ಗಳೆನ್ನುವವರು ದೇವಾಲಯದ ಧ್ವಜಸ್ತಂಭದ ಇದಿರು ನರ್ತನ ಮಾಡುವವರು.

"ಅಲಂಕಾರ ದಾಸಿ"ಗಳೆಂಬವರು ಸಾಮಾಜಿಕ ಕೂಟಗಳಲ್ಲಿ ನೃತ್ಯ ಮಾಡುವವರ,

ಕುಂಭಾಭಿಷೇಕ ಇತ್ಯಾದಿ ವಿಶೇಷ ಸಮಾರಂಭಗಳಲ್ಲಿ ನೃತ್ಯ ಮಾಡುವವರು— "ಸ್ವದಾಸಿ"ಗಳು.

ಭರತನಾಟ್ಯದಲ್ಲಿ ಪ್ರಥಮ ಅಂಗವೇ ಅಲರಿಪು. ದೇವರನ್ನು, ಗುರುಗಳನ್ನು, ವಿದ್ವಾಂಸರನ್ನು, ಪ್ರೇಕ್ಷಕರನ್ನು ಪ್ರಾರ್ಥಿಸುವುದು. ಮೃದಂಗವು ಈ ಕಾರ್ಯಕ್ಕೆ ಹೆಚ್ಚಾಗಿ ಉಪಯೋಗಿಸಲ್ಪಡುತ್ತದೆ. ದೇವಪೂಜನೆಯ ಒಂದು ಕ್ರಮವೂ ಇದಾಗಿದೆ.

ಒರಿಸ್ಸದ "ಒಡಿಸ್ಸಿ" ಮತ್ತು ಅಸ್ಸಾಂ ರಾಜ್ಯದ "ಸತ್ರಿಯಾ" ಮತ್ತು ಇತರ ಶಾಸ್ತ್ರೀಯ ನೃತ್ಯಗಳು ಭರತ ನಾಟ್ಯವನ್ನೇ ಹೋಲುತ್ತದೆ.

ಒಡಿಸ್ಸಿ ನೃತ್ಯವು ದೇವದಾಸಿಯರ ಸೊತ್ತು. ಒಡಿಸ್ಸಿ ನೃತ್ಯದ ಮೂಲವನ್ನು ಭರತನ ನಾಟ್ಯ ಶಾಸ್ತ್ರಕ್ಕೆ ಹೊಂದಿಸುವುದರಿಂದ ಇದು ಸುಮಾರು ೨ ಸಾವಿರ ವರ್ಷಗಳ ಹಿಂದೆಯೇ ಜನಾದರಣೆ ಪಡೆದಿತ್ತೆನ್ನಬಹುದು. (ಶಿವನಿಂದ ಸೃಜಿತವಾದ ಈ ನೃತ್ಯವನ್ನು ಶಿವನು ಗಣೇಶನಿಗೆ ಕಲಿಸಿದನು. ಗಣಪತಿಯು ಮನ್ಮಥ ಎಂಬ [illegible]ನಿಗೆ ಕಲಿಸಿದನಂತೆ, ಆತ ಅದನ್ನು ಭೂಮಿಯ ಮಾನವರಿಗೆ ಕಲಿಸಿಕೊಟ್ಟ. ಈ ಕಲೆಯನ್ನು ದೇವದಾಸಿಯರಿಗೆ ತಿಳಿಯಪಡಿಸಿದರೆಂದೂ ಅಭಿನಯ ಚಂದ್ರಿಕಾ ಗ್ರಂಥವು ಈ ನಾಟ್ಯೋತ್ಪತ್ತಿಯ ಬಗೆಗೆ ಬರೆದಿದೆ) ಆದುದರಿಂದ ಒಡಿಸ್ಸಿ ನೃತ್ಯದ ಇತಿಹಾಸವು ದೇವದಾಸಿಯರ ಚರಿತ್ರೆಯಾಗಿದೆ. ಭರತನಾಟ್ಯದ ಸಹೋದರಿಯಂತಿರುವ ಒಡಿಸ್ಸಿ ನೃತ್ಯವು ಕೂಡಾ ಭರತನಾಟ್ಯದಂತೆ ಲಾಸ್ಯಪ್ರಧಾನವಾದುದು ಹಾಗೂ ಅತ್ಯಂತ ಕಟ್ಟುನಿಟ್ಟಾದುದು.

(ಸಂಗ್ರಹ.)

ಪ್ರಕಟಣೆ

ಉಡುಪಿ ತಾಲೂಕು ಮೂಡುತೋನ್ಸೆ ಗ್ರಾಮದ ಮೂಡುಕುದ್ರುವಿನಲ್ಲಿರುವ ಐತು ಬೆಳ್ಚಡನ ಮಗ ಅಂಗರ ಬೆಳ್ಚಡನೆಂಬ ನಾನು ತಿಳಿಯಪಡಿಸುವುದು. ನನ್ನ ತಂದೆಯ ಕುಟುಂಬದ ಸಮಷ್ಟಿ ಹಕ್ಕಿನ [illegible] ಮೂಡುತೋನ್ಸೆ ಗ್ರಾಮದ ಸುಮಾರು ೩೮ ಸೆಂಟ್ಸ್ ವಿಸ್ತೀರ್ಣದ ನನ್ನ ವಾಸ್ತವ್ಯದ ಮನೆ ಇರುವ ಸ್ಥಳ ಮತ್ತು ಕುಟುಂಬದ ಪಕ್ಕದ ಬೈಕಾಡಿ ಗ್ರಾಮದ ಸುಮಾರು ಒಂದು ಎಕ್ರೆ ಮತ್ತು ಸೆಂಟ್ಸ್ ವಿಸ್ತೀರ್ಣದ ತೋಟ ಸ್ಥಳ ಕೂಡಾ 2 ಸ್ಥಳಗಳನ್ನು ಈಗ ಕೆಲವು ಸಮಯದಿಂದ ಸರಿಯಾದ ಬುದ್ಧಿ ಶಕ್ತಿ ಇಲ್ಲದ ನನ್ನ ತಂದೆಯವರು [illegible] ದುರ್ಬೋಧನೆಯ ಮೇರೆಗೆ ನನ್ನ ಸಮ್ಮತಿ ಇಲ್ಲದೆ ಇತರರಿಗೆ ಸ್ವಾಧೀನ [illegible] ಇರಾದೆಯಲ್ಲಿರುತ್ತಾರಾಗಿ ನನಗೆ [illegible] ಈ ಪ್ರಕಾರ ಪರಾಧೀನವೂ [illegible] ಅವರಿಗೆ ಎಷ್ಟನ್ನಾದರೂ ಹಾಕಿರುವುದಿಲ್ಲ [illegible] ಅವರು ನನ್ನ ಉಳ್ಳ [illegible] ಪರಾಧೀನಗಳು ನನ್ನ ಹಕ್ಕಿಗೆ ಬಾಧಕವಾಗುವುದಿಲ್ಲ. ಅಂತ ಪರಾಧೀನಗಳನ್ನು [illegible] ರೀತಿಯಲ್ಲಿ ರದ್ದು ಪಡಿಸುವರೆ ನಾನು ಸಂಪೂರ್ಣ ಸ್ವತಂತ್ರನಾಗಿರುತ್ತೇನೆ. [illegible] ಪರಾಧೀನ ಮಾಡಿಸಿಕೊಂಡವರು [illegible] ಉಂಟಾಗುವ [illegible] ವ್ಯವಹಾರಗಳಲ್ಲಿ [illegible] ಮಾಡುವ ಸಕಲ ಖರ್ಚು ನಷ್ಟಗಳನ್ನು ತೆತ್ತುಕೊಡಬೇಕಾಗುವುದೆಂದು ಕೂಡಾ ತಿಳಿಸಲಾಗಿದೆ.

— ಅಂಗರ ಬೆಳ್ಚಡನೆ ರುಜು.

ಕೆಸರಿನ ಜ್ವಾಲಾಮುಖಿಗಳು

(ಏಳನೇ ಪುಟದಿಂದ)

ಸುಮಾರು ಒಂದೂವರೆ ಶತಮಾನದವರೆಗೆ ಸುಪ್ತವಾಗಿದ್ದ ಅಯಿರಾಂತೆಕಿಯನ ಜ್ವಾಲಾಮುಖಿಯು ಒಮ್ಮೆಗೇ ಹೀಗೆ ಜಾಗೃತವಾಯಿತು. ಭೂಮಿಯೊಳದಿಂದ ಹೊರ ಚಿಮ್ಮಲಾದ ಶಿಲಾಪ್ರವಾಹದ ತೂಕವು ಸುಮಾರು ಇಪ್ಪತ್ತೈದು ಲಕ್ಷ ಟನ್ನುಗಳೆಂದು ಅಂದಾಜು ಮಾಡಲಾಯಿತು.

ಅಪ್ಷೆರಿನ್ ಎಂಬ ಇನ್ನೊಂದು ಕೆಸರು ಜ್ವಾಲಾಮುಖಿಯು ನಲವತ್ತು ವರ್ಷಗಳಿಂದ ವಿಜ್ಞಾನಿಗಳ ಸಮೀಕ್ಷೆಗೆ ಒಳಪಟ್ಟಿದೆ. ಅಪರೂಪವಾಗಿ ಅದು ಎಣ್ಣೆ ಬೆರೆತ ಕೆಸರು—ನೀರನ್ನು ಸ್ವಲ್ಪ ಪ್ರಮಾಣದಲ್ಲಿ ಹೊರ ಚಿಮ್ಮುತ್ತಿತ್ತು. ಆದರೆ ಜೂನ್ ತಿಂಗಳಲ್ಲೊಂದು ಸಂಜೆ ಅದು ಜಾಗೃತವಾಯಿತು. ಅದರಿಂದ ಭೂಮ್ಯಂತರಾಳದ ಅನಿಲವು ಬುಸುಗುಟ್ಟುತ್ತ ಹೊರ ಚಿಮ್ಮಿತು. ಚೂರುಗಲ್ಲುಗಳ ೫—೬ ಮೀಟರು ಎತ್ತರವಾದ ಬಂಡೆಗಳೂ ಸಹ ಹೊರ ಬಂದುವು. ಭೂಮಿಯ ಮೇಲ್ಮೈಯ ಒಳಪದರದ ಗಸಿ—ರಾಶಿಯಲ್ಲಿ ಉಂಟಾದ ಚಲನಾಂತರಗಳಿಂದ ಈ ಸ್ಫೋಟವುಂಟಾಯಿತು. ಎರಡು ದಿನ ಮೊದಲು ಈ ಪ್ರದೇಶದಲ್ಲಿ ಸಂಭವಿಸಿದ ಭೂಕಂಪವೇ ಈ ಚಲನಾಂತರಗಳಿಗೆ ಕಾರಣವಾಗಿತ್ತು.

ಒತ್ಮನ ಬೊಜ್ದಾಗ್ ಎಂಬೆಡೆಯದು ಪ್ರಾಯಶಃ ಇಂತಹ ಅತ್ಯಂತ ಭಾರಿ ಕೆಸರು ಜ್ವಾಲಾಮುಖಿ ಆಗಿದೆ. ಅದು ಒಮ್ಮೆ ಹದಿನಾಲ್ಕು ಕಿಲೋಮೀಟರು ಎತ್ತರವಾದ ಹೊಗೆಗಂಬವನ್ನುಂಟುಮಾಡಿ [illegible] ದಿವಸಗಳವರೆಗೆ ಉರಿಯಿತು.

ಕೆಸರು ಜ್ವಾಲಾಮುಖಿ ಸ್ಫೋಟಗಳು ಭೂಗರ್ಭಶಾಸ್ತ್ರಜ್ಞರಿಗೆ ವಿಶೇಷ ಸ್ವಾರಸ್ಯಕರವಾದ ಅನೇಕ ಬಹುವಿಧಗಳನ್ನು — ತೈಲಾಂಶವುಳ್ಳ ವಿಭಿನ್ನ ಶಿಲೆಗಳ ಚೂರುಗಳನ್ನು — ಒದಗಿಸುತ್ತವೆ. ಈ ಚೂರುಗಳನ್ನು ಕೆಲವು ವೇಳೆ ನಾಲ್ಕೈದು ಕಿಲೋಮೀಟರು ಆಳದಿಂದ ಹೊರಹಾಕಲಾಗುತ್ತದೆ. ಅತ್ಯಂತ ಸುಂದರವಾದ ಎ

ಥಾನಗಳಿಂದಲೂ ಸಹ ಇನ್ನೊಂದು ಆಳಕ್ಕೆ ಕೊರೆಯುವುದು ಇದುವರೆಗೆ ಸಾಧ್ಯವಾಗಿಲ್ಲ.

ಕೆಸರು ಜ್ವಾಲಾಮುಖಿಗಳಲ್ಲಿ ಯಾವುದು 'ಆಶ್ಚರ್ಯ'ಚಕಿತರನ್ನು ಮುಂದೆ ನೀಡಲಿದೆ? ಅದು ಯಾವಾಗ 'ಮಾತನಾಡುವುದು?"—ಈ ಸಮಸ್ಯೆಗಳಿಗೆ ಸರಿಯಾದ ಉತ್ತರವನ್ನು ಕಂಡು ಹಿಡಿಯಲು ಭೂಗರ್ಭ ವಿಜ್ಞಾನ ತಜ್ಞರು ಪ್ರಯತ್ನಿಸುತ್ತಿದ್ದಾರೆ.

ಕವಲು ದಾರಿ—ಕೆಂಪು ದೀಪ

ಯಾವ ದಾರಿ ತುಳಿಯಬೇಕು?

ಕೆಂಪು ಚೀನಾದೆಡೆಗಡೆ ಹೊಸ ರಕ್ತ ಹೊಸ ಕ್ರಾಂತಿಯನ್ನು ಹಂಚುತ್ತಿದೆ.

ಇದು ಮಾನವನಿಗೆ ಸಂರಕ್ಷಕವಾಗುವುದೇ—ಸಂಭಕ್ಷಕವೆನಿಸುವುದೇ—ಈಗಲೇ ಹೇಳಲಾಗುವುದಿಲ್ಲ. ಕಮ್ಯೂನಿಸ್ಟ್ ದೇಶಗಳ ಗುಟ್ಟು ಗುಟ್ಟಾಗಿದ್ದೇ ಕೊನೆಗೊಂದು ದಿನ ರಟ್ಟಾಗುತ್ತಿದೆ—ಆಗ ಆಗಬಹುದಾದದ್ದೆಲ್ಲಾ ಆಗಿ ಹೋಗಿರುತ್ತದೆ.

ನವಕ್ರಾಂತಿಯ ಹೆಸರಿನಲ್ಲಿ ಅಲ್ಲಲ್ಲಿ ಅನ್ಯಾಯ—ಅತ್ಯಾಚಾರ—ಬಲಾತ್ಕಾರಗಳೂ ನಡೆಯುತ್ತಿವೆ—ಇದು ಸ್ವಾಭಾವಿಕ. ಪ್ರಜಾಸತ್ತಾತ್ಮಕ ಸಮಾಜವಾದಿ ರಾಷ್ಟ್ರ ಭಾರತದಲ್ಲಿಯೂ ಇದು ತಪ್ಪಿದ್ದಲ್ಲ—

—ಒಂದೇ ಔಷಧಿ— ತುಂಬಿಸಿದ ಬಾಟಲಿಯ ಬಣ್ಣ ಮಾತ್ರ ಬೇರೆ.

—ಅಲ್ಲಿ ಕ್ರಾಂತಿಯ ಹಿನ್ನೆಲೆಯಲ್ಲಿ ಬಲಾತ್ಕಾರಾದಿಗಳು ನಡೆದರೆ, ಇಲ್ಲಿ ಸಂಪು—ಮತಪ್ರದರ್ಶನಗಳ ಮೂಲಕ ಸಾರ್ವಜನಿಕರ ಮೇಲೆ ಒತ್ತಾಯ—ಬಲಾತ್ಕಾರಗಳನ್ನು ಹೇರಲು ಪ್ರಯತ್ನಿಸಲಾಗುತ್ತಿದೆ.

ಏನಾದರೊಂದು ನೆಪ ಸಿಕ್ಕಿದರೆ ಸಾಕು ಸಂಪು—ಪ್ರದರ್ಶನ—ಬಂದ್ ಇತ್ಯಾದಿ ಇತ್ಯಾದಿ.

ಸಾವಿರ ನೌಕರರು ಪ್ರತಿಯೊಬ್ಬರು ಒಂದು ನಿಮಿಷ 'ಪೆನ್ ಡೌನ್ ಸ್ಟ್ರೈಕ್" ಮಾಡಿದರೆಂದರೆ ಆಗುವ ನಷ್ಟವನ್ನು ಲೆಕ್ಕಮಾಡಿ—ಮೂವರ ಒಂದು ದಿನದ ಕೆಲಸ ನಷ್ಟ'—ಇದು ಯಾರಿಗೆ? ಮಾಲಕರಿಗೆ?

ಮಾಲೀಕರಿಗೆ, ಗ್ರಾಹಕರಿಗೆ—ಒಟ್ಟಿನಲ್ಲಿ ದೇಶಕ್ಕೆ....ರಾಷ್ಟ್ರೀಯ ನಷ್ಟವಿದು.

ಆದರೆ ಇಂತಹ ನಷ್ಟದಾಯಕ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತ, ಪ್ರೋತ್ಸಾಹಿಸುತ್ತ ಕೆಲವು ರಾಜಕೀಯ ಸಂಘಸಂಸ್ಥೆಗಳು—ಪಕ್ಷಗಳು—ಇತರರ ಹಿತಸಾಧನೆಯ ಹೆಸರಿಟ್ಟುಕೊಂಡು ಸ್ವಾರ್ಥಸಾಧನೆಯಲ್ಲಿ ಲೀನವಾಗುತ್ತಿವೆ. ಕೆಂಪು ಚೀನಾದ ಕೆಂಪು ರಕ್ಷಕರಿಗಿಂತ ಇವರು ಯಾವ ರೀತಿಯಲ್ಲಿ ಮೇಲಿನವರು?

ಪ್ರಜಾಪ್ರಭುತ್ವದಲ್ಲಿ ಜನತೆಯ ಸಂಕಟವನ್ನು ಸರಕಾರಕ್ಕೆ ತಿಳಿಸುವುದು ನ್ಯಾಯೋಚಿತ. ಜನತೆ ಆರಿಸಿದ ಪ್ರತಿನಿಧಿಯು ಇದನ್ನು ಕಾನೂನಾಗಿ ಕಂಡುಕೊಳ್ಳುವುದಕ್ಕೆ ತಪ್ಪಿದರೆ, ಜನತೆಯ ಗೋಳನ್ನು ಅರಿತುಕೊಳ್ಳಲು ತಪ್ಪಿದರೆ ಮತ್ತೆ ಮಾಡುವುದೇನು?

ಸರಕಾರದ ಗಮನಕ್ಕೆ ಕುಂದುಕೊರತೆಗಳನ್ನು ತರಬೇಕು; ಅವುಗಳ ನಿವಾರಣೆಗೆ ಪ್ರಯತ್ನಿಸಬೇಕು— ಜನಹಿತಸಾಧನೆಯೂ ಇದರಲ್ಲಿ ಪ್ರಜೆಗಳದೇ ಕರ್ತವ್ಯ ಅಧಿಕ.

—ಆದರೆ, ನಾವೇನು ಮಾಡುತ್ತೇವೆ?

—ಸತ್ಯಾಗ್ರಹಕ್ಕೆ ತೊಡಗುತ್ತೇವೆ, ಜರಿಬಾವುಟಗಳ ಮೆರವಣಿಗೆ ಹೊರಡಿಸುತ್ತೇವೆ, ಸರಕಾರಿ ಕಛೇರಿಗಳ ಮುಂದೆ ಕೂತುಬಿಡುತ್ತೇವೆ. ಸರಕಾರದ ನೀತಿಯನ್ನು ಧಿಕ್ಕರಿಸುವ ಹೇಳಿಕೆ ನೀಡುತ್ತೇವೆ. ಘೋಷಣೆ ಮಾಡುತ್ತೇವೆ, ಕರಪತ್ರ ಹಂಚುತ್ತೇವೆ, ಭಾಷಣ ಬಿಗಿಯುತ್ತೇವೆ, ಇತ್ಯಾದಿ ಇತ್ಯಾದಿ.

—ಇಷ್ಟರಿಂದ ಕುಂದು ಕೊರತೆಗಳು ಮಾಯವಾಗುವುವೆ?

ಬೆಲೆಯೇರಿಕೆ ಗಗನವೇರಿದೆಯೆಂಬುದು ಎಲ್ಲರೂ ಒಪ್ಪತಕ್ಕ ಮಾತು. ಇದನ್ನು ಎಂತಾದರೂ ಮಾಡಿ ಇಳಿಸಬೇಕು—ಇದೂ ನ್ಯಾಯ. ಹೇಗೆ?

ಬರಿಯ ಘೋಷಣೆಯಿಂದ ಸಾಧ್ಯವಿದೆಯೆ? ಇಳಿಕೆಗೆ ಪೋಷಣೆ ನೀಡುವಂತಹ ಕ್ರಮಗಳನ್ನು ನಾವು ಕೈಕೊಳ್ಳಬೇಕೆ? ಬರಿಯ ಭಾಷಣ ಘೋಷಣೆಯಿಂದ ಅಧಿಕ ಆರೋತ್ಪಾದನೆಯಾಗುವುದಿಲ್ಲವೆಂದು ಹೇಳುವ ಅಷ್ಟ ಗೌರವವಂತ ಮಹನೀಯರೇ ಅವುಗಳ ಮೂಲಕ ಬೆಲೆಯೇರಿಕೆಯ ಸೂತ್ರ ಜಗ್ಗಲು ಮುಂದಾಗುವುದಕ್ಕಿಂತ ಬೇರೆ ದುರವಸ್ಥೆಯೇನು?

—ಮಾತು ಸಾಕು, ಕೃತಿ ಬೇಕು. ನಮಗೆ ಮತಗಳಿಕೆಗಾಗಿ, ಜನತೆಯಲ್ಲಿ ತಾವೂ ಇದ್ದೇವೆ ನಿಮ್ಮ ರಕ್ಷಣೆಗೆ ಎಂಬ ವಿಶ್ವಾಸವನ್ನು ಹುಟ್ಟಿಸುವ ಈ ಪ್ರದರ್ಶನವಾದಿಗಳಿಂದ ಜನತೆ ಎಚ್ಚರಿರಬೇಕು.

—ಭಾಷಣ—ಯೋಜನೆ—ಆಲೋಚನೆಗಳು ವ್ಯರ್ಥ.

—ಅವರೆ, ಮತ ಪ್ರದರ್ಶನ ಪ್ರತಿಭಟನಾದಿಗಳು ವ್ಯರ್ಥ ಮಾತ್ರವಲ್ಲ, ಅನರ್ಥಕಾರಿ, ಅಧಿಕ ಗಂಡಾಂತರಕಾರಿ, ವಿನಾಶಕಾರಿ.

ಜನಜಾಗೃತಿ ಮೂಡಿಸದಿದ್ದಲ್ಲಿ ಗಂಡಾಂತರ—ಸೋಮಾರಿತನಗಳಿಗೆ ಎಡೆಯುಂಟಾಗಿ ಒದಗುತ್ತದೆ—ದೇಶವನ್ನು ಲಯ ಮಾಡುತ್ತದೆ.

ವಿಚಾರವಾದಿಗಳು ಇಂದು ವಿಚಾರಿಸಿ ನಿರ್ಧಾರಕ್ಕೆ ಬರಬೇಕು—ನಾವು ಯಾವ ದಾರಿ ತುಳಿಯಬೇಕು?

ದುಡಿಮೆಯ ದಾರಿಯಲ್ಲಿ ಜನತೆ ಮುಂದುವರಿಯಬೇಕೆ? ಆಳಿಮೆಯ ದಾರಿಯಲ್ಲಿ?

ಟೆಲಿಗ್ರಾಂ: 'ಸುದರ್ಶನ'. ಸ್ಥಾಪನೆ: 1914 ಫೋನ್ 3428

ಜಗತ್ಪ್ರಸಿದ್ಧವಾದ ಜೈಹಿಂದ್ ಹಂಚುಗಳನ್ನೇ

ಸದಾ ಉಪಯೋಗಿಸಿರಿ.

ತಯಾರಕರು: ಸುದರ್ಶನ ಟೈಲ್ ವರ್ಕ್ಸ್, ಬೋಳಾರ, ಮಂಗಳೂರು-೧

READ & ADVERTISE IN NAVAYUGA WEEKLY

(ಮೂರನೇ ಪುಟದಿಂದ)

ಸ್ಥದ ಸದಸ್ಯರು ಕ್ರೋಧಗೊಂಡಿದ್ದಾರೆ. ಅವರ ಅಲ್ಪ ಸಂಖ್ಯಾತ ಬಿಳಿಯರ ಸರಕಾರವನ್ನು ಕೊನೆಗಾಣಿಸಲು ಸೂಕ್ತ ಕ್ರಮವನ್ನು ಬ್ರಿಟನ್ನು ತೆಗೆದು ಕೊಳ್ಳ ಬೇಕು—ಇದು ಅವರ ಅಂಬೋಣ. ಆದರೆ ಇದಕ್ಕೆ ಬ್ರಿಟನ್ ತಯಾರಿಲ್ಲ. ಇಷ್ಟವಾದರೆ, ಕಳೆದು ಏಳು ತಿಂಗಳುಗಳ ಕಾಲ ಅದು ಯಾಕೆ ಕೈಕಟ್ಟಿ ಕುಳಿತಿದೆ? ಇದೀಗ ಆರ್ಥಿಕ ದಿಗ್ಬಂಧನ ಹೇರುವ ಬೆದರಿಕೆ ಹಾಕಿದೆ; ಸಂಯುಕ್ತ ರಾಷ್ಟ್ರ ಸಂಘಕ್ಕೆ ಪ್ರಶ್ನೆಯನ್ನೊಯ್ಯುವುದಾಗಿ ಹೇಳಿದೆ. ಅದರಿಂದೇನಾದೀತು? ದಕ್ಷಿಣ ಆಫ್ರಿಕೆಯು ರೋಡೇಶಿಯಕ್ಕೆ ನೆರವು ನೀಡುವುದು ಸಾಧ್ಯವಾಗಲಿಲ್ಲ. ರೋಡೇಶಿಯಾದಲ್ಲಿ ನ್ಯಾಯಪೂರ್ಣವಾಗಿರುವ ಅಧಿಕಾರ—ಶಕ್ತಿ ಬ್ರಿಟನ್ನಿಗಿದೆ. ಆದರೆ ಅದನ್ನು ಉಪಯೋಗಿಸಲು ವಿಲ್ಸನ್ ಸಿದ್ಧರಿಲ್ಲ—ಎಂತಲೇ ಕಾಮನ್‌ವೆಲ್ತ್ ಪ್ರಧಾನಿ ಕೂಟದಲ್ಲಿ ಆಸಕ್ತಿ ಕಡಿಮೆಯಾಗಿದೆ. ಬ್ರಿಟನ್ನಿನ ಜಾಗತಿಕ ಸ್ಥಾನಮಾನವೂ ಇಳಿಯುತ್ತ ಬಂದಂತೆ ಕಾಮನ್‌ವೆಲ್ತ್ ಕೂಟವೂ ದುರ್ಬಲವಾಗುತ್ತ ಬರುವುದು—ಇದೊಂದು ವ್ಯರ್ಥವಾದ ಕೂಟವೆನಿಸುವ ದಿನ ಬರಬಹುದು.

ಪುತ್ತೂರು ಪ್ರಿನ್ಸಿಪಾಲ್ ಮುನ್ಸಿಫ್ ಕೋರ್ಟಿನಲ್ಲಿ

O. S. 335/1966.

ದಾಮೋದರ ಭಟ್ಟ ಕೂಡಾ—ವಾದಿ

ಅತ್ತಪ್ಪಗೌಡ ಕೂಡಾ—ಪ್ರತಿವಾದಿ

ಪುತ್ತೂರು ತಾಲ್ಲೂಕು ಪಡುವನ್ನೂರು ಗ್ರಾಮದ ದೊಡ್ಡಮನೆ ಅತ್ತಪ್ಪ ಗೌಡರ ಮಗ ಕೃಷ್ಣಪ್ಪಗೌಡರಿಗೆ ಈ ಮೂಲಕ ತಿಳಿಯಪಡಿಸುವದೇನೆಂದರೆ—

ವಾದಿಯು ನಿಮ್ಮ ಮೇಲೆ ಕೂಡಾ ಅಡವು ದಸ್ತಾವೇಜಿನ ಅಸಲು ಬಡ್ಡಿ ವಗೈರೆ ವಸೂಲಿ ಬಗ್ಗೆ ಮೇಲ್ಕಾಣಿಸಿದ ಕೋರ್ಟಿನಲ್ಲಿ ದಾಖಲು ಮಾಡಿದ ಮೇಲಿನ ದಾವೆಯು ನಿಮ್ಮ ಹಾಜರಾತಿ ಬಗ್ಗೆ 29—9—1966ಕ್ಕೆ ಇರುತ್ತದೆ. 29—9—1966ನೇ ದಿನ ಪೂರ್ವಾಹ್ನ 11 ಗಂಟೆಗೆ ಮೇಲ್ಕಾಣಿಸಿದ ಕೋರ್ಟಿನಲ್ಲಿ ಹಾಜರಾಗಿ ಉತ್ತರ ಕೊಡತಕ್ಕದ್ದು. ತಪ್ಪಿದಲ್ಲಿ ನಿಮ್ಮನ್ನು ಗೈರು ಮಾಡಿ ಯುಕ್ತ ಕಂಡಂತೆ ದಾವಾ ತೀರ್ಮಾನಿಸಲಾದೀತು.

(ಕೋರ್ಟು ಹುಕುಂ ಪ್ರಕಾರ)

PULU NARAYANA BHAT.
Advocate for Pltf.

ಪುತ್ತೂರು, ದ. ಕ. 14—9—1966.

ಪುತ್ತೂರು ಪ್ರಿನ್ಸಿಪಾಲ್ ಮುನ್ಸಿಫ್ ಕೋರ್ಟಿನಲ್ಲಿ

S C 129/1966

ಗೋಪಾಲಕೃಷ್ಣ ಉಂಜತ್ತಾಯ—ವಾದಿ

ತಮ್ಮಣ್ಣ ಗೌಡ ಕೂಡಾ—ಪ್ರತಿವಾದಿ

ಸುಳ್ಯ ತಾಲ್ಲೂಕು ಕನಕಮಜಲು ಗ್ರಾಮದ ಕನಕಮಜಲು ಎಂಬಲ್ಲಿರುವ ಮುಂಜಪ್ಪಗೌಡರ ಮಗ ತಮ್ಮಣ್ಣ ಗೌಡರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ—

ನಿಮ್ಮ ಮೇಲೆ ಕೂಡಾ ವಾದಿಯು ಮೇಲಿನ ಕೋರ್ಟಿನಲ್ಲಿ ದಾಖಲು ಮಾಡಿದ ವ್ಯಾಜ್ಯವು ತಾ. 6—10—66ಕ್ಕೆ ನಿಮ್ಮ ಹಾಜರಾತಿ ಬಗ್ಗೆ ಇಟ್ಟಿರುವುದರಿಂದ ಆ ದಿನ ಬೆಳಿಗ್ಗೆ 11 ಗಂಟೆಗೆ ಮೇಲಿನ ಕೋರ್ಟಿನಲ್ಲಿ ಹಾಜರಾಗಿ ಉತ್ತರಿಸಿಕೊಳ್ಳದಿದ್ದಲ್ಲಿ ನಿಮ್ಮನ್ನು ಗೈರು ಮಾಡಿ ಕೋರ್ಟಿನವರು ಯುಕ್ತ ಕಂಡಂತೆ ಹುಕುಂ ಮಾಡಲಾದೀತು, ತಿಳಿದಿರಲಿ.

(By order)

Pundarik M. K.
Advocate for Plaintiff.

ಪುತ್ತೂರು, 19—9—66.

ಎಲ್ಲೆಲ್ಲಿ ಏನೇನು?

ಕುವೆಂಪು ಸನ್ಮಾನ ವಿಚಾರದ ಸಭೆ

ಕನ್ನಡದ ಕಾವ್ಯರ್ಷಿ ಡಾ। ಕೆ. ವಿ. ಪುಟ್ಟಪ್ಪ (ಕುವೆಂಪು)ನವರು ಅಕ್ಟೋಬರ್ ತಿಂಗಳಲ್ಲಿ ಜಿಲ್ಲೆಗೆ ಆಗಮಿಸುವ ನಿರೀಕ್ಷೆಯಿದ್ದು, ಅವರನ್ನು ಜಿಲ್ಲೆಯಲ್ಲಿ ಯಥೋಚಿತವಾಗಿ ಸನ್ಮಾನಿಸುವುದರ ಕುರಿತು ವಿಚಾರವಿನಿಮಯ ನಡೆಸಲು ಡಾ। ಎಂ. ಪಿ. ಪೈಯವರು ಕಳೆದ ತಾ. 10ರಂದು ಕನ್ನಡ ಸಾಹಿತ್ಯ ಪ್ರೇಮಿಗಳ ಸಭೆಯೊಂದನ್ನು ದ. ಕ. ಜಿಲ್ಲಾ ಸೆಂಟ್ರಲ್ ಕೋ ಆಪರೇಟಿವ್ ಬ್ಯಾಂಕಿನ ಮಾಳಿಗೆಯಲ್ಲಿ ಕರೆದಿದ್ದರು.

ದ. ಕ. ಜಿಲ್ಲಾಧಿಕಾರಿ ಶ್ರೀ। ಎಚ್. ಎಲ್. ನಾಗೇಗೌಡರ ಹಿಂತನದಲ್ಲಿ ನಡೆದ ಈ ಸಭೆಯಲ್ಲಿ ಡಾ। ಎಂ. ಪಿ. ಪೈಗಳು ಸಾಹಿತ್ಯ ಪ್ರೇಮಿಗಳನ್ನು ಸ್ವಾಗತಿಸುತ್ತ, 'ಕುವೆಂಪು'ರವರನ್ನು ಸನ್ಮಾನಿಸಬೇಕಾದ ಸಾಹಿತ್ಯ ಪ್ರೇಮಿಗಳ ಕರ್ತವ್ಯ, ಮೈಸೂರು ವಿಶ್ವವಿದ್ಯಾನಿಲಯದವರು ರೂಪಿಸಲಿರುವ "ಕುವೆಂಪು" ಸಂಶೋಧನಾಲಯಕ್ಕೆ ನಿಧಿಸಂಗ್ರಹದ ವಿಚಾರಗಳನ್ನು ತಿಳಿಸಿದರು.

ಮೂಡಬಿದ್ರೆಯ ಶ್ರೀ। ಜಿ. ಗೋಪಾಲ ಪೈಯವರು "ಕುವೆಂಪು' ರವರ ಜಿಲ್ಲಾ ಸಂದರ್ಶನದ ತಾತ್ಕಾಲಿಕ ಕಾರ್ಯಕ್ರಮದ ಕುರಿತು ಪ್ರಸ್ತಾಪಿಸಿದರು.

ಜಿಲ್ಲಾಧಿಕಾರಿಗಳು ಕುವೆಂಪುರವರು ಕನ್ನಡ ಸಾಹಿತ್ಯಕ್ಕೆ ಸಲ್ಲಿಸಿದ ಮಹಾನ್ ಸೇವೆಯನ್ನು ಸ್ಮರಿಸುತ್ತ, ಅಂತಹ ಶ್ರೇಷ್ಠ ವ್ಯಕ್ತಿಗೆ ಗೌರವಪೂರ್ಣವಾದ ಸ್ವಾಗತ ಸತ್ಕಾರಗಳು ಸಿಗುವುದಗತ್ಯವೆನ್ನುತ್ತ, 'ಕುವೆಂಪು' ಸಂಶೋಧನಾಲಯಕ್ಕೆ ನಿಧಿಸಂಗ್ರಹಿಸುವಲ್ಲಿ ಜಿಲ್ಲೆಯು ಶಕ್ಯವಿದ್ದಷ್ಟು ಪ್ರಯತ್ನಗಳನ್ನು ನಡೆಸುವ ಅವಶ್ಯಕತೆಯನ್ನು ಮನಗಾಣಿಸಿದರು.

"ಕುವೆಂಪು"ರವರ ಸತ್ಕಾರದ ಜಿಲ್ಲಾ ಮಟ್ಟದ ನಾಲ್ಕು ಉಪಸಮಿತಿಗಳನ್ನು ಕಾರ್ಯಕ್ರಮದ ಬಗ್ಗೆ ಯೋಚಿಸುವರೆ ತಾತ್ಕಾಲಿಕವಾಗಿ ರಚಿಸಲಾಯಿತಲ್ಲದೆ, ಆ ಸಮಿತಿಗಳಿಗೆ ಇನ್ನೂ ಹೆಚ್ಚಿಗೆ ಸದಸ್ಯರನ್ನು ಸೇರಿಸಿಕೊಳ್ಳುವ ಅಧಿಕಾರ ನೀಡಲಾಯಿತು.

ಕನ್ವೀನರ್ ರಾದ ಡಾ। ಎಂ. ಪಿ. ಪೈಯವರು ಧನ್ಯವಾದ ಅರ್ಪಿಸುತ್ತ ಸಭೆಯು ಕೊನೆಗೊಂಡಿತು.

ಅಧ್ಯಾಪಕರ ದಿನಾಚರಣ

ಕಡಿಯಾಳಿ, ಯು. ಕಮಲಾ ಬಾಯಿ ಹೈಸ್ಕೂಲಿನಲ್ಲಿ ಶಾಲಾ ವ್ಯವಸ್ಥಾಪಕ ಶ್ರೀ ಕೆ. ಕೆ. ಪೈಯವರ ಅಧ್ಯಕ್ಷತೆಯಲ್ಲಿ ಅಧ್ಯಾಪಕರ ದಿನವನ್ನು ಕೀರ್ತಿಮಂದಿರದ ನೇತೃತ್ವದಲ್ಲಿ ಆಚರಿಸಲಾಯಿತು. ಅಂದು ಕಡಿಯಾಳಿ ಹಾಗೂ ಗುಂಡಿಬೈಲು ಶಾಲೆಗಳ ವ್ಯವಸ್ಥಾಪಕರಾದ ನಿವೃತ್ತ ಅಧ್ಯಾಪಕ ಶ್ರೀ ವಡ್ಡಾಡಿ ನಾರ್ಣಪ್ಪಯ್ಯನವರಿಗೆ ಮಾನಪತ್ರವನ್ನು ಅರ್ಪಿಸಿ ಗೌರವಿಸಲಾಯಿತು.

ಕೀರ್ತಿ ಮಂದಿರದ ನಾಯಕ ಶ್ರೀ ದಯಾನಂದ ಸುಂದರ್ ರವರು ಸ್ವಾಗತಿಸಿ, ಮಾನಪತ್ರವನ್ನು ಓದಿ ಅದನ್ನು ಶ್ರೀ ವಿ ನಾರ್ಣಪ್ಪಯ್ಯನವರಿಗೆ ಅರ್ಪಿಸಿದರು. ಜ್ಞಾನೇಶ ಮತ್ತು ರವೀಂದ್ರ ಇವರು ಡಾ॥ ರಾಧಾಕೃಷ್ಣನ್ನರ ಬಗ್ಗೆ ವಿಶ್ವನಾಥ ಶೆಣೈಯವರು ಅಧ್ಯಾಪಕರ ದಿನದ ಬಗ್ಗೆ ಹಾಗೂ ಸಾವಿತ್ರಿಯವರು ಶ್ರೀ ವಿ ನಾರ್ಣಪ್ಪಯ್ಯನವರ ಕುರಿತು ಮಾತನಾಡಿದರು. ಮಾನ್ಯ ಅತಿಥಿಗಳಾದ ಶ್ರೀ ವಿ. ನಾರ್ಣಪ್ಪಯ್ಯನವರ ಆಶೀರ್ವಚನ ಹಾಗೂ ಅಧ್ಯಕ್ಷರ ಭಾಷಣಗಳ ನಂತರ ವಿದ್ಯಾರ್ಥಿ ವಿದ್ಯಾರ್ಥಿನಿಯರು ಗುರುಮಹಿಮಾಸ್ತೋತ್ರ ಮತ್ತು ಕವನಗಳನ್ನು ಹಾಡಿದರು.

ಮಂದಿರದ ಉಪನಾಯಿಕೆ ಕುಮಾರಿ ಪಾರ್ವತಿಯವರು ಧನ್ಯವಾದವನ್ನು ಅರ್ಪಿಸಿದರು.

ದ. ಕ. ಸರಕಾರೀ ಅಧಿಕಾರಿಗಳ ಸಹಕಾರೀ ಬ್ಯಾಂಕಿನ ನೂತನ ಕಟ್ಟಡದ ಉದ್ಘಾಟನಾ ಸಮಾರಂಭ

ರಾಜ್ಯದ ವಿಧಾನ ಸಭಾಧ್ಯಕ್ಷ ಶ್ರೀ ಬಿ. ವೈಕುಂಠ ಬಾಳಿಗರ ಅಧ್ಯಕ್ಷತೆಯಲ್ಲಿ ರಾಜ್ಯದ ಸಹಕಾರ ಸಚಿವ ಶ್ರೀ ಕೆ ಪುಟ್ಟಸ್ವಾಮಿಯವರಿಂದ ನೆರವೇರಿತು. ಮಂಗಳೂರು ಕೆನರಾ ಹೈಸ್ಕೂಲಿನ ಭುವನೇಂದ್ರ ಸಭಾ ಸದನದಲ್ಲಿ ನಡೆದ ಈ ಸಮಾರಂಭದಲ್ಲಿ ರಾಜ್ಯ ಸಹಕಾರೀ ಯೂನಿಯನ್ ಅಧ್ಯಕ್ಷ ಶ್ರೀ ಎ. ಎಸ್. ಪಾಟೀಲರು ಸಂಸ್ಮರಣೆಯ ಸಂಚಿಕೆಯನ್ನು ಉದ್ಘಾಟಿಸಿದರು.

ಪ್ರಾರಂಭದಲ್ಲಿ ಬ್ಯಾಂಕಿನ ಅಧ್ಯಕ್ಷ ಶ್ರೀ ಕೆ. ರಘುನಾಥ ಶೆಟ್ಟರು ಸ್ವಾಗತಿಸಿ ಸಚಿವರಿಗೆ ಮಾನಪತ್ರ ಸಮರ್ಪಿಸಿದರು, ಉಪಾಧ್ಯಕ್ಷ ಶ್ರೀ ಕೆ. ರಾಮಚಂದ್ರರವರು ಸಂದೇಶಗಳನ್ನೋದಿದರು.

ಶ್ರೀ ಪುಟ್ಟಸ್ವಾಮಿಯವರು ಭಾಷಣ ಮಾಡುತ್ತಾ ಬ್ಯಾಂಕಿನ ಪ್ರಗತಿಯನ್ನು ಕೊಂಡಾಡಿ ಸಂಸ್ಥೆಗೆ ಮಹೋನ್ನತ ಶ್ರೇಯಸ್ಸನ್ನು ಹಾರೈಸಿದರು.

ಶ್ರೀ ಬಾಳಿಗರು ಮಾತನಾಡುತ್ತಾ, ದ. ಕ ಜಿಲ್ಲೆಯ ಸಹಕಾರಿ ಸಂಸ್ಥೆಗಳು ಇನ್ನೂ ಹೆಚ್ಚು ಬೆಳೆಯ ಬೇಕೆಂದರು.

ನಂತರ ಶ್ರೀಗಳಾದ ಎ. ಜಮಖಂಡಿ ಮಠ, ವಿ. ಎಸ್. ಕುಡ್ವ, ಬಿ. ನಾರಾಯಣ ನಾಯಕ್, ಹೆಚ್. ಎಲ್. ನಾಗೇಗೌಡ ಮೊದಲಾದವರು ಮಾತನಾಡುತ್ತಾ ಈ ಸಂಸ್ಥೆಯ ಪ್ರಗತಿಯನ್ನು ಅದು ಹೇಗೆ ಸಾಧಿಸ ಬೇಕೆಂದು ಸೂಕ್ತ ಸಲಹೆಗಳನ್ನಿತ್ತರು. ಶ್ರೀ ರಾಮಚಂದ್ರನವರು ಧನ್ಯವಾದ ಸಮರ್ಪಿಸಿದರು.

ಎಗ್ರಿಕಲ್ಚರ್ ಸಭೆಯಲ್ಲಿ ಆರೋಗ್ಯ ಸಚಿವರು

ಮಂಗಳೂರು ತಾ. 15ರಂದು ರಾಮಕೃಷ್ಣ ವಿದ್ಯಾರ್ಥಿ ಭವನದಲ್ಲಿ ಜರಗಿದ ದ. ಕ. ಚೇಂಬರ್ ಆಫ್ ಎಗ್ರಿಕಲ್ಚರಿನ ಸಭೆಗೆ ಆರೋಗ್ಯ ಮಂತ್ರಿ ಡಾ॥ ನಾಗಪ್ಪ ಆಳ್ವರವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಚೇಂಬರಿನ ಅಧ್ಯಕ್ಷ ಶ್ರೀ ಕೆ. ಕೆ. ಶೆಟ್ಟಿ ಎಂ. ಎಲ್. ಸಿ ಇವರು ಸ್ವಾಗತಿಸುತ್ತಾ ಚೇಂಬರಿನ ಸೂಕ್ಷ್ಮ ಪರಿಚಯ ಮಾಡಿಕೊಟ್ಟರು. ಕಾರ್ಯದರ್ಶಿ ಶ್ರೀ ಕೆ. ಸಿ. ಶೆಟ್ಟಿಯವರು ಸಚಿವರಿಗೆ ಮಾನಪತ್ರವನ್ನು ಅರ್ಪಿಸುತ್ತಾ ರೈತರ ಈಗಿನ ಸಂಕಷ್ಟಗಳನ್ನು ವಿವರಿಸಿದರು.

ಮಂತ್ರಿ ಡಾ॥ ಆಳ್ವರು ಮಾತನಾಡುತ್ತಾ, ಸಮಾಜ ಶೋಷಣೆ ಯಾರಿಂದಲೂ ಆಗಬಾರದು, ಆತ್ಮವಿಶ್ವಾಸ, ಆತ್ಮಶಕ್ತಿಯಿಂದ ದುಡಿದು ದೇಶದ ಸಂಪತ್ತು ಹೆಚ್ಚುವಂತೆ ಪ್ರತಿಯೊರ್ವನೂ ಪ್ರಯತ್ನಿಸ ಬೇಕೆಂದರು.

ಪುತ್ತೂರು ಪ್ರಿನ್ಸಿಪಾಲ್ ಮುನ್ಸೀಫ್ ಕೋರ್ಟಿನಲ್ಲಿ

R. I. A. 683/66

O. S. 535/64.

P. ನೇಮಿರಾಜ ಕೂಡಾ. ಅರ್ಜಿದಾರರು

ಎದ್ರು

P. ಈಶ್ವರ ಭಟ್ ಕೂಡಾ—ಎದ್ರುರು.

8 ಮತ್ತು 5ನೇ ಎದ್ರುರು

8 ಕಮಲಾವತಿ—ಚಲುವಯ್ಯನ ಮಗಳು ಪಡ್ನೂರು ಗ್ರಾಮ—ಪುತ್ತೂರು ತಾಲೂಕು.

5. ಚಂದ್ರರಾಜ, ದೇಜಮ್ಮನ ಮಗ—ಕಾರ್ಕಳ ಕಸಬಾ—ಧರ್ಮಶಾಲೆ ಪುರದ ಬಳಿ ಕಾರ್ಕಳ ತಾಲೂಕು —ಇವರಿಗೆ

ವಾದಿಯು ಮಾಡಿದ ಮೇಲಿನ ಫೈನಲ್ ಡಿಕ್ರಿ ಅರ್ಜಿಯು ಯಿದೇ ಬರುವ ತಾ. 27—9—66ಕ್ಕೆ ವಾಯಿದೆ ಇರುವದ್ರಿಂದ ನಿಮಗೇನಾದರೂ ಆಕ್ಷೇಪಣೆಯಿದ್ದರೆ ಆ ದಿನ ಬೆಳಿಗ್ಗೆ 10 ಗಂಟೆಗೆ ಈ ಕೋರ್ಟು ಮುಂದೆ ಹಾಜರಾಗಿ ಉದಹರಿಸಿ ಕೊಳ್ಳದಿದ್ದಲ್ಲಿ ನಿಮ್ಮನ್ನು ಗೈರು ಮಾಡಿ ತೀರ್ಮಾನಿಸಲಾದೀತೆಂತ ಈ ಮೂಲಕ ತಿಳಿಸಿಯದೆ.

Sripathi Rao B.
Advocate for Petr.

ಪುತ್ತೂರು, 7—9—66.

ಪುತ್ತೂರು ಮುನ್ಸಿಫ್ ಕೋರ್ಟಿನಲ್ಲಿ

A. R. A 734/66

A. R. A. 538/66

R. L. P. 283/66.

ಕಾವೇರಮ್ಮ —ಅರ್ಜಿದಾರಳು.

Vs

ವೆಂಕಟ್ರಮಣ ಮುಂಡೆಚ್ಚ ಕೂಡಾ ಎದ್ರುರು

ಸುಳ್ಯ ತಾಲೂಕು ಬೆಳ್ಳಾರೆ ಕಸಬಾದಲ್ಲಿರುವ ನಾರಾಯಣ ಮುಂಡೆಚ್ಚರವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ—

ಅರ್ಜಿದಾರಳಿಗೆ ಬರತಕ್ಕ ಜೀವನಾಂಶದ ಬಗ್ಗೆ ಮಾಡಿದ ಅರ್ಜಿಯು ತಾ. 27—9—66ಕ್ಕೆ ನಿಮ್ಮ ಹಾಜರಾತಿಗೆ ಇದೆ. ಅವತ್ತು ನೀವು ಸ್ವತಃ ವ ವಕೀಲರ ಮುಖಾಂತರ ಹಾಜರಾಗಿ ಉದಹರಿಸಲು ತಪ್ಪಿದಲ್ಲಿ ಏಕಪಕ್ಷೀಯವಾಗಿ ತೀರ್ಮಾನಿಸಲಾದೀತೆಂದು ಕೋರ್ಟು ಹುಕುಂ ಪ್ರಕಾರ ತಿಳಿಸಿದೆ.

ವೆಂಕಟ್ರಮಣ ಬಿ. ಯನ್.
ಎಡ್ವಕೇಟ್.

ಪುತ್ತೂರು, 7—9—66.

ಉಡುಪಿಯಲ್ಲಿ ಆರೋಗ್ಯ ಮಂತ್ರಿಗಳು

ಇದೇ ತಾ 13ರಂದು ಆರೋಗ್ಯ ಮಂತ್ರಿ ಡಾ ಕೆ. ನಾಗಪ್ಪ ಆಳ್ವರು ಉಡುಪಿಗೆ ಆಗಮಿಸಿ ಮುಕುಂದ ನಿವಾಸದಲ್ಲಿ ಜರಗಿದ ಕಾಂಗ್ರೆಸ್ ಕಾರ್ಯಕರ್ತರ ಸಭೆಯನ್ನು ಉದ್ದೇಶಿಸಿ ಮಾತಾಡುತ್ತಾ, ಕಾಂಗ್ರೆಸ್ಸಿಗರು ಸುಸಂಘಟಿತರಾಗಿ ಸಂಸ್ಥೆಯನ್ನು ಬಲಗೊಳಿಸಬೇಕೆಂದು ಹೇಳಿದರು. ಆರಂಭದಲ್ಲಿ ಶ್ರೀ ಎ. ಜಿ ಆಲ್ವೆಯವರು ಸ್ವಾಗತಿಸಿದರು ಅಂತ್ಯದಲ್ಲಿ ಶ್ರೀ ರಮೇಶ ಪೈಗಳು ಧನ್ಯವಾದಗಳನ್ನರ್ಪಿಸಿದರು.

"ಪ್ರವಾಸಿ ಕಂಡ ಇಂಡಿಯಾ" ಗ್ರಂಥದ ಉದ್ಘಾಟನೆ

ಮಂಗಳೂರಿನ ಟೌನ್ ಹಾಲಿನಲ್ಲಿ ಜಿಲ್ಲಾಧಿಕಾರಿ ಶ್ರೀ ಎಚ್. ಎಲ್ ನಾಗೇಗೌಡರು ಬರೆದ 'ಪ್ರವಾಸಿ ಕಂಡ ಇಂಡಿಯಾ' ಗ್ರಂಥದ ಉದ್ಘಾಟನೆಯನ್ನು ಕಳೆದ ತಾ 15ರಂದು, ಮೈಸೂರು ಯುನಿವರ್ಸಿಟಿಯ ವೈಸ್ ಚಾನ್ಸಲರ್ ಡಾ॥ ಕೆ ಎಲ್ ಶ್ರೀಮಾಲಿಯವರು ಉದ್ಘಾಟಿಸಿದರು.

ಪ್ರಾರಂಭದಲ್ಲಿ ನಗರಾಧ್ಯಕ್ಷ ಶ್ರೀ ಜಿ ಸೋಮಶೇಖರ ರಾಯರು ಮಾತನಾಡುತ್ತಾ, ಶ್ರೀ ನಾಗೇಗೌಡರ ಕಾರ್ಯವನ್ನು ಶ್ಲಾಘಿಸಿದರು. ಬಳಿಕ ಮೈಸೂರು ಯುನಿವರ್ಸಿಟಿಯ ಪ್ರಸಾರಾಂಗದ ಡೈರೆಕ್ಟರ್ ಡಾ॥ ಪ್ರಭುಶಂಕರ್ ಅವರು ಗ್ರಂಥದ ಪರಿಚಯ ಮಾಡಿ ಕೊಟ್ಟರು. ಶ್ರೀ ಮಾಲಿಯವರು ಶ್ರೀ ನಾಗೇಗೌಡರನ್ನು ಶ್ಲಾಘಿಸಿ ಗ್ರಂಥವನ್ನು ಉದ್ಘಾಟಿಸಿದರು. ಸಚಿವ ಡಾ. ನಾಗಪ್ಪ ಆಳ್ವರವರೂ ನಾಗೇಗೌಡರ ಪ್ರಯತ್ನವನ್ನು ಹೊಗಳಿ ಮಾತನಾಡಿದರು. ಶ್ರೀ ಕೆ ಎಸ್. ಎನ್. ಅಡಿಗ ಸ್ಪೀಕರ್ ಬಾಳಿಗಾರವರೂ ಈ ಸಂದರ್ಭದಲ್ಲಿ ಮಾತನಾಡುತ್ತಾ ಶ್ರೀ ನಾಗೇಗೌಡರ ಕಾರ್ಯವನ್ನು ಶ್ಲಾಘಿಸಿ ಶುಭಕೋರಿದರು.

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

O. P No. 20/1966

1. ಇಂದಿರಮ್ಮ—B. A ಲಕ್ಷ್ಮೀನಾರಾಯಣ ಉಪಾಧ್ಯರ ವಿಧವೆ.—

2. ಗೋಪಾಲಕೃಷ್ಣ, 3. ರಮೇಶ, 4 ಸಾವಿತ್ರಿ, 5 ವಿಜಯ—B A ಲಕ್ಷ್ಮೀನಾರಾಯಣ ಉಪಾಧ್ಯರ ಮಕ್ಕಳು—ಮೈನರರು ಗಾರ್ಡಿಯನ್ ತಾಯಿ 1ನೇ ಅರ್ಜಿದಾರಳು.

ಉಡುಪಿ ತಾಲೂಕು ಹಂದಾಡಿ ಗ್ರಾಮದ H. ಪರಮೇಶ್ವರ ಉಡುಪರಲ್ಲಿರುವವರು.

—ಅರ್ಜಿದಾರರು

ಈ ಮೂಲಕ ಸಮಸ್ತ ಜನರಿಗೆ ತಿಳಿಯಪಡಿಸುವುದೇನೆಂದರೆ—

ಮೇಲ್ಕಂಡ 1ನೇ ಅರ್ಜಿದಾರಳ ಗಂಡ ವ 2ರಿಂದ 5ನೇ ಅರ್ಜಿದಾರರ ತಂದೆ ಮೃತ B. A. ಲಕ್ಷ್ಮೀನಾರಾಯಣ ಉಪಾಧ್ಯರ ಬಾಬ್ತು ಅರ್ಜಿಯ A ಶೆಡ್ಯೂಲಿನಲ್ಲಿ ಕಾಣಿಸಿರುವ ಐಟಮ್‌ಗಳನ್ನು ವಸೂಲು ಪಡಿಯುವರೆ ತಾವು ಹಕ್ಕುದಾರರು ವ ವಾರೀಸುದಾರರಂತಲೂ ಆ ಬಗ್ಗೆ ತಮಗೆ ವಾರೀಸು ಸರ್ಟಿಫಿಕೇಟು ಕೊಡಿಸುವಂತೆ ಸಹಾ ಅರ್ಜಿದಾರರು ಅರ್ಜಿ ಮಾಡಿಕೊಂಡಿರುವದ್ರಿಂದ ಆ ಕುರಿತು ಯಾರಿಗಾದರೂ ಆಕ್ಷೇಪಣೆಯಿರುವಲ್ಲಿ ಅದನ್ನು ತಾ 15—10—1966ಕ್ಕೆ ಮೇಲ್ಕಂಡ ಕೋರ್ಟಿನ ಮುಂದೆ ಹಾಜರಾಗಿ ಜಾಹೀರು ಮಾಡಿ ಕೊಳ್ಳಲಿಕ್ಕೆ ತಪ್ಪಿದರೆ ಸದ್ರಿ ಅರ್ಜಿಯು ಏಕಪಕ್ಷವಾಗಿ ತೀರ್ಮಾನಿಸಲ್ಪಡುವುದು.

P. N. Madhava Rao
Vakil for Petitioners

ಉಡುಪಿ, 16—9—1966.

ಕೃತಿ ಪರಿಚಯ

ವಿಮರ್ಶೆಗಾಗಿ ಪುಸ್ತಕಗಳನ್ನು ಕಳಿಸುವವರು ದಯಮಾಡಿ ಎರಡೆರಡು ಪ್ರತಿಗಳನ್ನು ಕಳಿಸಬೇಕಾಗಿ ವಿನಂತಿ. ಸಂ. ನ.

ದೇವದರ್ಶನ—(ಸಾಮಾಜಿಕ ನಾಟಕ) ಬರೆದವರು: ಫ. ಶಿ. ಭಾಂಡಗೆ, ಪ್ರಕಾಶಕರು: ವಿದ್ಯಾವಾಹಿನಿ ಪ್ರಕಟಣಾಲಯ, ಗದಗ ಪುಟಗಳು: ೧೧೩. ಬೆಲೆ: ರೂ. ೨—೨೫.

ಮೈಸೂರಿನ ಕನ್ನಡ ಥಿಯೇಟರ್ಸ್‌ನವರಿಂದ ಹಲವು ಬಾರಿ ರಂಗಭೂಮಿಗೆ ಬಂದ ಸಾಮಾಜಿಕ ನಾಟಕ ದೇವದರ್ಶನ! ಇಂದಿನ ಪ್ರಮುಖ ಸಮಸ್ಯೆಗಳ ಕಡೆಗೆ ಇಲ್ಲಿ ಬೆಳಕು ಹರಿದಿದೆ. ಮುಖ್ಯವಾಗಿ ವಿದ್ಯಾವಂತರಲ್ಲಿ ಮನೆ ಮಾಡಿರುವ ನಿರುದ್ಯೋಗ ಸಮಸ್ಯೆ, ಇದರಿಂದ ಅನುಚಿತ ಲಾಭಗಿಟ್ಟಿಸುವ ಅಧಿಕಾರಿಗಳ ಭ್ರಷ್ಟಾಚಾರ ಸಮಸ್ಯೆ, ತಪ್ಪಲ್ಲಿ ಇದ್ದುದನ್ನು ತಾವೂ ತಿನ್ನದೆ ಇತರರಿಗೂ ಕೊಡದೆ, ತಮ್ಮ ಹಣವನ್ನು ಮೋಸದಿಂದಾದರೂ ಹೆಚ್ಚಿಸುವ ಶ್ರೀಮಂತರ ಮತ್ತು ವರ ಉರುಳಿಗೆ ಬಿದ್ದು ನರಳುವ ಬಡವರ ಸಮಸ್ಯೆ—ಮೊದಲಾದುವು ಮುಖ್ಯವಾಗಿವೆ. ರಕ್ತ ಹೀರುವ ಜಿಗಳೆಗಳಂತಹ ಶ್ರೀಮಂತರನ್ನು ದಾರಿಗೆ ತರಲು ಅನ್ಯದಾರಿ ಕಾಣದೆ ಪುಂಡತನವೇ ಇದಕ್ಕೆ ತಾರಕವೇ ಎನ್ನುವ ಪ್ರಶ್ನೆಯೂ ಏಳುತ್ತದೆ.

ಸುಶಿಕ್ಷಿತ ನಿರುದ್ಯೋಗಿ ಶರಣಪ್ಪ ಶಾರದೆಯರ ಪರಿಶುದ್ಧ ಪ್ರಣಯದ ಹಿನ್ನೆಲೆಯಲ್ಲಿ ಹಣೆಯಲ್ಪಟ್ಟ ದೇವದರ್ಶನದ ವಸ್ತುವಿನಲ್ಲಿ ಕಸುವಿದೆ ನವೀನತೆಯಿದೆ. ದೃಶ್ಯಗಳ ಜೋಡಣೆಯು ಸಮರ್ಪಕವಾಗಿದೆ. ಪ್ರತಿ ಪಾತ್ರ ಜೀವಂತವಿದೆ. ಸಾವಿತ್ರಮ್ಮನ ಪುತ್ರ ಪ್ರೇಮ, ಲಲಿತಮ್ಮನ ಮಾನವಾನುಕಂಪ, ಶಾರದೆಯ ಪರಿಶುದ್ಧ ಪ್ರೇಮ ಇವು ಮೆಚ್ಚತಕ್ಕವು. ಚಕ್ರವರ್ತಿ — ಲಲಿತೆಯರು ರಂಗಭೂಮಿಯನ್ನೇರಿ ಪದೇಪದೇ ಪ್ರೇಕ್ಷಕರನ್ನು ನಗಿಸುತ್ತಾರೆ.

ನಾಟಕೀಯ ದೃಷ್ಟಿಯಿಂದ ಇದು ಅಭಿನೇಯವೇನೋ ನಿಜ. ಆದರೂ ಇದೇ ವಸ್ತುವಿಗೆ ಇನ್ನೂ ಉತ್ತಮ ಸಾಹಿತ್ಯವೊದಗಿಸಿ, ಕೆಲವೆಡೆ ಮೊಟಕು ಮಾಡಿ 'ದೇವದರ್ಶನ'ವನ್ನು 'ದೇವದರ್ಶನ'ವನ್ನಾಗಿಯೇ ಮಾಡಬಹುದಿತ್ತೋ ಏನೋ! ಆದರೂ ಇದೊಂದು ಹೊಸ ಬಗೆಯ ಸಾಮಾಜಿಕ ನಾಟಕವೆನ್ನಲಡ್ಡಿಯಿಲ್ಲ.

ಖಾಂಡವವನ ದಹನ ಪ್ರಸಂಗ: ಲೇಖಕರು: ಶ್ರೀ ಅಜ್ಜನಗದ್ದೆ ಗಣಪಯ್ಯ ಭಾಗವತರು. ಪ್ರಕಾಶಕರು: ಸಂಗಮ ಸಾಹಿತ್ಯ ಪ್ರಕಾಶನ, ಕಲ್ಮಡ್ಕ, ದ.ಕ. ಪುಟಗಳು: ೪೮, ಬೆಲೆ: ರೂ. ೦—೭೫.

ಮಹಾಭಾರತದೊಳಗಣ ಖಾಂಡವವನ ದಹನದ ಕಥೆಯು ಯಕ್ಷಗಾನ ರೂಪವಿದು. ಯಕ್ಷಗಾನ ಕಲೆಯ ಸಮಗ್ರ ವಿಷಯವಿದರಾದ ಶ್ರೀ ಗಣಪಯ್ಯ ಭಾಗವತರ ಈ ಕೃತಿಯು ಅವರ ವಿದ್ವತ್ತಿನ ದ್ಯೋತಕವೆನ್ನಬೇಕು. ಯಕ್ಷಗಾನ ಕೃತಿಯು ಅಭಿನಯ ಯೋಗ್ಯವಿರಬೇಕು. ಇದಕ್ಕಾಗಿ ಪಾತ್ರರಚನೆಯಲ್ಲಿ ಕಲಾತ್ಮಕತೆ, ಕಥೆಯಲ್ಲಿ ನಾಟಕೀಯತೆಗಳು ಅತ್ಯಗತ್ಯ. ಇವೆರಡೂ ಗುಣಗಳು ದೇಹ-ನೆರಳುಗಳಂತೆ ಒಂದನ್ನೊಂದು ಹಿಂಬಾಲಿಸುತ್ತಿರುವುದನ್ನು ನಾವಿಲ್ಲಿ ಕಾಣಬಹುದು. ಯಕ್ಷಗಾನದಲ್ಲಿ ಉಪಯುಕ್ತವಾಗುವ ಹೆಚ್ಚಿನ ಛಂದಸ್ಸುಗಳೂ ಇಲ್ಲಿವೆ. ಭಾವಪಕ್ಷಕ್ಕಿಂತ ಯಕ್ಷಗಾನವು ಕಲಾಪಕ್ಷದತ್ತ ವಾಲುವುದು ಸಹಜ. ಶಬ್ದ ಚಾತುರ್ಯಕ್ಕೊಂದು ಉದಾಹರಣೆ—ಕೇಸರಿ ತವ ಶರ| ಕೇಸರಿ ಬರಿದೇ| ಕೇಸರಿನೆಯೋ ಕೆಲ| ಕೆಸರಿಸದನು ||— ಇಂತಹ ಹಲವು ಉದಾಹರಣೆಗಳಿದ್ದು ಹೃದಯಂಗಮವಾಗಿವೆ. ಒಟ್ಟಿನಲ್ಲಿ ಈ ಯಕ್ಷಗಾನ ಕೃತಿಯು ರಂಗಭೂಮಿಯಲ್ಲಿ ಯಶಗಳಿಸಬಲ್ಲುದು—ಕೆಲವೇ ಪಾತ್ರಧಾರಿಗಳ ಕೈಗೊಂಬೆಯಾಗಿ ಈ ಪ್ರಸಂಗ ಮುಂದುವರಿಯದಿರುವುದು ನಾವಿಲ್ಲಿ ಕಾಣುವ ಒಂದು ವೈಶಿಷ್ಟ್ಯ.

—ಗೋರಾ

ನವಯುಗಕ್ಕೆ
ಚಂದಾದಾರರಾಗಿ ಪ್ರೋತ್ಸಾಹಿಸಿರಿ.
ವಾರ್ಷಿಕ ಚಂದಾ ರೂ. ೧೦

ಮಾಲತಾಯಿ ತಾಯಿಯಾದಾಳೆ?

(ಎರಡನೇ ಪುಟದಿಂದ)

ವೇ ಇದು? ಕೃತಘ್ನತೆಯೇ ಇದು? ಇರಲಿ, ಹೇಗಾದರೂ ಮಾಡಿ, ಈ ರೀತಿ ಒಡೆದ ಮನಸ್ಸನ್ನು ಒಂದುಗೂಡಿಸಲು ಸಾಧ್ಯವಿಲ್ಲವೆ? ಹೇಗಾದರೂ ಮಾಡಿ ಮನಸ್ಸನ್ನು ಒಂದುಗೂಡಿಸಬೇಕೆಂದು ನಿರ್ಧರಿಸಿದಳು.

ವಿನೋದ ಈಗ ತುಂಬಿದ ಗರ್ಭಿಣಿ. ಮೊದಲನೆಯ ಪ್ರಸೂತ ಕಾರ್ಯ ತಂದೆಯವರ ಮನೆಯಲ್ಲಿಯೇ ಜರಗಲಿ ಎಂದು ವಿನೋದಳನ್ನು ತಂದೆಯ ಮನೆಗೆ ಕಳುಹಿಸಿ ಕೊಟ್ಟಿದ್ದ. ಕಮಲಳಿಗೆ ನೆಮ್ಮದಿಯಾಯಿತು. ಈಗ ಸಮಯ ದೊರೆಯಬಹುದು ಒಡೆದ ಮನಸ್ಸನ್ನು ಒಂದುಗೂಡಿಸಲು!

ಒಂದು ದಿನ ಬೊಂಬಾಯಿಯಿಂದ ಕಾಗದ ಬಂದಿತ್ತು. ಮಾಲತಾಯಿಯೊಡನೆ ಜಾಗ್ರತೆಯಾಗಿ ಕಾಲ ಕಳೆಯಬೇಕು. ಇಲ್ಲಿ ನನ್ನನ್ನು ಬೇರೆ ಕಂಪೆನಿಯಲ್ಲಿ ಮೆನೇಜರನ್ನಾಗಿ ಮಾಡಲು ಕರೆದಿದ್ದಾರೆ: ಆದರೆ ಐದು ಸಾವಿರ ರೂಪಾಯಿಗಳನ್ನು ಜವಾಬ್ದಾರಿಯ ಹಣವನ್ನಾಗಿ ಮೊದಲು ಕಟ್ಟಬೇಕಂತೆ, ಇದನ್ನು ನಿನ್ನ ತಂದೆಯವರೊಡನೆ ವಿಚಾರಿಸಿ ಬರೆ ಎಂದು ಪತ್ರ ಮುಗಿಸಿದ್ದ.

ವಿನೋದಳು ತಂದೆಯೊಡನೆ ತಿಳಿಸಿದಳು. ತಂದೆಯಿಂದ ಸಿಕ್ಕಿದ ನಿರುತ್ತರವನ್ನು ಕಂಡು ಬೇಸರ ತಾಳಿದಳು.

ಮಾಧವರಾಯರು ಕಮಲನೊಡನೆ ಈ ವಿಷಯದ ಬಗ್ಗೆ ಸಮಾಲೋಚನೆ ನಡೆಸಿದರು. ಕಮಲ ತನ್ನ ತಂದೆ ಮನೆಯಿಂದ ತಂದು ಕೊಡುತ್ತೇನೆಂದು ಹೇಳಿದಳು. ಎರಡು ಮೂರು ದಿನಗಳಲ್ಲಿ ತಂದು ಕೊಟ್ಟಳು. ಮಾಧವರಾಯರು, ವಿನೋದಳನ್ನು ಕರೆದು ವಿಷಯ ವಿವರಿಸಿದರು. ವಿನೋದಳು ತನ್ನ ಮೂಢತನಕ್ಕೆ ನಾಚಿಗೊಂಡು ಮಾಲತಾಯಿ ಕಾಲುಗಳ ಮೇಲೆ ಬಿದ್ದು ಬಿಕ್ಕಿ ಬಿಕ್ಕಿ ಅಳುತ್ತಾ, 'ಅಮ್ಮಾ! ಕ್ಷಮಿಸು. ಮಲತಾಯಿ ಎಂದರೆ ಕೆಟ್ಟವಳೆಂದು ಗಂಗಮ್ಮನವರು ನಾನು ಚಿಕ್ಕವಳಿದ್ದಾಗ ಹೇಳಿದ ಮಾತು ಇಂದಿನ ವರೆಗೂ ಸತ್ಯವೆಂದು ನಂಬಿಕೊಂಡಿದ್ದೆ—ಆದರೆ ಅದು ಸುಳ್ಳು. ಜಗತ್ತಿನಲ್ಲಿ ಇಂತಹ ಗೊಂದಲದಲ್ಲಿ ಹೋರಾಡುವವರು ತುಂಬಾ ಮಂದಿ ಇರಬೇಕು. ಮುಂದೆ ನಾನು ಹೀಗೆ ಎಂದೂ ಮಾಡುವುದಿಲ್ಲ" ಎಂದಳು.

ಚಿಕ್ಕದಾದರೂ ಉರಿಯುತ್ತಿದ್ದ ದೀಪ ತಲೆಯೊಲಿಸಿ ಇದನು ಅನುಮೋದಿಸಿತು.

ಕುಟುಂಬ ಯೋಜನೆ ಎಂದರೇನು?

ಕುಟುಂಬ ಯೋಜನೆ ಅಂದರೆ

- ನಿಮಗೆ ಯಾವಾಗ ಮಕ್ಕಳಾಗಬೇಕು, ಎಷ್ಟು ಮಕ್ಕಳಾಗಬೇಕು ಎಂಬ ನಿರ್ಧಾರ ಮಾಡುವುದು
- ನಿಮ್ಮ ಹೆಂಡತಿಯ ಆರೋಗ್ಯವನ್ನು ರಕ್ಷಿಸುವುದು
- ನಿಮ್ಮ ಮಕ್ಕಳ ಆರೋಗ್ಯ, ಶಿಕ್ಷಣ ಮತ್ತು ಆರೈಕೆಯ ಬಗ್ಗೆ ಹೆಚ್ಚಿನ ಗಮನ ಕೊಡಲು ನಿಮಗೆ ಸಾಧ್ಯವಾಗುವುದು
- ಭಯ ಚಿಂತೆಗಳಿಲ್ಲದೆ ದಾಂಪತ್ಯ ಜೀವನದ ಸುಖವನ್ನು ಅನುಭವಿಸುವುದು

ಕುಟುಂಬ ಯೋಜನೆ ಮಾಡಲು ಹಲವು ವಿಧಾನಗಳಿವೆ. ಅವುಗಳಲ್ಲಿ ಯಾವ ವಿಧಾನವನ್ನಾದರೂ ನೀವು ಆರಿಸಿಕೊಳ್ಳಬಹುದು.

ಉಚಿತ ಸಲಹೆ ಮತ್ತು ಸೇವೆ ಪಡೆಯಲಿಕ್ಕಾಗಿ
ನಿಮಗೆ ಸಮೀಪವಿರುವ ಯಾವುದಾದರೂ
ಕುಟುಂಬ ಯೋಜನಾ ಕೇಂದ್ರವನ್ನು ಸಂದರ್ಶಿಸಿರಿ

DA-66/307

NAVAYUGA 22-9-1968

Registered with the Registrar
of News Papers for India
under No. R. N. 3646/'57

REGD. No. B. G. 176
LICENCE No. 31
Licensed to Post without Prepayment

ನಮ್ಮ ನಿಮ್ಮ ಸುತ್ತ

ಮತ್ಸರಕ್ಕೆ ಮದ್ದಿಲ್ಲ

ಬರೆದವರು : 'ಸ್ಫೂರ್ತಿ'

ಆಕೆಯ ಹೆಸರು ತುಂಗಮ್ಮ. ಅರುವತ್ತರ ಗಡಿಯನ್ನು ದಾಟಿದ ವೃದ್ಧೆ. ಬಾಲವಿಧವೆ. ಜೀವನದಲ್ಲಿ ಸುಖವೆಂದರೇನೆಂಬುದನ್ನು ಕಂಡರಿಯದ ಬಡಜೀವಿ. ಗಾಡಿಯೆತ್ತಿನಂತೆ ಪರರ ಮನೆಯಲ್ಲಿ ದುಡಿದು ಹೊಟ್ಟೆ ಹೊರೆದುಕೊಂಡು ನಿಟ್ಟುಸಿರು ಬಿಡುವ ಅಭಾಗಿನಿ. ಅಕಸ್ಮಾತ್ ಸತ್ತರೆ ಸುಡಲು ತನ್ನವರೆನ್ನುವವರು ಇಲ್ಲದ ಪರದೇಶಿ. ಎಲ್ಲರ ಕನಿಕರಕ್ಕೂ ಪಾತ್ರವಾಗಬಹುದಾದ ಆ ಜೀವ ಹೇಳುವ ಮಾತುಗಳೇನು ಬಲ್ಲಿರಾ? ಅವಿವಾಹಿತೆ ಕನ್ಯೆಯರು ನಕ್ಕು ನಲಿಯುತ್ತಾ ನಿಶ್ಚಿಂತೆಯಿಂದ ಶಾಲೆಗೆ ಹೋಗುತ್ತಿರುವಾಗ ಆಕೆಯೆನ್ನುತ್ತಾರೆ: "ಛೆ ...ಛೆ....ಏನು ಕಾಲವಪ್ಪಾ! ಅನ್ಯಾಯ! ಅಸಹ್ಯ! ಮದುವೆಯಾಗಿ ಮಕ್ಕಳಾಗುವ ಪ್ರಾಯವಾದರೂ ಇನ್ನೂ ಕಲಿಯುವುದೆಂದು ನಾಚಿಕೆಯಿಲ್ಲದೆ ಅಲೆಯುತ್ತಾರೆ. ಥೂ...."

ಂ ಂ ಂ

ನಮ್ಮ ಪಕ್ಕದ ಮನೆಗೊಬ್ಬರು ಹೊಸದಾಗಿ ಒಕ್ಕಲು ಬಂದವರಿದ್ದಾರೆ. ಪತಿಸೇವೆಯೇ ಸ್ತ್ರೀ ಜೀವನದ ಪರಮೋದ್ದೇಶವೆಂಬ ಪವಿತ್ರವಾದ ಮಾತುಗಳನ್ನು ಹಗಲಿರುಳು ಸಾರುತ್ತಿರುವ ನಲ್ವತ್ತರ ಪ್ರೌಢ ಹೆಂಗಸು ಗಂಡನೆಂದರೆ ಭಯ, ಭಕ್ತಿ, ಗೌರವ ಇನ್ನೂ ಏನೇನೋ ಎಲ್ಲ ಮಿತಿ ಮೀರಿ ಇದ್ದಾಕೆ ಮಾತ್ರ ಪತಿವ್ರತೆ ಎಂದೂ ಈಗಿನ ತರುಣಿಯರಲ್ಲಿ ಅಂತಹ ಸ್ತ್ರೀಯರು ಬೆರಳೆಣಿಕೆಯಷ್ಟೂ ಸಿಗಲಾರರೆಂದೂ ಎದುರಿದಿರೇ ಹೇಳುವ ಸಾಹಸಿ. ಅವರ ಪತಿ ಮಹಾಶಯರು ದೂರದ ಯಾವುದೋ ಊರಲ್ಲಿ ಬಹಳ ದೊಡ್ಡ ಸಾಹುಕಾರರಂತೆ. (ನಾವ್ಯಾರೂ ಅವರನ್ನು ನೋಡಿಲ್ಲ) ದಿನಕ್ಕೆ ನೂರು ಬಾರಿ ಅವರ ವಿಚಾರವನ್ನೇ ಆಡಿ, ಹಾಡಿ, ವರ್ಣಿಸಿ ದಣಿದು ಕತ್ತಲಾಗುತ್ತಲೇ ಸಿಂಗರಿಸಿಕೊಂಡು ಹಿತ್ತಲ ಬಾಗಿಲಿನಿಂದ ಗುಪ್ತ ಪ್ರಣಯಿಯನ್ನು ಮನೆಯೊಳಗೆ ಸೇರಿಸಿ ಕದವಿಕ್ಕುವ ಮಹಾ ಸತಿಯಾಕೆ! ಪಾಪ! ಬಡಪಾಯಿ ಪತಿ ದೂರದ ಊರಲ್ಲಿ ನಿಟ್ಟುಸಿರು ಬಿಡುತ್ತಿದೆಯೇನೋ! ಆದರೆ....ಮಾತೆತ್ತಿದವರಿಗೆ ಉಪದೇಶದ ಬಿಟ್ಟಿನ ಬ್ರಹ್ಮಾಂಡವಾಗಿ ಬಂದೆರಗುತ್ತದೆ ಅಷ್ಟೆ.

ಂ ಂ ಂ ಂ

ಸದಾ ಕಾಲವೂ ಬಣ್ಣದ ಚಿಟ್ಟೆಗಳ ಬೆನ್ನು ಹಿಡಿದ ಪತಿಯಿಂದ ಸುಖ, ಸಂತೋಷವೆಂದರೇನೆಂದರಿಯದೆ ದಾಂಪತ್ಯ ಜೀವನದಲ್ಲೇ ಬೇಸತ್ತ ಇಪ್ಪತ್ತೈದರ ಯುವತಿ ವನಜಾ ಇದಿರು ಮನೆಯ ಅನ್ಯೋನ್ಯತೆಯಲ್ಲಿರುವ ಸತಿ, ಪತಿಯರನ್ನು ನೋಡಿದಾಗಲೆಲ್ಲ ಹೇಳುತ್ತಿರುತ್ತಾಳೆ :

"ಅವನೊಬ್ಬ, ಹೆಂಡತಿ ಹೇಳಿದಂತೆ ಕುಣಿಯುವವ, ಅವಳು ಹಾಕಿದ ಗೆರೆಯನ್ನು ಮೀರುವ ಧೈರ್ಯವಿಲ್ಲ, ಛಿ ಛಿ!"

ಂ ಂ ಂ ಂ

ಇನ್ನೊಬ್ಬರು ಸರೋಜಮ್ಮ ಮದುವೆಯಾಗಿ ಹದಿನೈದು ವರ್ಷಗಳಾದರೂ ಮಕ್ಕಳಿಲ್ಲದೆ ಕೊರಗು ತೀರದೆ ಜೀವನದಲ್ಲೇ ಜಿಗುಪ್ಸೆಗೊಂಡವರು. ಆದರೂ ಹೊರಗಿನವರೊಂದಿಗೆ ತನ್ನ ವ್ಯಥೆಯನ್ನು ತೋರಿಸಿಕೊಳ್ಳುವವರಲ್ಲ. ಅಷ್ಟೇ ಅಲ್ಲ. ನೆರಮನೆಯ ಎಂಟು ಮಕ್ಕಳ ತಾಯಿ ಲಲಿತಮ್ಮನನ್ನು ನೋಡಿದಾಗಲೆಲ್ಲ ಪಿಸುಗುಟ್ಟುತ್ತಿರುತ್ತಾರೆ.

'ಏನಮ್ಮಾ ಅಸಹ್ಯ! ಹಂದಿಗಳಂತೆ ಹೆರೋದೊಂದೇ ಗೊತ್ತೇ ಅವರಿಗೆ?"

ಅತಿ ಶ್ರೀಮಂತಿಕೆಯ ಸರೋಜಮ್ಮನ ವಿಚಾರ ವಿಮರ್ಶಿಸುವ ಧೈರ್ಯ, ಕೇಳುವವರಿಗಿಲ್ಲ, ಎಂದೇ ಒಳಗಿಂದೊಳಗೆ ನಕ್ಕು ಸುಮ್ಮನಿರುತ್ತಾರೆ.

ಂ ಂ ಂ

ಸತಿ ಪತಿಯರಿಬ್ಬರೂ ದುಡಿಯುವ ಸಣ್ಣ ಸಂಸಾರ ಒಂದಿದೆ. ಆಕೆಗೆ ತಿಂಗಳಿಗೊಂದು ಹೊಸ ನಮೂನೆಯ ಸೀರೆ ಬೇಕೇ ಬೇಕು. ಅದನ್ನು ನೋಡಿದಾಗಲೆಲ್ಲ ವರ್ಷಕ್ಕೊಂದು ಸೀರೆಗೂ ಬನ್ನಪಡುವ ವಿಶಾಲಮ್ಮ ಹೇಳುತ್ತಿರುತ್ತಾರೆ:

"ಇದರ ಬಣ್ಣ ಏನೂ ಚೆನ್ನಾಗಿಲ್ಲ. ನಿನಗೆ ಒಪ್ಪುವಂತದ್ದೇ ಅಲ್ಲ."

ಏನೆನ್ನಬೇಕು ಇದಕ್ಕೆ? ಮನುಷ್ಯ ಸಹಜ ಮತ್ಸರ ಭಾವವೋ? ಸ್ತ್ರೀ ಸಹಜ ಸಂಕುಚಿತ ಭಾವನೆಯೋ? ವಿಚಾರ ಶಕ್ತಿ ವಿವೇಕವಿಲ್ಲದೆ ಆಡುವ ಅರ್ಥವಿಲ್ಲದ ಮಾತುಗಳೋ?

ಜೀವನ

ವರುಷ ಹೋಯಿತು ವರುಷ ಬಂದಿತು|
ಹರುಷ ಬಾರದೆ ಹೋಯಿತು||
ಕಾಳು ಕಡಿಗಳು ಕಾಣದಾಗಲು|
ಕಣ್ಣೆ ಕತ್ತಲು ಕವಿಯಿತ ||
ಏರುತೇರುತ ಮೇಲಕೇರುವ|
ಗಗನಕೆತ್ತರು ಹಾರಿತು||
ಬಾಯ್ಗೆ ಬಾರದು ಕೈಯ್ಗೆ ಎಟಕದು|
ಕೊಡಲು ಬೆಲೆಯದು ಕಾಣದು||
ಮನೆಯ ಮಂದಿಗಳೆಲ್ಲ ಕೂತರು|
ಅನ್ನ ಕಾಣದೆ ಹಸಿವಿಲಿ||
ಹಗಲು ಕತ್ತಲೆ ಎಂಬ ಭೇದವು
ತಾರದೇ ತಾವ್ ದುಡಿದರು||
ಗೇಣು ಹೊಟ್ಟೆಯ ತುಂಬಲಾರದೆ|
ಕಾಲನಾ ಕರೆ ಕಾಯುತಾ||
ಕಾಲ ನೂಕಲು ದಿನಗಳೆಣಿಸಲು|
ಬಡವಗದುವೆ ಅಸಾಧ್ಯವು||
ಎಂತು ಕಾಲವೋ ಬಂತು ಈಗಲೇ
ಎಂಬ ಸೊಲ್ಲದು ಕೇಳ್ವುದ ||
ಹಸಿವು ಹಿಂಗದೆ ಬಾಳ ಬಳ್ಳಿಯು|
ಹಸಿರು ಹೂನಲನ ಹಂಸದು|
ಮಾತು ಮಾತಿಗು ಕೊಡುವ ಭರವಸೆ|
ಮಂತ್ರಿಗಳ ಪರಿವಾರವು||
ವರುಷ ಹೋಯಿತು ವರುಷ ಬಂದಿತು
ಜೀವನವೆ ಬಡವಾಯಿತು||

— ಹಳನಾಡು ಸುಬ್ರಾಯ ಭಟ್ಟ

ಮಾಮೂಲು ಗಿರಾಕಿ

ಊರ ಬಡಮಾಸ್ತರಗೆ
ಕೊಟ್ಟ ಹಣ ಕಾಳು
ಇಂದಿಗಾಯ್ತೆಲ್ಲವೂ
ನೀರಪಾಲು|
"ಏನಾಯ್ತು" ಕೇಳಿದರೆ
ಪಡಬೇಡ ಗೋಳು
ಹೇಳಿ ಬಿಡು ಬಂದಿಹ|
ರಿಜಲ್ಟ್ "ಮಾಮೂಲು"|

ಂ ಂ ಂ

ತನ್ನ ಗುಟ್ಟು

ಅತ್ತೆ ಒಡೆದರೆ ಪಾತ್ರೆ
ಬೆಲೆಯಿಲ್ಲವಂತೆ!
ಕತ್ತೆ ಮೇದರೆ ಮತ್ತೆ
ಮೇವಿಲ್ಲವಂತೆ!
ತನ್ನ ಮಗ ಪೇಲಾದ
ಸುದ್ದಿಯೇ ಇಲ್ಲ!
ನೆರೆ ಮನೆಯ ಗೋಪಿ
ಪೇಲೆಂದನವ ಮೆಲ್ಲ!

ಂ ಂ ಂ

ವಚನ ಶೂರರು!

ಮಂತ್ರಿಗಳ ಭಾಷಣವು
ಮುಂದಿನಾ ವರ್ಷ
ಆಹಾರದ ಕೊರತೆಯಿಲ್ಲ
ಬಲು ಹರ್ಷ!
"ಈ ರೋಗ ಗುಣವಾಗೆ
ಆಯುಷ್ಯ ಗಟ್ಟಿ
ಎಂದನಾ ವೈದ್ಯ ರೋಗಿಗೆ|
ಎದೆಯ ತಟ್ಟಿ'

— ಭಾಸ್ಕರ ಭಂಡಾರಿ, ಮಜಬೈಲು

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ದಿ| ಶ್ರೀ ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—
ಆಂಗ್ಲ ಸ್ವಯಂಬೋಧಿನಿ

ಸುಲಭದಲ್ಲಿ ಇಂಗ್ಲಿಷ್

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ.ಎರಡು. ಉತ್ತಮ ಪ್ರತಿ:ರೂ.ಎರಡೂವರೆ(ಟ.ಖ. ಪ್ರತ್ಯೇಕ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ

ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ:ರೂ 1-25 (ಟ.ಖ.ಪ್ರತ್ಯೇಕ)

ಹೊಸಕೆರೆ ಚಿದಂಬರಯ್ಯನವರ
ಶ್ರೀಮದ್ಭಗವದ್ಗೀತೆಯ ಸಮೂಲ ಭಾಷಾಂತರ

ಗೀತೆಯ ಕೈಗನ್ನಡಿ

300 ಪುಟಗಳಿಗೂ ಮಿಕ್ಕಿದೆ. ಕೈಹೊತ್ತಗೆಯ ಆಕಾರದಲ್ಲಿದೆ.
ಬೆಲೆ: ಸಾದಾ ಪ್ರತಿ ರೂ. ೧
ಗೀತೆಯ ಕೈಗನ್ನಡಿಯ ಒಂದು ಪ್ರತಿ ಬೇಕಾದವರು ರೂ. 1-50ನ್ನು ಮುಫಿಯಾರ್ಡರು ಮಾಡಿ ತರಿಸಿಕೊಳ್ಳಬಹುದು.
— ಪ್ರತಿಗಳಿಗೆ ಬರೆಯಿರಿ—
ನವಭಾರತ ಪುಸ್ತಕ ಭಂಡಾರ, ಉಡುಪಿ. ಅಥವಾ
ನವಯುಗ ಪ್ರೆಸ್, ಉಡುಪಿ.

ವೈಷ್ಣವ ಶಿಖಾಮಣಿ
ಕನಕದಾಸ ರಚಿತ

ಹರಿಭಕ್ತಿಸಾರ

ಎಂಬ ಅಮೂಲ್ಯ ಕೃತಿಯನ್ನು
ನೀವು ಓದಿರುವಿರಾ?
ಚಂಚಲವಾದ ಮನಸ್ಸನ್ನು ಶುಭಕರವಾದ ವಿಷಯದ ಮೇಲೆ ಕೇಂದ್ರೀಕರಿಸಿ ಸತ್ಕಾರ್ಯಗಳಲ್ಲಿಯೇ ತತ್ಪರವಾಗುವಂತೆ ಮಾಡುವ ಕೃತಿ.
ಬೆಲೆ: 0-19 ಪೈಸೆ.
0.30 ಪೈಸೆ ಸ್ಟ್ಯಾಂಪು ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಿನಿಂದ ಕಳಿಸಬಹುದು.
ರಖಂ ಪ್ರತಿಗಳಿಗೆ ವಿಚಾರಿಸಿರಿ :-
ನವಯುಗ ಪ್ರೆಸ್, ಉಡುಪಿ.

Edited, Printed & Published by K. H. Shetty at the Navayuga Press, Udipi, S. India.

ನವಯುಗ

29—9—1966

೨೦ ಪೈಸೆ

ಸರೂ ಕೊಟ್ಟ ಬಾಗಿನ

ಬರೆದವರು
ಶ್ರೀಮತಿ ರತ್ನಮ್ಮ ಸುಂದರ ರಾವ್, ಬೆಂಗಳೂರು

ಅನೂರಾಧ ಶಾಲೆಯ ಹಾದಿ ಹಿಡಿದು ಸಾಗುತ್ತಲೇ ಇದ್ದಳು. ಶಾಲೆ ಸಮೀಪಿಸುತ್ತಿದ್ದಂತೆ ಅವಳಿಗೆ ಯೋಚನೆಯೊಂದಿಗೆ ಗಾಬರಿಯೂ ಹೆಚ್ಚತೊಡಗಿತ್ತು. ಹಿಂದಿನ ದಿನ ತರಗತಿಯಲ್ಲಿ ಮುಖ್ಯೋಪಾಧ್ಯಾಯಿನಿಯವರೇ ಸ್ವತಃ ಬಂದು ತಿಳಿಸಿ ಹೋಗಿದ್ದರು—'ಪರೀಕ್ಷೆಗೆ ಕಟ್ಟುವ ಹಣ ತೆಗೆದುಕೊಳ್ಳಲು ನಾಳೆಯೇ ಕಡೆಯ ದಿನ'—ಎಂದು. ಹಿಂದಿನ ರಾತ್ರಿಯಿಂದ ಅನೂರಾಧಳ ತಾಯಿ ಸರಸಮ್ಮ ತಾವು ಮನೆಗೆಲಸ ಮಾಡುತ್ತಿದ್ದ ಮನೆಯಲ್ಲೆಲ್ಲ ಅಂಗಲಾಚಿ ಬೇಡಿದ್ದಾಗ ಸಿಕ್ಕಿದ್ದುದು ಆರು ರೂಪಾಯಿಗಳಷ್ಟೆ. ಅನೂರಾಧಳ ಕೈಯಲ್ಲಿ ಆ ಆರು ರೂಪಾಯಿಗಳು ಮಾತ್ರವಿತ್ತು. ಉಳಿದ ಹದಿನಾಲ್ಕು ರೂಪಾಯಿಗಳಿಗೇನು ಮಾಡಬೇಕು? ಈ ಪ್ರಶ್ನೆ ಒಂದು ಕೀಟದಂತೆ ಅನೂರಾಧಳ ತಲೆಯನ್ನು ಕೊರೆಯುತ್ತಿತ್ತು. ಅದೇ ಯೋಚನೆಯಲ್ಲೇ ಮುಳುಗಿ ಹೋಗಿದ್ದ ಅನೂರಾಧ ಶಾಲೆಯನ್ನು ಪ್ರವೇಶಿಸಿದ್ದಳು. ಶಾಲೆಯ ಗಂಟೆ ಹೊಡೆಯಲು ಇನ್ನೂ ವೇಳೆಯಿದ್ದುದರಿಂದ ಮೈದಾನದಲ್ಲಿದ್ದ ಕಲ್ಲು ಬೆಂಚೊಂದರ ಮೇಲೆ ಕುಳಿತಳವಳು.

ಮೈದಾನದಲ್ಲಿ ಮಕ್ಕಳೆಲ್ಲ ಹಕ್ಕಿಯಂತೆ ಕುಣಿಯುತ್ತಿದ್ದರು. ಅವರೆಷ್ಟು ಸುಖಿಗಳು! ಅವರಂತೆಯೇ ವಿದ್ಯಾರ್ಥಿನಿಯಾಗಿದ್ದ ಅನೂರಾಧಳಿಗೆ ಮಾತ್ರ ತಲೆ ತಿನ್ನುವ ಚಿಂತೆ. "ಉಳಿದ ಹದಿನಾಲ್ಕು ರೂಪಾಯಿಗಳಿಗೇನು ಮಾಡುವುದು? ಮುಖ್ಯೋಪಾಧ್ಯಾಯಿನಿಯವರಿಗೆ ತನ್ನ ಬಡತನದ ಬವಣೆಯನ್ನು ವಿವರಿಸಿ, ಅವರನ್ನೇ ಕೇಳುವುದೇ? ಅವರು ಕೊಟ್ಟಾರೇ? ಒಂದು ವೇಳೆ ಇಲ್ಲವೆಂದು ಬಿಟ್ಟರೆ ಮುಂದೆ ತನ್ನ ಗತಿ? ಎಸ್. ಎಸ್. ಎಲ್. ಸಿ. ಪರೀಕ್ಷೆ ಆದರೆ ಎಲ್ಲಾದರೂ ಉಪಾಧ್ಯಾಯ ವೃತ್ತಿ ಹಿಡಿಯಬಹುದು. ಇಲ್ಲವಾದರೆ ಅದೂ ಸಾಧ್ಯವಿಲ್ಲ"— ಹೀಗೇ ಹಲವಾರು ಸಮಸ್ಯೆಗಳು ಅವಳನ್ನು ಕಾಡುತ್ತಿದ್ದುವು.

ಶಾಲೆಯ ಗಂಟೆ ಢಣ ಢಣ—ಎಂದು ಬಡಿಯಿತು. ಆದರೆ ಆ ಸದ್ದು ಅನೂರಾಧಳ ಕಿವಿಗೆ ಬೀಳಲಿಲ್ಲ; ಕಲ್ಲುಬೆಂಚನ್ನು ಬಿಟ್ಟು ಅವಳು ಏಳಲೂ ಇಲ್ಲ. ಹುಡುಗರೆಲ್ಲ ಪ್ರಾರ್ಥನೆಗೆಂದು ಹೊರಟಿದ್ದೂ ಅವಳ ಗಮನಕ್ಕೆ ಬರಲಿಲ್ಲ. ಕೈಯಲ್ಲಿದ್ದ ಆರು ರೂಪಾಯಿಗಳನ್ನೇ ದಿಟ್ಟಿಸುತ್ತ ಕುಳಿತಿದ್ದಳು. ಕಣ್ಣೀರು ಧಾರ ಧಾರೆಯಾಗಿ ಹರಿಯುತ್ತಿತ್ತು.

ಅಂದು ಅವಳ ಗೆಳತಿ ಸರೋಜಿನಿ ಅಕಸ್ಮಾತ್ತಾಗಿ ಶಾಲೆಗೆ ಬರುವುದು ಒಂದೆರಡು ನಿಮಿಷಗಳು ತಡವಾಗಿತ್ತು. ಅವಸರವಸರವಾಗಿ ಓಡಿ ಬರುತ್ತಿದ್ದ ಸರೋಜಿನಿ ಮೈದಾನದಲ್ಲಿ ಒಂಟಿಯಾಗಿ ಕುಳಿತಿದ್ದ ಅನೂರಾಧಳನ್ನು ಕಂಡಳು. ತಕ್ಷಣ ಅವಳ ಬಳಿಗೆ ಓಡಿದಳು. "ಅನೂ, ಅನೂ, ಬೆಲ್ ಹೊಡೆದರೂ ಇನ್ನೂ ಇಲ್ಲೇ ಏಕೆ ಕುಳಿತಿದ್ದೀ?' ಎಂದು ಗಟ್ಟಿಯಾಗಿ ಕೂಗಿದಳು. ಆಗಲೇ ಅನೂರಾಧ ಎಚ್ಚೆತ್ತಿದ್ದು.

"ಇದೇಕೆ ಅಳುತ್ತಾ ಇದ್ದೀ?" ಸರೋಜಿನಿ ಪುನಃ ಕೇಳಿದಳು ಆಶ್ಚರ್ಯದಿಂದ.

'ಏನು ಮಾಡುವುದೇ ಸರೂ? ಪರೀಕ್ಷೆಗೆ ಕಟ್ಟಲು ಹಣವೇ ಸಿಕ್ಕಲಿಲ್ಲ. ಸಿಕ್ಕಿರುವುದು ಈ ಆರು ರೂಪಾಯಿಗಳಷ್ಟೆ." ಅನೂರಾಧ ಅಳುತ್ತಲೇ ಹೇಳಿ, ಕೈಯಲ್ಲಿದ್ದ ಆರು ರೂಪಾಯಿಗಳನ್ನು ತೋರಿಸಿದಳು.

ಸರೋಜಿನಿಯ ಹೃದಯ ಕರಗಿ ಹೋಯಿತು. ಅನೂರಾಧಳ ಬಡತನಕ್ಕಾಗಿ ಮರುಗಿ, 'ಉಳಿದ ಹಣ ನಾನು ಕೊಡುತ್ತೇನೆ. ನೀನು ಹಣ ಕಟ್ಟಿಬಿಡು." ಎಂದಳು.

ಅನೂರಾಧ ಒಪ್ಪದೆ—"ನೀನು ಕಟ್ಟಬೇಡವೇ ಸರೂ....' ಎಂದು ಕೇಳಿದಳು.

"ನಾನು ಟೀಚರನ್ನು ಕೇಳಿ ಪುನಃ ಮನೆಗೆ ಹೋಗಿ ತಂದುಕೊಡುತ್ತೇನೆ. ಮನೆ ಹತ್ತಿರವೇ ಇದೆಯಲ್ಲ, ಬಾ ಹೋಗೋಣ...." ಎನ್ನುತ್ತ ಸರೋಜಿನಿ ತನ್ನ ಗೆಳತಿಯೊಡನೆ ಶಾಲೆಯ ಒಳಕ್ಕೆ ನಡೆದಳು.

ಸರೋಜಿನಿ ಶ್ರೀಮಂತರ ಮನೆಯ ಏಕಮಾತ್ರ ಪುತ್ರಿ. ಆದರೆ ಅವಳಲ್ಲಿ ಅಹಂಕಾರ, ಆಡಂಬರಗಳಿರಲಿಲ್ಲ. ಅನೂರಾಧ ಬಡವಳಾದರೂ ಸರೋಜಿನಿಯ ಆತ್ಮೀಯ ಗೆಳತಿ. ಅವಳ ಗೆಳೆತನಕ್ಕೆ ಬಡತನ, ಸಿರಿತನಗಳೆಂಬ ಭೇದವಿರಲಿಲ್ಲ. ಅನೂರಾಧಳ ಬಡತನವನ್ನು ಕಂಡು ಎಷ್ಟೋ ಬಾರಿ ಅನುಕಂಪ ತೋರಿದ್ದಳು ಸರೋಜಿನಿ. ಅನೂರಾಧಳ ಸದ್ಗುಣಗಳು ಸರೋಜಿನಿಯನ್ನು ಸೂಜಿಗಲ್ಲಿನಂತೆ ಆಕರ್ಷಿಸಿದ್ದುವು. ಸುಶೀಲೆ, ಸುಂದರಿಯಾದ ಅನೂರಾಧಳಂತಹ ತಂಗಿ ತನಗೂ ಒಬ್ಬಳು ಇರಬಾರದಾಗಿತ್ತೇ— ಎಂದು ಸರೋಜಿನಿ ಎಷ್ಟೋ ಬಾರಿ ಆಶಿಸಿದುದೂ ಉಂಟು. ಗೆಳತಿಯಾದ ಅನೂರಾಧಳನ್ನು ಸರೋಜಿನಿ ತಂಗಿಯೆಂದೇ ಭಾವಿಸಿದ್ದಳು. ಆ ತಂಗಿಗೆ ಸಹಾಯ ಮಾಡುವ ಭಾಗ್ಯ ಇಂದು ಆ ಅಕ್ಕನ ಪಾಲಿಗೆ ಬಂದಿತ್ತು.

"ಸರೂ, ಸರೂ, ನಿನ್ನ ಉಪಕಾರ ಹೇಗೆ ಮರೆಯಲೀ? ಈ ಪರೀಕ್ಷೆ ಆದ ಮೇಲೆ ನಾನು ನೌಕರಿಗೆ ಸೇರಿ ಈ ಸಾಲವನ್ನು ಹೇಗಾದರೂ ಮಾಡಿ ತೀರಿಸುತ್ತೇನೆ ......" ಎನ್ನುತ್ತಾ ಕೃತಜ್ಞತೆಯನ್ನು ಸೂಚಿಸಿದಳು ಅನೂರಾಧ. ಹಾಗೆ ಹೇಳುವಾಗ ಅವಳ ಧ್ವನಿ ಕುಗ್ಗಿತ್ತು. ಕಣ್ಣಂಚಿನಲ್ಲಿ ಹನಿಗೂಡಿತ್ತು.

ಅನೂರಾಧಳಿಗೆ ನಾಲ್ಕನೆಯ ವರ್ಷ ನಡೆಯುತ್ತಿದ್ದಾಗ ಅವಳ ತಂದೆ ಈ ಲೋಕದಿಂದ ಕಣ್ಮರೆಯಾಗಿ ಹೋದರು. ಅನೂರಾಧ, ಅವಳ ತಾಯಿ ಅನಾಥರಾದರು. ಮಗಳಿಗಾಗಿ ತಾಯಿ ಸರಸಮ್ಮ ತಮ್ಮ ದುಃಖವನ್ನು ಬದಿಗೊತ್ತಬೇಕಾಯಿತು. ನಿಲ್ಲಲು ನೆಲೆಯಿಲ್ಲ, ತಿನ್ನಲು ಅನ್ನವಿಲ್ಲ. ಇಂಥ ಪರಿಸ್ಥಿತಿಯಲ್ಲಿ ಸರಸಮ್ಮ ಧೈರ್ಯ ತಾಳಬೇಕಾಯಿತು. ಹೇಗಾದರೂ ಮಾಡಿ ಮಗಳನ್ನು ವಿದ್ಯಾವತಿಯನ್ನಾಗಿ ಮಾಡಿ ಮುಂದಕ್ಕೆ ತರಬೇಕೆಂದು ಹಟ ತೊಟ್ಟರು. ಅದಕ್ಕಾಗಿ ಆಕೆ ಅವರಿವರ ಮನೆಗಳ ಚಾಕರಿ ಮಾಡಲು ತೊಡಗಬೇಕಾಯಿತು. ಹೀಗೆಯೇ ಕಾಲ ಸಾಗಿತ್ತು. ಅನೂರಾಧ ಎಸ್. ಎಸ್. ಎಲ್. ಸಿ ತರಗತಿಗೆ ಬಂದಿದ್ದಳು. ಬಡವಳೆಂದು ಫ್ರೀಷಿಪ್ ದೊರೆತಿತ್ತು. ಆದರೆ ಪರೀಕ್ಷೆಗೆ ಕಟ್ಟಬೇಕಾಗಿದ್ದ ಇಪ್ಪತ್ತು ರೂಪಾಯಿ? ಆ ಬಡ ಕುಟುಂಬದಲ್ಲಿ ಇಪ್ಪತ್ತು ರೂಪಾಯಿಗಳು ಒಂದು ಗಂಟಾಗಿ ಎಲ್ಲಿಂದ ಬರಬೇಕು?

ಇಂಥ ವೇಳೆಯಲ್ಲಿಯೇ ಸರೋಜಿನಿ ಅನೂರಾಧಳ ಭಾಗದ ದೇವರಾಗಿ ಬಂದು ಸಹಾಯ ಮಾಡಿದ್ದಳು.

o o o o

ಬೇಸಿಗೆಯ ರಜೆ ಮುಗಿಯುತ್ತ ಬಂದಿತ್ತು. ವಿದ್ಯಾರ್ಥಿಗಳೆಲ್ಲ ತಮ್ಮ ಫಲಿತಾಂಶಗಳನ್ನು ಎದುರು ನೋಡುತ್ತಿದ್ದ ದಿನಗಳವು. ಒಂದು ದಿನ ಎಸ್. ಎಸ್. ಎಲ್. ಸಿ. ಪರೀಕ್ಷೆಯ ಫಲಿತಾಂಶವೂ ಪತ್ರಿಕೆಗಳಲ್ಲಿ ಪ್ರಕಟವಾಯಿತು. ಫಲಿತಾಂಶ ಕಂಡಾಗ ಅನೂರಾಧಳ ಮುಖ ಪೆಚ್ಚಾಗಿತ್ತು. ಕಾರಣ ಅವಳ ನಂಬರು ಪಟ್ಟಿಯಲ್ಲಿರಲಿಲ್ಲ. ಸರೋಜಿನಿ? ಅವಳ ನಂಬರು ಪಟ್ಟಿಯಲ್ಲಿತ್ತು. "ನಾನು ತೇರ್ಗಡೆಯಾಗದಿದ್ದರೂ ಚಿಂತೆಯಿಲ್ಲ; ನನಗೆ ಸಹಾಯ ಮಾಡಿದ ಸರೋಜಿನಿ ತೇರ್ಗಡೆಯಾಗಿರುವಳಲ್ಲ—" ಎಂಬುದೊಂದೇ ಅನೂರಾಧಳಿಗುಳಿದ ಸಮಾಧಾನ.

ಅನೂರಾಧ ಸರೋಜಿನಿಯ ಮನೆಗೆ ಓಡೋಡಿ ಬಂದಳು. ಸರೋಜಿನಿಯನ್ನು ಕಂಡು ಅವಳ ಕೈಹಿಡಿದು, 'ಸರೂ, ಸರೂ ...ನೀನು ಪಾಸ್ ಆಗಿದ್ದೀಯೆ, ಬಹಳ ಸಂತೋಷ.' ಎಂದು ತನ್ನ ಸಂತೋಷ ವ್ಯಕ್ತಪಡಿಸಿದಳು. ಮರುಕ್ಷಣ ಕುಗ್ಗಿದ ಧ್ವನಿಯಿಂದ— 'ಆದರೆ.... ಸರೂ, ನನ್ನನ್ನು ಉದ್ಧರಿಸಲು ನೀನು ನನಗೆ ಸಹಾಯ ಮಾಡಿದೆ. ಆದರೆ ಸಾರ್ಥಕವಾಗಲಿಲ್ಲ—" ಎಂದು ದುಃಖಿಸಿದಳು.

ಅನೂರಾಧಳ ಸ್ಥಿತಿ ಕಂಡು ಸರೋಜಿನಿಗೆ ಬಹಳ ವ್ಯಥೆಯಾಯಿತು. "ಅನೂ, ಆಗಿಹೋದುದಕ್ಕೆ ದುಃಖಿಸಬೇಡ. ಸಪ್ಲಿಮೆಂಟರಿ ಪರೀಕ್ಷೆಗೆ ಕಟ್ಟಿ, ನೀನು ಪಾಸ್ ಮಾಡಲೇ ಬೇಕು" ಎಂದು ಹೇಳಿದಳು. ಗೆಳತಿಯ ಮಾತಿನಿಂದ ಅನೂರಾಧಳಿಗೆ ಸ್ವಲ್ಪ ಸಮಾಧಾನ ಸಿಕ್ಕಿತು.

ಮಗಳಿಗೆ ಪರೀಕ್ಷೆಯಲ್ಲಿ ಪಾಸ್ ಆಗಲಿಲ್ಲವೆಂಬ ವಿಷಯ ತಿಳಿದಾಗ ಸರಸಮ್ಮನೂ ಸ್ವಲ್ಪ ತಿರಸ್ಕಾರವಾಗಿಯೇ ಮಾತನಾಡಿ, ಅನೂರಾಧಳನ್ನು ಆಕ್ಷೇಪಿಸಿದ್ದರು. ಮಗಳಿಗೆ ಎಸ್. ಎಸ್. ಎಲ್. ಸಿ. ಪರೀಕ್ಷೆಯಾದರೂ ಆಗಲೆಂಬ ಹಿರಿಯಾಸೆಯಿಂದ ಅವರು ಎಷ್ಟು ದುಡಿಯುತ್ತಿದ್ದರು! ಪರೀಕ್ಷೆಗೆ ಹಣ ಕಟ್ಟಬೇಕಾದಾಗ ಅವರು ಪಟ್ಟ ಪಾಡು; ಕೊನೆಗೆ ಸರೋಜಿನಿ ಹಣ ಕೊಟ್ಟದ್ದು—ಎಲ್ಲವೂ ಅವರ ಕಣ್ಮುಂದೆ ಕಟ್ಟಿತು. ಅಷ್ಟಾದರೂ ಎಲ್ಲವೂ ವ್ಯರ್ಥವಾಯಿತೆಂದಾಗ ಅವರ ಮನಸ್ಸು ರೋಸಿತ್ತು. ತಮ್ಮ ಅಸಮಾಧಾನವನ್ನು ಮಾತುಗಳಲ್ಲಿ ವ್ಯಕ್ತಪಡಿಸಿದ್ದರು.

ಅದಕ್ಕಾಗಿ ಅನೂರಾಧ ತನ್ನ ತಾಯಿಯನ್ನು ದೂಷಿಸಲಿಲ್ಲ— "ಹೌದು, ನನ್ನದೇ ತಪ್ಪು, ನಾನು ಕಷ್ಟಪಟ್ಟು ಓದಿ ಪಾಸ್ ಮಾಡಬೇಕಾಗಿತ್ತು. ಎಲ್ಲಿಯಾದರೂ ನೌಕರಿಗೆ ಸೇರಿ ಅಮ್ಮನ ದುಡಿತವನ್ನು ತಪ್ಪಿಸಿ, ಆಕೆಯನ್ನು ಸುಖವಾಗಿರಿಸಬೇಕಾಗಿತ್ತು. ಅಮ್ಮನಾದರೂ ಇನ್ನೆಷ್ಟು ದಿನ ದುಡಿದು ದಣಿದಾಳು?" ಎಂದು ಯೋಚಿಸಿ, ತಪ್ಪನ್ನು ತನ್ನ ಮೇಲೇ ಹಾಕಿಕೊಂಡಳು.

ಅನೂರಾಧ ಬೆಳಗ್ಗೆ ಮತ್ತು ಸಂಜೆಯ ವೇಳೆಯಲ್ಲಿ ಚಿಕ್ಕ ಮಕ್ಕಳಿಗೆ ಪಾಠ ಹೇಳಿ ತಾನು ಏಳೆಂಟು ರೂಪಾಯಿ ಸಂಪಾದನೆ ಮಾಡುತ್ತಿದ್ದಳು. ಅವಳಿಗಿದ್ದ ವೇಳೆಯೆಲ್ಲ ಆ ಹುಡುಗರ ಬಳಿಯಲ್ಲಿಯೇ ಕಳೆದು ಹೋಗುತ್ತಿದ್ದುದರಿಂದ ಅನೂರಾಧಳಿಗೆ ತಾನು ವ್ಯಾಸಂಗ ಮಾಡಲು ಸಮಯವೇ ಸಿಕ್ಕುತ್ತಿರಲಿಲ್ಲ. ಈ ವಿಷಯ ಸರಸಮ್ಮನಿಗೂ ತಿಳಿದಿತ್ತು. ಆದರೂ ಸಹ ಅನೂರಾಧ ಪಾಸ್ ಆಗುವಳೆಂದೇ ಅವರು ಭರವಸೆ ಇಟ್ಟುಕೊಂಡಿದ್ದರು.

ಅನೂರಾಧಳ ಕಷ್ಟ ಸುಖವನ್ನು ಕೇಳಿ ಸಂತೈಸುತ್ತಿದ್ದ ಅವಳ ಗೆಳತಿಯೆಂದರೆ ಸರೋಜಿನಿ ಮಾತ್ರ. ಅದಕ್ಕಾಗಿಯೇ ಆ

(ಹದಿನೈದನೇ ಪುಟ ನೋಡಿರಿ)

ಅತ್ಯಾಧುನಿಕ ಸಲಕರಣೆ — ಸೌಕರ್ಯಗಳಿಂದ ಕೂಡಿದ
ಭೋಜನ, ಉಪಾಹಾರ ಮತ್ತು ವಸತಿ ಗೃಹ



ಹೊಟೆಲ್ ಶಿವಪ್ರಸಾದ

ಫೋನ್: 77 ಕುಂದಾಪುರ, ದ. ಕ.

ನಲ್ವತ್ತಾರನೆ ವರ್ಷ
Telephone 226.

Estd 1921
NAVAYUGA
Leading Kannada Weekly
UDIPI, S. Kanara

ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ
ಉಡುಪಿ. ದ. ಕನ್ನಡ.

ಸಂಚಾಲಕ--ಸಂಪಾದಕ:
ಕೆ. ಹೊನ್ನಯ್ಯ ಶೆಟ್ಟಿ

ವಾರ್ಷಿಕ ಚಂದಾ:
ಮೂರು ವಿಶೇಷ ಸಂಚಿಕೆಗಳು ಸೇರಿ
ಅಂಚೆ ವೆಚ್ಚ ಸಹಿತ ಮುಂಗಡ
ಸ್ವದೇಶ ರೂ. ೧೦
ವಿದೇಶ ರೂ. ೧೪

ಜಾಹೀರಾತು ದರಗಳು:
ಅನಿಯಮಿತ (ಕೆಜುವಲ್)
ಕಲಂ ಸೆಂಟಿಮೀಟರಿಗೆ ರೂ. 2-00
ನಿಯಮಿತ (ಕಂಟ್ರಾಕ್ಟ್)
ಕಲಂ ಸೆಂಟಿಮೀಟರಿಗೆ ರೂ. 1-50

ಸೂಚನೆಗಳು

ಲೇಖಕ ಬಂಧುಗಳಿಗೆ

ಲೇಖನವು ಕಿರಿದಾಗಿದ್ದು ಹಿಂದರ್ಥದಿಂದ ಕೂಡಿರಬೇಕು. ಕಾಲು ತಾವಿನ ಪ್ರಮಾಣದ ಹಾಳೆಯ ಒಂದೇ ಮಗ್ಗುಲಲ್ಲಿ ಬದಿಯಂಚುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು. ಆಧಾರಿತ, ಅನುವಾದಿತವಾದರೆ ಅವುಗಳ ಮೂಲವನ್ನೂ ತಿಳಿಸಬೇಕು.

ಚಂದಾದಾರರಿಗೆ—

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಮುಖಪತ್ರದಲ್ಲಿ

ಶ್ರೀ ಸಾಮಾನ್ಯನ ನೈಜ ಪ್ರತಿನಿಧಿ ರಾಷ್ಟ್ರಪಿತ ಮಹಾತ್ಮಾ ಗಾಂಧಿ.

ನವಯುಗ

ಸಂಪುಟ ೪೬	ಉಡುಪಿ	Vol. 46
ಸಂಚಿಕೆ ೫	೨೯—೯—೧೯೬೬	No. 5

ಕಣ್ಣಿಗೆ ರಮ್ಯವಾದರೆ ಸಾಕೆ?

ಜಬ್ಬಲ್ಪುರದಲ್ಲಿ ಸೇರಿದ ಅಖಿಲ ಭಾರತೀಯ ಕಾಂಗ್ರೆಸ್ ಅಧಿವೇಶನವು ಕಾಂಗ್ರೆಸ್ಸಿನ ದೃಷ್ಟಿಯಲ್ಲಿ ಮಾತ್ರವಲ್ಲ, ರಾಷ್ಟ್ರದ ದೃಷ್ಟಿಯಲ್ಲೂ ಮಹತ್ವಪೂರ್ಣವಾದುದು. ಈ ಅಧಿವೇಶನವು ಐತಿಹಾಸಿಕ ದಾಖಲೆಯನ್ನೇನೂ ನಿರ್ಮಿಸಿರುವುದಿಲ್ಲ; ಆದರೆ, ಕಮ್ಯೂನಿಸ್ಟರ ಗಂಡುಮೆಟ್ಟಿನ ನೆಲದಲ್ಲಿ ನಡೆಯುತ್ತಿರುವುದರಿಂದ, ಮುಂದಿನಲ್ಲಿ ಸಾರ್ವತ್ರಿಕ ಚುನಾವಣೆಗಳು ನಡೆಯಲಿರುವುದರಿಂದ ಇದು ಮಹತ್ವಗಳಿಸಿದೆ. ಈ ಬಾರಿಯ ಚುನಾವಣೆಗಳಲ್ಲಿ ಆಡಳಿತವನ್ನು ಕಾಂಗ್ರೆಸ್ಸಿನ ಕೈಯಿಂದ ಕಿತ್ತುಕೊಳ್ಳಬೇಕು ಎಂದು ವಿರೋಧಿ ಪಕ್ಷಗಳಲ್ಲಿ ಹೆಚ್ಚಿನವು ಸುಸಂಘಟಿತವಾಗಿ ಚುನಾವಣಾರಂಗಕ್ಕಿಳಿಯಲು ಮುಂದಾಗಿವೆ. ಕಾಂಗ್ರೆಸ್ಸಿನಲ್ಲಿಯೂ ಎಲ್ಲೆಲ್ಲೂ ಭಿನ್ನಮತೀಯರು ರಕ್ತಬೀಜಾಸುರನ ವಂಶದಂತೆ ಹುಟ್ಟಿಕೊಂಡು ಕಾಂಗ್ರೆಸ್ ಟಿಕೇಟಿಗೆ ಅರ್ಜಿಯನ್ನು ಸಲ್ಲಿಸದ ಸಿದ್ಧ ಸಮ್ಮತಿದ್ದಾರೆ; ಇನ್ನು ಜನ ಕಾಂಗ್ರೆಸ್, ಬಂಗಾಳ ಕಾಂಗ್ರೆಸ್, ಕೇರಳ ಕಾಂಗ್ರೆಸ್— ಹೀಗೆ, ಪಕ್ಷವೊಂದನ್ನು ಕಟ್ಟಿ ತನ್ಮೂಲಕ ಚುನಾವಣೆಗೂ ಕಣಕ್ಕಿಳಿಯುವ ಗುರಿಯವರದು. ಹೀಗಾಗಿ ಕಾಂಗ್ರೆಸ್ಸು ತನ್ನವರ, ವಿರೋಧಿಗಳ ವಿರೋಧವನ್ನೆದುರಿಸಲು ತುಂಬ ಪ್ರಯಾಸ ಪಡಬೇಕಾಗುವುದು.

ಕಾಂಗ್ರೆಸ್ ಆಡಳಿತವನ್ನು ದಕ್ಷ ರೀತಿಯಲ್ಲಿ ಸಾಗಿಸುತ್ತಿದೆ—ಪ್ರಯತ್ನಿಸುತ್ತಿದೆ ನಿಜ. ಆದರೆ, ಇಂದು ನಾವು ಕಾಣುತ್ತಿರುವ ಆಡಳಿತ ಶಿಥಿಲತೆ, ತಡವಾದ ನಿರ್ಣಯ, ತತ್ತರಿಸುತ್ತಿರುವ ಶಾಸನ, ವಿವರಣೆ ಬಯಸುವ ಆಜ್ಞೆ, ಎಲ್ಲೆಲ್ಲಿಯೂ ಭ್ರಷ್ಟಾಚಾರದ ಪ್ರಸಾರ—ಮೊದಲಾದುವು ಜನತೆ ಮೊದಲು ಕಟ್ಟಿದ್ದ ಆಶಾಗೋಪುರವನ್ನು ನೆಲಸಮ ಮಾಡಿವೆ. ಜನಪ್ರತಿನಿಧಿಗಳು ಸತ್ಯ, ಧರ್ಮ, ನೀತಿಗಳನ್ನನುಸರಿಸುವುದನ್ನು ಬಿಟ್ಟು ಸುಲಭದಲ್ಲಿ ಜನಪ್ರಿಯತೆ, ತನ್ಮೂಲಕ ಅಧಿಕಾರ ಭದ್ರತೆಯನ್ನು ಸಾಧಿಸಲು ಹೆಣಗುತ್ತಾರೆ. ಕೆಲವೇ ಜನರ ಕೈಗೊಂಬೆಯಾಗುವುದು ಹೆಚ್ಚಿನ ಜನರಿಗೆ ಅಪ್ರಿಯವಾಗುತ್ತಾರೆ. ವಿರೋಧಿಗಳ ಕೈಗೆ ಅಧಿಕಾರ ಒಪ್ಪಿಸೋಣ ಎಂಬುದನ್ನು ವಿಚಾರ ಮಾಡಲಿಕ್ಕೆ ಮೊಟ್ಟಿದ್ದಾರೆ. ಶತಮಾನ ಶ್ರೀ ಸಾಮಾನ್ಯ ಹಿಂದೆ ಬ್ರಿಟಿಷರ ಆಡಳಿತದಿಂದ ನೊಂದವನು ಇಂದು ಕಾಂಗ್ರೆಸ್ ಆಡಳಿತದಿಂದ ನವೆಯುತ್ತಿದ್ದಾನೆ. ಎನ್ನುತ್ತಿದ್ದ ಆ ತಜ್ಞರೀ ಸಾಮಾನ್ಯನಲ್ಲಿ ಮನೆ ಮಾಡುವ ಅಸಮಾಧಾನ ಅನಿವಾರ್ಯವೆಂದೆಂದು ಯಾರೂ ಹೇಳಲಾರರು. ಉದಾಹರಣೆಗೆ ಮಂಗಳೂರು ಒಳಗಿನ ಸಂಕಪ ಪಟ್ಟೆಯ ಉದಾಹರಣೆಯನ್ನೇ ಎತ್ತಿಕೊಳ್ಳಬಹುದು. ಕಳ್ಳ ವ್ಯಾಪಾರವನ್ನು ಕಂಡು ಹಿಡಿಯುವುದು ಇದರ ಸದುದ್ದೇಶ. ಆದರೆ, ನಡೆಯುವುದೇನು? ಚಿಕ್ಕ ಚಿಕ್ಕ ವ್ಯಾಪಾರಿಗಳಿಗೆ, ಸಾರ್ವಜನಿಕರಿಗೆ ಆಗುತ್ತಿರುವ ಕಿರುಕುಳವನ್ನು ಬರೆಯಲಸಾಧ್ಯ. ಇದೇಕೆ ಹೀಗೆ? ಇಂತಹ ರೀತಿ ನೀತಿಯನ್ನು ಕಾಣುವಾಗ, ನಂದಾರಾಯನ ದರಬಾರದ ನೆನಪಾಗುತ್ತಿದೆ. ಇದೇ ರೀತಿ ನಡೆದರೆ, ಬ್ರಿಟಿಷರ ವಸಾಹತುಶಾಹಿ, ಸಾಮ್ರಾಜ್ಯವಾದಿ ನೀತಿಯಿಂದಾಗಿ ಒಂದಾದ ಭಾರತ ಪ್ರಜಾಸತ್ತೆಯಲ್ಲಿ ಹರಿಹಂಚಾಗಿ ಛಿನ್ನವಿಚ್ಛಿನ್ನವಾಗಿ ಹೋಗುವುದು. ಇಂತಹ ದುರಂತವನ್ನು ಎದುರಿಸಲು ಕಾಂಗ್ರೆಸ್ಸು ದೃಢ ಆಡಳಿತೆಯ ಮಹಾದ್ವಾರವನ್ನು ಹೂಗುವ ಕಾಲವಿಂದು ಸನ್ನಿಹಿತವಾಗುತ್ತಿದೆ.

ಚುನಾವಣಾ ಘೋಷಣೆಯಲ್ಲಿ ಕಾಂಗ್ರೆಸು ಏನನ್ನೂ ಹೇಳಬಹುದು—ಆದರೆ ಮಾಡಲು ಸಿದ್ಧವಿಲ್ಲದುದನ್ನು ಹೇಳಿಯೇನು ಪ್ರಯೋಜನ? ಹೇಳುವುದಕ್ಕಿಂತ ಮಾಡಿತೋರಿಸುವುದು ಹೆಚ್ಚಿನದು. ಶರದೃತುವಿನ ಮೋಡ ಗುಡುಗುತ್ತದೆ, ಮಳೆ ಸುರಿಸುವುದಿಲ್ಲ; ವರ್ಷರ್ತುವಿನ ಮೋಡ ಗುಡುಗುವುದಿಲ್ಲ, ಮಳೆ ಸುರಿಸುತ್ತದೆ. ಭೂಸುಧಾರಣೆಯಂತಹ ನೀತಿಯನ್ನು ಕಾಂಗ್ರೆಸು ಮೊದಲನೆಯ ಸಾರ್ವತ್ರಿಕ ಚುನಾವಣೆಯ ವೇಳೆಯೇ ಬೆಂಬಲಿಸಿತ್ತು. ಇಂದಿಗಾದರೂ ಇದು ನನೆಗುದಿಯಲ್ಲೇ ಬಿದ್ದಿದೆ. ಅಧಿಕಾರ ಬಿಡಲು ಮನಸ್ಸಿಲ್ಲದವರು ಅಧಿಕಾರ ಗದ್ದುಗೆಗೇರಲೂ ಹೋರಾಡಬಾರದು. ಪ್ರಾಮಾಣಿಕತೆಯಿಂದ ನಡೆದು ಸೋತರೂ ಗೆದ್ದಂತೆ. ಇದನ್ನು ಕಾಂಗ್ರೆಸ್ ಪಕ್ಷವು ಚಿಂತಿಸಬೇಕು; ನಡೆಯಬೇಕು. ಅಧಿಕಾರದ ಸೂತ್ರ ಹಿಡಿಯಬಲ್ಲ ಅನ್ಯ ಸಮರ್ಥ ಪಕ್ಷಗಳು ನಮ್ಮಲ್ಲಿಲ್ಲದಿರುವುದರಿಂದ ಕಾಂಗ್ರೆಸ್ಸೇ ನಮಗೆ ಗತಿ ಎಂಬ ಅಸಹಾಯಕ ಪರಿಸ್ಥಿತಿ ದೇಶದಲ್ಲಿ ಉಳಿಯಬಾರದು, ನಮ್ಮ ಉದ್ಧಾರಕ್ಕೆ ಕಾಂಗ್ರೆಸ್ಸೇ ಬೇಕು ಎಂಬ ಪ್ರೇಮಮಯ ಪರಿಸ್ಥಿತಿ ಮೊಳೆಯಬೇಕು. ಕಾಂಗ್ರೆಸ್ಸು ವರ್ಷಾಕಾಲದ ಮೋಡವಾಗಬೇಕು; ಶರತ್ಕಾಲದ ಬಿಳಿಯ ಮೋಡವಾದರೆ ಕಣ್ಣಿಗೆ ಮಾತ್ರ ರಮ್ಯ; ಉಣ್ಣುವುದೇನನ್ನು?

ನಮ್ಮ ನಡಿಗೆ ಅಡಿಗಡಿಗೆ

ಮಹಾರಾಷ್ಟ್ರದ ಮುಖ್ಯ ಮಂತ್ರಿ ವಿ. ಪಿ. ನಾಯಕರೂ ಕರ್ನಾಟಕದ ಮುಖ್ಯ ಮಂತ್ರಿ ನಿಜಲಿಂಗಪ್ಪನವರೂ ಎಲ್ಲರ ನಿರೀಕ್ಷೆಯನ್ನು ಸತ್ಯ ಮಾಡಿ ತೋರಿಸಿದ್ದರಲ್ಲಿ ಏನೂ ವಿಶೇಷ ನಡೆದಂತಾಗಲಿಲ್ಲ. ಗಡಿ ಆಯೋಗದ ಶಿಫಾರಸ್ಸಿನ ಸಿದ್ಧಾಂತದಲ್ಲಿ ಒಮ್ಮತ ಬರುವುದು ಅಸಂಭವವೆಂಬುದು ಸರಿಯಾಯಿತು. ಇನ್ನು ಆಗಲಿರುವುದೇನು? ಕೇಂದ್ರ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಮುಂದಿನ ಕ್ರಮ ನಿರ್ಧರಿಸುವುದು ಅಲ್ಲಿರುವುದು ಯೋಗ್ಯರೊಳಗೆ ವಿವಾಹ ಸಂಬಂಧದ ಪಟ್ಟಿಗೆಯೆಂದು ಯಾರೂ ತಿಳಿದಿಲ್ಲ. ಮಲಗಿದ್ದ ಗೋವೆಯನ್ನು ಎಚ್ಚರಿಸಿದ ಮರಾಠಿಗರಿಗೆ ಬೇಕಾಗುವಂತೆಯೇ ತೀರ್ಮಾನ ನಿರೀಕ್ಷಿತವಿದೆ. ಹೀಗಾಯಿತೆಂದರೆ, ಕರ್ನಾಟಕದ ದುರ್ಬಲತೆಯೆಲ್ಲಿವರೆಗೆ ಬಂತು? ಕಾರವಾರ ಗೋಡು ಕೈಬಿಟ್ಟಿತು, ಗೋವೆ ಕೈಬಿಡುವ ದಾರಿಯಲ್ಲಿದೆ, ಬೆಳಗಾಂವಿ ಮೊದಲಾದುವು ಕೈ ಬಿಡುವುವು....ಹೀಗೆಯೇ ನಡೆದರೆ ನಾವು..?

ವಚನ ಸುಧೆ

ನ ಮನುಷ್ಯೇ ಗುಣ ಕಶ್ಚಿತ್
ರಾಜನ್ ಸಧನತಾಮೃತೇ ।
ಅನಾತುರತ್ವಾತ್ ಭದ್ರಂ ತೇ
ಮೃತಕಲ್ಪಾ ಹಿ ರೋಗಿಣಃ ॥

ಮನುಷ್ಯನಿಗೆ ಸಂಪತ್ತು ಮತ್ತು ಆರೋಗ್ಯವೆಂಬೆರಡು ಗುಣಗಳು ಅತ್ಯವಶ್ಯವಾಗಿರಬೇಕು. ರೋಗಿಯಾದವನು ಶವಕ್ಕೆ ಸಮಾನನು.

ಚಂದಾದಾರರಲ್ಲಿ ವಿನಂತಿ

ಕಳೆದ ಆಗೋಸ್ತು ತಿಂಗಳಾಂತ್ಯಕ್ಕೆ "ನವಯುಗ"ದ 45ನೇ ವರ್ಷವು ಕೊನೆಗೊಂಡು ಸಪ್ಟಂಬರಾದಿಯಿಂದ 46ನೇ ಹೊಸ ವರ್ಷಾರಂಭವಾಗಿದೆ. ಈ ಅವಧಿಗೆ ಚಂದಾ ಅವಧಿ ಮುಗಿಯುವ ಹಾಗೂ ಚಂದಾ ಹಣ ಬಾಕಿಯಿರುವ ನಮ್ಮ ಚಂದಾದಾರ ಬಂಧುಗಳು ತಮ್ಮ ಚಂದಾ ಹಣವನ್ನು ದಯವಿಟ್ಟು ಆದಷ್ಟು ಶೀಘ್ರವೇ ಮನಿಯಾರ್ಡರು ದ್ವಾರಾ ಯಾ ಸಿಂಡಿಕೇಟ್ ಬ್ಯಾಂಕಿನ ಸಮೀಪದ ಶಾಖೆಯಲ್ಲಿ "ನವಯುಗ"ದ ಖಾತೆಗೆ ಜಮೆ ಮಾಡುವುದರ ಮೂಲಕ ಕಳುಹಿಸಿಕೊಟ್ಟು ಸಹಕರಿಸುವಂತೆ ವಿನಂತಿಸುತ್ತೇವೆ.

ಅಂತೂ ಚಂದಾಹಣವು ಸಕಾಲದಲ್ಲಿ ಬಾರದಿದ್ದಲ್ಲಿ ನಾವು ಕ್ರಮಶಃ ಮುಂದಿನ ಸಂಚಿಕೆಯನ್ನು ವಿ. ಪಿ. ಮೂಲಕ ಕಳುಹಿಸುತ್ತೇವೆ. ಅದನ್ನು ಅವಶ್ಯ ಸ್ವೀಕರಿಸುವಂತೆ ಬಿನ್ನಹಿಸುತ್ತೇವೆ.

ಮೆನೇಜರ್,
ನವಯುಗ, ಉಡುಪಿ.

ನರಸಣ್ಣನ ಸರಸ

"ಪಿ. ಯು. ಸಿ.ಗೆ ಸೇರುವ ವಿದ್ಯಾರ್ಥಿಗಳಿಗೆ ವಯೋಮಿತಿ ಹೇರಿದ್ದು ಕ್ರಮಬದ್ಧವೆಂದು ತೀರ್ಪು ಬಂತಂತೆ."

"ಇನ್ನಾದರೂ ಸುನಾಗರಿಕ ರೋಗ ದೂರವಾದೀತಲ್ಲ?"

ಗೇಹ ರಾಜ್ಯದಲ್ಲಿ

ಕಾಸು ಖರ್ಚಿಲ್ಲದ ಎಂಟರ್‌ಟೈನ್‌ಮೆಂಟ್

'ಓಯ್, ಇಲ್ಲಿ ಕೇಳೀಂದ್ರೆ..'

'ಏನು?'

'ನೋಡಿ, ನಾಳೆದು ಆರನೇ ತಾರೀಕಿನ ದಿನ ಎನ್ ಜಿ ವೋಗಳು ಸಾಮೂಹಿಕ ರಜೆ ಮಾಡುತ್ತಾರಂತಲ್ಲಾ....'

'ಹ್ಞಾಂ...'

'ಯಾಕಂತೆ?'

'ಅದೆಲ್ಲಾ ಮೊನ್ನೆ ಹೇಳಿದ್ದಲ್ಲಾ?'

'ಏನು?'

"ತಮ್ಮ ಕೇಳಿಕೆಗಳನ್ನು ಸರಕಾರ ಕೇಳಿಸಿಕೊಳ್ಳದ್ದರಿಂದ ನೇರ ಕ್ರಮದ ಮೊದಲನೆ ಮೆಟ್ಟಲಾಗಿ ಹೀಗೆ...."

'ಅಲ್ರಿ, ಎಂಥ ಶೋಚನೀಯ ಸ್ಥಿತಿ ಅಲ್ವೆ?"

"ಯಾರದ್ದು?'

"ಅವ್ರದ್ದು...

"ಹ್ಞಾಂ...ಆದ್ರೆ ನೋಡು, ಜನತೆಯದ್ದು ಇನ್ನೂ ಶೋಚನೀಯ..."

"ಯಾಕೆ?"

"ಕೇಳಿದ್ಯಾ ಮೊನ್ನೆ ಮಂತ್ರಿಗಳು ನೀಡಿದ ವಿವರಣೆ?'

"ಏನಂತೆ?"

"ರಾಜ್ಯ ಸರಕಾರ ತನ್ನ ಆಯದಲ್ಲಿ ಸೇ. ೭೫ರಷ್ಟನ್ನು ನೌಕರರ ಸಂಬಳ, ವೇತನಗಳಿಗಾಗಿ ವಿನಿಯೋಗಿಸುತ್ತದೆ. ಹಾಗಿರುವಾಗ ಇನ್ನೂ ವೇತನ ಹೆಚ್ಚಿಸುವುದೆಂದರೆ.."

'ಅಂದ್ರೆ, ಮತ್ತಷ್ಟು ಕರ ಹೇರ ಬೇಕಾಗುವುದೂಂತ ತಾನೆ ಭಯ?'

"ಅಷ್ಟು ಮಾತ್ರವಲ್ಲ, ವೇತನವನ್ನು ಹೆಚ್ಚಿಸುವುದರಿಂದ ಯಾವ ಪ್ರಯೋಜನವೂ ಇಲ್ಲ..."

"ಅಂದರೆ, ಹೀಗೇ ಸಾಲ ಸೋಲದಲ್ಲಿ ಅವ್ರು ಮುಳುಗಿರಬೇಕೆ?"

'ಹಾಗಲ್ಲವೇ, ನೋಡು ರಾಜ್ಯ ಪುನರ್ಘಟನೆಯಾದಂದಿನಿಂದ ಲೆಕ್ಕಾಚಾರ ಮಾಡು. ಅಂದಿಗೂ ಇಂದಿಗೂ ಎನ್‌ಜಿವೊ ವೇತನ ಭತ್ಯೆ ಅಂತ ನೂರಕ್ಕೆ ನೂರರಷ್ಟು ಏರಿದೆ."

'ಅದು ಸರಿ. ಅದರೊಡನೆ ಇದನ್ನು ಯಾಕೆ ಮರೆಯುತ್ತೀರಿ?'

'ಯಾವುದನ್ನು?"

'ಅಕ್ಕಿ ಮುಡಿಗೆ ೨೦—೨೨ ಇದ್ದದ್ದು ೬೦—೬೬ ಆಗಿದೇಂತ...."

"ಅದು ಅಭಾವದ ಕಾರಣದಿಂದ..."

"ಮತ್ತೆ ಮೆಣಸು?"

"ಅದು.....ಅದು....ಅಕ್ಕಿಯ ಅಭಾವದಿಂದ...."

"ಇರಲಿ, ಬೆಲೆಯೇರಿದೆಯೆಂಬುದನ್ನು ಒಪ್ಪುತ್ತೀರಿ—ಕಾರಣ ಯಾವುದೇ ಇರಲಿ.'

"ಮತ್ತೆ ಅಲ್ಲ ಅನ್ನೋಕಾಗುತ್ಯೆ?"

'ನೋಡಿ, ಹಾಗಾದ್ರೆ ನೌಕರರು ಬದುಕಬೇಕೋ ಬೇಡವೊ?"

'ಯಾರು ಬೇಡಾಂತ ಅಂತಾರೆ"

'ಹಾಗಾದ್ರೆ, ಅವರ ವೇತನ ಹೆಚ್ಚಿಸದೆ ಇರೋದು ಅನ್ಯಾಯ ಅಲ್ವೆ?"

"ಅನ್ಯಾಯ ಅಂದ್ರೆ?"

"ನ್ಯಾಯ ಅಲ್ಲದ್ದು..."

"ಸರಿ, ನ್ಯಾಯ—ಅನ್ಯಾಯಗಳ ಪರಿಭಾಷೆ ಏನೂಂತ? ಏಕೆಂದ್ರೆ ಒಬ್ಬನಿಗೆ ನ್ಯಾಯವಾಗಿರೋದು ಮತ್ತೊಬ್ಬನಿಗೆ ಅನ್ಯಾಯವಾಗುತ್ತೆ..."

"ಅಲ್ರಿ, ಬೆಲೆ ಗಗನ ಮುಟ್ಟಿರೋವಾಗ ಅವ್ರು ದಿನ ದೂಡೋದು ಹೇಗೆಂತ—ತನ್ನ ನೌಕರರ ಹಿತಸಾಧನೆ ಸರಕಾರದ ಕರ್ತವ್ಯ ತಾನೆ?'

'ನೋಡಮ್ಮಾ, ಇಲ್ಲೇ ನೀನು ಜಾರಿಬಿದ್ದೆ...."

'ಯಾಕೆ?'

'ಸರಕಾರದ ಮುಖ್ಯ ಕರ್ತವ್ಯ ಜನಹಿತ ಮಾಡುವುದು. ನೌಕರರ ಯೋಗಕ್ಷೇಮ ಜನಕ್ಷೇಮದ ಮುಂದೆ ಗೌಣ!

'ಅದನ್ನು ಒಪ್ಪೋಣ. ಹಾಗೆಂದ ಮಾತ್ರಕ್ಕೆ ನೌಕರರನ್ನು ಅಲಕ್ಷ್ಯಿಸಿದರೆ ಸರಕಾರಿ ಯಂತ್ರ ಹೇಗೆ ನಡೆಯಬೇಕು?"

"ಹಾಗನ್ನು. ಜನ ಬೆವರು ಸುರಿಸಿ ಕರ ಕೊಡುತ್ತದೆ ಅನ್ನೋ ಪ್ರಜ್ಞೆ ಸರಕಾರಿ ನೌಕರನಿಗಿರ ಬೇಡವೆ? ಅದರಿಂದಲೇ ತಾನು ಉಣ್ಣೋದು, ಉಂಡ ಮನೆಗೆ ಎರಡು ಬಗೆಯ ಬಾರದು ಎಂಬ ಧರ್ಮ ಅರಿವಿರಬೇಡವೆ?'

'ಯಾರು ಇಲ್ಲಾಂತಾರೆ?"

"ಎಲ್ರೂನೂ ಎಲ್ರ ಬಾಯಲ್ಲೂ ಅದೇ. ಸರಕಾರಿ ಕಛೇರಿಯಲ್ಲಿ ಕಂಬವೂ ಕೈ ನೀಡುತ್ತೇಂತಂತಾರೆ. ಇನ್ನೇನು ಬೇಕು?'

"ನೀವು ಅನ್ನೋದನ್ನು ಕೇಳಿದ್ದು ಮಾತ್ರ ಅಥವಾ ಅನುಭವಿಸಿದ್ದು ಇದೆಯ?'

'ಹ್ಞಾಂ.... ಇದೇನ್ನ..."

'ಏನ.?"

"ಏನೂಂತನ್ನೋದು? ಮೂರು ವರ್ಷ ಹಿಂದೆ ನಿನ್ನ ಮದುವೆಯಾಯ್ತಲ್ಲ.... ಆಗ ಸಕ್ರೆಗೆಂತ ಹೋಗಿದ್ದೆ. ಏನು ಉತ್ರ ಬಂತು ಗೊತ್ತಾ?"

"ಇರ್‍ಲಿ, ಏನೂಂತ ಬಂತು?"

"ಒಂದು ಮದುವೆಗೆ ಎಷ್ಟೋ ಖರ್ಚು ಮಾಡ್ತೀರಿ. ಕೆಜಿಗೆ ರೂಪಾಯಿ ಹೆಚ್ಚು ಕೊಟ್ರೆ ಬೇಕಾದಷ್ಟು ಸಿಗುತ್ತೆ. ಇಲ್ಲಿ ಬಂದ್ರೆ ನಿಮಗೆ ಅದಕ್ಕಿಂತ ಕಡಿಮೆಯಲ್ಲಿ ಸಿಗೋದುಂಟೆ?'

"ಹೌದೆ? ಮುಂದೆ?'

'ನಾನು ಮಾತಾಡ್ಲಿಲ್ಲ... ಅರ್ಜಿ ಗುಜರಾಯಿಸಿದೆ. ಬಂದೆ....'

'ಮತ್ತೆ ಹೋಗ್ಲಿಲ್ಲಾ?"

"ಇಲ್ಲದೆ ಉಂಟೆ? ಮದುವೆ ಮುಂಚಿನ ದಿನ ಹೋದೆ.... ಪರ್ಮಿಟ್ ಆಗ್ಲಿಲ್ಲಾಂತಾಯ್ತು. ಮೂರು ದಿನ ನಂತ್ರ ಹೋದಾಗ ಇಪ್ಪತ್ತು ಕೇಳಿದ್ದಕ್ಕೆ ಎರಡರ ಪರ್ಮಿಟ್..."

"ಪಾಪ, ಅಂಕೆ ಸರಿ ತೋರದೆ ಹಾಗೆ ಮಾಡಿದ್ದಿರಬಹುದು...'

'ಅದು ಹೌದೂಂತಾದ್ರೆ ಮತ್ತೆ ಅವರ ಸೇವೆಯನ್ನ ಏನು ಹೇಳಬೇಕು? ಕುರುಡು ನೌಕರರು ಏನು ಮಾಡಿಯಾರು! ಏನು ಮಾಡಿಸಬಹುದು?"

"ಅಲ್ರಿ, ನಿಮಗೆ ಯಾಕೆ ಅವ್ರ ಮೇಲೆ ...."

"ಛೆ....ಛೆ....ಏನೂ ಇಲ್ಲ. ನಾನು ಹೇಳೋದು ಬೇರೆ. ಪ್ರಾಮಾಣಿಕತೆಯನ್ನು ಉಳಿಸಿಕೊಳ್ಳದ ನೌಕರರಿಗೆ ಜನತೆಯ ಬೆಂಬಲ ಹೇಗೆ ಸಿಗಬೇಕೂಂತ...."

'ಅದು ಇರ್‍ಲಿ. ಈಗ ಹೇಳಿ, ಎನ್ ಜಿ ವೊಗಳು ಅಚ್ಚುಕಟ್ಟಿನ ಜೀವನ ಬಾಳಿದ್ರೂ ಸಾಮಾನ್ಯ ರೂ. ೭೫ ಸಾಲವಾಗುತ್ತೆ. ಇನ್ನು ಬಟ್ಟೆ ಸಿನೆಮಾ ದಾನಧರ್ಮ ಬೇರೆ...'

"ಬಟ್ಟೆ? ನೋಡಿದ್ಯಾ? ಸದಾ ಟೆರಲಿನ್ ಅಂಗಿ ವೂಲನ್ ಪ್ಯಾಂಟ್ ಹಾಕೋಕೆ ಯಾರು ಸಾಲ ಕೊಡ್ತಾರೆ ಅವ್ರಿಗೆ? ತಮ್ಮ ಕಛೇರಿಗೆ ಹರಿದ ಅಂಗಿ ಮಾಸಿದ ಧೋತಿ ತೊಟ್ಟು ಬರೋವ್ರನ್ನು ಹಿಂದಿ ಹಿಪ್ಪು ಮಾಡಿಯೇ ಇವ್ರು ಸಂಪಾದಿಸ್ತಾರೆ.... ತಾನೆ? ಎಲ್ಲಿವರೆಗಂದ್ರೆ, ಸರಕಾರ ಮುದ್ರಿಸಿಟ್ಟ ಚಾಲನ್ ಫಾರ್ಮ್ ಬೇಕಾದ್ರೆ ಕಾಫಿ ಕಾಸು ಕೊಡಬೇಕಂತೆ .."

'ನೋಡಿ, ಈ ಅಂತೆ ಕಂತೆಯ ಮಾತು ಕಟ್ಟಿ ಬಿಡಿ. ನಿಮ್ಮ ಮೇಲೂ ಯಾರ್‍ಯಾರು ಏನೇನು ಅಂತಾರೆ ಗೊತ್ತಾ?"

'ಗೊತ್ತು...."

'ಹೇಗೆ?'

'ನಿಂಗೆ ಗೊತ್ತಾದ್ರೆ ನಂಗೂ ಗೊತ್ತಾದಂಗಲ್ಲಾ...."

"ನೀವೊಬ್ರು...ಅಲ್ಲ, ನೀವು ಬಾಯಿಯಲ್ಲಲ್ಲ, ಹೃದಯದಿಂದ ಹೇಳ್ಬೇಕು—ಎನ್ ಜೀವೊಗಳು ಮರ್‍ಯಾದೆ ಹೊತ್ತು ಸರಕಾರ ನೀಡುವ ವೇತನದಲ್ಲಿ ದಿನ ತೆಗೆಯೋದು ಸಾಧ್ಯವೇಂತ___'

'ಅದಕ್ಕೇ ಅವ್ರು ಭ್ರಷ್ಟಾಚಾರ ಪಂಚದಲ್ಲಿ ಮುಳುಗಿರೋದು...."

'ಮತ್ತೆ ಮಾಡೋದೇನ್ರಿ? ಹೊಟ್ಟೆ ಹಸಿದಾಗ ಮೊಣಕಾಲೂರಿ ಆಹಾರ ಬೇಡ್ತಾರೆ ಅವ್ರು... ನೀವು....'

'ಅಂದು ಬಿಡು ಕಲ್ಲು ತೂರ್‍ತೀರೀಂತ....'

"ಅಲ್ಲವೇ ಮತ್ತೆ?'

"ನೋಡು. ಹೀಗೇ ನಡೆದ್ರೆ ಮುಂದೊಂದು ದಿನ ಕೆನ್ನೆಗೂ ತಿನ್ನೋ ಕಾಲ ಬರಬಹುದು...."

"ಯಾಕೆ?'

"ಯಾಕೆ ಅಂದ್ರೆ? ಜನತೆಯ ಸೇವಕರಾಗಿದ್ದು, ಅದರ ಕೆಲಸವನ್ನು ಶೀಘ್ರ ಮಾಡಿ ಕೊಡೋದನ್ನು ಬಿಟ್ಟು ಆಗ ಬಾ ಈಗ ಬಾ ಹೋಗಿ ಬಾ ಅಂತ ನೂರು ಬಾರಿ ಅಟ್ಟುತ್ತ ಕೂತ್ರೆ ಮತ್ತೇನಾಗುತ್ತೆ? ಪ್ರಧಾನಿ ಅಂದಿದ್ರು ನೋಡು, ಶೀಘ್ರ ನಿರ್ಣಯ ಬೇಕೂಂತ...."

'ಅಂತೂ ನಿಮಗೆ ಎನ್‌ಜಿವೋಗಳ ಮೇಲೆ ಕನಿಕರ ಇಲ್ಲ..."

'ಇದೆ.'

'ಮತ್ಯಾಕೆ ಹೀಗಾಡ್ತೀರಿ?" ಅವರ ನಡವಳಿಕೆಯನ್ನೆಲ್ಲ ಸಮರ್ಥಿಸೋಕೆ ಹೇಗಾಗುತ್ತೆ?"

"ಹಾಗಾದರೆ ಅವರು ಮಾಡೋದು ತಪ್ಪೆ?"

"ಕೆಲಸ ಮಾಡದವನಿಗೆ ತಿನ್ನುವ ಅಧಿಕಾರವಿಲ್ಲ....'

"ಅಯ್ಯೊ, ಅವ್ರು ಕೆಲ್ಸ ಮಾಡೋದಿಲ್ಲ....?"

"ಮಾಡ್ತಾರೆ. ಆದ್ರೆ, ತಾವು ಸರಕಾರಿ ನೌಕರಿಯಲ್ಲಿರುವುದರ ಅನುಚಿತ ಲಾಭ ಪಡಿಯೋದನ್ನ ಬಿಡಬೇಕು. ನೋಡು, ರೂ. ೭೫ ಮಾಸಿಕ ಸಾಲ ಮಾಡೋನಿಗೆ ಸಾಲ ಎಷ್ಟಿದೆ, ಅದು ಯಾಕೆ ಮಾಡಿದ್ದು ಎಂದು ಮುಂತಾದ ಸರ್ವೆ ನಡೆಸಿದರೆ ಆಗ ಗೊತ್ತಾಗುತ್ತೆ___"

'ಇರ್‍ಲಿ, ನಿಮ್ಮ ವಾದ ಹಾಗೆ. ಎಲ್ಲರೂ ಹಾಗೇಂತ ಹೇಳ್ತೀರಿ?"

'ಅದು ಸೋಂಕು ರೋಗ. ಯಾರಲ್ಲಿದೆ ಯಾರಲ್ಲಿಲ್ಲಾಂತ ಹೇಗೆ ಅನ್ನೋದು?"

"ಅಗ್ಲಿ......ನಿಮ್ಮ ಸರಕಾರ ಅವ್ರನ್ನ ನೋಯಿಸುತ್ತಲೇ ಇದ್ರೆ ಈ ರೋಗ ಮತ್ತಷ್ಟು ಉಲ್ಬಣಿಸೋದಿಲ್ಲ...'

"ಹ್ಞಾಂ...'

"ಹಾಗಾದ್ರೆ ಏನನ್ನೋದು ನೀವು?'

'ನಾನು? ನನ್ನ ಮಾತು ಯಾರು ಕೇಳ್ತಾರೆ?"

'ನಾನು....'

"ಸರಿ. ನೋಡು, ನೀನು ಅನ್ಯಾಯ, ಅನಾಚಾರದಲ್ಲಿ ತೊಡಗಿದ್ರೆ ನಾನು ಮಾಡಬೇಕಾದ್ದೂ ಏನು?'

'ಅಂದ್ರೆ ನಾನ ಪ್ರಾಮಾಣಿಕಳಾದ್ರೆ ನೀವು...."

'ನಾನೂ ಹಾಗೇನೇ.'

'ನಾನು....'

"ಛೆ.....ಛೆ...ಹಾಗಲ್ವೆ.......ಅಯ್ಯೋ, ಮೋರೆ ಪೆಚ್ಚಾಯಿತಲ್ಲಾ .... ನೋಡು... ಹ್ಞಾಂ...ಹೀಗೇ ಜನ ಆಡೋ ಮಾತನ್ನ ನಾನಂದೆ. ಅಷ್ಟೆ. ಬರೀ ಕಾಸು ಖರ್ಚಿಲ್ಲದ ಎಂಟರ್‌ಟೈನ್‌ಮೆಂಟ್..."

'ಭಾರಿ ಜೋರಿದ್ದೀರಿ ನೀವು...'

"ಮತ್ತೆ ನೀನು?'

"ಎಷ್ಟಾದ್ರೂ ನಿಮ್ಮ...'

"ಹ್ಞಾಂ..."

— ಗೋರಾ.

ಸಮೀಪಿಸುತಿದೆ ದೀಪಾವಳಿ!

ಮನೆ ಮನೆಗಳಲಿ ದೀಪ ಬೆಳಗಲಿದೆ!

ಹೊರಡಲಿದೆ ನವಯುಗದ ದೀಪಾವಳಿ ಸಂಚಿಕೆ!

ಮನ ಮನಗಳಲಿ ಜ್ಞಾನದೀಪ ಬೆಳಗಲಿದೆ!

ಕರ್ನಾಟಕದ ವಿವಿಧ ಬರಹಗಾರರಿಂದ, ವೈವಿಧ್ಯಪೂರ್ಣ ಲೇಖನಾದಿಗಳಿಂದ ಕೂಡಿ ತಾ. 10—11—1966ಕ್ಕೆ ವಾಚಕರ ಕೈಸೇರಲಿದೆ ದೀಪಾವಳಿ ಸಂಚಿಕೆ.

ಅಖಿಲ ಕರ್ನಾಟಕದಲ್ಲಿ ಪ್ರಸಾರವಾಗುವ ನವಯುಗ ದೀಪಾವಳಿ ಸಂಚಿಕೆ ಜಾಹೀರಾತಿಗೆ ಸುವರ್ಣ ಮಾಧ್ಯಮ.

ಜಾಹೀರಾತು ಕೊಡುವವರು ಜಾಹೀರಾತನ್ನು ಅಕ್ಟೋಬರ ಅಂತ್ಯದೊಳಗೆ ಕಳುಹಿಸುವಂತೆ ಅಪೇಕ್ಷಿಸಲಾಗಿದೆ.

ಮೆನೇಜರ್
ನವಯುಗ, ಉಡುಪಿ

ನೀವು ಉತ್ತರಿಸುವಿರಾ?

ವಿಶ್ವದ ಯಕ್ಷ ಪ್ರಶ್ನೆ – ಜನಸಂಖ್ಯಾ ಸಮಸ್ಯೆ

ಬರೆದವರು : ಡಾ। ಎಸ್. ಚಂದ್ರಶೇಖರ್

ಜನಸಂಖ್ಯಾ ಮಾನದಿಂದ ಭಾರತ ವಿಶ್ವದಲ್ಲೇ ಎರಡನೇ ಅತಿ ದೊಡ್ಡ ರಾಷ್ಟ್ರ. ಅಂದರೆ, ಇಂದು ವಿಶ್ವದ ಒಟ್ಟು ಜನಸಂಖ್ಯೆಯ ಶೇಕಡ ೧೫ರಷ್ಟು ಜನ ಭಾರತದಲ್ಲೇ ಇದ್ದಾರೆ. ಭಾರತದ ಜನಸಂಖ್ಯೆ ಇಷ್ಟೊಂದು ತ್ವರಿತಗತಿಯಲ್ಲಿ ಹೆಚ್ಚಲು ಏನು ಕಾರಣ?

ಜನನ ಪ್ರಮಾಣದಲ್ಲಾದ ಹೆಚ್ಚಳಕ್ಕಿಂತಲೂ, ಮರಣ ಪ್ರಮಾಣದಲ್ಲಿ ಕಂಡು ಬಂದಿರುವ ವಿಸ್ಮಯಕಾರಕ ಇಳಿತವೇ ನಮ್ಮ ಜನಸಂಖ್ಯೆ ಸಮಸ್ಯೆಗೆ ಮೂಲ ಕಾರಣ. ಜನನ ಪ್ರಮಾಣವು, ಜನಸಂಖ್ಯೆಯ ಹೆಚ್ಚಳಕ್ಕೆ ಒಂದು ಕಾರಣವೆಂಬ ಸಂಗತಿಯನ್ನು ನಾನು ಅಲ್ಲಗಳೆಯಲಾರೆ. ಆದರೆ, ನಾವು ಭಾರತದ ಜನಸಂಖ್ಯಾ ಪ್ರಮಾಣದ ಬಗ್ಗೆ ಒಂದು ನಿರ್ಧಾರಕ್ಕೆ ಬರುವ ಮುನ್ನ ವಿಶ್ವದ ಜನನ ಪ್ರಮಾಣದ ಹೆಚ್ಚಳವನ್ನು ಪರಿಶೀಲಿಸಬೇಕಾದುದು ಅಗತ್ಯ.

ಕ್ರಿಸ್ತಪೂರ್ವ ಒಂದು ದಶಲಕ್ಷ ವರ್ಷಗಳ ಹಿಂದೆ ಈ ವಿಶ್ವದ ಜನಸಂಖ್ಯೆ ಕೇವಲ ೧,೨೫,೦೦೦ದಷ್ಟಿತ್ತು. ಅನಂತರ ಜನಸಂಖ್ಯೆ ಅತ್ಯಂತ ಮಂದಗತಿಯಲ್ಲಿ ಹೆಚ್ಚಿತು. ಹಾಗೆ ಹೇಳುವುದಾದರೆ ಎಷ್ಟೋ ವರ್ಷಗಳ ವರೆಗೆ ಜನಸಂಖ್ಯೆ ಹೆಚ್ಚಲೇ ಇಲ್ಲ, ಕಡಿಮೆಯಾಗಲೂ ಇಲ್ಲ. ಅದು ಯಥಾಸ್ಥಿತಿಯಲ್ಲೇ ಇತ್ತು. ಜನನ ಪ್ರಮಾಣ ಅಧಿಕಗೊಂಡರೆ, ಮರಣ ಪ್ರಮಾಣವೂ ಅಷ್ಟೇ ವೇಗವಾಗಿ ಹೆಚ್ಚಿ ಜನಸಂಖ್ಯೆಯಲ್ಲಿ ಸಮತೋಲ ಏರ್ಪಟ್ಟಿತ್ತು.

ಕ್ರಿಸ್ತಶಕ ೧೬೫೦ ಹೊತ್ತಿಗೆ ಆಧುನಿಕ ಯುಗ ಆರಂಭವಾಯಿತು. ೧೭೫೦ ಹೊತ್ತಿಗೆ ಇಂಗ್ಲೆಂಡ್ ಮತ್ತು ಯುರೋಪ್‌ಗಳಲ್ಲಿ ಕೃಷಿ ಮತ್ತು ಕೈಗಾರಿಕಾ ಕ್ರಾಂತಿಗಳು ಸಂಭವಿಸಿದವು. ೧೮೫೦ ಹೊತ್ತಿಗೆ ಈ ಕ್ರಾಂತಿಗಳು ಅಮೇರಿಕದ ಸಂಯುಕ್ತ ಸಂಸ್ಥಾನಗಳಿಗೂ ಹಬ್ಬಿದವು. ೧೮೫೦ ಹೊತ್ತಿಗಾಗಲೇ ವಿಶ್ವ ಜನಸಂಖ್ಯೆ ಒಂದು ಶತಕೋಟಿಯಷ್ಟಾಯಿತು. ಇದನ್ನೇ ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಮಾನವನ ಜನಸಂಖ್ಯೆ ಶತಕೋಟಿಯಷ್ಟಾಗಲು ೧೮೫೦ರ ಹೊತ್ತಿಗೆ ಹತ್ತು ಲಕ್ಷ ವರ್ಷಗಳು ಹಿಡಿದವು. ಜನಸಂಖ್ಯೆಯಲ್ಲಿ ನಿಜಕ್ಕೂ ಇದು ಅತ್ಯಂತ ಮಂದವೇಗದ ಹೆಚ್ಚಳ.

ಪಶ್ಚಿಮ ಯುರೋಪಿನ ರಾಷ್ಟ್ರಗಳಲ್ಲಿ ಆರೋಗ್ಯ ಸೌಲಭ್ಯಗಳು ಸುಧಾರಿಸಿ ಚುಚ್ಚುಮದ್ದು ಆಗಲೇ ಬಳಕೆಗೆ ಬಂದಿತ್ತು. ಈ ರಾಷ್ಟ್ರಗಳಲ್ಲಿನ ಆರೋಗ್ಯ ಸೌಲಭ್ಯಗಳ ಪರಿಣಾಮದಿಂದಾಗಿ ಮರಣದ ಸಂಖ್ಯೆ ಕಡಿಮೆಯಾಯಿತು. ೧೯೩೦ರ ಹೊತ್ತಿಗೆ ವಿಶ್ವದ ಜನಸಂಖ್ಯೆ ಮತ್ತೊಂದು ಶತಕೋಟಿಯಷ್ಟು ಹೆಚ್ಚಿತು. ಈ ಗುರಿಯನ್ನು ಮುಟ್ಟಲು ಮಾತ್ರ ಕೇವಲ ೮೦ ವರ್ಷಗಳು ಹಿಡಿದವು. ಇಷ್ಟು ಹೊತ್ತಿಗಾಗಲೇ ವಿಶ್ವದ ಹೆಚ್ಚಿನ ರಾಷ್ಟ್ರಗಳಲ್ಲಿ ಆರೋಗ್ಯ ಮತ್ತು ವೈಜ್ಞಾನಿಕ ಕ್ಷೇತ್ರಗಳಲ್ಲಿ ಅದ್ಭುತ ಕ್ರಾಂತಿಗಳು ಸಂಭವಿಸಿದ್ದವು. ಹಿಂದುಳಿದ ರಾಷ್ಟ್ರಗಳು ಈ ಕ್ರಾಂತಿಯ ಚೌಕಟ್ಟಿನಲ್ಲಿ ಪ್ರಗತಿಯ ಬೆಳಕು ಕಂಡವು. ವಿಶ್ವದ ಜನಸಂಖ್ಯೆ ಮತ್ತೆ ಮೂರನೇ ಶತಕೋಟಿಯನ್ನ ತಲುಪಿತು. ಇದು ಹೆಚ್ಚಲು ೩೦ ವರ್ಷಗಳು ಮಾತ್ರ ಹಿಡಿದವು. ಇಂದು ವಿಶ್ವದ ಜನಸಂಖ್ಯೆ ೩.೩ ಶತ ಕೋಟಿ ಇದೆ. ಭವಿಷ್ಯತ್ತಿನಲ್ಲಿ ವಿಶ್ವದ ಜನಸಂಖ್ಯೆ ದ್ವಿಗುಣಗೊಳ್ಳುತ್ತದೆ ಎನ್ನುವುದು ಒಂದು ಕುತೂಹಲದ ಸಂಗತಿ. ಈ ಪರಮಾವಧಿ ಹೆಚ್ಚಳವನ್ನೇ ನಾವು ವಿಶ್ವದ ಜನಸಂಖ್ಯೆಯ ಸ್ಫೋಟವೆಂದು ಕರೆಯುತ್ತೇವೆ.

ಮುಂದೆ ವಿಶ್ವದ ಜನಸಂಖ್ಯೆ ಎಷ್ಟಾಗ

(ಹನ್ನೆರಡನೇ ಪುಟ ನೋಡಿರಿ)

ಸಾಹಿತ್ಯ ಸಂಸದ

ಶಾಕುಂತಲದ ನಾಲ್ಕು ಶ್ಲೋಕಗಳು

ಬರೆದವರು : ಶ್ರೀ ಮುಂಡೋಡು ನಾರಾಯಣ ಭಟ್ಟ

ವಿಶ್ವಕವಿ ಕಾಳಿದಾಸನ "ಅಭಿಜ್ಞಾನ ಶಾಕುಂತಲ"ದ ಕುರಿತು ರಸಿಕ ವಿಮರ್ಶಕರು ಹೀಗೆಂದಿದ್ದಾರೆ:—

"ಕಾವ್ಯೇಷು ನಾಟಕಂ ರಮ್ಯಂ ತತ್ರ
ರಮ್ಯಾ ಶಕುಂತಲಾ
ತತ್ರಾಪಿ ಚ ಚತುರ್ಥೋಂಕ ತತ್ರ
ಶ್ಲೋಕ ಚತುಷ್ಟಯಂ" ||

ಇಡಿಯ ನಾಟಕವೆ ರಸವತ್ತಾದರೂ ನಾಲ್ಕನೆಯ ಅಂಕದ ನಾಲ್ಕು ಶ್ಲೋಕಗಳು ಅತಿ ರಮ್ಯವಾದವುಗಳ ! ಆ ಶ್ಲೋಕಗಳಿಗೇಕೆ ಅಂತಹ ಪ್ರಾಶಸ್ತ್ಯ?—ಅಲ್ಲಿ ಕವಿಯು ವನೌಕಸ ಕಣ್ವನ ಹೃದಯವನ್ನು, ಕೋಮಲೆಯಾದ ಶಕುಂತಲೆಯ ಜೀವನದಲ್ಲಿ ಬೀರಿದ ವರ್ಚಸ್ಸನ್ನು ದಾಂಪತ್ಯವೆಂದರೇನು— ಎಂತಹುದೆಂಬುದನ್ನೂ ಮತ್ತು ಗೃಹಿಣೀ ಧರ್ಮವನ್ನು ಮಾರ್ಮಿಕವಾಗಿ ಚಿತ್ರಿಸಿದ್ದಾನೆ. ಅಲ್ಲಿ ಕವಿಯು ಮೆರೆದಿರುವ ಶಬ್ದಶಕ್ತಿ, ಅರ್ಥ ಶಕ್ತಿಗಳು ಅದ್ಭುತವಾದವುಗಳು.

ದುಶ್ಯಂತನು ಶಕುಂತಳೆಯನ್ನು ಗಾಂಧರ್ವ ರೀತಿಯಲ್ಲಿ ವಿವಾಹವಾಗಿದ್ದಾನೆ. ಇಬ್ಬರಲ್ಲೂ ನಿರ್ಮಲ, ನಿಶ್ಚಲ ಪ್ರೇಮ ನೆಲಸಿದೆ. ಇದನ್ನು ಕಣ್ವರ್ಷಿಗಳು ತಮ್ಮ ತಪಶಕ್ತಿಯಿಂದ ಅರಿತಿದ್ದಾರೆ. ಅವರು ಶಕುಂತಳೆಯನ್ನು ಪತಿಗೃಹಕ್ಕೆ ಕಳುಹಿಸುವ ಏರ್ಪಾಡುಗಳನ್ನು ಮಾಡಿದ್ದಾರೆ. ಈ ದುಃಖಮಯವಾದ ಸಂದರ್ಭದಲ್ಲಿ ತಮ್ಮ ಅನುಭವಗಳನ್ನು ವ್ಯಕ್ತಪಡಿಸುತ್ತಾರೆ:—

"ಕಳವಳವಾಂತುದೆನ್ನೆರ್ದೆ ಶಕುಂತಳೆ
ಪೋದಪಳೆಂದು ಕಂಠಮು
ಮ್ಮಳಿಸುವುದೊತ್ತುವಶ್ರುಭರದಿಂ
ಜಡಮಾದುದು ದೃಷ್ಟಿ ಚಿಂತೆಯಿಂ |
ದಳಲಿನಿತಾಗೆ ಕಾಡ ಮನುಜಂಗೆನಗಂ
ಕಡುನೇಹದಿಂದ ಮಿ
ನ್ನುಳಿದ ಗೃಹಸ್ಥರಾತ್ಮಭವೆಯಂ
ಕಳುಪುತ್ತ ಕಡೆಂತಳಲ್ವರೋ" ||

ಈ ಮಾತುಗಳಿಂದ ನಮಗೆ ಕಣ್ವರ ಉದಾರ, ಉದಾತ್ತ ಚಿತ್ತವೃತ್ತಿ ಹೇಗೆ ಇತ್ತೆಂಬುದು ತಿಳಿದು ಬರುತ್ತದೆ. ಶಕುಂತಳೆಯು ಪತಿಯ ಮನೆಗೆ ತೆರಳುವಳೆಂದು ನನ್ನ ಮನಸ್ಸು ಕಳವಳಗೊಂಡಿದೆ; ನಾನು ದುಃಖಿತನಾಗಿದ್ದೇನೆ. ಕಂಠವು ಉಮ್ಮಳಿಸುತ್ತಿರುವುದರಿಂದ ಮಾತು ಅಸ್ಪಷ್ಟವಾಗುತ್ತಿದೆ. ಈ ದುಃಖದ ಪರಿಣಾಮವಾಗಿ ಹರಿಯುವಂತಹ ಕಣ್ಣೀರಿನಿಂದ ದೃಷ್ಟಿಯು ಮಂದವಾಗಿದೆ. "ಕಣ್ಣ ನೀರಿದ್ದ ಹೊಳೆಯಾದೋ" ಎಂಬ ಜಾನಪದ ಗೀತದ ತಾತ್ಪರ್ಯವು ಕಣ್ವರ ಈ ಮಾತುಗಳಿಂದ ನಮಗೆ ಸ್ಪಷ್ಟವಾಗುತ್ತದೆ. ಕಾಡವಾಸಿಯಾದ ತನಗೇ ಇಷ್ಟು ದುಃಖವಾಗಲು ಅತಿಯಾದ ಸ್ನೇಹದಿಂದ ಇರುವ ಸಂಸಾರಿಗಳು ತಮ್ಮ ಮಗಳನ್ನು ಪತಿಗೃಹಕ್ಕೆ ಕಳುಹಿಸುವಾಗ ಎಷ್ಟು ದುಃಖಿಸುವರೋ ಎಂದು ಹೇಳುತ್ತಾರೆ. ಇದರಿಂದ ಸಂಸಾರಿಯಲ್ಲದ, ತಪಸ್ವಿಯಾದ ಕಣ್ವರಿಗೆ ಶಕುಂತಲೆಯೊಡನೆ ಯಾವ ರೀತಿಯ ರಕ್ತಸಂಬಂಧವಿಲ್ಲದಿದ್ದರೂ, ತನ್ನ ಸಾಕುಮಗಳ ಮೇಲೆ ಇರುವ ಪ್ರೀತಿ, ವಾತ್ಸಲ್ಯ ಎಷ್ಟೆಂಬುದು ವ್ಯಕ್ತವಾಗುತ್ತದೆ. ಅವರು ಒಬ್ಬ ಸಾಮಾನ್ಯ ಸಂಸಾರಿಗಿಂತ ಅತಿಯಾಗಿ ದುಃಖಿಸಿದರು. ಇದರ ಸಂಸ್ಕೃತ ರೂಪ ಇಂತಿದೆ:—

"ಯಾಸ್ಯತ್ಯದ್ಯ ಶಕುಂತಲೇತಿ ಹೃದ
ಯಂ ಸಂಸ್ಪೃಷ್ಟ ಮುತ್ಕಂಠಯಾ
ಕಂಠಸ್ತಂಭಿತ ಬಾಷ್ಪವೃತ್ತಿ ಕಲುಷಶ್ಚಿಂ
ತಾಜಡಂ ದರ್ಶನಮ್ |
ವೈಕ್ಲವ್ಯಂ ಮಮತಾವದೀದೃಶ ಮ
ಹೋ ಸ್ನೇಹಾದರಣ್ಯೌಕಸಃ
ಪೀಡ್ಯಂತೇ ಗೃಹಿಣಿ ಕಥಂನುತನಯಾ
ವಿಶ್ಲೇಷ ದುಃಖೈರ್ನವೈ" ||

"ಅಭಿನವ ಕಾಳಿದಾಸ"ನೆಂದು ಪ್ರಸಿದ್ಧರಾದ ಶ್ರೀ ಬಸಪ್ಪ ಶಾಸ್ತ್ರಿಗಳ ಕನ್ನಡ ಅನುವಾದವು ಪ್ರಾಮಾಣಿಕವಾಗಿದೆ. ತನ್ನಷ್ಟಕ್ಕೇ ಸುಂದರವಾಗಿದೆ. ಆದರೆ ಸಂಸ್ಕೃತದ ಶ್ಲೋಕವನ್ನು ಓದುತ್ತಾ ಹೋದಾಗ ನಮಗೆ ಪ್ರತ್ಯಕ್ಷವಾದ ದುಃಖಾನುಭವ ಆದಂತ ತೋರುತ್ತದೆ. ಕಾಳಿದಾಸನ ಪದಗಳ ಜೋಡಣೆ, ಶೈಲಿ ಇತ್ಯಾದಿಗಳೇ ಇದಕ್ಕೆ ಕಾರಣ. ಇದನ್ನು ಕನ್ನಡಿಸಿದಾಗ ಅದೇ ಸೌಂದರ್ಯ ಉಳಿಯಲ್ಲ. ಅನುವಾದದಲ್ಲಿ ಅದು ಕಷ್ಟಸಾಧ್ಯವೂ ಹೌದು.

ಶಕುಂತಳೆಯು ಒಡನಾಡಿಗಳು ಆಕೆಯನ್ನು ಸಿಂಗರಿಸುವರು. ಶಕುಂತಳೆ ತನ್ನ ಪತಿಯ ರಾಜಧಾನಿಗೆ ಹೋಗಲು ಹೊರಟು ನಿಂತಿದ್ದಾಳೆ. ಜತೆಯಲ್ಲಿ ಶಾರ್ಙ್ಗರವ, ಶಾರದ್ವತ ಹಾಗೂ ಗೌತಮಿಯಿದ್ದಾರೆ. ಆಗ ಕಣ್ವರು ಆಶ್ರಮದ ಗಿಡಮರಗಳನ್ನು ಉದ್ದೇಶಿಸಿ ಹೇಳುವ ಮಾತು ಹೀಗಿದೆ:—

"ಪಾತುಂ ನ ಪ್ರಥಮಂ ವ್ಯವಸ್ಯತಿ
ಜಲಂ ಯುಷ್ಮಾಸ್ವಪೀತೇಷುಯಾ
ನಾದತ್ತೇ ಪ್ರಿಯ ಮಂಡನಾಪಿ
ಭವತಾಂ ಸ್ನೇಹೇನಯಾ ಪಲ್ಲವಂ |
ಆದ್ಯೇವಃ ಕುಸುಮ ಪ್ರಸೂತಿಸಮಯೇ
ಯಸ್ಥಾ ಭವತ್ಯುತ್ಸವಃ
ಸೇಯಂ ಯಾತಿ ಶಕುಂತಲಾ
ಪತಿಗೃಹಂ ಸರ್ವೈರನು ಜ್ಞಾಯತಾ ||

"ಯಾವಾಕೆ ನಿಮ್ಮ ಪಾತೆಗೆ ನೀರನ್ನು ಎರೆಯದೆ ತಾನು ನೀರನ್ನು ಕುಡಿಯುತ್ತಿರಲಿಲ್ಲವೋ, ಹೆಣ್ಣಿನ ಗುಣದಂತೆ ಸಿಂಗರಿಸಿಕೊಳ್ಳುವ ಆಶೆಯಿದ್ದರೂ (ಗಿಡ ಬಳ್ಳಿಗಳಿಗೆ ಬೇನೆಯಾಗಬಹುದೆಂದು) ಚಿಗುರುಗಳನ್ನು ಕೀಳ ಬಯಸುತ್ತಿರಲಿಲ್ಲವೋ, ಯಾವಾಕೆ ನೀವು ಹೂ ಬಿಡಲು ಮೊದಲಾಗಿ ಅದನ್ನು ನೋಡಿ ಸಂತಸಗೊಳ್ಳುತ್ತಿದ್ದಳೋ ಆ ಶಕುಂತಳೆಯು ಇಂದು ತನ್ನ ಪತಿಯ ಮನೆಗೆ ತೆರಳುವಳು. ಆಕೆಗೆ ನೀವೆಲ್ಲರೂ ಅನುಜ್ಞೆಯನ್ನು ಕೊಡಬೇಕು." ಶಕುಂತಳೆಯು ಎಂತಹ ಪ್ರಕೃತಿ ಪ್ರೇಮಿ ಎಂಬುದು ಕಣ್ವರಿಗೆ ಗೊತ್ತಿತ್ತು. ಆಕೆ ಕೋಮಲ ಹೃದಯಿ ಎಂಬುದನ್ನೂ ಬಲ್ಲರು. ಇದನ್ನು ನೆನಪಿಗೆ ತಂದುಕೊಂಡು ಕಣ್ವರು ಹೀಗೆ ಹೇಳುತ್ತಾರೆ. ಈ ಪದ್ಯದಲ್ಲಿ ಶಕುಂತಳೆಯ ಮುಗ್ಧ ಸ್ವಭಾವವು ಪ್ರತಿಬಿಂಬಿತವಾಗಿದೆ. ಮರಗಿಡ ಬಳ್ಳಿಗಳಿಗೂ ಮಾನವ ಜೀವಿಗಳಂತೆ ಸುಖದುಃಖಾನುಭವವಿದೆ ಎಂಬುದನ್ನು ಆಕೆ ಮನಗಂಡಿದ್ದಳು. ಆದುದರಿಂದಲೇ ಆಕೆ ತಳಿರುಗಳನ್ನು ಕೀಳಲು ಹಿಂಜರಿಯುತ್ತಿದ್ದುದು. ಶಕುಂತಳೆಯನ್ನು ಒಂದು 'ಜಂಗಮಲತೆ' ಎಂದು ವಿಮರ್ಶಕರು ವರ್ಣಿಸಿದುದು ಇದೇ.

ಶಕುಂತಳೆ ಪತಿಗೃಹಕ್ಕೆ ಹೊರಡಲನುವಾದಳು. ಆಶ್ರಮದಲ್ಲಿ ತಾಯಿಯಂತಿದ್ದ ಗೌತಮಿ, ಸಹೋದರರಂತಿದ್ದ ಶಾರದ್ವತ, ಶಾರ್ಙ್ಗರವರು ಜತೆಯಲ್ಲಿದ್ದಾರೆ. ಮಗಳನ್ನು ಪತಿಗೃಹಕ್ಕೆ ಕಳುಹಿಸುವಾಗ ಬಂಧುಜನರು ಜಲಾಶಯದ ವರೆಗೆ ಹೋಗಬೇಕೆಂಬುದು ಶಾಸ್ತ್ರೋಕ್ತವಾದುದು. ಅಂತೆಯೇ ಕಣ್ವರೂ ಅವರೊಂದಿಗೆ ಬಳಿಯ ಸರೋವರದ ವರೆಗೆ ಹೋಗುವರು. ಅಲ್ಲಿಯೇ ಒಂದು ಕ್ಷೀರ ವೃಕ್ಷದ ನೆರಳಲ್ಲಿ ಎಲ್ಲರೂ ಕುಳಿತುಕೊಳ್ಳುವರು. ಅಲ್ಲಿ ಕಣ್ವರು ದುಷ್ಯಂತನಿಗೆ ಸಂದೇಶರೂಪವಾಗಿ ಹೀಗೆ ಹೇಳುತ್ತಾರೆ:—

"ಅಸ್ಮಾನ್ ಸಾಧುವಿಚಿಂತ್ಯ ಸಂಯ
ಮಧನಾನುಚ್ಚೈಃ ಕುಲಂಚಾತ್ಮನಃ
ತ್ವಯ್ಯಸ್ಯಾಃ ಕಥಮಪ್ಯ ಬಾಂಧವಕೃ
ತಾಂ ಸ್ನೇಹಪ್ರವೃತ್ತಿಂಚತಾಂ |
ಸಾಮಾನ್ಯ ಪ್ರತಿಪತ್ತಿಪೂರ್ವಮಿ
ಯಂ ದಾರೇಷು ದೃಶ್ಯಾತ್ವಯ
ಭಾಗ್ಯಾಯತ್ತಮತಃ ಪರಂ ನ ಖಲು
ತದ್ವಾಚ್ಯಂ ವಧೂಬಂಧುಭಿಃ" ||

"ನಾವು ತಪೋಧನರು. ನಮಗೆ ವೈರಾಗ್ಯವೇ ಅರ್ಥ. ನೀನು ಉತ್ತಮ ಕುಲದವನು. ಈಕೆಗೆ ನಿನ್ನಲ್ಲಿ ಸಹಜವಾದ ಪ್ರೇಮ ನೆಲಸಿದೆ. ಇವೆಲ್ಲವನ್ನೂ ಚೆನ್ನಾಗಿ ಪರ್ಯಾಲೋಚಿಸಿ, ನಿನ್ನ ಇತರ ಪತ್ನಿಗಳಂತೆಯೇ ಈಕೆಯನ್ನು ಕಾಣಬೇಕು. ಇನ್ನುಳಿದುದೆಲ್ಲವೂ ಭಾಗ್ಯ ದೀನವೇ ಹೊರತು ಹೆಣ್ಣಿನ ಬಂಧುಗಳು ಹೇಳತಕ್ಕದಲ್ಲ" ಎಂದು ದುಷ್ಯಂತನಿಗೆ ಸಂದೇಶವನ್ನು ಕಳುಹಿಸುವರು. ನಾವು 'ಸಂಯಮಧನರ' ಎಂಬ ಕಣ್ವರ ಮಾತಿನಲ್ಲಿ ಧ್ವನ್ಯಾರ್ಥವು ಹುದುಗಿಕೊಂಡಿದೆ. ಮೊದಲನೆಯದಾಗಿ "ನಾವು ತಪೋಧನರು. ನಮಗೆ ತಪಸ್ಸೇ ಧನವು— ಆದುದರಿಂದ ನಿನಗೆ ವರದಕ್ಷಿಣೆಯ ರೂಪದಲ್ಲಿ ಕೊಟ್ಟು ಕಳುಹಿಸಲು ಇನ್ನಾವುದೂ ಉಳಿದಿಲ್ಲ." ಎರಡನೇಯದಾಗಿ "ನಾವು ಸಂಯಮಿಗಳು. ನಾವಿಲ್ಲದಿದ್ದಾಗ ಗಾಂಧರ್ವ ರೀತಿಯಲ್ಲಿ ವಿವಾಹವಾದ ಈಕೆಯನ್ನು ನೀನು ಸ್ವೀಕರಿಸಬೇಕು. ನೀನು ಇದರ ವಿರುದ್ಧವಾಗಿ ವರ್ತಿಸಿದಲ್ಲಿ ನಾವು ನಮ್ಮ ಸಂಯಮವನ್ನು ಕಳೆದುಕೊಳ್ಳಬೇಕಾಗುವುದು. (ಋಷಿಗಳು ಅಸಂಯಮಿಗಳಾದರೆ ಅನರ್ಥವಾದೀತು ಎಂಬುದು ವ್ಯಂಗ್ಯಾರ್ಥ) ಶಕುಂತಳೆಯೇ ಮೊದಲು ದುಷ್ಯಂತನಲ್ಲಿ ಪ್ರೇಮ ಪ್ರದರ್ಶನವನ್ನು ಮಾಡಿದ್ದಳು. ಅದನ್ನೊಪ್ಪಿ ಆತನು ಶಕುಂತಳೆಯನ್ನು ವಿವಾಹವಾದನು. ಆದುದರಿಂದ ನೀನು ಅದನ್ನು ಮನಗಂಡು ಈಕೆಯನ್ನು ಇತರ ಪತ್ನಿಯರ ಸರಿಸಮಾನವಾಗಿ ಕಾಣಬೇಕ." ಎಂಬ ಕಣ್ವರ ಮಾತಿನಲ್ಲಿ ಅವರ ಹೃದಯ ಹೇಗಿತ್ತೆಂಬುದನ್ನು ತಿಳಿಯಬಹುದು. 'ಇತರ ಎಲ್ಲ ರಾಣಿಯರಿಗಿಂತ ಮಿಗಿಲಾಗಿ ಆಕೆಯನ್ನು ಕಾಣಬೇಕು; ಆಕೆಯನ್ನೇ ಪಟ್ಟದ ಮಹಿಷಿಯಾಗಿ ಆದರಿಸಬೇಕು ಎಂದು ಕಣ್ವರು ಹೇಳಲಿಲ್ಲ. "ನಿನ್ನಲ್ಲಿ ಒಲವುಗೊಂಡಿರುವ ಶಕುಂತಳೆಯನ್ನು ಇತರರಂತೆ ಕಾಣು, ಅವಳು ಯಾವ ಹಕ್ಕಿಗೆ ಬಾಧ್ಯಳೋ ಅವನ್ನು ಕೊಡು" ಎಂಬುದಾಗಿ ಮಾತ್ರ ಹೇಳಿದ್ದಾರೆ.

ದುಷ್ಯಂತನಿಗೆ ತಲಪೀಲೆಂದು ಸಂದೇಶವನ್ನು ಕೊಟ್ಟಾಯಿತು. ಇನ್ನುಳಿದಿರುವುದು ಬೀಳ್ಕೊಡುಗೆಯೊಂದೇ. ಮಹಾ ತಪಸ್ವಿಗಳಾದ ಕಣ್ವರು ಆ ಸಂದರ್ಭದಲ್ಲಿ ಶಕುಂತಳೆಗೆ ಹಿತವಾದ ಮಾಡುವರು. ವನವಾಸಿಗಳಾದ ಹಾಗೂ ವಿರಕ್ತರಾದ ಕಣ್ವರು ಲೋಕತಂತ್ರವೆಲ್ಲವನ್ನು ಬಲ್ಲರು. ಅವರ ಬುದ್ಧಿವಾದ ಹೀಗಿದೆ:—

"ಶುಶ್ರೂಷಸ್ವ ಗುರೂನ್ ಗುರುಪ್ರಿಯ
ಸಖೀವೃತ್ತಿ ಸಪತ್ನೀಜನೇ
ಭರ್ತರ್ವಿಪ್ರಕೃತಾಪಿ ರೋಷಣತಯಾ
ಮಾಸ್ಮಪ್ರತೀ ಗಂಗಮಃ |

(ಐವತ್ತೊಂದನೇ ಪುಟ ನೋಡಿರಿ)

ಕನ್ನಡ ಪುಸ್ತಕಗಳು

ಹೈಸ್ಕೂಲ್, ಹಯರ್ ಸೆಕಂಡರಿ ಸ್ಕೂಲ್, ಕಾಲೇಜು ಮೊದಲಾದುವುಗಳ ಯಾವತ್ತೂ ವಾಚನ ಭಂಡಾರಗಳಿಗೆ ಉಪಯುಕ್ತವಾದ ಕರ್ನಾಟಕದ ವಿವಿಧ ಲೇಖಕರ ಕತೆ, ಕಾದಂಬರಿ, ಕವನ, ವಿಮರ್ಶೆ ಇತ್ಯಾದಿ

ಕನ್ನಡ ಪುಸ್ತಕಗಳು

ನಮ್ಮಲ್ಲಿ ದೊರೆಯುತ್ತವೆ.

ವಿವರವಾದ ಕೆಟಲಾಗಿಗೂ ವಿಶೇಷ ಸವಲತ್ತುಗಳಿಗೂ ಬರೆಯಿರಿ:

ನವಭಾರತ ಪುಸ್ತಕ ಭಂಡಾರ
ರಿಜಿಸ್ಟರ್ಡ್ ಪಬ್ಲಿಷರ್ಸ್
ಪಾಲುಕೋಟೆ, ಉಡುಪಿ

ಅಭಿಪ್ರಾಯ

ಇದೀಗ ನೆನಪಾಗುವುದೇ?

ಬರೆದವರು
ಶ್ರೀ ಶಿವಶಂಕರ

ಕೇರಳವನ್ನು ಮರಳಿ ಪಡೆಯಲು ಕಾಂಗ್ರೆಸ್ ಹೂಡಿದ ಯುಕ್ತಿಯಿದು

ಸಪ್ಟಂಬರ್ ದಿನಾಂಕ ಹದಿನಾರರ ಸುಪ್ರಭಾತದಲ್ಲಿ ಭಾರತದ ಯುದ್ಧ ನೌಕೆ 'ಡೆಲ್ಲಿ'ಯು ಬೊಂಬಾಯಿಯ 'ಭಾರತದ ದ್ವಾರ'ದಲ್ಲಿ ಬಹಳ ಗಂಭೀರವಾಗಿ, ಆದರೆ, ಚೆನ್ನಾಗಿ ಅಲಂಕರಿಸಿಕೊಂಡು ಕಾದಿತ್ತು. ಬೊಂಬಾಯಿಯ ನಗರ ಸಭಾಧ್ಯಕ್ಷರೂ ಹಾಗೂ ಬೊಂಬಾಯಿ ಪ್ರದೇಶ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರು ಅಲ್ಲಿ ಉಪಸ್ಥಿತರಾಗಿದ್ದರು. ನಗರ ಸಭಾಧ್ಯಕ್ಷರು ಒಂದು ಪಾತ್ರೆಯನ್ನು ಯುದ್ಧ ನೌಕೆಯ ಅಧಿಕಾರಿಗಿತ್ತರು. ಅವರದನ್ನು ಗೌರವ ಹಾಗೂ ಮರ್ಯಾದೆಯಿಂದ ಸ್ವೀಕರಿಸಿ ಅಲಂಕೃತ ಯುದ್ಧ ನೌಕೆಯಲ್ಲಿಟ್ಟರು. ಅದರಲ್ಲಿ ಚಂಪಕರಮಣ ಪಿಳ್ಳೆಯವರ ಚಿತಾಭಸ್ಮವಿತ್ತು.

ಭಾರತದ ಸ್ವಾತಂತ್ರ್ಯಕ್ಕಾಗಿ ಅನ್ಯಾನ್ಯ ದೇಶಗಳಿಗೆ ತೆರಳಿ, ಅಲ್ಲಿ ಕ್ರಾಂತಿಕಾರಕ ಚಟುವಟಿಕೆಗಳಲ್ಲಿ ಭಾಗವಹಿಸಿರುವವರಲ್ಲಿ ಚಂಪಕರಮಣ ಪಿಳ್ಳೆಯವರ ಹೆಸರನ್ನು ಮರೆತು ಬಿಡಲು ಸಾಧ್ಯವೇ ಇರುವದಿಲ್ಲ. ಬ್ರಿಟಿಷರ ವಿರುದ್ಧ ಜರ್ಮನಿ ಜಗಳಾಡುತ್ತಿದ್ದುದರಿಂದ "ವಿರೋಧಿಯ ವಿರೋಧಿ ನಮ್ಮ ಮಿತ್ರನೆಂಬ ವಾಕ್ಯವನ್ನು ನಂಬಿ, ಚಂಪಕರಮಣ ಪಿಳ್ಳೆಯವರು ಜರ್ಮನಿಯನ್ನೇ ತನ್ನ ಕಾರ್ಯರಂಗವೆಂದು ಅಲ್ಲಿ ಕಾರ್ಯಕ್ಕಾರಂಭಿಸಿದರು. ಅವರು ಹಿಟ್ಲರನನ್ನು ಕಂಡು ಮನದಾಳೆಯನ್ನು ವ್ಯಕ್ತಪಡಿಸಿದರು. ಆಗ ಅವರು ಭಿಕ್ಷಾಪಾತ್ರೆಯನ್ನು ತೆಗೆದುಕೊಂಡು ಹೋಗಿರಲಿಲ್ಲ. ಸ್ವತಂತ್ರ ಭಾರತದ ರಾಯಭಾರಿಯಂತೆಯೇ ಹೋಗಿದ್ದರು. ತನಗೆ ಬಗ್ಗದಿರುವ ಚಂಪಕರಮಣ ಪಿಳ್ಳೆಗೆ ಸ್ನೇಹ ಹಸ್ತವನ್ನೀಯುವ ಬದಲು ಹಿಟ್ಲರನು ಮರಣ ಪುರಸ್ಕಾರವನ್ನಿತ್ತನು; ಮೋಸದಿಂದ ಅವರನ್ನು ಕೊಂದನು. ಇದು ನಡೆದದ್ದು ೧೯೩೪ರ ಮೇಯಲ್ಲಿ ಅವರ ಅಸ್ಥಿಗಳನ್ನು ಅವರ ಶ್ರೀಮತಿಯವರು ಬಹಳ ಜೋಪಾನವಾಗಿ, ಜ್ಞಾಪಕಾರ್ಥವಾಗಿ ತಮ್ಮ ಬಳಿ ಬೊಂಬಾಯಿಯಲ್ಲಿಟ್ಟುಕೊಂಡಿದ್ದರು. ಅದನ್ನೀಗ ಯುದ್ಧ ನೌಕೆ 'ಡೆಲ್ಲಿ'ಯಲ್ಲಿ ಕೇರಳಕ್ಕೆ ಕಳುಹಿಸಲಾಗಿರುತ್ತದೆ. ಅದನ್ನಲ್ಲಿ ಕೇರಳ ಪ್ರದೇಶ ಕಾಂಗ್ರೆಸ್ಸ್ ಕಮಿಟಿಯ ಅಧ್ಯಕ್ಷರು ಸ್ವೀಕರಿಸಿ, ಪ್ರದೇಶ ಕಾಂಗ್ರೆಸ್ ಕಮಿಟಿಯ ಕಾರ್ಯಾಲಯದಲ್ಲಿ ಸಾರ್ವಜನಿಕರು ದರ್ಶನ ಪಡೆಯಲಿಕ್ಕಾಗಿ ಇಟ್ಟು ಬಿಟ್ಟು, ಅನಂತರ ಎರ್ನಾಕುಲಮಿನಲ್ಲಿ ನಡೆಯುವ ಅಖಿಲ ಭಾರತ ಕಾಂಗ್ರೆಸ್ ಕಮಿಟಿಯ ಸಭೆಯಲ್ಲಿಟ್ಟ ನಂತರ ಕನ್ಯಾಕುಮಾರಿಯಲ್ಲಿ ಸಾಗರ ಪಾಲು ಮಾಡಲಾಗುತ್ತದೆ.

೧೯೩೪ರಲ್ಲಿ ಹಿಟ್ಲರ್ ನ ಹಿಂಸೆಯಲ್ಲಿ, ಅಮರರಾಗಿರುವ ಕ್ರಾಂತಿಕಾರ ಚಂಪಕರಮಣ ಪಿಳ್ಳೆಯವರ ಜ್ಞಾಪಕ ಇದೀಗ ಶಾಂತಿಯ ಅಂಬಾಧರ, ಗಾಂಧೀಜೀ ಭಕ್ತ ಕಾಂಗ್ರೆಸ್ಸಿಗರಿಗೆ ಜ್ಞಾಪಕ ಬರಲೇನು ಕಾರಣ? ನಿಜ ಕಾರಣ ಬೇರೆಯೇ ಇದ್ದರೂ, ಅವರಿಗೊಂದು ನೆವನ ಸಿಕ್ಕಿರತ್ತದೆ. ಚಂಪಕರಮಣ ಪಿಳ್ಳೆಯವರು ಜರ್ಮನಿಗೆ ಹೋಗಿ ಕಾರ್ಯಪ್ರವೃತ್ತರಾದೊಡನೆ, ತಾನಿನ್ನು ಮಾತೃ ಭೂಮಿಯ ದರ್ಶನ ಪಡೆಯುವದು ಅಕೆ ಬಂಧವಿಮುಕ್ತಳಾದ ಮೇಲೆಂದು ಹೇಳಿದ್ದರು. ಅಂದರೆ, "ಸ್ವತಂತ್ರ ಭಾರತದ ಬಾವುಟ ಮೆರೆಯುತ್ತಿರುವ ಬಲಶಾಲೀ ಯುದ್ಧ ನೌಕೆಯಲ್ಲೇ ತಾನು ಮರಳಿ ಮಾತೃ ಭೂಮಿಯನ್ನ ಸೇರುವದೆಂದ"ವರು ಶಪಥ ಮಾಡಿಕೊಂಡಿದ್ದರು. ಚಂಪಕರಮಣ ಪಿಳ್ಳೆಯವರು ಮಾತೃಭೂಮಿಯೆಂದಂತೆ ಹುಟ್ಟೂರೆಂದು ಕೆಲವು ಸಲ ಹೇಳಿರಬಹುದು. ಪರ ರಾಷ್ಟ್ರದಲ್ಲಿರುವ ರಾಷ್ಟ್ರಪ್ರೇಮಿ ಯೋಧನು ಹುಟ್ಟೂರೆಂದು ಕೇರಳವನ್ನು ಹೇಳಲಿಕ್ಕಿಲ್ಲ. ಪರ ರಾಷ್ಟ್ರಗಳಲ್ಲಿರುವವರ ಹುಟ್ಟೂರು ಭಾರತವೇ ಇದೆ. ಈ ದೃಷ್ಟಿಯಿಂದ ನೋಡುವಾಗ ಹುತಾತ್ಮನಿಗೆ ಕಾಂಗ್ರೆಸ್ಸಿಂದ ಅಪಮಾನವಾಡಿತೆಂದರೆ ತಪ್ಪಾಗಲಾರದು. ಅಖಂಡ ಭಾರತ ತನ್ನ ಹುಟ್ಟೂರೆಂದು ತಿಳಿದುಕೊಂಡು ಅದರ ಬಂಧ ವಿಮೋಚನೆಗಾಗಿ ಹೋರಾಡಿದ ಧೀರನಿಗೆ ಕಾಂಗ್ರೆಸ್ ಗೌರವಿಸುವ ವಿಧಾನ ಇದೇ ಏನು? ಪ್ರಾದೇಶಿಕ ಮನೋಭಾವನೆ, ಜಾತೀಯ ಮನೋಭಾವನೆ ಸಲ್ಲದೆಂದು ಸಾರುತ್ತಿರುವ ಕಾಂಗ್ರೆಸ್ ಇದೀಗ ಮಾಡಿದ್ದಾದರೂ ಏನ? ರಾತ್ರಿಯಲ್ಲಿ ಕಂಡ ಬಾವಿ ಗುಲ್ಲಿ ಹಗಲು ಹೊತ್ತಿನಲ್ಲೇ ಕಾಂಗ್ರೆಸ್ ಬಿದ್ದಿದೆನ್ನಬಹುದು. ಬೊಂಬಾಯಿಯಿಂದ ಅಸ್ಥಿಯನ್ನು ಕೇರಳಕ್ಕೆ ಕಳುಹಿಸುವ ಬದಲು, ಜರ್ಮನಿಯಿಂದ ಭಾರತಕ್ಕೆ ತರುವಂತಹ ಸಂದರ್ಭ ಸಿಗುತ್ತಿದ್ದಲ್ಲಿ, ನಿಜವಾಗಿ ಅದನ್ನು ಅಪೂರ್ವ ಸಂದರ್ಭವೆನ್ನಬಹುದಿತ್ತು. ಆದರೆ ಈಗ ಬೇರೆಯೇ ದುರಂತ ನಾಟಕ ನಡೆದು ಹೋಯಿತೆನ್ನ ಬೇಕಾಗುತ್ತದೆ.

ಇದೀಗ ಇದ್ದಕ್ಕಿದ್ದಂತೆ ಚಂಪಕರಮಣ ಪಿಳ್ಳೆಯವರ ಶಪಥದ ಜ್ಞಾಪಕ ಕಾಂಗ್ರೆಸ್ಸಿಗೆ ಬಂದುದಾದರೂ ಹೇಗೆ? ಚಂಪಕರಮಣ ಪಿಳ್ಳೆಯವರೇನಾದರೂ ಇಂತಹ ತೇದಿಯಂದ, ಇಂತಹ ವರ್ಷ, ಇಂತಹ ಸ್ಥಳದಲ್ಲಿ, ಇಂತಹ ರೀತಿಯಲ್ಲಿ, ತನ್ನ ಅಸ್ಥಿವಿಸರ್ಜನೆ ನಡೆಯಬೇಕೆಂದೇನಾದರೂ ಉಯಿಲು ಅಥವಾ ಮೃತ್ಯುಪತ್ರ ಬರೆದಿಟ್ಟಿರುವರೇ? ಅದಕ್ಕೇನೂ ಆಧಾರ ಇಷ್ಟರ ವರೆಗೆ ಸಿಕ್ಕಿರುವದಿಲ್ಲ. ಅವರ ಶ್ರೀಮತಿಯವರಿಗೆ (ಲಕ್ಷ್ಮೀ ಬಾಯಿಯವರಿಗೆ), ಕನ್ಯಾಕುಮಾರಿಯಲ್ಲಿ ಅಸ್ಥಿವಿಸರ್ಜನೆ ಮಾಡಲು ಇದೀಗ ಮನಸ್ಸಾಗಿದ್ದಲ್ಲಿ ಅದರಂತೆ ಅವರು ಖಾಸಗಿ ರೀತಿಯಲ್ಲಿ ವರ್ತಿಸಬಹುದಿತ್ತು. ಅಲ್ಲದೆ ಅವರೇನಾದರೂ ಭಾರತ ಸರಕಾರದ ಬಳಿ ಯುದ್ಧ ನೌಕೆಗೆ ವಿನಂತಿ ಸಲ್ಲಿಸಿದಲ್ಲಿ ಸರಕಾರ ಸೂಕ್ತ ಕ್ರಮ ತೆಗೆದುಕೊಳ್ಳಬಹುದಿತ್ತು. ಇಲ್ಲಿ ನಡೆದದ್ದು ಅದಲ್ಲ. ತನ್ನ ಪ್ರಭಾವ ಪ್ರದರ್ಶನಕ್ಕೆ, ಹುತಾತ್ಮನಿಗೆ ಅಪಮಾನಗೈದು, ಆಡಳಿತದಲ್ಲಿರುವ ಪಕ್ಷವು ಸರಕಾರೀ ಶಕ್ತಿಯನ್ನು ದುರುಪಯೋಗ ಪಡಿಸಿಕೊಂಡಿದೆಯೆಂದರೆ ತಪ್ಪಾಗಲಾರದು. ಅದೂ ಅಲ್ಲದೆ, ಇದೇನೂ ಅವರ ಜನ್ಮದಿನ ಅಥವಾ ಪುಣ್ಯದಿನ ಇರುವದಿಲ್ಲ. ಮತ್ತೇಕೆ ಕಾಂಗ್ರೆಸ್ಸ್ ಈ ರೀತಿ ನಡೆದುಕೊಂಡಿತು?

ಅಸ್ಥಿಯನ್ನೀಗ ಕೇರಳದಲ್ಲಿ ನಡೆಯಲಿರುವ ಪಕ್ಷದ ಸಮಿತಿಯ ಸಭೆಗೆ, ಯುದ್ಧ ನೌಕೆಯಲ್ಲಿ ಕಳುಹಿಸಿ ಕೊಡಲಾಗಿದೆ. ಚುನಾವಣೆ ಸಮೀಪಕ್ಕೆ ಬರುತ್ತಿರುವಾಗ ರಾಜಕೀಯ ಪಕ್ಷಗಳ ಮುಂದಾಳುಗಳು ಒಂದಾಗಿ ಸೇರಿ ತಮ್ಮ ಧ್ಯೇಯವನ್ನು, ಧೋರಣೆಯನ್ನು ಪ್ರಕಟಿಸುವದು ಯಾವಾಗಲೂ ನಡೆದುಕೊಂಡು ಬಂದಿರುವ ವಿಷಯವಿದೆ. ಅಂತೆಯೇ ಕಾಂಗ್ರೆಸ್ಸಿನ ಮುಂದಾಳುಗಳು ಕೇರಳದ ಎರ್ನಾಕುಲಮಿನಲ್ಲಿ ಕಲೆತು ತಮ್ಮ ಧೋರಣೆಯನ್ನು ವ್ಯಕ್ತಪಡಿಸಲಿರುವರು. ಈಸಭೆ ಕೇರಳದಲ್ಲಿ ಸೇರಲು ಕಾರಣವಿದೆ. ಕೇರಳವೆಂದರೆ ಕಾಂಗ್ರೆಸ್ಸಿಗೆ ಕೇಳಬೇಕಾಗಿಯೇ ಇಲ್ಲ, ತಲೆನೋವು ಬಂದು ಬಿಡುತ್ತದೆ. ಈ ಸಲವೂ ಅಷ್ಟೆ. ಹಾಗಿರುವದರಿಂದ ತಮ್ಮ ಮುಖಂಡರುಗಳನ್ನಲ್ಲಿ ಪ್ರದರ್ಶಿಸಿ ಹೇಗಾದರೂ ಮಾಡಿ ಕಾಂಗ್ರೆಸ್ಸಲ್ಲಿ ಕಾಲಿಡುವಂತಾಗಬೇಕೆಂದು ಅವರು ಪ್ರಯತ್ನಿಸುವದು ಯುಕ್ತವೇ ಇದೆ. ಅದೊಂದು ಒಳ್ಳೆಯ ಯುಕ್ತಿಯೂ ಹೌದು. ಅದು ನಡೆಯಬೇಕಾದದ್ದೇ ಸರಿ. ಅದರ ಮಧ್ಯೆ ಕಾಂಗ್ರೆಸ್ಸ್ ಈ ಉಪಾಯವನ್ನು ಉಪಯೋಗಿಸಿಕೊಂಡಿದೆ. ಚಂಪಕರಮಣ ಪಿಳ್ಳೆ ಕಾಂಗ್ರೆಸ್ಸಿಗರೆಂದೂ, ಅವರು ಕಾಂಗ್ರೆಸ್ಸಿಗರಿಗೆ ಭಕ್ತರೆಂದೂ, ಆ ಹುತಾತ್ಮನನ್ನು ಎಲ್ಲರೂ ಮರೆತು ಬಿಟ್ಟಿರುವಾಗ ಕಾಂಗ್ರೆಸ್ಸ್ ಮಾತ್ರ ಜ್ಞಾಪಕದಲ್ಲಿಟ್ಟುಕೊಂಡಿದ್ದು, ಇದೀಗ ಅವರ ಕೊನೆಯ ಆಶೆಯನ್ನು ನೆರವೇರಿಸಲಿಕ್ಕಾಗಿ ಅವರ ಚಿತಾಭಸ್ಮವನ್ನು ತಂದಿರುವದಾಗಿ ಪ್ರಚಾರ ನಡೆಸಿ ಆವೆಲ್ಲವನ್ನ ಕನ್ಯಾಕುಮಾರಿಯಲ್ಲಿ ಸಾಗರಪಾಲು ಮಾಡಿ ಬಿಡುವ ಹಂಚಿಕೆ ಇದು. ಆದರೆ ಕೇರಳದ ಮುಗ್ಧ ಜನತೆ ಇದಕ್ಕೆ ಮೋಸಹೋದೀತೇ? ಚಂಪಕರಮಣ ಪಿಳ್ಳೆಯವರ ಶ್ರೀಮತಿಯವರೇ ಮೋಸಹೋಗಿರುವಾಗ ಶ್ರೀ ಸಾಮಾನ್ಯನ ವಿಷಯ ಹೇಳಬೇಕಾಗಿಲ್ಲ. ಅದರಲ್ಲೂ ಒಂದಿಷ್ಟು ಪ್ರಾಂತ ಮನೋಭಾವನೆಯ ಕಿಚ್ಚಿಗೆ ಸೀಮೆ ಎಣ್ಣೆ ಸುರಿದರೆ ಸರಿ. ಬೆಂಕಿ ಭುಗ್ಗನೆ ಮೇಲೆದ್ದು ಬಿಡುತ್ತದೆ. ಆ ರಾಜಕೀಯಾಗ್ನಿಯಲ್ಲಿ ಎದುರು ಪಕ್ಷಗಳೆಲ್ಲ

(ಹತ್ತನೇ ಪುಟ ನೋಡಿರಿ)

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ವಿದ್ಯಾರ್ಥಿಗಳಿಗಾಗಿ ಪ್ರಬಂಧ ಸ್ಪರ್ಧೆ

ಇದೇ ನವಂಬರದಲ್ಲಿ ನೆರವೇರಲಿರುವ ಶ್ರೀ ನೆಹರೂ ಜಯಂತಿಯ ಅಂಗವಾಗಿ ನಮ್ಮ ಬ್ಯಾಂಕು ಶಾಲಾ ಮತ್ತು ಕಾಲೇಜು ವಿದ್ಯಾರ್ಥಿಗಳಿಗಾಗಿ ಪ್ರಬಂಧ ಸ್ಪರ್ಧೆಯನ್ನು ಕೈಗೊಂಡಿದೆ.

ಸ್ಪರ್ಧೆಯ ನಿಯಮಾವಳಿ :

ಹೈಸ್ಕೂಲು ಮತ್ತು ಕಾಲೇಜುಗಳ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಸ್ಪರ್ಧೆಯಲ್ಲಿ ಭಾಗವಹಿಸಲು ಪ್ರವೇಶವಿದೆ. ಪ್ರವೇಶ ಶುಲ್ಕವೇನೂ ಇಲ್ಲ. ಪ್ರಬಂಧದ ವಿಷಯ: ಶುನಕ—ಮಾನವನ ಪರಮ ಮಿತ್ರ (Dog—Man's Best Friend) ಪ್ರಬಂಧವು ಇಂಗ್ಲೀಷಿನಲ್ಲಿ 300 ಶಬ್ದಗಳಷ್ಟಿದ್ದು ವಿಷಯವು ನಮ್ಮ ಬ್ಯಾಂಕಿನ ಸಂಕೇತ ಫಲಕ (ಎಂಬ್ಲೇಮ್)ಕ್ಕೆ ಸಂಬಂಧಿಸಿರಬೇಕು. [ಎಂಬ್ಲೇಮ್‌ನ ಮೇಲೆ ಶುನಕದ ಚಿತ್ರದೊಂದಿಗೆ 'ನಿಷ್ಠಾವಂತ ಮತ್ತು ಸ್ನೇಹಮಯಿ' (Faithful and Friendly) ಶಬ್ದಗಳಿವೆ.]

ಸ್ಪರ್ಧಾಳುಗಳು ಪ್ರಬಂಧವನ್ನು ತಮ್ಮ ಶಾಲೆ ಅಥವಾ ಕಾಲೇಜಿನ ಮುಖ್ಯ ಶಿಕ್ಷಕರ ಮೂಲಕ ಆಯಾ ಊರಲ್ಲಿರುವ ನಮ್ಮ ಬ್ಯಾಂಕಿನ ಶಾಖೆಗೆ ಅಕ್ಟೋಬರ ತಾರೀಕು 10ರೊಳಗೆ ತಲುಪುವಂತೆ ಕಳುಹಿಸತಕ್ಕದ್ದು. ಸ್ಪರ್ಧೆಗೆ ಬಂದ ಪ್ರಬಂಧಗಳ ಗುಣ ಮೌಲ್ಯಗಳನ್ನು ಯೋಗ್ಯ ನಿಷ್ಪಕ್ಷಪಾತ ವ್ಯಕ್ತಿಗಳಿಂದ ನಿರ್ಣಯಿಸಲಾಗುವುದು.

ಹೈಸ್ಕೂಲು ಮತ್ತು ಕಾಲೇಜು ವಿದ್ಯಾರ್ಥಿಗಳಿಗೆ ಪ್ರತ್ಯೇಕ ಸ್ಪರ್ಧೆಗಳನ್ನು ನಡೆಸಲಾಗುವುದಲ್ಲದೆ, ಅವರಿಗೆ ಪ್ರತ್ಯೇಕ ಬಹುಮಾನಗಳನ್ನು ಈ ಕೆಳಗಿನ ರೀತಿಯಲ್ಲಿ ನೀಡಲಾಗುವುದು.

ಕಾಲೇಜು ವಿದ್ಯಾರ್ಥಿಗಳಿಗೆ :	ಪ್ರಥಮ ಬಹುಮಾನ	— ರೂ. 200
	ದ್ವಿತೀಯ ಬಹುಮಾನ	— ರೂ. 100
ಹೈಸ್ಕೂಲು ವಿದ್ಯಾರ್ಥಿಗಳಿಗೆ :	ಪ್ರಥಮ ಬಹುಮಾನ	— ರೂ. 100
	ದ್ವಿತೀಯ ಬಹುಮಾನ	— ರೂ. 50

ಇವುಗಳಲ್ಲದೆ ಮೇಲಿನ ಎರಡು ದರ್ಜೆಗಳಿಗೆ ರೂ. 25ರಂತೆ ಪ್ರತ್ಯೇಕ ಹತ್ತು ಬಹುಮಾನಗಳನ್ನು ನೀಡಲಾಗುವುದು. ಬಹುಮಾನಗಳನ್ನು ಶ್ರೀ ನೆಹರೂ ಜಯಂತಿಯ ದಿನ ಸ್ಪರ್ಧೆಯಲ್ಲಿ ವಿಜಯಿಗಳಾದವರಿಗೆ ವಿತರಿಸಲಾಗುವುದು.

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು : ಮಣಿಪಾಲ — ಮೈಸೂರು ರಾಜ್ಯ.

ಹಾರುವುದಕ್ಕೆ ಮೊದಲು

ಚಾರ್ಲ್ಸ್ ಕಾನ್ರಾಡರ ಆಶಯ

ಮೊನ್ನೆ ಹಾರಿದ ಜೆಮಿನಿ—೧೧ ಉಪಗ್ರಹದ ಕಮಾಂಡ್ ಪೈಲೆಟರ ಹೇಳಿಕೆ.

೧೯೬೫ರ ಆಗಸ್ಟಿನಲ್ಲಿ ಜೆಮಿನಿ—೫ರಲ್ಲಿ ನಾನು ನನ್ನ ಮೊದಲನೆ ಗಗನ ಹಾರಾಟವನ್ನು ಕೈಗೊಂಡ ಕಾಲದಿಂದ ಈಚೆಗೆ, ಮುಂಚೆಯೇ ವ್ಯವಸ್ಥೆ ಮಾಡಿದ ಗಗನದಲ್ಲಿರುವ ಮತ್ತೊಂದು ಗಗನಯಾನದೊಂದಿಗೆ ನಿಕಟಾನುಸರಣೆಯನ್ನು ಕೈಗೊಳ್ಳುವುದಕ್ಕೂ ಉತ್ಕ್ಷೇಪದ ಪೀಠದಿಂದ ಉತ್ಕ್ಷೇಪವನ್ನು ಕೈಗೊಳ್ಳುವುದಕ್ಕೂ ಇರುವ ಕಾಲದ ಅಂತರ ಕಡಿಮೆಯಾಗುತ್ತ ಬಂದಿದೆ.

ಜೆಮಿನಿ—೧೧ರ ಸಂದರ್ಭದಲ್ಲಿ ನಾವು ನಿರ್ದಿಷ್ಟ ಸಮಯಕ್ಕೆ ಕೇವಲ ನಾಲ್ಕು ಸೆಕೆಂಡ ಗಳೊಳಗೆ ಉತ್ಕ್ಷೇಪವನ್ನು ಕೈಗೊಳ್ಳಬೇಕಾಗಿದೆ. ಅಂದರೆ ಇಂಥ ಕಾರ್ಯಕ್ರಮದಲ್ಲಿ ನಾವು ಪರಮಾವಧಿಯನ್ನೇ ಮುಟ್ಟುತ್ತಿದ್ದೇವೆ.

ಎರಡು ಸಕೆಂಡುಗಳ ಮುಂಚೆ ಅಥವಾ ಎರಡು ಸೆಕೆಂಡು ತಡವಾಗಿ ನಾವು ಉತ್ಕ್ಷೇಪವನ್ನು ಕೈಗೊಂಡರೆ, ನಮ್ಮ ಹಾರಾಟದ ವ್ಯವಸ್ಥೆಯಲ್ಲಿ ಯಾವ ದೋಷವೂ ಇಲ್ಲದಿದ್ದರೂ, ನಿಯೋಜಿತ ಮೊದಲ ಕಕ್ಷ್ಯಾ ಹಾರಾಟದಲ್ಲಿಯೇ ನಿಕಟಾನುಸರಣೆ ನಡೆಸಲು ಬಹು ಕಷ್ಟವಾಗುವುದು.

ಎಜಿನಾ ಗುರಿ ಸಾಧನವನ್ನು ಹಾರಿಸಿ ಭೂಮಿಗೆ ಒಂದು ಸುತ್ತು ಬರಲು ಅವಕಾಶ ನೀಡಿ, ಅದು ಮತ್ತೆ ಕೇಪ್ ಕೆನೆಡಿಯ ಮೇಲೆ ಹಾದು ಹೋಗುತ್ತಿರುವಂತೆ, ಉತ್ಕ್ಷೇಪದಿಂದ ನೇರವಾಗಿ ಅದನ್ನು ಅನುಸರಿಸುವಂತೆ ಮಾಡುವುದೇ ಮೊದಲ ಕಕ್ಷ್ಯಾ ನಿಕಟಾನುಸರಣೆಯ ಪ್ರಯತ್ನದ ಸೂತ್ರ. ಅದನ್ನು ಹಿಡಿದುಕೂಡಿಕೊಳ್ಳಲು ನಮಗೆ ಒಂದು ಘಂಟೆ ೩೪ ನಿಮಿಷಗಳ—ಅವಕಾಶ ಮಾತ್ರ ಇರುತ್ತದೆ.

ಕೂಡಿಕೆಯಾದ ಮೇಲೆ ಗಗನಯಾನಿ ರಿಚರ್ಡ್ ಗಾರ್ಡನ್ ಅವರು ತಮ್ಮ ಗಗನ ಓಡಾಟದ ಕಾಲದಲ್ಲಿ ಕಟ್ಟಿನ ಇನ್ನೊಂದು ತುದಿಯನ್ನು ಗಗನಯಾನದ ಕೂಡಿಕೆಯ ಪಟ್ಟಿಗೆ ಜೋಡಿಸುವರು. ಅನಂತರ ಹಾರಾಟದ ಕಾಲದಲ್ಲಿ ನಾವು ಎಜಿನಾದಿಂದ ಬಿಡಿಸಿಕೊಂಡು ಜೆಮಿನಿ ಯಾನವನ್ನು ಕಟ್ಟಿನ ತುದಿಗೆ ಚಲಿಸುವೆವು. ಆದರೆ ಎಜಿನಾದೊಳಕ್ಕೆ ಜೋಡಿದಂತೆ ಕಟ್ಟನ್ನು ಸಾಕಷ್ಟು ಬಿಗಿಯಲ್ಲಿ ಉಳಿಸಿರುವೆವು.

ನಮ್ಮ ಹಾರಾಟದ ಮೂರನೆ ದಿನ ೮೫೦ ಮೈಲಿಗಳ ಅತ್ಯುನ್ನತ ಕಕ್ಷೆಯಲ್ಲಿ ಹಾರುವೆವು. ಆ ಎತ್ತರದಲ್ಲಿ ಉಪಯುಕ್ತವಾದ ಅಂಕಿ—ಅಂಶಗಳನ್ನು ಪಡೆಯಬಹುದಾದ ನಿರೀಕ್ಷೆ ನಮ್ಮದಾಗಿದೆ. ಈ ಯಾವುವೂ ಮಾನವ ಸಹಿತವಾದ ಕಕ್ಷೆಯ ಎತ್ತರದ ದಾಖಲೆಗೆ ಸಂಬಂಧಿಸಿದ್ದಲ್ಲವಾದರೂ, ಅದನ್ನೂ ನಾವು ಸಾಧಿಸಲಿದ್ದೇವೆ.

ಇತರ ಜೆಮಿನಿ ಹಾರಾಟಗಳಲ್ಲಿ ಭೂಮಿಯ ಮೇಲ್ಮೈ ಸ್ವರೂಪದ ಹಾಗೂ ಹವಾ ವಿವರಗಳಿಗೆ ಸಂಬಂಧಿಸಿದಂತೆ ತೆಗೆದ ಚಿತ್ರಗಳಿಂದ ಭೂ ವಿಜ್ಞಾನಿಗಳಿಗೂ, ನಕ್ಷೆಗಳ ತಯಾರಕರಿಗೂ, ಹವಾ ವಿಜ್ಞಾನಿಗಳಿಗೂ ಸಹಾಯಕವಾಗಿದೆ. ಆದರೆ ಇಂಥ ಚಿತ್ರಗಳನ್ನು ಇದುವರೆಗೆ ವರ್ಣಗಳಲ್ಲಾಗಲಿ, ನಾವು ಏರುವ ೮೫೦ ಮೈಲಿಗಳ ಎತ್ತರದಿಂದಾಗಲಿ, ಗಗನಯಾನಿಯೊಬ್ಬ ತೆಗೆದಿಲ್ಲ.

ಮಾನವ ರಹಿತವಾದ ನಿಂಬಸ್ ಹವಾ ಉಪಗ್ರಹ ಇದೇ ಎತ್ತರದಿಂದ ತೆಗೆದ ಚಿತ್ರಗಳಿಂದ, ಕಳೆದ ಜೆಮಿನಿ ಹಾರಾಟಗಳ ಛಾಯಾಗ್ರಹಣದಲ್ಲಿ ಕಾಣಬರದಿದ್ದ ದೊಡ್ಡ ದೋಷ ಪ್ರದೇಶಗಳು (ಫಾಲ್ಟ್ ಜೋನ್ಸ್) ಪತ್ತೆಯಾಗಿವೆ. ಆಫ್ರಿಕಾ ಹಾಗೂ ಸೌದಿ ಅರೇಬಿಯಗಳನ್ನು ೩೫೦ರಿಂದ ೪೫೦ ಮೈಲಿಗಳ ಎತ್ತರದಲ್ಲಿ ಹಾದು ಹೋಗಲಿದ್ದೇವೆ. ಭಾರತದ ದಕ್ಷಿಣ ತುದಿಯನ್ನು ಹಾದು ಹೋಗುವಾಗ ಇನ್ನೂ ಎತ್ತರದಲ್ಲಿರುವೆವು. ಪಶ್ಚಿಮ ಆಸ್ಟ್ರೇಲಿಯದ ಮೇಲಿದ್ದಾಗ ಗರಿಷ್ಠ ಎತ್ತರವನ್ನು ತಲುಪುವೆವು.

ಭಾರತದ ವಿಜ್ಞಾನಿಗಳಿಗೆ ತಮ್ಮ ದೇಶದ ದಕ್ಷಿಣ ಭಾಗದ ನಕ್ಷೆಯನ್ನು ಸಿದ್ಧಪಡಿಸುವುದು ದೊಡ್ಡ ಸಮಸ್ಯೆಯಾಗಿದೆ. ೫೦೦ ಮೈಲಿಗಳ ಅಥವಾ ಸುಮಾರು ಅಷ್ಟೆತ್ತರದಿಂದ ತೆಗೆದ ಎರಡು ಒಳ್ಳೆಯ ಸ್ಟೀರಿಯೋ ಛಾಯಾ ಚಿತ್ರಗಳಿಂದ ಅವರಿಗೆ ಸಹಾಯವಾಗುವುದು. ಉನ್ನತ ಎತ್ತರದಿಂದ ನಾವು ಭೂ ಭಾಗಗಳ ಛಾಯಾಗ್ರಹಣ ನಡೆಸಲಿದ್ದೇವೆ.

ಅಧಿಕ ಎತ್ತರದಲ್ಲಿ ತೆಗೆದ ಹವಾದ ವರ್ಣ ಚಿತ್ರಗಳು ಹವಾ ವಿಜ್ಞಾನಿಗಳಿಗೆ ಬೇಕು. ಅವುಗಳಿಂದ ಅವರು ಉಪಗ್ರಹಗಳಿಂದ ಪಡೆದ ಜ್ಞಾನವನ್ನು ಹೆಚ್ಚಿಸಿಕೊಳ್ಳಲು ಸಹಾಯವಾಗುವುದು. ಪ್ರಾಯಶಃ ಮೋಡಗಳ ಮಾದರಿಗಳ ನಿರ್ಧಾರಕ್ಕೆ ಹೆಚ್ಚಿದ ನಿಕರತೆ ಒದಗುವುದು. ನಿಂಬಸ್ ಉಪಗ್ರಹ ಕಪ್ಪು ಬಿಳುಪಿನ ಛಾಯಾ ಚಿತ್ರಗಳನ್ನು ತೆಗೆದುಕೊಳ್ಳುತ್ತಿದೆ. ಮಾನವ ರಹಿತ ಉಪಗ್ರಹಗಳಿಂದ ವರ್ಣ ಛಾಯಾ ಚಿತ್ರಗಳನ್ನು ತೆಗೆದುಕೊಳ್ಳಬೇಕಾದರೆ ವ್ಯವಸ್ಥೆ ಬಹು ಜಟಿಲವಿರಬೇಕು. ವರ್ಣ ಛಾಯಾ ಚಿತ್ರಗಳಿಂದ ಜ್ಞಾನ ಸಂಗ್ರಹದಲ್ಲಿ ವ್ಯತ್ಯಾಸವೇನಾದರೂ ಆಗುವುದೇ ಎಂಬುದನ್ನು ಕಂಡು ಹಿಡಿಯುವುದಕ್ಕೆ ನಮ್ಮ ಕಾರ್ಯಕ್ರಮವೇ ಅತ್ಯಂತ ಸುಲಭವಾದುದು

ಜೆಮಿನಿ - ೫ರ ಹಾರಾಟ ಕಾಲದಲ್ಲಿ ಗಗನಯಾನಿ ಗಾರ್ಡನ್ ಕೂಪರ್ ಹಾಗೂ ನಾನು ತೆಗೆದ ಮೂರು ಛಾಯಾಚಿತ್ರಗಳಿಂದ ಹವಾ ವಿಜ್ಞಾನಿಗಳು ಹಿಗ್ಗಿ ಹೋದರು. ಅವನ್ನು ಅನುಕ್ರಮವಾದ್ರ ೯೦ ನಿಮಿಷಗಳ ಅವಧಿಯ ಮೂರು ಭ್ರಮಣಗಳಲ್ಲಿ ತೆಗೆಯಲಾಯಿತು. ಗುಡುಗು ಬಿರುಗಾಳಿಯೊಂದು ರೂಪಗೊಳ್ಳುತ್ತಿದ್ದಾ



ಆಗಸ್ಟ ೧೦ರಂದು ಹಾರಿದ ಲ್ಯೂನರ್ ಉಪಗ್ರಹ ಚಂದ್ರನ ಚಿತ್ರಗಳನ್ನು ತೆಗೆಯುವುದರಲ್ಲಿ ತಲ್ಲೀನವಾಗಿದೆ.

ಚಂದ್ರಗ್ರಹದಿಂದ ತೆಗೆಯಲಾದ ಭೂಮಿಯ ಪ್ರಥಮ ಚಿತ್ರ.

ಕೇವಲು ದಾರಿ ಕೆಂಪು ದೀಪ

ಕನ್ನಡ ಹೆಣ್ಣಿಗೆ ಮರಾಠಿ ಗಂಡು

ಉತ್ತರ ಕನ್ನಡ ಜಿಲ್ಲೆಯ ಹಳಿಯಾಳದಿಂದ ಬಂದಿತೊಂದು ಸುದ್ದಿ—

ಅಲ್ಲೊಂದು ಸಭೆ ನಡೆಯಿತು. ಇದನ್ನು ಸಂಘಟಿಸಿದವರು ಮಹಾರಾಷ್ಟ್ರ ಏಕೀಕರಣ ಸಮಿತಿಯವರು. ಸಭೆ ಕರೆದ ಉದ್ದೇಶ ಅತ್ಯಮೂಲ್ಯವಾದದು ಬೆಳೆ ಯೋಜನೆಯ ಮೇಲೆ ಚರ್ಚೆ ನಡೆಸುವುದು--

—(ಚರ್ಚೆ ನಡೆಸುವುದರಿಂದ ಚರ್ಚಾಕಾರರ ಮಾತಿನ ಧಾಟಿ, ಧ್ವನಿಯ ಏರಾಟದ ಮುಂದೆ ಬೆಳೆಯೋಜನೆಯ ತಟ್ಟೆ ಆಕಾಶದಲ್ಲೇ ಹಾರುತ್ತಿರಬೇಕು— ಅಮೇರಿಕೆ ಹಾರಿಸುವ ಉಪಗ್ರಹದಂತೆ—)

—ಭೂಸುಧಾರಣಾ ಶಾಸನವನ್ನು ವಿವರಿಸುವುದು ಮತ್ತೊಂದು ಉದ್ದೇಶ.

—(ಕಾಂಗ್ರೆಸಿಗರು ಮಾಡಬೇಕಾದ ಈ ಕಾರ್ಯವನ್ನು ಇವರಾದರೂ ಮಾಡಿದರಲ್ಲಾ)

—ಮುಂಬರುವ ಸಾರ್ವತ್ರಿಕ ಚುನಾವಣೆಗಳಿಗೆ ಮೊದಲಾಗಿ ಹಳಿಯಾಳವನ್ನು ಮಹಾರಾಷ್ಟ್ರದಲ್ಲಿ ಸೇರಿಸದಿದ್ದರೆ ಚುನಾವಣೆಯನ್ನು ಬಹಿಷ್ಕರಿಸುವ ಬಗ್ಗೆ ವಿಚಾರ ವಿನಿಮಯ ಮಾಡುವುದು ಇನ್ನೊಂದು ಉದ್ದೇಶ— ಬಹುಶಃ ಇದೇ ಮುಖ್ಯದ್ದಿರಬೇಕು— ಉತ್ತರೋತ್ತರ. ಬಲೀಯಸ.

ಸಂಯುಕ್ತ ಮಹಾರಾಷ್ಟ್ರವಾದಿಗಳೊಡನೆ ಕಾಂಗ್ರೆಸ್ ರೈತ ಸಂಘಗವರೂ ಕೂಡಿದ್ದಾರಂತೆ ಶಿರಸಿ ವಾಮ ಪಂಥೀಯ ಕಮ್ಯುನಿಸ್ಟ್ ಪ್ರಮುಖ ಶ್ರೀ ಎಂ ಎಸ್ ಧರೇಶ್ವರರು ಆಂದಿನ ವಿಶಿಷ್ಟ ಭಾಷಣಕಾರರಾಗಿದ್ದರಂತೆ

ಸಭೆಯಲ್ಲಿ ಏನ ನಡೆಯಿತು ಯಾವ ಪರಿಣಾಮಕಾರಿ ನಿರ್ಧಾರವಾಯಿತು ಎಂದು ಸರಿಯಾಗಿ ತಿಳಿದಿಲ್ಲ—ಎಲ್ಲ ಕನ್ನಡಿಗರಿಗೆ ಸೋಜಿಗಕರವಿದ್ದ, ಹಳಿಯಾಳವನ್ನು ಮಹಾರಾಷ್ಟ್ರಕ್ಕೆ ಸೇರಿಸುವ ವಿಷಯದೊಡನೆ ಬೆಳೆಯೋಜನೆಯ ನೂತನ ಭೂಸುಧಾರಣೆಯನ್ನೂ ಎಳೆದು ತಂದುದು ಒಂದಾದರೆ, ನೋಟೀಸಿನಿಂದ ಹಿಡಿದು ಧನ್ಯವಾದದವರೆಗಿನ ಎಲ್ಲ ಕಾರ್ಯಕ್ರಮಗಳೂ ಕನ್ನಡದಲ್ಲಿಯೇ ನಡೆದುದು ಮತ್ತೊಂದು.

ಎರಡನೆಯದಕ್ಕೆ ಸಂಘಟಕರು ನೀಡಿದ ಕಾರಣವನ್ನು ಒಪ್ಪಬೇಕು. ಕಾರ್ಯಕ್ರಮವಿರುವುದು ಎಲ್ಲರಿಗೂ ಗೊತ್ತಾಗಬೇಕು, ಅದು ಎಲ್ಲರಿಗೂ ತಿಳಿಯಬೇಕು— ಮರಾಠಿಯಲ್ಲಿ ನಡೆಸಿದರೆ ಯಾರಿಗೂ ಅರ್ಥವಾಗುವುದಿಲ್ಲ—

ಹಾಗೇನೂ ಇಲ್ಲ. ಕನ್ನಡಿಗರ ಮುಂದೆ ತಮ್ಮ ಹೃದಯ ವೇದನೆಯನ್ನು ಮರಾಠಿ ರಾಗದಲ್ಲಿ ಹಾಡಿದರೆ ಗೋರ್ಕಲ್ಲ ಮೇಲೆ ಮಳೆಗರೆದಂತೆ— ಆದುದರಿಂದ ಕನ್ನಡಿ ರಾಗದಲ್ಲೇ ಹಾಡಿ ಅವರ ತಲೆದೂಗಿಸುವ ಪ್ರಯತ್ನ ಮಾಡಿದರು —ಇದಕ್ಕೆ ಅಪಾರ್ಥ ಕಲ್ಪಿಸಿ ಸಂಘದ ಪ್ರಭಾವ ಕಡಿಮೆ, ಸಂಘಟಕರಿಗೆ ಮಾತುಗಾರಿಕೆಯ ಮರಾಠಿ ಬರುವುದಿಲ್ಲ ಎಂದು ಆರೋಪ ಹೊರಿಸುವುದು ಅನ್ಯಾಯ.

—ನಾವೂ ಮಾಡುವುದಿಲ್ಲವೆ? ಕನ್ನಡಿಗ ಮಂತ್ರಿಗಳು ಇಂಗ್ಲಿಷದಲ್ಲಿಯೇ ಲೆಕ್ಚರ್ ಬಿಡುತ್ತಾರೆ— ನನಗೆ ಕನ್ನಡದಲ್ಲಿ ಮಾತಾಡಿ ಅಭ್ಯಾಸವಿಲ್ಲ ಎಂದೇ ಸುರು ಮಾಡುತ್ತಾರೆ— ಬರುವುದಿಲ್ಲ ಎನ್ನುವುದಿಲ್ಲ— ಕನ್ನಡ ಮಾತೆಯ ಪುಣ್ಯ!

ಆದರೆ, ಮೊದಲನೆಯ ಸಮಸ್ಯೆಗೆ ಸಂಘಟಕರು ಸಮಾಧಾನ ಹೇಳಿದಂತಿಲ್ಲ. ಜನ ಸಾಮಾನ್ಯರನ್ನು ಸಳೆಯಲು ಬೆಳೆಯೋಜನೆಯನ್ನು ಕರೆತಂದಿರಬಹುದು. ಆದರೆ ಭೂ ಸುಧಾರಣೆ?

ಉತ್ತರ ಕನ್ನಡ ಜಿಲ್ಲೆ ಮುಂಬಯಿ ರಾಜ್ಯದಲ್ಲಿರುವಾಗಲೇ ಭೂ ಮಾಲಿಕರಿಗೆ ಸಮಾಧಿ ಸಿದ್ಧವಾಗಿತ್ತು. ಪ್ರಚಲಿತ ಭೂಸುಧಾರಣೆಯಿಂದ ಅವರಿಗೆ ಲಾಭವಾಗಬಹುದೆಂಬುದನ್ನು ವಿವರಿಸಲು ಕಮ್ಯುನಿಸ್ಟ್ ಧುರೀಣರು ಬಂದರೆ?

—ಏನೇ ಆಗಲಿ, ಹಳಿಯಾಳ, ಸುಪಾ, ಮತ್ತು ಕಾರವಾರಗಳು ಮರಾಠಿ ಪ್ರದೇಶವೆಂದು ಹೇಳಿ ಅವುಗಳನ್ನು ಮಹಾರಾಷ್ಟ್ರಕ್ಕೆ ಸೇರಿಸಬೇಕನ್ನುವ ಮಹಾರಾಷ್ಟ್ರವಾದಿಗಳು ತಮ್ಮ ಬೇಡಿಕೆಯನ್ನು ಹಳಿಯಾಳಕ್ಕೆ ಮಾತ್ರ ಸೀಮಿತ ಮಿಂಚಿಸಿರುದು ಅನ್ಯಾಯದ ಪರಮಾವಧಿ ಇದಕ್ಕಾಗಿ ಈ ಸಭೆಯ ಸಂಪಾದಕರ ಮೇಲೆ ಶಿಸ್ತಿನ ಕ್ರಮ ಕೈಗೊಳ್ಳ ಬೇಡವೆ?

ಯಾರು?

ಯಾರೊ?

ಹಳಿಯಾಳವಲ್ಲಿ ಸಭ ಸೇರಿದ ಮರಾಠಿ ಮಾತರಿಯದ — ಅಲ್ಲ, ಕನ್ನಡ ಮಾತಾಡುವ— 'ಮಹಾರಾಷ್ಟ್ರವಾದಿಗಳು ಸಾರ್ವತ್ರಿಕ ಚುನಾವಣೆಗಳನ್ನು ಬಹಿಷ್ಕರಿಸುವ ಸಂಭವ ಹೆಚ್ಚು. ಆದರೆ, ಇದು ಹೇಡಿತನ.

—ಹಳಿಯಾಳವನ್ನು ಮಹಾರಾಷ್ಟ್ರಕ್ಕೆ ಸೇರಿಸಬೇಕು ಎಂಬ ಏಕಮೇವ ಘೋಷಣೆ ಹೊರಡಿಸಿ ಒಬ್ಬ ಅಭ್ಯರ್ಥಿಯನ್ನ ಇಲೆಕ್ಷನ್ನಿಗೆ ನಿಲ್ಲಿಸಿ ಅವನು—ಆಗಲು ಅದರ ಚಿನ್ಹೆ—ಗೆದ್ದು ಬರುವಂತೆ—ಹೇಗಾದರೇನು?— ಯಾಕೆ ಪ್ರಯತ್ನಿಸಬಾರದು?

—ಜನಮತ ಗಣನೆಯನ್ನು ಗೋವಾ ವಿವಾಹಕ್ಕೆ ಸೂತ್ರವನ್ನಾಗಿ ಮಾಡಿಕೊಂಡ ಕಾಂಗ್ರೆಸ್ ಹೈಕಮಾಂಡು ಹಳಿಯಾಳ ವಿವಾಹಕ್ಕೂ ಅದನ್ನೇ ಯಾಕೆ ಸ್ವೀಕರಿಸಬಾರದು?

—ಇರುವ ಗಂಡ ಬಿಡದಿದ್ದರೆ?

ವಿವಾಹ ವಿಚ್ಛೇದನ -ತನಗೆ ಒಲ್ಲದ ಗಂಡನಿಂದ ಬೇರೆಯಾಗಿರಲು ಪ್ರ್ಯಾರಿಷ್ಯ ಲ್ ಅನುಮತಿ ಪಡೆದರಾಯಿತು —ಇಗ್ಗೆಯ ಕೈಕಳಗ ಕೆಲಕಾಲ ನೆಲಸಿ ಬಂದು—ಮತ್ತೆ ಪಾಯಲ ಬ ಜೇಯನ ಪವೆ ಸುಸಂಭ್ರಮದ ವಿವಾಹ!



ಅಮೇರಿಕಯೊಡನೆ ಉಳಿದ ಭೂಭಾಗಗಳ ಸಂಪರ್ಕ ಬೆಳೆಸಲು ನೆರವಾಗುವ ಒಂದು ಸಾಧನ 'ಅರ್ಲಿಬರ್ಡ್' ಇಂದು ಹವಾಯಿ, ಜಪಾನ್, ಆಸ್ಟ್ರೇಲಿಯಾ ಮತ್ತು ಅಮೇರಿಕೆಯ ಪಶ್ಚಿಮ ಕರಾವಳಿಗಳಲ್ಲಿ ಇದರ ನಿಲಯವಿದ್ದು ಅದು ಟೆಲಿವಿಜನ್, ಟೆಲಿಫೋನ್ ಮತ್ತು ಟೆಲಿಗ್ರಾಫ್ ಸಂದೇಶಗಳನ್ನು ರಿಲೆ ಮಾಡಲು ಸಮರ್ಥವಾಗಿದೆ.

ಗ ಮೋಡ ರಚನೆಯಲ್ಲಾಗುತ್ತಿದ್ದ ಬದಲಾವಣೆಗಳನ್ನು ಆ ಛಾಯಾಚಿತ್ರಗಳು ಗುರ್ತಿಸಿದವು. ಆ ಚಿತ್ರವನ್ನು ಇಂದೂ ಉಪಯೋಗಿಸಲಾಗುತ್ತಿದೆ. ಅವುಗಳಿಂದ ಹವಾ ವಿಜ್ಞಾನಿಗಳು ಈಗಲೂ ವಿವರಗಳನ್ನು ಪಡೆಯುತ್ತಿದ್ದಾರೆ. ನಾವು ಅದೇ ರೀತಿಯ ಛಾಯಾಚಿತ್ರಗಳನ್ನು ತೆಗೆದುಕೊಳ್ಳಲಿದ್ದೇವೆ. ಆದರೆ ನಾವು ತೆಗೆದುಕೊಳ್ಳುವ ಎತ್ತರದಿಂದ ಹೆಚ್ಚಿನ ಕ್ಷೇತ್ರದ, ಪ್ರಾಯಶಃ ಅಷ್ಟೇ ಸ್ಪಷ್ಟ ವಿವರಗಳ ಛಾಯಾಚಿತ್ರ ಲಭಿಸಬಹುದಾಗಿದೆ. ಹವಾ ವಿಜ್ಞಾನಿಗಳು ಅಷ್ಟೇ ಎತ್ತರದಿಂದ ನಿಂಬಸ್ ಉಪಗ್ರಹ ತಗೆದು ಕಳುಹಿಸಿನ ಛಾಯಾಚಿತ್ರಗಳೊಡನೆ ನಾವು ತಗೆಯಲಿರುವ ಛಾಯಾಚಿತ್ರಗಳನ್ನು ಹೋಲಿಸಿ ನಿಂಬಸ್ ಚಿತ್ರಗಳಲ್ಲಿ ಏನಾದರೂ ನ್ಯೂನವಾಗಿತ್ತೇ ಹೇಗೆ ಎಂಬುದನ್ನು ತಿಳಿಯಬಲ್ಲರು.

ಕಡೆಯದಾಗಿ ನಾವು ಅತ್ಯುನ್ನತ ಎತ್ತರಕ್ಕೆ ಹೋದ ಫಲವಾಗಿ ಆಯೊನೊಸ್ಫಿಯರ್ ಪ್ರಯೋಗ ನಿಲಕರಣೆಯಿಂದ ಪಡೆಯಲಾಗುವ ಹೆಚ್ಚಿನ ಜ್ಞಾನವನ್ನು ಕುರಿತು ಹೇಳಬಹುದು. ಈ ವಿಷಯವನ್ನು ಕಡೆಯದಾಗಿ ಪ್ರಸ್ತಾಪಿಸಿದ್ದರೂ ಈ ಪ್ರಯೋಗದ ಫಲ ಅಲ್ಪವಲ್ಲ. ಕಕ್ಷೆಯಲ್ಲಿದ್ದ ವಾಹಕವೊಂದು ಒಬ್ಬ ಯೋಧ ಆಯೊನೊಸ್ಫಿಯರ್ ಪರೀಕ್ಷೆಯನ್ನು ಬಳಸಿಕೊಳ್ಳ ನಡೆಸಲಾಗುವುದು. ಆದರೆ ಈ ಮುಂಚೆ ಅಯಾನ್ (ವಿದ್ಯುತ್ ಪ್ರೇರಿತ ಕಣ) ಸಾಂದ್ರತೆಗಳನ್ನು ಇಂತ ಗರಿಷ್ಠ ಎತ್ತರಗಳಲ್ಲಿ ಮೈಲಿಯ ಪಟ್ಟಿಗಳಲ್ಲಿ ಅಳೆದಿಲ್ಲ.



ಚಂದ್ರಗ್ರಹದ ಕಡೆಗೆ ಏಕಕಾಲಿಕ ಗಗನ ಹಾರಾಟ



ಕೃಷಿಕ ರಂಗ

ಒಳ್ಳೇ ಗೊಬ್ಬರದಿಂದ ಉತ್ತಮ ಫಸಲು

ಬರೆದವರು

ಶ್ರೀ ನಯಂಪಳ್ಳಿ ರಾಮರಾವ್

ಉತ್ತಮವಾಗಿ ಫಸಲು ಬರಬೇಕಾದರೆ ಒಳ್ಳೇ ಗೊಬ್ಬರವನ್ನು ಕಾಲಕಾಲಕ್ಕೆ ಸರಿಯಾಗಿ ತಕ್ಕ ಪ್ರಮಾಣದಲ್ಲಿ ಹಾಕುವುದು ಅಗತ್ಯ. ಆದ್ದರಿಂದ ಪ್ರತಿಯೊಬ್ಬ ಕೃಷಿಕನು ಗೊಬ್ಬರಗಳ ವಿಚಾರವನ್ನೂ ಅವುಗಳ ಉಪಯೋಗವನ್ನೂ ಪ್ರಯೋಗವನ್ನೂ ಸರಿಯಾಗಿ ತಿಳಿದುಕೊಳ್ಳಬೇಕು. ಅದಕ್ಕಾಗಿ ಈ ಲೇಖನದಲ್ಲಿ ಗೊಬ್ಬರಗಳ ವಿಚಾರ ವಿವರಿಸಿದ್ದೇನೆ.

ಈಗಿನ ಕಾಲದಲ್ಲಿ 6 ಸಾಲು ಉಳುವುದೇ ಕಷ್ಟವಾಗಿದೆ. ಆದರೂ ನಿಮಗೆ ಅನುಕೂಲವಿದ್ದರೆ 8 ಸಾಲು ಉಳುವುದು ಉತ್ತಮ. ಮಳೆ ಬಿದ್ದೊಡನೆ ನೀರಿಲ್ಲದ ಗದ್ದೆಯನ್ನು ಉತ್ತು ಹುಡಿಮಾಡಬೇಕು. ಆ ಮೇಲೆ ಅದರ ಮೇಲೆ ಒಂದು ಎಕ್ರೆಗೆ 3 ಗೋಣಿ ಅಥವಾ ಸುಮಾರು 110 ಪೌಂಡು 'ಕುಮಾಯಿ' ಎನ್ನುವ ಸುಣ್ಣದ ಹುಡಿಯನ್ನು ಹಾಕಬೇಕು. ಇದರಿಂದಾಗಿ ಮಣ್ಣಿನಲ್ಲಿರುವ ಒಂದು ರೀತಿಯ ಕ್ರಿಮಿಯು ನಾಶವಾಗುವುದು. ಎರಡು ವರ್ಷಕ್ಕೊಮ್ಮೆ 1500 ಪೌಂಡು ಕುಮಾಯಿ ಹಾಕಬೇಕೆಂದು ಪುಸ್ತಕಗಳಲ್ಲಿ ಹೇಳಿದೆ. ಅದಕ್ಕೆ ರೂ. 75 ಬೇಕಾದೀತು. ಅಷ್ಟು ಅಗತ್ಯವಿಲ್ಲ. ಅದು ಸಾಧ್ಯವೂ ಇಲ್ಲ. ಆದ್ದರಿಂದ ನನ್ನ ಅನುಭವದಂತೆ, ಪ್ರತಿ ಎಣೇಲು ಬೆಳೆಗೆ 3 ಗೋಣಿ ಹಾಕಿದರೆ ಸಾಕು. ಸಾಧ್ಯವಿರುವವರು 6 ಗೋಣಿ ಸುಣ್ಣ ಹಾಕಬಹುದು. ಇದಕ್ಕಾಗಿ ಹೆಚ್ಚೆಂದರೆ ರೂ. 7.50 ಖರ್ಚು ಆದೀತು. ನಿಮ್ಮ ಗದ್ದೆಗಳಲ್ಲಿ ಪೈರಿನ ದಂಟಿಗೆ ಅಂಟುವ "ಕಾಳ"ವೆಂಬ ಕ್ರಿಮಿಯು ಬಾಧೆಯಿದ್ದರೆ 4 ಯಾ 6 ಗೋಣಿ ಸುಣ್ಣ ಹಾಕಲೇಬೇಕು. ಹೀಗೆ ಸುಣ್ಣವನ್ನು 8 ಯಾ 10 ದಿನಗಳಿಗೊಮ್ಮೆ ಹಾಕುತ್ತಿರಬೇಕು. ಇದರಿಂದ ಗದ್ದೆಯ ಮಣ್ಣಿನಲ್ಲಿ ಸುಣ್ಣವು ಸರಿಯಾಗಿ ಮಿಶ್ರವಾಗಿ ಮಣ್ಣಿನಲ್ಲಿರುವ ಕ್ರಿಮಿಗಳು ನಾಶವಾಗುವುದು. ನೇಜಿಯ ದಂಟಿನಲ್ಲಿ ಕಾಣಿಸುವ ಈ ಕ್ರಿಮಿಗಳನ್ನು ನೀವು ಸುಲಭದಲ್ಲಿ ಕಂಡುಕೊಳ್ಳಬಹುದು. ಅದು ತಾಗಿದಲ್ಲಿ ಉರುಟಾದ ಕಲೆ ಕಾಣುತ್ತದೆ. ಅಂತಹ ನಾಲ್ಕಾರು ನೇಜಿಗಳನ್ನು ಕಿತ್ತು ನೋಡಿದರೆ, ಕೊಳೆತ ಮೀನಿನ ವಾಸನೆ ಬರುವುದನ್ನು ತಿಳಿಯಬಹುದು. ಈ ಮೊದಲು ಹಾಕಿದ ಸುಣ್ಣದಿಂದ ಈ ಕ್ರಿಮಿ ರೋಗ ಹೋಗದಿದ್ದರೆ ಇನ್ನಷ್ಟು ಸುಣ್ಣ ಹಾಕುವುದರಿಂದ ಈ ರೋಗವು ನಾಶವಾದೀತು. ನೇಜಿಯು ಹುಲುಸಾಗಿ ಬೆಳೆಯುವುದು.

ಈಗಿನ ಪುಸ್ತಕಗಳಲ್ಲಿ ಒಂದು ಎಕ್ರೆ ಗದ್ದೆಗೆ 5000 ಪೌಂಡುಗಳಷ್ಟು ಸೊಪ್ಪು ಗೊಬ್ಬರ ಹಾಕಬೇಕೆಂದು ಹೇಳಿದೆ. ನಮ್ಮ ರೈತರು ಇಷ್ಟು ಸೊಪ್ಪು ಹಾಕುವುದಿಲ್ಲ. ನಮ್ಮ ರೈತರು ತಮ್ಮ ಸೊಪ್ಪು ಗೊಬ್ಬರವನ್ನು ಸರಿಯಾಗಿ ಇಟ್ಟುಕೊಳ್ಳದ್ದರಿಂದ ಅದರಲ್ಲಿ ಸಾರ ಕಡಿಮೆಯಾಗುತ್ತದೆ. ಆದರಿಂದ ಅಷ್ಟು ಫಲಕೊಡುವುದಿಲ್ಲ. ಸಾಮಾನ್ಯವಾಗಿ ಒಂದು ಕುಕ್ಕೆಯಲ್ಲಿ 50 ಪೌಂಡು ಗೊಬ್ಬರ ಹಿಡಿಯುತ್ತದೆ. 20 ಸೆಂಟ್ಸ್ ಗದ್ದೆ 20 ಕುಕ್ಕೆ ಗೊಬ್ಬರ ಹಾಕಿದರೆ ಸಾಕು. ಇದರಂತೆ ಒಂದು ಎಕ್ರೆಗೆ 100 ಕುಕ್ಕೆ ಹಾಕಿದರೆ ಸಾಕಾಗುತ್ತದೆ. ಹೆಚ್ಚು ಗೊಬ್ಬರ ಹಾಕಿದರೆ, ಪೈರು ಸೊಕ್ಕುವುದೇ ಹೊರತು ಫಸಲು ಹೆಚ್ಚಾಗುವುದಿಲ್ಲ. ಸೊಕ್ಕಿ ಬೆಳೆದುದರಿಂದ ಪೈರು ಬಿದ್ದು ಹಾಳಾಗುತ್ತದೆ. ಇದನ್ನು ರೈತರು ನನಪಿನಲ್ಲಿ ಇಡಬೇಕು.

ಅಮೋನಿಯಮ್ ಸಲ್ಫೇಟು, ಯೂರಿಯ, ಸುಫರ್ ಫೋಸ್—ಇವುಗಳನ್ನು ಕೃತಕ ಗೊಬ್ಬರ ಅಥವಾ ರಾಸಾಯನಿಕ ಗೊಬ್ಬರವೆಂದು ಹೇಳುತ್ತಾರೆ. ಈಗ ಇವುಗಳ ವಿಚಾರ ಮಾಡುವ. ಒಂದು ಎಕ್ರೆಗೆ 30 ಪೌಂಡು ನೈಟ್ರೋಜಿನ್ ಸಾಕೆಂದು ನನ್ನ ಅನುಭವವಾಗಿದೆ, ಆದ್ದರಿಂದ ಒಂದು ಎಕ್ರೆಗೆ 150 ಪೌಂಡು ಅಥವಾ 70 ಕಿಲೋಗಳಷ್ಟು ಎಮೋನಿಯಮ್ ಸಲ್ಫೇಟು ಅಥವಾ 30 ಕಿಲೋಗಳಷ್ಟು ಯೂರಿಯ ಬೇಕಾಗುವುದು. ಈ ಕೃತಕ ಗೊಬ್ಬರಗಳು ಅಪಾಯಕಾರಿ ಎಂದು ಕೆಲವರ ಅಭಿಪ್ರಾಯವಾಗಿದೆ. ಇದು ಸರಿಯಲ್ಲ. ಹಾಗೆ ಹೇಳುವವರು ಬುದ್ಧಿ ಕಡಿಮೆಯುಳ್ಳವರು. ಅಲ್ಪ ಬುದ್ಧಿಯು ಯಾವಾಗಲೂ ಅಪಾಯ. ಎಡೆಬಿಡದೆ ಮೂರು ವರ್ಷಗಳಲ್ಲೂ ಈ ಕೃತಕ ಗೊಬ್ಬರ ಹಾಕಿದರೆ ಯಾವ ಬೆಳೆಯು ಬೆಳೆಯುವಂತಿಲ್ಲ. ಕೃತಕ ಗೊಬ್ಬರಗಳೆಂದರೆ ಬರೇ ಉತ್ತೇಜನಕಾರಿ ಮದ್ದುಗಳು. ಕಠಿಣ ಕಾಯಿಲೆ ಆದವನಿಗೆ ಇಂಜಕ್ಷನ್ ಕೊಡುವಂತೆ ಈ ಕೃತಕ ಗೊಬ್ಬರಗಳು. ಬರೇ ಇಂಜಕ್ಷನ್‌ಗಳಿಂದ ಮನುಷ್ಯನು ಜೀವಿಸಲಾರ. ಕಾರಣ ಮದ್ದು ಆಹಾರವಲ್ಲ. ದೇಹ ಬೆಳೆಯಲು ಪೌಷ್ಟಿಕ ಆಹಾರ ತಿನ್ನಬೇಕು. ಹಾಗೆಯೇ ಗದ್ದೆಗಳಲ್ಲಿ ಒಳ್ಳೆ ಬೆಳೆ ಬರಬೇಕಾದರೆ ಆಹಾರದಂತಿರುವ ಸೊಪ್ಪು ಗೊಬ್ಬರ ಹಾಕುತ್ತಿರಬೇಕು. ಈ ಮುಖ್ಯ ವಿಚಾರವನ್ನು ಕೃಷಿಕರು ಮರೆಯಬಾರದು.

ಕೃತಕ ಗೊಬ್ಬರವನ್ನು ಒಮ್ಮೆಲೇ ಹಾಕುವುದು ಒಳ್ಳೇದಲ್ಲ. ಸ್ವಲ್ಪ ಸ್ವಲ್ಪವಾಗಿ ಮೂರು ಸಲ ಹಾಕುವುದು ಉತ್ತಮ. ಹೊಲವನ್ನು ಉತ್ತು, ಹಲಗೆ ಎಳೆದ ಮೇಲೆ ಮೊದಲನೆಯ ಸಲ ಸುಮಾರು 23 ಪೌಂಡುಗಳಷ್ಟು ಎಮೋನಿಯಮ್ ಸಲ್ಫೇಟು ಹಾಕಬೇಕು. ಮತ್ತೆ ಮೂರನೆ ಒಂದಂಶವನ್ನು ಮೊದಲ ಸಲ ಕೈಯಿಂದ ಒಳ ಉಳುಮೆ ಮಾಡುವಾಗ ಹಾಕಬೇಕು. ಉಳಿದುದನ್ನು 30 ದಿನಗಳ ಮೇಲೆ ಯಂತ್ರದಿಂದ ಒಳ ಉಳುಮೆ ಮಾಡುವಾಗ ಹಾಕಬೇಕು. ಮೂರನೆಯ ಸಲ ಗೊಬ್ಬರ ಹಾಕುವಾಗ ಬೆಳೆಯನ್ನು ನೋಡಿಕೊಂಡು ಸ್ವಲ್ಪ ಹೆಚ್ಚು ಕಡಿಮೆ ಮಾಡಬೇಕಾಗುತ್ತದೆ. ಬೆಳೆಯು ಚೆನ್ನಾಗಿ ಬೆಳೆದಿದ್ದರೆ ಗೊಬ್ಬರವನ್ನು ನಾನು, ಕಡಿಮೆ ಮಾಡುತ್ತೇನೆ.

ಸುಫರ್ ಫೋಸ್‌ನ ವಿಚಾರದಲ್ಲಿ ನನಗೇ ಸಂದೇಹವುಂಟಾಗಿದೆ. ತೆಂಗಿನ ಮರಗಳಿಗೆ ಹಾಕಿದರೆ ಅದರ ಫಲವು ಆಶ್ಚರ್ಯವನ್ನುಂಟುಮಾಡುತ್ತದೆ. ಆದ್ದರಿಂದ ಅದರ ವಿಚಾರದಲ್ಲಿ ಉಪಯೋಗಿಸಿ, ಅನುಭವದಿಂದ ನಿರ್ಧಾರ ಮಾಡಬೇಕು. ಆ ಕೆಲಸ ಕೃಷಿಕರು ಸ್ವತಹ ಮಾಡಬೇಕು. ಒಂದು ಎಕ್ರೆಗೆ ಸುಮಾರು 40 ಕಿಲೊ ಸುಫರ್ ಫೋಸ್ ಸಾಕಾಗಬಹುದು. ಇದನ್ನು ಸುಣ್ಣದ ಜೊತೆಯಲ್ಲಾಗಲೀ, ನೀರು ನಿಲ್ಲಿಸಿ ಎರಡನೇ ಸಲ ಉಳುವಾಗ ಆಗಲೀ ಹಾಕಬೇಕು.

ಮೂರನೆಯದಾಗಿ, ಪೊಟೇಶ್ ಅಥವಾ ಬೂದಿಯ ವಿಚಾರವನ್ನೂ ನೀವು ತಿಳಿಯಬೇಕು. ಈಗ ಬೂದಿಯನ್ನು ನಡುವಾಗ ಹಾಕುವುದು ವಾಡಿಕೆಯಾಗಿದೆ. ನಮ್ಮಲ್ಲಿ ಬೂದಿ ಹಾಕುವುದು ದುಡ್ಡನ್ನು ಹೊಂದಿಕೊಂಡಿದೆ. ಇರುವವರು ಸ್ವಲ್ಪ ಹೆಚ್ಚು ಹಾಕುತ್ತಾರೆ. ಆದರೆ ಒಂದು ಎಕ್ರೆಗೆ 20ರಿಂದ 40 ಕುಕ್ಕೆಗಳಷ್ಟು ಬೂದಿ ಹಾಕಿದರೆ ಸಾಕು, ನಾನು ಬರೇ 15 ಕುಕ್ಕೆಗಳಷ್ಟು ಉಪಯೋಗಿಸುತ್ತೇನೆ. ಇಲ್ಲಿ ನಾನು ಜಪಾನು ಕ್ರಮವನ್ನು ಅನುಸರಿಸುತ್ತೇನೆ, ನೇಜಿ ನಡುವಾಗ 3 ಕುಕ್ಕೆಗಳಷ್ಟು, 20ನೇ ದಿನದಲ್ಲಿ 4 ಕುಕ್ಕೆಗಳಷ್ಟು ಮತ್ತು 60ನೇ ದಿನದಲ್ಲಿ ಅಥವಾ ಪೈರಿನ ತೆನೆಯೊಡೆಯುತ್ತಿರುವಾಗ 4 ಕುಕ್ಕೆಗಳಷ್ಟು— ಈ ರೀತಿಯಲ್ಲಿ ನಾನು ಬೂದಿ ಹಾಕುತ್ತೇನೆ. ಹೆಚ್ಚು ದಿನಗಳ ಬೆಳೆಯಾದರೆ ನೇಜಿ ನೆಡುವಾಗ 3 ಕುಕ್ಕೆಗಳು, ಅನಂತರ 4 ಕುಕ್ಕೆಗಳಂತೆ 25ನೇ, 30ನೇ ಮತ್ತು 70ನೇ ದಿನಗಳಲ್ಲಿ ಹಾಕಬೇಕು. ಇದರಿಂದಾಗಿ ಜಳ್ಳು ನಾಶವಾಗುವುದು. ಹೀಗೆ ಮಾಡುವುದರಿಂದ ನಮ್ಮ ಅತಿಕಾರಿ ಬೀಜವು ಇನ್ನಷ್ಟು ಉತ್ತಮವಾಗುವುದು. ನಮ್ಮ ಜನರು ಇನ್ನೂ ನಂಬುತಿದ್ದಾರೆ. ಸತ್ವದ ಬೆಳೆ" ಎಂದು ಗೌರವಿಸುತಿದ್ದಾರೆ. ಅವರು ಆ ನಂಬಿಗೆಯನ್ನು ಬಿಡಬೇಕೆಂದೇ ನನ್ನ ಆಶೆ.

ಕೃತಕ ಗೊಬ್ಬರ ಹಾಕಿದ ಕೂಡಲೇ ನೀರು ಬಿಡಬಾರದು. ಇದು ಅತಿ ಮುಖ್ಯವಾದುದು. ಇದನ್ನು ಯಾರೂ ಮರೆಯಬಾರದು. ಮಣ್ಣಿನಲ್ಲಿ ನೈಟ್ರೋಜನ್ ನೆಲೆಯಾಗಿ ನಿಲ್ಲುವುದಕ್ಕೆ 36 ಗಂಟೆಗಳು ಬೇಕಾಗುತ್ತವೆ. ಆ ಮೇಲೆ ಬೇಕಾದರೆ ನೀರು ಬಿಡಬಹುದು.

ಈ ಬರಹಗಳನ್ನು ಓದಿದ ರೈತರಲ್ಲಿ ಸಂದೇಹವುಂಟಾಗಿದ್ದರೆ, ದಯವಿಟ್ಟು ಬರೆಯಿರಿ. ನಾನು ಸಮರ್ಪಕ ಉತ್ತರ ಬರೆಯುತ್ತೇನೆ.

(ಗಾಂವ್ ಸೇವಕದ ಕೃಪೆಯಿಂದ).

ಇದೀಗ ನೆನಪಾಗುವುದೇ?

(ಏಳನೇ ಪುಟದಿಂದ)

ಸುಟ್ಟು ಭಸ್ಮೀಭೂತವಾದಾವೆಂದು ಕಾಂಗ್ರೆಸ್ಸಿಗರು ಭಾವಿಸಿಕೊಂಡಿರಬಹುದು. ಆದರದು ಅವರ ಪಾಲಿಗೆ ಗಗನ ಕುಸುಮವೇ ಸರಿ. ಆ ಕಿಚ್ಚು ಕಾಂಗ್ರೆಸ್ಸನ್ನೇ ಆಹುತಿ ತೆಗೆದುಕೊಂಡರೂ ಆಶ್ಚರ್ಯಪಡುವಂತಿಲ್ಲ, ಕಾಲ ಆ ರೀತಿ ಇದೆ.

ಚುನಾವಣಾ ರಂಗದಲ್ಲಿ ವಿಜಯ ಪಡೆಯಲು ಕಾಂಗ್ರೆಸ್ಸು ಗೋವಂಶದ, ಬಡ ರೈತನ ಆರಾಧನಾ ದೈವ ಜೋಡೆತ್ತುಗಳನ್ನು ಚಿಹ್ನೆಯಾಗಿ ಉಪಯೋಗಿಸಿಕೊಂಡು ಬರುತ್ತಿದೆಯಲ್ಲವೆ, ಲೋಕಮಾನ್ಯ ಬಾಲಗಂಗಾಧರ ಟಿಳಕ— ಮದನಮೋಹನ ಮಾಳವೀಯ – ಲಾಲಾಲಜಪತರಾಯ್—ಭಗತ್ ಸಿಂಘ—ಮಹಾತ್ಮ ಗಾಂಧೀಜೀ.... ಮುಂತಾದವರ ಹೆಸರುಗಳನ್ನು ಉಪಯೋಗಿಸಿಕೊಳ್ಳುತ್ತಿರುವಂತೆ ಇದೀಗ ಚಂದಶೇಖರಮಣ ಪಿಳ್ಳೆಯವರ ಅಸ್ಥಿಯನ್ನೂ ಉಪಯೋಗಿಸಿಕೊಂಡಿದೆನ್ನದಿರಲು ಸಾಧ್ಯವೇ ಇರುವದಿಲ್ಲ.

ದಯಮಾಡಿ ವಿಚಾರಿಸಿರಿ

ಶಾಲೆಗಳಿಗೆ ಬೇಕಾಗುವ

ರಿಜಿಸ್ತ್ರಿ, ಫಾರ್ಮುಗಳಿಗೆ—

ವ್ಯಾಪಾರಿಗಳಿಗೆ ಬೇಕಾಗುವ

ವರ್ಗ, ಊಳಿಗ ಮೊದಲಾದ

ಎಕೌಂಟು ಪುಸ್ತಕಗಳಿಗೆ—

ಕೋರ್ಟುಗಳಿಗೆ ಬೇಕಾಗುವ ಎಲ್ಲಾ ತರದ

ಫಾರ್ಮುಗಳಿಗೆ ವಿಚಾರಿಸಿರಿ

ನವಯುಗ ಪ್ರೆಸ್

ಮುದ್ರಕರು ಮತ್ತು ಪ್ರಕಾಶಕರು,

ಪಾಲುಕೋಟೆ, ಉಡುಪಿ, ದ. ಕನ್ನಡ.

ಕಾರ್ಕಳ ಮುನ್ಸಿಫ್ ಕೋರ್ಟಿನಲ್ಲಿ

S.C. 205/1966.

ದೂದಪ್ಪ ಶಾನಭಾಗ —ವಾದಿ

ಮತ್ತು

ಸುಬ್ಬಂಣ ಶಾನುಭಾಗ — ಪ್ರತಿವಾದಿ

ಸದ್ರಿ ದಾವೆಯ ಪ್ರತಿವಾದಿ ಕಾರ್ಕಳ ತಾಲ್ಲೂಕು ತೆಂಕ ಮಿಜಾರು ಗ್ರಾಮದ ಮಂಗಿಬೆಟ್ಟು ಮನೆಯ ಶ್ಯಾಮಯ್ಯ ಶ್ಯಾನುಭಾಗರ ಮಗ ಸುಬ್ಬಂಣ ಶ್ಯಾನುಭಾಗರಿಗೆ:—

ವಾದಿಯು ಪ್ರೊಮಿಸರಿ ನೋಟಿನ ಬಾಬ್ತು ರೂ. 413—70 ದರ ಹೊಡಿಕೊಳ್ಳುವರೆ ದಾಖಲು ಮಾಡಿದ ಮೇಲ್ಕಂಡ ದಾವೆಯು ನಿಮ್ಮ ಹಾಜರಾತಿ ಬಗ್ಗೆ ತಾ. 5—10—1966ಕ್ಕೆ ಇಟ್ಟಿರುವದರಿಂದ ನೀವು ಸದ್ರಿ ದಿನ ಪೂರ್ವಾಹ್ನ ಘಂಟೆ 11ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ಹಾಜರಾಗಿ ಉದಹರಿಸತಕ್ಕದ್ದು. ತಪ್ಪಿದಲ್ಲಿ ಏಕ ಪಕ್ಷವಾಗಿ ತೀರ್ಮಾನಿಸಲಾಗುವುದು.

K. S. Hegde

ವಾದಿ ಕಡೆ ಎಡ್ವೊಕೇಟ್.

Karkala, 14—9—1966.

ಶಾಕುಂತಲದ ನಾಲ್ಕು ಶ್ಲೋಕಗಳು

(ಆರನೇ ಪುಟದಿಂದ)

ಭೂಯಿಷ್ಠ ಭವ ದಕ್ಷಿಣಾ ಪರಿಜನೇ
ಭಾಗ್ಯೇಷ್ವನುತ್ಸೇಕಿನೀ
ಯಾಂತ್ಯೇವಂ ಗೃಹಿಣೀಪದಂ ಯುವತಯೋ ವಾಮಾಃ ಕುಲಸ್ಯಾಧಯಃ"||

"ಮಗಳೆ, ನೀನು ಪತಿಯ ಮನೆಯನ್ನು ಸೇರಿ ಹಿರಿಯರ ಸೇವೆಯನ್ನು ಮಾಡು. 'ರಾಜಾನೋ ಬಹುವಲ್ಲಭಾ' ಎಂಬಂತೆ ರಾಜನಿಗೆ ಇನ್ನೂ ಹಲವಾರು ಪತ್ನಿಯರಿರಬಹುದು. ಆ ಸವತಿಯರೊಡನೆ ನೀನು ಇಷ್ಟವಯಸ್ಯೆಯಾಗಿರು, ಅವರೊಡನೆ ದ್ವೇಷವನ್ನು ಸಾಧಿಸದಿರು. ಏನಾದರೊಂದು ಅಲ್ಪ ಕಾರಣಕ್ಕಾಗಿ ಪತಿಯು ಸಿಟ್ಟುಗೊಳ್ಳಬಹುದು. ಈ ಕಾರಣಕ್ಕಾಗಿ ನೀನೂ ಸಿಟ್ಟುಗೊಳ್ಳಬಾರದು. ಕ್ಷುಲ್ಲಕ ಕಾರಣಕ್ಕಾಗಿ ನೀನು ಪ್ರತಿಕೂಲೆಯಾಗಬೇಡ. ಚಕ್ರವರ್ತಿಯು ದೇವರ ಅವತಾರವೆಂಬ ಅಭಿಪ್ರಾಯವಿದೆ. ಅಂತಹ ಚಕ್ರವರ್ತಿಯ ಸತಿಯಾದ ನೀನು ಪರಿಜನರನ್ನು ಪರಿಪಾಲಿಸಬೇಕು. ನಿನ್ನಿಂದ ಕೈಲಾದ ಸಹಾಯವನ್ನು ಮಾಡಲು ನೀನು ಹಿಂಜರಿಯಬೇಡ. ಭಾಗ್ಯ ಬಂದಾಗ ಹಿಗ್ಗಬೇಡ; ದುಃಖ ಬಂದಾಗ ಕುಗ್ಗಬೇಡ. ಯಾವಾಗಲೂ ನಿಶ್ಚಲಚಿತ್ತಳಾಗಿರಬೇಕು. ಹೆಣ್ಣು ಮಕ್ಕಳು ಈ ಮಟ್ಟದಲ್ಲಿದ್ದರೆ ಹೆತ್ತ ಹಾಗೂ ಹೊಕ್ಕ ಎರಡು ಮನೆಗಳಿಗೂ ಕೀರ್ತಿಯನ್ನುಂಟುಮಾಡುವರು; ಬೆಳಕನ್ನೀಯುವರು. ಹೀಗಿಲ್ಲವಾದರೆ ಎರಡು ಮನೆಗಳಿಗೂ ಒರಲೆಯಾಗುವುದು"— ಹೀಗೆ ಕಣ್ವರು ಗೃಹಿಣೀ ಧರ್ಮವನ್ನು ಶಕುಂತಳೆಗೆ ಬೋಧಿಸುವರು. ಈ ರೀತಿಯ ಬೋಧನೆಗಳು 'ರಿಜಿಸ್ಟರ್ ವಿವಾಹ' ಯುಗದ ನಮಗೆ ಅನಾವಶ್ಯಕವೂ ಹಾಸ್ಯಾಸ್ಪದವೂ ಆಗಿ ಕಾಣಬಹುದು. ಆದರೂ ಹಿಂದಿನ ಸಂಸಾರ ಧರ್ಮ, ದಾಂಪತ್ಯ ಧರ್ಮ ಇದರಿಂದ ತಿಳಿದು ಬರುತ್ತದೆ. ಪತಿಯು ಸಿಟ್ಟುಗೊಂಡಾಗ ತವರುಮನೆಗೆ ಮರಳಿ ಬರಬೇಕೆಂದು ಕಣ್ವರು ಬೋಧಿಸಲಿಲ್ಲ. ಪತಿಯು ಅಲ್ಪಕಾರಣಕ್ಕಾಗಿ ಸಿಟ್ಟುಗೊಂಡರೆ ಅದನ್ನು ಸಹನೆಯಿಂದ ತಾಳಬೇಕು ಎಂಬುದಾಗಿ ಹೇಳಿದರು. ಇದೇ ಅರ್ಥ ಬರುವ ಜಾನಪದ ಗೀತವೊಂದು ಹೀಗಿದೆ:—

"ಅತ್ತೆಯ ಮನೆಯಲ್ಲಿ ಮುತ್ತಿನಂತಿರಬೇಕು |
ಹೊತ್ತಾಗಿ ನೀಡಿದರೂ ಉಣಬೇಕು
ಹೊತ್ತಾಗಿ ನೀಡಿದರೂ ಉಣಬೇಕು| —ತವರಿಗೆ
ಉತ್ತಮ ಹೆಸರ ತರಬೇಕು||

ಕುಲಸ್ತ್ರೀಯೊಬ್ಬಳು ತನ್ನ ಗಂಡನ ಮನೆಯಲ್ಲಿ ಹೇಗೆ ವರ್ತಿಸಬೇಕೆಂಬುದು ಇದರಿಂದ ತಿಳಿದು ಬರುತ್ತದೆ. ಅತ್ತೆಯ ಮನೆಯಲ್ಲಿ ತಡವಾಗಿ ನೀಡಿದರೂ ಉಣಬೇಕು. ಸುಶೀಲೆಯರಾದ ಹೆಣ್ಣುಮಕ್ಕಳು ತಮ್ಮ ಉತ್ತಮ ವರ್ತನೆಯಿಂದ ತವರಿಗೆ ಕೀರ್ತಿಯನ್ನು ತರುವರು. ಕಣ್ವರು ಶಕುಂತಳೆಗೆ ಹೇಳಿದ 'ಯಾಂತ್ಯೇವಂ ಗೃಹಿಣೀಪದಂ ಯುವತಯೋ ವಾಮಾಃ ಕುಲಸ್ಯಾಧಯಃ' ಎಂಬ ಮಾತಿನಲ್ಲೂ ಅದೇ ಅರ್ಥವಿದೆ.

ಬುದ್ಧಿವಾದದ ಮಾತುಗಳನ್ನು ಹೇಳಿಯಾದ ತರುವಾಯ, ಬೀಳ್ಕೊಡುಗೆಯ ಮೊದಲು ಕಣ್ವರು ಶಕುಂತಳೆಯನ್ನು ಮತ್ತೊಮ್ಮೆ ಆಶೀರ್ವದಿಸುತ್ತಾರೆ; ಆಕೆಗೆ ಶುಭವನ್ನು ಕೋರುತ್ತಾರೆ. ಆ ಮಾತುಗಳು ಇಂತಿವೆ:—

ಭೂತ್ವಾ ಚಿರಾಯ ಚತುರಂತ ಮಹೀಸಪತ್ನೀ |
ದೌಷ್ಯಂತಿಮಪ್ರತಿರಥಂ ತನಯಂ ನಿವೇಶ್ಯ |
ಭರ್ತ್ರಾ ತದರ್ಪಿತ ಕುಟುಂಬ ಭರೇಣ ಸಾರ್ಧಂ
ಶಾಂತೇ ಕರಿಷ್ಯಸಿ ಪದಂ ಪುನರಾಶ್ರಮೇಽಸ್ಮಿನ್||

"ಮಗಳೆ, ನೀನು ದುಷ್ಯಂತನೊಡನೆ 'ಚತುರಂತ ಮಹೀಸಪತ್ನಿ' ಯಾಗಿ ಬಾಳು. ಪತಿಗೊಪ್ಪುವ (ಪಟ್ಟದ) ರಾಣಿಯಾಗು. ಚಕ್ರವರ್ತಿಯಾಗುವ ವೀರಪುತ್ರನೊಬ್ಬನನ್ನು ಪಡೆದು ಅವನಿಗೆ ಸಕಾಲದಲ್ಲಿ ರಾಜ್ಯಭಾರವನ್ನೊಪ್ಪಿಸಿ ವಾನಪ್ರಸ್ಥಾಶ್ರಮಕ್ಕೆ ಯೋಗ್ಯತೆಯನು ಪಡೆದ ಮೇಲೆ ಪತಿಯಾದ ದುಷ್ಯಂತನೊಡನೆ ಮರಳಿ ಇದೇ ಆಶ್ರಮಕ್ಕೆ ಬರಬಹುದು."

ವಿಮರ್ಶಕರು ನಾಲ್ಕನೆಯ ಅಂಕದ ನಾಲ್ಕು ಶ್ಲೋಕಗಳ ಕುರಿತಾಗಿ ಹೇಳಿದಾಗ ಮೊದಲ ನಾಲ್ಕು ಶ್ಲೋಕಗಳನ್ನು ಮಾತ್ರ ಗಣನೆಗೆ ತೆಗೆದು ಕೊಂಡಿದ್ದಾರೆ. ಆದರೆ ಈ ಮೇಲಿನ ಶ್ಲೋಕವೂ ಬಹಳ ಸ್ವಾರಸ್ಯವಾಗಿದೆ. ಮಾತ್ರವಲ್ಲ 'ಅಭಿಜ್ಞಾನ ಶಾಕುಂತಲ' ದಲ್ಲೇ ಇದೊಂದು ಪ್ರಸಿದ್ಧವಾದ ಶ್ಲೋಕ. ಆದುದರಿಂದ ಈ ಶ್ಲೋಕವೂ ಆ ನಾಲ್ಕುಶ್ಲೋಕಗಳ ಪಂಕ್ತಿಯಲ್ಲೇ ಸೇರತಕ್ಕದೆಂದು ಇನ್ನೂ ಕೆಲವರ ಅಭಿಪ್ರಾಯ.

ದುಷ್ಯಂತ ಶಕುಂತಳೆಯರು ಚಕ್ರವರ್ತಿಯಾಗುವ ವೀರಪುತ್ರನೊಬ್ಬನನ್ನು ಪಡೆಯಬೇಕು ಎಂಬ ಕಣ್ವರ ಕನಸು ಕಾಲಾಂತರದಲ್ಲಿ ನನಸಾಯಿತು. ಇಡೀ ದೇಶಕ್ಕೇ ಚಕ್ರವರ್ತಿಯಾಗುವ ಪುತ್ರನನ್ನು ಪಡೆದ ದುಷ್ಯಂತ ಶಕುಂತಳೆಯರೇ ಧನ್ಯರು. ಸಿಂಹದ ಬಾಯಿಯಿಂದ ಹಲ್ಲುಗಳನ್ನೆಣಿಸಿದ ಆ ವೀರಪುತ್ರನಿಂದಲೇ ನಮ್ಮ ನಾಡಿಗೆ ಭರತ ಭೂಮಿಯೆಂದು ಹೆಸರಾಯಿತು.

ಮುಖಕ್ಕೊಂದು ನಗೆಮಿಂಚನ್ನು, ಹೃದಯಕ್ಕೊಂದು ಸ್ನಿಗ್ಧತೆಯನ್ನೂ ತಂದೀಯುತ್ತಿದ್ದ ಬಳ್ಳಿಗಳು, ಶಕುಂತಳೆ ದೂರವಾಗುವಳಲ್ಲಾ ಎಂದು ಅಶ್ರುಮಿಡಿಯುತ್ತಿದ್ದ ಆಶ್ರಮವಾಸಿಗಳು, ಶಕುಂತಳೆಯಲ್ಲಿ ಕಣ್ವರಿಗಿರುವ ವಾತ್ಸಲ್ಯ, ದೂರ್ವಾಸರ ಶಾಪವನ್ನರಿತಿದ್ದ ಅನಸೂಯೆ, ಪ್ರಿಯಂವದೆಯರಿಗೆ ತನ್ನ ಆಪ್ತ ಸಖಿಗೆ ಏನಾಗುವುದೋ ಎಂಬ ಶಂಕೆ—ಭೀತಿ, ತಮಗೆ ನೀರೆರೆದು ಪೋಷಿಸುತ್ತಿದ್ದ ತಾಯಿ ಶಕುಂತಳೆಯ ವಾತ್ಸಲ್ಯ ಇನ್ನಿಲ್ಲವಲ್ಲ ಎಂಬ ಮರಗಿಡಬಳ್ಳಿಗಳ ಕೊರಗು, ವ್ರಣಹರಣ ತೈಲವನ್ನೆರೆದು, ಮಧುರವಾದ ತಿನಸನ್ನಿತ್ತು ಉಪಚರಿಸುತ್ತಿದ್ದ ದಾದಿ—ಶಕುಂತಳೆಯ ಆಸರೆ ತಪ್ಪಿತಲ್ಲಾ ಎಂದು ಮರಿಕೆಗೆ ದುಗುಡ—ಇವೆಲ್ಲವೂ ನಾಲ್ಕನೆಯ ಅಂಕದಲ್ಲಿ ಕರುಣರಸವು ಮಡುಗಟ್ಟುವಂತೆ—ಮಾಡಿವೆ— ಈ ಹಿನ್ನೆಲೆಯಲ್ಲಿ ಶಕುಂತಳೆಗೆ ತಂದೆಯೂ, ತಾಯಿಯೂ, ಆಗಿ ಸಲಹುತ್ತಿದ್ದ ಕಣ್ವರ ಕಳವಳ, ಆಶಯ, ಸದೇಶ, ಉಪದೇಶ—ಇವೆಲ್ಲವೂ ನಮಗೆ ಪರಿಚಿತವಾದ ಸಂಸಾರ ಚಿತ್ರವನ್ನು ಕಣ್ಣಿಗೆ ಕಟ್ಟುತ್ತವೆ, ಮನಸ್ಸನ್ನು ಮುಟ್ಟುತ್ತವೆ—ಇಂತಹ ಕವಿ ಧನ್ಯ! ಎಂದು ಉದ್ಗರಿಸುವಂತೆ ಮಾಡುತ್ತವೆ.

ಕನ್ನಡದಲ್ಲಿ ಬೆಳಕಿಗೆ ಬಾರದಿರುವ ಭಾರತೀಯ ವೀರ ರಮಣೀಯರ ದಿಟ್ಟೆದೆಯ ಸಾಹಸಮಯ ಜೀವನ-ಘಟನೆಗಳು!

ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿ, ಅಬಲೆಯರು ಸಬಲವಾದ ನಾರೀಶಕ್ತಿಯನ್ನು ಪ್ರದರ್ಶಿಸಿದ ರೀತಿ-ನೀತಿಯ ನವೀನ ಐತಿಹಾಸಿಕ ಗ್ರಂಥ!

ಕಲಾತ್ಮಕ ರಕ್ಷಾಕವಚ ಬೆಲೆ: ರೂ. 1—50

ನವಯುಗ ಪ್ರೆಸ್, ಉಡುಪಿ — ಅಥವಾ — ನವಭಾರತ ಪುಸ್ತಕ ಭಂಡಾರ, ಉಡುಪಿ

ನವಯುಗಕ್ಕೆ

ಚಂದಾದಾರರಾಗಿ ಪ್ರೋತ್ಸಾಹಿಸಿರಿ.

ವಾರ್ಷಿಕ ಚಂದಾ ರೂ. ೧೦

ವಿಶ್ವದ ಯಕ್ಷ ಪ್ರಶ್ನೆ — ಜನಸಂಖ್ಯಾ ಸಮಸ್ಯೆ

(ಐದನೇ ಪುಟದಿಂದ)

ಬಹುದು? ವಿಶ್ವ ಸಂಸ್ಥೆಯವರು ಈ ಪ್ರಶ್ನೆಗೆ ಉತ್ತರವನ್ನು ಹುಡುಕುತ್ತಿದ್ದಾರೆ. ಅವರ ಅಭಿಪ್ರಾಯದ ಪ್ರಕಾರ ವಿಶ್ವದ ಜನಸಂಖ್ಯೆ ಈಗಿನ ಪ್ರಮಾಣದಲ್ಲೇ ಹೆಚ್ಚುತ್ತ ನಡೆದರೆ; ಕ್ರಿ. ಶ. ೨೦೦೦ದ ವೇಳೆಗೆ ೬.೪ ಶತಕೋಟಿ ಯಷ್ಟಾಗುತ್ತದೆ. ಈ ದಿನ ಇನ್ನೂ ಬಹಳ ದೂರವಿಲ್ಲ. ಕೇವಲ ಮೂವತ್ನಾಲ್ಕು ವರ್ಷಗಳು ಉಳಿದಿವೆ!

ಜನನ ಪ್ರಮಾಣ

ವಿಶ್ವದಲ್ಲಿ ಈಗ ಪ್ರತಿ ವರ್ಷ ೧೨೦ ದಶಲಕ್ಷ ಮಕ್ಕಳು ಜನಿಸುತ್ತಿವೆ. ಎರಡು ಮಕ್ಕಳು ಜನಿಸಿದಾಗ ಒಂದು ಮಗು ಸಾಯುತ್ತದೆ. ಅಂದರೆ, ಜನನ ಮತ್ತು ಮರಣ ೨:೧ ಎಂದಾಯಿತು. ವಿಶ್ವದಲ್ಲಿ ಪ್ರತಿ ವರ್ಷ ೬೦ ದಶಲಕ್ಷ ಮಕ್ಕಳು ಜನಿಸುತ್ತವೆ. ಇದೇ ಜನನ ಪ್ರಮಾಣವನ್ನೇ ಆಧಾರವಾಗಿಟ್ಟು ಕೊಂಡರೆ, ಕ್ರಿ. ಶ. ೨೦೦೦ದ ಹೊತ್ತಿಗೆ ಇಂದಿನ ಜನಸಂಖ್ಯೆ ದ್ವಿಗುಣವಾಗುತ್ತದೆ.

ಜನಸಂಖ್ಯೆಯ ದೃಷ್ಟಿಯಿಂದ ವಿಶ್ವದಲ್ಲಿ ಭಾರತ ಎರಡನೆಯ ಸ್ಥಾನ ಪಡೆದಿದೆ. ೭೫೦ ದಶಲಕ್ಷ ಜನರಿರುವ ಕಮ್ಯೂನಿಸ್ಟ್ ಚೀನಾ ಮೊದಲನೆಯ ಸ್ಥಾನ ಗಳಿಸಿದೆ. ಭಾರತವು ವಿಸ್ತೀರ್ಣ ಮಾನದಲ್ಲಿ ಅಮೇರಿಕದ ಸಂಯುಕ್ತ ಸಂಸ್ಥಾನಗಳ ಕ್ಷೇತ್ರದ ಐದರಲ್ಲಿ ಎರಡು ಭಾಗದಷ್ಟಿದ್ದರೂ, ಅಲ್ಲಿನ ಜನಸಂಖ್ಯೆಯ ಎರಡೂವರೆಯಷ್ಟು ಜನ ಭಾರತದಲ್ಲಿದ್ದಾರೆ.

೧೮೯೧ ಭಾರತದ ಜನಸಂಖ್ಯೆ ೨೩೬ ದಶಲಕ್ಷದಷ್ಟಿತ್ತು. ೧೯೨೧ರಲ್ಲಿ ಅಂದರೆ, ಮೂವತ್ತು ವರುಷಗಳನಂತರ ಜನಸಂಖ್ಯೆ ೨೫೧ ದಶಲಕ್ಷದಷ್ಟಾಯಿತು. ಈ ಅವಧಿಯಲ್ಲಿ ಜನಸಂಖ್ಯೆಯಲ್ಲಾದ ಹೆಚ್ಚಳ ಕೇವಲ ೧೫ ದಶಲಕ್ಷ ಮಾತ್ರ. ಸಾಂಕ್ರಾಮಿಕ ರೋಗಗಳು, ಮತ್ತು ಕ್ಷಾಮಗಳಿಂದ ಜನಸಂಖ್ಯೆಯ ಹೆಚ್ಚಳ ಕುಂಠಿತಗೊಂಡಿತು. ಈ ಅವಧಿಯಲ್ಲಿ ಕಾಲರಾ ಮತ್ತು ಪ್ಲೇಗ್ ಬೇನೆಗಳಿಂದ ಪ್ರತಿ ವರ್ಷ ಲಕ್ಷಾವಧಿ ಜನ ಮರಣ ಹೊಂದಿದರು. ಮುಂದಿನ ಮೂವತ್ತು ವರ್ಷಗಳಲ್ಲಿ ಅಂದರೆ, ೧೯೨೧ರಿಂದ ೧೯೫೧ರ ವರೆಗಿನ ಅವಧಿಯಲ್ಲಿ ಜನಸಂಖ್ಯೆ ಮುಂಚಿನಂತೆ ೧೫ ದಶಲಕ್ಷ ಹೆಚ್ಚದೇ, ೧೧೦ ದಶಲಕ್ಷದಷ್ಟು ಹೆಚ್ಚಿತು. ಕಳೆದ ಒಂದು ದಶಕದಲ್ಲಿ ನಮ್ಮ ಜನ ಸಂಖ್ಯೆ ೭೮.೧ ದಶಲಕ್ಷದಷ್ಟು ಹೆಚ್ಚಿತು. ಇಂದು ಭಾರತದ ಜನಸಂಖ್ಯೆ ೪೮೫ ದಶಲಕ್ಷದಷ್ಟಿದೆ. ಜನಸಂಖ್ಯೆ ವರುಷವೊಂದಕ್ಕೆ ೧೨ ದಶಲಕ್ಷದಷ್ಟು ಹೆಚ್ಚುತ್ತಿದೆ.

ಸಮಸ್ಯೆಯ ತಿರುಳು

ದೇಶದ ಜನಸಂಖ್ಯೆ ಇಷ್ಟೊಂದು ತ್ವರಿತಗತಿಯಲ್ಲಿ ಹೆಚ್ಚಲು ಕಾರಣವೇನು? ಜನನ ಪ್ರಮಾಣ ಹೆಚ್ಚಿ ಮರಣ ಪ್ರಮಾಣವು ತೀವ್ರವಾಗಿ ಕಡಿಮೆಯಾಗಿರುವುದೇ ಇಂದು ನಮ್ಮ ದೇಶದಲ್ಲಿ ಈ ಸಮಸ್ಯೆಯು ಉದ್ಭವಿಸಲು ಕಾರಣ. ದಂಪತಿಗಳ ವಯಸ್ಸು ಜನಸಂಖ್ಯೆಯ ಹೆಚ್ಚಳಕ್ಕೆ ಸಹಾಯಕವಾಗಿದೆ.

ವಯಸ್ಸು ಮತ್ತು ಸ್ತ್ರೀ ಪುರುಷರ ಸಂಖ್ಯೆ ಹೆಚ್ಚಳಕ್ಕೆ ಎರಡು ಮುಖ್ಯ ಕಾರಣಗಳು:

೧೯೬೧ನೆಯ ಜನಗಣತಿಯ ಮೇರೆಗೆ ದೇಶದಲ್ಲಿ ಇಂದು ೧೫ರ ವಯೋ ಗುಂಪಿನಲ್ಲಿ ದೇಶದ ಒಟ್ಟು ಜನಸಂಖ್ಯೆಯ ಸೇ. ೪೦ರಷ್ಟು ಜನರು, ೧೫ರಿಂದ ೪೯ ವಯೋ ಗುಂಪಿನಲ್ಲಿ ಸೇ. ೪೭.೯ರಷ್ಟು ೫೦ ಮತ್ತು ಅದಕ್ಕಿಂತ ಹೆಚ್ಚಿನ ವಯೋ ಗುಂಪಿನಲ್ಲಿ ಸೇ. ೧೧.೯ರಷ್ಟು ಜನರು ಇದ್ದಾರೆ. ಅಂದರೆ ದೇಶದ ಒಟ್ಟು ಜನಸಂಖ್ಯೆಯಲ್ಲಿ ಯುವಜನರು ಮತ್ತು ಸಂತಾನಶಕ್ತಿಯುಳ್ಳವರೇ ಹೆಚ್ಚಿಗೆ ಇದ್ದಾರೆ; ಈ ದೃಷ್ಟಿಯಿಂದ ಸಮಾಜದ ಹೊಣೆಗಾರಿಕೆಯೂ ಹೆಚ್ಚುತ್ತಿದೆ.

ಸ್ತ್ರೀ—ಪುರುಷರ ಪ್ರಮಾಣ

ಸ್ತ್ರೀ—ಪುರುಷರ ಸಂಖ್ಯೆಯಲ್ಲಿನ ವ್ಯತ್ಯಾಸ ಸಮಾಜದ ರಚನೆಯ ಮೇಲೂ ಪರಿಣಾಮ ಬೀರುತ್ತದೆ. ಬಂಜೆತನ, ಮರಣ, ವಲಸೆ ಇವೇ ಮೊದಲಾದ ಅಂಶಗಳೂ ಇಂದು ನಿರ್ದಿಷ್ಟ ಪ್ರದೇಶದ ಜನಸಂಖ್ಯೆಯ ಪ್ರಮಾಣದಲ್ಲಿ ಹೆಚ್ಚು ಕಡಿಮೆಯಾಗಲು ಕಾರಣವಾಗಿವೆ. ಸಾಮಾನ್ಯವಾಗಿ ಸ್ತ್ರೀಯರ ಮರಣ ಪ್ರಮಾಣ ಕಡಿಮೆ. ಏಕೆಂದರೆ ಪ್ರಕೃತಿಯು ಅವರನ್ನು ಯಾವುದೇ ಬಗೆಯ ರೋಗ—ರುಜಿನಗಳನ್ನು ಎದುರಿಸಲು ಸದೃಢವಾಗಿರಿಸಿದೆ. ನಿಜವಾಗಿ ಹೇಳುವುದಾದರೆ ಪುರುಷನೇ ದೈಹಿಕವಾಗಿ ಸ್ತ್ರೀಗಿಂತ ದುರ್ಬಲನಾಗಿದ್ದಾನೆ. ಪುರುಷರು ಸ್ತ್ರೀಯರಿಗಿಂತ ಹೆಚ್ಚು ಕಷ್ಟಕರವಾದ ಉದ್ಯೋಗಗಳಲ್ಲಿ ತೊಡಗುವುದೂ ಇದಕ್ಕೆ ಕಾರಣವಾಗಿದೆ.

ಸಮಾಜದಲ್ಲಿ ಮಹಿಳೆಯರ ಪ್ರಮಾಣವು ಒಟ್ಟು ಸಂಖ್ಯೆಯ ಅರ್ಧಕ್ಕಿಂತಲೂ ಕಡಿಮೆಯಿದ್ದರೆ, ಮರಣ ಪ್ರಮಾಣದಲ್ಲಿನ ಯಾವುದೇ ಹೆಚ್ಚಳವು ಜನಸಂಖ್ಯೆಯ ಮೇಲೆ ದುಷ್ಪರಿಣಾಮ ಬೀರುತ್ತದೆ. ನಾವು ಕಳೆದ ಆರು ವರ್ಷಗಳಲ್ಲಿ ಭಾರತದ ಪುರುಷರು ಮತ್ತು ಸ್ತ್ರೀಯರ ಪ್ರಮಾಣವನ್ನು ಗಮನಿಸಿದಾಗ, ಪ್ರತಿ ಸಾವಿರ ಪುರುಷರಿಗೆ ೯೭೨, ೯೬೪, ೯೫೦, ೯೪೫, ೯೪೬ ಮತ್ತು ೯೪೧ ಸ್ತ್ರೀಯರಿದ್ದದ್ದು ಕಂಡು ಬರುತ್ತದೆ. ಮಹಿಳೆಯರ ಸಂಖ್ಯೆ ಕಡಿಮೆಯಾಗುತ್ತಿರುವುದು ಮತ್ತು ಪುರುಷರ ಸಂಖ್ಯೆ ಹೆಚ್ಚುತ್ತಿರುವುದು ಭಾರತದ ಜನಸಂಖ್ಯೆ ಸಮಸ್ಯೆಯ ಒಂದು ವೈಶಿಷ್ಟ್ಯವೆನಿಸಿದೆ.

ಜನಸಾಂದ್ರತೆ

ಕಳೆದ ದಶಕದಲ್ಲಿ ಜನಸಂಖ್ಯೆ ತ್ವರಿತವಾಗಿ ಹೆಚ್ಚಿದ್ದರಿಂದ, ಪ್ರತಿ ಒಂದು ಚದುರ ಮೈಲು ಪ್ರಸಾಂದ್ರಪ್ರದೇಶದಲ್ಲಿ ಜನತೆಯು ಹೆಚ್ಚಿತು. ೧೯೫೧ರಲ್ಲಿ ಪ್ರತಿಯೊಂದು ಚದುರ ಮೈಲು ಪ್ರದೇಶದಲ್ಲಿ ೩೧೨ ಜನರಿದ್ದರು. ೧೯೬೧ರಲ್ಲಿ ಇಷ್ಟೇ ಪ್ರದೇಶದಲ್ಲಿ ೩೭೦ ಜನರಿದ್ದರು. ಕೇಂದ್ರಾಡಳಿತ ಪ್ರದೇಶಗಳಿಗೂ ಸೇರಿ, ದೇಶದ ಹದಿನಾರು ರಾಜ್ಯಗಳಲ್ಲಿ ಕೇರಳ ರಾಜ್ಯವು ಜನಸಾಂದ್ರತೆಯ ದೃಷ್ಟಿಯಿಂದ ಮೊದಲ ಸ್ಥಾನ ಪಡೆದಿದೆ. ಕೇರಳದಲ್ಲಿ ಪ್ರತಿ ಒಂದು ಚದುರ ಮೈಲಿ ಪ್ರದೇಶದಲ್ಲಿ ೧೧೨೭ ಜನರು ನೆಲೆಸಿದ್ದಾರೆ.

ಓದು ಬರಹ ಬಲ್ಲವರು

ದೇಶದಲ್ಲಿ ೧೯೬೧ನೇ ವರ್ಷದ ಜನಗಣತಿಯ ಪ್ರಕಾರ, ಓದುಬರಹ ಬಲ್ಲವರ ಸಂಖ್ಯೆ ಸೇ. ೨೪ರಷ್ಟಿದೆ. ೧೯೫೧ ಇವರ ಸಂಖ್ಯೆ ೧೬.೬ರಷ್ಟಿತ್ತು. ಗ್ರಾಮಾಂತರ ಪ್ರದೇಶಗಳಲ್ಲಿ ಓದುಬರಹ ಬಲ್ಲವರ ಪ್ರಮಾಣ ಇನ್ನೂ ಹೆಚ್ಚಿಲ್ಲ.

೧೯೬೧ರಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ಜನಸಂಖ್ಯೆಯು ಸೇ. ೨೯.೫ರಷ್ಟು ಪುರುಷರು ಮತ್ತು ೮.೫ರಷ್ಟು ಮಹಿಳೆಯರು ಮಾತ್ರ ಓದುಬರಹ ಬಲ್ಲವರಾಗಿದ್ದರು. ದೇಶದಲ್ಲಿ ಗ್ರಾಮಸ್ಥರ ಸಂಖ್ಯೆ ಸೇ. ೮೦ರಷ್ಟಿದೆ. ಸಾಕಷ್ಟು ಶಿಕ್ಷಣ ಸೌಕರ್ಯಗಳಿರುವ ನಗರಗಳಲ್ಲಿನ ಜನಸಂಖ್ಯೆಯಲ್ಲಿ ಸೇ. ೫೧.೨ರಷ್ಟು ಪುರುಷರು ಮತ್ತು ಸೇ. ೩೩.೫ರಷ್ಟು ಮಹಿಳೆಯರು ಸುಶಿಕ್ಷಿತರಾಗಿದ್ದಾರೆ.

ರಾಜ್ಯಗಳ ಪೈಕಿ ಕೇರಳ ರಾಜ್ಯದಲ್ಲೇ ಅತಿ ಹೆಚ್ಚು ಅಂದರೆ ಸೇ. ೪೬.೮ ಮಂದಿ ಸುಶಿಕ್ಷಿತರು. ಉತ್ತರ ಭಾರತದ ಮಾತೃಭಾಷೆಯಾಗಿರುವ ಉತ್ತರ ಪ್ರದೇಶ, ಮಧ್ಯಪ್ರದೇಶ್, ರಾಜಸ್ಥಾನ್‌ಗಳಲ್ಲಿ ಓದುಬರಹ ಬಲ್ಲವರ ಸಂಖ್ಯೆ ಕಡಿಮೆಯಿದೆ.

ಇದು ನಮ್ಮ ದೇಶದಲ್ಲಿ ಜನಸಂಖ್ಯೆಯು ಪ್ರಮಾಣ ತೀವ್ರವಾಗಿ ಹೆಚ್ಚುತ್ತಿದೆ. ಭಾರತದಲ್ಲಿನ ವಿವಾಹ ಪದ್ಧತಿಗಳೂ ಈ ಹೆಚ್ಚಳಕ್ಕೆ ಕಾರಣವೆಂಬುದು ಬಹುತೇಕ ಜನರಿಗೆ ತಿಳಿದಿರುವ ಸಂಗತಿ. ನಮ್ಮ ದೇಶದಲ್ಲಿ ಪ್ರತಿಯೊಬ್ಬರು, ಬಹುಬೇಗ ಮದುವೆಯಾಗುತ್ತಾರೆ.

ಶೀಘ್ರ ವಿವಾಹ ಪದ್ಧತಿ, ಗ್ರಾಮಾಂತರ ಪ್ರದೇಶಗಳಲ್ಲಿ ಪರಿಣಾಮಕಾರಿಯಾದ ಕುಟುಂಬ ಯೋಜನೆಯಿಲ್ಲದಿರುವುದು ಜನಸಂಖ್ಯೆ ಸಮಸ್ಯೆಗೆ ಇತರ ಕಾರಣವಾಗಿವೆ.

ದೇಶದಲ್ಲಿ ಜನನ ಪ್ರಮಾಣದ ಹೆಚ್ಚಳಕ್ಕಿಂತ ಮರಣ ಪ್ರಮಾಣದಲ್ಲಿನ ಇಳಿವರಿಯಿಂದಲೇ ಜನಸಂಖ್ಯೆ ಸಮಸ್ಯೆ ಕ್ಲಿಷ್ಟಗೊಂಡಿದೆ. ೧೯೦೧ರಲ್ಲಿ ೧೦೦೦ ಜನರಲ್ಲಿ ಮರಣ ಪ್ರಮಾಣವು ೪೨.೬ರಷ್ಟಿದ್ದರೆ, ೧೯೫೧ರಲ್ಲಿ ೨೭.೪ರಷ್ಟು ೧೯೬೧ರಲ್ಲಿ ಶೇ ೧೬ರಷ್ಟು ಇದೆ. ಜನಸಂಖ್ಯೆ ಸಮಸ್ಯೆಗೆ ಯಾವರೀತಿ ಮರಣ ಪ್ರಮಾಣದ ಇಳಿವರಿಯೂ ಕಾರಣವೆಂದು ಇದರಿಂದ ವ್ಯಕ್ತವಾಗುತ್ತದೆ.

'ವರ್ಷ ನಿನ್ನ ಸ್ಪರ್ಶ ...!'

ವರ್ಷ ನಿನ್ನ ಸ್ಪರ್ಶ ಸೌಖ್ಯ ಭೂಮಿಗೆ
ರೋಮಾಂಚನ!
ಮದವಾಂತಿದೆ ಬನವನ!
ಮೇಲೆ ಮೇಘಮಾಲೆ ಮುಗಿಲ
ಬಿಭ್ರಮದು ತೇಲಿದೆ
ನವಿಲು ನೂರು ಕಣ್ಣತೆರೆದು ಸಂಭ್ರಮದು
ನೋಡಿದೆ
ಮೋಡಗಿರಿಯ ಶಬ್ದಿದೆ
ಮುತ್ತಿನ ಮಳೆ ಗರೆದಿದೆ!
ವೈಶಾಖದ ಬಿಸಿಲು ಮೀರಿ ಏರಹದುರಿಯ
ದಹಿಸಿದೆ
ತಡವೇತಕೆ ಎಂದ ಬನವು ನೀನು ರಮಿಸಿ
ಇಣಿದಿದೆ!
ಭೂಮಿಯ ಬಯಕೆ ನೀಗಿದೆ
ಹಸಿರ ಉಸಿರು ಸೂಸಿದೆ!
ವರ್ಷ ನಿನ್ನ ಸ್ಪರ್ಶ ಸೌಖ್ಯ ಭೂಮಿಗೆ
ರೋಮಾಂಚನ
ನಲಿವಾಂತಿದೆ ಬನವನ!
ವನದ ನವಿಲು ಬನನಿಂದ ಕುಣಿದು
ಜಗವ ಮರೆತಿದೆ
ಬಿಳಿ ಕೊಕ್ಕರೆ ಬಳಗವೊಂದು ಕಲ ನಿಸ್ವನ
ಗೈದಿದೆ
ಚಾತಕ ಕುಲ ತಣಿದಿದೆ
ಕೇತಕಿವನ ಅರಳಿದೆ
ರವಿಯ ಕಿರಣ ಭೂಮಿಯ ನೋಡಿ
ನಾಚಿ ಮರೆಗೆ ಅಡಗಿದೆ
ಮೋಡ ಮತ್ತೆ ಗುಡುಗಿದೆ!
ವರ್ಷ ನಿನ್ನ ಸ್ಪರ್ಶ ಸೌಖ್ಯ ಭೂಮಿಗೆ
ರೋಮಾಂಚನ!
ಮುದವಾಂತಿದೆ ಬನವನ!
ಬಳ್ಳಿ ಗಿಡವು ಹೂವ ಹೊತ್ತು ಪೂಜೆಗೆ
ಅಣಿಗೈದಿದೆ
ಭುವಿಗೆ ಇನಿಯ ವರ್ಷನಿಂದ ಪ್ರಣಯ
ಪೂಜೆ ಸಂದಿದೆ
ತೋಳಿನ ಸೆರೆ ಬಿಗಿದಿದೆ
ಮುತ್ತಿನ ಮಳೆ ಸುರಿದಿದೆ.
ವರ್ಷ ನಿನ್ನ ಸ್ಪರ್ಶ ಸೌಖ್ಯ ಭೂಮಿಗೆ
ರೋಮಾಂಚನ!
ಮದವಾಂತಿದೆ ಬನವನ!

—ಕೃಷ್ಣ ಶರ್ಮಾ, ಹೊನ್ನಾವರ

ಸುವ್ಯವಸ್ಥಿತ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್
ವ್ಯವಹಾರಗಳಿಗೆ ತನ್ನ 62 ಶಾಖೆಗಳಿಂದ ಹಬ್ಬಿರುವ
"ವಿಜಯ ಬ್ಯಾಂಕಿ"ನಲ್ಲಿ ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 8% ವರೆಗಿನ ಬಡ್ಡಿ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿ. ಆಫೀಸು— "ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—3

READ &
ADVERTISE IN
NAVAYUGA WEEKLY

ಮಹಿಳಾ ಮಂಟಪ

ಹೆಣ್ಣಿನ ಸ್ಥಾನಮಾನ ಹೇಗೆ ಹೆಚ್ಚುತ್ತದೆ?

ಜಿ—

ಭಾರತವು ಪ್ರಜಾಪ್ರಭುತ್ವ ವಿಶ್ವದಲ್ಲಿಯೇ ದೊಡ್ಡದು. ಇದರ ಪ್ರಧಾನಿಯೋ ಮಹಿಳೆ. 'ತೊಟ್ಟಿಲು ತೂಗುವ ಕೈ ವಿಶ್ವವನ್ನು ಆಳೀತು' ಎಂಬುದಕ್ಕೆ ಬೇರೆ ನಿದರ್ಶನಗಳು ಅನಗತ್ಯ; ಮಹಿಳಾ ಪ್ರಧಾನಿಯ ಸಾಮರ್ಥ್ಯವನ್ನು ನಾವು ನೋಡಿದ್ದೇವೆ, ನೋಡುತ್ತಲೂ ಇದ್ದೇವೆ; ಮುಂದೆಯೂ ನೋಡುವ ಅವಕಾಶವೂ ಇದೆ. ಆದರೆ, ಹೆಣ್ಣಿನ ಸಾಮರ್ಥ್ಯ ಪ್ರದರ್ಶನಕ್ಕೆ ಮಿತಿಯೊಂದಿರಬೇಕು ಎಂಬುದು ಪುರುಷರ ಅಭಿಪ್ರಾಯವಲ್ಲ, ಮಹಿಳೆಯರದೇ ಅಭಿಪ್ರಾಯ. ಹೆಣ್ಣಿನ ಸಾಮರ್ಥ್ಯ ಪ್ರದರ್ಶನ ಮನುಷ್ಯನನ್ನು ರೂಪಿಸುವಲ್ಲಿ ತೋರಬೇಕೇ ಹೊರತು, ಅವನು ಬೆಳೆದ ಮೇಲೆಯಲ್ಲ. ವಿಶ್ವವನ್ನು ಪ್ರತ್ಯಕ್ಷವಾಗಿ ಆಳುವುದು ಹೆಣ್ಣಿಗೆ ಬೇಡ, ಆಳಬಲ್ಲಂತಹ ಸಮರ್ಥರ ತಾಯಿಯಾಗಿ, ಮಡದಿಯಾಗಿ ತನ್ನ ಕರ್ತವ್ಯವನ್ನು ಪಾಲಿಸಬೇಕೆಂಬುದೇ ಲೋಕೋಕ್ತಿಯ ಅಭಿಪ್ರಾಯ.

ಮಹಿಳೆಯು ಪ್ರೌಢ ಅಥವಾ ಕಾಲೇಜು ವಿದ್ಯಾಭ್ಯಾಸವನ್ನು ಮುಗಿಸಿ ವಿವಾಹವಾಗುವುದಕ್ಕೆ ಮುನ್ನ ಉದ್ಯೋಗ ಹಿಡಿಯಲು ತೊಡಗುವುದು ಇಂದೀಗ ಸರ್ವಸಾಧಾರಣವೆನಿಸಿದೆ. ಹೆಣ್ಣು ಹೀಗೆ ವಿವಾಹಕ್ಕೆ ಮೊದಲು ಉದ್ಯೋಗಕ್ಕೆ ತೊಡಗುವುದು ಯೋಗ್ಯವಲ್ಲವೆಂದು ಹೆಚ್ಚಿನವರ ವಾದ. ಭಾರತದಂತಹ ಪ್ರಾಚೀನ ನಾಡಿನಲ್ಲಿ ಈ ಮಾತಿಗೆ ಪುರಸ್ಕರ್ತರು ತುಂಬಾ ಇದ್ದರೂ ಅದನ್ನು ಮೀರಿ ನಡೆಯುವ ಮಹಿಳೆಯರೂ ಹೆಚ್ಚುತ್ತಿದ್ದಾರೆ— ಇದಕ್ಕೆ ಅವರವರ ಪರಿಸ್ಥಿತಿಯೂ ಕಾರಣವಾದ ಉದಾಹರಣೆಗಳು ಅನೇಕವಿವೆ; ಈ ಮಾತು ಬೇರೆ. ಆದರೆ, ಪಶ್ಚಿಮ ಜರ್ಮನಿಯಂತಹ ಅತ್ಯಾಧುನಿಕ ಸಂಸ್ಕೃತಿಯ ದೇಶದಲ್ಲಿ, ಸ್ವಯಂ ಮಹಿಳೆಯರೇ ಈ ವಾದವನ್ನು ಮುಂದಿಡುತ್ತಾರೆ. ಇದು ಅಲಕ್ಷ್ಯದ ಸಂಕೇತವಲ್ಲವೆಂಬುದನ್ನು ಮರೆಯಬಾರದು.

ಇದು ಜನಮತದ ಕಾಲ. ಪ್ರತಿಯೊಂದಕ್ಕೂ ಜನಮತವನ್ನು ತಿಳಿದು ಅದರಂತೆ ನಡೆಯುವ ಯುಗ. ಮಹಿಳೆಯು ಉದ್ಯೋಗಿಯಾಗಬೇಕೆ ಎಂಬ ವಿಷಯದ ಮೇಲೆ ಪಶ್ಚಿಮ ಜರ್ಮನಿಯಲ್ಲಿ ಒಂದು ಜನಮತ ಗಣನೆ ನಡೆಯಿತು. ಉದ್ಯೋಗವು ಪುರುಷ ಲಕ್ಷಣವೇ ಹೊರತು ಹೆಣ್ಣಿಗೆ ಅದೆಂದೂ ಒಪ್ಪತಕ್ಕದ್ದಲ್ಲ ಎಂದು ಶೇ. ೭೫ರಷ್ಟು ಜನಸಂಖ್ಯೆಯು ತೀರ್ಪು ನೀಡಿತು. ಹೆಣ್ಣಿನ ಉದ್ಯೋಗ ಗೃಹಜೀವನ, ಪತಿಸೇವೆ ಮತ್ತು ಮಕ್ಕಳ ಲಾಲನೆ ಪಾಲನೆ. ಇದು ಹೊರತು ಯಾವುದಾದರೂ ಕಛೇರಿಯಲ್ಲಿ ಕಾರಖಾನೆಯಲ್ಲಿ ದುಡಿಯುವುದು ಅವಳಿಗೆ ಸಲ್ಲದು ಎಂಬುದನ್ನು ಜನಮತ ಮತ್ತೆ ಸ್ಪಷ್ಟಪಡಿಸಿತು.

ಇಂದಿನ ಸಮಾನತೆಯ ಕಾಲದಲ್ಲಿ ಹೆಣ್ಣಿಗೂ ಗಂಡಿನಷ್ಟೇ ಸ್ಥಾನಮಾನಗಳಿವೆ, ಹಕ್ಕು ಬಾಧ್ಯತೆಗಳೂ ಇವೆ. ಮಹೋನ್ನತ ಅಧಿಕಾರಗಳಿಗನುಸಾರ ಹೆಣ್ಣು ಯಾವುದೇ ಉದ್ಯೋಗವನ್ನು ಮಾಡಬಹುದು, ತನ್ನ ಸ್ಥಾನಮಾನಗಳನ್ನು ಎತ್ತರಿಸಿಕೊಳ್ಳಬಹುದು. ಆದರೆ, ಆಕೆ ಕೇಳಲ್ಲವಾದರೂ ವಿವಾಹವೇ ಹೆಣ್ಣಿಗೆ ಸುಲಭದಲ್ಲಿ ಸ್ಥಾನಮಾನ ಗೌರವಗಳನ್ನು ತರುವುದೆಂಬುದು ಖಂಡಿತ. ಕೆಲವು ಅನಿವಾರ್ಯ ಕಾರಣಗಳಿಂದ ಕೆಲವು ಮಹಿಳೆಯರು ಉದ್ಯೋಗರಂಗಕ್ಕಿಳಿಯುತ್ತಾರೆ, ಇಳಿಯಲೇ ಬೇಕಾಗುತ್ತದೆ. ಇವರು ಕೂಡ ತಮ್ಮ ಯಶಸ್ಸಿಗೆ ಮಾರು ಹೋಗದೆ ತಮ್ಮ ಸಾಮರ್ಥ್ಯ ಪ್ರದರ್ಶನಕ್ಕೆ ಮಿತಿಯೊಂದನ್ನು ಹಾಕಬೇಕಾಗುವುದೂ ಅನಿವಾರ್ಯವಾಗುತ್ತದೆ. ಗಂಡನೊಡನೆ ಸರಿಸಮಾನವಾಗಿ ಹೋರಾಟಕ್ಕೆ ನಿಂತು ಗಂಡನನ್ನೂ ಮೀರಿ ಯಶಗಳಿಸಿದರೆ, ತಮ್ಮ 'ಹೆಂಗಸು ತನ' ದೂರವಾಯಿತು ಎಂದು ಪಶ್ಚಿಮ ಜರ್ಮನಿಯ ಮಹಿಳೆಯರು ಅಭಿಪ್ರಾಯ ಪಡುತ್ತಾರೆ. ಹೀಗೆ ಅಲ್ಲಿ ತಮ್ಮ ಸಾಮರ್ಥ್ಯಕ್ಕೊಂದು ಮಿತಿ ಹೇರಿಕೊಳ್ಳುವುದು ಅಥವಾ ಎಲೆಮರೆಯ ಕಾಯಂತಿರುವುದು ಅಲ್ಲಿನ ಹೆಂಗಸರಿಗೆ ತೃಪ್ತಿ ತರುತ್ತಿದೆ.

'ತೊಟ್ಟಿಲು ತೂಗುವ ಕೈ ರಾಜ್ಯವನ್ನು ಆಳುತ್ತದೆ' ಎಂಬ ಹಳೆಯ ನಾಣ್ಣುಡಿಯ ಅರ್ಥ ಇದೇ ಆಗಿರಬಹುದೆ?

ಬೆಳ್ತಂಗಡಿ ಮುನ್ಸಿಫ್ ಕೋರ್ಟಿನಲ್ಲಿ

R. E. P. 43/66
in O. S 81/64.

ಕಮಲಾವತಿ —ಅರ್ಜಿದಾರಳು

ಮತ್ತು

ಚಂದ್ರರಾಜ ಕಂಬಳಿ ಸಹಾ —ಎದ್ರಿರು.

ಬೆಳ್ತಂಗಡಿ ತಾಲ್ಲೂಕು ಮರೋಡಿ ಗ್ರಾಮದ ಕೂಕ್ರಬೆಟ್ಟು ಎಂಬಲ್ಲಿರುವ ಧರ್ಣಪ್ಪ ಯಾನೆ ಕಿನ್ನಿ ಹೆಂಗಸ್ಸಿನ ಮಕ್ಕಳು. 1. ಚಂದ್ರರಾಜ ಕಂಬಳಿ, 2 ಅಮೃತ ಕೂಡಾ ಇಬ್ಬರಿಗೆ

ಕೋರ್ಟಿನ ಹುಕುಂ ಪ್ರಕಾರ ತಿಳಿಸುವುದೇನೆಂದರೆ_

ಮೇಲಿನ ಅಮಲ್ದಾರಿಯ ಏಲಂ ಇತ್ತಿದ್ದಾರು ನಿರ್ಣಯಕ್ಕೆ ಹಾಗೂ ಅರ್ಜಿದಾರಳು ಏಲಂನಲ್ಲಿ ಆ ಖೈರು ದಬಾಸ್ತಿಗೆ ನಿಲ್ಲುವರೇ ಪರ್ಮಿಶನ್ ಕೇಳಿದ ಅರ್ಜಿಯು ತಾ. 10—10—1966ಕ್ಕೆ ಇಟ್ಟಿದ್ದಾರೆ. ಆ ಕುರಿತು ನಿಮ್ಮದೇನಾದರೂ ಆಕ್ಷೇಪವಿದ್ದಲ್ಲಿ ನೀವು ಸ್ವತಹಾ ಯಾ ವಕೀಲರ ಮುಖಾಂತ್ರ ಕೋರ್ಟು ಮುಂದೆ ಗಂಟೆ 11ಕ್ಕೆ ಹಾಜರಾಗತಕ್ಕದ್ದು. ತಪ್ಪಿದಲ್ಲಿ ನಿಮ್ಮನ್ನು ಶಿವಾಯ ಮಾಡಿ ಮುಂದಿನ ಕ್ರಮ ಕೈಗೊಳ್ಳಲಾದೀತು.

N.J. KADAMBA
Advocate for Plaintiff

ಬೆಳ್ತಂಗಡಿ, 20—9—66.

ಎಲ್ಲೆಲ್ಲಿ ಏನೇನು?

ಲಯನ್ಸ್ ಸೆಂಟರ್ ಉದ್ಘಾಟನೆ

ಮಂಗಳೂರು, ಇದೇ ಕಳೆದ ತಾ. 15ರಂದು ಸ್ಥಳೀಯ ಸರಕಾರಿ ಆಸ್ಪತ್ರೆಯಲ್ಲಿ ಅಮೆರಿಕದ ಸಹಭಾಗಿತ್ವದಲ್ಲಿ ಅಂಗವಿಕಲರಿಗಾಗಿ ಪ್ರಾರಂಭಿಸಲಾದ ಲಯನ್ಸ್ ಕೇಂದ್ರವನ್ನು ರಾಜ್ಯದ ಆರೋಗ್ಯ ಮಂತ್ರಿ ಡಾ॥ ಕೆ. ನಾಗಪ್ಪ ಆಳ್ವರು ಉದ್ಘಾಟಿಸುತ್ತಾ, ಇಂದಿನ ದಿನಗಳಲ್ಲಿ ಅಂಗವಿಕಲರಾದವರು ಕೊನೆಗೆ ಭಿಕ್ಷುಕ ವೃತ್ತಿಗೆ ಇಳಿಯುವುದನ್ನು ನಾವು ಕಾಣುತಲಿದ್ದೇವೆ.

ಈ ಅಭ್ಯಾಸ ನಿರ್ಮೂಲವಾಗುವಂತೆ ಮಾಡಬೇಕು. ಅಂಗವಿಕಲರಾದವರ ನೆರವಿಗಾಗಿ ಸ್ಥಾಪನೆಗೊಂಡಿರುವ ಈ ಕೇಂದ್ರಕ್ಕೆ ಎಲ್ಲರ ಸರ್ವವಿಧದ ಸಹಕಾರ ಬೇಕು ಎಂದರು.

ಪ್ರಾರಂಭದಲ್ಲಿ ಲಯನ್ಸ್ ಅಧ್ಯಕ್ಷ ಎಂ. ಜಿ. ಅನಂತ ಪೈಯವರು ಸ್ವಾಗತಿಸಿದರು. ವಿಶ್ವಶಾಂತಿಗಾಗಿ ಒಂದು ನಿಮಿಷದ ಮೌನ ಪ್ರಾರ್ಥನೆಯನ್ನು ಸಭೆಯು ಆಚರಿಸಿತು.

ವಲಯಾಧ್ಯಕ್ಷ ಲಯನ್ ಮಹೇಶ್ ಶ್ರೀನಿವಾಸ ನಾಯ್ಕರು ಭಾಷಣಮಾಡಿ ಲಯನ್ಸ್ ಕ್ಲಬ್ಬಿನ ಮುಖ್ಯ ಕರ್ತವ್ಯಗಳನ್ನು ವಿವರಿಸಿ, ಲಯನ್ಸ್ ಕ್ಲಬ್ಬಿನ ಸೂಕ್ಷ್ಮ ಪರಿಚಯ ಮಾಡಿಕೊಟ್ಟರು. ಕೊನೆಯಲ್ಲಿ ಡಾ॥ ಜಿ. ಪಿ. ಮೊಡಾಯಿಲ್‌ರವರು ವಂದನಾರ್ಪಣೆ ಗೈದರು.

"ಮಕ್ಕಳ ಕಲಾ ಪ್ರದರ್ಶನ"

ಶಿರ್ವ 16. ಕಲೆಯ ಪ್ರಾಚೀನತೆ, ದೇವಮಂದಿರ ರಾಜರ ಆಶ್ರಯದಲ್ಲಿ ಬೆಳೆದು ಬಂದ ಚಿತ್ರಕಲೆ, ಪ್ರಾಚೀನ, ಆಧುನಿಕ ಶೈಲಿಗಳು ಆಧುನಿಕ ಕಲಾವಿದರು, ಕಲೆ—ಸಮಾಜದೊಳಗಿರಬೇಕಾದ ಸಂಬಂಧವನ್ನು ಹೇಳಿ, ಕಲೆ ಮಾನವನ ವಿಕಾಸ ಸಾಧನ ಎಂದು, ಕಾರ್ಕಳ ಭುವನೇಂದ್ರ ಕಾಲೇಜಿನ ಕನ್ನಡ ಪ್ರಾಚಾರ್ಯರಾದ ಎಂ. ರಾಮಚಂದ್ರರು— ಭಾರತ, ರಷ್ಯಾ, ಅಮೇರಿಕ, ಬ್ರಿಟನ್, ಫ್ರಾನ್ಸ್, ಜಪಾನ್, ಜರ್ಮನಿ—ಮುಂತಾದ ವಿಶ್ವದ ನಾಲ್ವತ್ತೈದು ರಾಷ್ಟ್ರಗಳ ನೂರು ಕೃತಿಗಳ ಪ್ರದರ್ಶನವನ್ನು, ಸ್ಥಳೀಯ ಹಿಂದೂ ಹಾಯರ್ ಸೆಕೆಂಡರಿ ಶಾಲೆಯಲ್ಲಿ ಉದ್ಘಾಟಿಸುತ್ತಾ ನುಡಿದರು. ಎಸ್. ಜಿ. ರಘುಪತಿ ಜೋಯಿಸ್, ಅಧ್ಯಕ್ಷ ಸ್ಥಾನದಿಂದ ಮಕ್ಕಳ ಭಾವ ಜೀವನ, ಮಕ್ಕಳ ಒಲವು ಶಕ್ತಿ ಪರಿಸರದಿಂದ ಮಕ್ಕಳ ಸುಪ್ತ ಶಕ್ತಿಯ ಬೆಳವಣಿಗೆಯನ್ನು ಹೇಳಿದರು. ಶಾಲಾ ಮುಖ್ಯೋಪಾಧ್ಯಾಯ ಬಿ. ಜಯರಾಮ ಶೆಟ್ಟರು ಅತಿಥಿಗಳನ್ನು ಸ್ವಾಗತಿಸಿದ್ದರು. ಕಲಾಶಿಕ್ಷಕ ಕಾ. ವಾ. ಆಚಾರ್ಯರು ಧನ್ಯವಾದ ಸಮರ್ಪಿಸಿದರು.

ಮುಲ್ಕಿಯಲ್ಲಿ ಆರೋಗ್ಯ ಸಚಿವರು

ಕಳೆದ ತಾ. 14ರಂದು ಮುಲ್ಕಿಗೆ ಆಗಮಿಸಿದ ರಾಜ್ಯದ ಆರೋಗ್ಯ ಮಂತ್ರಿ ಡಾ॥ ಕೆ. ನಾಗಪ್ಪ ಆಳ್ವರವರು ಹಲವಾರು ಸಂಘ ಸಂಸ್ಥೆಗಳಿಗೆ ಭೇಟಿಯಿತ್ತು ಬಳಿಕ ಮುಲ್ಕಿ ಮಂಡಲ ಕಾಂಗ್ರೆಸ್ ಸಮಿತಿಯ ಆಶ್ರಯದಲ್ಲಿ ಸ್ಥಳೀಯ ಬಿಲ್ಲವ ಸಮಾಜ ಸೇವಾ ಸಂಘದ ಸಭಾಭವನದಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಜನತೆಯ ಮನವಿಗಳನ್ನು ಸ್ವೀಕರಿಸಿದರು.

ಮುಲ್ಕಿ ಕ್ಷೇತ್ರದ ನಾಗರಿಕರ ಪರವಾಗಿ ಮಂಡಲ ಕಾಂಗ್ರೆಸ್ ಸಮಿತಿಯ ಅಧ್ಯಕ್ಷ ಶ್ರೀ ಎಂ. ಆರ್. ಎಚ್. ಪೂಂಜರು ಸಚಿವರಿಗೆ ಮಾನಪತ್ರವೊಂದನ್ನು ಅರ್ಪಿಸಿದರು. ಡಾ॥ ಕೆ. ಬಾಬು ಶೆಟ್ಟಿಯವರೂ ಹೋಸ್ಪಿಟಲ್ ಸುವರ್ ಫಂಡಿನ ಪರಿಯಿಂದ ಮನವಿ ಅರ್ಪಿಸಿದರು. ಬಳಿಕ ಸಚಿವರು ಮಾತನಾಡುತ್ತಾ, ಮನವಿಗಳಲ್ಲಿ ಸೂಚಿಸಲಾದ ಕೋರಿಕೆಗಳ ಕುರಿತು ಗಮನಹರಿಸಿ ಸೂಕ್ತ ಪರಿಹಾರ ಕೈಗೊಳ್ಳುವ ಭರವಸೆ ನೀಡಿದರು. ಕೊನೆಯಲ್ಲಿ ಮಂಡಲ ಕಾಂಗ್ರೆಸ್ ಕಾರ್ಯದರ್ಶಿ ಶ್ರೀ ಎನ್. ಟಿ. ಸುವರ್ಣರು ವಂದನಾರ್ಪಣೆ ಗೈದರು.

ಸ್ನಾತಕೋತ್ತರ ತರಗತಿಗಳ ಉದ್ಘಾಟನೆ

ಸುರತ್ಕಲ್ಲಿನ ಕರ್ನಾಟಕ ರೀಜನಲ್ ಎಂಜಿನಿಯರಿಂಗ್ ಕಾಲೇಜಿನಲ್ಲಿ ಸ್ನಾತಕೋತ್ತರ ತರಗತಿಗಳ ಉದ್ಘಾಟನಾ ಸಮಾರಂಭವು ಕಳೆದ ತಾ. 16ರಂದು ಡಾ॥ ಕೆ. ಎಲ್. ಶ್ರೀಮಾಲಿಯವರ ಅಧ್ಯಕ್ಷತೆಯಲ್ಲಿ ನೆರವೇರಿತು.

ಪ್ರಿನ್ಸಿಪಾಲ್ ಡಾ॥ ಎ. ಎಸ್. ಅಡ್ಕೆಯವರು ಸ್ವಾಗತಿಸುತ್ತಾ ಈ ತರಗತಿಗಳನ್ನು ತೆರೆಯುವಂತಾಗಲು ನಡೆಸಿದ ಪ್ರಯತ್ನಗಳನ್ನು ವಿವರಿಸಿ, ಈ ತರಗತಿಗೆ ಬೇಕಾದ ಸುಮಾರು 1 ಲಕ್ಷದ 95 ಸಾವಿರದ 410 ಡಾಲರುಗಳ ಮೌಲ್ಯದ ಉಪಕರಣಗಳನ್ನು "ಯುನೆಸ್ಕೋ" ಕಳುಹಿಸಲಿದೆಯೆಂದು ತಿಳಿಸಿ, ತಮ್ಮ ಕಾರ್ಯದಲ್ಲಿ ಮೈಸೂರು ಸರಕಾರ ಸಹಕರಿಸುವುದಾಗಿ ನಂಬಿಕೆ ವ್ಯಕ್ತಪಡಿಸಿದರು. ಡಾ॥ ಡಿ. ಸಿ. ಪಾವಟೆಯವರು ತಮ್ಮ ಭಾಷಣದಲ್ಲಿ, ಸ್ನಾತಕೋತ್ತರ ತರಗತಿಗಳನ್ನು ತೆರೆಯುವಂತಾದುದಕ್ಕೆ ಸಂತೋಷ ವ್ಯಕ್ತಪಡಿಸಿ ಮುಂದಿನ ವರ್ಷದಲ್ಲಿ ಮೆಕೇನಿಕಲ್ ಮತ್ತು ಎಲೆಕ್ಟ್ರಿಕಲ್ ವಿಭಾಗಗಳಲ್ಲೂ ಸ್ನಾತಕೋತ್ತರ ತರಗತಿಗಳು ತೆರೆಯುವಂತಾಗಲೆಂದು ಹಾರೈಸಿದರು.

ಅಧ್ಯಕ್ಷರು ಮಾತನಾಡುತ್ತಾ, ದ. ಕ. ಜಿಲ್ಲೆಗೇ ಒಂದು ಪ್ರತ್ಯೇಕ ವಿಶ್ವವಿದ್ಯಾನಿಲಯದ ಅವಶ್ಯಕತೆಯನ್ನು ಮನಗಾಣುವ ದಿನ ದೂರವಿಲ್ಲವೆಂದು ಎಂದು ನುಡಿದರು. ಮಾತ್ರವಲ್ಲದೇ ಈ ಗುರಿಯನ್ನು ಮುಂದಿಟ್ಟು ಕೊಂಡೇ ಈ ಪ್ರಗತಿ ಹೊಂದುತ್ತಿರುವ ಸಂಸ್ಥೆ ಪ್ರಯತ್ನಿಸಬೇಕೆಂದರು.

ಕೊನೆಯಲ್ಲಿ ಡಾ॥ ವಿ. ಎಸ್. ಬಸವರಾಜಯ್ಯನವರು ಧನ್ಯವಾದ ಸಮರ್ಪಿಸಿದರು.

ಖೊ—ಖೊ ಪಂದ್ಯಾಟ

ಉಡುಪಿ ಸಪ್ಟೆಂಬರ್—19, ಉಡುಪಿ ವಲಯದ ಅಂತರ್ ಶಾಲಾ ಹಾಯರ್ ಎಲಿಮೆಂಟರಿ ಪುಟ್ಟದ ಹುಡುಗರ ಖೊ—ಖೊ ಪಂದ್ಯಾಟದಲ್ಲಿ ಉಡುಪಿ ಮೋಡೆಲ್ ಹಾಯರ್ ಎಲಿಮೆಂಟರಿ ಶಾಲೆಯವರು ಪ್ರಥಮ ಸುತ್ತಿನಲ್ಲಿ ಅಲೆವೂರು ಸುಧೋದಿನಿ ರಾ. ಎ. ಶಾಲೆಯವರನ್ನು 31 ಪೋಯಿಂಟುಗಳಿಂದಲೂ, ದ್ವಿತೀಯ ಸುತ್ತಿನಲ್ಲಿ ಉದ್ಯಾವರ ಯು. ಬಿ. ಎಂ. ಸಿ. ಹಾಯರ್ ಎಲಿಮೆಂಟರಿ ಶಾಲೆಯವರನ್ನು 27 ಪೋಯಿಂಟುಗಳಿಂದಲೂ, ತೃತೀಯ ಸುತ್ತಿನಲ್ಲಿ ಕಡಿಯಾಳಿ ಹಾಯರ್ ಎಲಿಮೆಂಟರಿ ಶಾಲೆಯವರನ್ನು 14 ಪೋಯಿಂಟುಗಳಿಂದಲೂ, ನಾಲ್ಕನೆಯ ಸುತ್ತಿನಲ್ಲಿ ಪರ್ಕಳ ಯು. ಬಿ. ಎಂ. ಸಿ. ಹಾಯರ್ ಎಲಿಮೆಂಟರಿ ಶಾಲೆಯವರನ್ನು 17 ಪೋಯಿಂಟುಗಳಿಂದಲೂ ಗೆದ್ದು ಫೈನಲ್ ಪಂದ್ಯಾಟದಲ್ಲಿ ಕಾಪು ದಂಡತೀರ್ಥ ಹಾ. ಎ. ಶಾಲೆಯವರನ್ನು 14 ಪೋಯಿಂಟುಗಳಿಂದ ಗೆದ್ದು ಈ ವರ್ಷದ ವಲಯದ ಕಪ್ಪನ್ನು ಪಡೆಯಲು ಅರ್ಹತೆ ಪಡೆದಿರುತ್ತಾರೆ.

ಪ್ರಣಯ ಮಾದರಿಯಿಂದ ವಿಭಿನ್ನವಾಗಿ,
ಸಮಾಜದ ಸಮಸ್ಯೆ ನಿರೂಪಣೆ ವಸ್ತುವಾಗಿ,
ಬೆಳಕು ಕಂಡ ನಿತ್ಯನೂತನ ಕಥೆಗಳು

ಇಂದೇ ನಿಮ್ಮ ಪ್ರತಿಯನ್ನು ಕಾಯ್ದಿರಿಸಿರಿ.

ಕಥಾ ಕೌಮುದಿ

(ಹದಿನಾರು ವಿಶಿಷ್ಟ ಕಥೆಗಳ ಸಂಕಲನ)

ಬರೆದವರು: ಎಸ್. ಗೋಪೀಚಂದ ರಾವ್, ವಿದ್ವಾನ್, ವಿಶಾರದ.

ಬೆಲೆ: ರೂ. ೧—೫—೦ (1 = 50)

ರೂ. 1 = 75 ಮನಿಯಾರ್ಡರು ಮಾಡಿದರೆ ಒಂದು ಪ್ರತಿಯನ್ನು ಕಳಿಸಬಹುದು.

ದೊರೆವ ಸ್ಥಳ.

ನವಯುಗ ಎಂಟರ್‌ಪ್ರೈಸ್ ಲಿ., ಉಡುಪಿ.
ನವಭಾರತ ಪುಸ್ತಕ ಭಂಡಾರ, ಉಡುಪಿ
(ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿಯೂ ವಿಚಾರಿಸಿರಿ)

ಸುರತ್ಕಲ್‌ನಲ್ಲಿ ಕೇಂದ್ರ ಸಚಿವ ಶ್ರೀ ಪೂಣಚ್ಚ

ಕಳೆದ ತಾ. 16ರಂದು, ಸುರತ್ಕಲ್‌ನ ಕರ್ನಾಟಕ ರೀಜನಲ್ ಎಂಜಿನಿಯರಿಂಗ್ ಕಾಲೇಜಿನ ಪ್ರಧಾನ ಕಟ್ಟಡದ ಪ್ರಾರಂಭೋತ್ಸವವು ಕೇಂದ್ರ ಸಚಿವ ಶ್ರೀ ಸಿ. ಎಂ. ಪೂಣಚ್ಚನವರಿಂದ, ಡಾ|| ಡಿ. ಸಿ. ಪಾವಟೆಯವರ ಅಧ್ಯಕ್ಷತೆಯಲ್ಲಿ ನೆರವೇರಿತು.

ಆರಂಭದಲ್ಲಿ ಕಾಲೇಜಿನ ಪ್ರಿನ್ಸಿಪಾಲ್ ಡಾ|| ಎ. ಎಸ್. ಆಡ್ಕೆಯವರು ಸ್ವಾಗತಿಸುತ್ತಾ ಕಾಲೇಜಿನ ಪ್ರಗತಿಯನ್ನು ವಿವರಿಸಿದರು. ಈ ಸಂದರ್ಭದಲ್ಲಿ ಸಿದ್ಧಗೊಳಿಸಲಾದ 'ಸೊವನೀರ್'ನ್ನು ರಾಜ್ಯದ ಆರೋಗ್ಯ ಮಂತ್ರಿ ಡಾ|| ಕೆ. ನಾಗಪ್ಪ ಆಳ್ವರವರು ಬಿಡುಗಡೆಗೊಳಿಸುತ್ತಾ ಕಾಲೇಜಿನ ಪ್ರಗತಿಗೆ ತಮ್ಮ ಸಂತೋಷ ವ್ಯಕ್ತಪಡಿಸಿ, ಈ ತೆರನ ಸಂಸ್ಥೆಗಳಲ್ಲಿ ಸ್ನಾತಕೋತ್ತರ ತರಗತಿಗಳೊಂದಿಗೆ ಸಂಶೋಧನಾ ಕಾರ್ಯದಲ್ಲಿ ತರಬೇತಿ ಸಾಗಬೇಕಾದುದು ಅವಶ್ಯವೆಂದರು.

ಶ್ರೀ ಪೂಣಚ್ಚನವರು ಉದ್ಘಾಟನಾ ಭಾಷಣದಲ್ಲಿ ಕಾಲೇಜಿನ ಪ್ರಗತಿಗೆ ಪ್ರಶಂಸೆ ವ್ಯಕ್ತಪಡಿಸಿ, ನಮ್ಮ ದೇಶದಲ್ಲಿ ತಾಂತ್ರಿಕ ಪ್ರಗತಿಗೆ ಬೇಕಾದ ಸಲಹೆಗಳಿಗೆ ನಾವು ವಿದೇಶಗಳ ತಾಂತ್ರಿಕ ತಜ್ಞರನ್ನೇ ಅವಲಂಬಿಸಿರುವುದು ಸರಿಯಲ್ಲವೆಂದೂ, ನಮ್ಮಲ್ಲಿ ತಂತ್ರಜ್ಞ ಸಲಹಾ ವ್ಯವಸ್ಥೆಯಿಲ್ಲದಿರುವುದು ಒಂದು ದೊಡ್ಡ ಕೊರತೆಯಾಗಿದ್ದು, ಅದನ್ನು ಪರಿಹರಿಸಲು ನಮ್ಮ ತಾಂತ್ರಿಕ ತಜ್ಞರು ಮುಂದೆ ಬರಬೇಕಾದುದು ಅವಶ್ಯವೆಂದೂ ನುಡಿದರು.

ಅಧ್ಯಕ್ಷರು ಕಾಲೇಜಿನ ಅಲ್ಪಕಾಲೀನ ಪ್ರಗತಿಯನ್ನು ಶ್ಲಾಘಿಸುತ್ತಾ, ಮುಂದಿನ ವರುಷಗಳ ನಂತರ ಈ ಸಂಸ್ಥೆಯಲ್ಲಿ ಸಂಶೋಧನಾ ಸವಲತ್ತುಗಳನ್ನು ಏರ್ಪಡಿಸುವ ನಿರೀಕ್ಷಿತವಾಗಿದೆಯೆಂಬ ಆಶಯವನ್ನು ವ್ಯಕ್ತಪಡಿಸಿದರು. ಕೊನೆಗೆ ಶ್ರೀ ವಿ. ಎಸ್. ಕುಡ್ವರು ವಂದನೆಗಳನ್ನು ಅರ್ಪಿಸಿದರು.

ವಿದ್ಯಾರ್ಥಿ ವೇತನ

ಕರ್ನಾಟಕ ಫ್ರೀ ನೈಟ್ ಹೈಸ್ಕೂಲಿನ ಸಂಚಾಲಕರಾದ ಬಂಟರ ಯಾನೆ ನಾಡವರ ಸಂಘ ಮುಂಬಯಿ-ಇವರು ಇಲ್ಲಿಯ ಕಾಲೇಜುಗಳಲ್ಲಿ ಕಲಿಯುತ್ತಿರುವ ಯಾ ಕಲಿಯಲಿಚ್ಛಿಸುವ ಸ್ವಜಾತಿ ಬಡ ವಿದ್ಯಾರ್ಥಿಗಳಿಗೆ ಎಂದಿನಂತೆ ವಿದ್ಯಾರ್ಥಿ ವೇತನ ರೂಪದಿಂದ ಸಾಲ ಕೊಡುವುದರಿಂದ, ಧನ ಸಹಾಯ ಪಡೆಯಲಿಚ್ಛಿಸುವ ವಿದ್ಯಾರ್ಥಿಗಳು ಸೆಪ್ಟೆಂಬರ್ ತಿಂಗಳ ಅಂತ್ಯದೊಳಗೆ ಅರ್ಜಿ ಹಾಕ ಬೇಕಾಗಿ ಅಪೇಕ್ಷಿಸಲಾಗಿದೆ.

ಸತ್ಕಾರ ಕೂಟ

ಕುಂದಾಪುರ, ಪಾಸರ್ ಕಾಲೇಜಿನಲ್ಲಿ ಸಾಮೂಹಿಕ ಸಮಾರಂಭವೊಂದು ಉಡುಪಿ ಕ್ರಿಶ್ಚಿಯನ್ ಹೈಸ್ಕೂಲ್ ಹೆಡ್‌ಮಾಸ್ತರ ಅಧ್ಯಕ್ಷತೆಯಲ್ಲಿ ಜರಗಿತು. ಡಾ|| ಪಿ. ರಾಮರಾಯರು ವಿದ್ಯಾರ್ಥಿಗಳು ದಾನವಾಗಿತ್ತ ದಿ| ಲಾಲ್ ಬಹದ್ದೂರ್ ಶಾಸ್ತ್ರಿಗಳ ಚಿತ್ರವನ್ನು ಅನಾವರಣ ಮಾಡಿ ಭಾಷಣವಿತ್ತರು. ಸಭಿಕರಲ್ಲಿ ಹಲವರು ಮಾತನಾಡಿ ಸಂಸ್ಥೆಯನ್ನು ಶ್ಲಾಘಿಸಿದರು. ಅಧ್ಯಕ್ಷರು ಮೆನೇಜರ್ ಡಾ| ಕಲ್ಯಾಣರ ಬಹುಮುಖ ಚಟುವಟಿಕೆಗಳನ್ನು ವಿವರಿಸಿ ಸಂಸ್ಥೆಗೆ ಶ್ರೇಯೋಭಿವೃದ್ಧಿ ಬಯಸಿದರು.

ಬೀಳ್ಕೊಡುಗೆ

ಉಡುಪಿ, ಪಾಸ್ ಟುಟೋರಿಯಲ್ ಕಾಲೇಜಿನ ಸೆಪ್ಟೆಂಬರ್ ತಂಡದ ಎಸ್. ಎಸ್. ಎಲ್. ಸಿ. ವಿದ್ಯಾರ್ಥಿಗಳು ಶ್ರೀ ಎಸ್. ಎಸ್. ಭಟ್ಟರ ಅಧ್ಯಕ್ಷತೆಯಲ್ಲಿ ಬೀಳ್ಕೊಡುಗೆ ಸಮಾರಂಭವನ್ನು ಏರ್ಪಡಿಸಿದ್ದರು. ಶ್ರೀ ಪುರುಷೋತ್ತಮ ಶೆಟ್ಟಿಗಾರರು ಸ್ವಾಗತಿಸಿ ವಿದ್ಯಾರ್ಥಿಗಳನ್ನು ಹರಸಬೇಕೆಂದರು. ಸಭಿಕರಲ್ಲಿ ಹಲವರು ಮಾತನಾಡಿ ಹಲವು ಸೂಚನೆಗಳನ್ನಿತ್ತರು. ಡಾ| ಕೆ. ಕೆ. ಕಲ್ಯಾಣರು ಸಂಸ್ಥೆಯ ಅಭಿವೃದ್ಧಿಯನ್ನು ವಿವರಿಸಿದರು. ಅಧ್ಯಕ್ಷರು ವಿದ್ಯಾರ್ಥಿ ಜೀವನದಲ್ಲಿ ಶಿಸ್ತು ನಿಯಮ ಅಗತ್ಯವೆಂದರು.

ಶ್ರೀ ಎಸ್. ರಾಮಣ್ಣರೈಗಳ ನಿಧನ

ಮಂಗಳೂರು, ಬೇರೆ ಬೇರೆ ಕಡೆಗಳಲ್ಲಿ ಎಗ್ರಿಕಲ್ಚರಲ್ ಆಫೀಸರಾಗಿ ಸೇವೆ ಸಲ್ಲಿಸಿ ಕೊನೆಗೆ ಜಿಲ್ಲಾ ಎಗ್ರಿಕಲ್ಚರಲ್ ಆಫೀಸರರಾಗಿ ನಿವೃತ್ತರಾಗಿದ್ದ ಶ್ರೀ ಸೋಂತಾಡಿ ರಾಮಣ್ಣರೈಗಳು ತಾ. 16—9—66ರಂದು ತಮ್ಮ 72ನೇ ವಯಸ್ಸಿನಲ್ಲಿ ಬಲ್ಮಠ ಹೊಸರಸ್ತೆಯ ತಮ್ಮ ಗೋಕುಲ ನಿವಾಸದಲ್ಲಿ ನಿಧನರಾದರೆನ್ನಲು ವಿಷಾದವಾಗುತ್ತದೆ, ದಿವಂಗತರು ಜನಾನುರಾಗಗಳಿಸಿದ್ದರು.

ಪುಸ್ತಕೋದ್ಘಾಟನೆ

ಕಿನ್ನಿಗೋಳಿ, ತಾ. 20, 'ಯುಗಪುರುಷ' ಪ್ರಕಟಣಾಲಯದ ವತಿಯಿಂದ ಶ್ರೀ ಕೋಡು ಭೋಜ ಶೆಟ್ಟಿ ಬಯಸದೆ ಬಂದ ಕಥಾ ಸಂಕಲನವನ್ನು ಶ್ರೀ ವೈ. ಕೆ. ಸಂಜೀವ ಶೆಟ್ಟರೂ ಶ್ರೀ ಪ್ರಿಯತಮಾ ಅವರ "ಭಾವ ಭಂಗ" ಕಥಾ ಸಂಕಲನವನ್ನು ಶ್ರೀ ಕೆ. ಗಣೇಶ ಮಲ್ಯರೂ ಶ್ರೀ ಅ. ಗೌ. ಕಿನ್ನಿಗೋಳಿ ಅವರ ಅಧ್ಯಕ್ಷತೆಯಲ್ಲಿ ಉದ್ಘಾಟಿಸಿದರು. ಡಾ| ಸಂಜೀವನಾಥ ಐಕಳ ಮತ್ತು ಅಧ್ಯಕ್ಷರು ಸಂಪಾದಕ ಶ್ರೀ ಕೊ. ಅ. ಉಡುಪರ ಪ್ರಯತ್ನವನ್ನು ಶ್ಲಾಘಿಸಿ ಮಾತನಾಡಿದರು. ಸಂಪಾದಕರು ಆರಂಭದಲ್ಲಿ ಸ್ವಾಗತಿಸಿ ಅಂತ್ಯದಲ್ಲಿ ವಂದನಾರ್ಪಣೆಗೈದರು.

ದಕ್ಷಿಣ ಕನ್ನಡ ಜಿಲ್ಲಾ ನಾಟಕ ಸ್ಪರ್ಧೆ

'ಕಲಾ ಭವನ' ಮಂಗಳೂರು ಇವರ ಕಾರ್ಯಕಾರೀ ಸಮಿತಿಯು ತಾ. 18—9—66ರಂದು ಶ್ರೀ ಯು. ವಿ. ಕಿಣಿ ಇವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಈ ಕೆಳಗಣ ಏಳು ನಾಟಕಗಳನ್ನು ತಾ. 16—10—66 ರಿಂದ 23—10—66ರ ವರೆಗೆ ಮಂಗಳೂರು ಡಾನ್ ಬೋಸ್ಕೊ ಹಾಲ್‌ನಲ್ಲಿ ನಡೆಯಲಿರುವ ಜಿಲ್ಲಾ ನಾಟಕ ಸ್ಪರ್ಧೆಗೆ ಆಯ್ಕೆ ಮಾಡಲಾಯಿತು. 1. ಕಾಯ ಕರುಳು—ರೂಪರಂಗ (ರಿ) ಕುಂದಾಪುರ, 2. ಅಣ್ಣ ತಮ್ಮ—ರಂಗಭೂಮಿ (ರಿ) ಉಡುಪಿ 3. ಬಡತನದ ಬಾಳು — ಕಲಾಸೇವಾ ಮಂಡಳಿ, ಪಡೂರು, 4. ಅಪ್ಪನ ಮದುವೆ— ಎಂ. ಕೆ. ನಾಟಕ ಸಭಾ (ರಿ) ಮಂಗಳೂರು, 5. ತರಂಗ ತರಂಗ ಅಂತರಂಗ — ನವೋದಯ ಕಲಾವೃಂದ (ರಿ) ಮಂಗಳೂರು 6. ಉಂಡಾಡಿ ಗುಂಡ— ಕೆ. ಆರ್. ಇ. ಸಿ. ಯೂನಿಯನ್ ಫೈನ್ ಆರ್ಟ್ಸ್ ಕ್ಲಬ, ಸುರತ್ಕಲ್, 7. "ಧರ್ಮ ರತ್ನಾಕರ"—ನವರಂಗ ಆರ್ಟ್ಸ್ ಕ್ಲಬ್, ಕರ್ನಾಟಕ ಪಾಲಿಟೆಕ್ನಿಕ್, ಮಂಗಳೂರು.

ಪೃಥ್ವೀರಾಜ್ ಕಪೂರರಿಗೆ ಸನ್ಮಾನ

ಉಡುಪಿ, ಸ. 17— ಭಾರತದ ಪ್ರಸಿದ್ಧ ಚಲಚಿತ್ರ ನಟ ಪೃಥ್ವೀರಾಜ್ ಕಪೂರರನ್ನು ಉಡುಪಿ ಸಂಗೀತ ಸಭೆಯವರು ಬರಮಾಡಿಕೊಂಡು ಸನ್ಮಾನಿಸಿದರು. ಈ ಸಮಾರಂಭವು ಉಡುಪಿ ಡೋನ್ ಬೋಸ್ಕೋ ಹಾಲಿನಲ್ಲಿ ಜರಗಿತು. ಪ್ರಾರಂಭದಲ್ಲಿ ಹೂ ಹಾರವನ್ನರ್ಪಿಸಿ ಸ್ವಾಗತಿಸಿದ ಬಳಿಕ ಸಂಗೀತ ಸಭೆಯ ಅಧ್ಯಕ್ಷ ಶ್ರೀ ಕೆ. ಕೆ. ಪೈಗಳವರು ಸ್ವಾಗತಿಸುತ್ತಾ ಶ್ರೀ ಪೃಥ್ವೀರಾಜ್ ಕಪೂರರು ಸಲ್ಲಿಸಿದ ಕಲಾಸೇವೆಯ ಪರಿಚಯ ಮಾಡಿಕೊಟ್ಟರು.

ಪೃಥ್ವೀರಾಜ ಕಪೂರರು ಮಾತನಾಡಿ ಕಲಾಕಾರನ ಪ್ರತಿಭೆ ಚಲಚಿತ್ರಗಳಿಗಿಂತ ನಾಟಕಗಳಲ್ಲಿ ಹೆಚ್ಚು ವ್ಯಕ್ತವಾಗುತ್ತದೆ. ಎಂದರು.

ಕೊನೆಯಲ್ಲಿ ಶ್ರೀ ಟಿ. ರಮೇಶ ಪೈಗಳು ವಂದನಾರ್ಪಣೆಗೈದರು.

ಹಾಲು ಉತ್ಪಾದಕ ಸಹಕಾರ ಸಂಘಗಳ ಸಂಯುಕ್ತ ಸಭೆ

ಮಂಗಳೂರು, ಸರಕಾರಿ ಹಾಲು ಸರಬರಾಯಿ ಯೋಜನೆಗೆ ಹಾಲು ಒದಗಿಸುವ ಉತ್ಪಾದಕರ ಸಹಕಾರ ಸಂಘಗಳ ಪ್ರತಿನಿಧಿಗಳ ಸಭೆಯು ತಾ. 11ರಂದು ಸದ್ರಿ ಯೋಜನೆಯ ಆಫೀಸಿನಲ್ಲಿ, ಸುಪರಿಂಟೆಂಡೆಂಟರ ಅಧ್ಯಕ್ಷತೆಯಲ್ಲಿ ಜರಗಿತು. ಕಳೆದ ಸಭೆಯ ವರದಿ ವಾಚನದ ನಂತರ ಕನ್ವೀನರಾದ ಡಾ| ಸಂಜೀವನಾಥ ಐಕಳರು ಸಭೆಯ ಧ್ಯೇಯ ಉದ್ದೇಶಗಳನ್ನು ನಿರೂಪಿಸಿದ ಬಳಿಕ ಮುಂದಿನ ಕಾರ್ಯಕ್ರಮಗಳ ಕರಡನ್ನು ಸ್ವೀಕರಿಸಲಾಯಿತು. ತರುವಾಯ ಕೆಲವೊಂದು ಠರಾವುಗಳಾದವು. ನವಂಬ್ರದಲ್ಲಿ ಮಹಾ ಸಭೆ ಜರಗಿಸುವ ಬಗ್ಗೆ ಡಾ| ಸಂಜೀವನಾಥ ಐಕಳರು ಕನ್ವೀನರಾಗಿರುವ ಸಮಿತಿ ರಚಿಸಲ್ಪಟ್ಟಿತು.

ಮಂಗಳೂರು ಬಂದ್

ಮಂಗಳೂರು ನಗರ ಸಭೆಯವರು ಹೊರಿಸಿರುವ ಆಕ್ಟ್ರಾಯಿ ಎಂಬ ಹೊಸ ತೆರಿಗೆಯನ್ನು ವಿರೋಧಿಸಿ ತಾ. 20ರಂದು ಮಂಗಳೂರಲ್ಲಿ ಅತ್ಯಂತ ಯಶಸ್ವಿಯಾದ ಹರತಾಳವನ್ನು ಆಚರಿಸಲಾಯಿತು. ಮಂಗಳೂರು ಸಂಪೂರ್ಣ 'ಬಂದ' ಆಗಿತ್ತು. ಸಂಜೆ ನೆಹರೂ ಮೈದಾನಿನಲ್ಲಿ ಶ್ರೀ ವಿ. ಸಂಜೀವ ಕುಡ್ವರ ಅಧ್ಯಕ್ಷತೆಯಲ್ಲಿ ಪ್ರಚಂಡ ಸಭೆ ಜರಗಿ ಸರ್ವ ಪಕ್ಷೀಯರಿಂದಲೂ ತೆರಿಗೆಯನ್ನು ವಿರೋಧಿಸಿ ಭಾಷಣಗಳಾದುವು.

ಮಹಾ ಸಭೆ

ಪಕ್ಕಾಳ, ಹೆರ್ಗ ಎಗ್ರಿಕಲ್ಚರಲ್ ಸಹಕಾರಿ ಬ್ಯಾಂಕಿನ ಮಹಾ ಸಭೆಯು ತಾ. 25ರಂದು ಅಧ್ಯಕ್ಷ ಶ್ರೀ ಬಾಳ್ಕಟ್ಟ ಬೀಡು ಕೃಷ್ಣಯ್ಯ ಹೆಗ್ಡೆಯರ ಅಧ್ಯಕ್ಷತೆಯಲ್ಲಿ ಜರಗಿ ವರದಿ, ಬಜೆಟು ಮಂಜೂರಾದ ಬಳಿಕ ಹೊಸ ವರ್ಷಕ್ಕೆ ಶ್ರೀಗಳಾದ ಬಿ. ಕೆ. ಹೆಗ್ಡೆ, ಸಂಜೀವ ಹೆಗ್ಡೆ, ಕೆ. ಆನಂದ ಶೆಟ್ಟಿ, ಗುರುರಾಜ ಆಚಾರ್, ಭುಜಂಗ ಹೆಗ್ಡೆ, ಗಣೇಶ ಹೆಗ್ಡೆ, ಪಾಂಡುರಂಗ ಹೆಗ್ಡೆ, ಗೋಪಾಲಕೃಷ್ಣ ಕಾಮತ್, ಸಂಕಯ್ಯ ಶೆಟ್ಟಿ, ಸೀತಾರಾಮ ಶೆಟ್ಟಿ, ವಾಸುದೇವ ನಾಯ್ಕ ಇವರು ಡೈರೆಕ್ಟರಾಗಿ ಅವಿರೋಧವಾಗಿ ಆರಿಸಲ್ಪಟ್ಟರು.

ಸಾರ್ಥಕ್ಯ

ಅವ ಸತ್ತ! ಇವ ಸತ್ತ!
ಮತ್ತಾವನೋ ಸತ್ತ!
ಹುಟ್ಟಿ ಮಾಡಿದುದೇನು
ಸತ್ತು ಆ ಮಹರಾಯ?
ಮಸಲ, ನಾನೇ ಸಾಯ
ಹುಟ್ಟಿಗೆಲ್ಲಿದೆ ನ್ಯಾಯ?
ನಾನು ಮಾಡಿದುದೇನು
ಹೆರವರನ್ನ ನ್ಯತ್ತ?
ಊಟ ಮಾಡಿದೆ ನಿತ್ಯ
ನಿದ್ರೆ ಮಾಡಿದೆ ಸತ್ಯ!
ಮಕ್ಕಳೂ ಆಗಿಹರು
ಜಡದಾಟ ದಿನ ನಿತ್ಯ!
ಏನು ಫಲ? ಹೆತ್ತಲಿನ
ಕತೆಯೂ ತಾನೆಲ್ಲ
ಮಾಡಿಹುದು; ಮಾಡುವುದು!
ಮುಂದೆಯೂ ಸಟೆ ಸುಳ್ಳು!
ಇದು ಬಾಳೆ? ಹೇಡಿತನ!
ದೈವಕ್ಕೆ ಅಪಮಾನ!
ಶಾಲಿತಾ ಹುಟ್ಟಿನುದಕೆ
ತೆನೆಯು ತಾ ತೋರ್ದಂತೆ
ಹೂ ಹುಟ್ಟಿ ಸುತ್ತೆಲ್ಲ
ಪರಿಮಳವ ಬೀರ್ದಂತೆ!
ಮಾನವನು ಮುಂದಾಗೆ
ದೈವಕ್ಕೆ ಬಹುಮಾನ!
ಬೀರಲಿಲ್ಲದ ಬೆಳಕ
ರವಿಯು ಕತ್ತಲ ಮೆಟ್ಟಿ?
ಬೀರಲಿಲ್ಲವೆ ಕಂಪ
ಕಂಜ ಕೆಸರಲಿ ಹುಟ್ಟಿ?!

—"ತ್ರಿಮೂರ್ತಿ"

ವೈಷ್ಣವ ಶಿಖಾಮಣಿ
ಕನಕದಾಸ ರಚಿತ

ಹರಿಭಕ್ತಿಸಾರ

ಎಂಬ ಅಮೂಲ್ಯ ಕೃತಿಯನ್ನು
ನೀವು ಓದಿರುವಿರಾ?
ಚಂಚಲವಾದ ಮನಸ್ಸನ್ನು ಶುಭಕರವಾದ ವಿಷಯದ ಮೇಲೆ ಕೇಂದ್ರೀಕರಿಸಿ ಸತ್ಕಾರ್ಯಗಳಲ್ಲಿಯೇ ತತ್ಪರವಾಗುವಂತೆ ಮಾಡುವ ಕೃ
ಬೆಲೆ: 0-19 ಪೈಸೆ.
0-30 ಪೈಸೆ ಸ್ಟಾಂಪು ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಿನಿಂದ ಕಳಿಸಬಹುದು. ರಖಂ ಪ್ರತಿಗಳಿಗೆ ವಿಚಾರಿಸಿರಿ:-

ನವಯುಗ ಪ್ರೆಸ್, ಉಡುಪಿ.

ಓದಲೇ ಬೇಕಾದ ಉತ್ತಮ ಪುಸ್ತಕಗಳು

ಸಮಾಜ ಶಾಸ್ತ್ರಾಭ್ಯಾಸಗಳ ಶೋಧನೆ	ಎಸ್. ಕೃಷ್ಣಪ್ಪ	4	50
ಜೇನ ಹನಿಗಳು	ಕ. ರಾ. ಕೃ	3	50
ಚೆನ್ನಿಗ ಚೆಲುವಯ್ಯ	,,	2	25
ಆಯ್ದ ಜಾನಪದ ಗೀತೆಗಳು	,,	1	00
ಮಲೆ ಮಾದೇಶ್ವರ	,,	1	00
ನಾಡ ಹಾಡುಗಳು	,,	0	75
ಲಿಯೋ ಟಾಲ್‌ಸ್ಟಾಯ್	ಅನು: ಆನಂದ	3	00
ಜನತೆಯ ನಡುವೆ	ಅನು: ನಿರಂಜನ	2	50
ನನ್ನ ಬಾಲ್ಯ	,,	1	75
ನನ್ನ ವಿಶ್ವ ವಿದ್ಯಾನಿಲಯಗಳು	,,	2	00
ಕೆರೆಯ ನೀರನ್ನು ಕೆರೆಗೆ ಚೆಲ್ಲಿ	ಪಿ. ಲಂಕೇಶ್	2	50
ಕಾಲ ಹೇಯಿತು	ಶ್ಯಾಮಾ	2	75
ಬಸ್ ಕಂಡಕ್ಟರ್	ರಾಮರಾಜ	2	50
ನಮ್ಮಂಥವರೇ ಹೆಚ್ಚು ಮಂದಿ	ಮಿತ್ತೂರು	2	00
ಬಿಳಿ ಹಾಯಿ	ಅನು: ಕೆ. ಎಸ್. ಕೃಷ್ಣಮೂರ್ತಿ	2	00
ಬಂಗಾರದ ಒಳ್ಳಿ	ನಾಡಿಗೇರ ಕೃಷ್ಣರಾಯ	2	00
ಬಾಳ ನಿಯಮ	ಅನು: ರಾಘವೇಂದ್ರ	1	50
ರೈಲು ಕಂಬಿಯ ಮೇಲೆ	ಕೆ. ವಿ. ಸತ್ಯನ್.	1	50
ಗೌರೀಶಂಕರ ಅಣ್ಣಪ್ಪರೆಡ್ಡಿ	ನಾರಾಯಣ ಭಟ್ಟ	1	25
ಪೂಜೆ	,,	1	25
ಕೊಕ್ಕೋರೋ	ಡಿ. ವಿ. ರಾಘವೇಂದ್ರ	1	00
ಜ್ವಾಲಾಮುಖಿ	,,	0	62
ಸಂಸ್ಥಾನಿಕರು	ಗೋವಿಂದ ಮೂರ್ತಿ ದೇಸಾಯಿ	1	50
ಒಡ್ಡಿದ ಉರುಳು	ಅ. ಗೌ. ಕಿನ್ನಿಗೋಳಿ	1	25
ನಿಜಸುತ	ಸೇವಪವಿ ರಾಜಮಲ್ಲ	1	50
ಭಾರತದ ಇತಿಹಾಸ ಪಾಠಗಳು	ತ. ಸು. ಶಾಮರಾಯ	0	75
ಸಾಯದೇ ಎಷ್ಟು ಸೇರು ತುಪ್ಪ	ರಾಘವಣ್ಣ	0	75
ಮದುವೆ ಮಾಡಿ ನೋಡು	,,	0	75
ತಾಳಕಟ್ಟೋಕ್ಕೂಯಾರು	ಕೆ. ಗುಂಡಣ್ಣ	0	75
ಕುಮಾರಿ ಸುನೇತ್ರ	ತಲಚೇರಕರ	0	75
ಸ್ವಾಮಿ ವಿವೇಕಾನಂದ	ಉ. ಕಾ. ಸುಬ್ಬರಾಯಾಚಾರ್	0	5[illegible]
ಪುಟಾಣಿಗಳ ಪ್ರಪಂಚ	ಕೆ. ಎನ್. ಶಂಕ್ರಿ	0	6[illegible]
ದೇಶ ಭಕ್ತ	ಹೆಗಡೆ	0	5[illegible]
ಓಟಿನ ರಾಜ	ನರೇಂದ್ರ ಬಾಬು	0	5[illegible]

ನವಭಾರತ ಪುಸ್ತಕ ಭಂಡಾರ, ಉಡುಪಿ.

ಸರೂ ಕೊಟ್ಟ ಬಾಗಿನ

(ಎರಡನೇ ಪುಟದಿಂದ)

ನೂರಾಧ ಸರೋಜಿನಿಯ ಮನೆಗೆ ಬಂದಿದ್ದಳು. ಅನೂರಾಧಳಿಗೆ ತೇರ್ಗಡೆಯಾಗುವುದು ಅವಳಿದ್ದ ಸ್ಥಿತಿಯಲ್ಲಿ ಕಠಿಣವೇ ಆಗಿತ್ತೆಂಬ ವಿಷಯ ಸರೋಜಿನಿ ಅರಿತಿದ್ದಳು. ಆದರೂ ಅದು ಅಷ್ಟು ಮಹತ್ವದ ವಿಷಯವಲ್ಲವೆಂದೇ ಹೇಳುತ್ತ ಅನೂರಾಧಳನ್ನು ಸಂತೈಸಿದ್ದಳು.

ಸರೋಜಿನಿಯ ಮಾತುಗಳನ್ನು ಕೇಳಿ ಅನೂರಾಧ ಹುಚ್ಚಳಂತೆ ನಕ್ಕಳು. "ಸರೂ ನಿನಗೆ ಭ್ರಾಂತು ಅಷ್ಟೆ. ಒಂದು ಸಲ ಪರೀಕ್ಷೆಗೆ ಹಣ ಕಟ್ಟುವುದೇ ಸಾಕು ಸಾಕಾಯಿತು. ಆಗ ನೀನು ಕೊಟ್ಟ ಹಣವನ್ನೇ ಹಿಂತಿರುಗಿಸಿಲ್ಲ. ಇನ್ನು ಈಗ ಪುನಃ ಹಣವನ್ನೆಲ್ಲಿಂದ ಒದಗಿಸಲಿ ಸಾಧ್ಯ ಹೇಳು ....'ಎಂದು ಗಂಭೀರವಾಗಿ ಹೇಳಿದಳು.

"ಈ ಸಲವೂ ನಾನೇ ಹಣ ಕೊಡುತ್ತೇನೆ...." ಸರೋಜಿನಿ ಹೀಗೆ ಹೇಳಿದಾಗ ಅನೂರಾಧ- 'ಬೇಡ, ಬೇಡ-ಖಂಡಿತ ಬೇಡ. ನಿನ್ನಿಂದ ನಾನು ಹಣ ಪುನಃ ತೆಗೆದುಕೊಳ್ಳಲು ಸಾಧ್ಯವೇ ಇಲ್ಲ. ಖಂಡಿತ ಸಾಧ್ಯವಿಲ್ಲ..." ಎಂದು ನಿರ್ಧಾರದ ಉತ್ತರವನ್ನೇ ಕೊಟ್ಟು ಬಿಟ್ಟಳು.

'ಮತ್ತೇನು ಮಾಡುವೆ? ಯಾವ ನೌಕರಿ ಸಿಕ್ಕಬೇಕಾದರೂ ಎಸ್. ಎಸ್. ಎಲ್. ಸಿ. ಪರೀಕ್ಷೆ ಆಗಿರಲೇ ಬೇಕು. ಇಲ್ಲವಾದರೆ ಆ ವಿದ್ಯೆಗೆ ಬೆಲೆಯೇ ಇಲ್ಲ....'

'ನನಗಾಗಿ ನೀನು ಪುನಃ ತೊಂದರೆ ತೆಗೆದುಕೊಳ್ಳಬೇಡ. ಅಮ್ಮ ಏನು ಹೇಳುವರೋ ಅದರಂತೆ ಮಾಡುತ್ತೇನಷ್ಟೇ—' ಅನೂರಾಧಳ ಈ ಮಾತಿನಿಂದ ಸರೋಜಿನಿಗೆ ಸಮಾಧಾನವಾಗಲಿಲ್ಲ. ಹೇಗಾದರೂ ಮಾಡಿ ಅನೂರಾಧಳಿಗೆ ಎಸ್. ಎಸ್. ಎಲ್. ಸಿ. ಆಗುವಂತೆ ಮಾಡಬೇಕು. ಆಗಲೇ ಅವಳಿಗೆ ನೆಮ್ಮದಿ ಹಣ ಕೊಡುತ್ತೇನೆಂದರೆ ಅನೂರಾಧ ಒಪ್ಪುವ ಸೂಚನೆಯೇ ಇರಲಿಲ್ಲ

೦ ೦ ೦

ಭಾದ್ರಪದ ಮಾಸದ ಗೌರಿಯ ತದಿಗೆಯಂದು ಸರೋಜಿನಿಯ ಮನೆಯಲ್ಲಿ ಇತರ ಎಲ್ಲ ಹಬ್ಬಗಳಿಗಿಂತ ಒಂದು ಪಾಲು ಹೆಚ್ಚಿನ ಸಂಭ್ರಮ. ಕಾರಣ—ವರ್ಷಾವಧಿಯ ಆ ಹಬ್ಬದ ಜೊತೆಗೆ, ಸರೋಜಿನಿಯ ಹುಟ್ಟು ಹಬ್ಬವೂ ಅಂದೇ. ಒಬ್ಬಳೇ ಮಗಳ ಆ ಹುಟ್ಟು ಹಬ್ಬದ ವೈಭವ ಆ ಶ್ರೀಮಂತನ ಮನೆಯಲ್ಲಿ ಇನ್ನೆಷ್ಟಿರಬಹುದು? ವರ್ಣನೆಗಂತೂ ನಿಲುಕದ ಮಾತದು.

ಮನೆಗೆಲ್ಲ ಒಬ್ಬಳೇ ಮಗಳಾದ ಸರೋಜಿನಿ ಇನ್ನೂ ಹುಡುಗಾಟದ ಗಡಿಯನ್ನು ದಾಟಿಯೇ ಇರಲಿಲ್ಲ. ಚಿಕ್ಕಂದಿನಲ್ಲಿ ಬಿದ್ದ ಇಬ್ಬರು ತಮ್ಮಂದಿರಷ್ಟೇ ಅವಳಿಗಿದ್ದುದು. ಆ ಇಬ್ಬರನ್ನೂ ಕೀಟಲೆ ಮಾಡುತ್ತ, ನಗಿಸುತ್ತ, ಅಳಿಸುತ್ತಲೇ ಕಾಲ ಕಳೆಯುತ್ತಿದ್ದಳವಳು. ಪ್ರತಿ ವರ್ಷ ಗೌರಿಯ ಹಬ್ಬಕ್ಕೆ ಅವಳಿಗೆ ಜರಿಯುಳ್ಳ ಉಡುಗೊರೆ. ಒಂದು ಗೌರಿಯ ಹಬ್ಬಕ್ಕಾದರೆ ಮತ್ತೊಂದು ಅವಳ ಹುಟ್ಟು ಹಬ್ಬದ ನೆನಪಿಗಾಗಿ. ಒಂದಕ್ಕಿಂತ ಒಂದು ಭರ್ಜರಿಯೇ. ಪ್ರತಿ ವರ್ಷದಂತೆ ಈ ವರ್ಷವೂ ಸರೋಜಿನಿಯ ತಂದೆ ಮಗಳಿಗೆ ಭರ್ಜರಿಯಾದ ಧರ್ಮಾವರದ ರೇಷ್ಮೆಯಲ್ಲೇ ಲಂಗ ಚೋಳಿಗಳನ್ನು ಹೊಲಿಸಿದ್ದರು. ಇನ್ನೊಂದು ಉಡುಗೊರೆಗೆ ಬಟ್ಟೆ ಆರಿಸುವ ಜವಾಬ್ದಾರಿಯನ್ನು ಸರೋಜಿನಿಯೇ ಈ ಸಲ ಹೊತ್ತಿದ್ದಳು. ತಂದೆಯವರೂ ಸಹ ಅದಕ್ಕಾಗಿ ಐವತ್ತು ರೂಪಾಯಿಗಳನ್ನು ಮಗಳ ಕೈಗೆ ಕೊಟ್ಟಿದ್ದರು.

ಗೌರಿಯ ಹಬ್ಬದ ಹಿಂದಿನ ದಿನ ಗೌರಿಯನ್ನು ಕೊಂಡು ತರಲು ತಾನೇ ಪೇಟೆಗೆ ಹೊರಟು ನಿಂತಳು ಸರೋಜಿನಿ. ತಮ್ಮಂದಿರು ಮನೆಯಲ್ಲೇ ಕುಳಿತಲ್ಲಿಂದಲೇ ಕೂಗಿದರು—"ಸರೂ, ಸರೂ ನಮಗೂ ಗಣೇಶನನ್ನು ತರಬೇಕು." ಆಗಲೆಂದು ಹೇಳುತ್ತ ಸರೋಜಿನಿ ಪೇಟೆಗೆ ಹೊರಟಳು.

ಮುದ್ದಾದ ಗೌರಿಯನ್ನೂ, ಎರಡು ಗಣೇಶನನ್ನೂ ಕೊಂಡುಕೊಂಡಳು. ಜೊತೆಗೆ ಪುಟ್ಟದಾದ ಬಾಗಿನದ ಮರಗಳು, ಟೇಪುಗಳು, ಬಳೆ, ಎಲ್ಲವನ್ನೂ ಕೊಂಡಿದ್ದಾಯಿತು.

ಸ್ವರ್ಣಗೌರಿಗೆ ಭವ್ಯವಾದ ಮಂಟಪ ನಿರ್ಮಾಣವಾದಂತೆ ಸರೋಜಿನಿ ತಂದ ಪುಟ್ಟ ಗೌರಿಗೂ ಪ್ರತ್ಯೇಕವಾಗಿ ಪುಟ್ಟ ಮಂಟಪವೊಂದು ತಯಾರಾಯಿತು. ತಾನು ಕೊಡಬೇಕೆಂದಿದ್ದ ಮುತ್ತಲು ಬಾಗಿನವನ್ನು ಸರೋಜನಿಯೇ ಅಣಿಗೊಳಿಸಿದಳು. ಬಾಗಿನಕ್ಕೆ ಹಾಕುವ ಅಕ್ಕಿ ನಾಲ್ಕು ಬಗೆಯ ಧಾನ್ಯಗಳು, ಅರಿಸಿನ, ಕುಂಕುಮಗಳಲ್ಲದೆ ಒಂದು ಜೊತೆ ಟೇಪು, ಬಿಸ್ಕತ್ತಿನ ಪೊಟ್ಟಣ, ಪೆಪ್ಪರ್‌ಮೆಂಟ್, ಚಾಕಲೇಟ್‌ಗಳು, ಹೊಸದಾದ ರಬ್ಬರ್ ಬಳೆಗಳು— ಇವುಗಳೂ ಆ ಪುಟ್ಟ ಮುತ್ತಲಿನಲ್ಲಿ ಅಡಗಿ ಕುಳಿತವು.

ಭಾದ್ರಪದ ಮಾಸದ ಗೌರಿಯ ತದಿಗೆ ಸಂಭ್ರಮದಿಂದ ಇಣಿಕಿ ನೋಡಿತು. ಸರೋಜಿನಿ ಬೆಳಗಿನ ಸ್ನಾನಕ್ಕೆ ಎದ್ದು ಸ್ನಾನ ಮುಗಿಸಿ, ಹೊಸ ಬಟ್ಟೆ ತೊಟ್ಟು ಪೂಜೆಗೆ ಸಿದ್ಧಳಾದಳು. ತಾನೊಬ್ಬಳೇ ಪೂಜೆ ಮಾಡಿದರಾಯಿತೇ? ಈ ಬಾರಿ ಅನೂರಾಧಳೂ ತಾನೂ ಒಟ್ಟಿಗೇ ಪೂಜೆ ಮಾಡಬೇಕೆಂಬ ಆಸೆ ಅವಳದು. ಬಲಾತ್ಕಾರ ಮಾಡಿ ಅನೂರಾಧಳನ್ನೂ ಒಪ್ಪಿಸಿದ್ದಳು. ಎಂಟು ಘಂಟೆಯ ವೇಳೆಗೆ ಅನೂರಾಧಳೂ ಸಿದ್ಧಳಾಗಿ ಬಂದಾಗ ಸರೋಜಿನಿಗೆ ಸಮಾಧಾನವೆನಿಸಿತು.

ಮುತ್ತೈದೆಯರೆಲ್ಲ ಒಬ್ಬೊಬ್ಬರಾಗಿ ಬರತೊಡಗಿದರು. ಎಂಟೂವರೆ ಘಂಟೆಗೆ ಪೂಜೆ ಆರಂಭವಾಯಿತು. ಹತ್ತು ಘಂಟೆಯ ಸುಮಾರಿಗೆ ಪೂಜೆ ಮುಗಿಯಿತು. ಪುರೋಹಿತರು ತಮಗೆ ಬಂದ ದಾನ, ದಕ್ಷಿಣೆಗಳನ್ನು ಗಂಟು ಕಟ್ಟಿ ಮುಂದಿನ ಮನೆಗೆ ಹೊರಟು ನಿಂತಾಗ ಮುತ್ತೈದೆಯರಿಗೆಲ್ಲ ಗೌರಿಯ ಬಾಗಿನವನ್ನು ಕೊಡುವ ಹಾಗೂ ತೆಗೆದುಕೊಳ್ಳುವ ಸಂಭ್ರಮ. ಆವರ ಸಂಭ್ರಮವೆಲ್ಲ ಮುಗಿದ ವೇಳೆ ಸರೋಜಿನಿ ತಾಯಿಯನ್ನು ಕೇಳಿದಳು

'ಅಮ್ಮ ನಾನು ಬಾಗಿನ ಕೊಡುವುದು ಯಾವಾಗ?

"ನಮ್ಮದೆಲ್ಲ ಮುಗಿಯಿತಲ್ಲ, ನೀನು ಈಗಲೇ ಕೊಡುವೆಯಂತೆ. ನೀನು ಯಾರಿಗೆ ಕೊಡುತ್ತಿ?" ಎಂದು ಕೇಳಿದರು ಸರೋಜಿನಿಯ ತಾಯಿ.

"ಅಮ್ಮಾ, ನಾನು ಅನೂರಾಧಳಿಗೇ ಕೊಡುತ್ತೇನೆ..." ಎನ್ನುತ್ತ ಸಂತೋಷದಿಂದ ಕುಣಿದಳು ಸರೋಜಿನಿ. ಅವಳತಾಯಿಯೂದರೂ ಅವಳ ಇಷ್ಟಕ್ಕೆ ಅಡ್ಡಿಬರಲಿಲ್ಲ. ಸರೋಜಿನಿ ತಾಯಿಯ ಕಿವಿಯಲ್ಲಿ ಏನೋ ಪಿಸುಗುಟ್ಟಿದಳು. ಆಕೆ ನಸುನಗುತ್ತ ಮೆಲ್ಲಗೆ ಏನನ್ನೋ ಹೇಳಿದರು. ಸರೋಜಿನಿ ಜಿಂಕೆಯಂತೆ ಹಾರಿ ಕೋಣೆಗೆ ಓಡಿದಳು. ಅಲ್ಲಿಂದ ಬರುವಾಗ ಅವಳ ಕೈಯಲ್ಲಿ ಸಿಲ್ಕ್ ಬಟ್ಟೆಯೊಂದಿತ್ತು. ಅದನ್ನು ತನ್ನ ಮುತ್ತಲಿನಲ್ಲಿಟ್ಟು ಸರೋಜಿನಿ ಮೇಲೆ ತಂದು ಚಾಪೆಯ ಮೇಲಿಟ್ಟು. "ಬಾರೇ, ಅನೂ... ಅನೂ....ಬಾಗಿನ ಕೊಡುತ್ತೇನೆ." ಎಂದು ಕರೆದಳು.

ಸರೋಜಿನಿಯ ತಾಯಿ ವಿಳ್ಯೇದೆಲೆ, ಅಡಿಕೆ, ಬಾಳೆಹಣ್ಣು, ದಕ್ಷಿಣೆಗಳನ್ನು ಮುತ್ತಿಲಿನ ಮೇಲಿಟ್ಟು ಮಗಳ ಕೈಯಿಂದ ಅನೂರಾಧಳಿಗೆ ಕೊಡಿಸಿದರು. ಅನೂರಾಧಳಂದರೋ ನಾಚುತ್ತ ಪುಟ್ಟ ಮುತ್ತೈದೆಯಂತೆ ಮುದುಡಿ ಕುಳಿತಳು. ಅರಿಸಿನ, ಕುಂಕುಮ, ಗಂಧ, ಹೂವು; ಎಲ್ಲವನ್ನೂ ಕೊಟ್ಟಾಯಿತು. ತಮ್ಮ ಲಂಗದ ಅಂಚುಗಳಿಂದಲೇ ಆ ಇಬ್ಬರು ಹುಡುಗಿಯರೂ ಮುತ್ತಲಿನ ಬಾಗಿನವನ್ನು ಹಿಡಿದು ನಸುನಗುತ್ತ ಒಂದಂಡ ಬಾರಿ ತೂಗಾಡಿಸಿ ಕೊಳಕೊಟ್ಟರು.

ತಾನೂ ಬಾಗಿನವನ್ನು ಹಿಂತಿರುಗಿಸಬೇಕೆಂಬ ಆಸೆ ಅನೂರಾಧಳಿಗೆ. ತನ್ನ ಆಸೆಯನ್ನು ತಾಯಿಯ ಬಳಿ ವ್ಯಕ್ತಪಡಿಸಿದಾಗ "ಅನೂ ಪೂಜೆ ಮುಖ್ಯ. ಏನೋ ಒಂದಾಗಲಿ. ದೇವರು ನಮಗೆ ಶಕ್ತಿ, ಅನುಕೂಲಗಳನ್ನೊದಗಿಸಿದಾಗ ನೀನೂ ಬಾಗಿನ ಕೊಡುವೆಯಂತೆ" ಎಂದು ಸಮಾಧಾನ ಹೇಳಿದ್ದಳು.

ಅನೂರಾಧ ಮುತ್ತಲಿನ ಬಾಗಿನವನ್ನು ತೆಗೆದುಕೊಂಡು ಮನೆಗೆ ಹೊರಟರೆ ಸರೋಜಿನಿ ಬಿಡಬೇಕಲ್ಲ. "ಅನೂ, ಅನೂ ಪೂಜೆ ಮಾಡಿ, ಊಟ ಮಾಡದೇ ಹಾಗೇ ಹೋಗುವುದೇನೇ? ಖಂಡಿತ ಆಗದು." ಎಂದು ಹೇಳಿ ನಿಲ್ಲಿಸಿದಳು. ಸರೋಜಿನಿಯ ತಾಯಿಯ ಬಲಾತ್ಕಾರವೂ ಹೆಚ್ಚಾದುದರಿಂದ ಅನೂರಾಧ ಅಲ್ಲಿಯೇ ಉಳಿಯಬೇಕಾಯಿತು.

ಅನೂರಾಧ ತನ್ನ ಬಾಗಿನವನ್ನು ಸರೋಜಿನಿಯ ಕೋಣೆಯಲ್ಲೇ ಇಟ್ಟಿರಲು ಯೋಚಿಸಿ ತೆಗೆದುಕೊಂಡು ಹೊರಟಳು. ಕೈಜಾರಿ ಮೇಲೆ ಮುಚ್ಚಿದ್ದ ಮುತ್ತಲು ಕೆಳಗೆ ಉರುಳಿತು. ಮುತ್ತಲಿನಲ್ಲಿದ್ದ ಸಾಮಾನೆಲ್ಲ ಅನೂರಾಧಳಿಗೆ ಗೋಚರಿಸಿತು. ಮೊದಲು ಅವಳು ಕಂಡದ್ದೆಂದರೆ ಸಿಲ್ಕಿನ ಬಟ್ಟೆ ಮೇಲೊಂದು ಬಿಳಿಯ ಕವರು. ಅನೂರಾಧಳ ಕುತೂಹಲ ಹೆಮ್ಮಡಿಸಿತು. ಕವರನ್ನು ಬಿಚ್ಚಿದಳು ಒಳಗೆ ಅವಳು ಕಂಡದ್ದೇನು? ಹತ್ತು ರೂಪಾಯಿಯ ಹತ್ತು ಹೊಸ ನೋಟುಗಳು.

"ಸರೂ, ಸರೂ, ಏನೇ ಇದು?" ಎಂದು ಕೇಳುತ್ತ ಅನೂರಾಧ ಬೆಪ್ಪಾಗಿ ನಿಂತಳು.

"ಹೌದು ಅನೂ, ನಾನೇ ಬಾಗಿನದಲ್ಲಿ ಈ ಹಣವನ್ನು ಇಟ್ಟಿದೆ. ನನ್ನ ತಂದೆ ಈ ವರ್ಷ ನನಗೆ ಹಬ್ಬದ ಉಡುಗೊರೆಯಾಗಿ ಕೊಟ್ಟ ಹಣ ಅದು. ನಾನು ಹೊಸ ಲಂಗ ಹೊಲಿಸಿಕೊಳ್ಳಬೇಕಾಗಿತ್ತು. ನನ್ನ ಬೀರುವಿನ ತುಂಬ ಲಂಗಗಳು ತುಂಬಿ ಹೋಗಿವೆ. ಅವುಗಳ ಜೊತೆಗೆ ಮತ್ತೊಂದು ಲಂಗವನ್ನು ಹೊಲಿಸಲು ನನ್ನ ಮನಸ್ಸು ಒಪ್ಪಲಿಲ್ಲ. ಈ ಹಣ ಸದುಪಯೋಗ ಮಾಡಬೇಕೆಂಬ ಉದ್ದೇಶದಿಂದ ನಿನಗೆ ಕೊಟ್ಟಿದ್ದೇನೆ. ನೀನು ಪರೀಕ್ಷೆಗೆ ಹಣ ಕಟ್ಟಿ ಎಸ್.ಎಸ್.ಎಲ್.ಸಿ. ಪರೀಕ್ಷೆ ಮುಗಿಸಿಕೊಳ್ಳಬೇಕು ನಾನು ವಿಶ್ವಾಸದಿಂದ ಕೊಡುತ್ತಿರುವ ಈ ಹಣವನ್ನು ನೀನು ಬೇಡವೆನ್ನ ಕೂಡದು."ಎಂದು ಗಂಭೀರದಿಂದ ಹೇಳಿದಳು ಸರೋಜಿನಿ.

ಸರೋಜಿನಿಯ ಆ ಅಭಿಪ್ರಾಯವನ್ನು ಅವಳ ತಂದೆತಾಯಿಗಳು ವಿರೋಧಿಸಲಿಲ್ಲ. ಬದಲಾಗಿ ಮಗಳ ಔದಾರ್ಯವನ್ನು ಕಂಡು ಅವರು ಹೆಮ್ಮೆಪಟ್ಟರು. ಅನೂರಾಧಳ ಕಣ್ಣುಗಳಂತೂ ಕೃತಜ್ಞತೆಯಿಂದ ಕೂಡಿದ ಆನಂದ ಭಾಷ್ಪವೇ ಹರಿಯಿತ್ತು. "ಹೌದು ಪರೀಕ್ಷೆಗೆ ಹಣ ಕಟ್ಟಿ ಈ ಸಲ ಖಂಡಿತ ಪಾಸ್ ಮಾಡಿ ನಿನ್ನ ಮನಸ್ಸಿಗೆ ತೃಪ್ತಿಯನ್ನುಂಟು ಮಾಡಬೇಕು." ಎಂದು ನಿರ್ಧರಿಸಿದಳು ಅನೂರಾಧ.

ಸರೋಜಿನಿ ಬಿ ಎ ಯ ಕವನ್ನು ಕೇಳಿದಾಗ ಸಂತಸವ್ಯಾ ಕೃತಜ್ಞತೆಯು ಕಡಲಲ್ಲಿ ತೇಲಿ ಹೋದರು. ಅವರ ಮನಸ್ಸು ಸರೋಜಿನಿಯ ಶುಭವನ್ನೇ ಹಾರೈಸ ತೊಡಗಿತ್ತು.

ರೈತ ಭಾಂದವರ ಜೀವನ ಸಂಗಾತಿ............

ಇಮಾನಿ ಕ್ರೂಡ್ ಆಯಿಲ್ ಇಂಜಿನ್
(5, 7, 10 & 13 H. P.) ಮತ್ತು ಪಂಪು ಸೆಟ್ಟುಗಳು..........

ಎಸ್. ಇ. ಐ. ಇಲೆಕ್ಟ್ರಿಕ್ ಮೋಟಾರು
(¼ H.P. ಯಿಂದ 2. H.P. ವರೇಗೆ) ಮತ್ತು ಪಂಪು ಸೆಟ್ಟುಗಳು......

ಬ್ಲೂಪೀಟರ್ ಸ್ಟಾರ್ಟರುಗಳು..........

ಪ್ರಪ್ರಥಮ ವಿಮಾ ರಕ್ಷಣೆಗೆ ಒಳಪಟ್ಟಿರುವ ಸ್ಟಾರ್ಟರ್‌ಗಳು.

ಏಕೈಕ ವಿತರಕರು:—

ಸ್ವಾಮಿ ಇಲೆಕ್ಟ್ರಿಕಲ್ಸ್,

ರಿ. ಆಫೀಸು: ಕಾರ್ಕಳ. ಮಾರಾಟ ವಿಭಾಗ: ಬಲ್ಮಠ ರಸ್ತೆ, ಮಂಗಳೂರು.1

NAVAYUGA 29—9—1966
Registered with the Registrar of News Papers for India under No. K. N. 3646/'57

REGD. No. B. G. 176
LICENCE No. 31
Licensed to Post without Prepayment

ಚಾರು ಚರ್ಯನ

ಬಾಪೂ ಶತಮಾನ ಮತ್ತು ಮದ್ಯಪಾನ

ಶ್ರೀ ರಾಮಕೃಷ್ಣ ಹೆಗ್ಗಡೆಯವರು ಕರ್ನಾಟಕದ ಮಂತ್ರಿಮಂಡಲದಲ್ಲೊಂದು ಬೆಳಗುವ ತಾರೆ, ಎಳೆ ಹರೆಯದವರಾದ ಹೆಗ್ಗಡೆಯವರು ಕಾರ್ಯಕುಶಲರೂ ಹೌದು; ಕರ್ನಾಟಕದ ಹಿತಚಿಂತಕರೂ ಹೌದು. ಮಹಾರಾಷ್ಟ್ರ—ಕರ್ನಾಟಕ ಗಡಿ ವಿವಾದ, ಗೋವೆಯ ವಿಲೀನೀಕರಣಗಳ ಪ್ರಸಂಗಗಳಲ್ಲಿ ಇವರು ತಳೆದು ತಳೆಸಿದ ದಾರಿ ಎಲ್ಲರ ಮನಮೆಚ್ಚುವಂತಹುದು. ಕರ್ನಾಟಕ-ಮಹಾರಾಷ್ಟ್ರಗಳ ಮುಖ್ಯಮಂತ್ರಿಗಳ ಮೂರನೆಯ ಸುತ್ತಿನ ಮಾತುಕತೆಗಳಲ್ಲಿ ಭಾಗವಹಿಸಲು ಶ್ರೀ ನಿಜಲಿಂಗಪ್ಪನವರು ಅಸ್ವಸ್ಥರಾದುದರಿಂದ ಅಸಮರ್ಥರಾದರು. ಅವರು ಹೆಗ್ಗಡೆಯವರನ್ನು ಕಳಿಸಬಹುದೆಂದು ಸುದ್ದಿಯಿತ್ತು, ಅದೇಕೋ, ಹಾಗಾಗಲಿಲ್ಲ.

ಕಾಂಗ್ರೆಸ್ಸು ಎದುರಿಸುತ್ತಿರುವ ಇನ್ನೊಂದು ಸಮಸ್ಯೆ ಮದ್ಯಪಾನ ಪ್ರತಿಬಂಧ. ರಾಷ್ಟ್ರಪಿತ ಮಹಾತ್ಮಾ ಗಾಂಧಿಯವರ ರಚನಾತ್ಮಕ ಕಾರ್ಯವಿದು. ೧೯೭೦ರಲ್ಲಿ ಗಾಂಧೀ ಶತಮಾನೋತ್ಸವವನ್ನು ರಾಷ್ಟ್ರವಿಡೀ ಆಚರಿಸುವ ಹೊತ್ತಿನೊಳಗೆ ಅವರ ರಚನಾತ್ಮಕ ಕಾರ್ಯವಾದ ಇದನ್ನು ಇಡಿಯ ದೇಶದಲ್ಲಿ ಶಾಸನ ರೀತ್ಯಾ ವ್ಯವಹಾರಕ್ಕೆ ತರಬೇಕು ಎಂಬುದೊಂದು ಆದರ್ಶಪೂರ್ಣ ಉದ್ದೇಶ. ಆದರೆ, ಇದನ್ನು ಸಾಧಿಸಲು ಹೆಚ್ಚಿನ ಸರಕಾರಗಳು ಸಿದ್ಧವಿಲ್ಲ. ಇದಕ್ಕೇನು ಕಾರಣ?

ಕರ್ನಾಟಕದ ಅರ್ಥಮಂತ್ರಿಗಳೂ ಆದ ಶ್ರೀ ಹೆಗ್ಗಡೆಯವರು ಸ್ಪಷ್ಟ ಮಾತುಗಳಿಂದ ಹೇಳುತ್ತಾರೆ: ಸಂಪೂರ್ಣ ಪಾನ ನಿರೋಧವನ್ನು ಜ್ಯಾರಿ ಮಾಡುವುದರಿಂದ ಸರಕಾರದ ಬೊಕ್ಕಸಕ್ಕೆ ಆಗುವ ನಷ್ಟವನ್ನು ಕೇಂದ್ರ ಸರಕಾರವು ತುಂಬಿ ಕೊಡುವುದಾದರೆ, ಸಿದ್ಧವೆಂದು. ಮದ್ಯಪಾನ ಪ್ರತಿಬಂಧವು ಆಂಶಿಕವಾಗಿರುವುದರಿಂದ ಅದನ್ನು ಯಶಗೊಳಿಸುವುದು ತೀರ ಕಷ್ಟಮಯವಾಗುತ್ತದೆ. ಆದುದರಿಂದ ಸಮಗ್ರ ದೇಶದಲ್ಲಿ ಈ ಸಂಬಂಧದ ಶಾಸನ ವ್ಯವಹಾರಕ್ಕೆ ಬಂದಲ್ಲಿ ಮಾತ್ರ ಇದು ಸಾಧ್ಯವಾಗುತ್ತದೆ. ಟೇಕಚಂದ ಸಮಿತಿಯ ವರದಿಯೂ ಕಟ್ಟುನಿಟ್ಟಾದ ಪಾನ ಪ್ರತಿಬಂಧವನ್ನು ಸಮರ್ಥಿಸುತ್ತದೆ.

ಕರ್ನಾಟಕದ ಕಥೆಯೇನು? ಇಲ್ಲಿ ಇನ್ನೂ ಮೂರು ಜಿಲ್ಲೆಗಳಲ್ಲಿ ಪಾನಪ್ರತಿಬಂಧವಿರುವುದಿಲ್ಲ. ಇದ್ದ ಉಳಿದೆಡೆಯಾದರೂ ಶಾಸನವನ್ನು ಸಡಿಲಿಸಿದ್ದ ಶ್ರೀಮತಿ ಯಶೋಧರಮ್ಮ ದಾಸಪ್ಪನವರ ರಾಜಿನಾಮೆಯ ಪ್ರಸಂಗಗಳನ್ನು ಯಾರೂ ಮರೆಯಲಾರರು. ಸತ್ಯವನ್ನು ನುಡಿಯುವುದೊಂದು ಆದರ್ಶ, ಆಪತ್ತುಗಳಿಗೆ ಮುಕ್ತದ್ವಾರ. ಹಾಗೆಂದು ಸತ್ಯವನ್ನಾಡದಿರಿ ಎಂದು ಯಾರೂ ಅನ್ನಹೋಗುವುದಿಲ್ಲ. ಪಾನ ಪ್ರತಿಬಂಧವು ಕೇಂದ್ರಕ್ಕೆ ಮಾತ್ರ ಸಂಬಂಧಿಸಿದ ಆದರ್ಶವಲ್ಲ. ಜನತೆಯನ್ನು ಅಮಲಿನಿಂದ ಮತಿಗೆಡಿಸಿ ಸಂಪಾದಿಸುವ ಹಣ ಬೇಡವೆಂದರು ಗಾಂಧೀಜಿ. ಅಂದು ಒಪ್ಪಿದ್ದೆವು ನಾವು. ರಾಜ್ಯದ ಕೆಲವೆಡೆ ಇದೆ—ಇನ್ನು ಕೆಲವೆಡೆಯಿಲ್ಲ ಎಂಬ ಪಾನಪ್ರತಿಬಂಧ ಇದ್ದರೂ ಒಂದೇ, ಇರದಿದ್ದರೂ ಒಂದೇ. ಪಾನಪ್ರತಿಬಂಧ ಶಾಸನವನ್ನು ಸಡಿಲಿಸುತ್ತ ಬರುವ ಸರಕಾರ ಆ ಶಾಸನವನ್ನೇ ಕಿತ್ತೊಗೆದರೆ, ಬೊಕ್ಕಸ ಸರಿಯಾಗಿ ತುಂಬುವುದು. ಜನತೆಗೆ—ಈಗ ಕಳ್ಳಭಟ್ಟಿಗಳ ಮೂಲಕ ಆಗುತ್ತಿರುವ ಹಾನಿಗಳಿಗಿಂತ ಹೆಚ್ಚಿನ ಹಾನಿಯೇನೂ ಆಗದು.

○ ○ ○ ○

ಒರಿಸ್ಸಾದಲ್ಲಿ ಮುಖ್ಯ ಮಂತ್ರಿ ಸದಾಶಿವ ತ್ರಿಪಾಠಿಯವರ ವಿರುದ್ಧ ನಿಂತು ರಾಜಿನಾಮೆಯರ್ಪಿಸಿದ ಎಲ್ಲ ಮಂತ್ರಿಗಳೂ ಕಾಂಗ್ರೆಸಿನ ಮುಖ್ಯವಾಗಿ ಅಧ್ಯಕ್ಷ ಕಾಮರಾಜರ, ಸತ್ವಪರೀಕ್ಷೆಯನ್ನೇ ಮಾಡಿದರು. ಸುಮಾರು ಒಂದು ವಾರದ ತನಕ ಅಲ್ಲಿ ಉದ್ಭವಿಸಿದ್ದ ಅನಿಶ್ಚಿತ ಪರಿಸ್ಥಿತಿಯ ಮೇಲೆ ಲೋಕಸಭೆಯಲ್ಲೂ ಪ್ರಶ್ನೆಗಳ ಸುರಿಮಳೆಯಾಯಿತು. ಒರಿಸ್ಸಾದಲ್ಲಿ ಮಂತ್ರಿಮಂಡಳವೇ ಇಲ್ಲ; ಅಲ್ಲಿ ಸಂವಿಧಾನಾತ್ಮಕ ಆಡಳಿತೆಯು ಪತನಗೊಂಡಿದೆ—ಎಂದು ಮುಂತಾದ ಕೂಗುಗಳು ಪದೇ ಪದೇ ಪ್ರತಿಧ್ವನಿತಗೊಂಡುವು. ಮುಖ್ಯಮಂತ್ರಿಗಳು ಇನ್ನೂ ರಾಜಿನಾಮೆ ನೀಡಿಲ್ಲ—ಎಂದು ವಿರೋಧಿಗಳ ಕೂಗಿನಬ್ಬರವನ್ನು ಎದುರಿಸಬೇಕಾಯಿತು.

ಯಾರು ಹೇಳಿದರೂ ಮಂತ್ರಿಗಳು ರಾಜಿನಾಮೆಯನ್ನು ಹಿಂತೆಗೆದುಕೊಳ್ಳಲು ಒಪ್ಪದೆ ಕುತೂಹಲ ಸನ್ನಿವೇಶವನ್ನು ನಿರ್ಮಿಸಿದರು. ಮಾಜಿ ಮುಖ್ಯಮಂತ್ರಿ ಬಿಜೂ ಪಟನಾಯಕರ ಕೈವಾಡ ಇದರಲ್ಲಿ ಅಡಗಿದೆಯೆಂಬ ವದಂತಿಯೂ ಹರಡಿತು. ಮುಂದಿನ ಸಾರ್ವತ್ರಿಕ ಚುನಾವಣೆಯ 'ಬ್ರಹ್ಮಪಟ್ಟ'ವನ್ನು ಪಡೆದ ಅವರು ಒರಿಸ್ಸಾದಲ್ಲಿ ತನ್ನ ಕೈ ತೋರಿಸಲು ತೊಡಗಿದ್ದಾರೆ ಅನ್ನುವುದಕ್ಕೂ ಆರಂಭವಾಯಿತು. ಕೇಂದ್ರ ಗೃಹ ಮಂತ್ರಿ ಶಾಖೆಯೂ ಕಟ್ಟುನಿಟ್ಟಿನಿಂದ ಕ್ರಮ ಕೈಗೊಂಡಿತು. ಮಂತ್ರಿಗಳು ರಾಜಿನಾಮೆ ಹಿಂತೆಗೆದುಕೊಳ್ಳದೆ ಹೋದರೆ, ಅಲ್ಲಿ ರಾಷ್ಟ್ರಪತಿ ಆಳಿಕೆಯನ್ನು ಸಾರುವ ಬಗ್ಗೆಯೂ ದೃಢವಾದ ಕ್ರಮಗಳನ್ನು ಅದು ಕೈಕೊಂಡಿತು.

ತಮ್ಮ ಉದ್ದೇಶ (?) ಈಡೇರುವ ಲಕ್ಷಣಗಳು ದೂರವಾದುದರಿಂದಲೇ ಇರಬಹುದು, ಮಂತ್ರಿಗಳು ರಾಜಿನಾಮೆ ಹಿಂತೆಗೆದುಕೊಂಡರು—ಎಲ್ಲರೂ ಒಮ್ಮೆಗೆ ನಿಟ್ಟುಸಿರು ಬಿಟ್ಟರು. ಕಾಮರಾಜರು ಗೆದ್ದರು. ಸದ್ಯ ಬಿಕ್ಕಟ್ಟು ದೂರವಾದರೂ ಸಚಿವರ ಭಿನ್ನ ಮತಗಳ ಪರಿಣಾಮ ಚುನಾವಣೆಗಳಿಗೆ ಹುರಿಯಾಳುಗಳನ್ನು ಆರಿಸುವಾಗ ಮತ್ತೆ ಆರಂಭವಾಗದುಳಿಯದು. ಒರಿಸ್ಸಾದ ರಾಜಕಾರಣದಲ್ಲಿ ಬಿಜೂ ಪಟನಾಯಕರ ಕೈವಾಡವೆಷ್ಟಿದೆಯೆಂದು ಕಾಂಗ್ರೆಸ್ ವರಿಷ್ಠರು ಮೊದಲಿಗೆ ಗೊತ್ತುಹಚ್ಚಿ ಅದಕ್ಕೊಂದು ಮಿತಿ ಹೇರಬೇಕಾಗುವುದು ಅತ್ಯಗತ್ಯ.

○ ○ ○

ಅಮೇರಿಕನ್ ಅಧ್ಯಕ್ಷ ಲಿಂಡನ್ ಬಿ. ಜಾನ್ಸನ್ ಕೆಂಪು ಚೀನಾದ ಬಗ್ಗೆ ತಮ್ಮ ನೀತಿಯನ್ನು ಇನ್ನೂ ಬದಲಿಸಲು ಸಿದ್ಧರಿಲ್ಲ. ಅವರು ಮತ್ತವರ ರಾಜಕೀಯ ಸಲಹೆಗಾರರು ಕೆಲವು ತಿಂಗಳುಗಳ ಕಾಲ ಸುದೀರ್ಘ ವಿಚಾರ ವಿಮರ್ಶೆ ನಡೆಸಿಯೇ ತಮ್ಮ ಹಿಂದಿನ ನಿಲುಮೆಯನ್ನೇ ಮತ್ತೆ ಅಂಟಿಹಿಡಿದರು. ಕೆಂಪು ಚೀನಾಕ್ಕೆ ಸಂಯುಕ್ತ ರಾಷ್ಟ್ರ ಸಂಸ್ಥೆಯಲ್ಲಿ ಸ್ಥಾನ ದೊರೆಯಬೇಕು ಎಂಬುದೀಗ ಬಹುಕಾಲದಿಂದ ನನೆಗುದಿಗೆ ಬಿದ್ದ ವಿಷಯ. ಕುಮಿಟಾಂಗ್ ಚೀನಾಕ್ಕಿರುವ ಪ್ರಾತಿನಿಧ್ಯವನ್ನು ಕಿತ್ತು ಕೆಂಪು ಚೀನಾಕ್ಕೆ ಕೊಡಬೇಕು ಎಂಬುದೊಂದು ವಾದವಾದರೆ ಎರಡೂ ಚೀನಾಗಳಿಗೂ ನೀಡಬೇಕು ಎಂಬುದಿನ್ನೊಂದು ವಾದ. ಅಮೇರಿಕೆಯು ಈ ಎರಡಕ್ಕೂ ವಿರೋಧವಿದೆ. ಹಿಂದಿನ ಬಾರಿಯಲ್ಲಿ ಸಂ.ರಾ. ಸಂಘದ ಮುಂದೆ ಬಂದಿದ್ದ ಪ್ರಾತಿನಿಧ್ಯ ನೀಡುವ ಪ್ರಸ್ತಾಪವು ಬಹಳಷ್ಟು ಬಹುಮತದಿಂದ ಬಿದ್ದು ಹೋಗಿದ್ದಿತ್ತು. ಈ ವರ್ಷ ಮತ್ತೆ ಈ ವಿಚಾರ ಸಭೆಯ ಮುಂದೆ ಬಂದಿದೆ.

ಈ ವರ್ಷದ ಪರಿಸ್ಥಿತಿ ಮತ್ತಷ್ಟು ಉಲ್ಬಣಗೊಂಡಿದೆ. ನೆರೆಹೊರೆಯ ರಾಷ್ಟ್ರಗಳೊಡನೆ ಕೆಂಪು ಚೀನಾದ ವಿರಸವು ಹೆಚ್ಚಿ ಅವು ವಿವಂಚನೆಗೆ ಗುರಿಯಾಗಿವೆ. ವಿಯಟನಾಮದಲ್ಲಿ ಅದು ಮುಂದುವರಿಸುವ ಹೋರಾಟದಿಂದ ಜಗತ್ತು ಕಂಗೆಟ್ಟಿದೆ. ಸೋವಿಯತ್ ರಶ್ಯದೊಡನಿರುವ ಮತಭೇದದ ಬಿರುಕು ಬೆಸೆಯಲಾರದಷ್ಟು ವಿಶಾಲವಾಗಿದೆ. ಇಂಡೋನೇಶ್ಯಾದಲ್ಲಿ ಅದು ನಡೆಸಿದ ಕಪಟ ಕಾರಸ್ಥಾನವು ಬಯಲಾಗಿದೆ. ಹೆಚ್ಚಾಗಿ ಶುದ್ಧೀಕರಣದ ಗಾಳಿಯನ್ನು ಹರಡುತ್ತಿರುವ ಕೆಂಪು ರಕ್ಷಕರು, ಎಲ್ಲರಿಗೂ ಸಮಸ್ಯಾತ್ಮಕವಾಗಿಯೇ ನಿಂತಿದ್ದಾರೆ. ಇವೆಲ್ಲವುಗಳಿಂದ ಕೆಂಪು ಚೀನಾದ ಬಗ್ಗೆ ಜಾಗತಿಕ ಅಭಿಪ್ರಾಯ ಈಗ ಮತ್ತಷ್ಟು ಕೆಟ್ಟಿದೆ. ಆದುದರಿಂದ ಸಂಯುಕ್ತರಾಷ್ಟ್ರ ಸಂಘವು ಅದಕ್ಕೆ ಪ್ರಾತಿನಿಧ್ಯ ನೀಡುವ ಪ್ರಸ್ತಾಪವನ್ನು ಪ್ರಚಂಡ ಬಹುಮತದಿಂದ ತಿರಸ್ಕರಿಸುತ್ತದೆ—ಇದು ಜಾನ್ಸನ್ನರ ಖಚಿತಾಭಿಪ್ರಾಯ; ಅಲ್ಲವೆನ್ನುವುದು ಸಾಧ್ಯವಿಲ್ಲ

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ದಿ। ಶ್ರೀ ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—
ಆಂಗ್ಲ ಸ್ವಯಂಬೋಧಿನಿ

ಸುಲಭದಲ್ಲಿ ಇಂಗ್ಲಿಷ್

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ.ಎರಡು. ಉತ್ತಮ ಪ್ರತಿ:ರೂ.ಎರಡೂವರೆ(ಟ.ಖ. ಪ್ರತ್ಯೇಕ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ

ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ:ರೂ. 1-25 (ಟ.ಖ.ಪ್ರತ್ಯೇಕ)

ಹೊಸಕೆರೆ ಚಿದಂಬರಯ್ಯನವರ
ಶ್ರೀಮದ್ಭಗವದ್ಗೀತೆಯ ಸಮೂಲ ಭಾಷಾಂತರ

ಗೀತೆಯ ಕೈಗನ್ನಡಿ

300 ಪುಟಗಳಿಗೂ ಮಿಕ್ಕಿದೆ. ಕೈಹೊತ್ತಗೆಯ ಆಕಾರದಲ್ಲಿದೆ.
ಬೆಲೆ: ಸಾದಾ ಪ್ರತಿ ರೂ. ೧
ಗೀತೆಯ ಕೈಗನ್ನಡಿಯ ಒಂದು ಪ್ರತಿ ಬೇಕಾದವರು ರೂ. 1-50ನ್ನು ಮನಿಯಾರ್ಡರು ಮಾಡಿ ತರಿಸಿಕೊಳ್ಳಬಹುದು.
—ಪ್ರತಿಗಳಿಗೆ ಬರೆಯಿರಿ—
ನವಭಾರತ ಪುಸ್ತಕ ಭಂಡಾರ, ಉಡುಪಿ ಅಥವಾ
ನವಯುಗ ಪ್ರೆಸ್, ಉಡುಪಿ.

"NAVAYUGA" Kannada Weekly is recommended for High Schools and Public Libraries by the Director of Public Instruction in Mysore, Bangalore vide their letter No. CL-4.17-4/65-66 dated 26—4—1966.

Edited, Printed & Published by K. H. Shetty at the Navayuga Press, Udipi, S. India.

ನವಯುಗ

6—10—1966

NAVAY

೧೦ ಪೈಸೆ

ಕಥಾ ಪ್ರಪಂಚ

ಇದು ಆರ್ಥಿಕ ಪ್ರಪಂಚ

ಬರೆದವರು

ಶ್ರೀ. ಐ. ಎಚ್. ಶಾಂತಾರಾಮ ಶೆಟ್ಟಿ, ಬ್ರಹ್ಮಾವರ.

'ಅಮ್ಮಾ...'

'ಯಾರ್ರೀ...'

'ಕವಳವಮ್ಮಾ...'

'ಕವಳವಂತೆ ಕವಳ. ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಿ ಹತ್ತೊಂಭತ್ತು ವರುಷ ಸಂದರೂ ಕವಳ ಅಭ್ಯಾಸ ಹೋಗಲಿಲ್ಲ. ಏನು ದೇಶವೋ, ಏನು ರಾಜಕಾರಣಿಗಳೋ! ದಾರಿದ್ರ್ಯ ನಿರ್ಮೂಲನೆ ಮಾಡುತ್ತೇವೆಂತ ಬೊಬ್ಬೆ ಇಡುತ್ತಾರೆ. ಕಾಂಗ್ರೆಸ್ಸಿಗರು' ಎಂದು ವಟಗುಟ್ಟುತ್ತಾ ಹೊರಗೆ ಬಂದರು ವಿಶಾಲಾಕ್ಷಮ್ಮ.

"ಏನ್ರಿ...."

'ಒಂದು ತುತ್ತು ಕವಳವಮ್ಮ!"

'ಏನೋ ಇಷ್ಟು ಆಜಾನು ಬಾಹುವಾದ ನಿನಗೆ ಕಾಯಕ ಮಾಡಲು ಏನು ಧಾಡಿ? ನಿನಗೆ ಭಿಕ್ಷೆ ಬೇಡಲು ನಾಚಿಕೆಯಾಗುವುದಿಲ್ಲವೋ?'

'ಅಮ್ಮಾ ಈ ನಿರ್ಗತಿಕನಾದ ನನ್ನನ್ನು ನಂಬಿ ಯಾರು ಕೆಲಸ ಕೊಡುತ್ತಾರೆ? ತಾಯಿ. ನನಗೆ ಹೊಟ್ಟೆಬಟ್ಟೆ ಕೊಡಲು ಯಾರಾದರೂ ತಯಾರಿದ್ದರೆ ಕೆಲಸಕ್ಕೆ ಸೇರುತ್ತಾನೆ ತಾಯೀ"

"ಹಾಗಾದರೆ ನಮ್ಮಲ್ಲಿ ಕೆಲಸಕ್ಕೆ ನಿಲ್ಲುತ್ತೀಯೋ?"

"ಆದೀತು ತಾಯಿ" ಎಂದು ಒಪ್ಪಿಕೊಂಡನು ನಿರ್ಗತಿಕನಾದ ತಿಮ್ಮಪ್ಪ.

o o o

ಸಾಹುಕಾರ್ ವೆಂಕಟೇಶಯ್ಯನವರ ಪತ್ನಿ ವಿಶಾಲಾಕ್ಷಮ್ಮನಿಗೆ, ತಿಮ್ಮಪ್ಪ ಬಂದು ಸೇರಿದ ಮೇಲೆ ಸೋಫಾ ಬಿಟ್ಟು ಏಳುವ ಪ್ರಮೇಯವೇ ಬರಲಿಲ್ಲ. ಅವರ ಸೀರೆ ಒಗೆಯುವುದರಿಂದ ಹಿಡಿದು ಅವರ ಮಗಳನ್ನು ಸ್ಕೂಲಿಗೆ ಬಿಟ್ಟು ಬರುವ ವರೆಗೆ ಎಲ್ಲಾ ಕೆಲಸವನ್ನು ವಹಿಸಿದರು ನಿರ್ಗತಿಕನಾದ ಹದಿನೆಂಟು ವರ್ಷದ ಯುವಕ ತಿಮ್ಮಪ್ಪನಿಗೆ.

o o o

ತಿಮ್ಮಪ್ಪನಿಗೆ ಕಾಲಕ್ರಮೇಣ ಈ ಕೆಲಸ ತನ್ನ ಆತ್ಮಗೌರವಕ್ಕೆ ಕುಂದು ಎಂದು ತೋರತೊಡಗಿತು. ಆದರೂ ಸೈರಿಸಿಕೊಂಡು ಹೋಗುತ್ತಿದ್ದನು.

ಒಂದು ದಿನ ಎಲ್ಲರೂ ಊಟ ಮಾಡಿ ಸ್ವಲ್ಪ ಅನ್ನ ಮಿಕ್ಕಿತು.

ಇದನ್ನು ನೋಡಿ ವಿಶಾಲಾಕ್ಷಮ್ಮ "ತಿರುಪೆ ಬೇಡುವ ಬೇವರ್ಸಿಗೆ, ಅನ್ನ ಹಾಳು ಮಾಡುವ ಸಂಗ್ತಿ ಬಂದು ಹೋಯಿತು" ಎಂದರು. ಇದು ತಿಮ್ಮಪ್ಪನಿಗೆ ಸಹಿಸಲಸಾಧ್ಯವಾಯಿತು. ರಾತ್ರಿ ಎಲ್ಲರೂ ಊಟ ಮಾಡಿ ಮುಗಿದ ಮೇಲೆ ಯಾರಿಗೂ ಹೇಳದೆ ಹೊರಟು ಹೋದನು.

ಎರಡು ಮೈಲು ನಡೆದ ಮೇಲೆ ಅವನಿಗೆ ಬವಳಿ ಬಂದಂತಾಗಿ ರಸ್ತೆಯಲ್ಲಿ ಬಿದ್ದು ಬಿಟ್ಟನು.

ಅದೆ ಸಮಯಕ್ಕೆ ವಿದ್ಯಾಧರ ಕಾಲೇಜಿನ ಪ್ರಿನ್ಸಿಪಾಲರಾದ ಕಲ್ಯಾಣ ರಾಯರು, ಎರಡನೆ ದೇಖಾವೆ ಸಿನೇಮಾ ಮುಗಿಸಿಕೊಂಡು ಬರುತ್ತಿದ್ದವರು ದಾರಿಯಲ್ಲಿ ಬಿದ್ದಿದ್ದ ಈತನನ್ನು ಕಾರಿನಲ್ಲಿ ಹಾಕಿಕೊಂಡು ತಮ್ಮ ಮನೆಗೆ ಹೋಗಿ ಶೈತ್ಯೋಪಚಾರ ಮಾಡಿದರು. ಚೇತರಿಸಿಕೊಳ್ಳಲು ತಮ್ಮ ಮನೆಯಲ್ಲಿ ಇಟ್ಟುಕೊಂಡ. ಅವನ ವೃತ್ತಾಂತವನ್ನು ಕೇಳಿದರು. ಅವರಿಗೆ ಆತನ ವಿದ್ರಾವಕ ವೃತ್ತಾಂತ ಕೇಳಿ ದಯೆ ಹುಟ್ಟಿ ತಮ್ಮಲ್ಲಿ ಮನೆಯ ಮಗನಂತೆ ಇಟ್ಟುಕೊಂಡರು. ಸ್ವಲ್ಪ ಸಮಯದ ಮೇಲೆ ಅವರಿಗೆ ವರ್ಗವಾದ ಪ್ರಯುಕ್ತ ಅವನಿಗೆ ಅದೆ ಊರಿನಲ್ಲಿ ಜೀವನೋಪಾಯಕ್ಕೆ ಒಂದು ಅಂಗಡಿ ಹಾಕಿ ಕೊಟ್ಟು ಹೋದರು.

o o o o

ಧರ್ಮಕರ್ಮ ಸಂಯೋಗದಿಂದ ವೆಂಕಟೇಶಯ್ಯನವರ ಪತ್ನಿ ವಿಶಾಲಾಕ್ಷಮ್ಮ ಒಂದು ದಿನ ಆ ಮಾರ್ಗವಾಗಿ ಬಂದರು. ತಿಮ್ಮಪ್ಪನ ಅಂಗಡಿಯನ್ನು ನೋಡಿ ಈತನು ಎಲ್ಲೋ ಹಣ ಕಳವು ಮಾಡಿಕೊಂಡು ಬಂದು ಅಂಗಡಿಯನ್ನು ಇಟ್ಟಿರಬೇಕೆಂದು ಊಹಿಸಿ ತಮ್ಮ ಮನೆಯಿಂದಲೆ ಕಳವು ಮಾಡಿದನೆಂದು ಏಕೆ ಸಾಧಿಸಬಾರದು ಎಣಿಸಿ ಪತಿಯೊಡನೆ ತಿಳಿಸಿದರು

ವೆಂಕಟೇಶಯ್ಯನವರು ಮೊದ ಮೊದಲು ಒಪ್ಪಲಿಲ್ಲವಾದರು ಕಡೆಗೆ ದುರಭಿಲಾಷೆಯಿಂದ ಹೆಂಡತಿಯ ಮಾತಿಗೆ ಸೈಗುಟ್ಟಿದರು.

ತಿಮ್ಮಪ್ಪನು ತಮ್ಮಲ್ಲಿ ಕೆಲಸಕ್ಕಿದ್ದನೆಂದು, ನಾನು ಸ್ನೇಹಿತರ ಮನೆಯಲ್ಲಿ ಇದ್ದಾಗ ಎರಡು ಸಾವಿರ ರೂಪಾಯಿ ತರಲು ಹೇಳಿದನೆಂದ. ನನ್ನ ಪತ್ನಿಯೊಡನೆ ಹೇಳಿ ಹಣ ತೆಗೆದುಕೊಂಡು ಪರಾರಿಯಾದನೆಂದು ಕೋರ್ಟಿನ ಪ್ರಾಸಿಕ್ಯೂಷನ್ನಿನಲ್ಲಿ ತಿಳಿಸಿದರು, ವೆಂಕಟೇಶಯ್ಯ. ಕೋರ್ಟು ತಿಮ್ಮಪ್ಪನಿಗೆ ಆರು ತಿಂಗಳು ಸಜೆ ಎರಡು ಸಾವಿರ ರೂಪಾಯಿ ದಂಡವನ್ನು ವಿಧಿಸಿತು. ವಿಷಯವನ್ನು ತಿಳಿದ ಕಲ್ಯಾಣರಾಯರು ಅಪೀಲು ಮಾಡಿದರೂ ಆ ಕೋರ್ಟಿನಲ್ಲಿ ಪ್ರಾಸಿಕ್ಯೂಷನ್ನಿನ ವಿವರ ನಂಬಲರ್ಹವಾಗಿಲ್ಲವೆಂದೂ ಕೆಳ ಕೋರ್ಟಿನ ತೀರ್ಪನ್ನು ಖಂಡಿಸಿ ಕೇಸು ವಜಾಮಾಡಿದರು.

o o o

ಅಂದು ಮಂಗಳವಾರ ತಿಮ್ಮಪ್ಪನು ರಾತ್ರೆ ಅಂಗಡಿಯನ್ನು ಮುಚ್ಚಿ ಮನೆಯ ಕಡೆ ಹೊರಟನು ಒಂದು ಗುಡಿಸಲಿನ ಹಿಂದೆ ಇಬ್ಬರು ಪಿಸ-ಪಿಸನೆ ಮಾತಾಡುವುದು ಕೇಳಿಸಿತು. ಅದೇನೆಂದು ಕೇಳಲು ತಿಮ್ಮಪ್ಪನಿಗೆ ಕುತೂಹಲ ಹುಟ್ಟಿತು.

ಆತನು ಮರೆಯಲ್ಲಿ ನಿಂತು ಅವರ ಮಾತನ್ನು ಆಲಿಸಿದನು. ಒಬ್ಬ— ಹೌದಾ ಡಿಸೋಜರೆ, ಆ ಕೊಡಾ ಎಷ್ಟು ಭಾರ ಇರ್ಬಹುದು ಮತ್ತೊಬ್ಬ— ಮೂರುವರೆ ಪಂಥೇರು ಇರ್ಬಹುದು, ಖಾನ್ ಸಾಹೇಬ್ರೆ ಖಾನ್‌ಸಾಹೇಬ್— ಡಿಸೋಜರೆ ಜಾಗ್ರತೆ ಮಾಡಿ ಇಟ್ಟಿದ್ರ್ಯಾ ಇಲ್ವಾ? ಡಿಸೋಜ—ಅಲ್ಲಿ ಒಂದು ಹಲಸಿನ ಮರದ ತೋರುತ್ತದೆ ನೋಡಿ, ಖಾನ್ ಸಾಹೇಬ್ರೆ ಆ ಹಲಸಿನ ಮರದಡಿ ಹೊಂಡಾ ತೆಗ್ದು ಆ ವ ರೊ ಳ ಗೆ ಹುಗ್ದು ಅದರ ಮೇಲೆ ಕಲ್ಲು ಇಟ್ಟು ಬಂದಿದ್ದೇವೆ.

ಖಾನ್‌ಸಾಬ್— ಹಾಗಾದರೆ ನಾನ್ ನಾಳೆ ರಾತ್ರಿ ಬರ್ತೇನೆ. ಅದನ್ನು ಹಂಚ್ಕೊಂಡ್ ಬಿಡೋಣ.

ಅವರು ಹೊರಟು ಹೋದರು. ಇದನ್ನೆಲ್ಲಾ ಮರೆಯಲ್ಲಿ ನಿಂತು ಕೇಳುತ್ತಿದ್ದ ತಿಮ್ಮಪ್ಪನಿಗೆ ಇವರು ಕಷ್ಟಪಟ್ಟು ಸಂಪಾದಿಸದೆ ಇದ್ದ ಹಣವನ್ನು ತಾನೇಕೆ ಬಳಸಬಾರದು ಎಂದು ತೋಚಿತು ತಿಮ್ಮಪ್ಪನು ಮನೆಗೆ ಹೋಗಿ ಊಟ ಮಾಡಿ ಹಾಗೂ ಹೀಗೂ ಮಧ್ಯ ರಾತ್ರಿಯ ವರೆಗೆ ಕಾಲ ಕಳೆದನು.

ಅನಂತರ ಸೇವಕನೊಡನೆ 'ನಾನೀಗ ಬರ್ತೇನೆ; ಅಗಳಿ ಹಾಕಿಕೊಳ್ಳಬೇಡ' ಎಂದು ಹೇಳಿ ಹೊರಟು ಆ ಜಾಗಕ್ಕೆ ಬಂದು, ಹಲಸಿನ ಮರ ಯಾವ ದಿಕ್ಕಿಗೆ ಉಂಟು ಎಂತ ಶೋಧಿಸಿದನು ಪೂರ್ವ ದಿಕ್ಕಿನಲ್ಲಿ ಹಲಸಿನ ಮರವಿರುವುದು ಗೋಚರಿಸಿತು ಮೆಲ್ಲನೆ ಅಲ್ಲಿ ಬಂದು ತಡಕಾಡಿದನು. ಅವರು ಮಾತಾಡುತ್ತಿದ್ದ ಹಾಗೆ ಅಲ್ಲಿ ಕಲ್ಲೂ ಇದ್ದಿತು. ಮೆಲ್ಲನೆ ಕಲ್ಲು ಬದಿಗೆ ಸರಿಸಿ ಮಣ್ಣು ಕರಡ ತೊಡಗಿದನು. ಎರಡು ಅಡಿ ತೋಡಿದ ಮೇಲೆ ಒಂದು ಕೊಡ ಸಿಕ್ಕಿತು. ಅದನ್ನು ತೆಗೆದು ಮಣ್ಣು ಮುಚ್ಚಿ ಕಲ್ಲೂ ಹೇರಿ ಮನೆಗೆ ಬಂದನು ತಿಮ್ಮಪ್ಪ

o o o

ದುಡ್ಡಿದ್ದವನೆ ದೊಡ್ಡಪ್ಪನಾದ ಈ ಆರ್ಥಿಕ ಪ್ರಪಂಚದಲ್ಲಿ. ತಿಮ್ಮಪ್ಪನು ತಿಮ್ಮಪ್ಪರಾಯರಾದರು.

ತಿಮ್ಮಪ್ಪರಾಯರೆಂದರೆ ಅರಿಯದವರೆ ಇರಲಿಲ್ಲ ಪಂಚಾಯತಿಯಿಂದ ಹಿಡಿದು ಸಂಘ ಸಂಸ್ಥೆ ವರೆಗೆ ಅವರು ಇಲ್ಲದೆ ಮುಂದೊತ್ತುವ ಧೈರ್ಯ ಆ ಊರಿನಲ್ಲಿ ಯಾರಿಗೂ ಇರಲಿಲ್ಲ. ಹೊಸ ವರ್ಷದ ಹೊಸ ದಿನ ಸಾಹುಕಾರ್ ವೆಂಕಟೇಶಯ್ಯನವರ ಸವಾರಿ ತಿಮ್ಮಪ್ಪನವರ ಮನೆಗೆ ಚಿತ್ತೈಸಿತು

ಮೂರು ಮೂರು ಬಾರಿ ತಲೆ ತಗ್ಗಿಸಿ ಕೈ ಮುಗಿದು ಕುಳಿತುಕೊಂಡರು ವೆಂಕಟೇಶಯ್ಯನವರು.

ಇದನ್ನು ನೋಡಿ ತಿಮ್ಮಪ್ಪ ರಾಯರು ಕೇಳಿದರು.

"ಏನು ವೆಂಕಟೇಶಯ್ಯನವರೇ, ಅಪರೂಪವಾಗಿ ಈ ಬಡವನ ಮನೆಗೆ ಬಂದಿರಿ?"

"ಹಾಗೆಂದರೆ ಉಂಟೆ ಸ್ವಾಮಿ? ತಮ್ಮಂಥವರ ಮನೆಗೆ ಬರವುದೇ ಒಂದು ಮಹಾ ಭಾಗ್ಯವಲ್ಲವೇ ಸ್ವಾಮಿ?"

'ಅದಿರಲಿ ಈಗ ಏನು ಬಂದಿರಿ?'

(ಹನ್ನೊಂದನೇ ಪುಟ ನೋಡಿರಿ)

ಅತ್ಯಾಧುನಿಕ ಸಲಕರಣೆ — ಸೌಕರ್ಯಗಳಿಂದ ಕೂಡಿದ
ಭೋಜನ, ಉಪಾಹಾರ ಮತ್ತು ವಸತಿ ಗೃಹ



ಹೊಟೆಲ್ ಶಿವಪ್ರಸಾದ

ಫೋನ್: 77 ಕುಂದಾಪುರ, ದ. ಕ.

FOR MODERN MAN AN ACCURATE WRIST WATCH IS AN ESSENTIAL TOOL!



FOR ALL TYPES OF
- WATCHES
- CLOCKS
- TIMEPIECES

VISIT OUR NEW ENTERPRISE

KARNATAK WATCH Co.,
13, GUNBOW STREET,
BOMBAY-1

- We undertake all sorts of repairings of all types of watches, clocks, timepieces etc., under supervision of experts.

Prop: Kadekar Krishna N. Shetty

ಗೇಹ ರಾಜ್ಯದಲ್ಲಿ

ಚಿಂತೆಯೇ ಜೀವನ, ಆಸೆಯೇ ಪ್ರಾಣ

'ಹೌದ್ರಿ....'

'ಹೌದು....'

'ಎಂಥದು?'

'ನೀನು ಕೇಳಿದ್ದು...'

'ನಾನು? ನೋಡಿ; ಇಂಡೋನೇಶ್ಯಕ್ಕೆ ಮತ್ತೆ ಸಂಯುಕ್ತ ರಾಷ್ಟ್ರ ಸಂಘದಲ್ಲಿ ಪ್ರವೇಶ ಸಿಕ್ಕಿತಂತಲ್ಲಾ...."

"ಹ್ಞಂ...."

"ಅದು ಹಿಂದೊಮ್ಮೆ ತಾನಾಗಿಯೇ ಹೊರ ಹೋದದ್ದಲ್ವಾ...?"

'ಏನಾಯ್ತು? ಆಗ ಹೋಗೆಂದು ಯಾರೂ ದೂಡಲಿಲ್ಲ; ಈಗ ಬಾರೆಂದು ಕರೆಯಲೂ ಇಲ್ಲ.'

'ಅದು ಹೌದು, ಆದರೂ ಒಮ್ಮೆ ದಿಟ್ಟತನ ತೋರಿ ಹೊರನಡೆದವನನ್ನು ಮತ್ತೆ ಮನೆಗೆ ಬರಮಾಡಿ ಕೊಳ್ಳುವುದು ಎಷ್ಟರ ಮಟ್ಟಿಗೆ ನ್ಯಾಯವಂತ....?

'ನೋಡಮ್ಮ ಕೆಲವೊಮ್ಮೆ ಹಾಗೆ ಮಾಡಲೇ ಬೇಕಾಗುತ್ತೆ....'

'ಯಾಕೆ?'

'ಒಂದು ಮನೆಯೆಂದಾದ ಮೇಲೆ ಹತ್ತು ಜನರು ಬರುತ್ತಾ ಹೋಗುತ್ತಾ ಇರುತ್ತಾರೆಂದ ಮೇಲೆ ಒಂದಲ್ಲ ಒಂದು ಕಾರಣದಿಂದ ಮನಸ್ತಾಪ ಬರುವುದು, ಮುಖ ಸೊಟ್ಟ ಮಾಡುವುದು ಸಹಜವೇ...."

"ಅಂದರೆ?"

"ಅಂದರೆಂಥದು? ನೋಡು, ನಾನೂ ನೀನೂ ಆಡಿ ಆಡಿ ಮುಂದುವರಿದ್ರೆ ನೀನೇ ದೂರ ಓಡಿ ಹೋಗುತ್ತೀಯ. ಮತ್ತೆ ಹತ್ತಿರ ಬಂದಾಗ ನಾನು ಬರಸೆಳೆದುಕೊಳ್ಳದೆ.."

"ಅಯ್ಯೋ...ನಿಮ್ಮ... ಇಂಡೋನೇಶ್ಯ ಅದೆಂಥದೋ ಮತ್ತೊಂದು ಏಶ್ಯ ಇದೆ ನೋಡಿ....'

"ಮಲೇಶ್ಯ...'

'ಹೌದು....ಅದರೊಡನೆ ಹೊಡೆದಾಡಲು ತೊಡಗಿದಾಗ ತಾನೆ ಭಿನ್ನಾಭಿಪ್ರಾಯದಿಂದ ಹೊರ ನಡೆದದ್ದ?'

'ಹೌದು. ನೋಡು, ಒಂದು ಕಥೆ ಕೇಳಿದ್ದೀಯ?'

'ಒಂದೂಂತೇನು? ನೂರು ಕೇಳಿದ್ದೇನೆ?

'ಅದು ಸರಿಯೇ ಅನ್ನು. ಆದ್ರೆ ನಾನು ಹೇಳೋ ಕಥೆ ಕೇಳಿದ್ದಿಯಾ?"

'ಅಯ್ಯಯ, ಹ್ಞಂ...ನೀವು ಹೇಳಿರೋ ಕಥೆಯನ್ನು ಓದಿದ್ದೇನೆ ಕೇಳಿದ್ದೇನೆ...'

'ಅಲ್ರೆ, ಈಗ ಹೇಳೋದನ್ನ....'

'ಒಳ್ಳೆ ಪಜೀತಿಯಾಯ್ತಲ್ಲ?'

'ಯಾಕೆ? ಕೂಸಿಗೆ ಮೊದಲು ಕುಲಾವಿ ಅಂದ ಹಾಗೆ...."

'ಅಂದ್ರೆ...."

"ನೀವು ಏನು ಕಥೆ ಹೇಳ್ತೀರಂತ ನನಗೆ ಹೇಗೆ ಗೊತ್ತಾಗಬೇಕು? ನಿಮ್ಮ ಹೃದಯದಲ್ಲಿರೋ ವಿಷಯವನ್ನ ನಾನು ಹೇಗೆ ತಿಳಿದು ಕೊಳ್ಳಲಿ?"

"ಆದ್ರೆ ನೋಡು, ಅಂತಹ ಶಕ್ತಿಯಿದ್ದರೆ ಮಾತ್ರ ನಮ್ಮ ಜೀವನ ಬೆಳಗುತ್ತೆ...."

'ಇಲ್ಲವಾದ್ರೆ....'

'ಮಂದವಾಗುತ್ತೆ...."

"ಹ್ಞಂ, ನಾನಂತೂ ಎಮ್ಮೆ ಹಾಲು ಕುಡಿದವಳೂನ್ನಿ. ಮಂದ ಬುದ್ಧಿಯವಳು. ಸದ್ಯ ನೀವಾದ್ರೂ ತೀಕ್ಷ್ಣ ಬುದ್ಧಿಯವ್ರು ಇದ್ದೀರಲಾ....'

'ನಾನೆಲ್ಲಿ ಹಾಗೆಂದೆನೆ?'

'ಮತ್ತೆಂಥದು ನೀವೆನ್ನೋದು?'

'ಏನೂ ಇಲ್ಲ ಬಿಡು....'

'ಹ್ಞಂ....'

'ಏನು?'

'ಬಿಡೋಲ್ಲ....'

'ಯಾರನ್ನ?'

'ನಿಮ್ಮ....'

'ಯಾಕೆ?'

'ಬಿಡೋಕೇನು ಹಿಡ್ಕೊಂಡದ್ದು....'

'ನಾನೇ ಬಿಟ್ಟಿಟ್ರೆ....'

"............"

'ಏನು ಭಾರಿ ದುರುಗಟ್ಟಿ ನೋಡುತ್ತಿ"

'ಅಲ್ಲ, ಬಿಡೋ ಗಂಡು ಯಾವನೂಂತ...."

'ಹಾಗಾದ್ರೆ ಸರಿಯಾಗಿ ನೋಡಿಕೋ ...ಇವನೇ ಆ ಗಂಡು...'

"ಹ್ಞಂ....ಇದು ಗಂಡಲ್ಲ, ಹೆಣ್ಣು..."

'ಹಾಂ....ಯಾಕೆ?"

"ಯಾಕೆ ಅಂದ್ರೆ? ನೂರು ಬಟ್ರೂ ಈ ಅಸಾಮಿ ಕೈ ಬಿಡೋದಿಲ್ಲಾಂತ ಗೊತ್ತು....'

'ಸದ್ಯ ಅಷ್ಟಾದ್ರೂ ಗೊತ್ತಿದ ತಾನೆ?'

'ಗೊತ್ತಿಲ್ಲದೆ ಮತ್ತ....ಎಷ್ಟಾದ್ರೂ ನಿಮ್ಮನ್ನ ಬಲ್ಲವಳು ತಾನೆ?'

'ಹ್ಞಂ...ಏನು ಬಲ್ಲಿಯೋ...ಮತ್ತೆ ನೋಡು, ಕಥೆ ಮಾತ್ರ...'

'ಹೇಳಿ ಬಿಡಿ ನೋಡೋಣ....'

'ಕಥೆಯನು ನೋಡೋದೇನು ಬಂತೆ?'

'ತಪ್ಪಿದೆ, ಕೇಳೋಣ...'

'ನೋಡು...ತಪ್ಪಿದ ಕೇಳು....'

'ಕೇಳುತ್ಲೇ ಇದ್ದೇನೆ...'

'ಏನನ್ನ?'

'ನೀವು ಹೇಳೋದನ್ನ ...'

'ನಾನೇನು ಹೇಳಿದೆ?'

'ಏನೂ ಇಲ್ಲ....'

'ಇಲ್ಲ?'

'ಉಂಟು....'

'ಏನುಂಟು....'

'ನಂಟು...."

'ಅಯ್ಯೋ....ಎಂಥವಳೇ ನೀನು...'

'............"

"ಕೇಳು, ಇದು ಬೈಬಲ್ಲಿನ ಕಥೆ...."

"ಅಂದರೆ, ಕಿರಿಸ್ತಾನರದ್ದು...."

"ಹ್ಞಂ..ಹಾಗೇ ಅಂದುಕೋ....

"ಅಂದುಕೊಳ್ಳೋದು ಯಾಕೆ? ಸರಿಯಾಗಿ ತಿಳಿಸಿ...'

'ಹೌದಮ್ಮ, ಹೌದು....'

'ನಿಮ್ಮಮ್ಮ ಇಲ್ಲಿಲ್ಲ, ನೆನಪಿಡಿ. ಬರೋ ಬರೀರಿಂದ್ರೆ ಬರ್ಲಿ ಬೇಕಾದಾಗ ಅಂತೀರಿ....'

"ಅಮ್ಮ ಮುಂದಿದ್ರೆ, ನಿನ್ನನ್ನ ಅಮ್ಮ ಅಂತೆ ಆಡೋಕೆ ಆಗುತ್ತೆ?'

"ಆಡೋದಂತೆ ಆಡೋದು. ಬೆಕ್ಕಿಗೆ ಆಟ, ಇಲಿಗೆ ಪ್ರಾಣ ಸಂಕಟ....ನಿಮ್ಮ ತೋಳ ಕುರಿ ಮರಿಯ ಆಟ ಸಾಕಾಗಿ ಹೋಯಿತು....

"ಆಟ ಸಾಕಾದ್ರೆ ಪಾರ ಕಲಿ...'

"ಕಲಿಸೋರು....'

"ಇದ್ದೀನಲ್ಲಾ ಸದ್ಯ?"

"ಊ ಹ್ಞಂ...ನಿಮ್ಮ ಪಾಠಾನೇ ನನಗೆ ಬೇಡ..."

"ಓಹೋ, ಆಟಕ್ಕೆ ಮಾತ್ರ ನಾನು ಬೇಕು....'

"ಇಲ್ರಿ, ಆಟ, ಊಟ ಪಾಠ ಎಲ್ಲಕ್ಕೂ ನೀವು ಬೇಕು..."

'ಹ್ಞಂ...ನೋಡು–ಅಲ್ಲ-ಕೇಳು, ಇದು ಬೈಬಲ್ಲಿನ ಕಥೆ....'

'ಹ್ಞಂ...'

'ಒಬ್ಬ ತಂದೆ...'

'ಮತ್ತೆ ಇಬ್ಬರು ತಂದೆ ಇರೋದುಂಟೆ?

'ಅಯ್ಯೋ, ನಿನ್ನ....ಅಲ್ಲ ಕಥೆ ಹೇಳ್ತಾ ಇದ್ದಾಗ...'

'ಮತ್ತೆ ಒಬ್ಬ ತಂದೆ ಅಂತೀರಲ್ಲಾ?'

ಹಾಗಲ್ಲವೇ ಆಡು ಕಥೆ ಹೇಳೋ ಒಂದು ದಾಟಿ....'

'ನಿಮ್ಮ ದಾಟಿದಲ್ಲಿ ಒಬ್ಬನಿಗೆ ನಾಲ್ಕು ತಂದೆಯಾಗದಿದ್ರೆ ಸಾಕು...'

'ಅಲ್ಲ ನಿನಗೆ ಕೇಳುವ ಮೂಡು ಇಲ್ಲವಾದ್ರೆ...'

'ಛೆ...ಛೆ...ಅಲ್ಲ, ನೀವು ಅಲ್ಲಸಲ್ಲದ್ದನ್ನೆಲ್ಲಾ ಹೇಳ ಬೇಡಿ..."

'ಅಯ್ತಪ್ಪ...ತಂದೆಗೆ ಇಬ್ಬರು ಮಕ್ಳು..."

"ಹ್ಞಂ ..."

"ಹಿರಿಯವ ಸಾಧು, ಕಿರಿಯವ ಕ್ರೂರಿ"

"ಹ್ಞಂ...'

"ಪ್ರಾಯ ಪ್ರಬುದ್ಧನಾಗುತ್ಲೇ ಕಿರಿಯವ ಜಗಳಾಡಿ ತನ್ನ ಪಾಲನ್ನು ತೆಗೆದುಕೊಂಡು ಮನೆ ಬಿಟ್ಟು ಹೋದ...ಕೆಲವು ಸ್ನೇಹಿತರು ಸಿಕ್ಕರು. ಕೆಲ ಸಮಯದಲ್ಲೇ ಅವನ ಹಣ ಪೋಲಾಯಿತು...."

'ಹ್ಞಂ...."

"ಒಂದೆಡೆ ಕುರಿ ಮೇಯಿಸುವ ಕೆಲಸಕ್ಕೆ ಸೇರಿಕೊಂಡ..."

"ನಾಲ್ಕು ಕಾಲಿನ ಕುರಿಯಲ್ವೆ?"

"ಮತ್ತೆ ಎರಡು ಕಾಲಿನ ಕುರಿ ಇದೆಯೆ?"

'ಇಲ್ಲವೇ.... ನರ ಕುರಿ..."

'ಹ್ಞಂ.... ಆತ ಮೇಯಿಸಿದ್ದು ನಾಲ್ಕು ಕಾಲಿನ ಕುರಿಗಳನ್ನು. ಆಗ ಆತನಿಗೆ ಜ್ಞಾನೋದಯವಾಯಿತು—ತಾನು ಮಾಡಿದು ಅನ್ಯಾಯವೆಂತ. ಆತ ನೆಟ್ಟನೆ ತಂದೆಯಿದ್ದಲ್ಲಿಗೆ ಹೋದನು. ಆತನಿಗೆ ಸಂಭ್ರಮದ ಸ್ವಾಗತ ಸಿಕ್ಕಿತು."

'ಎಷ್ಟಾದ್ರೂ ಹೊಟ್ಟೇಲಿ ಹುಟ್ಟಿದ ಮಗುವಲ್ಲವೆ?"

"ಅದು ಸರಿಯೇ. ಹಿರಿಯ ಮಗ ಬಂದು ರೇಗಿದಾಗ ತಂದೆಯೇನೆಂದ ಗೊತ್ತೆ?"

"ಏನೆಂದ?"

'ನನ್ನ ಸತ್ತ ಮಗನೊಬ್ಬ ಮತ್ತೆ ಹುಟ್ಟಿ ಬಂದ. ಅದಕ್ಕಾಗಿ ಹಬ್ಬನಾಚರಿಸಿದರೆ ತಪ್ಪೇನು ಎಂದ...."

"ಹ್ಞಂ.... ಅದು ಸರಿಯೇ ಅನ್ನಿ.

'ಹಾಗೆಯೇ ನೋಡು, ಇಂಡೋನೇಶ್ಯ..."

"ಓ... ಅದು ಸರಿಯೆನ್ನಿ. ಆದರೂ ಇದು ಪ್ರತಿ ಸಂಸ್ಥೆಯನ್ನು ಕಟ್ಟಲು ಮುಂದು ನಡೆದದ್ದು..."

"ಏನೇ ಮಾಡಿರಲಿ, ಸಂಯುಕ್ತ ರಾಷ್ಟ್ರ ಸಂಘದಂತಹ ಒಂದು ಮಹಾ ತಾಯಿಗೆ ಇಂಡೋನೇಶ್ಯ ಭಾರವಾಗುವುದಿಲ್ಲ..'

(ಒಂಭತ್ತನೇ ಪುಟ ನೋಡಿರಿ)

Advertise in

Navayuga

Deepavali Special 1966

&

get best value for your money.

ಸಮೀಪಿಸುತಿದೆ ದೀಪಾವಳಿ!

ಮನೆ ಮನೆಗಳಲಿ ದೀಪ ಬೆಳಗಲಿದೆ!

ಹೊರಡಲಿದೆ ನವಯುಗದ ದೀಪಾವಳಿ ಸಂಚಿಕೆ!

ಮನ ಮನಗಳಲಿ ಜ್ಞಾನದೀಪ ಬೆಳಗಲಿದೆ!

ಕರ್ನಾಟಕದ ವಿವಿಧ ಬರಹಗಾರರಿಂದ, ವೈವಿಧ್ಯಪೂರ್ಣ ಲೇಖನಾದಿಗಳಿಂದ ಕೂಡಿ ತಾ. 10—11—1966ಕ್ಕೆ ವಾಚಕರ ಕೈಸೇರಲಿದೆ ದೀಪಾವಳಿ ಸಂಚಿಕೆ.

ಅಖಿಲ ಕರ್ನಾಟಕದಲ್ಲಿ ಪ್ರಸಾರವಾಗುವ ನವಯುಗ ದೀಪಾವಳಿ ಸಂಚಿಕೆ ಜಾಹೀರಾತಿಗೆ ಸುವರ್ಣ ಮಾಧ್ಯಮ.

ಜಾಹೀರಾತು ಕೊಡುವವರು ಜಾಹೀರಾತನ್ನು ಅಕ್ಟೋಬರ ಅಂತ್ಯದೊಳಗೆ ಕಳುಹಿಸುವಂತೆ ಅಪೇಕ್ಷಿಸಲಾಗಿದೆ.

ಮೆನೇಜರ್

ನವಯುಗ, ಉಡುಪಿ

ಸಾಹಿತ್ಯ ಸಂಸದ

ಕುಮಾರವ್ಯಾಸನ ಕಥಾನಾಯಕ

ಬರೆದವರು

ಶ್ರೀ ಸ. ನಾರಾಯಣ

ಗದುಗಿನ ಭಾರತವೆಂದು ಕನ್ನಡ ಜನಕೋಟಿಗೆ ಪರಿಚಿತವಾಗಿರುವ ಕರ್ನಾಟ ಭಾರತ ಕಥಾಮಂಜರಿ ಕಾವ್ಯ ಕವಿ ಕುಮಾರವ್ಯಾಸ (ನಾರಣಪ್ಪ) ನ ಸುಂದರ ಶ್ರೀಮಂತ ಕೃತಿ. ಕನ್ನಡ ಸಾಹಿತ್ಯ ಸಾರಸ್ವತ ಲೋಕದ ಧ್ರುವತಾರೆ ಜನಮನರಂಜನೀಯ ಕೃತಿ ರತ್ನ. ನಾಡಿನ ಪಂಡಿತ ಪಾಮರರಾದಿಯಾಗಿ ಸಮಸ್ತ ಜನತೆಯಿಂದಲೂ ಮನ್ನಣೆಯನ್ನು ಪಡೆದ ಮಹಿಮಾ ಪೂರ್ಣಗ್ರಂಥ. ವಿದ್ಯೆಯ ಪರಿಚಯವಿಲ್ಲದ, ನಿರಕ್ಷರಕುಕ್ಷಿಗಳಾದ ಹಳ್ಳಿಗರೂ ಈ ಕಾವ್ಯ ವಾಚನ ಶ್ರವಣಕ್ಕಾಗಿ ಸದಾ ಸಿದ್ಧರಾಗಿರುವ ದೃಶ್ಯ ಚಿರಪರಿಚಿತ. ಇದು ನಾಡಿನ ಹೆಮ್ಮೆಯ ಕಾವ್ಯ. ಕವಿ ಕುಮಾರ ವ್ಯಾಸನ ಪ್ರತಿಭೆ ಪಾಂಡಿತ್ಯಗಳನ್ನು ಪ್ರಕಾಶ ಪಡಿಸುವ ಉಜ್ವಲ ಗ್ರಂಥ.

ಕುಮಾರ ವ್ಯಾಸ ೧೪೩೦ರಲ್ಲಿದ್ದಿರಬಹುದೆಂದು ಕವಿ ಚರಿತೆಕಾರರ ಅಭಿಪ್ರಾಯ. ಧಾರವಾಡ ಜಿಲ್ಲೆಯ ಕೋಳಿವಾಡ ಗ್ರಾಮ ಕವಿಯ ಹುಟ್ಟೂರು. ಈತ ಗದುಗಿನ ವೀರ ನಾರಾಯಣ ಸ್ವಾಮಿಯ ಅಂಕಿತದಲ್ಲಿ ತನ್ನ ಗ್ರಂಥವಾದ ಭಾರತವನ್ನು ರಚಿಸಿದ್ದಾನೆ. ಮಹಾಭಾರತ ಅಷ್ಟಾದಶ ಪರ್ವಗಳಿಂದ ಕೂಡಿದ ಬೃಹತ್ ಕಾವ್ಯ. ಮೂಲ ಸಂಸ್ಕೃತ ಕಾವ್ಯವನ್ನೂ ರಚಿಸಿದವರು ಮಹರ್ಷಿ ವೇದ ವ್ಯಾಸರು. ಮಹಾಭಾರತ ಪಂಚಮ ವೇದವೆಂದು ಪ್ರಖ್ಯಾತವಾದದ್ದು. ಕುಮಾರ ವ್ಯಾಸನ ಭಾರತ ವ್ಯಾಸಮಹರ್ಷಿಗಳ ಭಾರತದ ಪ್ರತಿಕೃತಿಯಲ್ಲ, ಆಧಾರಿತ ಕೃತಿ ಅಷ್ಟೆ. ಆದಿ ಪರ್ವದಿಂದ ಗದಾ ಪರ್ವದ ವರೆಗ ಹತ್ತು ಪರ್ವಗಳನ್ನು ಮಾತ್ರ ಕುಮಾರ ವ್ಯಾಸ ರಚಿಸಿದ್ದಾನೆ. ಮುಂದಿನ ಎಂಟು ಪರ್ವಗಳನ್ನು ವಿಜಯನಗರದರಸ ಕೃಷ್ಣದೇವರಾಯನ ಅಪ್ಪಣೆಯ ಮೇರೆಗೆ ಆಸ್ಥಾನ ಕವಿ ತಿಮ್ಮಣ್ಣ ರಚಿಸಿದನೆಂದು ಸ್ಪಷ್ಟವಾಗಿ ತಿಳಿದು ಬರುತ್ತದೆ. ಕುಮಾರ ವ್ಯಾಸ ಎಂಬ ಕವಿಯ ಕಾವ್ಯ ನಾಮ ಸಾರ್ಥಕವಾಗಿದೆ. ಕವಿ ಸಂಸ್ಕೃತ ಕನ್ನಡದ ಭಾಷೆಗಳಲ್ಲಿ ಅದ್ವಿತೀಯ ಪಂಡಿತ. ಸಂಸ್ಕೃತ ಭಾರತ, ಪಂಪ ಭಾರತ, ರನ್ನನ ಗದಾಯುದ್ಧ ಮೊದಲಾದವುಗಳ ಪರಿಚಯ ವಿಶೇಷವಾಗಿತ್ತು ಎಂಬ ಅಂಶವೆಂದು ಬರುತ್ತದೆ ಅವನ ಕಾವ್ಯದಿಂದಲೇ.

ಮಹಾಭಾರತದಲ್ಲಿರುವ ಪಾತ್ರಗಳು ಹತ್ತಾರಲ್ಲ, ನೂರಾರು. ಕೆಲವಂತೂ ಪ್ರಮುಖ ಪಾತ್ರಗಳು. ವ್ಯಾಸ ಮಹರ್ಷಿಗಳ ಮಹಾಭಾರತ ಕೃತಿಯಲ್ಲಿ ಕಾಣ ಬರುವ ಎಲ್ಲ ಪಾತ್ರಗಳೂ ಇಲ್ಲಿವೆ. ಕೆಲವಂತೂ ಸಜೀವ ಪಾತ್ರಗಳಾಗಿ ಉಳಿದಿವೆ. ಮಹರ್ಷಿ ವ್ಯಾಸರು ಒಂದು ವಿಧದಲ್ಲಿ ಕುರುಕುಲದ ಹಿರಿಯರು, ಸಮಸ್ತ ಭಾರತ ಕಥೆಯನ್ನು ಕಣ್ಣಾರೆ ಕಂಡು ಅನಂತರ ಬರೆದವರು. ಅವರಿಗೆ ಮೇಲು ಕೀಳು, ಅಲ್ಪ–ಅತಿ, ಎನ್ನುವ ವ್ಯತ್ಯಾಸವಿಲ್ಲ. ಎಲ್ಲ ಪಾತ್ರಗಳನ್ನು ಸಮಾನ ದೃಷ್ಟಿಯಿಂದಲೇ ನೋಡಿದ್ದಾರೆ. ಅವರ ಶ್ರೀಕೃಷ್ಣನೂ ಹತ್ತು ಪಾತ್ರಗಳಂತೆ ಒಬ್ಬನಾಗಿ ಉಳಿದಿದ್ದಾನೆ. ಅವನಿಗೆ ವಿಶೇಷ ಸ್ಥಾನ ಶ್ರೀಕೃತಿಗಳೇನೂ ಇಲ್ಲ. ಸಾಮಾನ್ಯ ವ್ಯಕ್ತಿಯೇ ಆಗಿದ್ದಾನೆ.

ಕನ್ನಡದ ಆದಿ ಕವಿ ಪಂಪನಿಗೂ ವ್ಯಾಸ ಮಹರ್ಷಿಗಳ ಭಾರತ ಕಥೆಯೇ ಆಧಾರವಾದರೂ ಅವನ ದೃಷ್ಟಿ ಎಲ್ಲ ಅರ್ಜುನನ ಕಡೆಗೆ. ಅವನಿಗೆ ಶ್ರೀಕೃಷ್ಣನಲ್ಲಿ ಭಕ್ತಿ ಇದೆ. ಗೌರವವಿದೆ. ಆತ್ಮೀಯತೆ ಇದೆ. ಆದರೆ ಅವನನ್ನ ಶ್ರೇಷ್ಠ, ಎಲ್ಲರಿಗಿಂತಲೂ ಹಿರಿಯ, ಅವನಿಂದಲೇ ಭಾರತ ಎಂದು ಹೇಳುವ ಭಾವನೆ ಇಲ್ಲ. ಅವನ ಕಥಾನಾಯಕ ಶ್ರೀಕೃಷ್ಣನಲ್ಲ ಅರ್ಜುನ.

ಮಹಾಭಾರತದ ಮಹಾವ್ಯಕ್ತಿಗಳ ಪಾತ್ರಗಳನ್ನೂ ಪರಿಚಯ ಮಾಡಿಕೊಡುತ್ತಾ ಕವಿ ಪಂಪ ಹೇಳುತ್ತಾನೆ:

"ಚಲದೊಳ್ ದುರ್ಯೋಧನಂ, ನನ್ನಿಯೊಳ್ ಇನತನಯಂ, ಗಂಡಿನೊಳ್ ಭೀಮಸೇನಂ, ಬಲದೊಳ್ ಮದ್ರೇಶನ್, ಅತ್ಯುನ್ನತಿಯೊಳ್ ಅಮರಸಿಂಧೂದ್ಭವಂ, ಚಾಪವಿದ್ಯಾ ಬಲದೊಳ್ ಕುಂಭೋದ್ಭವಂ, ಸಾಹಸದ ಮಹಿಮೆಯೊಳ್ ಫಲ್ಗುಣಂ, ಧರ್ಮದೊಳ್ ನಿರ್ಮಲಚಿತಂ, ಧರ್ಮಪುತ್ರಂ ಮಿಗಿಲ್ ಇವರ್ಗಳಿಂ ಭಾರತಂ ಲೋಕಪೂಜ್ಯಂ!

ಎಂದು ಇಲ್ಲಿ ಶ್ರೀ ಕೃಷ್ಣನ ಸಂಗತಿಯೇ ಇಲ್ಲ. ಪಂಪನ ದೃಷ್ಟಿಯಿಂದ ಗಮನಿಸಿದಾಗ ಅನೇಕರಿಗೆ ಮಹತ್ವ ಪೂರ್ಣ ಸ್ಥಾನ ಮಹಾಭಾರತದಲ್ಲಿ ದೊರೆತಿದೆ. ಆದರೆ ಶ್ರೀ ಕೃಷ್ಣನಿಗೆ ಅಲ್ಲಿ ಅವಕಾಶವಿಲ್ಲ. ಇದಕ್ಕೆ ಮುಖ್ಯಕಾರಣ ಪಂಪನ ದೃಷ್ಟಿ ಆಗಿನ ವಾತಾವರಣ.

ದುರ್ಯೋಧನ, ಭೀಮ, ಧರ್ಮನಂದನ, ಫಲ್ಗುಣ, ಶ್ರೀ ಕೃಷ್ಣ, ದ್ರೌಪದಿ, ದ್ರೋಣಾದಿ ಸಕಲ ಪಾತ್ರಧಾರಿಗಳೂ ಎಲ್ಲ ಭಾರತ ಕಾವ್ಯಗಳಲ್ಲಿಯೂ ಇದ್ದಾರೆ. ಆದರೆ ಕವಿಯ ದೃಷ್ಟಿಯ ರಸೆಯಿಂದ ಒಬ್ಬೊಬ್ಬರಿಗೆ ವಿಶೇಷ ಪ್ರಾಧಾನ್ಯತೆ ದೊರೆತಿದೆ.

ವ್ಯಾಸರ, ಪಂಪರ ದೃಷ್ಟಿ ಒಂದು ಬಗೆಯದು. ಕುಮಾರ ವ್ಯಾಸನ ದೃಷ್ಟಿಯೇ ಬೇರೆ ಬಗೆಯದು. ಎಲ್ಲರಿಗೂ ಶ್ರೀ ಕೃಷ್ಣನ ಪರಿಚಯ ಇದೆ. ಅವನ ಪಾತ್ರದ ಪ್ರಾಮುಖ್ಯತೆಯ ಅಗತ್ಯ ತಿಳಿದಿದೆ. ಶ್ರೀ ಕೃಷ್ಣನ ಬಗ್ಗೆ ಅವರಿಗಿರುವ ದೃಷ್ಟಿಭಾವನೆಗಳಿಗ ಅಂತರವಿದೆ.

ನಾರಣಪ್ಪ ತನ್ನನ್ನ 'ಶ್ರೀ ಮತ್ಕುಮಾರವ್ಯಾಸ ಯೋಗೀಂದ್ರ' ಎಂದು ಕರೆದು ಕೊಂಡಾಡಿದ್ದಾನೆ. ಕರ್ನಾಟ ಭಾರತ ಕಥಾ ಮಂಜರಿ ಕಾವ್ಯದ ತಿರುಳನ್ನು ಅರಿತಾಗ 'ಯೋಗೀಂದ್ರ' ಎಂಬ ಬಿರುದು ನಾರಣಪ್ಪನಿಗೆ ಸಲ್ಲುತ್ತದೆ' ಅದರಲ್ಲಿ ಅತಿಶಯೋಕ್ತಿಯೇ ಇಲ್ಲ ಎಂಬುದು ಅರಿವಾಗುತ್ತದೆ. ನಾರಣಪ್ಪ ಯೋಗಿ, ವೀರ ನಾರಾಯಣನ ಅಂತರಂಗದ ಭಕ್ತ, ಹರಿ—ಹರರಲ್ಲಿ ಭೇದವೆಣಿಸದ ಭಾಗವತ ಸಂಪ್ರದಾಯಸ್ಥ. ಅವನ ಅರಿವಿನ ಆಳ ದೊಡ್ಡದು. ಹರಿ ಕೀರ್ತನೆ, ಭಕ್ತಿ ಭಾವನೆ ಅವನ ಮನಸ್ಸಿನ ಮೇಲೆ ವಿಶೇಷ ಪರಿಣಾಮ ಬೀರಿರ ಬಹುದೆಂದು ತೋರುತ್ತದೆ. ಅವನ ಕಾವ್ಯದಲ್ಲಿ ಭಕ್ತಿಗೆ ಪ್ರಾಧಾನ್ಯತೆ ಹೆಚ್ಚು.

ವ್ಯಾಸ ಮಹರ್ಷಿ ಮತ್ತು ಪಂಪ ಶ್ರೀ ಕೃಷ್ಣನನ್ನು ದೂರದಲ್ಲಿ ನೋಡಿ ಅವನ ಚಿತ್ರವನ್ನು ತಮ್ಮ ಕಾವ್ಯದಲ್ಲಿ ಚಿತ್ರಿಸಿದ್ದಾರೆ. ಆದರೆ ಕುಮಾರ ವ್ಯಾಸ ದೂರದಿಂದಲೇ ಶ್ರೀ ಕೃಷ್ಣನನ್ನು ಕಂಡು ತೃಪ್ತಿಗಳಾಗಿಲ್ಲ. ಯಾವುದೋ ಪ್ರಬಲವಾದ ಆಕರ್ಷಣೆ ಅವನನ್ನು ಶ್ರೀ ಕೃಷ್ಣನ ಬಳಿಗೆ ಕರೆದೊಯ್ದಿದೆ. ಕುಮಾರ ವ್ಯಾಸ ಶ್ರೀ ಕೃಷ್ಣನನ್ನು ಸಮೀಪದಿಂದಲೇ ತೃಪ್ತಿಯಾಗುವಷ್ಟು ನೋಡಿ, ಅವನ ತೇಜಸ್ಸು ವ್ಯಕ್ತಿತ್ವ, ಶಕ್ತಿ, ಗುಣ, ರೂಪು, ಎತ್ತರ—ಬಿತ್ತರಗಳನ್ನು ಅರಿತು ಅವನ ಚಿತ್ರವನ್ನು ತನ್ನ ಕರ್ನಾಟ ಭಾರತ ಕಥಾ ಮಂಜರಿಯಲ್ಲಿ ಚಿತ್ರಿಸಿದ್ದಾನೆ.

ಗದುಗಿನ ವೀರ ನಾರಾಯಣನೇ ಶ್ರೀ ಕೃಷ್ಣ ಶ್ರೀಮನ್ನಾರಾಯಣನ ಎಂಟನೆಯ ಅವತಾರ. ಸಾಧು ಸಂರಕ್ಷಣ, ದಾನವ ದಮನ, ಧರ್ಮ ಸಂಸ್ಥಾಪನೆಗಾಗಿ ಅವತಾರ ತಾಳಿದ ದಿವ್ಯ ಮೂರ್ತಿ, ಸೃಷ್ಟಿ ಸ್ಥಿತಿ ಲಯಗಳಿಗೆ ಕಾರಣನಾದ ಚೇತನ. 'ಪೂರ್ಣ'—ಈ ಸಂಗತಿಯನ್ನೂ ಕುಮಾರವ್ಯಾಸ ಮನವರಿಕೆ ಮಾಡಿಕೊಂಡಿದ್ದಾನೆ.

ಮಹಾಭಾರತದ ಕಥೆಯಲ್ಲಿ ಬರುವ ಪಾತ್ರ, ಸನ್ನಿವೇಶ, ಘಟನೆಗಳೆಲ್ಲವೂ ನಿಮಿತ್ತ ಮಾತ್ರ. ಎಲ್ಲಕ್ಕೂ ಪ್ರೇರಕ 'ಗದುಗಿನ ವೀರ ನಾರಾಯಣ', ಕಥೆಯಲ್ಲಿ ಮೂಡಿ ಬರುವ ನೂರಾರು ಪಾತ್ರಗಳು, ಊಹಿಸಲು ಅಸಾಧ್ಯವಾದ ಘಟನೆಗಳ, ಕಲ್ಪಿಸಲಾಗದಂತಹ ಸನ್ನಿವೇಶಗಳು ಎಲ್ಲವೂ ಇವೆ. ಇವೆಲ್ಲವುಗಳ ಹಿನ್ನೆಲೆಯಲ್ಲಿ ಶ್ರೀಕೃಷ್ಣನಿದ್ದಾನೆ. ಕುಮಾರ ವ್ಯಾಸನ ಕರ್ನಾಟ ಭಾರತ ಕಥಾಮಂಜರಿ ಕಾವ್ಯ ಗದುಗಿನ ವೀರ ನಾರಾಯಣನಿಗೆ ಸಮರ್ಪಿತವಾಗಿದೆ. ಮಹಾ ಭಾರತದ ಕಥೆ ಕೌರವರ, ಪಾಂಡವರ ಕಥೆಯಲ್ಲ. ಅದು ಪದುಮನಾಭನ ದಿವ್ಯ ಚರಿತ್ರೆ. ಶ್ರೀಕೃಷ್ಣನ ಕಥೆ ಶ್ರೀಕೃಷ್ಣ ಕುಮಾರ ವ್ಯಾಸನ ಕಥಾ ಮಂಜರಿಯಲ್ಲಿ ಸಕಲ ಪಾತ್ರ, ಸನ್ನಿವೇಶ, ಘಟನೆಗಳನ್ನು ಮೆಟ್ಟಿ ತ್ರಿವಿಕ್ರಮನಾಗಿ ನಿಂತಿದ್ದಾನೆ. ಕವಿಯ ದೃಷ್ಟಿ ಯಲ್ಲಿ ಶ್ರೀಕೃಷ್ಣ ಅಗ್ನಿಯಂತೆ ತೇಜಸ್ವಿ, ಹಿಮಾಲಯದಂತೆ ಉನ್ನತ, ಗಂಗೆಯಂತೆ ಪವಿತ್ರ. ಸೂರ್ಯ ಚಂದ್ರರಂತೆ ಶಾಶ್ವತ. ಮಹಾಭಾರತದ ಉಳಿದ ಪಾತ್ರಧಾರಿಗಳು ಶ್ರೀಕೃಷ್ಣ ನಾಟಕದ ಒಂದು ರಂಗದಾಟದ ಕಾಯಿಗಳಷ್ಟೆ.

ಕವಿ ಕುಮಾರ ವ್ಯಾಸನ ಮಾತಿನಂತೆಯೇ ಹೇಳುವುದಾದರೆ 'ಕರ್ನಾಟ ಭಾರತ ಕಥಾಮಂಜರಿಯ ಕರ್ತೃ ಕುಮಾರ ವ್ಯಾಸನಲ್ಲ. ಶ್ರೀ ಕೃಷ್ಣ. ಕುಮಾರವ್ಯಾಸ ಲೇಖಕ (ಗುಮಾಸ್ತನಷ್ಟೆ.) 'ವೀರ ನಾರಾಯಣನೆ ಕವಿ, ಲಿಪಿಕಾರ ಕುಮಾರವ್ಯಾಸ' ಎಂದು ಹೇಳುತ್ತಾನೆ ಕವಿ. ಕವಿ ...

(ಎಂಟನೇ ಪುಟ ನೋಡಿರಿ)

ಸಿಂಡಿಕೇಟ್ ಬ್ಯಾಂಕು

ತನ್ನ ಬೆಂಗಳೂರು— ಎಚ್. ಎ. ಎಲ್. ಶಾಖೆಯನ್ನು

(ಕೋನೆನಾ ಅಗ್ರಹಾರ, ಎಚ್. ಎ. ಎಲ್. ಕಾಲನಿ, ಹಿಂದೂಸ್ಥಾನ್ ಏರ್ ಕ್ರಾಫ್ಟ್ ಪೋಸ್ಟ್, ಬೆಂಗಳೂರು-17)

ಸೆಪ್ಟಂಬರ್ ತಾ. 29, 1966ರಂದು ತೆರೆದಿದೆಯೆಂದು ತಿಳಿಸಲು ಹರ್ಷ ಪಡುತ್ತದೆ.

ಬ್ಯಾಂಕು ಸದ್ಯವೇ ತೆರೆಯಲಿರುವ ಇನ್ನು ಮೂರು ಶಾಖೆಗಳು :

ನವದೆಹಲಿ	ಸುಪರ್ ಬಜಾರ್, ಕಾನಟ್ ಸರ್ಕಸ್, ನವದೆಹಲಿ.
ಪೂನಾ	712 ನಾರಾಯಣ ಪೇಟ್, ಲಕ್ಷ್ಮೀ ರೋಡ್, ಪೂನಾ.
ಯಾಡಿಕಿ	8/91, ಮೈನ್ ರೋಡ್, ಯಾಡಿಕಿ (ಅನಂತಪುರ ಜಿಲ್ಲೆ: ಆಂಧ್ರ ಪ್ರದೇಶ)

ಬ್ಯಾಂಕು ಈ ವರ್ಷ ತೆರೆದ ಹೊಸ ಶಾಖೆಗಳು :

ದೆಹಲಿ— ಚಾಂದಿನೀ ಚೌಕ್
ಮಧುರೈ (ಮದರಾಸು ರಾಜ್ಯ)
ಅಹ್ಮದಾಬಾದ್ (ಗುಜರಾಥ ರಾಜ್ಯ)
ಪಂಜಿಮ್ (ಗೋವಾ)
ವಿಜಯನಗರಂ (ಆಂಧ್ರ ಪ್ರದೇಶ)
ಬೇಟಿಮ್ (ಗೋವಾ)
ಮೈಸೂರು— ವಾಣಿ ವಿಲಾಸ ಮೊಹಲ್ಲಾ
ಸದಾಶಿವಘಡ್ (ಉತ್ತರ ಕನ್ನಡ— ಮೈಸೂರು ರಾಜ್ಯ)
ಕೋಟೆಕಾರ್ (ದಕ್ಷಿಣ ಕನ್ನಡ— ಮೈಸೂರು ರಾಜ್ಯ)

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಮಣಿಪಾಲ, ಮೈಸೂರು ರಾಜ್ಯ.

ಸಾಧನ ಸಂಪತ್ತು:	ಶಾಖೆಗಳು:	ತೆತ್ತ ಭಂಡವಾಳ ಮತ್ತು ಕಾದಿಟ್ಟ ನಿಧಿ:
ರೂಪಾಯಿ 80 ಕೋಟಿ.	210ಕ್ಕೂ ಮಿಕ್ಕಿ.	ರೂಪಾಯಿ 2 ಕೋಟಿ.

ಜೆಮಿನಿ ೧

ಗಾರ್ಡನ್



ಮೇಲಿನದು ೪೯೦ ಪ್ಯಾಸೆಂಜರ್ ಬೋಯಿಂಗ್ ೭೪೭ ಜೆಟ್ ವಿಮಾನ, ಕೆಳಗಿನದು ೧೨೫ ಪ್ಯಾಸೆಂಜರ್ ಬೋಯಿಂಗ್ ೭೦೭ ವಿಮಾನ.

ಅಮೆರಿಕದ ಮಾದರಿ ಕುಟುಂಬವೊಂದರ ಚಿತ್ರವನ್ನು ಇತ್ತೀಚೆಗೆ ಪ್ರಕಟಿಸಿದ ಅಮೆರಿಕದ ಪತ್ರಿಕೆಯೊಂದು ಶಿರೋನಾಮೆಯಲ್ಲಿ, ಚಿಕ್ಕ ವಯಸ್ಸಿನ ತಾಯಿ "ಆರು ಮಕ್ಕಳು, ಒಂದು ಚಿಕ್ಕ ಕೋತಿ-ಹಾಗೂ ಒಬ್ಬ ಗಗನಯಾನಿಯ ಆರೈಕೆಯನ್ನು ನೋಡಿಕೊಳ್ಳುತ್ತಿದ್ದಾರೆ" ಎಂದು ಪ್ರಕಟಿಸಿತು.

ಆ ಚಿತ್ರದಲ್ಲಿದ್ದ ತಾಯಿ ಶ್ರೀಮತಿ ರಿಚರ್ಡ್ ಎಫ್. ಗಾರ್ಡನ್, ಜೂನಿಯರ್; ಶಿರೋನಾಮೆ ಪ್ರಸ್ತಾಪಿಸಿದ ಗಗನಯಾನಿ ಆಕೆಯ ಪತಿ; ಮೊದಲ ಬಾರಿಗೆ ಗಗನ ಹಾರಾಟ ಕೈಕೊಂಡ ನೇವಿ ಲೆಫ್ಟಿನೆಂಟ್ ಕಮಾಂಡರ್ ರಿಚರ್ಡ್ ಎಫ್. ಗಾರ್ಡನ್ ಜೂನಿಯರ್. ಇವರು ಇಬ್ಬರು ಯಾನಿಗಳ ಜೆಮಿನಿ-೧೧ ಗಗನಯಾನವನ್ನು ನಡೆಸಿ ಗಗನಯಾನಿಗಳ ಸಾಲಿನಲ್ಲಿ ೨೯ನೇ ಸ್ಥಾನವನ್ನು ಪಡೆದರು.

ಗಾರ್ಡನ್ ಅವರನ್ನು ೧೯೬೩ರ ಅಕ್ಟೋಬರ್ ೧೮ರಂದು ಗಗನಯಾನಿಯ ಕಾರ್ಯಕ್ಕೆ ಆಯ್ಕೆ ಮಾಡಲಾಯಿತು. ಆರಂಭದಲ್ಲಿ ಅವರಷ್ಟು ದೊಡ್ಡ ಕುಟುಂಬ ಬೇರೆ ಯಾವ ಗಗನಯಾನಿಗೂ ಇರಲಿಲ್ಲ. ಗಾರ್ಡನ್‌ರಿಗೆ ನಾಲ್ಕು ಮಂದಿ ಪುತ್ರರು ಮತ್ತು ಇಬ್ಬರು ಹೆಣ್ಣು ಮಕ್ಕಳು—ಯಾರೂ ಪ್ರಾಯಕ್ಕೆ ಬಂದವರಲ್ಲ—ಇದ್ದರು. ಈಗ ಅಂದರೆ ೧೯೬೬ ರ ಬೇಸಿಗೆಯಲ್ಲಿ ಜೆರಾಲ್ಡ್ ಪಿ. ಕಾರ್ ಅವರನ್ನು ಗಗಯಾನಿಯ ತರಬೇತಿಗೆ ಆಯ್ಕೆ ಮಾಡಿದಾಗ, ತಮ್ಮಷ್ಟೇ ದೊಡ್ಡ ಕುಟುಂಬವಿದ್ದ ಇನ್ನೊಬ್ಬರ ಜತೆ ಅವರಿಗೆ ದೊರೆಯಿತು.

ಗಗನಯಾನಿಗಳ ಆಯ್ಕೆಗೆ ಅನೇಕ ಮಂದಿ ಸ್ಪರ್ಧಿಗಳಿದ್ದರು. ಆದರೆ ವಾಯು ಯಾನದಲ್ಲಿ ಗಳಿಸಿದ್ದ ಅನೇಕ ದಾಖಲೆಗಳಿಗಾಗಿ ಗಾರ್ಡನ್ ಅವರು ಸುಲಭವಾಗಿ ಆಯ್ಕೆಗೊಂಡರು. ಈಗ ೩೬ ರ ಪ್ರಾಯದಲ್ಲಿರುವ ಗಾರ್ಡನ್, ೧೯೬೧ ರಲ್ಲಿ ದಾಖಲೆಯ ಅವಧಿಯಲ್ಲಿ ವಿಮಾನವೊಂದನ್ನು ಲಾಸ್ ಏಂಜಲಸ್ಸಿನಿಂದ ನ್ಯೂಯಾರ್ಕಿಗೆ ಹಾರಿಸಿ ಅಮೆರಿಕದ ವಿಮಾನ ಕ್ಷೇತ್ರದಲ್ಲಿ ಅತ್ಯುನ್ನತವಾದ ಬೆಂಡಿಕ್ಸ್ ಟ್ರೋಫಿಯನ್ನು ಗಳಿಸಿದರು.

ಗಾರ್ಡನ್ ಅವರನ್ನು ಗಗನಯಾನಿಯಾಗಿ ನಾಮಕರಣಮಾಡಿದಾಗ, ಅವರು ಗ್ಯಾಲಿ ಅಧ್ಯಯನ ಮಾಡುತ್ತಿದ್ದರು. ೧೯೨೯ ರ ಅಕ್ಟೋಬರ ೫ನೇ ತಾರೀಖು ವಾಷಿಂಗ್ಟನ್ನಿನ ಸಿಯಾಟಲ್‌ನಲ್ಲಿ ಜನಿಸಿದ ಗಾರ್ಡನ್ ವಾಷಿಂಗ್ಟನ್ನಿನ ಪೋಲ್ಸ್‌ನ್ನಿನಲ್ಲಿರುವ ನಾರ್ತ್ ಕಿಟ್ಸಪ್ ಹೈಸ್ಕೂಲಿನಲ್ಲಿ ಓದಿ, ೧೯೫೧ ರಲ್ಲಿ ಸಿಯಾಟಲ್‌ನಲ್ಲಿರುವ ವಾಷಿಂಗ್ಟನ್ ವಿಶ್ವವಿದ್ಯಾನಿಲಯದಿಂದ ರಸಾಯನ ಶಾಸ್ತ್ರದಲ್ಲಿ ಬ್ಯಾಚಲರ್ ಆಫ್ ಸೈನ್ಸ್ ಪದವಿಯನ್ನು ಗಳಿಸಿದರು.

ಅದೇ ವರ್ಷ ಅಮೇರಿಕದ ನೌಕಾ ಶಾಖೆಯನ್ನು ಸೇರಿ ಅದನ್ನೇ ತಮ್ಮ ವೃತ್ತಿಯನ್ನಾಗಿ ಮಾಡಿಕೊಳ್ಳಬೇಕೆಂದು ನಿರ್ಧರಿಸಿದರು. ಆಲ್ ವೆದರ್ ಫ್ಲೈಟ್ ಸ್ಕೂಲ್ ಹಾಗೂ ನೇವಿಯ ಟೆಸ್ಟ್ ಪೈಲಟ್ ಸ್ಕೂಲುಗಳ ಪದವಿಗಳನ್ನು ಗಳಿಸಿದರು. ಅನಂತರ ಅವರು ಕ್ಯಾಲಿಫೋರ್ನಿಯದ ಮಿರಾಮಾರಿನಲ್ಲಿರುವ ನೌಕಾ ವಿಮಾನ ಕೇಂದ್ರದಲ್ಲಿ ಫೈಟರ್ ಸ್ಕ್ವಾಡ್ರನ್ ಒಂದಕ್ಕೆ ನೇಮಕಗೊಂಡರು. ಅಲ್ಲಿ ಅನುಕ್ರಮವಾಗಿ ಹಾರಾಟದ ಸುರಕ್ಷತಾ ಅಧಿಕಾರಿ, ಸಹಾಯಕ ಕಾರ್ಯ ನಿರ್ವಾಹಕ ಅಧಿಕಾರಿ, ಭೂ ತರಬೇತಿಯ ಅಧಿಕಾರಿಯಾಗಿ ಕೆಲಸ ಮಾಡಿದರು.

ಗಾರ್ಡನ್ ಒಟ್ಟು ೩,೦೦೦ ಗಂಟೆಗಳ ಹಾರಾಟ ನಡೆಸಿದ್ದಾರೆ. ಇದರಲ್ಲಿ ಸುಮಾರು ೨೦೦೦ ಗಂಟೆ ಜೆಟ್ ವಿಮಾನದ ಹಾರಾಟದ್ದು.

ಐದು ಅಡಿ ಏಳು ಅಂಗುಲ ಎತ್ತರವಿರುವ ಗಾರ್ಡನ್ ೧೫೦ ಪೌಂಡು ತೂಗುತ್ತಾರೆ. ಕೂದಲು ಕಂದು, ಕಣ್ಣು ಕೆಂಗಂದು ಬಣ್ಣ.

ಗಾರ್ಡನ್ ದಂಪತಿಗಳು ಟೆಕ್ಸಾಸಿನ ಹೂಸ್ಟನ್ನಿನಲ್ಲಿ ಆಕರ್ಷಕವಾದ, ವಿಶಾಲವಾದ ಮನೆಯಲ್ಲಿ ವಾಸಿಸುತ್ತಿದ್ದಾರೆ. ಅವರು ಸಾಕಿರುವ ಚಿಕ್ಕ ಕೋತಿಗೂ ನಾಲ್ಕು ವಸ್ತು ಹುಲ್ಲಿನ ಹಾಸು ಮನೆಯ ಆವರಣದಲ್ಲಿದೆ. ಮನೆ ಗಾರ್ಡನ್ ಅವರು ಕೆಲಸ ಮಾಡುವ, ತರಬೇತಿ ನೀಡುವ ಅಮೆರಿಕದ ಮಾನವ ಸಹಿತ ಗಗನ ಹಾರಾಟಗಳ ಕೇಂದ್ರಕ್ಕೆ ಸಮೀಪದಲ್ಲಿಯೇ ಇದೆ. ಗಾರ್ಡನ್ನರ ತಾಯಿ ಹಾಗೂ ಅವರ ಪತ್ನಿಯ ತಂದೆ ತಾಯಿಗಳು ಗಾರ್ಡನ್ನರ ಸ್ವಸ್ಥಳವಾದ ಅಮೆರಿಕ ಭೂ ಖಂಡದ ವಾಯುವ್ಯ ಗಡಿಯ ತುದಿಯಲ್ಲಿರುವ ವಾಷಿಂಗ್ಟನ್ ರಾಜ್ಯದಲ್ಲೇ ಇದ್ದಾರೆ.

ಮಾನವ ಸಹಿತ ಗಗನ ಹಾರಾಟದ ಇತಿಹಾಸ ಚಿಕ್ಕದು. ಆದರಲ್ಲಿ ಚಾರ್ಲ್ಸ್ ಕಾನ್ರಾಡ್ ಜ್ಯೂನಿಯರ್ ಅವರ ಹೆಸರು ಇದುವರೆಗಿನ ಅತ್ಯಂತ ಯಶಸ್ವಿ ಗಗನ ಹಾರಾಟದೊಂದಿಗೆ ಸೇರಿಕೊಂಡಿದೆ. ೧೯೬೫ರ ಆಗಸ್ಟ್ ತಿಂಗಳಿನಲ್ಲಿ ನಡೆದ ೮ ದಿನದ, ೧೨೦ ಕಕ್ಷಾ ಯಾತ್ರೆಗಳ ಜೆಮಿನಿ—೫ರ ಹಾರಾಟದ ಸಾರಥಿಯಾಗಿದ್ದವರು ಕಾನ್ರಾಡ್. ಚಂದ್ರನಲ್ಲಿಳಿದು ಮರಳಿ ಬರುವ ವರೆಗೆ ಸರಿಸುಮಾರಾಗಿ ಬೇಕಾದ ಅವಧಿಯ ವರೆಗೆ ಮಾನವ ಗಗನದಲ್ಲಿ ಯಾವ ದುಷ್ಪರಿಣಾಮವೂ ಇಲ್ಲದೆ ಇರಲಿಲ್ಲ ಎಂಬುದನ್ನು ಪ್ರದರ್ಶಿಸಿದ ಹಾರಾಟವೇ ಜೆಮಿನಿ—೫ರದು.

ಎಂಥ ಒತ್ತಡದಲ್ಲೂ ವಿವೇಕದಿಂದ ನಿರ್ಧಾರ ಕೈಗೊಳ್ಳುವ ಜಾಣ್ಮೆ ಕಾನ್ರಾಡರದು. ಗಗನ ಯಂತ್ರ ವಿದ್ಯೆಯಲ್ಲಿ ಪಳಗಿದ ಹಸ್ತ. ಅವರ ಈ ಚೈತನ್ಯವೇ ಹಾರಾಟದ ಯಶಸ್ಸಿಗೆ ಬಹುಮಟ್ಟಿಗೆ ಕಾರಣವಾಯಿತು. ಅವರು ಮೊನ್ನೆ ನಡೆದ ಅಷ್ಟೇ ಪ್ರಾಮುಖ್ಯವಾದ ಜೆಮಿನಿ—೧೧ ಇಬ್ಬರು ಗಗನಯಾತ್ರಿಗಳ ಹಾರಾಟದಲ್ಲಿ ಭಾಗವಹಿಸಿದ್ದಾರೆ.

ಗಗನ ಯಾತ್ರೆಯನ್ನು ಎರಡು ಸಾರಿ ಕೈಗೊಂಡ ಅಮೆರಿಕನ್ನರಲ್ಲಿ ಕಾನ್ರಾಡ್ ಆರನೆಯವರಾಗಲಿದ್ದಾರೆ. ರಷ್ಯದ ಯಾವ ಗಗನಯಾನಿಯೂ ಎರಡನೇ ಬಾರಿಗೆ ಗಗನಕ್ಕೆ ಏರಿಲ್ಲ.

ಜೆಮಿನಿ — ೫ರ ಹಾರಾಟದಲ್ಲಿ ಕೈಗೊಂಡಿದ್ದ ಅನೇಕ ನವ ಆವಿಷ್ಕಾರಗಳಲ್ಲಿ ಇಂಧನಕ್ಕೆ ಸಂಬಂಧಿಸಿದ್ದೂ ಒಂದು. ಸಂಚಯನ ಕೋಶಗಳ ಬದಲು ಅದರಲ್ಲಿ ರಾಸಾಯನಿಕ ಇಂಧನ ಕೋಶಗಳನ್ನು ಗಗನಯಾನದ ವಿದ್ಯುತ್ತಿನ ಪೂರೈಕೆಗೆ ಇಡಲಾಗಿತ್ತು. ಜಲಜನಕ ಹಾಗೂ ಆಮ್ಲಜನಕಗಳ ಪ್ರತಿಕ್ರಿಯೆಯಿಂದ ಈ ಕೋಶಗಳಲ್ಲಿ ವಿದ್ಯುತ್ತಿನ ಉತ್ಪಾದನೆ ಆಗುತ್ತಿತ್ತು.

ಹಾರಾಟದ ಆರಂಭದಲ್ಲಿ ಆಮ್ಲಜನಕವನ್ನು ಪೂರೈಸುವ ಎರಡು ಟ್ಯಾಂಕುಗಳ ಪೈಕಿ ಒಂದರಲ್ಲಿ ಒತ್ತಡ ಅಪಾಯವನ್ನವಾಗಿ ಇಳಿದುದರಿಂದ, ತುರ್ತುಗತಿಯಿಂದ ಭೂಮಿಗೆ ಮರಳ ಬೇಕಾಗುವಂತಹ ಪರಿಸ್ಥಿತಿ ಪ್ರಾಪ್ತವಾಯಿತು.

ಆದರೆ ಇಬ್ಬರು ಗಗನಯಾನಿಗಳು ಬಹು ಎಚ್ಚರಿಕೆಯಿಂದ ಬಹು ವಿವೇಕಯುತವಾಗಿ ಗಗನಯಾನವನ್ನು ನಡೆಸಿದುದರಿಂದ ಎರಡನೆ ದಿನ ಇಂಧನದ ಕೋಶಗಳು ಯಥಾಸ್ಥಿತಿಯ ಕಾರ್ಯ ನಿರ್ವಾಹವನ್ನು ಆರಂಭಿಸುವ ವರೆಗೆ ಹಾರಾಟಕ್ಕೆ ಅವಶ್ಯವಾದ ಶಕ್ತಿಯನ್ನು ಉಳಿಸಿಕೊಳ್ಳಲು ಸಾಧ್ಯವಾಯಿತು.

ಆರನೆ ದಿನ ಇಂಧನ ಕೋಶಗಳಲ್ಲಿ ಮತ್ತಷ್ಟು ತೊಂದರೆ ಕಾಣಿಸಿಕೊಂಡಿತು. ಫಲವಾಗಿ ಕೆಲವು ಯೋಜಿತ ಪ್ರಯೋಗಗಳನ್ನು ಕೈಬಿಡಬೇಕಾಯಿತು. ಆಗಲೂ ಗಗನಯಾನಿಗಳು ತೊಂದರೆಗಳನ್ನು ನಿವಾರಿಸಿಕೊಂಡು ಹಾರಾಟವನ್ನು ವೇಳಾಪಟ್ಟಿಯಂತೆ ಮುಕ್ತಾಯಗೊಳಿಸಿದರು.

ಚಾರ್ಲ್ಸ್ ಕಾನ್ರಾಡ್ ಜ್ಯೂನಿಯರ್ ಅವರು ೧೯೩೦ರ ಜೂನ್ ೨ರಂದು ಜನಿಸಿದರು. ಬಾಲ್ಯದಲ್ಲೇ ವಿಮಾನದಲ್ಲಿ ಅವರಿಗೆ ಆಸಕ್ತಿ ಉಂಟಾಯಿತು. ಅವರ ತಂದೆ ಮೊದಲನೆ ಪ್ರಪಂಚ ಯುದ್ಧದಲ್ಲಿ ಬಲೂನಿಸ್ಟರಾಗಿದ್ದು ವಾಯುಯಾನದಲ್ಲಿ ಮಗನಿಗಿದ್ದ ಆಸಕ್ತಿಗೆ ಪ್ರೋತ್ಸಾಹ ನೀಡಿದರು.

"೯ನೇ ವಯಸ್ಸಿನಲ್ಲಿ ನಾನು ನನ್ನ ಮೊದಲನೆ ವಿಮಾನದ ಕಾಕ್ ಪಿಟ್ಟನ್ನು ನಿರ್ಮಿಸಿದೆ......ನನ್ನ ಕೊಠಡಿಯ ನೆಲದ ಮೇಲೆ ಸಮಗ್ರ ಕಾಕ್ ಪಿಟ್‌ಗಳನ್ನೂ ಹರಡಿದ ನೆನಪು ನನಗಿದೆ.... ಸಾಬೂನು ಪೆಟ್ಟಿಗೆಗಳು, ಥಂಬ್ ಟ್ಯಾಕ್ಸ್ ಮತ್ತು ಕುರ್ಚಿಗಳನ್ನು ಬಳಸುತ್ತಿದ್ದೆ....ಅನಂತರ ಗಂಟೆಗಟ್ಟಲೆ ಹಾರುವ ಆಟ ಆಡುತ್ತಿದ್ದೆ" ಎಂದು ಕಾನ್ರಾಡ್ ತಮ್ಮ ಬಾಲ್ಯದ ದಿನಗಳನ್ನು ನೆನೆಸಿಕೊಳ್ಳುತ್ತಾರೆ.

೧೯೫೩ರಲ್ಲಿ ಪ್ರಿನ್ಸ್‌ಟನ್ ವಿಶ್ವವಿದ್ಯಾನಿಲಯದಿಂದ ವಾಯು ಯಾನದ ಎಂಜನಿಯರಿಂಗಿನಲ್ಲಿ ಬ್ಯಾಚಲರ್ಸ್ ಪದವಿಯನ್ನು ಪಡೆದು ಏರ್ ಕ್ಯಾಡೆಟ್ ಆಗಿ ಅಮೆರಿಕದ ನೌಕಾ ಬಲವನ್ನು ಸೇರಿದರು. ನೌಕಾ ಹಾರಾಟಗಾರನ 'ವಿಂಗ್ಸ್' ಸಂಕೇತವನ್ನು ಪಡೆದ ನಂತರ ನೇವಿ ಟೆಸ್ಟ್ ಪೈಲಟ್ ಸ್ಕೂಲನ್ನು ಸೇರಿದರು.

ಅನಂತರ ಟೆಸ್ಟ್ ಪೈಲಟ್ ಆಗಿ, ಯೋಜಿತ ಹೊಸ ನೌಕಾ ವಿಮಾನದ ಪ್ರಾ

ದಕ್ಷಿಣ ವಿಯಟ್ನಾಮ್‌ದಲ್ಲಿ ಅಪ್ರತಿಮ ಸಾಹಸ ತೋರಿಸಿದ ಪ್ರೈವೇಟ್ ಓಲಿವರ್‌ಗೆ ಮರಣೋತ್ತರ ಪ್ರಶಸ್ತಿಯನ್ನು ನೀಡಿದ ಅಧ್ಯಕ್ಷ ಜಾನ್ಸನ್ ಅದನ್ನು ಆತನ ಹೆತ್ತವರಿಗೆ ಒಪ್ಪಿಸುತ್ತಿದ್ದಾರೆ.

ಆರು

ಹಾರಿದವರು

ಕಾನ್ರಾಡ್

ಯೋಗಿಕ ಹಾಗೂ ಆರ್ಹತಾ ಹಾರಾಟಗಳನ್ನು ನಡೆಸಿದರು ಅನಂತರ ಅನುಕ್ರಮವಾಗಿ ಮೇರಿಲ್ಯಾಂಡ್ ಪಟುಕ್ಸೆಂಟ್ ರಿವರ್‌ನ ನೌಕಾ ವಿಮಾನ ಕೇಂದ್ರದ ಫ್ಲೈಟ್ ಇನ್‌ಸ್ಟ್ರಕ್ಟರ್ ಹಾಗೂ ಪರ್‌ಫಾರೆನ್ಸ್ ಎಂಜನಿಯರ್ ಆಗಿ ಕೆಲಸಮಾಡಿದರು.

ತದನಂತರ ಕ್ಯಾಲಿಫೋರ್ನಿಯದ ಮಿರಾ ಮಾರ್ ನೌಕಾ ವಿಮಾನ ಕೇಂದ್ರದಲ್ಲಿ ಹಾರಾಟದ ಬೋಧಕರಾದರು. ೧೯೬೨ ಸೆಪ್ಟೆಂಬರ್ ೧೭ನೇ ತಾರೀಕು ಗಗನಯಾನಿಯಾಗಿ ನೇಮಕಗೊಂಡರು.

ಹೀಗೆ ಕಾನ್ರಾಡ್‌ರ ವೃತ್ತಿ ಜೀವನ ಜೆಮಿನಿ ೧೧ರ ಇನ್ನೊಬ್ಬ ಸಾರಥಿಯಾದ ರಿಚರ್ಡ್ ಎಫ್. ಗಾರ್ಡನ್‌ಜೂನಿಯರ್ ಅವರ ವೃತ್ತಿ ಜೀವನದಂತೆಯೇ ಇದೆ. ಗಾರ್ಡನ್ ಅವರೂ ನೇವಿ ಟೆಸ್ಟ್ ಪೈಲಟ್ ಸ್ಕೂಲಿನ ಪದವೀಧರರು ಗಗನಯಾನಿಯಾಗಿ ಆಯ್ಕೆಯಾದಾಗ ಫೈಟರ್ ಸ್ಕ್ವಾಡ್ರನ್‌ರಲ್ಲಿ ಹಾರಾಟದ ಸುರಕ್ಷತಾ ಅಧಿಕಾರಿಯಾಗಿ ಆಯ್ಕೆಗೊಳ್ಳುವ ಮುನ್ನ ಮಿರಮಾರಿನ ಸ್ಕ್ವಾಡ್ರನ್ ೯೬ರಲ್ಲಿದ್ದರು.

ಕಾನ್ರಾಡ್ ಅವರ ಲೆಕ್ಕದಲ್ಲಿ ೩೦೦೦ ಗಂಟೆಗಳು ಹಾರಾಟದ ದಾಖಲೆ ಇದೆ. ೨೦೦೦ ಗಂಟೆ ಜೆಟ್ ಹಾರಾಟ

ಚಿಕ್ಕ ಗಾತ್ರದ ಗಗನಯಾನಿಗಳಲ್ಲಿ ಕಾನ್ರಾಡ್ ಕೂಡ ಒಬ್ಬರು. ೫ಅಡಿ ಆರೂವರ ಅಂಗುಲ ಎತ್ತರ,೧೫೩ಪೌಂಡ್; ಜನರಲ್ಲಿ ಬೆರೆಯುವ ಸ್ವಭಾವದವರು.

೧೯೫೩ರಲ್ಲಿ ಪ್ರಿನ್ಸ್‌ಟನ್ ಪದವಿ ಪಡೆದ ದಿನ ಚಿತ್ರಕಲಾ ವಿಲಾಸಿಯೂ, ಹಾರಾಟದಲ್ಲಿ ಉತ್ಸಾಹಶಾಲಿಯೂ, ರ್ಯಾಂಚರ್ ಒಬ್ಬರ ಮಗಳೂ ಆದ ಟೆಕ್ಸಾಸಿನ ಉವಾಲ್ಡೆಯ ಜೇನ್‌ದುಬೋಸ್ ಅವರನ್ನು ವಿವಾಹವಾದರು. ದಂಪತಿಗಳು ಆಗ್ಗಾಗೆ ವಿನೋದಾರ್ಥವಾಗಿ ಜೇನ್ ತಂದೆಯ ರ್ಯಾಂಚಿನಲ್ಲಿ ಕುದರೆ ಸವಾರಿ ಮಾಡುತ್ತಾರೆ.

ಕಾನ್ರಾಡ್ ದಂಪತಿಗಳು ಟೆಕ್ಸಾಸ್ ಹೂಸ್ಟನ್ನಿನ ಹೊರವಲಯಗಳಲ್ಲಿ ಒಂದಾದ ಸೀಬ್ರೂಕಿನಲ್ಲಿರುವ, ಅಮೆರಿಕದ ಮಾನವ ಸಹಿತ ಗಗನ ಹಾರಾಟ ಕೇಂದ್ರಕ್ಕೆ ಸಮೀಪವಾದ ವೃಕ್ಷಗಳಿಂದ ಆವೃತವಾದ ಮನೆಯಲ್ಲಿ ನಾಲ್ವರು ಪುತ್ರರೊಡನೆ ವಾಸಿಸುತ್ತಿದ್ದಾರೆ



ಕುತ್ತಿಗೆಯ ಪರಿಶೀಲನೆಯಲ್ಲಿ ಮಗ್ನನಾದ ಅಮೆರಿಕನ್ ವೈದ್ಯ.

ಕವಲು ದಾರಿ ಕೆಂಪು ದೀಪ

ನಾವು ಸಂಯಮಧನರೆ?

ಮನೆಯಲ್ಲಿ ಬೆಂಕಿಯುರಿದಾಗ ಕಂಡವರ ಮನೆ ಬಾಗಿಲಿಗೆ ಓಡುವನಂತೆ..

ಇಂತಹುದೇ ಪರಿಸ್ಥಿತಿ ನಮ್ಮದಾಗಿದೆಯೆ?

ಸಮಸ್ಯೆಗಳ ಮೂಟೆಯನ್ನೇ ತಲೆಮೇಲೆ ಹೊತ್ತ ಸಮಸ್ಯಾತ್ಮಕ ರಾಷ್ಟ್ರ ನಮ್ಮದು.

ಎಲ್ಲರಿಗೂ ಎಲ್ಲವೂ ಸಮಸ್ಯೆಯೇ

ಓದದೆ ಪಾಸಾಗುವುದು ಹೇಗೆ. ಈ ರೀತಿಯ ಕೆಲವೊಂದು ಸಮಸ್ಯೆಗೆ ಅರ್ಥಂಬರ್ಥ ಉತ್ತರ ಸಿಕ್ಕಿರ ಬಹುದು— ಆದರೂ ಇಂತಹ ಉತ್ತರವೆಲ್ಲ ಸಾರ್ವತ್ರಿಕ ಪರಿಹಾರ ನೀಡಲಾರದು— ಆಂಶಿಕ ಉತ್ತರದಿಂದ ಮತ್ತೊಂದು ಸಮಸ್ಯೆ ಎದ್ದಿದೆ— ಲಂಚಾವತಾರ – ಭ್ರಷ್ಟಾಚಾರ!

ಸಮಸ್ಯೆಗಳನ್ನು ಎದುರಿಸಲಾಗದವರು ಒಂದಲ್ಲ ಮೂರು ಕಾನೂನು ಮಾಡುತ್ತಾರೆ. ಸಮಸ್ಯಾತ್ಮಕ ವ್ಯಕ್ತಿ ಪಂಗಡಗಳು ನೂರು ಕಾನೂನುಗಳನ್ನು ಸಂಶೋಧಿಸಿ ಆನಂದ ತುಂದಿಲರಾಗುತ್ತಾರೆ.

ಸಾಕ್ರೆಟಿಸನಿಗ ವಿಷದ ಪ್ಯಾಲೆ ಎತ್ತಿ ಕುಡಿದಾಗ ಇಷ್ಟು ಆನಂದವಾಗಿಲಾರದು ಆರ್ಕಿಮಿಡೀಸ ಯುರೇಕಾ ಎಂದು ಕೂಗಿದಾಗಲೂ ಇಂತಹ ಸ್ವರ್ಗೀಯ ಸುಖಾನುಭವ ಮಾಡಿಕೊಂಡಿಲಾರ .ನನಗಾಗಿ ಮರುಗದಿರಿ, ನಿಮಗಾಗಿ, ನಿಮ್ಮ ಮಕ್ಕಳಿಗಾಗಿ ಮರುಗಿರಿ" ಎಂದ ಏಸು ಕ್ರಿಸ್ತನ ಆಂತರಿಕ ಸುಖವೂ ಇದಕ್ಕೆ ಸರಿಸಾಟಿಯೆನಿಸಲಾರದು.

ನಮ್ಮ ಎಲ್ಲ ಸಮಸ್ಯೆಗಳಿಗೆ ಬೀಜ ಜನಸಂಖ್ಯೆ– –ಇದನ್ನು ಭಾರತೀಯ— ಅಭಾರತೀಯ ಜಂಕ ಸಂಖ್ಯಾ ಶಾಸ್ತ್ರಗಳೆಲ್ಲರೂ ಕಂಡು ಹಿಡುಕಿದ್ದಾರೆ. ಇದೇ ರೀತಿಯಲ್ಲಿ ನಮ್ಮ ಜನನ ಸಂಖ್ಯೆ ಏರುತ್ತ ಬಂದರೆ ಇನ್ನು ಕೆಲವರ್ಷಗಳಲ್ಲಿಯೇ ಭೂಭಾರವಾಗಿ ಅದನ್ನು ನಿವಾರಿಸಲು ಭಗವಾನ್ ವಿಷ್ಣು ಕಲ್ಕ್ಯವತಾರವನ್ನು ಕೂಡಲೇ ಧರಿಸಬೇಕಾಗಿ ಬರುತ್ತದಂತೆ

ಬರಬಹುದಲ್ಲಾ ಆ ಸ್ಮೃತಿಗಳು? ಕಲಿಯುಗದಲ್ಲಿ ಹೊಂದಲೆಂದು ವಿಷ್ಣು ರಿಜರ್ವ ಮಾಡಿದ್ದು ಎರಡೆ ಎರಡು ಅವತಾರಗಳನ್ನು. ಮೊದಲ ಮೂರು ಸಾವಿರ ವರ್ಷಗಳಲ್ಲೇ ಆತ ಬುದ್ಧಾವತಾರವನ್ನು ತಾಳಬೇಕಾಯಿತು. ಇನ್ನು ಕಲಿಯುಗ ಅಂತ್ಯವಾಗ ಬೇಕಾದರೆ ಇರುವ ವರ್ಷಗಳು ಒಂದೇ ಎರಡೆ? ೪,೩೨,೦೦೦. ಅಂದರೆ, ಆತನ ಯೋಜನೆಯೂ ಸಂಪೂರ್ಣ ತಲೆ ಕೆಳಗಾಗಿದೆಯೆಂದು ಬೇರೆ ಹೇಳ ಬೇಕೆ?

ಅದಕ್ಕಾಗಿಯೇ ಜನಸಂಖ್ಯಾ ನಿಯಂತ್ರಣದ ಮಂತ್ರವನ್ನು ಭಗವಾನ್ ವಿಷ್ಣು ಗುಪ್ತದೂತರಿಂದ ಆಡಳಿತಾಧಿಕಾರಿಗಳಿಗೆ ಉಪದೇಶಿಸಿದ; ತನ್ನ ಕಾರ್ಯದಲ್ಲಿ ಸಹಭಾಗಿಯಾಗುವಂತೆಯೂ ಹೀಗೆ ಮಾಡಿದರೆ, ರಾಜಕೀಯ ಮುಖಂಡರುಗಳಾಗಿ ನೀವು ಮಾಡಿರುವ ಎಲ್ಲವನ್ನೂ ಮನ್ನಿಸಿ ವಿಷ್ಣುಪದ ನೀಡುವುದಾಗಿಯೂ ನಂಬಿಸಿರಬೇಕು. ಇವರದಕ್ಕೆ ಸೈಗುಟ್ಟಿರಬೇಕು.

ಜನಸಂಖ್ಯಾ ನಿಯಂತ್ರಣಕ್ಕಿರುವ ದಾರಿ ನಾಲ್ಕು.

ಜನನ ನಿಯಂತ್ರಣವೊಂದು, ಪ್ರಕೃತಿ ವಿಕೋಪವೆರಡು, ಮಾನವ ಪ್ರಕೋಪವಿದು ಮೂರು, ಮೃತ್ಯುವೇ ನಾಲ್ಕು.

ಪ್ರಕೃತಿಯ ಶಕ್ತಿಯು ಅಳೆವನ್ನು ಮಾನವನರಿತು. ಪಳಪಡಿಸಲು ಯತ್ನಿಸಿದರೂ ಅದು ಕಷ್ಟವೆಯನ್ನು ಕೈಯಲ್ಲಿ ಹಿಡಿದಂತೆ ಮಾನವ ಪ್ರಕೋಪಕವನ್ನು ರಂಪಾಮಾಡಿ ಶಾಂತಿ ಸಾಧಕರೆನಿಸುವ ಹುಚ್ಚು ಎಲ್ಲರಲ್ಲೂ ಮೂಡಿರುವುದರಿಂದ ಅವರಿಂದಲೂ ನಿಯೋಜಿತ ಶಾಂತಿ ಸಿಗಲಾರದು.

ಯೋಜನೆಗಳ ಯುಗದಲ್ಲಿ ವೆಚ್ಚದ ಬಾಬುಗಳನ್ನು ಹೆಚ್ಚಿಸುವುದು ಅನಿವಾರ್ಯ ವಾದುದರಿಂದ ವೈದ್ಯಕೀಯ ವಿಭಾಗವನ್ನು ಸಂಪೂರ್ಣ ಬಂದ್ ಮಾಡುವುದು ಸಾಧ್ಯವಿಲ್ಲ

ತನ್ನ ೯ಆನೆಯ ವಯಸ್ಸಿನಲ್ಲೇ ಮೊತ್ತಮೊದಲ ಬಾರಿಗೆ ಶಾಲೆಗೆ ಸೇರಿದ 'ಹಳೆಯ ವಿದ್ಯಾರ್ಥಿ' ಶ್ರೀಮತಿ ಮೇರಿ ವಾಕರ್‌ರನ್ನು ಅವರ ೧೦೦ನೆಯ ಜನ್ಮದಿನದಂದು ಟೆನ್ನೆಸ್ಸಿಯಲ್ಲಿ ಗೌರವಿಸಲಾಯಿತು.

ಆದರೂ ಪ್ರಯತ್ನ ನಡೆಯುತ್ತಿದೆ— ಡಾಕ್ಟರರು ಇರುವಲ್ಲಿ ಔಷಧಿಗಳ ಪೂರೈಕೆ ತಡೆ ಹಿಡಿಯುತ್ತೇವೆ— ಔಷಧಿಯಿರುವಲ್ಲಿಗೆ ಡಾಕ್ಟರರ ನೇಮಕ ಮಾಡುವುದಿಲ್ಲ, ಮಾಡಿದರೂ ವರ್ಗ__ಯಾಕೆ?

ಹಾಗಿದ್ದರೂ ಪ್ರಯೋಜನ ಲಭ್ಯವಾಗಲಿಲ್ಲ. ಭೂತಪ್ರೇತ ಪಿಶಾಚಿಗಳು ಅಲ್ಪ ಲಂಚದಲ್ಲೇ ತೃಪ್ತಿ ಹೊಂದುವುದರಿಂದ ಪೂರ್ಣ ಲಾಭವನ್ನು ಪಡೆದ ಕೊಳ್ಳುತ್ತಾರೆ, ಭಾರತೀಯರು!

ಇನ್ನು ಉಳಿದುದು ಒಂದೇ— ಜನನ ನಿಯಂತ್ರಣ. ಇದಕ್ಕೆಂದೇ ವೈಭವದ ಪ್ರಚಾರ—ಅದಕ್ಕೆ ವೆಚ್ಚ.

ಈ ವೆಚ್ಚ ಹುಟ್ಟುವ ಕೂಸುಗಳನ್ನು ಸಾಕಲು ಸಾಕಾಗದೆಂಬುದು ಯಾರಿಗೆ ತಿಳಿದಿಲ್ಲ?

ಆಪರೇಶನ್ ಆಯಿತು—ಅದು ಅನಾರೋಗ್ಯಕ್ಕೆ ನಾಂದಿಯೆನಿಸಿತ , ವಂಕಿ ಪ್ರಯೋಗದ ಜಯ ಭೇರಿ ಹೊರಡಿತು—ಅದರಲ್ಲೂ ಅಪಸ್ವರ ಕೇಳ ತೊಡಗಿತು.

ಇನ್ನೀಗ? ಏನು?

—ಗರ್ಭಪಾತವನ್ನು ಕ್ರಮಬದ್ಧಗೊಳಿಸುವ ಕಾನೂನು—

—ಸಾಮಾಜಿಕ ಅನೈತಿಕತೆ ಬೆಳೆಯಲು ಬಿತ್ತಿದ ಬೀಜವಿದು ಎಂಬ ದೂರು!

ಮತ್ತೆ? ಸಂಯಮ ...

— ಅದಿದ್ದರೆ ಹೀಗೆಲ್ಲಾ ಏಕೆ?

ಏನು ಮಾಡಬೇಕು? ಎಲ್ಲರಿಗೂ ಸಮಸ್ಯೆ— ಸಮಸ್ಯೆ—,

ಒಂದೆರಡು ರಾಜ್ಯ ಸರಕಾರಗಳು ಆಜ್ಞೆ ಹೊರಡಿಸಿವೆ— ಮೂರಕ್ಕಿಂತ ಹೆಚ್ಚು ಬಾರಿ ಹೆರಿಗೆಯ ರಜೆಯನ್ನು ಮಹಿಳಾ ನೌಕರರಿಗೆ ನೀಡುವುದಿಲ್ಲ—

—ಸಂತಾನ ನಿಯಂತ್ರಣವನ್ನು ಯಶಸ್ವಿಗೊಳಿಸುವ ಒಂದು ಹೆಜ್ಜೆಯಿದು ಎನ್ನುತ್ತಾರೆ, ಆಜ್ಞೆಯ ಜನ್ಮದಾತರು.

ಸರಕಾರ ಕೊಡುವ ಎರಡು ತಿಂಗಳ ಪಟ್ಟಿ ಸಂಬಳ ಆ ಮಗುವನ್ನು ಆಜೀವ ಸಾಕಲು ಸಾಕಾಗದೆಂದು ಯಾವ ತಾಯಿಗೆ ಗೊತ್ತಿಲ್ಲ?

(ಒಂಭತ್ತನೇ ಪುಟ ನೋಡಿರಿ)

ಕುಮಾರವ್ಯಾಸನ ಕಥಾನಾಯಕ

(ಐದನೇ ಪುಟದಿಂದ)

ವ್ಯ ವೀರನಾರಾಯಣನ ತೇಜೋಮಯ ಶಕ್ತಿಯಲ್ಲಿ ಲೀನವಾಗಿವೆ.

ಭೀಷ್ಮ, ದ್ರೋಣ, ಕರ್ಣ, ದುರ್ಯೋಧನ, ದುಶ್ಶಾಸನ, ಧರ್ಮರಾಯ, ಭೀಮ, ಪಾರ್ಥ, ಅಭಿಮನ್ಯು, ಉತ್ತರ, ದ್ರೌಪದಿ, ದ್ರುಪದ, ವಿರಾಟ, ಧೃತರಾಷ್ಟ್ರ, ಘಟೋತ್ಕಚ ಮೊದಲಾದ ನೂರಾರು ಮುಖ್ಯ—ಅಮುಖ್ಯ ಪಾತ್ರಗಳು ಭಾರತದಲ್ಲಿವೆ. ಎಲ್ಲ ಪಾತ್ರಗಳೂ ಒಂದಲ್ಲೊಂದು ಬಗೆಯಲ್ಲಿ ಶ್ರೀಕೃಷ್ಣನ ನಿಕಟ ಸಂಬಂಧ ಹೊಂದಿರುವ ಪಾತ್ರಗಳು. ಭಾರತ ಕಥೆಯ ಕೇಂದ್ರವ್ಯಕ್ತಿ ಶ್ರೀಕೃಷ್ಣ, ಅವನನ್ನು ಬಿಟ್ಟು ಯಾವ ಪಾತ್ರವೂ ಇಲ್ಲ. ಯಾವ ಸನ್ನಿವೇಶ, ಘಟನೆಗಳೂ ಇಲ್ಲ. ಎಲ್ಲ ಪಾತ್ರಗಳು ಭಾರತದ ಕಥೆಗಾಗಿ ಅಲ್ಲ, ಭಾರತದ ಕಥಾನಾಯಕ ಶ್ರೀಕೃಷ್ಣನಿಗಾಗಿ, ಅವನ ನಾಟಕಕ್ಕಾಗಿ. ಭಾರತ ಕಾವ್ಯಕ್ಕಾಗಿ ಶ್ರೀಕೃಷ್ಣನ ಪಾತ್ರವಲ್ಲ. ಶ್ರೀಕೃಷ್ಣನಿಗಾಗಿ ಭಾರತ ಕಾವ್ಯ ಮತ್ತು ಅದರ ಕಥೆ. ಕರ್ನಾಟ ಭಾರತ ಕಥಾ ಮಂಜರಿಯಲ್ಲಿ ಶ್ರೀಕೃಷ್ಣ ಒಬ್ಬ ಪಾತ್ರಧಾರಿಯಲ್ಲ, ಸೂತ್ರಧಾರ. ಕಾವ್ಯದ ನಾಯಕ. ಈ ನಾಯಕನಿಗಿರುವ ತೇಜಸ್ಸು, ಸೌಂದರ್ಯ— ಶಕ್ತಿಗಳು ಅಪಾರ. ಶ್ರೀಕೃಷ್ಣನ ಪಾತ್ರಕ್ಕೆ ಕುಮಾರವ್ಯಾಸ ಹಲವಾರು ಶ್ರೀಮತಗಳನ್ನು ಗಳಿಸಿಕೊಟ್ಟಿದ್ದಾನೆ. ಶ್ರೀ ಕೃಷ್ಣ ಕುಮಾರವ್ಯಾಸನ ಕಾವ್ಯ ರಚನೆಗೆ ಶಕ್ತಿಯಾಗಿ, ಪ್ರೇರಕನಾಗಿ ನಿಂತಿದ್ದಾನೆ. ಹಾಗೆಯೇ ಶ್ರವಣ ಸುಧಾ ವಿನೂತನ ಕಥನ ಕಾರಣನಾಗಿದ್ದಾನೆ.

"ತೇನವಿನಾ ತೃಣಮಪಿನ ಚಲತಿ" ಎಂಬ ನಾಣ್ಣುಡಿಯಂತೆ ಭಾರತದಲ್ಲಿ ಶ್ರೀಕೃಷ್ಣನ ಸೂಚನೆ—ಸಲಹೆಗಳಿಲ್ಲದ ಯಾವ ಘಟನೆಗಳೂ ಜರುಗುವುದಿಲ್ಲ. ಅವನ ಕೃಪಾದೃಷ್ಟಿ ಸಂದರ್ಭದಲ್ಲಿಯೂ ಇಷ್ಟೇ ತೀರುತ್ತದೆ. ಶ್ರೀಕೃಷ್ಣ ಸರ್ವಾಂತರ್ಯಾಮಿ, ಸರ್ವಶಕ್ತ, ಪರಮ ಪೂಜ್ಯ, ಪರಬ್ರಹ್ಮ ಸ್ವರೂಪ. ಉಳಿದ ಪಾತ್ರಗಳೆಲ್ಲವೂ ಆ ಸೂತ್ರಧಾರನ ಆಜ್ಞೆಯಂತೆ ಚಲಿಸುವ ಸೂತ್ರದ ಬೊಂಬೆಗಳು.

ಶ್ರೀ ಕೃಷ್ಣ ಸರ್ವಶಕ್ತ. ಅವನೊಬ್ಬನೇ ದುಷ್ಟರೆಲ್ಲರನ್ನೂ ಧ್ವಂಸ ಮಾಡಬಹುದಿತ್ತು. ಆದರೆ ಅವನು ಹಿಂದೆ ನಿಂತು ಭೀಮಾರ್ಜುನರ ಮೂಲಕ ಅವರನ್ನು ನಾಶ ಮಾಡುತ್ತಾನೆ. ಅವನು ದೇವಾದಿದೇವ, ಜಗದ್ವಂದ್ಯ. ಆದರೆ ತನ್ನ ಶಕ್ತಿ, ಪ್ರತಾಪ, ಪ್ರತಿಭೆಗಳನ್ನೂ ಮರೆಮಾಡಿ ಸಾಮಾನ್ಯ ಮಾನವನಂತೆಯೇ ನಟಿಸುತ್ತಾನೆ.

ಕುಳಿತ ಸ್ಥಳದಿಂದ ಎದ್ದು ಕುಂತಿಗೆ ನಮಸ್ಕರಿಸುತ್ತಾನೆ. ಪಾಂಡವರ ಬಗೆಗಂತೂ ಅವನಿಗೆ ಅಪರಿಮಿತ ಅಭಿಮಾನ. 'ಮಮ ಪ್ರಾಣಾಹಿ ಪಾಂಡವಾಃ' ಎಂದು ಅವರನ್ನು ತನ್ನ ಪ್ರಾಣಗಳಂತೆ ರಕ್ಷಿಸುತ್ತಾನೆ. ಅರ್ಜುನ ಶ್ರೀ ಕೃಷ್ಣನ ಆಪ್ತಮಿತ್ರ ಒಲವಿನ ಬಂಧು. ಆದಕಾರಣವೇ ಸೋದರಿ ಸುಭದ್ರೆಯನ್ನು ಅವನಿಗಿತ್ತು, ಬಂಧುತ್ವದ ಗಂಟನ್ನು ಭದ್ರಪಡಿಸಿ ಕೊಳ್ಳುತ್ತಾನೆ. ಪಾಂಡವರ ರಾಣಿ ಪತಿವ್ರತಾ ಶಿರೋಮಣಿ, ದ್ರುಪದ ನಂದಿನಿಯ ಪವಿತ್ರ ಪ್ರೀತಿಗೆ ಶ್ರೀ ಕೃಷ್ಣ ಮಾರು ಹೋಗಿದ್ದ. ಈ ತಂಗಿಯ ಬಗ್ಗೆ ಎಲ್ಲಿಲ್ಲದ ಅಭಿಮಾನ. ಅವಳ ಕಷ್ಟ ದುಃಖಗಳಲ್ಲಿ ಭಾಗಿಯಾಗುತ್ತಾನೆ. ನೆರವಾಗುತ್ತಾನೆ. ಯೋಗಿ—ಮುನಿಗಳಿಗೆ, ವೇದೋಪನಿಷತ್ತುಗಳಿಗೆ ದುರ್ಲಭ್ಯವಾದ ಭಗವಾನ್ ಶ್ರೀ ಕೃಷ್ಣ ಸೋದರಿ ಪಾಂಚಾಲಿಯ ಕರೆಗೆ ಓಡೋಡಿ ಬರುತ್ತಿದ್ದ. ನಂಬಿದ ಭಕ್ತರ ಭಂಟನಲ್ಲವೇ ಭಗವಂತ!

ಕುಮಾರವ್ಯಾಸನ ಮಾತಿನಂತೆಯೇ ಹೇಳುವುದಾದರೆ ಶ್ರೀಕೃಷ್ಣ 'ಒಲಿದವರನು ಜೀವಿಸುವ ಬಗೆ ಬಲಹು ಮುರಮಥನಂಗೆ ಮುನಿದೊಡೆ ಹಣೆಯ ಬರಹವ ತೊಡೆವನಲ್ಲದೆ ಬಳಿಕ ಸೈರಿಸನು.' ಅಷ್ಟೇ ಅಲ್ಲ ಅವನು "ಕೈತವದ ಶಿಕ್ಷಾಗುರು". "ಸೆಣಸು ಸೇರದ ದೇವ". ಮುಖ್ಯವಾಗಿ ಹೇಳುವುದಾದರೆ ಶ್ರೀಕೃಷ್ಣ ವಜ್ರದಂತೆ ಕಠೋರ, ಕುಸುಮದಂತೆ ಸೂಕ್ಷ್ಮ, ಅಗ್ನಿಯಂತೆ ತೇಜೋಮಯ, ಹಿಮದಂತೆ ಶೀತಲ.

ಭೀಷ್ಮರು ಕೌರವ ಸೈನ್ಯದ ಅಧಿಪತಿಗಳಾಗಿ ಯುದ್ಧಕ್ಕೆ ನಿಂತು ಪ್ರಳಯ ರುದ್ರನಂತೆ ಮೆರೆದಾಗ ಶ್ರೀಕೃಷ್ಣ ಅವರನ್ನು ಆಹುತಿ ತೆಗೆದುಕೊಳ್ಳಲು ಚಕ್ರಧಾರಿಯಾಗಿ ನಡೆದಾಗ, ನಡೆಯಲಿರುವ ಮಹಾ ಪ್ರಮಾದವನ್ನು ಭೀಷ್ಮ ಭಕ್ತಿ ವಿಚಾರಿಸಿದಾಗ, ಯುದ್ಧದಲ್ಲಿ ಯಾವ ಆಯುಧವನ್ನು ಹಿಡಿಯುವುದಿಲ್ಲ ಎಂಬ ಪ್ರತಿಜ್ಞೆಯನ್ನು ನೆನಪು ಮಾಡಿಕೊಂಡು 'ನಚ್ಚಿನಾಳಿನ ಬಿನ್ನಹಕೆ ಮನದೊಳು ನಾಚಿ' ಚಕ್ರವನ್ನು ಮುಚ್ಚುತ್ತಾನೆ. ಹೀಗೆ ಎಷ್ಟೋ ನಾಟಕಗಳನ್ನು ಆಡುತ್ತಾನೆ. ಅವನ ನಟನೆಯನ್ನು ಕಂಡಾಗ ಅಚ್ಚರಿಗೊಳ್ಳುತ್ತೇವೆ. ಕುಮಾರವ್ಯಾಸನ ಕರ್ನಾಟ ಭಾರತ ಕಥಾಮಂಜರಿಯ ಕಥಾನಾಯಕ ಶ್ರೀಕೃಷ್ಣ ಸೂತ್ರಧಾರ. ಅವನು ಸಾಮಾನ್ಯ ಸೂತ್ರಧಾರನಲ್ಲ. ಜಗನ್ನಾಟಕ—ಭಾರತ ನಾಟಕ ಸೂತ್ರಧಾರ. ಅವನು ಸೂತ್ರಧಾರನಾಗಿಯೇ ಉಳಿಯುವುದಿಲ್ಲ ಪಾತ್ರಧಾರಿಯಾಗಿಯೂ ಮೆರೆಯುತ್ತಾನೆ. ಅವನು ಪಾತ್ರಧಾರಿಯಾದ ಸೂತ್ರಧಾರಿ!

ದ್ರುಪದ ನಂದಿನಿಯ ಸ್ವಯಂವರ ಮಂಟಪದಲ್ಲಿ ಮೊದಲಿಗೆ ನಮ್ಮ ಕಥಾನಾಯಕನ ದರ್ಶನ—ಪರಿಚಯವಾಗುತ್ತದೆ. ಮುಂದೆ ಈ ವಾಸುದೇವ ನಂದನ ಪಾಂಡವರ ಅಭ್ಯುದಯವನ್ನೇ ಹಾರೈಸುವ ಹಿತೈಷಿಯಾಗಿ, ಅವರ ಬೆಂಬಲಿಗನಾಗಿ ನಿಂತು ಅವರನ್ನು ನಾನಾ ಕಷ್ಟ, ಸಮಸ್ಯೆ, ಸಂಕಟಗಳಿಂದ ಪಾರು ಮಾಡುತ್ತಾನೆ. ಕೊನೆಗೆ ಶ್ರೀಕೃಷ್ಣನ ಅನುಗ್ರಹದಿಂದ ಗದಾಯುದ್ಧದಲ್ಲಿ ಪಲಲ ಕೌರವರಾದಿಯ ಏಕಾದಶ ಅಕ್ಷೋಹಿಣಿ ಅಧಿಪತಿ ಮಾನಧನ ಸುಯೋಧನನನ್ನು ಗದಾಯುದ್ಧದಲ್ಲಿ ಗದೆಯಿಂದ ಬಡಿದು ಹಾಕುತ್ತಾನೆ. ಅಲ್ಲಿಗೆ ಅವರ ಕಷ್ಟಗಳ ಪರಂಪರೆ ಮುಕ್ತಾಯವಾಗುತ್ತದೆ. ಶುಭದ ದಿನಗಳು ಸಮೀಪವಾಗುತ್ತವೆ. ಸತ್ಯ—ಧರ್ಮ, ನೀತಿ—ನ್ಯಾಯಗಳನ್ನು ಅನುಷ್ಠಾನಕ್ಕೆ ತಂದು ಅವುಗಳನ್ನು ನಿಷ್ಠೆಯಿಂದ ಆಚರಿಸುತ್ತಿದ್ದ ಪಾಂಡವರ ಪಕ್ಷಪಾತಿಯಾಗಿ ಶ್ರೀಕೃಷ್ಣ ಅವರನ್ನು ರಕ್ಷಿಸಿ ಉದ್ಧರಿಸುತ್ತಾನೆ.

ಕುಮಾರವ್ಯಾಸನಿಗೆ ವಿಶ್ವದ ಕಣಕಣದಲ್ಲಿಯೂ ಶ್ರೀಕೃಷ್ಣ ದರ್ಶನವಾಗುತ್ತಿತ್ತೆಂದು ತೋರುತ್ತದೆ. ಅವನ ಕರ್ನಾಟ ಭಾರತ ಕಥಾ ಮಂಜರಿಯಲ್ಲಿ ಎಲ್ಲಿ ನೋಡಿದರೂ ಶ್ರೀಕೃಷ್ಣನೇ ಇರುತ್ತಾನೆ. "ಎನ್ನವೇ ಕೃಷ್ಣಮಯ, ಕೃಷ್ಣಾಪೀಠ! ಶ್ರೀಕೃಷ್ಣ ಎಲ್ಲಿದ್ದಾನೆ. ಈ ಪ್ರಶ್ನೆಗೆ ಉತ್ತರ ಗದುಗಿನ ಭಾರತ.

ಅಗ್ನಿ ಕನ್ಯೆಯ ವಿವಾಹ ಮಂಟಪದಲ್ಲಿಯೂ ಶ್ರೀಕೃಷ್ಣ, ರಾಜಸೂಯ ಯಾಗದ ಮಾರ್ಗದರ್ಶಕ ಶ್ರೀಕೃಷ್ಣ. ಅಗ್ರಪೂಜೆಯೂ ಅವನಿಗೆ, ಕೌರವ ಸಭೆಯಲ್ಲಿ ಪಾಂಚಾಲಿಯ ಮಾನಭಂಗಯತ್ನ, ಅಕ್ಷಯ ವಸ್ತ್ರವನ್ನಿತ್ತು ರಕ್ಷಿಸಿದವ ಶ್ರೀಕೃಷ್ಣ ರುದ್ರರೂಪಿ ದೂರ್ವಾಸರ ಆಗಮನವಾಗಿದೆ. ಅಕ್ಷಯ ಪಾತ್ರೆ ಬರಿದಾಗಿದೆ. ದ್ರೌಪದಿ ಅಣ್ಣನನ್ನು ಕರೆದಳು. ಶ್ರೀಕೃಷ್ಣ ಹಾಜರಾದ, ವನವಾಸ ಅಜ್ಞಾತವಾಸದ ಅವಧಿ ಮುಗಿಯಿತು. ಉತ್ತರೆ ಮತ್ತು ಅಭಿಮನ್ಯುವಿನ ವಿವಾಹ ಶ್ರೀಕೃಷ್ಣ ಪರಿವಾರ ಸಮೇತನಾಗಿ ಧಾವಿಸಿ ಬಂದ. ಪಾಂಡವ ಪ್ರತಿನಿಧಿಯಾಗಿ ಸಂಧಾನಕ್ಕಾಗಿ ಕೌರವನ ಸಭೆಗೆ ಹಸ್ತಿನಾವತಿಗೆ ತೆರಳಿದ, ಸಂಧಾನದ ಹೆಸರಿನಲ್ಲಿ ನಾಟಕವಾಡಿದ, ಕೌರವನನ್ನು ಕೆರಳಿಸಿದ, ಕರ್ಣನಿಗೆ ನಿಜ ವೃತ್ತಾಂತ ತಿಳಿಸಿ ಮನಕದಡಿದ, ಫಲ್ಗುಣನ ಕೋರಿಕೆಯಂತೆ ಯುದ್ಧದಲ್ಲಿ ಪಾಂಡವರಲ್ಲಿಯೇ ಉಳಿದ, ಆಯುಧ ಹಿಡಿದು ಯುದ್ಧ ಮಾಡದೆ ಪಾರ್ಥನ ಸಾರಥಿಯಾಗಿ ಕುಳಿತ, ಕರ್ತವ್ಯ ಮರೆತು ಕೈ ಕಟ್ಟಿ ಕುಳಿತ ಅರ್ಜುನನಿಗೆ ಭಗವದ್ಗೀತೆಯನ್ನು ಬೋಧಿಸಿದ ಗೀತಾಚಾರ್ಯನಾಗಿ ಭೀಮ ಪಾರ್ಥರಿಂದ ದುಷ್ಟರ ಶಿರಸ್ಸನ್ನು ಧರೆಗೆ ಉರುಳಿಸಿದ. ಪಾಂಡವರಿಗೆ ಬರಬೇಕಾದ ರಾಜ್ಯವನ್ನು ಕೊಡಿಸಿ ಮಂಗಳಮಯ ಹಾರ್ದದಲ್ಲಿದ್ವಾರಕೆಗೆ ಪ್ರಯಾಣ ಬೆಳೆಸಿದ ಕುಮಾರವ್ಯಾಸನ ಕಥಾನಾಯಕನ ಲೀಲಾ ವಿಲಾಸ ಸ್ವಾರಸ್ಯಕರವಾಗಿದೆ. ಜಗನ್ನಾಟಕ ಸೂತ್ರಧಾರಿ ತನ್ನ ಪಾತ್ರವನ್ನು ತಾನು ಹೃದಯಂಗಮವಾಗಿ ನಿರ್ವಹಿಸಿದ್ದಾನೆ.

ಗದುಗಿನ ಭಾರತದಲ್ಲಿ ಶ್ರೀ ಕೃಷ್ಣನ ಪಾತ್ರ ಉನ್ನತವಾದ ತೇಜೋ ಪೂರ್ಣ ಪ್ರಮುಖ ಪಾತ್ರ. ಈ ಪಾತ್ರಕ್ಕೆ ಪೂರ್ಣ ಪ್ರತಿಭೆ ಇದೆ. ಕುಮಾರ ವ್ಯಾಸ ಸೃಷ್ಟಿಸಿರುವ ಶ್ರೀ ಕೃಷ್ಣನ ಪಾತ್ರಕ್ಕೆ ಸರಿಸಮಾನವಾದ ಮತ್ತೊಂದು ಪಾತ್ರವನ್ನು ಕಾಣಲು ಸಾಧ್ಯವಿಲ್ಲ. ಕುಮಾರ ವ್ಯಾಸನ ಕಥಾನಾಯಕ ಶ್ರೀಕೃಷ್ಣನ ಪಾತ್ರದ ಪ್ರೌಢಿಮೆಯನ್ನು ಅಳೆಯುವ ಮಾನದಂಡವಿನ್ನೂ ಸಿದ್ಧವಾಗಿಲ್ಲ.

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

S. C 334/1966.

ವಿಟ್ಠಲರಾವ್ ಕೂಡಾ —ವಾದಿರು

ಮತ್ತು

ತುಂಗಮ್ಮ ಶೆಡ್ತಿ ಕೂಡಾ—ಪ್ರತಿವಾದಿರು.

1ನೇ ಪ್ರತಿವಾದಿಳು. ತುಂಗಮ್ಮ ಶೆಡ್ತಿ ಸುಬ್ಬಶೆಟ್ಟಿ ಮಗಳು.

2 ಜಲಜಮ್ಮ ಶೆಡ್ತಿ— 1ನೇಯವಳ ಮಗಳು.

3. ನರ್ಸಿಂಹ ಶೆಟ್ಟಿ, 4. ಚಿನ್ನಯ್ಯ ಶೆಟ್ಟಿ, 5. ಶಂಕರ ಶೆಟ್ಟಿ, 6. ಗಿರಿಜಾ ಶೆಡ್ತಿ —1 ನೇಯವಳ ಮಕ್ಕಳು—

ಕುಂದಾಪುರ ತಾಲ್ಲೂಕು ವಂಡ್ಸೆ ಗ್ರಾಮದ ಕಂಚಿನ ಕೊಡ್ಲಿನಲ್ಲಿರುವವರು

ವಾದಿರು ಗೇಣಿ ಬಾಕಿ ಬಗ್ಗೆ ಮಾಡಿದ ಮೇಲೆ ಕಾಣಿಸಿದ ದಾವೆಯು ತಾರೀಕು 7-10-66 ಕ್ಕೆ ತನಿಖೆಗೆ ಇಟ್ಟಿರುತ್ತದೆಂತಲೂ ಆ ದಿನ್ನ ಹಗಲು 10ಘಂಟೆಗೆ ಕೋರ್ಟು ಮುಂದೆ ಹಾಜರಾಗಲಿಕ್ಕೆ ತಪ್ಪಿದ್ರೆ ಸದ್ರಿ ದಾವೆಯು ಮುಂದಿನ ತನಿಖೆಯು 1ರಿಂದ 6 ನೇ ವರೇಗಿನ ಪ್ರತಿವಾದಿರ ಪರೋಕ್ಷದಲ್ಲಿ ನಡೆಯುವುದೆಂದೂ ಸಹಾ ಸದ್ರಿ 1ರಿಂದ 6ನೇವರೇಗಿನ ಪ್ರತಿವಾದಿರಿಗೆ ಈ ಮೂಲಕ ತಿಳಿಸಲಾಗುತ್ತದೆ.

G. Sanjeeva Rao

Vakil for Plaintiff

ಕುಂದಾಪುರ, ತಾ. 23-9-66.

ಸುವ್ಯವಸ್ಥಿತ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ ತನ್ನ 62 ಶಾಖೆಗಳಿಂದ ಹಬ್ಬಿರುವ "ವಿಜಯ ಬ್ಯಾಂಕಿ"ನಲ್ಲಿ ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 8% ವರೆಗಿನ ಬಡ್ಡಿ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ಹೆಡ್ ಆಫೀಸು— "ವಿಜಯ ಬ್ಯಾಂಕ್ ಬಿಲ್ಡಿಂಗ್",

ಲೈಟ್ ಹೌಸ್ ಹಿಲ್ ರೋಡ್,

ಮಂಗಳೂರು—3

"NAVAYUGA" Kannada Weekly is recommended for High Schools and Public Libraries by the Director of Public Instruction in Mysore, Bangalore vide their letter No. CL-4.17-4/65-66 dated 26—4—1966.

READ & ADVERTISE IN NAVAYUGA WEEKLY

ನಾವು ಸಂಯಮಧನರೆ?
(ಏಳನೇ ಪುಟದಿಂದ)

ಇದಕ್ಕಿಂತ ಇನ್ನು ನೂರು ಅಮೆಂಡ್‌ಮೆಂಟ್‌ನೊಡನೆ ಈ ಆಜ್ಞೆ ಬಂದರೆ ಪರಿಣಾಮ ಹೆಚ್ಚಬಹುದು—

ಒಂದಕ್ಕಿಂತ ಹೆಚ್ಚು ಜೀವಂತ ಹೆಂಡತಿಯಿರುವವನು (ಗಂಡನಿರುವವಳು?) ಸರಕಾರಿ ಉದ್ಯೋಗಕ್ಕೆ ಅನರ್ಹನೆಂಬುದು ಸಿದ್ಧಾಂತ ತಾನೆ? ಅಂತೆಯೇ ಮೂರಕ್ಕಿಂತ ಹೆಚ್ಚು ಮಕ್ಕಳಿರುವವರು ಪುರುಷರಿರಲಿ, ಸ್ತ್ರೀಯರಿರಲಿ ಅವರು ಸರಕಾರಿ ನೌಕರಿಯಿಂದ ಅಪ್ಪಣೆ ಚೀಟಿ ಪಡೆಯಬೇಕು—ಇದರ ತತ್ವವನ್ನೇ ವಿಶಾಲಗೊಳಿಸಿ ಅಂತಹವರನ್ನು ರಾಜ್ಯಾಂತರ, ದೇಶಾಂತರ, ಲೋಕಾಂತರ ಶಿಕ್ಷೆಗೆ ಗುರಿಮಾಡಿದರೂ ಮಾಡಬಹುದು.

—ಈಗಾಗಲೇ ನೌಕರಿಯಲ್ಲಿರುವ ಮಹಿಳೆಯರು ಈಗಾಗಲೇ ಮೂರಕ್ಕಿಂತ ಹೆಚ್ಚು ಬಾರಿ ಹೆರಿಗೆಯ ರಜೆಯನ್ನು ಪಡೆದಿದ್ದರೆ, ಅಂತಹ ರಜೆಯ ದಿನಗಳ ವೇತನವನ್ನು ಸರಕಾರಕ್ಕೆ ಬಡ್ಡಿ ಸಮೇತ ಮರಳಿಸಬೇಕು.

—ಸರಕಾರದ ಬಡತನ ಈ ಸುವಾವರೂ ದೂರವಾಗಲಾರದೆ?

—ಒಂದು ವೇಳೆ ಇದಾವುದಕ್ಕೂ ಬಾಗದೆ ಮಕ್ಕಳನ್ನು ಹಡೆಯುವ ಯಂತ್ರಗಳಾಗಿಯೇ ಇರಲು ಬಯಸುವುದಾದರೆ, ಅದಕ್ಕೂ ಅವಕಾಶ ನೀಡಬೇಕು. ತಮ್ಮ ಮೂರಕ್ಕಿಂತ ಹೆಚ್ಚಿನ ಮಕ್ಕಳು ದೇಶದ ಅನ್ನವನ್ನು, ನೀರನ್ನು, ಗಾಳಿಯನ್ನು(?) ಮುಟ್ಟುವುದಿಲ್ಲ, ಸತ್ಯಾಗ್ರಹ, ಸಂಪು, ಮುಷ್ಕರ, ಬಂದ್, ಮೊದಲಾದುವುಗಳಲ್ಲಿ ಭಾಗವಹಿಸುವುದಿಲ್ಲ, ಹೆಚ್ಚೇಕೆ, ಸಂವಿಧಾನ ಕೊಡಮಾಡಿದ ಮೂಲಭೂತ ಹಕ್ಕುಗಳಿಗಾಗಿ ಹೊಡೆದಾಡುವುದಿಲ್ಲ ಎಂದು ನಂಬ್ಬಳಿಗೆ ಬರೆದು ಪ್ರತಿ ಮಗುವಿನ ಮೇಲೆ ಟ್ಯಾಕ್ಸ್ ಕ್ರಮವಾಗಿರುತ್ತ ಬರಬಹುದು. ಇದಕ್ಕೆ ತಪ್ಪಿದರೆ ಆ ಮಕ್ಕಳನ್ನೂ ಜತೆಗೆ ಹೆತ್ತವರನ್ನೂ ಸೂಕ್ತ ಕಂಡಂತೆ ದಂಡಿಸುವ ಅಧಿಕಾರ ಸರಕಾರಕ್ಕಿರಬೇಕು.

ನಮ್ಮ ಅಂಕೆ ಸಂಖ್ಯಾತ್ಮಕ ಜನಸಂಖ್ಯೆಯನ್ನಾದರೂ ನಾವು ಪಡೆಯಬೇಕಾದರೆ, ಏನುಮಾಡ ಬೇಕು? ನಾಲಿಗೆಗೆ ಸಂಯಮವಿಡಲಾರದವರು ಇಂದ್ರಿಯ ಸಂಯಮಿಯಾಗುವುದೆಂತು?

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

S. C. 248/1966.

ವಾದಿ—ವೆಂಕಟಾಚಲ ಹತ್ವಾರ

ಪ್ರತಿವಾದಿರು—1. ಕಾಳು ಹೆಂಗ್ಸು 2. ರಾಮ.

ಮೇಲಿನ ದಾವೆಯ 2ನೇ ಪ್ರತಿವಾದಿ ರಾಮು ಕಸಾರ ದೊಟ್ಟ ಹೆಂಗ್ಸಿನ ಮಗ, ಕುಂದಾಪುರ ತಾಲ್ಲೂಕು ಕೋಣಿ ಗ್ರಾಮದಲ್ಲಿರುವವರೆಂದು ನಿಮಗೆ ತಿಳಿಯಪಡಿಸುವದೇನಂದ್ರೆ,

ನೀವು ವಾದ್ಯೆರಿಂದ ಬಹ ಗೇಣ ಬಾಕಿ ಬಗ್ಗೆ ವಾದಿಯು ದಾಖಲು ಮಾಡಿದ ಮೇಲಿನ ದಾವೆಯು ಮೇಲೆ ಕಾಣಿಸಿದ ಕೋರ್ಟಿನಲ್ಲಿ ತಾ. 31—10—1966ನೇ ದಿವಸ ಬೆಳಿಗ್ಗೆ ಗಂಟೆ 11ಕ್ಕೆ ತನಿಖೆಗೆ ಇಟ್ಟಿರುತ್ತದೆ. ನೀವು ಸ್ವತಹಾ ವ ವಕೀಲರ ಮುಖಾಂತರವಾಗಲೀ ಹಾಜ್ರಾಗದಿದ್ದಲ್ಲಿ ನಿಮ್ಮನ್ನು ಯಕ್ಸ್ ಪಾರ್ಟಿ ಎಂತ ತೀರ್ಮಾನ ಮಾಡಲಾಗುವುದು. ಎಂಬ ಸಂಗ್ತಿ ಈ ಮೂಲಕ ತಿಳಿಯಪಡ್ಸಿರುತ್ತದೆ.

K.R. Shenai
Advocate for Plaintiff

ಮೊಕ್ಕಾಂ ಕುಂದಾಪುರ, ತಾ. 26—9—66.

ಚಿಂತೆಯೇ ಜೀವನ, ಆಶೆಯೇ ಪ್ರಾಣ
(ನಾಲ್ಕನೇಪುಟ ದಿಂದ)

'ಹೌದು…ಕೆಂಪು ಜೀನ ಮಾತ್ರ…'

"ನೋಡು…ಅದು ಬೇರೆ ಮಾತು…"

"ಯಾಕೆ?"

'ಅದು ಜನ್ಮದಿಂದ ಕ್ರೂರಿ—ರಕ್ಕಸ ಮಗು ಅನ್ನುತ್ತಾರಲ್ಲಾ ಹಾಗೆ…ಭೂಮಿ ತಾಯಿಯ ರಕ್ಕಸ ಮಗು ಅದು…"

"ಹಣ್ಣಿಂ….ನೀವು ಹೇಳ್ತೀರೇಂತ ನಾನು ನಂಬಬೇಕು…'

"ಅಬ್ಬಾ….ಕೆಂಪು ರಕ್ಕಸ ನಮ್ಮ ಮೇಲೆ ಆಕ್ರಮಣ ಮಾಡಿದ್ದು…."

"ಅದು ಸರೀರಿ…ಅದು ಆಕ್ರಮಣ ಶೀಲ…. ಸಾಮ್ರಾಜ್ಯವಾದಿ…"

"ಅದಕ್ಕೆಂದೇ ರಕ್ಕಸ ಮಗು…."

"ಹೊಂ…ಅಂತೂ ಅದೂ ಒಂದು ಮಗು…."

"ಅಂತಹ ಮಗುವಿಗಿಂತ ಭೂತಾಯಿ ಬಂಜೆಯಾಗಿದ್ದರೇನೇ ಚೆನ್ನ…"

"ಆದರೆ…"

"ಏನು?

"ಏನೂ ಇಲ್ಲ…."

"ಯಾಕೆ ಸಂಕೋಚ? ಅದೂ ನನೊಡನೆ."

"ಏನೂ ಇಲ್ಲ…"

'ಹೇಳು…. ಹೇಳು…."

ಎಲ್ಲೆಲ್ಲಿ ಏನೇನು?

ವಿಜ್ಞಾನ ಸಂಘದ ಸಭೆ

ಉಡುಪಿ, ಸ್ಥಳೀಯ ಕಡಿಯಾಳಿ ಹಾಯರ್ ಎಲಿಮೆಂಟರಿ ಶಾಲೆಯ 'ಬಾಲ ಭಾಸ್ಕರ ವಿಜ್ಞಾನ ಸಂಘ'ದ ಸಭೆಯು, ಉಡುಪಿ ವಿಭಾಗದ ಸಹಾಯಕ ವಿದ್ಯಾಧಿಕಾರಿಗಳಾದ ಶ್ರೀ ಜೆ. ಜಿ. ಜೋರ್ಜ್ ಇವರ ಅಧ್ಯಕ್ಷತೆಯಲ್ಲಿ ಕಳೆದ ತಾ. 24ರಂದು ಜರಗಿತು. ಶಾಲಾ ಮುಖ್ಯೋಪಾಧ್ಯಾಯ ಶ್ರೀ ವಿ. ಗುರುರಾಜ ಭಟ್ಟರು ಅತಿಥಿಗಳನ್ನು ಸ್ವಾಗತಿಸಿದರು. ಉಪೇಂದ್ರನಾಯಕನು ಗತವರ್ಷದ ವರದಿಯನ್ನು ಓದಿದನು. ಕುಮಾರಿ ಶೋಭಾ "ಭಾರತಿ, ಲೀಲಾವತಿ ಪದ್ಯಗಳನ್ನು ಹಾಡಿದರು. ಶಾಳಿಂದಿ ಮತ್ತು ಸಂಗಡದವರಿಂದ ನೃತ್ಯಾಭಿನಯ ವಾಯಿತು.

'ಮತ್ತೆಂಥದು? ಬಂಜೆಯಾಗಿರುವುದಕ್ಕಿಂತ…."

"ಹ್ಞಾಂ…. ಬಿಡು….ಎಲ್ಲದಕ್ಕೂ ಭಾಗ್ಯದ ಬಾಗಿಲು ತೆರೆಯಬೇಕು. ಬಂದೀತು ಒಂದು ದಿನ….?

'ಈ ಆಶೆಯಲ್ಲೇ—"

"ಚಿಂತೆಯೇ ಜೀವನ, ಆಶೆಯೇ ಅದರ ಪ್ರಾಣ."

'ಅದಿಲ್ಲವಾದರೆ…"

'ಹಾಗೆಲ್ಲಾ ಅನ್ನಬಾರದು… ಇಲ್ಲಿ ಬಾ…."

'ಶ್ಯೂ…."

—ಗೋರಾ.

ಹೊಸ ಟಿ ಬಿ ಮೊಹರುಗಳು ಅಕ್ಟೋಬರ 2ರಿಂದ ಮಾರಾಟದಲ್ಲಿವೆ



ಕಳೆದ 16 ವರ್ಷಗಳಿಂದ ಟಿಬಿ ಮೊಹರು ಮಾರಾಟ ಚಳವಳವು ಸ್ವೇಚ್ಛೆಯಿಂದ ನಡೆಯುವ ಕ್ಷಯರೋಗ ನಿರೋಧ ಚಳವಳಿಯ ಮೂಲಕ ಬಹುಮುಖಿಯಾಗಿ ಸಮಾಜ ಸುಖಕ್ಕಾಗಿ ಜನತೆಯೊಡನೆ ಸಂಪರ್ಕ ಬೆಳೆಸಲು ಪ್ರಯತ್ನಿಸುತ್ತಿದೆ.

ಈ ಕ್ಷಯರೋಗ ನಿರೋಧ ಆಂದೋಲನವು ರಾಜ್ಯ ಮತ್ತು ಜಿಲ್ಲಾ ಟಿಬಿ ಸಂಘಗಳ ಮೂಲಕ ತಾಲೂಕು ಮತ್ತು ಗ್ರಾಮಗಳ ಮಟ್ಟದಲ್ಲಿಯೂ ಅಲ್ಲಿನ ಜನತೆಯು ಸಕ್ರಿಯವಾಗಿ ಭಾಗವಹಿಸಲು ಅನುಕೂಲವಾಗುವಂತೆ ದೇಶದಲ್ಲೆಲ್ಲಾ ಹರಡಬೇಕಾಗಿದೆ. ಇದೊಂದು ಪರಿಶ್ರಮದ ಕೆಲಸ. ಟಿಬಿ ಮೊಹರುಗಳನ್ನು ಪಡೆಕೊಂಡು ಈ ಚಳವಳದಲ್ಲಿ ನೀವು ಭಾಗವಹಿಸಿದರೆ ಮಾತ್ರ ಈ ಮಹಾ ಕಾರ್ಯವು ಯಶಸ್ವಿಯಾಗುತ್ತದೆ. ಒಂದು ಮೊಹರಿನ ಬೆಲೆ 10 ಪೈಸೆ ಮಾತ್ರ.

ಮೊಹರುಗಳು— ದಿ ಸೌತ್ ಕೆನರಾ ಡಿಸ್ಟ್ರಿಕ್ಟ್ ಟಿಬಿ ಎಸೋಸಿಯೇಶನ್ ಮಂಗಳೂರು ಮತ್ತು ಇದರ ಬೇರೆ ಬೇರೆ ಏಜನ್ಸಿಗಳಲ್ಲಿ ದೊರೆಯುತ್ತವೆ.

17ನೆಯ ಟಿ ಬಿ ಮೊಹರು ಮಾರಾಟ ಚಳವಳ

(ಭಾರತದ ಕ್ಷಯ ನಿರೋಧಕ ಸಂಘ, ನವದೆಹಲಿ ಇವರಿಂದ ಸಂಘಟಿತ)

ಸ್ಥಳದಾನದ ಕೃಪೆದೋರಿದವರು:

New India Assurance Co. Ltd., Bombay

ಸಾಯನ್ಸ್ ಕ್ಲಬ್ಬಿನ ಸಂಚಾಲಕ ಶ್ರೀ ಯು. ಕೆ. ದಾಮೋದರ ಆಚಾರ್ಯರು ಸಾಯನ್ಸ್ ಕ್ಲಬ್ಬಿನ ಉದ್ದೇಶಗಳನ್ನೂ ಕಾರ್ಯ ವಿಧಾನಗಳನ್ನೂ ವಿವರಿಸಿದರು. ಬಳಿಕ ಇವರ ನೇತೃತ್ವದಲ್ಲಿ ವಿಜ್ಞಾನ ಸಂಘದ ಹುಡುಗಿಯರು ನೀರಿನ ಗುಣಗಳ ಉಪಯೋಗ, ವಾಯುವಿನಲ್ಲಿ ನೀರಾವಿ ಇರುವುದನ್ನು ಕಂಡುಹಿಡಿಯುವುದು, ಜಲಚಕ್ರದ ಕಾರ್ಯ ಮೊದಲಾದ ಪ್ರಯೋಗಗಳನ್ನೂ ಹುಡುಗರು ವಾಯುವಿಗೆ ಭಾರವಿದೆ" ಅಮ್ಲಜನಕವನ್ನು ತಯಾರಿಸಿ ಶೇಖರಿಸಿಡುವುದು, ಕಪ್ಪೆಯ ಜೀವನಾವಸ್ಥೆ 'ಬೆಲ್ ಜಾರ್' ಪ್ರಯೋಗ, ಅಸ್ಥಿಯ ಪಾತ್ರೆ, ಸಸ್ಯ, ತಿರುಗುತ್ತಿರುವ ಕಾರಂಜಿಯ ಪ್ರಯೋಗಗಳನ್ನೂ ಯಶಸ್ವಿಯಾಗಿ ಪ್ರದರ್ಶಿಸುತ್ತಾ ವಿವರಿಸಿದರು.

ಅಧ್ಯಕ್ಷರು ತಮ್ಮ ಭಾಷಣದಲ್ಲಿ, ಸಾಯನ್ಸ್ ಕ್ಲಬ್ಬಿನ ಚಟುವಟಿಕೆಗಳ ಬಗ್ಗೆ ಮೆಚ್ಚುಗೆಯನ್ನು ವ್ಯಕ್ತಪಡಿಸಿದರಲ್ಲದೆ, ಸಂಘವು ಉತ್ತರೋತ್ತರ ಅಭಿವೃದ್ಧಿಯಾಗುವಂತೆ ಹಾರೈಸಿದರು. ಜತೆಕಾರ್ಯದರ್ಶಿನಿಯಾದ ಕುಮಾರಿ ಶೋಭಾ ಧನ್ಯವಾದವಿತ್ತರು.

ಸಿಂಡಿಕೇಟಿನ ಹೊಸ ಶಾಖೆ

ಸಿಂಡಿಕೇಟ್ ಬ್ಯಾಂಕಿನ ಬೆಂಗಳೂರು ಎಚ್. ಎ. ಎಲ್. ಶಾಖೆಯು ತಾ. 29—9—66ರಂದು ಎಚ್. ಎ. ಎಲ್. ಕೊಲೊನಿ, ಹಿಂದೂಸ್ಥಾನ್ ಏರ್‌ಕ್ರಾಫ್ಟ್ ಫೋರ್ಸ್, ಬೆಂಗಳೂರು—17 ಎಂಬಲ್ಲಿ ತೆರೆಯಲ್ಪಟ್ಟಿದೆ. ಇದು ಬೆಂಗಳೂರಲ್ಲಿ ಸಿಂಡಿಕೇಟಿನ 9ನೆಯ ಶಾಖೆಯಾಗಿದೆ. ಈ ಶಾಖೆಯು ತೆರೆಯುವಿಕೆಯಿಂದ, ಸಿಂಡಿಕೇಟ್ ಬ್ಯಾಂಕಿಗೆ ದೇಶದಾದ್ಯಂತ ಹರಡಿರುವ 214 ಶಾಖೆಗಳಾದಂತಾಯಿತು.

ಇತರ ಹೊಸ ಶಾಖೆಗಳು ಸುಪರ್ ಬಜಾರ್ (ಕನ್ನಾಟ್ ಸರ್ಕಸ್— ನವದೆಹಲಿ) ಭೂಸ್ಸ್ ಮತ್ತು ಯಾಡಿಕಿ (ಆಂಧ್ರಪದೇಶ) ಸದ್ಯವೇ ತೆರೆಯಲ್ಪಡಲಿವೆ.

ಮುಂಬಾಯಿಯ ಯುವಕ ಸಾಹಿತ್ಯ ಬಳಗ

ಕಳೆದ ದಿ. 25ರಂದು ಮುಂಬಯಿಯ ಸಾಹಿತ್ಯ ಬಳಗವು ಒಂದು ಕಾವ್ಯ ಸಮೀಕ್ಷೆಯನ್ನು ನಡೆಸಿತು. ಮುಖ್ಯ ಅತಿಥಿಗಳಾಗಿ 'ಕುಮುದೇಂದುಮುನಿ' ಎಂಬ ಕಾವ್ಯ ನಾಮದಿಂದ ಪ್ರಸಿದ್ಧರಿರುವ ಪಲಿಮಾರು ಮಠದ ಸ್ವಾಮಿ ಶ್ರೀ ಶ್ರೀ ರಘುವಲ್ಲಭ ತೀರ್ಥಪಾದಂಗಳವರು ಆಗಮಿಸಿದ್ದರು. ಬಳಗದ ಕಾರ್ಯದರ್ಶಿ ಪ್ರೊ. ವಿಶ್ವನಾಥ ಕಾರ್ನಾಡ್ ಅವರು ಸ್ವಾಗತ ಭಾಷಣ ಗೈದ ಬಳಿಕ ಡಾ. ವಾಸುದೇವ ಪತ್ರನ್ (ಅಧ್ಯಕ್ಷ) ಅವರು ಪ್ರಾಸ್ತಾವಿಕ ಭಾಷಣ ಗೈಯುತ್ತ, ಬಳಗದ ಸಾಹಿತ್ಯಿಕ ಕಾರ್ಯಕ್ರಮಗಳ ವಿವರಣೆಯನ್ನಿತ್ತರು.

ಶ್ರೀ ಶ್ರೀನಿವಾಸ ಹಾವನೂರ ಅವರು 'ಆದಿಕವಿ ಪಂಪ' ನ ಬಗ್ಗೆ ಹಾಗೂ ಅವನ ಕೃತಿಗಳ ಬಗ್ಗೆ ಮಾತಾಡುತ್ತಾ ಇಂದಿನ ಅಧ್ಯಾಪಕ, ವಿದ್ಯಾರ್ಥಿ ವರ್ಗ ಹಳಗನ್ನಡ ಸಾಹಿತ್ಯದ ಆಳವಾದ ಅಭ್ಯಾಸ ಗೈದು ತಮ್ಮ ವಿದ್ಯಾರ್ಥಿಗಳಿಗೆ ಮುಂದಿನ ಪೀಳಿಗೆಗೆ ಅದರಲ್ಲಿ ಅಭಿರುಚಿ ಹುಟ್ಟಿಸುವ ಕಾರ್ಯವನ್ನು ಕೈಗೆತ್ತಿಕೊಳ್ಳಬೇಕು ಎಂದರು.

ಕನ್ನಡ ಕವಿ ರತ್ನ 'ರನ್ನ'ನ ಸಾಹಸ ಭೀಮ ವಿಜಯ ಅಥವಾ ಗದಾಯುದ್ಧದ ಬಗ್ಗೆ ಹೊ. ವಿ. ಎ. ಕುಲಕರ್ಣಿಯವರು ಬಹುಸರಸವಾಗಿಯೆ ವಿವರಿಸಿದರು.

ಜಾ. ಕಾವ್ಯನಾಮದ ಶ್ರೀ ರಾಮಚಂದ್ರ ಉಚ್ಚಿಲರು ಕುಮಾರ ವ್ಯಾಸನ ಭಾರತದ ಬಗ್ಗೆ ಮಾತಾಡುತ್ತಾ, ಅವನು ಭಕ್ತಕವಿಯೆಂದು ಸೂಚಿಸಿ ಅವನ ಪಾಲಿಗೆ ಭಾರತ ಪಾಂಡವ ಕೌರವರ ಕಥೆಯಲ್ಲ ಶ್ರೀ ಕೃಷ್ಣನ ಲೀಲಾ ನಾಟಕವಾಗಿತ್ತು ಎಂದು ಸಮರ್ಥನಾಗಿ ನಿರೂಪಿಸಿದ್ದಲ್ಲದೆ; ಕುಮಾರವ್ಯಾಸನ ಪಾತ್ರ ವೈಶಿಷ್ಟ್ಯಗಳನ್ನು ಹೃದಯಂಗಮವಾಗಿ ವಿವರಿಸಿದರು.

ಅತಿಥಿ ಶ್ರೀ ಶ್ರೀಗಳವರು ಈ ಕಾರ್ಯಕ್ರಮದ ಬಗ್ಗೆ ತಮ್ಮ ಮೆಚ್ಚುಗೆ ಸೂಚಿಸಿ, ಹಳೆಯ ಸಂಸ್ಕಾರ ಸಂಸ್ಕೃತಿಗಳ ಬೆಳವಣಿಗೆಗೆ ಇಂತಹ ಕಾರ್ಯಕ್ರಮಗಳನ್ನು ಆಗಾಗ ಏರ್ಪಡಿಸುವುದು ಅತ್ಯವಶ್ಯ ಎಂದು ಅಪ್ಪಣೆ ಕೊಡಿಸಿದರು ಹಾಗೂ, ಬಳಗದ ಉತ್ಸಾಹವನ್ನು ಹರಸಿದರು.

ಮಹಿಳಾ ಮಂಡಳ

ನರೆತ ಕೂದಲ ಮಹಿಳಾ ನೌಕರ

[illegible]ಬಂದೇ ಕೆಲಸವನ್ನು ಹೆಚ್ಚು ಹೊತ್ತು ಮಾಡುತ್ತ ಹೋದಾಗ [illegible] ದು ಸಹಜ. [illegible] ದವರು [illegible] ಅ [illegible] ವೇನಿದೆ? [illegible] ಕೊಂಡ ಗೃಹಿಣಿ [illegible] ಕ್ಕೆ [illegible] ಬಹುದು [illegible].

[illegible] ಬೇಸತ್ತ [illegible] ಅಷ್ಟು ಹೊಂದ ಗೃಹಿಣಿಯರನ್ನು ಮತ್ತೆ [illegible] ಟ್ರೈನಿಂಗ್ ಯೋಜನೆ ಬಗೆ ಆಕರ್ಷಣೀಯ ಪ್ರಯತ್ನ [illegible] ನಡೆದಿದೆ. [illegible] ಮಕ್ಕಳು [illegible] ಸುಂದರ ಸಂಸಾರ ಸಂಗದಿಂದ ಬರುವ ಮಾಧಿಕ ... ಉದ್ಯೋಗ [illegible] ದು ನ್ಯೂನತೆಂತೆ [illegible] ನೌಕರ [illegible] ಪ್ರಯತ್ನಿಸುತ್ತಿದೆ. [illegible] ಹೋದ ಉದ್ಯೋಗವನ್ನು ಮತ್ತೆ ನೆನಪಿಸುವಂತೆ ತರಬೇತಿ ಕೇಂದ್ರವನ್ನೂ ಅಲ್ಲಿ ತೆರೆದಿದೆ. ಯಂತ್ರೋಪಕರಣಗಳ ಸಹಾಯದಿಂದ ತಮ್ಮ ಗೃಹಕೃತ್ಯಗಳನ್ನು ಅಲ್ಪ ಸಮಯದಲ್ಲಿ ಮುಗಿಸಿ ಮಹಿಳೆಯರು ವ್ಯಾಪಾರಿ ಜಗತ್ತಿನ ಆಧುನಿಕ ಸುಧಾರಣೆಗಳನ್ನು ಕಲಿತು ಉದ್ಯೋಗ ರಂಗದಲ್ಲಿ ದುಡಿಯಲು ಶಕ್ತರಾಗುತ್ತಾರೆ.

ಪಶ್ಚಿಮ ಜರ್ಮನಿಯಲ್ಲಿ ಇಂಥಾ [illegible] ಲಯ [illegible] ಮತ್ತು [illegible] ಗಳಿಗೆ [illegible] ಇದನ್ನು ಪ್ರೋತ್ಸಾಹ [illegible] ಸಂಸಾರ [illegible] ಬದಲಾವಣೆ [illegible] ಮಹಿಳೆಯರನ್ನು [illegible] ಗಿ [illegible] ತ್ತಾರೆ. ಸಂಸಾರದ [illegible] ಗಿ [illegible] ವನ ಬಗ್ಗೆ [illegible] ಅವರು ಬಗ್ಗೆ [illegible] ಆವರ [illegible] ಸಂಪೂರ್ಣ ತೃಪ್ತಿ ಲಭಿಸುವುದು ನಿಸ್ಸಂದೇಹ.

ಕೂದಲು ನರೆತ ಈ ಬಗೆಯ ನೌಕರರ [illegible] ಅವಶ್ಯಕತೆಯನ್ನು [illegible] ನಿಯಂ [illegible] ಸಂಸಾರವನ್ನು [illegible] ಮಾಡುತ್ತಿದೆ.

[illegible] ತೂರು ಕಡೆಗೆ ದೃಷ್ಟಿ ಹರಿಸಬಹುದು?

ನೂತನ ಹಾಲು ಉತ್ಪಾದಕ ಸಹಕಾರ ಸಂಘದ ಸ್ಥಾಪನೆ

[illegible] ೨೪—೯—೬೬ ರಂದು [illegible] ಹಾಲು ಉತ್ಪಾದನ ಸಹಕಾರ ಸಂಘ [illegible] ಅವಶ್ಯಕತೆಯ ಕುರಿತು ಮಾತನಾಡಿದರು. [illegible] ಅಧಿಕಾರಿಗಳಾದ ಶ್ರೀ [illegible] ಸಂಘದ [illegible] ಸಂಕರ ಸಭೆ [illegible] ಶ್ರೀ [illegible] ಗ್ರಾಮ ಸೇವಕ, ಎಂ. ಎಲ್. [illegible] ಶೆಟ್ಟಿ [illegible] ಈ ಸಂಘ [illegible] ನೂತನ [illegible] ಯಾಯಿತು.

ವಾರ್ಷಿಕ ಮಹಾಸಭೆ

[illegible] ಮಹಾಸಭೆಯು ಶ್ರೀ ಕೆ. ದೇವಪ್ಪ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ತಾ. ೨೫—೯—೧೯೬೬ ರಲ್ಲಿ ಜರಗಿತು. ೧೯೬೫—೬೬ರ ವಾರ್ಷಿಕ ವರದಿ, ಆಡಿಟ್ ರಿಪೋರ್ಟನ್ನು ಓದಲಾಯಿತು. ೧೯೬೬—೬೭ಕ್ಕೆ ಅಂದಾಜು ಬಜೆಟ್ ಮಂಜೂರು ಮಾಡಲಾಯಿತು. [illegible] ಶ್ರೀಗಳಾದ ಕೆ. ದೇವಯ್ಯ ಹೆಗ್ಡೆ, [illegible] ನಿಕೋಲಸ್ [illegible] ಕೆ. ಶೆಟ್ಟಿ [illegible] ಪಂಚಾಯತದಾರರಾಗಿ [illegible] ಸಭೆಯಲ್ಲಿ [illegible] ಮತ್ತು [illegible] ಹಾಜರಿದ್ದರು.

ಕಾಂಗ್ರೆಸ್ ಟಿಕೇಟಿಗಾಗಿ ಜಿಲ್ಲೆಯಿಂದ 62 ಅರ್ಜಿಗಳು.

ದ. ಕ. ಜಿಲ್ಲೆಯ 14 ಎಸೆಂಬ್ಲಿ ಸ್ಥಾನಗಳಿಗೆ 60 ಮಂದಿ, 3 ಲೋಕ ಸಭಾ ಸ್ಥಾನಗಳಿಗೆ 12 ಮಂದಿಯು [illegible] ಕಾಂಗ್ರೆಸ್ [illegible] ತಿಳಿದು ಬಂದಿದೆ. [illegible]

[illegible]—1) [illegible] 2) [illegible] 3) [illegible] 4) [illegible] 5) [illegible]

[illegible]—1) [illegible] 2) [illegible] 3) [illegible] 4) [illegible] 5) [illegible] 6) [illegible] ಮಂಗಳೂರು.

ಬೆಳ್ತಂಗಡಿ—1. [illegible] 2. ಕೆ. ಪಿ. [illegible] ಬೆಂಗಳೂರು.

ಬಂಟ್ವಾಳ—1. [illegible] ಶೆಟ್ಟಿ 2. [illegible]

ಮಂಗಳೂರು—1:—1. [illegible] 2. ಕೆ. ವಿಶ್ವನಾಥ ಕಾಮತ್ 3. ಎಫ್. ಎಕ್ಸ್. ಡಿ. ಪಿಂಟೋ.

ಮಂಗಳೂರು—2 1. ಜೆ. ಎ. ಬ್ರಿಟೋ 2. ಗಜಾನನ [illegible] 3. [illegible] ಶೆಟ್ಟಿ 4. [illegible] 5. [illegible] 6. [illegible] ಎಂ. ಬಿ. [illegible] 7. ಬಿ. [illegible] ಭಂಡಾರಿ, (ಮಂಗಳೂರು ತಾಲೂಕು [illegible] ಅಧ್ಯಕ್ಷ).

ಸುರತ್ಕಲ್—1. ಡಾ॥ ಕೆ. ನಾಗಪ್ಪ ಆಳ್ವ, [illegible] ಗಂಗಾಧರದಾಸ್, [illegible] ಮಂಗಳೂರು.

[illegible] ಎನ್. [illegible] ಪಿಂಟೋ, ಮಂಗಳೂರು, 2. [illegible] 3. [illegible] 4. [illegible] 5. ಬಿ. [illegible] ಭಂಡಾರಿ, ಮಂಗಳೂರು.

ಉಡುಪಿ—1. [illegible] 2. [illegible] 3. ಕೆ. ಪಿ. [illegible] ಬೆಂಗಳೂರು.

[illegible]—1. ಪಿ. ಆನಂದ [illegible] 2. [illegible] 3. [illegible] ಕೆ. ಹೆಗ್ಡೆ, 4. [illegible] ಹೆಗ್ಡೆ, 5. ಎಚ್. ಟಿ. [illegible] ಮಂಗಳೂರು.

ಕುಂದಾಪುರ—1. ಎಂ. ಎಂ. ಹೆಗ್ಡೆ, 2. ಎನ್. ಎಸ್. ಪರಮೇಶ್ವರಯ್ಯ.

ಬೈಂದೂರು—1 ಕೆ. ಗೋಪಾಲಕೃಷ್ಣ [illegible] 2 [illegible] 3. [illegible] ವಿಶ್ವೇಶ್ವರಯ್ಯ.

[illegible]—1. ಡಾ॥ ಕೆ. ಬಾಳಪ್ಪ ಶೆಟ್ಟಿ, 2. [illegible]

[illegible]—1. ಎಸ್. ಡಿ. [illegible] 2. ಬಿ. ಗಂಗಾಧರ ದಾಸ್, ಮಂಗಳೂರು.

ಲೋಕಸಭಾ ಕ್ಷೇತ್ರ

ಮಂಗಳೂರು:—1. [illegible] 2. [illegible] 3. [illegible] ಮಂಗಳೂರು. 4. [illegible] ಕೇಂದ್ರ ಸಚಿವರು. 5. [illegible] ಶೆಟ್ಟಿ (ಅಧ್ಯಕ್ಷ ಜಿಲ್ಲಾ ಕಾಂಗ್ರೆಸ್) 6. [illegible] ಹೆಗ್ಡೆ [illegible]

ಉಡುಪಿ:—1. [illegible] 2. ಎಸ್. [illegible] 3. [illegible] 4. [illegible] 5. [illegible] 6. ಕೆ. ಪಿ. [illegible] ಬೆಂಗಳೂರು.

ಕನ್ನಡ ಪ್ರೇಮಿ ಮಂಡಳಿ

ಮುಂಬಯಿಯ [illegible] ಕಾಲೇಜಿನ ಕನ್ನಡ ಪ್ರೇಮಿ ಮಂಡಳಿಯು ಕಳೆದ ತಾ. ೨೮ರಂದು ಮುಂಬಯಿಯ ಖ್ಯಾತ ನಾನಾ ಸಂಸ್ಥೆಗಳನ್ನು ಆಹ್ವಾನಿಸಿ ಒಂದು ವಿಚಾರ ಸಂಕಿರಣವನ್ನು ನಡೆಸಿತು. [illegible]

[illegible] M. A. [illegible] ಶ್ರೀ [illegible] ಅರ್ಪಿಸಿದರು. ಕುಮಾರಿ [illegible] ಶೆಟ್ಟಿ ಅವರು ಧನ್ಯವಾದ ಅರ್ಪಿಸಿದರು.

ಅಭಿನಂದನೆ—

ಮಣಿಪಾಲ, [illegible] ಶ್ರೀ [illegible] ಯವರು ತಾ. ೨೫—೯—೬೬ರಂದು [illegible] ಮುಂಬಯಿಯ ಶ್ರೀ [illegible] ಸಮಾರಂಭವನ್ನು ನಡೆಸಲಾಯಿತು.

ಭೂಮಾಲಿಕರ ಹಿಡುವಳಿ ದೃಢೀಕರಣ ಅವಧಿ ವಿಸ್ತರಿಸಲಾಯಿತು

[illegible] ಒಂದು ವರ್ಷದ ಅವಧಿ ಮುಗಿಯುವುದರಿಂದ ಅಂದಿನಿಂದ ೩ ತಿಂಗಳ ವರೆಗೆ ಅವಧಿಯನ್ನು ವಿಸ್ತರಿಸಲಾಗಿದೆ.

[illegible] ಶಾಸನದ ತಿದ್ದುಪಡಿಯಿದೆ.

[illegible] ಅಧಿಕೃತವಾಗಿ ಹೇಳಲಾಗಿದೆ.

[illegible] ಬೇಕಾಗಿದೆ— ಎಂದು ಇಲ್ಲಿಗೆ ತಿಳಿದು ಬಂದಿದೆ.

ಅಸ್ತಮಾ ರೋಗಿಗಳ ತಿಳುವಳಿಕೆಗೆ

[illegible] ಚಿತ್ರಕೋಟ [illegible] ತಾ. ೨೯—೧೦—೬೬ನೇ [illegible] ಅಸ್ತಮಾ, ಶ್ವಾಸ, ಕೆಮ್ಮು [illegible] ಬರೆಯಿರಿ.

Manager, Shri Mahatma Naga Baba Ayurvedashram,
P. O. Chitrakot U. P.

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

O. S. 472/1963
R. E. P. 141/1966

[illegible] ಕೊರಗ, ಇದ್ದೂರು [illegible] ಶೆಟ್ಟಿ [illegible]

[illegible] ೧೪—೧೦—೬೬ನೇ ದಿನ ಹಗಲು 11 ಗಂಟೆಗೆ [illegible] ಪ್ರಕಟಿಸಲಾಗುತ್ತದೆ.

H. N. Hegde
Advocate for Petitioners

ತಾರೀಖು ೩೦—೯—೬೬,
ಮೊಕ್ಕಾಂ ಕುಂದಾಪುರ.

ಇದು ಆರ್ಥಿಕ ಪ್ರಪಂಚ

(ಎರಡನೇ ಪುಟದಿಂದ)

ವೆಂಕಟೇಶಯ್ಯನವರು ಕೈ ಮುಗಿದು ಕೊಂಡು.

'ಈ ಬಡವನ ಮೇಲೆ ಅನುಗ್ರಹಿಸಬೇಕು ರಾಯರೇ" ಎಂದರು.

"ಏನು, ತಮ್ಮಂಥ ಮಹಾನುಭಾವರಿಗೆ ಅನುಗ್ರಹಿಸುವಂಥದ್ದು ಏನು ಉಂಟು ಅಯ್ಯನವರೆ?

"ಹಣಕಾಸನ್ನ ಅನುಗ್ರಹಿಸುವಂಥದ್ದಲ್ಲ ರಾಯರೆ"

"ಮತ್ತೆ ನನ್ನಿಂದ ಏನಾಗಬೇಕು? ವೆಂಕಟೇಶಯ್ಯನವರೆ?'

"ತಮ್ಮ ಪದತಲದಲ್ಲಿ ಎರಡು ಲಕ್ಷ ರೂಪಾಯಿ ಅರ್ಪಿಸಲು ಬಂದಿದ್ದೇನೆ. ಸ್ವಾಮಿ?

"ಹಾಂ. ನನಗೆ ಎರಡು ಲಕ್ಷ ರೂಪಾಯಿ! ನನಗೆ ನಿಮ್ಮ ಹಣದ ಅಗತ್ಯವಿಲ್ಲ ವೆಂಕಟೇಶಯ್ಯನವರೆ?

"ರಾಯರೆ ತಮಗೆ ಹಣದ ಅವಶ್ಯಕತೆಯಿದೆಯೆಂದಲ್ಲ – ಮತ್ತೆ ಏನು, ನನ್ನ ಜೀವನದ ಸಾರ ಸರ್ವಸ್ವವಾದ ಏಕಮಾತ್ರ ಪುತ್ರಿಯನ್ನು ನನ್ನ ಸಕಲ ಸಂಪತ್ತನ್ನು ತಮಗೆ ಧಾರೆಯೆರೆದು ನಾವು ತೀರ್ಥಯಾತ್ರೆಗೆ ಹೊರಡುತ್ತೇವೆ'

'ಏನು ಕಮಂಥ ಭೋಗಗಳಪೇಕ್ಷೆಯುಳ್ಳವರು ಸನ್ಯಾಸ ಸ್ವೀಕರಿಸುವುದೆ ಅಯ್ಯನವರೆ?'

'ರಾಯರೆ ಮಾನವ ಜೀವಿತದಲ್ಲಿ ಅನುಭವಿಸುವಂಥದೆಲ್ಲ ಅನುಭವಿಸಲಾಯಿತು. ಇನ್ನು ರಾಮಕೃಷ್ಣ ಎನ್ನುತ್ತಾ ಶೇಷಾಯುಷ್ಯವನ್ನು ಕಳೆಯ ಬೇಕೆಂದಿದ್ದೇನೆ' ತಾವು ದಯವಿಟ್ಟು ಒಪ್ಪಿ ನನ್ನನ್ನು ಉದ್ಧಾರ ಮಾಡಬೇಕು'

'ಯೋಚನೆಯನ್ನೂ ಯೋಚಿಸಿ ತಿಳಿಸುತ್ತೇನೆ' ಎಂದು ವೆಂಕಟೇಶಯ್ಯನನ್ನು ಬೀಳ್ಕೊಟ್ಟರು ತಿಮ್ಮಪ್ಪರಾಯರು.

ವಿರಾಮಾಸನದ ಮೇಲೆ ಕುಳಿತು ತಮ್ಮ ಗತ ಜೀವನದ ಮೆಲುಕು ಹಾಕತೊಡಗಿದರು. ಹಿಂದೆ ತಮ್ಮನು ತಾತ್ಸಾರದಿಂದ ಕಂಡವರೇ ಈಗ ಬಂದು ವಿಧೇಯತೆಯಿಂದ ಕೇಳಿ ಕೊಳ್ಳುವುದೆಂದರೆ, ಈ ಇಪ್ಪತನೆಯ ಶತಮಾನದ ಹಣದ ವೈಚಿತ್ರ್ಯವೆ ಸರಿ ಎಂದು ಆಲೋಚಿಸುತ್ತಿರುವಾಗಲೆ ಪ್ರಿನ್ಸಿಪಾಲರಾದ ಕಲ್ಯಾಣರಾಯರು ಬಂದರು.

'ನಮಸ್ಕಾರ ತಿಮ್ಮಪ್ಪನಿಗೆ'

'ನಮಸ್ಕಾರ ರಾಯರೆ ಬನ್ನಿ' ಎಂದು ಹಾರ್ದಿಕವಾಗಿ ಸ್ವಾಗತಿಸಿದರು ತಿಮ್ಮಪ್ಪರಾಯರು. ಭೋಜನಾನಂತರ ತಾವು ಬಂದ ಉದ್ದೇಶದ ಪ್ರಸ್ತಾವನೆ ಮಾಡಿದರು ಕಲ್ಯಾಣರಾಯರು.

'ತಿಮ್ಮಪ್ಪ ನಿನಗೆ ನಮ್ಮ ಮೇಲೆ ವಿಶ್ವಾಸ ಉಂಟೋ?'

'ಹಾಗೆಂದರೇನು? ನನ್ನನ್ನು ಮನುಷ್ಯತ್ವವುಳ್ಳವನಾಗಿ ಮಾಡಿದವರೆ ನೀವಲ್ಲವೇ?'

'ಹಾಗದರೆ ನನ್ನ ಕಾಂಕ್ಷೆಯೊಂದನ್ನು ನಡೆಸಿ ಕೊಡುತ್ತಿಯೋ?'

'ಏನನ್ನ'

'ನನ್ನ ಮಗಳನ್ನು ನಿನಗೆ ವಿವಾಹ ಮಾಡಲಿಚ್ಛಿಸಿದ್ದೇನೆ. ನಿನಗೆ ವರದಕ್ಷಿಣೆ ಕೊಡಲು ಚೈತನ್ಯವಿಲ್ಲ. ನಿನಗೆ ಹಣದ ಅವಶ್ಯವಿಲ್ಲ.' ತಿಮ್ಮಪ್ಪರಾಯರು ಮೌನ ವಹಿಸಿದ್ದುದನ್ನು ನೋಡಿ "ಏಕೆ ತಿಮ್ಮಪ್ಪ ಮಾತಾಡುವುದಿಲ್ಲ? ನಿನಗೆ ಇಷ್ಟವಿಲ್ಲದಿದ್ದರೆ ಸ್ಪಷ್ಟವಾಗಿ ಹೇಳು?"

'ಹಾಗೇನಿಲ್ಲ, ಯೋಚಿಸಿ ಹೇಳುತ್ತೇನೆ'

"ಯಾವಾಗ ಹೇಳುತ್ತಿ"

'ಹದಿನೈದನೆ ತಾರೀಖಿಗೆ ನಾನೇ ಖುದ್ದಾಗಿ ಬಂದು ಹೇಳುತ್ತೇನೆ'

"ಹಾಗಾದರೆ ನಾನು ಹೋಗುತ್ತೇನೆ" ಎಂದರು ಕಲ್ಯಾಣರಾಯರು.

'ನಾಳೆ ಹೋಗಬಹುದು' ಎಂದು ಒತ್ತರಿಸಿ ಮಾರಣೆಯ ದಿವಸ ಬೀಳ್ಕೊಟ್ಟರು ತಿಮ್ಮಪ್ಪರಾಯರು.

ತಿಮ್ಮಪ್ಪ ರಾಯರ ಮನಸ್ಸು ಕಳವಳಿಸತೊಡಗಿತು. ಮಾನವೀಯತೆಗೆ ಮೊಳಗಾಗುವುದೊ ಹಣದ ಪ್ರಭಾವಕ್ಕೆ ಒಳಗಾಗುವುದೊ ಎಂದು. ಆಗ ಅವರಿಗೆ ಯಾರೊ ಹೇಳಿದ ಮಾತು ತಟ್ಟನೆ, ನೆನಪಿಗೆ ಬಂತು. ಈ ಆರ್ಥಿಕ ಪ್ರಪಂಚದಲ್ಲಿ ಮಾನವೀಯತೆಗೆ ಬೆಲೆಯಿಲ್ಲ. ಹಣವೆ ಎಲ್ಲದಕ್ಕಿಂತಲೂ ಮಿಗಿಲಾದುದು. ಇದು ಇಂದಿನ ತಮ್ಮ ಪರಿಸ್ಥಿತಿಯಲ್ಲಿ ಸರಿಯಾಗಿ ತೋರಿತು. ಹಾಗಿರುವಾಗ ವೆಂಕಟೇಶಯ್ಯನವರ ಎರಡು ಲಕ್ಷ ರೂಪಾಯಿ ಕಳೆದುಕೊಳ್ಳುವುದು, ವಿವೇಕವಲ್ಲವೆಂದು ಎಣಿಸಿತು ಆ ಮನಸ್ಸು.

ವೆಂಕಟೇಶಯ್ಯನವರಿಗೆ ವಿವಾಹಕ್ಕೆ ತಮ್ಮ ಸಮ್ಮತಿಯನ್ನು ಸೂಚಿಸಿ ಕಲ್ಯಾಣರಾಯರಿಗೆ ದೀರ್ಘವಾದ ಪತ್ರವೊಂದನ್ನು ಬರೆದು "ನಾನು ಅನಿವಾರ್ಯವಾಗಿ ಈ ವಿವಾಹಕ್ಕೆ ಸಮ್ಮತಿಸಬೇಕಾಯಿತೆಂದು ತಾವು ಬೇಸರಿಸದೆ ಈ ವಿವಾಹಕ್ಕೆ ಸಕುಟುಂಬ ಪರಿವಾರವಾಗಿ ಬಂದು ಚಂದಗಾಣಿಸಿ ಹೋಗಬೇಕೆಂದು" ಬರೆದರು.

ಅಂಗಡಿ ಇಡಿಸಿ ಕೊಟ್ಟು ಕೋರ್ಟಿನ ಶಿಕ್ಷೆಯಿಂದಲ್ಲಿ ಅಪೀಲು ಮಾಡಿ ಸರ್ವಶ್ರೇಯಸ್ಸಿಗೆ ಮೂಲಕರ್ತರಾದವರನ್ನು ಕಡೆಗಣಿಸಿ ನಾಯಿಗಿಂತಲೂ ಕೀಳಾಗಿ ಬಾಳಿಸಿದವರಿಗೆ ಒಲಿಯುವುದೆಂದರೆ ಈ ಇಪ್ಪತ್ತನೆಯ ಶತಮಾನದ ಹಣದ ವೈಚಿತ್ರ್ಯವಲ್ಲದೆ ಮತ್ತೇನು ಎಂದುಕೊಂಡರು ಕಲ್ಯಾಣ ರಾಯರು

ಕೌತುಹಕಿ ಜಿಡಿ

ಓ! ಬಿಡತು! ನೀನೆನ್ನ ಕಣ್ಣೆದುರು
ಎಂದು ಬಹೆ?

ನಿನ್ನ ಬೆನ್ನಿನ್ನಿಗಳ ಮುರಿಯುವಾಸೆ!
ನನ್ನ ಸ್ವಪ್ನದ ಚಿಗುರು ಮೂಡಲದ
ಚಿವುಟುತಿಹೆ

ನಿನ್ನ ಸೆಳ್ಳುಗುರುಗಳ ತರಿಯುವಾಸೆ!
ಕೋಟಿ ಸಾಸಿರ ಕೋಟಿ ಧಮನಿಗಳ
ನೆತ್ತರನು

ಕಂಬನಿಯ ರೂಪದಿಂ ಹೀರುತಿರುವೆ!
ಮನದ—ಭಾವದ—ಕುಸುಮಗಳ
ಮೇಲೆ ನಿರ್ದಯದಿ

ಕಾರ್ಪಣ್ಯ ಶಿಲೆಯನ್ನು ಹೇರುತಿರುವೆ!
ಎಲ್ಲಿ ಮುಟ್ಟಿದೊಡಲ್ಲಿ ಎಲ್ಲಿ
ನೋಡಿದೊಡಲ್ಲಿ

ವಂಚನೆಯ ಸಂಚನ್ನು ಹೂಡುತಿರುವ!
ಪ್ರಪಂಚ ರೀತಿಯಲಿ ಏಕಟಾಟ್ಟ
ಹಾಸದಲಿ

ನನ್ನನಣಕಿಸಿ ನಾಟ್ಯವಾಡುತಿರುವೆ
ನನ್ನ 'ಬೇಕು'ಗಳನ್ನು 'ಬೇಡ'ವೆನ್ನುವ
ನೀನು

ನನ್ನನೀ ಧರೆಗೇಕೆ ಕಳುಹಿಸಿರ್ಪೆ?
ನನಗೊಂದು ಮನಕೊಟ್ಟು ಭಾವಗಳ
ಕೂಡಿಟ್ಟು

ನುಡಿಯದಿರು ಎಂದೇಕೆ ಗಳಹುತಿರ್ಪೆ
ನನ್ನ ನೇಹದ ದಾಹ, ನನ್ನ ಚೆಲುವಿನ
ಮೋಹ

ಕಂಡೇಕೆ ನೀನಿಂತು ಕುಹಕಿಯಂತೆ
ಮರೆಯಲ್ಲಿ ನಿಂತು ಬಲು ನೈಪುಣ್ಯದಲಿ
ಓಯೆ

ಬಲೆ ಬೀಸಿ ತರುತಿಹೆಯ ನೋವು
ಚಿಂತೆ!

ನಾನು ರಾಗಾತೀತನಲ್ಲ! ರಾಗದೊಳ್ಳಸ್ಯ!
ನಿನ್ನ ಹಗಡೆಗೆ ರಾಗ ದಾಳವೇನು?
ಸಂಯಮದಿ ನಿನ್ನೆದೆಯ ಮೆಟ್ಟಿ ನಿಲ್ಲುವ
ದಿಟ್ಟತೆ

ನನಗಿಲ್ಲ; ಸಿಟ್ಟಿಸುದು ಸೀಳಲೇನು?
ಕೋಟಿ ಮನಗಳ ಕೋಪ, ಕೆಂಗಣ್ಣುಗಳ
ತಾಪ.

ನೀ ತಾಳಲಾರೆ ನಿಜ! ಏಳಲಾರೆ!
ನಿನಗೆ ಮರೆಯೆ ವಿಹಿತ! ಒದೆಸಿವೆಲ್ಲವು
ಜರೆತ;

ಎದುರು ಬರೆ ನೀ ನಿಮಿಷ ಬಾಳಲಾರೆ

—ಶ್ರೀ ಎನ್. ಕೃಷ್ಣ ಮುಕಾರಿ.



ಚಿಕ್ಕ ಹಿಡುವಳಿದಾರರಿಗೆ ಉತ್ತಮ ಕೊಡುಗೆ

ವರ್ಜಿನ್ ಕ್ರೂಡ್ ಆಯಿಲ್
3 H. P. ಪಂಪು ಸೆಟ್ಟುಗಳು........

ಧನ ಇಲೆಕ್ಟ್ರಿಕ್ ಮೋಟಾರು ಮತ್ತು
(½ H.P. to 30 H.P.) ಪಂಪು ಸೆಟ್ಟುಗಳು........

ವಿತರಣೆಗಾರರು:—

ನಿತ್ಯಾನಂದ ಇಂಡಸ್ಟ್ರಿಯಲ್ ಏಜನ್ಸಿಸ್

ಕಾರ್ಕಳ (ದ. ಕ.)

ಟೆಲಿಗ್ರಾಂ: 'ಸುದರ್ಶನ'. ಸ್ಥಾಪನೆ: 1914 ಫೋನ್ 3428

ಜಗತ್ಪ್ರಸಿದ್ಧವಾದ ಜೈಹಿಂದ್ ಹಂಚುಗಳನ್ನೇ

ಸದಾ ಉಪಯೋಗಿಸಿರಿ.

ತಯಾರಕರು: ಸುದರ್ಶನ ಟೈಲ್ ವರ್ಕ್ಸ್, ಬೋಳಾರ, ಮಂಗಳೂರ-೧

Registered with the Registrar
of News Papers for India
under No. K. N. 3546/'57

REGD. No. B. G. 176
LICENCE No. 31
Licensed to Post without Prepayment

ಕೃತಿ ಪರಿಚಯ

ವಿಮರ್ಶೆಗಾಗಿ ಪುಸ್ತಕಗಳನ್ನು ಕಳಿಸುವವರು ದಯಮಾಡಿ ಎರಡೆರಡು ಪ್ರತಿಗಳನ್ನು ಕಳಿಸಬೇಕಾಗಿ ವಿನಂತಿ. — ಸಂ. ನ.

ಹೆಗ್ಗಡ್ತಿ ಹೆತ್ತ ದೆವ್ವ:—

ರಚನೆ: ಶ್ರೀ ಶ್ರೀನಿವಾಸ ಉಡುಪ.
ಪ್ರಕಟಣೆ: ಯುಗಪುರುಷ ಪ್ರಕಟಣಾಲಯ, ಕಿನ್ನಿಗೋಳಿ, ದ. ಕ.
ಪುಟಗಳು: ೮೪. ಬೆಲೆ: ರೂ. ೧=೦೦

ಏಳು ಕಥೆಗಳ ಸಂಕಲನವಿದು. ಸಾಮಾಜಿಕ, ಮನೋವಿಶ್ಲೇಷಣಾತ್ಮಕ, ಜಾನಪದ, ದಂತ, ಪ್ರಣಯ ಮತ್ತು ಪತ್ತೇದಾರಿ ಮಾದರಿಯ ಕಥೆಗಳು ಇಲ್ಲಿವೆ. 'ಹೆಗ್ಗಡ್ತಿ ಹೆತ್ತ ದೆವ್ವ'ದಲ್ಲಿ ಸಮಾಜದ ಪ್ರತಿಷ್ಠಿತ ಮಹಿಳೆ ವಿಧವೆ ಹೆಗ್ಗಡ್ತಿಯ ಮನಸ್ಸಿನ ಹೊಯ್ದಾಟ, ತನಗಿಂತ ಕಿರಿಯನಾದ ಬೂ ಶೇರ್ವೆಗಾರನಲ್ಲಿ ಆಕೆಗೆ ಹುಟ್ಟಿದ ಪ್ರಣಯ ಪಿಪಾಸೆ ಮತ್ತದರ ಭೀಕರ ಪರಿಣಾಮಗಳ ವಿಶ್ಲೇಷಣೆ ಸುಂದರವಾಗಿ ಮೂಡಿದೆ. ಇದೇ ಮಾದರಿಯಲ್ಲಿ ಕವಿ ಶಿವರಾಮನ ಮತ್ತಾತನನ್ನು ಉಳಿಸಲು ಹೆಣ್ತನವನ್ನೇ ತ್ಯಾಗ ಮಾಡಿದ ರೂಪಾಳ ಚರಿತ್ರಗಳು ಮಾರ್ಮಿಕವಾಗಿ ಮುಗಿದ ಸುಖದಲ್ಲಿ ರೂಪುಗೊಂಡಿವೆ. ಪ್ರಣಯ ಒಂದು ಜಾನಪದ ಕಥೆಯಾಗಿದ್ದು ಮುಗ್ಧ ಮನೋಹರವಿದೆ. 'ಭೂತದ ನಾಡನ್ನು ದಾಟಿ ಬಂದರು' ದಂತ ಕಥೆಯಾದರೂ ಕುತೂಹಲಕಾರಿಯಿದೆ. 'ಕೇಲಿ ಹೇಳದ ಕತೆ'ಯು ವಿನೋದದಲ್ಲಿ ಕೊನೆಗೊಳ್ಳುವುದು. 'ದೆವ್ವದ ಕತೆ' ಭೂತಪ್ರೇತಗಳ ಭಯವನ್ನು ಕಾಲ್ಪನಿಕವೆನ್ನುತ್ತದೆ. 'ಲವ್ ಮ್ಯಾರೇಜ್' ಆಧುನಿಕ ಕಾಲದ 'ಸಹಜತೆ'ಯಿಂದ ಕೂಡಿದ್ದರೂ 'ಅಲೀಸ್ ಮೂಲತಃ ಮದಾಲಸೆಯಾಗಿದ್ದಳು' ಎಂಬ ಪ್ರಾಚೀನ 'ಶಾಪಾನುಗ್ರಹ ಪರಂಪರೆ'ಯ ಹೊಳಹು ಇಲ್ಲಿ ಮಿಂಚುತ್ತದೆ.

ಶ್ರೀ ಉಡುಪರದು ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ಪಳಗಿದ ಕೈ. ಪತ್ರಿಕೆಗಳಿಗಾಗಿ ಬರೆದ ಕಥೆಗಳು ಇಲ್ಲಿ ಸಂಕಲಿತವಾದುವು. ಅಲ್ಲಿ ಬೆಳಕೂ ಕಂಡಿದ್ದುವು. ಹಾಗಾಗಿ ಕಥಾ ತಂತ್ರಕ್ಕೆ ಇಲ್ಲಿ ಪ್ರಾಧಾನ್ಯ ಕಡಿಮೆಯೇ. ಆದರೂ 'ಹೆಗ್ಗಡ್ತಿ ಹೆತ್ತ ದೆವ್ವ', 'ಮುಗಿದ ಸುಖ" ಮೊದಲಾದ ಕೆಲ ಕಥೆಗಳು ಶ್ರೀಯುತರ ಲೇಖಣಿಯ ಶಕ್ತಿಯನ್ನು ಬಿಂಬಿಸುತ್ತವೆ. ಕಲಾಪಕ್ಷ—ಭಾವ ಪಕ್ಷವೆರಡೂ ಇಲ್ಲಿ ಮೈಗೂಡಿ ಬಂದಿವೆ.

ಪುಳ್ಕೂರು ಬಾಚ:

ಲೇಖಕ: ಶ್ರೀ ಬೇಕಲ ರಾಮನಾಯಕ.
ಪ್ರಕಾಶಕ: ಗೀತಾ ಪ್ರಕಾಶನ, ಕಾಸರಗೋಡು.
ಪುಟಗಳು: ೩೨. ಬೆಲೆ: ರೂ. ೦—೫೦.

ತುಳುನಾಡಿನಲ್ಲಿ ರಾಜರು, ಕಲಾವಿದರು, ಕಲಿಗಳು, ಮಲ್ಲರು, ಸಾಹಿತಿಗಳು ಹೀಗೆ ಎಲ್ಲರೂ ಆಗಿ ಹೋಗಿದ್ದಾರೆ. ಆಗಿಯೂ ಇದ್ದಾರೆ, ಆಗುತ್ತಲೂ ಇದ್ದಾರೆ. ಹಿಂದಿನ ಕಾಲದ ಕೆಲವರ ಕಥೆಗಳಿಂದು ಸಾಹಿತ್ಯ ರೂಪದಲ್ಲಿಯೂ ದಂತ ಕಥೆಗಳ ರೂಪದಲ್ಲಿಯೂ ದೊರೆಯುತ್ತವೆ. ತುಳುನಾಡಿನ ಪ್ರಸಿದ್ಧ ಜಟ್ಟಿ ಬಾಚನ ಪರಿಚಯವನ್ನು ಈ ಪುಸ್ತಿಕೆಯಲ್ಲಿ ಶ್ರೀ ನಾಯಕರು ಮಾಡಿಕೊಟ್ಟಿದ್ದಾರೆ.

ಅಸಹಾಯಕ ಪರಿಸ್ಥಿತಿಯಲ್ಲಿ ದೇವರ ಮನೆಯಲ್ಲಿ ದುಡಿಯುತ್ತಿದ್ದ ಬಾಚ ಅರಮನೆಯ ಜಟ್ಟಿಯಾಗಿ ತನ್ನ ಶಕ್ತಿ ಸಾಮರ್ಥ್ಯಗಳ ಸದುಪಯೋಗ ಮಾಡಿಕೊಂಡನು. ಬಹುಕಾಲ ಬಾಳಿ ಧೈರ್ಯ—ವೀರ್ಯ ಪ್ರದರ್ಶನದಲ್ಲಿಯೇ ಅತ ಅಸುನೀಗಿ ಗೋವಿಂದನಡಿ ಸೇರಿದನು. ಎಲ್ಲರೂ ಮೂಗಿಗೆ ಬೆರಳೇರಿಸುವಂತಹ ಸಾಹಸ ಕಾರ್ಯಗಳನ್ನು ಆತ ಮಾಡಿ ಚಿರಂಜೀವಿಯಾದನು.

'ಪುಳ್ಕೂರು ಬಾಚ' ಮಕ್ಕಳ ಕುತೂಹಲವನ್ನು ಹೆಚ್ಚಿಸುವ ಒಂದು ಉತ್ತಮ ಕೃತಿ ಸರಳವಾದ ಭಾಷೆ, ಚೊಕ್ಕದಾದ ಶೈಲಿ, ನವಿರಾದ ಪದ ಪ್ರಯೋಗ ಲೇಖಕರು ಉತ್ತಮ ಬಾಲ ಸಾಹಿತ್ಯ ನಿರ್ಮಿಸ ಬಲ್ಲರೆಂಬುದನ್ನು ಸಾರುತ್ತವೆ. ಸುಂದರ ಮುದ್ರಣ ಪುಸ್ತಕಕ್ಕೆ ಮೆರಗು ನೀಡಿದೆ.

ಯಾರು ನಮ್ಮ ಉದ್ಧಾರಕ ಮಿತ್ರರು?

ಲೇಖಕ: ಶ್ರೀ ಉ. ಲಕ್ಷ್ಮೀನಾರಾಯಣ ಕಿಣಿ.
ಪ್ರಕಾಶಕ: ಹಿಂದೀ ಸೇವಾ ಸದನ, ಉಡುಪಿ.
ಪುಟಗಳು: ೨೦. ಬೆಲೆ: ಸ್ವೇಚ್ಛಾ ಕಾಣಿಕೆ.

ಶ್ರೀ ಕಿಣಿಯವರು 'ಯುವಾ ಸಮಾಜ ಮೇ—ಆತ್ಮೀಯತಾ' ಎಂಬ ತನ್ನ ಹಿಂದೀ ಭಾಷಾ ಕೃತಿಯಲ್ಲಿ ವ್ಯಕ್ತಪಡಿಸಿದ ವಿಚಾರಗಳನ್ನು ವಿಸ್ತರಿಸಿ ರಾಷ್ಟ್ರ ಭಾಷೆಯರಿಯದ ಕನ್ನಡಿಗರ ಲಾಭಕ್ಕಾಗಿ ಈ ಪುಟ್ಟ ಪುಸ್ತಿಕೆಯನ್ನು ಬರೆದಿದ್ದಾರೆ. ಕನ್ನಡದ ಆಚಾರ್ಯ, ಬಿ. ಎಂ. ಶ್ರೀ ಸಾರಿದ್ದಾರೆ: 'ಜೀವ ಜೀವಕೆ ಕೊಡುವ ಗೆಳೆಯರು ನಾಲ್ವರಿರೆ ಚತುರಂಗ ಬಲವಿದಕೆ ಯಾವ ಸಾಟಿ?' ಎಂದು. ಇಂತಹ ಗೆಳೆಯರೇ ನಮ್ಮ ಉದ್ಧಾರಕ ಮಿತ್ರರು. ಇಂದಿನ ಬೆಡಗು ಬಿನ್ನಾಣಗಳ ಕಾಲದಲ್ಲಿ ಕೊಕ್ಕರೆಗಳ ಗುಂಪಿನಲ್ಲಿ ಅಡಗಿರುವ ಹಂಸವನ್ನು ಆಯ್ದು ತೆಗೆಯುವುದು ಮಾತ್ರ ಕಠಿನ.

ಹಿಂದಿಯಲ್ಲಿಯೂ ಸಾಹಿತ್ಯ ರಚನೆ ಮಾಡಿರುವ ಶ್ರೀ ಕಿಣಿಯವರು ಈ ಕಠಿನ ಕಾರ್ಯದಲ್ಲಿ ಇಂದಿನ ಯುವಕ—ಯುವತಿಯರ ಹೊಯ್ದಾಟದಲ್ಲಿ ಹಲವು ಸೂಕ್ತ ಮಾರ್ಗದರ್ಶನ ಮಾಡಿದ್ದಾರೆ. 'ಹಿರಿಯರ ಉದ್ಧರಣೆ'ಗಳನ್ನು ನೀಡಿ ಯಾವ ದಾರಿಯಲ್ಲಿ ಮುಂದುವರಿಯ ಬೇಕು ಎಂಬುದನ್ನು ತಿಳಿಸಿದ್ದಾರೆ. 'ಮಿತ್ರ' ಬರಿಯ ಮಿತ್ರನಾದರೆ ಸಾಲದು. ಆತನು ಉದ್ಧಾರಕ ಮಿತ್ರನಾಗಿರ ಬೇಕು. 'ಮಿತ್ರ' ಶಬ್ದಕ್ಕೆ ಸೂರ್ಯನೆಂಬರ್ಥವಿದೆ. ಸೂರ್ಯನು ತನ್ನ ಕಿರಣಗಳಿಂದ ಚರಾಚರವೆಲ್ಲವನ್ನೂ ಏಕಸಮವಾಗಿ ಕಾಣುತ್ತಾನೆ ಇದೇ ರೀತಿಯಲ್ಲಿರುವವನೇ ಮಿತ್ರ. 'ಮಿತ್ರಸ್ಯ ಚಕ್ಷುಷಾ ಸಮೀಕ್ಷಾಮಹೇ' ಎಂದು ಯಜುರ್ವೇದವು ಸಾರಿ, ಮಿತ್ರ ದೃಷ್ಟಿಯಿಂದ ಎಲ್ಲರೂ ಎಲ್ಲವನ್ನೂ ನೋಡ ಬೇಕೆಂದು ಹೇಳುತ್ತದೆ. ಅಮಿತ್ರರೂ ಮಿತ್ರರಂತೆ ನಟಿಸುವ ಇಂದಿನ ಸಮಯದಲ್ಲಿ ತಮ್ಮ ಉದ್ಧಾರಕ ಮಿತ್ರರನ್ನು ಆಯ್ದು ಕೊಳ್ಳುವಲ್ಲಿ ಈ ಪುಸ್ತಿಕೆ ಎಲ್ಲರಿಗೂ ನೆರವಾಗ ಬಲ್ಲದು.

ಶ್ರೀ ಕಿಣಿಯವರು ಭಾಷೆಯಲ್ಲಿ ಹಿಂದೀಯ ಪ್ರಭಾವ ಬಿದ್ದಿರುವುದು ಎದ್ದು ತೋರುತ್ತದೆ, ಸುಲಲಿತವಿದೆ. ನಮ್ಮ ಕಣ್ಣೆದುರು ನಡೆಯುತ್ತಿರುವ ನೂರಾರು ಅನಾಹುತಗಳನ್ನು, ಅಪ್ರಿಯ ಪ್ರಸಂಗಗಳನ್ನು ತಡೆಗಟ್ಟಲು ಈ ಪುಸ್ತಿಕೆಯ ಪ್ರಯೋಜನವನ್ನು ಎಲ್ಲರೂ ಪಡೆಯ ಬೇಕು—ಮುಖ್ಯವಾಗಿ ಕವಲುದಾರಿಯಲ್ಲಿ ನಿಂತು ತಡಪಡಿಸುತ್ತಿರುವ ನವಯುವಕರು ಮತ್ತು ಯುವತಿಯರು.

ಗೋರಾ

"ಒಮ್ಮನದಿ ಮುಂದೆ ಬನ್ನಿ!"

ಕನ್ನಡದ ಗಡಿನಾಡಿನಲ್ಲಿ!
ತಾಯ್ನೆಲದ ಮಡಿಲಲ್ಲಿ!
ಕನ್ನಡಿಗರಾ—ಯಜ್ಞ....
ನಡೆಯುತಿದೆ; ನೋಡು ಅಲ್ಲಿ!
ಅಂಜದಿರಿ ಸೋದರರೆಲ್ಲ;
ಮುಂದಿಹರು ನಮ್ಮವರೆಲ್ಲ!
ಅಂಜದೆ ಸಾವಿಗೆ ಸದ್ಧೈರ್ಯದಿ
ಮುಂದೆ ಹುಲಿಯಂತೆ ನುಗ್ಗಿರೆಲ್ಲ.
ಇಂದಿನೀ— ಹೋರಾಟ;
ನಮಗೆ—ಕಲಿಸುವ ಪಾಠ;
ಕನ್ನಡಿಗರೊಕ್ಕೂಟ;
ಜಯ ಲಕ್ಷ್ಮಿ ಕಿರೀಟ.
ಭಾಷಾ ಹೊಡೆದಾಟದಲಿ;
ದ್ವೇಷದಾ ಅಗ್ನಿಯಲಿ
ರಕ್ತದಾ—ಕಲ್ಪದಲಿ
ನಡೆಯುವ—ಬನ್ನಿರೆಲ್ಲ.
ಕನ್ನಡದ ಈ ನೆಲವ!
ಛಿದ್ರ ಮಾಡಲು ಬರುವ!
ಇಕ್ಕೆಡೆಯ ಸೋದರರ;
ಪಗಡೆಯಾಟವ ನೋಡಿರೆಲ್ಲ.
ಬಿಡಲುಂಟೆ ಕನ್ನಡದ
ಒಂದಿಂಚು ಸಿರಿನೆಲವ?
ಕೋಟಿ; ಕೋಟಿ ಕನ್ನಡಿಗರೆಲ್ಲ
ಒಂದಾಗಿ ಒಮ್ಮನದಿ ಮುಂದೆ ಬನ್ನಿರೆಲ್ಲ!

—ನಾರಾಯಣ, ಏತಡ್ಕ

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ದಿ! ಶ್ರೀ ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—
ಆಂಗ್ಲ ಸ್ವಯಂಬೋಧಿನಿ

ಸುಲಭದಲ್ಲಿ ಇಂಗ್ಲಿಷ್

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ.ಎರಡು. ಉತ್ತಮ ಪ್ರತಿ:ರೂ.ಎರಡೂವರೆ(ಟ.ಖ. ಪ್ರತ್ಯೇಕ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ

ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ: ರೂ. 1-25 (ಟ.ಖ.ಪ್ರತ್ಯೇಕ)

ಹೊಸಕೆರೆ ಚಿದಂಬರಯ್ಯನವರ
ಶ್ರೀಮದ್ಭಗವದ್ಗೀತೆಯ ಸಮೂಲ ಭಾಷಾಂತರ

ಗೀತೆಯ ಕೈಗನ್ನಡಿ

300 ಪುಟಗಳಿಗೂ ಮಿಕ್ಕಿದೆ. ಕೈಹೊತ್ತಗೆಯ ಆಕಾರದಲ್ಲಿದೆ.
ಬೆಲೆ: ಸಾದಾ ಪ್ರತಿ ರೂ. ೧
ಗೀತೆಯ ಕೈಗನ್ನಡಿಯ ಒಂದು ಪ್ರತಿ ಬೇಕಾದವರು ರೂ. 1-50ನ್ನು ಮನಿಯಾರ್ಡರು ಮಾಡಿ ತರಿಸಿಕೊಳ್ಳಬಹುದು.
—ಪ್ರತಿಗಳಿಗೆ ಬರೆಯಿರಿ—
ನವಭಾರತ ಪುಸ್ತಕ ಭಂಡಾರ, ಉಡುಪಿ. ಅಥವಾ
ನವಯುಗ ಪ್ರೆಸ್, ಉಡುಪಿ.



Edited, Printed & Published by K. H. Shetty at the Navayuga Press, Udipi, S. India.

ನವಯುಗ

13—10—1966

NAVAYUGA

೨೦ ಪೈಸೆ

ಕಥಾ ಪ್ರಪಂಚ

ಬಲಿದಾನ

ಕಥೆಗಾರರು
ಶ್ರೀ ಹಳನಾಡು ಸುಬ್ರಾಯ ಭಟ್ಟ

"ಸುಮಿ! ಬೇಗ ಸಿಂಗರಿಸಿಕೊಳ್ಳೇ! ಅವರೆಲ್ಲಾ ಬರೋ ಹೊತ್ತಾಯ್ತು. ಇನ್ನು ಹಾಗೇ ಇದ್ದಿ ಏನೇ?" ತಾಯಿಯ ನುಡಿ ಕೇಳಿ ಹೊರ ಜಗಲಿಯಲ್ಲಿ ಕುಳಿತಿದ್ದ ಸುಮಿತ್ರ ಮೇಲೆದ್ದು; ಕೋಣೆಯತ್ತ ಸಾಗಿದಳು. ಅವಳಿಗೆ ಯಾವುದಕ್ಕೂ ಮನಸ್ಸಿರಲಿಲ್ಲವೆಂದು ಬೇರೆ ಹೇಳಬೇಕಾಗಿರಲಿಲ್ಲ. ತಾಯಿಯ ಮನ ನೋಯಿಸಬಾರದೆಂದು; ತಂದೆಯ ಮನಃಶಾಂತಿಗಾಗಿ ಸಿಂಗರಿಸಿಕೊಳ್ಳ ತೊಡಗಿದಳು. ಅಕ್ಕನ ಶೃಂಗಾರಕ್ಕೆ ತಂಗಿ ಶಾಲಿನಿ ಸಹಾಯಕಳಾಗಿ ನಿಂತಳು.

ಮೊಟಕಾದ ಕೂದಲುಗಳಿಗೆ ಚವುರಿಯನ್ನಿಕ್ಕಿ ಉದ್ದ ಜಡೆ ಹೆಣೆದಳು. ಹೊಸದಾಗಿ ತಂದಿದ್ದ ಸಿಲ್ಕ್ ಸೀರೆಯನ್ನೇ ಉಡಲು ತೆಗೆದಿಟ್ಟಳು. ಮುಖಕ್ಕೆ ಪೌಡರ್ ಬಳಿದು; ತುಟಿಗೆ ಕೆಂಪು ಹಚ್ಚಲು ಮರೆಯಲಿಲ್ಲ. ಮಲ್ಲಿಗೆ ಚೆಂಡೊಂದನ್ನು ಮುಡಿಗೆ ಸಿಕ್ಕಿಸಿದಳು. ಕುತ್ತಿಗೆಗೆ ನಾಲ್ಕೆಳೆಯ ಚಕ್ರಸರ ಒಂದನ್ನು ಹಾಕಿದಳು. ಚಿಕ್ಕದಾದರೂ ಚೊಕ್ಕವಾದ ತಿಲಕ ಒಂದನ್ನು ಹಣೆಗಿಟ್ಟಳು.

ಆದರೆ ಸುಮಿ ಇದೆಲ್ಲವೂ ನಾಟಕದಲ್ಲಿ ರಂಗಕ್ಕೆ ತೆರಳುವ ನಟನಂತೆ ಎಂದೇ ಭಾವಿಸಿದ್ದಳು. ತಂಗಿಯ ಚಲವಂತಕ್ಕೆ ಸುಮ್ಮನಿದ್ದು ಮುಂದಿನ ಸಿದ್ಧತೆಗೆ ಅಣುವಾದಳು.

ಶೃಂಗಾರ ಮುಗಿದೊಡನೆ ಅಕ್ಕನನ್ನು ದಿಟ್ಟಿಸಿದ ಶಾಲಿನಿ "ಅಕ್ಕಾ, ನಾನೇ ಗಂಡಾಗಿದ್ದರೆ ನಿನ್ನ ಕಾಲ್ಹಿಡಿದು ಮದುವೆಯಾಗುತ್ತಿದ್ದೆ" ಎಂದಳು.

ಆ ಮಾತು ಕೇಳಿ ಸುಮಿತ್ರೆಯ ಮುಖದಲ್ಲಿ ನೀರಸವಾದ ಮುಗುಳು ನಗೆಯೊಂದು ತೇಲಿ ಹೋಯಿತು.

"ಒಮ್ಮೆ ಕನ್ನಡಿ ನೋಡಿಕೊಳ್ಳೇ! ಆಗ ನಿನಗೇನೇ ಗೊತ್ತಾಗುತ್ತೆ! ನೀನೆಷ್ಟು ಮುದ್ದಾಗಿ ಕಾಣ್ತೀಯೆ?" ಎಂದಳು.

ಆ ಚೆಂದವೆಷ್ಟೆಂಬುದು ಸುಮಿತ್ರೆಗೆ ಈ ಮೊದಲೇ ಅರಿವಾಗಿತ್ತು. ಕಣ್ಣುಗಳಿಂದ ಪಳಪಳನೆ ನೀರುಕ್ಕಿ ಬಂತು. ತಾನಲ್ಲಿ ಅಸುಚಿತವಾದ ಮಾತುಗಳನ್ನು ಆಡಿದೆನೇ ಎಂದು ಶಾಲಿನಿ ತಬ್ಬಿಬ್ಬಾದಳು. "ಅಕ್ಕಾ! ಅಳಬೇಡ! ತಮಾಷೆಗಾಗಿ ನುಡಿದಿಲ್ಲ. ನಿಜವಾಗಿಯೂ ಗಂಡುಗಳಿಗೆ ಕರುಣೆಯಿಲ್ಲ. ಆಡಿದ ಮಾತು ತಪ್ಪಾಗಿದ್ದರೆ ಕ್ಷಮಿಸಕ್ಕಾ! ನಿನ್ನ ಕಣ್ಣೀರು ನೋಡಿ ನನಗೂ ದುಃಖವಾಗುವುದು." ದುಃಖದಿಂದಲೇ ನುಡಿದಳು.

"ಶಾಲಿನಿ, ನೀನೇಕೆ ಅಳುವೆ? ನನ್ನ ಹಣೆ ಬರಹಕ್ಕೆ ಯಾರೇನು ಮಾಡಲಿ? ಸುಮ್ಮನೆ ಅಳು ಬಂತು. ನೀನೇನು ತಪ್ಪು ನುಡಿದಿಲ್ಲವಮ್ಮಾ! ನನ್ನಿಂದಾಗಿ ಸುಖವಿಲ್ಲ." ಎಂದು ತಂಗಿಯನ್ನು ಸಂತೈಸಿದಳು.

ಅಗಲೇ ಹೊರಗಡೆಯಿಂದ ಕಾರಿನ ಶಬ್ದ ಕೇಳಿಸಿತು. ಹೊರಾಂಗಣದಲ್ಲಿ ಕಾರು ನಿಂತು ನಾಲ್ಕಾರು ಮಂದಿ ಮನೆಯ ಮೆಟ್ಟಲೇರಿದರು. ಎಲ್ಲರನ್ನೂ ಶ್ರೀಪತಿರಾಯರೇ ಸ್ವಾಗತಿಸಿ ಚಾವಡಿಗೆ ಕರೆತಂದರು.

ಕನ್ಯಾ ಪರೀಕ್ಷೆಗೆ ಎಲ್ಲವೂ ಅಣಿಯಾಗಿತ್ತು. ಸುಮಿತ್ರನೇ ಎಲ್ಲರಿಗೂ ಕಾಫಿ ತಂದಿಟ್ಟಳು ಜೊತೆಯಲ್ಲಿ ಸಿಹಿ ಕೂಡಾ ಇದ್ದಿತ್ತು. ಕಾಫಿಯಾದೊಡನೆ ಸುಮಿತ್ರೆ ಮೂಲೆಯೊಂದರಲ್ಲಿ ಕುಳಿತಳು. ನಾಲ್ಕಾರು ಕಣ್ಣುಗಳು ಒಮ್ಮೆಯೇ ಅವಳ ಮೇಲೆ ಆಕ್ರಮಣ ನಡೆಸಿದುವು. ಸಿಂಗರಿಸಿದ ಬೊಂಬೆಯಂತೆ ಅಲುಗಾಡದೆ ಕುಳಿತ ಸುಮಿತ್ರಳಿಗೆ ಬೇಸರಬರತೊಡಗಿತ್ತು. ಕೆಲವು ಮುದುಕರಿಂದ ಪ್ರಶ್ನೆಗಳ ಸುರಿ ಮಳೆಯಾಯಿತು. ಎಲ್ಲವುದಕ್ಕೂ ಶಾಂತವಾಗಿಯೇ ಉತ್ತರಿಸಿದಳು. ಅವುಗಳಲ್ಲಿ ಹೆಚ್ಚಿನವು ಬೇಡವಾದವುಗಳೇ ಆಗಿದ್ದುವು. ನೋಡಲು ಬಂದ ಗಂಡು ಮೌನವಾಗಿಯೇ ಉಳಿದಿದ್ದನು.

ಕೊನೆಗೆ "ಎಲ್ಲವನ್ನು ತಿಳಿಸುತ್ತೇವೆ" ಎಂದು ಹೊರ ಹೊರಟರು. ಸುಮಿತ್ರೆ ಮೇಲೆದ್ದು ಒಳ ಹೋದಳು.

'ದೇವರೇ! ಇದನ್ನಾದರೂ ಹೊಂದಿಸಿ ಸುಮಿಗೊಂದು ಲಗ್ನವಾಗುವಂತೆ ಅನುಗ್ರಹಿಸು"ಎಂದು ಪಾರ್ವತಮ್ಮ ದೇವರಿಗೆ ತುಪ್ಪದ ದೀಪ ಹಚ್ಚಿಟ್ಟರು.

ಅಂದು ಶಾಲಿನಿ ಕೋಣೆಯಿಂದ ಹೊರ ಬಂದಿರಲಿಲ್ಲ. ಆ ವೇಳೆಯಲ್ಲಿ ಅವಳ ಅವಸ್ಥೆ ಸೆರೆಮನೆಯನ್ನು ಸೇರಿದ ಖೈದಿಯಂತಾಗಿತ್ತು. ಎಲ್ಲರೂ ಹೊರ ಹೊರಟಾಗಲೇ ಪಂಜರದಿಂದ ಬಿಡುಗಡೆಯಾದ ಪಕ್ಷಿಯಂತೆ ಹೊರ ಬಂದಳು.

ಕಾರನ್ನೇರುತ್ತಿದ್ದ ಹುಡುಗನ ದೃಷ್ಟಿ ಆಕಸ್ಮಾತ್ತಾಗಿ ಮನೆಯತ್ತ ಹೊರಳಿದಾಗ ಶಾಲಿನಿಯ ಮುಖ ಕಮಲ ಗೋಚರಿಸಿತು. ತಕ್ಷಣ ದಂಗಾದಳು. ಮತ್ತೆ ಅಲ್ಲಿ ನಿಲ್ಲದೆ ಒಳಗೋಡಿ ಬಂದಳು.

"ದೇವರೇ! ಅಕ್ಕನಿಗೆ ಈ ಗಂಡನ್ನೆ ಹೇಗಾದರೂ ಹೊಂದಿಸು" ಎಂದು ದೇವರಲ್ಲಿ ಬೇಡಿಕೊಂಡಳು.

ಬಂದವರನ್ನು ಕಳುಹಿಸಿಕೊಟ್ಟು ಶ್ರೀಪತಿರಾಯರು ಹಿಂತಿರುಗಿ ಬಂದರು. ಸುಮಿತ್ರ ಯಾವ ಯೋಚನೆಯೂ ಇಲ್ಲದೆ ಒಂದೊಂದೇ ಅಲಂಕಾರವನ್ನು ತೆಗೆದಿರಿಸ ತೊಡಗಿದ್ದಳು.

ಅದು ಅವಳ ಏಳನೇ ಪರೀಕ್ಷೆಯಾಗಿತ್ತು. ಈ ಮೊದಲು ಬಂದವರೆಲ್ಲರೂ ಹೊಟ್ಟೆ ತುಂಬಾ ತಿಂದು; ಬಾಯಿ ತುಂಬಾ ಮಾತನಾಡಿ; ಕೊನೆಗೆ ತಂಗಿ ಶಾಲಿನಿಯನ್ನೇ ಬಯಸಿದ್ದರು. ತನ್ನ ಹಾಳು ರೂಪವೇ ತನ್ನ ಮದುವೆಗೆ ಅಡ್ಡಿಯಾಗಿದೆ ಎಂಬುದು ಅವಳಿಗೆ ತಿಳಿದೇ ಇತ್ತು. ಆದರೆ ಅವಳಿಗೆ ಎಲ್ಲರಂತೆ ಹೃದಯವಿತ್ತು. ಆಸೆ ಆಕಾಂಕ್ಷೆಗಳೂ ಇದ್ದುವು. ರೂಪವೊಂದು ಅವಳ ಬಯಕೆಯನ್ನು ನುಂಗಿ ನೀರು ಕುಡಿದಿತ್ತು. ಬಂದ ಗಂಡುಗಳ ರೂಪವನ್ನು ಅವಳೂ ನೋಡಿದ್ದಳು. ಅದರಲ್ಲಿ ಕೆಲವರನ್ನು ಬಿಟ್ಟರೆ ಉಳಿದೆಲ್ಲವೂ ಸುರೂಪಿಗಳೆಂದೆನಿಸಿರಲಿಲ್ಲ. ಒಂದಕ್ಕೆ ಮೂಗು ಉದ್ದವಾದರೆ ಮತ್ತೊಂದಕ್ಕೆ ಹಲ್ಲು ಮುಂದಕ್ಕೆ ಇನ್ನೊಂದಕ್ಕೆ ಮೆಳ್ಳೆಗಣ್ಣಾದರೆ, ಮತ್ತೊಂದಕ್ಕೆ ಗೂನು ಬೆನ್ನು ಆದರೂ ಎಲ್ಲರೂ ಸುಂದರವಾದ ತರುಣಿಯನ್ನೇ ಬಯಸಿದ್ದರು. ಇದರಿಂದ ಪುರುಷ ವರ್ಗವೇ ಸ್ವಾರ್ಥಿಗಳ ಗುಂಪೆಂದು ಭಾವಿಸಿದ್ದಳು.

ಶ್ರೀಪತಿ ರಾಯರು ಮಗಳ ಮದುವೆಗಾಗಿ ಹುಡುಕದ ಕಡೆಕಿಲ್ಲ. ನೋಡದ ಜನರಿಲ್ಲ. ಆದರೆ ಎಲ್ಲಿಯೂ ಮಗಳನು ಒಪ್ಪುವ ಗಂಡು ಸಿಕ್ಕಿರಲಿಲ್ಲ ಮೃದು ಮನಸ್ಸಿನ, ಕೋಮಲ ಹೃದಯದ ಮಗಳಿಗೆ ಮದುವೆಯಿಲ್ಲದೆ ಉಳಿಯುವುದು ಅವರಿಗೆ ದೊಡ್ಡ ಆತಂಕವಾಗಿತ್ತು.

ಎರಡನೆ ಮಗಳು ಶಾಲಿನಿ ಕೂಡಾ ದೊಡ್ಡವಳಾದಳು. ಬಂದ ಗಂಡುಗಳೆಲ್ಲಾ ಶಾಲನಿಯನ್ನೇ ಮೆಚ್ಚಿದ್ದರು. ದುಂಡಗಾದ ಮುಖ, ಉಬ್ಬಿದ ಕೆನ್ನೆ; ಹೊಳೆಯುವ ಮೈಬಣ್ಣ, ಕಾಂತಿಯುಕ್ತವಾದ ಕಣ್ಣುಗಳು ಯಾರನ್ನೂ ಸೆರೆಹಿಡಿಯುತ್ತಿದ್ದುವು.

ಶಾಲಿನಿಯ ಮುಂದೆ ಸುಮಿತ್ರೆಯ ರೂಪ ತೆಗೆದು ನಿವಾಳಿಸುವಂತಿತ್ತು. ಎಲ್ಲವೂ ವ್ಯತಿರಿಕ್ತವಾಗಿತ್ತು. ಕನ್ಯಾ ಪರೀಕ್ಷೆಯಲ್ಲಿ ಸೋತು ಹೋದ ಶ್ರೀಪತಿರಾಯರು ತಮ್ಮ ವ್ಯವಹಾರ ಬುದ್ಧಿಯಿಂದ ಅಂದು ಶಾಲಿನಿ ಹೊರಬಾರದಂತೆ ಕಟ್ಟಪ್ಪಣೆ ಮಾಡಿದ್ದರು. ಅದ್ದರಿಂದ ಅಂದು ತಮ್ಮ ಕಾರ್ಯ ಜಯಪ್ರದವಾಗುವುದೆಂದೇ ಭಾವಿಸಿದ್ದರು. ದಿನವೂ ಬೇಗನೆ ಕಾಗದಕ್ಕಾಗಿ ಕಾಯ್ತು ತೊಡಗಿದರು. ಪರೀಕ್ಷೆಗೆ ಕುಳಿತ ಬಾಲಕರು ಫಲಿತಾಂಶ ನಿರೀಕ್ಷಿಸುವಂತೆ ಕಾತರರಾಗಿದ್ದರು.

ಕೊನೆಗೂ ನಿರೀಕ್ಷಿಸಿದ ಕಾಗದಕ್ಕೆ ಸೇರಿತು. ಆತುರವಾಗಿಯೇ ಒಡೆದರು.

ಒಳಗಿನ ಒಕ್ಕಣೆ ಅವರನ್ನು ಕ್ಷಣಕಾಲ ಸ್ತಂಭೀಭೂತರನ್ನಾಗಿ ಮಾಡಿತು. ಅದರಲ್ಲಿ ಹಿಂದಿನವರ ಪಲ್ಲವಿಯೇ ಹಾಡಿತ್ತು. "ನಿಮ್ಮ ಎರಡನೇ ಮಗಳನ್ನು ಕೊಡುವುದಾದರೆ ಸಂತೋಷದಿಂದಲೇ ಸ್ವೀಕರಿಸುವೆವು" ಎಂದೇ ಬರೆದಿತ್ತು.

ಅಂದು ಅವರ ಚಿತ್ತ ನೆಮ್ಮದಿಯನ್ನು ಕಳೆದು ಕೊಂಡಿತು. ಕೊನೆಗೂ ತಮ್ಮ ಆಲೋಚನೆ ಬುಡಮೇಲಾದದ್ದೇ ಆಶ್ಚರ್ಯವನ್ನುಂಟು ಮಾಡಿತ್ತು.

ರಾತ್ರಿ ಊಟಕ್ಕೆ ಕುಳಿತಪತಿಯ ಮುಖದಲ್ಲಿ ಕಳೆ ಇಲ್ಲದೆ ಇರುವುದು ಪಾರ್ವತಮ್ಮನ ಗಮನಕ್ಕೆ ಬಾರದೆ ಹೋಗಿರಲಿಲ್ಲ. ಮಕ್ಕಳೆದುರು ಉಸಿರೆತ್ತಬಾರದೆಂದು ಮೌನವಾಗಿಯೇ ಬಡಿಸಿದರು.

ಊಟ ಪೂರೈಸಿದೊಡನೆ ಅಕ್ಕ ತಂಗಿಯರು ಕೋಣೆ ಪ್ರವೇಶಿಸಿದರು. ಯಾವ ಯೋಚನೆಯನ್ನು ಮಾಡದ ಸುಮಿತ್ರ ಬಹುಬೇಗನೆ ನಿದ್ರಾದೇವಿಯನ್ನಪ್ಪಿದಳು. ಶಾಲಿನಿ ಹಾಸಿಗೆಯಲ್ಲಿ ಹೊರಳಾಡುತ್ತಲೇ ಇದ್ದಳು.

ತಂದೆ ತಾಯಿಗಳ ಸಂಭಾಷಣೆಯ ಮಾತಿನ ಅಲೆಗಳು ಶಾಲಿನಿಯ ಕಿವಿಯನ್ನು ಪ್ರವೇಶಿಸ ತೊಡಗಿದುವು.

'ಏನು! ಇವರೂ ಒಲ್ಲೆನೆಂದರೇ ಸುಮಿಯನ್ನು?' ತಾಯಿಯ ಪ್ರಶ್ನೆ.

'ಏನುಮಾಡೋದು! ಅವಳ ಹಣೆ ಬರಹ! ಎಲ್ಲರೂ ಹೇಳಿದ್ದನ್ನೇ ಅವರೂ ಬರೆದಿದ್ದಾರೆ.'

'ಅಂದರೆ'?

'ಶಾಲಿನಿಯಾದರೆ ಆಗಬಹುದಂತೆ.'

'ಅವಳು ಅಂದು ಒಳಗೇನೇ ಇದ್ದಳಲ್ಲಾ! ಅವಳನ್ನು ಹೇಗೆ ನೋಡಿದರು?'

'ಎಲ್ಲಿ ಒಮ್ಮೆ ಮುಖಹಾಕಿದ್ದಳೋ ಯಾರಿಗೊತ್ತು? ಪಾಪ! ಸುಮಿ ಲಗ್ನವಾಗೋದೆ ಕಷ್ಟವಾಂತೆ ಕಾಣ್ತದೆ.'

'ಅಂತೂ ಶಾಲಿನಿಯ ಮುಖಕಂಡಮೇಲೆ ಸುಮಿಯನ್ನು ಖಂಡಿತಾ ಒಪ್ಪುವಂತಿಲ್ಲ"

(ಹದಿನೈದನೇ ಪುಟ ನೋಡಿರಿ)

ಅತ್ಯಾಧುನಿಕ ಸಲಕರಣೆ — ಸೌಕರ್ಯಗಳಿಂದ ಕೂಡಿದ
ಭೋಜನ, ಉಪಾಹಾರ ಮತ್ತು ವಸತಿ ಗೃಹ



ಹೊಟೇಲ್ ಶಿವಪ್ರಸಾದ

ಫೋನ್: 77 ಕುಂದಾಪುರ, ದ. ಕ.

ನಲ್ವತ್ತಾರನೆ ವರ್ಷ
Telephone 226.

Estd. 1921

NAVAYUGA

Leading Kannada Weekly
UDIPI, S. Kanara

ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ
ಉಡುಪಿ, ದ. ಕನ್ನಡ.

ಸಂಚಾಲಕ—ಸಂಪಾದಕ:
ಕೆ. ಹೊನ್ನಯ್ಯ ಶೆಟ್ಟಿ

ವಾರ್ಷಿಕ ಚಂದಾ:
ಮೂರು ವಿಶೇಷ ಸಂಚಿಕೆಗಳು ಸೇರಿ
ಅಂಚೆ ವೆಚ್ಚ ಸಹಿತ ಮುಂಗಡ
ಸ್ವದೇಶ ರೂ. ೧೦
ವಿದೇಶ ರೂ. ೧೪

ಜಾಹೀರಾತು ದರಗಳು.
ಅನಿಯಮಿತ (ಕೆಜುವಲ್)
ಕಲಂ ಸೆಂಟಿಮೀಟರಿಗೆ ರೂ. 2-00
ನಿಯಮಿತ (ಕಂಟ್ರಾಕ್ಟ್)
ಕಲಂ ಸೆಂಟಿಮೀಟರಿಗೆ ರೂ. 1-50

ಸೂಚನೆಗಳು

ಲೇಖಕ ಬಂಧುಗಳಿಗೆ

ಲೇಖನವು ಕಿರಿದಾಗಿದ್ದು ಹಿರಿದರ್ಥದಿಂದ ಕೂಡಿರಬೇಕು ಕಾಲು ತಾವಿನ ಪ್ರಮಾಣದ ಹಾಳೆಯ ಒಂದೇ ಮಗ್ಗುಲಲ್ಲಿ ಬದಿಯಂಚುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು. ಆಧಾರಿತ, ಅನುವಾದಿತವಾದರೆ ಅವುಗಳ ಮೂಲವನ್ನೂ ತಿಳಿಸಬೇಕು.

ಚಂದಾದಾರರಿಗೆ—

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಮುಖಪತ್ರದಲ್ಲಿ:

ಉಡುಗೆ ಅಂಗಡಿಯೊಂದರಲ್ಲಿ 'ಗ್ರ್ಯಾಜುವೇಶನ್ ಬಾಲ್' ಸಮಾರಂಭದಲ್ಲಿ ಧರಿಸಲು ಉಡುಗೆ ಕೊಂಡುಕೊಳ್ಳುತ್ತಿರುವ ಬಲ್ಗೇರಿಯನ್ ವಿದ್ಯಾರ್ಥಿನಿಯರು.

ನವಯುಗ

ಸಂಪುಟ ೪೬	ಉಡುಪಿ	Vol. 46
ಸಂಚಿಕೆ ೭	೧೩—೧೦—೧೯೬೬	No. 7

ಮಸಣದ ದಾರಿಯೆ?

ಸುತ್ತ ಹರಡಿದ ಸೋಂಕು ರೋಗ ವಿದ್ಯಾರ್ಥಿಗಳಲ್ಲಿನ ಅಶಿಸ್ತು. ಕೆಲವು ವರ್ಷಗಳಿಂದ ಸರಸ್ವತಿಯ ಆರಾಧಕರು ಸರಸ್ವತೀ ದೇವಿಯ ಮಂದಿರಗಳನ್ನು ಅಪವಿತ್ರಗೊಳಿಸಿದ ಅನಪೇಕ್ಷಿತ ಘಟನೆಗಳು ಪದೇ ಪದೇ ನಡೆಯತೊಡಗಿವೆ ಉತ್ತರ ಭಾರತವಂತೂ ಈ ಪಿಡುಗಿನಿಂದ ತತ್ತರಿಸಿ ಹೋಗಿದೆ; ಇದರ ರೋಗಾಣುಗಳು ದಕ್ಷಿಣಕ್ಕೂ ಹಾರಿ ಬಂದು ಅನಾಹುತವೆಬ್ಬಿಸಲಾರವು ಎಂಬುದರ ಬಗ್ಗೆ ಯಾರೊಬ್ಬರೂ ಗ್ಯಾರಂಟಿ ಕೊಡಲಾರರು. ವಿದ್ಯಾರ್ಥಿಗಳು ಸತ್ಯಾಗ್ರಹ, ಮುಷ್ಕರ ಪ್ರದರ್ಶನಗಳಲ್ಲಿ ಭಾಗ ವಹಿಸಬೇಕಾದ ಆವಶ್ಯಕತೆಯೇನಿದೆ? ಆರಂಭದಲ್ಲಿ ಶಾಂತಿಯಿಂದಲೇ ತಾಳ್ಮೆಯಿಂದಲೇ ತೊಡಗಿ ಮುಂದೆ ಹಿಂಸಾಚರಣೆಯಲ್ಲಿ ಮುಂದುವರಿದು ನಷ್ಟ-ಕಷ್ಟ ಕಾರಣವಾಗಿ ಕೊನೆಗೊಳ್ಳುತ್ತದೆ. ಇಂತಹ ದುಷ್ಕ್ರಿಯೆಗಳಲ್ಲಿ ವಿದ್ಯಾರ್ಥಿಗಳು ಪಾಲುಗೊಳ್ಳುವುದು ದೇಶದ ದುರದೃಷ್ಟವೆನ್ನಲೇಬೇಕು.

ವಿದ್ಯಾರ್ಥಿಗಳು ಯಾಕೆ ಅಶಿಸ್ತಿಗೆ ಗುರಿಯಾಗುತ್ತಾರೆ? ಸಾಮಾನ್ಯವಾಗಿ ಪ್ರಾಯಪ್ರಬುದ್ಧರಾಗುತ್ತ ಬರುವ ವಿದ್ಯಾರ್ಥಿ ತೀವ್ರ ಗಂಡಾಂತರಕಾರಿ. ಈ ಪ್ರಾಯದಲ್ಲಿ ಅತನನ್ನು ಸರಿ ದಾರಿಯಲ್ಲಿ ಕೊಂಡೊಯ್ಯುವುದು ಶಾಲೆಯಲ್ಲಿ ಅಧ್ಯಾಪಕರ ಕರ್ತವ್ಯವಾದರೆ, ಮನೆಯಲ್ಲಿ ಹೆತ್ತವರ ಕರ್ತವ್ಯ. ಯಾವ ಹೆತ್ತವನಾದರೂ ತನ್ನ ಮಕ್ಕಳು ದುರ್ಮಾರ್ಗವನ್ನು ಹಿಡಿದಿದ್ದಾರೆ ಎಂಬುದನ್ನು ನಂಬಲು ಸಿದ್ಧವಿಲ್ಲ. ಮಕ್ಕಳ ಪ್ರಗತಿ—ಶಿಕ್ಷಣಗಳ ಬಗ್ಗೆ ವಿಚಾರಿಸ ಹೋಗುವವರೂ ಕಡಿಮೆ. ಹಾಗಾಗಿ ಸೂಕ್ತ ಮಾರ್ಗದರ್ಶನ ಅವರಿಗೆ ದೊರೆಯದೆ ಹೋಗುತ್ತದೆ. ಜೀವನದ ನಿಜವಾದ ಶಿಕ್ಷಣ ದೊರೆಯುವುದು ವಿಶಾಲ ಜಗತ್ತಿನಲ್ಲಿ. ಶಾಲೆಯ ನಾಲ್ಕು ಗೋಡೆಗಳ ನಡುವೆ ಏನು ತಾನೇ ಮಾಡಬಹುದು? ವಿದ್ಯಾರ್ಥಿಗಳ ಕುದಿಯ ತೊಡಗಿದ ರಕ್ತವನ್ನು ತಮ್ಮ ಸ್ವಾರ್ಥ ಸಾಧನೆಗಾಗಿ ಬಳಸಿಕೊಳ್ಳುವ ದುಷ್ಟ ಶಕ್ತಿಗಳಿಗೂ ನಮ್ಮಲ್ಲಿ ಕೊರತೆಯಿಲ್ಲ. ಉತ್ತರ ಪ್ರದೇಶದಲ್ಲಿ ಎಲ್ಲೆಲ್ಲೂ ತಲೆದೋರಿದ ವಿದ್ಯಾರ್ಥಿ ಚಳುವಳಿಯಲ್ಲಿ ಕಮ್ಯೂನಿಸ್ಟ್ ಪಕ್ಷದ ಕೈವಾಡವಿದೆಯೆಂದು ಹೇಳಲಾಗುತ್ತದೆ ಇದು ಸತ್ಯವಿರಲಿ, ಇಲ್ಲದಿರಲಿ, ಹಿಂದುಗಡೆ ಪ್ರಬಲ ಶಕ್ತಿಗಳಿಲ್ಲವೆಂದಾದರೆ, ಸ್ವತಂತ್ರವಾಗಿ ಅಷ್ಟು ಮುಂದುವರಿಯುವ ಧೈರ್ಯ ವಿದ್ಯಾರ್ಥಿಗಳಿಗಿರಲಾರದು. ವಿದ್ಯಾಭ್ಯಾಸ ಗೈದು ತಮ್ಮ ಜ್ಞಾನ ದೀಪವನ್ನು ಬೆಳಗಿಸಿ ದೇಶಕ್ಕೂ ವಿಶ್ವಕ್ಕೂ ಬೆಳಕು ಬೀರಬೇಕಾದ, ಮುಂದಿನ ಜನಾಂಗವಾದ ಇಂದಿನ ವಿದ್ಯಾರ್ಥಿಗಳು ಹೀಗೆ ದಾರಿತಪ್ಪಿ ನಡೆಯುವುದು ಯಾರಿಗೂ ಹಿತಕಾರಕವಲ್ಲ; ದೇಶದಲ್ಲಿ ಅರಾಜಕತೆ ಬೆಳೆಸಲು ಇದೊಂದು ಸಾಧನವಾಗಬಹುದು. ಆದುದರಿಂದ ಇಂತಹ ಅಸಂಬದ್ಧ ಕೃತಿಗಳನ್ನು ಎಷ್ಟು ಬೇಗ ತಡೆಹಿಡಿಯುತ್ತೇವೆಯೋ ಅಷ್ಟು ಬೇಗ ದೇಶಕ್ಕೆ ಒಳ್ಳೆಯದಾಗುವುದು.

ವಿದ್ಯಾರ್ಥಿಗಳು ಬಹಿರಂಗಕ್ಕಿಂತ ಹೆಚ್ಚಾಗಿ ಅಂತರಂಗಕ್ಕೆ ಮನಸಾರಬೇಕು. ತಮ್ಮ ಉದ್ದೇಶವೇನೆಂಬುದನ್ನು ಮೊದಲು ಅರಿತುಕೊಳ್ಳಬೇಕು. ತಮ್ಮನ್ನೇ ಇಡಿಯ ದೇಶವು ಆಶಾಭಾವನೆಯಿಂದ, ಆಸೆಗಣ್ಣಿಂದ ನೋಡುತ್ತಿದೆ ಎಂಬುದನ್ನು ಮನವರಿಕೆ ಮಾಡಿಕೊಳ್ಳಬೇಕು. ತಮಗಾಗಿ ತಾವು ಪ್ರವೀಣರೂ ಜ್ಞಾನಿಗಳೂ ಆಗದೆ ದೇಶಕ್ಕಾಗಿ ಹಾಗಾಗಬೇಕು ಎಂಬುದನ್ನು ತಿಳಿದುಕೊಳ್ಳಬೇಕು. ವಿದ್ಯಾಭ್ಯಾಸ ವೇಳೆಯಲ್ಲಿ ತಮ್ಮ ಮನಸ್ಸನ್ನು ಅದರಲ್ಲೇ ಕೇಂದ್ರೀಕರಿಸಬೇಕೇ ಹೊರತು ಕಡಿವಾಣವಿಲ್ಲದ ಕುದುರೆಯಂತೆ ಸಿಕ್ಕಡೆ ಹರಿಯ ಬಿಡಬಾರದು. ತಮ್ಮ ಸಂಸ್ಥೆಗೆ ಏನಾದರೂ ಅಡ್ಡಿ—ಆತಂಕಗಳು ಕಂಡು ಬಂದರೆ, ಸಂಬಂಧಪಟ್ಟವರನ್ನು ಕಂಡು ನಿವೇದಿಸಿ ಅವನ್ನು ದೂರ ಮಾಡಿಕೊಳ್ಳಬೇಕೇ ಹೊರತು ವ್ಯರ್ಥ ಶಕ್ತಿ ಪ್ರದರ್ಶನಕ್ಕೆ ಅವಕಾಶ ಮಾಡಿಕೊಳ್ಳಬಾರದು. ಸಾರ್ವಜನಿಕ ಸೊತ್ತುಗಳಿಗೆ ಹಾನಿಯನ್ನುಂಟು ಮಾಡುವುದು ಎಂದರೆ, ತಮ್ಮ ಕಾಲಿಗೆ ತಾವೇ ಕೊಡಲಿ ಹಾಕಿಕೊಳ್ಳುವುದು. ಅವರು ಹಾಳುಗೆಡಹಿದ ಬಸ್ ನಿಲ್ದಾಣವನ್ನು ಮತ್ತೆ ಕಟ್ಟಬೇಕಾದರೆ, ಅವರ ಪಾಲಕರು ತೆರುವ ಕರವೇ ಬೇಕು ತಾನೆ? ದೇಶದ ಸಂಪತ್ತಿನ ವ್ಯರ್ಥ ನಷ್ಟ—ಪ್ರಗತಿಗೊಂದು ಕಡಿವಾಣ. ಮತ್ತೆ ನಾವು ಮುಂದುವರಿಯುವುದೆಂತು?—ಇವೆಲ್ಲವನ್ನೂ ವಿದ್ಯಾರ್ಥಿಗಳು ಅರಿತು ಅಂತರ್ಮುಖಿಯಾಗಬೇಕು. ಹೆತ್ತವರು ಬಹಿರ್ಮುಖಿಯಾಗಬೇಕು. ತಮ್ಮ ಮಕ್ಕಳ ಚಟುವಟಿಕೆಗಳ ಬಗೆಗೆ ಸದಾ ಒಂದು ದೃಷ್ಟಿಯನ್ನಿಡುತ್ತ ಹೋಗಬೇಕು. ಅವರು ದಾರಿ ತಪ್ಪಿದಾಗ ನೇರದಾರಿಗೆ ತರಬೇಕು. ರಾಜಕೀಯ ದುರುದ್ದೇಶಗಳಿಗಾಗಿ ಭಾವಿ ಜನಾಂಗದ ದುರುಪಯೋಗ ಮಾಡಿಕೊಳ್ಳುವ ದುಷ್ಟ ಹವ್ಯಾಸ ನಿಂತು ಹೋಗಬೇಕು. ಗೃಹಮಂತ್ರಿ ನಂದಾರು ಯೋಜಿಸಿರುವ ಅಧ್ಯಯನ ಸಮಿತಿ ಯಾವ ಗೊತ್ತುವಳಿಗಳನ್ನೇ ಮಾಡಲಿ, ಬರಿಯ ನಡವಳಿಕೆಯ ನಿಯಮಗಳಿಂದ ಪರಿಹಾರವಾಗುವ ರೋಗವಿದಲ್ಲ. ಸಾರ್ವಜನಿಕರೂ ಹೆತ್ತವರೂ ಮಕ್ಕಳೂ ಒಂದಾಗಿ ಕೊನೆಗೊಳಿಸಬೇಕಾದ ಮಹಾ ಮಾರಿಯಿದು. ಇದನ್ನು ಈಗಾಗಲೇ ತಡೆಯದೆ ಹೋದರೆ, ದೇಶ ಮಸಣವಾಗುವುದು ಖಂಡಿತ.

ವಚನ ಸುಧೆ

ಪರ ಪ್ರದಾನಂ ರಾಜ್ಯಂ ಚ
ಪುತ್ರಜನ್ಮ ಚ ಭಾರತ||
ಶತ್ರೋಶ್ಚ ಮೋಕ್ಷಣಂ ಕೃಚ್ಛ್ರಾತ್
ತ್ರೀಣಿ ಚೈಕಂ ಚ ತತ್ಸಮಂ||

ಪರಪಡೆಯುವುದು, ರಾಜ್ಯಗಳಿಸುವುದು, ಗಂಡು ಮಗುವಿನ ತಂದೆಯಾಗುವುದು ಇವು ಮೂರಕ್ಕೆ ಸಮವಾದುದು- ಶತ್ರುಬಾಧೆಯಿಂದ ಮುಕ್ತನಾಗುವುದು

ಸದಿಚ್ಛಾ ಸಂಚಾರ

ಪ್ರಧಾನಿ ಇಂದಿರಾ ಗಾಂಧಿಯವರು ನೇಪಾಳಕ್ಕೆ ಅಧಿಕೃತ ಸಂದರ್ಶನ ನೀಡಿ ತೃಪ್ತಿಯಿಂದಲೇ ಮರಳಿ ಬಂದರು. ನೇಪಾಳ—ಭಾರತಗಳ ನೀತಿಯಲ್ಲಿ ಬಹಳಷ್ಟು ಸಾಮ್ಯವಿರುವುದು ನನಗೆ ಕಂಡು ಬಂತು ಎಂದವರು ತಿಳಿಸಿ, ತನ್ನ ಭೇಟಿ ಯಶಗಳಿಸಿದೆಯೆಂದು ಅಭಿಮಾನದಿಂದ ನುಡಿದರು. ಇದು ಸುಳ್ಳಲ್ಲ. ಭಾರತ—ನೇಪಾಳಗಳ ಸಂಬಂಧ ಬಹು ಪ್ರಾಚೀನವಾದುದು. ಕೆಂಪು ಚೀನಾದ ಆಕ್ರಮಣ ಭೀತಿಯಿರುವ ಭಾರತವು ತನ್ನ ಗಡಿಯಲ್ಲ ಉತ್ತಮ ನೆರೆಹೊರೆಯನ್ನು ಬಯಸುತ್ತಿದೆ. ನೇಪಾಳದ ಗಡಿಯೂ ಟಿಬೇಟನ್ನೊಡನಿರುವುದರಿಂದ ನೇಪಾಳದ ಭದ್ರತೆ ಭಾರತದ ಭದ್ರತೆಗೊಂದು ಪೂರಕ. ಅರಸು ಮಹೇಂದ್ರರು ತನ್ನ ದೇಶಾಭಿವೃದ್ಧಿಗೆ ಕೆಂಪು ಚೀನಾದಿಂದ ಸಹಾಯ ಸ್ವೀಕರಿಸುತ್ತಿದ್ದಾಗ್ಯೂ, ಆದರೂ ಅವರ ಒಲವು ಚೀನಾದತ್ತ ವಾಲಿವೆ, ಚೀನಾದಿಂದ ಪ್ರಭಾವಿತವಾಗಿದೆಯೆಂದು ಇಂದಿರಾಜಿ ನಂಬುವುದಿಲ್ಲ. ಇದು ಶುಭ ಚಿಹ್ನೆ. ಇದು ನಿಜವಾಗಲಿ, ನಮ್ಮ ನೆರೆಹೊರೆ ತಿಳಿಯಾಗಲಿ.

ಯಕ್ಷಗಾನ

ದೇಲಂಪಾಡಿ ಬನಾರಿ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಸಂಘದವರಿಂದ 'ಅತಿಕಾಯ ಕಾಳಗ'ವೆಂಬ ಕಥಾ ಭಾಗದ ಯಕ್ಷಗಾನ ಕೂಟವು ಇತ್ತೀಚೆಗೆ ಬನಾರಿ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಕಲಾ ಮಂದಿರದಲ್ಲಿ ಜರಗಿಸಲ್ಪಟ್ಟಿತು. ಶ್ರೀ ಮುದಿಯಾರು ಶೀನಪ್ಪ ಗೌಡರ ವತಿಯಿಂದ ನಡೆಸಲ್ಪಟ್ಟ ಈ ಕಾರ್ಯಕ್ರಮದಲ್ಲಿ ಹಲವರು ಭಾಗವಹಿಸಿದ್ದರು.

ನರಸಣ್ಣನ ಸರಸ

"ವಿದ್ಯಾರ್ಥಿಗಳ ನಡುವಳಿಕೆ ಹೇಗಿರಬೇಕೆಂದು ಪರಿಶೀಲಿಸಲು ಸಮಿತಿ ಮಾಡುತ್ತಾರಂತೆ ..."

'ನಮ್ಮ ಮಂತ್ರಿ, ಎಂಪಿಗಳ ನಡುವಳಿಕೆ ಪರಿಶೀಲಿಸಲು ಯಾಕೆ ಸಮಿತಿ ಮಾಡಬಾರದು?'

ಮುಂದೆ

ಗೇಹರಾಜ್ಯದಲ್ಲಿ

ನನ್ನದೇನಾದ್ರೂ ಇರುವ್ರುದಾದ್ರೆ..

"ನೋಡೇ, ಇಲ್ಲಿ ಕೇಳೇ....'

'ಏನಪ್ಪಾ ಅದು, ನಡುರಾತ್ರಿಯಲ್ಲೇ ರಾಮಾಯಣಾ...."

"ಎಲಾ ಇವ್ಳೆ, ಹೆಬ್ಬಾಗಿಲು ದಾಟಿ ಗಂಟೆ ಅರ್ಧ ಹೆಚ್ಚಾಯ್ತು...'

"ಅಯ್ಯೋ, ನಾನು ನೋಡ್ಲೇ ಇಲ್ವಲ್ಲಾ...."

'ನೀನ್ಯಾಕೆ ನೋಡ್ತೀಯಾ?"

"ಮತ್ತೆ ನಿಮ್ಗೂ ಕರೀಬಹುದಿತ್ತಲ್ವಾ..."

"ಕರಿಯೋದು? ಯಾರನ್ನ?"

'ನನ್ನನ್ನ..."

"ನೀನೆಲ್ಲಿದ್ದೀಂತ ಬೇಕಲ್ಲಾ....'

"ಮತ್ತಿರೋದಾದ್ರೂ ಎಲ್ಲಿ? ಮನೆಯಲ್ಲೇ."

"ಅದೂ ಹೌದನ್ನು. ಕರಿಯೋಣಾಂತ ಅದ್ಕೊಂಡೆ...."

"ಮತ್ತೆ ಬೇಡಾ-ತಾಯ್ತು...'

"ಹಾಗಲ್ಲೇ....ಈ ಪುಸ್ತಕ ಸಿಕ್ತು... ನಾಲ್ಕು ಪುಟ ಓದುತ್ತ ಕೂತೆ...."

"ಮತ್ತೆ ಅರ್ಧದಲ್ಲೇ ಕರೆದ್ರಲ್ಲಾ...."

"ಓದಿದ್ದನ್ನ ನಿನಗೂ ಹೇಳಿ ಬಿಡೋಣಾಂತ..."

'ಓ ಹೋ, ಹಾಗೇನು?"

"ಹೌದು, ಹಾಗೇನೇ?"

'ಹ್ಞಾಂ....ಹೇಳಿ ಹಾಗಾದ್ರೆ...."

"ಒಂದು ಬೆಟ್ಟದ ದಾರಿ....'

"ಹ್ಞಾಂ...'

'ಅಲ್ಲಿ ಒಬ್ಬ ಸಾಧು, ಒಬ್ಬ ವಿದ್ಯಾರ್ಥಿ ಒಬ್ಬ ರಾಜ ಒಟ್ಟಾದರಂತೆ."

"ಪಾಪವೇ, ರಾಜ ಯಾಕಲ್ಲಿಗೆ ಹೋದಾಂತ?'

"ನೋಡು, ಅದೆಲ್ಲಾ ಕಥೆಯಲ್ಲಿ ಕೇಳಬಾರದೂಂತ ಅಂದಿದ್ದೆನಲ್ಲಾ..."

"ಅಂದ್ರೆ ನೀವೇನು ಹೇಳ್ತೀರಿ, ಅದನ್ನ ನಾನು ಕಣ್ಣು ಮುಚ್ಚಿ ಕೇಳಿಕೊಳ್ಳೋಬೇಕು."

"ಮತ್ತೆ ಕಿವಿ ಮುಚ್ಚಿ ಕೇಳ್ತಾರೇನು?"

'ಇಲ್ಲಾನ್ನಿ. ಅದ್ರೂ ಸಾಧು ಇರೋದು ಬೆಟ್ಟದಲ್ಲಿ, ಅತ್ತ ಹೋಗಿದ್ದಾನೆ ಅನ್ನಿ. ವಿದ್ಯಾರ್ಥಿ ಏಕಾಕಿಯಾಗಿ ಆ ದಾರೀಲಿ ಹೋಗಬೇಕಾದರೆ, ತನ್ನ ಜ್ಯಾಲಿಯೆಟನ ನಿರೀಕ್ಷೆ ಯಿರಬಹುದೂನ್ನಿ. ಮತ್ತೆ ರಾಜ ಯಾಕೆ ಹೋದಾಂತ ಸಂದೇಹ...."

'ನೋಡು, ಕಥೆಯಲ್ಲಿ ಅಂತಹ ಸಂದೇಹ ಪಡಬಾರದು. ಸಂಶಯಾತ್ಮಾ ವಿನಶ್ಯತಿ ಅಂತಾರೆ ನೋಡು...."

"ಹ್ಞಾಂ...ಯಾಕೋ ಹೋದಾಂತ... ಅಲ್ಲ, ಕಥೆ ಮುಂದೆ ಹೋಗಲಿಕ್ಕಾಗಿ ಆತ ಹೋದ ಅಲ್ವೆ?"

"ಹ್ಞಾಂ...ಹಾಗೆ ಬಾ...ಅಲ್ಲಿ ಸಾಧು ನುಡಿದ: ನನ್ನ ಭಕ್ತರು ನನ್ನ ಬೇಡಿಕೆಗಳನ್ನು ಪೂರೈಸುತ್ತಾರೆ. ನನ್ನ ದೇವರು ನನ್ನ ಮೇಲೆ ಪ್ರಸನ್ನನಾಗಿದ್ದಾನೆ. ನಾನೇ ಜಗತ್ತಿನಲ್ಲಿ ದೊಡ್ಡವ...."

"ಹ್ಞಾಂ..."

"ಆಗ ವಿದ್ಯಾರ್ಥಿ ನುಡಿದ: ನನಗೆ ಏನೇನೂ ಚಿಂತೆಯಿಲ್ಲ. ತಾಯ್ತಂದೆಯರು ನನ್ನ ಯೋಗಕ್ಷೇಮವನ್ನು ನೋಡುತ್ತಾರೆ, ನಾನು ಜ್ಞಾನದ ಮಾರ್ಗದಲ್ಲಿ ಮುಂದುವರಿಯುತ್ತೇನೆ—ನಾನೇ ದೊಡ್ಡವ"

'ಓ, ಹಾಗಾದರೆ, ನಾನು ಅಂದ್ಕೊಂಡದ್ದು ತಪ್ಪಾಯ್ತು...'

'ಏನು?'

'ನಾನ್ಯಾರೋ ರೋಮಿಯೋ ಇರಬೇಕೆಂದು ಬಗೆದಿದ್ದೆ. ಈಗ ನೋಡುವಾಗ ಇ ಕಥೆಗಾಗಿ ಬಂದ ವಿದ್ಯಾರ್ಥಿ....'

'ಅಂದರೆ?'

'ಅಲ್ಲ, ಹೀಗೆ ಅಂದು ಕೊಳ್ಳೋ ವಿದ್ಯಾರ್ಥಿ ಯಾರಿದ್ದಾನೆ?'

"ಹೇಗೆ?"

"ನೋಡಿ, ನೀವು ಅಂದ್ರಲ್ಲಾ.... ನನಗೇನೂ ಚಿಂತೆಯಿಲ್ಲ ಅಂತ ತೃಪ್ತಿಯಿಂದಿರೋ ವಿದ್ಯಾರ್ಥಿ ಯಾರಿದ್ದಾರೆ? ಹೇಳಿ."

'ಯಾಕೆ ಹಾಗಂತಿ?"

"ನೋಡಿ, ಹಿರಿಯರಿಗೆ ಇಲ್ಲದ ಚಿಂತೆಯೆಲ್ಲ ಇಂದು ಕಿರಿಯರಿಗೆ ಅಂಟಿಬಿಟ್ಟಿದೆ. ತಾವ್ಯಾರು, ತಮ್ಮ ಕರ್ತವ್ಯವೇನು ಎಂಬುದನ್ನ ಅರಿಯದೆ ಉದ್ವಾತದ್ಪಾ ಮಾಡುವ ವಿದ್ಯಾರ್ಥಿಗಳು ನೋಡಿ, ದೇಶವನ್ನೇ ಚಿಂತೆಗೆ ಗುರಿ ಮಾಡಿದ್ದಾರೆ...."

"ಹ್ಞಾಂ.... ಇವತ್ತಿನ ಪರಿಸ್ಥಿತಿ ನೋಡುವಾಗ ಹಾಗೇ ತೋರುತ್ತದೆ. ರಕ್ತ ಬಿಸಿಯಾಗೋಕೆ ತೊಡಗಿದಾಗ ಅವನ್ನ ಬೇಕಾದತ್ತ ಹರಿಸಬಹುದು ಸರಿಯಾದ ಮಾರ್ಗದರ್ಶನವಿಲ್ಲದೆ ಹೋದ್ರೆ ಅದು ದೇಶವನ್ನೇ ಬಳಿದುಕೊಂಡು ಹೋಗುತ್ತದೆ...."

'ನಾನೂ ಅನ್ನೋದು ಅದನ್ನೇ. ಎಲ್ಲಿ ನೋಡಿದರೂ ವಿದ್ಯಾರ್ಥಿ ಚಳವಳಿ—ಲೂಟಿ, ಸಾರ್ವಜನಿಕ ಸೊತ್ತುಗಳ ನಾಶ. ಇದಕ್ಕೆಲ್ಲಾ ಏನು ಕಾರಣಾಂತ?

'ಅವರ ಯೋಗಕ್ಷೇಮವನ್ನು ತಾಯ್ತಂದೆಯರು ನೋಡಿಕೊಳ್ಳದೆ ಇರಬೇಕು. ಅದ್ರಿಂದ ಚಿಂತೆ ಅಂಟಿಂಬೇಕು: ಅದರ ಪರಿಣಾಮವಿರಬಹುದು?

'ಅಂದರೆ?"

'ಅದೆಲ್ಲಾ ಹೇಳಬಾರದು...'

"ಯಾಕೆ?"

"ಹೇಳಿದರೆ, ನಾಳೆ ತಾಯಿಯಾಗಲಿರುವ ನಿನಗೂ ಕೋಪ ಬರಬಹುದು....'

'ಮತ್ತೆ ತಂದೆಯಾಗಲಿರುವ ನಿಮಗೆ?'

"ಭಾರಿ ಜಾಣೆ ಕಣೆ ನೀನು....ಮಾತನಾಡಿ ನಿನ್ನ ಗೆಲ್ಲೋದೆಂದ್ರೆ ದಶಮುಖ ರಾವಣನನ್ನು ರಾಮ ಗೆದ್ದ ಹಾಗೆ...'

"ಅದೆಲ್ಲ ಇರ್ಲಿ. ನಿಮಗೆ ನನ್ನನ್ನ ಹೊಗಳೋಕೆ ಒಂದು ಬಾಯಿ ಸಾಲದು. ಆ ರಾವಣನಾದ್ರೂ ಇರ್ತಿದ್ರೆ ಕಡ ತರಬಹುದಿತ್ತು. ಈಗ ಹೇಳೀಂದ್ರೆ...'

'ಏನ?'

'ಅದೇ....'

'ಓ, ಅದೇನೆ? ನೋಡು ತಾಯ್ತಂದೆಯವರು ತಮ್ಮ ಮಕ್ಕಳು ಏನು ಮಾಡ್ತಾರೆಂದು ವಿಚಾರಿಸೋದು ಇದೆಯೋಂತ? ಶಾಲೆಗೇಂತ ಹೊರಟವು ಎಲ್ಲ ಹೋಗ್ತಿದಾರೇಂತ ಅವರಿಗೆ ಗೊತ್ತಿಲ್ಲ. ಹೊತ್ತಿಗೆ ಸರಿಯಾಗಿ ಮನೆಗೆ ಬಾರದಿದ್ರೆ ವಿಚಾರಿಸೋದಿಲ್ಲ.... ಶಾಲೆಯಲ್ಲಾದ್ರೂ ಅವ್ರು ಏನು ಮಾಡ್ತಾರೇಂತ? ಅದೂ ಅರಿತು ಕೊಂಡಿರುವುದಿಲ್ಲ! ಅಂದ್ರೆ, ತಮ್ಮ ಮಕ್ಕಳಿಗೆ ಅನ್ನ ಬಟ್ಟೆ ವಸತಿ ಕೊಟ್ಬಿಟ್ರೆ ತಮ್ಮ ಕರ್ತವ್ಯವಾಯ್ತೂಂತ ತಿಳ್ಕೊಳ್ತಾರೆ. ಇದು ಯೋಗವನ್ನು ಮಾತ್ರ ಪೂರಯಿಸಿದಂತಾಯ್ತೇ ಹೊರ್ತು ಅವರ ಕ್ಷೇಮವನ್ನು ಚಿಂತಿಸಿದಂತಾಗಲಿಲ್ಲ.

'ಅದು ಹೌದ್ರಿ.... ಪಾಪ. ದಿನವಿಡೀ ದುಡಿದು ಸುಸ್ತಾಗಿರೋರಿಗೆ ಮಗು ಏನು ಮಾಡುತ್ತೇಂತ ವಿಚಾರಿಸೋಕೆ ಬಿಡುವೆಲ್ಲಿ?"

ಮನಸ್ಸಿದ್ದಲ್ಲಿ ಮಹಾದೇವ...."

"ನೀವನ್ನೋದೂ ನಿಜಾಂತ ಅನ್ನಿಸುತ್ತೆ. ಇಂದು ವಿದ್ಯಾರ್ಥಿ ಅಶಾಂತಿಯ ಮುಖ್ಯ ಕಾರಣವು ಅವರ ಹೆತ್ತವರು...'

'ತಮ್ಮ ಮಕ್ಕಳನ್ನು ಅಂಕೆಯಲ್ಲಿ ಇಟ್ಟುಕೊಳ್ಳಲಾಗೋದಿಲ್ಲ ಅನ್ನುವವರು ಮತ್ತೆ ಯಾವ ಯೋಗ ಸಾಧನೆ ಮಾಡಿಯಾರು? ಜತೆಗೆ ಕೆಲವು ದುಷ್ಟ ಶಕ್ತಿಗಳು ಅವ್ರನ್ನು ತಮ್ಮತ್ತ ಒಲಿಸಿಕೊಂಡು ದೊಂಬಿ ಎಬ್ಬಿಸುತ್ತಿವೆ.. ಅಜ್ಞಾನದತ್ತ ಎಳೆದೊಯ್ಯುತ್ತಿವೆ... ?"

'ಜೀವನದ ಕವಲುದಾರಿಯಲ್ಲಿ ನಿಂತಿರುವ ಅವರು ಬಗಲೇ ಹಾದಿ ತಪ್ಪುತ್ತಾರೆ ಅಲ್ವಾ?"

"ಹ್ಞಾಂ....ಮತ್ತೆಂಥದ್ದಾ? ಹೀಗಾದರೆ ಒಂದು ದಿನ...."

'ಭವಿಷ್ಯದ ಯೋಚನೆ ಮಾಡಿದ್ರೆ ಬರೀ ಚಿಂತೆ,, ಇರ್ಲಿ, ನಿಮ್ಮ ಕಥೆ ಮುಂದುವರಿಸಿ...."

'ಕಥೆ? ಹ್ಞಾ....ರಾಜನೂ ಹೇಳಿದ: ನನ್ನ ಕೆಲಸವನ್ನ ಪ್ರಜೆಗಳು ಮಾಡುತ್ತಾರೆ ಆದುದರಿಂದ ನಾನೇ ದೊಡ್ಡವ .."

"ಇದು ದೊಡ್ಡಸ್ತಿಕೆಯಲ್ವೆ?"

"ಆಗ ಒಬ್ಬ ರೈತ ಬಂದವನಂದ: ನನ್ನ ಭಕ್ತಿಯನ್ನು ಸನ್ಯಾಸಿಗೆ, ನನ್ನ ದುಡಿಮೆಯನ್ನು ಮಗನಿಗೆ, ನನ್ನ ಗಳಿಕೆಯನ್ನು ರಾಜನಿಗೆ ನೀಡುತ್ತೇನೆ. ನಾನೇ ದೊಡ್ಡವ.'

"ಆದೀಗ ಸರಿ. ಪ್ರಜೆ ಅರಿಂತವಾದರೆ, ರಾಜನು ಹೇಗಿರಬೇಕು? ಆದುದರಿಂದ ಪ್ರಜಾ ಜನರ ಚಿಂತೆಯಲ್ಲಿ ರಾಜನೂ ಪಾಲು ತೆಗೆದುಕೊಳ್ಳಬೇಕು. ಪರ್ವತಕ್ಕೂ ಎತ್ತರವಾದ ಧೈರ್ಯ, ಸಾಗರಕ್ಕೂ ವಿಶಾಲವಾದ ಹೃದಯ, ಉಕ್ಕಿಗೂ ಬಲವಾದ ನಿರ್ಧಾರ ಪ್ರಜೆಯದ್ದಾಗಬೇಕು; ಆಗಲೇ ಎಲ್ಲವೂ ಸರಿ ಹೋಗುತ್ತದೆ..."

"ನಿನಗಿರುವಷ್ಟು ಬುದ್ಧಿ ಉಳಿದವರಿಗೂ ಇದ್ದಿದ್ದರೆ ..."

'ಅಯ್ಯೋ, ನನಗೇನಿದೆ? ನನ್ನದೇನಾದರೂ ಇರುವುದಾದರೆ, ಅದೆಲ್ಲಾ....'

'ನನ್ನದೇ...."

"ಅಯ್ಯೋ....'

—ಗೋರಾ

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

O. S. 17/66.

ವಾದಿಳು: ಪಾರ್ವತಿ ಅಮ್ಮ, ರಾಮಹೊಳ್ಳರ ವಿಧವೆ, ಕುಂದಾಪುರ.

ಪ್ರತಿವಾದಿರು: 1. ಮಹಾಬಲ ಶೆಟ್ಟಿ, ಚಂದಮ್ಮ ಶೆಡ್ತಿಯಗ, ಒಡೇರ ಹೋಬಳಿ ಗ್ರಾಮ, ಮತ್ತಿತರರು.

1ನೇ ಪ್ರತಿವಾದಿಗೆ ತಿಳಿಯಪಡಿಸಿದ್ದು

ವಾದಿಳಗೆ ನಿಮ್ಮಿಂದ ಕಳೆದ ಶುಭಕೃತು, ಶೋಭಕೃತು ಮತ್ತು ಕ್ರೋಧಿ ಸಂವತ್ಸರಗಳಿಗೆ ಸಲ್ಲತಕ್ಕ ಚಾಲಗೇಣಿ ಬಾಬ್ತು ರೂ. 505–24ಕ್ಕೆ ವೈಲ್ಕಂಡ ದಾವಾ ನಡ್ಸಿದ್ದು ಸದ್ರಿ ದಾವೆಯು ತನಿಖೆ ಬಗ್ಗೆ ತಾ. 5–11–1966ಕ್ಕೆ ಇಟ್ಟಿರುತ್ತದೆ. ನಿಮಗೆ ಆಕ್ಷೇಪಣೆ–ಉದಾಹರಣೆ ಯೇನಾದರೂ ಇದಲ್ಲಿ ಆ ದಿವ್ಸ ಹಗಲು 11 ಗಂಟೆಗೆ ಕೋರ್ಟು ಮುಂದೆ ಹಾಜರಾಗಿ ಹೇಳಿಕೊಳ್ಳತಕ್ಕದ್ದು. ಇಲ್ಲವಾದರೆ ನಿಮ್ಮನ್ನು ಎಕ್ಸಪಾರ್ಟೆ ಮಾಡಿ ದಾವೆ ತೀರ್ಮಾನಿಸಲ್ಪಡುತ್ತದೆ.

(ಕೋರ್ಟು ಹುಕುಂ ಪ್ರಕಾರ)

A. S. N. HEBBAR

ವಾದಿಳ ಕಡೆ ಎಡ್ವೊಕೇಟ್

ಕುಂದಾಪುರ, ತಾ. 5—10—1966.

ಪ್ರಣಯ ಮಾದರಿಯಿಂದ ವಿಭಿನ್ನವಾಗಿ,
ಸಮಾಜದ ಸಮಸ್ಯೆ ನಿರೂಪಣೆ ವಸ್ತುವಾಗಿ,
ಬೆಳಕು ಕಂಡ ನಿತ್ಯನೂತನ ಕಥೆಗಳು

ಇಂದೇ ನಿಮ್ಮ ಪ್ರತಿಯನ್ನು ಕಾಯ್ದಿರಿಸಿರಿ.

ಕಥಾ ಕೌಮುದಿ

(ಹದಿಮೂರು ವಿಶಿಷ್ಟ ಕಥೆಗಳ ಸಂಕಲನ)

ಬರೆದವರು: ಎಸ್. ಗೋಪೀಚಂದ ರಾವ್, ವಿದ್ವಾನ್, ವಿಶಾರದ.

ಬೆಲೆ: ರೂ. ೧—೮—೦ (1 = 50)

ರೂ. 1 = 75 ಮನಿಯಾರ್ಡರು ಮಾಡಿದರೆ ಒಂದು ಪ್ರತಿಯನ್ನು ಕಳಿಸಬಹುದು.

ದೊರೆವ ಸ್ಥಳ.

ನವಯುಗ ಎಂಟರ್‌ಪ್ರೈಸ್ ಲಿ., ಉಡುಪಿ.

ನವಭಾರತ ಪುಸ್ತಕ ಭಂಡಾರ, ಉಡುಪಿ.

(ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿಯೂ ವಿಚಾರಿಸಿರಿ)

ನವಯುಗಕ್ಕೆ

ಚಂದಾದಾರರಾಗಿ ಪ್ರೋತ್ಸಾಹಿಸಿರಿ,

ವಾರ್ಷಿಕ ಚಂದಾ ರೂ. ೧೦

ಅಸ್ಥಮಾ ಪೀಡಿತರ ಗಮನಕ್ಕೆ

ಹಿಮಾಲಯದ ಪ್ರಸಿದ್ಧ ಅಸ್ತಮಾ ನಿವಾರಕ ಮೂಲಿಕೆಯನ್ನು ದಿ. 29–10–66 ಹುಣ್ಣಿಮೆಯ ರಾತ್ರಿ ಹಾಲು ಮತ್ತು ಅಕ್ಕಿಯಿಂದ ತಯಾರಿಸಿದ ಖೀರಿನಲ್ಲಿ ತೆಗೆದು ಕೊಳ್ಳುವುದರಿಂದ ಅಸ್ಥಮಾ, ಗೂರಲು, ಕೆಮ್ಮು, ಉಬ್ಬಸ, ಮೇಲುಸಿರು ಮತ್ತು ಶ್ವಾಸ ಕಟ್ಟುವಿಕೆ ಇವುಗಳು ನಿವಾರಿಸಲ್ಪಡುತ್ತವೆ. ಕೂಡಲೇ ಇಂಗ್ಲಿಷಿನಲ್ಲಿ ಬರೆಯಿರಿ.

Shri Mahatma Sidh Baba Sewa Ashram
P. O. Chitrkot, (Uttar Pradesh)

ಪರಿಚಯ

ಸರಸ್ವತಿಯ ಕೈಯ ವೀಣೆ

ಬರೆದವರು
ಶ್ರೀ ಸ. ನಾರಾಯಣ.

ವಿದ್ಯಾಧಿದೇವತೆ ಶಾರದೆ ವೀಣಾಪಾಣಿ. ಲೋಕವನ್ನು ತನ್ನ ಮಧುರನಾದದಿಂದ ಆಕರ್ಷಿಸುವ ಶಕ್ತಿ ವೀಣೆಗಿದೆ. ಶಾರದೆ ವಿದ್ಯಾಧಾಯಿ ನಿ,ಜ್ಞಾನಾಧಿಷ್ಠಾತ್ರಿ. ಮೇಲಾಗಿ ವೀಣೆ ನುಡಿಸುವುದರಲ್ಲಿಯೂ ನಿಪುಣೆ. ಸರಸ್ವತೀ ವೀಣೆಯ ಆವಿಷ್ಕಾರಕಳು ಶಾರದೆ ಎಂದು ಪಂಡಿತರ ಅಭಿಪ್ರಾಯ.

ವೀಣೆ ಭಾರತದ ಪ್ರಾಚೀನ ವಾದ್ಯಗಳಲ್ಲೊಂದು. ಆದಿ ವಾದ್ಯವೆಂದೂ ಹೇಳಬಹುದು. ಆದಿದೇವನಾದ ಯೋಗಿ ಶಿವ ವೀಣೆಯ ಮಹಾ ಸಂಶೋಧಕ. ಅವನ ಕಲ್ಪನೆಗೆ ರಚನೆಗೆ ಸ್ಫೂರ್ತಿ ಅವನ ಅರ್ಧಾಂಗಿ ಗೌರಿ. ಸ್ಮಶಾನವಾಸಿ ಶಿವ ಅದೆಷ್ಟು ರಸಿಕನೆಂಬುದು ಅವನ ವೀಣಾ ಆವಿಷ್ಕಾರಣದ ಕಥೆಯಿಂದಲೇ ಗೊತ್ತಾಗುತ್ತದೆ.

ಒಂದು ದಿನ ಪಾರ್ವತಿ ಪುಷ್ಪ ಶಯ್ಯೆಯಲ್ಲಿ ಮಲಗಿ ನಿದ್ರಿಸುತ್ತಿದ್ದಳಂತೆ. ತಪಸ್ಸಿನಿಂದ ಬಹಿರ್ಮುಖನಾದ ಶಿವ ಅಂತಃಪುರ ಪ್ರವೇಶಿಸಿ ಸುಂದರ ಭಂಗಿಯಲ್ಲಿ ಮಲಗಿದ್ದ ಪಾರ್ವತಿಯನ್ನು ಕಂಡ. ಗಿರಿರಾಜನಂದಿನಿ ಸೌಂದರ್ಯಮೂರ್ತಿ ಶಿವೆಯ ಭಾವಭಂಗಿಯನ್ನು ಕಂಡಾಗ ಶಿವನಿಗೆ ವೀಣಾ ರಚನೆಯ ಕಲ್ಪನೆ ಮೂಡಿತಂತೆ. ಅದೇ ರುದ್ರ ವೀಣೆಯ ರಚನೆಯ ಹಿನ್ನಲೆ. ಪಾರ್ವತಿಯ ಕೃಶಾಂಗ ವೀಣೆಯ ನೀಳವಾದ ಗ್ರೀವಾ ದಂಡದಂತೆ, ಆಕರ್ಷಕವಾದ ಬಳೆಗಳನ್ನು ಧರಿಸಿದ ಎರಡು ಕೈಗಳೂ ತುಂಬಾ ಹಾಗೂ ಮೆಟ್ಟಲುಗಳಂತೆ, ವೃಕ್ಷಾವಲಿಯು ತಂತಿಗಳಂತೆ, ಆಭರಣಗಳು ಕೀಲಿಗಳಂತೆ, ವಕ್ಷಸ್ಥಳದಲ್ಲಿ ಶೋಭಿಸುವ ಮಕುಟ ನವಿಲಿನಂತೆ, ನೀಳವಾದ ನಖಗಳು ತಂತಿಯನ್ನು ಮೀಟುವ ನಖಿಯಂತೆ, ಶಿವನಿಗೆ ಕಾಣಬಂತಂತೆ. ಹೀಗೆ ರುದ್ರ ವೀಣೆ ಸ್ವರೂಪ ತಾಳಿತು.

ಮಾನವನ ದೇಹದಂತೆ ವೀಣೆಯ ರಚನೆ ಎಂದ ಕೆಲ ಶಾಸ್ತ್ರಕಾರರ ಅಭಿಪ್ರಾಯ. ದೇಹ ಶಾಸ್ತ್ರಕಾರರೂ ಇದನ್ನು ಒಪ್ಪುತ್ತಾರೆ. ಸಂಗೀತ ಮೂಲ ಶಕ್ತಿಯಿಂದಲೇ ರೂಪುಗೊಂಡುದು ಎಂಬುದು ಸ್ಪಷ್ಟ. ಮಸ್ತಕ, ಪಕ್ಕೆಲುಬು, ಬೆನ್ನಹುರಿ, ಕಾಲು ಮೊದಲಾದುವು ವೀಣೆಯ ಕಲ್ಪನೆಗೆ ಪುಷ್ಟಿ ಕೊಡುತ್ತವೆ. ಜಗತ್ತಿನಲ್ಲಿ ಮೊದಲಿಗೆ ನಾದವನ್ನು ಆತ್ಮ ಸಂಸ್ಕಾರಕ್ಕೆ—ಆತ್ಮ ಸಾಕ್ಷಾತ್ಕಾರಕ್ಕೆ ಬಳಸಿಕೊಂಡವರು ಭಾರತೀಯರು. ಭಾರತೀಯ ಸಂಗೀತ ಗಾಯನ, ವಾದನ, ನರ್ತನಗಳ ಸಂಗಮ.

"ಗೀತಂ ವಾದ್ಯಂ ತಥಾ ನೃತ್ಯತ್ರಯಂ ಸಂಗೀತ ಮುಚ್ಯತೇ' ಎಂದು ಸಾರುತ್ತದೆ ಸಾರಂಗ ದೇವನ ಸಂಗೀತ ಶಾಸ್ತ್ರ ಗ್ರಂಥ ಸಂಗೀತ ರತ್ನಾಕರ. ಗಾಯನಕ್ಕೆ ನಾದಬ್ರಹ್ಮ ಓಂ ಏಕಾಕ್ಷರ, ವಾದನಕ್ಕೆ ಸಂಗೀತ ಸರಸ್ವತಿ, ನರ್ತನಕ್ಕೆ ನಟರಾಜ ಶಿವ ಇವರೇ ಆದಿ ಪ್ರವರ್ತಕರು.

ವಾದ್ಯಗಳನ್ನು ಮುಖ್ಯವಾಗಿ ನಾಲ್ಕು ಭಾಗಗಳನ್ನಾಗಿ ವಿಂಗಡಿಸಬಹುದು. ವೀಣೆ, ಸತಾರ್, ಸಿತಾರ್, ಸ್ವರಮಂಡಲ, ತಂಬೂರಿ, ಸಾರಂಗಿ ಇವು ತತಿ ಅಥವಾ ತಂತಿ ವಾದ್ಯಗಳು. ಕೊಳಲು, ಶಂಖ, ಮುಖವೀಣಾ, ಶಹನಾಯಿ, ನಾದಸ್ವರ ಮೊದಲಾದ ಗಾಳಿಯಿಂದ ನುಡಿಸುವ ಸುಷಿರ ವಾದ್ಯಗಳು. ಮೃದಂಗ, ಢಮರು, ತಬಲ, ಡೋಲು ಮೊದಲಾದ ತಾಳ ವಾದ್ಯಗಳು ಅಥವಾ ಆನಂಧ ವಾದ್ಯಗಳು. ಜಾಗಟೆ, ಕಿನ್ನರಿ, ಘಂಟೆ, ಗೆಜ್ಜೆ, ಜಲತರಂಗ ಮೊದಲಾದ ಘನ ವಾದ್ಯಗಳು. ಇವುಗಳೆಲ್ಲವೂ ವಾದ್ಯ ಪ್ರಭೇಧಗಳು.

> ವಾದ್ಯ ತಂತ್ರಿ ತತಂ ವಾದ್ಯಂಸುಷಿರಂ
> ಸುಕ್ಕರಮುಚ್ಯತೆ||
> ಚರ್ಮಾವನದ್ಧ ವಕದನವನದ್ಧಂ ತು
> ವಾದ್ಯತೇ||
> ಘನೋ ಮೂರ್ತಿಃ ಸಾ ಭಿಘಾ
> ತಾದ್ವ ಧ್ಯತೇಯಂತ್ರ ತದ್ಧನಂ||

—ಎಂದು ಸಾರಂಗದೇವ ವಾದ್ಯವನ್ನು ವಿಂಗಡಿಸಿದ್ದಾನೆ.

ಭಾರತೀಯರ ತತ್ವ ಜ್ಞಾನದ ಪ್ರಕಾರ ಸೃಷ್ಟಿ, ಸ್ಥಿತಿ, ಲಯಗಳು ಮೂರು ಹಂತಗಳು ಹಾಗೆಯೇ ಸಂಗೀತದಲ್ಲಿಯೂ ಮೂರು ಶಕ್ತಿಗಳು. ತಂತಿ ವಾದ್ಯಕ್ಕೆ ಸರಸ್ವತಿ, ಸುಷಿರ ವಾದ್ಯಗಳಿಗೆ ಶ್ರೀಕೃಷ್ಣ, ತಾಳ ವಾದ್ಯಗಳಿಗೆ ಶಿವ ಮೂಲ ವ್ಯಕ್ತಿಗಳು.

ತಂತಿವಾದ್ಯಗಳಲ್ಲೆಲ್ಲಾ ವೀಣಾ ಅತಿ ಪ್ರಾಚೀನವಾದುದು ಮತ್ತು ಪ್ರಖ್ಯಾತವಾದುದು. ವೀಣೆಗೆ ಸುಮಾರು ೫೦೦೦ ವರ್ಷಗಳ ಇತಿಹಾಸವಿದೆ. ನಮಗೆ ದೊರೆಯುವ ಪರಿಚಯವಿರುವ ಆದಿ ವಾದ್ಯ. ವೀಣೆಯ ಪ್ರಸ್ತಾಪ ವೇದಗಳಲ್ಲಿ ಉಪನಿಷತ್ತುಗಳಲ್ಲಿ, ಕಾವ್ಯಗಳಲ್ಲಿ, ನಾಟಕಗಳಲ್ಲಿ ವಿಶೇಷವಾಗಿದೆ. ಸಂಸ್ಕೃತ ಸಾಹಿತ್ಯದಲ್ಲಿ ಮತ್ತು ಪ್ರಾದೇಶಿಕ ಭಾಷಾ ಸಾಹಿತ್ಯದಲ್ಲಿ ವೀಣೆಯ ಪ್ರಸ್ತಾಪವಿರುವುದು ಗಣನೀಯ. ರಾಮಾಯಣ, ಮಹಾಭಾರತ ಕಾವ್ಯಗಳಲ್ಲಿಯೂ ವೀಣೆಯ ವಿಷಯ ವಿವೇಚಿಸಲ್ಪಟ್ಟಿರುವುದನ್ನು ಇಲ್ಲಿ ಸ್ಮರಿಸ ಬಹುದಾಗಿದೆ. ಅದ್ಭುತ ರಾಮಾಯಣ, ಬೌದ್ಧ ಜಾತಕ ಗ್ರಂಥ, ಮಿಲಿಂದ ಪಾನ್ಹ, ಬೌದ್ಧ ನಾಟಕ ಸಿಲಾಪ್ಪಡಿಗರಂಗಳಲ್ಲಿ ವೀಣೆಯ ವಿಕಾಸ, ವಿಶೇಷತೆಗಳೂ ನಿರೂಪಿಸಲ್ಪಟ್ಟಿವೆ.

ವೈದಿಕ ವಾಙ್ಮಯದಲ್ಲಿ ಪ್ರಸ್ತಾಪಿಸಲ್ಪಟ್ಟಿರುವ ಹಲವು ವಾದ್ಯಗಳೂ ಇಂದಿಗೂ ಬಳಕೆಯಲ್ಲಿ ಹಲವು ಹೇಳ ಹೆಸರಿಲ್ಲದಂತೆ ಅಳಿಸಿಹೋಗಿವೆ. ಇನ್ನು ಕೆಲವು ಸೂಕ್ತ ಮಾರ್ಪಾಟುಹೊಂದಿ ಚಿರಸ್ವರೂಪಹೊಂದಿ ಹೆಸರು ಪಡೆದು ಉಳಿದಿವೆ. ಕೆಲವು ಮದ್ರಾಸು, ಕಲ್ಕತ್ತ, ಲಕ್ನೋ ಮೊದಲಾದ ವಸ್ತು ಸಂಗ್ರಹಾಲಯಗಳಲ್ಲಿ ಪ್ರದರ್ಶನದ ವಸ್ತುಗಳಾಗಿವೆ.

ದೇವಗಿರಿಯಾದವರ ಆಸ್ಥಾನದಲ್ಲಿದ್ದ ಸುಪ್ರಸಿದ್ಧ ಸಂಗೀತ ಶಾಸ್ತ್ರಜ್ಞ ಶಾರಂಗ ದೇವ ತನ್ನ ಅದ್ವಿತೀಯ ಸಂಗೀತ ಶಾಸ್ತ್ರ ಗ್ರಂಥ ಸಂಗೀತ ರತ್ನಾಕರದಲ್ಲಿ—ಏಕತಂತ್ರೀ, ನಕುಲ, ತ್ರಿತಂತ್ರೀ, ಚಿತ್ರಾ, ವಿಪಂಚೀ ಮತ್ತು ಕೋಕಿಲಾ ಆಲಾಪಿನಿ ಕಿನ್ನರೀ, ಪಿನಾಕಿ, ನಿಶಂಕಲೀಣ ಎಂಬ ಹತ್ತು ಬಗೆಯ ವೀಣೆಗಳನ್ನು ಪ್ರಸ್ತಾಪಿಸಿದ್ದಾನೆ.

ಯತಿಮಾನ ಪಾದ ಖಂಡದಲ್ಲಿ ಆಳಾವಣಿ, ಬ್ರಹ್ಮವೀಣಾ, ಕಿನ್ನರಿ, ಲಘುಕಿನ್ನರಿ, ಜಯ, ಶಾರಂಗಿ, ರುದ್ರಾ, ಕಪಿಲಾ, ಗದಾ ಮೊದಲಾದ ೨೫ ವೀಣೆಗಳ ವಿಷಯ ಹೇಳಲ್ಪಟ್ಟಿದೆ. ಹಿಂದೀವಿಶ್ವಕೋಶ ಯತಿಮಾನದಲ್ಲಿ, ರುದ್ರವೀಣ, ರಂಜನಿ, ಶಾರದೀ, ರತ ವೀಣಾ, ಮಯೂರ, ತಂಬುರು ವೀಣಾ, ಮೊದಲಾದ ೨೫ ವೀಣೆಗಳ ವಿವರಣೆ ದೊರೆಯುತ್ತದೆ.

ರಾಜಮಹೇಂದ್ರಿ ಯಸೋಮನಾಥನ "ರಾಗ ವಿಬೋಧ" ದಲ್ಲಿ ಹಲವು ವೀಣೆಗಳ ವಿಷಯವನ್ನು ವಿವೇಚಿಸಿ ೧೩ ಮೆಟ್ಟಲುಗಳ ಏಕತಂತಿಗಳ ವೀಣೆಯೇ ಶ್ರೇಷ್ಠ ಎಂದು ನಿರೂಪಿಸಿದ್ದಾನೆ.

ಸಂಗೀತ ಪಾರಿಜಾತದಲ್ಲಿ ಅಹೋಬಲ ರುದ್ರವೀಣೆ, ಬ್ರಹ್ಮ ವೀಣೆ ತುಂಬುರು, ಸ್ವರ ಮಂಡಲ, ಪಿನಿಕಾ, ಕಿನ್ನರೀ, ದಂಡೀ ರಾವಣಹಸ್ತ ಎಂದು ಎಂಟು ವೀಣೆಗಳ ವಿಷಯ ವಿವರಿಸಿದ್ದಾನೆ. ಸಂಗೀತದಾಮೋದರದಲ್ಲಿ ಸ್ವರ ಮಂಡಲ, ಚಿತ್ರಾ, ಜಯಾ, ಲೀಲಾವಣಿ ಮೊದಲಾದ ೨೮ ವಿವಿಧ ವೀಣೆಗಳನ್ನು ವಿವರಿಸಿದ್ದಾನೆ. ಸಂಗೀತ ಮಕರಂದದಲ್ಲಿ ೧೭ ಬಗೆಯ ವೀಣೆಗಳ ಉಲ್ಲೇಖವಿದೆ.

ಹೇಮಚಂದ್ರ ತನ್ನ ಅಭಿದಾನ ಚಿಂತಾಮಣಿಯಲ್ಲಿ ದೇವ ದೇವತೆಗಳ ವೀಣೆಯ ವಿವರವನ್ನು ನಿರೂಪಿಸಿದ್ದಾನೆ. ಅವನ ಹೇಳಿಕೆಯಂತೆ, ಶಿವನ ವೀಣೆ 'ನಾಲಂಬಿ' ಸರಸ್ವತಿಯ ವೀಣೆ 'ಕಚ್ಛಪಿ', ನಾರದನ ವೀಣೆ 'ಮಹತಿ', ಗಣಗಳ ವೀಣೆ 'ಪ್ರಭಾವತಿ", ವಿಶ್ವಾವಸುಗಳ ವೀಣೆ 'ಬೃಹತಿ', ತುಂಬುರುವಿನ ವೀಣೆ 'ಕಲಾವತಿ', ಚಂಡಾಲರ ಕಟೋಲ ವೀಣೆ 'ಚಂಡಾಲಿಕಾ". ಇದಲ್ಲದೆ ಘೋಷವತೀ, ವಿಪಂಚೀ, ಕಂಠಕುಣಿಕಾ, ವಲ್ಲಕಿ, ಪರಿವಾದಿನೀ ಮೊದಲಾದ ವೀಣೆಗಳ ಹೆಸರುಗಳೂ ಇವೆ.

ವೀಣೆಯು 'ಅಸಮುದ್ರೋತ್ಪನ್ನ ರತ್ನ' ಎಂದು ಹೇಳುತ್ತಾನೆ ಚಾರುದತ್ತ. ವೀಣೆ ರತ್ನಕ್ಕೂ ಮಿಗಿಲಾದದ್ದು ಕಲಾವಿಲಾಸಿಗಳಿಗೆ, ರಸಿಕರಿಗೆ ಪ್ರಿಯವಾದ ವಾದ್ಯ ಎಂಬುದು ಸ್ಪಷ್ಟ. ದೇವಾಲಯ, ಅರಮನೆ, ಗೃಹ, ಸಭೆ, ವಿವಾಹಾದಿ ಶುಭ ಸಮಾರಂಭಗಳಲ್ಲಿ ವೀಣಾ ವಾದನದ ಬಳಕೆ ವಿಶೇಷವಾಗಿತ್ತು ಎಂಬುದು ಸಂಸ್ಕೃತ ಗ್ರಂಥಗಳಿಂದ ತಿಳಿದು ಬರುತ್ತದೆ—ವೀಣೆ ಮತ್ತು ವೈಣಿಕ ಇವರಿಗೆ ಸಮಾಜದಲ್ಲಿ ವಿಶೇಷ ಗೌರವ ದೊರೆಯುತ್ತಿತ್ತು.

ಒಂದು ತಂತಿಯ ವೀಣೆ—ಏಕತಂತ್ರೀ, ಎರಡು ತಂತಿಗಳ ವೀಣೆ—ನಕುಲಿ,

(ಇಪ್ಪತ್ತೆರಡನೇ ಪುಟ ನೋಡಿರಿ)

ಸಿಂಡಿಕೇಟ್ ಬ್ಯಾಂಕ್

ತನ್ನ ದೆಹಲಿ — ಕನಾಟ್ ಸರ್ಕಸ್ ಶಾಖೆಯನ್ನು
ಸುಪರ್ ಬಜಾರ್, ಕನಾಟ್ ಸರ್ಕಸ್, ನವದೆಹಲಿ ಎಂಬಲ್ಲಿ
ಸದ್ಯವೇ ತೆರೆಯಲಿದೆಯೆಂದು ತಿಳಿಸಲು ಹರ್ಷಪಡುತ್ತದೆ.

ಬ್ಯಾಂಕು ಸದ್ಯವೇ ತೆರೆಯಲಿರುವ ಹೊಸ ಶಾಖೆಗಳು:

ಪೂನಾ	712 ನಾರಾಯಣ ಪೇಟ್, ಲಕ್ಷ್ಮೀ ರೋಡ್, ಪೂನಾ.
ಯಾಡಿಕಿ	8/91, ಮೈನ್ ರೋಡ್, ಯಾಡಿಕಿ (ಅನಂತಪುರ ಜಿಲ್ಲೆ: ಆಂಧ್ರ ಪ್ರದೇಶ)

ವ್ಯಾಪಕ ಪ್ರಮಾಣದ ಪರಿಪೂರ್ಣ ಆರ್ಥಿಕ ಸೇವೆಗೆ.

FAITHFUL SB FRIENDLY

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಮಣಿಪಾಲ, ಮೈಸೂರು ರಾಜ್ಯ.

ಸಾಧನ ಸಂಪತ್ತು:	ಶಾಖೆಗಳು:	ತೆತ್ತ ಭಂಡವಾಳ ಮತ್ತು
ರೂಪಾಯಿ 80 ಕೋಟಿ.	210ಕ್ಕೂ ಮಿಕ್ಕಿ.	ಕಾದಿಟ್ಟ ನಿಧಿ: ರೂಪಾಯಿ 2 ಕೋಟಿ.

ಅಸ್ತಮಾ ರೋಗಿಗಳ ತಿಳುವಳಿಕೆಗೆ

ರಜಿಸ್ಟ್ರರ್ಯಾದ ಚಿತ್ರಕೋಟ್ ಅಸ್ತಮಾ ನಿವಾರಕ ಬೂಟಿಯನ್ನು ತಾ.29-10-66 ನೇ ಹುಣ್ಣಿಮೆ ರಾತ್ರಿ ಖೀರನೊಂದಿಗೆ ಸೇವಿಸುವುದರಿಂದ ಅಸ್ತಮಾ, ಸೇವಸ, ಕೆಮ್ಮು, ನೆಗಡಿ ನಿವಾರಣೆಯಾಗುತ್ತದೆ. ಕೂಡಲೇ ಹುಣ್ಣಿಮೆಯ ಮೊದಲೇ ಬರೆಯಿರಿ.

Manager, Shri Mahatma Naga
Baba Ayurvedashram,
P. O. Chitrakot U. P.

ಮಹಿಳಾ ಮಂಡಳ

ಗರ್ಭಸ್ರಾವ ಉಚಿತವೆ?

ಮಗುವಿನ ಜನನವೊಂದೇ ಅಲ್ಲ, ಮಹಿಳೆಗೆ ಮುಂದೆ ಜೀವನ ಅನೇಕಾನೇಕ ವಿಶಿಷ್ಟ ಸಮಸ್ಯೆಗಳನ್ನು ಒಡ್ಡುತ್ತದೆ.

ತಾಯ್ತನದ ಸಂಭ್ರಮದ ಹಿಂದೆ ಇರುವ ಬಸಿರು, ಪ್ರಸವವೇದನೆ, ಕಳವಳ, ಕಾತರಗಳನ್ನು ಎಂಥ ಸೂಕ್ಷ್ಮ ಹೃದಯದ ಪತಿಯೂ ಊಹಿಸುವುದು ಕಷ್ಟ. ಮಗುವನ್ನು ಹೆರುವ ಬಗ್ಗೆ ಅಥವಾ ಬಿಡುವ ಬಗ್ಗೆ ನಿರ್ಧರಿಸುವ ಹಕ್ಕನ್ನು ಮಹಿಳೆಗೆ ಇದೊಂದೇ ಕೊಡಲು ಸಾಕು.

ಆದರೆ ಇಂದು ಹೊಸ ಕೂಸಿನ ಜನನ ಕೇವಲ ವೈಯಕ್ತಿಕ ಅಥವಾ ಕುಟುಂಬದ ವಿಷಯ ಮಾತ್ರವೇ ಆಗಿಲ್ಲ, ರಾಜ್ಯಕ್ಕೂ ಇದರಲ್ಲಿ ಆಸಕ್ತಿಯಿದೆ. ಯಾಕಂದರೆ ನಾಗರಿಕರ ಕ್ಷೇಮ ಹಾಗೂ ಶಿಕ್ಷಣಗಳ ಚಿಂತೆ ಅದಕ್ಕೆ.

ಆರೋಗ್ಯ ಕಾರಣದಿಂದ ಗರ್ಭಸ್ರಾವ

ತಾಯಿಯ ಆರೋಗ್ಯಕ್ಕೆ ಅಥವಾ ಜೀವಕ್ಕೆ ಅಪಾಯವಾಗುವಂತಿದ್ದರೆ ಅಥವಾ ಗಂಡಹೆಂಡಿರಲ್ಲಿ ಯಾರಾದರೊಬ್ಬರು ಆನುವಂಶಿಕ ಜಾಡ್ಯದಿಂದ ಬಳಲುತ್ತಿದ್ದರೆ ಅನೇಕ ದೇಶಗಳಲ್ಲಿ ಗರ್ಭಸ್ರಾವಕ್ಕೆ ಅಪ್ಪಣೆ ಕೊಡಲಾಗಿದೆ. ಈ ರೂಢಿ ನೋಡುವುದಕ್ಕೆ ಏನೇಕದ್ದಾಗಿ ಕಾಣಿಸುತ್ತಿದೆಯಾದರೂ ಗಂಭೀರವಾದ ದೋಷಗಳು ಇದರಲ್ಲಿ ಇಲ್ಲದೆ ಇಲ್ಲ. ಯಾವುದೇ ವೈದ್ಯಕೀಯ ಮೇಲ್ವಿಚಾರಣೆಯಿಲ್ಲದ ರಹಸ್ಯಗರ್ಭಸ್ರಾವಕ್ಕಿಂತ ಇದು ಮೇಲಾಗಿರಬಹುದು. ಆದರೆ ಹೆಂಗಯೇ ಬೇಡವೆಂದು ಖಡಾಖಂಡಿತವಾಗಿ ಹೇಳುವ ಹೆಂಗಸು ಪದೇ ಪದೇ ಅಜ್ಞ, ಅಸಮರ್ಥ ಕೈಗಳಿಗೆ ಒಳಗಾಗಬೇಕಾಗುತ್ತದೆ. ಸೂಕ್ತ ರಕ್ಷಣೆಯಿಲ್ಲದ ಅಶುದ್ಧ ಸ್ಥಿತಿಗತಿಯಲ್ಲಿ ಜರುಗಿಸಿದ ಅಕ್ರಮ ಗರ್ಭಸ್ರಾವಗಳಂತೂ ಮರಣಾಂತಿಕವಾಗಿರುತ್ತವೆ. ಆಸ್ಪತ್ರೆಯಲ್ಲಿ ಮಾಡಿಸುವ ಗರ್ಭಸ್ರಾವಗಳಿಗಿಂತ ಅಕ್ರಮ ಗರ್ಭಸ್ರಾವಗಳಲ್ಲಿ ಪ್ರಸೂತಿ ಮರಣ ೬೦ರಿಂದ ೮೦ ಪಾಲು ಹೆಚ್ಚಿರುತ್ತದೆಯೆಂದು ವೈದ್ಯರು ಅಂದಾಜು ಮಾಡಿದ್ದಾರೆ.

ಸೋವಿಯೆತ್ ಒಕ್ಕೂಟದಲ್ಲಿ ಒಮ್ಮೆ ೧೯೨೦ರಲ್ಲಿ ಗರ್ಭಸ್ರಾವವನ್ನು ಕಾನೂನು ಬದ್ಧಗೊಳಿಸಲಾಯಿತಾದರೂ ಪುನಃ ೧೯೩೬ರಲ್ಲಿ ಮತ್ತೆ ನಿಷೇಧಿಸಲಾಯಿತು. ಆದರೆ ಈ ಆಚರಣೆಯನ್ನು ಪುನಃ ಪರೀಕ್ಷಿಸಬೇಕೆನ್ನುವುದಕ್ಕೆ ಆರೋಗ್ಯವಂತಳಾದಯಾವ ಸ್ತ್ರೀಯೊಬ್ಬಳು ರಕ್ತ ಹಾನಿಯಿಂದ ರಕ್ತ ವಿಷವಾಗುವಿಕೆಯಿಂದ ಅಥವಾ ಆಂತರಿಕ ಗಾಯಗಳಿಂದ ಅಸುನೀಗುವ ಗಂಡಾಂತರದ ಕಾರಣವೊಂದೇ ಸಾಕು.

ಅಂಬ್ಯೂಲನ್ಸ್ ಡಾಕ್ಟರು, ಸ್ತ್ರೀ-ರೋಗ ವಿಜ್ಞಾನಿಗಳು ಮತ್ತು ಪ್ರಸವ ಶಾಸ್ತ್ರಜ್ಞರು ಇವರೇ ವೈದ್ಯಕೀಯ ಕಾರಣಗಳಲ್ಲದ ಬೇರೆ ಕಾರಣಗಳಿಂದ ಗರ್ಭಸ್ರಾವಕ್ಕೆ ಮೊದಲು ಅನುಮತಿ ನೀಡಬೇಕಾದವರು. ಆದರೆ ಮಹಿಳೆ ತಾನು ತಾಯಿಯಾಗಬೇಕೊ ಬೇಡವೊ ಎಂಬುದನ್ನು ತಾನೇ ನಿರ್ಧರಿಸಲಿ. ಸಮಾಜವು ಅವಳ ತೀರ್ಪುಗಾರನಾಗದೆ ಸಲಹೆಗಾರ ಮತ್ತು ಸಹಾಯಕನಂತಾಗಲಿ.

೧೯೫೫ರ ಅಂತ್ಯದಲ್ಲಿ ಹೊರಡಿಸಿದ ಒಂದು ಆಜ್ಞೆಯು ವೈದ್ಯಕೀಯ ಕಾರಣ ಮಾತ್ರದಿಂದಲ್ಲ, ಮಹಿಳೆಯ ಸ್ವಂತ ಇಚ್ಛೆಯ ಆಧಾರದಲ್ಲಿ ಗರ್ಭಸ್ರಾವಗೊಳಿಸಬಹುದೆಂದು ತಿಳಿಸುತ್ತದೆ. ಆದರೆ ಈ ಗರ್ಭಸ್ರಾವ ಕೇವಲ ವೈದ್ಯರಿಂದ ಮತ್ತು ಕೇವಲ ಆಸ್ಪತ್ರೆಯಲ್ಲಿ ನಡೆಯಬೇಕೆಂದು ಆಜ್ಞೆಯು ಒತ್ತಿ ಹೇಳುತ್ತದೆ.

ಇಂಥ ಒಂದು ಕ್ರಮದ ಸಿಂಧುತ್ವವನ್ನು ಪರೀಕ್ಷಿಸಲು ಹತ್ತು ವರ್ಷಗಳು ಸಾಕಷ್ಟು ಅವಧಿಯಾಯಿತು. ಇದು ಸಂಪೂರ್ಣ ಸಮರ್ಥನೀಯವೂ ಹೇಗೆಂಬುದನ್ನು ಸೋವಿಯೆತ್ ತಜ್ಞರೇ ಹೇಳಬೇಕು.

ಶಾಸನಬದ್ಧ ಗರ್ಭಸ್ರಾವದಿಂದ ಸೋವಿಯೆತ್ ಜನನ ಪ್ರಮಾಣದಲ್ಲಿ ಇಳಿಕೆಯಾಗಿಲ್ಲವೆಂದು ಪ್ರಖ್ಯಾತ ಸೋವಿಯೆತ್ ಜನಾಂಗ ವಿವರ ಶಾಸ್ತ್ರಜ್ಞ ಉರ್ಲಾನಿಸ್‌ರಿಂದ ತಿಳಿಯುತ್ತದೆ. ೧೯೬೦ರ ಅಂಕಿ ಸಂಖ್ಯೆಗಳ ಪ್ರಕಾರ ಜನನ ಪ್ರಮಾಣ ಸಂಯುಕ್ತ ರಾಜ್ಯ ಅಮೆರಿಕದಲ್ಲಿಯಗಿಂತಲೂ ಮತ್ತು ಅಲ್ಬೇನಿಯವೊಂದನ್ನು ಬಿಟ್ಟು ಯೂರೋಪಿನ ಯಾವೊಂದು ದೇಶಕ್ಕಿಂತಲೂ ಹೆಚ್ಚೇ ಇದೆ.

ಅಲ್ಲದೆ ಪಾತಕೀ ಗರ್ಭಸ್ರಾವ ಹಾಗೂ ತತ್ಪರಿಣಾಮದ ಮೃತ್ಯು ಪ್ರಮಾಣಗಳೂ ಗಣನೀಯವಾಗಿ ಕಡಮೆಯಾಗಿದೆ. ಮಾನವ ಜೀವನವನ್ನು ರಕ್ಷಿಸುವ ದೃಷ್ಟಿಯಿಂದ ಶಾಸನಬದ್ಧ ಗರ್ಭಸ್ರಾವ ಪಾಪವೇನಲ್ಲ. ಅದು ಮಹಿಳೆಯನ್ನು ಮಾನಸಿಕ ಹಾಗೂ ದೈಹಿಕ ಯಾತನೆ ಮತ್ತು ಅಗ್ನಿ ಪರೀಕ್ಷೆಗಳಿಂದಲೂ ಪಾರು ಮಾಡಬಲ್ಲದು.

ಶಾಸನಬದ್ಧ ಗರ್ಭಸ್ರಾವದ ಫಲಿತಾಂಶವನ್ನು ನೋಡುವ ಕಾಲಕ್ಕೆ ನಾವು ಮಹಿಳೆ ಮಗುವಿಗೆ ಜನ್ಮನೀಡುವ ಪರವಾಗಿಯ ತೀರ್ಮಾನಿಸುವಂಥ ಪ್ರೋತ್ಸಾಹಕ ಅಂಶಗಳನ್ನು ನಾವು ಮರೆಯ ಬಾರದು.

ಮೊಟ್ಟಮೊದಲನೆಯ ಹಾಗೂ ಅತ್ಯಂತ ಮಹತ್ವದ ಸಂಗತಿಯೆಂದರೆ ಜನರ ಜೀವನ ಮಟ್ಟಗಳಲ್ಲಿ ಏರಿಕೆ, ನಾವು ಸಮೀಕ್ಷಿಸುತ್ತಿರುವ ಅವಧಿಯಲ್ಲಿ ಬೃಹತ್ ವಸತಿ ನಿರ್ಮಾಣ ಸಾಧ್ಯತೆಗಳು ಕಾರ್ಯಗತವಾಗುತ್ತಿರುವುದು, ಮತ್ತೆ ಸೋವಿಯೆತ್ ಮಾತೆ ಪ್ರಭುತ್ವದಿಂದ ಪಡೆಯುವ ಮಸ್ತು ಬೆಂಬಲ ಅದರ ಪರಿಣಾಮವಾಗಿ ಮಾನಸಿಕ ಸಿದ್ಧತೆ.

ಸೋವಿಯೆತ್ ಒಕ್ಕೂಟದಲ್ಲಿ ಸ್ಥಿತಿ ಹೀಗಿದೆ:

ಮೂರನೆಯ ಮಗುವಿನ ಜನನನಂತರ ಪ್ರತಿಯೊಂದು ಮಗುವಿನ ಜನನಕ್ಕೂ ತಾಯಿ ಒಟ್ಟುಮೊತ್ತದಗ್ರಾಂಟ್ ಪಡೆಯುತ್ತಾಳೆ ನಾಲ್ಕನೆಯ ಹೆರಿಗೆ ಮತ್ತು ಅನಂತರದ ಪ್ರತಿಯೊಂದೂ ಮಗುವಿಗೂ ತಾಯಿ ಒಂದು ಪ್ರಮಾಣದ ಗ್ರಾಂಟು ಹಾಗೂ ಮಾಸಿಕ ಭತ್ಯ ಪಡೆಯುತ್ತಾಳೆ. ಎಲ್ಲ ದುಡಿಮೆಗಾರ ಹೆಂಗಸರೂ ೧೧೨ ದಿನಗಳ ಬಾಣಂತಿಕಾಲದ ರಜೆ ಪಡೆಯುತ್ತಾರೆ. (೫೬ ದಿನ ಹೆರಿಗೆಗೆ ಮೊದಲು ಅನಂತರ ೫೬ ದಿನ). ಅವಳಿಗಳು ಹುಟ್ಟಿದ ಪಕ್ಷದಲ್ಲಿ ಅಥವಾ ಕಷ್ಟಕರ ಸನ್ನಿವೇಶ ಒದಗಿದ್ದರೆ ಹೆರಿಗೆ ನಂತರದ ರಜೆಯನ್ನು ೭೦ ದಿನಗಳ ಕಾಲ ಕೊಡುವುದೂ ಉಂಟು.

ಅನುಕೂಲಕರ ಸ್ಥಿತಿಗತಿಗಳು

ಐದು ಅಥವಾ ಅದಕ್ಕಿಂತ ಹೆಚ್ಚು ಮಕ್ಕಳನ್ನು ಹೆತ್ತು ಎಂಟು ವರ್ಷಗಳ ವರೆಗೆ ಬೆಳೆಸುವಂಥ ದುಡಿಮೆಗಾರ ತಾಯಿಯು ೫೦ನೇ ವಯಸ್ಸಿನಲ್ಲಿ ವೃದ್ಧಾಪ್ಯ ವೇತನ ಪಡೆಯಲು ಅರ್ಹಳಾಗುತ್ತಾಳೆ ಮತ್ತು ಅಂಥ ತಾಯಿ ೨೦ ವರ್ಷಗಳಿಗೆ ಬದಲು ೧೫ ವರ್ಷ ಸೇವೆ ಸಲ್ಲಿಸಿದರಾಯಿತು. ನಿವೃತ್ತಿ ವೇತನ ಪಡೆಯುತ್ತಾಳೆ. ಅಲ್ಲಿ ನರ್ಸರಿ ಮತ್ತು ಕಿಂಡರ್‌ಗಾರ್ಟನ್‌ಗಳ ಸಂಖ್ಯೆ ಬೆಳೆಯುತ್ತಲೇ ಇರುತ್ತದೆ. ಹೀಗೆ ಸೋವಿಯೆತ್ ಸ್ತ್ರೀ—ತನ್ನ ಬಸಿರಿನ ಬಗ್ಗೆ ಯೋಚಿಸಿದಾಗ ಅದು ಸಾಮಾನ್ಯವಾಗಿ ಹೆರಿಗೆಯ ಪರವಾಗಿಯೇ ಇರುತ್ತದೆಯೆಂದು ಹೇಳಬೇಕು.

ಅನುಭವಿ ಯುವಕ ಆಕೆ ಅವಸರದ ವಿಚಾರಹೀನ ನಿರ್ಣಯ ಕೈಗೊಳ್ಳುವಂತೆ ಮಾಡುತ್ತಾನೆಂದಿಟ್ಟುಕೊಳ್ಳಿ. ಆಗಲೆ ಮತ್ತೆ ಇನ್ನೊಂದು ಇಂಥ ವಿಚಾರಹೀನ ಹೆಜ್ಜೆ ಹಾಕದಂತೆ ಡಾಕ್ಟರರ ಎಚ್ಚರಿಕೆ ಇದೆ.

ಪ್ರಸೂತಿ ಮಂದಿರಗಳು ಗರ್ಭಸ್ರಾವ ಹಾಗೂ ಅನಂತರದ ಉಪಚಾರಗಳಿಗೆ ಅಪ್ಪಣೆ ನೀಡುತ್ತವೆ. ಅದೆಷ್ಟೇ ಕಷ್ಟದ ಗರ್ಭಸ್ರಾವವಿದ್ದರೂ ಚಿಕಿತ್ಸೆ ಮತ್ತು ಉಪಚಾರ ವೆಚ್ಚ ಕೇವಲ ಐದು ರೂಬಲ್‌ಗಳು ಮಾತ್ರವೇ. ಆದರೆ ಇವೆಲ್ಲವನ್ನೂ ವಿವರಪೂರ್ಣ ಗಂಭೀರ ಪರಿಶೀಲನೆಯ ಬಳಿಕವೆ ನಡೆಸಲಾಗುವುದು.

ಒಂದು ಸಣ್ಣ ಕೈಗಾರಿಕಾ ಪಟ್ಟಣವಾದ ಪೊರೊಲಸ್ಕದಲ್ಲಿಯ ಪ್ರಸೂತಿ ಸಲಹಾ ಮಂದಿರದ ಮುಖ್ಯ ವೈದ್ಯರಾದ ಡಾ. ವಿ. ಎಸ್. ರ್‍ಯಜೋವಾ ಕಳೆದ ಮೂರು ವರ್ಷಗಳಲ್ಲಿ ಗರ್ಭಸ್ರಾವದ ಪ್ರಕರಣಗಳು ಬಹಳೇ ಕಡಮೆಯಾಗಿವೆಯೆಂದು ತಿಳಿಸಿದರು. ಇದಕ್ಕೆ ಜೀವನ ಸ್ಥಿತಿಗತಿಗಳು ಉತ್ತಮಗೊಂಡಿರುವುದು ಮತ್ತು ಉತ್ತಮ ವಸತಿ ಸೌಕರ್ಯಗಳೇ ಕಾರಣವೆಂದು ಅವರು ಭಾವಿಸುತ್ತಾರೆ. ಆದರೆ ತಮ್ಮ ಸಲಹಾ ಮಂದಿರದ ಶೈಕ್ಷಣಿಕ ಕಾರ್ಯಕ್ಕೆ ಹೆಚ್ಚಿನ ಶ್ರೇಯಸ್ಸು ಸಲ್ಲಬೇಕೆನ್ನುತ್ತಾರೆ.

ಯಾವುದೇ ಮಹಿಳೆ ಗರ್ಭಸ್ರಾವಕ್ಕೆ ಕೋರಿಕೊಂಡಾಗ ಎಷ್ಟೇ ಚತುರತೆಯಿಂದ ಈ ಕಾರ್ಯ ಜರುಗಿಸಿದರೂ ಅವರಿಂದ ಆರೋಗ್ಯಕ್ಕೆ ಒಳ್ಳೆಯದಾಗದಿರಬಹುದೆಂದೂ ಗರ್ಭಸ್ರಾವಕ್ಕಿಂತ ಹೆರಿಗೆಯೆ ಸಾಮಾನ್ಯ ಆರೋಗ್ಯಕ್ಕೆ ಉತ್ತಮವೆಂದೂ ವೈದ್ಯರು ಎಚ್ಚರಿಕೆ ಕೊಡುತ್ತಾರೆ.

ಮಗುವಿನ ಹೆರಿಗೆಯ ಪರವಾಗಿಯೇ ತಮ್ಮ ವಾದವನ್ನು ಹೆಚ್ಚು ತೂಕವಾಗಿಸಲು ಡಾಕ್ಟರು ಯಾವಾಗಲೂ ಲಾಯರನ್ನು ಕರೆಸಿ ಆಕೆಗೆ ಅವಳ ಹಕ್ಕು ಹಾಗೂ ಗೌರವಗಳ ಮಾಹಿತಿ ಮಾಡಿಸಿಕೊಡುತ್ತಾರೆ, ಆರ್ಥಿಕ ಅಥವಾ ಇನ್ನಾವುದೇ ತೊಂದರೆಯಿದ್ದರೆ ಅದರ ನಿವಾರಣೆಗೆ ಸಹಾಯ ಮಾಡುತ್ತಾರೆ.

ಕೆಲವೊಂದು ಪ್ರಕರಣಗಳಲ್ಲಿ ಉಪದೇಶವೆಲ್ಲ ವ್ಯರ್ಥವಾಗಬಹುದು. ಇನ್ನ ಕೆಲವೊಂದು ಪ್ರಸಂಗಗಳಲ್ಲಿ ಗರ್ಭಸ್ರಾವವೇ ಅನಿವಾರ್ಯವೆನಿಸಬಹುದು. ಆಗ

(ಹನ್ನೊಂದನೇ ಪುಟ ನೋಡಿರಿ)

ಓದಲೇ ಬೇಕಾದ ಉತ್ತಮ ಪುಸ್ತಕಗಳು

ಸಮಾಜ ಶಾಸ್ತ್ರಾಭ್ಯಾಸಗಳ ಬೋಧನೆ	ಎಸ್. ಕೃಷ್ಣಪ್ಪ	4	50
ಜೇನ ಹನಿಗಳು	ಕ. ರಾ. ಕೃ	3	50
ಚೆನ್ನಿಗ ಚೆಲುವಯ್ಯ	,,	2	25
ಆಯ್ದ ಜಾನಪದ ಗೀತಗಳು	,,	1	00
ಮಲೆ ಮಾದೇಶ್ವರ	,,	1	00
ನಾಡ ಹಾಡುಗಳು	,,	0	75
ಲಿಯೋ ಟಾಲ್‌ಸ್ಟಾಯ್ ಅನು: ಆನಂದ		3	00
ಜನತೆಯ ನಡುವೆ	ಅನು: ನಿರಂಜನ	2	50
ನನ್ನ ಬಾಲ್ಯ	,,	1	75
ನನ್ನ ವಿಶ್ವ ವಿದ್ಯಾನಿಲಯಗಳು	,,	2	00
ಕೆರೆಯ ನೀರನ್ನು ಕೆರೆಗೆ ಚೆಲ್ಲಿ	ಪಿ. ಲಂಕೇಶ್	2	50
ಕಾಲ ಹೋಯಿತು	ಶ್ಯಾಮಾ	2	75
ಬಸ್ ಕಂಡಕ್ಟರ್	ಕಾಮರಾಜ	2	50
ನಮ್ಮಂಥವರೇ ಹೆಚ್ಚು ಮಂದಿ	ಮಿತ್ರಾರು	2	00
ಬಿಳಿ ಹಾಯಿ	ಅನು: ಕೆ.ಎಸ್. ಕೃಷ್ಣಮೂರ್ತಿ	2	00
ಬಂಗಾರದ ಬಳ್ಳಿ	ನಾಡಿಗೇರ ಕೃಷ್ಣರಾಯ	2	00
ಬಾಳ ನಿಯಮ	ಅನು: ರಾಘವೇಂದ್ರ	1	50
ರೈಲು ಕಂಬಿಯ ಮೇಲೆ	ಕೆ. ವಿ. ಸಕ್ಸೇನ್.	1	50
ಗೌರೀಶಂಕರ ಅಣ್ಣಪ್ಪರೆಡ್ಡಿ	ನಾರಾಯಣ ಭಟ್ಟ	1	25
ಪೂಜೆ	,,	1	25
ಕೊಕ್ಕರೋ	ಡಿ. ವಿ. ರಾಘವೇಂದ್ರ	1	00
ಜ್ವಾಲಾಮುಖಿ	,,	0	62
ಸಂಸ್ಥಾನಿಕರು	ಗೋವಿಂದ ಮೂರ್ತಿ ದೇಸಾಯಿ	1	50
ಒಡ್ಡಿದ ಉರುಳು	ಅ. ಗೌ. ಕಿನ್ನಿಗೋಳಿ	1	25
ನಿಜಸುತ	ಸೇವನವಿ ರಾಜಮಲ್ಲ	1	50
ಭಾರತದ ಇತಿಹಾಸ ಪಾಠಗಳು	ತ. ಸು. ಶಾಮರಾಯ	0	75
ಸಾಯೋ ಎಮ್ಮೆ ಸೇರು ತುಪ್ಪ	ರಾಘಣ್ಣ	0	75
ಮದುವೆ ಮಾಡಿ ನೋಡು	,,	0	75
ತಾಳಕಟ್ಟೋಕ್ಕೆಯಾರು	ಕೆ. ಗುಂಡಣ್ಣ	0	75
ಕುಮಾರಿ ಸುನೇತ್ರ	ತಲಚೇರಕರ	0	75
ಸ್ವಾಮಿ ವಿವೇಕಾನಂದ	ಉ. ಕಾ. ಸುಬ್ಬರಾಯಾಚಾರ್	0	50
ಪುಟಾಣಿಗಳ ಪ್ರಪಂಚ	ಕೆ. ಎನ್. ತಂತ್ರಿ	0	60
ದೇಶ ಭಕ್ತ	ಹೆಗಡೆ	0	50
ಓಟನ ರಾಜ	ನರೇಂದ್ರ ಬಾಬು	0	50

ನವಭಾರತ ಪುಸ್ತಕ ಭಂಡಾರ, ಉಡುಪಿ.

ಚಾರುಚಯನ

ನಾಯಕರಿಗೆ ಕಡಿವಾಣ ಬೇಡವೆ?

ದೇಶದಲ್ಲಿ ಆಂತರಿಕವಾಗಿ ಕಾಂಗ್ರೆಸ್ಸು ಒಂದಾಗಿ, ಭಿನ್ನ ಮತಗಳನ್ನು ತೊರೆದು, ಮುಂದಿನ ಚುನಾವಣೆಗಳನ್ನು ಎದುರಿಸಲು ಸಿದ್ಧತೆಯನ್ನೇನೋ ಮಾಡುತ್ತಿದೆ. ಆದರೆ, ಬೆಸುಗೆಯಿಂದ ಬಿರುಕು ಎಷ್ಟರವರೆಗೆ ಬೆಸೆದು ನಿಲ್ಲಬಹುದೆಂದು ಈಗಲೇ ಹೇಳುವುದು ಸಾಧ್ಯವಿಲ್ಲ. ರಾಜ್ಯಗಳ ನಾಯಕರು— ಅಥವಾ ಹಾಗೆಂದು ಕರೆದುಕೊಳ್ಳುವವರು—ತಮ್ಮ ಮನಸ್ತಾಪವನ್ನು ತ್ಯಜಿಸಲು ಸಿದ್ಧರಾಗಿರುವಂತೆ ತೋರುವುದಿಲ್ಲ. ಎರ್ನಾಕುಲಂನ ಶಾಸ್ತ್ರಿ ನಗರದ ಅಧಿವೇಶನವು ಪ್ರಮುಖವಾದುದೆಂದು ತಿಳಿದಿದ್ದರೂ ಕೆಲ ನಾಯಕರು ಅದರಲ್ಲಿ ಬೇರೆ ಬೇರೆ ಕಾರಣಗಳನ್ನು ಮುಂದೆ ಮಾಡಿ ತಲೆಯಡಗಿಸಿ

ಕೊಂಡರು. ಹಾಗಾಗಿ ಕಾಮರಾಜರು ಎಲ್ಲ ಗುಂಪುದಾರರನ್ನೂ ವೈಯಕ್ತಿಕವಾಗಿ ಕಂಡು ಭಿನ್ನಾಭಿಪ್ರಾಯ ಪರಿಹರಿಸಲು ಮಾಡಬಹುದಾದ ಪ್ರಯತ್ನಕ್ಕೆ ಕಲ್ಲು ಬಿತ್ತು. ಅದೇನೇ ಇರಲಿ, ಮುಂದಿನ ಚುನಾವಣೆಗಳಲ್ಲಿ ಕಾಂಗ್ರೆಸ್ಸು ಬಹುಮತದಿಂದ ಅಧಿಕಾರ ಸೂತ್ರ ಮತ್ತೆ ಹಿಡಿಯುವುದು ಖಂಡಿತವೇ. ಆದರೆ, ಬಲದಲ್ಲಿ ಮಾತ್ರ ಹ್ರಾಸ ಅನಿವಾರ್ಯ.

ಸ್ವಾತಂತ್ರ್ಯದ ಫಲಗಳಲ್ಲಿ ಅಭಿಪ್ರಾಯ ಸ್ವಾತಂತ್ರ್ಯವು ಮಹತ್ತರವಾದುದು. ಸಮಷ್ಟಿಗಾಗಿ ವ್ಯಷ್ಟಿಯು ಬಲಿದಾನ ಮಾಡಿ ದುಡಿದ ಇತಿಹಾಸವಿರುವ ಕಾಂಗ್ರೆಸು ಇಂದು ವ್ಯಷ್ಟಿಗಾಗಿ ಸಮಷ್ಟಿಯ ರಕ್ತ ಹೀರುತ್ತಿದೆ ಎಂಬ ದೂರು ಎಲ್ಲೆಲ್ಲೂ. ಸರಕಾರಿ ನೌಕರರಿಗೆ ನಿಶ್ಚಿತ ಪ್ರಯಾಣ ಭತ್ತೆ ಗೊತ್ತು ಮಾಡಿದ ಕಾಂಗ್ರೆಸ್ ಸರಕಾರದ ಮಂತ್ರಿಗಳು ನಿಶ್ಚಿತಭತ್ತೆ ತೆಗೆದುಕೊಳ್ಳಲು ಸಿದ್ಧರಿದ್ದಾರೆಯೆ? ಬೆಲೆಯೇರಿಕೆಯ ಮೇಲಿಂದಾಗುವ ಅನಾಹುತಗಳನ್ನು ತಡೆಯುವಲ್ಲಿ ಸರಕಾರವು ಅಸಮರ್ಥವಾಗಿದೆ – ಇದು ನಿಜವೇ. ಉಚ್ಚಮಟ್ಟದಲ್ಲಿನ ಭ್ರಷ್ಟಾಚಾರಕ್ಕೆ ಯಾವ ಔಷಧಿಯೂ ತಯಾರಾಗಿರುವುದಿಲ್ಲ. ಸರಕಾರದ ತಲೆ ಕೆಳಗು ನೀತಿ—ನಿಯಮಗಳು, ತಡವಾದ ವ್ಯವಹಾರ— ಮೊದಲಾದುವೆಲ್ಲವೂ ಜನತೆಯನ್ನು ರೋಸಿವೆ. ಕಂದಾಯ ಕರಣೆಯ ವೇಳೆ ಮಾತ್ರ ಸರಕಾರವೊಂದಿದೆಯೆಂದು ಜನ ಹೇಳುತ್ತಾರಲ್ಲವೆ? ಉಳಿದ ಸಮಯದಲ್ಲಿ ಏನೂ ಗೊತ್ತಾಗುವುದಿಲ್ಲ.

ಇಷ್ಟಲ್ಲದೆ, ಜನತಾ ಪ್ರತಿನಿಧಿಗಳು ಕೂಡ ಸದ್ಗೃಹಸ್ಥರಂತೆ ಪ್ರತಿನಿಧಿ ಸಭೆಗಳಲ್ಲಿ ನಡೆದುಕೊಳ್ಳುವುದೀಗ ಕಡಮೆಯಾಗುತ್ತಿದೆ. ಅಧ್ಯಕ್ಷರ ಅಪ್ಪಣೆಯನ್ನು ಬುದ್ಧಿಜೀವಿಗಳಾದ ನಾಯಕ ಮಹಾಶಯರೇ ಮನ್ನಿಸದೆ ಕೀಟಲೆ ನೀಡಿ ಕಾಡತೊಡಗಿದರೆ ಎಳೆಯ ತಿಳಿಗೇಡಿ ವಿದ್ಯಾರ್ಥಿಗಳು ಅಧ್ಯಾಪಕರಿಗೆ, ಊರ ಜನರಿಗೆ ಕೀಟಲೆ ನೀಡುವುದರಲ್ಲಿ ತಪ್ಪೇನು? ಶಿಸ್ತು ಭಂಗ ಮಾಡಿದರೆ ಅವರಿಗೆ ಮೊದಲು ಪಾಠ ಕಲಿಸಿದವರೇ ನಮ್ಮ 'ನಾಯಕರು' ಎಂದರೆ ತಪ್ಪಾಗದು. ಸರಕಾರ, ಅದರ ಅಧಿಕಾರಿಗಳು—ಮಂತ್ರಿಗಳು ವಿದ್ಯಾರ್ಥಿಗಳಲ್ಲಿ ಬೆಳೆಯುತ್ತಿರುವ ಅಶಿಸ್ತಿನಿಂದ ಕಂಗಾಲಾಗಿದ್ದಾರೆ—ಬರಿಯ ಕಂಗಾಲಾದರೆ ಪ್ರಯೋಜನವಿಲ್ಲ. ಹಿರಿಯರು, ಶ್ರೇಷ್ಠರು ಏನನ್ನು ಮಾಡುತ್ತಾರೆ, ಅವರನ್ನು ಅನುಸರಿಸುವುದು ಕಿರಿಯರ ಪ್ರಕೃತಿದತ್ತ ಲಕ್ಷಣ. ಎಳೆಯರಲ್ಲಿ ಶಿಸ್ತು ಬಯಸುವ ಹಿರಿಯರು ತಮ್ಮನ್ನೂ ಶಿಸ್ತಿನ ಕಡಿವಾಣದಲ್ಲಿ ಬಿಗಿಯಲು ಸಿದ್ಧರಾಗಬೇಕು.

o o o

ಪಾಕಿಸ್ತಾನದ ಅಯ್ಯೂಬ ಖಾನರು ತಾಷ್ಕೆಂಟ್ ಒಡಂಬಡಿಕೆಯಿಂದ ದೂರ ಸರಿಯಲು ಇಚ್ಛಿಸುತ್ತ ಅಗ್ರಸುಗಣವಾದ ಮಾರ್ಗ ಹಿಡಿಯುತ್ತಿರುವುದು ಭಾರತಕ್ಕೆ ಒಳ್ಳೆಯದೇ. ನಮಗೆ ಇದರಿಂದ ವಿಸ್ಮಯವಾಗುತ್ತಿಲ್ಲ. ಏಕೆಂದರೆ, ನಮ್ಮಿಂದಾಗಿ ಸಂಧಾನದ ಮಾರ್ಗ ಮುಚ್ಚಬಾರದು ಎಂಬ ಏಕಮೇವ ಕಾರಣದಿಂದ ನಾವು ತಾಷ್ಕೆಂಟಿಗೆ ಹೋದೆವು (ಹಿರಿಯ ನಾಯಕನನ್ನೂ ಕಳೆದುಕೊಂಡೆವು) ಆಗಲೇ ಪಾಕ್ ಏನು ಮಾಡಬಹುದೆಂದು ನಮಗೆ ಗೊತ್ತಿತ್ತು. ಪಾಕಿಸ್ತಾನವು ಕಾಮನ್‌ವೆಲ್ತ್ ಪರಿಷತ್ತಿನಲ್ಲಿ, ಸಂಯುಕ್ತ ರಾಷ್ಟ್ರ ಸಂಘದಲ್ಲಿ ಕಾಶ್ಮೀರವನ್ನು ಮತ್ತೆ ಮತ್ತೆ ಎತ್ತಲು ಯತ್ನಿಸಿತು, ನಾಗಾಲ್ಯಾಂಡನ್ನೂ ಎಳೆತವಲ್ಲಿ ಐಂಡ್ರಿ ಸ್ಕಾಟ್ ಕೂಡ ಒತ್ತಾಸೆ ನೀಡಿದರು. ಆದರೆ, ಅವರೆಲ್ಲರ ಪ್ರಯತ್ನ ವ್ಯರ್ಥವಾಯಿತು.

ಒಂದು ಕಡೆಯಲ್ಲಿ ಶಾಂತಿ ಮಂತ್ರಪಠನ ಮಾಡುತ್ತ, ಮತ್ತೊಂದೆಡೆಯಲ್ಲಿ ಅಶಾಂತಿ ಹರಡಿಸುವ ಅದ್ವಿತೀಯ ಕಲೆ ಪಾಕಿಸ್ತಾನಕ್ಕೆ ಮೀರಿ ಹೋಗಿದೆ, ಉಭಯ ಸೇನಾ ನಾಯಕರು ಏನೋ ಆದರ್ಶ ಒಡಂಬಡಿಕೆ ಮಾಡಿಕೊಂಡರು— ಇದು ಎಷ್ಟರ ಮಟ್ಟಿಗೆ ಕಾರ್ಯಕೃತವಾಗುತ್ತದೆಂದು ಹೇಳುವಂತಿಲ್ಲ. ಶಸ್ತ್ರಾಸ್ತ್ರಗಳ ಸಂಗ್ರಹಕ್ಕೆ ಪಾಕ್ ಎಲ್ಲೆಲ್ಲೂ ಕೈಚಾಚುತ್ತಿದೆ. ತಾನು ಕಳೆದುಕೊಂಡಿದ್ದ ಶಕ್ತಿಯನ್ನು ಮತ್ತೆ ಹೊಂದಿರುವುದಾಗಿ ಅದು ಹೇಳುತ್ತಿದೆ. ಕೆಂಪು ಚೀನಾದ ಕೈಯೂ ಜಸ್ತ್ರಲಾಭಕ್ಕೆ ಬಹು ಮುಂದೆ ಬಂದಿದೆ. ಭೂತಾನದ ಬಳಿಯಲ್ಲಿ ಸಾಂಪ್ರದಾಯಿಕ ಗಡಿಯನ್ನು ಮೀರಿ ಚೀನೀಯ ಸೇನೆಯ ತುಕಡಿಗಳು ಒಳ ನುಗ್ಗಿವೆಯೆಂದೂ ಇದಕ್ಕೆ ಭಾರತವು ಭೂತಾನ ಸರಕಾರದ ಪರವಾಗಿ ಪ್ರತಿಭಟನೆ ವ್ಯಕ್ತಪಡಿಸಿದೆಯೆಂದೂ ವರದಿಯಾಗಿದೆ. ವಿಯತನಾಮದಲ್ಲೇ ತನ್ನ ಮನಸ್ಸನ್ನು ಕೇಂದ್ರೀಕರಿಸುವುದು ಕೆಂಪು ಚೀನಕ್ಕೆ ಬೇಕಾಗಿರುವುದರಿಂದ ನಮ್ಮ ಗಡಿಯನ್ನು ಕೆಣಕಲು ಮಾತ್ರ ಅದು ಮುಂದಾಗಿದೆ — ಪಾಕಿಸ್ತಾನದ ಮೈತ್ರಿಯನ್ನು ಉಳಿಸಲು, ತಾನೂ ಅದಕ್ಕೆ ನೆರವಾಗುತ್ತಿದ್ದೇನೆಂದು ತೋರಿಸಿಕೊಡಲು ಅದು ನಾಟಕವಾಡುತ್ತಿದೆಯಷ್ಟೆ. ಬೃಹತ್ ಪ್ರಮಾಣದ ಆಕ್ರಮಣ ಮಾಡುವ ಶಕ್ತಿಯಿದ್ದರೂ ಧೈರ್ಯ ಅದಕ್ಕಿಲ್ಲ. ಪಾಕಿಸ್ತಾನದ ಬೆನ್ನು ತಟ್ಟುವುದೇ ಕೆಂಪು ಮಾವನ ಉದ್ದೇಶ.

o o o

ಕರ್ನಾಟಕ ಸರಕಾರದ ಎನ್‌ಜಿವೋಗಳು ಅಕ್ಟೋಬರ ಒಂದರಂದು ಸಾಮೂಹಿಕ ರಜಾ ಚಳುವಳಿಯನ್ನು ಮಾಡುವ ತಮ್ಮ ಅಚಲ ನಿರ್ಧಾರಕ್ಕೆ ಬಲವಾಗಿ ಅಂಟಿಕೊಂಡಾಗ ಸರಕಾರವು ತನ್ನ ನೌಕರರ ಸೇವಾ ನಿಯಮಗಳನ್ನು ತಿದ್ದುಪಡಿ ಮಾಡಿತ್ತು, ಇದರ ಮೂಲಕ ನೌಕರರನ್ನು ಮಣಿಸಲು ಅದು ಯೋಚಿಸಿತು. ಅದನ್ನು ಹಿಂತೆಗೆದುಕೊಳ್ಳಬೇಕೆಂಬ ಬೇಡಿಕೆಯನ್ನು ಸರಕಾರ ಮನ್ನಿಸಲಿಲ್ಲ. ಆದರೂ ಎನ್‌ಜಿವೋಗಳು ತಮ್ಮ ನಿಲುವಿನಿಂದ ವಿಚಲಿತರಾಗಲಿಲ್ಲ. ಆಗ ಮುಖ್ಯಮಂತ್ರಿ ನಿಜಲಿಂಗಪ್ಪನವರು ರಾಗ ಬದಲಾಯಿಸಿ ಎನ್‌ಜಿವೋಗಳ ಬಗ್ಗೆ ಸಹಾನುಭೂತಿಯಿದೆ, ವೇತನ ಹೆಚ್ಚಳದಿಂದ ಸಮಸ್ಯೆ ಪರಿಹಾರವಾಗುವುದಿಲ್ಲ, ಸಹಕಾರಿ ಸಂಘಗಳ ಮೂಲಕ [illegible] ಕೊಳ್ಳಿರಿ, ಸರಕಾರವದಕ್ಕೆ ನೆರವು ನೀಡುತ್ತದೆ, ಇತ್ಯಾದಿ ಇತ್ಯಾದಿ. ಯಾವುದನ್ನೂ ತಲೆಗೆ ಹಾಕಿಕೊಳ್ಳದೆ ಇರುವ ಎನ್ ಜಿ ಓ ನಾಯಕರನ್ನು ತಾನು ಭೇಟಿಯಾಗಲು



ಸಿದ್ಧರಿರುವುದಾಗಿ ಮತ್ತೊಂದು ಸ್ವರಗೂಡಿಸಿದರು—ವೇತನ ಆಯೋಗ ನೇಮಿಸುವುದು ಸಾಧ್ಯವೇ ಇಲ್ಲವೆಂದು ತಾನೂ ರಾಮಕೃಷ್ಣ ಹೆಗ್ಡೆಯವರೂ ಕೂಡಿಯೇ ಘೋಷಿಸಿದರು.

ಭೇಟಿ ನಡೆಯಿತು ಮತ್ತೆ ೧೧ನೆಯ ತಾರೀಕು ಭೇಟಿ ಎಂದು ನಿರ್ಣಯವಾಯಿತು. ಐದನೇ ತಾರೀಕಿನ ದಿನವೇ ವೇತನ ಆಯೋಗ ನೇಮಿಸಲು ಸಚಿವ ಸಂಪುಟ ನಿರ್ಧರಿಸಿತು. ಇಲ್ಲ ಇಲ್ಲವೆಂದು ಸಾರುತ್ತ ಬಂದವರು ಒಮ್ಮಿಂದೊಮ್ಮೆಗೆ ಇದೆಯೆಂದರು. ತಮ್ಮ ಬೇಡಿಕೆಗಳಲ್ಲಿ ಮುಖ್ಯವಾದ ಒಂದನ್ನು ಸರಕಾರ ಒಪ್ಪಿದ ಮೇಲೆ ಚಳುವಳಿಯ ಆವಶ್ಯಕತೆ ಉಳಿಯಲಿಲ್ಲ. ಸದ್ಯ, ಎನ್. ಜಿ. ವೋಗಳು ತೃಪ್ತಿ ಪ್ರದರ್ಶಿಸಿದರು. ತಮ್ಮ ಗೆಲವಿಗಾಗಿ ಸರಕಾರದ ಮೇಲೆ ತಾವು ವಿಜಯಗಳಿಸಿರುವುದಾಗಿ ಅವರು ಭಾವಿಸಿ ಅಂತಹ ಭಾವನೆಯನ್ನೇ ಸರ್ವತ್ರ ಹರಡಿಸುವುದರಲ್ಲಿ ತಪ್ಪಿಲ್ಲ. ಆದರೆ, ಇದರ ಪರಿಣಾಮ ಮಾತ್ರ ನೇರವಾಗುವುದಿಲ್ಲ. ಎನ್. ಜಿ. ವೋ ಗಳ ಜೀವನ ತಾನು ಕೊಡುವ ವೇತನದಿಂದ ಸಾಗುವುದು ಸಾಧ್ಯವಿಲ್ಲವೆಂದು ಸರಕಾರಕ್ಕೆ ಗೊತ್ತು. ಮೊದಲ ಆರ್ಥಿಕಸಂಪನ್ನವಿಲ್ಲವೆಂದವರು ಕೊನೆಯ ಗಳಿಗೆಯಲ್ಲಿ ಎಲ್ಲಿಂದ ಅದನ್ನು ತಂದರು? ವೇತನ ಆಯೋಗ ರಚಿಸುವುದನ್ನು ತಾತ್ವಿಕವಾಗಿಯಾದರೂ ಮೊದಲೇ ಒಪ್ಪಿದ್ದರೆ, ಎನ್. ಜಿ. ವೋ ಗಳು ಇಷ್ಟು ಹಳ್ಳ ಬುದ್ಧಿಯವರಾಗುತ್ತಿರಲಿಲ್ಲ; ತಾವು ಕೇಳುವುದಕ್ಕೆ ಮೊದಲೇ ಮೂಲಕ ತಾನಾಗಿಯೇ ನಿರ್ಧಾರಕ್ಕೆ ಬಂದಿನೆಂದರೆ ನೌಕರ ಮತ್ತಷ್ಟು ಸಂತೋಷಗೊಳ್ಳುತ್ತಾನೆ.

ಉತ್ತಮ ಆಡಳಿತೆಯ ತಂತ್ರವದೇ. ನೌಕರರು ಯಾವುದಾದರೊಂದು ಕಾರಣಕ್ಕಾಗಿ, ಉದಾಹರಣೆಗಾಗಿ ವೇತನ ಹೆಚ್ಚಳಕ್ಕಾಗಿ, ಚಳುವಳಿ ನಡೆಸಲು ನಿರ್ಧಾರ ಮಾಡುತ್ತಿದ್ದಾರೆನ್ನುವಾಗಲೇ ಮೂಲತಃ ತಾನಾಗಿ ತುಸು ಪರಿಹಾರ ನೀಡಿಬಿಡಬೇಕು, ಇದರಿಂದ ತೃಪ್ತಿ ಅವರಲ್ಲಿ ಮೂಡುತ್ತದೆ.

ಕರ್ನಾಟಕದ ಸರಕಾರವು ಈಗ ಕೈಗೊಂಡ ನಿರ್ಣಯದ ಮೇಲೆ ಎರಡು ಬಗೆಯ ಪಂಗಡ ಬರೆಯಬಹುದು—ತಮಗೆ ಮಣಿಯಿತೆಂದು ಎನ್ ಜಿ ವೋಗಳು, ಚುನಾವಣೆಯ ಸ್ಟಂಟ್ ಎಂದು ಇನ್ನಿತರರು.

In the Court of the Munsif of Mangalore, South Kanara.

O S.No. 211 of 1966.

Between

W. J Rodricks .. Plaintiff.

and

Rajiva Hegde ... Defendant.

To

The Defendant Sri Rajiva Hegde, Proprietor, Sri Janardhana Prasanna, Harikhandige Post, Udipi Taluk

Please take notice that the plaintiff has filed the above suit against you for recovery of the amounts due to him for the repairs effected to your lorry and that the said suit is posted to 27-10-1966, for your appearance in the above court, failing which, the suit will be decreed exparte

(Sd) P F. Rodrigues,
B. A, LL. B,
Advocate for Plaintiff.

Mangalore, 3-10-1966.

ದಕ್ಷಿಣ ಮಧ್ಯ ರೇಲ್ವೆ

ಹೊಸ ವಲಯದ ಉದಯವಾಯಿತು

ಬರೆದವರು: ಶ್ರೀ ಕೃಪಾಲ್ ಸಿಂಗ್

ಇದೇ ಅಕ್ಟೋಬರ್ ೨ರಂದು ಉದಯವಾದ ದೇಶದ ಒಂಬತ್ತನೇ ರೈಲ್ವೆ ವಲಯವು ಭಾರತ ದೇಶದ ರೈಲ್ವೆಗಳ ಪ್ರಗತಿ ಪಥದ ಮೈಲುಗಲ್ಲಾಗಿದೆ. ಈ ಮೊದಲಿನ ದಕ್ಷಿಣ ಮತ್ತು ಮಧ್ಯ ರೈಲ್ವೆಗಳಿಂದ ನೂತನ ದಕ್ಷಿಣ ಮಧ್ಯ ರೈಲ್ವೆಯು ರೂಪತಾಳಿತು. ಈ ಹೊಸ ವಲಯದಲ್ಲಿ ಮಧ್ಯ ರೈಲ್ವೆಯ ಸಿಕಂದರಾಬಾದ್ ಮತ್ತು ಸೊಲ್ಲಾಪುರ ವಿಭಾಗಗಳೂ ಮತ್ತು ದಕ್ಷಿಣ ರೈಲ್ವೆಯ ವಿಜಯವಾಡಾ ಮತ್ತು ಹುಬ್ಬಳ್ಳಿ ವಿಭಾಗಗಳು ಸೇರಿವೆ. ಪ್ರದೇಶದ ಪ್ರಯಾಣಿಕರ ಪ್ರವಾಹವನ್ನು ಪರಾಮರ್ಶಿಸಿ ವಿಭಾಗಗಳ ರಚನೆಯಲ್ಲಿ ಅಲ್ಲಲ್ಲಿ ಹೊಂದಾಣಿಕೆಗಳನ್ನು ಮಾಡಲಾಗಿದೆ. ಹೊಂದಾಣಿಕೆಯ ವಿಚಾರದಿಂದಾಗಿ ದ್ರೋಣಾಚಲಂ—ಧೋನಕೊಂಡಾ ಮತ್ತು ದ್ರೋಣಾಚಲಂ—ಹೊಸಪೇಟೆ ಲೈನುಗಳನ್ನು ದಕ್ಷಿಣ ರೈಲ್ವೆಯಿಂದ ಬೇರ್ಪಡಿಸಿ ಹೊಸ ವಿಭಾಗಕ್ಕೆ ಸೇರಿಸಲಾಗಿದೆ ಮತ್ತು ಹುಬ್ಬಳ್ಳಿ—ಹರಿಹರ ಮತ್ತು ಗೂಡೂರು—ಗುಮ್ಮಡಿ ಮಂಡಿ ಲೈನುಗಳನ್ನು ಹೊಸ ವಲಯದಿಂದ ಹೊರಗಿಡಲಾಗಿದೆ.

ದೇಶದ ವಿಭಜನೆಯೊಂದಿಗೆ ಭಾರತಕ್ಕೆ ಸ್ವಾತಂತ್ರ್ಯ ಬಂದಾಗ, ಹಳೆಯ ಸಂಸ್ಥಾನಿಕರಿಂದ, ಖಾಸಗಿ ಕಂಪೆನಿಗಳಿಂದ ಮತ್ತು ಸರ್ಕಾರದಿಂದ ಬೇರೆ ಬೇರೆ ಪದ್ಧತಿಗಳಿಂದ ನಡೆಸಲ್ಪಡುತ್ತಿದ್ದ ೫೪೦೦೯ ಕಿಲೋಮೀಟರ್ ಉದ್ದದ ರೈಲು ಮಾರ್ಗವು ನಮಗೆ ಲಭಿಸಿದ್ದಿತು. ನಮ್ಮ ಪಾಲಿಗೆ ಬಂದ ರೈಲ್ವೆಗಳು 'ರೋಗ ಪೀಡಿತ' ವಾದುವುಗಳು,೧೯೩೦ರನಂತರದ ಆರ್ಥಿಕ ದುಸ್ಥಿತಿಗೆ ಸಿಲುಕಿದಂಥವು ದ್ವಿತೀಯ ಮಹಾಯುದ್ಧದ ಸುಳಿಗೆ ಒಳಗಾಗಿ ಸವೆದು ಹೋದಂಥವು ದೇಶ ವಿಭಜನೆಯಿಂದ ಮುಕ್ಕಾದಂಥವು. ಆದುದರಿಂದ ರೈಲ್ವೆಗಳು ದೇಶದ ಸಾಗಾಟಕ್ಕೆ ಸಮರ್ಥನೀಯ ಸೇವೆ ಸಲ್ಲಿಸ ಬೇಕಾದರೆ ಅವುಗಳನ್ನು ಆಡಳಿತ, ಆರ್ಥಿಕ—ಮತ್ತು ಸಾರಿಗೆ ದೃಷ್ಟಿಯಿಂದ ಉತ್ತಮವಾಗಿ ಪುನರ್ಘಟಿಸಿ ಸುವ್ಯವಸ್ಥೆಗೊಳಿಸುವ ಕ್ರಮ ಅತ್ಯಂತ ಅವಶ್ಯವಾಯಿತು.

ಪ್ರಾರಂಭದ ವರ್ಗೀಕರಣ

ಈ ದಿಶೆಯಲ್ಲಿ ಪ್ರಥಮ ಕ್ರಮವೆಂದು ದೇಶದ ರೈಲ್ವೆಗಳನ್ನು ಮಧ್ಯ, ಪೂರ್ವ, ಉತ್ತರ, ಈಶಾನ್ಯ, ದಕ್ಷಿಣ ಮತ್ತು ಪಶ್ಚಿಮ ಎಂಬ ಆರು ವಲಯ ಘಟಕಗಳಲ್ಲಿ ವಿಂಗಡಿಸಲಾಯಿತು. ಹಳೆಯ ಸಂಸ್ಥಾನಿಕ ಪ್ರದೇಶಗಳು ಕೂಡಲೇ ವಿಲೀನವಾದುದರಿಂದ ವಿಂಗಡನೆಯ ಕೆಲಸ ತೀವ್ರವಾಗಿ ನೆರವೇರಲು ಸಾಧ್ಯವಾಯಿತು. ದೇಶದಲ್ಲಿ ಪಂಚವಾರ್ಷಿಕ— ಯೋಜನೆಯಿಂದಾಗಿ ಅಭಿವೃದ್ಧಿ ಕಾರ್ಯಗಳನ್ನು ಮುನ್ನಡೆದಾಗ, ರೈಲ್ವೆಗಳಿಗೆ ಹೆಚ್ಚಿನ ಒತ್ತಡ ಬೀಳುವುದೆಂದು ಮತ್ತು ಅವುಗಳ ಕಾರ್ಯಕ್ಷಮತೆಯನ್ನೂ ಹೆಚ್ಚಿಸುವುದು ಅವಶ್ಯವಾಗುವದೆಂದು ಆಗಲೇ ಎಣಿಸಲಾಗಿತ್ತು. ಆದಕ್ಕಾಗಿ ಆಡಳಿತ ಸೌಕರ್ಯಕ್ಕೆಂದು ೧೯೫೨ರಲ್ಲಿ ಪೂರ್ವ ರೈಲ್ವೆಯನ್ನು ಮತ್ತು ೧೯೫೮ರಲ್ಲಿ ಈಶಾನ್ಯ ರೈಲ್ವೆಯನ್ನು ವಿಭಜಿಸಿದಾಗ ಆಗ್ನೇಯ ರೈಲ್ವೆ ಮತ್ತು ಈಶಾನ್ಯ ಫ್ರಂಟಿಯರ್ ರೈಲ್ವೆಗಳು ಉದಯವಾದವು. ಈ ರೈಲ್ವೆಗಳ ಕಾರ್ಯಭಾರ ಹೆಚ್ಚಾಗಿ ವಿಂಗಡಣೆ ಬಹು ಸಮರ್ಥನೀಯವೆನಿಸಿತು. ಈ ದಿನ ಪೂರ್ವ ಮತ್ತು ಆಗ್ನೇಯ ರೈಲ್ವೆಗಳು ಕೂಡಿ ಭಾರತೀಯ ರೈಲ್ವೆ ಪ್ರಯಾಣಿಕರ ಒಟ್ಟು ಸಂಖ್ಯೆಯ ಅರ್ಧಕ್ಕೂ ಹೆಚ್ಚು ಪ್ರಮಾಣದಷ್ಟು ಪ್ರಯಾಣಿಕರನ್ನು ಹೊತ್ತುಕೊಂಡು ನಡೆಯುತ್ತಿವೆ ಎಂಬುದು ಗಮನಾರ್ಹ ಅಂಶ. ೧೯೬೨ರಲ್ಲಿ ಚೀಣಿಯರ ದುರಾಕ್ರಮಣ ನಡೆದಾಗ ಈಶಾನ್ಯ ಫ್ರಂಟಿಯರ ರೈಲ್ವೆಯ ಸ್ವಪರಿಪೂರ್ಣ ಅದ್ಭುತ—ಘಟಕದ ಮಹತ್ವವು ಅರಿವಾಯಿತು.

ವಿಪುಲ ಬೆಳವಣಿಗೆ

ವ್ಯಾವಹಾರಿಕ ರೀತಿಯಿಂದ ಕೈಕೊಳ್ಳಲ್ಪಟ್ಟ ಇಂಥಹ ಬೇರೆ ಕಾರ್ಯ ಯೋಜನೆಯಂತೆ ರೈಲ್ವೆಗಳಿಗೂ ಹೆಚ್ಚಿನ ಕಾರ್ಯಬಾಹುಳ್ಯ ಬಿದ್ದುದಾದರೆ, ಅದರ ಕಾರ್ಯಕ್ಷಮತೆಗೆ ಚ್ಯುತಿ ಬರುವ ಸಂಭವವುಂಟು. ಕಳೆದ ಮೂರು ಯೋಜನೆಗಳ ಅವಧಿಯಲ್ಲಿ ರೈಲ್ವೆ ಕಾರ್ಯ—ಕ್ಷೇತ್ರದಲ್ಲಿ ಅಪಾರ ಬದಲಾವಣೆ ಕಾಣಿಸಿಕೊಂಡಿದೆ, ೧೯೫೦—೫೧ ಮತ್ತು ೧೯೬೫—೬೬ ಕಾಲಾವಧಿಯಲ್ಲಿ ರೈಲ್ವೆಗಳು ಸಾಗಾಟ ಮಾಡಿದ ಟನ್ನೇಜ ಶೇಕಡ ೧೨೦ರಷ್ಟು ಹೆಚ್ಚಿದೆ, ಪ್ರಯಾಣಿಕರ ಸಂಖ್ಯೆ ಶೇಕಡ ೭೦ರಷ್ಟು ಅಧಿಕವಾಗಿದೆ. ಕಾರ್ಯ ಬಾಹುಳ್ಯ ಹೆಚ್ಚಿದಂತೆ ರೈಲ್ವೆ ವಲಯಗಳ ಮುಖ್ಯ ಕಚೇರಿಯ ಕಾರ್ಯ ರೀತಿಯನ್ನು ಸುನಿಯಂತ್ರಿಸಲು ಅಲ್ಪ ಸ್ವಲ್ಪ ಬದಲಾವಣೆಗಳನ್ನು ಜಾರಿಯಲ್ಲಿ ತಂದರೂ ಅವು ಸಾಕಷ್ಟು ಪರಿಣಾಮಕಾರಿಯಾಗಲಿಲ್ಲ.

ಮಧ್ಯ ಮತ್ತು ದಕ್ಷಿಣ ರೈಲ್ವೆಗಳಲ್ಲಿ ಕಾರ್ಯ ಒತ್ತಡವು ಕಳೆದ ಹದಿನೈದು ವರ್ಷಗಳಲ್ಲಿ ೧೨೦ ಮತ್ತು ೧೮೦ರಿಂದ ೨೨೦ ಮತ್ತು ೨೧೦ ರಷ್ಟು ಹೆಚ್ಚಾಗಿದ್ದು ಕಂಡು ಬಂದಿದೆ. ಇಷ್ಟೇ ಅಲ್ಲ, ಈ ಪ್ರದೇಶಗಳಲ್ಲಿಯ ಪೆಂಚ ಮತ್ತು ಚಂದಾ ಕಣಿವೆಯ ಕಲ್ಲಿದ್ದಲು, ಸಿಂಗರಣಿ ಕಲ್ಲಿದ್ದಲು ಗಣಿಗಳು, ಹೊಸಪೇಟೆ—ಬಳ್ಳಾರಿ ಭಾಗದ ಕಬ್ಬಿಣ ಅದಿರಿನ ಸಾಗಾಟ, ನೇವೆಲಿ ಯೋಜನೆಯ ವಿಸ್ತರಣೆ, ನಾಗಾರ್ಜುನ ಸಾಗರ ಯೋಜನೆಯ ಕಾರ್ಯಗಳು ಇವುಗಳಿಂದಾಗಿ ಸಾರಿಗೆ— ಸಾಗಾಟದ ಒತ್ತಡವು ಸದ್ಯೋಭವಿಷ್ಯದಲ್ಲಿ ದ್ವಿಗುಣಿತವಾಗಲಿದೆ

ಹೊಸ ವಲಯ

ದಕ್ಷಿಣ ಮಧ್ಯ ರೈಲ್ವೆ ವಲಯದ ಉದಯದೊಂದಿಗೆ ಸಂಬಂಧಿಸಿದ ವಲಯಗಳ ರೈಲ್ವೆ ಲೈನುಗಳ ಉದ್ದಳತೆ ಇಂತಿದೆ: ದಕ್ಷಿಣ ರೈಲ್ವೆ ೭೧೫೦ ಕಿಲೋಮೀಟರುಗಳೂ, ಮಧ್ಯ ರೈಲ್ವೆ ೫೭೭೪ ಕಿಲೋಮೀಟರುಗಳು ಮತ್ತು ದಕ್ಷಿಣ ಮಧ್ಯ ರೈಲ್ವೆ ೬೦೮೪ ಕಿಲೋಮೀಟರಗಳು. ಈ ಹೊಸ ರೈಲ್ವೆ ವಲಯವು ಕೇಂದ್ರಾಧೀನ ಆಡಳಿತ ಪ್ರದೇಶವಾದ ಗೋವಾದಲ್ಲಿಯಲ್ಲದೆ ಮೈಸೂರು, ಆಂಧ್ರಪ್ರದೇಶ ಮತ್ತು ಮಹಾರಾಷ್ಟ್ರ ರಾಜ್ಯಗಳಲ್ಲಿ ಹಾಯ್ದು ಹೋಗುವದು. ಹೊಸ ವಲಯವು ೫೦ದಶಲಕ್ಷ ಜನರ ಬೇಡಿಗೆಯನ್ನು ಪೂರೈಸುವದು ಮತ್ತು ದಕ್ಷಿಣೋತ್ತರ ಪ್ರಯಾಣದ ಜನಕ್ಕೆ ಸೌಕರ್ಯ ನೀಡಿ, ದೇಶದ ಪೂರ್ವ—ಪಶ್ಚಿಮ ತೀರಗಳನ್ನು ಒಂದುಗೂಡಿಸುವ ಸಂಪರ್ಕ ಮಾರ್ಗವಾಗುವದು.

ಅಮೇರಿಕೆಯ ವಿದೇಶ ಮಂತ್ರಿ, ... ಮಾತುಗಾರರಾಗಿದ್ದಾರೆ, ... ವಿದೇಶಿ...

ಈ ಹೊಸ ವಲಯದ ಒಂದು ಮುಖ್ಯ ಕಾರ್ಯವೆಂದರೆ ಆಂಧ್ರಪ್ರದೇಶದ ಕಡಲು ತೀರದ ಜಿಲ್ಲೆಗಳಿಗೆ ಸಂಪರ್ಕ ಸೌಕರ್ಯವನ್ನು ಒದಗಿಸುವದೇ ಆಗಿದೆ. ಪಲವತ್ತತೆಗೆ ಹೆಸರಾದ ಸಿರ್ಕಾರ ಜಿಲ್ಲೆಗಳು ದೇಶದಲ್ಲಿಯೇ ಅತ್ಯುತ್ತಮ ಭತ್ತದ ಕೆಲವು ಜಾತಿಗಳನ್ನು ಬೆಳೆಯುತ್ತಿವೆ. ಜೊತೆಗೆ ತಂಬಾಕು, ಕಬ್ಬು, ಮೆಣಸು ಮತ್ತು ಮಾವು, ಬಾಳೆಹಣ್ಣುಗಳನ್ನೂ ಬೆಳೆಯುತ್ತಿವೆ ಹೊಸವಲಯದ ಕಡೆಯಲ್ಲಿ ಬರುವ ಸೀಮೆಯು ಕಲ್ಲಿದ್ದಲು, ಕಬ್ಬಿಣ ಅದಿರು ಮ್ಯಾಂಗನೀಸ್ ಮತ್ತು ಸುಣ್ಣದ ಹರಳು ಮುಂತಾದ ಖನಿಜಶ್ರೀಯಿಂದ ತುಂಬಿದೆ. ಅಲ್ಲದೆ ಈ ಪ್ರದೇಶಗಳಲ್ಲಿ, ವಿದ್ಯುತ್ ಉಪಕರಣಗಳು, ಹತ್ತಿಗಿರಣಿಗಳು, ಯಂತ್ರಗಳು, ಲೋಹದ ಕೆಲಸಗಳು ಗೊಬ್ಬರ, ಮೃತ್ತಿಕೆ ಸಾಮಾನು, ರಾಸಾಯನಿಕಗಳು, ವೈಜ್ಞಾನಿಕ ಉಪಕರಣಗಳು, ಸಿಮೆಂಟ್, ವನಸ್ಪತಿ ತೈಲ, ನುತ್ಪಾದನದ ವಸ್ತುಗಳ ಕಾರ್ಖಾನೆಗಳು ತಲೆದೋರಿಕೊಂಡಿವೆ. ವಲಯದಲ್ಲಿ ಸರಕುಗಳ ಸಾಗಾಟವು ದಿನವೊಂದಕ್ಕೆ ಮೂರು ಸಾವಿರ ವ್ಯಾಗನ್ನುಗಳಷ್ಟು ಆಗಬಹುದೆಂದು ನಿರೀಕ್ಷಿಸಲಾಗಿದೆ.

ರೈಲ್ವೆಗಳ ಮುಖ್ಯ ಕೆಲಸವು ಉದ್ಯಮ ಮತ್ತು ಕೃಷಿ ರಂಗದ ಸಾಧ್ಯತೆಗಳ ಮೇಲೆ ಅವಲಂಬಿಸಿದೆ ಎಂಬುದು ಒಪ್ಪತಕ್ಕ ಮಾತಾಗಿದ್ದರೂ, ರೈಲ್ವೆಗಳು ಕಾರ್ಯ ಮಾಡುವ ಸ್ಥಳಗಳ ಐತಿಹಾಸಿಕ ಮಹತ್ವವನ್ನೂ, ಸಾಂಸ್ಕೃತಿಕ ಮಹತ್ವವನ್ನೂ ಮರೆಯುವಂತಿಲ್ಲ. ಮೂಸಿನದಿಯ ದಡದಲ್ಲಿಯ ಅವಳಿ ಪಟ್ಟಣಗಳು ಹೈದರಾಬಾದ್—ಸಿಕಂದರಾಬಾದ್ ತಮ್ಮ ಚಾರ್ ಮಿನಾರ್ ಮತ್ತು ಸಾಲಾರ ಜಂಗ ವಸ್ತುಸಂಗ್ರಹಾಲಯಗಳಿಂದ ಲೋಕ ವಿಖ್ಯಾತವಾಗಿವೆ. ವಲಯದ ಒಂದು ದಿಕ್ಕಿಗೆ ದ್ವಾದಶ ಜ್ಯೋತಿರ್ಲಿಂಗಗಳಲ್ಲಿ ಒಂದಾದ (ಪರ್ಲ್ಯಾಂ ವೈಜನಾಥಂಚಿ) ವೈದ್ಯನಾಥನು ಪೂರ್ಣಾ ಸ್ಟೇಷನ್ನಿಗೆ ಸಮೀಪದಲ್ಲಿಯೇ ವಾಸವಾಗಿದ್ದಾನೆ. ನಾಂ

ಟೆಕ್ಸಾಸ್‌ನಲ್ಲಿ ಅಧ್ಯಕ್ಷ ಜಾನ್ಸನ್, ರಾಷ್ಟ್ರೀಯ ಗ್ರಾಮೀಣ ಯುವಜನ ಸಂಘದವರಿಂದ ಕಾಣಿಕೆಯನ್ನು ಸ್ವೀಕರಿಸುತ್ತಿರುವ ದೃಶ್ಯ.

...ಳೋ ಭಾರಿ ಯೋಚನೆಯಲ್ಲಿ
ವಿಯುತನಾವುವೆ?
...ಯೆ?

...ದೇಶದಲ್ಲಿ ಸೀಬಿರ ಬಹುದೊಡ್ಡ ಗುರು ದ್ವಾರವಿದೆ. ನಾಗಾರ್ಜುನ ಕೊಂಡ, ಎಲ್ಲೋರ, ಅಜಂತಾ, ಹಂಪೆ, ಬಾದಾಮಿ, ಬಿಜಾಪುರದ ಗೋಲಗುಮ್ಮಟ— ಈ ರೀತಿ ಅಸಂಖ್ಯ ಐತಿಹಾಸಿಕ ಕಲಾತ್ಮಕ ಸ್ಥಳಗಳು ಈ ವಲಯದ ಮಾರ್ಗದಲ್ಲಿ ಪ್ರಯಾಣಿಕರನ್ನು ಕರೆಯುತ್ತವೆ.

ಹೊಸ ಹಾದಿಯಲ್ಲಿ

ದಕ್ಷಿಣ ಮಧ್ಯ ರೇಲ್ವೆಯು ಕ್ರಮಿಸುವ ಮಾರ್ಗವು ದೇಶದ ಇತರ ಭಾಗದಂತೆ—ಆರ್ಥಿಕ ಅಭಿವೃದ್ಧಿಯ ಚಟುವಟಿಕೆಗಳೊಂದಿಗೆ ನಿನದಿಸುತ್ತಿದೆ. ಈ ಪ್ರದೇಶಕ್ಕೆ ಬೇಕಾಗಿರುವ ಸಾಗಾಟ ಬೇಡಿಕೆಯನ್ನು ಲಕ್ಷ್ಯದಲ್ಲಿಟ್ಟುಕೊಂಡು ರೈಲ್ವೆಗಳ ಸಾಗಾಟ ಸೌಕರ್ಯವನ್ನು ವರ್ಧಿಸಲು, ನವೀಕರಿಸಲು ಯತ್ನಿಸಲಾಗುತ್ತಿದೆ. ಗೋದಾವರೀ ನದಿಯ ಮೇಲೆ ಸೇತುವೆಯನ್ನು ಕಟ್ಟಲಾಗುತ್ತಿದೆ. ಈ ಸೇತುವೆ ಪ್ರದೇಶದ ಮೂರು ಕಿಲೋಮೀಟರ್‌ಗಳನ್ನು ಬಿಟ್ಟರೆ, ಆಗ್ನೇಯದಿಂದ ದಕ್ಷಿಣಕ್ಕೆ ಇರುವ ವಾಲ್ಟೇರ— ಗುಡೂರ ರೈಲ್ವೆ ಮಾರ್ಗಗಳಲ್ಲಿ ಜೋಡು ಲೈನುಗಳನ್ನು ಜೋಡಿಸಲಾಗಿದೆ. ವಿಜಯವಾಡಾ ಮತ್ತು ದೊರ್ನಕಲ್ ಮತ್ತು ಕಾಝಿಪೇಟ ಮತ್ತು ಬಲಿಹರ್ಷದ ಕೆಲವು ಭಾಗಗಳಲ್ಲಿ, ಜೋಡು ಲೈನುಗಳನ್ನು ಜೋಡಿಸುವ ಕೆಲಸ ಸಾಗಿದೆ.

ವಿಜಯವಾಡಾ ಸ್ಟೇಶನನ್ನು ಆಧುನಿಕಗೊಳಿಸಲಾಗುತ್ತಿದೆ. ಅದರಂತೆ ಕಾಝಿಪೇಟ್ ಮತ್ತು ಸಿಕಂದರಾಬಾದ್ ನಿಲ್ದಾಣಗಳನ್ನು ಸರ್ವರೀತಿಯಿಂದ ಹೊಸ ರೂಪಕ್ಕೆ ತರಲು ಕೆಲಸ ಕೈಕೊಳ್ಳಲಾಗಿವೆ. ಪೂನಾ—ಮಿರಜುಗಳ ನಡುವಿನ ೨೫೮ ಕಿಲೋಮೀಟರ ಮಾರ್ಗವನ್ನು ಬ್ರಾಡ್‌ಗೇಜಿಗೆ ಪರಿವರ್ತಿಸಲು ಕಾರ್ಯ ನಡೆದಿದೆ

ಹೊಸ ರೈಲ್ವೆ ವಲಯದ ಉದಯವು ರಾಷ್ಟ್ರಪಿತನ ಜನ್ಮ ದಿನದಂದು ನಡೆಯುತ್ತಿದ್ದು ಅದು ರೈಲ್ವೆಯ ಹದಿಮೂರು ಲಕ್ಷ ಕೆಲಸಗಾರರು ದೇಶ ಸೇವೆಗೆ ತಮ್ಮನ್ನು ಪುನಃ ಅರ್ಪಿಸಿಕೊಳ್ಳುವ ದಿನವಾಗಿದೆ. ನಮ್ಮ ಮುಂದಿರುವ ಸಮಸ್ಯೆಗಳು ಬೃಹದಾಕಾರದವು. ಆದರೆ ರೈಲ್ವೆ ಕೆಲಸಗಾರರು ಸಮಸ್ಯೆಗಳನ್ನ ಆತ್ಮವಿಶ್ವಾಸದಿಂದ ಎದುರಿಸಬಲ್ಲರು. ಯುದ್ಧಕಾಲದಲ್ಲಿಯೂ ಶಾಂತಿಕಾಲದಲ್ಲಿಯೂ ದೇಶವು ನೀಡಿದ ಕರೆಗೆ ರೈಲ್ವೆಯಲ್ಲಿ ದುಡಿವ ಕೆಲಸಗಾರರು 'ಓಗೊಟ್ಟಿದ್ದಾರೆ, ಶ್ರಮಿಸಿದ್ದಾರೆ, ಇಷ್ಟೇ ಅಲ್ಲ, ದೇಶವು ಇನ್ನು ಮುಂದೆ ಹೊಸ ಕರೆ ನೀಡಿದಾಗಲೂ ಅದೇ ರೀತಿ ಸಂದರ್ಭಕ್ಕೆ ಉಚಿತವಾಗಿ ಮೇಲೆದ್ದು ಕಾರ್ಯ ತತ್ಪರರಾಗುವಲ್ಲಿ ಸಂದೇಹವಿಲ್ಲ

ನಮ್ಮ ಸಾಧನೆ

ಗಿಂಡಿಯ ಗಡಿಯಾರ

ಬರೆದವರು. ಶ್ರೀ ವಿ. ಎಂ ಚೆರಿಯನ್

"ಗಡಿಯಾರವನ್ನು ಎಂದಾದರೂ ಬಿಚ್ಚಿ ನೋಡಿದ್ದೀರಾ?"

"ಹೂಂ"

"ಬಿಚ್ಚಿದ ಗಡಿಯಾರವನ್ನು ಮತ್ತೆ ಜೋಡಿಸಿದ್ದೀರಾ?"

"ಇಲ್ಲ"

"ಹಾಗಾದರೆ ಈ ಕಾರ್ಯವನ್ನು ಗಮನಿಸಿ."

—ಉದ್ದನೆಯ ಮೇಜು; ಅದರ ಎರಡು ಕಡೆಗಳಲ್ಲಿ ನಾನಾ ಕೆಲಸಗಳನ್ನು ಮಾಡುತ್ತಿದ್ದ ಹೆಂಗಸರ ಸಾಲು. ಅವರ ಕೆಲಸಗಳನ್ನು ಗಮನಿಸುವಂತೆ ನನಗೆ ಹೇಳಿದವರು ನಮ್ಮನ್ನು ಕಾರ್ಖಾನೆಯಲ್ಲಿ ಸುತ್ತಾಡಿಸಿದ ಅಮೇರಿಕದ ಅಧಿಕಾರಿಯೊಬ್ಬರು.

ಮೇಜಿನ ಮೊದಲಲ್ಲಿ ಕುಳಿತ ಮಹಿಳೆ (ಅಲಾರಂ) ಗಡಿಯಾರದ ಚೌಕಟ್ಟನ್ನು ಎಡಗೈಯಲ್ಲಿ ಹಿಡಿದು, ಬಲಗೈಯಿಂದ ಗಡಿಯಾರದ ಭಾಗಗಳನ್ನು ಮೇಜಿನಿಂದ ಆರಿಸಿ ಚೌಕಟ್ಟಿನಲ್ಲಿಟ್ಟು ತಿರುಪು ಮೊಳೆ ತಿರುಗಿಸುತ್ತಿದ್ದರು. ತಿರುಗಿಸುವ ಸ್ಕ್ರೂಡ್ರೈವರ್ ಸ್ವಯಂ ಚಾಲಿತವಾಗಿದ್ದು ಆಕೆಯ ಮುಂಬದಿಯಲ್ಲಿ ನೇತಾಡುತ್ತಿತ್ತು.

ಅನಂತರ ಆ ಚೌಕಟ್ಟು ಒಬ್ಬರ ಕೈಯಿಂದ ಇನ್ನೊಬ್ಬರ ಕೈಗೆ ಹೋದಂತೆ ಇತರ ಭಾಗಗಳು, ಡಯಲ್ ಹಾಗೂ ಹೊರ ಕವಚಗಳು ಸೇರುತ್ತ ಬಂದವು. ಕಡೆಗೆ ಆಕರ್ಷಕವಾದ ವೆಸ್ಟ್ ಕ್ಲಾಕ್ಸ್ ಟೈಂಪೀಸ್ ರೂಪ ತಾಳಿ ಮೇಜನ್ನು ಅಲಂಕರಿಸಿತು

ನಾವು ನಿಂತಿದ್ದ ಸ್ಥಳ ಮದರಾಸಿನ ಗಿಂಡಿ ಕೈಗಾರಿಕಾ ಕ್ಷೇತ್ರದ ಟೈಮ್ ಏಯ್ಡ್ಸ್ ಇಂಡಿಯಾ (ಪ್ರೈವೇಟ್) ಲಿಮಿಟೆಡ್ ಸಂಸ್ಥೆಯ ಜೋಡಣಾ ಕೊಠಡಿ ನ್ಯೂಯಾರ್ಕಿನ ಜನರಲ್ ಟೈಂ ಕಾರ್ಪೋರೇಷನ್ನಿನ ತಾಂತ್ರಿಕ ಸಹಾಯ ಪಡೆದ ಈ ಸಂಸ್ಥೆ ಪ್ರಕೃತ ತಿಂಗಳೊಂದಕ್ಕೆ ೫೦೦೦ ಗಡಿಯಾರಗಳನ್ನು ತಯಾರಿಸುತ್ತಿದೆ.

ಈ ಸಣ್ಣ ಕಾರ್ಖಾನೆಯಲ್ಲಿ ನಡೆಯುತ್ತಿರುವ ಕುಶಲ ಕಾರ್ಯದಲ್ಲಿ ಹೆಮ್ಮೆಯನ್ನು ವ್ಯಕ್ತಪಡಿಸುವ ಮದರಾಸ್ ಸಂಸ್ಥೆಯಲ್ಲಿ ನಿವಾಸಿ ಎಂಜನಿಯರ್ ಆಗಿರುವ ನೆಲ್ಸನ್ ಐ ಹಾಯ್ಟ್ ಅವರು ಪ್ರಪಂಚ ಪ್ರಖ್ಯಾತವಾದ ಬಿಗ್ ಬೆನ್ ಹಾಗೂ ವೆಸ್ಟ್ ಕ್ಲಾಕ್ಸ್ ಅಲಾರಂ ಹಾಗೂ ಗೋಡೆ ಗಡಿಯಾರಗಳನ್ನು ತಯಾರಿಸುವ ಜನರಲ್ ಟೈಂ ಸಂಸ್ಥೆಯ ಬಳಗಕ್ಕೆ ಸೇರಿದವರು.

ಹಾಯ್ಟ್ ಅವರು ಕಳೆದ ಮೂರು ವರ್ಷಗಳಿಂದ ಮದರಾಸಿನಲ್ಲಿದ್ದಾರೆ. ಕಾರ್ಖಾನೆಯ ಉತ್ಪಾದನೆ ಹಾಗೂ ತರಬೇತಿಯ ಕಾರ್ಯಕ್ರಮದಲ್ಲಿ ಮೊದಲಿನಿಂದಲೂ ನೆರವು ನೀಡುತ್ತಿದ್ದು ಸ್ಥಳೀಯ ಜನರು ಕಾಲಾನುಕ್ರಮದಲ್ಲಿ ಸ್ವತಂತ್ರವಾಗಿ ಉತ್ಪಾದನೆಯನ್ನು ಮುಂದುವರಿಸಿಕೊಂಡು ಹೋಗಲಾಗುವಂತೆ ನೆರವಾಗುತ್ತಿದ್ದಾರೆ.

"ಆರಂಭದಲ್ಲಿ ಗಡಿಯಾರದ ಹೊರ ಭಾಗಗಳನ್ನು ಇಲ್ಲಿಯೇ ತಯಾರಿಸಿ, ಒಳ ಭಾಗಗಳನ್ನು ಮಾತ್ರವೇ ಆಮದು ಮಾಡುತ್ತಿದ್ದೆವು. ಈಗ ನಾಲ್ಕನೆಯ ಹಾಗೂ ಕೊನೆಯ ಪಟ್ಟಿಯಲ್ಲಿ ಹೊರಗಿನ ಹಾಗೂ ಒಳಗಿನ ಭಾಗಗಳೆಲ್ಲವನ್ನೂ ಇಲ್ಲಿಯೇ ತಯಾರಿಸುತ್ತಿದ್ದೇವೆ. ಭಾರತದಲ್ಲಿ ಲಾಭದಾಯಕವಾಗಿ ತಯಾರಿಸಲು ಸಾಧ್ಯವಿಲ್ಲದ ನಾಲ್ಕು ಭಾಗಗಳನ್ನು ಮಾತ್ರವೇ ಆಮದು ಮಾಡುತ್ತಿದ್ದೇವೆ" ಎಂದು ಹಾಯ್ಟ್ ತಿಳಿಸಿದರು ಈ ಕೊನೆಯ ಪಟ್ಟದಲ್ಲಿ ಗಡಿಯಾರದ ಒಟ್ಟು ವೆಚ್ಚದಲ್ಲಿ ಶೇಕಡ ೯೦ ರಿಂದ ೯೫ ರಷ್ಟು ಸ್ಥಳೀಯವಾದುದು ಎಂದೂ ಅವರು ಹೇಳಿದರು

ಹಾಯ್ಟ್ ಅವರು ಅರ್ಧ ಡಜನ್ ಭಾರತೀಯ ಎಂಜಿನಿಯರುಗಳಿಗೆ ತರಬೇತಿ ನೀಡುತ್ತಿದ್ದಾರೆ. ಗಡಿಯಾರಗಳ ತಯಾರಿಕೆಯ ನಾನಾ ಸೂತ್ರಗಳು ಹಾಗೂ ತಂತ್ರಗಳನ್ನು ಅವರಿಗೆ ಪರಿಚಯ ಮಾಡಿಕೊಡುತ್ತಿದ್ದಾರೆ. ಅಂದರೆ ಇನ್ನು ಮುಂದೆ ಕಾಣಿಸಿಕೊಳ್ಳ ಬಹುದಾದ ಸಮಸ್ಯೆಗಳನ್ನು ಅವರು ಸ್ವತಂತ್ರವಾಗಿ ಬಿಡಿಸಲು ಸಾಧ್ಯವಾಗಬೇಕೆಂಬುದು ಹಾಯ್ಟ್ ಅವರ ಬಯಕೆ.

ಗುಣಮಟ್ಟದ ವಿಷಯದಲ್ಲಿ ಸದಾ ಗಮನ ಹೊಂದಿದ್ದ ಹಾಯ್ಟ್ ಅವರು ಮದರಾಸಿನಲ್ಲಿ ತಯಾರಾಗುವ ಗಡಿಯಾರ ಪ್ರಪಂಚದ ಇತರ ಯಾವುದೇ ಎಡೆಯಲ್ಲಿ ತಯಾರಾಗುವ ಇದೇ ಬ್ರಾಂಡಿನ ಗಡಿಯಾರದ ಗುಣ ಮಟ್ಟಕ್ಕೆ ಯಾವ ರೀತಿಯಲ್ಲಿ ಕಳಪೆಯಲ್ಲ, ಎನ್ನುತ್ತಾರೆ. (ಜನರಲ್ ಟೈಂ ಸಂಸ್ಥೆಯವರು ಅಮೇರಿಕದಲ್ಲಿ ಒಕ್ಕನಡದಲ್ಲಿ ಸ್ಕಾಟ್ಲೆಂಡ್, ಹಾಂಕಾಂಗ್, ಇಟಲಿ, ಸ್ಪೈನ್, ಐರ್ಲೆಂಡ್, ಬ್ರಜಿಲ್ ಹಾಗೂ ಮೆಕ್ಸಿಕೋಗಳಲ್ಲಿ ಒಂದೊಂದು ಕಾರ್ಖಾನೆಗಳನ್ನು ಹೊಂದಿದ್ದಾರೆ)

ಮದರಾಸಿನಲ್ಲಿ ತಯಾರಾಗುವ ವೆಸ್ಟ್ ಕ್ಲಾಕ್ಸ್‌ಗಳಿಗೆ ಬೇಡಿಕೆ ತಯಾರಿಕೆಯನ್ನು ಬಹುವಾಗಿ ಮೀರಿಸುತ್ತದೆ. ಇಲ್ಲಿಯ ಕಾರ್ಖಾನೆಯಲ್ಲಿ ಮೂರು ಬಗೆಯ ಗಡಿಯಾರಗಳು ತಯಾರಾಗುತ್ತಿವೆ. ಇನ್ನೂ ಅನೇಕ ವಿದವಾದ ತಯಾರಿಕೆಗಳಿಗೆ ಯೋಜನೆ ಹಾಕಲಾಗಿದೆ.

ಹಾಯ್ಟ್ ಅವರು ಏಷದಲ್ಲಿ ಬಹುವಾಗಿ ಫಿಲಿಪ್ಪೈನ್ಸನಲ್ಲಿ—ಅಲ್ಲಿ ಜನರಲ್ ಟೈಂ ಸಂಸ್ಥೆಯ ಸಣ್ಣ ಕಾರ್ಖಾನೆಯೊಂದನ್ನ ಸ್ಥಾಪಿಸಲು ೧೭ ವರ್ಷಗಳ ಕಾಲ ವಾಸಿಸಿದ್ದಾರೆ. ಏಷ್ಯದ ಅನುಭವದ ಫಲವಾಗಿ ಮದರಾಸಿಗೆ ಪೂರ್ಣವಾಗಿ ಸ್ವಯಂ ಚಾಲಿತವಾದ ಕಾರ್ಖಾನೆ ಸರಿಯಲ್ಲವೆಂಬುದನ್ನು ಅರಿತ ಅವರು, ಯಂತ್ರಗಳು ಹಾಗೂ ಮಾನವ ಕೆಲಸಗಾರರ ನಡುವೆ ಸಮತೋಲವನ್ನು ಸಾಧಿಸಿದ್ದಾರೆ.

ಟೈಂ ಏಯ್ಡ್ಸ್ ಕಾರ್ಖಾನೆಗೆ ಕೆಲವು ಯಂತ್ರಗಳನ್ನು ಭಾರತದ ರಾಷ್ಟ್ರೀಯ ಸಣ್ಣ ಕೈಗಾರಿಕೆಗಳ ಕಾರ್ಪೋರೇಷನ್ನಿನಿಂದ ಪಡೆಯಲಾಯಿತು. ಇನ್ನು ಕೆಲವನ್ನು ಅಮೇರಿಕದ ಅಭಿವೃದ್ಧಿ ಸಾಲದ ನಿಧಿಯ ಹಣದ ನೆರವಿನಿಂದ ಪಡೆಯಲಾಯಿತು.

ಬಹು ಜಟಿಲವಾದ ಜೋಡಣೆಯ ಕಾರ್ಯಕ್ಕೆ ಮಹಿಳಾ ಕೆಲಸಗಾರರನ್ನು ನೇಮಿಸಿ ಕೊಂಡಿರುವ ವಿಷಯವನ್ನು ಪ್ರಸ್ತಾಪಿಸುತ್ತ, ಹಾಯ್ಟ್ ಅವರು, "ನಮ್ಮಲ್ಲಿ ಸೇಕಡ ೫೦ ಮಂದಿ ಮಹಿಳೆಯರು ಇ

(ಹದಿಮೂರನೇ ಪುಟ ನೋಡಿರಿ)



ಕ್ರಾಯಿಗ್ ಬ್ರೀಡ್‌ಲವ್ ೨೫ ವರ್ಷದವನು. ತಾಸಿಗೆ ೬೦೦ ಮೈಲು ವೇಗವಾಗಿ ಓಡಿಸಿ, ನೆಲಯಾನದಲ್ಲಿ ಅದ್ವಿತೀಯ ವಾಹನ ಚಾಲಕನೆನಿಸಿದನು. ಮೇಲೆ ಆತನನ್ನು ಕೆಳಗಡೆ ಜೆಟ್ ಶಕ್ತಿಯ ವಾಹನವನ್ನೂ ನೋಡಬಹುದು.

ಕೃತಿ ಪರಿಚಯ

ವಿಮರ್ಶೆಗಾಗಿ ಪುಸ್ತಕಗಳನ್ನು ಕಳಿಸುವವರು ದಯಮಾಡಿ ಎರಡೆರಡು ಪ್ರತಿಗಳನ್ನು ಕಳಿಸಬೇಕಾಗಿ ವಿನಂತಿ. ಸಂ. ನ.

ವಂಶವೃಕ್ಷ:

ಲೇಖಕ: ಶ್ರೀ ಎಸ್. ಎಲ್. ಬೈರಪ್ಪ.

ಪ್ರಕಾಶಕ: ಸಾಹಿತ್ಯ ಭಂಡಾರ, ಹುಬ್ಬಳ್ಳಿ.

ಪುಟಗಳು: ೪೯೭ + ೧೭.

ಬೆಲೆ: ಸಾದಾ ಪ್ರತಿ ರೂ. ೮—೦೦

ಕೆಲಿಕೋ ಪ್ರತಿ ರೂ. ೧೦—೦೦

ಪ್ರಾಚೀನ ಸಂಸ್ಕೃತಿಯನ್ನು ಕಳೆದುಕೊಳ್ಳುತ್ತ, ಅರ್ವಾಚೀನವನ್ನು ಸ್ವೀಕರಿಸುವಲ್ಲಿ ಹಿಂಜರಿಯುತ್ತ ಕವಲು ದಾರಿಯಲ್ಲಿ ನಿಂತಿರುವ ನಮ್ಮ ಸಮಾಜದ ಒಂದೊಂದು ಚಿತ್ರವನ್ನ ಕೆಲವೊಂದು ಜೀವಂತ ಅಥವಾ ಕಾಲ್ಪನಿಕ ವ್ಯಕ್ತಿಗಳನ್ನು ಚಿತ್ರಿಸುವ ಮೂಲಕ ಹೊಸ ಬಗೆಯ ಸಾಹಿತ್ಯ ನಿರ್ಮಾಣದಲ್ಲಿ ಶ್ರೀ ಬೈರಪ್ಪನವರದು ಎತ್ತಿದ ಕೈ. ತಮ್ಮ 'ಧರ್ಮಶ್ರೀ' ಮತ್ತು 'ದೂರ ಸರಿದರು' ಕಾದಂಬರಿಗಳಲ್ಲಿ ಒಂದೊಂದು ಬಗೆಯ ಚಿತ್ರ ಮೂಡಿಸಿದ್ದರೆ, 'ವಂಶ ವೃಕ್ಷ'ದ ಪಾತ್ರಗಳು ಬೇರೆಯೇ ರೀತಿಯಾಗಿವೆ.

ಶ್ರೀನಿವಾಸ ಶ್ರೋತ್ರಿಯವರನ್ನೇ ಕೇಂದ್ರ ವ್ಯಕ್ತಿಯಾಗಿಟ್ಟುಕೊಂಡ ಈ ಕಾದಂಬರಿಯು ಅವರ ಸಾತ್ವಿಕತೆಯನ್ನು ಸದ್ಗುಣವನ್ನು ಸ್ಪಷ್ಟವಾಗಿ ಮೂಡಿಸುತ್ತದೆ. ತಮ್ಮ ವಿಧವೆ ಸೊಸೆ ಕಾತ್ಯಾಯಿನಿಯ ಅಂತರ್ವೇದನೆಯನ್ನು ಅರಿತುಕೊಂಡ ಅವರ ಹೃದಯ ತನ್ನ ಭವಿಷ್ಯ ನಿರ್ಧಾರ ಮಾಡುವ ಅಧಿಕಾರವನ್ನು ಆಕೆಗೇ ಬಿಟ್ಟುಬಿಡುವ ಉದಾರತೆ, ಸರಳತೆ, ನಿರಾಡಂಬರತೆ, ಅಕ್ರೋಧತೆ, ನಿರ್ಲೋಭತೆ, ಸಂಯಮ ಶಕ್ತಿ ಮೊದಲಾದ ಉತ್ತಮೋತ್ತಮ ಗುಣಗಳ ಕೇಂದ್ರೀಭೂತ ವ್ಯಕ್ತಿ ಅವರು—ಸದಾಚಾರ ನಿರತರಾಗಿ ತಪಸ್ವೀ ಜೀವನವನ್ನು ಬದುಕಿ ಬಂದ ಅವರಿಗೆ ತಮ್ಮ ಜನ್ಮ ವೃತ್ತಾಂತದ ರಹಸ್ಯ ತಿಳಿದಾಗ ಕುಸಿದು ಬಿದ್ದರು— ಯಾರ ವಂಶದ ವೃಕ್ಷ ತಾನು? ಎಂದು ತನ್ನ ತಾನೇ ಪ್ರಶ್ನಿಸಿಕೊಂಡರು. ಮುಂದೆ, ತನ್ನದಲ್ಲದ ಸಂಪತ್ತನ್ನು ಸದ್ವಿನಿಯೋಗ ಮಾಡಿ ಯಾತ್ರೆ ಹೊರಟರು—ಸನ್ಯಾಸಿಯಾಗಿ. ಕಾದಂಬರಿಯ ಕಥೆಯಲ್ಲಿ ಶ್ರೋತ್ರಿಯರು ಮಾನವ ದೌರ್ಬಲ್ಯಗಳಿಗೆ ಹಲವಾರು ಬಾರಿ ಒಳಗಾಗುವ ಪ್ರಮೇಯ ಬಂದರೂ ಅವುಗಳಿಂದ ಸೋಲುಣ್ಣಲಿಲ್ಲ —ಆದರ್ಶ ವ್ಯಕ್ತಿಯಾಗಿಯೇ ಉಳಿದು ಬಂದಿದ್ದಾರೆ—ಅವರ ಮಾನಸಿಕ ದೈಹಿಕ ದೃಢತೆ ಎಲ್ಲರಲ್ಲಿಯೂ ಮೂಡಿ ಬರುವುದು ಸಾಧ್ಯವಿಲ್ಲ—ಇದನ್ನು ಅವರೇ ಬಲ್ಲರು

ಡಾ। ಸದಾಶಿವರಾಯರು ಸಂಶೋಧನೆಯಲ್ಲೇ ಮುಳುಗಿ ತಮ್ಮನ್ನು ಕುಟುಂಬವನ್ನೂ—ಎಲ್ಲವನ್ನೂ ಮರೆತವರು—ಸಿಂಹಳದ ಕರುಣಾರತ್ನೆಯನ್ನು ಅವರು ತಮ್ಮ ಕಾರ್ಯದಲ್ಲಿ ನೆರವಾಗಲೆಂದೇ ಎರಡನೆ ವಿವಾಹವಾದವರು. ವೈಯಕ್ತಿಕ ಯಶಸಾಧನೆಯಲ್ಲಿ ನಿರಪರಾಧಿ ಪತ್ನಿ ನಾಗಲಕ್ಷ್ಮಿಯ ಮೌನ ಕೊರಗಿಗೆ ಕಾರಣರಾದವರು—ತನ್ನ ಕಾರ್ಯ ಮುಗಿದ ಕೂಡಲೇ ಅವರು ಅಸುನೀಗಿದುದನ್ನು ಕಾಣುವಾಗ, ಸಂಶೋಧನಾ ಕಾರ್ಯಕ್ಕಾಗಿಯೇ ಅವರು ಆತ್ಮಬಲ ಮತ್ತು ಕರುಣಾರತ್ನೆಯು ಹುಟ್ಟಿಸಿದ ಆತ್ಮ ವಿಶ್ವಾಸಗಳಿಂದಾಗಿ ಜೀವ ಹಿಡಿದಿದ್ದರೆನ್ನ ಬಹುದು. ಅವರ ತಮ್ಮ ರಾಜ ಶ್ರೋತ್ರಿಯರ ಸೊಸೆ ವಿಧವೆ ಕಾತ್ಯಾಯನಿಯನ್ನು ವರಿಸಿದ ಧೀರ—ಆದರೆ, ಅದರಿಂದ ಆತನಿಗಾಗಲೀ ಆಕೆಗಾಗಲೀ ಸುಖದೊರೆಯಲಿಲ್ಲ.

ಸ್ತ್ರೀ ಪಾತ್ರಗಳಲ್ಲಿ ನಾಗಲಕ್ಷ್ಮಿಯು ಭಾರತೀಯ ಮಹಿಳೆಯ ಪ್ರತೀಕವಾಗಿ ರೂಪುಗೊಂಡಿದ್ದಾಳೆ. ತನ್ನ ಪತಿ ಯಾರನ್ನ ಬೇಕಾದರೂ ಕಟ್ಟಿಕೊಳ್ಳಲಿ, (ಯಾಕೆಂದು ಆಕೆಗೆ ಹೇಗೆ ಗೊತ್ತಾಗ ಬೇಕು?) ತನಗೆ ಅವರ ಪಾದ ಸೇವೆಯ ಅವಕಾಶ ದೊರೆತರೆ ಸಾಕೆನ್ನುವ ಪತಿವ್ರತೆ. ಕಾದಂಬರಿಕಾರರು ಹೀಗೆ ಸೇವೆ ಮಾಡುವ ಕೆಲವೊಂದು ಸನ್ನಿವೇಶಗಳನ್ನು ಒದಗಿಸಿದ್ದಾರೆ; ಸದಾಶಿವ ರಾಯರಲ್ಲಿ ಮಡದಿಯ ಮೇಲೆ ಮೂಡಿದ್ದ ಅನುಕಂಪದ ಪ್ರವಾಹದ ಕಟ್ಟೆ ಒಡೆದು ಒಂದಾಗ ಕೂಡಲು ನೆರೆತ್ತು ಮಾತ್ರವಲ್ಲ, ಆ ಪ್ರವಾಹದೊಡನೆಯೇ ಅವರ ಪ್ರಾಣವೂ ಕೊಚ್ಚಿ ಹೋಯಿತು. ಒಂದಲ್ಲ ಎರಡು ಸ್ತ್ರೀ ಜೀವಗಳಿಗೆ ಆಘಾತವುಂಟು ಮಾಡಿತು.

ಕರುಣರತ್ನೆ ಯೌವನದಲ್ಲಿ ಹುದಿಮರುಲ್ಲಿ ಆಕಾಂಕ್ಷೆ—ಭವಿಷ್ಯವನ್ನು ಮರೆಯಲು ಸಮರ್ಥಳಾದಳು. ಆದರೆ, ತನ್ನ ಭವಿಷ್ಯ ಶೂನ್ಯವಾದಾಗ ಆಕೆ ಚಡಪಡಿಸದೆ ಏನು ಮಾಡಬೇಕು? ಆದರ್ಶ—ಉದ್ದೇಶಗಳಿಗಾಗಿ ಡಾ। ರಾಯರ ಪತ್ನಿ ಜೀವಂತವಿದ್ದರೂ ದ್ವಿತೀಯ ವಿವಾಹಿತ ಮಡದಿಯಾಗಲು ಒಪ್ಪಿದ ಆಕೆ, ಒಬ್ಬ ಗಂಡಸು ಎರಡು ಹೆಂಡಂದಿರೊಡನೆ ಸರಿಯಾಗಿ ಬದುಕಲಾರನು ಎಂಬುದನ್ನು ನಂಬಿದವಳು. ಆಕೆಗೆ ನಾಗರತ್ನೆಯ ಮೇಲೆ ಅನುಕಂಪವಿಲ್ಲವೆಂದಲ್ಲ; ಆಧುನಿಕತೆಯ ಪ್ರಭಾವ ಹೆಚ್ಚು ಬಿದ್ದಿದೆ, ಅಷ್ಟೆ. ಆದರೆ, ಸ್ತ್ರೀ ಸಹಜ ಬುದ್ಧಿ ಹೇಗೆ ದೂರವಾದೀತು?

ಮುಂದೆ ಕಾತ್ಯಾಯಿನಿ ಬರುತ್ತಾಳೆ. ಬಾಲ ವಿಧವೆ; ಒಂದು ಗಂಡು ಮಗುವಿನ ತಾಯಿ, ಆರಾಧ್ಯ ಶ್ರೋತ್ರಿಯವರ ಸೊಸೆ. ಮಾವನವರು ಆಕೆಯ ಮನಸ್ಸನ್ನು ಬಲ್ಲವರು; ಹೀಗೆಯೇ ಮಾಡು ಎನ್ನು ಪ್ರಭು ಸಮ್ಮಿತ ಆಜ್ಞೆ ಮಾಡುವವರಲ್ಲ. ಹೇಳ ಬಹುದಾದುದನ್ನು ಹೇಳಿ, ನಿರ್ಧಾರಕ್ಕೆ ಬರುವ ಸ್ವಾತಂತ್ರ್ಯ ಆಕೆಗೇ ನೀಡಿದ್ದರು. ಇದವರ ಮಾನವೀಯತೆ. ಆದರೆ, ಇದರಿಂದಾಗಿಯೇ ಕಾತ್ಯಾಯನಿಯ ಜೀವನದಲ್ಲಿ ಹೊಸ ಹೊಸ ಘರ್ಷಣೆಗಳು ಏಳುತ್ತವೆ. ಆಕೆ ಕಾಲೇಜು ಸೇರುವ ಇಚ್ಛೆ ಪ್ರಕಟಿಸಿದಾಗಲೇ ಮಾವ ಬೇಡವೆಂದಿದ್ದರೆ, ಇತರ ಸಾಮಾನ್ಯ ಬಾಲವಿಧವೆಯಂತೆ ನೊಂದು ಮುರುಟಿ ಸಾಯುತ್ತಿದ್ದಿರಬಹುದು— ಹೀಗಾಗದೆ ತಮ್ಮ ಮಗ ಬಿ. ಎ. ಓದುವ ಆಶೆಯಿಟ್ಟುಕೊಂಡಿದ್ದ, ಅದು ಪೂರ್ಣವಾಗಲಿಲ್ಲ, ಪತಿಯ ಆಶೆಯನ್ನು ಪತ್ನಿ ಪೂರಯಿಸುತ್ತಾಳೆಂಬ ಕಾರಣದಿಂದ ಅವರು ವಿರೋಧಿಸಲಿಲ್ಲ— ಹಾಗಾಗಿ ಅಂತರ್ದ್ವಂದ್ವದ ಬೀಜ ಬಿತ್ತಿತು — ಮುಂದ ಕೊನೆಯವರಗೂ ಆಕೆಯ ಜೀವನ ದ್ವಂದ್ವಮಯ—ಅಶಾಂತಿ. ತಾನು ರಾಜನನ್ನು ಮದುವೆಯಾಗದಿದ್ದರೆ ಇದಲ್ಲ ಯಾತನೆಯಿರುತ್ತಿರಲಿಲ್ಲ ಎಂಬ ಯೋಚನೆಯೂ ಆಕೆಯಲ್ಲಿ ಸುಳಿದಾಡದೆ—ಆಕೆಯ ವೇದನೆ ಆಂತರಿಕ, ಮಾನಸಿಕವಾದುದು —ಯೌವನದ ಭರದಲ್ಲಿ ಹೊಯ್ದಾಡಿದ ಆಕೆ ಪ್ರವಾಹದಲ್ಲಿ ತೇಲಿಯೇ ಹೋದಳು.

ಇವಿಷ್ಟು ಮುಖ್ಯ ಪಾತ್ರಗಳು. ಉಳಿದ ಚಿಕ್ಕ ಪುಟ್ಟ ಪಾತ್ರಗಳೂ ಯಥೋಚಿತವಾಗಿವೆ. ಮೈಸೂರಿನ ಮಹಾರಾಜ ಕೃಷ್ಣರಾಜ ಒಡೆಯರರ ಉದಾರತೆ, ಕಾತ್ಯಾಯಿನಿಯ ಅತ್ತೆ ಭಾಗೀರಥಮ್ಮ ಮನೆಯಾಳು ಲಕ್ಷ್ಮಿ, ಪೃಥ್ವಿ, ಚೀನಿ ಮೊದಲಾದ ಚರಿತ್ರಗಳು ಮನೋಜ್ಞವಾಗಿವೆ.

ಕಾದಂಬರಿಯು ಆಧುನಿಕ ಮಾದರಿಯದು—ನಮ್ಮ ಸಮಾಜದಲ್ಲಿ ಇಂತಹ ಘಟನೆಗಳು ನೂರಾರು ನಡೆದಿಲ್ಲವೆ? ಗುಟ್ಟಾಗಿ, ನಡೆಯುತ್ತಿರಲ್ಲವೆ? ಆದರೆ, ಸಾಹಿತ್ಯದಲ್ಲಿ ಈ ಬಗೆಯ ದ್ವಂದ್ವವನ್ನು ಚಿತ್ರಿಸುವ ಗೋಡವೆಗೆ ಹೋಗುವವರು ಕಡಿಮೆ. ಶ್ರೀ ಬೈರಪ್ಪನವರ ಕಸುವಿನ ಲೇಖಣಿ ಈ ಕೆಲಸವನ್ನು ಮಾಡಿದೆ, ಯಶಗಳಿಸಿದೆ. ಶ್ರೀಯುತರು ಭಾವಕ್ಕೆ ಹೊಂದುವ ಸನ್ನಿವೇಶ ಚಿತ್ರಿಸುವುದರಲ್ಲಿ ನಿಸ್ಸೀಮರು. ಶ್ರೀನಿವಾಸ ಶ್ರೋತ್ರಿಯವರು ಸಂಯಮವನ್ನು ಸಾಧಿಸಿದ ಸನ್ನಿವೇಶ, ಕಾತ್ಯಾಯಿನಿ—ರಾಜರ ಸಂಪರ್ಕ ಹೆಚ್ಚುತ್ತಿರುವ ವೇಳೆಯ ಆಕೆಯ ಅಂತರ್ದ್ವಂದ್ವ, ಸದಾಶಿವ ರಾಯರನ್ನು— ಕರುಣರತ್ನೆ ಕೈ ಹಿಡಿದೆತ್ತುವ ಪ್ರಸಂಗ—ಹೀಗೆಯೇ ಇದು ಎಲ್ಲೆಡೆಯಲ್ಲೂ ವ್ಯಕ್ತವಾಗುತ್ತವೆ. ವೈವಾಹಿಕ ಜೀವನ ವಂಶೋದ್ಧಾರಕ್ಕಾಗಿಯೇ ಎಂಬ ಶ್ರೋತ್ರಿಯ ಜೀವನದ ಆದರ್ಶ ಸಾಧನೆ ಎನ್ನುವ ಡಾ। ಸದಾಶಿವರಾಯ, ಪ್ರಕೃತಿಯು ಚಿರಚೇತನಳೂ ಚಿರನೂತನಳೂ ಆಗಿದ್ದ ಆಕೆಯನ್ನು ಧರ್ಮದಿಂದ ಬಿಗಿಯುವುದು ಅನ್ಯಾಯವೆನ್ನುವ ರಾಜ—ಈ ತ್ರಿವ ಮೂರ್ತಿಗಳ ತ್ರಿಕೂಟಕ್ಕೆ ತ್ರಿದೇವಿಯರು ಸಿಕ್ಕಿಕೊಂಡರು. ಕಾದಂಬರಿಯು ಹೃದಯ ಸ್ಪರ್ಶಿಯಾಗಿದೆ; ವಿಚಾರಕ್ಕೊಂದು ಪ್ರಚೋದನೆಯಾಗಿದೆ.

ಶ್ರೀ ಬೈರಪ್ಪನವರ ಭಾಷೆ ಇಲ್ಲಿ ಹಿಂದಿಗಿಂತ ಬಹಳ ನವುರಾಗಿಯೂ ಸುಂದರವಾಗಿಯೂ ಸರಳವಾಗಿಯೂ ಭಾವಗರ್ಭಿತವಾಗಿಯೂ ಮೂಡಿದೆ; ಶೈಲಿಯಲ್ಲಿ ಸರಳತೆಯಿದೆ, ಭಾವೋತ್ಪಾದಕತೆಯಿದೆ. ಸರಳವಾಗಿ ವ್ಯಕ್ತಪಡಿಸುವುದು ಕಷ್ಟಸಾಧ್ಯವಾದಂತಹ ಸನ್ನಿವೇಶಗಳನ್ನು ಶ್ರೀಯುತರು ಸುಲಭವಾಗಿ ಮಾರ್ಮಿಕವಾಗಿ ವ್ಯಕ್ತಪಡಿಸಿದ್ದಾರೆ. 'ವಂಶ ವೃಕ್ಷ' ಒಂದು ವೈಚಾರಿಕ ಕಾದಂಬರಿ. ಇದರಲ್ಲಿ ಭಾರತೀಯತೆಗೂ ಸ್ಥಾನವಿದೆ, ಅರ್ವಾಚೀನತೆಗೂ ಇದೆ. ಯೋಗ ಸಾಧನೆ, ತಪಶ್ಚರ್ಯೆ, ಮನಶ್ಶಾಸ್ತ್ರ, ವ್ಯಕ್ತಿ ಸ್ವಾತಂತ್ರ್ಯ, ಪತಿವ್ರತಾ ಧರ್ಮ, ಬ್ರಹ್ಮಚರ್ಯಪಾಲನೆ, ಕಲೆ, ಸಂಸ್ಕೃತಿ, ಪ್ರಕೃತಿ ಎಲ್ಲವಕ್ಕೂ ಇಲ್ಲಿ ಸ್ಥಾನವಿದೆ ಪ್ರಕೃತಿಯೇ ಒಂದು ವಂಶ; ಅದರಲ್ಲಿ ಹುಟ್ಟಿದ ವೃಕ್ಷ 'ವಂಶ ವೃಕ್ಷ' ವಿಚಾರ ಪ್ರಚೋದಕವಾದ ಈ ಮಾದರಿಯ ಕಾದಂಬರಿಗಳು ಕನ್ನಡದಲ್ಲಿ ಹೆಚ್ಚಬೇಕು; ಸಾಹಿತ್ಯ ಒರಿಯ ಮನರಂಜನೆಯ ವಸ್ತು ಮಾತ್ರವಾಗದೆ ಜನಜಾಗೃತಿಯದೂ ಆಗಿರಬೇಕು— 'ವಂಶವೃಕ್ಷ' ಈ ಮಾದರಿಯ ಒಂದು ಅತ್ಯುತ್ತಮ ಕೃತಿ.

— ಗೋರಾ

ಸೇಲ್ ನೋಟೀಸು
ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

R. E. P. 96/66
O. S. 97/56

ಅರ್ಜಿದಾರ ಜಿ. ನಾಗಪ್ಪಯ್ಯ ದೊಡ್ಡನ ಗಣಪಯ್ಯನ ಮಗ.

ಎದ್ರಿರು: 2. ಗೋಪಾಲ ಶ್ಯಾನುಭಾಗ, 3. ತ್ರಿವಿಕ್ರಮ ಶ್ಯಾನುಭಾಗ, ಅನಂತಯ್ಯ ಶ್ಯಾನುಭಾಗನ ಮಕ್ಕಳು, ಗಿರಗಾಂವ್, ಮುಂಬಯಿಯಲ್ಲಿರುವವರು. ಸದ್ರಿ 2, 3ನೇ ಎದ್ರಿಂಗೆ ತಿಳಿಯಪಡಿಸಿದ್ದು.

ಮೇಲ್ಕಂಡ ಅಮಲ್ದಾರಿಯಲ್ಲಿ ತನಗೆ ಬರತಕ್ಕ ಹಣಗಳ ವಸೂಲಿ ಬಗ್ಗೆ ಅರ್ಜಿದಾರನು ನಿಮ್ಮ ಹಕ್ಕಿನ ಸ್ಥಿರಾಸ್ತಿ ಜಪ್ತು ಮಾಡ್ಸಿ, ಏಲಮ್ಮಿಗೆ ಅಪೇಕ್ಷಿಸಿರುವುದರಿಂದ ಸದ್ರಿ ಏಲಂ ಇಸ್ತಿಹಾರಿನ ಶರ್ತಗಳನ್ನು ನಿರ್ಣಯಿಸುವ ಬಗ್ಗೆ ಸದ್ರಿ ಅಮಲ್ದಾರಿಯನ್ನು ತಾ. 29-10-1966 ಕ್ಕೆ ಇಡೋಣಾಗಿದೆ.

(By order of the Court)

A. S. N. Hebbar

ಅರ್ಜಿದಾರನ ಎಡ್ವೊಕೇಟ್

ಕುಂದಾಪುರ, 1—10—66.

ದಯಮಾಡಿ ವಿಚಾರಿಸಿರಿ

ಶಾಲೆಗಳಿಗೆ ಬೇಕಾಗುವ ರಿಜಿಸ್ತ್ರಿ, ಫಾರ್ಮುಗಳಿಗೆ—

ವ್ಯಾಪಾರಿಗಳಿಗೆ ಬೇಕಾಗುವ ವರ್ಗ, ಊಳಿಗ ಮೊದಲಾದ ಎಕೌಂಟು ಪುಸ್ತಕಗಳಿಗೆ—

ಕೋರ್ಟುಗಳಿಗೆ ಬೇಕಾಗುವ ಎಲ್ಲಾ ತರದ ಫಾರ್ಮುಗಳಿಗೆ ವಿಚಾರಿಸಿರಿ

ನವಯುಗ ಪ್ರೆಸ್

ಮುದ್ರಕರು ಮತ್ತು ಪ್ರಕಾಶಕರು,

ಪಾಲುಕೊಟೆ, ಉಡುಪಿ, ದ. ಕನ್ನಡ.

READ & ADVERTISE IN
NAVAYUGA WEEKLY

ಕಲಾರಂಗ

ರಂಗ ವಿನ್ಯಾಸ ಕಲೆ

೮

ರಂಗಭೂಮಿಯ ಯಶಕ್ಕೆ ರಂಗ ವಿನ್ಯಾಸ ಕಲೆಯೇ ಮುಖ್ಯವೆನ್ನುತ್ತಾರೆ
ಸೋವಿಯತ್ ಕಲಾವಿದ ವಡಿಂ ರ್‍ಯಿಂದಿನ್.

ರಂಗಭೂಮಿಯ ವಿನ್ಯಾಸ, ಅಂದಚಂದ ಮತ್ತು ಉಡುಪು-ತೊಡುಪುಗಳ ವಿನ್ಯಾಸಕಾರರ ಕೆಲಸ ನಿಜವಾಗಿಯೂ ತುಂಬು ಉತ್ತೇಜನಕಾರಿ ವೃತ್ತಿಯೆಂದು ಹೇಳಬಹುದು. ರಂಗವಿನ್ಯಾಸಕಾರನ ಕಲಾತ್ಮಕತೆ ಹಾಗೂ ಚತುರತೆಗಳ ಮೇಲೆಯೆ ಹೆಚ್ಚಿನ ಮಟ್ಟಿಗೆ ಒಂದು ನಾಟಕದ ಯಶಸ್ಸು ಅವಲಂಬಿಸಿದೆಯೆಂದು ಹೇಳಬೇಕು

ಸುಮಾರು ಇಪ್ಪತ್ತರ ಕಾಲದಲ್ಲಿ, ನಾನಿನ್ನೂ ಯುವಕನಾಗಿದ್ದಾಗಪೊರನೇಜ್ ಥೇಟರಿನಲ್ಲಿ ಕಾರ್ಯ ಮಾಡಲಾರಂಭಿಸಿದೆ. ಅಂದಿನಿಂದ ಈ ವೃತ್ತಿಯಲ್ಲೇ ಇರುವುದು ಮಾತ್ರವೇ ಅಲ್ಲ, ಇಡಿ ಜೀವನವೆ ಇದಕ್ಕರ್ಪಿತವಾಗಿದೆ. ಅಂತೆಯೆ ರಂಗ ವಿನ್ಯಾಸದ ಬಹುಮುಖಗಳೂ, ವಿಶೇಷ ಲಕ್ಷಣಗಳೂ ನನ್ನ ಕಣ್ಮುಂದೆ ಬರುತ್ತವೆ.

ವಿಶಿಷ್ಟ ಲಕ್ಷಣಗಳು

ಮೊದಲನೆಯದಾಗಿ ರಂಗಕ್ಕೆ ಒಂದು ಸಮೂಹ ಸ್ವಭಾವವಿದೆ. ರಂಗಾಲಂಕರಣ ವಿನ್ಯಾಸಕಾರ ಸದಾ ಕಾಲಕಲಾನಿರ್ದೇಶಕ, ಲೇಖಕ, ಗೀತರಚಕ, ನಟ ಮೊದಲಾದವರನ್ನೊಳಗೊಂಡು ತಾಂತ್ರಿಕ ಸಿಬ್ಬಂದಿಯವರೊಂದಿಗೆ, ಹೀಗೆ ಅನೇಕಾನೇಕ ಜನರೊಡನೆ ಇರಬೇಕಾಗುತ್ತದೆ. ವಿನ್ಯಾಸಕಾರರು ತಯಾರಿಸಿದ ನಕ್ಷೆಗಳನ್ನು ತಾಂತ್ರಿಕ ಮಂದಿರದವರು ಮಾದರಿಗಳನ್ನಾಗಿ ತಯಾರಿಸುತ್ತಾರೆ. ಅಂತೆಯೆ ಅವರ ಜವಾಬ್ದಾರಿಯೂ ಇಲ್ಲಿ ಹೆಚ್ಚಿನದು.

ರಂಗವಿನ್ಯಾಸಕಾರ ಅಲಂಕರಣ ಕಲೆಯ ಚರಿತ್ರೆಯನ್ನು ಚೆನ್ನಾಗಿ ತಿಳಿದುಕೊಂಡಿರಬೇಕು. ರಂಗದ ಉಡುಪು ತೊಡುಪುಗಳ ಬಗ್ಗೆ ಸರಿಯಾದ ಕಲ್ಪನೆ ಹೊಂದಿರಬೇಕು. ಚಿತ್ರ, ವಾಸ್ತುಶಿಲ್ಪ ಮತ್ತು ಶಿಲ್ಪಕಲೆಗಳ ಜ್ಞಾನವೂ ಇದ್ದರೆ ಒಳಿತು. ಮೇಲೆ ಇದೆಲ್ಲವನ್ನೂ ಸರಿಯಾಗಿ ಉಪಯೋಗಿಸುವ ಬುದ್ಧಿವಂತಿಕೆ ಅಗತ್ಯ. ಸಂಗೀತಾಭಿಜ್ಞನೂ ಆಗಿರಬೇಕು. ಈ ಎಲ್ಲ ಗುಣಗಳಿದ್ದರೆ ಮಾತ್ರ ಅವನ ವೃತ್ತಿಯಲ್ಲಿ ನಿಜವಾದ ಆಸಕ್ತಿಯಿರುತ್ತದೆ; ಲವಲವಿಕೆಯಿರುತ್ತದೆ. ನಾಟಕಗಳು ನಾನಾ ಬಗೆಯವು ಆಗಿರುವುದರಿಂದ ವಿನ್ಯಾಸಕಾರನಿಗೆ ಕಾರ್ಯವಿಸ್ತಾರವೂ ದೊಡ್ಡದು, ಎಲ್ಲ ದೇಶಗಳಿಗೆ, ಜನಗಳಿಗೆ ಮತ್ತು ಕಾಲ ಖಂಡಗಳಿಗೆ ಸಂಬಂಧಿಸಿದ ವಸ್ತುವೇ ಇರಬಹುದು. ಆದ್ದರಿಂದ ವಿವಿಧ ಕಾಲಗಳನ್ನು, ಸ್ಥಳಗಳನ್ನು, ರಂಗದ ಮೇಲೆ ಪುನಃ "ನೆಡಲು" ಆತ ಶಕ್ತನಾಗಬೇಕು, ಅಷ್ಟೆ ಅಲ್ಲ ಇಡೀ ತಯಾರಿಕೆಗೆ ಅದೆಲ್ಲವೂ ಸೂಕ್ತವಾಗಿ ಒಪ್ಪುವಂತಿರಬೇಕು.

ಸೋವಿಯೆತ್ ನಾಟಕಗಳ ಬಗ್ಗೆ ಕೆಲಸ ಮಾಡುವುದಂತೂ ನನಗೆ ತುಂಬ ಸಂತಸಕರ ಸಂಗತಿ. ಯಾಕೆಂದರೆ ಅಲ್ಲಿ ಉತ್ತೇಜನಕಾರಿಯೂ ಹೌದು ಅಷ್ಟೇ ಸಂಕೀರ್ಣವೂ ಹೌದು. ನನ್ನನ್ನ ಈ ಕಲೆಯಲ್ಲ ಬೆಳೆಸಿದ ತೈರೋವ್ ಅವರೊಡನೆ ಮೂವತ್ತರ ಆರಂಭ ಕಾಲದಲ್ಲಿ ಕೆಲಸ ಮಾಡಿದುದು ಇನ್ನೂ ನನಗೆ ಚೆನ್ನಾಗಿ ನೆನಪಿನಲ್ಲಿದೆ. ನಾನಿನ್ನೂ ಆಗ ಎಳೆಯನಾಗಿದ್ದೆ. ವಿಶ್ನೇವಸ್ಕಿಯವರು "ಆಪ್ಟಿಮಿಸ್ಟಿಕ್ ಟ್ರಾಜೆಡಿ"ಗೆ ಕೆಲಸ ಮಾಡುತ್ತಿದ್ದೆವು ಅಥವಾ ಮಯಾಂಗೋವ್ ರಂಗಮಂದಿರದಲ್ಲಿ ಥೇಡರ್ "ಅಲೀ ಜೋಯ್ಸ್" ಇಲ್ಲವೇ ಮಾಲೀ ರಂಗಮಂದಿರವಲ್ಲಿ ಇತ್ತೀಚೆಗೆ ತ್ರೆನೇವ್‌ರ "ಲ್ಯುಬೋವ್ ಯರೋವಯಾ"ಕ್ಕೆ ಕೆಲಸ ಮಾಡಿದುದು ಅಷ್ಟೇ ಸ್ಮರಣೀಯ. ಇಂಥ ಲೇಖಕರ ಕೃತಿಗಳಿಗೆ ಕಾರ್ಯ ಮಾಡಿದುದು ಅದ್ಭುತ ವೃತ್ತಿ ತೃಪ್ತಿಯನ್ನುಂಟು ಮಾಡಿತೆಂದು ಹೇಳಬೇಕು.

ನನ್ನ ಆರಂಭ ವರ್ಷಗಳಿಂದಲೇ ಷೇಕ್ಸ್‌ಪಿಯರ್ ನನ್ನ ಮೆಚ್ಚಿನ ನಾಟಕಕಾರ ಅವರ ಒಂದೊಂದು ನಾಟಕಕ್ಕೂ ನಾನು ಮಾಡಿದ ಕಾರ್ಯ ಒಂದೊಂದು ಮೈಲಿಗಲ್ಲು. ಅವರ "ಮಚ್ ಅಡೋ ಅಬೌಟ್ ನತಿಂಗ್" ನಾಟಕಕ್ಕೆ ಮಾಡಿದ ಕಾರ್ಯವನ್ನಂತೂ ನಾನೆಂದೂ ಮರೆಯಲಾರೆ. ವಖ್ತಾಂಗೋವ್ ರಂಗಮಂದಿರದಲ್ಲಿ ನಾನು ಇದಕ್ಕೆ ಐ. ರಪ್ಪೊಪೋರ್ತ್‌ರೊಂದಿಗೆ ಕೆಲಸ ಮಾಡಿದೆ, ಈ ನಾಟಕದ ಹೊಳಪು ಹಾಗೂ ಥಳಕಿಗೆ ಬಹುದೊಡ್ಡ ಅವಕಾಶ ನನಗೆ ದೊರೆಯಿತಲ್ಲದೆ ರಂಗದ ಅಲಂಕರಣ ಹಾಗೂ ವೇಷಗಳಿಗೆ ಸ್ಫುಟವಾದ ಹಾಗೂ ಉಲ್ಲಾಸದ ಅತ್ಯುತ್ತಮ ಕಾರ್ಯ ಮಾಡಿದೆನೆಂದು ಹೇಳಬೇಕು.

೧೯೫೪ರಲ್ಲಿ ನಾನು ಮಯಕೋವಸ್ಕಿ ರಂಗಮಂದಿರದಲ್ಲಿ 'ಹ್ಯಾಮ್ಲೆಟ್' ನಾಟಕಕ್ಕೆ ನ ಕಷ್ಟ ಹದಂಕೆಯಿಂದಲೇ ಕೈ ಹಾಕಿದೆನೆಂದು ಹೇಳಬೇಕು. ಡೆನ್ಮಾರ್ಕ್ ದೇಶವನ್ನು ಸಾಂಕೇತಿಕವಾಗಿ ಒಂದು 'ಸೆರೆಮನೆ'ಯಂತ ಅಲ್ಲಿ ಕಲ್ಪಿಸ ಬಯಸಿದೆ. ಬಹು ಭಾರವಾದ ಕಬ್ಬಿಣದ ದ್ವಾರವೊಂದು ಇಡೀ ನಾಟಕವನ್ನು ಆವರಿಸುತ್ತಿತ್ತೆಂದು ಹೇಳಬೇಕು. ಇದನ್ನು ಕತ್ತಲು ಕವಿದ ಕಿರು—ದಾರಿಯಂತೆ ಮಧ್ಯ ಯುಗೀನ ಕೋಟೆಯಂತೆ ಪರಿವರ್ತಿಸಲೂ ಯೋಜಿಸಲಾಗಿತ್ತು. ಅತ್ಯಂತ ಕಡಿಮೆ ವೆಚ್ಚದಲ್ಲಿ ದೃಶ್ಯ ಪರಿಣಾಮವನ್ನುಂಟು ಮಾಡಲು ಪ್ರಯತ್ನಪಟ್ಟಿದ್ದೆವು.

ವೆರ್ಡಿ ಮವರ "ದೂನ್ ಕಾರ್ಲೋಸ್"ನ ಅಲಂಕರಣೆ ಕಾರ್ಯ ಕೈಕೊಂಡಾಗ ನಾನು ನನ್ನ ಪ್ರೀತಿಯ ಚಿತ್ರಕಾರರಾದ ಎಲ್ ಗ್ರೆಕೊ ಅವರೆಡೆಗೆ ಹೊರಳಬೇಕಾಯಿತು. ಮಬ್ಬುಗವಿದ, ಅವ್ಯಕ್ತ ಶೋಕ ಕವಿದಂತ ವಾತಾವರಣವನ್ನು ಸೃಷ್ಟಿಸಬೇಕಿತ್ತು. ಎಲ್‌ಗ್ರೆಕೋರ ಚಿತ್ರಗಳ ಚೇತನವನ್ನೇ ಇಲ್ಲಿ ವರ್ಣದಲ್ಲಿ ಒಡಮೂಡಿಸಿದೆ. ರಿಮುಸ್ಕಿ— ಕೊರ್ಸಕೋವರ 'ದ ಲೀಜಂಡ್ ಆಫ್ ದ ಇನ್‌ವಿಜಬಲ್ ಸಿಟಿ ಆಫ್ ಕಿತೆಜ್ ಅಂಡ್ ದ ಮೇಡನ್ ಫೆವರೋನಿಯ' ನಾಟಕದ ಅಲಂಕರಣಕ್ಕಂ ನನಗೆ ಪ್ರಾಚೀನ ರಷ್ಯನ್ ಚಿತ್ರಗಳೇ ಸ್ಫೂರ್ತಿಯಾದುವು. ಯಥಾರ್ಥತೆ ಯನ್ನು ತೋರಿಸಲು ಯಥಾರ್ಥ ಸರಳು ಹೇರಳವಾಗಿದೆ ಮಾತ್ರವೇ ಅಲ್ಲ, ಅಕ್ಷಯವೂ ಆಗಿದೆ.

ಈ ಲೇಖನವನ್ನು ಮುಗಿಸುತ್ತ ನಾನು ಇಷ್ಟು ಹೇಳ ಬಯಸುತ್ತೇನೆ: ನಾಟಕ ವಾಚನದಿಂದ ಮೊದಲುಗೊಂಡು ಪ್ರತಿಯೊಂದು ಘಟ್ಟದಲ್ಲೂ ಮತ್ತು ಅಂತಿಮದವರೆಗೂ ನನ್ನ ನಕ್ಷೆಗಳು ಮಾದರಿಗಳಾಗಿ ಸೆಟ್‌ಗಳಾಗಿ ಪರಿವರ್ತನೆಗೊಳ್ಳುವವರೆಗೂ ಒಂದೇ ಒಂದು ಅಂಶ ನನಗೆ ಮಾರ್ಗದರ್ಶಕ. ಅದು—ಇಡೀ ನಾಟಕದ ಹಿಂದಿರುವ ಕಲ್ಪನೆಯನ್ನು ಸಾಧ್ಯವಿದ್ದಷ್ಟು ಸ್ಪಷ್ಟವಾಗಿ ಪರಿಪೂರ್ಣವಾಗಿ ಬಿಡಿಸಿ ತೋರಿಸಲು ನನ್ನ ಕಾರ್ಯ ಸಹಾಯಕವಾಗಬೇಕು."

ಕುಂದಾಪುರ ಮುನ್ಸಿಫ್
ಕೋರ್ಟಿನಲ್ಲಿ

S. C. 292/66.

ಮೊಸ್ತರ್ ಸಯ್ಯದ್ ಮೀರಾ ಸಾಹೇಬ—
—ವಾದಿ.

ಚಿಕ್ಕ —ಪ್ರತಿವಾದಿ.

ವಾದಿ ಕಡೆಯಿಂದ ಈ ಮುಂದಿನ ಜಾಹೀರ ಮಾಡಿಕೊಳ್ಳುವದೇನೆಂದ್ರೆ—

ಚಿಕ್ಕ—ಬಿಲ್ಲಾ ಪ್ಯೂಕೆರೆ ಚಿಕ್ಕ ಹೆಂಗ್ಸಿನ ಮಗ, ಕುಂದಾಪುರ ತಾಲ್ಲೂಕು ಕೆಗಾರ್ಲ್ ಗ್ರಾಮ—

ವಾದಿಗೆ ಪ್ರತಿವಾದಿಯಿಂದ ಬರತಕ್ಕ ಬಾಕಿ ರೂ. 161— 00 ಬರಮಾಡಿಕೊಳ್ಳುವರೆ ವಾದಿ ಮಾಡಿದ ದಾವೆಯು 28—10—66ಕ್ಕೆ ಇಡೋಣಾಗಿಯದೆ. ಆ ಕುರಿತು ನಿಮ್ಮದೇನಾದ್ರೂ ಉದಾರಣೆಯಿದ್ರೆ ಸದ್ರಿ ದಿವ್ಸ ಹಗಲು 11ಗಂಟೆಗೆ ಸ್ವತಹಾ ವ ವಕೀಲರ ದ್ವಾರಾ ಹಾಜ್ರಾಗಿ ಜಾಹೀರ ಮಾಡಿಕೊಳ್ಳತಕ್ಕದ್ದು ತಪ್ಪಿದ್ರೆ ನಿಮ್ಮ ಗೈರ ಹಾಜರಿಯಲ್ಲಿ ಏಕ ಪಕ್ಷವಾಗಿ ತೀರ್ಮಾನಿಸಲ್ಪಡುವದೆಂಬ ಸಂಗ್ತಿ ವಾದಿಕಡೆಯಿಂದ ಈ ನೋಟೀಸು ತಿಳಿಯಪಡ್ಸಿದೆ.

M. M. Hebbar
Advocate for Pliff.
Kundapur, Date. 29—9—66.

Advertise in
Navayuga
Deepavali Special 1966
&
get best value for your money.

ಸಮೀಪಿಸುತಿದೆ ದೀಪಾವಳಿ!
ಮನೆ ಮನೆಗಳಲಿ ದೀಪ ಬೆಳಗಲಿದೆ!
ಹೊರಡಲಿದೆ ನವಯುಗದ ದೀಪಾವಳಿ ಸಂಚಿಕೆ!
ಮನ ಮನಗಳಲಿ ಜ್ಞಾನದೀಪ ಬೆಳಗಲಿದೆ!

ಕರ್ನಾಟಕದ ವಿವಿಧ ಬರಹಗಾರರಿಂದ, ವೈವಿಧ್ಯಪೂರ್ಣ ಲೇಖನಾದಿಗಳಿಂದ ಕೂಡಿ ತಾ. 10—11—1966ಕ್ಕೆ ವಾಚಕರ ಕೈಸೇರಲಿದೆ ದೀಪಾವಳಿ ಸಂಚಿಕೆ.

ಅಖಿಲ ಕರ್ನಾಟಕದಲ್ಲಿ ಪ್ರಸಾರವಾಗುವ ನವಯುಗ ದೀಪಾವಳಿ ಸಂಚಿಕೆ ಜಾಹೀರಾತಿಗೆ ಸುವರ್ಣ ಮಾಧ್ಯಮ.

ಜಾಹೀರಾತು ಕೊಡುವವರು ಜಾಹೀರಾತನ್ನು ಅಕ್ಟೋಬರ ಅಂತ್ಯದೊಳಗೆ ಕಳುಹಿಸುವಂತೆ ಅಪೇಕ್ಷಿಸಲಾಗಿದೆ.

ಮೆನೇಜರ್
ನವಯುಗ, ಉಡುಪಿ

ಗರ್ಭಸ್ರಾವ ಉಚಿತವೆ?

(ಆರನೇ ಪುಟದಿಂದ)

ಆರೋಗ್ಯ ಕೇಂದ್ರವು ಅಂಥ ಮಹಿಳೆಯನ್ನು ಆಸ್ಪತ್ರೆಗೆ ಕಳಿಸುವುದು. ಶಸ್ತ್ರಕ್ರಿಯೆಯ ನಂತರ ಅಗತ್ಯವೆನಿಸಿದಷ್ಟು ಕಾಲ ಆಕೆ ಆಸ್ಪತ್ರೆಯಲ್ಲೇ ಇರಬೇಕಾಗುತ್ತದೆ.

ಆರೋಗ್ಯ ಮತ್ತು ನೈರ್ಮಲ್ಯಗಳ ಕುರಿತ ಶಿಕ್ಷಣ ಬಹು ದೊಡ್ಡ ಪ್ರಮಾಣದಲ್ಲಿ ನಡೆಯುತ್ತಿರುತ್ತದೆ. ಗರ್ಭಸ್ರಾವದ ಅಪಾಯಗಳನ್ನು ಅನೇಕ ಪುಸ್ತಕಗಳಲ್ಲಿ ಪ್ರಕಟನೆಗಳಲ್ಲಿ ಜನಪ್ರಿಯ ವೈಜ್ಞಾನಿಕ ಚಲ ಚಿತ್ರಗಳಲ್ಲಿ ತಿಳಿಸಿ ಕೊಡಲಾಗುತ್ತಿರುತ್ತದೆ.

ಪುರುಷನದೇ ಕೆಲಸ

ಆದರೆ ಅನೇಕ ಪ್ರಸಂಗಗಳಲ್ಲಿ ಗರ್ಭಸ್ರಾವ ಕೇವಲ ಪುರುಷನ ಕಲ್ಪನೆಯೆಂದು ವೈದ್ಯರಿಗೆ ಗೊತ್ತು. ತನ್ನ ಹೆಂಡತಿ ಗರ್ಭಸ್ರಾವ ಮಾಡಿಸಿಕೊಳ್ಳ ಬೇಕೆಂದು ಬೆಂಬತ್ತಿದಾಗ ತಾನೂ ತನ್ನ ನೈತಿಕ ಹೊಣೆಗಾರಿಕೆಯನ್ನು ಅರಿತುಕೊಳ್ಳಬೇಕೆಂದು, ಡಾಕ್ಟರು ಇಂಥಹವರಿಗೆ ಸ್ಪಷ್ಟಪಡಿಸದೆ ಇರರು.

ಪುರುಷನನ್ನು ಸಾಮಾನ್ಯವಾಗಿ ಪ್ರಸೂತಿ ಮಂದಿರಕ್ಕೆ ಕರೆಸಲಾಗುವುದಿಲ್ಲ. ಕರೆಸುವುದು ಸೂಕ್ತವೆಂದು ಕಂಡಾಗ ಪ್ರಸೂತಿ ವೈದ್ಯರು ಕರೆಸಲು ಹಿಂಜರಿಯುವುದಿಲ್ಲ.

ಅನಂತರದ ಗರ್ಭಧಾರಣೆ ಮತ್ತು ಇನ್ನಿತರ ವ್ಯಾಧಿಗಳು ಗರ್ಭಸ್ರಾವಕ್ಕೆ ಕಾರಣವೆಂದು ಅಂಕಿಸಂಖ್ಯೆಗಳು ತೋರಿಸುತ್ತವೆ.

ಸಜೀವ ಸಂಗತಿಗಳ ಬಗ್ಗೆ ಬಲವಂತ ಎಷ್ಟೂ ಸಮರ್ಥನೀಯವಲ್ಲ. ಆದರಲ್ಲೂ ಈ ವಿಷಯದಲ್ಲಂತೂ ಒಂದಿಷ್ಟೂ ಕೂಡದು

ಸರಸ್ವತಿಯ ಕೈಯ ವೀಣೆ

(ಐದನೇ ಪುಟದಿಂದ)

ಮೂರು ತಂತಿಗಳ ವೀಣೆ—[illegible], ನಾಲ್ಕು ತಂತಿಗಳ ವೀಣೆ—ರಾಜಧಾನಿ, ಐದು ತಂತಿಗಳ ವೀಣೆ—ವಿಪಂಚೀ, ಆರು ತಂತಿಗಳ ವೀಣೆ—ಶಾರ್ವರೀ, ಏಳು ತಂತಿಗಳ ವೀಣೆ—ಪರಿವಾದಿನಿ, ಹೀಗೆ ವೀಣೆಯಲ್ಲಿ ಏಳು ಪರಿಭೇದಗಳು.

ವೀಣೆಯಲ್ಲಿ ಮುಖ್ಯವಾಗಿ ಎರಡು ಭೇದಗಳು. ಒಂದು ರುದ್ರ ವೀಣೆ, ಮತ್ತೊಂದು ಸರಸ್ವತೀ ವೀಣೆ. ರುದ್ರ ವೀಣೆ ಅತಿ ಸರಳವಾದದ್ದು. ಅದರ ಸ್ವರ ಅತಿ ಗಂಭೀರ. ಸರಸ್ವತೀ ವೀಣೆ ದಕ್ಷಿಣ ಭಾರತದಲ್ಲಿ ಅತಿ ಜನಪ್ರಿಯವಾದ ವಾದ್ಯ. ಸ್ವಯಂ ಶಾರದೆಯೇ ಇದನ್ನು ರೂಪಿಸಿದಳೆಂದು ಊಹೆ. ಬ್ರಹ್ಮರ್ಷಿ ನಾರದ ಈ ವೀಣಾ ವಾದನದಲ್ಲಿ ಅಪ್ರತಿಮ ವ್ಯಕ್ತಿಯಂತೆ. ಇದು ಸೌಲಭ್ಯಕ್ಕಿಂತಲೂ, ಶಾಸ್ತ್ರಕ್ಕೆ ಮನ್ನಣೆ ಇತ್ತು ರಚಿಸಿದ ವಾದ್ಯ. ಇದರ ಸ್ವರ ಅತಿ ಮಧುರ. ಮೈಸೂರು, ತಂಜಾವೂರು, ರಾಮಪುರ ಮತ್ತು ಲಕ್ನೋ ಇಂದಿಗೂ ಶ್ರೇಷ್ಠ ವೀಣೆಗಳನ್ನು ತಯಾರಿಸುವ ಕೇಂದ್ರಗಳು.

೭ ಸ್ವರಗಳು, ೨೨ ಶ್ರುತಿಗಳು, ೨೧ ಮೂರ್ಛನೆಗಳು, ತಾನ ಮತ್ತು ಅಲಂಕಾರಗಳು ಪ್ರಕಟಮಾಡಲು ಸುಲಭಸಾಧ್ಯವಾದ ಸುಂದರ ವಾದ್ಯ ವೀಣೆ. ವೀಣೆ ಪೂರ್ಣ ಭಾರತೀಯ ವಾದ್ಯ. ಇದರಲ್ಲಿ ಗಮಕ, ತಾನ, ಆಲಾಪನೆ, ಅಲಂಕಾರ ಮೂರ್ಛನೆಗಳೆಲ್ಲವನ್ನೂ ಪ್ರದರ್ಶಿಸಬಹುದು. ವೀಣೆಗೆ ಗೌರವಪೂರ್ಣ ಹಿರಿಯ ಸ್ಥಾನ ದೊರೆಯುವುದು. ಅದರಿಂದ ಮೂಡಿ ಬರುವ ಅದ್ಭುತ ಗಮಕಗಳಿಗಾಗಿ, ಮಾನವನ ಕಂಠದಿಂದ ಮೂಡಿ ಬರುವ ಮಧುರ ಶಾಸ್ತ್ರೀಯ ಸ್ವರಗಳೆಲ್ಲವನ್ನೂ ವೀಣೆಯಿಂದ ನುಡಿಸಬಹುದು—ಮೂಡಿಸಬಹುದು.

ರುದ್ರ ವೀಣೆ ಮತ್ತು ಸರಸ್ವತಿ ವೀಣೆಯೊಂದಿಗೆ ವೈದಿಕ ಶಾಸ್ತ್ರದಲ್ಲಿ ಉಲ್ಲೇಖಿಸಲ್ಪಟ್ಟಿರುವ ಅತ್ಯಂತ ಪ್ರಾಚೀನ ಭಾರತೀಯ ಶತತಂತ್ರಿ ಅಥವಾ ಸ್ವರಮಂಡಲ ಮತ್ತೊಂದು ಪ್ರಮುಖವಾದ ವೀಣೆ. ಕಾತ್ಯಾಯನ ಋಷಿ ರೂಪಿಸಿದುದರಿಂದ ಕಾತ್ಯಾಯನ ವೀಣಾ (ಶರಮಂಡಲ) ಎಂಬ ಹೆಸರೂ ಇದೆ ಇದಕ್ಕೆ ನೂರು ತಂತಿಗಳಿದ್ದವಂತೆ. ಸಾರಂಗ ದೇವನ ಕಾಲದಲ್ಲಿ ೭೧ರಿಂದ ೨೧ಕ್ಕಿಳಿದವಂತೆ. ಬ್ರಹ್ಮವೀಣ ಅಥವಾ ತಂಬೂರಾ ಎಂಬ ಶ್ರುತಿವಾದ್ಯ ಕೋಮಲ ಸ್ವರದ ಕಿನ್ನರೀ ವೀಣೆ. ಮಹಾನಾಟಕ ವೀಣ (ಗೋಟು ವಾದ್ಯಂ), ಆದಿದೇವ ರೂಪಿಸಿದ ಧನುಷ್ಯಾಕಾರದ ಪಿನಾಕ ವೀಣಾ, ಕಮಾನಿನಿಂದ ನುಡಿಸುವ ಮೊತ್ತಮೊದಲ ತಂತಿವಾದ್ಯ ರಾವಣ ಹಸ್ತ ವೀಣ (ರಾವಣಾಸ್ತ್ರ, ಮತ್ತು ರಾವಣಾಸ್ತ್ರಾಣ ಎಂಬ ಹೆಸರೂ ಉಂಟು) ಸಾರಂಗೀ ಪ್ರಕಾರಗಳು, ವೀಣೆಯ ಆಧುನಿಕ ಸೌಲಭ್ಯ ರೂಪವಾದ ಸಿತಾರ್, ಸಿತಾರ್ ಹಾಗೂ ಸಾರಂಗಿ ಅನುಸರಿಸಿದ ಇಸರಾಜ್, ಸ್ವರಮಂಡಲ ಅಥವಾ ಕಾತ್ಯಾಯನ ವೀಣೆಯಂತಿರುವ ಅಮೃತ ಕುಂಡಲೀ ಉಪವೀಣೆ, ಒಂದೇ ತಂತಿಯ ಡಬ್ಬಿ ಇಲ್ಲವೇ ಸೋರೆ ಬುರುಡೆಯ ಏಕತಾರಾ ವಾದ್ಯ ವೀಣಾ ಪ್ರಭೇದಗಳಲ್ಲಿರುವ ಪ್ರಮುಖ ತಂತಿ ವಾದ್ಯಗಳು. ಸುಪ್ರಸಿದ್ಧ ಸಂಗೀತ ಶಾಸ್ತ್ರಜ್ಞ ಕನ್ನಡಿಗ ಗಾನಯೋಗಿ ಸ್ವಾಮಿ ರಾಮದತ್ತ ಪಾರ್ವತೀಕರರು [illegible] ದತ್ತಾತ್ರೇಯವೀಣೆಯನ್ನು ಪ್ರಚಾರಕ್ಕೆ ತಂದರು. ಅವರ ಸಂಶೋಧನೆ, ಸಾಧನ, ಸೇವೆ ಅದ್ವಿತೀಯವಾದುದು. ಸಿತಾರ್, ಗೋಟು ವಾದ್ಯ ಮತ್ತು ಸ್ವರ ಮಂಡಲಗಳ ಸಂಗಮವೇ ದತ್ತಾತ್ರೇಯವೀಣೆ.

ವೀಣೆಯ ಇತಿಹಾಸವು ಹಿರಿದು. ಕೀರ್ತಿಯೂ ಹಿರಿದು. ಆದರೆ ಮಧುರವಾದ ವಾಹಿನಿಗೆ ಪ್ರಭಾವಿತರಾಗದವರಿಲ್ಲ. ಈ ವಾದ್ಯವನ್ನು ನುಡಿಸಲು ಅಸಾಧಾರಣ ಸಾಧನೆಯನ್ನೇ ಮಾಡಬೇಕಾಗುತ್ತದೆ. ಪೂರ್ಣ ಪಾಂಡಿತ್ಯ ಪಡೆಯುವ ಸಾಧನೆ—ಸಂಸ್ಕಾರ ಅಗತ್ಯ. ವೀಣೆ ಶೇಷಣ್ಣನವರು ಮೈಸೂರು ವೀಣೆಯ ಕೀರ್ತಿಯನ್ನು ಭಾರತಕ್ಕೆ ಹಂಚಿದರು.

ಪ್ರಾಚೀನ ಸಾಹಿತ್ಯದಲ್ಲಿ ವೀಣೆಗೆ ಸಂಬಂಧಿಸಿದಂತೆ ಶೃಂಗಾರ, ವೀರಾದ್ಭುತ, ರಸಪೂರ್ಣ ಕಥೆಗಳಿವೆ. ಉದಯನನ ಕುಂಜಂ ಮೋಹಿನಿ ವೀಣೆಯ ಕಥೆ ಪ್ರಸಿದ್ಧ. ವಾಸವದತ್ತೆಗೆ ಉದಯನನೇ ವೀಣಾವಾದನ ವಿದ್ಯಾಗುರು. ಬೌದ್ಧ ಜಾತಕ ಕಥೆಗಳಲ್ಲಿ ಬರುವ ಮೂಸಿಲನೆಂಬ ವೈಣಿಕ ಮತ್ತು ಅವನ ಗುರು ಗುತ್ತಿಲ ಕುಮಾರರ ಕಥೆ ಸ್ವಾರಸ್ಯಪೂರ್ಣವಾದುದು. ಗುರು ಗುತ್ತಿಲಕುಮಾರಗಂಧರ್ವ. ಅವನು ಸ್ಪರ್ಧೆಯಲ್ಲಿ ವೀಣೆಯಲ್ಲಿದ್ದ ತಂತಿಗಳನ್ನು ಒಂದೊಂದನ್ನಾಗಿ ಕತ್ತರಿಸುತ್ತಾ ಬಂದು ಕೊನೆಗೆ ಕಾಷ್ಠದಂಡದಿಂದಲೇ ಅದ್ಭುತನಾದವನ್ನು ಹೊರ ಹೊಮ್ಮಿಸಿದನಂತೆ.

ಪ್ರಾಚೀನ ಸಂಸ್ಕೃತ ವಾಙ್ಮಯದಲ್ಲಿ ವೀಣೆಯ ಪ್ರಸ್ತಾಪ—ವಿವರ ವಿಶೇಷವಾಗಿದೆ. ಆ ಕಾಲದಲ್ಲಿ ನಾಗರಿಕನ ಮಕ್ಕಳು ಗಾಂಧರ್ವ ಶಾಲೆಯಲ್ಲಿ ಗೀತ, ನೃತ್ಯ, ವಾದ್ಯಗಳನ್ನು ಅಭ್ಯಸಿಸಬೇಕೆಂಬ ಸಂಪ್ರದಾಯ ಸೂತ್ರವಿತ್ತು. ವಾದ್ಯಗಳಲ್ಲಿ ವೀಣೆ, ಡಮರುಗ ಮತ್ತು ವೇಣು (ಕೊಳಲು)ವಿನ ಉಲ್ಲೇಖವಿದೆ. ವೇಣು ಮತ್ತು ವೀಣೆ ಇಂದಿಗೂ ಅಂದಿನಂತೆಯೇ ನಾದ ಮಾಧುರ್ಯವನ್ನು ಉಳಿಸಿಕೊಂಡು ಬದುಕಿವೆ. ಡಮರುಗವೂ ಭಾರತದ ಪುರಾತನ ವಾದ್ಯ. ಇದರ ವಿಕಸಿತ ರೂಪವೇ ಮೃದಂಗ. ಮೃದಂಗ ವಿಶ್ವದ ಸರ್ವೋತ್ತಮ ವೈಜ್ಞಾನಿಕ ವಾದ್ಯ.

ವೀಣೆ ಅತಿ ಪುರಾತನ ಭಾರತೀಯ ವೆಂದಷ್ಟೇ ಹೇಳಿಕೊಂಡು ಆನಂದಿಸಬೇಕಿಲ್ಲ. ಅವರ ನಾದ ಮಾಧುರ್ಯ—ಸೌಂದರ್ಯ ಅದ್ವಿತೀಯ. ಅದನ್ನು ಅರಿಯಲು ಸಂಸ್ಕಾರ—ಶ್ರದ್ಧೆ ಬೇಕು. ಅದು ಸಾಧನೆಯಿಂದ ಲಭಿಸುವಂತಹುದು. ಇಂದು ಶಾಸ್ತ್ರೀಯ ಸಂಗೀತದಂತೆಯೇ ವೀಣೆಯ ಹಿರಿಮೆಯೂ ಕಳೆಗುಂದುತ್ತಿದೆ. ನಮ್ಮ ದೌರ್ಭಾಗ್ಯ.

'ಶಾರದಾ ಪೂಜೆ'ಯ ಸವಿ ಸ್ಮರಣೆ

— ಸಮರ್ಥ ರಾಮದಾಸರು ರೂಪಿಸಿದ —

ವಾಗ್ದೇವಿ ಶಾರದೆ

ಲೇಖಕರು
ಶ್ರೀ ಸುರತ್ಕಲ್ ರಾಮಕೃಷ್ಣ ಹೆಬ್ಬಾರ

ಅತ್ಯಂತ ಶುಭಪ್ರದವಾದ ತಿಂಗಳೆಂದರೆ 'ಅಶ್ವಿನ'. ಈ ಮಾಸದಲ್ಲಿ ನವದಿನಗಳಲ್ಲಿ ಆಚರಿಸುವ ಸಂಭ್ರಮದ ಹಬ್ಬವೇ "ನವರಾತ್ರಿ ಹಬ್ಬ". ನವರಾತ್ರಿ ಕಳೆದಂತೆಯೇ ದೀಪಾವಳಿ, ನರಕ ಚತುರ್ದಶೀ, ಲಕ್ಷ್ಮೀ ಪೂಜೆ ಇತ್ಯಾದಿಗಳೆಲ್ಲಾ ಈ ಮಾಸದ ಉತ್ತರಾರ್ಧದಲ್ಲಿಯೇ ಬರುತ್ತವೆ. ನವರಾತ್ರಿ ಹಬ್ಬದಲ್ಲಿ ಮುಖ್ಯವಾಗಿ—ಸೃಷ್ಟಿ—ಸ್ಥಿತಿ—ಲಯಗಳಿಗೆ ಪ್ರಚೋದಕಳಾದ ದೇವಿಯ ಅನುಗ್ರಹವನ್ನು ಪಡೆಯುವ ಸಲುವಾಗಿ "ನವದುರ್ಗೆ"ಯನ್ನಾರಾಧಿಸುವ ಕ್ರಮವಿದೆ. ನವರಾತ್ರಿಯ ಒಂಭತ್ತು ದಿನಗಳೂ ಅಲ್ಲಲ್ಲಿ ಸಂಭ್ರಮದ ಪೂಜಾ-ಉತ್ಸವಗಳಿವೆ ಪುಸ್ತಕ ಪೂಜೆ, ಶಾರದಾ ಪೂಜೆ ಇತ್ಯಾದಿಗಳೆಲ್ಲಾ ಇದೇ ಸಂದರ್ಭದಲ್ಲಿ ನಡೆಯುತ್ತವೆ.

ಸಮರ್ಥ ರಾಮದಾಸರು ತಮ್ಮ ದಾಸಬೋಧೆ—ಗ್ರಂಥದಲ್ಲಿ ವೇದಮಾತೆಯಾದ ಸರಸ್ವತಿ ದೇವಿಯನ್ನು ಸ್ತುತಿಸಿದ ಭಕ್ತಿರಸವನ್ನು ಪ್ರಸ್ತುತ ನೋಡೋಣ—

"ಶಾರದಾ ದೇವಿಯು ಬ್ರಹ್ಮನ ಮಗಳು. 'ವಾಗ್ದೇವಿ' ಶಬ್ದಕ್ಕೆ ಆದಿಯು, ಆಕೆಯೇ ಮಹಾಮಾಯೆ. ಆಕೆಯಿಂದಲೇ ಶಬ್ದಗಳು ಮೊಳೆಯುವುವು. ಅಪಾರ ವೇದಗಳೆಲ್ಲಾ ಆಕೆಯ ಮುಖದಿಂದ ಬಂದವು. ಶಬ್ದಗಳಲ್ಲಿರುವ ಅಭ್ಯಂತರವನ್ನು ಎತ್ತಿತೋರಿಸಿದವಳು. ಯೋಗಿಗಳಿಗೆ ಸಮಾಧಿಯೂ, ಧೀರರಿಗೆ ಕೃತಬುದ್ಧಿಯೂ ಆಗಿ, ಉಪಾಧಿಯೂ ಅವಿದ್ಯೆಯನ್ನು ಹರಿದೊಗೆಯುವಳು. ಈಕೆ ಮಹಾ ಪುರುಷ ಬ್ರಹ್ಮನ ರಾಣಿ. ಜ್ಞಾನಿಗಳಿಗೆ ಶಾಂತಿದಾತೆ, ಈಶ್ವರನ ಮಾಯೂ ಶಕ್ತಿಯೆಂದರೆ ಆಕೆಯೇ. ಆಶೆಯನ್ನು ತೊರೆದ ಜ್ಞಾನಿಗಳಲ್ಲಿಯ ವಿರಕ್ತಿಯು ತಾನಾಗಿ ಆಕೆ ಶೋಭಿಸುವಳು. ಲೀಲೆಯಿಂದ ಅನಂತ ಬ್ರಹ್ಮಾಂಡಗಳನ್ನುಂಟು ಮಾಡಿ, ವಿನೋದದಿಂದ ಅವನ್ನೆಲ್ಲಾ ಮುರಿದುಹಾಕುವ ಮಹಾ ಪುರುಷನ ಸೀಮೆಯನ್ನು ಮೀರಿಸಿಂತವಳೆಂದರೆ ಈಕೆಯೆ. ಈಕೆ ಬ್ರಹ್ಮಾದಿಗರಿಗೂ ಪ್ರತ್ಯಕ್ಷ ನೋಡಲು ತೋರದಾಗುವಳು. ಈಕೆ ಜಗದಾತ್ಮನ ಸರ್ವ ನಾಟಕಕ್ಕೆ ಜೀವಾಳವು. ಬುದ್ಧಿವಂತರ ನಿರ್ಮಲ ಸ್ಫೂರ್ತಿಯೂ, ಸ್ವಾನಂದದವರ ಜ್ಞಾನ ಶಕ್ತಿಯೂ ಆಗಿರುವಳು.

ಈಕೆಯ ಸುಂದರ ರೂಪು ಶೋಭಾಯಮಾನವು. ಈಕೆ ಪರಬ್ರಹ್ಮನೆಂಬ ಸೂರ್ಯನ ಕಾಂತಿಯಿರುವವಳು. ಮೋಕ್ಷ ಲಕ್ಷ್ಮಿಯ ಪ್ರಾಪ್ತಿಗೆ ಕಾಲ್ಯಾಣಕಾರಿಯು, ಸತ್ವರೂಪಳೂ, ಲಾವಣ್ಯಸ್ವರೂಪಳೂ ಇವಳಾಗಿರುವಳು. ಈಕೆ ಅವ್ಯಕ್ತ ಪರಬ್ರಹ್ಮನಲ್ಲಿ ವ್ಯಕ್ತಳಾಗಿ ತೋರುವಳು. ಇಚ್ಛಾಶಕ್ತಿಯನ್ನು ಹೆಚ್ಚಿಸುವವಳು. ಕಾಲವನ್ನು ನಿಯಂತ್ರಣದಲ್ಲಿರಿಸಿಕೊಂಡು ಸದ್ಗುರುವಿನ ಕೃಪೆಗೆ ಪಾತ್ರರನ್ನಾಗಿ ಮಾಡುವವಳು. ಪಾರಮಾರ್ಥಿಕರಲ್ಲಿ ಸಾರಾಸಾರ ವಿಚಾರವನ್ನು ಉದ್ಭಾತಿಸುವವಳು. ಕೇವಲ ಶಬ್ದ ಬಲದಿಂದ ಭವ ಸಾಗರವನ್ನು ದಾಟಿಸುವವಳು.

ಈ ಶಾರದಾ ದೇವಿಯು ತನ್ನ ಕರ್ತೃತ್ವ ಶಕ್ತಿಯಿಂದ ತಾನೇ ವಾಣಿಯಲ್ಲಿ ಸ್ಥಿತಳಾಗಿ ನಿಂತು ವೇದಗಳನ್ನು ಬೀರಿದಳು. ಈಕೆ ಬ್ರಹ್ಮಾದಿಗಳಿಗೆ ಜನನಿಯಾಗಿ ಹರಿಹರರಿಂದ ಮೂರು ಲೋಕಗಳನ್ನೊಳಗೊಂಡ ಸೃಷ್ಟಿಯನ್ನು ರಚಿಸಿ ವಿಸ್ತಾರಗೊಳ್ಳುವಂತೆ ಮಾಡಿದಳು. ಇಂತಹ ಮಹತ್ತಮೆ ಹಾಗೂ ದೇವಾಧಿದೇವತೆಯಾದ ಶ್ರೀ ಶಾರದೆಗೆ ನನ್ನ ನಮಸ್ಕಾರವು.

(—ದಾಸಬೋಧೆಯಿಂದ)

ಸುವ್ಯವಸ್ಥಿತ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್
ವ್ಯವಹಾರಗಳಿಗೆ ತನ್ನ 62 ಶಾಖೆಗಳಿಂದ ಹಬ್ಬಿರುವ
"ವಿಜಯ ಬ್ಯಾಂಕಿ"ನಲ್ಲಿ ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 8% ವರೆಗಿನ ಬಡ್ಡಿ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ಹೆ. ಆಫೀಸು— "ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—3

ವೈಷ್ಣವ ಶಿಖಾಮಣಿ
ಕನಕದಾಸ ರಚಿತ
ಹರಿಭಕ್ತಿಸಾರ
ಎಂಬ ಅಮೂಲ್ಯ ಕೃತಿಯನ್ನು
ನೀವು ಓದಿರುವಿರಾ?
ಚಂಚಲವಾದ ಮನಸ್ಸನ್ನು ಶುಭಕರವಾದ ವಿಷಯದ ಮೇಲೆ ಕೇಂದ್ರೀಕರಿಸಿ ಸತ್ಕಾರ್ಯಗಳಲ್ಲಿಯೇ ತತ್ಪರವಾಗುವಂತೆ ಮಾಡುವ ಕೃತಿ.
ಬೆಲೆ: 0-19 ಪೈಸೆ.
0-30 ಪೈಸೆ ಸ್ಟಾಂಪು ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಿನಿಂದ ಕಳಿಸಬಹುದು.
ರಖಂ ಪ್ರತಿಗಳಿಗೆ ವಿಚಾರಿಸಿರಿ:-
ನವಯುಗ ಪ್ರೆಸ್, ಉಡುಪಿ.

ವಿವೇಚನೆ

ವಿಶ್ವಮಾನ್ಯ-ಗಾಂಧೀಜಿ

ಬರೆದವರು: ಶ್ರೀ ಆರ್. ಆರ್. ದಿವಾಕರ.

ಗಾಂಧೀ ಜಯಂತಿಯ ಸಂದರ್ಭದಲ್ಲಿ ಎಪ್ಪತ್ತೊಂಭತ್ತು ವರ್ಷ ನಮ್ಮೆಲ್ಲರೊಡನೆ ಒಡನಾಡಿಯಾಗಿ ಬಾಳಿ, ನಮ್ಮನ್ನು ಅತ್ಯಂತ ವಾತ್ಸಲ್ಯದಿಂದ ಕಂಡು, ನಮ್ಮ ಅಭ್ಯುದಯಕ್ಕೆ, ನಮ್ಮ ವಿಮೋಚನೆಗೇ ಜಂತಪಿಸಿದ ರಾಷ್ಟ್ರಪಿತ ಗಾಂಧೀಜಿಯವರ ಬಗ್ಗೆ ನಮ್ಮ ನಡೆ ಹೇಗಿರಬೇಕು? ನುಡಿ ಹೇಗಿರಬೇಕು?

ಕನಿಷ್ಟ ಪಕ್ಷ ಗಾಂಧೀಜಿಯವರನ್ನು ಕೃತಜ್ಞತೆಯಿಂದ ನೆನಪು ಮಾಡಿಕೊಳ್ಳಬೇಕು; ನಮಗಾಗಿ ಅವರು ಪಟ್ಟ ಶ್ರಮಕ್ಕಾದರೂ ಹೆಚ್ಚಿನ ಕೃತಜ್ಞತೆಯನ್ನು ಸಲ್ಲಿಸಬೇಕೆಂದರೆ, ಅವರ ಜೀವನ ತತ್ವಜ್ಞಾನವನ್ನು ಅರಿತು, ಅದರಂತೆ ಆಚರಿಸಬೇಕು.

ಗಾಂಧೀಜಿಯವರ ಜನ್ಮಶತಾಬ್ದಿ ಸನಿಹದಲ್ಲೇ ಬಂದಿದೆ. ಭಾರತವಲ್ಲದೆ ಇತರ ಅನೇಕಾನೇಕ ರಾಷ್ಟ್ರಗಳು ಮಹಾತ್ಮಾಜಿಯವರ ಶತಾಬ್ದಿಯನ್ನು ಸೂಕ್ತರೀತಿಯಲ್ಲಿ ಆಚರಿಸಲು ಎತ್ತುಗಡೆ ಮಾಡುತ್ತಿರುವ ವಿಷಯ ಅರ್ಥವತ್ತಾಗಿದೆ. ಗಾಂಧೀಜಿಯವರು ಒಂದೇ ದೇಶದ ಸ್ವತ್ತಲ್ಲ. ಸಮಸ್ತ ಮಾನವ ಜನಾಂಗಕ್ಕೆ ಸೇರಿದ ವ್ಯಕ್ತಿಯಾಗಿದ್ದಾರೆ, ಮಾನವ ಕುಲಕ್ಕೇ ಮಾರ್ಗದರ್ಶಕರಾಗಿದ್ದಾರೆ. ಗಾಂಧೀಜಿಯವರ ಸಾಧನೆಯನ್ನಾಗಲೀ ಅಥವಾ ಅವರ ತತ್ವಜ್ಞಾನವನ್ನಾಗಲಿ ನಾವು ಸ್ಮರಿಸಿಕೊಳ್ಳುವದು ನಮ್ಮ ಸ್ವಂತ ಪ್ರಯೋಜನಕ್ಕೆಂದೇ.

ಗಾಂಧೀಜಿಯವರಿಗೆ ನಾವು 'ಮಾತಿನಿಂದಲ್ಲ, ಕೃತಿಯಿಂದ' ಶ್ರದ್ಧಾಂಜಲಿಯನ್ನರ್ಪಿಸಬೇಕು. ಸಾಹಸ ಶ್ರಮ ಪ್ರಧಾನವಾದ ಗಾಂಧೀಜಿಯವರ ವಿಚಾರದೋಹನವನ್ನು ನಾವು ಆಲೋಚಿಸುವದೇ ಆದರೆ, ಅದನ್ನ ನಮ್ಮ ಕೃತಿಗಳಲ್ಲಿ ಇಳಿಸಿ ತೋರಿ ನಮ್ಮ ಬದುಕನ್ನು ಇನ್ನೂ ಉತ್ತಮ, ಇನ್ನೂ ಉದಾತ್ತ ಮಾಡಿಕೊಳ್ಳಬೇಕು. ಎತ್ತರದ ಅಂತಸ್ತಿನ, ಹೆಚ್ಚಿನ ಸುಂದರಮಯವಾದ ಭವಿತವ್ಯದತ್ತ, ಶಾಂತಿಯನ್ನು ನೀಡಬಲ್ಲ ಭವಿತವ್ಯದತ್ತ ಮನುಷ್ಯನು ನಿಃಸಂಶಯವಾಗಿ ಮುನ್ನುಗ್ಗುತ್ತಿದ್ದಾನೆ. ಆ ದಿಶೆಯತ್ತ ಹೋಗಲು ಕೈಹಿಡಿದು ಹೇಳಿ ಹೆಜ್ಜೆಯನ್ನಿಡಿಸಲು ಮುಂದಾದ ಮುಖಂಡರಲ್ಲಿ ಗಾಂಧೀಜಿಯವರು ಅದ್ವಿತೀಯರು. ಮನುಷ್ಯನಿಂದು ಕವಲು ದಾರಿಯ ಮಧ್ಯ ನಿಂತಿದ್ದಾನೆ. ಒಂದು ಹಾದಿ ವಿನಾಶದತ್ತ, ಮೃತ್ಯುವಿನತ್ತ ಒಯ್ಯುತ್ತಿದ್ದರೆ ಇನ್ನೊಂದು ಋಜುವಾದ ಪ್ರಗತಿಪರ ಬದುಕನ್ನು ಕಟ್ಟಲು ಒಯ್ಯುತ್ತದೆ. ಗಾಂಧೀಜಿಯವರು ಪ್ರೇಮ ಮತ್ತು ಅಹಿಂಸೆಯಿಂದ ನಿರ್ಭೀತಿಯ ಸತ್ಪಥವನ್ನು ಹಿಡಿಯಲು ಕರೆ ಇತ್ತಿದ್ದಾರೆ. ಯುದ್ಧವಿಲ್ಲದ ವಿನಾಶ ಕಾಣದ ಪ್ರಪಂಚವನ್ನು ರೂಪಿಸಲು ಗಾಂಧೀಜಿಯವರು ಬಯಸಿದರು: ಶೋಷಣೆ ಮತ್ತು ಅನ್ಯಾಯಗಳನ್ನು ಕಾಣದ ಸಮಾಜ ರಚನೆಗೆ ಕಾತರಿಸಿದರು.

ಮನುಷ್ಯನ ಭವಿಷ್ಯತ್ತಿನ ಬಗ್ಗೆ, ಅವನ ಕಲ್ಯಾಣದ ಬಗೆಗೇ ಅನುಗಾಲವೂ ಚಿಂತಿಸುತ್ತಿದ್ದ ಗಾಂಧೀಜಿಯವರು ಜೀವನ ಸತ್ಯಶೋಧನೆಗೆ ಯತ್ನಿಸಿದರ, ಬದುಕಿನ ಕಟ್ಟಳೆಯ ಬಗ್ಗೆ ಯೋಚಿಸಿದರು. ನಮ್ಮ ನಿತ್ಯ ಜೀವನದ ಸುಖದುಃಖಗಳ ಬಗ್ಗೆ ಮತ್ತು ಅವುಗಳ ನಿವಾರಣೆಗಳ ಬಗ್ಗೆ ಗಾಂಧೀಜಿಯವರ ಸಂಶೋಧನೆ ಸಾಗಿತು. ಮನುಷ್ಯನಿಗೆ ತನ್ನ ಬೆಳವಣಿಗೆಯನ್ನು ಸಾಧಿಸಲು ಸ್ವಾತಂತ್ರ್ಯ ಬೇಕು ಎಂಬುದನ್ನು ಗಾಂಧೀಜಿಯವರು ಬಹು ಬೇಗನೆ ಗ್ರಹಿಸಿಕೊಂಡರು.

ಕೇವಲ ಸತ್ಯದ ದರ್ಶನದಿಂದ ಗಾಂಧೀಜಿಯವರು ಎಂದೂ ಸಮಾಧಾನ ಪಡಲಿಲ್ಲ. ಅವರು ಸತ್ಯವನ್ನೇ ಬದುಕಿದರು. ಸತ್ಯದ ಪ್ರತಿಷ್ಠಾಪನೆಗೆ ಅನವರಿಸಿದರು. ಸತ್ಯ ಮತ್ತು ನ್ಯಾಯಕ್ಕಾಗಿ ತಮ್ಮ ಇಡೀ ಜೀವನವನ್ನೇ ಪಣಕ್ಕಿಟ್ಟು ಹೋರಾಡಿದರು. ಇದಕ್ಕಾಗಿ ಅವರು ಉಪಯೋಗಿಸಿದ ಅಸ್ತ್ರಗಳು, ತಮ್ಮ ಶತ್ರುವಿನೊಂದಿಗೆ ಸೆಣಸಾಡುವಾಗಲೂ ಅವರು ಬಳಸಿದ ಆ ಶಸ್ತ್ರಗಳು, ಪ್ರೇಮ ಮತ್ತು ಸದ್ಭಾವನೆ. ಗಾಂಧೀಜಿಯವರು ಹಾಕಿಕೊಟ್ಟ ಎಲ್ಲ ವಿಧಾಯಕ ಕಾರ್ಯಕ್ರಮಗಳ ಗೊಂಚಲುಗಳೂ ಅವರ ಜನಾನುರಾಗದ ಪ್ರತೀಕಗಳೇ ಆಗಿದ್ದವು. ಮಾರ್ಗಗಳನ್ನು ಸ್ವಚ್ಛವಾಗಿ ಉಡುಗಿ ನಿರ್ಮಲತೆಯನ್ನು ಸಾಧಿಸುವ ವಿಷಯವನ್ನೊಳಗೊಂಡು, ಜಾತಿರಹಿತ—ವರ್ಗರಹಿತ ಸಮಾಜ ರಚನೆಯ ವರೆಗಿನ ವಿಷಯದ ವರೆಗೂ, ಗಾಂಧೀಜಿಯವರು ಪ್ರಾರಂಭಿಸಿದ ಜನ ಕಲ್ಯಾಣದ ವಿಧಾಯಕ ಕಾರ್ಯಕ್ರಮಗಳ ಹಿಡಿನೆಲಲನ್ನು ಪ್ರಭಾವವನ್ನು ನಾವು ಸಹಜವಾಗಿ ಗುರುತಿಸಬಹುದು.

ಗ್ರಾಮಾಂತರಗಳ ಪುನರುಜ್ಜೀವನಕ್ಕೆ ಗಾಂಧೀಜಿಯವರೇ ಕಾರಣ ಪುರುಷರು. ಭಾರತ ಸಂವಿಧಾನದ ನಿರ್ದೇಶನ ತತ್ವಗಳು ಗಾಂಧೀ ವಿಚಾರಗಳಿಂದಲೇ ಪ್ರೇರಿತವಾಗಿವೆ. ನೆಹರೂಜಿಯವರು ಎತ್ತಿ ಹಿಡಿದ ಅಲಿಪ್ತನೀತಿ, ಮತ್ತು ಪಂಚಶೀಲ ತತ್ವಗಳು ಗಾಂಧೀಜಿಯವರ ಉದ್ದೇಶಗಳನ್ನೇ ಪ್ರತಿಬಿಂಬಿಸುತ್ತವೆ.



ನಿಃಸ್ವಾರ್ಥ ಸೇವೆ ಮತ್ತು ತ್ಯಾಗಗಳ ಮುಖಾಂತರ ಪ್ರೇಮದ ಅಸ್ತಿವಾರದ ಮೇಲೆ ಮನುಷ್ಯ—ಮನುಷ್ಯ ಸಂಬಂಧವನ್ನು ಪುನಃ ಚೇತನಗೊಳಿಸಲು ಗಾಂಧೀಜಿಯವರು ತಮ್ಮ ಜೀವನದುದ್ದಕ್ಕೂ ಕಾಯಾ ವಾಚಾ ಮನಸಾ ಶ್ರಮಿಸಿದರು. ನೈತಿಕ ಮತ್ತು ಆಧ್ಯಾತ್ಮಿಕ ಪುನರುತ್ಥಾನವೇ ಮನುಷ್ಯನ ಉತ್ಕ್ರಾಂತಿಯ ಉದ್ದೇಶವಾಗಿದೆ ಎಂದು ಗಾಂಧೀಜಿಯವರು ನೆರೆ ನಂಬಿದ್ದರು.

ಪ್ರತಿಯೊಬ್ಬನೂ ಎಲ್ಲ ವಸ್ತುಗಳ ಧರ್ಮದರ್ಶಿ ಎಂದು ತಿಳಿದು ಆ ರೀತಿಯಿಂದ ವರ್ತಿಸಿದರೆ ಗಾಂಧೀಜಿಯವರ ಕಲ್ಪನೆಯ ಗುರಿಯನ್ನು ತಲುಪಲು ಸಾಧ್ಯ. ಇದರಿಂದಾಗಿ ಎಲ್ಲ ವಸ್ತುಗಳ ಬಳಕೆಯನ್ನು ಸ್ವಂತದ ಸಲುವಾಗಿ ಅಲ್ಪ ರೀತಿಯಲ್ಲಿ ಎಲ್ಲರ ಹಿತಕ್ಕಾಗಿ ಬೃಹತ್ ಪ್ರಮಾಣದಲ್ಲಿ, ಮಾಡಲು ಸಹಜವಾಗಿ ಸಾಧ್ಯವಾಗುವದು.

ಮೇಲ್ತರಗತಿಯ ನಾಗರಿಕತೆ ಮತ್ತು ವಿಚಾರ ಧಾರೆಯ ಹೆಸರಿನಲ್ಲಿ ಹಳೆಯ ಸಮಸ್ಯೆಗಳನ್ನ ಬಿಡಿಸಲು ಹೊಸ ಘರ್ಷಣೆಗಳನ್ನು ಹುಟ್ಟುತ್ತಿದ್ದೇವೆ, ಶಾಂತಿ ಸ್ಥಾಪಿಸುತ್ತೇವೆಂದು ಹೇಳಿ ಯುದ್ಧಕ್ಕೆ ಸಜ್ಜುಗುತ್ತಿದ್ದೇವೆ, ನಮ್ಮ ಸಾಮಾನ್ಯ ಶತ್ರುಗಳಾದ ಭೀತಿ, ಅಪನಂಬಿಕೆ ಮತ್ತು ಅಧಿಕಾರ ದಾಹದ ವಿರುದ್ಧ ಹೋರಾಡುವ ಬದಲು ನಮ್ಮ ನಮ್ಮಲ್ಲೇ ಕಚ್ಚಾಡುತ್ತಿದ್ದೇವೆ. ಇದು ಇಂದಿನ ಸ್ಥಿತಿಗತಿಯ ನೋಟ. ಇಂದಿನ ಸ್ಥಿತಿಗತಿಯನ್ನು ಮೀರಿ ಉತ್ತಮ ಮಟ್ಟದ ಪ್ರಜ್ಞೆಯನ್ನು ಪಡೆಯಲು ಕ್ರಾಂತಿಕಾರೀ ಉತ್ಸುಕತೆಯನ್ನು ಗಾಂಧೀಜಿಯವರು ತೋರಿಸಿದರು.

ಗಾಂಧೀಜಿಯವರ ಅಂತರ್ ದೃಷ್ಟಿ ಆಳವಾಗಿತ್ತು. ಅವರು ಸಮಸ್ಯೆಗಳನ್ನು ಶಾಸ್ತ್ರ ಸಮ್ಮತ ರೀತಿಯಲ್ಲಿ ನೋಡುತ್ತಿದ್ದರು. ಮನುಷ್ಯನಿಗೆ ತನ್ನಲ್ಲಿಯ ಸುಪ್ತ ಶಕ್ತಿಯ ಅರಿವಿಲ್ಲ. ಇದು ಅವನ ದೌರ್ಬಲ್ಯ. ಇದರಿಂದಾಗಿ ಅವನ ಕೇಡಿಗೂ, ಅನ್ಯಾಯಕ್ಕೂ ಬಲಿಯಾಗಿದ್ದಾನೆ, ಎಂದು ಗಾಂಧೀಜಿಗೆ ಅನಿಸಿತು. ಆದುದರಿಂದಲೇ ಆತ್ಮಶುದ್ಧಿಗೆ, ಆಚಾರ ಶುದ್ಧಿಗೆ ಗಾಂಧೀಜಿಯವರು ಪ್ರಥಮ ಪ್ರಾಶಸ್ತ್ಯ ನೀಡಿದರು. ಅಂತೆಯೇ ಗಾಂಧೀಜಿಯವರು ನೀತಿಯ ನಿತಾಂತ ಶಕ್ತಿ ಕೇಂದ್ರವಾಗಿದ್ದರು. ಶೀಲಶ್ರೀಯಿಂದ ತುಂಬಿ ತುಳುಕುತ್ತಿದ್ದ ಗಾಂಧೀಜಿಯವರು ತಾವು ಬದುಕಿರುವಾಗಲೇ ಮಾನವತೆಯ ಪ್ರಜ್ಞಾರೂಪರು ಎಂಬ ಅಭಿದಾನವನ್ನು ಹೊಂದಲು ಅರ್ಹರಾಗಿದ್ದರು.

ವಿಶ್ವವು ನೀತಿಯ ಮಾರ್ಗದಲ್ಲಿಯೇ ಮುಂದು ಸಾಗುವದು ಎಂಬ ಮಾತಿನಲ್ಲಿ ಗಾಂಧೀಜಿಯವರಿಗೆ ನಿಶ್ಚಲ ನಂಬಿಕೆ. ಇಂತಹ ನಂಬಿಕೆಯಿಂದಲೇ ಗಾಂಧೀಜಿಯವರ ಕಲ್ಪನೆಯ ರಾಮರಾಜ್ಯದ ಪರಿಕಲ್ಪನೆ ರೂಪುಗೊಂಡಿದ್ದು ಗಾಂಧೀಜಿಯವರು ದೇವರ ಸರ್ವತ್ರ, ಸರ್ವಕಾಲೀನ ಅಸ್ತಿತ್ವನ್ನು ಅರಿತ ಅದರಂತೆ ಆಚರಿಸುತ್ತಿದ್ದರು. ಈ ಅರಿವು ಜೀವನ ಸಂಹಿತೆಯೇ ಆಗಿತ್ತು. ಸತ್ಯವನ್ನೇ ದೇವರು ಎಂದು ಗಾಂಧೀಜಿ ಕರೆದರು. ಸತ್ಯವನ್ನು ಯಾರು ಅಲ್ಲಗಳೆಯ ಬಲ್ಲರು?

ಗಾಂಧೀಜಿಯವರು ನಮ್ಮಲ್ಲಿಯ ಕೇಡುಕನ್ನು, ದೌರ್ಬಲ್ಯವನ್ನು ಕಳಚಿಬಿಡಲು ಕರೆಯಿತ್ತರು. ಗಾಂಧೀಜಿಯವರು ಹಗೆತನವನ್ನು ಪ್ರೇಮದಿಂದ ಗೆಲ್ಲಲು ಸಾಧ್ಯವೆಂದು ಖಂಡಿತವಾಗಿ ನಂಬಿದ್ದರು. ತಮ್ಮ ಈ ನಂಬಿಕೆಯನ್ನು ತಮ್ಮ ಬಾಳುವೆಯುದ್ದಕ್ಕೂ ಪ್ರದರ್ಶಿಸಿ ಅದರಂತೆ ಬದುಕಿ ತೋರಿಸಿದರು. ವಿನಾಶ ಹಾದಿಯನ್ನು ತ್ಯಜಿಸಿ ವಿಧಾಯಕ ಕ್ರಮಕ್ಕೆ ತಮ್ಮ ಪೂರ್ಣ ಬೆಂಬಲವನ್ನು ನೀಡಿದರು.

ತಮ್ಮ ಕಲ್ಪನೆಯ ಸತ್ಯವನ್ನು ಪ್ರೇಮದೊಂದಿಗೂ, ತಮ್ಮ ನಡೆನುಡಿಯ ಪ್ರೇಮವನ್ನು ಸತ್ಯದೊಂದಿಗೂ ಬೆರಸಿದ ಮನುಷ್ಯನೊಬ್ಬನು ಇದೋ, ಇಲ್ಲಿದ್ದಾನೆ —ಗಾಂಧೀಜಿಯವರ ರೂಪದಲ್ಲಿ.

ನಮ್ಮ ಕಣ್ಣ ಮುಂದೆಯೇ ತಮ್ಮ ಘನ ವ್ಯಕ್ತಿತ್ವವನ್ನು ರೂಪಿಸಿಕೊಂಡ ಮಹಾತ್ಮರ ಜನ್ಮಶತಾಬ್ದಿ ನಮ್ಮ ಮುಂದಿದೆ. ಅದರ ಆಚರಣೆಯ ಬಗ್ಗೆ ತಯಾರಿ ನಡೆದಿದೆ. ರಾಷ್ಟ್ರಾಧ್ಯಕ್ಷರೂ, ಪ್ರಧಾನಿಗಳೂ ಉತ್ಸವ ಮುಖ್ಯ ಅಧ್ಯಕ್ಷರುಗಳಾಗಿ ಸಮಿತಿಯಲ್ಲಿದ್ದಾರೆ. ರಾಜ್ಯಮಟ್ಟದ ಸಮಿತಿಗಳೂ ಕಾರ್ಯ ಮಾಡುತ್ತಿವೆ. ವಿಧಾಯಕ ಕಾರ್ಯ ಚಟುವಟಿಕೆಗಳು ಸಾಗುತ್ತಿವೆ. ಅವರು ತಮ್ಮ ಚಟುವಟಿಕೆಗಳನ್ನು ದ್ವಿಗುಣಗೊಳಿಸುತ್ತಿದ್ದಾರೆ ಉತ್ಸವವನ್ನು ಆಚರಿಸಲು ವೈಯಕ್ತಿಕವಾಗಿ, ಸಂಸ್ಥೆಯ ಮೂಲಕವಾಗಿ, ರಾಷ್ಟ್ರ—ಅಂತರ್‌ರಾಷ್ಟ್ರ ಮಟ್ಟದಲ್ಲಿ ಸಮಿತಿಗಳು ರೂಪಗೊಂಡು ಕಾರ್ಯೋನ್ಮುಖವಾಗಿವೆ.

೧೯೬೮ ಅಕ್ಟೋಬರ್ ೨ರಂದು ಗಾಂಧೀ ಜನ್ಮಶತಾಬ್ದಿ ಇಂದು ಗಾಂಧೀಜಿಯವರು ತೋರಿಸಿದ ಮಾರ್ಗದಲ್ಲಿ ನಮ್ಮ ವಿಶ್ವಾಸ, ಕೃತಜ್ಞತೆಗಳನ್ನು ವ್ಯಕ್ತಪಡಿಸೋಣ. ದೇಶವು ಪ್ರಗತಿಪಥ ತುಳಿದು ಮಹತ್ ಸಾಧನೆಯನ್ನು ಸಾಧಿಸಿದ ಶ್ರದ್ಧಾಂಜಲಿಗಳನ್ನು ರಾಷ್ಟ್ರಪಿತನಿಗೆ ಅರ್ಪಿಸೋಣ.

(ಆಕಾಶವಾಣಿ ಕೃಪೆಯಿಂದ).

ಗಿಂಡಿಯ ಗಡಿಯಾರ

(ಒಂಭತ್ತನೇ ಪುಟದಿಂದ)

ದ್ದಾರೆ. ಅವರು ಬಹು ದಕ್ಷರೆಂಬುದು ಸಮರ್ಥಿತವಾಗಿದೆ' ಎಂದರು.

ಭಾರತದ ಸುವ್ಯವಸ್ಥಿತ ಕೈಗಾರಿಕಾ ಕ್ಷೇತ್ರಗಳಲ್ಲಿ ಒಂದೆಂದು ಭಾವಿಸಲಾದ ಮದರಾಸಿನ ಗಿಂಡಿ ಕ್ಷೇತ್ರದಲ್ಲಿರುವ ಸುಮಾರು ೧೦೦ ಕಾರ್ಖಾನೆಗಳಲ್ಲಿ ಟೈಂ ಪಿಡ್ಸ್‌ನದೂ ಒಂದು

"ದೇಶದಲ್ಲೆಲ್ಲ ಸಣ್ಣ ಕೈಗಾರಿಕೆಗಳು ಆರಂಭವಾಗಲು ಸಹಾಯಕವಾಗಿ ಭಾರತ ಕೈಗಾರಿಕಾ ಕ್ಷೇತ್ರಗಳನ್ನ ಸ್ಥಾಪಿಸಿದೆ. ಇದು ದೂರ ದೃಷ್ಟಿಗ ದ್ಯೋತಕ. ಇಲ್ಲಿ ಲಭ್ಯವಿರುವ ಸೌಕರ್ಯಗಳು, ಸಣ್ಣ ಕೈಗಾರಿಕೆಗಳಿಗೆ ತಮ್ಮ ತಾಂತ್ರಿಕ ಸಮಸ್ಯೆಗಳನ್ನು ಬಿಡಿಸಿಕೊಳ್ಳಲು ಬಹುವಾಗಿ ನೆರವಾಗುತ್ತವೆ ಎಂದರವರು.

ಟೈಂ— ಏಯ್ಡ್ಸ್ ಭಾರತೀಯ ಸಂಸ್ಥೆ; ಟಿ.ಟಿ. ವಾಸು ಅದರ ಜಂಟಿ ಮ್ಯಾನೇಜಿಂಗ್ ಡೈರೆಕ್ಟರ್.

ಪರಿಸ್ಥಿತಿ

ಕೃಷಿಯೇತರ ಉದ್ದೇಶಗಳಿಗೆ ಸಾಗು ಭೂಮಿಯ ಬಳಕೆ!

ಶ್ರೀ ಟಿ. ಎ. ಪೈ

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬೇಸಾಯಕ್ಕೆ ಅನುಕೂಲವಾದ ಭೂಮಿಯು ಅಮಿತವಾಗಿಲ್ಲ. ಇರುವ ಹೊಲಗಳನ್ನು ಸಮತಟ್ಟುಗೊಳಿಸಿ, ಕಟ್ಟಕಡೆಗೆ ಕೃಷಿಯೋಗ್ಯ ಭೂಮಿಯನ್ನಾಗಿ ಮಾಡಲು ನಮ್ಮ ಹಿರಿಯರು ತಲತಲಾಂತರದಿಂದ ಶ್ರಮಿಸಿದ್ದೇ ಕಾರಣ. ಸ್ವಾತಂತ್ರ್ಯ ದೊರೆತ ಅನಂತರ ನಾವು ಸಾಗು ಭೂಮಿಯನ್ನೇನೂ ಹೆಚ್ಚು ವಿಸ್ತರಿಸಿಲ್ಲ. ಇದ್ದ ಭೂಮಿಯನ್ನು ಉಳಿಸಿಕೊಂಡು, ಸಾಧ್ಯವಿರುವಲ್ಲೆಲ್ಲ ಭೂಮಿಯನ್ನು ಕೃಷಿ ಯೋಗ್ಯವಾಗುವಂತೆ ಮಾಡಿಕೊಂಡು ಹೆಚ್ಚು ಬೆಳೆದರೆ ಮಾತ್ರವೇ ಹೆಚ್ಚುತ್ತಿರುವ ಜನಸಂಖ್ಯೆ ಉಣ್ಣಬಹುದು.

ಪರಿಸ್ಥಿತಿ ಹೀಗಿದ್ದರೂ ಉತ್ತಮ ಸಾಗು ಭೂಮಿಯನ್ನು ಬಂದರ, ರಸ್ತೆ, ಮನೆ, ಕೈಗಾರಿಕೆಗಳ ಹೆಸರಿನಿಂದ ಕೃಷಿಯೇತರ ಉದ್ದೇಶಗಳಿಗಾಗಿ ಕೃಷಿಕನಿಂದ ಕಸಿದುಕೊಳ್ಳುತ್ತಿರುವುದು ಆಹಾರ ಹೆಚ್ಚಳದ ಪ್ರಾಮಾಣಿಕ ಚಿಂತನೆಯನ್ನು ಸೂಚಿಸುವುದಿಲ್ಲ.

ನಮ್ಮಲ್ಲಿ ಈಗ ಆಹಾರ ಸಮಸ್ಯೆ ಅತ್ಯಂತ ವಿಕಟವಾಗಿದೆ. ನಮ್ಮ ಅನ್ನದ ಸಮಸ್ಯೆಯನ್ನು ನಿರಂತರವೂ ಹೊರಗಿನ ಆಮದಿನಿಂದಲೇ ಬಗೆಹರಿಸಿಕೊಳ್ಳುವುದು ಸಾಧ್ಯವಿಲ್ಲ. ಕೃಷಿಯ ಕುರಿತು ನಾವು ಸರ್ವ ಪ್ರಾಧಾನ್ಯವಿತ್ತು, ಆಹಾರ ಸ್ವಾವಲಂಬನೆ ಸಾಧಿಸುವುದನ್ನೆ ನಮ್ಮ ಮುಂದಿನ ಎಲ್ಲಾ ಭವಿಷ್ಯವೂ ಅವಲಂಬಿಸಿರುವುದು. ಆದರೆ ಆ ನಿಟ್ಟಿನಲ್ಲಿ ಸರಿಯಾದ ಕಾರ್ಯ ನಡೆಯುವುದಿಲ್ಲ ಮಾತ್ರವಲ್ಲ ಇರುವ ಭೂಮಿಯನ್ನೂ ಬೇಸಾಯೇತರ ಕಾರ್ಯಗಳಿಗಾಗಿ ರೈತರಿಂದ ತೆಗೆದುಕೊಳ್ಳುತ್ತಿರುವರೆಂಬುದು ಆಶ್ಚರ್ಯದ ಆಶ್ಚರ್ಯಕ್ಕಿಂತ ಖೇದದ ವಿಷಯವಾಗಿದೆ.

ಐರೋಪ್ಯ ರಾಷ್ಟ್ರಗಳಲ್ಲಿ ಯಾವ ಅಭಿವೃದ್ಧಿಗೂ ಕೃಷಿ ಭೂಮಿಯನ್ನು ಮುಟ್ಟುವುದಿಲ್ಲ. ಹಿಂದಿನ ಪ್ರಧಾನಿ ದಿವಂಗತ ಪಂಡಿತ ನೆಹರೂಗಳು "ರೈತರಿಂದ ಸಾಗುವಳಿ ಭೂಮಿಯನ್ನು ಸಿಕ್ಕಾಬಟ್ಟೆ ಕಸಿದುಕೊಳ್ಳಬಾರದೆ"ಂದು ಹೇಳಿದರು ಆದರೆ ರಾಜ್ಯ ಸರಕಾರಗಳು ಅವರ ಹಿತನುಡಿಯನ್ನು ಗಮನಿಸಿಲ್ಲ.

ನಮ್ಮ ಜಿಲ್ಲೆಯ ಪಣಂಬೂರು ಮತ್ತು ಆಸುಪಾಸಿನ ಗ್ರಾಮಗಳಲ್ಲಿ ಬಂದರ ಮೊದಲಾದ ಕಾರಣಗಳಿಂದ ಸಾವಿರಾರು ಕುಟುಂಬಗಳು ಫಲವತ್ತಾದ ತಮ್ಮ ಭೂಮಿಯಿಂದ ಹೊರತಳ್ಳಲ್ಪಟ್ಟಿರುವರಲ್ಲದೆ ಇಂದು ಕೈಗಾರಿಕೆಗಳ ಬಗ್ಗೆ ನಿಮ್ಮ ಭೂಮಿಬೇಕೆಂದು ಡೈರೆಕ್ಟರ್ ಆಫ್ ಇಂಡಸ್ಟ್ರೀಸ್—ಇವರು ನೋಟೀಸು ಕೊಟ್ಟಿದ್ದಾರೆಂದು ಹೇಳಲಾಗಿದೆ.

ಕೈಗಾರಿಕೆಗಳು ಬಂದರದ ಹತ್ತಿರವೇ ಇರಬೇಕೆಂದು ಯಾರು ನಿರ್ಣಯಿಸಿದರು? ಜಿಲ್ಲೆಯ ಇತರ ಪ್ರದೇಶಗಳಲ್ಲಿ ಬೇಕಷ್ಟು ಬಂಜರು ಭೂಮಿ ಇರುವಾಗ ಕೃಷಿ ಭೂಮಿಯನ್ನೇ ಮುಟ್ಟಿಸಬೇಕೆಂಬ ಈ ಛಲ ಯಾಕೆ?

ಫಲವತ್ತಾದ ಭೂಮಿಯಿಂದ ಕಿತ್ತೊಗೆಯಲ್ಪಟ್ಟ ಕುಟುಂಬಗಳ ಮೇಲೆ ಕನಿಕರ ಉಂಟಾಗುತ್ತದೆ. ಮೈಸೂರು ಮುಖ್ಯಮಂತ್ರಿಯೊಂದಿಗೆ ನಾನು ಈ ಕುರಿತು ಸಮಾಲೋಚನೆ ನಡೆಸಿದಾಗ ಅವರು ಅನಿವಾರ್ಯ ಪ್ರಸಂಗಗಳಲ್ಲಿ ಮಾತ್ರ ಕೃಷಿ ಭೂಮಿಯನ್ನು ಪಡಕೊಳ್ಳಲಾಗುವುದೆಂದೂ, ಈ ಪ್ರಶ್ನೆಯನ್ನು ಪುನರ್ವಿಮರ್ಶಿಸುವುದಾಗಿಯೂ ಆಶ್ವಾಸನೆ ಇತ್ತಿರುವರು.

ಬಂದರ, ಸಾರಿಗೆ, ಕೈಗಾರಿಕೆಗಳ ಅಭಿವೃದ್ಧಿಗೆ ನಾನು ವಿರೋಧಿಯಲ್ಲ. ಅವೆಲ್ಲ ಬೇಕಾದ ವಿಷಯಗಳೆ! ಆದರೆ ಸ್ವಲ್ಪ ಜಾಗರೂಕತೆಯಿಂದ ತಜ್ಞರ ಸಲಹೆ ಕೇಳಿ ಕೃಷಿ ಭೂಮಿಯನ್ನು ಅಳಿಸದೆ ಈ ಅಭಿವೃದ್ಧಿ ಕಾರ್ಯಗಳನ್ನು ಮಾಡಲು ಸಾಧ್ಯವಿಲ್ಲವೇ? ಇಂತಹ ಪ್ರಯತ್ನವನ್ನಾದರೂ ಮಾಡಲಾಗದೆಯೇ?

ಪುತ್ತೂರು ಪ್ರಿನ್ಸಿಪಾಲ ಮುನ್ಸೀಫರ ಕೋರ್ಟಿನಲ್ಲಿ

O. S. No. 91/66.

ಕೊರೊಪ್ಪೊಳು ಮತ್ತು ಇತರರು—ವಾದಿಯರು

V

ಐತ್ತ ಮತ್ತು ಇತರರು—ಪ್ರತಿವಾದಿಯರು.

ನೋಟೀಸು

ದ. ಕ. ಜಿಲ್ಲಾ, ಬಂಟ್ವಾಳ ತಾಲೂಕು, ಅಳಿಕೆ ಗ್ರಾಮದ ಎಂಬರ್ಜ ಎಂಬಲ್ಲಿರುವ ಬಿರಾಗಿ; ಹೆಂಗಸಿನ ಮಗ ಕುಂಞ್ಞ ಎಂಬವರಿಗೆ ಕೋರ್ಟಿನ ಹುಕುಂ ಪ್ರಕಾರ ತಿಳಿಯಪಡಿಸುವುದೇನೆಂದರೆ—

ವಾದಿಯರು ನಿಮ್ಮ ಮೇಲೆ ಮತ್ತು 28 ಜನರ ಮೇಲೆ ಪುತ್ತೂರು ಪ್ರಿನ್ಸಿಪಾಲ ಮುನ್ಸೀಫ್ ಕೋರ್ಟಿನಲ್ಲಿ O. S No. 91/66 ಎಂಬ ದಾವೆಯನ್ನು ವಾದಿಯರಿಗೆ ಅವರ ಕುಟುಂಬದ ಆಸ್ತಿಯಲ್ಲಿರುವ ಪಾಲು ವಿಂಗಡಿಸಿ ಕೊಡಬೇಕೆಂದು ಹೂಡಿರುತ್ತಾರೆ. ಸದ್ರಿ ದಾವೆಯು ತಾರೀಕು 24—10—1966 ರಂದು ಪ್ರತಿವಾದಿಯರ ಹಾಜರಾತಿಗೆ ಇದೆ. ನೀವು ತಾ. 24—10—1966 ರಂದು ಬೆಳಗ್ಗೆ 11 ಘಂಟೆಗೆ ಪುತ್ತೂರು ಪ್ರಿನ್ಸಿಪಾಲ ಮುನ್ಸೀಫ್ ಕೋರ್ಟಿನೆದುರು ಖುದ್ದಾಗಿ ಅಥವಾ ವಕೀಲರ ಮುಖಾಂತರ ಹಾಜರಾಗಬೇಕು. ತಪ್ಪಿದರೆ ನಿಮ್ಮ ಗೈರು ಹಾಜರಿಯಲ್ಲಿ ದಾವೆಯು ಇತ್ಯರ್ಥವಾದೀತು ತಿಳಿದಿರಲಿ.

(By order of Court)

A. P. GOWRISHANKAR

Puttur, S. K., 5—10—66.

ಪುತ್ತೂರು II Addl. ಮುನ್ಸಿಫ್ ಕೋರ್ಟಿನಲ್ಲಿ

R. E. P. 263/66

in O. S. 370/64.

ವಾರಿಜ —ಅರ್ಜಿದಾರಳು.

ಮತ್ತು

ದೇಂಞ ಹೆಂಗ್ಸು ಕೂಡಾ—ಎದ್ರಿರು.

7 ಮತ್ತು 8ನೇ ಎದ್ರಿಗಳಿಗೆ ಈ ಮೂಲಕ ತಿಳಿಸುವುದೇನೆಂದರೆ—

ಬಂಟ್ವಾಳ ತಾಲೂಕು ಅಳಿಕೆ ಗ್ರಾಮದ ಮುಡಿಯೂಲ ಎಂಬಲ್ಲಿರುವ ದೈಯಕ್ಕ ಹೆಂಗ್ಸಿನ ಮಕ್ಕಳು 7ನೇ ಎದ್ರಿ ಯಮುನ ಮತ್ತು 8ನೇ ಎದ್ರಿ ಮದನಪ್ಪ ಭಂಡಾರಿ:

ಮೇಲ್ಕಾಣಿಸಿದ ಅಮಲ್ದಾರಿ ಅರ್ಜಿಯಲ್ಲಿ ನಿಮ್ಮ ಹಾಜರಾತಿ ಬಗ್ಗೆ ಮತ್ತು ಏಲಂ ಇಸ್ತಿಹಾರಿನ ಶರ್ತಗಳನ್ನು ನಿರ್ಣಯಿಸುವರೆ ತಾ. 26—10—66ಕ್ಕೆ ವಾಯಿದೆ ಇರುತ್ತದೆ. ಆ ದಿವಸ ನೀವು ಬೆಳಗ್ಗೆ 11 ಗಂಟೆಗೆ ಸದ್ರಿ ಕೋರ್ಟ ಮುಂದೆ ಹಾಜರಾಗಿ ಉದಾಹರಿಸಿ ಕೊಳ್ಳತಕ್ಕದ್ದು. ತಪ್ಪಿದಲ್ಲಿ ನಿಮ್ಮನ್ನು ಶಿಮ್ಮಾ ಮಾಡಿ ಅಮಲ್ದಾರಿ ಅರ್ಜಿಯನ್ನು ತೀರ್ಮಾನಿಸಲಾದೀತು ಎಂತ ಕೋರ್ಟಿನ ಹುಕ್ಕುಂ ಮೇರೆಗೆ ನಿಮಗೆ ತಿಳಿಸೋಣಾಗಿಯದೆ.

(Sd) K. T. Bhat

Advocate for Petr.

Puttur, 30—9—66.

ಎಲ್ಲೆಲ್ಲಿ ಏನೇನು?

ಮಕ್ಕಳ ಸಿನೇಮಾ ಕ್ಲಬ್

ಕೇಂದ್ರ ಸರಕಾರದ ಮಕ್ಕಳ ಚಲಚಿತ್ರ ವಿಭಾಗದ ಆಶ್ರಯಪಡೆದ 'Children's Film Society' ಮತ್ತು ಇದರ ಮದ್ರಾಸಿನಲ್ಲಿರುವ ವಿತರಣೆಗಾರರ ಸಂಸ್ಥೆ (UNISO ENTER-PRISES)ದ ಮುಖ್ಯ ಅಧಿಕಾರಿಯೂ ಆಗಿರುವ ಆರ್. ಪದ್ಮನಾಭನ್ ಅವರ ಸಂಚಾಲಕತ್ವದಲ್ಲಿ ಮಕ್ಕಳ ಸಿನೇಮಾ ಕ್ಲಬ್ ಸ್ಥಾಪಿತವಾಯಿತು. ಮದ್ರಾಸು ಮತ್ತು ಮೈಸೂರು ರಾಜ್ಯದಲ್ಲಿ ಶ್ರೀ ಆರ್. ಪದ್ಮನಾಭನ್‌ರವರು ಹಾಕಿ ಕೊಟ್ಟ ಮೇಲ್ಪಂಕ್ತಿಯಂತೆ ದಕ್ಷಿಣ ಭಾರತದ ಹತ್ತು ಊರುಗಳಲ್ಲಿ ಅಲ್ಲಿನ ಜನರಿಂದ ಇದೇ ಮಾದರಿಯ ಮಕ್ಕಳ ಸಿನೇಮಾ ಕ್ಲಬ್ಬುಗಳನ್ನು ರಚಿಸಲಾಗಿದೆ ಉಡುಪಿಯಲ್ಲಿ ಪದ್ಮಶ್ರೀ ಡಾ। ಮಾಧವ ಪೈಯವರು ಅಧ್ಯಕ್ಷರಾಗಿರುವ, ಉಡುಪಿ ಮಕ್ಕಳ ಸಿನೇಮಾ ಕ್ಲಬ್ಬನ್ನು ಸ್ಥಾಪಿಸಲಾಗಿದೆ.

ಈ ಸಂಯುಕ್ತ ಕೂಟಕ್ಕೆ ಅನೇಕ ಯೋಜನೆಗಳನ್ನು ಜಿಲ್ಲೆಯ ತಾಲೂಕು ಕೇಂದ್ರಗಳಲ್ಲಿ ಬಾಲಕರ ಚಲಚಿತ್ರ ಪ್ರದರ್ಶನ ಮಂದಿರ (Childron's Cinema Hall)ಗಳನ್ನು ಸ್ಥಾಪಿಸುವುದು ಒಂದಾಗಿದೆ. ರೂ. 90,000 ಖರ್ಚು ತಗಲುವ ಇಂಥ ಸಿನೇಮಾ ಮಂದಿರವನ್ನು ಕಟ್ಟಲು ರೂ 60,000ವನ್ನು ಕೊಡಲು ಕೇಂದ್ರ ಸರಕಾರ ತಯಾರಿದೆ. ಉಳಿದ ರೂ. 30,000ವನ್ನು ಮಕ್ಕಳ ಸಿನೇಮಾ ಕ್ಲಬ್ಬಿನವರು ಸಂಗ್ರಹಿಸಬೇಕಾಗುವುದು. ಈ ಚಿತ್ರ ಮಂದಿರವನ್ನು ಕಟ್ಟಲು ಸ್ಥಳವನ್ನು ಸರಕಾರದಿಂದ ಪಡೆಯಬಹುದಾಗಿದೆ.

ಬಾಲಕರ ಚಲಚಿತ್ರ ಸಂಘಗಳು ಲಾಭ ಪಡೆದು ಹಣಗಳಿಸುವ ಸಂಸ್ಥೆಗಳಾಗಿರದೆ ಮಕ್ಕಳ ಕೇವಲ ಸಾಂಸ್ಕೃತಿಕ, ಶೈಕ್ಷಣಿಕ ಲಾಭಗಳನ್ನು ಅತ್ಯಲ್ಪ ಖರ್ಚಿನಿಂದ ಒದಗಿಸುವ ಸಂಸ್ಥೆಯಾಗಿದ್ದುದರಿಂದ ಶಾಲಾ ಉಪಾಧ್ಯಾಯರೂ, ಹೆತ್ತವರೂ ಪ್ರೋತ್ಸಾಹಿಸಬೇಕು. ಸಾರ್ವಜನಿಕರು ಸದಸ್ಯರಾಗಲೂ ಬಹುದು.

ಈ ವಿಷಯದಲ್ಲಿ ಹೆಚ್ಚಿನ ಮಾಹಿತಿಯನ್ನು ಉಡುಪಿ "ಚಿಲ್ಡ್ರನ್ಸ್ ಫಿಲ್ಮ್ ಕ್ಲಬ್" ಇದರ ಸೆಕ್ರೆಟರಿಯವರಾದ ಶ್ರೀ ಕೆ. ವಿಠಲ ನಾಯಕ್ ಇವರಿಂದ ಪಡೆಯಬಹುದು.

ಸಂತೋಷ ಕೂಟ

ಮಣಿಪಾಲ, ಸೆ. ೩೦— ತಮ್ಮ ಬೇಡಿಕೆಗಳನ್ನು ಸೂಕ್ತ ರೀತಿಯಲ್ಲಿ ಒತ್ತಾಯಿಸುವುದರ ಮೂಲಕ ಸಂಕ್ಷಿಪ್ತ ಎಂ. ಬಿ. ಬಿ. ಎಸ್ ಶಿಕ್ಷಣ ಪಡೆಯಲು ಆಸಕ್ತಿ ಇದ್ದರೂ ಭಾರತೀಯ ವೈದ್ಯಕೀಯ ಮಂಡಳಿಯ ನಿಯಮದಂತೆ ಇಂಟರ್ ಮೀಡಿಯೆಟ್‌ವರೆಗೆ ಓದಿದ ಅರ್ಹತೆ ಇಲ್ಲದವರು ತಮ್ಮ ಗುರಿಯನ್ನು ಸಾಧಿಸಬಹುದಾಗಿದೆ ಎಂದು ನಿನ್ನೆ ಹೇಳಿ ಇಲ್ಲಿಯ ಶಿಕ್ಷಣ ಎಕಾಡೆಮಿಯ ಅಧ್ಯಕ್ಷ ಡಾ॥ ಟಿ ಎಂ. ಎ. ಪೈಯವರು ಎಲ್. ಎಂ ಪಿ. ವೈದ್ಯರುಗಳಲ್ಲಿ ಆಶೋತ್ಪಯವನ್ನುಂಟು ಮಾಡಿದ್ದಾರೆ.

ಸಂಕ್ಷಿಪ್ತ ಎಂ. ಬಿ. ಬಿ. ಎಸ್. ವಿದ್ಯಾರ್ಥಿಗಳ ಸಂತೋಷ ಕೂಟದಲ್ಲಿ ಅವರು ಮಾತನಾಡುತ್ತಾ ಇಂತಹ ಶಿಕ್ಷಣವನ್ನು ಮುಂದುವರಿಸಬೇಕೆಂದಾದರೆ ಪ್ರತಿ ವರ್ಷ ೧೨ ಮಂದಿಯಾದರೂ ಸೇರ ಬೇಕಾಗುತ್ತದೆಂದರು.

ದೀನರಾದ ಡಾ॥ ಎ. ಕೃಷ್ಣರಾವ್ ಅಧ್ಯಕ್ಷತೆವಹಿಸಿದ್ದರು. ವಿದ್ಯಾರ್ಥಿಗಳಾದ ಡಾ॥ ಟಿ ಎಲ್ ಲಕ್ಷ್ಮೀನಾರಾಯಣ ಸ್ವಾಮಿ, ಡಾ॥ ಜಾಹೀರ್ ಖಾನ್ ಮತ್ತು ಡಾ॥ ಅಬ್ದುಲ್ ಮೊಗ್ರಾಲ್, ಪ್ರಾಧ್ಯಾಪಕರಾದ ಡಾ॥ ಸಿ. ಎಚ್. ಶಿವರಾಮನ್ ಮತ್ತು ಡಾ॥ (ಶ್ರೀಮತಿ) ಎ. ಪದ್ಮಾ ರಾವ್‌ರವರು ಮಾತನಾಡಿದರು. ಡಾ॥ ಕೆ ರಂಗನಾಥ್‌ರವರು ಎಲ್ಲರನ್ನೂ ಸ್ವಾಗತಿಸಿದರು. ಡಾ॥ ಸಮಿಉಲ್ಲಾ ವಂದನೆಗಳನ್ನು ಸಲ್ಲಿಸಿದರು.

ಜ್ಞಾನೋಪಾಸನೆ ಮಾಡಿರಿ

ಕಡಿಯಾಳಿ, ಅ. ೯.

"ನಿರ್ಬಲಾತ್ಮ. ದುರಾತ್ಮಗಳನ್ನು ಗೆದ್ದು ಮಹಾತ್ಮನೆಂದು ಜಗತ್ತಿನಲ್ಲಿ ಖ್ಯಾತಿಯನ್ನು ಪಡೆದ ಮುಕ್ತಾತ್ಮನಾದ ಗಾಂಧೀಜಿಯವರ ಆದರ್ಶಗಳನ್ನು ನಾವು ನಮ್ಮ ಜೀವನದಲ್ಲಿ ಪ್ರತಿಕ್ಷಣವೂ ಆಚರಣೆಯಲ್ಲಿ ತರಬೇಕು. ಮನೋವಾಕ್ಕಾಯಗಳಲ್ಲಿ ಏಕರೂಪವಾಗಿ ನಡೆದುಕೊಳ್ಳುವುದು, ಜ್ಞಾನೋಪಾಸನೆ ಮಾಡುವುದು ಇದಕ್ಕಿರುವ ಏಕಮೇವ ಮಾರ್ಗ" ಎಂದು ಶ್ರೀ ಪಿ. ಸಂಜೀವ ಕಾಮತ್ ಅವರು ಸ್ಥಳೀಯ ಯು. ಕಮಲಾ ಬಾಯಿ ಹೈಸ್ಕೂಲಿನಲ್ಲಿ ಗಾಂಧೀಜಯಂತಿ ಸಮಾರಂಭದಲ್ಲಿ ವಿದ್ಯಾರ್ಥಿಗಳಿಗೆ ಕರೆಯಿತ್ತರು. ಶಾಲೆಯ ಶಕ್ತಿ ಮಂದಿರವು ಈ ಸಮಾರಂಭವನ್ನು ಸಂಘಟಿಸಿತ್ತು.

ಮಂದಿರದ ನಾಯಕ ಶ್ರೀ ರಮೇಶ ನಾಯಕರು ಅತಿಥಿಗಳಿಗೆ ಸ್ವಾಗತ ನೀಡಿದರು. ಶಾಲೆಯ ಪರವಾಗಿ ವಿದ್ಯಾರ್ಥಿನಾಯಕ ಶ್ರೀ ಶಿವ ಪೂಜಾರಿಯವರು ಹಾರಾರ್ಪಿಸಿದರು. ವಿದ್ಯಾರ್ಥಿಗಳಾದ ಸರ್ವಶ್ರೀ ಕೃಷ್ಣ ಉಪಾಧ್ಯ, ಯು. ಬಿ ರಾಜಾರಾಮ, ಪಿ. ಸಕುಮಾರ ಕಾಮತ್ ಮತ್ತು ಗಣಪತಿ ಶೆಟ್ಟಿಯವರು ಮಹಾತ್ಮರ ಜೀವನ ಪರಿಚಯ ಮಾಡುತ್ತ ಅವರು ಮಹಾನತೆಯನ್ನು ಗಳಿಸಿಕೊಂಡ ಬಗೆಯನು ವಿವರಿಸಿದರು. ಶ್ರೀಗಳಾದ ಸುಬ್ರಾಯ ಭಕ್ತ, ಮಧ್ವಾಚಾರ್ಯ, ಕುಮಾರಿಯರಾದ ಸುಗಂಧಿ, ಪಿ. ಸರೋಜ, ಕಮಲ ಇವರು ರಾಷ್ಟ್ರಪಿತನ ಮತ್ತು ರಾಷ್ಟ್ರಪ್ರೇಮದ ಗೀತೆಗಳನ್ನು ಹಾಡಿದರು. ಮಹಮ್ಮದ ಜಪ್ರುಲ್ಲಾ, ಆನಂದ, ಜಗನ್ನಾಥ ಗೋಪಾಲ ಸೇರಿಗಾರ, ಸರಸ್ವತಿ ಕಾಮತ್ ಮತ್ತು ಭಾರತೀ ದೇವಿಯವರು ಮನರಂಜನೆಯನ್ನು ನೀಡಿದರು. ಮಂದಿರದ ಉಪನಾಯಿಕೆ ಕುಮಾರಿ ಮೇರಿ ಆಳ್ವಾರ್ರು ವಂದನಾರ್ಪಣೆಗೈದರು.

ಈ ಸಂದರ್ಭದಲ್ಲಿ 'ಅಹಿಂಸಾ ಪರಮೋ ಧರ್ಮ' ಎಂಬ ವಿಷಯದಲ್ಲಿ ಲೇಖನ ಸ್ಪರ್ಧೆಯನ್ನೂ, "ಭಾರತೀಯ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಮಹಾತ್ಮರು ವಹಿಸಿದ ಪಾತ್ರ" ಎಂಬುದರ ಮೇಲೆ ಭಾಷಣ ಸ್ಪರ್ಧೆಯನ್ನೂ ಏರ್ಪಡಿಸಿದ್ದು ವಿಜಯಿಗಳಾದ ರಾಘವೇಂದ್ರ ಉಪಾಧ್ಯ, ಕೃಷ್ಣಯ್ಯ ಶೆಟ್ಟಿ, ಕೃಷ್ಣ ಉಪಾಧ್ಯ, ಸುಕುಮಾರ ಕಾಮತ್ ಮತ್ತು ಜ್ಞಾನೇಶ ಶೆಟ್ಟಿ ಇವರಿಗೆ ಪ್ರಶಸ್ತಿ ಪತ್ರಗಳನ್ನು ನೀಡಲಾಯಿತು.

ಪುತ್ತೂರು ಪ್ರಿನ್ಸಿಪಾಲ್ ಮುನ್ಸಿಫ್ ಕೋರ್ಟಿನಲ್ಲಿ

R. I. A. 1927/61

in, O.S. 430/59

ಮರಿಯಮ್ಮ ಕೂಡಾ —ಅರ್ಜಿದಾರರು

ಮತ್ತು

ಅಬ್ದುಲ್ಲ ಮುಕ್ರಿ ಕೂಡ —ಎದ್ರಿರು.

8ಮತ್ತು 9ನೇ ಎದ್ರಿಗಳಿಗೆ—ಪುತ್ತೂರು ತಾಲ್ಕು ಕೊಳ್ತಿಗೆ ಗ್ರಾಮದಲ್ಲಿರುವ ಅಂದುಂಞಬ್ಯಾರಿಗಳ ಮಕ್ಕಳು 8ನೇ ಎದ್ರಿ ಆತಮ್ಮ ಮತ್ತು ನೆಟ್ಟಣಿಗೆ ಗ್ರಾಮದ ಮೂಲೆಕಂಡ ಎಂಬಲ್ಲಿರುವ 9ನೇ ಎದ್ರಿ ಕುಂಞಆಮ್ಮ ಇವರಿಗೆ—

ಮೇಲ್ಕಂಡ ವ್ಯವಹಾರಣೆಯಲ್ಲಾದ ಪ್ರಿಲಿಮಿನರಿ ಡಿಕ್ರಿ ಪ್ರಕಾರ ಜವಾಬ್ದಾರಿ ಆಸ್ತಿ ವಿಂಗಡಿಸಿ ಕೊಳ್ಳುವರೆ ಫೈನಲ್ ಡಿಕ್ರಿ ಕೊಡಿಸ ಬೇಕೆಂತ ಮೇಲ್ಕಂಡ ಅರ್ಜಿದಾರರು ಮಾಡಿಕೊಂಡ ಅರ್ಜಿಯು ತಾ 26—10—1966ಕ್ಕೆ ನಿಮ್ಮ ಹಾಜರಾತಿ ಬಗ್ಗೆ ಮತ್ತು ಆಕ್ಷೇಪಗಳಿದ್ದಲ್ಲಿ ತಿಳಿಸುವರೆ ವಾಯಿದೆ ಇರುತ್ತದೆ. ಆದುದರಿಂದ ನೀವು ಆದಿವಸ ಬೆಳಗ್ಗೆ 11 ಗಂಟೆಗೆ ಸದ್ರಿ ಕೋರ್ಟಿನಲ್ಲಿ ಹಾಜರಾಗಿ ಉದಾಹರಿಸಿ ಕೊಳ್ಳಲು ತಪ್ಪಿದಲ್ಲಿ ನಿಮ್ಮನ್ನು ಶಿಮ್ಮಾ ಮಾಡಿ ಅರ್ಜಿಯನ್ನು ತೀರ್ಮಾನಿಸಲಾದೀತು ಎಂತ ನಿಮಗೆ ಈ ಮೂಲಕ ತಿಳಿಸೋಣಾಗಿಯದೆ.

(By order of the Court)

(Sd) K. T. Bhat

Advocate for Petr.

Puttur, 10—10—66.

ಬಲಿದಾನ

(ಎರಡನೇ ಪುಟದಿಂದ)

'ಹಿರೇ ಮಗಳನ್ನು ಮನೇಲಿಟ್ಟು ಕಿರಿಯವಳಿಗೆ ಲಗ್ನ ಮಾಡಿದರೆ ಅವಳ ತಲೆಯ ಮೇಲೆ ನಾವೇ ಕಲ್ಲೆತ್ತಿ ಹಾಕಿದಂತಾಗುವದಿಲ್ವೇ?'

"ಇನ್ನೆಷ್ಟು ವರ್ಷ ಕಾದರೂ ವ್ಯರ್ಥ ಅಂತ ಕಾಣ್ತಾವೆ. ಸುಮಿ ಹಾಗೆ ಕೊರಗಿದರೆ ಶಾಲಿನಿ ಹೇಗೆ ಕೊರಗ ಬೇಕಾಗುತ್ತೋ ಏನೋ?"

"ಏನು ಮಾಡೋದು? ಯಾವುದೂ ಅರ್ಥವಾಗ್ತಾ ಇಲ್ಲ. ಶಾಲಿನಿಯ ಅರ್ಧ ರೂಪವಾದರೂ ಸುಮಿಗಿರುತ್ತಿದ್ದರೆ......"

"ಗುಣ ಬಂಗಾರದ್ದು. ಕೈ ಹಿಡಿಯುವವನಿಗೆ ಗುಣಕ್ಕಿಂತಲೂ ರೂಪವೇ ಮುಖ್ಯವಾಗಿದೆ ಒಂದೇ ಹಣಾ. ದ್ವರಿ ಹೇಗಾದರೂ ಮಾಡಬಹುದಿತ್ತು" ಇದ್ದದ್ದನ್ನೆಲ್ಲ ಕೊಟ್ಟಾದ್ರೂ ಮದುವೆಗೆ ಪ್ರಯತ್ನಿಸಬಹುದಿತ್ತು.

"ಸುಮ್ಮನೆ ಇಲ್ಲದ್ದನ್ನು ಹೇಳ ಬೇಡಾ! ಪಾಪ ಶಾಲಿನಿ ಕೇಳಿದರೆ ನೊಂದು ಕೊಂಡಾಳು. ಎಲ್ಲವೂ ಅವರವರ ಕರ್ಮ."

"ಶಾಲಿನಿಯನ್ನೇ ತೋರಿಸಿ ಕೊನೆಗೆ ಸುಮಿಯನ್ನೇ ಏಕೆ ಧಾರೆ ಎರೆಯ ಬಾರದು ಅಂತೀನಿ?"

"ಮದುವೆ ಮಾಡೋದು ಸುಖ ಪಡೆಯುವುದಕ್ಕಾಗಿ. ಆ ಮೇಲೆ ನಿಜಾಂಶ ತಿಳಿದಾಗ ಸುಮಿ ಕಣ್ಣೀರಿನಲ್ಲಿ ಕೈ ತೊಳೆಯ ಬೇಕಾದೀತು."

"ಏನೋ ದೇವರು ನಡೆಸಿದ ಹಾಗಾಗಲಿ. ರಾತ್ರಿ ವಿಪರೀತ ವಾಯ್ತು ಅಂತ ಕಾಣುತ್ತೆ. ಸುಮ್ನೆ ಮಲಗಿ ಕೊಳ್ಳಿ." ಎಂದು ಹೇಳಿ ದೀಪವಾರಿಸಿದಳು.

ಮಾತು ಕೊನೆ ಮುಟ್ಟಿದಾಗ ಶಾಲಿನಿಯ ಮನದಲ್ಲಿ ಹೊಯ್ದಾಟ ಪ್ರಾರಂಭವಾಗಿತ್ತು. ಅಕ್ಕನ ದುರವಸ್ಥೆಗಾಗಿ ಅವಳೂ ಮರುಕಗೊಂಡಿದ್ದಳು. ಅಂದು ಅಕ್ಕಳೇ ಬೇಕೆಂದು ಹೊರ ಬಂದಿಲ್ಲ. ಆದರೆ ಬಂದ ಅನಂತರ ಕಾರ್ಯ ಮುಗಿದಾಗ ಆತಳಿಗೂ ತನ್ನ ತಪ್ಪಿನ ಅರಿವಾಗಿತ್ತು. ತನ್ನ ಹಾಳು ರೂಪವೇ ಅಕ್ಕನ ಮದುವೆಗೆ ತಡೆಯಾಗಿದೆ ಎಂಬ ವಿಚಾರ ತಂದೆ ತಾಯಿಗಳ ಬಾಯಿಂದ ಕೇಳಿದ್ದಳು. ಕಪಟವರಿಯದ ನಿಷ್ಕಳಂಕ ಅಕ್ಕನ ಮುಖ ನಿದ್ದೆಯಲ್ಲಿಯೂ ಶಾಂತವಾಗಿ ತೋರಿತು. ಅಕ್ಕನಿಗಾಗಿ ಯಾವ ಬಲಿದಾನಕ್ಕೂ ಸಿದ್ಧವಾಗಿದ್ದಳು, ತನ್ನ ಮದುವೆಗಾಗಿ ಎಂದೂ ಯೋಚಿಸಿರಲಿಲ್ಲ. ಕೆಲವೊಮ್ಮೆ ಬಂದ ಗಂಡು ಒಪ್ಪಿಗೆ ಸೂಚಿಸದೆ ಹೋದುದಕ್ಕಾಗಿ ಸಂತೋಷಿಸಿದ್ದಳು. ಕಾರಣ ಆತನ ಹಾಳು ರೂಪ ಅವಳ ಮನಸ್ಸಿಗೆ ಒಪ್ಪಿಗೆಯಾಗಿರಲಿಲ್ಲ. ತನ್ನ ಅಕ್ಕನ ಗಂಡ ಸುಂದರನಾಗಿರಬೇಕೆಂಬುದೇ ಅವಳ ಆಸೆಯಾಗಿತ್ತು. ಅಂದು ಕೂಡಾ ತನ್ನ ಭಾವೀ ಭಾವನನ್ನು ನೋಡುವ ಆತುರದಲ್ಲಿಯೇ ಹೊರ ಬಂದಿದ್ದಳು. ಈಗ ತಾನಿರುವ ವರೆಗೆ ಅಕ್ಕನ ಮದುವೆ ಅಸಾಧ್ಯವೆಂದೇ ಭಾವಿಸಿದಳು. ತನ್ನ ಮದುವೆ ಮೊದಲಾದರೆ ಅವಳಿಗೆ ಮುಂದೆ ಮದುವೆಯೇ ಇಲ್ಲ ಎಂದು ಬೇರೆ ಹೇಳ ಬೇಕಾಗಿರಲಿಲ್ಲ.

ಹಾಗಾದರೆ ತಾನೇನು ಮಾಡಬೇಕು? ಅಕ್ಕನಿಗಾಗಿ ತನ್ನ ಬಲಿದಾನವಾಗಬೇಕು. ಇದ್ದ ಸಂಪತ್ತಿನಿಂದಾದರೂ ಅವಳ ಮದುವೆಯಾಗಬಹುದು. ಅದೇ ನನಗೆ ತೃಪ್ತಿ. ಕಣ್ಣುಗಳಿಂದ ನೀರಿಳಿಯ ತೊಡಗಿತು.

ಮೊದಲ ದಿನ ಅಕ್ಕ ಸಿಂಗರಿಸಿ ಕೊಂಡಾಗ ತಾನು ಮಾಡಿದ ತಮಾಷೆಯ ನುಡಿಗಳು ಮನಸ್ಸಿಗೆ ಬಾರದೆ ಹೋಗಲಿಲ್ಲ.

ಅಕ್ಕನೆಂದರೆ ಪ್ರಾಣಕ್ಕಿಂತಲೂ ಹೆಚ್ಚಾಗಿ ನೆಚ್ಚಿ ಕೊಂಡವಳು ಶಾಲಿನಿ. ದಿನವೂ ಒಟ್ಟಿಗೆ ಊಟಮಾಡ ಬೇಕು. ಒಟ್ಟಿಗೆ ಇರಬೇಕು ಒಟ್ಟಿಗೆ ಮಲಗಬೇಕು. ಈಚೆಗೆ ಅಕ್ಕನ ಮನದ ಪರಿವರ್ತನೆಯ ಪರಿಚಯ ಅವಳಿಗಾಗಿತ್ತು. ಆದರೆ ತಂಗಿಯ ನುಡಿಗೆಂದೂ ಎದುರಾಡಿದವಳಲ್ಲ ಸುಮಿತ್ರೆ.

ತನ್ನ ನೆಚ್ಚಿನ ಅಕ್ಕನಿಗಾಗಿ, ತಾನು ಇರಲೇ ಬಾರದ, ಶಾಲಿನಿಯ ಮನ ಮುಂದಿನ ದಾರಿಯನ್ನು ನಿರ್ಧರಿಸತೊಡಗಿತ್ತು. ಅಕ್ಕನ ಮುಖವನ್ನು ಕಣ್ತುಂಬ ನೋಡಿದಳು. ಮೆಲ್ಲ ಮೇಲೆದ್ದಳು. ಉರಿಯುವ ಮಿಣುಕು ದೀಪ ಎಣ್ಣೆ ಆರಿ ಮಬ್ಬುಗಟ್ಟಿತ್ತು. ಮೆಲ್ಲ ಹೊರಬಂದಳು. ಬಾನಿನಲ್ಲಿ ಚಂದ್ರ ಮೇಲೇರಿದ್ದನು. ಮೋಡಗಳಿಲ್ಲದ ಆಕಾಶ ಶುಭ್ರವಾಗಿತ್ತು. ಚಂದ್ರನ ಬೆಳಕೇ ಅವಳಿಗೆ ದಾರಿ ದೀಪವಾಗಿತ್ತು. ಎಲ್ಲಿಯೋ ದೂರದಲ್ಲಿ ಗೂಗೆಯೊಂದು ಕೂಗುತಿತ್ತು. ರಾತ್ರಿಯ ಶಾಂತ ವಾತಾವರಣದಲ್ಲಿಯೇ ಕೆಲದೂರ ನಡೆದಳು. ಮನೆ ಹಿಂದಾಯಿತು.

ಮುಂದೆ ಕಾಣುವ ಕೆರೆಯ ಕಟ್ಟೆಯನ್ನೇರಿದಳು. ನೀರು ಶಾಂತವಾಗಿತ್ತು. ಚಂದ್ರನ ಪ್ರತಿಬಿಂಬ ನೀರಿನಲ್ಲಿ ಹೊಳೆಯುತಿತ್ತು. ಕಟ್ಟೆಯ ಮೇಲಿಂದಲೇ ನೀರಿನ ಮಡುವಿಗೆ ಧುಮುಕಿದಳು. ಒಮ್ಮೆ ನೀರು ಅಲ್ಲೋಲ ಕಲ್ಲೋಲವಾಯಿತು. ಎಲ್ಲವೂ ಕ್ಷಣಕಾಲ ಮಾತ್ರ. ಮತ್ತೆ ಎಂದಿನಂತೆಯೇ ಶಾಂತವಾಯಿತು. ಶಾಲಿನಿಯ ದೇಹ ಶಾಂತವಾಗಿ ನೀರಿನ ಆಶ್ರಯವನ್ನು ಪಡೆಯಿತು.

ಜನ್ಮದಿನದ ನೆನಪು

ಕಂಡದ್ದು-ಕೇಳಿದ್ದು

ಇಂದು ಜೀವಂತರಾಗಿದ್ದಿದ್ದರೆ, ಅಕ್ಟೋಬರ್ ೨ರಂದು ಗಾಂಧೀಜಿ 93ನೇ ವರ್ಷದಲ್ಲಿ ಕಾಲಿಡುತ್ತಿದ್ದರು.

ಪತ್ರಪುಸ್ತಗಳ ಪುಟಗಳಲ್ಲಿ, ಚುನಾವಣಾ ಭಾಷಣಗಳಲ್ಲಿ ಬಿಟ್ಟರೆ ಇಂದು ನಾವು ಅವರನ್ನು ಸ್ಮರಿಸುವುದು ಕಡಿಮೆಯಾಗುತ್ತಿದೆ.

ಸರಕಾರಿ ಕಟ್ಟಡಗಳಲ್ಲಿ ತೂಗುಬಿದ್ದಿರುವ ಅವರ ಭಾವಚಿತ್ರ ಈ ವಿಚಿತ್ರ ಆಭಾಸಕ್ಕೆ ನಮ್ಮನ್ನು ಕಂಡು ನಗುತ್ತಿದೆ.

ಆದರೆ, ನಮ್ಮ ಇತಿಹಾಸದಲ್ಲಿ ಕಾಲು ಶತಮಾನಕ್ಕೂ ಮೀರಿದ 'ಗಾಂಧಿಯುಗ'ವೆಂಬುದೊಂದಿತ್ತು. ದೇಶದಲ್ಲಿ ಮಹಾಜಾಗೃತಿ ನಿರ್ಮಿಸಿದ ಅವರ ಅನೇಕ ಲೋಕೋತ್ತರ ಗುಣಗಳಿಗಾಗಿ ಅವರಿಗೆ 'ಮಹಾತ್ಮ' ಎಂಬ ಬಿರುದು ಬಳುವಳಿಯಾಗಿತ್ತು.

ಗಾಂಧೀಜಿಯದು ವೈಶಿಷ್ಟಪೂರ್ಣ ವ್ಯಕ್ತಿತ್ವ. ಅವರ 'ಬನಿಯಾ' ಬುದ್ಧಿಯನ್ನು ಅವರು ಸ್ವಾತಂತ್ರ್ಯ ಹೋರಾಟದ ವಾಸ್ತವ ವ್ಯಾಪಾರದಲ್ಲಿ ತೊಡಗಿಸಿದ್ದರು.

ಮೇಧಾವಿ ರಾಜಾಜಿ, ಹರಿತ ನಾಲಿಗೆಯ ಕೃಪಲಾನಿ, ಭಾವಜೀವಿ ನೆಹರೂ, ರಸಿಕ ಕವಿ ಆಜಾದ್, ಕರ್ಮವೀರ ಸರದಾರ್, ಮೌನ ಹಿಂಬಾಲಕ ರಾಜೇಂದ್ರ ಪ್ರಸಾದ್—ಇಂಥಹ ವಿವಿಧ ಮನೋವೃತ್ತಿಯ, ವಿವಿಧ ಸ್ವಭಾವದ ಜನರನ್ನು ಜತೆಗೂಡಿಸಿ, ಅವರು ಪರಸ್ಪರ ಸಹಕಾರದಿಂದ ಸ್ವಾತಂತ್ರ್ಯಕ್ಕಾಗಿ ದುಡಿದಂತೆ ಮಾಡಿದ ಭಾರೀ ವ್ಯಕ್ತಿತ್ವ ಗಾಂಧೀಜಿಯದು. ಪ್ರಾಣಿಗಳನ್ನು ಪಳಗಿಸಿ ತಪರತ್ತು ಮಾಡಹಚ್ಚುವ 'ರಿಂಗ್ ಮಾಸ್ಟರ್' ಗಳ ಕೌಶಲ್ಯ ಇದಕ್ಕಿಲ್ಲಿ ಬೇಕು.

ಮೇಲಿನ ನಾಯಕರಲ್ಲಿ ಯಾರೂ ಒಬ್ಬರಿಗೊಬ್ಬರು ಕಡಿಮೆಯಿರಲಿಲ್ಲ; ಅವರಲ್ಲಿನ ಭಿನ್ನಮತಗಳು ತೀವ್ರ, ಪ್ರತಿಪಾದನಾ ಶಕ್ತಿ ತೀಕ್ಷ್ಣ ಆದರೆ ಗಾಂಧೀಜಿ ಎಲ್ಲರಲ್ಲೂ ಒಮ್ಮತ ಸಾಧಿಸಬಲ್ಲ ಚಾಣಾಕ್ಷರು.

ತಿಲಕರು ಆರಂಭಿಸಿದ ಮಹಾ ಜಾಗೃತಿಯ ಕಾರ್ಯವನ್ನು ದೇಶದ ಮೂಲೆ ಮೂಲೆಗೂ ಮುಟ್ಟಿಸಿ, ಸ್ವಾತಂತ್ರ್ಯಾಕಾಂಕ್ಷೆಯ ದಾವಾನಲ, ಭಾರತೀಯರ ಹೃದಯ ಹೃದಯಗಳಲ್ಲಿ ಪ್ರಜ್ವಲಿಸುವಂತೆ ಮಾಡಿದ ಶ್ರೇಯ ಗಾಂಧೀಜಿಯದು. ಸ್ವಾತಂತ್ರ್ಯವನ್ನು 'ರಾಮರಾಜ್ಯ'ವೆಂದೂ, ಜನಸಾಮಾನ್ಯರಿಗೆ ತಿಳಿವಂತೆ ಅರ್ಥವಿವರಣೆ ನೀಡಿದವರು ಅವರೇ.

o o o o

ಗಾಂಧೀಜಿಯ ಉತ್ತರಾಧಿಕಾರಿಗಳು ತಾವೆಂದು ಪಟ್ಟು ಹಿಡಿದ ಜನ, ಎಷ್ಟರ ಮಟ್ಟಿಗೆ ಅವರ ವಿಚಾರಗಳನ್ನು ಅನುಸರಿಸುತ್ತಿದ್ದಾರೆ?

ಗಾಂಧೀಜಿ ಜೀವಂತರಾಗಿದ್ದಾಗಲೇ ಅವರ ಇಚ್ಛೆಯ ವಿರುದ್ಧ ದೇಶದ ವಿಭಜನೆಯಾಯಿತು. 'ರಾಮರಾಜ್ಯ'ದ ಧ್ಯೇಯ ನಮಗೆ ಮರೆತೇ ಹೋಯಿತು. ಪಾನನಿರೋಧವನ್ನೂ ಕೈಬಿಡಲಾಗುತ್ತಿದೆ; ಗೋರಕ್ಷಣೆ ಬರಿಯ ನಾಟಕವಾಗಿದೆ; ಖಾದಿಯೊಂದೇ ಕೆಲವರಿಗೆ ಬೇಕಾಗಿದೆಯೆಂದೇ ಉಳಿದುಕೊಂಡಿದೆ.

ಸನಾತನವೆನಿಸುವ ವೇದಗಳ ಪ್ರತಿಪಾದನೆಗಳ ಸತ್ಯಾಸತ್ಯತೆಗಳನ್ನು ಪ್ರಶ್ನಿಸುವವರಿರುವಾಗ, ಗಾಂಧೀಜಿಯವರ ವಿಚಾರಗಳೂ ಸದಾಕಾಲಕ್ಕೆ ಸತ್ಯ, ಸರಿಯಾದುವು ಎಂದು ಹೇಳುವಂತಿಲ್ಲ.

ಬದಲಾಗುವ ಪರಿಸ್ಥಿತಿಗನುಗುಣವಾಗಿ ವಿಚಾರಗಳನ್ನೂ ಬದಲಾಯಿಸಬೇಕಾಗುತ್ತದೆ. ಕಳೆದ ಶತಮಾನದಲ್ಲಿ ತೀರ 'ನಾಸ್ತಿಕ'ವೆನಿಸಿದ್ದ ಕಾರ್ಲ್ ಮಾರ್ಕ್ಸ್‌ನ ವಿಚಾರಗಳು ಈ ಶತಕದಲ್ಲಿ ತೀರ ಗೊಡ್ಡು ಸಂಪ್ರದಾಯಗಳೆನಿಸುತ್ತಿಲ್ಲವೆ?

ಈ ಪ್ರಶ್ನೆಯನ್ನು ಪರಿಗಣಿಸಿದಾಗ ನಾವು ಮಹಾತ್ಮರ ಉತ್ತರಾಧಿಕಾರಿಗಳು ಎಂದು ಹೇಳಿಕೊಂಡು ಜನಪ್ರಿಯತೆ ಗಳಿಸುವ ಯತ್ನ ಹಾಸ್ಯಾಸ್ಪದವಾಗುತ್ತದೆ. ಇದರಿಂದ ಆ ಮಹಾತ್ಮರಿಗೂ ಅಪಚಾರವಾಗುತ್ತಿದೆ.

o o o

ಅಕ್ಟೋಬರ್ 2 ದಿವಂಗತ ಲಾಲ್ ಬಹಾದೂರ್ ಶಾಸ್ತ್ರಿಯವರ ಜನ್ಮದಿನ ಕೂಡ.

1947ರ ಕಾಶ್ಮೀರ ಯುದ್ಧಸ್ತಂಭದ ಮತ್ತು 1932ರ ಚೀನ ಪ್ರಣೀತ ಪರಾಜಯದಿಂದ ಅಪಮಾನಿತನಾದ ಭಾರತೀಯ ಜವಾನನ ಕೈಯಲ್ಲಿ ಸೀಮೋಲ್ಲಂಘನ ಮಾಡಿಸಿದ ತ್ರಿವಿಕ್ರಮ ವಾಮನನಾತ.

ಸಾತ್ವಿಕ ಪ್ರವೃತ್ತಿಯ ಭಾರತದ ಕ್ಷಾತ್ರ ತೇಜದ ಪರಿಚಯವನ್ನು ಜಗತ್ತಿಗೆ ಮಾಡಿಕೊಟ್ಟು ಭಾರತದ ಪ್ರತಿಷ್ಠೆಯನ್ನು ವಿಶ್ವದಲ್ಲಿ ಬೆಳೆಸಿದ ಶ್ರೇಯ ಶಾಸ್ತ್ರಿಗಳದು.

ಶ್ರೇಷ್ಠ ಕುಲದಲ್ಲಿ ಜನಿಸಿದ ಪ್ರತಿಷ್ಠೆ, ಪರದೇಶಗಳಲ್ಲಿ ಗಳಿಸಿದ ವಿದ್ಯೆಯ ಪ್ರಭಾವಳಿ—ಇದಾವುದೂ ಇಲ್ಲದ ಶ್ರೀಸಾಮಾನ್ಯಕುಲದ ಈ ವ್ಯಕ್ತಿ, ತ್ಯಾಗ ಪರಿಶ್ರಮ, ದೇಶಭಕ್ತಿಗಳುಳ್ಳ ಯಾವ ಭಾರತೀಯನಾದರೂ ಪ್ರಧಾನಿಯಾಗಬಲ್ಲನೆಂದು ತೋರಿಸಿಕೊಟ್ಟ ಧೀಮಂತ.

ದೊಡ್ಡವರೆನಿಸಿದ ಅನೇಕರು ತಾವೂ ಪ್ರಧಾನಿಗಳಾಗಬೇಕೆಂದು ಆ ಸ್ಥಾನದ ಬೆನ್ನು ಹತ್ತಿದರೆ, ಬಡಕುಟುಂಬದಲ್ಲಿ ಹುಟ್ಟಿ, ಅನಾಥನಾಗಿ ಬೆಳೆದು, ಕೇವಲ ಕಾರ್ಯಕರ್ತ ನಾಯಕನಲ್ಲ ಎನಿಸಿದ ಈ (ಬರೇ) 'ಶಾಸ್ತ್ರಿ'ಯನ್ನು ಪ್ರಧಾನಿ ಪದವಿಯೇ ಅರಸಿ ಬಂತು.

ಅಲ್ಪಕಾಲ ಮಿನುಗಿ ಮಾಯವಾದ ಈ ತಾರೆ, ಜನ್ಮದಿನದ ಸಾಮಾನ್ಯತೆಯಿಂದಲೂ ಗಾಂಧೀಜಿಯ ಜತೆ ಸದಾ ಸ್ಮರಿಸಲ್ಪಡುವ ಗೌರವಕ್ಕೆ ಪಾತ್ರನಾಗಿದೆ.

(ಪಿ ಎಸ್. ಐ.)

ರೈತ ಭಾಂದವರ ಜೀವನ ಸಂಗಾತಿ..........

ಇಮಾನಿ ಕ್ರೂಡ್ ಆಯಿಲ್ ಇಂಜಿನ್
(5, 7, 10 & 13 H. P.) ಮತ್ತು ಪಂಪು ಸೆಟ್ಟುಗಳು.........

ಎಸ್. ಇ. ಐ. ಇಲೆಕ್ಟ್ರಿಕ್ ಮೋಟಾರು
(¼ H.P. ಯಿಂದ 2. H.P. ವರೇಗೆ) ಮತ್ತು ಪಂಪು ಸೆಟ್ಟುಗಳು......

ಬ್ಲೂ ಪೀಟರ್ ಸ್ಟಾರ್ಟರುಗಳು.........

ಪ್ರಪ್ರಥಮ ವಿಮಾ ರಕ್ಷಣೆಗೆ ಒಳಪಟ್ಟಿರುವ ಸ್ಟಾರ್ಟರ್‌ಗಳು.

ಏಕೈಕ ವಿತರಕರು:—

ಸ್ವಾಮಿ ಇಲೆಕ್ಟ್ರಿಕಲ್ಸ್,

ರಿ. ಆಫೀಸು: ಕಾರ್ಕಳ. ಮಾರಾಟ ವಿಭಾಗ: ಬಲ್ಮಠ ರಸ್ತೆ ಮಂಗಳೂರು. 1

"NAVAYUGA" Kannada Weekly is recommended for High Schools and Public Libraries by the Director of Public Instruction in Mysore, Bangalore vide their letter No. C.—4.17-4/65 66 dated 26—4—1966.

of News Papers for India
under No. R. N. 3546/'57

LICENCE No. 3.
Licensed to Post without Prepayment

ವಿದ್ಯಾರ್ಥಿ ಕಂಡಂತೆ

ತ್ಯಾಗದ ಮೊದಲ ಪಾಠ

ಬರೆದವರು
ಶ್ರೀ ಬಿ. ದೇವರಾಯ ಮಲ್ಯ,
೯ನೆ ತರಗತಿ, ಬೋರ್ಡ್ ಹೈಸ್ಕೂಲ್, ಶಂಕರನಾರಾಯಣ.

"ರಾಜೂ ಽ ಽ ಽ" ಮಾರುತ್ತರವಿಲ್ಲ.

"ರಾಜೂ ಽ ಽ ಽ ಽ"

"ನೀನು ಹೀಗೆ ಕೋಪ ಮಾಡಿಕೊಂಡರೆ ಹೇಗಪ್ಪಾ? ಮತ್ತೊಂದು ಸಲ ಬಂದರೆ ನೋಡುವಾ." ಎಂದರು ಕಮಲಮ್ಮ. ಉಹೂಂ. ಕಾಫಿ ತೊಗೋ ಎಂದರೂ ಉಹೂಂ. ರಾಜು ಮಾತನಾಡಲೊಲ್ಲ. ಇಷ್ಟಕ್ಕೆ ಬೇಡವೆಂದರೆ ಕೋಪ ಬರುವುದು ಸಹಜ ತಾನೆ? ತಾನು ಅದನ್ನು ನೋಡಿದರೆ ಏನಾಗುತ್ತದೆ? ಕೇವಲ ೨೫ ಪೈಸೆ, ಪ್ರದರ್ಶನ ಫೀಜು. ಕುದುರೆಯ ಕುಣಿತ ಇದೆಯಂತೆ, ಹುಲಿ, ಸಿಂಹಗಳ ಸರ್ಕಸ್ಸಂತೆ. ನೋಡಬಾರದೇಕೆ? ಆ ದಿನ ಶಾಲೆ ಬಿಟ್ಟವನೇ ಓಡಿಬಂದಿದ್ದ. ಸಂತೋಷದ ಭರದಲ್ಲಿ ತಾನು ಯಾವ ರಸ್ತೆಗೆ ಓಡುತ್ತಿದ್ದೇನೆ ಎಂಬ ಜ್ಞಾನವಿಲ್ಲ. ಸಹಜ ತಾನೇ? ಇಂದು ಕಡೇ ದಿನ. ಕೇವಲ ೪ ಆಣೆ. ನಾನು ನೋಡಲೇ ಬೇಕು. ಎಂಬಿತ್ಯಾದಿ ಯೋಚಿಸುತ್ತಿದ್ದ. ಸರಿ, ಮನೆಗೆ ಬಂದವನೇ ಅಡುಗೆ ಮನೆಗೆ ನುಗ್ಗಿದ.

ಅರಸಿನಕೆರೆಯಲ್ಲಿ ರಾಮರಾಯರ ಬಿಡಾರ. ಸಣ್ಣ ಮನೆ. ಗುಮಾಸ್ತರಿಕೆ ಕೆಲಸದಲ್ಲಿ ಸ್ವಲ್ಪ ಸಂಬಳ. ಅದೂ ತಮಗೆ ತಮ್ಮ ಹೆಂಡತಿಗೆ ನಾಲ್ಕು ಮಕ್ಕಳಿಗೆ ಸಾಲದು. ಮನೆಯ ಹಿಂದುಗಡೆ, ಕಮಲಮ್ಮನ ತೋಟ. ಅದರಲ್ಲಿ ಬೆಳೆದ ಕಾಯಿಪಲ್ಲೆಗಳನ್ನು ಪೇಟೆಗೆ ಹೋಗಿ ಮಾರುವ ಕೆಲಸ ಶೀನನಿಗೆ. ಬಂದ ಹಣದಲ್ಲಿ ಕೆಲವು ಪೈಸೆಗಳನ್ನು ಜಾರಿಸಿ ಇಟ್ಟುಕೊಳ್ಳುವುದು ಅವನ ವಾಡಿಕೆ. ಕಡ್ಲೆಪುರಿ ತೊಗೋಬೇಕಲ್ಲಾ? ಇರಲಿ. ರಾಜು ಅಡುಗೆ ಮನೆಗೆ ನುಗ್ಗಿದವನೆ ಉಸ್ಸೆಂದು ಕುಳಿತ. ತಾಯಿ ಕಮಲಮ್ಮ, "ಏನೋ ಇವತ್ತು ವಿಶೇಷ?" ಎಂದರು. ರಾಜು ಸ್ವಲ್ಪ ನೀರು ಕುಡಿದು ಸುಧಾರಿಸಿಕೊಂಡು. ,ಅಮ್ಮಾ, ಒಂದು ಮಾತು. ನೋಡು ಇವತ್ತು ನಮ್ಮ ಶಾಲೆಯ ಮಾಸ್ಟರು ಹೇಳಿದರು. ಮಕ್ಕಳೇ ''ಪೂಧುಂ ಸರ್ಕಸ್" ನೋಡಲಿಚ್ಛಿಸುವವರು ಅರ್ಧ ಟಿಕೇಟಿನ ಹಣ ನನ್ನ ಹತ್ತಿರ ಕೊಡಿ ಎಂದಿದ್ದಾರೆ. ಕೊಡುವಿಯೇನಮ್ಮಾ?' ಎಂದಾಗ ಕಮಲಮ್ಮನವರ ಕಣ್ಣಿಂದ ಎರಡು ಹನಿ ನೀರು ಜಾರಿತು. ರಾಜು ಓಡಿ ಬಂದುದರ ಕಾರಣವೂ ತಿಳಿಯಿತು. "ಮಗೂ, ತಂದೆ ಹತ್ತಿರ ಕೇಳಿದೆಯಾ? ನಿನಗೆ ಗೊತ್ತಿಲ್ಲಪ್ಪ, ನಮ್ಮ ಬಡತನ...'....ಎಂದರು; ನನ್ನ ಹತ್ತಿರ ಇಲ್ಲ. ಎಂದಾಗ, 'ಅಮ್ಮಾ, ಕೇವಲ ೪ ಆಣೆ. ಇ

ಎಂದು ಖಡಾತುಂಡವಾಗಿ ತಿರಸ್ಕರಿಸಿದರು.

ಆದಕ್ಕೆ ಕಾಫಿ ಕುಡಿಯದೇ ರೂಮಿಗೆ ಬಂದು ಕೋಪದಲ್ಲಿದ್ದ. ಸ್ವಲ್ಪ ಹೊತ್ತಿನ ನಂತರ ಕಮಲಮ್ಮ "ರಾಜೂ, ನೀನು ಹೀಗೆ ಮಾಡಿದರೆ ಹೇಗಪ್ಪಾ? ಆಗಲಿ ಕೊಡುವೆ. ಮೊದಲು ಕಾಫಿ ಕುಡಿ ಎಂದರು. ರಾಜೂ ಆಷ್ಟೊತ್ತಿಗೆ ಅಮ್ಮನ ಮಡಿಲಲ್ಲಿ ಅಳುತ್ತಾ ಆನಂದ ಬಾಷ್ಪ ಸುರಿಸುತ್ತಾ ತೆಕ್ಕೆ ಬಿದ್ದಿದ್ದ.

ಕಾಫಿಕುಡಿಯಲೂ ಆಗಲಿಲ್ಲ. ಬೇಗ ಹೋಗಬೇಕು ಎಂದು ಕಾಫಿಕುಡಿದ ಹಾಗೆ ಮಾಡಿ ನಾಲ್ಕಾಣೆ ತೆಗೆದು ಕೊಂಡು ಓಡಿದ್ದ. ಬೇಗ ಹಣ ಕೊಡಬೇಕಲ್ಲಾ?

ಮಾಸ್ತರು ಮತ್ತು ಕ್ರಮವಾಗಿ ಮಕ್ಕಳೂ ಬಂದರು. ಮಕ್ಕಳನ್ನು ಸಾಲಾಗಿ ನಿಲ್ಲಿಸಿದ್ದ ಮಾಸ್ತರು ಹಣವಸೂಲಿ ಮಾಡತೊಡಗಿದರು. ರಾಜುವಿನ ಸಂತೋಷಕ್ಕೆ ಪಾರವಿರಲಿಲ್ಲ. ಯಾವಾಗ ಹೋಗುವೆವೋ ಎಂದು ತಡಬಡಿಸುತ್ತಿದ್ದ.

ರಾಜು ಸುತ್ತಲೂ ಕಣ್ಣುಹಾಯಿಸಿದ. ದೂರದಲ್ಲಿ ಅಳು....ಹೌದು ಗೋಪಿ ಅಳುತ್ತಿದ್ದ. "ಗೋಪಿ, ಏನೋ ಬೇಗ ಸಾಲಿಗೆ ಸೇರು" ಎಂದ ರಾಜು. ಆದರೆ 'ಆ ಭಾಗ್ಯ ನಾನು ಪಡೆದಿಲ್ಲವಪ್ಪಾ" ಎಂದಾಗ ರಾಜೂ "ಏನೋ, ಬೇಗ ಹೇಳು' ಎಂದ.

"ನಾನು ಇಲ್ಲಿ ಕಲಿಯಲಿಕ್ಕೆ ಬಂದೆ. ನನ್ನ ಚಿಕ್ಕಪ್ಪನ ಮನೆಯಲ್ಲಿ ಉಳಿದುಕೊಂಡಿದ್ದೆ. ಆದರೆ....ಚಿಕ್ಕಪ್ಪನಷ್ಟು ಜಿಪುಣರು ಇನ್ನಿಲ್ಲ....ಕಣೋ' ಎಂದ. ರಾಜುವಿಗೆ ಕನಿಕರ ಉಂಟಾಯಿತು. ಹಾಗೇ ಆಲೋಚಿಸ ತೊಡಗಿದ..

ತನಗಿಂತ ಉತ್ತಮ ಸ್ಥಿತಿ ಅವನದಲ್ಲಿ. ನಾನು ಎಷ್ಟು ಹಟಮಾಡಿದರೂ ಹಣಕೊಡುತ್ತಾರೆ ಮನೆಯಲ್ಲಿ. ಆದರೆ ಗೋಪಿ... ಚಿಕ್ಕಪ್ಪನ ಲೋಭಿತನದಿಂದ ಸರ್ಕಸ್ಸನ್ನು ನೋಡಲೂ ಇಲ್ಲವೇ....ನಾನು ನನ್ನ ಹಣ ಅವನಿಗೆ...ಛಿ....ನನಗೆ ನೋಡಬೇಡವೇ? ಅಷ್ಟು ಅತ್ತು ಕಾಫಿ ಕುಡಿಯದೇ ತಂದೆಗೆ ತೋರಿಸದೇ ತಂದ ಹಣ. ತಾಯಿ ಕೊಟ್ಟ ಹಣ....ಆದರೆ ನನ್ನ ಪ್ರಿಯ ಸಹಪಾಠಿ ಗೋಪಿ....ಎಷ್ಟು ಹಟ ಮಾಡಿದರೂ ಕೊಡುವವರಿಲ್ಲ. ಆತನಿಗೆ....ನಾನೂ ಗೋಪಿ ಪಾಲು ಮಾಡಿಕೊಂಡರೆ!... ಛೆ....ಆದರೂ ಮಾಷ್ಟರ ಹತ್ತಿರ ಕೇಳಿದರೆ ಹೇಗೆ? ಅಲ್ಲವೆ...."

'ಲೋ .... ರಾಜೂ ಽ ಽ ಹಣ ಕೊಡೋಲ್ವೇನೋ" ಎಂದು ಹತ್ತಿರ ನಿಂತ ನಾಣಿ ಎಚ್ಚರಿಸಿದಾಗದೇ ಎಚ್ಚರಾದ ರಾಜು. ಶೀನೂ ಹಣಕೊಟ್ಟ. ರಾಜು ಕೊಡಲು ಕೈ ಚಾಚಿದ, ಆದರೆ.... ಗೋಪಿಯ ಅಳು ಮುಖ ಅವನಿಗೆ ತೋರಿತು...."ಸರ್....ನಾನೂ ಮತ್ತು ಗೋಪಿ ೪ ಆಣೆಯಲ್ಲಿ ಸರ್ಕಸ್ ನೋಡಬಹುದೇ ಸರ್' ಎಂದಾಗ ಮಾಸ್ಟರು "ಛೇ... ಅದು ಹೇಗೋ' ಎಂದರು.

ರಾಜು ಮತ್ತೆ ಯೋಚನೆ ಮಾ... ಡಗಿದ (ಯೋಚನೆಗೆ ಪಾರವುಂಟೇ... ಕಡೆಗೆ.......ಅವನಿಗಿಂತಲೂ ನನ್ನ... ಕೆಟ್ಟದ್ದಲ್ಲ. ನಾನು ಮುಂದಿನ ಸಲ... ಡಬಹುದು....ಎಂದು. 'ಸರ್ ನನ್ನ... ಲು ಗೋಪಿನ ಸೇರಿಸಿಕೊಳ್ಳಿ" ಎಂ... ಮಕ್ಕಳೆಲ್ಲರಿಗೂ ಆಶ್ಚರ್ಯವಾಯ... ಆದರೆ ಮಾಸ್ಟರು 'ರಾಜೂ...ನಾನೇ ಧ... ನಿನ್ನಂಥಾ ಶಿಷ್ಯರನ್ನು ಪಡೆದ ನಾನೇ ಧ... ಬೇಡ... ಅವನಿಗೆ ನಾನೇ ಕೊಡುತ್ತೆ... ನೀವಿಬ್ಬರೂ ನೋಡ ಬಹುದಲ್ಲಾ... ಎಂದಾಗ,

ರಾಜುವಿಗೂ ಗೋಪಿಗೂ ಬಹ... ಶ್ಚರ್ಯವಾಯಿತು. ಮಾಸ್ಟರು ಸುಳ್ಳ... ಳುತ್ತಿರ ಬಹುದೇ ಅಥವಾ....

'ಇನ್ನು ಹೊರಡಿ' ಎಂದು ಮಾ... ಹೇಳಿದಾಗ ಇಬ್ಬರ ಮನಸ್ಸು ಆನ... ಲಿಗೆರಗಿತ್ತು.

ಮಹಾತ್ಮರ ಮಾಗ

ಅಂದವಿಲ್ಲವವನಿಗೆ ಆ-
ನಂದಕವನೆ ಆಕರ!
ಕೊಡಲಾಗದುದೇತ್ತಕವಗೆ?
ದೇಹ ಕೂಡ ಬೇಸರ!
ಅಂತೆ ಅದನು ಬಿಟ್ಟು ಬುವಿಗೆ
ಹಿಡಿ ಮಣ್ಣನು ಕೊಟ್ಟ!
ಸ್ವಾತಂತ್ರ್ಯದ ಮಂತ್ರ ಬೀಜ
ಎದೆ - ಎದೆಯಲಿ ನೆಟ್ಟ!
ಅವನೆ 'ಬಾಪು', ಭಾಪು!
ಹಾಡಿತು ಕವಿಶ್ರೇಣಿ!
ಅವನು ಕಾಣದಿದ್ದರೇನು?
ಇದ್ದಿತವನ ಏಣಿ!!
ಹತ್ತ ಬಲ್ಲ ಶಕ್ತರೆಲ್ಲ
ಏರಬಹುದು ಹೇಳಿ!
ಹತ್ತಲಾಗದವರ ಕೂಡ
ಎತ್ತಬಹುದು ಮೇಲೆ!
ಅದೇ ದಾರಿ, ಗಾಂಧಿ ಹಾರಿ
ಮೇಲಕೇರಿ! ವೀರ!
ಬನ್ನಿರೆಂದು ಕರೆದುದುಂಟು
ಕೇಳದವರು ಕೇಳಿ
ಕಿವಿಯಲಲ್ಲ! ಎದೆಯಲದ
ಎಡೆಬಿಡದಲೆ ತಾಳಿ!

—'ತ್ರಿಮೂ

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ದಿ| ಶ್ರೀ ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—
ಆಂಗ್ಲ ಸ್ವಯಂಬೋಧಿನಿ

ಸುಲಭದಲ್ಲಿ ಇಂಗ್ಲಿಷ್

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ.ಎರಡು. ಉತ್ತಮ ಪ್ರತಿ:ರೂ.ಎರಡೂವರೆ(ಟ.ಖ. ಪ್ರತ್ಯೇಕ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ

ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ: ರೂ. 1-25 (ಟ.ಖ.ಪ್ರತ್ಯೇಕ)

ಹೊಸಕೆರೆ ಚಿದಂಬರಯ್ಯನವರ
ಶ್ರೀಮದ್ಭಗವದ್ಗೀತೆಯ ಸಮೂಲ ಭಾಷಾಂತರ

ಗೀತೆಯ ಕೈಗನ್ನಡಿ

300 ಪುಟಗಳಿಗೂ ಮಿಕ್ಕಿದೆ. ಕೈಹೊತ್ತಗೆಯ ಆಕಾರದಲ್ಲಿದೆ.
ಬೆಲೆ: ಸಾದಾ ಪ್ರತಿ ರೂ. ೧
ಗೀತೆಯ ಕೈಗನ್ನಡಿಯ ಒಂದು ಪ್ರತಿ ಬೇಕಾದವರು ರೂ. 1-50ನ್ನು
ಮನಿಯಾರ್ಡರು ಮಾಡಿ ತರಿಸಿಕೊಳ್ಳಬಹುದು.

ಶ್ರೀ ಕೆ.ಕೆ. ಶೆಟ್ಟಿ,ಎಂ.ಎಲ್. ಸಿ.ಯ...
ನವಕಾಲಕ್ಕೊಪ್ಪುವ ಪುಸ್ತಕಗ...

ದೇಶ ಭಕ್ತ	1
ಪ್ರೇಮ ವಿಜಯ	1
ಮುಂದಿನ ದೇವರು	0
ವ್ಯಭಿಚಾರಿಣಿ ಯಾರು?	1
ಹೆಂಡ್ತಿ ಗಂಡನಾದರೆ?	0
ಪುರುಷವಧು	0
ಸನ್ಯಾಸಿಯ ಸೋಗಿನಲ್ಲಿ!	0
ಸಂಶಯ ಪಿಶಾಚಿ	0
ಕುಶಲವ	0

ನವಯುಗ

20—10—1966



೧೦ ಪೈಸೆ

ಒಳಗುಟ್ಟು

ಕಥೆಗಾರರು
ಶ್ರೀ ಸ. ನಾರಾಯಣ

ಚರ್ಚ್‌ಗೇಟ್ ಬಳಿ ಸದಾನಂದ ಕಾಯುತ್ತಾ ನಿಂತಿದ್ದ. ನಾಲ್ಕು ಗಂಟೆಗೆ ಸರಿಯಾಗಿ ಬರುತ್ತೇನೆಂದು ತಿಳಿಸಿದ್ದ ಗೆಳೆಯ ಶ್ರೀಪತಿ ಇನ್ನೂ ಬಂದಿರಲಿಲ್ಲ. ಫಿಲಂ ಫೇರ್ ಹಾಳೆಗಳನ್ನು ತಿರುವಿ ಹಾಕುತ್ತಾ ನಿಂತು, ಸುತ್ತಲೂ ಒಮ್ಮೆ ಕಣ್ಣು ಹಾಯಿಸಿದ. ಶ್ರೀಪತಿ ಕಾಣಲಿಲ್ಲ.

ಸದಾನಂದ ಅಲ್ಲಿಂದ ಹೊರಡಲು ಯೋಚಿಸಿ ಎರಡು ಹೆಜ್ಜೆ ಮುಂದಕ್ಕೆ ಇಟ್ಟ. ಅಪರಿಚಿತ ಕಂಠ ಒಂದು "ಹಲೋ ಸದಾ" ಎಂದು ಕೂಗಿತು ಸದಾನಂದ ತಿರುಗಿ ನೋಡಿದ. ಕಾಲೇಜು ಗೆಳೆಯ ಪ್ರಸನ್ನ ಓರ್ವ ಯುವತಿಯೊಂದಿಗೆ ಅವನೆಡೆಗೆ ಧಾವಿಸಿ ಬರುತ್ತಿದ್ದ. ಸುಮಾರು ಆರು ವರ್ಷಗಳ ತರುವಾಯ ಹಳೆಯ ಗೆಳೆಯನನ್ನು ಕಂಡಾಗ ಸದಾನಂದನಿಗಾದ ಆನಂದ ಅಲ್ಪವಲ್ಲ.

ಸ್ವಲ್ಪ ಹೊತ್ತಿನ ವರೆಗೆ ಗೆಳೆಯರು ಒಬ್ಬರನ್ನೊಬ್ಬರು ನೋಡುತ್ತಾ ನಿಂತರು. "ಚೆನ್ನಾಗಿದ್ದೀಯೇನೋ ಸದಾ, ಜೀವನದಲ್ಲಿ ಇದೊಂದು ಪರ್ವದಿನ" ಎಂದು ಗೆಳೆಯನ ಕೈ ಕುಲುಕುತ್ತಾ ಹೇಳಿದ ಪ್ರಸನ್ನ. "ಮಣಿಪಾಲ್ ಕಾಲೇಜು ಭೇಟಿಯೇ ನಮ್ಮ ಕೊನೆಯ ಭೇಟಿಯಾಯಿತು. ಈಗ ಎಲ್ಲಿದ್ದೀಯ ಪ್ರಸನ್ನ?" ಎಂದು ಪ್ರಶ್ನಿಸಿದ ಸದಾನಂದ.

"ದುರ್ಗಾಪುರದಲ್ಲಿದ್ದೇನೆ' ಎಂದ ಪ್ರಸನ್ನ.

ಯುವತಿ ಗೆಳೆಯರಿಬ್ಬರ ಸಂಭಾಷಣೆಯನ್ನೇ ಆಲಿಸುತ್ತಿದ್ದು ಅನಂತರ "ಹೀಗೆ ರಸ್ತೆಯಲ್ಲೇ ನಿಂತು ಬಿಡುವುದೇ ಪ್ರಸನ್ನ" ಎಂದಳು.

"ಸಾರಿ ಸುಧಾ, ಗೆಳೆಯನನ್ನು ಕಂಡಾಗ ಎಲ್ಲವೂ ಮರೆತು ಹೋಯಿತು" ಎಂದ ಪ್ರಸನ್ನ.

"ಸದಾ, ಮರೆತು ಹೋಗಿತ್ತು ನೋಡು ಇವಳು ನನ್ನ ತಂಗಿ ಸುಧಾ...ಸುಧಾ ಇವರು ನನ್ನ ಗೆಳೆಯ ಸದಾನಂದ. ಹೆಸರಾಂತ ಇಂಜನಿಯರ್" ಎಂದು ಪರಸ್ಪರ ಪರಿಚಯ ಮಾಡಿಸಿದ.

ಸದಾನಂದ 'ನಮಸ್ತೆ" ಎಂದು ಕೈ ಜೋಡಿಸಿ ಅವಳನ್ನೇ ದಿಟ್ಟಿಸಿದ. ಸುಧಾಳ ಸೌಂದರ್ಯ, ಮುಖದ ಮೇಲಿನ ತಿಳಿ ನಗೆಗೆ ಸದಾನಂದ ಪ್ರಭಾವಿತನಾಗಿದ್ದ.

ಅವನು ಬೇಡವೆಂದು ತಡೆದರೂ ಅವನ ಕಣ್ಣುಗಳು ಅವಳತ್ತ ಚಲಿಸುತ್ತಿದ್ದವು. ಮೂವರು ಹೊಟೇಲೊಂದರ ಕಡೆಗೆ ಹೆಜ್ಜೆ ಹಾಕಿದರು.

"ಇಲ್ಲಿಗೆ ಬಂದು ಎಷ್ಟು ದಿನವಾಯ್ತು ಸದಾ?"

"ಸುಮಾರು ನಾಲ್ಕು ವರ್ಷಗಳಿಂದಲೂ ಇಲ್ಲೇ ಇದ್ದೇನೆ ಬೃಂದಾವನ ಇಂಡಸ್ಟ್ರೀಸ್‌ನಲ್ಲಿ ಕೆಲಸ, ದಾದರ್‌ನಲ್ಲಿ ರೂಮು'

'ಅಂದ ಹಾಗೆ ಗೃಹಸ್ಥಾಶ್ರಮ.'

"ಛೇ, ಛೇ, ಅಂತಹ ಶ್ರಮ ಸಧ್ಯಕ್ಕಂತೂ ಇಲ್ಲ."

"ನನ್ನ ಹಾಗೇ ಅನ್ನು."

'ಇರಲು ನೆರಳಿಲ್ಲದ ಬೊಂಬಾಯಿಯಲ್ಲಿ ಮದುವೆ ಮಾಡಿಕೊಂಡರೆ ಮುಗಿದೇ ಹೋಯ್ತು."

ಹಾಗಾದರೆ ಮನೆ ದೊರೆಯುವುದಾದರೆ ಮದುವೆ ಮಾಡಿಕೊಳ್ಳಲು ಸಿದ್ಧ ಅನ್ನು.'

'ಮುಂದಿನ ಚಿಂತೆ ಈಗೇಕೆ... ದುರ್ಗಾಪುರ ಹೇಗಿದೆ ಹೇಳು.'

"ಕೈಗಾರಿಕಾ ನಗರಗಳೆಲ್ಲ ಒಂದೇ ಬಗೆಯವು" ಎಂದ ಪ್ರಸನ್ನ.

ಮೂವರೂ ಹೊಟೇಲು ಹೊಕ್ಕು ತಿಂಡಿ ಕಾಫಿ ಮುಗಿಸಿ ಹೊರಬಂದರು.

"ಕೆಲಸವೇನಾದರೂ ಇತ್ತೇ ಸದಾ?'

"ಇಂದು ಇದೆ. ಬೇರೆ ಗೆಳೆಯರೊಬ್ಬರನ್ನು ಕಾಯುತ್ತಿದ್ದೆ. ನೀವೇ ದೊರೆತಿರಲ್ಲ.'

'ಸ್ವಲ್ಪ ಜುಹೂ ಕಡೆ ಹೋಗಿ ಬರೋಣವೇ"

'ಸಂತೋಷ" ಎಂದ ಸದಾನಂದ.

ಮೂವರೂ ವಿಶಾಲ ಸಾಗರದ ಅಂಚಿನ ಮರಳ ಮೇಲೆ ಸ್ವಲ್ಪ ಹೊತ್ತು ಸುತ್ತಾಡಿ ಕಲ್ಲು ಬೆಂಚೊಂದರ ಮೇಲೆ ಕುಳಿತರು, ಸದಾನಂದ ಬೊಂಬಾಯಿ ಜೀವನ ಯರಿಬ್ಬರೂ ತಮ್ಮ ವಿದ್ಯಾರ್ಥಿ ಜೀವನದ ಹಳೆಯ ನೆನಪನ್ನು ಸ್ಮರಿಸಿಕೊಂಡರು.

ಪ್ರಸನ್ನನ ತಾಯಿಯ ಅಣ್ಣ ಶಾನುರಾಯರು ಬೊಂಬಾಯಿಯಲ್ಲಿಯೇ ವೈದ್ಯರಾಗಿದ್ದರು. ತಂಗಿಯ ಮಕ್ಕಳ ಬಗ್ಗೆ ರಾಯರಿಗೆ ಎಲ್ಲಿಲ್ಲದ ಅಭಿಮಾನ. ಅವರ ಒಬ್ಬಳೇ ಮಗಳು ಸಂಧ್ಯಾ ಸುಧಾಳ ಓರಿಗೆಯವಳು. ಅವರಿಬ್ಬರ ಸ್ನೇಹ ಅನ್ಯೋನ್ಯತೆಯೂ ಅಪರಿಮಿತವಾಗಿತ್ತು. ಪ್ರಸನ್ನ ಆಗಾಗ್ಗೆ ಬೊಂಬಾಯಿಗೆ ಬಂದು ಕೆಲದಿನಗಳು ಮಾವನ ಮನೆಯಲ್ಲಿದ್ದು ಹೋಗುತ್ತಿದ್ದ. ಬೊಂಬಾಯಿಯ ಮಾವನ ಮನೆಗಿಂತಲೂ ಸಂಧ್ಯಾ ಅವನನ್ನು ಬಲವಾಗಿ ಆಕರ್ಷಿಸಿದ್ದಳು. ಅಣ್ಣನ ಬಲವಂತಕ್ಕೆ ಮಗಳನ್ನು ಅವರಲ್ಲಿಗೇ ಕಳುಹಿಸಿದ್ದರು ಸುಧಾಳ ತಾಯಿ.

ಸಂಧ್ಯಾ ಮತ್ತು ಪ್ರಸನ್ನ ಇವರ ವಿವಾಹವನ್ನು ನಡೆಸಲು ಹಿರಿಯರೆಲ್ಲರೂ ಕಾತುರರಾಗಿದ್ದರು. ಆದರೆ ಸಂಧ್ಯಾ ತನ್ನ ವೈದ್ಯಕೀಯ ಶಿಕ್ಷಣ ಮುಗಿಯದ ಹೊರತೂ ಮದುವೆಯಾಗುವುದಿಲ್ಲವೆಂದು ತಿಳಿಸಿದ್ದಳು. ಪ್ರಸನ್ನ ಭಾವೀ ಪತ್ನಿಯ ನುಡಿಗೆ ಸಮ್ಮತಿಸಿದ್ದ.

ಸಂಗೀತ ಮತ್ತು ಚಿತ್ರಕಲೆಯಲ್ಲಿ ಪೂರ್ಣ ಅಭ್ಯಾಸ ಪಡೆದು ಪದವಿ ಪಡೆದಿದ್ದ ಸುಧಾ ಕಲಾ ಶಾಲೆಯೊಂದರಲ್ಲಿ ಶಿಕ್ಷಕಿಯಾಗಿದ್ದಳು. ಸಂಧ್ಯಾ ಮತ್ತು ಸುಧಾ ನಿತ್ಯವೂ ತಿರುಗುವುದು ರೂಢಿಯಾಗಿತ್ತು. ಪ್ರಸನ್ನ ಮನೆಗೆ ಬಂದಾಗ ಸಂಧ್ಯಾ ಸುಧಾಳೊಂದಿಗೆ ತಿರುಗಲು ಹೊಂಡಲು ನಿರಾಕರಿಸುತ್ತಿದ್ದಳು. ತಾನೊಬ್ಬಳೇ ಅವನೊಂದಿಗೆ ಹೊರಡುತ್ತಿದ್ದಳು. ಆದರೆ ಸುಧಾ ಇಬ್ಬರನ್ನೂ ಕೀಟಲೆ ಮಾಡದೆ ಬಿಡುತ್ತಿರಲಿಲ್ಲ. ಅಂದು ಸಂಧ್ಯಾ ಮೆಡಿಕಲ್ ಕಾಲೇಜಿಗೆ ಹೋಗಿದ್ದುದರಿಂದ ಅಣ್ಣಾ-ತಂಗಿ ಇಬ್ಬರೂ ಬೊಂಬಾಯಿ ಸುತ್ತುವ ಯೋಜನೆಯಿಂದ ಚರ್ಚ್‌ಗೇಟ್ ಬಳಿಗೆ ಬಂದಿದ್ದರು. ಅಲ್ಲಿ ಸದಾನಂದನ ಭೇಟಿಯಾಯಿತು. ಪ್ರಸನ್ನ ಬೊಂಬಾಯಿಯ ತನ್ನ ಮಾವ ಮತ್ತು ಸಂಸಾರದ ಸಂಗತಿಯನ್ನು ತಿಳಿಸಿದ.

ಸೂರ್ಯ ಪಶ್ಚಿಮಾದ್ರಿಗೆ ವಿಶ್ರಾಂತಿಗಾಗಿ ತೆರಳಿ ಮರೆಯಾದ ಸಂಜೆಯ ಕತ್ತಲು ರದ ದೀಪಗಳು ಬೆಳಗ ತೊಡಗಿದ್ದ[illegible] ಮೂವರೂ ಹೊರಟು ಟ್ಯಾಕ್ಸಿ ಸ್ಟ್ಯಾ[illegible]ಡಿಗೆ ಬಂದರು.

"ಇನ್ನೆಷ್ಟು ದಿನ ಇಲ್ಲಿರುತ್ತೀಯ [illegible]ಸನ್ನ'

'ಇನ್ನೆರಡು ದಿನ ಮಾತ್ರ ಇರುತ್ತೇ[illegible]

"ಮತ್ತೆ ನಿನ್ನ ಭೇಟಿ'

'ನಾಳೆ ನಿಮ್ಮ ಆಫೀಸಿಗೇ ಬರ[illegible]ನೆ. ಇನ್ನು ಮುಂದ ಬೊಂಬಾಯಿಗೆ [illegible] ದೊಡನೆಯೇ ಮೊದಲು ನಿನ್ನ ಭೇ[illegible] ಅಂದ ಹಾಗೆ ಈಗ ನನ್ನೊಂದಿಗೆ ಮ[illegible] ಬಂದು ಬಿಡು. ಮನೆಯವರೆಲ್ಲರ ಪ[illegible]ಯ ಮಾಡಿ ಕೊಡುತ್ತೇನೆ.' -

"ಕ್ಷಮಿಸು ಪ್ರಸನ್ನ ಇನ್ನೊಂದು [illegible] ತಪ್ಪದೆ ಬರುತ್ತೇನೆ.'

'ಈ ಮಾತನ್ನು ನಂಬಬಹುದೇ?' [illegible]ದು ಪ್ರಶ್ನಿಸಿದಳು ಸುಧಾ.

"ಖಂಡಿತವಾಗಿ'

'ಅಂದ ಹಾಗೆ ನಿಮ್ಮ ಕೋಣೆ'

'ದಾದರ್‌ನಲ್ಲಿ ಭಾರತಿ ನೃತ್ಯ ಶಾ[illegible]ದ ಬಳಿ ಇರುವ ಜಯ ಮಹಲ್[illegible] '15ನೇ ನಂಬರ್' ಕೋಣೆ.

"ನಿಮ್ಮ ವಿವರಣೆಗೆ ತುಂಬ ಥ್ಯಾಂಕ್[illegible]

"ಸುಧಾ, ಇನ್ನು ನನ್ನ ಗೆಳೆಯರ[illegible] ಪರಿಚಯ ಮಾಡಿಸಿದ್ದೇನೆ. ಇವರೂ [illegible] ಹಾಗೆ ಸಾಹಿತ್ಯ, ಸಂಗೀತ, ನೃತ್ಯ ಕ[illegible]ಳ ಅಭಿಮಾನಿಗಳು. ನಿಮ್ಮ ಸ್ನೇಹ ವ[illegible]ಯಾಗಲಿ ಎಂದು ಹಾರೈಸುತ್ತೇನೆ[illegible]ದಾ ಈ ವಿಷಯದಲ್ಲಿ ನಿನ್ನ ಒಪ್ಪಿಗೆ [illegible]ಟಷ್ಟೆ".

'ನಿನ್ನ ಮಾತಿಗೆ ಪ್ರತಿ ಹೇಳುವ [illegible] ನನಗಿಲ್ಲ' ಎಂದ ಸದಾನಂದ

ಟ್ಯಾಕ್ಸಿ ವೇಗವಾಗಿ ಚಲಿಸುತ್ತಿತ್ತು[illegible]

ಕಲಾ ಶಾಲೆಯ ಮುಂದೆ ಟ್ಯಾಕ್ಸಿ [illegible]ದಾಗ ಸುಧಾ 'ಇದೇ ನಮ್ಮ ಕಲಾ ಶಾ[illegible] ನೀವು ಯಾವ ಸಂದರ್ಭದಲ್ಲಿಯಾಗ[illegible] ಬಂದು ಭೇಟಿ ಮಾಡಬಹುದು. ನ[illegible] ಶಾಲೆಯಲ್ಲಿ ಮತ್ತು ಮನೆಯಲ್ಲಿ ಸ[illegible] ಸುಸ್ವಾಗತ" ಎಂದಳು.

'Thanking' ಎಂದ ಸದಾನಂ[illegible]

• "ಸದಾನಂದ ತನ್ನ ಕೋಣೆ ಸಮೀ[illegible]ಸಿದಾಗ ಇಳಿದ. ಟ್ಯಾಕ್ಸಿ ಮುಂದಕ್ಕೆ [illegible]ಗಿತು.

"ಸದಾ ತುಂಬ ಒಳ್ಳೆಯವನು [illegible] ಅಂತಹ ಗೆಳೆಯರು ಸಿಕ್ಕುವುದು [illegible] ಎಂದ ಪ್ರಸನ್ನ.

ಸುಧಾ ಸದಾನಂದ ಟ್ಯಾಕ್ಸಿಯಲ್ಲಿ[illegible]ಟ್ಟು ಹೋಗಿದ್ದ ಕೋಟನ್ನು ಕೈಯಲ್ಲಿ[illegible]ಡಿದು 'ಇದೇ ಸಾಕ್ಷಿ ನೋಡಣ್ಣ' ಎ[illegible]ನಕ್ಕಳು.

(ಹದಿನೈದನೇ ಪುಟ ನೋಡಿಂ)



ಅತ್ಯಾಧುನಿಕ ಸಲಕರಣೆ — ಸೌಕರ್ಯಗಳಿಂದ ಕೂಡಿದ
ಭೋಜನ, ಉಪಾಹಾರ ಮತ್ತು ವಸತಿ ಗೃಹ



ಹೊಟೆಲ್ ಶಿವಪ್ರಸಾದ

ಫೋನ್: 77 ಕುಂದಾಪುರ, ದ. ಕ.

ಅಸ್ತಮಾ ಪೀಡಿತರ ಗಮನಕ್ಕೆ

ಹಿಮಾಲಯದ ಪ್ರಸಿದ್ಧ ಅಸ್ತಮಾ [illegible]ರಕ ಮೂಲಿಕೆಯನ್ನು ದಿ 19-10-66 [illegible]ಣ್ಣಿಮೆಯ ರಾತ್ರಿ ಹಾಲು ಮತ್ತು [illegible]ಯಿಂದ ತಯಾರಿಸಿದ ಖೀರಿನಲ್ಲಿ ತೆಗೆದು[illegible]ಳ್ಳುವುದರಿಂದ ಅಸ್ತಮಾ, ಗೂರಲು, ಕೆಮ್ಮು, ಉಬ್ಬಸ, ಮೇಲುಸಿರು ಮತ್ತು ಶ್ವಾಸ [illegible]ವಿಕೆ ಇವುಗಳು ನಿವಾರಿಸಲ್ಪಡುತ್ತವೆ. [illegible]ಡಲೇ ಇಂಗ್ಲಿಷಿನಲ್ಲಿ ಬರೆಯಿರಿ.

Shri Mahatma Sidh Baba Sewa Ash[illegible]
P. O. Chitrkot, (Uttar Pra[illegible]

ನಲವತ್ತಾರನೆ ವರ್ಷ
Telephone 226.

Estd. 1921

NAVAYUGA

Leading Kannada Weekly

UDIPI, S. Kanara

ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಉಡುಪಿ, ದ. ಕನ್ನಡ.

ಸಂಚಾಲಕ—ಸಂಪಾದಕ:

ಕೆ. ಹೊನ್ನಯ್ಯ ಶೆಟ್ಟಿ

ವಾರ್ಷಿಕ ಚಂದಾ:

ಮೂರು ವಿಶೇಷ ಸಂಚಿಕೆಗಳು ಸೇರಿ ಅಂಚೆ ವೆಚ್ಚ ಸಹಿತ ಮುಂಗಡ

ಸ್ವದೇಶ ರೂ. ೧೦

ವಿದೇಶ ರೂ. ೧೮

ಜಾಹೀರಾತು ದರಗಳು:

ಅನಿಯಮಿತ (ಕೆಜುವಲ್)

ಕಲಂ ಸೆಂಟಿಮೀಟರಿಗೆ ರೂ. 2-00

ನಿಯಮಿತ (ಕಂಟ್ರಾಕ್ಟ್)

ಕಲಂ ಸೆಂಟಿಮೀಟರಿಗೆ ರೂ 1-50

ಸೂಚನೆಗಳು

ಲೇಖಕ ಬಂಧುಗಳಿಗೆ

ಲೇಖನವು ಕಿರಿದಾಗಿದ್ದು ಹಿಂದಿರ್ಥದಿಂದ ಕೂಡಿರಬೇಕು. ಕಾಲು ಹಾಳಿನ ಪ್ರಮಾಣದ ಹಾಳೆಯ ಒಂದೇ ಮಗ್ಗುಲಲ್ಲಿ ಬಿಡಿಯಂಬುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು. ಆಧಾರಿತ, ಅನುವಾದಿತವಾದರೆ ಅವುಗಳ ಮೂಲವನ್ನೂ ತಿಳಿಸಬೇಕು.

ಚಂದಾದಾರರಿಗೆ—

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಮುಖಪತ್ರದಲ್ಲಿ:

ಲ್ಯೂನಾರ್ ಉಪಗ್ರಹ ಕಳಿಸಿದ ಚಂದ್ರನ ಮೇಲ್ಮೈಯ ಒಂದು ಚಿತ್ರ

ಸಂಪುಟ ೪೬	ಉಡುಪಿ	Vol. 46
ಸಂಚಿಕೆ ೮	೨೦—೧೦—೧೯೬೬	No. 8

ವಚನಸುಧೆ

ನಿಷೇವತೇ ಪ್ರಶಸ್ತಾನಿ
ನಿಂದಿತಾನಿ ನ ಸೇವತೇ
ಅನಾಸ್ತಿಕಃ ಶ್ರದ್ದಧಾನ್
ಏತತ್ ಪಂಡಿತ ಲಕ್ಷಣಂ||

ಉಚಿತವಾದುದನ್ನು ಸೇವಿಸುವುದೂ, ಅನುಚಿತವಾದುದನ್ನು ದೂರೀಕರಿಸುವುದೂ, ಆಸ್ತಿಕನೂ ಶ್ರದ್ಧಾಳುವೂ ಆಗಿರುವುದು ಬುದ್ಧಿವಂತನ ಮೂರು ಮುಖ್ಯ ಲಕ್ಷಣಗಳು.

ಐಕ್ಯದಿನ

ಭೂತಾನದ ಸಂರಕ್ಷಣಾ ಭಾರವು ಭಾರತ ಸರಕಾರಕ್ಕೆ ಸೇರಿದ ಹೊಣೆಗಾರಿಕೆ. ಕೆಂಪು ಚೀನೀಯರು ಅಲ್ಲಿನ ಸಾಂಪ್ರದಾಯಿಕ ಗಡಿಯನ್ನು ಮೀರಿ ಮುಂದೆ ನುಗ್ಗುವ ದಾರ್ಷ್ಟ್ಯವನ್ನು ತೋರಿದ್ದಾರೆ. ಇದಕ್ಕೆ ಭೂತಾನ ಸರಕಾರದ ಪರವಾಗಿ ಭಾರತ ಸರಕಾರವು ತೀವ್ರ ಪ್ರತಿಭಟನೆಯನ್ನು ಸೂಚಿಸಿದೆಯಲ್ಲದೆ ಸಾಂಪ್ರದಾಯಿಕ ಎಲ್ಲೆಯನ್ನು ರಕ್ಷಿಸಿಕೊಂಡು ಬರುವಂತೆ ವಿನಂತಿಸಿದೆ. ಇದಕ್ಕೆ ಕೆಂಪು ಚೀನಾವು ಯಾವ ಪ್ರತಿಕ್ರಿಯೆಯನ್ನು ತೋರಿಸಬಹುದು, ನಾವೆಲ್ಲ ಬಲ್ಲೆವು. ಇದು ಭೂತಾನದ ಗಡಿಯ ಕಥೆಯಾದರೆ, ಪಾಕಿಸ್ತಾನದ ಕುತಂತ್ರಗಳು ಹಗಲೂ ಬೆಳಗೂ ನಡೆಯುತ್ತಲೇ ಇವೆ. ಭಾರತದ ಒಂದು ರಾಜ್ಯ ಜಮ್ಮು ಕಾಶ್ಮೀರದಲ್ಲಿ ಅಡಗಿಕೊಂಡಿದ್ದ ಪಾಕ್ ವಿಧ್ವಂಸಕರನ್ನು ಸಂಶೋಧಿಸಿ ಹಿಡಿಯುತ್ತಿರುವಂತೆಯೇ ಹೊಸ ಹೊಸ ಹಿಂಸಾಚಾರಿಗಳು ಅಲ್ಲಿ ನುಗ್ಗುತ್ತ ಬರುತಿದ್ದಾರೆ; ಅಂದರೆ ಪಾಕಿಸ್ತಾನವು ಉದ್ದೇಶ ಪೂರ್ವಕವಾಗಿಯೇ ಜಮ್ಮು—ಕಾಶ್ಮೀರದಲ್ಲಿನ ಶಾಂತಿಯ ಹಾಲಿಗೆ ಹುಳಿ ಹಿಂಡಲು ತನ್ನ ವಿಧ್ವಂಸಕರ ತಂಡಗಳನ್ನು ಕಳಿಸುತ್ತಿದೆ ಎಂದಾಯಿತು. ಇದೇ ದುರ್ನೀತಿಯನ್ನೀಗ ಪೂರ್ವ ಪಾಕಿಸ್ತಾನ—ಭಾರತ ಗಡಿಗುಂಟ ಅದು ಅನುಸರಿಸ ಹೊರಟಿದೆ. ಮಿಜೋ ಮತ್ತು ನಾಗಾ ಬಂಡುಗಾರರನ್ನು ಭಾರತ ಸರಕಾರದ ಕೈದುರು ಕಟ್ಟುವ ಹುಚ್ಚು ಸಾಹಸವನ್ನದು ಮಾಡಿತ್ತು; ಆದರೆ ಇದರಿಂದ ಪಾಕಿಸ್ತಾನಕ್ಕೆ ಯಾವ ಲಾಭವೂ ಸಿಗಲಿಲ್ಲ. ಈಗ ಅಸ್ಸಾಮ ರಾಜ್ಯಕ್ಕೆ ತನ್ನ ವಿಧ್ವಂಸಕರ ತಂಡವನ್ನು ಅಟ್ಟುವ ಯೋಜನೆಯನ್ನು ಅದು ಕಾರ್ಯರೂಪಕ್ಕೆ ತರತೊಡಗಿದೆ. ಸುದೈವವಶಾತ್ ಇದರ ರಹಸ್ಯ ನಮಗೆ ಆರಂಭದಲ್ಲಿಯೇ ದೊರೆಯಿತು.

ಕೆಲವೇ ಮೈಲುಗಳನ್ನು ನಾವು ಹೊಡೆದುಕೊಂಡು ಹೋದೆವೆಂದು ಆಲೋಚಿಸಿ ಅಲ್ಟಿಮೇಟಂ ಇತ್ತ ಕೆಂಪು ಚೀನಾ ನಮ್ಮನ್ನು ಒಂದಲ್ಲ ಒಂದು ರೀತಿಯಿಂದ ಬೆದರಿಸಲು ಯತ್ನಿಸುವುದು ಆಶ್ಚರ್ಯವಿಲ್ಲ. ಗಡಿ ತಂಟೆಯನ್ನು ನಿವಾರಿಸಿಕೊಳ್ಳಲು ಸೂಕ್ತ ಕ್ರಮವನ್ನು ಕೈಕೊಂಡರೆ, ಮತ್ತೆ ಬೆದರಿಕೆಗೆ ದಾರಿಯೇನು? ಏಶ್ಯಾದಲ್ಲಿ ನಾಯಕ ರಾಷ್ಟ್ರವಾಗುವ ತನ್ನ ಹೆಬ್ಬಯಕೆಯನ್ನು ಕೆಂಪು ಚೀನಾ ಸಾಧಿಸಬೇಕಾದರೆ, ಭಾರತದ ಪ್ರಗತಿಯನ್ನು ಅವಶ್ಯ ತಡೆಹಿಡಿಯಲೇ ಬೇಕು. ಅದು ಅನುಸರಿಸುತ್ತಿರುವ ನೀತಿಯಾದರೂ ಇದೇ ತಾನೆ? ಆದರೆ ಪಾಕಿಸ್ತಾನದ ಇರಾದೆಯೇ ಬೇರೆ. ತಾನು ಯಾವ ಕಾಲಕ್ಕೂ ಏಶ್ಯಾದ ಪ್ರಮುಖ ರಾಷ್ಟ್ರಗಳ ಸಾಲಿನಲ್ಲಿ ನಿಲ್ಲಲಾರೆನೆಂಬುದು ಅದಕ್ಕೆ ಗೊತ್ತು. ಆದಕ್ಕಾಗಿಯೇ ಅಲ್ಲಿನ ರಾಜಕಾರಣಿಗಳು ತಮ್ಮ ಪಟ್ಟ ಭದ್ರಗೊಳಿಸುವ ಹಂಚಿಕೆಯಲ್ಲೇ ನಿರತರಾಗಿದ್ದಾರೆ. 'ಕಾಶ್ಮೀರ'ದ ಪ್ರಶ್ನೆಯನ್ನೇ ಎತ್ತಿ ಹಿಡಿದು ಅದನ್ನು ಪಾಕಿಸ್ತಾನಕ್ಕೆ ದೊರಕಿಸಿ ಕೊಡುವದಕ್ಕಾಗಿ ತಾವು ಅಧಿಕಾರದಲ್ಲಿರಬೇಕು ಎಂಬ ಭಾವನೆಯನ್ನು ಅಯ್ಯೂಬಖಾನರು ಬಲವಾಗಿ ಮೂಡಿಸಿದ್ದಾರೆ. ಹೊಟ್ಟೆಗೆ ಅನ್ನವಿಲ್ಲದಿದ್ದರೂ ಜುಟ್ಟಿಗೆ ಮಲ್ಲಿಗೆ ಹೂ ಮುಡಿಯುವ ಅವರ ನೀತಿ ಭಾರತದ ಮೇಲೆ ಧಾಳಿಯನ್ನೇ ಮಾಡಿಸಿತು; ಪಾಕಿಸ್ತಾನದ ಮಾನಭಂಗ ಮಾಡಿಸಿತು. ಆದರೂ ತಾಶ್ಕೆಂಟ್ ಒಡಂಬಡಿಕೆಯನ್ನು ಮುಂದೆ ಮಾಡಿ ಅದರೊಂದಿಗೆ ಸರಸವನ್ನಾಡುವ ನಿಲುವೇ ಇಂದವರದ್ದು. ಉಭಯ ದೇಶಗಳ ಸಂಬಂಧ ತಿಳಿಗೊಳಿಸಲು ನೆರವಾಗಬಹುದಾದ ಯಾವುದೇ ಸಭೆಗಳನ್ನು ಅವರು ತಿರಸ್ಕರಿಸುತ್ತಾರೆ—ಅವರಿಗೆ ಬೇಕು ಕಾಶ್ಮೀರ—ಅದಿರದೆ ಹೋದರೆ ಭಾರತದೊಡನೆ ವೈರ— ಮೊದಲೇ ಆರ್ಥಿಕವಾಗಿ ನವೆಯುತ್ತಿರುವ ಪಾಕ್ ನಾಗರಿಕರನ್ನು ಇಸ್ಲಾಂ ಧರ್ಮ ಮತ್ತು ಕಾಶ್ಮೀರಗಳ ನೆಪದಲ್ಲಿ ಒಲಿಸಿಕೊಂಡಿರುವ ಫೀಲ್ಡ್ ಮಾರ್ಶಲರು ಇವೆರಡರಲ್ಲಿ ಯಾವುದಾದರೂ ಒಂದನ್ನು ತುಸು ಸಡಿಲು ಬಿಟ್ಟರೆ ಸಾಕು; ಅಧಿಕಾರದಿಂದ ಉರುಳಿದಂತೆಯೇ ಸರಿ.

ಅಕ್ಟೋಬರ ೨೦ ಮತ್ತೆ ಬಂದಿದೆ. ಇಂದು ದೇಶದ ಮೇಲೆ ಆಕ್ರಮಣ ಮಾಡಿದ, ಮಾಡ ಬಯಸುತ್ತಿರುವ ಆಕ್ರಮಣಕಾರರ ದಬ್ಬಾಳಿಕೆಗೆ ಬೆದರದೆ ಅಂಜದೆ ನಮ್ಮ ಸಾರ್ವಭೌಮತೆಯನ್ನು, ಸ್ವಾತಂತ್ರ್ಯವನ್ನು ಉಳಿಸಿಕೊಳ್ಳುವ ಪ್ರತಿಜ್ಞೆಯನ್ನು ಮತ್ತೆ ನೆನೆಪಿಸುವ ಪವಿತ್ರದಿನ. ಕೆಂಪು ಚೀನಾವಿರಲಿ ಪಾಕಿಸ್ತಾನವಿರಲಿ ಅಥವಾ ಮತ್ತಾರಾದರೂ ಇರಲಿ, ನಮ್ಮ ಮೇಲೆ ಆಕ್ರಮಣ ಮಾಡ ಬಂದರೆ, ಕೊನೆಯುಸಿರಿರುವ ತನಕವೂ ಹೋರಾಡಿ ಮಾತೆ ಭಾರತಿಯನ್ನು ರಕ್ಷಿಸುವ ದೃಢತೆಯನ್ನು ಮತ್ತೆ ಪುನರುಜ್ಜೀವಿಸುವ ಪಾವನ ದಿನ. ನಾವು ಅಂತೆಯೇ ಮಾಡೋಣ. ಇನ್ನೂ ಒಂದು ಮಾತನ್ನು ನಾವಿಂದು ಮರೆಯದಿರೋಣ. ಬಾಹ್ಯ ಅಶಾಂತಿಗಿಂತ ಆಂತರಿಕ ಅಶಾಂತಿಯು ಮಾರಕವಾಗಿದೆ. ರಾಜ್ಯ—ರಾಜ್ಯಗಳಲ್ಲಿ, ಪಕ್ಷ—ಪಕ್ಷಗಳಲ್ಲಿ, ವ್ಯಕ್ತಿ—ವ್ಯಕ್ತಿಗಳಲ್ಲಿ ಬೂದಿ ಮುಚ್ಚಿದ ಕೆಂಡದಂತಿರುವ ವೈಮನಸ್ಸು, ದ್ವೇಷ, ವಿವಾದಗಳು ಆಸುರಿಯಾಗದಂತೆ ಸಾತ್ವಿಕವಾಗಿಯೇ ಮಾರ್ಪಡುವಂತೆ ಎಚ್ಚರ ವಹಿಸುವ ದಿನವೂ ಇದು ಹೌದು. ನಾವು ನಮ್ಮಲ್ಲಿ ಒಂದಲ್ಲ ಒಂದು ಕಾರಣಗಳಿಂದ ಕಚ್ಚಾಡುತ್ತಿದ್ದರೆ, ಗಲಭೆಯೆಬ್ಬಿಸಿದರೆ, ನಮ್ಮ ಶಕ್ತಿ ಹ್ರಾಸವಾಗುವುದು; ಅಪಾಯ ಪ್ರಾಯವಾಗುವುದು; ಇದರಿಂದ ಶತ್ರುಗಳಿಗೆ ಅಮಿತ ಲಾಭವಾಗುವುದು. ಇಂತಹ ಅನಪೇಕ್ಷಿತ ದುರ್ಘಟನೆಗಳಿಗೆ ಅವಕಾಶ ಕೊಡದೆ ರಾಷ್ಟ್ರೀಯ ಐಕ್ಯ ಸಂವರ್ಧನೆಯನ್ನು ಸಾಧಿಸುವ ಸರಿದಾರಿಯಲ್ಲಿ ನಾವು ಮುಂದುವರಿಯೋಣ; ಯಶಗಳಿಸೋಣ.

ಹತ್ತು ವರ್ಷಗಳ ನಂತರ....?

ಕರ್ನಾಟಕದ ರಾಜ್ಯಪಾಲ ಮಾನ್ಯ ವಿ. ವಿ. ಗಿರಿಯವರು ಭಾಷಾ ತಳಹದಿಯ ರಾಜ್ಯ ವಿಭಜನೆಯನ್ನು ಮೆಚ್ಚುವುದಿಲ್ಲ. ಅವರು ಅಂದೇ ಈ ಸಂಬಂಧದಲ್ಲಿ ತಮ್ಮ ಅಸಮ್ಮತಿಯನ್ನು ವ್ಯಕ್ತಪಡಿಸಿದ್ದರು. ಈ (ಹದಿನಾಲ್ಕನೇ ಪುಟ ನೋಡಿರಿ)

'ನವಯುಗ'ದ ಚಂದಾದಾರರಲ್ಲಿ ವಿನಂತಿ

ಕಳೆದ ಆಗೋಸ್ತು ತಿಂಗಳಾಂತ್ಯಕ್ಕೆ "ನವಯುಗ"ದ 45ನೇ ವರ್ಷವು ಕೊನೆಗೊಂಡು ಸಪ್ಟಂಬರಾದಿಯಿಂದ 46ನೇ ಹೊಸ ವರ್ಷಾರಂಭವಾಗಿರುವುದಷ್ಟೆ! ಈ ಅವಧಿಗೆ ಚಂದಾ ಅವಧಿ ಮುಗಿಯುವ ಹಾಗೂ ಚಂದಾ ಹಣ ಬಾಕಿಯಿರುವ ನಮ್ಮ ಚಂದಾದಾರ ಬಂಧುಗಳು ತಮ್ಮ ಚಂದಾ ಹಣವನ್ನು ದಯಮಾಡಿ ಆದಷ್ಟು ತ್ವರ್ಯ ಮನಿಯಾರ್ಡರು ದ್ವಾರಾ ಯಾ ಸಿಂಡಿಕೇಟ್ ಬ್ಯಾಂಕಿನ ಸಮೀಪದ ಶಾಖೆಯಲ್ಲಿ "ನವಯುಗ"ದ ಖಾತೆಗೆ ಜಮೆ ಮಾಡುವುದರ ಮೂಲಕ ಈಗಲಾದರೂ ಕಳುಹಿಸಿಕೊಟ್ಟು ಸಹಕರಿಸುವಂತೆ 'ಇನ್ನೊಮ್ಮೆ' ಕಳಕಳಿಯಿಂದ ವಿನಂತಿಸುತ್ತೇವೆ.

ಅಂತೂ ಚಂದಾಹಣವು ಈ ತಿಂಗಳಾಂತ್ಯದ ಒಳಗಾದರೂ ಬಾರದಿದ್ದಲ್ಲಿ ನವಂಬ್ರ ಮೊದಲ ವಾರದ ಸಂಚಿಕೆಯನ್ನು ವಿ. ಪಿ. ಮೂಲಕ ಕಳುಹಿಸುತ್ತೇವೆ. ಅದನ್ನು ಅವಶ್ಯ ಸ್ವೀಕರಿಸುವಂತೆ ಬಿನ್ನಹಿಸುತ್ತೇವೆ.

ಮೆನೇಜರ್,
ನವಯುಗ, ಉಡುಪಿ.

ನರಸಣ್ಣನ ಸರಸ



"ದಕ್ಷಿಣ ಮಧ್ಯ ರೇಲ್ವೆಯಲ್ಲಿ ಹತ್ತು ದಿನಗಳಿಗೆ ಎರಡು ಅಪಘಾತ ಸಂಭವಿಸಿದ್ದು ಜನರ ಸಾವು ಸಂಭವಿಸಿತು ..."
"ಅಂದರೆ ಅಪಘಾತ—ಸಾವುಗಳಿಗಾಗಿಯೇ ಈ ಹೊಸ ರೇಲ್ವೆಯ ಉದಯವಾಯಿತೇ?"

ಮಾಣಿಕವ ತೊರೆದು ಬೂದಿಕಟ್ಟುವರೆ ?

‘ಯಾರು ಸಾಧಿಸಿದರಯ್ಯ ಯೋಗಪ್ರತವನು? ಮೃಗ ಚರ್ಮ ಭಸ್ಮ ಜಡೆಯೋಗ ದಂಡಗಳಿಂದೊಂದು ಆರಾಧನೆಯ ನಾದು ಮಾಡುವರಯ್ಯ?”

‘ನೀನೆನ್ನುವ ಈ ಗಮ ಅಪಾರ ಅಗಾಧ ಬ್ರಹ್ಮನ ಕಂಡೆವಾದರೆ ನಮ್ಮ ಶ್ರಮವು ಸಾರ್ಥಕ, ಇಲ್ಲವಾದರೆ ಎಲ್ಲ ವ್ಯರ್ಥವಯ್ಯ! ಗಿರಿಧರ ಕೃಷ್ಣನ ಶ್ಯಾಮ ಸುಂದರವದನವ ಕಾಣಲಿಕೆ ಆಡಂಬರವೇಕಯ್ಯ? ಆಸನ ಪ್ರಾಣಾಯಾಮ ಮೃಗ ಚರ್ಮಧ್ಯಾನಾದಿ ಯೋಗಗಳ ಆರಾಧನೆಯೇಕಯ್ಯ? ಗೋಪೀಚಂದನನು ಹೊಂದಲಿಕೆ ಮಾಣಿಕವನು ತೊರೆದು ಬೂದಿಯನು ಸೆರಗಿನಲಿ ಕಟ್ಟಲೇಕಯ್ಯ?’

“ಓಯ್, ಇದೇನ್ರೀ...”

“ಯಾವುದು?”

“ಅದೇ, ಏನೇನೋ ಇಷ್ಟುದ್ದ. ಅದೆಂಥದೋ ಗೊಣಗುತ್ತಿದ್ರಲ್ಲಾ...”

“ಗೊಣಗಿಕೊಳ್ಳೋಕೆ ಬಾಯಲ್ಲೇನು ಪಾಕಂಪೊಪ್ಪನ್ನ ಹಾಕಿಕೊಂಡಿದ್ದೇನೆಯೆ?”

‘ಯಾರಿಗೆಗೊತ್ತು?”

‘ಸರಿಯಾಯ್ತು ಬಿಡಿ....’

“ಏನು?”

“ಬಾಯಲ್ಲಿದ್ದ ಪಾಕಂಪೊಪ್ಪು....’

‘ಅಲ್ಲಾ ತಲೆಕೂದಲು ನರೆಯುತ್ತ ಬಂದ್ರೂ ನಿಮ್ಮ ತಮಾಶೆಗೆ ಮುಪ್ಪು ಬಂದಿಲ್ಲ....”

“ಪೋಡ್, ಒಬ್ಬ ಕವಿ ಪುಂಗವ ಅಂದಿದ್ದಾನೆ...’

“ಶುರುಮಾಡಿದ್ರಿ.... ಹ್ಞಾಂ.... ಅಯ್ತು, ಹೇಳಿ ಹೇಳಿ ಏನಂದಿದ್ದಾನೆ ಆತ?

‘ನಗುವು ಸಹಜದ ಧರ್ಮ; ನಗಿಸುವುದು ಪರಧರ್ಮ,...’

“ಓ, ಇದು ಕಗ್ಗದ ಮಾತಲ್ಲವೇನು?’

“ಹ್ಞಾಂ...”

‘ಡಿವಿಜಿ ಬರೆದದ್ದು....”

‘ಹ್ಞಾಂ...’

‘ನೋಡಿ, ಇದನ್ನೇ ಬಾಲ ಬೋಧೆಯಲ್ಲಿ ಹಾಡಿದ್ದಾರೆ ಭಾರಿ ಸಲೀಸಾಗಿ....’

‘ಏನಂತೆ?’

‘ನಗುತಿರು ನಗುತಿರು ನೀ ನಗುತಿದ್ದರೆ, ಜಗವೇ ನಗುವುದು ನಿನ್ನೊಡನೆ...’

‘ಅದು ಸರಿಯೇ. ಆದ್ರೆ ನೋಡು, ನಮ್ಮ ಶಾಸ್ತ್ರಜ್ಞರು ಆ ನಗುವನ್ನೂ ನೂರಾರು ಸಂಕೋಲೆಗಳಿಂದ ಕಟ್ಟಿಬಿಟ್ಟಿದ್ದಾರೆ.’

‘ಅಂದರೆ?’

‘ಒಳ್ಳೇ ಪಜೀತಿಯಾಯ್ತಲ್ಲ...’

‘ಯಾಕೆ?’

‘ಅಲ್ಲ, ಯಾವ ಕಾಸಿನ ಪ್ರಯೋಜನವೂ ಇಲ್ಲದೆ ಈಗ ಹಾಸ್ಯ ಮೀಮಾಂಸೆ ಮಾಡಬೇಕಾಯ್ತಲ್ಲಾಂತ,...’

‘ತಿಳಿದುದನ್ನು ತಿಳಿಯದವರಿಗೆ ತಿಳಿಸುವುದು ತಿಳಿದವರ ಕರ್ತವ್ಯವಲ್ಲವೆ?’

“ಅದು ಸರೀನ್ನಿ. ವಿನೋಬಾಜಿ ಹಾಗೇ ಹೇಳ್ತಾರೆ. ನಾನು ಹೇಳಿಯೇನೂನ್ನು, ತಿಳಿದುಕೊಳ್ಳುವ ಶಕ್ತಿ ನಿನ್ನಲ್ಲಿ ಇಲ್ಲವಾದರೆ....”

“ಭಾರಿ ಮನಶ್ಶಾಸ್ತ್ರ ಪಂಡಿತರ.! ನ [illegible] ಮೇಲೆ ಗೊತ್ತಾ. ಈಗ ಹುಟ್ಟೋಕೆ ಮೊದಲೇ ಅದು ಗಂಡೋ ಹೆಣ್ಣೋ ಅಂತ ಯಾಕೆ ಚರ್ಚೆ?”

“ಹಾಗಾದರೆ ಕೇಳು: ಹಾಸವೇ ಹಾಸ ಇದಕ್ಕೆ ಆಲಂಬನ ವಿಭಾವ ಪರಿಹಾಸಕ. ದೇಶ ಕಾಲ ವರ್ಣಾದಿಗಳು. ಉದ್ದೀಪನ ಆಶ್ರಯನಾದವನ ಅಕ್ಷಿವಿಕಸನ, ಕಪೋಲಸ್ಪಂದನ, ಮುಖರಾಗ, ಪಾರ್ಶ್ವಗ್ರಹಣ. ಇನ್ನು ಸಾತ್ವಿಕ ಭಾವ ವಿವರ್ಣ ಸ್ವನಾದಿ, ಸ್ವೇದ, ಅಶ್ರು, ಸ್ವರ ಭೇದಗಳು. ಮತಿ ಹರ್ಷಾದಿ, ನಿದ್ರಾವಹಿತ್ಥ ತಂದ್ರೀ ತ್ರಪಾಲಸ್ಯಾದಿಗಳು ಸಂಚಾರಿ ಭಾವಗಳು ...”

ಸಾಕು ಸಾಕು.......ಸಾಕು, ನೀವು ಇದೆಲ್ಲಾ ಶಾಸ್ತ್ರ ಪಾಂಡಿತ್ಯ ಕಟ್ಟಿಡಿ ಸುಮ್ಮನೆ ನಾಲ್ಕು ಸಂತೋಷದ ಮಾತಾಡಿ ನಕ್ಕು ಬಿಡುವವರಿಗೆ ಯಾಕೆ ಇಷ್ಟೆಲ್ಲ ಸಂಕೋಲೆ?’

‘ಪ್ರಾಯಕ್ಕೆ ಬಂದ ಹೆಣ್ಣಿಗೊಂದು ಗಂಡು ಬೇಡವೆ? ಹಾಗೆ ಶಾಸ್ತ್ರ...’

‘ಹೌದು, ಗಂಡಿಗೂ ಹೆಣ್ಣು ಬೇಕು ತಾನೆ?’

‘ಯಾರು ಬೇಡಾಂತಾರೆ? ಹೆಣ್ಣು ಪ್ರಕೃತಿ, ಗಂಡು ಪುರುಷ—ಅವರಿಬ್ಬರ ಏಕೀಭಾವ ಪರಮಾತ್ಮ ಅಂತ ಶಾಸ್ತ್ರಗಳವಾದ....’

‘ನೋಡಿ, ನೀವು ಶಾಸ್ತ್ರಗಳನ್ನೆ ಕೊಂಡು ಒಲೆಗಿಡಿ. ನೀವೊಂದು, ನಿಮ್ಮ ಶಾಸ್ತ್ರವೊಂದು, ನಿಮ್ಮ ಸರಕಾರವೊಂದು, ಆದರ ಕಾನೂನೊಂದು ..”

“ಹೌದು ಹೌದು, ನಾನೂ ಒಂದು, ನೀನೂ ಒಂದು...’

‘ಅಲ್ಲ...ಅಲ್ಲ...’

“ಹ್ಞಾಂ....ಏನಂದೆ...”

“ನಾನೂ ನೀವೂ ಒಂದಾದರೆ ಮಾತ್ರ ಒಂದು...”

“ಹಾದೇ, ನೀನೇನೂ ಚಿಲ್ರೆಯವಳಲ್ಲ—’

“ನಿಮ್ಮಂತಹ ದೊಡ್ಡದೊಡ್ಡ ಶಾಸ್ತ್ರ ಪಂಡಿತರಿಗೆ ತಾನರ್ಥ ಅನ್ನೋ ಸಂಗ್ತಿ ಮರ್ತು ಹೋಗದೆ ಎಲ್ಲಿ ಹೋಗುತ್ತೆ....”

“ಹಾಗಲ್ವೋ, ಒಂದು ಅನ್ನೋದು ನಿರ್ಗುಣ”

ಣ: ನಿರಾಕಾರವಾಗಿರೋದು ನಿರ್ಗುಣ ...”

“ಹ್ಞಾಂ ..”

“ಗೋಪಿಯರು ಶ್ರೀಕೃಷ್ಣನ ಮೇಲೆ ಇಟ್ಟಿದ್ದ ಪ್ರೇಮ ಮಧುರ ಪ್ರೇಮ, ಸಗುಣ ಭಕ್ತಿ....’

“ಅದು ಸರಿ. ಆದರೆ, ಭಗವಂತ ನಿರಾಕಾರ, ನಿರ್ಗುಣ.......ಅಂತ ಅನ್ನುತ್ತಾರೆ ನೋಡಿ. ಒಳಗಿನ ಕಣ್ಣುಗಳಿಗೆ ಮಾತ್ರ ತೋರುವ ಜ್ಞಾನಗಮ್ಯನಾತ ಅನ್ನುತ್ತಾರೆ, ಕೆಲವರು.”

‘ಹ್ಞಾಂ .. ಹಾಗೆ ಬಾ. ಅದೇ ನಾನು ಆಗ ಅನ್ನುತ್ತಾ ಇದ್ದದ್ದು....’

‘ಓಹೋ, ಏನು, ಹೇಳಬಿಡಿ...”

‘ನೋಡು, ಕೃಷ್ಣ ಗೋಪಿಯರನ್ನು ಬಿಟ್ಟು ಮಥುರೆಗೆ ರಾಜಕಾರ್ಯಕ್ಕಾಗಿ ಹೊರಟು ಬಿಟ್ಟ. ಅಲ್ಲಿ ಕಂಸನನ್ನು ಕೊಂದ ಬಳಿಕ ಅಲ್ಲೇ ನೆಲೆಸಿಂತ. ಒಂದು ದಿನ ತನ್ನ ಸಖ ಉದ್ಧವನನ್ನ — ಈತ ಜ್ಞಾನಯೋಗಿ— ಕರೆದು ತನ್ನನ್ನೆ ನೆನೆ ನೆನೆದು ಹಂಬಲಿಸಿ ಬಳಲುತ್ತಿರುವ ಗೋಪಿಯರಿಗೆ ಜ್ಞಾನಯೋಗವನ್ನು ಕಲಿಸಿ ತನ್ನ ನಿರಾಕಾರ ರೂಪವನ್ನು ಆರಾಧಿಸಿ ಪ್ರಸನ್ನ ಚಿತ್ತರಾಗುವಂತೆ ಉಪದೇಶವೀಯಲು ಕೇಳಿಕೊಂಡ....’

‘ಹ್ಞಾಂ....ಆಮೇಲೆ?’

‘ಉದ್ಧವ ವ್ರಜಕ್ಕೆ ಬಂದ....’

‘ಹೌದ್ರಿ, ಅದು ಗೊತ್ತು. ಗೋಪಿಯರು ಏನಂದ್ರು?’

‘ಓ, ಯಾರು ಏನನ್ನ ಬೇಕಾದ್ರೂ ಉದ್ಧವ ವ್ರಜಕ್ಕೆ ಬರಬೇಕಲ್ಲ?’

‘ಹೌದು ಹೌದು. ಉದ್ಧವ ವ್ರಜಕ್ಕೆ ಬಂದು, ತನ್ನ ಯೋಗವನ್ನು ಉಪದೇಶಿಸಿದ. ಮುಂದ? ಅದಕ್ಕೆ ಗೋಪಿಯರು ಏನಂದರು?”

‘ಓಹೋ? ಅದರಲ್ಲಿಯೇ ನಿನಗಷ್ಟು ಆಸಕ್ತಿಯೇನು?”

‘ಹ್ಞಾಂ ಹೇಳಿ....”

“ಕೇಳು, ನಮಗೆ ನಿನ್ನ ನಿರ್ಗುಣ ಕೃಷ್ಣೋಪಾಸನೆ ಬೇಡ; ಬಂದ ದಾರಿಗೆ ಸುಂಕವಿಲ್ಲಾಂತ ಮರಳಿಸಿದ್ರು!”

‘ಅಬ್ಬಾ ನೀವ್ನೆ, ಎಂಥ ಕಲ್ಲು ಮನಸ್ಸು ನಿಮ್ಮದು?’

“ಯಾಕೆ? ನಿರ್ಗುಣೋಪಾಸನೆ ಬೇಡಾಂತ ಒಂದೇ ಮಾತು ಅವರ ಬಾಯಿಯಿಂದ ಬಂತು ಬಿಟ್ಟಿತೇನು? ತಮ್ಮ ಪ್ರಿಯತಮನನ್ನು ನೆನೆ ನೆನೆದು ಅಳಲಿಲ್ಲವೇನು?’

‘ಓ ಹೋ, ಅದೆಲ್ಲಾ ರಾಮಾಯಣ.

ದ್ದು ಬೇಕಾದ್ರೆ, ಕೇಳು—ಮೊದಲು ಅಂದ್ದರ ವ್ಯಾಖ್ಯೆ ”

“ಪಾಲಿಗೆ ಬಂದದ್ದು ಪಂಚಾಮೃತ.’

“ಗೋಪಿಯರು ಹೇಳುತ್ತಾರೆ: ಅಯ್ಯ ಉದ್ಧವ, ನೀನು ಉಪದೇಶಿಸಿದ ಯೋಗವ್ರತವನ್ನು ನಮ್ಮಲ್ಲಿ ಯಾರು ತಾನೆ ಸಾಧಿಸಬಲ್ಲರು? ಅದಕ್ಕಾಗಿ ಮೃಗಚರ್ಮ ತೊಟ್ಟು, ಬೂದಿ ಬಳಿದು, ಜಡೆ ಬಿಟ್ಟು ಯೋಗದಂಡ ಹಿಡಿದು ಯಾರು ಉಪಾಸನೆ ಮಾಡಬಲ್ಲರು?’

‘ಯಾಕೆ ಮಾಡಬಾರದು? ಕೃಷ್ಣ ಪ್ರಾಪ್ತಿಗಾಗಿ....?

“ನೋಡು, ನಿನ್ನ ನಿರ್ಗುಣ ಕೃಷ್ಣ ಅಗಮ್ಯ, ಅಪಾರ, ಅಗಾಧ. ಅಂಥವನನು ಶರೀರವನ್ನು ಬಳಲಿಸಿಯೂ ನಾವು ಗಳಿಸದೆ ಹೋದರೆ ಏನು ಪ್ರಯೋಜನ? ನಮಗೆ ನಮ್ಮ ಗಿರಿಧರ ಕೃಷ್ಣನ ಶ್ಯಾಮಸುಂದರ ಮುಖವನ್ನ ನೋಡಬೇಕು. ಇದಕ್ಕಾಗಿ ನೀನೆನ್ನುವ ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧಾರಣ, ಧ್ಯಾನ, ಸಮಾಧಿ— ಈ ಆಡಂಬರಗಳು ಯಾಕೆ ಬೇಕು?’

“ಅದು ಸರೀನ್ನಿ. ಸತ್ತ ಕಾಣಬಹುದಾದ ಸ್ವರ್ಗಕ್ಕಿಂತ ಇದ್ದು ಕಾಣುವ ನರಕವೇ ಲೇಸು...”

“ಕೇಳು, ಇನ್ನೂ ಸ್ವಾರಸ್ಯವಿದೆ, ಗೋಪೀ ಜನನಯನಾಭಿರಾಮ ಶ್ರೀಕೃಷ್ಣನನ್ನು ಹೊಂದಲು ಮಾಣಿಕ್ಯದಂತಹ ಸಾಕಾರ ಭಕ್ತಿಯನ್ನು ತೊರೆದು ಬೂದಿಯಂತಹ ನಿರಾಕಾರ ಭಕ್ತಿಯ ಆಶ್ರಯವೇಕೆ?’

“ಓ ಹೋ ಹೋ....ಭಾರೀ ಚಲೋದಿದೆ. ಅಲ್ಲ, ಗೋಪೀ ಜನನಯನಾಭಿರಾಮ ಅಂದರೆ?’

“ಗೋಪಿಯರ ಕಣ್ಣುಗಳಿಗೆ ಸಂತೋಷವನ್ನುಂಟು ಮಾಡುವವ—”

“ಹ್ಞಾಂ...ಚಂದ ತೋರುವವ....’

‘ಹಾಗೂ....”

“.........’

‘ಏನು, ದುರುಗುಟ್ಟಿ ನೋಡುತ್ತಿ?”

“ಏನೂ ಇಲ್ಲ....ಹೀಗೇ ಏನೋ ನೋಡೋಣ ಅನ್ನಿಸಿತು ನನ್ನ ಮಾಣಿಕ್ಯವನ್ನು...’

‘ನನ್ನ ಮುತ್ತನ್ನ ನಾನೂ...’

‘ಶ್ಶ್...ನಿಲ್ಲಿ. ನೋಡಿ, ನಿಮ್ಮ ಈ ಕವಿತೆ ಚಂದವಿದೆ. ಇನ್ನೂ ಏಕೆ ಬರೀ ಬಾರದು?’

‘ಅಯ್ಯೋ, ನನ್ನದಲ್ಲ ಇದು. ಕವಿತೆ ಬರಿಯೋಕೆ ನನಗಲ್ಲಿ ಬರುತ್ತೆ? ಇದು ಹಿಂದೀ ಸಾಹಿತ್ಯ ಸಾಮ್ರಾಟ ಸೂರದಾಸರದ್ದು....

ಪರ್ವಾಗಿಲ್ಲ ..ನೀವು, ದಿನಾ ಒಂದೊಂದು ಗೀತೆ ಹೀಗೆ ಹೇಳಿದ್ರೆ ನಾನ ....’

‘ಏನು ಕೊಡ್ತೀ... ?’

“ನೀವೆಲ್ಲಾ ಹೇಳಿಯಾದ ಮೇಲೆ ಒಂದೇ ಬಾರಿ ಭಾರಿ ಕಾಣಿಕೆ ಕೊಡ್ತೇನೆ... ಹ್ಞಾಂ....’

“ಆದ್ರೆ ನೋಡು, ಈಗ ನನಗೂ ಹೇಳೋಕೆ ಪುರ್ಸೊತ್ತಿಲ್ಲ; ಕೇಳೋಕೂ ನಿನಗಿಲ್ಲ...’

‘ಹ್ಞಾಂ.....ಜಗ್ಗಿ, ಯಾವಾಗಾದ್ರೂ ಹೀಗೇ ಒಂದೊಂದು ಹೇಳ್ತಾ ಇರಿ....”

‘ಅಯ್ಯೋ ಮೂಗಿನ ತುದೀಲಿ ಲ ಸೆಯೆ?”

“ಇಲ್ಲಿ ಹತ್ರ ಬನ್ನಿ...ನನಗೆ ಆಸೆಯರದೆ ಮಾತ್ಯಾರಿಗೆ....’

“ಛೆ....ಛೆ....ಛೆ...”

‘ಶ್ಶ್......”

—ಗೌರಿ

ಕನ್ನಡ ಪುಸ್ತಕಗಳು

ಹೈಸ್ಕೂಲ್, ಹಯರ್ ಸೆಕಂಡರಿ ಸ್ಕೂಲ್, ಕಾಲೇಜು ಮೊದಲಾದುವುಗಳ ಯಾವತ್ತೂ ವಾಚನ ಭಂಡಾರಗಳಿಗೆ ಉಪಯುಕ್ತವಾದ ಕರ್ನಾಟಕದ ವಿವಿಧ ಲೇಖಕರ ಕತೆ, ಕಾದಂಬರಿ, ಕವನ, ವಿಮರ್ಶೆ ಇತ್ಯಾದಿ

ಕನ್ನಡ ಪುಸ್ತಕಗಳು

ನಮ್ಮಲ್ಲಿ ದೊರೆಯುತ್ತವೆ.

ವಿವರವಾದ ಕೆಟಲಾಗಿಗೂ ವಿಶೇಷ ಸವಲತ್ತುಗಳಿಗೂ ಬರೆಯಿರಿ:

ನವಭಾರತ ಪುಸ್ತಕ ಭಂಡಾರ

ರಿಜಿಸ್ಟರ್ಡ್ ಪಬ್ಲಿಷರ್ಸ್

ಪಾಲುಕೋಟೆ, ಉಡುಪಿ .

ಮಹಾ ಕ್ರಾಂತಿಕಾರ - ಗಾಂಧೀಜಿ

(ರಾಷ್ಟ್ರಪತಿ ಡಾ। ಎಸ್. ರಾಧಾಕೃಷ್ಣನ್‌ರ ಪ್ರಸಾರ ಭಾಷಣದಿಂದ)

ರಾಷ್ಟ್ರಪತಿ ಡಾ। ಎಸ್. ರಾಧಾಕೃಷ್ಣನ್ ಅವರು ಅಕ್ಟೋಬರ್ ೨ರಂದು ಗಾಂಧೀ ಜಯಂತಿಯ ಸಂದರ್ಭದಲ್ಲಿ ರಾಷ್ಟ್ರವನ್ನುದ್ದೇಶಿಸಿ ಆಕಾಶವಾಣಿ ದೆಹಲಿ ಕೇಂದ್ರದಿಂದ ಪ್ರಸಾರ ಭಾಷಣ ಮಾಡಿದರು. ಅವರ ಭಾಷಣದ ಪೂರ್ಣ ಪಾಠವನ್ನು ಇಲ್ಲಿ ಕೊಡಲಾಗಿದೆ.

೧೯೬೯ ಅಕ್ಟೋಬರ ೨ರಂದು, ಗಾಂಧೀಜಿಯವರು ಜನಿಸಿ ಒಂದು ನೂರು ವರ್ಷಗಳಾಗುತ್ತವೆ; ಆಗ ಇಡೀ ವಿಶ್ವದಾದ್ಯಂತ ಗಾಂಧೀಜಿ ಜನ್ಮ ಶತಾಬ್ದಿಯ ಅಂಗವಾಗಿ ಉತ್ಸವಗಳು, ಸಭೆ, ಸಮಾರಂಭಗಳು, ಪ್ರದರ್ಶನಗಳು ಮತ್ತು ವಿಚಾರಗೋಷ್ಠಿಗಳು ನಡೆಯುತ್ತವೆ. ಗಾಂಧೀಜಿಯವರ ಜನ್ಮಶತಾಬ್ದಿಯನ್ನು ಸಂಭ್ರಮದಿಂದ ಆಚರಿಸಲು ನಾವೀಗ ಸಿದ್ಧರಾಗಬೇಕಾಗಿದೆ.

ಗಾಂಧೀಜಿಯವರ ಜೀವನವು ಒಂದು ಆದರ್ಶವಾಗಿದೆ. ಇಡೀ ಮಾನವ ಜನಾಂಗದ ಆಶಾಕಿರಣವಾಗಿದೆ. ಗಾಂಧೀಜಿಯವರ ಜೀವನ ಮತ್ತು ಅವರ ಕಾರ್ಯದ ನೆನಪು ಮಾನವ ಕುಲಕ್ಕೆ ಅಮೂಲ್ಯ. ಸಂಶಯ ಹಾಗೂ ಅನಿಶ್ಚಿತತೆಯ ಇಂದಿನ ದಿನಗಳಲ್ಲಿ ಯುವಕ—ಯುವತಿಯರು ಅಸಂಬದ್ಧ ವಿಚಾರಗಳಿಗೆ ಮಾರು ಹೋಗಿ, ಶ್ರದ್ಧೆಯನ್ನು ಕಳೆದುಕೊಳ್ಳುತ್ತಿದ್ದಾರೆ.

ಗಾಂಧೀಜಿಯವರು ನಮ್ಮ ತಲೆಮಾರಿನ ಮಹಾಕ್ರಾಂತಿಕಾರರಾಗಿದ್ದರೆಂಬುದನ್ನು ಜ್ಞಾಪಿಸಿಕೊಳ್ಳುವುದು ಅಗತ್ಯ. ವಿಧಾನ ಮಂಡಲಿಗಳಲ್ಲಿ ನಡೆಯುವ ವಾಗ್ಯುದ್ಧ ಅಥವಾ ಬೀದಿಗಳಲ್ಲಿ ನಡೆಯುವ ಹಿಂಸಾ ಕೃತ್ಯಗಳಿಂದ, ಗಾಂಧೀಜಿ ಸಾಧಿಸಬಯಸಿದ ಬೃಹತ್ ಸಾಮಾಜಿಕ ಕ್ರಾಂತಿ ಸಾಧ್ಯವಾಗಲಾರದು.

ಗಾಂಧೀಜಿಯವರು ವೈಯಕ್ತಿಕ, ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟಗಳಲ್ಲಿ ಯಾವುದಕ್ಕಾಗಿ ಹೋರಾಡಿದರು? ಎಂಬುದನ್ನು ನಾವು ಅರಿತುಕೊಳ್ಳಬೇಕಾದದ್ದು ಅಗತ್ಯ. ಗಾಂಧೀಜಿಯವರು ಧಾರ್ಮಿಕ ವ್ಯಕ್ತಿಯಾಗಿದ್ದರು. ಅವರ ಅಭಿಪ್ರಾಯದಲ್ಲಿ ಧರ್ಮವೆಂದರೆ, ಅವಿಶ್ರಾಂತ ಸತ್ಯ ಶೋಧನೆಯಾಗಿತ್ತು. ಪ್ರೇಮದ ನಿರಂತರ ಅಭ್ಯಾಸವಾಗಿತ್ತು.

ಮೂವತ್ತು ವರ್ಷಗಳ ಹಿಂದೆ ನಾನು ಗಾಂಧೀಜಿಯವರನ್ನು ಧರ್ಮದ ಬಗ್ಗೆ ನಿಮ್ಮ ವಿಚಾರಗಳೇನು? ಎಂದು ಕೇಳಿದೆ. ಅವರು ತಮ್ಮ ಅಭಿಪ್ರಾಯ ವ್ಯಕ್ತಪಡಿಸುತ್ತ ಈ ರೀತಿ ಹೇಳಿದರು. "ಇತ್ತೀಚೆಗೆ, ದೇವರೇ ಸತ್ಯವೆಂದು ಹೇಳುವುದರ ಬದಲು ಸತ್ಯವೇ ದೇವರು ಎಂದು ಹೇಳುತ್ತಿದ್ದೇನೆ."

ಸತ್ಯದಿಂದ ದೇವರನ್ನು ಪಡೆಯಲು ಸಾಧ್ಯವಿದ್ದಂತೆ ಬೇರಾವುದರಿಂದಲೂ ಸಾಧ್ಯವಿಲ್ಲ. ದೇವರೇ ಇಲ್ಲವೆಂದು ಹೇಳುವವರನ್ನು ನಾವು ನೋಡಿದ್ದೇವೆ. ಆದರೆ ಸತ್ಯವೇ ಇಲ್ಲವೆಂದು ಹೇಳಿದವರನ್ನು ನೋಡಿಲ್ಲ. ಸತ್ಯಂ—ಜ್ಞಾನಂ, ಅನಂತ ಬ್ರಹ್ಮಾ, ಮುಂಡಕ ಉಪನಿಷತ್ತಿನಲ್ಲಿ ಈ ರೀತಿ ಹೇಳಲಾಗಿದೆ.

ಸತ್ಯಂ ಏವ ಜಯತೆ ನಾನೃತಂ
ಸತ್ಯೇನ ಪಂಥಾ ಏತತೋ ದೇವ—ಯಾನಃ
ಯನಕ್ರಮಂತಿ ಋಷಿಯೋ ಆಪ್ತ—ಕಾಮಾಃ
ಯತ್ರ ತತ್ ಸತ್ಯಸ್ಯ ಪರಮಂ ನಿಧಾನಂ

ಸತ್ಯಮೇವ ಜಯತೇ. ಅಸತ್ಯಕ್ಕೆ ಎಂದಿಗೂ ಜಯವಾಗದು ಸತ್ಯವೇ ದೇವರ ಬಳಿಗೆ ಹೋಗುವ ಮಾರ್ಗವನ್ನು ತೋರಿಸುತ್ತಿದೆ. ಈ ಮಾರ್ಗದಲ್ಲಿ ನಡೆದು ಋಷಿಗಳು ಸತ್ಯದ ಸಾಕ್ಷಾತ್ಕಾರವನ್ನು ಮಾಡಿಕೊಂಡರು.

"ಸತ್ಯವನ್ನು ನೀನು ಅರಿತುಕೋ. ಅದು ನಿನ್ನನ್ನು ಮುಕ್ತಗೊಳಿಸುತ್ತದೆ" ಎಂದ ಏಸು ಕ್ರಿಸ್ತ ಹೇಳಿದ್ದಾರೆ.

ವಾಸ್ತವತೆಯನ್ನು ಅರ್ಥ ಮಾಡಿಕೊಳ್ಳಲು ವಿಚಾರ ಶಕ್ತಿ ಅಗತ್ಯ. ಬುದ್ಧೌ ಶರಣಂ ಅನ್ವಿಚ್ಛ. ಆಳವಾದ ವಿಚಾರವೇ ಅಂತರ್ ದೃಷ್ಟಿಯಲ್ಲಿ ಪರ್ಯವಸಾನಗೊಳ್ಳುತ್ತದೆ. ವಿವೇಕ ಬುದ್ಧಿಯಿಂದಾಗಿ ನಮ್ಮ ಜೀವನ ಸಫಲವಾಗುತ್ತದೆ.

ಅವನತಿಯ ಹಾದಿಯಲ್ಲಿ ನಾವು ಕೊನೆಯ ವರೆಗೂ ನಡೆಯುವುದು ಸಾಧ್ಯವಿಲ್ಲ. ಮಾನವನ ಚೇತನದಲ್ಲಿ ವಿಶ್ವಾಸವುಳ್ಳವರೆಲ್ಲರೂ ಮಾನವ ಕುಲದ ಭವಿಷ್ಯತ್ತಿನಲ್ಲಿ ವಿಶ್ವಾಸ ತಳೆದಿದ್ದಾರೆ. ಆಧ್ಯಾತ್ಮಿಕ ಸಂಘರ್ಷವನ್ನು ಎದುರಿಸದೇ ನಾವು ಸತ್ಯದ ಗುರಿಯನ್ನು ಸಾಧಿಸಲಾರೆವು. ಇದಕ್ಕೆ ಒಂದೇ ಒಂದು ಮಾರ್ಗವಿದೆ, ತಪಸ್ಸೇ ಆ ಮಾರ್ಗ. ಪ್ರತಿಯೊಬ್ಬನು ತನ್ನ ಮನಃಶುದ್ಧಿಗಾಗಿ ಯತ್ನಿಸಿದರೆ, ಇಡಿ ಜಗತ್ತೇ ಶುದ್ಧವಾಗುತ್ತದೆ.

ಗಾಂಧೀಜಿ ಅವರು ಇತರರ ಮೇಲೆ ಪ್ರಭಾವ ಬೀರುವ ಮೊದಲು ತಮ್ಮ ಮಾನಸಿಕ ಮತ್ತು ಹೃದಯ ಶುದ್ಧಿಯನ್ನು ಸಾಧಿಸುತ್ತಿದ್ದರು. ಅವರು 'ನಾನು ತಪ್ಪು ಮಾಡಲು ಸಾಧ್ಯವಿಲ್ಲ' ಎಂದು ವಾದಿಸಲಿಲ್ಲ. ಅವರು ಅನೇಕ ಸಲ 'ತಮ್ಮ ವ್ಯಕ್ತಿತ್ವವನ್ನು ಕುರಿತು ಪ್ರಸ್ತಾಪಿಸುತ್ತ, ನಾನು ಒಳಿತು — ಕೆಡುಕುಗಳು' ದೌರ್ಬಲ್ಯ ಹಾಗೂ ನ್ಯೂನತೆಗಳ, ಹಿಂಸೆ ಮತ್ತು ಅಹಿಂಸೆಗಳ ಮಿಶ್ರಣವಾಗಿದ್ದೇನೆ. ಅಹಿಂಸೆಯಲ್ಲಿ ಇಂತಹ ಯಾವುದೇ ಮಿಶ್ರಣವಿಲ್ಲ ಎಂದಿದ್ದರು.

ಒಂದೇ ನಾಣ್ಯದ ಎರಡು ಮುಖಗಳು

ಸತ್ಯದ ಕ್ರಿಯಾಶೀಲ ರೂಪವೇ ಅಹಿಂಸೆಯೆಂದೂ, ಪ್ರೇಮವೆಂದೂ ಹೇಳುತ್ತಾರೆ. ಸತ್ಯ ಹಾಗೂ ಅಹಿಂಸೆ ಸತ್ಯ ಮತ್ತು ಪ್ರೇಮ ಇವು ಒಂದೇ ನಾಣ್ಯದ ಎರಡು ಮುಖಗಳು. ಎಲ್ಲಾ ಮಹಾನ್ ಧರ್ಮಗಳೂ ಸಕಲ ಜೀವಿಗಳೊಂದಿಗೆ ಪ್ರೀತಿಯಿಂದ ನಡೆದುಕೊಳ್ಳಬೇಕೆಂದು ಬೋಧಿಸಿವೆ ಗಾಂಧೀಜಿಯವರು ಅಹಿಂಸೆ ನಿಷ್ಕಳಂಕವಾಗಿದೆಯೆಂದು ಹೇಳಿದ್ದಾರೆ. ಸರ್ವೋದಯವೇ ಅಹಿಂಸೆಯ ಗುರಿ.

ಅಸೂಯೆಯಿಂದ ಮತಿಭ್ರಮಣವಾಗುತ್ತದೆ. ಇದರಿಂದ ಮಾನವ ಜನಾಂಗದ ಬಗೆಗಿನ ನಮ್ಮ ನಮ್ಮ ಭಾವನೆಗಳ ಮೇಲೆ ಪರಿಣಾಮವಾಗುತ್ತದೆ. ಅಹಿಂಸೆ ಎಲ್ಲರ ಕಲ್ಯಾಣಕ್ಕಾಗಿ ನಮ್ಮನ್ನು ಸರ್ವೋದಯಕ್ಕೆ ಪ್ರೇರಿತಗೊಳಿಸುತ್ತದೆ. ಗಾಂಧೀಜಿಯವರು ಸ್ವರಾಜ್ಯದ ಸಮಾಜವಾದಿ ಸ್ವರೂಪವನ್ನು ಅರಿತುಕೊಂಡಿದ್ದರು. ಅವರು ಈ ಬಗ್ಗೆ ಪ್ರಸ್ತಾಪಿಸುತ್ತ "ಎಲ್ಲಿಯವರೆಗೆ ಯಾವುದೇ ಒಬ್ಬ ವ್ಯಕ್ತಿಯ ಕೈಯಲ್ಲಿ, ಅವನು ಎಷ್ಟೇದೊಡ್ಡವನಾಗಿರಲಿ ಕೋಟಿ ಕೋಟಿ ಜನರ ಜೀವನ, ಸಂಪದವೂ ಅಡಗಿಯವರೆಗೆ ಭಾರತದಲ್ಲಿ ಸ್ವರಾಜ್ಯ ಸ್ಥಾಪನೆಯಾಗಲಾರದು. ಸ್ವರಾಜ್ಯ ಸಾಧನೆಗೆ ಮೊದಲು ಇದು ಕೊನೆಗೊಳ್ಳಬೇಕು." ಎಂದಿದ್ದಾರೆ.

ಅಸ್ಪೃಶ್ಯತಾ ನಿವಾರಣೆ

ಅಸ್ಪೃಶ್ಯತೆಯಿಂದ ಪಾಪವೆಂದು ಗಾಂಧೀಜಿ ಅವರು ಭಾವಿಸಿದ್ದರು. ಜಾತೀಯ ಗಲಭೆಗಳನ್ನು ಅವರು ವಿರೋಧಿಸುತ್ತಿದ್ದರು. ಎಲ್ಲ ಜನರು ದೇವರ ಎದುರಿಗೆ ಸಮಾನರಾಗಿದ್ದಾರೆ. ಬೇರೊಂದು ಧರ್ಮದವನೆಂಬ ಕಾರಣದಿಂದ ಯಾರಾದರೂ ಒಬ್ಬ ವ್ಯಕ್ತಿಯನ್ನು ಕೀಳಾಗಿ ಕಂಡರೆ, ಅವರು ದೇವರ ಮತ್ತು ಮಾನವರ ದೃಷ್ಟಿಯಲ್ಲಿ ಪಾಪ ಮಾಡಿದಂತೆ.

ಗಾಂಧೀಜಿ ಅವರ ಆಂದೋಲನದಿಂದ ಮಹಿಳಾ ಜಾಗೃತಿ ಸಾಧ್ಯವಾಯಿತು. ರಾಷ್ಟ್ರೀಯ ಸಮಗ್ರತೆ ಮತ್ತು ವಿಶ್ವದ ಐಕ್ಯತೆ ಗಾಂಧೀಜಿ ಅವರ ಎರಡು ಮುಖ್ಯ ಗುರಿಗಳಾಗಿದ್ದವು. ನಾವು ಗಾಂಧೀಜಿ ಅವರ ನಿಜವಾದ ಅನುಯಾಯಿಗಳಾಗಿದ್ದರೆ ಸಾಮಾಜಿಕ ಮತ್ತು ರಾಷ್ಟ್ರೀಯ ಸಮಗ್ರತೆಗಾಗಿ ಮಹಿಳಾ ಜಾಗೃತಿಗಾಗಿ, ಮತ್ತು ಪೂರ್ಣ ಸಾಮಾಜಿಕ ಸಮಾನತೆಗಾಗಿ, ಅಸ್ಪೃಶ್ಯತಾ ನಿವಾರಣೆಗೆ ಯತ್ನಿಸಬೇಕು.

ಸತ್ಯ ಮತ್ತು ಪ್ರೇಮ ಈ ಎರಡೇ ತತ್ವಗಳ ಮೇಲೆಯೇ ವಿಶ್ವದ ಎಲ್ಲಾ ಸಂಸ್ಕೃತಿಗಳೂ ಆಧಾರಿತವಾಗಿವೆ ಎಂದೂ ಗಾಂಧೀಜಿ ಹೇಳುತ್ತಿದ್ದರು. ವಿಶ್ವದ ಎಲ್ಲಾ ಜನರು ನಿಷ್ಠೆಯಿಂದ ಗಾಂಧೀಜಿಯವರ ಈ ಮಾತುಗಳನ್ನು ಒಪ್ಪಿಕೊಂಡರೆ, ರಾಷ್ಟ್ರ—ರಾಷ್ಟ್ರಗಳ ನಡುವೆ ನಿಕಟ ಸಂಬಂಧ ಏರ್ಪಡುವುದಲ್ಲದೆ, ನಮ್ಮ ಸುತ್ತಮುತ್ತಲೂ ಕವಿದ ಕತ್ತಲೂ ದೂರವಾಗುತ್ತದೆ.

ನಮ್ಮ ಸಂಸ್ಕೃತಿ ಇನ್ನೂ ಪೂರ್ಣವಾಗಿ ಉನ್ನತಿ ಸಾಧಿಸಲಿಲ್ಲ. ನಾವಿನ್ನೂ ಮಾನವ ಜನಾಂಗದ ಇತಿಹಾಸದ ಆರಂಭಿಕ ಕಾಲದಲ್ಲಿಯೇ ಇದ್ದೇವೆ. ದಿಕ್ಕು ತೋಚದೆ ಕತ್ತಲೆಯಲ್ಲಿ ತಡವರಿಸುತ್ತಿದ್ದೇವೆ. ಅನೇಕ ತಪ್ಪು—ಒಪ್ಪುಗಳಿಂದ, ದಿಗ್ಭ್ರಮೆಯಿಂದ ನಾವು ಪ್ರಗತಿ ಸಾಧಿಸಿದ್ದೇವೆ. ಇದು ಇತಿಹಾಸದ ಒಂದು ವಿರೋಧಾಭಾಸವೇ ಸರಿ. ನಮ್ಮಲ್ಲಿ ದೈವ ಶಕ್ತಿ ಮತ್ತು ಪಾಶವೀ ಶಕ್ತಿಗಳು ಸಮ-ಸಮವಾಗಿವೆ. ನಾವು ಪ್ರಗತಿ ಸಾಧಿಸಲು ಯತ್ನಿಸುತ್ತಿದ್ದೇವೆ. ಅಹಿಂಸಾತ್ಮಕ ಹಾಗೂ ರಚನಾತ್ಮಕ ಕಾರ್ಯಗಳ ಮೂಲಕವೇ ಸಾಮಾಜಿಕ ಹಾಗೂ ಆರ್ಥಿಕ ಪರಿವರ್ತನೆ ಸಾಧ್ಯವೆಂಬುದನ್ನು ನಾವು ಬಲ್ಲವರಾಗಿದ್ದೇವೆ. ಮೊದಲು ಈ ಗುರಿ ಸಾಧನೆಗಾಗಿ ಯುದ್ಧಗಳು ನಡೆಯುತ್ತಿದ್ದವೆಂಬುದು ನಮಗೆ ಗೊತ್ತಿದೆ.

ದೇಶ ವಿಭಜನೆಯ ಕಾಲದಲ್ಲಿ ಸಂಭವಿಸಿದ ನಷ್ಟವನ್ನು ಕಂಡು ಗಾಂಧೀಜಿ ಅವರಿಗೆ ಬಹಳ ದುಃಖವಾಯಿತು. ಅವರು ಚಿಂತಾಗ್ರಸ್ತರಾಗಿದ್ದರು. ಆದರೆ ಭಯಗೊಂಡಿರಲಿಲ್ಲ, ಏಕೆಂದರೆ ದೇವರಲ್ಲಿ ಅವರಿಗೆ ಅಚಲವಾದ ವಿಶ್ವಾಸವಿತ್ತು.

'ಭಯಪಡಬೇಡಿ, ಅಂಜಿದವರು ದ್ವೇಷಿಸುತ್ತಾರೆ. ದ್ವೇಷಿಸುವವರು ಕೊಲ್ಲುತ್ತಾರೆ. ನಿಮ್ಮ ಖಡ್ಗವನ್ನು ಮುರಿದು ಎಸೆಯು

(ಹನ್ನೊಂದನೇ ಪುಟ ನೋಡಿರಿ)

ಸುವ್ಯವಸ್ಥಿತ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ ತನ್ನ 62 ಶಾಖೆಗಳಿಂದ ಹಬ್ಬಿರುವ "ವಿಜಯ ಬ್ಯಾಂಕಿ"ನಲ್ಲಿ ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 8% ವರೆಗಿನ ಬಡ್ಡಿ
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿ. ಆಫೀಸು—"ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರೋಡ್.
ಮಂಗಳೂರು—3

Registered with the Registrar
of News Papers for India
under No. R. N. 3646/'57

LICENCE No. 31
Licensed to Post without Prepaymen

ವಿದ್ಯಾರ್ಥಿ ಕಂಡಂತೆ

ತ್ಯಾಗದ ಮೊದಲ ಪಾಠ

ಬರೆದವರು
ಶ್ರೀ ಬಿ. ದೇವರಾಯ ಮಲ್ಯ,
೯ನೆ ತರಗತಿ, ಬೋರ್ಡ್ ಹೈಸ್ಕೂಲ್, ಶಂಕರನಾರಾಯಣ.

"ರಾಜೂ ಽ ಽ ಽ" ಮರುತ್ತರವಿಲ್ಲ.

"ರಾಜೂ ಽ ಽ ಽ ಽ"

"ನೀನು ಹೀಗೆ ಕೋಪ ಮಾಡಿಕೊಂಡರೆ ಹೇಗಪ್ಪಾ? ಮತ್ತೊಂದು ಸಲ ಬಂದರೆ ನೋಡುವಾ." ಎಂದರು ಕಮಲಮ್ಮ. ಉಹೂಂ. ಕಾಫಿ ತೊಗೋ ಎಂದರೂ ಉಹೂಂ. ರಾಜು ಮಾತನಾಡಲೊಲ್ಲ. ಇಚ್ಛೆಗೆ ಬೇಡವೆಂದರೆ ಕೋಪ ಬರುವುದು ಸಹಜ ತಾನೆ? ತಾನು ಅದನ್ನು ನೋಡಿದರೆ ಏನಾಗುತ್ತದೆ? ಕೇವಲ ೨೫ ಪೈಸೆ, ಪ್ರದರ್ಶನ ಫೀಜು. ಕುದುರೆಯ ಕುಣಿತ ಇದೆಯಂತೆ. ಹುಲಿ, ಸಿಂಹಗಳ ಸರ್ಕಸ್ಸಂತೆ. ನೋಡಬಾರದೇಕೆ? ಆ ದಿನ ಶಾಲೆ ಬಿಟ್ಟವನೇ ಓಡಿಬಂದಿದ್ದ. ಸಂತೋಷದ ಭರದಲ್ಲಿ ತಾನು ಯಾವ ರಸ್ತೆಗೆ ಓಡುತ್ತಿದ್ದೇನೆ ಎಂಬ ಜ್ಞಾನವಿಲ್ಲ. ಸಹಜ ತಾನೇ? ಇಂದು ಕಡೇ ದಿನ. ಕೇವಲ ೪ ಆಣೆ. ನಾನು ನೋಡಲೇಬೇಕು. ಎಂಬಿತ್ಯಾದಿ ಯೋಚಿಸುತ್ತಿದ್ದ. ಸರಿ, ಮನೆಗೆ ಬಂದವನೇ ಅಡುಗೆ ಮನೆಗೆ ನುಗ್ಗಿದ.

ಅರಸಿನಕೆರೆಯಲ್ಲಿ ರಾಮರಾಯರ ಬಿಡಾರ. ಸಣ್ಣ ಮನೆ. ಗುಮಾಸ್ತಿಕೆ ಕೆಲಸದಲ್ಲಿ ಸ್ವಲ್ಪ ಸಂಬಳ. ಅದೂ ತಮಗೆ ತಮ್ಮ ಹೆಂಡತಿಗೆ ನಾಲ್ಕು ಮಕ್ಕಳಿಗೆ ಸಾಲದು. ಮನೆಯ ಹಿಂದುಗಡೆ ಕಮಲಮ್ಮನ ತೋಟ. ಅದರಲ್ಲಿ ಬೆಳೆದ ಕಾಯಿಪಲ್ಲೆಗಳನ್ನು ಪೇಟೆಗೆ ಹೋಗಿ ಮಾರುವ ಕೆಲಸ ಶೀನನಿಗೆ. ಬಂದ ಹಣದಲ್ಲಿ ಕೆಲವು ಪೈಸೆಗಳನ್ನು ಜಾರಿಸಿ ಇಟ್ಟುಕೊಳ್ಳುವುದು ಅವನ ವಾಡಿಕೆ. ಕಡ್ಲೆಪುರಿ ತೊಗೋಬೇಕಲ್ಲಾ? ಇರಲಿ. ರಾಜು ಅಡುಗೆ ಮನೆಗೆ ನುಗ್ಗಿದವನೆ ಉಸ್ಸೆಂದು ಕುಳಿತ. ತಾಯಿ ಕಮಲಮ್ಮ, "ಏನೋ ಇವತ್ತು ವಿಶೇಷ?" ಎಂದರು. ರಾಜು ಸ್ವಲ್ಪ ನೀರು ಕುಡಿದು ಸುಧಾರಿಸಿಕೊಂಡು. 'ಅಮ್ಮಾ, ಒಂದು ಮಾತು. ನೋಡು ಇವತ್ತು ನಮ್ಮ ಶಾಲೆಯ ಮಾಸ್ತರು ಹೇಳಿದರು, ಮಕ್ಕಳೇ ''ಮಾಧುರಿ ಸರ್ಕಸ್'' ನೋಡಲಿಚ್ಛಿಸುವವರು ಅರ್ಧ ಟಿಕೇಟಿನ ಹಣ ನನ್ನ ಹತ್ತಿರ ಕೊಡಿ ಎಂದಿದ್ದಾರೆ. ಕೊಡುವಿಯೇನಮ್ಮಾ?' ಎಂದಾಗ ಕಮಲಮ್ಮನವರ ಕಣ್ಣಿಂದ ಎರಡು ಹನಿ ನೀರು ಜಾರಿತು. ರಾಜು ಓಡಿ ಬಂದುದರ ಕಾರಣವೂ ತಿಳಿಯಿತು. "ಮಗೂ, ತಂದೆ ಹತ್ತಿರ ಕೇಳಿದೆಯೋ? ನಿನಗೆ ಗೊತ್ತಿಲ್ಲಪ್ಪ, ನಮ್ಮ ಬಡತನ...'...ಎಂದರು; ನನ್ನ ಹತ್ತಿರ ಇಲ್ಲ. ಎಂದಾಗ, 'ಅಮ್ಮಾ, ಕೇವಲ ೪ ಆಣೆ. ಇನ್ನೆಂದೂ ನೋಡುವುದಿಲ್ಲ. ಇವತ್ತು ಕುದುರೆಯ ಕುಣಿತ ಮತ್ತೇನೇನೋ ಇದೆ. ಆಗಲಿ ಅಮ್ಮಾ...' ಎಂದು ಬೇಡಿಕೆಯ ದನಿಯಲ್ಲಿ ಕೇಳಿದಾಗ ತಂದೆ ಹತ್ತಿರ ಕೇಳು ಎಂದು ಖಡಾತುಂಡವಾಗಿ ತಿರಸ್ಕರಿಸಿದರು.

ಅದಕ್ಕೆ ಕಾಫಿ ಕುಡಿಯದೇ ರೂಮಿಗೆ ಬಂದು ಕೋಪದಲ್ಲಿದ್ದ. ಸ್ವಲ್ಪ ಹೊತ್ತಿನ ನಂತರ ಕಮಲಮ್ಮ "ರಾಜೂ, ನೀನು ಹೀಗೆ ಮಾಡಿದರೆ ಹೇಗಪ್ಪಾ? ಆಗಲಿ ಕೊಡುವೆ. ಮೊದಲು ಕಾಫಿ ಕುಡಿ ಎಂದರು. ರಾಜೂ ಅಷ್ಟೊತ್ತಿಗೆ ಅಮ್ಮನ ಮಡಿಲಲ್ಲಿ ಅಳುತ್ತಾ ಆನಂದ ಬಾಷ್ಪ ಸುರಿಸುತ್ತಾ ತೆಕ್ಕೆ ಬಿದ್ದಿದ್ದ.

ಕಾಫಿಕುಡಿಯಲೂ ಆಗಲಿಲ್ಲ. ಬೇಗ ಹೋಗಬೇಕು ಎಂದು ಕಾಫಿಕುಡಿದ ಹಾಗೆ ಮಾಡಿ ನಾಲ್ಕಾಣೆ ತೆಗೆದುಕೊಂಡು ಓಡಿದ್ದ. ಶೀಘ್ರ ಹಣ ಕೊಡಬೇಕಲ್ಲಾ?

ಮಾಸ್ತರು ಮತ್ತು ಕ್ರಮವಾಗಿ ಮಕ್ಕಳೂ ಬಂದರು. ಮಕ್ಕಳನ್ನು ಸಾಲಾಗಿ ನಿಲ್ಲಿಸಿದ್ದ ಮಾಸ್ತರು ಹಣವಸೂಲಿ ಮಾಡತೊಡಗಿದರು. ರಾಜುವಿನ ಸಂತೋಷಕ್ಕೆ ಪಾರವಿರಲಿಲ್ಲ. ಯಾವಾಗ ಹೋಗುವೆನೋ ಎಂದು ತಡಬಡಿಸುತ್ತಿದ್ದ.

ರಾಜು ಸುತ್ತಲೂ ಕಣ್ಣು ಹಾಯಿಸಿದ. ದೂರದಲ್ಲಿ ಅಳು....ಹೌದು ಗೋಪಿ ಅಳುತ್ತಿದ್ದ. "ಗೋಪಿ, ಏನೋ ಬೇಗ ಸಾಲಿಗೆ ಸೇರು" ಎಂದ ರಾಜು. ಆದರೆ 'ಆ ಭಾಗ್ಯ ನಾನು ಪಡೆದಿಲ್ಲವಪ್ಪಾ" ಎಂದಾಗ ರಾಜೂ "ಏನೋ, ಬೇಗ ಹೇಳು' ಎಂದ.

"ನಾನು ಇಲ್ಲಿ ಕಲಿಯಲಿಕ್ಕೆ ಬಂದೆ. ನನ್ನ ಚಿಕ್ಕಪ್ಪನ ಮನೆಯಲ್ಲಿ ಉಳಿದುಕೊಂಡಿದ್ದೆ. ಆದರೆ...ಚಿಕ್ಕಪ್ಪನಷ್ಟು ಜಿಪುಣರು ಇನ್ನಿಲ್ಲ...ಕಣೋ' ಎಂದ. ರಾಜುವಿಗೆ ಕನಿಕರ ಉಂಟಾಯಿತು. ಹಾಗೇ ಆಲೋಚಿಸ ತೊಡಗಿದ..

ತನಗಿಂತ ಉತ್ತಮ ಸ್ಥಿತಿ ಅವನದಲ್ಲಿ. ನಾನು ಎಷ್ಟು ಹಟಮಾಡಿದರೂ ಹಣಕೊಡತ್ತಾರೆ ಮನೆಯಲ್ಲಿ. ಆದರೆ ಗೋಪಿ... ಚಿಕ್ಕಪ್ಪನ ಲೋಭಿತನದಿಂದ ಸರ್ಕಸ್ಸನ್ನು ನೋಡಲೂ ಇಲ್ಲವೇ....ನಾನು ನನ್ನ ಹಣ ಅವನಿಗೆ...ಛಿ....ನನಗೆ ನೋಡಬೇಡವೇ? ಅಷ್ಟು ಅತ್ತು ಕಾಫಿ ಕುಡಿಯದೇ ತಂದೆಗೆ ತೋರಿಸದೇ ತಂದ ಹಣ. ತಾಯಿ ಕೊಟ್ಟ ಹಣ....ಆದರೆ ನನ್ನ ಪ್ರಿಯ ಸಹಪಾಠಿ ಗೋಪಿ...ಎಷ್ಟು ಹಟ ಮಾಡಿದರೂ ಕೊಡುವವರಿಲ್ಲ. ಆತನಿಗೆ....ನಾನೂ ಗೋಪಿ ಪಾಲು ಮಾಡಿಕೊಂಡರೆ!... ಛೆ....ಆದರೂ ಮಾಸ್ತರ ಹತ್ತಿರ ಕೇಳಿದರೆ ಹೇಗೆ? ಅಲ್ಲವೆ...."

'ಲೋ .... ರಾಜೂ ಽ ಽ ಹಣ ಕೊಡೋಲ್ವೇನೋ" ಎಂದು ಹತ್ತಿರ ನಿಂತ ನಾಣಿ ಎಚ್ಚರಿಸಿದಾಗಲೇ ಎಚ್ಚರವಾದ ರಾಜು. ಶೀನೂ ಹಣಕೊಟ್ಟ. ರಾಜು ಕೊಡಲು ಕೈ ಚಾಚಿದ, ಆದರೆ.... ಗೋಪಿಯ ಅಳು ಮುಖ ಅವನಿಗೆ ತೋರಿತು...."ಸರ್....ನಾನೂ ಮತ್ತು ಗೋಪಿ ೪ ಆಣೆಯಲ್ಲಿ ಸರ್ಕಸ್ ನೋಡಬಹುದೇ ಸರ್" ಎಂದಾಗ ಮಾಸ್ತರು "ಛೇ... ಅದು ಹೇಗೋ' ಎಂದರು.

ರಾಜು ಮತ್ತೆ ಯೋಚನೆ ಮಾ[...]ಡಗಿದ (ಯೋಜನೆಗೆ ಕಾರವುಂಟೇ[...] ಕಡೆಗೆ........ಅವನಿಗಿಂತಲೂ ನನ್ನ[...] ಕೆಟ್ಟದ್ದಲ್ಲ. ನಾನು ಮುಂದಿನ ಸಲ[...]ಡಬಹುದು....ಎಂದು. 'ಸರ್ ನನ್ನ[...]ಲು ಗೋಪಿನ ಸೇರಿಸಿಕೊಳ್ಳಿ" ಎಂ[...] ಮಕ್ಕಳೆಲ್ಲರಿಗೂ ಆಶ್ಚರ್ಯವಾಯ[...]. ಆದರೆ ಮಾಸ್ತರು 'ರಾಜೂ...ನಾನೇ[...] ನಿನ್ನಂಥಾ ಶಿಷ್ಯರನ್ನು ಪಡೆದ ನಾನೇ[...] ಬೇಡ... ಅವನಿಗೆ ನಾನೇ ಕೊಡುತ್ತ[...] ನೀವಿಬ್ಬರೂ ನೋಡಬಹುದಲ್ಲಾ[...] ಎಂದಾಗ,

ರಾಜುವಿಗೂ ಗೋಪಿಗೂ ಬ[...]ಶ್ಚರ್ಯವಾಯಿತು. ಮಾಸ್ತರು ಸುಳ್ಳು[...] ಶಾತ್ರಿರ ಬಹುದೇ ಅಥವಾ....

'ಇನ್ನು ಹೊರಡಿ' ಎಂದು ಮಾ[...] ಹೇಳಿದಾಗ ಇಬ್ಬರ ಮನಸ್ಸು ಅವ[...]ಲಿಗೆರಗಿತ್ತು.

ಮಹಾತ್ಮರ ಮಾರ್ಗ

ಚಂದವಿಲ್ಲವವನಿಗೆ ಆ-
ನಂದಕವನೆ ಆಕರ!
ಕೊಡಲಾಗದುದೇಕೆ ಕವಗೆ!
ದೇಹ ಕೂಡ ಬೇಕರ!
ಅಂತೆ ಅದನು ಬಿಟ್ಟ ಬುವಿಗೆ
ಹಿಡಿ ಮಣ್ಣನು ಕೊಟ್ಟ!
ಸ್ವಾತಂತ್ರ್ಯದ ಮಂತ್ರ ಬೀಜ
ಎದೆ - ಎದೆಯಲಿ ನೆಟ್ಟ!
ಅವನೆ 'ಬಾಪು', ಭಾವು!
ಹಾಡಿತು ಕವಿಶ್ರೇಣಿ!
ಅವನು ಕಾಣದಿದ್ದರೇನು?
ಇದ್ದಿತವನ ಏಣಿ!!
ಹತ್ತ ಬಲ್ಲ ಶಕ್ತರೆಲ್ಲ
ಏರಬಹುದು ಹೇಳಿ!
ಹತ್ತಲಾಗದವರ ಕೂಡ
ಎತ್ತಬಹುದು ಮೇಲೆ!
ಅದೇ ದಾರಿ, ಗಾಂಧಿ ಹಾರಿ
ಮೇಲಕೇರಿ! ಓಂ!
ಬನ್ನಿರೆಂದು ಕರೆದುದುಂಟು
ಕೇಳದವರು ಕೇಳಿ
ಕಿವಿಯಲಲ್ಲ! ಎದೆಯಲದನು
ಎಡೆಬಿಡದಲೆ ತಾಳಿ!

—'ತ್ರಿಮೂ

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ದಿ। ಶ್ರೀ ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—
ಆಂಗ್ಲ ಸ್ವಯಂಬೋಧಿನಿ

ಸುಲಭದಲ್ಲಿ ಇಂಗ್ಲಿಷ್

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ.ಎರಡು. ಉತ್ತಮ ಪ್ರತಿ:ರೂ.ಎರಡೂವರೆ(ಟ.ಖ. ಪ್ರತ್ಯೇಕ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ

ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ: ರೂ. 1-25 (ಟ.ಖ.ಪ್ರತ್ಯೇಕ)

ಹೊಸಕೆರೆ ಚಿದಂಬರಯ್ಯನವರ
ಶ್ರೀಮದ್ಭಗವದ್ಗೀತೆಯ ಸಮೂಲ ಭಾಷಾಂತರ

ಗೀತೆಯ ಕೈಗನ್ನಡಿ

300 ಪುಟಗಳಿಗೂ ಮಿಕ್ಕಿದೆ. ಕೈಹೊತ್ತಗೆಯ ಆಕಾರದಲ್ಲಿದೆ.
ಬೆಲೆ: ಸಾದಾ ಪ್ರತಿ ರೂ. ೧
ಗೀತೆಯ ಕೈಗನ್ನಡಿಯ ಒಂದು ಪ್ರತಿ ಬೇಕಾದವರು ರೂ. 1-50ನ್ನು ಮನಿಯಾರ್ಡರು ಮೂಡಿ ತರಿಸಿಕೊಳ್ಳಬಹುದು.
—ಪ್ರತಿಗಳಿಗೆ ಬರೆಯಿರಿ—
ನವಭಾರತ ಪುಸ್ತಕ ಭಂಡಾರ, ಉಡುಪಿ. ಅಥವಾ
ನವಯುಗ ಪ್ರೆಸ್, ಉಡುಪಿ.

ಶ್ರೀ ಕೆ.ಕೆ. ಶೆಟ್ಟಿ,ಎಂ.ಎಲ್. ಸಿ.
ನವಕಾಲಕ್ಕೊಪ್ಪುವ ಪುಸ್ತಕ
ದೇಶ ಭಕ್ತ
ಪ್ರೇಮ ವಿಜಯ
ಮುಂದಿನ ದೇವರು
ವ್ಯಭಿಚಾರಿಣಿ ಯಾರು?
ಹೆಂಡ್ತಿ ಗಂಡನಾದರೆ?
ಪುರುಷವಧು
ಸನ್ಯಾಸಿಯ ಸೋಗಿನಲ್ಲಿ!
ಸಂಶಯ ಪಿಶಾಚಿ
ಕುಶಲವ
ಚಿತ್ರಾಂಗದೆ
ಪ್ರತಿಗಳು ಸಿಗುವ ಸ್ಥಳಗಳು
ನವಯುಗ ಪ್ರೆಸ್, ಉಡುಪಿ,
ನವಭಾರತ ಬುಕ್ ಡಿಪೋ, ಉಡು

Edited, Printed & Published by K. H. Shetty at the Navayuga Press, Udipi, S. India.

ನವಯುಗ

20—10—1966

೨೦
ಪೈಸೆ

ಒಳಗುಟ್ಟು

ಕಥೆಗಾರರು
ಶ್ರೀ ಸ ನಾರಾಯಣ

ಚರ್ಚ್ ಗೇಟ್ ಬಳಿ ಸದಾನಂದ ಕಾಯುತ್ತಾ ನಿಂತಿದ್ದ. ನಾಲ್ಕು ಗಂಟೆಗೆ ಸರಿಯಾಗಿ ಬರುತ್ತೇನೆಂದು ತಿಳಿಸಿದ್ದ ಗೆಳೆಯ ಶ್ರೀಪತಿ ಇನ್ನೂ ಬಂದಿರಲಿಲ್ಲ. ಫಿಲಂ ಫೇರ್ ಹಾಳೆಗಳನ್ನು ತಿರುವಿ ಹಾಕುತ್ತಾ ನಿಂತು, ಸುತ್ತಲೂ ಒಮ್ಮೆ ಕಣ್ಣು ಹಾಯಿಸಿದ. ಶ್ರೀಪತಿ ಕಾಣಲಿಲ್ಲ.

ಸದಾನಂದ ಅಲ್ಲಿಂದ ಹೊರಡಲು ಯೋಚಿಸಿ ಎರಡು ಹೆಜ್ಜೆ ಮುಂದಕ್ಕೆ ಇಟ್ಟ. ಅಪರಿಚಿತ ಕಂಠ ಒಂದು "ಹಲೋ ಸದಾ" ಎಂದು ಕೂಗಿತು ಸದಾನಂದ ತಿರುಗಿ ನೋಡಿದ. ಕಾಲೇಜು ಗೆಳೆಯ ಪ್ರಸನ್ನ ಓರ್ವ ಯುವತಿಯೊಂದಿಗೆ ಅವನೆಡೆಗೆ ಧಾವಿಸಿ ಬರುತ್ತಿದ್ದ. ಸುಮಾರು ಆರು ವರ್ಷಗಳ ತರುವಾಯ ಹಳೆಯ ಗೆಳೆಯನನ್ನು ಕಂಡಾಗ ಸದಾನಂದನಿಗಾದ ಆನಂದ ಅಲ್ಪವಲ್ಲ.

ಸ್ವಲ್ಪ ಹೊತ್ತಿನ ವರೆಗೆ ಗೆಳೆಯರಿಬ್ಬರೂ ಒಬ್ಬರನ್ನೊಬ್ಬರು ನೋಡುತ್ತಾ ನಿಂತರು. "ಚೆನ್ನಾಗಿದ್ದೀಯೇನೋ ಸದಾ, ಜೀವನದಲ್ಲಿ ಇದೊಂದು ಪರ್ವದಿನ" ಎಂದು ಗೆಳೆಯನ ಕೈ ಕುಲುಕುತ್ತಾ ಹೇಳಿದ ಪ್ರಸನ್ನ. "ಮಣಿಪಾಲ್ ಕಾಲೇಜು ಭೇಟಿಯೇ ನಮ್ಮ ಕೊನೆಯ ಭೇಟಿಯಾಯಿತು. ಈಗ ಎಲ್ಲಿದ್ದೀಯ ಪ್ರಸನ್ನ?" ಎಂದು ಪ್ರಶ್ನಿಸಿದ ಸದಾನಂದ.

"ದುರ್ಗಾಪುರದಲ್ಲಿದ್ದೇನೆ' ಎಂದ ಪ್ರಸನ್ನ.

ಯುವತಿ ಗೆಳೆಯರಿಬ್ಬರ ಸಂಭಾಷಣೆಯನ್ನೇ ಆಲಿಸುತ್ತಿದ್ದು ಅನಂತರ "ಹೀಗೆ ರಸ್ತೆಯಲ್ಲೇ ನಿಂತು ಬಿಡುವುದೇ ಪ್ರಸನ್ನ" ಎಂದಳು

"ಸಾರಿ ಸುಧಾ, ಗೆಳೆಯನನ್ನು ಕಂಡಾಗ ಎಲ್ಲವೂ ಮರೆತು ಹೋಯಿತು" ಎಂದ ಪ್ರಸನ್ನ.

"ಸದಾ, ಮರೆತು ಹೋಗಿತ್ತು ನೋಡು ಇವಳು ನನ್ನ ತಂಗಿ ಸುಧಾ...ಸುಧಾ ಇವರು ನನ್ನ ಗೆಳೆಯ ಸದಾನಂದ. ಹೆಸರಾಂತ ಇಂಜನಿಯರ್" ಎಂದು ಪರಸ್ಪರ ಪರಿಚಯ ಮಾಡಿಸಿದ.

ಸದಾನಂದ 'ನಮಸ್ತೆ" ಎಂದು ಕೈ ಜೋಡಿಸಿ ಅವಳನ್ನೇ ದಿಟ್ಟಿಸಿದ ಸುಧಾಳ ಸೌಂದರ್ಯ, ಮುಖದ ಮೇಲಿನ ತಿಳಿ ನಗೆಗೆ ಸದಾನಂದ ಪ್ರಭಾವಿತನಾಗಿದ್ದ. ಅವನು ಬೇಡವೆಂದು ತಡೆದರೂ ಅವನ ಕಣ್ಣುಗಳು ಅವಳತ್ತ ಚಲಿಸುತ್ತಿದ್ದವು. ಮೂವರು ಹೊಟೇಲೊಂದರ ಕಡೆಗೆ ಹೆಜ್ಜೆ ಹಾಕಿದರು.

"ಇಲ್ಲಿಗೆ ಬಂದು ಎಷ್ಟು ದಿನವಾಯ್ತು ಸದಾ?"

"ಸುಮಾರು ನಾಲ್ಕು ವರ್ಷಗಳಿಂದಲೂ ಇಲ್ಲೇ ಇದ್ದೇನೆ ಬೃಂದಾವನ ಇಂಡಸ್ಟ್ರೀಸ್‌ನಲ್ಲಿ ಕೆಲಸ, ದಾದರ್‌ನಲ್ಲಿ ರೂಮು'

'ಅಂದ ಹಾಗೆ ಗೃಹಸ್ಥಾಶ್ರಮ'

"ಛೇ, ಛೇ, ಅಂತಹ ಶ್ರಮ ಸಧ್ಯಕ್ಕಂತೂ ಇಲ್ಲ."

'ನನ್ನ ಹಾಗೇ ಅನ್ನು."

'ಇರಲು ನೆರಳಿಲ್ಲದ ಬೊಂಬಾಯಿಯಲ್ಲಿ ಮದುವೆ ಮಾಡಿಕೊಂಡರೆ ಮುಗಿದೇ ಹೋಯ್ತು."

ಹಾಗಾದರೆ ಮನೆ ದೊರೆಯುವುದಾದರೆ ಮದುವೆ ಮಾಡಿಕೊಳ್ಳಲು ಸಿದ್ಧ ಅನ್ನು.'

'ಮುಂದಿನ ಚಿಂತೆ ಈಗೇಕೆ... ದುರ್ಗಾಪುರ ಹೇಗಿದೆ ಹೇಳು.'

"ಕೈಗಾರಿಕಾ ನಗರಗಳೆಲ್ಲ ಒಂದೇ ಬಗೆಯವು' ಎಂದ ಪ್ರಸನ್ನ.

ಮೂವರೂ ಹೋಟೇಲು ಹೊಕ್ಕು ತಿಂಡಿ ಕಾಫಿ ಮುಗಿಸಿ ಹೊರಬಂದರು.

"ಕೆಲಸವೇನಾದರೂ ಇತ್ತೇ ಸದಾ?'

"ಇಂದು ರಜೆ. ಬೇರೆ ಗೆಳೆಯರೊಬ್ಬರನ್ನು ಕಾಯುತ್ತಿದ್ದೆ. ನೀವೇ ದೊರೆತಿರಲ್ಲ.'

'ಸ್ವಲ್ಪ ಜುಹೂ ಕಡೆ ಹೋಗಿ ಬರೋಣವೇ"

'ಸಂತೋಷ" ಎಂದ ಸದಾನಂದ

ಮೂವರೂ ವಿಶಾಲ ಸಾಗರದ ಅಂಚಿನ ಮರಳ ಮೇಲೆ ಸ್ವಲ್ಪ ಹೊತ್ತು ಸುತ್ತಾಡಿ ಕಲ್ಲು ಬೆಂಚೊಂದರ ಮೇಲೆ ಕುಳಿತರು. ಸದಾನಂದ ಬೊಂಬಾಯಿ ಜೀವನದ ಹಲ ಸಮಸ್ಯೆಗಳನ್ನು ತಿಳಿಸಿದ. ಗೆಳೆಯರಿಬ್ಬರೂ ತಮ್ಮ ವಿದ್ಯಾರ್ಥಿ ಜೀವನದ ಹಳೆಯ ನೆನಪನ್ನು ಸ್ಮರಿಸಿಕೊಂಡರು.

ಪ್ರಸನ್ನನ ತಾಯಿಯ ಅಣ್ಣ ಶಾಮರಾಯರು ಬೊಂಬಾಯಿಯಲ್ಲಿಯೇ ವೈದ್ಯರಾಗಿದ್ದರು ತಂಗಿಯ ಮಕ್ಕಳ ಬಗ್ಗೆ ರಾಯರಿಗೆ ಎಲ್ಲಿಲ್ಲದ ಅಭಿಮಾನ. ಅವರ ಒಬ್ಬಳೇ ಮಗಳು ಸಂಧ್ಯಾ ಸುಧಾಳ ಓರಗೆಯವಳು. ಅವರಿಬ್ಬರ ಸ್ನೇಹ ಅನ್ಯೋನ್ಯತೆಯೂ ಅಪರಿಮಿತವಾಗಿತ್ತು. ಪ್ರಸನ್ನ ಆಗಾಗ್ಯೆ ಬೊಂಬಾಯಿಗೆ ಒಂದು ಕೆಲ ದಿನಗಳು ಮಾವನ ಮನೆಯಲ್ಲಿದ್ದು ಹೋಗುತ್ತಿದ್ದ. ಬೊಂಬಾಯಿಯ ಮಾವನ ಮನೆಗಿಂತಲೂ ಸಂಧ್ಯಾ ಅವನನ್ನು ಬಲವಾಗಿ ಆಕರ್ಷಿಸಿದ್ದಳು. ಅಣ್ಣನ ಬಲವಂತಕ್ಕೆ ಮಗಳನ್ನು ಆವರಲ್ಲಿಗೇ ಕಳುಹಿಸಿದ್ದರು ಸುಧಾಳ ತಾಯಿ.

ಸಂಧ್ಯಾ ಮತ್ತು ಪ್ರಸನ್ನ ಇವರ ವಿವಾಹವನ್ನು ನಡೆಸಲು ಹಿರಿಯರೆಲ್ಲರೂ ಕಾತುರರಾಗಿದ್ದರು. ಆದರೆ ಸಂಧ್ಯಾ ತನ್ನ ವೈದ್ಯಕೀಯ ಶಿಕ್ಷಣ ಮುಗಿಯದ ಹೊರತೂ ಮದುವೆಯಾಗುವುದಿಲ್ಲವೆಂದು ತಿಳಿಸಿದ್ದಳು. ಪ್ರಸನ್ನ ಭಾವೀ ಪತ್ನಿಯ ನುಡಿಗೆ ಸಮ್ಮತಿಸಿದ್ದ.

ಸಂಗೀತ ಮತ್ತು ಚಿತ್ರಕಲೆಯಲ್ಲಿ ಪೂರ್ಣ ಅಭ್ಯಾಸ ಪಡೆದು ಪದವಿ ಪಡೆದಿದ್ದ ಸುಧಾ ಕಲಾ ಶಾಲೆಯೊಂದರಲ್ಲಿ ಶಿಕ್ಷಕಿಯಾಗಿದ್ದಳು. ಸಂಧ್ಯಾ ಮತ್ತು ಸುಧಾ ನಿತ್ಯವೂ ತಿರುಗುವುದು ರೂಢಿಯಾಗಿತ್ತು. ಪ್ರಸನ್ನ ಮನೆಗೆ ಬಂದಾಗ ಸಂಧ್ಯಾ ಸುಧಾಳೊಂದಿಗೆ ತಿರುಗಲು ಹೊರಡಲು ನಿರಾಕರಿಸುತ್ತಿದ್ದಳು. ತಾನೊಬ್ಬಳೇ ಅವನೊಂದಿಗೆ ಹೊರಡುತ್ತಿದ್ದಳು. ಆದರೆ ಸುಧಾ ಇಬ್ಬರನ್ನೂ ಕೀಟಲೆ ಮಾಡದೆ ಬಿಡುತ್ತಿರಲಿಲ್ಲ. ಅಂದು ಸಂಧ್ಯಾ ಮೆಡಿಕಲ್ ಕಾಲೇಜಿಗೆ ಹೋಗಿದ್ದುದರಿಂದ ಅಣ್ಣತಂಗಿ ಇಬ್ಬರೂ ಬೊಂಬಾಯಿ ಸುತ್ತುವ ಯೋಚನೆಯಿಂದ ಚರ್ಚ್‌ಗೇಟ್ ಬಳಿಗೆ ಬಂದಿದ್ದರು. ಅಲ್ಲಿ ಸದಾನಂದನ ಭೇಟಿಯಾಯಿತು. ಪ್ರಸನ್ನ ಬೊಂಬಾಯಿಯ ತನ್ನ ಮಾವ ಮತ್ತು ಸಂಸಾರದ ಸಂಗತಿಯನ್ನು ತಿಳಿಸಿದ.

ಸೂರ್ಯ ಪಶ್ಚಿಮಾದ್ರಿಗೆ ವಿಶ್ರಾಂತಿಗಾಗಿ ತೆರಳಿ ಮರೆಯಾದ ಸಂಜೆಯ ಕತ್ತಲು ಮೆಲ್ಲಗೆ ಆವರಿಸುತ್ತಾ ಬರುತ್ತಿತ್ತು. ರದ ದೀಪಗಳು ಬೆಳಗ ತೊಡಗ... ಮೂವರೂ ಹೊರಟು ಟ್ಯಾಕ್ಸಿ ಸ್ಟ್ಯಾಂಡಿಗೆ ಬಂದರು.

"ಇನ್ನೆಷ್ಟು ದಿನ ಇಲ್ಲಿರುತ್ತೀಯ ಪ್ರಸನ್ನ'

'ಇನ್ನೆರಡು ದಿನ ಮಾತ್ರ ಇರುತ್ತೇ...

"ಮತ್ತೆ ನಿನ್ನ ಭೇಟಿ"

'ನಾಳೆ ನಿಮ್ಮ ಆಫೀಸಿಗೇ ಬರು...ನೆ. ಇನ್ನು ಮುಂದ ಬೊಂಬಾಯಿಗೆ ... ದೊಡನೆಯೇ ಮೊದಲು ನಿನ್ನ ಭೇ... ಅಂದ ಹಾಗೆ ಈಗ ನನ್ನೊಂದಿಗೆ ಮ... ಬಂದು ಬಿಡು. ಮನೆಯವರೆಲ್ಲರ ಪ... ಯ ಮಾಡಿ ಕೊಡುತ್ತೇನೆ.'

"ಕ್ಷಮಿಸು ಪ್ರಸನ್ನ ಇನ್ನೊಂದು... ತಪ್ಪದೆ ಬರುತ್ತೇನೆ.'

'ಈ ಮಾತನ್ನು ನಂಬಬಹುದೇ?' ... ದು ಪ್ರಶ್ನಿಸಿದಳು ಸುಧಾ.

"ಖಂಡಿತವಾಗಿ'

'ಅಂದ ಹಾಗೆ ನಿಮ್ಮ ಕೋಣೆ'

'ದಾದರ್‌ನಲ್ಲಿ ಭಾರತಿ ನೃತ್ಯ ಶಾ...ದ ಬಳಿ ಇರುವ ಜಯ ಮಹಲ್, 15ನೇ ನಂಬರ್ ಕೋಣೆ.

"ನಿಮ್ಮ ವಿವರಣೆಗೆ ತುಂಬ ಧನ್ಯವಾದ...

"ಸುಧ, ಇನ್ನು ನನ್ನ ಗೆಳೆಯರ... ಪರಿಚಯ ಮಾಡಿಸಿದ್ದೇನೆ. ಇವರೂ ನಿ... ಹಾಗೆ ಸಾಹಿತ್ಯ, ಸಂಗೀತ, ನೃತ್ಯ ಕ...ಳ ಅಭಿಮಾನಿಗಳು. ನಿಮ್ಮ ಸ್ನೇಹ ... ಯಾಗಲಿ ಎಂದು ಹಾರೈಸುತ್ತೇನೆ ...ದಾ ಈ ವಿಷಯದಲ್ಲಿ ನಿನ್ನ ಒಪ್ಪಿಗೆ ... ಟಷ್ಟೆ".

'ನಿನ್ನ ಮಾತಿಗೆ ಪ್ರತಿ ಹೇಳುವ ... ನನಗಿಲ್ಲ' ಎಂದ ಸದಾನಂದ.

ಟ್ಯಾಕ್ಸಿ ವೇಗವಾಗಿ ಚಲಿಸುತ್ತಿತ್ತು

ಕಲಾ ಶಾಲೆಯ ಮುಂದೆ ಟ್ಯಾಕ್ಸಿ ... ದಾಗ ಸುಧಾ 'ಇದೇ ನಮ್ಮ ಕಲಾ ಶಾ... ನೀವು ಯಾವ ಸಂದರ್ಭದಲ್ಲಿಯಾದ... ಬಂದು ಭೇಟಿ ಮಾಡಬಹುದು. ನ... ಶಾಲೆಯಲ್ಲಿ ಮತ್ತು ಮನೆಯಲ್ಲಿ ... ಸುಸ್ವಾಗತ' ಎಂದಳು.

'Thanking' ಎಂದ ಸದಾನಂ...

"ಸದಾನಂದ ತನ್ನ ಕೋಣೆ ಸಮೀ...ಪಿಸಿದಾಗ ಇಳಿದ. ಟ್ಯಾಕ್ಸಿ ಮುಂದಕ್ಕೆ ... ಗಿತು.

"ಸದಾ ತುಂಬ ಒಳ್ಳೆಯವನು ... ಅಂತಹ ಗೆಳೆಯರು ಸಿಕ್ಕುವುದು ... ಎಂದ ಪ್ರಸನ್ನ.

ಸುಧಾ ಸದಾನಂದ ಟ್ಯಾಕ್ಸಿಯಲ್ಲಿ ... ಟ್ಟು ಹೋಗಿದ್ದ ಕೋಟನ್ನು ಕೈಯಲ್ಲಿ ... ಡಿದು 'ಇದೇ ಸಾಕ್ಷಿ ನೋಡಣ್ಣ' ಎಂ... ನಕ್ಕಳು.

(ಹದಿನೈದನೇ ಪುಟ ನೋಡಿರಿ)

ಅತ್ಯಾಧುನಿಕ ಸಲಕರಣೆ — ಸೌಕರ್ಯಗಳಿಂದ ಕೂಡಿದ
ಭೋಜನ, ಉಪಾಹಾರ ಮತ್ತು ವಸತಿ ಗೃಹ



ಹೊಟೆಲ್ ಶಿವಪ್ರಸಾದ

ಫೋನ್: 77 ಕುಂದಾಪುರ, ದ. ಕ.

ಅಸ್ಥಮಾ ಪೀಡಿತರ ಗಮನಕ್ಕೆ
ಹಿಮಾಲಯದ ಪ್ರಸಿದ್ಧ ಅಸ್ತಮಾ... ರಳ ಮೂಲಿಕೆಯನ್ನು ದಿ 29-10-66 ... ಣ್ಣಿಮೆಯ ರಾತ್ರಿ ಹಾಲು ಮತ್ತು ... ಯಿಂದ ತಯಾರಿಸಿದ ಖೀರಿನಲ್ಲಿ ತಗೆದು... ಳ್ಳುವುದರಿಂದ ಅಸ್ಥಮಾ, ಗೂರಲು, ಕೆಮ್ಮು ಉಬ್ಬಸ, ಮೇಲುಸಿರು ಮತ್ತು ಶ್ವಾಸ ... ವಿಕೆ ಇವುಗಳು ನಿವಾರಿಸಲ್ಪಡುತ್ತವೆ ... ಡಲೇ ಇಂಗ್ಲೀಷಿನಲ್ಲಿ ಬರೆಯಿರಿ.
Shri Mahatma Sidh Baba Sewa Ash...
P. O. Chitrkot, (Uttar Prade...

ನಲ,ತ್ಕಾರನೆ ವರ್ಷ
Telephone 226.

ನವಯುಗ

| ಸಂಪುಟ ೪೬ | ಉಡುಪಿ | Vol. 46 |
| ಸಂಚಿಕೆ ೮ | ೨೦—೧೦—೧೯೬೬ | No. 8 |

Estd. 1921

NAVAYUGA

Leading Kannada Weekly

UDIPI, S. Kanara

ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಉಡುಪಿ, ದ. ಕನ್ನಡ.

ಸಂಚಾಲಕ—ಸಂಪಾದಕ:

ಕೆ. ಹೊನ್ನಯ್ಯ ಶೆಟ್ಟಿ

ವಾರ್ಷಿಕ ಚಂದಾ:

ಮೂರು ವಿಶೇಷ ಸಂಚಿಕೆಗಳು ಸೇರಿ ಅಂಚೆ ವೆಚ್ಚ ಸಹಿತ ಮುಂಗಡ

ಸ್ವದೇಶ ರೂ. ೧೦

ವಿದೇಶ ರೂ. ೧೮

ಜಾಹೀರಾತು ದರಗಳು:

ಅನಿಯಮಿತ (ಕೆಜುವಲ್)

ಕಲಂ ಸೆಂಟಿಮೀಟರಿಗೆ ರೂ. 2-00

ನಿಯಮಿತ (ಕಂಟ್ರ್ಯಾಕ್ಟ್)

ಕಲಂ ಸೆಂಟಿಮೀಟರಿಗೆ ರೂ 1-50

ಸೂಚನೆಗಳು

ಲೇಖಕ ಬಂಧುಗಳಿಗೆ

ಲೇಖನವು ಕಿರಿದಾಗಿದ್ದು ಹಿರಿದರ್ಥದಿಂದ ಕೂಡಿರಬೇಕು. ಕಾಲು ಕಾಪಿನ ಪ್ರಮಾಣದ ಹಾಳೆಯ ಒಂದೇ ಮಗ್ಗುಲಲ್ಲಿ ಬದಿಯಂಚುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು. ಆಧಾರಿತ, ಅನುವಾದಿತವಾದರೆ ಅವುಗಳ ಮೂಲವನ್ನೂ ತಿಳಿಸಬೇಕು.

ಚಂದಾದಾರರಿಗೆ—

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು

ಮುಖಪತ್ರದಲ್ಲಿ:

ಲ್ಯೂನರ್ ಉಪಗ್ರಹ ಕಳಿಸಿದ ಚಂದ್ರನ ಮೇಲ್ಮೈಯ ಒಂದು ಚಿತ್ರ

ಐಕ್ಯದಿನ

ಭೂತಾನದ ಸಂರಕ್ಷಣಾ ಭಾರವು ಭಾರತ ಸರಕಾರಕ್ಕೆ ಸೇರಿದ ಹೊಣೆಗಾರಿಕೆ. ಕೆಂಪು ಚೀನೀಯರು ಅಲ್ಲಿನ ಸಾಂಪ್ರದಾಯಿಕ ಗಡಿಯನ್ನು ಮೀರಿ ಮುಂದೆ ನುಗ್ಗುವ ದಾಷ್ಟ್ಯವನ್ನು ತೋರಿದ್ದಾರೆ. ಇದಕ್ಕೆ ಭೂತಾನ ಸರಕಾರದ ಪರವಾಗಿ ಭಾರತ ಸರಕಾರವು ತೀವ್ರ ಪ್ರತಿಭಟನೆಯನ್ನು ಸೂಚಿಸಿದೆಯಲ್ಲದೆ ಸಾಂಪ್ರದಾಯಿಕ ಎಲ್ಲೆಯನ್ನು ರಕ್ಷಿಸಿಕೊಂಡು ಬರುವಂತೆ ವಿನಂತಿಸಿದೆ. ಇದಕ್ಕೆ ಕೆಂಪು ಚೀನಾವು ಯಾವ ಪ್ರತಿಕ್ರಿಯೆಯನ್ನು ತೋರಿಸಬಹುದು, ನಾವೆಲ್ಲ ಬಲ್ಲೆವು. ಇದು ಭೂತಾನದ ಗಡಿಯ ಕತೆಯಾದರೆ, ಪಾಕಿಸ್ತಾನದ ಕುತಂತ್ರಗಳು ಹಗಲೂ ಇರುಳೂ ನಡೆಯುತ್ತಲೇ ಇವೆ. ಭಾರತದ ಒಂದು ರಾಜ್ಯ ಜಮ್ಮು ಕಾಶ್ಮೀರದಲ್ಲಿ ಅಡಗಿಕೊಂಡಿದ್ದ ಪಾಕ್ ವಿಧ್ವಂಸಕರನ್ನು ಸಂಶೋಧಿಸಿ ಹಿಡಿಯುತ್ತಿರುವಂತೆಯೇ ಹೊಸ ಹೊಸ ಹಿಂಸಾಚಾರಿಗಳು ಅಲ್ಲಿ ನುಸುಳುತ್ತ ಬರುತಿದ್ದಾರೆ; ಅಂದರೆ ಪಾಕಿಸ್ತಾನವು ಉದ್ದೇಶಪೂರ್ವಕವಾಗಿಯೇ ಜಮ್ಮು-ಕಾಶ್ಮೀರದಲ್ಲಿನ ಶಾಂತಿಯ ಹಾಲಿಗೆ ಹುಳಿ ಹಿಂಡಲು ತನ್ನ ವಿಧ್ವಂಸಕರ ತಂಡಗಳನ್ನು ಕಳಿಸುತ್ತಿದೆ ಎಂದಾಯಿತು. ಇದೇ ದುರ್ನೀತಿಯನ್ನೀಗ ಪೂರ್ವ ಪಾಕಿಸ್ತಾನ-ಭಾರತ ಗಡಿಯುದ್ದಕ್ಕೂ ಅದು ಅನುಸರಿಸ ಹೊರಟಿದೆ. ಮಿಜೋ ಮತ್ತು ನಾಗಾ ಬಂಡುಗಾರರನ್ನು ಭಾರತ ಸರಕಾರಕ್ಕೆದುರು ಕಟ್ಟುವ ಹುಚ್ಚು ಸಾಹಸವನ್ನದು ಮಾಡಿತ್ತು; ಆದರೆ ಇದರಿಂದ ಪಾಕಿಸ್ತಾನಕ್ಕೆ ಯಾವ ಲಾಭವೂ ಸಿಗಲಿಲ್ಲ. ಈಗ ಅಸ್ಸಾಮು ರಾಜ್ಯಕ್ಕೆ ತನ್ನ ವಿಧ್ವಂಸಕರ ತಂಡವನ್ನು ಅಟ್ಟುವ ಯೋಜನೆಯನ್ನು ಅದು ಕಾರ್ಯರೂಪಕ್ಕೆ ತರತೊಡಗಿದೆ. ಸುದೈವವಶಾತ್ ಇದರ ರಹಸ್ಯ ನಮಗೆ ಆರಂಭದಲ್ಲಿಯೇ ದೊರೆಯಿತು.

ಕೆಲವೇ ಪೋಸ್ಟ್‌ಗಳನ್ನು ನಾವು ಹೊಡೆದುಕೊಂಡು ಹೋದೆವೆಂದು ಆರೋಪಿಸಿ ಅಲ್ಟಿಮೇಟಂ ಇತ್ತ ಕೆಂಪು ಚೀನಾ ನಮ್ಮನ್ನು ಒಂದಲ್ಲ ಒಂದು ರೀತಿಯಿಂದ ಬೆದರಿಸಲು ಯತ್ನಿಸುವುದು ಆಶ್ಚರ್ಯವಿಲ್ಲ. ಗಡಿ ತಂಟೆಯನ್ನು ನಿವಾರಿಸಿಕೊಳ್ಳಲು ಸೂಕ್ತ ಕ್ರಮವನ್ನು ಕೈಕೊಂಡರೆ, ಮತ್ತೆ ಬೆದರಿಕೆಗೆ ದಾರಿಯೇನು? ಏಷ್ಯಾದಲ್ಲಿ ನಾಯಕ ರಾಷ್ಟ್ರವಾಗುವ ತನ್ನ ಹೆಬ್ಬಯಕೆಯನ್ನು ಕೆಂಪು ಚೀನಾ ಸಾಧಿಸಬೇಕಾದರೆ, ಭಾರತದ ಪ್ರಗತಿಯನ್ನು ಅವಶ್ಯ ತಡೆಹಿಡಿಯಲೇ ಬೇಕು. ಅದು ಅನುಸರಿಸುತ್ತಿರುವ ನೀತಿಯಾದರೂ ಇದೇ ತಾನೆ? ಆದರೆ ಪಾಕಿಸ್ತಾನದ ಇರಾದೆಯೇ ಬೇರೆ. ತಾನು ಯಾವ ಕಾಲಕ್ಕೂ ವಿಶ್ವಾದ ಪ್ರಮುಖ ರಾಷ್ಟ್ರಗಳ ಸಾಲಿನಲ್ಲಿ ನಿಲ್ಲಲಾರೆನೆಂಬುದು ಅದಕ್ಕೆ ಗೊತ್ತು. ಆದಕ್ಕಾಗಿಯೇ ಅಲ್ಲಿನ ರಾಜಕಾರಣಿಗಳು ತಮ್ಮ ಪಟ್ಟ ಭದ್ರಗೊಳಿಸುವ ಹಂಚಿಕೆಯಲ್ಲೇ ನಿರತರಾಗಿದ್ದಾರೆ. 'ಕಾಶ್ಮೀರ'ದ ಪ್ರಶ್ನೆಯನ್ನೇ ಎತ್ತಿ ಹಿಡಿದು ಅದನ್ನು ಪಾಕಿಸ್ತಾನಕ್ಕೆ ದೊರಕಿಸಿ ಕೊಡುವದಕ್ಕಾಗಿ ತಾವು ಅಧಿಕಾರದಲ್ಲಿರಬೇಕು ಎಂಬ ಭಾವನೆಯನ್ನು ಅಯ್ಯೂಬಖಾನರು ಬಲವಾಗಿ ಮೂಡಿಸಿದ್ದಾರೆ. ಹೊಟ್ಟೆಗೆ ಅನ್ನವಿಲ್ಲದಿದ್ದರೂ ಜುಟ್ಟಿಗೆ ಮಲ್ಲಿಗೆ ಹೂ ಮುಡಿಯುವ ಅವರ ನೀತಿ ಭಾರತದ ಮೇಲೆ ಧಾಳಿಯನ್ನೇ ಮಾಡಿಸಿತು; ಪಾಕಿಸ್ತಾನದ ಮುಖಭಂಗ ಮಾಡಿಸಿತು. ಆದರೂ ತಾಷ್ಕೆಂಟ್ ಒಡಂಬಡಿಕೆಯನ್ನು ಮುಂದೆ ಮಾಡಿ ಅದರೊಂದಿಗೆ ಸರಸವನ್ನಾಡುವ ನಿಲುವೆಯಿಂದವರಿದ್ದು ಉಭಯ ದೇಶಗಳ ಸಂಬಂಧ ತಿಳಿಗೊಳಿಸಲು ನೆರವಾಗಬಹುದಾದ ಯಾವುದೇ ಸಭೆಗಳನ್ನು ಅವರು ತಿರಸ್ಕರಿಸುತ್ತಾರೆ—ಅವರಿಗೆ ಬೇಕು ಕಾಶ್ಮೀರ—ಅತ್ತ ಕಡೆ ಹೋದರೆ ಭಾರತದೊಡನೆ ವೈರ— ಮೊದಲೇ ಆರ್ಥಿಕವಾಗಿ ನವೆಯುತ್ತಿರುವ ಪಾಕ್ ನಾಗರಿಕರನ್ನು ಇಸ್ಲಾಂ ಧರ್ಮ ಮತ್ತು ಕಾಶ್ಮೀರಗಳ ನೆಪದಲ್ಲಿ ಒಲಿಸಿಕೊಂಡಿರುವ ಫೀಲ್ಡ್ ಮಾರ್ಶಲರು ಇವೆರಡರಲ್ಲಿ ಯಾವುದಾದರೂ ಒಂದನ್ನು ತುಸು ಸಡಿಲು ಬಿಟ್ಟರೆ ಸಾಕು; ಅಧಿಕಾರದಿಂದ ಉರುಳಿದಂತೆಯೇ ಸರಿ.

ಅಕ್ಟೋಬರ ೨೦ ಮತ್ತೆ ಬಂದಿದೆ. ಇಂದು ದೇಶದ ಮೇಲೆ ಆಕ್ರಮಣ ಮಾಡಿದ, ಮಾಡ ಬಯಸುತ್ತಿರುವ ಆಕ್ರಮಣಕಾರರ ದಬ್ಬಾಳಿಕೆಗೆ ಬೆದರದೆ ಅಂಜದೆ ನಮ್ಮ ಸಾರ್ವಭೌಮತೆಯನ್ನು, ಸ್ವಾತಂತ್ರ್ಯವನ್ನು ಉಳಿಸಿಕೊಳ್ಳುವ ಪ್ರತಿಜ್ಞೆಯನ್ನು ಮತ್ತೆ ನೆನಪಿಸುವ ಪವಿತ್ರದಿನ. ಕೆಂಪು ಚೀನಾವಿರಲಿ ಪಾಕಿಸ್ತಾನವಿರಲಿ ಅಥವಾ ಮತ್ತಾರಾದರೂ ಇರಲಿ, ನಮ್ಮ ಮೇಲೆ ಆಕ್ರಮಣ ಮಾಡ ಬಂದರೆ, ಕೊನೆಯುಸಿರಿರುವ ತನಕವೂ ಹೋರಾಡಿ ಮಾತೆ ಭಾರತಿಯನ್ನು ರಕ್ಷಿಸುವ ದೃಢತೆಯನ್ನು ಮತ್ತೆ ಪುನರುಜ್ಜೀವಿಸುವ ಪಾವನ ದಿನ. ನಾವು ಅಂತೆಯೇ ಮಾಡೋಣ. ಇನ್ನೂ ಒಂದು ಮಾತನ್ನು ನಾವಿಂದು ಮರೆಯದಿರೋಣ. ಬಾಹ್ಯ ಅಶಾಂತಿಗಿಂತ ಆಂತರಿಕ ಅಶಾಂತಿಯು ಮಾರಕವಾಗಿದೆ. ರಾಜ್ಯ—ರಾಜ್ಯಗಳಲ್ಲಿ, ಪಕ್ಷ—ಪಕ್ಷಗಳಲ್ಲಿ, ವ್ಯಕ್ತಿ—ವ್ಯಕ್ತಿಗಳಲ್ಲಿ ಬೂದಿ ಮುಚ್ಚಿದ ಕೆಂಡದಂತಿರುವ ವೈಮನಸ್ಸು, ದ್ವೇಷ, ವಿವಾದಗಳು ಆಸುರಿಯಾಗದಂತೆ ಸಾತ್ವಿಕವಾಗಿಯೇ ಮಾರ್ಪಡುವಂತೆ ಎಚ್ಚರ ವಹಿಸುವ ದಿನವೂ ಇದು ಹೌದು. ನಾವು ನಮ್ಮಲ್ಲಿ ಒಂದಲ್ಲ ಒಂದು ಕಾರಣಗಳಿಂದ ಕಚ್ಚಾಡುತ್ತಿದ್ದರೆ, ಗಲಭೆಯೆಬ್ಬಿಸಿದರೆ, ನಮ್ಮ ಶಕ್ತಿ ಹ್ರಾಸವಾಗುವುದು; ಅನಾಪ್ರಯಾಸವಾಗುವುದು; ಇದರಿಂದ ಶತ್ರುಗಳಿಗೆ ಅಮಿತ ಲಾಭವಾಗುವುದು. ಇಂತಹ ಅನಪೇಕ್ಷಿತ ದುರ್ಘಟನೆಗಳಿಗೆ ಅವಕಾಶಕೊಡದೆ ರಾಷ್ಟ್ರೀಯ ಐಕ್ಯ ಸಂವರ್ಧನೆಯನ್ನು ಸಾಧಿಸುವ ಹಾದಿಯಲ್ಲಿ ನಾವು ಮುಂದುವರಿಯೋಣ; ಯಶಗಳಿಸೋಣ.

ವಚನಸುಧೆ

ನಿಷೇವತೇ ಪ್ರಶಸ್ತಾನಿ
ನಿಂದಿತಾನಿ ನ ಸೇವತೇ
ಅನಾಸ್ತಿಕಃ ಶ್ರದ್ದಧಾನ್
ಏತತ್ ಪಂಡಿತ ಲಕ್ಷಣಂ||

ಉಚಿತವಾದುದನ್ನು ಸೇವಿಸುವುದು, ಅನುಚಿತವಾದುದನ್ನು ದೂರೀಕರಿಸುವುದು, ಆಸ್ತಿಕನೂ ಶ್ರದ್ಧಾಳುವೂ ಆಗಿರುವುದು ಬುದ್ಧಿವಂತನ ಮೂರು ಮುಖ್ಯ ಲಕ್ಷಣಗಳು.

ಹತ್ತು ವರ್ಷಗಳ ನಂತರ....?

ಕರ್ನಾಟಕದ ರಾಜ್ಯಪಾಲ ಮಾನ್ಯ ವಿ. ವಿ. ಗಿರಿಯವರು ಭಾಷಾ ತಳಹದಿಯ ರಾಜ್ಯ ವಿಭಜನೆಯನ್ನು ಮೆಚ್ಚುವುದಿಲ್ಲ. ಅವರು ಅಂದೇ ಈ ಸಂಬಂಧದಲ್ಲಿ ತಮ್ಮ ಅಸಮ್ಮತಿಯನ್ನು ವ್ಯಕ್ತಪಡಿಸಿದ್ದರು. ಈ

(ಹದಿನಾಲ್ಕನೇ ಪುಟ ನೋಡಿರಿ)

'ನವಯುಗ'ದ ಚಂದಾದಾರರಲ್ಲಿ ವಿನಂತಿ

ಕಳೆದ ಆಗೋಸ್ತು ತಿಂಗಳಾಂತ್ಯಕ್ಕೆ "ನವಯುಗ"ದ 45ನೇ ವರ್ಷವು ಕೊನೆಗೊಂಡು ಸಪ್ಟಂಬರಾದಿಯಿಂದ 46ನೇ ಹೊಸ ವರ್ಷಾರಂಭವಾಗಿರುವುದಷ್ಟೆ! ಈ ಅವಧಿಗೆ ಚಂದಾ ಅವಧಿ ಮುಗಿಯುವ ಹಾಗೂ ಚಂದಾ ಹಣ ಬಾಕಿಯಿರುವ ನಮ್ಮ ಚಂದಾದಾರ ಬಂಧುಗಳು ತಮ್ಮ ಚಂದಾ ಹಣವನ್ನು ದಯಮಾಡಿ ಆದಷ್ಟು ಶೀಘ್ರ ಮನಿಯಾರ್ಡರು ದ್ವಾರಾ ಯಾ ಸಿಂಡಿಕೇಟ್ ಬ್ಯಾಂಕಿನ ಸಮೀಪದ ಶಾಖೆಯಲ್ಲಿ "ನವಯುಗ"ದ ಖಾತೆಗೆ ಜಮೆ ಮಾಡುವುದರ ಮೂಲಕ ಈಗಲಾದರೂ ಕಳುಹಿಸಿಕೊಟ್ಟು ಸಹಕರಿಸುವಂತೆ ಇನ್ನೊಮ್ಮೆ ಕಳಕಳಿಯಿಂದ ವಿನಂತಿಸುತ್ತೇವೆ.

ಅಂತೂ ಚಂದಾಹಣವು ಈ ತಿಂಗಳಾಂತ್ಯದ ಒಳಗಾದರೂ ಬಾರದಿದ್ದಲ್ಲಿ ನವಂಬ್ರ ಮೊದಲ ವಾರದ ಸಂಚಿಕೆಯನ್ನು ವಿ. ಪಿ. ಮೂಲಕ ಕಳುಹಿಸುತ್ತೇವೆ. ಅದನ್ನು ಅವಶ್ಯ ಸ್ವೀಕರಿಸುವಂತೆ ಬಿನ್ನಹಿಸುತ್ತೇವೆ.

ಮೆನೇಜರ್,
ನವಯುಗ, ಉಡುಪಿ.

ನರಸಣ್ಣನ ಸರಸ



"ದಕ್ಷಿಣ ಮಧ್ಯ ರೇಲ್ವೆಯಲ್ಲಿ ಹತ್ತು ದಿನಗಳಿಗೆ ಎರಡು ಅಪಘಾತ ಹದಿನೈದು ಜನರ ಸಾವು ಸಂಭವಿಸಿತು ..."

"ಅಂದರೆ ಅಪಘಾತ-ಸಾವುಗಳಿಗಾಗಿಯೇ ಈ ಹೊಸ ರೇಲ್ವೆಯ ಉದಯವಾಯಿತೆ?"

ಪೆಟೂಮೆ

ಒಳಗುಟ್ಟು

ಕಥೆಗಾರರು
ಶ್ರೀ ಸ. ನಾರಾಯಣ

ಚರ್ಚ್ ಗೇಟ್ ಬಳಿ ಸದಾನಂದ ಕಾಯುತ್ತಾ ನಿಂತಿದ್ದ. ನಾಲ್ಕು ಗಂಟೆಗೆ ಸರಿಯಾಗಿ ಬರುತ್ತೇನೆಂದು ತಿಳಿಸಿದ್ದ ಗೆಳೆಯ ಶ್ರೀಪತಿ ಇನ್ನೂ ಬಂದಿರಲಿಲ್ಲ. ಫಿಲಂ ಫೇರ್ ಹಾಳೆಗಳನ್ನು ತಿರುವಿ ಹಾಕುತ್ತಾ ನಿಂತು, ಸುತ್ತಲೂ ಒಮ್ಮೆ ಕಣ್ಣು ಹಾಯಿಸಿದ. ಶ್ರೀಪತಿ ಕಾಣಲಿಲ್ಲ.

ಸದಾನಂದ ಅಲ್ಲಿಂದ ಹೊರಡಲು ಯೋಚಿಸಿ ಎರಡು ಹೆಜ್ಜೆ ಮುಂದಕ್ಕೆ ಇಟ್ಟ. ಅಪರಿಚಿತ ಕಂಠ ಒಂದು "ಹಲೋ ಸದಾ" ಎಂದು ಕೂಗಿತು. ಸದಾನಂದ ತಿರುಗಿ ನೋಡಿದ. ಕಾಲೇಜು ಗೆಳೆಯ ಪ್ರಸನ್ನ ಓರ್ವ ಯುವತಿಯೊಂದಿಗೆ ಅವನೆಡೆಗೆ ಧಾವಿಸಿ ಬರುತ್ತಿದ್ದ. ಸುಮಾರು ಆರು ವರ್ಷಗಳ ತರುವಾಯ ಹಳೆಯ ಗೆಳೆಯನನ್ನು ಕಂಡಾಗ ಸದಾನಂದನಿಗಾದ ಆನಂದ ಅಲ್ಪವಲ್ಲ.

ಸ್ವಲ್ಪ ಹೊತ್ತಿನ ವರೆಗೆ ಗೆಳೆಯರಿಬ್ಬರೂ ಒಬ್ಬರನ್ನೊಬ್ಬರು ನೋಡುತ್ತಾ ನಿಂತರು. "ಚೆನ್ನಾಗಿದ್ದೀಯೇನೋ ಸದಾ, ಜೀವನದಲ್ಲಿ ಇದೊಂದು ಪರ್ವದಿನ" ಎಂದು ಗೆಳೆಯನ ಕೈ ಕುಲುಕುತ್ತಾ ಹೇಳಿದ ಪ್ರಸನ್ನ. "ಮಣಿಪಾಲ್ ಕಾಲೇಜು ಭೇಟಿಯೇ ನಮ್ಮ ಕೊನೆಯ ಭೇಟಿಯಾಯಿತು. ಈಗ ಎಲ್ಲಿದ್ದೀಯ ಪ್ರಸನ್ನ?" ಎಂದು ಪ್ರಶ್ನಿಸಿದ ಸದಾನಂದ.

"ದುರ್ಗಾಪುರದಲ್ಲಿದ್ದೇನೆ' ಎಂದ ಪ್ರಸನ್ನ.

ಯುವತಿ ಗೆಳೆಯರಿಬ್ಬರ ಸಂಭಾಷಣೆಯನ್ನೇ ಆಲಿಸುತ್ತಿದ್ದು ಅನಂತರ "ಹೀಗೆ ರಸ್ತೆಯಲ್ಲೇ ನಿಂತು ಬಿಡುವುದೇ ಪ್ರಸನ್ನ" ಎಂದಳು.

"ಸಾರಿ ಸುಧಾ, ಗೆಳೆಯನನ್ನು ಕಂಡಾಗ ಎಲ್ಲವೂ ಮರೆತು ಹೋಯಿತು" ಎಂದ ಪ್ರಸನ್ನ.

"ಸದಾ, ಮರೆತು ಹೋಗಿತ್ತು ನೋಡು ಇವಳು ನನ್ನ ತಂಗಿ ಸುಧಾ...ಸುಧಾ ಇವರು ನನ್ನ ಗೆಳೆಯ ಸದಾನಂದ. ಹೆಸರಾಂತ ಇಂಜನಿಯರ್" ಎಂದು ಪರಸ್ಪರ ಪರಿಚಯ ಮಾಡಿಸಿದ.

ಸದಾನಂದ 'ನಮಸ್ತೆ' ಎಂದು ಕೈ ಜೋಡಿಸಿ ಅವಳನ್ನೇ ದಿಟ್ಟಿಸಿದ. ಸುಧಾಳ ಸೌಂದರ್ಯ, ಮುಖದ ಮೇಲಿನ ತಿಳಿ ನಗೆಗೆ ಸದಾನಂದ ಪ್ರಭಾವಿತನಾಗಿದ್ದ. ಅವನು ಬೇಡವೆಂದು ತಡೆದರೂ ಅವನ ಕಣ್ಣುಗಳು ಅವಳತ್ತ ಚಲಿಸುತ್ತಿದ್ದವು. ಮೂವರು ಹೋಟೇಲೊಂದರ ಕಡೆಗೆ ಹೆಜ್ಜೆ ಹಾಕಿದರು.

"ಇಲ್ಲಿಗೆ ಬಂದು ಎಷ್ಟು ದಿನವಾಯ್ತು ಸದಾ?"

"ಸುಮಾರು ನಾಲ್ಕು ವರ್ಷಗಳಿಂದಲೂ ಇಲ್ಲೇ ಇದ್ದೇನೆ. ಬೃಂದಾವನ ಇಂಡಸ್ಟ್ರೀಸ್‌ನಲ್ಲಿ ಕೆಲಸ, ದಾದರ್‌ನಲ್ಲಿ ರೂಮು'

'ಅಂದ ಹಾಗೆ ಗೃಹಸ್ಥಾಶ್ರಮ'

"ಛೇ, ಛೇ, ಅಂತಹ ಶ್ರಮ ಸಧ್ಯಕ್ಕಂತೂ ಇಲ್ಲ."

"ನನ್ನ ಹಾಗೇ ಅನ್ನು."

'ಇರಲು ಸರಳವಿಲ್ಲದ ಬೊಂಬಾಯಿಯಲ್ಲಿ ಮದುವೆ ಮಾಡಿಕೊಂಡರೆ ಮುಗಿದೇ ಹೋಯ್ತು."

ಹಾಗಾದರೆ ಮನೆ ದೊರೆಯುವುದಾದರೆ ಮದುವೆ ಮಾಡಿಕೊಳ್ಳಲು ಸಿದ್ಧ ಅನ್ನು.'

'ಮುಂದಿನ ಚಿಂತೆ ಈಗೇಕೆ... ದುರ್ಗಾಪುರ ಹೇಗಿದೆ ಹೇಳು.'

"ಕೈಗಾರಿಕಾ ನಗರಗಳೆಲ್ಲ ಒಂದೇ ಬಗೆಯವು" ಎಂದ ಪ್ರಸನ್ನ.

ಮೂವರೂ ಹೋಟೇಲು ಹೊಕ್ಕು ತಿಂಡಿ ಕಾಫಿ ಮುಗಿಸಿ ಹೊರಬಂದರು.

"ಕೆಲಸವೇನಾದರೂ ಇತ್ತೇ ಸದಾ?'

"ಇಂದು ರಜ. ಬೇರೆ ಗೆಳೆಯರೊಬ್ಬರನ್ನು ಕಾಯುತ್ತಿದ್ದೆ. ನೀವೇ ದೊರೆತಿರಲ್ಲ.'

'ಸ್ವಲ್ಪ ಜುಹೂ ಕಡೆ ಹೋಗಿ ಬರೋಣವೇ'

'ಸಂತೋಷ' ಎಂದ ಸದಾನಂದ.

ಮೂವರೂ ವಿಶಾಲ ಸಾಗರದ ಅಂಚಿನ ಮರಳ ಮೇಲೆ ಸ್ವಲ್ಪ ಹೊತ್ತು ಸುತ್ತಾಡಿ ಕಲ್ಲು ಬೆಂಚೊಂದರ ಮೇಲೆ ಕುಳಿತರು. ಸದಾನಂದ ಬೊಂಬಾಯಿ ಜೀವನದ ಹಲ ಸಮಸ್ಯೆಗಳನ್ನು ತಿಳಿಸಿದ. ಗೆಳೆಯರಿಬ್ಬರೂ ತಮ್ಮ ವಿದ್ಯಾರ್ಥಿ ಜೀವನದ ಹಳೆಯ ನೆನಪನ್ನು ಸ್ಮರಿಸಿಕೊಂಡರು.

ಪ್ರಸನ್ನನ ತಾಯಿಯ ಅಣ್ಣ ಶಾಮರಾಯರು ಬೊಂಬಾಯಿಯಲ್ಲಿಯೇ ವೈದ್ಯರಾಗಿದ್ದರು. ತಂಗಿಯ ಮಕ್ಕಳ ಬಗ್ಗೆ ರಾಯರಿಗೆ ಎಲ್ಲಿಲ್ಲದ ಅಭಿಮಾನ. ಅವರ ಒಬ್ಬಳೇ ಮಗಳು ಸಂಧ್ಯಾ ಸುಧಾಳ ಓರಗೆಯವಳು. ಅವರಿಬ್ಬರ ಸ್ನೇಹ ಅನ್ಯೋನ್ಯತೆಯೂ ಅಪರಿಮಿತವಾಗಿತ್ತು. ಪ್ರಸನ್ನ ಆಗಾಗ್ಗೆ ಬೊಂಬಾಯಿಗೆ ಬಂದು ಕೆಲದಿನಗಳು ಮಾವನ ಮನೆಯಲ್ಲಿದ್ದು ಹೋಗುತ್ತಿದ್ದ. ಬೊಂಬಾಯಿಯ ಮಾವನ ಮನೆಗಿಂತಲೂ ಸಂಧ್ಯಾ ಅವನನ್ನು ಬಲವಾಗಿ ಆಕರ್ಷಿಸಿದ್ದಳು. ಅಣ್ಣನ ಬಲವಂತಕ್ಕೆ ಮಗಳನ್ನು ಅವರಲ್ಲಿಗೇ ಕಳುಹಿಸಿದ್ದರು ಸುಧಾಳ ತಾಯಿ.

ಸಂಧ್ಯಾ ಮತ್ತು ಪ್ರಸನ್ನ ಇವರ ವಿವಾಹವನ್ನು ನಡೆಸಲು ಹಿರಿಯರೆಲ್ಲರೂ ಕಾತುರರಾಗಿದ್ದರು. ಆದರೆ ಸಂಧ್ಯಾ ತನ್ನ ವೈದ್ಯಕೀಯ ಶಿಕ್ಷಣ ಮುಗಿಯದ ಹೊರತೂ ಮದುವೆಯಾಗುವುದಿಲ್ಲವೆಂದು ತಿಳಿಸಿದ್ದಳು. ಪ್ರಸನ್ನ ಭಾವೀ ಪತ್ನಿಯ ನುಡಿಗೆ ಸಮ್ಮತಿಸಿದ್ದ.

ಸಂಗೀತ ಮತ್ತು ಚಿತ್ರಕಲೆಯಲ್ಲಿ ಪೂರ್ಣ ಅಭ್ಯಾಸ ಪಡೆದು ಪದವಿ ಪಡೆದಿದ್ದ ಸುಧಾ ಕಲಾ ಶಾಲೆಯೊಂದರಲ್ಲಿ ಶಿಕ್ಷಕಿಯಾಗಿದ್ದಳು. ಸಂಧ್ಯಾ ಮತ್ತು ಸುಧಾ ನಿತ್ಯವೂ ತಿರುಗುವುದು ರೂಢಿಯಾಗಿತ್ತು. ಪ್ರಸನ್ನ ಮನೆಗೆ ಬಂದಾಗ ಸಂಧ್ಯಾ ಸುಧಾಳೊಂದಿಗೆ ತಿರುಗಲು ಹೊರಡಲು ನಿರಾಕರಿಸುತ್ತಿದ್ದಳು. ತಾನೊಬ್ಬಳೇ ಅವನೊಂದಿಗೆ ಹೊರಡುತ್ತಿದ್ದಳು. ಆದರೆ ಸುಧಾ ಇಬ್ಬರನ್ನೂ ಕೀಟಲೆ ಮಾಡದೆ ಬಿಡುತ್ತಿರಲಿಲ್ಲ. ಅಂದು ಸಂಧ್ಯಾ ಮೆಡಿಕಲ್ ಕಾಲೇಜಿಗೆ ಹೋಗಿದ್ದುದರಿಂದ ಅಣ್ಣ-ತಂಗಿ ಇಬ್ಬರೂ ಬೊಂಬಾಯಿ ಸುತ್ತುವ ಯೋಚನೆಯಿಂದ ಚರ್ಚ್‌ಗೇಟ್ ಬಳಿಗೆ ಬಂದಿದ್ದರು. ಅಲ್ಲಿ ಸದಾನಂದನ ಭೇಟಿಯಾಯಿತು. ಪ್ರಸನ್ನ ಬೊಂಬಾಯಿಯ ತನ್ನ ಮಾವ ಮತ್ತು ಸಂಧ್ಯಾಳ ಸಂಗತಿಯನ್ನು ತಿಳಿಸಿದ.

ಸೂರ್ಯ ಪಶ್ಚಿಮಾದ್ರಿಗೆ ವಿಶ್ರಾಂತಿಗಾಗಿ ತೆರಳಿ ಮರೆಯಾದ. ಸಂಜೆಯ ಕತ್ತಲು ಮೆಲ್ಲಗೆ ಆವರಿಸುತ್ತಾ ಬರುತ್ತಿತ್ತು. [illegible]ರದ ದೀಪಗಳು ಬೆಳಗ ತೊಡಗಿದ್ದ[illegible]. ಮೂವರೂ ಹೊರಟು ಟ್ಯಾಕ್ಸಿ ಸ್ಟ್ಯಾಂಡಿಗೆ ಬಂದರು.

"ಇನ್ನೆಷ್ಟು ದಿನ ಇಲ್ಲಿರುತ್ತೀಯ [illegible]ಸನ್ನ?'

'ಇನ್ನೆರಡು ದಿನ ಮಾತ್ರ ಇರುತ್ತೇ[illegible]'

"ಮತ್ತೆ ನಿನ್ನ ಭೇಟಿ"

'ನಾಳೆ ನಿಮ್ಮ ಆಫೀಸಿಗೇ ಬರ[illegible]ನೆ. ಇನ್ನು ಮುಂದೆ ಬೊಂಬಾಯಿಗೆ [illegible] ದೊಡನೆಯೇ ಮೊದಲು ನಿನ್ನ [illegible] ಅಂದ ಹಾಗೆ ಈಗ ನನ್ನೊಂದಿಗೆ [illegible] ಬಂದು ಬಿಡು. ಮನೆಯವರೆಲ್ಲರ [illegible]ಯ ಮಾಡಿ ಕೊಡುತ್ತೇನೆ.'

"ಕ್ಷಮಿಸು ಪ್ರಸನ್ನ ಇನ್ನೊಂದು [illegible] ತಪ್ಪದೆ ಬರುತ್ತೇನೆ.'

'ಈ ಮಾತನ್ನು ನಂಬಬಹುದೇ?' [illegible]ದು ಪ್ರಶ್ನಿಸಿದಳು ಸುಧಾ.

"ಖಂಡಿತವಾಗಿ'

'ಅಂದ ಹಾಗೆ ನಿಮ್ಮ ಕೋಣೆ'

'ದಾದರ್‌ನಲ್ಲಿ ಭಾರತಿ ನೃತ್ಯ ಶಾ[illegible]ದ ಬಳಿ ಇರುವ ಜಯ ಮಹಲ್[illegible] '15ನೇ ನಂಬರ' ಕೋಣೆ.

"ನಿಮ್ಮ ವಿವರಣೆಗೆ ತುಂಬ ಧ್ಯಾಂಕ್[illegible]

"ಸುಧಾ, ಇನ್ನು ನನ್ನ ಗೆಳೆಯ[illegible] ಪರಿಚಯ ಮಾಡಿಸಿದ್ದೇನೆ. ಇವರೂ [illegible] ಹಾಗೆ ಸಾಹಿತ್ಯ, ಸಂಗೀತ, ನೃತ್ಯ [illegible]ಳ ಅಭಿಮಾನಿಗಳು. ನಿಮ್ಮ ಸ್ನೇಹ [illegible]ಯಾಗಲಿ ಎಂದು ಹಾರೈಸುತ್ತೇನೆ[illegible]ದಾ ಈ ವಿಷಯದಲ್ಲಿ ನಿನ್ನ ಒಪ್ಪಿಗೆ [illegible]ಟನ್ನು".

'ನಿನ್ನ ಮಾತಿಗೆ ಪ್ರತಿ ಹೇಳುವ [illegible] ನನಗಿಲ್ಲ' ಎಂದ ಸದಾನಂದ.

ಟ್ಯಾಕ್ಸಿ ವೇಗವಾಗಿ ಚಲಿಸುತ್ತಿತ್ತು. ಕಲಾ ಶಾಲೆಯ ಮುಂದೆ ಟ್ಯಾಕ್ಸಿ [illegible]ದಾಗ ಸುಧಾ 'ಇದೇ ನಮ್ಮ ಕಲಾ ಶಾ[illegible] ನೀವು ಯಾವ ಸಂದರ್ಭದಲ್ಲಿಯಾದ[illegible] ಬಂದು ಭೇಟಿ ಮಾಡಬಹುದು.' [illegible] ಶಾಲೆಯಲ್ಲಿ ಮತ್ತು ಮನೆಯಲ್ಲಿ [illegible] ಸುಸ್ವಾಗತ" ಎಂದಳು.

'Thanking' ಎಂದ ಸದಾನಂ[illegible]

"ಸದಾನಂದ ತನ್ನ ಕೋಣೆ ಸಮೀ[illegible]ಸಿದಾಗ ಇಳಿದ. ಟ್ಯಾಕ್ಸಿ ಮುಂದಕ್ಕೆ [illegible]ಗಿತು.

"ಸದಾ ತುಂಬ ಒಳ್ಳೆಯವನು [illegible] ಅಂತಹ ಗೆಳೆಯರು ಸಿಕ್ಕುವುದು ಕ[illegible] ಎಂದ ಪ್ರಸನ್ನ.

ಸುಧಾ ಸದಾನಂದ ಟ್ಯಾಕ್ಸಿಯಲ್ಲಿ[illegible]ಟ್ಟು ಹೋಗಿದ್ದ ಕೋಟನ್ನು ಕೈಯಲ್ಲಿ[illegible]ಡಿದು 'ಇದೇ ಸಾಕ್ಷಿ ನೋಡಣ್ಣ' ಎಂ[illegible]ನಕ್ಕಳು.

(ಹದಿನೈದನೇ ಪುಟ ನೋಡಿರಿ)



ಅತ್ಯಾಧುನಿಕ ಸಲಕರಣೆ — ಸೌಕರ್ಯಗಳಿಂದ ಕೂಡಿದ
ಭೋಜನ, ಉಪಾಹಾರ ಮತ್ತು ವಸತಿ ಗೃಹ



ಹೋಟೆಲ್ ಶಿವಪ್ರಸಾದ

ಫೋನ್: 77 ಕುಂದಾಪುರ, ದ. ಕ.

ಅಸ್ತಮಾ ಪೀಡಿತರ ಗಮನಕ್ಕೆ

ಹಿಮಾಲಯದ ಪ್ರಸಿದ್ಧ ಅಸ್ತಮಾ [illegible]ರಳ ಮೂಲಿಕೆಯನ್ನು ದಿ. 29-10-60 [illegible]ಣ್ಣಿಮೆಯ ರಾತ್ರಿ ಹಾಲು ಮತ್ತು [illegible]ಯಿಂದ ತಯಾರಿಸಿದ ಖೀರಿನಲ್ಲಿ ತೆಗೆದು[illegible]ಳ್ಳುವುದರಿಂದ ಅಸ್ತಮಾ, ಗೂರಲು, ಕೆಮ್ಮು, ಉಬ್ಬಸ, ಮೇಲುಸಿರು ಮತ್ತು ಶ್ವಾಸ [illegible]ವಿಕೆ ಇವುಗಳು ನಿವಾರಿಸಲ್ಪಡುತ್ತವೆ. [illegible]ಡಲೇ ಇಂಗ್ಲಿಷಿನಲ್ಲಿ ಬರೆಯಿರಿ.

Shri Mahatma Sidh Baba Sewa Ash[illegible]
P. O. Chitrkot, (Uttar Prade[illegible]

ನಲ್ವತ್ತಾರನೆ ವರ್ಷ
Telephone 226.

Estd. 1921
NAVAYUGA
Leading Kannada Weekly
UDIPI, S. Kanara
ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ
ನವಯುಗ
ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ
ಉಡುಪಿ, ದ. ಕನ್ನಡ.

ಸಂಚಾಲಕ—ಸಂಪಾದಕ:
ಕೆ. ಹೊನ್ನಯ್ಯ ಶೆಟ್ಟಿ

ವಾರ್ಷಿಕ ಚಂದಾ:
ಮೂರು ವಿಶೇಷ ಸಂಚಿಕೆಗಳು ಸೇರಿ
ಅಂಚೆ ವೆಚ್ಚ ಸಹಿತ ಮುಂಗಡ
ಸ್ವದೇಶ ರೂ. ೧೦
ವಿದೇಶ ರೂ. ೧೮

ಜಾಹೀರಾತು ದರಗಳು:
ಅನಿಯಮಿತ (ಕೆಜುವಲ್)
ಕಲಂ ಸೆಂಟಿಮೀಟರಿಗೆ ರೂ. 2-00
ನಿಯಮಿತ (ಕಂಟ್ರಾಕ್ಟ್)
ಕಲಂ ಸೆಂಟಿಮೀಟರಿಗೆ ರೂ 1-50

ಸೂಚನೆಗಳು

ಲೇಖಕ ಬಂಧುಗಳಿಗೆ

ಲೇಖನವು ಕಿರಿದಾಗಿದ್ದು ಹಿರಿದರ್ಥದಿಂದ ಕೂಡಿರಬೇಕು ಕಾಲು ಕಾಪಿನ ಪ್ರಮಾಣದ ಹಾಳೆಯ ಒಂದೇ ಮಗ್ಗುಲಲ್ಲಿ ಬದಿಯಂಚುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು ಆಧಾರಿತ, ಅನುವಾದಿತವಾದರೆ ಅವುಗಳ ಮೂಲವನ್ನೂ ತಿಳಿಸಬೇಕು.

ಚಂದಾದಾರರಿಗೆ—

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚು ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು

ಮುಖಪತ್ರದಲ್ಲಿ:

ಲ್ಯೂನರ್ ಉಪಗ್ರಹ ಕಳಿಸಿದ
ಚಂದ್ರನ ಮೇಲ್ಮೈಯ
ಒಂದು ಚಿತ್ರ

ನವಯುಗ

ಸಂಪುಟ ೪೬	ಉಡುಪಿ	Vol. 46
ಸಂಚಿಕೆ ೮	೨೦—೧೦—೧೯೬೬	No. 8

ಐಕ್ಯದಿನ

ಭೂತಾನದ ಸಂರಕ್ಷಣಾ ಭಾರವು ಭಾರತ ಸರಕಾರಕ್ಕೆ ಸೇರಿದ ಹೊಣೆಗಾರಿಕೆ. ಕೆಂಪು ಚೀನೀಯರು ಅಲ್ಲಿನ ಸಾಂಪ್ರದಾಯಿಕ ಗಡಿಯನ್ನು ಮೀರಿ ಮುಂದೆ ನುಗ್ಗುವ ದಾರ್ಷ್ಟ್ಯವನ್ನು ತೋರಿದ್ದಾರೆ. ಇದಕ್ಕೆ ಭೂತಾನ ಸರಕಾರದ ಪರವಾಗಿ ಭಾರತ ಸರಕಾರವು ತೀವ್ರ ಪ್ರತಿಭಟನೆಯನ್ನು ಸೂಚಿಸಿದೆಯಲ್ಲದೆ ಸಾಂಪ್ರದಾಯಿಕ ಎಲ್ಲೆಯನ್ನು ರಕ್ಷಿಸಿಕೊಂಡು ಬರುವಂತೆ ವಿನಂತಿಸಿದೆ. ಇದಕ್ಕೆ ಕೆಂಪು ಚೀನಾವು ಯಾವ ಪ್ರತಿಕ್ರಿಯೆಯನ್ನು ತೋರಿಸಬಹುದು, ನಾವೆಲ್ಲ ಬಲ್ಲೆವು. ಇದು ಭೂತಾನದ ಗಡಿಯ ಕತೆಯಾದರೆ, ಪಾಕಿಸ್ತಾನದ ಕುತಂತ್ರಗಳು ಬೈಗೂ ಬೆಳಗೂ ನಡೆಯುತ್ತಲೇ ಇವೆ. ಭಾರತದ ಒಂದು ರಾಜ್ಯ ಜಮ್ಮು ಕಾಶ್ಮೀರದಲ್ಲಿ ಅಡಗಿಕೊಂಡಿದ್ದ ಪಾಕ್ ವಿಧ್ವಂಸಕರನ್ನು ಸಂಶೋಧಿಸಿ ಹಿಡಿಯುತ್ತಿರುವಂತೆಯೇ ಹೊಸ ಹೊಸ ಹಿಂಸಾಚಾರಿಗಳು ಅಲ್ಲಿ ನುಸುಳುತ್ತ ಬರುತಿದ್ದಾರೆ; ಅಂದರೆ ಪಾಕಿಸ್ತಾನವು ಉದ್ದೇಶಪೂರ್ವಕವಾಗಿಯೇ ಜಮ್ಮು–ಕಾಶ್ಮೀರದಲ್ಲಿನ ಶಾಂತಿಯ ಹಾಲಿಗೆ ಹುಳಿ ಹಿಂಡಲು ತನ್ನ ವಿಧ್ವಂಸಕರ ತಂಡಗಳನ್ನು ಕಳಿಸುತ್ತಿದೆ ಎಂದಾಯಿತು. ಇದೇ ದುರ್ನೀತಿಯನ್ನೀಗ ಪೂರ್ವ ಪಾಕಿಸ್ತಾನ–ಭಾರತ ಗಡಿಯಲ್ಲೂ ಅದು ಅನುಸರಿಸ ಹೊರಟಿದೆ. ಮಿಜೋ ಮತ್ತು ನಾಗಾ ಬಂಡುಗಾರರನ್ನು ಭಾರತ ಸರಕಾರಕ್ಕೆದುರು ಕಟ್ಟುವ ಹುಚ್ಚು ಸಾಹಸವನ್ನದು ಮಾಡಿತ್ತು; ಆದರೆ ಇದರಿಂದ ಪಾಕಿಸ್ತಾನಕ್ಕೆ ಯಾವ ಲಾಭವೂ ಸಿಗಲಿಲ್ಲ. ಈಗ ಅಸ್ಸಾಮು ರಾಜ್ಯಕ್ಕೆ ತನ್ನ ವಿಧ್ವಂಸಕರ ತಂಡವನ್ನು ಅಟ್ಟುವ ಯೋಜನೆಯನ್ನು ಅದು ಕಾರ್ಯರೂಪಕ್ಕೆ ತರತೊಡಗಿದೆ. ಸುದೈವವಶಾತ್ ಇದರ ರಹಸ್ಯ ನಮಗೆ ಆರಂಭದಲ್ಲಿಯೇ ದೊರೆಯಿತು.

ಕೆಲವೇ ಮೈಲ್‌ಗಳನ್ನು ನಾವು ಹೊಡೆದುಕೊಂಡು ಹೋದೆವೆಂದು ಆರೋಪಿಸಿ ಅಲ್ಟಿಮೇಟಂ ಇತ್ತ ಕೆಂಪು ಚೀನಾ ನಮ್ಮನ್ನು ಒಂದಲ್ಲ ಒಂದು ರೀತಿಯಿಂದ ಬೆದರಿಸಲು ಯತ್ನಿಸುವುದು ಆಶ್ಚರ್ಯವಿಲ್ಲ. ಗಡಿ ತಂಟೆಯನ್ನು ನಿವಾರಿಸಿಕೊಳ್ಳಲು ಸೂಕ್ತ ಕ್ರಮವನ್ನು ಕೈಕೊಂಡರೆ, ಮತ್ತೆ ಬೆದರಿಕೆಗೆ ದಾರಿಯೇನು? ಏಶ್ಯಾದಲ್ಲಿ ನಾಯಕ ರಾಷ್ಟ್ರವಾಗುವ ತನ್ನ ಹೆಬ್ಬಯಕೆಯನ್ನು ಕೆಂಪು ಚೀನಾ ಸಾಧಿಸಬೇಕಾದರೆ, ಭಾರತದ ಪ್ರಗತಿಯನ್ನು ಅವಶ್ಯ ತಡೆಹಿಡಿಯಲೇ ಬೇಕು. ಅದು ಅನುಸರಿಸುತ್ತಿರುವ ನೀತಿಯಾದರೂ ಇದೇ ತಾನೆ? ಆದರೆ ಪಾಕಿಸ್ತಾನದ ಇರಾದೆಯೇ ಬೇರೆ. ತಾನು ಯಾವ ಕಾಲಕ್ಕೂ ಏಶ್ಯಾದ ಪ್ರಮುಖ ರಾಷ್ಟ್ರಗಳ ಸಾಲಿನಲ್ಲಿ ನಿಲ್ಲಲಾರೆನೆಂಬುದು ಅದಕ್ಕೆ ಗೊತ್ತು. ಅದಕ್ಕಾಗಿಯೇ ಅಲ್ಲಿನ ರಾಜಕಾರಣಿಗಳು ತಮ್ಮ ಪಟ್ಟ ಭದ್ರಗೊಳಿಸುವ ಹಂಚಿಕೆಯಲ್ಲೇ ನಿರತರಾಗಿದ್ದಾರೆ. 'ಕಾಶ್ಮೀರ'ದ ಪ್ರಶ್ನೆಯನ್ನೇ ಎತ್ತಿ ಹಿಡಿದು ಅದನ್ನು ಪಾಕಿಸ್ತಾನಕ್ಕೆ ದೊರಕಿಸಿ ಕೊಡುವದಕ್ಕಾಗಿ ತಾವು ಅಧಿಕಾರದಲ್ಲಿರಬೇಕು ಎಂಬ ಭಾವನೆಯನ್ನು ಅಯ್ಯೂಬಖಾನರು ಬಲವಾಗಿ ಮೂಡಿಸಿದ್ದಾರೆ. ಹೊಟ್ಟೆಗೆ ಅನ್ನವಿಲ್ಲದಿದ್ದರೂ ಜುಟ್ಟಿಗೆ ಮಲ್ಲಿಗೆ ಹೂ ಮುಡಿಯುವ ಅವರ ನೀತಿ ಭಾರತದ ಮೇಲೆ ಧಾಳಿಯನ್ನೇ ಮಾಡಿಸಿತು; ಪಾಕಿಸ್ತಾನದ ಮುಖಭಂಗ ಮಾಡಿಸಿತು. ಆದರೂ ತಾಷ್ಕೆಂಟ್ ಒಡಂಬಡಿಕೆಯನ್ನು ಮುಂದೆ ಮಾಡಿ ಅದರೊಂದಿಗೆ ಸರಸವನ್ನಾಡುವ ನಿಲುವೆಯೆಂದವರೆದ್ದು ಉಭಯ ದೇಶಗಳ ಸಂಬಂಧ ತಿಳಿಗೊಳಿಸಲು ನೆರವಾಗಬಹುದಾದ ಯಾವುದೇ ಸಭೆಗಳನ್ನು ಅವರು ತಿರಸ್ಕರಿಸುತ್ತಾರೆ—ಅವರಿಗೆ ಬೇಕು ಕಾಶ್ಮೀರ—ಅದಿರದೆ ಹೋದರೆ ಭಾರತದೊಡನೆ ವೈರ— ಮೊದಲೇ ಆರ್ಥಿಕವಾಗಿ ನವೆಯುತ್ತಿರುವ ಪಾಕ್ ನಾಗರಿಕರನ್ನು ಇಸ್ಲಾಂ ಧರ್ಮ ಮತ್ತು ಕಾಶ್ಮೀರಗಳ ನೆಪದಲ್ಲಿ ಒಲಿಸಿಕೊಂಡಿರುವ ಫೀಲ್ಡ್ ಮಾರ್ಶಲರು ಇವೆರಡರಲ್ಲಿ ಯಾವುದಾದರೂ ಒಂದನ್ನು ಹುಸು ಸಡಿಲು ಬಿಟ್ಟರೆ ಸಾಕು; ಅಧಿಕಾರದಿಂದ ಉರುಳಿದಂತೆಯೇ ಸರಿ.

ಅಕ್ಟೋಬರ ೨೦ ಮತ್ತೆ ಬಂದಿದೆ. ಇಂದು ದೇಶದ ಮೇಲೆ ಆಕ್ರಮಣ ಮಾಡಿದ, ಮಾಡ ಬಯಸುತ್ತಿರುವ ಆಕ್ರಮಣಕಾರರ ದಬ್ಬಾಳಿಕೆಗೆ ಬೆದರದೆ ಅಂಜದೆ ನಮ್ಮ ಸಾರ್ವಭೌಮತೆಯನ್ನು, ಸ್ವಾತಂತ್ರ್ಯವನ್ನು ಉಳಿಸಿಕೊಳ್ಳುವ ಪ್ರತಿಜ್ಞೆಯನ್ನು ಮತ್ತೆ ನೆನಪಿಸುವ ಪವಿತ್ರದಿನ. ಕೆಂಪು ಚೀನಾವಿರಲಿ ಪಾಕಿಸ್ತಾನವಿರಲಿ ಅಥವಾ ಮತ್ತಾರಾದರೂ ಇರಲಿ, ನಮ್ಮ ಮೇಲೆ ಆಕ್ರಮಣ ಮಾಡ ಬಂದರೆ, ಕೊನೆಯುಸಿರಿರುವ ತನಕವೂ ಹೋರಾಡಿ ಮಾತೆ ಭಾರತಿಯನ್ನು ರಕ್ಷಿಸುವ ದೃಢತೆಯನ್ನು ಮತ್ತೆ ಪುನರುಜ್ಜೀವಿಸುವ ಪಾವನ ದಿನ. ನಾವು ಅಂತೆಯೇ ಮಾಡೋಣ. ಇನ್ನೂ ಒಂದು ಮಾತನ್ನು ನಾವಿಂದು ಮರೆಯದಿರೋಣ. ಬಾಹ್ಯ ಅಶಾಂತಿಗಿಂತ ಆಂತರಿಕ ಅಶಾಂತಿಯು ಮಾರಕವಾಗಿದೆ. ರಾಜ್ಯ—ರಾಜ್ಯಗಳಲ್ಲಿ, ಪಕ್ಷ—ಪಕ್ಷಗಳಲ್ಲಿ, ವ್ಯಕ್ತಿ—ವ್ಯಕ್ತಿಗಳಲ್ಲಿ ಬೂದಿ ಮುಚ್ಚಿದ ಕೆಂಡದಂತಿರುವ ವೈಮನಸ್ಸು, ದ್ವೇಷ, ವಿವಾದಗಳು ಆಸುರಿಯಾಗದಂತೆ ಸಾತ್ವಿಕವಾಗಿಯೇ ಮಾರ್ಪಡುವಂತೆ ಎಚ್ಚರ ವಹಿಸುವ ದಿನವೂ ಇದು ಹೌದು. ನಾವು ನಮ್ಮಲ್ಲಿ ಒಂದಲ್ಲ ಒಂದು ಕಾರಣಗಳಿಂದ ಕಚ್ಚಾಡುತ್ತಿದ್ದರೆ, ಗಲಭೆಯೆಬ್ಬಿಸಿದರೆ, ನಮ್ಮ ಶಕ್ತಿ ಹ್ರಾಸವಾಗುವುದು; ಅಪವ್ಯಯವಾಗುವುದು; ಇದರಿಂದ ಶತ್ರುಗಳಿಗೆ ಅಮಿತ ಲಾಭವಾಗುವುದು. ಇಂತಹ ಅನಪೇಕ್ಷಿತ ದುರ್ಘಟನೆಗಳಿಗೆ ಅವಕಾಶ ಕೊಡದೆ ರಾಷ್ಟ್ರೀಯ ಐಕ್ಯ ಸಂವರ್ಧನೆಯನ್ನು ಸಾಧಿಸುವ ಸರಿದಾರಿಯಲ್ಲಿ ನಾವು ಮುಂದುವರಿಯೋಣ; ಯಶಗಳಿಸೋಣ.

ವಚನಸುಧೆ

ನಿಷೇವತೇ ಪ್ರಶಸ್ತಾನಿ
ನಿಂದಿತಾನಿ ನ ಸೇವತೇ
ಅನಾಸ್ತಿಕಃ ಶ್ರದ್ದಧಾನ
ಏತತ್ ಪಂಡಿತ ಲಕ್ಷಣಂ॥

ಉಚಿತವಾದುದನ್ನು ಸೇವಿಸುವುದು, ಅನುಚಿತವಾದುದನ್ನು ದೂರೀಕರಿಸುವುದು, ಆಸ್ತಿಕನೂ ಶ್ರದ್ಧಾಳುವೂ ಆಗಿರುವುದು ಬುದ್ಧಿವಂತನ ಮೂರು ಮುಖ್ಯ ಲಕ್ಷಣಗಳು.

ಹತ್ತು ವರ್ಷಗಳ ನಂತರ....?

ಕರ್ನಾಟಕದ ರಾಜ್ಯಪಾಲ ಮಾನ್ಯ ವಿ. ವಿ. ಗಿರಿಯವರು ಭಾಷಾ ತಳಹದಿಯ ರಾಜ್ಯ ವಿಭಜನೆಯನ್ನು ಮೆಚ್ಚುವುದಿಲ್ಲ. ಅವರು ಅಂದೇ ಈ ಸಂಬಂಧದಲ್ಲಿ ತಮ್ಮ ಅಸಮ್ಮತಿಯನ್ನು ವ್ಯಕ್ತಪಡಿಸಿದ್ದರು. ಈ

(ಹದಿನಾಲ್ಕನೇ ಪುಟ ನೋಡಿರಿ)

'ನವಯುಗ'ದ ಚಂದಾದಾರರಲ್ಲಿ ವಿನಂತಿ

ಕಳೆದ ಆಗೋಸ್ತು ತಿಂಗಳಾಂತ್ಯಕ್ಕೆ "ನವಯುಗ"ದ 45ನೇ ವರ್ಷವು ಕೊನೆಗೊಂಡು ಸಪ್ಟಂಬರಾದಿಯಿಂದ 46ನೇ ಹೊಸ ವರ್ಷಾರಂಭವಾಗಿರುವುದಷ್ಟೆ! ಈ ಅವಧಿಗೆ ಚಂದಾ ಅವಧಿ ಮುಗಿಯುವ ಹಾಗೂ ಚಂದಾ ಹಣ ಬಾಕಿಯಿರುವ ನಮ್ಮ ಚಂದಾದಾರ ಬಂಧುಗಳು ತಮ್ಮ ಚಂದಾ ಹಣವನ್ನು ದಯಮಾಡಿ ಆದಷ್ಟು ತ್ವರ್ಯ ಮನಿಯಾರ್ಡರು ದ್ವಾರಾ ಯಾ ಸಿಂಡಿಕೇಟ್ ಬ್ಯಾಂಕಿನ ಸಮೀಪದ ಶಾಖೆಯಲ್ಲಿ "ನವಯುಗ"ದ ಖಾತೆಗೆ ಜಮೆ ಮಾಡುವುದರ ಮೂಲಕ ಈಗಲಾದರೂ ಕಳುಹಿಸಿಕೊಟ್ಟು ಸಹಕರಿಸುವಂತೆ ಇನ್ನೊಮ್ಮೆ ಕಳಕಳಿಯಿಂದ ವಿನಂತಿಸುತ್ತೇವೆ.

ಅಂತೂ ಚಂದಾಹಣವು ಈ ತಿಂಗಳಾಂತ್ಯದ ಒಳಗಾದರೂ ಬಾರದಿದ್ದಲ್ಲಿ ನವಂಬ್ರ ಮೊದಲ ವಾರದ ಸಂಚಿಕೆಯನ್ನು ವಿ. ಪಿ. ಮೂಲಕ ಕಳುಹಿಸುತ್ತೇವೆ. ಅದನ್ನು ಅವಶ್ಯ ಸ್ವೀಕರಿಸುವಂತೆ ಬಿನ್ನಹಿಸುತ್ತೇವೆ.

ಮೆನೇಜರ್,
ನವಯುಗ, ಉಡುಪಿ.

ನರಸಣ್ಣನ ಸರಸ

"ದಕ್ಷಿಣ ಮಧ್ಯ ರೇಲ್ವೆಯಲ್ಲಿ ಹತ್ತು ದಿನಗಳಿಗೆ ಎರಡು ಅಪಘಾತ ಹದಿನೈದು ಜನರ ಸಾವು ಸಂಭವಿಸಿತು ..."

'ಅಂದರೆ ಅಪಘಾತ-ಸಾವುಗಳಿಗಾಗಿಯೇ ಈ ಹೊಸ ರೇಲ್ವೆಯು ಉದಯವಾಯಿತೆ?"

ಗೇಹೆ ರಾಜ್ಯಭಲ್ಲಿ

ಮಾಣಿಕವತೊರೆದು ಬೂದಿಕಟ್ಟುವರೆ ?

'ಯಾರು ಸಾಧಿಸರಯ್ಯಾ ಯೋಗವ್ರತ ವನು? ಮೃಗ ಚರ್ಮ ಭಸ್ಮ ಜಡೆಯೋಗ ದಂಡಗಳಕೊಂಡು ಆರಾಧನೆಗಳು ನಾರು ಮಾಡುವರಯ್ಯಾ?"

'ನೀನೆನ್ನುವ ಅಗಮ ಅಪಾರ ಅಗಾಧ ಬ್ರಹ್ಮನ ಕಂಡೆವಾದರೆ ನಮ್ಮಾಶ ಮನವು ಸಾ ರ್ಥಕ, ಇಲ್ಲವಾದರೆ ಎಲ್ಲ ವ್ಯರ್ಥವಯ್ಯಾ! ಗಿರಿಧರ ಕೃಷ್ಣನ ಶ್ಯಾಮ ಸುಂದರವದನವ ಕಾಣಲಿಕೆ ಆಡಂಬರವೇಕಯ್ಯಾ? ಆಸನ ಪ್ರಾಣಾಯಾಮ ಮೃಗ ಚರ್ಮಧ್ಯಾನಾದಿ ಯೋಗಗಳ ಆರಾಧನೆಯೇಕಯ್ಯಾ? ಗೋ ಪೀಚಂದನವನು ಹೊಂದಲಿಕೆ ಮಾಣಿಕವ ನು ತೊರೆದು ಬೂದಿಯನು ನೆರಗಿಸಲಿ ಕ ಟ್ಟಲೇಕಯ್ಯಾ?'

"ಓಯ್, ಇದೇನ್ರೀ .."

"ಯಾವುದು?'

"ಅದೇ, ಏನೇನೋ ಇನ್ನಪ್ಪಿದ್ದ. ಅದೆಂ ಥದೋ ಗೊಣಗುತಿದ್ರಲ್ಲಾ...."

"ಗೊಣಗಿಕೊಳ್ಳೋಕೆ ಬಾಯಲ್ಲೇನು ಪಾಕಂಪೊಪ್ಪನ್ನು ಹಾಕಿಕೊಂಡಿದ್ದೀ ನೆಯ?"

'ಯಾರಿಗೆಗೊತ್ತು ?"

'ಸರಿಯಾಗಿತ್ತು ಬಿಡಿ....'

"ಏನು'

"ಬಾಯಲ್ಲಿದ್ದ ಪಾಕಂಪೊಪ್ಪು....'

'ಅಲ್ಲಾ ತಲೆಕೂದಲು ನರೆಯುತ್ತ ಬಂದ್ರೂ ನಿಮ್ಮ ತಮಾಷೆಗೆ ಮುಪ್ಪು ಬಂ ದಿಲ್ಲ ..."

"ನೋಡು, ಒಬ್ಬ ಕವಿ ಹುಂಗನ ಅಂ ದಿದ್ದಾನೆ...'

"ಸುಮ್ಮನಿದ್ದಿ.... ಹ್ಞಾಂ.... ಆ ಯ್ಮ್ ಹೇಳಿ ಹೇಳಿ ಏನಂದಿದ್ದಾನೆ ಆತ?

'ನಗುವು ಸಹಜದ ಧರ್ಮ; ನಗಿಸುವು ದು ಪರಧರ್ಮ...'

"ಓ ಇದು ಕಗ್ಗದ ಮಾತಲ್ಲವೇನು?'

"ಹ್ಞಾಂ..."

'ಡಿವಿಜಿ ಬರೆದದ್ದು...."

'ಹ್ಞಾಂ...'

'ನೋಡ್ರಿ ಇದನ್ನೆ ಬಾಲ ಬೋಧೆಯು ಲ್ಲಿ ಹಾಡಿದ್ದಾರೆ ಭಾಂ ಸಲೀಸಾಗಿ....'

'ಏನಂತೆ?'

'ನಗುತಿರು ನಗುತಿರು ನೀನಗ ತಿದ್ದ ರೆ, ಜಗವೇ ನಗುವುದು ನಿನ್ನೊಡನೆ..'

'ಅದು ಸಂಯೇ. ಅದ್ರೆ ನೋಡು ನ ಮ್ಮ ಶಾಸ್ತ್ರಜ್ಞರು ಆ ನಗುವನ್ನೂ ನೂರಾ ರು ಸಂಕಲೆಗಳಿಂದ ಕಟ್ಟಿಟ್ಟಿದ್ದಾರೆ.'

'ಅಂದರೆ?'

'ಒಳ್ಳೇ ಪಚೀತಿಯಾಯ್ತಲ್ಲ...'

'ಯಾಕೆ?'

'ಅಲ್ಲ, ಯಾವ ಕಾಸಿನ ಪ್ರಯೋಜನ ವು ಇಲ್ಲದೆ ಈಗ ಹಾಸ್ಯ ಮೀಮಾಂಸೆ ಮಾಡಬೇಕಾಯ್ತಲ್ಲಾ ಅಂತ...'

'ತಿಳಿದುದನ್ನು ತಿಳಿಯದವರಿಗೆ ತಿಳಿಸು ವುದು ತಿಳಿದವರ ಕರ್ತವ್ಯವಲ್ಲವೆ?'

"ಅದು ಸರೀನ್ನು. ವಿನೋಬಾಜಿ ಹಾ ಗೇ ಹೇಳ್ತಾರೆ. ನೀ... ...ವನ್ನೂ ನ್ನು, ತಿಳಿದುಕೊಳ್ಳುವ ಶಕ್ತಿ ನಿನ್ನಲ್ಲಿ ಇಲ್ಲ ವಾದರೆ...."

"ಭಾಂ ಮನನ್ಯಾಸ್ತ್ರ ಪಂಡಿತರ.! ನ ನಗೆ ತಿಳಿಯುತ್ತೋ ಇಲ್ಲವೋ ಹೇಳಿದ ಮೇಲೆ ಗೊತ್ತು. ಅಂಗ ಹ ಟ್ಟೋಕೆ ಮೊ ದಲೇ ಅದು ಗಂಡೋ ಹೆಣ್ಣೋ ಅಂತ ಯಾಕೆ ಚರ್ಚೆ?"

"ಹಾಗಾದರೆ ಕೇಳು: ಹಾಸ್ಯವೇ ರಸ ಇದಕ್ಕೆ ಆಲಂಬನ ವಿಭಾವ ಪಂಚಾನನ. ದೇಶ ಕಾಲ ವರ್ಣಾದಿಗಳು. ಉದ್ದೀಪನ ಆಶ್ರಯನಾದವನ ಅಕ್ಷಿಪಿಕಸನ, ಕಪೋ ಲಸ್ಪಂದನ, ಮುಖರಂಗ, ಪಾರ್ಶ್ವಗ್ರಹ ಣ, ಇನ್ನು ಸಾತ್ವಿಕ ಭಾವ ವಿವರ್ಣ ಸ್ವ ರಾದಿ, ಸ್ವೇದ, ಅಶ್ರು, ಸ್ವರ ಭೇದಗಳು. ಮತಿ ಹರ್ಷಾದಿ, ನಿದ್ರಾವಹಿತ್ಥ ಚಂದ್ರೀ ತ್ರಪಾಲಸ್ಯಾದಿಗಳು ಸಂಚಾರಿ ಭಾವಗಳು ..."

ಸಾಕು ಸಾಕು......ಸಾಕ. ನೀವು ಇದೆಲ್ಲಾ ಶಾಸ್ತ್ರ ಪಾಂಡಿತ್ಯ ಇಟ್ಟಿಡಿ ಸುಂಸುಮ್ನೆ ನಾಲ್ಕು ಸಂತೋಷದ ಮಾ ತಾಡಿ ತಕ್ಕು ಬಿಡುವವರಂಗೆ ಯಾಕೆ ಇಷ್ಟೆ ಲ್ಲ ಸಂಕೋಲೆ?'

'ಪ್ರಾಯಕ್ಕೆ ಬಂದ ಹೆಣ್ಣಿಗೊಂದು ಗಂಡು ಬೇಡವೆ? ಹಾಗೆ ಶಾಸ್ತ್ರ...'

'ಹೌದು, ಗಂಡಿಗೂ ಹೆಣ್ಣು ಬೇಕು ತಾನೆ?'

'ಯಾರು ಬೇಡಾಂತಾರೆ? ಹೆಣ್ಣು ಪ್ರ ಕೃತಿ, ಗಂಡು ಪುರುಷ—ಅವರಿಬ್ಬರ ಏ ಕೀಭಾವ ಪರಮಾತ್ಮ ಅಂತ ಶಾಸ್ತ್ರಗಳವಾ ದ....'

'ನೋಡಿ, ನೀವು ಶಾಸ್ತ್ರಗಳನ್ನ ಕೊಂಡು ಒಲೆಗಿಡಿ. ನೀವೊಂದು, ನಿಮ್ಮ ಶಾಸ್ತ್ರ ವೊಂದು, ನಿಮ್ಮ ಸರಕಾರವೊಂದು, ಅದ ರ ಕಾನೂನೊಂದು ..'

"ಹೌದು ಹೌದು, ನಾನೂ ಒಂದು, ನೀನೂ ಒಂದು...'

'ಅಲ್ಲ...ಅಲ್ಲ...'

"ಹ್ಞಾಂ...ಏನಂದೆ..."

"ನಾನೂ ನೀವೂ ಒಂದಾದರೆ ಮೋಕ್ಷ ಒಂದು..."

"ಹೌದೇ 'ನೀನೇನೂ ಚಿಲ್ರೆಯುವಳ ಲ್ಲ...'

"ನಿಮ್ಮಂತಹ ದೊಡ್ಡದೊಡ್ಡ ಶಾಸ್ತ್ರ ಪಂಡಿತರಿಗೆ ಅನರ್ಥ ಅನ್ನೋ ಸಂಗ್ತಿ ಮರ್ತ್ರ ಹೋಗದೆ ಎಲ್ಲಿ ಹೋಗುತ್ತೆ ..."

"ಹಾಗಲ್ವೆ, ಒಂದು ಅನ್ನೋದು ನಿ ರ್ಗುಣ"

"ಅಂದರೆ, ಸಾಕಾರವಾಗಿರೋದು ಸಗು ಣ: ನಿರಾಕಾರವಾಗಿರೋದು ನಿರ್ಗುಣ ."

"ಹ್ಞಾಂ .."

"ಗೋಪಿಯರು ಶ್ರೀಕೃಷ್ಣನ ಮೇಲೆ ಇಟ್ಟಿದ್ದ ಪ್ರೇಮ ಮಧುರ ಪ್ರೇಮ, ಸ ಗುಣ ಭಕ್ತಿ....'

"ಅದು ಸರಿ. ಆದರೆ, ಭಗವಂತ ನಿರಾ ಕಾರ, ನಿರ್ಗುಣ.......ಅಂತ ಅನ್ನುತ್ತರೆ ನೋಡಿ. ಒಳಗಿನ ಕಣ್ಣುಗಳಿಗೆ ಮಾತ್ರ ತೋರುವ ಜ್ಞಾನಗಮ್ಯನಾತ ಅನ್ನುತ್ತಾ ರೆ, ಕೆಲವರು."

'ಹ್ಞಾಂ . ಹಾಗೆ ಬಾ. ಅದೇ ನಾನು ಆಗ ಅನ್ನುತ್ತಾ ಇದ್ದದ್ದು ...'

'ಓಹೋ, ಏನು, ಹೇಳಬಿಡಿ .."

'ನೋಡು, ಕೃಷ್ಣ ಗೋಪಿಯರನ್ನು ಬಿಟ್ಟು ಮಥುರೆಗೆ ರಾಜಕಾರ್ಯಕ್ಕಾಗಿ ಹೊ ರಟು ಬಿಟ್ಟ. ಅಲ್ಲಿ ಕಂಸನನ್ನು ಕೊಂದ ಬಳಿಕ ಅಲ್ಲೇ ನೆಲೆಸಿನಿಂತ. ಒಂದು ದಿನ ತನ್ನ ಸಖ ಉದ್ಧವನನ್ನ—ಆತ ಜ್ಞಾನ ಯೋಗಿ—ಕರೆದು ತನ್ನನ್ನೆ ನೆನೆ ನೆನೆದು ಹಂಬಲಿಸಿ ಬಳಲುತ್ತಿರುವ ಗೋ ಪಿಯರಿಗೆ ಜ್ಞಾನಯೋಗವನ್ನು ಕಲಿಸಿ ತ ನ್ನ ನಿರಾಕಾರ ರೂಪವನ್ನು ಆರಾಧಿಸಿ ಪ್ರ ಸನ್ನ ಚಿತ್ತರಾಗುವಂತೆ ಉಪದೇಶಿಸಿ ಬಾ ಲು ಕೇಳಿಕೊಂಡ....'

'ಹ್ಞಾಂ....ಆಮೇಲೆ?'

'ಉದ್ಧವ ವ್ರಜಕ್ಕೆ ಬಂದ....'

'ಹೌದ್ರಿ, ಅದು ಗೊತ್ತು. ಗೋಪಿಯ ರು ಏನಂದ್ರು?'

'ಓ, ಯಾರು ಏನನ್ನ ಬೇಕಾದ್ರೂ ಉ ದ್ಧವ ವ್ರಜಕ್ಕೆ ಬರಬೇಕಲ್ಲ?'

'ಹೌದು ಹೌದ. ಉದ್ಧವ ವ್ರಜಕ್ಕೆ ಬಂದು, ತನ್ನ ಯೋಗವನ್ನು ಉಪದೇಶಿ ಸಿದ. ಮುಂದೆ? ಅದಕ್ಕೆ ಗೋಪಿಯರು ಏನಂದರು?"

'ಓಹೋ? ಆದರಲ್ಲಿಯೇ ನಿನಗಷ್ಟು ಆಸಕ್ತಿಯೇನು?"

"ಹ್ಞಾಂ ಹೇಳಿ...."

"ಕೇಳು, ನಮಗೆ ನಿನ್ನ ನಿರ್ಗುಣ ಕೃ ಷ್ಣೋಪಾಸನೆ ಬೇಡ; ಬಂದ ದಾರಿಗೆ ಸುಂಕವಿಲ್ಲಾಂತ ಮರಳಿಸಿದ್ರು!"

'ಅಬ್ಬಾ ನೀವೆ, ಎಂಥ ಕಲ್ಲು ಮನಸ್ಸು ನಿಮ್ಮದು?'

"ಯಾಕೆ? ನಿರ್ಗುಣೋಪಾಸನೆ ಬೇ ಡಾಂತ ಒಂದೇ ಮಾತು ಆವರ ಬಾಯಿ ಯಿಂದ ಬಂದು ಬಿಟ್ಟಿತೇನು? ತಮ್ಮ ಪ್ರಿ ಯತಮನನ್ನು ನೆನೆ ನೆನೆದು ಅಳಲಿಲ್ಲ ವೇನು?'

'ಓ ಹೋ, ಅದೆಲ್ಲಾ ರಾಮಾಯಣ. ಅದೆಲ್ಲ ಹೇಳೋಕೆ ಈಗೆಲ್ಲಿ ಸಮಯ? ಇ ದ್ದ ಬೇಕಾದ್ರೆ ಕೇಳು—ಮೊದಲು ಅಂದ ದ್ದರ ವ್ಯಾಖ್ಯೆ?"

"ಪಾಲಿಗೆ ಬಂದದ್ದು ಪಂಚಾಮೃತ.'

"ಗೋಪಿಯರು ಹೇಳುತ್ತಾರೆ: ಅಲೇ ಉದ್ಧವ, ನೀನು ಉಪದೇಶಿಸಿದ ಯೋಗ ವ್ರತವನ್ನು ನಮ್ಮಲ್ಲಿ ಯಾರು ತಾನೆ ಸಾಧಿಸಬಲ್ಲರು? ಅದಕ್ಕಾಗಿ ಮೃಗಚರ್ಮ ತೊಟ್ಟು, ಬೂದಿ ಬಳಿದು, ಜಡೆ ಬಿಟ್ಟು ಯೋಗದಂಡ ಹಿಡಿದು ಯಾರು ಉಪಾಸ ನೆ ಮಾಡಬಲ್ಲರು?'

'ಯಾಕೆ ಮಾಡಬ ರದು? ಕೃಷ್ಣ ಪ್ರಾ ಪ್ತಿಗಾಗಿ....?

"ನೋಡು, ನಿನ್ನ ನಿರ್ಗುಣ ಕೃಷ್ಣ ಅ ಗಮ, ಅಪಾರ, ಅಗಾಧ, ಅಂಥವನನು ಶರೀರವನ್ನು ಬಳಲಿಸಿಯೂ ನಾವು ಗಳಿಸ ದೆ ಹೋದರೆ ಏನು ಪ್ರಯೋಜನ? ನಮ ಗೆ ನಮ್ಮ ಗಿರಿಧರ ಕೃಷ್ಣನ ಶ್ಯಾಮ ಸುಂದರ ಮುಖವನ್ನು ನೋಡಬೇಕು. ಇದಕ್ಕಾಗಿ ನೀನನ್ನುವ ಯಮ, ನಿಯಮ, ಆಸನ, ಪ್ರಾಣಾಯಾ ಮ, ಪ್ರತ್ಯಾಹಾರ, ಧಾರಣ, 'ಧ್ಯಾನ, ಸ ಮಾಧಿ— ಈ ಆಡಂಬರಗಳು ಯಾಕೆ ಬೇಕು?'

"ಅದು ಸರೀನ್ರಿ. ಸತ್ತು ಕಾಣಬಹ ದಾದ ಸ್ವರ್ಗಕ್ಕಿಂತ ಇದ್ದು ಕಾಣುವ ನರ ಕವೇ ಲೇಸು .."

"ಕೇಳು, ಇನ್ನೂ ಸ್ವಾರಸ್ಯವಿದೆ ಗೋ ಪೀ ಜನನಯನಾಭಿರಾಮ ಶ್ರೀಕೃಷ್ಣನ ನ್ನು ಹೊಂದಲು ಮಾಣಿಕ್ಯದಂತಹ ಸಾ ಕಾರ ಭಕ್ತಿಯನ್ನು ತೊರೆದು ಬೂದಿಯಂ ತಹ ನಿರಾಕಾರ ಭಕ್ತಿಯ ಆಶ್ರಯವೇಕೆ?'

"ಓ ಹೋ ಹೋ....ಭಾರೀ ಚಲೋ ದಿದೆ. ಅಲ್ಲ, ಗೋಪೀ ಜನನಯನಾಭಿರಾ ಮ ಅಂದರೆ?'

"ಗೋಪಿಯರ ಕಣ್ಣುಗಳಿಗೆ ಸಂತೋಷ ವನ್ನುಂಟು ಮಾಡುವವ—"

"ಹ್ಞಾಂ...ಚಂದ ತೋರುವವ...."

'ಹಾಗೂ...."

"..........'

'ಏನು, ದುರುಗುಟ್ಟಿ ನೋಡುತ್ತಿ?"

"ಏನೂ ಇಲ್ಲ....ಹೀಗೇ ಏನೋ ನೋ ಡೋಣ ಅನ್ನಿಸಿತು ನನ್ನ ಮಾಣಿಕ್ಯವ ನ್ನು...'

'ನನ್ನ ಮಾತ್ರನ್ನ ನಾನೂ...'

'ಶ್ಯಾ...ನಿಲ್ಲಿ. ನೋಡಿ, ನಿಮ್ಮ ಈ ಕ ವಿತೆ ಚಂದವಿದೆ. ಇನ್ನೂ ಏಕೆ ಬರೀ ಬಾ ರದು?'

'ಅಯ್ಯೊ, ನನ್ನದಲ್ಲ ಇದು. ಕವಿತೆ ಬ ರೆಯೋಕನನಗೆಲ್ಲಿ ಬರುತ್ತೆ? ಇದು ಹಿಂದೀ ಸಾಹಿತ್ಯ ಸಾಮ್ರಾಟ ಸೂರದಾಸರದ್ದು....

ಪರವಾಗಿಲ್ಲ ..ನೀವು. ದಿನಾ ಒಂದೊಂ ದು ಗೀತೆ ಹೀಗೆ ಹೇಳಿದ್ರೆ ನಾನ ....'

'ಏನು ಕೊಡ್ತಿ... ?'

"ನೀವೆಲ್ಲಾ ಹೇಳಿಯಾದ ಮೇಲೆ ಒಂ ದೇ ಬಾರಿ ಭಾಂ ಕಾಣಿಕೆ ಕೊಡ್ತೇನೆ.... ಹ್ಞಾಂ....'

"ಆದ್ರೆ ನೋಡು. ಈಗ ನನಗೂ ಹೇ ಳೋಕೆ ಪುರ್ಸೊತ್ತಿಲ್ಲ; ಕೇಳೋಕೂ ನಿನ ಗಿಲ್ಲ...'

'ಹ್ಞಾಂ.....ಇಲ್ಲ, ಯಾವಾಗಾದ್ರೂ ಹೀಗೇ ಒಂದೊಂದು ಹೇಳ್ತಾ ಇರಿ...."

'ಅಯ್ಯೋ ಮಾಗಿನ ತುದೀಲಿ ಆ ಸೆಯ?"

"ಇಲ್ಲಿ ಹತ್ರ ಬನ್ನಿ...ನನಗೆ ಆಸೆಯಿ ರದೆ ಮತ್ಯಾರಿಗೆ...'

"ಛೆ....ಛೆ....ಛೆ..."

'ಶ್ಯಾ ....."

—ಗೋರಾ

ಕನ್ನಡ ಪುಸ್ತಕಗಳು

ಹೈಸ್ಕೂಲ್, ಹಯರ್ ಸೆಕಂಡರಿ ಸ್ಕೂಲ್, ಕಾಲೇಜು ಮೊದಲಾದುವುಗಳ ಯಾವತ್ತೂ ವಾಚಕ ಭಂಡಾರಗಳಿಗೆ ಉಪಯುಕ್ತವಾದ ಕರ್ನಾಟಕದ ವಿವಿಧ ಲೇಖಕರ ಕತೆ, ಕಾದಂಬರಿ, ಕವನ, ವಿಮರ್ಶೆ ಇತ್ಯಾದಿ

ಕನ್ನಡ ಪುಸ್ತಕಗಳು

ನಮ್ಮಲ್ಲಿ ದೊರೆಯುತ್ತವೆ.

ವಿವರವಾದ ಕೆಟಲಾಗಿಗೂ ವಿಶೇಷ ಸವಲತ್ತುಗಳಿಗೂ ಬರೆಯಿರಿ:

ನವಭಾರತ ಪುಸ್ತಕ ಭಂಡಾರ

ರಿಜಿಸ್ಟರ್ಡ್ ಪಬ್ಲಿಷರ್ಸ್

ಪಾಲುಕೋಟೆ, ಉಡುಪಿ

ನಿರ್ಭಯತೆಯ ಪಾಠ ಕಲಿಸಿದ

ಮಹಾ ಕ್ರಾಂತಿಕಾರ-ಗಾಂಧೀಜಿ

(ರಾಷ್ಟ್ರಪತಿ ಡಾ| ಎಸ್. ರಾಧಾಕೃಷ್ಣನ್‌ರ ಪ್ರಸಾರ ಭಾಷಣದಿಂದ)

ರಾಷ್ಟ್ರಪತಿ ಡಾ| ಎಸ್. ರಾಧಾಕೃಷ್ಣನ್ ಅವರು ಅಕ್ಟೋಬರ್ ಎರಡು ಗಾಂಧೀ ಜಯಂತಿಯ ಸಂದರ್ಭದಲ್ಲಿ ರಾಷ್ಟ್ರವನ್ನುದ್ದೇಶಿಸಿ ಆಕಾಶವಾಣಿ ದೆಹಲಿ ಕೇಂದ್ರದಿಂದ ಪ್ರಸಾರ ಭಾಷಣ ಮಾಡಿದರು. ಅವರ ಭಾಷಣದ ಪೂರ್ಣ ಪಾಠವನ್ನು ಇಲ್ಲಿ ಕೊಡಲಾಗಿದೆ.

೧೯೬೯ ಅಕ್ಟೋಬರ ಎರಡು, ಗಾಂಧೀಜಿಯವರು ಜನಿಸಿ ಒಂದು ನೂರು ವರ್ಷಗಳಾಗುತ್ತವೆ: ಆಗ ಇಡೀ ವಿಶ್ವದಾದ್ಯಂತ ಗಾಂಧೀಜಿ ಜನ್ಮ ಶತಾಬ್ದಿಯ ಅಂಗವಾಗಿ ಉತ್ಸವಗಳು, ಸಭೆ, ಸಮಾರಂಭಗಳು, ಪ್ರದರ್ಶನಗಳು ಮತ್ತು ವಿಚಾರಗೋಷ್ಠಿಗಳು ನಡೆಯುತ್ತವೆ. ಗಾಂಧೀಜಿಯವರ ಜನ್ಮಶತಾಬ್ದಿಯನ್ನು ಸಂಭ್ರಮದಿಂದ ಆಚರಿಸಲು ನಾವೀಗ ಸಿದ್ಧರಾಗಬೇಕಾಗಿದೆ.

ಗಾಂಧೀಜಿಯವರ ಜೀವನವು ಒಂದು ಆದರ್ಶವಾಗಿದೆ. ಇಡೀ ಮಾನವ ಜನಾಂಗದ ಆಶಾಕಿರಣವಾಗಿದೆ. ಗಾಂಧೀಜಿಯವರ ಜೀವನ ಮತ್ತು ಅವರ ಕಾರ್ಯದ ನೆನಪು ಮಾನವ ಕುಲಕ್ಕೆ ಅಮೂಲ್ಯ. ಸಂಶಯ ಹಾಗೂ ಅನಿಶ್ಚಿತತೆಯ ಇಂದಿನ ದಿನಗಳಲ್ಲಿ ಯುವಕ—ಯುವತಿಯರು ಅಸಂಬದ್ಧ ವಿಚಾರಗಳಿಗೆ ಮಾರು ಹೋಗಿ, ಶ್ರದ್ಧೆಯನ್ನು ಕಳೆದುಕೊಳ್ಳುತ್ತಿದ್ದಾರೆ.

ಗಾಂಧೀಜಿಯವರು ನಮ್ಮ ತಲೆಮಾರಿನ ಮಹಾಕ್ರಾಂತಿಕಾರರಾಗಿದ್ದರೆಂಬುದನ್ನು ಜ್ಞಾಪಿಸಿಕೊಳ್ಳುವುದು ಅಗತ್ಯ. ವಿಧಾನ ಮಂಡಲಿಗಳಲ್ಲಿ ನಡೆಯುವ ವಾಗ್ಯುದ್ಧ ಅಥವಾ ಬೀದಿಗಳಲ್ಲಿ ನಡೆಯುವ ಹಿಂಸಾಕೃತ್ಯಗಳಿಂದ, ಗಾಂಧೀಜಿ ಸಾಧಿಸ ಬಯಸಿದ ಬೃಹತ್ ಸಾಮಾಜಿಕ ಕ್ರಾಂತಿ ಸಾಧ್ಯವಾಗಲಾರದು.

ಗಾಂಧೀಜಿಯವರು ವೈಯಕ್ತಿಕ, ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟಗಳಲ್ಲಿ ಯಾವುದಕ್ಕಾಗಿ ಹೋರಾಡಿದರು? ಎಂಬುದನ್ನು ನಾವು ಅರಿತುಕೊಳ್ಳಬೇಕಾದದ್ದು ಅಗತ್ಯ. ಗಾಂಧೀಜಿಯವರು ಧಾರ್ಮಿಕ ವ್ಯಕ್ತಿಯಾಗಿದ್ದರು. ಅವರ ಅಭಿಪ್ರಾಯದಲ್ಲಿ ಧರ್ಮವೆಂದರೆ, ಅವಿಶ್ರಾಂತ ಸತ್ಯ ಶೋಧನೆಯಾಗಿತ್ತು. ಪ್ರೇಮದ ನಿರಂತರ ಅಭ್ಯಾಸವಾಗಿತ್ತು.

ಮೂವತ್ತು ವರ್ಷಗಳ ಹಿಂದೆ ನಾನು ಗಾಂಧೀಜಿಯವರನ್ನು ಧರ್ಮದ ಬಗ್ಗೆ ನಿಮ್ಮ ವಿಚಾರಗಳೇನು? ಎಂದು ಕೇಳಿದೆ. ಅವರು ತಮ್ಮ ಅಭಿಪ್ರಾಯ ವ್ಯಕ್ತಪಡಿಸುತ್ತ ಈ ರೀತಿ ಹೇಳಿದರು. "ಇತ್ತೀಚೆಗೆ, ದೇವರೇ ಸತ್ಯವೆಂದು ಹೇಳುವುದರ ಬದಲು, ಸತ್ಯವೇ ದೇವರು ಎಂದು ಹೇಳುತ್ತಿದ್ದೇನೆ."

ಸತ್ಯದಿಂದ ದೇವರನ್ನ ವರ್ಣಿಸಲು ಸಾಧ್ಯವಿದ್ದಂತೆ ಬೇರಾವುದರಿಂದಲೂ ಸಾಧ್ಯವಿಲ್ಲ. ದೇವರೇ ಇಲ್ಲವೆಂದು ಹೇಳುವವರನ್ನು ನಾವು ನೋಡಿದ್ದೇವೆ. ಆದರೆ ಸತ್ಯವೇ ಇಲ್ಲವೆಂದು ಹೇಳಿದವರನ್ನು ನೋಡಿಲ್ಲ. ಸತ್ಯಂ—ಜ್ಞಾನಂ, ಅನಂತ ಬ್ರಹ್ಮ, ಮುಂಡಕ ಉಪನಿಷತ್ತಿನಲ್ಲಿ ಈ ರೀತಿ ಹೇಳಲಾಗಿದೆ.

ಸತ್ಯಂ ಏವ ಜಯ ತೆ ನಾನೃತಂ
ಸತ್ಯೇನ ಪಂಥಾ ಏತತೋ ದೇವ–
ಯಾನಃ
ಯನಕ್ರಮಂತಿ ಋಷಿಯೋ ಆಪ್ತಾ-
ಕಾಮಾಃ
ಯತ್ರ ತತ್ ಸತ್ಯಸ್ಯ ಪರಮಂ
ನಿಧಾನಂ

ಸತ್ಯಮೇವ ಜಯತೇ. ಅಸತ್ಯಕ್ಕೆ ಎಂದಿಗೂ ಜಯವಾಗದು. ಸತ್ಯವೇ ದೇವರ ಬಳಿಗೆ ಹೋಗುವ ಮಾರ್ಗವನ್ನು ತೋರಿಸುತ್ತದೆ. ಈ ಮಾರ್ಗದಲ್ಲಿ ನಡೆದು ಋಷಿಗಳು ಸತ್ಯದ ಸಾಕ್ಷಾತ್ಕಾರವನ್ನು ಮಾಡಿಕೊಂಡರು.

"ಸತ್ಯವನ್ನು ನೀನು ಅರಿತುಕೋ. ಅದು ನಿನ್ನನ್ನು ಮುಕ್ತಗೊಳಿಸುತ್ತದೆ" ಎಂದು ಏಸು ಕ್ರಿಸ್ತ ಹೇಳಿದ್ದಾರೆ.

ವಾಸ್ತವತೆಯನ್ನು ಅರ್ಥ ಮಾಡಿಕೊಳ್ಳಲು ವಿಚಾರ ಶಕ್ತಿ ಅಗತ್ಯ. ಬುದ್ಧಾ ಶರಣಂ ಅನ್ವಿಚ್ಛ. ಆಳವಾದ ವಿಚಾರವೇ ಅಂತಿಮ ದೃಷ್ಟಿಯಲ್ಲಿ ಪರ್ಯವಸಾನಗೊಳ್ಳುತ್ತದೆ. ವಿವೇಕ ಬುದ್ಧಿಯಿಂದಾಗಿ ನಮ್ಮ ಜೀವನ ಸಫಲವಾಗುತ್ತದೆ.

ಅವನತಿಯ ಹಾದಿಯಲ್ಲಿ ನಾವು ಕೊನೆಯ ವರೆಗೂ ನಡೆಯುವುದು ಸಾಧ್ಯವಿಲ್ಲ. ಮಾನವನ ಚೇತನದಲ್ಲಿ ವಿಶ್ವಾಸವುಳ್ಳವರೆಲ್ಲರೂ ಮಾನವ ಕುಲದ ಭವಿಷ್ಯತ್ತಿನಲ್ಲಿ ವಿಶ್ವಾಸ ತಳೆದಿದ್ದಾರೆ. ಆಧ್ಯಾತ್ಮಿಕ ಸಂಘರ್ಷವನ್ನು ಎದುರಿಸದೇ ನಾವು ಸತ್ಯದ ಗುರಿಯನ್ನ ಸಾಧಿಸಲಾರೆವು. ಇದಕ್ಕೆ ಒಂದೇ ಒಂದು ಮಾರ್ಗವಿದೆ, ತಪಸ್ಸೇ ಆ ಮಾರ್ಗ. ಪ್ರತಿಯೊಬ್ಬನು ತನ್ನ ಮನಶುದ್ಧಿಗಾಗಿ ಯತ್ನಿಸಿದರೆ, ಇಡಿ ಜಗತ್ತೇ ಶುದ್ಧವಾಗುತ್ತದೆ.

ಗಾಂಧೀಜಿ ಅವರು ಇತರರ ಮೇಲೆ ಪ್ರಭಾವ ಬೀರುವ ಮೊದಲು ತಮ್ಮ ಮಾನಸಿಕ ಮತ್ತು ಹೃದಯ ಶುದ್ಧಿಯನ್ನು ಸಾಧಿಸುತ್ತಿದ್ದರು. ಅವರು 'ನಾನು ತಪ್ಪು ಮಾಡಲು ಸಾಧ್ಯವಿಲ್ಲ' ಎಂದು ವಾದಿಸಲಿಲ್ಲ. ಅವರು ಅನೇಕ ಸಲ 'ತಮ್ಮ ವ್ಯಕ್ತಿತ್ವವನ್ನು ಕುರಿತು ಪ್ರಸ್ತಾಪಿಸುತ್ತಾ, ನಾನು ಒಳಿತು — ಕೆಡುಕುಗಳು' ದೌರ್ಬಲ್ಯ ಹಾಗೂ ನ್ಯೂನತೆಗಳ, ಹಿಂಸೆ ಮತ್ತು ಅಹಿಂಸೆಗಳ ಸಮ್ಮಿಶ್ರಣವಾಗಿದ್ದೇನೆ. ಅಹಿಂಸೆಯಲ್ಲಿ ಇಂತಹ ಯಾವುದೇ ಮಿಶ್ರಣವಿಲ್ಲ ಎಂದಿದ್ದರು.

ಒಂದೇ ನಾಣ್ಯದ ಎರಡು ಮುಖಗಳು

ಸತ್ಯದ ಕ್ರಿಯಾಶೀಲ ರೂಪವೇ ಅಹಿಂಸೆಯೆಂದೂ, ಪ್ರೇಮವೆಂದೂ, ಹೇಳುತ್ತಾರೆ. ಸತ್ಯ ಹಾಗೂ ಅಹಿಂಸೆ ಸತ್ಯ ಮತ್ತು ಪ್ರೇಮ ಇವು ಒಂದೇ ನಾಣ್ಯದ ಎರಡು ಮುಖಗಳು. ಎಲ್ಲಾ ಮಹಾನ್ ಧರ್ಮಗಳೂ ಸಕಲ ಜೀವಿಗಳೊಂದಿಗೆ ಪ್ರೀತಿಯಿಂದ ನಡೆದುಕೊಳ್ಳಬೇಕಂದು ಬೋಧಿಸಿವೆ ಗಾಂಧೀಜಿಯವರು ಅಹಿಂಸೆ ನಿಷ್ಕಳಂಕವಾಗಿರಬೇಕೆಂದು ಹೇಳಿದ್ದಾರೆ. ಸರ್ವೋದಯವೇ ಅಹಿಂಸೆಯ ಗುರಿ.

ಅಸೂಯೆಯಿಂದ ಮತಿಭ್ರಮಣವಾಗುತ್ತದೆ. ಆದರಿಂದ ಮಾನವ ಜನಾಂಗದ ಬಗೆಗಿನ ನಮ್ಮ ನಮ್ಮ ಭಾವನೆಗಳ ಮೇಲೆ ಪರಿಣಾಮವಾಗುತ್ತದೆ. ಅಹಿಂಸೆ ಎಲ್ಲರ ಕಲ್ಯಾಣಕ್ಕಾಗಿ ನಮ್ಮನ್ನು ಸರ್ವೋದಯಕ್ಕೆ ಪ್ರೇರಿತಗೊಳಿಸುತ್ತದೆ. ಗಾಂಧೀಜಿಯವರು ಸ್ವರಾಜ್ಯದ ಸಮಾಜವಾದಿ ಸ್ವರೂಪವನ್ನು ಅರಿತುಕೊಂಡಿದ್ದರು. ಅವರು ಈ ಬಗ್ಗೆ ಪ್ರಸ್ತಾಪಿಸುತ್ತ "ಎಲ್ಲಿಯವರೆಗೆ ಯಾವುದೇ ಒಬ್ಬ ವ್ಯಕ್ತಿಯ ಕೈಯಲ್ಲಿ, ಅವನು ಎಷ್ಟೇದೊಡ್ಡವನಾಗಿರಲಿ ಕೋಟಿ ಕೋಟಿ ಜನರ ಜೀವನ, ಸಂಪತ್ತು ಹಾಗೂ ಗೌರವ ಕೇಂದ್ರೀಕೃತವಾಗಿರುವವೋ ಅಲ್ಲಿಯವರೆಗೆ ಭಾರತದಲ್ಲಿ ಸ್ವರಾಜ್ಯ ಸ್ಥಾಪನೆಯಾಗಲಾರದು. ಸ್ವರಾಜ್ಯ ಸಾಧನೆಗೆ ಮೊದಲು ಇದು ಕೊನೆಗೊಳ್ಳಬೇಕು." ಎಂದಿದ್ದಾರೆ.

ಅಸ್ಪೃಶ್ಯತಾ ನಿವಾರಣೆ

ಅಸ್ಪೃಶ್ಯತೆ ಒಂದು ಶಾಪವೆಂದು ಗಾಂಧೀಜಿ ಅವರು ಭಾವಿಸಿದ್ದರು. ಮತೀಯ ಗಲಭೆಗಳನ್ನು ಅವರು ವಿರೋಧಿಸುತ್ತಿದ್ದರು. ಎಲ್ಲ ಜನರು ದೇವರ ಎದುರಿಗೆ ಸಮಾನರಾಗಿದ್ದಾರೆ. ಬೇರೊಂದು ಧರ್ಮದವನೆಂಬ ಕಾರಣದಿಂದ ಯಾರಾದರೂ ಒಬ್ಬ ವ್ಯಕ್ತಿಯನ್ನು ಕೀಳಾಗಿ ಕಂಡರೆ, ಅವರು ದೇವರ ಮತ್ತು ಮಾನವರ ದೃಷ್ಟಿಯಲ್ಲಿ ಪಾಪ ಮಾಡಿದಂತೆ.

ಗಾಂಧೀಜಿ ಅವರ ಆಂದೋಲನದಿಂದ ಮಹಿಳಾ ಜಾಗೃತಿ ಸಾಧ್ಯವಾಯಿತು. ರಾಷ್ಟ್ರೀಯ ಸಮಗ್ರತೆ ಮತ್ತು ವಿಶ್ವದ ಐಕ್ಯತೆ ಗಾಂಧೀಜಿ ಅವರ ಎರಡು ಮುಖ್ಯ ಗುರಿಗಳಾಗಿದ್ದವು. ನಾವು ಗಾಂಧೀಜಿ ಅವರ ನಿಜವಾದ ಅನುಯಾಯಿಗಳಾಗಿದ್ದರೆ ಸಾಮಾಜಿಕ ಮತ್ತು ರಾಷ್ಟ್ರೀಯ ಸಮಗ್ರತೆಗಾಗಿ ಮಹಿಳಾ ಜಾಗೃತಿಗಾಗಿ, ಮತ್ತು ಪೂರ್ಣ ಸಾಮಾಜಿಕ ಸಮಾನತೆಗಾಗಿ, ಅಸ್ಪೃಶ್ಯತಾ ನಿವಾರಣೆಗೆ ಯತ್ನಿಸಬೇಕು.

ಸತ್ಯ ಮತ್ತು ಪ್ರೇಮ ಈ ಎರಡೇ ತತ್ವಗಳ ಮೇಲೆಯೇ ವಿಶ್ವದ ಎಲ್ಲಾ ಸಂಸ್ಕೃತಿಗಳೂ ಆಧಾರಿತವಾಗಿವೆ ಎಂದೂ ಗಾಂಧೀಜಿ ಹೇಳುತ್ತಿದ್ದರು. ವಿಶ್ವದ ಎಲ್ಲಾ ಜನರು ನಿಷ್ಠೆಯಿಂದ ಗಾಂಧೀಜಿಯವರ ಈ ಮಾತುಗಳನ್ನು ಒಪ್ಪಿಕೊಂಡರೆ, ರಾಷ್ಟ್ರ—ರಾಷ್ಟ್ರಗಳ ನಡುವೆ ನಿಕಟ ಸಂಬಂಧ ಏರ್ಪಡುವುದಲ್ಲದೆ, ನಮ್ಮ ಸುತ್ತಮುತ್ತಲೂ ಕವಿದ ಕತ್ತಲೂ ದೂರವಾಗುತ್ತದೆ.

ನಮ್ಮ ಸಂಸ್ಕೃತಿ ಇನ್ನೂ ಪೂರ್ಣವಾಗಿ ಉನ್ನತಿ ಸಾಧಿಸಲಿಲ್ಲ, ನಾವಿನ್ನೂ ಮಾನವ ಜನಾಂಗದ ಇತಿಹಾಸದ ಆರಂಭಿಕ ಕಾಲದಲ್ಲಿಯೇ ಇದ್ದೇವೆ. ದಿಕ್ಕು ತೋಚದೆ ಕತ್ತಲೆಯಲ್ಲಿ ತಡವರಿಸುತ್ತಿದ್ದೇವೆ. ಅನೇಕ ತಪ್ಪು—ಒಪ್ಪುಗಳಿಂದ, ದಿಗ್ಭ್ರಮೆಯಿಂದ ನಾವು ಪ್ರಗತಿ ಸಾಧಿಸಿದ್ದೇವೆ. ಇದು ಇತಿಹಾಸದ ಒಂದು ವಿರೋಧಾಭಾಸವೇ ಸರಿ. ನಮ್ಮಲ್ಲಿ ದೈವ ಶಕ್ತಿ ಮತ್ತು ಪಾಶವೀ ಶಕ್ತಿಗಳು ಸಮ-ಸಮವಾಗಿವೆ. ನಾವು ಪ್ರಗತಿ ಸಾಧಿಸಲು ಯತ್ನಿಸುತ್ತಿದ್ದೇವೆ. ಅಹಿಂಸಾತ್ಮಕ ಹಾಗೂ ರಚನಾತ್ಮಕ ಕಾರ್ಯಗಳ ಮೂಲಕವೇ ಸಾಮಾಜಿಕ ಹಾಗೂ ಆರ್ಥಿಕ ಪರಿವರ್ತನೆ ಸಾಧ್ಯವೆಂಬುದನ್ನು ನಾವು ಬಲ್ಲವರಾಗಿದ್ದೇವೆ. ಮೊದಲು ಈ ಗುರಿ ಸಾಧನೆಗಾಗಿ ಯುದ್ಧಗಳು ನಡೆಯುತ್ತಿದ್ದವೆಂಬುದು ನಮಗೆ ಗೊತ್ತಿದೆ.

ದೇಶ ವಿಭಜನೆಯಾ ಕಾಲದಲ್ಲಿ ಸಂಭವಿಸಿದ ನಷ್ಟವನ್ನು ಕಂಡು ಗಾಂಧೀಜಿ ಅವರಿಗೆ ಬಹಳ ದುಃಖವಾಯಿತು. ಅವರು ಚಿಂತಾಗ್ರಸ್ತರಾಗಿದ್ದರು. ಆದರೆ ಭಯಗೊಂಡಿರಲಿಲ್ಲ, ಏಕೆಂದರೆ ದೇವರಲ್ಲಿ ಅವರಿಗೆ ಅಚಲವಾದ ವಿಶ್ವಾಸವಿತ್ತು.

'ಭಯಪಡಬೇಡಿ. ಅಂಜಿದವರು ದ್ವೇಷಿಸುತ್ತಾರೆ. ದ್ವೇಷಿಸುವವರು ಕೊಲ್ಲುತ್ತಾರೆ. ನಿಮ್ಮ ಖಡ್ಗವನ್ನು ಮುರಿದು ಎಸೆದು

(ಹನ್ನೊಂದನೇ ಪುಟ ನೋಡಿರಿ)

ಸುವ್ಯವಸ್ಥಿತ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್
ವ್ಯವಹಾರಗಳಿಗೆ ತನ್ನ 62 ಶಾಖೆಗಳಿಂದ ಹಬ್ಬಿರುವ
"ವಿಜಯ ಬ್ಯಾಂಕಿ"ನಲ್ಲಿ ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 8% ವರೆಗಿನ ಬಡ್ಡಿ
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ಹೆ. ಆಫೀಸು—"ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—3

ಸೆಕ್ಯುಲರಿಸಂ ಎಂದರೇನು?

ಸದ್ಧರ್ಮದ ನಾಶ ಸರ್ವಥಾ ಅಲ್ಲ

ಬರೆದವರು : ಶ್ರೀ ಶಿವಶಂಕರ

ಜನರ ನಡುವೆ ಹೇಗಾದರೂ ಮಾಡಿ ಜಗಳ ತಂದು ಹಾಕಿ ತಮ್ಮ ಬೇಳೆ ಬೇಯಿಸಿಕೊಳ್ಳುವುದೆಂದರೆ ಕಮ್ಯೂನಿಸ್ಟರಿಗೆ ಎಲ್ಲಿಲ್ಲದ ಹಿಗ್ಗು. ಅದರಲ್ಲೂ ಈಗ ಚೈನಾದಲ್ಲಿ ಮಾವೋನ ಕೆಂಗಾವಲಿಗರೆಂಬ ಪಡೆಯವರು ನಡೆಸುತ್ತಿರುವ ಅಟ್ಟಹಾಸದ ಸುದ್ದಿಗಳನ್ನು ಕೇಳುತ್ತಿರುವ ಕಮ್ಯೂನಿಸ್ಟರ ಕೈ ತುರಿಸಲಾರಂಭವಾಗಿರುತ್ತದೆ. ಚಳ್ಳೆ ಹಣ್ಣಿನ ಬೀಜದ ಬಳಿ ಸ್ಪರ್ಧೆಗೆ ನಿಂತಿದ್ದ ಕಪಿಗಳಂತೆ ಇವರು ಚೈನೀ ಕೆಂಗಾವಲಿಗರ ಬಳಿ ಸ್ಪರ್ಧೆಗಿಳಿಯಲು ಸಮಯದತ್ತ ನೋಡುತ್ತಿದ್ದಾರೆ. ಅದಕ್ಕಾಗಿ ವಿದ್ಯಾರ್ಥಿಗಳನ್ನು ಹುರಿದುಂಬಿಸುತ್ತಿರುವದು ಮಾತ್ರವಲ್ಲ 'ಬಂದ್'ಬಂಬಡದೊಂದಿಗೆ ಪೋಲೀಸರ ಮೇಲೂ ದಾಳಿ ನಡೆಸಲಾರಂಭಿಸಿದ್ದಾರೆ. ಅದಕ್ಕೆ ಅವರು ಮುಂಬರುವ ಚುನಾವಣೆ ಹಾಗೂ ರಷ್ಯಾದ ಸಂಜ್ಞೆಗಾಗಿ ಕಾಯುತ್ತಿದ್ದಾರೆ. ಈ ವಿಷಯವನ್ನು ಗೃಹಮಂತ್ರಿ ಶ್ರೀ ಗುಲ್ಜಾರಿಲಾಲ್ ನಂದಾಜೀಯವರು ನುಣ್ಣನೆಯ ಮಾತುಗಳಲ್ಲಿ ಹೇಳಿ ತೋರಿಸಿದ್ದಾರೆ. ಬಹುಶಃ ಅವರು ಕೆಲ ಸಹಚಾರಿಗಳ ಪ್ರಬಲ ಒತ್ತಡಕ್ಕೆ ರವಾಗಿಸುವುದನ್ನು ನಿರಬೇಕಾಗಿರುತ್ತದೆ. ಇದರ ಲಾಭವನ್ನು ಧೂರ್ತ ಕಮ್ಯೂನಿಸ್ಟರು ಪಡೆಯುತ್ತಿದ್ದಾರೆ. ಅವರು ರಷ್ಯಾದ ಸಂಜ್ಞೆಗಾಗಿ ಕಾದುಕೊಂಡಿದ್ದಾರೆಂಬುದಕ್ಕೆ ಇಲ್ಲಿದೆ ಒಂದು ನಿದರ್ಶನ.

ರಾಜ್ಯ ಸಭೆಯಲ್ಲಿ ಕಮ್ಯೂನಿಸ್ಟರ ಮುಂದಾಳು ಶ್ರೀ ಭೂಪೇಶ ಗುಪ್ತರಾಡಿದ ಮಾತುಗಳು ಪತ್ರಿಕೆಗಳಲ್ಲಿ ಸ್ಥಳಪಡೆಯದೆ ಗುಪ್ತವಾಗಿರುವದಿಲ್ಲ. ಕಳೆದ ತಿಂಗಳಲ್ಲಿ ಅವರು ಒಂದು ಪಠ್ಯ ಪುಸ್ತಕದ ಕುರಿತು ರಾಜ್ಯ ಸಭೆಯಲ್ಲಿ ರಾದ್ಧಾಂತ ಮಾಡಿದರು. ಆ ಪಠ್ಯಪುಸ್ತಕವು ಉತ್ತರ ಪ್ರದೇಶದ ಕೆಲ ಶಾಲೆಗಳಲ್ಲಿ ಪಠ್ಯ ಪುಸ್ತಕವಾಗಿವೆ. ಅದರಲ್ಲಿ ಒಂದೆಡೆ ಸರಸ್ವತಿಯ ಕುರಿತು ಇದೆ. ಶ್ರೀ ಭೂಪೇಶ ಗುಪ್ತರವರಿಗೆ ಸಿಕ್ಕಿದ ಮೊಸರಿನಲ್ಲಿದ್ದ ಕಲ್ಲು ಇದುವೇ. ಸರಸ್ವತಿಯ ವಿಷಯ ಬಂತೆಂದರೆ ಕೆಲ ಕೋಮಿನವರಿಗೆ ಕೋಪ ಬರುತ್ತದೆ. ಆದುದರಿಂದ ಅದು ಸೆಕ್ಯೂಲರಿಸಮಿನ ಸರ್ವನಾಶದ ಆರಂಭವಾಗಿರುವದರಿಂದ ಅದನ್ನು ಒಡನೆ ಯಾತಕ್ಕೆ ಹಿಂದಕ್ಕೆ ತೆಗೆದುಕೊಳ್ಳುವಂತೆ ಉತ್ತರ ಪ್ರದೇಶದ ಸರಕಾರಕ್ಕೆ ಸೂಚನೆ ಕೊಡಕೂಡದೆಂಬುದೇ ಅವರ ಪ್ರಶ್ನೆ.

ಪ್ರಶ್ನೆ ಬಹಳ ಚಿಕ್ಕದೇ ಇದೆ. ಭಾರತೀಯ ಸಂಸ್ಕೃತಿಯ ಕುರಿತು ಒಂದು ಶಬ್ದ ಕಮ್ಯೂನಿಸ್ಟರ ಕಿವಿಗೆ ಬಿದ್ದರೂ ಸಾಕು, ತಟ್ಟನೆ ಅವರ ಕಿವಿ ನೆಟ್ಟಗಾಗುತ್ತದೆ— ನಾಲಗೆ ಉದ್ದವಾಗುತ್ತದೆ. ಇದೇನೂ ಹೊಸ ವಿಷಯವಿರುವದಿಲ್ಲ. ಇಂತಹದೇ ಒಂದು ವಿಷಯದ ವಿಷ ಬೀಜ ಬಿತ್ತಿ ಹಿಂದೆ ಜಬ್ಬಲ್‌ಪುರದಲ್ಲಿ ಜಗಳವೆಬ್ಬಿಸಿ ಅವರದರ ರುಚಿ ಕಂಡುಕೊಂಡಿದ್ದಾರೆ. ಆದರೆ ಅವರ ಇಂತಹ ಬಣ್ಣ-ಬಣ್ಣದ ಬಲೆಯಲ್ಲಿ ದೇಶದ ಆಡಳಿತ ಸೂತ್ರವನ್ನು ಹಿಡಿದುಕೊಂಡಿರುವ ಕಾಂಗ್ರೆಸ್ ಪಕ್ಷ ಬಹಳ ಸುಲಭವಾಗಿ ಬೀಳುತ್ತಿರುವದೇ ದುಃಖದಾಯಕ ವಿಷಯವಿದೆ; ಅಡಿಗಡಿಗೆ ಹಾಗಾಗುತ್ತಿರುವದರಿಂದ ಅದಿಂದು ಆಶ್ಚರ್ಯಜನಕ ವಿಷಯವಾಗಿರುವದಿಲ್ಲ. ಕಮ್ಯೂನಿಸ್ಟರ ಕುತಂತ್ರದಲ್ಲಿ ಅವರು ಯಾವಾಗಲೂ ಸಿಕ್ಕಿ ಬೀಳುತ್ತಿರುತ್ತಾರೆ ಮತ್ತು ಅವರಿಗೆ ಬುದ್ಧಿ ಬರುವದಾದರೋ ಕೆಟ್ಟ ಮೇಲೆಯೇ ಇದೆ. ಇದು ಇಂದಿನ ವಿಷಯ ಮಾತ್ರವಲ್ಲ ಹಿಂದಿನ ವಿಷಯವೂ ಇದೆ.

ರಾಜ್ಯಸಭೆಯಲ್ಲಿ ನಡೆದ ಈ ಕಪಟ ನಾಟಕಕ್ಕೆ ಮಾರು ಹೋದವರು ವಿದ್ಯಾಮಂತ್ರಿ ಶ್ರೀ ಮಹಮದ್ ಕರೀಂ ಛಗ್ಲಾರವರು. ವೈಯಕ್ತಿಕ ವಿಷಯವಾದಲ್ಲಿ ಯಾವ ವ್ಯಕ್ತಿಯೂ ಅದನ್ನು ವಿರೋಧಿಸುವಂತಿಲ್ಲವಾದರೂ ಅದು ದೇಶದ ಆಗು— ಹೋಗಿನ ವಿಷಯವಿದೆ ವಿನಃ ಶ್ರೀ ಛಗ್ಲಾರವರ ವೈಯಕ್ತಿಕ ವಿಷಯ ಇರುವದಿಲ್ಲ. (ಆ ವಿಷಯ ಇಲ್ಲಿ ಅನವಶ್ಯವೂ ಹೌದು) ಶ್ರೀ ಭೂಪೇಶಗುಪ್ತರ ಬೂಟಾಟಿಕೆಯ ಮಾತುಗಳಿಗೆ ಶ್ರೀ ಛಗ್ಲಾ ಚೆನ್ನಾಗಿ ಬಲಿಯಾದರು ಮತ್ತು ವಿದ್ಯೆಯ ಇಲಾಖೆ ಸಂಪೂರ್ಣ ಅವರ ಕೈಯ್ಯಲ್ಲಿ ಅಂದರೆ ಕೇಂದ್ರ ಸರಕಾರದಕೈಯಲ್ಲಿರುತ್ತಿದ್ದಲ್ಲಿ ಅವರು ಅಂದೇ, ಆದಾಗಲೇ, ಆ ಪುಸ್ತಕ ಇನ್ನು ಮುಂದೆ ಕಾಣಲು ಸಿಗದಂತೆ ಆಜ್ಞೆ ಹೊರಡಿಸುತ್ತಿದ್ದರು. ವಿದ್ಯೆಯ ವಿಷಯ ಪ್ರಾಂತ್ಯ (ರಾಜ್ಯ) ಸರಕಾರಗಳಿಗೆ ಸಂಬಂಧ ಪಟ್ಟದ್ದುದರಿಂದ ಶ್ರೀ ಭೂಪೇಶಗುಪ್ತ ಹಾಗೂ ಛಗ್ಲಾರವರ ನಡುವೆ ಪುಸ್ತಕ ಉಳಿದು ಕೊಂಡಿತು. ಆದರೆ ಆ ವಿಷಯದ ಕುರಿತು ವರದಿ ಅರ್ಪಿಸಲು ಒಂದು ಸಮಿತಿಯ ನೇಮಕ ಮಾಡಿರುವುದಾಗಿ ಶ್ರೀ ಛಗ್ಲಾರವರು ಶ್ರೀ ಭೂಪೇಶ ಗುಪ್ತರ ಕೋಪದ ಉಪಶಮನಕ್ಕೆ ಪ್ರಯತ್ನಿಸಿದರು. ಕಾಳ್ಗಿಚ್ಚಿಗೆ ಬಾಳೆಮರಗಳನ್ನು ಅಡ್ಡ ಹಾಕಿ ತಡೆಯಲು ಸಾಧ್ಯವೇ? ಶ್ರೀ ಭೂಪೇಶ ಗುಪ್ತರ ಪರಿಸ್ಥಿತಿ ಹಾಗಾಯಿತು. ಸಮಿತಿಯು ವರದಿಅರ್ಪಿಸುವ ತನಕ ಕಾಯದೆ ಒಡನೆ ಪುಸ್ತಕದ ಮೇಲೆ ನಿಬಂಧ ಹೇರಬೇಕೆಂದವರು ಒತ್ತಾಯ ಮಾಡಿದರು. ಅವರ ಪ್ರಯತ್ನಕ್ಕೆ ಫಲಸಿಗದಿದ್ದರೂ, ಅಂದರೆ ಕಮ್ಯೂನಿಸ್ಟರಿಗೆ ಜಯವಾಗದಿದ್ದರೂ, ಕಾಂಗ್ರೆಸ್ಸಿಗೆ ಇಲ್ಲಿ ನಿಶ್ಚಯವಾಗಿ ಸೋಲುಂಟಾಗಿರುತ್ತದೆ.

ವಿದ್ಯಾದೇವತೆ ಸರಸ್ವತಿಯ ಪೂಜೆಯು ಕ್ರಿಸ್ತೀಯ ಹಾಗೂ ಮುಸ್ಲಿಮರ ಕೈಯಲ್ಲಿರುವ ವಿದ್ಯಾರಂಗಗಳನ್ನು ಬಿಟ್ಟುಳಿದ ಹೆಚ್ಚಿನವಿದ್ಯಾಮಂದಿರಗಳಲ್ಲಿ ನವರಾತ್ರಿಯ ಸಮಯ ನಡೆಯುತ್ತದೆ. ಈ ಪೂಜೆ ಮಾಡಲು ಸ್ವಾತಂತ್ರ್ಯ ಸಿಕ್ಕಿದ್ದು ಆಗೋಸ್ಟ್ ಹದಿನೈದು, ೧೯೪೭ರಿಂದ ಅಲ್ಲ, ಬ್ರಿಟಿಷರ ದಬ್ಬಾಳಿಕೆಯ ಅಪಮಾನಕಾರಕ ದಸ್ಥಿತಿಯಲ್ಲಿ ಕೂಡಾ ಸರಸ್ವತಿ ಪೂಜೆ ಹೆಚ್ಚಾಗಿ ನಡೆದುಕೊಂಡು ಬಂತಿತ್ತು. ಪುಸ್ತಕಗಳನ್ನೋ, ಸರಸ್ವತಿಯ ಚಿತ್ರವನ್ನೋ ಪೂಜಿಸುವ ಬದಲು ಆ ಸ್ಥಳದಲ್ಲಿ ಮೇರಿಯ ಚಿತ್ರವನ್ನಿಡಲು ಕೆಲ ಕ್ರಿಸ್ತೀಯ ಮತ ಪ್ರಸಾರಕರ ಕೈಯಲ್ಲಿರುವ ಶಾಲೆಗಳಲ್ಲಿ ಪ್ರಯತ್ನ ನಡೆದಿದ್ದಿರಬಹುದು. ಹಾಗೆ ಸರಕಾರೀ ವಿದ್ಯಾಮಂದಿರಗಳಲ್ಲಿ ಅಲ್ಲಿಯ ಅಧಿಕಾರಿಗಳುಭಯಪಟ್ಟು ಹಿಂದಕ್ಕುಳಿದಿರಬಹುದು. ಸರಸ್ವತಿಪೂಜೆಯು ಕಾರಣವಾಗಿ ಶ್ರೀ ಜಯಪ್ರಕಾಶ ನಾರಾಯಣರಂತಹವರು ತಾವು ಕಲಿಯುತ್ತಿದ್ದ ವಿದ್ಯಾರಂಗಕ್ಕೆ ನಮಸ್ಕಾರ ಹೊಡೆಯುವ ದುಃಸ್ಥಿತಿಯೂ ಬಂದಿತ್ತು. ಆದರೆ ಇಂದು ಕಾಲ ಬದಲಾಗಿರುತ್ತದೆ. ಸ್ವಾತಂತ್ರ್ಯ ಸಿಕ್ಕಿದ ಮೇಲಂತೂ ಸೆಕ್ಯೂಲರಿಸಮಿನ ಹೆಸರಿನಡಿಯಲ್ಲಿ ಭಾರತೀಯತೆಯ ಅವಹೇಳನೆಗೆ ಆರಂಭವಾಗಿರುತ್ತದೆ. ಹಿಂದೆ ರಷ್ಯಾದಲ್ಲಿ ಈಗ ಚೈನಾದಲ್ಲಿ ನಡೆಯುತ್ತಿರುವಂತಹ ಮತೀಯ ಸ್ವೇಚ್ಛತೆಯ ಕಾರ್ಯ ಇಲ್ಲಿ ನಡೆಯುತ್ತಿದೆ. ಅದ್ಯಾಕೋ ಅವರಿಗ ಪಠ್ಯ ಪುಸ್ತಕಗಳಲ್ಲಿ ಶ್ರೀರಾಮ, ಶ್ರೀಕೃಷ್ಣ, ಶಿವಾಜಿ, ವಿವೇಕಾನಂದ, ಗುರು ಗೋವಿಂದಸಿಂಹ, ಛತ್ರಸಾಲ, ವಿದ್ಯಾರಣ್ಯ, ಕೆಂಪ್ಪ, ಕಟ್ಟಬೊಮ್ಮನ್ ಮುಂತಾದ ಹೆಸರುಗಳೇ ಬರಬಾರದ; ಅದರ ಬದಲು ಯೇಸು ಕ್ರಿಸ್ತ, ಮಹಮ್ಮದ, ಗಾಂಧಿ, ನೆಹ್ರೂ, ಲೆನಿನ್, ಇತ್ಯಾದಿ ಹೆಸರುಗಳೇ ಇರಬೇಕು. ಅಂದರೆ ನಾವು ಯಾವ ದಾರಿಯಲ್ಲಿ ಹೋಗುತ್ತಿದ್ದೇವೆನ್ನುವದನ್ನು ಅದು ಸೂಚಿಸುತ್ತದೆ;

ಅದರ ದುಷ್ಪರಿಣಾಮದ ತಾಂಡವ ನೃತ್ಯ ಇಂದು ನಡೆಯುತ್ತಿದೆ. ಅದನ್ನು ತಡೆಯುವದೆಂಬುದೇ ಸರಕಾರಕ್ಕೆ ಪ್ರಶ್ನೆಯಾಗಿ ಹೋಗಿದೆ; ಅದನ್ನು ಹತ್ತಿಕ್ಕಲು ಹವಣಿಸಿ ಕೈ ಸುಟ್ಟುಕೊಂಡಿದೆ. ಶ್ರೀ ಮಸುಭಾಗ ಸಿಂಘ, ಶ್ರೀ ಕೃಷ್ಣಮೆನನ್ ರಂತಹವರು ಕೂಡಾ ಸರಕಾರದ ನೀತಿಯನ್ನು ಖಂಡಿಸಿದ್ದಾರೆ. ಸದ್ಯಕ್ಕೆ ಇದಕ್ಕೆ ಉಪಶಮನದ ದಾರಿಯನ್ನು ಕಂಡು ಹಿಡಿಯಬಹುದಾದರೂ ಈ ಜ್ವಾಲಾಮುಖಿ ಇನ್ನೊಂದು ದಿನ ಸ್ಫೋಟಗೊಂಡಲ್ಲಿ ಆಶ್ಚರ್ಯವಾಗಲಿಕ್ಕಿಲ್ಲ. ಸದ್ಯದ ಆಡಳಿತ ವರ್ಗಕ್ಕೆ ಬೇಕಾಗಿರುವದಾದರೂ ಅಷ್ಟೇ—ಇಂದು ಇದೆ ಸಾಕು, ನಾಳೆಯ ವಿಷಯ ಬೇಕಾಗಿಲ್ಲ! ಇದು ನಮ್ಮ ದುರದೃಷ್ಟವಿಷ. ದೂರ ದೃಷ್ಟಿಯುಳ್ಳ ಆಡಳಿತ ವರ್ಗವು ಸೂತ್ರವನ್ನು ಕೈಯಲ್ಲಿ ತೆಗೆದುಕೊಳ್ಳುವವರೆಗೆ ಈ ಹೀನದೆಶೆ ತಪ್ಪಿದ್ದಲ್ಲ. ಕಮ್ಯೂನಿಸ್ಟರಿಗೂ ಅದು ಗೊತ್ತು. ಆದರೂ ಅವರು ತಮ್ಮ ಬೇಳೆಯನ್ನು ಬೇಯಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ.

ಸರಸ್ವತಿಯ ಪೂಜೆ ಹಾಗಿರಲಿ, ಸರಸ್ವತಿಯ ವಿಷಯ ಬಂದಲ್ಲಿ ಆಕೆಯ ಆರಾಧಕರಲ್ಲದವರಿಗೇ(!)ಕೋಪಬರುತ್ತದೆಂಬುದು ಕಮ್ಯೂನಿಸ್ಟರವಾದ. ಅದಕ್ಕೆ ತಲೆಯಲ್ಲಾಡಿಸಿದೆ— ಹೌದು ಬಸವಣ್ಣ. ಆದರೆ ಇತ್ತೀಚೆಗೆ ಚೈನಾದಲ್ಲಿ ಮುಸ್ಲಿಮರ ಮೇಲೆ ಅತ್ಯಾಚಾರ ನಡೆದಾಗ ಅದನ್ನು ಅದ್ಯಾವ ಕಮ್ಯೂನಿಸ್ಟನಾದರೂ ಖಂಡಿಸಿರುವನೇ? ಮಹಮ್ಮದೀಯರಿಗೆ ಅದು ಗೊತ್ತಿಲ್ಲವೆಂದಲ್ಲ. ಮಿಲ್ಲತ್ ಮುಂತಾದ ಸಂಸ್ಥೆಗಳು ಅಪಾಯದ ಕುರಿತು ಆದಾಗಲೇ ತಿಳಿಸಿವೆ. ಆದರೆ ಚೈನಾ ಮತ್ತು ಪಾಕಿಸ್ತಾನ ಚೆಲ್ಲಾಟವಾಡುತ್ತಿರುವದರಿಂದ ಇಲ್ಲಿಯ ಕಮ್ಯೂನಿಸ್ಟರೂ ಮುಸ್ಲಿಂಲೀಗಿನವರೂ ಕೈ ಹಿಡಿದುಕೊಂಡಿದ್ದಾರೆ. ಹಾಗಾದರೋ ಹಿಂದೂ ಧರ್ಮದ ವಿರೋಧಿಗಳು ಹಾಗೂ ಮುಸ್ಲಿಮರ ಸ್ನೇಹಿತರು, ಒಟ್ಟಿಗೆ ಸೇರಿ ಹಿಂದೂತ್ವದ ನಾಶಗೈದು ಬಿಡೋಣವೆಂದವರು ಒಂದಾಗಿದ್ದಾರೆ. ಪಾಪ! ಚರಿತ್ರೆಯಿಂದ ಅವರು ಕಲಿತುಕೊಂಡ ಪಾಠ ಅಷ್ಟೇ ಇದೆ!

ಉತ್ತರ ಪ್ರದೇಶದಲ್ಲಿ ಸರಸ್ವತಿಯ ಕುರಿತು ಪಠ್ಯ ಪುಸ್ತಕದಲ್ಲಿ ಇರುವ ಹಾಳೆಗಳನ್ನು ಹರಿದು ಹಾಕಬೇಕೆಂದು ಕಮ್ಯೂನಿಸ್ಟರು ಕೇಳಿಕೊಂಡಲ್ಲಿ, 'ಸರಿ'ಯೆನ್ನದೆ ಬಿಡಲಿಕ್ಕಿಲ್ಲ ಹೆಚ್ಚಿನ ಕಾಂಗ್ರೆಸ್ಸಿಗರು. ರಾಜ್ಯ ಸಭೆಯಲ್ಲಿ ನಡೆದುದಾದರೂ ಏನು? ಇವರ ಹಳೆಯ ಅಭ್ಯಾಸದ ಪರಿಚಯವನ್ನೇ ಮಾಡಿಕೊಡುತ್ತದೆ. ಹಿಂದೂ ವಿರೋಧಿ ಮನೋಭಾವನೆಯಿದೆನ್ನದೆ ವಿಧಿಇಲ್ಲ. ಯಾಕೆಂದರೆ ಅಸ್ಸಾಮಿನ ಕೆಲಪ್ರದೇಶಗಳಲ್ಲಿ ರಾಮಕೃಷ್ಣ ಮಿಶನಿನವರು ಶಾಲೆಗಳ

(ಹನ್ನೊಂದನೇ ಪುಟ ನೋಡಿರಿ)

Advertise in

Navayuga

Deepavali Special 1966

&

get best value for your money.

ಸಮೀಪಿಸುತಿದೆ ದೀಪಾವಳಿ!

ಮನೆ ಮನೆಗಳಲಿ ದೀಪ ಬೆಳಗಲಿದೆ!

ಹೊರಡಲಿದೆ ನವಯುಗದ ದೀಪಾವಳಿ ಸಂಚಿಕೆ!

ಮನ ಮನಗಳಲಿ ಜ್ಞಾನದೀಪ ಬೆಳಗಲಿದೆ!

ಕರ್ನಾಟಕದ ವಿವಿಧ ಬರಹಗಾರರಿಂದ, ವೈವಿಧ್ಯಪೂರ್ಣ ಲೇಖನಾದಿಗಳಿಂದ ಕೂಡಿ ತಾ. 10-11-1966ಕ್ಕೆ ವಾಚಕರ ಕೈಸೇರಲಿದೆ ದೀಪಾವಳಿ ಸಂಚಿಕೆ.

ಅಖಿಲ ಕರ್ನಾಟಕದಲ್ಲಿ ಪ್ರಸಾರವಾಗುವ ನವಯುಗ ದೀಪಾವಳಿ ಸಂಚಿಕೆ ಜಾಹೀರಾತಿಗೆ ಸುವರ್ಣ ಮಾಧ್ಯಮ.

ಜಾಹೀರಾತು ಕೊಡುವವರು ಜಾಹೀರಾತನ್ನು ಅಕ್ಟೋಬರ ಅಂತ್ಯದೊಳಗೆ ಕಳುಹಿಸುವಂತೆ ಅಪೇಕ್ಷಿಸಲಾಗಿದೆ.

ಮೆನೇಜರ್

ನವಯುಗ, ಉಡುಪಿ

ಕವಲು ದಾರಿ—ಕೆಂಪು ದೀಪ

ಸೇವಕರು ಕಾರ್ಮಿಕರಾದರೆ?

ತಪ್ಪು ಮಾಡುವುದು ಮನುಷ್ಯ ಸ್ವಭಾವ, ತಾನು ಮಾಡಿದ್ದು ತಪ್ಪೆಂದು ತಿಳಿದ ನಂತರ ಅದನ್ನು ತಿದ್ದಿಕೊಳ್ಳುವುದು, ಮುಂದೆಂದೂ ಅಂತಹ ತಪ್ಪುಗಳನ್ನು ಮಾಡದಿರುವುದೂ ಆತನ ಮಹಾನತೆಯ ಗುಣ.

ನಮ್ಮ ಪರಿಸ್ಥಿತಿ ಹೇಗಿದೆ?

ಒಂದು ತಪ್ಪು ಮಾಡುತ್ತೇವೆ, ತಿದ್ದಲು ಹೋಗಿ ಮತ್ತೆ ಮತ್ತೆ ತಪ್ಪಿನ ಕೆಸರಲ್ಲಿ ಹೂತು ಹೋಗುತ್ತೇವೆ.

ಈ ಕಾರಣದಿಂದಲೇ ಇರಬೇಕು— ರಾಜ್ಯ ಸರಕಾರವು ರೂಪಿಸಿದ ಹಲವಾರು ಆಜ್ಞೆಗಳು ಹೈಕೋರ್ಟಿನ ಮುಂದೆ ನಿಂತು ಬಿದ್ದು ಹೋಗುವಂತಹ ಪರಿಸ್ಥಿತಿ ಬಂತು; ಮುಂದೆಯೂ ಬರಬಹುದು.

ಇದಕ್ಕೆ ಬೇರೆಯೇ ಕಾರಣವನ್ನು ಮುಂದೆ ಮಾಡುವವರೂ ಇದ್ದಾರೆ. ಕಾನೂನು ತಜ್ಞರ ಕೈಯಲ್ಲಿ ಅಧಿಕಾರ ಸೂತ್ರವಿದ್ದರೆ ಮಾತ್ರ ಕಾನೂನುಗಳು ಸರಿಯಾಗುವುವಂತೆ.

ಆದರೆ, ಇದರಲ್ಲಿ ಪೂರ್ಣ ಸತ್ಯಾಂಶವಿದೆಯೆಂದು ಹೇಳಲು ಧೈರ್ಯಸಾಲದು. ಯಾವುದೇ ಕ್ರಮ ಕೈಗೊಳ್ಳುವುದಕ್ಕೆ ಬೇಕಾದುದು ಪೂರ್ವಾಪರ ವಿವೇಚನಾ ಶಕ್ತಿ ಮತ್ತು ದೂರದರ್ಶಿತ್ವ.

ಮುಖ್ಯ ಮಂತ್ರಿ ನಿಜಲಿಂಗಪ್ಪನವರು ರಾಜ್ಯದ ಎನ್ ಜಿ ಓಗಳ ಅಕ್ಟೋಬರ ೬ರಂದಿಗೆ ನಿಯೋಜಿಸಲಾದ ಸಾಮೂಹಿಕ ರಜಾ ಕಾರ್ಯಕ್ರಮಕ್ಕೆ ದಂಗಾದರು.

ಕಾನೂನಿನ ಬಲದಿಂದಲೇ ಅದನ್ನು ಮಟ್ಟಿ ಹಾಕುವ ಧೈರ್ಯ ಅವರಲ್ಲಿ ಮೂಡಿದ್ದರೂ ಇರಬಹುದು, ಧೈರ್ಯ ತುಂಬಿದವರೂ ಇರಬಹುದು — ಸೇವಾ ನಿಯಮಗಳಿಗೆ ತಿದ್ದುಪಡಿ ಆಜ್ಞೆ ಜಾರಿಗೆ ಬಂತು.

ಎನ್ ಜಿ ಓಗಳು ಬಿಡಲಿಲ್ಲ. ಮನೆಗೆ ಬೆಂಕಿ ಬಿದ್ದಾಗ ಯಜಮಾನ ಹೇಗೆ ಚಡಪಡಿಸುತ್ತಾನೆಂಬುದು ಅವರಿಗೆ ಸರಿಯಾಗಿ ಗೊತ್ತು. ಹಸಿದ ಹೊಟ್ಟೆಯೇನು ಮಾಡಲು ಹಿಂಜರಿಯುತ್ತದೆ?

ಮುಂದೆ ಮಾತುಕತೆಯ ಯೋಜನೆಯನ್ನು ಮುಂದಿಟ್ಟರು.

ಎನ್ ಜಿ ಓಗಳು ಸರಿಯಾಗಿಯೇ ನಡೆದು ಕೊಂಡರು—ಮಾತುಕತೆ ನಡೆಯಿತು—ಅಕ್ಟೋಬರ ೬ರ ಸಾಮೂಹಿಕ ಕ್ರಮ ನಿಂತಿತು.

ಎರಡನೆ ಸುತ್ತಿನ ಮಾತುಕತೆ—ವೇತನ ಆಯೋಗದ ನೇಮಕ ಮಾಡಲು ಮುಖ್ಯ ಮಂತ್ರಿಯವರು ಒಪ್ಪಿ ತಮ್ಮ ಉದಾರತೆಯನ್ನು ತೋರಿದರು. ನಿಜ. ಆದರೆ, ಅದರಿಂದ ಪರಿಣಾಮ?

ಎನ್ ಜಿ ಓಗಳ ಬೇಡಿಕೆಗಳಲ್ಲಿ ಅರ್ಥಕ್ಕೆ ಸಂಬಂಧಿಸಿದುವು ಮೂರು.

ಕೇಂದ್ರ ಸರಕಾರದ ದರದಲ್ಲಿ ತುಟ್ಟಿ ಭತ್ತೆ, ಮನೆ ಬಾಡಿಗೆ ಭತ್ತೆ ಮೊದಲಾದುವನ್ನು ಕೊಡಬೇಕು, ವೇತನ ಆಯೋಗದ ರಚನೆಯಾಗಬೇಕು, ನಡುವೆ ತಾತ್ಕಾಲಿಕ ಪರಿಹಾರ ಕೊಡಬೇಕು.

ರಾಜ್ಯದ ಸದ್ಯ ಹಣಕಾಸಿನ ಪರಿಸ್ಥಿತಿಯಲ್ಲಿ ತಾತ್ಕಾಲಿಕ ನೀಡುವುದು ಸಾಧ್ಯವಿಲ್ಲ- ಇದು ನಿಜಲಿಂಗಪ್ಪನವರ ಖಂಡತುಂಡ ಉತ್ತರ.

ಉತ್ತರದ ಖಂಡತುಂಡತೆಗೆ ಮೆಚ್ಚಬೇಕು. ಆದರೆ, ಒಂದು ಪ್ರಶ್ನೆ—

ತಾತ್ಕಾಲಿಕ ಪರಿಹಾರ ನೀಡುವುದಕ್ಕೂ ಅನುಕೂಲವಿಲ್ಲದ ರಾಜ್ಯದ ಹಣಕಾಸಿನ ಸ್ಥಿತಿಗತಿ ವೇತನ ಆಯೋಗದ ವರದಿ ಬರುವ ಹೊತ್ತಿಗೆ ಹೇಗೆ ಸುಧಾರಿಸಬಲ್ಲುದು?

ಇಂದು ವಾಮನನಾಗಿರುವವನು ಕೆಲ ಸಮಯದಲ್ಲಿ ತ್ರಿವಿಕ್ರಮನಾಗುವನೆ? ಅಥವಾ ಅಲ್ಲಾವುದ್ದೀನನ ದೀಪವನ್ನು ಆಯಾತ ಮಾಡಿಕೊಳ್ಳುವ ಯೋಜನೆಯೆ?

ಇಲ್ಲವೆ, ಮುಂದಿನ ಚುನಾವಣೆಗಳ ಹಿನ್ನೆಲೆಯಲ್ಲಿ ಸಮಾಧಾನ ಪಡಿಸಲು ಮಾತ್ರ ಈ ಬಗೆಯ ಕ್ರಮವೆ?

ಇಷ್ಟೆ ಇನ್ನೂ ಒಂದು ಪ್ರಶ್ನೆ. ಇದೀಗ ಆಹಾರ ಮಂತ್ರಿಯಾಗಿರುವ ಬಿ. ಡಿ. ಜತ್ತಿಯವರು ಅರ್ಥಮಂತ್ರಿಯಾಗಿದ್ದ ಕೊನೆಯ ದಿನಗಳಲ್ಲಿ ರಾಜ್ಯ ನೌಕರರ ವೇತನವನ್ನು ಮದ್ರಾಸ್ ರಾಜ್ಯನೌಕರರ ವೇತನಕ್ಕಿಂತ ಎಲ್ಲಿ ಕಡಿಮೆಯಿದೆಯೋ ಅಲ್ಲಿ ಅದರ ಸಮಾನತೆಗೆ ತರುವುದಾಗಿ ಘೋಷಿಸಿದ್ದರು; ಒಂದು ಸಮಿತಿಯೂ ಇದಕ್ಕಾಗಿ ರಚನೆಗೊಂಡಿತ್ತು.

ಮುಂದೆ ಜತ್ತಿ ಆಹಾರ ಪೂರೈಸಲು ನಿಂತರು. ಹೆಗ್ಗಡೆಯವರೂ ಈ ಸಂಬಂಧದಲ್ಲಿ ತೀವ್ರ ನಿರ್ಧಾರಕ್ಕೆ ಬರುವುದಾಗಿ ಹೇಳಿರುವಂತೆ ನೆನಪು.

ಇದಾಗಿ ಸುಮಾರು ಮೂರು ವರ್ಷಗಳೇ ಕಳೆಯುತ್ತ ಬಂದಿವೆ. ಆದರೆ ಯಾರೊಬ್ಬರೂ ಈ ಬಗ್ಗೆ ಮಾತಾಡುತ್ತಿಲ್ಲ.

ಎನ್. ಜಿ ಓಗಳಿಗೆ ಈ ಸಮಿತಿಯ ವರದಿಯಲ್ಲಿ ಆಸಕ್ತಿ ಇಲ್ಲ—ಏಕೆ? ಲಾಭಕರವಿಲ್ಲ.

ಸರಕಾರಕ್ಕೆ?

ಆದು ಈ ಸಮಿತಿಯ ವರದಿ ನೋಡಲೇ ತಂಪಿಕೆಂಡು ಏನಾದರೂ ಕೊಟ್ಟಂತೆ ಮಾಡಿದ್ದರೆ, ಎನ್ ಜಿ ಓಗಳ ಈ 'ನೇರಕ್ರಮ'ವೇತನ ಆಯೋಗನೇಮಕವನ್ನು ತನ್ನನ್ನು ತುಸವಾದರೂ ಮುಂದೆ ಹಾಕಬಹುದಿತ್ತೋ ಏನೋ....

ಎಲ್ಲರೂ ಇಂದು ಯೋಚಿಸಬೇಕಾದ ಸಂಗತಿಯೊಂದು:

ರಾಜ್ಯ ಸರಕಾರವು ಜನಸೇವೆಗಾಗಿ ಇರುವುದು. ಲಾಭಗಳಿಸುವುದಕ್ಕಾಗಿಯಲ್ಲ— ಅದು ಔದ್ಯಮಿಕ ಸಂಸ್ಥೆಯಲ್ಲ; ಅದರ ನೌಕರರು ಕಾರ್ಮಿಕರಲ್ಲ.

ರಾಜ್ಯಸರಕಾರದ ನೌಕರರೂ ಅಧ್ಯಾಪಕರೂ ಕಾರ್ಮಿಕರಂತೆ ನೇರಕ್ರಮ ಕೈಗೊಳ್ಳಲು ಮುಂದಾಗುವಂತಹ ಪರಿಸ್ಥಿತಿ ತಲೆದೋರುತ್ತಿರುವುದು ನಮ್ಮ ದುರದೃಷ್ಟ. ಪಾಯಸದಲ್ಲಿ [illegible].

ಇದಕ್ಕೆ ಅವಕಾಶ ನೀಡಿದರೆ, ಅರಾಜಕತೆ ಮಾಡಿದಂತೆ—

ಸರಕಾರ ಇದನ್ನು ಯೋಚಿಸಬೇಕು; ನೌಕರರೂ ಕಡೆಗಣಿಸಬಾರದು.

ಮಹಾತ್ಮರ ಅಭಿಪ್ರಾಯ
ಶರೀರ ದುಡಿಮೆಗೆ!

ಗಾಂಧಿಜಿಯವರು ಎಂದೂ ವಿಶ್ರಾಂತಿ ತೆಗೆದುಕೊಳ್ಳುತ್ತಿರಲಿಲ್ಲ. ಹಬ್ಬ ಹರಿದಿನ, ಸೂಟಿ, ರವಿವಾರ ಯಾವುದನ್ನೂ ಅವರು ಲಕ್ಷಿಸುತ್ತಿರಲಿಲ್ಲ. ಅವರು ಯರವಾಡಾ ಜೈಲಿನಲ್ಲಿ ಇದ್ದಾಗ ಅವರ ಮೇಲೆ ಒಬ್ಬ ಏಡನ್ನಿನ ಸೋಮಾಲಿ ಜಾತಿಯ ಕಾವಲುಗಾರನನ್ನು ಇರಿಸಿದ್ದರು. ಅವನಿಗೆ ಹಿಂದೀ, ಇಂಗ್ಲಿಷ್ ಯಾವ ಭಾಷೆಯೂ ಬರುತ್ತಿರಲಿಲ್ಲ. ಅವನು ಗಾಂಧಿಯವರ ಮೇಲೆ ಕಟ್ಟುನಿಟ್ಟಾಗಿ ಕಾವಲು ಇರಿಸುತ್ತಿದ್ದ.

ಆದರೆ ಗಾಂಧಿಯವರೇನೂ ಸಾಮಾನ್ಯ ಕೈದಿಯಾಗಿರಲಿಲ್ಲ. ಅವರು ವಾಡಿಕೆಯಂತೆ ನಸುಕಿನಲ್ಲಿ ಏಳುತ್ತಿದ್ದರು. ಪ್ರಾರ್ಥನೆ ಮಾಡುತ್ತಿದ್ದರು. ನೂಲುತ್ತಿದ್ದರು. ಮತ್ತು ಅಧ್ಯಯನ ಮಾಡುತ್ತಿದ್ದರು. ಇಂಥ ಕೈದಿಯನ್ನು ಆ ಸೋಮಾಲಿ ಎಂದೂ ಕಂಡಿರಲಿಲ್ಲ. ಅವರೊಡನೆ ಅವನ ವರ್ತನವು ದಿನ ದಿನಕ್ಕೆ ಸೌಮ್ಯವಾಗುತ್ತ ನಡೆಯಿತು. ಗಾಂಧಿಯವರೊಡನೆ ಪ್ರಾರ್ಥನೆಯಲ್ಲೂ ಕೂಡ್ರ ಹತ್ತಿದ. ಅವರು ನೂಲುವದನ್ನು ನೋಡುತ್ತ ನಿಲ್ಲ ಹತ್ತಿದ.

ಒಮ್ಮೆ ಗಾಂಧಿಯವರಿಗೆ ನೆಗಡಿಯಾಯಿತು. ಆದರೂ ಅವರು ನಿತ್ಯದಂತೆ ನಸುಕಿನಲ್ಲಿ ಏಳುತ್ತಿದ್ದರು. ಪ್ರಾರ್ಥನೆ ಮಾಡುತ್ತಿದ್ದರು. ಮತ್ತು ಓದುತ್ತಾ ಇದ್ದರು. ಇದೆಲ್ಲ ಕಂಡು ಆ ಸೋಮಾಲಿಗೆ ಅಚ್ಚ

(ಹತ್ತನೇ ಪುಟ ನೋಡಿರಿ)

ಸಿಂಡಿಕೇಟ್ ಬ್ಯಾಂಕು

ತನ್ನ ನವದೆಹಲಿ — ಕನಾಟ್ ಸರ್ಕಸ್ ಶಾಖೆಯನ್ನು

ಸುಪರ್ ಬಜಾರ್,
ಕನಾಟ್ ಸರ್ಕಸ್,
ನವದೆಹಲಿ—I

ಎಂಬಲ್ಲಿ ಅಕ್ಟೋಬರ್ 19, 1966ರಂದು ತೆರೆದಿದೆಯೆಂದು ತಿಳಿಸಲು ಹರ್ಷ ಪಡುತ್ತದೆ.

ಬ್ಯಾಂಕಿನ ಇನ್ನೊಂದು ಹೊಸ ಶಾಖೆಯು

712, ಖಾರೆವಾಡೆ,
ನಾರಾಯಣ ಪೇಟ್,
ಲಕ್ಷ್ಮೀ ರೋಡ್,
ಪೂನಾ

ಎಂಬಲ್ಲಿ ಅಕ್ಟೋಬರ್ 28, 1966ರಂದು ತೆರೆಯಲ್ಪಡುವುದು.

ವ್ಯಾಪಕ ಪ್ರಮಾಣದ ಪರಿಪೂರ್ಣ ಆರ್ಥಿಕ ಸೇವೆಗೆ

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಜಿಸ್ಟರ್ಡ್ ಆಫೀಸು ಮಣಿಪಾಲ, ಮೈಸೂರು ರಾಜ್ಯ.

In the Court of the Principal Munsiff, Puttur, S. K.

S. C 172/66

Between:

Abdulrahiman Beary... Plaintiff

vs

Achutha Maniyani, N/o Kuranja Narayana Maniyani, Residing at Kuranja, Aryadka Village, Post Kumba (S K.)...Defendant.

Please take notice that the above suit filed against you stands posted to 26—10—1966 for your appearance. If you fail to appear in Court at 11-00 A. M on that day, the same will be decided in your absence.

(By order of Court)

K. P. Abdullah
Advocate for Plaintiff.

Puttur, S K. Date 12-10-66.

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

S. C. 435/1966

ವಾದಿ— A ಜಗನ್ನಾಥ ಶೆಟ್ಟಿ.

ಪ್ರತಿವಾದಿಗಳು— ಮೊಗೇರ ವೆಂಕಟ ಸಹಾ ಸದ್ರಿ ದಾವೆಯ 1ನೇ ಪ್ರತಿವಾದಿ.

ಮೊಗೇರ ವೆಂಕಟ, ಚಿಕ್ಕಮ್ಮ ಹೆಂಗ್ಸಿನ ಮಗ ಕುಂದಾಪುರ ತಾಲ್ಲೂಕ ಪಡುವರಿ ಗ್ರಾಮದ ದೊಂಬೆ — ಇವರಿಗೆ

ವಾದಿಯು ನಿಮ್ಮ ಮೇಲೆ ಬರತಕ್ಕ ಬಾಲಗೇಣಿ ಗೇಣಿ ಬಾಕಿ ಬಗ್ಗೆ ಮಾಡಿದ ಮೇಲ್ಕಂಡ ದಾವೆಯು ನಿಮ್ಮ ಹಾಜರಾತಿ ಬಗ್ಗೆ ತಾರೀಕು 8-11-66 ಕ್ಕೆ ಇಟ್ಟಿರುತ್ತದೆ. ಈ ಬಗ್ಗೆ ನಿಮ್ಮ ಆಕ್ಷೇಪಣೆಯಿದ್ದಲ್ಲಿ ಸದ್ರಿ ದಿವಸ ಈ ಕೋರ್ಟಿನ ಮುಂದೆ ಹಗಲು 11 ಗಂಟೆಗೆ ಹಾಜರಾಗತಕ್ಕದ್ದು. ತಪ್ಪಿದಲ್ಲಿ ದಾವಾಯೇಕಪಕ್ಷವಾಗಿ ತೀರ್ಮಾನಿಸಲ್ಪಡುವುದೆಂದು ತಿಳಿದಿರಲಿ.

(ಕೋರ್ಟ ಹುಕುಂ ಪ್ರಕಾರ)

ಎ. ರಾಜೀವ ಶೆಟ್ಟಿ,
ಬಿ. ಎ.; ಬಿ. ಎಲ್.,
ವಾದಿಯವರ ವಕೀಲರು,

ಕುಂದಾಪುರ, 11-10-1966.

ನಿಸರ್ಗವು ಭಾರತ ದೇಶಕ್ಕೆ ರಮಣೀಯ ವನಶ್ರೀಯನ್ನು ಕರುಣಿಸಿದೆ, ಸ್ಪೃಹಣೀಯ ವನ್ಯಪ್ರಾಣಿ ಸಂಪತ್ತನ್ನು ದಯಪಾಲಿಸಿದೆ. ಆಫ್ರಿಕ ಖಂಡವನ್ನುಳಿದು ಪ್ರಪಂಚದ ಇನ್ನಾವ ಭಾಗದಲ್ಲೂ ಕಂಡು ಬರುವಂತಹ ಪ್ರಮಾಣದಲ್ಲಿ ವನ್ಯ ಪಶುಗಳು ಕಾಣಸಿಗುವದಿಲ್ಲ. ಎಷ್ಟು ವೈವಿಧ್ಯ ರೀತಿಯ ವನ್ಯ ಪಶುಗಳು ಭಾರತದಲ್ಲಿ!

ಬಗೆಬಗೆಯ ಮೀನುಗಳು, ಹೊಟ್ಟೆ ಹೊಸೆಯುತ್ತ ಸರಿದಾಡುವ ಅನೇಕ ಜಾತಿಯ ಹಾವು ಮುಂತಾದ ಜಂತುಗಳು ನಮ್ಮ ದೇಶದಲ್ಲಿ ಹೇರಳವಾಗಿ ದೊರಕುತ್ತವೆ. ಐದುನೂರರಷ್ಟು ವಿವಿಧ....ಸ್ತನಪಾಯಿ ಪ್ರಾಣಿಗಳೂ ಎರಡು ಸಾವಿರದಷ್ಟು ಬೇರೆ ಬೇರೆ ಜಾತಿಯ ಪಕ್ಷಿಗಳೂ, ಮೂರು ಸಾವಿರಕ್ಕೂ ಮಿಕ್ಕಿ ವಿವಿಧ ಬಗೆಯ ಹುಳುಹುಪ್ಪಡಿಗಳು ನಮ್ಮ ನಾಡಿನಲ್ಲಿವೆ. ದಿವಂಗತ ಪ್ರಧಾನಿ ಜವಾಹರಲಾಲ್ ನೆಹರೂರವರ ಶಬ್ದಗಳಲ್ಲಿ ಹೇಳುವುದಾದರೆ— "ಈ ಭವ್ಯ ಮತ್ತು ಸುಂದರ ಪಕ್ಷಿ-ಪ್ರಾಣಿಗಳು ನಮ್ಮ ಬಳಿಯಲ್ಲಿಲ್ಲದಿದ್ದರೆ ನಮ್ಮ ಬದುಕು ತೀರ ನಿಸ್ತೇಜವಾಗುತ್ತಿತ್ತು; ಕಾಂತಿರಹಿತವೆನಿಸುತ್ತಿತ್ತು."

ಪಕ್ಷಿ—ಪ್ರಾಣಿ ಸಂಕುಲದ ಶ್ರೀಮಂತ ಬಳುವಳಿ ನಮಗೆ ಈ ವರೆಗೂ ಉಳಿದು ಬಂದಿದ್ದರೆ, ಅದಕ್ಕೆ ಭಾರತೀಯ ಸಂಪ್ರದಾಯದಲ್ಲಿ ಪ್ರಾಣಿಗಳ ಬಗ್ಗೆ ಇದ್ದ ಪ್ರೀತಿಯೂ, ಅಹಿಂಸೆಯ ನೀತಿಗಳೇ ಕಾರಣವಾಗಿವೆ. ಯಜುರ್ವೇದದ ಒಂದು ಋಕ್ ಹೇಳುವದೇನೆಂದರೆ, 'ಯಜಮಾನಸ್ಯ ಪಶೂನ್ ಪಾಹಿ'(ನಿನ್ನ ಒಡೆಯನ ಪಶುಗಳನ್ನು ರಕ್ಷಿಸು)ವೇದಕಾಲದಿಂದ ಮುಂದಿನ ಎಲ್ಲಾ ಧಾರ್ಮಿಕ ಗ್ರಂಥಗಳಲ್ಲಿ ಜೀವದಯೆಯ ಬಗ್ಗೆ ಸ್ಪಷ್ಟವಾದ ನಿರ್ದೇಶನವಿದೆ. ಬುದ್ಧ ಮತ್ತು ಜೈನ ಧರ್ಮಗಳು ಉಚ್ಛ್ರಾಯ ಕಾಲದಲ್ಲಿ ಇದ್ದಾಗ "ಅಹಿಂಸಾ ಪರಮೋ ಧರ್ಮಃ" ಎಂಬುದು ಕೇವಲ ಧಾರ್ಮಿಕ ಕಟ್ಟಳೆಯಾಗಿ ಉಳಿಯದೆ ಬದುಕಿನ ರೀತಿಯೇ ಆಗಿ ಮಾರ್ಪಟ್ಟಿತ್ತು. ಕೌಟಿಲ್ಯನ ಅರ್ಥಶಾಸ್ತ್ರವು ಮೌರ್ಯ ಸಾಮ್ರಾಜ್ಯದ ಆಡಳಿತ ವಿಷಯದ ಮೇಲೆ ಅಧಿಕಾರವಾಣಿಯಿಂದ ಹೇಳುವ ಉದ್ಗ್ರಂಥವಾಗಿದ್ದು, ಅದರಲ್ಲಿ ವನ್ಯಪ್ರಾಣಿಗಳ ರಕ್ಷಣೆಗೆ ನಿಶ್ಚಿತ ಕ್ರಮ ಕೈಗೊಂಡ ವಿಷಯವು ಕಂಡು ಬರುತ್ತಿದೆ. "ಅಭಿಯಾರಣ್ಯ, ಎಂದು ಭಾಗ ಮಾಡಲ್ಪಟ್ಟ ಅಡವಿ ಪ್ರದೇಶದಲ್ಲಿಯ ಜಿಂಕೆ, ಕಾಡುಕೋಣ' ಪಕ್ಷಿ ಸಂಕುಲ ಮತ್ತು ಮತ್ಸ್ಯಗಳನ್ನು ಯಾರೂ ಬಲೆಹಾಕಕೂಡದು, ಕೊಲ್ಲಬಾರದು, ಘಾಸಿಸುವಂತಿಲ್ಲ! ಅರಣ್ಯ ಮೇಲ್ವಿಚಾರಕರು ರಾಜನ ಆಣತಿಯನ್ನು ಚಾಚೂತಪ್ಪದಂತೆ ನೋಡಿಕೊಳ್ಳುತ್ತಿದ್ದರು.

ಕ್ರಿ. ಪೂ. ಮೂರನೇ ಶತಮಾನದ ಸಾಮ್ರಾಟ ಅಶೋಕನು ಬೇಟೆಯ ಬಗ್ಗೆ ಸ್ಪಷ್ಟ ಕಾನೂನುಗಳನ್ನು ರಚಿಸಿದ ದಾಖಲೆಗಳಿವೆ. ಐದನೆಯ ಅಶೋಕ ಸ್ತಂಭದಲ್ಲಿ: ಯಾವ ಯಾವ ಪಕ್ಷಿಗಳು, ಪಶುಗಳು, ಮತ್ಸ್ಯಗಳು ಮತ್ತು ಹುಳಹುಪ್ಪಡಿಗಳನ್ನು ಕೊಲ್ಲಬಾರದು ಎಂಬ ಪಟ್ಟಿಯೇ ಇದೆ. ಈ ಪಟ್ಟಿಯಲ್ಲಿ ಕಣಳಪ್ಪಡಿ, ಮಂಗಗಳು, ಖಡ್ಗಮೃಗಗಳು, ಮುಳ್ಳುಹಂದಿ, ವೃಕ್ಷವಾಸಿ ಇಣಚಿಗಳು, ಜಿಂಕೆಗಳು, ಬ್ರಾಹ್ಮಣ ಹೋರಿಗಳು, ಇನ್ನಿತರ ಅನೇಕ ಬಗೆಯ ಚತುಷ್ಪಾದ ಪ್ರಾಣಿಗಳು ಕಂಡು ಬರುತ್ತವೆ. ಈ ಪ್ರಾಣಿಗಳನ್ನು ಆಹಾರಕ್ಕೆಂದು ಉಪಯೋಗಿಸ ಕೂಡದು. ಗಿಳಿ, ನವಿಲು, ರಾಣಿ ಇರುವೆ, ಬಗೆ ಬಗೆಯ ಮೀನುಗಳು ಮುಂತಾದವುಗಳನ್ನೆಲ್ಲ ಕೊಲ್ಲಕೂಡದು. ಅರಣ್ಯಕ್ಕೆ ಬೆಂಕಿ ತಗಲದಂತೆ ಜಾಗ್ರತೆಯಿಂದ ನೋಡಿಕೊಳ್ಳಬೇಕು ಎಂಬುದಾಗಿ ಕಟ್ಟಳೆಗಳಿದ್ದವು.

ರಾಜಸತ್ತೆಯ ಕಟ್ಟಳೆಗಳಿರಲಿ, ನಮ್ಮ ಧಾರ್ಮಿಕ ಶ್ರದ್ಧೆ—ಸಂಪ್ರದಾಯಗಳು ವನ್ಯ ಪ್ರಾಣಿ ರಕ್ಷಣೆಗೆ ಸಹಜವಾದ ಸದಾ ಕಾಲದ ರಕ್ಷಣೆಗೆನೆರವಾಗಿವೆ. ಪಕ್ಷಿಗಳನ್ನು ಪ್ರಾಣಿಗಳನ್ನು ರಕ್ಷಿಸುವುದು ಪ್ರತಿಯೊಬ್ಬ ನಾಗರಿಕನ ಕರ್ತವ್ಯವೇ ಆಗಿತ್ತು. ಪ್ರಾಣಿಗಳು ಪಕ್ಷಿಗಳು ನಮ್ಮ ಧಾರ್ಮಿಕ ಗ್ರಂಥಗಳಲ್ಲಿ, ಸಾಹಿತ್ಯದಲ್ಲಿ ಕಲೆಯಲ್ಲಿ ಆದರದ ಸ್ಥಾನವನ್ನು ಪಡೆದಿದೆ. ರಾಮಾಯಣದ ಹನುಮಂತಜಾಂಬವಂತ ಮತ್ತು ಜಟಾಯುಗಳ ಪೂಜ್ಯ ಸ್ಥಾನ ಪಡೆದಿದ್ದಾರೆ. ಪೌರಾಣಿಕ ಯುಗದಲ್ಲಿ ಮತ್ಸ್ಯ, ಕೂರ್ಮ, ವರಾಹ, ನಾರಸಿಂಹ ಮುಂತಾದ ಹೆಸರುಗಳು ದೇವರ ಅವತಾರ ದ್ಯೋತಕಗಳಾಗಿದ್ದವು. ನಂದಿ, ಗರುಡ, ಹಂಸಗಳು ದೇವರ ವಾಹನಗಳೆಂದೆನಿಸಿಕೊಂಡವು. ದುರ್ಗಾಮಾತೆಯು ದುಷ್ಟ ನಿಗ್ರಹಕ್ಕೆಂದು ಸಿಂಹದ ಮೇಲೆ ಕುಳಿತು ಹೋರಾಡಿದಳು! ಇದರಿಂದಾಗಿ ಸಿಂಹವು ಧರ್ಮದ ಚಿಹ್ನೆಯಾಗಿ ಕಾಣಿಸಿಕೊಂಡಿತು. ಮುಂದೆ ಅಶೋಕ ಚಿಹ್ನೆಯಲ್ಲಿ ಸಿಂಹಗಳು 'ಧರ್ಮಚಕ್ರ" ಸ್ಥಾನವನ್ನು ಪಡೆದವು,

ಅನೇಕ ಲೋಕವಿಖ್ಯಾತ ಸಾಹಿತಿಗಳು, ಕವಿಗಳು, ಕಲಾವಿದರು ತಮ್ಮ ಕಲಾಕೃತಿಗಳಲ್ಲಿ ಪಶುಪಕ್ಷಿಗಳ ಪಾತ್ರಗಳನ್ನು ಬಳಸಿಕೊಂಡಿದ್ದಾರೆ. 'ಪಂಚತಂತ್ರ" ಮತ್ತು 'ಹಿತೋಪದೇಶ'ಗಳ ಕಥೆಗಳಂತೂ ಅನೇಕರು ಅರಿತ ವಿಷಯ. ಸಾಂಚಿಯ ಸ್ತೂಪದಲ್ಲಿ, ಅಜಂತಾ ಗುಹೆಗಳಲ್ಲಿ ಪಶುಗಳಲ್ಲಿ ಪಶು—ಪಕ್ಷಿಗಳ ನಯನಮನೋಹರ ಚಿತ್ರಗಳು ಮನಾಕರ್ಷಕವಾಗಿವೆ. ಜಗತ್ತಿನ ದೇವಾಲಯದ ಶಿಲ್ಪದಲ್ಲಿ ಪಶು—ಪಕ್ಷಿ ಸಂಕುಲಗಳ ಕಲೆಯ ಬಲೆಯು ಹೃದ್ಯವಾಗಿದೆ.

ಮಕ್ಕಳಿಗೆ ಪಶುಗಳನ್ನು ಪಕ್ಷಿಗಳನ್ನು ಕಂಡರೆ ಎಷ್ಟು ಹರ್ಷ! ಇದನ್ನರಿತೇ ಎಂದಿನಿಂದಲೂ ಕುಂಬಾರನು ತನ್ನ ಕಸಂಬಕಲೆಯಲ್ಲಿ ಚಿತ್ರ ಮೂಡಿಸಲು ಸದಾ ಜಾಗ್ರತೆ ವಹಿಸಿದ್ದು! ಹರಪ್ಪಾ ಮತ್ತು ಮಹೆಂಜೋದಾರೋ ಪ್ರದೇಶಗಳಲ್ಲಿ ಇಂತಹ ಚಿತ್ರಗಳು ಕಂಡು ಬಂದಿವೆ, ಇಂದಿಗೂ ಅತ್ಯಾಧುನಿಕ ಪ್ಲಾಸ್ಟಿಕ್ ಸಾಮಾನುಗಳ ಮೇಲೆ ಅಂತಹ ಚಿತ್ರಗಳನ್ನು ಪ್ರತಿಬಿಂಬಿಸಲು ಯತ್ನಿಸಲಾಗಿದೆ. ಅರ್ಥವಿಷ್ಟೇ ಮನುಷ್ಯನಿಗೆ ಪಶುಪಕ್ಷಿಗಳ ಸಹಜ ಸೌಂದರ್ಯ ಚಿರಂತನವಾಗಿ ಕರೆ ಕೊಡುತ್ತಿದೆ; ಮನುಷ್ಯ ಅವುಗಳ ಸ್ವಜ ರೂಪಿಗೆ ಮಾರು ಹೋಗಿದ್ದಾನೆ.

ಮೇಲಿನ ವಿವರಣೆಯಿಂದ ಪಶು ಪಕ್ಷಿಗಳು ನಮ್ಮ ಮೇಲೆ ಎಂತಹ ಭಾವನಾತ್ಮಕ ಪ್ರಭಾವವನ್ನು ಬೀರಿದ್ದವು ಎಂಬುದು ಗೊತ್ತಾಗುವದು. ಇದರಿಂದ ನಮ್ಮ ದೇಶದಲ್ಲಿ ಪಶು-ಪಕ್ಷಿಗಳ ವಧೆಯು ಸಂಪೂರ್ಣ ಪ್ರತಿನಿಷೇಧಿಸಲ್ಪಟ್ಟಿತು ಎಂದೇನೂ ಅರ್ಥವಲ್ಲ. ರಾಜರು ಮತ್ತು ಸರದಾರರು ಬೇಟೆಗಾರ ಉತ್ಸಾಹವನ್ನು ವ್ಯಕ್ತಪಡಿಸಿದ್ದುಂಟು. ಆದರೆ ಬೇಟೆಯ ಕಾಲದಲ್ಲಿ ಸಾಕಷ್ಟು ವಿವೇಚನೆಯನ್ನೂ ಮಾಡಲಾಗುತ್ತಿತ್ತು ಎಂಬುದು ಗಮನಾರ್ಹ ವಿಷಯ. ಮನುಷ್ಯ ಜೀವನಕ್ಕೆ, ಮತ್ತು ಬೆಳೆದು ನಿಂತ ಬೆಳೆಗಳಿಗೆ ಹಾನಿಯನ್ನುಂಟು ಮಾಡುವ ಪಶು-ಪಕ್ಷಿಗಳನ್ನು ನಿರ್ನಾಮ ಮಾಡಲು ಅನುಮತಿ ಇದ್ದಿತು.

ಮೊಗಲ ಸಾಮ್ರಾಜ್ಯದ ಉದಯದ ಕಾಲಕ್ಕೆ ಭಾರತದಲ್ಲಿ ವನ್ಯ ಪ್ರಾಣಿ ಸಂಪತ್ತು ಹೇರಳವಾಗಿದ್ದ ಬಗ್ಗೆ ಸ್ಪಷ್ಟ ಉಲ್ಲೇಖಗಳಿವೆ. ಮೊಗಲ್ ವಂಶದ ಅರಸರಾದ ಬಾಬರ್, ಹುಮಾಯೂನ್, ಅಕ್ಬರ್ ಮತ್ತು ಮುಖ್ಯವಾಗಿ ಜಹಂಗಿರ್ ಅವರಿಗೆ ವನ್ಯ ಪ್ರಾಣಿಗಳ ಬಗ್ಗೆ ವಿಶೇಷ ಆಸಕ್ತಿ, ಆದರ, ಪ್ರೀತಿಗಳಿದ್ದವು.

ಮೊಗಲ್ ರಾಜರಿಗೆ ಶಿಕಾರಿ ಎಂದರೆ

ನಾವು ... ರ

ನಮ್ಮ ವನ್ಯ

ಹುಚ್ಚು. ಸಿಂಧು ನದಿಯ ಮೇಲ್ಭಾಗದ ಪ್ರದೇಶ, ಕಾಠೇವಾಡದ ವರೆಗಿನ ಗಂಗಾ ನದಿಯ ಪಶ್ಚಿಮ ಭಾಗ ಮತ್ತು ವಿಂಧ್ಯ ಪ್ರದೇಶದ ಮಂಡಳಾದ ವರೆಗೆ ಹಬ್ಬಿದ ಅರಣ್ಯ ಪ್ರದೇಶಗಳನ್ನ "ರಕ್ಷಿತ' ಪ್ರದೇಶವೆಂದು ಸಾರಲಾಗಿತ್ತು.

ಬ್ರಿಟಿಷರು ಭಾರತಕ್ಕೆ ಕಾಲಿಟ್ಟಾಗ, ಮೊಗಲ ಅರಸರ ಆಳಿಕೆಯ ಕಾನೂನ ರಕ್ಷಣೆಯಿಂದ ಭಾರತದಲ್ಲಿ ವನ್ಯ ಪ್ರಾಣಿ ಸಂಪತ್ತು, ಸಾಕಷ್ಟು ಪ್ರಮಾಣದಲ್ಲಿತ್ತು. ಈಗ ಮೊದಲಿನಕ್ಕಿಂತಲೂ, ದೇಶದಲ್ಲಿ



ಭಾರತ ಭಾಗ್ಯ

ಬೇಕಾದ
...ಣಿ ಸಂಪತ್ತು

'ಸ್ಥಿರ' ಜೀವನವೊದಲಿಟ್ಟಕೂ ವನ್ಯಪ್ರಾಣಿಗಳ ಗೃಹಗಳಂತಿದ್ದ ಅರಣ್ಯ ಪ್ರದೇಶಗಳನ್ನು ಕಡಿದು ಸಾಗುವಳಿಗೆ ಉಪಯೋಗಿಸಲು, ಜನರು ಮುಂದಾದರು. ಹತ್ತೊಂಬತ್ತನೇ ಶತಮಾನದ ಮಧ್ಯಕ್ಕೆ ವನ್ಯ ಪ್ರಾಣಿ ಕುಲವು ನಶಿಸಿ ಹೋಗಲು ಪ್ರಾರಂಭಿಸಿತು. ಹೊಸ ಹೊಸ ಅಸ್ತ್ರಗಳು, ಮದ್ದುಗಳ ಶೋಧನೆಯಿಂದ ಬೇಟೆಯ ವಿಷಯದಲ್ಲಿ ಕ್ರಾಂತಿಕಾರೀ ಬದಲಾವಣೆಗಳು ರೂಪಗೊಂಡ ಮೇಲೆ ಮತ್ತು ಯಂತ್ರೀಕೃತ ವಾಹನ ಸಂಚಾರ ಬಳಕೆಯಲ್ಲಿ ಬಂದ ಮೇಲೆ, ವನ್ಯ ಪ್ರಾಣಿಗಳ ಕುಲವು ಕ್ಷೀಣಿಸಿ ಹೋಯಿತು.

ಅನೇಕ ಬ್ರಿಟಿಷ್ ಅಧಿಕಾರಿಗಳು, ಚಹದ ತೋಟ ಬೆಳೆಸುವವರು ಭಾರತದ ವನ್ಯ ಪ್ರಾಣಿಗಳ ಹತ್ಯವನ್ನು ಅವ್ಯಾಹತವಾಗಿ ನಡೆಸಿಕೊಟ್ಟು ಮಾಡಿದರು. ಕೆಲ ಭಾರತೀಯ ಸಂಸ್ಥಾನಿಕರು ಕೇವಲ 'ಟ್ರಾಫೀ'ಗಳೆಂಬ ಒಂದೇ ಒಂದು ಮನರಂಜನೆಯ ಉದ್ದೇಶದಿಂದ ವನ್ಯ ಪ್ರಾಣಿಗಳನ್ನು ವಿವೇಚನೆಯಿಲ್ಲದೆ ಬೇಟೆಮಾಡಿದರು. ಇಂತಹ ಸಂಗತಿಗಳಿಂದಾಗಿ ಭಾರತದ ವನ್ಯ ಪ್ರಾಣಿ ಸಂಪತ್ತು ಪೂರ್ಣ ನಾಶ ಹೊಂದುವ ಹಂತಕ್ಕೆ ಬಂತು. ಭಾರತೀಯ ಸಿಂಹಗಳ ಸಂಪ್ರದಾಯಿಕ ಮನೆಯೆನಿಸಿದ ಜುನಾಗಡದಲ್ಲಿ ೧೯೧೩ ರ ಹೊತ್ತಿಗೆ ಕೇವಲ ಕೆಲವೇ ಸಿಂಹಗಳು ಉಳಿದಿದ್ದವು. ಆ ಕಾಲಕ್ಕೆ ಜುನಾಗಡ ಪ್ರದೇಶದಲ್ಲಿ ಸಿಂಹಗಳ ಬೇಟೆಗಳನ್ನು ನಿಷೇಧಿಸುವ ಆಜ್ಞೆ ಹೊರಟಿತು. ಹೀಗಾಗಿ ಸಿಂಹಗಳ ತಳಿಯು ಇನ್ನೂ ಉಳಿದು ಮುಂದುವರೆಯಲು ಸಾಧ್ಯವಾಯಿತು. ದ್ವಿತೀಯ ಮಹಾಯುದ್ಧದ ಕಾಲದಲ್ಲಿ ಬ್ರಿಟಿಷ್ ಮತ್ತು ಅಮೇರಿಕದ ಅನೇಕಾನೇಕ ಸೈನ್ಯದ ತಂಡಗಳು ಭಾರತಕ್ಕೆ ಬಂದವು—ಮತ್ತು ಭಾರತದ ವನ್ಯ ಪ್ರಾಣಿ ಸಂಪತ್ತಿನ ಹೋಳಿ ಆಡಿದರು.

೧೯೪೭ರಲ್ಲಿ ನಮಗೆ ಸ್ವಾತಂತ್ರ್ಯ ಬಂದಾಗ ಹೆಚ್ಚು ಭೂಮಿಯನ್ನು ಕೃಷಿಗೆ ಅಳವಡಿಸಲು ಮತ್ತು ಯಂತ್ರಗಳ ಮುಖಾಂತರ ಅಡವಿಗಳನ್ನು ನಾಶಪಡಿಸಲು ಕ್ರಮ ಕೈಕೊಂಡುದರ ಫಲವಾಗಿ ವನ್ಯ ಪ್ರಾಣಿಗಳ ಬದುಕಿಗೆ ಭಾರೀ ಪೆಟ್ಟು ಬಿದ್ದಿತು. ಹೊಸದಾಗಿ ರಚಿತವಾದ ಹೊಲಗಳ ಬೆಳೆಯ ರಕ್ಷಣೆಗೆ ರೈತರಿಗೆ ಮದ್ದು—ಗುಂಡುಗಳು ಕೋವಿಗಳನ್ನು ಒದಗಿಸಲಾಯಿತು. ಸೌಕರ್ಯ ಪಡೆದ ಸಂದರ್ಭಗಳಲ್ಲಿ ಸ್ವಚಿತ್ತಾಗಿ ದೊರೆಯಬಹುದಾದ ಪ್ರಾಣಿಗಳ ತಳಿಗಳನ್ನೂ ಕೂಡ ಬೇಟೆಯ ನೆವದಲ್ಲಿ ನಿರ್ನಾಮ ಮಾಡಲಾಯಿತು.

ವನ್ಯ ಪ್ರಾಣಿಗಳ ಕುಲ ಅಳಿದು ಹೋಗುವ ಸಮಯ ಬಂದೊದಗಿದಾಗಿನ ಹಿನ್ನೆಲೆಯಲ್ಲಿ ಭಾರತ ಸರ್ಕಾರದವರ ೧೯೫೨ ಏಪ್ರಿಲ್ ತಿಂಗಳಲ್ಲಿ ವನ್ಯ ಪ್ರಾಣಿಗಳ ರಕ್ಷಣೆಯ ಬಗೆಗಿನ ಭಾರತೀಯ ಮಂಡಳಿಯೊಂದನ್ನು ರಚಿಸಿದರು. ಅಂದಿನಿಂದ ವನ್ಯ ಪ್ರಾಣಿಗಳ ರಕ್ಷಣೆಯ ಬಗ್ಗೆ ಶಾಸ್ತ್ರೀಯ ಸಮಂಜಸ ಧೋರಣೆ ವಹಿಸಲು ಸಾಧ್ಯವಾಗಿದೆ. ಪ್ರತಿ ವರ್ಷವೂ ಅಕ್ಟೋಬರ ಮೊದಲ ವಾರದಲ್ಲಿ ವನ್ಯ ಪ್ರಾಣಿ ಸಪ್ತಾಹವನ್ನು ಆಚರಿಸುವಾಗ, ಮಾನವನ ಅಸ್ತಿತ್ವದ ಒಂದು ಭಾಗವೇ ಪಶು—ಪ್ರಾಣಿ ಸಂಕುಲಗಳಾಗಿವೆ, ಮತ್ತು ಸೃಷ್ಟಿಯು ಮಾನವನಿಗೆ ಕರುಣಿಸಿದ ಅಮೌಲ್ಯ ಬಳುವಳಿಯಾಗಿ ಬಂದಿತು ವನ್ಯಪ್ರಾಣಿಗಳನ್ನು ನಾವು ಕರುಣೆಯಿಂದ ಕಾಣಬೇಕಾದುದು ಅವಶ್ಯವಿದೆ ಎಂಬ ಮಾತುಗಳನ್ನು ನೆನಪು ಮಾಡಿಕೊಂಡು ಮುಲಕು ಹಾಕಲು ಮತ್ತು ಪಶು-ಪಕ್ಷಿಗಳ ರಕ್ಷಣೆಗೆ ನಮ್ಮ ವೈಯುಕ್ತಿಕ ನೆರವನ್ನು ನೀಡಲೂ ಒಂದು ಸದವಕಾಶ ನಮಗೆ ದೊರೆಯುತ್ತದೆ.

...ಹಾತ್ಮಾ ಗಾಂಧಿ

ಕೃಷಿಕ ರಂಗ

ಕೀಟಗಳ ನಿಯಂತ್ರಣದಲ್ಲೂ ಎಚ್ಚರಿಕೆ

ರಸಾಯನಗಳ ಮೂಲಕ ಮನುಷ್ಯ ಬೆಳೆಗಳಿಗೆ ಕೀಟಗಳು ತಗಲದಂತೆ ವಿಶ್ವಾಸಾರ್ಹ ರಕ್ಷಣೆ ಕಲ್ಪಿಸಿದ್ದಾನೆಂದು ಕಾಣಿಸುತ್ತದೆ. ಆದರೆ ಅನೇಕ ದಶಕಗಳ ಅನುಭವದ ಮಾತ್ರ ಈ ರಕ್ಷಣೆಯನ್ನು ಬಹು ಎಚ್ಚರದಿಂದ ಉಪಯೋಗಿಸಬೇಕೆಂದು ಹೇಳುತ್ತದೆ. ಇವು ಅವುಗಳಲ್ಲಿರುವ ಕೆಲವೊಂದು ಜೈವಿಕ ಅಂಶಗಳನ್ನೂ ನಾಶಮಾಡಬಹುದು—ಇವುಗಳ ಉಪಯೋಗದ ಉದ್ದೇಶ ಅದಾಗಿರದಿದ್ದರೂ. ಮತ್ತೆ ನಮಗೆ ಸಹಾಯಕವಾದಂಥ ಅಂದರೆ ಕೀಟಗಳಿಗೆ ನೈಸರ್ಗಿಕವಾಗಿಯೆ ವೈರಿಯಾಗಿರುವಂಥವು ಕೂಡ ಇದಕ್ಕೆ ಬಲಿಯಾಗುವುದುಂಟು ಒಮ್ಮೊಮ್ಮೆ.

ವಿಷವನ್ನು ಹರಡಿ ಕೀಟಗಳ ನಡುವೆಯೆ ಒಂದು ಯುದ್ಧ ನಡೆಯುವಂತೆ ಮಾಡುವುದೂ ಸಾಧ್ಯ. ಎಲ್ಲ ಕೀಟಗಳಿಗೂ ಅವುಗಳದೇ ಆದ ಕಾಹಿಲೆಗಳೂ ಇವೆ, ನೈಸರ್ಗಿಕ ವೈರಿಗಳೂ ಇವೆ. ಕಳೆ—ಕಸಗಳಿಗೂ ಶತ್ರುಗಳು ಇಲ್ಲವೆ ಇಲ್ಲ. ಇವುಗಳ ವೈರಿಗಳೇ ನಮ್ಮ ಗೆಳೆಯರು. ಬೆಳೆಗಳನ್ನು ಜೈವಿಕ ಶಾಸ್ತ್ರೀಕೃತ ರಕ್ಷಿಸುವ ಪದ್ಧತಿಯಲ್ಲಿ ಕೆಲವು ಕ್ರಿಮಿಕೀಟಗಳನ್ನು ಇನ್ನು ಕೆಲವು ಕ್ರಿಮಿಕೀಟಗಳಿಗೆ ಎದುರಾಗಿ ಕಟ್ಟುವುದೂ ಒಂದಾಗಿದೆ.

ಆದರೆ ಇದು ಎರಡು ಬಾಯಿಯ ಖಡ್ಗ. ಕಳೆಯನ್ನು ಅಪೋಷಣಗೈಯಲು ಬಿಟ್ಟ ಈ ಕ್ರಿಮಿಗಳು ಕಳೆಯನ್ನಲ್ಲ ತಿಂದ ಬಳಿಕ ಮುಂದೆ ಏನನ್ನು ಕಬಳಿಸುತ್ತವೆಯೊ ಯಾರಿಗೆ ಗೊತ್ತು? ಅಂತೆಯೆ ಬೆಳೆ ರಕ್ಷಣೆಯಲ್ಲಿ ಅತಿಶಯವೂ ಅಪಾಯ, ಅತಿ ಕಡಿಮೆಯೂ ಅಪಾಯ. ಸರಿಯಾದ 'ಡೋಸ್' ಅಗತ್ಯ.

ಇದಕ್ಕೆ ಪರಿಣಾಮಕಾರೀ ಮಾರ್ಗವೆಂದರೆ ಜೈವಿಕ ಕ್ಷೇತ್ರದಲ್ಲಿ ನಡೆದಿರುವ ಕ್ರಿಯೆಗಳನ್ನು ಆಳವಾಗಿ ಅಭ್ಯಸಿಸುವುದು ಮತ್ತು ಅವುಗಳನ್ನು ಸಮಂಜಸ ನಿಯಂತ್ರಣದಲ್ಲಿ ಹೇಗಿಟ್ಟುಕೊಳ್ಳುವುದು ಎಂಬುದನ್ನು ಕಲಿತುಕೊಳ್ಳುವುದು. ಇದಕ್ಕೆ ಗಣಿತದ ಲೆಕ್ಕಾಚಾರವೆ ಬೇಕಾಗುತ್ತದೆ.

ಆದರೆ ಜೀವಂತ ಬೆಳೆಯುವ ವಸ್ತುವನ್ನು ಗಣಿತದ ಲೆಕ್ಕಾಚಾರದ ಚೌಕಟ್ಟಿಗೊಳಪಡಿಸಲು ಸಾಧ್ಯವೆ? ಇದೇನೂ ಸುಲಭದ ಕೆಲಸವಲ್ಲ. ಆದರೆ ಸಾಧನೀಯ ಕೆಲಸವೆಂದು ಹೇಳಬೇಕು.

ಮಾಸ್ಕೋದಲ್ಲಿರುವ ಫಾರ್ಮಿಂಗ್ ಎಂಜಿನೀಯರರ ವಿದ್ಯಾಪೀಠದಲ್ಲಿ ಅಧ್ಯಯನಕ್ಕೆ ಈಗೊಂದು ಹೊಸ ವಿಷಯವನ್ನು ಸೇರಿಸಲಾಗಿದೆ. ಅದು: "ಬೆಳೆಗಳನ್ನು ರಕ್ಷಿಸುವ ಸಿದ್ಧಾಂತ ಮತ್ತು ತಂತ್ರ". ಬೇಸಾಯದ ಭಾವೀ ಎಂಜಿನೀಯರರು ಕ್ರಿಮಿಕೀಟಗಳ ಬಗ್ಗೆ, ಬೇಸಾಯ ಸಸ್ಯಗಳ ರೋಗಗಳ ಬಗ್ಗೆ ಗಣಿತ ಭಾಷೆಯಲ್ಲಿ ಮಾತನಾಡಲು ಈಗ ಕಲಿಯುತ್ತಿದ್ದಾರೆ.

ಗಣಿತ ಮತ್ತು ತರ್ಕ ಚಿಂತನೆಯಲ್ಲಿ ವಿಸ್ತೃತ ತರಬೇತಿಯೆ ಅಲ್ಲದೆ ಇದಕ್ಕೆ ಜೀವಶಾಸ್ತ್ರ, ವಸ್ತುವಿಜ್ಞಾನ ಮತ್ತು ರಸಾಯನ ಶಾಸ್ತ್ರಗಳ ಸಮೃದ್ಧ ಜ್ಞಾನವೂ ಬೇಕಾಗುತ್ತವೆ.

ಕ್ರಿಮಿಕೀಟಗಳ ನಾಶದ ಹೋರಾಟದಲ್ಲಿ ಕ್ಲೊರೋಫಾಸ್ ಎಷ್ಟರ ಮಟ್ಟಿಗೆ ಪ್ರಭಾವಿಯಾಗಿದೆಯೆಂಬುದನ್ನು ಇತ್ತೀಚಿಗೆ ಪರೀಕ್ಷಿಸಿ ನೋಡಲಾಯಿತು. ಇದರ ಬಗೆಗೆ ಒಂದು ಗಣಿತ ಸಿದ್ಧಾಂತದ ಕ್ರಮವನ್ನು ವಿವರವಾಗಿ ಆಲೋಚಿಸಿ ಮನೆಗಳಲ್ಲಿರುವ ನೊಣಗಳ ಮೇಲೆ ಪ್ರಯೋಗಿಸಿ ನೋಡುವುದೆಂದು ನಿರ್ಧರಿಸಿದರು. ಪ್ರಾಣಿಯು ಸಾಯಬೇಕಾದರೆ ಕ್ಲೊರೊಫಾಸ್ ವಿಷದಲ್ಲಿರುವ ಕಣದ ಸಂಪರ್ಕಕ್ಕೆ ಬರಬೇಕು. ನೊಣವು ಹಾರಲು ಬಾರದ ಎಳೆಯ ಸ್ಥಿತಿಯಲ್ಲಿದ್ದಾಗ ಮಾತ್ರ ಇದು ಹೆಚ್ಚು ಪರಿಣಾಮಕಾರಿಯಾಗುತ್ತದೆ. ಬದಲಿಗೆ ನೊಣ ತನ್ನ ಅತ್ಯಂತ ಕ್ರಿಯಾಶೀಲ ವಯಸ್ಸನ್ನು ತಲುಪಿದಾಗ? ಅದು ಹೆಚ್ಚಿನ ಕಾ

(ಹದಿನಾರನೇ ಪುಟ ನೋಡಿರಿ)

ಕೃತಿ ಪರಿಚಯ

ವಿಮರ್ಶೆಗಾಗಿ ಪುಸ್ತಕಗಳನ್ನು ಕಳಿಸುವವರು ದಯಮಾಡಿ ಎರಡೆರಡು ಪ್ರತಿಗಳನ್ನು ಕಳಿಸಬೇಕಾಗಿ ವಿನಂತಿ. ಸಂ. ನ.

ಶಾರೀರ ತತ್ತ್ವದರ್ಶನ (ವಾತಾದಿ ದೋಷ ವಿಜ್ಞಾನ).

ಗ್ರಂಥಕರ್ತರು: ವಿದ್ವಾನ್ ಕೆ. ಕೃಷ್ಣ ಭಟ್ಟ, ಶಿರೋಮಣಿ.

ಪ್ರಕಾಶಕರು: ವೈದ್ಯಗುರು ಎಂ. ಆರ್. ಭಟ್, ಉಪ್ಪು, ಮಂಗಳೂರು-2.

ಪುಟಗಳು: ೧೫೫, ಬೆಲೆ: ರೂ. ೩—೦೦

"ಶಾರೀರ ತತ್ತ್ವದರ್ಶನ'ವು ವೈದ್ಯ ಭೂಷಣ ಪುರುಷೋತ್ತಮ ಶರ್ಮಾ ಹಿರ್ಲೇಕರ ಇವರ ಸಂಸ್ಕೃತ ಭಾಷಾನುವಾದ ಪುಸ್ತಕದ ಕನ್ನಡ ರೂಪ. ಪ್ರಾಚೀನ ಭಾರತೀಯ ವೈದ್ಯವಾದ ಆಯುರ್ವೇದ ರೀತ್ಯಾ, ಮಾನವ ಶರೀರದಲ್ಲಿ ಅಡಕವಾಗಿರುವ ವಾತ ಪಿತ್ತ ಕಫಗಳೆಂಬ ತ್ರಿದೋಷಗಳನ್ನು ಅನುಸರಿಸಿಯೇ ಶ್ವಾಸೋಚ್ಛ್ವಸಾದಿ ಸಹಜ ಕ್ರಿಯೆಗಳು, ವಿಷಮ, ವ್ಯಾಧಿಗಳ ಉತ್ಪತ್ತಿ, ಅವುಗಳ ಪ್ರಸಾರ ಹಾಗೂ ಉಪಶಮನ ಮೊದಲಾದ ಎಲ್ಲವೂ ನಡೆಯುತ್ತವೆ. ಪ್ರಕೃತದ ಪುಸ್ತಕದಲ್ಲಿ ವಾತಾದಿ ದೋಷಗಳ ಬಗ್ಗೆ ವೈಜ್ಞಾನಿಕ ವ್ಯಾಖ್ಯೆಗಳನ್ನು ನೀಡಿ ಅವುಗಳಿಂದ ಶರೀರದ ಮೇಲಾಗುವ ಪರಿಣಾಮಗಳನ್ನೂ ವಿವೇಚಿಸಲಾಗಿದೆ. ಚರಕ, ಸುಶ್ರುತ ಮೊದಲಾದವರ ಅಭಿಪ್ರಾಯಗಳಿಗೂ ಇಲ್ಲಿ ಮಾನ್ಯತೆ ದೊರೆತಿದೆ.

'ಶಾರೀರ ತತ್ತ್ವದರ್ಶನ'ವು ಪೂರ್ವಾರ್ಧ, ಉತ್ತರಾರ್ಧವೆಂದು ಎರಡು ಭಾಗಗಳಲ್ಲಿ ವಿಂಗಡಿಸಲ್ಪಟ್ಟಿದೆ. ಮೊದಲನೆಯ ಭಾಗದಲ್ಲಿ ತ್ರಿದೋಷಗಳ ಗುಣಧರ್ಮಗಳನ್ನು, ಎರಡನೆಯದರಲ್ಲಿ ದೋಷಗಳನ್ನೂ ಕೂಲಂಕಷವಾಗಿ ವಿವೇಚಿಸಿದೆ. ಪ್ರತಿ ಭಾಗವೂ ವಿಷಯ ವೈವಿಧ್ಯಕ್ಕನುಸಾರವಾಗಿ ಹನ್ನೆರಡು—ಹನ್ನೆರಡು ಅಧ್ಯಾಯಗಳಲ್ಲಿ ಮತ್ತೆ ವಿಭಜಿತವಾಗಿದೆ. ಪ್ರತಿ ಅಧ್ಯಾಯವೂ ಹಿಂದಿನ ಅಧ್ಯಾಯಕ್ಕೆ ಸಂಬಂಧಿಸಿದಂತೆ ಪೀಠಿಕೆಯಿಂದ ಪ್ರಾರಂಭವಾಗಿ ಉಪಸಂಹಾರದಲ್ಲಿ ಕೊನೆಗೊಳ್ಳುತ್ತದೆ.

ಶ್ರೀ ಕೃಷ್ಣ ಭಟ್ಟರ ಭಾಷೆ ವಿಷಯಕ್ಕೆ ತಕ್ಕಂತೆ ಪ್ರೌಢವಾಗಿದೆ. ಸಂಸ್ಕೃತಮಯವಾಗಿದೆ. ಕೆಲವೆಡೆ ಕ್ಲಿಷ್ಟವಾಗಿಯೂ ಪರಿಣಮಿಸಿದೆ. ಗ್ರಂಥಾಂತ್ಯದಲ್ಲಿ ಕಠಿನ ಶಬ್ದಾರ್ಥಸೂಚಿಯೊಂದಿದೆ; ಆದರೆ, ಇದರಿಂದಲೇ ಗ್ರಂಥ ಮಥನ ಸಾಧ್ಯವಾಗದು. ವೈದ್ಯೇತರರಿಗಿಂತ ಆಯುರ್ವೇದ ವೈದ್ಯರಿಗೆ ಇದು ಒಂದು ಅತ್ಯಪೂರ್ವ ಕೊಡುಗೆಯೆಂಬುದು ನಿರ್ವಿವಾದ. ಈ ಬಗೆಯ ಶಾಸ್ತ್ರೀಯ ಗ್ರಂಥಗಳ ರಚನೆ ಆಧುನಿಕ ಕಾಲದಲ್ಲಿ ಅಗತ್ಯ ಬೇಕು; ಆಯುರ್ವೇದದ ಉನ್ನತಿಗೆ ಇದು ಸಹಾಯಕವಾಗುತ್ತದೆ. ಪ್ರೌಢ ವಿಷಯ ಪ್ರತಿಪಾದನೆಗೆ ಪ್ರೌಢ ಭಾಷೆಯ ಪ್ರಯೋಗ ಗ್ರಂಥಕರ್ತರ ಪಾಂಡಿತ್ಯಕ್ಕೊಂದು ನಿದರ್ಶನ. ಶಾಸ್ತ್ರೀಯ ಗ್ರಂಥಗಳ ಬರವಣಿಗೆಯಲ್ಲಿ ಶ್ರೀ ಭಟ್ಟರು ಯಶಗಳಿಸಿದ್ದಾರೆ. ಮುನ್ನುಡಿಯಲ್ಲಿ ವೈದ್ಯಗುರು ಭಟ್ಟರು ಹೇಳಿದಂತೆ ಇದು ಕನ್ನಡ ವಾಙ್ಮಯಕ್ಕೆ ಅತಿ ಅಲಂಕಾರದಾಯಕ ಉದ್ಗ್ರಂಥ. ಸುಂದರ ಮುದ್ರಣ, ಹಾಲು ಕಾಗದಗಳು ಪುಸ್ತಕದ ಗುಣವನ್ನು ಹೆಚ್ಚಿಸಿವೆ.

— —

(ಏಳನೇ ಪುಟದಿಂದ)

ಯಾಸವಾಯಿತು. ಆತನಿಗೆ ಗಾಂಧಿಯವರ ಬಗ್ಗೆ ಕನಿಕರ ಹುಟ್ಟಿತು. ಅವನು ಗಾಂಧಿಯವರಿಗೆ ತನ್ನ ಭಾಷೆಯಲ್ಲಿ ಏನೇನೋ ಹೇಳಿದ. ಆದರೆ ಆ ಭಾಷೆ ಗಾಂಧಿಯವರಿಗೆ ಹೇಗೆ ತಿಳಿಯಬೇಕು? ಕೊನೆಗೆ ಅವನು ಗಾಂಧಿಯವರಿಗೆ ವಿಶ್ರಾಂತಿ ತೆಗೆದುಕೊಳ್ಳಲು ಸೂಚಿಸಿದ.

ಅವನ ಸೂಚನೆ ತಿಳಿದೊಡನೆ ಗಾಂಧಿಯವರೂ ಅವನಿಗೆ ಸೂಚನೆಯಿಂದಲೇ ಉತ್ತರಕೊಟ್ಟರು. ಅವರು ಸೂರ್ಯನ ಕಡೆಗೆ ಬೊಟ್ಟುಮಾಡಿ ತೋರಿಸಿದರು. ಗಾಂಧಿಯವರ ಉತ್ತರ ಅವನಿಗೆ ಅರ್ಥವಾಯಿತು. ಅವನು ನಗಹತ್ತಿದ. ಯಾವ ಪ್ರಕಾರ ಸೂರ್ಯನು ವಿಶ್ರಾಂತಿ ತೆಗೆದುಕೊಳ್ಳದೆ ಒಂದೇ ಸವನೆ ಕೆಲಸ ಮಾಡುತ್ತಾನೆಯೋ ಅದೇ ಪ್ರಕಾರ ಮನುಷ್ಯರೂ ಸಹ ಶರೀರವಿರುವ ವರೆಗೆ ದುಡಿಯುತ್ತಲೇ ಇರಬೇಕು ಎಂಬುದು ಗಾಂಧಿಯವರ ಅಭಿಪ್ರಾಯವಾಗಿತ್ತು. (ಭೂ).

In the Court of the Peincipal Munsiff, Puttur, S. K

S. C. 160/66

Between:

Abdulrahiman Beary... Plaintiff

vs

Thimmanna Rai, N/o Somappa Rai, Residing at Paneyadka Voeamogru Village, Post Kaiksra (S K.) .. Defendant

Please take notice that the above suit filed against you stands posted to 26—10—1966 for your appearance. If you fail to appear in Court at 11-00 A M. on that day, the same will be decided in your absence.

(By order of Court)

K. P. Abdullah,
Advocate for Plaintiff

Puttur, S. K Date 12-10-66.

ಓದಲೇ ಬೇಕಾದ ಉತ್ತಮ ಪುಸ್ತಕಗಳು

ಹಳವನ ಕಟ್ಟೆ ಗಿರಿಯಮ್ಮ	ವ್ಯಾ. ಸು. ಶೇ.	2	00
ದೂರ ಗಗನ	ಟಿ. ಕೆ. ರಾಮರಾವ್	2	50
ಹಂಬಲ ಚಿಗುರಿತು	ಟಿ. ಕೆ. ಆರ್	2	00
ಜೀವನ ಚದುರಂಗ	ಮಾ. ಭೀ. ಶೇಷಗಿರಿ	2	50
ನೂರು ಜುಟ್ಟು ಮೂರು ಜಡೆ ಭಾಗ ೧	ನಿರಂಜನ	2	50
,, ಭಾಗ ೨	,,	2	25
ಉಭಯ ಲೋಕೇಶ್ವರ	ಶ್ರೀನಿವಾಸರಾವ್ ಕೋಟಿ	2	50
ವಿಷ ಗಾಳಿ	ಮಾ. ಭೀ. ಶೇಷಗಿರಿ	2	25
ಬೆಂಕಿಯ ಹೂವು	ನಾಡಿಗೇರ ಕೃಷ್ಣರಾಯ	2	50
ಪ್ರೇಮ ಸಮರ	ಶ್ರೀನಿವಾಸ ಉಡುಪ	2	50
ಬಾಳಿಗೊಂದು ನಮಸ್ಕಾರ	ಮಾ. ಭೀ. ಶೇಷಗಿರಿ	2	25
ಹಿಮದ ಹೂ	ಅನುಪಮಾ ನಿರಂಜನ	2	50
ಧರ್ಮಚಕ್ರ	ಕುಮಾರ ವೆಂಕಣ್ಣ	1	00
ಗೋವಿಂದ ರಾಯನ ಗೋತ	ನಾ. ಗೋವಿಂದರಾವ್.	1	00
ಬಿಡುಗಡೆಯ ಬೆಲೆ	ಅಶ್ವತ್ಥನಾರಾಯಣ ರಾವ್	1	50
ಅವಳ ಋಣ	ಮುರಳೀಧರ	1	50
ಸ್ವರಾಜ್ಯ ಶಾಸ್ತ್ರ	ಅನು: ಸಾಲಿ ರಾಮಚಂದ್ರರಾಯ	0	75
ಐಕ್ಯಗಾನ	ಕಯ್ಯಾರ ಕಿಞ್ಞಣ್ಣ ರೈ.	1	50
ಖಗೋಳ ಪುರಾಣ	ವಾಳು	1	50
ಗಾಂಧೀಜಿ ಅವರ ಕಥೆ	ಕೃಷ್ಣಾ ಹಠೀಸಿಂಗ್	1	00
ಸಿಡಿ	ವಸುದೇವ್ ಭೂಪಾಲಂ	1	25
ಶ್ರೀ ಪಾರ್ಶ್ವನಾಥಚಂಪು	ಜಿ. ಪಿ. ರಾಜರತ್ನಂ	1	50
ವಿನೋದ ಚಿತ್ರಗಳು	ಸಂಕಲನ	1	25
ಸಮಾಧಿ ತೀನಪ್ಪ	ಎಂ. ಗೋವಿಂದ ರೆಡ್ಡಿ.	1	00
ರಾಯರ ಕಥೆಗಳು	ಎನ್. ಸೂರಪ್ಪ	1	00
ಪೈಲಾ ಪತ್ರಗಳು	ಅನು: ವಿಠಲರಾಯ	1	25
ನೀಮಾರ	ಎಸ್. ಕೆ. ಕರೀಮ್ ಖಾನ್	1	25
ಶೀಚಕ	ಜಿ. ಪಿ. ರಾಜರತ್ನಂ.	1	50
ಪರ್ಣಕುಟಿ	ಸಿದ್ದವನಹಳ್ಳಿ ಕೃಷ್ಣ ಶರ್ಮ	2	50
ಮಹಾತ್ಮರ ಮರಣ	ಜಿ. ಪಿ. ರಾಜರತ್ನಂ	1	25
ಸದ್ಗುಣ ಸಂಭ್ರಮ	ವೇ. ತಿ. ಗಳಗನಾಥ	0	50
ಕಾಳಿದಾಸನ ಕೃತಿಗಳು	ದೇವುಡು	1	25
ತುಳುನಾಡ್ನವದ ಕತೆಗಳು	ಅಮೃತ, ಸೋಮೇಶ್ವರ	0	60
ಮಲ್ಲಿಗೆ ನಗುತಾವೆ	ಅ. ರಾ. ಕೃ.	2	00
ಹೆಣ್ಣಿನ ಕಣ್ಣು	ರಾ. ವೆಂ. ಶ್ರೀನಿವಾಸ	1	94
ಆಕಾಶ ದೀಪ	ಎಸ್. ಆರ್. ಚಂದ್ರ	1	00
ಪಾರಿಜಾತ	ತ. ರಾ. ಸು.	1	94
ಹೂ ಗೊಂಚಲು	ಗಣಪತರಾವ್	0	25
ಐತಿಹಾಸಿಕ ಕಥಾವಳಿ	ಪಂಜೆ ಮಂಗೇಶರಾವ್	0	62
ಡೋನ್ ಕ್ವಿಕ್ಸೋಟ್	ಅನುವಾದ	1	12
ಹಾಸನ್ ಟೋಪಿ	ಹುಂಬಳಿ ಭೀಮರಾವ್	1	50
ಹೆಬ್ಬೆರಳು	ಗೋವಿಂದ ಪೈ	1	00
ವೈಶಾಖಿ	,,	0	95
ಗೋವಿಂದ ಹರಿ ಗೋವಿಂದ	ದಾಮೋದರ ಬಾಳಿಗ	1	25
ಅಳಿಲು ಸೇವೆ	,,	0	37
ನಮ್ಮ ಭೂಮಿ	,,	0	75
ಫಲ ಪುಷ್ಪ	ವರದರಾಜ ಬಾಳಿಗ	1	25
ರಾಜಸೂಯಾಧ್ವರ	ಬಿ. ಪದ್ಮನಾಭ ಸೋಮಯಾಜಿ	1	25
ನಿಷ್ಕಾಮ ಪ್ರೇಮ	ಉಲ್ಲಾಳ ಮಂಗೇಶರಾವ್	1	00
ವಿಶ್ವಕವಿ	ಎಮ್. ಸುಬ್ರಹ್ಮಣ್ಯನ್	1	00
ಮಣಿಮಾಲೆ	ನಡುಮನೆ ಸುಬ್ಬಣ್ಣ ರೈ	1	00
ಕವಿಮುಗುಳು	ಯೋಗಿನಿ	1	00
ಗಧಾ ಯುದ್ಧದ ಸಾರ	ಬಿ. ಪದ್ಮನಾಭ ಸೋಮಯಾಜಿ	1	00
ಒಗ್ಗರಣೆ	ಎಸ್. ಆರ್. ಚಂದ್ರ	0	50
ಆಶ್ಚರ್ಯ ಚೂಡಾಮಣಿ	ಎ. ಶಂಕರ ಸೆಟ್ಟಿ	1	00
ಮತ್ಸ್ಯನ್ಯಾಯ	ಕಾಳಾವರ್	1	00
ಪತ್ಸ—ವಿಜಯ	ಅ. ಗೌ. ಕಿ.	0	50
ಬಾಳಗೀತ	ಪ್ರಹ್ಲಾದ	0	50
ಅಚಿಂತಕ	ಶ್ರೀನಂದ	0	19
ಶಿಶುಚರರು	ಕೋ. ಶಿ. ಕಾರಂತ	0	37
ರಮಾಧವ	ಎ. ರಾಮರಾವ್	0	75
ಹಳ್ಳಿಯ ರಾಣಿ	ಸುಂದರಮ್ಮ ನೆಲ್ಲಿಕಾಯಿ	0	50
ಸಮಾಜ ಶಾಸ್ತ್ರಾಭ್ಯಾಸಗಳ ಬೋಧನೆ	ಎಸ್. ಕೃಷ್ಣಪ್ಪ	4	50
ಜೇನ ಹನಿಗಳು	ಕ. ರಾ. ಕೃ	3	50
ಚೆನ್ನಿಗ ಚೆಲುವಯ್ಯ	,,	2	25
ಉತ್ತರ ಜಾನಪದ ಗೀತೆಗಳು	ಕ. ರಾ. ಕೃ.	1	00
ನುಲಿ ಸೋಮೇಶ್ವರ	,,	1	00
ನಾಡ ಹಾಡುಗಳು	,,	0	75
ಲಿಯೋ ಟಾಲ್‌ಸ್ಟಾಯ್	ಅನು: ಆನಂದ	3	00
ಜನತೆಯ ನಡುವೆ	ಅನು: ನಿರಂಜನ	2	50
ನನ್ನ ಬಾಲ್ಯ	,,	1	75
ನನ್ನ ವಿಶ್ವ ವಿದ್ಯಾನಿಲಯಗಳು	,,	2	00
ಕೆರೆಯ ನೀರನ್ನು ಕೆರೆಗೆ ಚೆಲ್ಲಿ	ಪಿ. ಲಂಕೇಶ್	2	50
ಕುಲ ಹೇಯಿತು	ಶ್ಯಾಮಾ	2	75
ಬಸ್ ಕಂಡಕ್ಟರ್	ಕಾಮರಾಜ	2	50
ನಮ್ಮಂಥವರೇ ಹೆಚ್ಚು ಮಂದಿ	ವಿ. ತ್ಯಾಗರು	2	00
ಬಿಳಿ ಹಾಯಿ	ಅನು: ಕೆ. ಎಸ್. ಕೃಷ್ಣಮೂರ್ತಿ	2	00
ಬಂಗಾರದ ಬಳ್ಳಿ	ನಾಡಿಗೇರ ಕೃಷ್ಣರಾಯ	2	00
ಬಾಳ ನಿಯಮ	ಅನು: ರಾಘವೇಂದ್ರ	1	50
ರೈಲು ಕಂಬಿಯ ಮೇಲೆ	ಕೆ. ವಿ. ಸಕ್ಸೇನ್.	1	50
ಗೌರೀಶಂಕರ	ಅಣ್ಣಪ್ಪರಡ್ಡಿ ನಾರಾಯಣ ಭಟ್ಟ	1	25
ಪೂಜೆ	,,	1	25
ಕೊಕ್ಕೋರೋ	ಡಿ. ವಿ. ರಾಘವೇಂದ್ರ	1	00
ಜ್ವಾಲಾಮುಖಿ	,,	0	62
ಸಂಸ್ಥಾನಿಕರು	ಗೋವಿಂದ ಮೂರ್ತಿ ದೇಸಾಯಿ.	1	50
ಒಡ್ಡಿದ ಉರುಳು	ಅ. ಗೌ. ಕಿನ್ನಿಗೋಳಿ	1	25
ನಿಜಸುತ	ಸೇವನವಿ: ರಾಜಮಲ್ಲ	1	50
ಭಾರತದ ಇತಿಹಾಸ ಪಾಠಗಳು	ತ. ಸು. ಶಾಮರಾಯ	0	75
ಸಾಯೋ ಎಮ್ಮೆ ಸೇರು ತುಪ್ಪ	ರಾಘಣ್ಣ	0	75
ಮದುವೆ ಮಾಡಿ ನೋಡು	,,	0	75
ತಾಳಿಕಟ್ಟೋಕ್ಕೂಲಿಯೂರು	ಕೆ. ಗುಂಡಣ್ಣ	0	75
ಕುಮಾರಿ ಸುನೇತ್ರ	ತಲಚೇರಕರ	0	70
ಸ್ವಾಮಿ ವಿವೇಕಾನಂದ	ಉ. ಕಾ. ಸುಬ್ಬರಾಯಾಚಾರ್	0	50
ಪುಟಾಣಿಗಳ ಪ್ರಪಂಚ	ಕೆ. ಎನ್. ತಂತ್ರಿ	0	60
ದೇಶ ಭಕ್ತ	ಹೆಗಡೆ	0	50
ಓಟಿನ ರಾಜ	ನರೇಂದ್ರ ಬಾಬು	0	50

ನವಭಾರತ ಪುಸ್ತಕ ಭಂಡಾರ, ಉಡುಪಿ.

ಮಹಾ ಕ್ರಾಂತಿಕಾರಿ— ಗಾಂಧೀಜಿ

(ಐದನೇ ಪುಟದಿಂದ)

ಬಿಡಿ ಇದರಿಂದ ಭಗ್ನ ನಿಮ್ಮ ಹತ್ತಿರಕ್ಕೆ ಸುಳಿಯಲಾರದು. ನಾನು ಭಗ್ನ ಹಾಗೂ ಇಚ್ಛೆಗಳಿಂದ ಮುಕ್ತನಾಗಿರುವುದರಿಂದ ನನಗೆ ದೇವರ ಶಕ್ತಿಯ ಬಗ್ಗೆ ಜ್ಞಾನೋದಯವಾಗಿದೆ." ಎಂದು ಅವರು ಹೇಳಿದ್ದಾರೆ. ಗಾಂಧೀಜಿ ಅವರ ಈ ಮಾತುಗಳು ಇಡಿ ವಿಶ್ವದಾದ್ಯಂತ ಪ್ರಸಾರಯೋಗ್ಯವಾಗಿವೆ.

ಇಂದಿನ ಅಣುಯುಗದಲ್ಲಿ ವಿವಾದಗಳನ್ನು ಬಗೆಹರಿಸಿಕೊಳ್ಳಲು ಯುದ್ಧಕ್ಕೆ ಶರಣು ಹೋಗುವ ಮಾರ್ಗವನ್ನು ತ್ಯಜಿಸಬೇಕ. ಇದು ಅನಿವಾರ್ಯವಾಗಿದೆ. ಒಮ್ಮೆ ಗಾಂಧೀಜಿ ಅವರನ್ನು 'ನೀವು ಅಣುಬಾಂಬನ್ನು ಯಾವರೀತಿ ಎದುರಿಸುವಿರಿ?' ಎಂದು ಪ್ರಶ್ನಿಸಲಾಯಿತು. ಗಾಂಧೀಜಿಯವರು ಈ ಪ್ರಶ್ನೆಗೆ ಉತ್ತರ ಕೊಡುತ್ತ 'ನಾನು ಅಣುಬಾಂಬಿಗೆ ಹೆದರಿ ಅಡಗಿಕೊಳ್ಳುವುದಿಲ್ಲ. ನಾನು ಬಯಲಲ್ಲಿ ಹೋಗಿ ಮುಖ ಮೇಲೆ ಮಾಡಿ ನಿಂತು ಕೊಳ್ಳುತ್ತೇನೆ. ಬಾಂಬ್ ಎಸೆಯುವ ವಿಮಾನ ಚಾಲಕನಿಗೆ ನನ್ನ ಮುಖದಲ್ಲಿ ಅವನ ಬಗ್ಗೆ ಕಿಂಚಿತ್ತಾದರೂ ದುರ್ಭಾವನೆಯಿಲ್ಲವೆಂಬುದು ಕಾಣಬೇಕು' ಎಂದು ಹೇಳಿದರು. ಗಾಂಧೀಜಿಯವರು ನಮ್ಮ ಹಿಂಸಾಕೃತ್ಯಗಳಿಗೆ ಈ ರೀತಿ ವಿರೋಧ ವ್ಯಕ್ತಪಡಿಸಿದರು.

ಈ ಅಹಿಂಸಾ ವೃತ್ತಿಯನ್ನು ಸಾಧನೆಗಾಗಿ ಮಾನವನ ವಿವೇಕ ಬುದ್ಧಿ ಜಾಗೃತಗೊಳ್ಳಬೇಕು.ಅದು ಜಾಗೃತಗೊಳ್ಳುವವರೆಗೂ ಕೋಟ್ಯಂತರ ಜನರ ರಕ್ಷಣೆಯ ಭಾರ ಹೊತ್ತು ಸರ್ಕಾರಗಳು ಅನಿವಾರ್ಯ ಪ್ರಸಂಗಗಳಲ್ಲಿ ಬಲಪ್ರಯೋಗ ಮಾಡಬೇಕಾಗುತ್ತದೆ. ಜನರು ಉತ್ತಮ ರೀತಿಯಲ್ಲಿ ಬೆಳೆಯುವಂತೆ ಶಿಕ್ಷಣ ನೀಡಬೇಕಾಗುತ್ತದೆ. ಅಹಿಂಸೆ ಒಂದು ಶ್ರೇಷ್ಠ ಆದರ್ಶ. ಅದು ಅದ್ವಿತೀಯವಾಗಿದೆ.

ಗಾಂಧೀಜಿ ಅವರು ಹೋರಾಟ ಎರಡು ಮಾರ್ಗಗಳಿವೆ ಎಂದು ಹೇಳಿದ್ದಾರೆ. 'ನಿಮ್ಮ ರಕ್ಷಣೆಯ ಚಿಂತೆ ಮಾಡಬೇಡಿ, ಕರ್ತವ್ಯದ ಸ್ಥಳದಲ್ಲಿ ಅಚಲರಾಗಿ ನಿಂತು ಕೊಳ್ಳಿರಿ' ಇದು ಮೊದಲನೆಯ ಮಾರ್ಗ.

ಇನ್ನು ಎರಡನೆಯದು, ಇದೂ ಮೊದಲಿನಷ್ಟೇ ಗೌರವ ಪೂರ್ಣವಾಗಿದೆ. ಈ ಮಾರ್ಗ ಅನುಸರಿಸಿದಾಗ ನೀವು ಅಪಾಯವನ್ನು ಲೆಕ್ಕಿಸದೇ ಆತ್ಮರಕ್ಷಣೆಗಾಗಿ ಖಡ್ಗ ಹಿಡಿದು ಮುನ್ನುಗ್ಗುವುದು. ಎರಡನೆಯ ಮಾರ್ಗ—

ಇದಂ ಬ್ರಹ್ಮಂ ಇದಂ ಕ್ಷಾತ್ರಂ
ಶಾಪಾದಪಿ ಶರಾದಪಿ ಯಾ
ಶಾಸ್ತ್ರಾಯ ಶಸ್ತ್ರಾದಪಿ

ಕುರಲ್ ಒಂದೆಡೆ ಹೀಗೆ ಹೇಳಿದ್ದಾರೆ. "ಬಲಿಷ್ಠನ ಸಹನೆಗೆ ಅರ್ಥವಿದೆ. ದುರ್ಬಲನ ಸಹನೆ ಅರ್ಥಹೀನ"ವೆಂದು.

ಅಪಾರ ಪ್ರೇಮ ಅಪಾರ ಔದಾರ್ಯಗಳಲ್ಲಿ ಅಹಿಂಸೆಯ ತಿರುಳೂ ಎಂದು ಹೇಳಬಹುದು. ಗಾಂಧೀ ಜನ್ಮ ಶತಾಬ್ದಿಯ ಕೇಂದ್ರಸಮಿತಿ ಗಾಂಧೀಜಿಅವರಶಾಂತಿ,ಸತ್ಯಮತ್ತು ಅಹಿಂಸಾ ಸಂದೇಶಗಳನ್ನುಕುರಿತ ಎಲ್ಲ ಕಾರ್ಯ ಯೋಜನೆಗಳನ್ನು ಸ್ವಾಗತಿಸುತ್ತದೆ. ಗಾಂಧೀಜಿಯವರ ಈ ಆದರ್ಶಗಳೇ ನಮ್ಮ ವಿಶ್ವಶಾಂತಿ, ನಿಶ್ಶಸ್ತ್ರೀಕರಣ, ವರ್ಣ ಸಮಾನತೆ, ಮತ್ತು ಆರ್ಥಿಕ ಅಭಿವೃದ್ಧಿ ಸಾಧನೆಗೆ ಸ್ಫೂರ್ತಿ ನೀಡುವ ಆದರ್ಶಗಳಾಗಿವೆ. ಪ್ರೇಮವು ದ್ವೇಷದ ಸಂಕೋಲೆಯನ್ನು ಭೇದಿಸಲು ಸಮರ್ಥವಾಗಲಿ.

ಸ್ವಧರ್ಮದ ನಾಶ ಸರ್ವಥಾ ಅಲ್ಲ

(ಆರನೇ ಪುಟದಿಂದ)

ನ್ನು ತೆರೆಯಲು ಅನುಮತಿ ಕೇಳಿದಾಗ ಪ್ರಚಲಿತ ಸರಕಾರವು ಒಪ್ಪಿಗೆಯನ್ನಿತ್ತಿರುವದಿಲ್ಲ. ಹೊಸತು ಹೋಗಲಿ! ಹಳೆಯ ಶಾಲೆಗಳಾದರೂ ಹೇಗಿವೆ? ನಾಗಾ, ಮಿಝೋ ಇಂತಹ ಪರ್ವತ ಪ್ರದೇಶಗಳಲ್ಲಿರುವ ವಿದ್ಯಾರಂಗಗಳಲ್ಲಿ ಹೆಚ್ಚಿನವು ಕ್ರಿಸ್ತೀಯ ಮತ ಪ್ರಸಾರಕರ ಕೈಯ್ಯಲ್ಲಿವೆ. ಇವಕ್ಕೆ ಸರಕಾರದಿಂದ ಸಹಾಯ ಬೇಕಾದಷ್ಟು ಸಿಗುತ್ತಿದೆ. ಈ ವಿದ್ಯಾರಂಗಗಳಲ್ಲಿ ಬೈಬಲ್ ಕೂಡಾ ಒಂದು ವಿಷಯ.ವಿದೆ. ಅಂದರೆ ಎಲ್ಲಾ ವಿದ್ಯಾರ್ಥಿಗಳು ಅದನ್ನು ಕಲಿತೇ ಆಡಬೇಕು—ಮುಂದಿನ ತರಗತಿಯನ್ನು ಕಾಣಬೇಕಾದಲ್ಲಿ ಅಲ್ಲದೆ ಇರುವ ತರಗತಿಯಲ್ಲೇ ಇರಬೇಕಾದರೂ ಕೂಡಾ. ಚಿರಾಪುಂಜಿಯಲ್ಲಿ ರಾಮಕೃಷ್ಣ ಮಿಶನಿನವರು ನಡೆಸುತ್ತಿರುವ ಒಂದು ಶಾಲೆ ಇದೆ. 'ರಾಮ—ಕೃಷ್ಣ' ಹೆಸರಿದ್ದರೂ ರಾಮಕೃಷ್ಣ ಮಿಶನಿನವರು ಯಾವೊಂದು ಮತೀಯ ಗುಂಪಿಗೂ ಸೇರದೆ ಇದ್ದಾರೆ—ಸರಕಾರದ ಸಹಾಯದತ್ತ ಪೂರ್ಣ ಗಮನವನ್ನು ಇಟ್ಟುಕೊಂಡಿದ್ದಾರೆ. ಹಾಗಿರುವಾಗ ಸೆಕ್ಯುಲರಿಸಮಿನಲ್ಲಿ ಅವರ ಪಾಡು ಹೇಳಬೇಕೆ? ಹಾಗಿದ್ದರೂ ಚಿರಾಪುಂಜಿಯ ಶಾಲೆಯಲ್ಲಿ ಬೈಬಲಿನೊಂದಿಗೆ ಭಗವದ್ಗೀತೆಯನ್ನು ಅವರು ಕಲಿಸಲಾರಂಭಿಸಿದರು. ಶ್ರೀ ಕೃಷ್ಣನು ಅದೆಂತು ಅವರಲ್ಲಿ ಧೈರ್ಯ ತುಂಬಿಸಿದನೋ! ಆದರೆ ಒಡನೆ ಅವರಿಗೆ ಸರಕಾರದಿಂದ ಬಿಸಿ—ಬಿಸಿ ಕಾಗದ ಬಂತು— ಭಗವದ್ಗೀತೆ ಕಲಿಸುವದನ್ನು ತಕ್ಷಣದಿಂದಲೇ ನಿಲ್ಲಿಸದಿದ್ದಲ್ಲಿ ಸಹಾಯಧನಕ್ಕೆ ಸಂಚಕಾರ ಸದಾಸಿದ್ಧವೆಂದು.ಪಾಪ! ರಾಮಕೃಷ್ಣ ಮಿಶನಿನವರು ಮಾಡುವದಾದರೂ ಏನು? ಅಯ್ಯೋ! ರಾಮಾ! ಕೃಷ್ಣನೊಂದಿಗೆ ಗೋವಿಂದಾ ಸೇರಿಸಿ ಬಿಟ್ಟರು. ಈ ವಿಷಯವನ್ನು ಯುಗವಾಣಿಯ ಸಂಪಾದಕ ದೇವಜ್ಯೋತಿ ವರ್ಮನ್ ಬಯಲಿಗೆಳೆದಿದ್ದಾರೆ.

ನಿರ್ಧರ್ಮೀಯತೆಯ ಸಾಕಾರ ರೂಪತಾವೆಂದು ಬಂಬಡ ಬಾರಿಸುತ್ತಿರುವ ಕಮ್ಯುನಿಷ್ಟರಾಗಲೀ, ಅವರ ಬಲೆಯಲ್ಲಿ ಸುಲಭವಾಗಿ ಸಿಕ್ಕಿ ಬೀಳುತ್ತಿರುವ ಕಾಂಗ್ರೆಸ್ಸಿಗರು ಚಿರಾಪುಂಜಿಯ ಘಟನೆಯ ಕುರಿತ ಏನೂ ಹೇಳಿರುವದಿಲ್ಲ. ಈ ರೀತಿ ಇಂದು ಚಿರಾಪುಂಜಿಯಲ್ಲಿ ಮಾತ್ರ ನಡೆಯುತ್ತಿರುವದಲ್ಲ. ಇದೊಂದು ಉದಾಹರಣೆ ಅಷ್ಟೇ. ಅಷ್ಟು ದೂರ ಏಕೆ? ಶ್ರೀ ಕೃಷ್ಣನ ನಿವಾಸ, ಅಷ್ಟ ಮಠಗಳಿರುವ ಉಡುಪಿಯ ಕುರಿತೇ ಕಣ್ಣು ತೆರೆಯುವ. ಉಡುಪಿಯಲ್ಲಿರುವ ಅನೇಕ ವಿದ್ಯಾಸಂಸ್ಥೆಗಳು ತಮ್ಮ ಕಲಾ ಶಾಲೆ—ವಿದ್ಯಾಲಯಗಳ ಮೂಲಕ ಪದವೀಧರಂದತಂಗೆ ಭಗವದ್ಗೀತೆಯನ್ನು ಹಂಚುತ್ತವೆ; ಬೈಬಲನು ಹಂಚುತ್ತವೆ?... ವಿದ್ಯಾಲಯಗಳಲ್ಲಿ ಕಲಿಸಿ ಕೊಡುವದಂತಿರಲಿ.

ಕಮ್ಯೂನಿಷ್ಟರಿಗೆ ಹಾಗೂ ಕಾಂಗ್ರೆಸ್ಸಿಗರಿಗೆ ಇದೆಲ್ಲವನ್ನು ನೋಡಲು ಕಣ್ಣಿಲ್ಲವೇ? ಅವರಿಗೆ ಸಂಸ್ಕೃತಿಯ ಮೇಲೆ ಮಾತ್ರ ಕಣ್ಣೇ? ಇದರಲ್ಲಿ ಕಮ್ಯೂನಿಷ್ಟರ ಕಣ್ಣನ್ನು ರಷ್ಯಾದವರಾಗಲೀ, ಚೈನಾದವರಾಗಲೀ ತೆರೆಸಬಲ್ಲರು. ಕಾಂಗ್ರೆಸ್ಸಿಗರ ಕಣ್ಣು ತೆರೆಸುವದು ಕಠಿಣ ವಿಷಯವೇ ಸರಿ. ಅಂದರೆ ಮಲಗಿರುವವರನ್ನು ಎಬ್ಬಿಸಬಹುದು. ನಿದ್ದೆ ಬಂದಿರುವವರಂತೆ ನಟಿಸುವವರನ್ನೆಬ್ಬಿಸುವದು ಕಷ್ಟವಂತೆ. ಹಾಗೆ ಇದೆ ಪರಿಸ್ಥಿತಿ. ಕೆಲ ದಿನಗಳ ಹಿಂದೆ ಇದೇ ಕಮ್ಯೂನಿಷ್ಟರು ತಾವು ಅಧಿಕಾರಕ್ಕೆ ಬಂದಲ್ಲಿ ರಾಮಾಯಣ ಹಾಗೂ ಮಹಾಭಾರತಗಳ ಪ್ರತಿಗಳನ್ನು ಎಲ್ಲರಿಗೂ ಹಂಚುವದಾಗಿಯೂ ವಿದ್ಯಾಲಯಗಳಲ್ಲಿ ಪಠ್ಯ ಪುಸ್ತಕವನ್ನಾಗಿಸಿಡುವದಾಗಿಯೂ ಘೋಷಿಸಿದ್ದರು.ಅದು ನಿರ್ಧರ್ಮೀಯತೆಗೆ ವಿರೋಧವಲ್ಲವೆ? ಅದವರಿಗೆ ಮುಖ್ಯ ಪ್ರಶ್ನೆಯಲ್ಲ. ಆ ಮಹಾನ್ ಗ್ರಂಥಗಳನ್ನು ರಷ್ಯದವರು ಭಾಷಾಂತರಿಸಿ ಉಪಯೋಗಿಸಿಕೊಳ್ಳುತ್ತಿದ್ದಾರೆ. ನಾಳೆ ಸರಸ್ವತಿಯ ಕುರಿತು ಅವರು ಅದೇನಾದರೂ ಒಳ್ಳೆಯ ವಿಷಯ ಪ್ರಕಟಿಸಿದಲ್ಲಿ ಇಲ್ಲಿಯ ಕಮ್ಯೂನಿಷ್ಟರೂ 'ಸರಸ್ವತಿ ಮಾತೆಗೆ ಜಯವಾಗಲೆಂ'ದು ಘೋಷಣೆ ಹಾಕದೆ ಇರಲಾರರು.

ಇದು ಜಗತ್ತಿಗೆ ತಿಳಿದಿರುವ ವಿಷಯ. ಕಾಂಗ್ರೆಸ್ಸಿಗರೂ ಅತ್ತ ಯಾಕೆ ಕಾಲು ಹಾಕುತ್ತಿದ್ದಾರೆಂಬುದೇ ಸಮಸ್ಯೆ. ಯಾಕೆಂದರೆ ಎಲ್ಲಾ ಕಾಂಗ್ರೆಸ್ಸಿಗರು ಹಾಗೆ ಇರುವದಿಲ್ಲ. ಭಗವದ್ಗೀತೆಯ ಪ್ರಚಾರ ಮಾಡುತ್ತಿರುವ ಕಾಂಗ್ರೆಸ್ಸಿಗರು ಬೇಕಾದಷ್ಟು ಮಂದಿ ಇದ್ದಾರೆ. ಮಹಾತ್ಮ ಮೋಹನದಾಸ ಕರಂಚಂದ ಗಾಂಧೀಜೀಯವರು ಕೂಡಾ ತಾವು ಸನಾತನ ಹಿಂದೂವೆಂದು ಆಗಾಗ ಹೇಳುತ್ತಿದ್ದರಲ್ಲದೆ, ಭಗವದ್ಗೀತೆಯನ್ನು ಯಾವಾಗಲೂ ಬಗಲಲ್ಲೇ ಇಟ್ಟುಕೊಳ್ಳುತ್ತಿದ್ದರು. ಪೂಜ್ಯ ಗೋಮಾತೆಯ ವಿಷಯದಲ್ಲಂತೂ. ಸ್ವಾತಂತ್ರ್ಯಕ್ಕಿಂತಲೂ ಗೋವಧೆ ನಿರೋಧವೇ ಮುಖ್ಯವೆಂದವರು ಸ್ಪಷ್ಟವಾಗಿ ಸೂಚಿಸಿದ್ದರು. ಹಾಗಿದ್ದರೂ ಸೆಕ್ಯೂಲರಿಸಮಿನ ಅಮಲಿನಲ್ಲಿ ಕಾಂಗ್ರೆಸ್ಸ್ ಶಾಸಕರು ಅದೇನೇನೋ ಆಡಲು ಅಂಜುವದಿಲ್ಲ. ಹಿಂದೂತ್ವದ ಕುರಿತು ಕ್ರಿಸ್ತೀಯ ಮಿಶನರಿಗಳಿಗಿಂತಲೂ,ಮುಸ್ಲಿಂ ಮತಾಂಧರಿಗಿಂತಲೂ ಮುಂದಕ್ಕೆ ಹೋಗಿ ಹೀಗಳೆಯುತ್ತಿದ್ದಾರೆ. ಅಂದರೆ ರಾಷ್ಟ್ರದ ಜೀವನಾಡಿಯನ್ನು ಕಡಿದು ಹಾಕಲು ಅವರು ಕಾರಸ್ಥಾನ ನಡೆಸುತ್ತಿದ್ದಾರೆ. ಇದೆಷ್ಟು ದಿನ ನಡೆದೀತು?

ಸೆಕ್ಯೂಲರಿಸಂ ಅಂದರೆ ಸ್ವಧರ್ಮದ ಸರ್ವನಾಶ ಸರ್ವಥಾ ಅಲ್ಲ. ಭಾರತದ ಸ್ವಧರ್ಮವೇ ಹಿಂದೂತ್ವವೇ ಇದೆ. ಅದಕ್ಕೆ ಅದ್ಯಾವ ಸಂಕುಚಿತ ಅರ್ಥದ ಲೇಪನ ಅಂಟಿಸುವದೂ ಸರಿಯಲ್ಲ. ಸರಸ್ವತಿಯ ಕುರಿತು ಕಲಿಸುವದನ್ನು ನಿರ್ಬಂಧಿಸುವದೆಂದರೆ ಹಿಂದೂತ್ವದ ಹೀಗಳೆದಂತೆ— ಅಂದರೆ ಭಾರತದ ರಾಷ್ಟ್ರೀಯತೆಗೆ ಅಪಮಾನ ಮಾಡಿದಂತೆಯೇ ಸರಿ. ಇದು ಸುಸ್ಪಷ್ಟ ವಿಷಯವಿದೆ. ಹೀಗೆ ಸ್ವಧರ್ಮವೆಂಬ ಸ್ವರ್ಣವೃಕ್ಷಕ್ಕೆ ಸೆಕ್ಯೂಲರಿಸಂ ಕೊಡಲಿ ಏಟು ಅಲ್ಲ ಸೆಕ್ಯೂಲರಿಸಮಿನಲ್ಲಿ ಯಾವುದಾದರೊಂದು ಪ್ರತ್ಯೇಕ ಮತಕ್ಕೆ ವಿಶಿಷ್ಟಸ್ಥಾನ ಇಲ್ಲದಿರುವದೇ ಇದೆ. ಅಂದರೆ ಬೌದ್ಧರಿಗೋ, ಸಿಖ್ಖರಿಗೋ, ಜೈನರಿಗೋ ಕ್ರಿಸ್ತೀಯರಿಗೋ ಮಹಮ್ಮದಿಯರಿಗೋ, ವೈಷ್ಣವರಿಗೋ, ಲಿಂಗಾಯತರಿಗೋ ಕಾಪಾಲಿಗಳಿಗೋ ವಿಶಿಷ್ಟ ಸ್ಥಾನ ಸಿಗಲಾರದು. ಇವೆಲ್ಲರಿಗೂ ಸಮಾನ ವಿಷಯವಿರುವ ಸರಸ್ವತಿಯ ಪೂಜೆ, ಗೋಪೂಜೆ, ಭಾರತಾಂಬೆಯ ಆರಾಧನೆ ಇತ್ಯಾದಿಗಳಿಗೆ ಅಲ್ಲಿ ಅಪಮಾನ ನಡೆಯಲು ಸಾಧ್ಯವಿಲ್ಲ. ಅದನ್ನು ಸಹಿಸಿಕೊಳ್ಳುವವರು ನೈಜರಾಷ್ಟ್ರೀಯರಾಗಲಾರರು—ಒಂದೋ ಅವರು ಆಕ್ರಮಣಗಾರರ ಪರಂಪರೆಗೆ ಸೇರಿದವರು,ಅಥವಾ ದೇಶದೊಳಗಿನೇ ಇರುವ ಪಂಚಮ ಸ್ತಂಭೀಯ ಜಯಚಂದ ಸಂತಾನದವರಿದ್ದಾರೆ.

ಈ ವಿಷಯವನ್ನು ಚೆನ್ನಾಗಿ ಅರಿತುಕೊಂಡಲ್ಲಿ ಪುನ: ಭಾರತೀಯರು, ಧಾರ್ಮಿಕ ವಿಶ್ವ ವಿಜೇತರಾಗುವದು ಕಷ್ಟವಲ್ಲ. ಇತರ ರಾಷ್ಟ್ರಗಳಾದರೆ ಇಲ್ಲಿಯ ಧಾರ್ಮಿಕ ದೀಪದ ಬೆಳಕಿಗಾಗಿ ಹಾತೊರೆಯುತ್ತಿವೆ. ಅದನ್ನು ನಾವೇ ಮುಚ್ಚಿಡಲು ಪ್ರಯತ್ನಿಸುವುದು ಹಾಗೂ ದೀಪವನ್ನು ನೊಂದಿಸಲು ಪ್ರಯತ್ನಿಸುವದು ದೇಶದ ದೃಷ್ಟಿಯಿಂದಲೂ, ಮಾನವೀಯತೆಯ ದೃಷ್ಟಿಯಿಂದಲೂ ಸರಿ ಇರುವದಿಲ್ಲ. ದೇಶದ ದೃಷ್ಟಿಯಲ್ಲಿ ಅಂತಹವರು ದೇಶದ್ರೋಹಿಗಳೂ ಮಾನವೀಯತೆಯ ದೃಷ್ಟಿಯಲ್ಲಿ ಅವರು ರಾಕ್ಷಸರೇ ಸರಿ. ಇಂತಹ ಪಾಪಕೃತ್ಯ ಭಾರತೀಯರಿಗೆ ಬೇಡವೇ ಬೇಡ.

ಟೆಲಿಗ್ರಾಂ: 'ಸುದರ್ಶನ'. ಸ್ಥಾಪನೆ: 1914 ಫೋನ್ 3428

ಜಗತ್ಪ್ರಸಿದ್ಧವಾದ **ಜೈಹಿಂದ್ ಹಂಚು**ಗಳನ್ನೇ ಸದಾ ಉಪಯೋಗಿಸಿರಿ.

ತಯಾರಕರು: ಸುದರ್ಶನ ಟೈಲ್ ವರ್ಕ್ಸ್, ಬೋಳಾರ, ಮಂಗಳೂರು-೧

ಉಡುಪಿ ಕರ್ನಾಟಕ ಸಂಘದ

ಒಂದೊಂದು ರೂಪಾಯಿ ಬೆಲೆಯ

ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ

ಯು. ರಾಘವೇಂದ್ರ ಆಚಾರ್ಯ,ಎಂ.ಎ.

ಸಾಮಾನ್ಯ ರೋಗಗಳು

ಡಾ| ಕೆ.ಎಲ್.ವಿತಾಳ,ಎಂ.ಬಿ.ಬಿ.ಎಸ್.

ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯ ಸೂಚಿಸುವ ಉಪಯುಕ್ತ ಪುಸ್ತಕ

ಭೌತಿಕ ದರ್ಶನ

ಬಡೆಕ್ಕಿಲ ಕೃಷ್ಣ ಭಟ್ಟ, ಎಲ್. ಎಲ್. ಬಿ

ಉಡುಪಿಯಲ್ಲಿ ಪ್ರತಿಗಳು ಸಿಗುವ ಸ್ಥಳ—

ನವಭಾರತ ಪುಸ್ತಕ ಭಂಡಾರ, ಉಡುಪಿ

ಮಾನವತಾವಾದಿ - ಪ್ರೇಮಚಂದ

ಭಾರತದ ಗೋರ್ಕಿ ಎಂಬ ಪ್ರಶಂಸೆ ಇವರಿಗೆ ಸೋವಿಯತ್ತಿನಲ್ಲಿದೆ.

ಸೋವಿಯೆತ್ ವಾಚಕರ ಹೃದಯದಲ್ಲಿ ಪ್ರೇಮಚಂದರ ಬಗ್ಗೆ ವಿಶಿಷ್ಟ ಸ್ಥಾನವಿದೆ. ಸ್ವತಃ ಪ್ರೇಮಚಂದರು ಸೋವಿಯೆತ್ ಗಣರಾಜ್ಯದ ಕಾರ್ಮಿಕ ಜನರ ಬಗ್ಗೆ ಯಾವ ಉನ್ನತ ಭಾವನೆಯನ್ನು ತಳೆದಿದ್ದರೋ, ಸಮಾಜವಾದೀ ಕ್ರಾಂತಿಯ ನಂತರ ರಷ್ಯದಲ್ಲಿ ನಡೆದ ದಿಟ್ಟ ಸಾಮಾಜಿಕ ಬದಲಾವಣೆಗಳನ್ನು ಆದಷ್ಟು ಸಹಾನುಭೂತಿಯನ್ನು ಅವರು ಕಂಡರೋ ಅಷ್ಟೇ ಪ್ರೇಮ ಹಾಗೂ ಸಹಾನುಭೂತಿಗಳು ಸೋವಿಯೆತ್ ವಾಚಕರಲ್ಲಿ ಪ್ರೇಮಚಂದರ ಪಾತ್ರಗಳ ಕುರಿತು ತುಂಬಿವೆ. "ಪ್ರೇಮಾಶ್ರಮ" ಎಂಬ ಅವರ ಒಂದು ಕಾದಂಬರಿಯ ನಾಯಕನಾದ ಬಾಲ್‌ರಾಜ್ ರೈತರಿಗೆ, ಕಾರ್ಮಿಕರಿಗೆ ಪುಸ್ತಕಗಳನ್ನೂ ಪತ್ರಿಕೆಗಳನ್ನೂ ಓದಿ ಹೇಳುತ್ತಾನೆ. ಅವರನ್ನು ವಸಾಹತು ಅಧಿಕಾರಿಗಳ ವಿರುದ್ಧ ಸಂಘರ್ಷದತ್ತ ನಡೆಸುತ್ತಾರೆ. "ರಷ್ಯದ ಕಾರ್ಮಿಕರೂ, ರೈತರೂ ತಮ್ಮದೇ ಆದ ರಾಜ್ಯವನ್ನು ಕಟ್ಟಲು ಶಕ್ತರಾಗಿದ್ದಾರೆಂದು ಸಿದ್ಧ ಮಾಡಿ ತೋರಿಸಿರುವಾಗ ನಾವಾದರೂ ಯಾಕೆ ದಾಸ್ಯ ಜೀವನ ನಡೆಸಬೇಕು" ಎಂಬುದಾಗಿ ಬಾಲ್‌ರಾಜ್ ಪ್ರಶ್ನಿಸುತ್ತಾರೆ.

ಸಾಹಿತಿಯ ಧರ್ಮಪತ್ನಿ ಶಿವರಾಣಿದೇವಿ ಅವರು ತಮ್ಮ ಸಂಸ್ಮರಣೆಯ ಕೃತಿ "ಪ್ರೇಮಚಂದ: ಘರ್‌ಮೆ"ಯಲ್ಲಿ ಸ್ವತಃ ಪ್ರೇಮಚಂದರು ೧೯೩೦ರಲ್ಲಿ ಆಡಿದ ಮಾತುಗಳನ್ನು ಹೀಗೆ ಉಲ್ಲೇಖಿಸಿದ್ದಾರೆ: "ಜಗತ್ತಿನ ಎಲ್ಲೆಲ್ಲೂ ಬಲವಂತರು ದುರ್ಬಲರನ್ನು ಶೋಷಿಸುತ್ತಿದ್ದಾರೆ. ಕೇವಲ ರಷ್ಯದಲ್ಲಿ ಮಾತ್ರವೇ ಜನ ಶ್ರೀಮಂತರನ್ನು ನಾಶ ಮಾಡಿದ್ದಾರೆ...ಅಲ್ಲಿ ಬಡವರೀಗ ಸ್ವತಂತ್ರರಾಗಿ ಉಸಿರಾಡಲು ಶಕ್ತರಾಗಿದ್ದಾರೆ."

ಲೇಖಕರ ಸರ್ವಪ್ರೀತಿ ಹಾಗೂ ಸಹಾನುಭೂತಿಗಳು ದುಡಿಮೆಗಾರ ಜನರ ಕಡೆಗೇ. ಅವರು ಹೇಳುತ್ತಿದ್ದರು. "ನಾನು ಕೂಡ ಒಬ್ಬ ಕಾರ್ಮಿಕನೇ, ವ್ಯತ್ಯಾಸವೆಂದರೆ ಸಲಿಕೆ ಹಿಡಿದು ನಾನು ಕೆಲಸ ಮಾಡುವುದಿಲ್ಲ, ಆದರೆ ಲೇಖನಿ ಹಿಡಿದು ಕೆಲಸ ಮಾಡುತ್ತೇನೆ."

ಭವ್ಯ ಭವಿಷ್ಯತ್ತಿನ ಚಟುವಟಿಕೆಗಾರ

ಅವರು ತಮ್ಮ ತಾಯ್ನಾಡಿಗಾಗಿ ಭವ್ಯ ಸುಂದರ ಭವಿಷ್ಯತ್ತಿನ ಕನಸು ಕಾಣುತ್ತಿದ್ದರು. ಲೇಖಕರ ಸೃಜನಶೀಲ ಕಾರ್ಯವು ಈ ಬಿರುಸಿನ ಹೋರಾಟ ಭಾವದಿಂದಲೇ ತುಂಬಿದೆ. ೧೯೩೦ರಲ್ಲಿ ಆಗ "ವಿಶಾಲ ಭಾರತ" ಎಂಬ ಪತ್ರಿಕೆಯ ಸಂಪಾದಕರಾಗಿದ್ದ ಬನಾರ್ಸಿ ದಾಸ್ ಚತುರ್ವೇದಿ ಅವರ "ನಿಮ್ಮ ಕಾರ್ಯಯೋಜನೆ ಹಾಗೂ ಆಶೆ ಆಕಾಂಕ್ಷೆಗಳೇನು?" ಎಂಬ ಪ್ರಶ್ನೆಗೆ ಉತ್ತರ ಕೊಡುತ್ತಾ ಪ್ರೇಮಚಂದರು ಹೀಗಂದಿದ್ದರು."ನನ್ನ ಆಶೆಆಕಾಂಕ್ಷೆಗಳು ಅತ್ಯಂತ ಖಚಿತವಾಗಿವೆ ಮೊಟ್ಟಮೊದಲನೆಯದಾಗಿ ನಮ್ಮ ಸ್ವಾತಂತ್ರ್ಯ ಹೋರಾಟವು ಯಶಸ್ವಿಯಾಗಬೇಕೆಂಬುದೇ ನನ್ನ ಆಶೆ. ಶ್ರೀಮಂತಿಕೆ, ವೈಭವ ಮೊದಲಾದುವುಗಳಿಗೆ ನಾನೆಂದೂ ಬೆಂಬಲಿಸಿಲ್ಲ ಕಾರು, ಅರಮನೆಗಳೂ ನನಗೆ ಬೇಡ. ಆದರೆ ನಾನು ಕನಸು ಕಾಣುತ್ತಿರುವ ಒಂದೆರಡು ವಿಷಯಗಳು ಇವೆ. ನನ್ನ ಹಿಂದೆ ಉನ್ನತ ಕಲಾತ್ಮಕತೆಯಿಂದ ಕೂಡಿದ, ನಮ್ಮ ಸ್ವಾತಂತ್ರ್ಯ ಸಂಘರ್ಷಕ್ಕೆ ಅರ್ಪಿತವಾದಂಥ ಒಂದೆರಡು ಕೃತಿಗಳನ್ನು ಬಿಟ್ಟು ಹೋಗಬೇಕೆಂಬುದೇ ಆ ಕನಸು....ಸಾಹಿತ್ಯ ಮತ್ತು ದೇಶಸೇವೆ ಇದೇ ನನ್ನ ಜೀವನದ ಗುರಿ."

ಆಗಿನ ವಸಾಹತು ಭಾರತದ ಸ್ಥಿತಿಗತಿಗಳಲ್ಲಿ ಪ್ರೇಮಚಂದರು ದಿಟ್ಟ ಸಾಹಸಗಳನ್ನು ತೋರಿಸುವ ಕಾಲಕ್ಕೇ ಸೋವಿಯೆತ್ ಜನ ಕೈಗೊಂಡಿದ್ದ ಮಹಾನ್ ಆರ್ಥಿಕ ಮತ್ತು ಸಾಂಸ್ಕೃತಿಕ ನಿರ್ಮಾಣಗಳಲ್ಲೂ ವಿಶೇಷ ಆಸಕ್ತಿ ತೋರಿಸಿದರು. ಜಗತ್ತಿನಲ್ಲೇ ಮೊಟ್ಟಮೊದಲನೇ ಕಾರ್ಮಿಕ ರಾಜ್ಯವಾಗಿದ್ದ ಸೋವಿಯೆತ್ ಒಕ್ಕೂಟದ ಬಗ್ಗೆ ವಸಾಹತು ಅಧಿಕಾರಿಗಳು ಹರಡಿದ ಹೊಲಸು ಅಪಪ್ರಚಾರ ಹಾಗೂ ಕಂತೆಬೊಂತೆಗಳ ಹಿನ್ನೆಲೆಯಲ್ಲಿ ನೋಡಿದಾಗ ಪ್ರೇಮಚಂದರು ವಸ್ತುನಿಷ್ಠವಾಗಿ ಸೋವಿಯೆತ್ ಒಕ್ಕೂಟದ ಬಗ್ಗೆ ಬರೆಯುತ್ತಿದ್ದ ಲೇಖನಗಳು ಇನ್ನಷ್ಟು ಕ್ರಾಂತಿಮಯವಾಗಿ ಬೆಳಗಿದವು. ಅವರ ಕೃತಿಗಳಲ್ಲೂ ಇವು ಪ್ರತಿಬಿಂಬಿತವಾದುವು.

ಪತ್ರಕರ್ತರೂ, ಪ್ರೇಮಚಂದರ ಆತ್ಮಚರಿತ್ರೆಯ ಲೇಖಕರೂ ಆದ ಮದನ್ ಗೋಪಾಲ್ ಅವರ ಅಭಿಪ್ರಾಯದ ಪ್ರಕಾರ—ಪ್ರೇಮಚಂದರ ಕೊನೆಯ ಆದರೆ ಅರ್ಥಪೂರ್ಣ ಕೃತಿಯೂ, ಭಾರತದ ಗ್ರಾಮಾಂತರ ಪ್ರದೇಶಕ್ಕೆ ಮೀಸಲೂ ಆದ "ಗೋದಾನ" ಕಾದಂಬರಿ ರಚನೆಯ ಕಾಲಕ್ಕೆ ಅವರು ಸೋವಿಯೆತ್ ಒಕ್ಕೂಟದಲ್ಲಾಗುತ್ತಿದ್ದ ಸಮಾಜವಾದೀ ಪರಿವರ್ತನೆಗಳನ್ನು ಸಂಪೂರ್ಣವಾಗಿ ಅಭ್ಯಸಿಸಿದರು, ಭಾರತದ ರೈತಾಪಿ ಜನರ ಕಷ್ಟಕರ ಸಮಸ್ಯೆಗಳ ಪರಿಹಾರಕ್ಕಾಗಿ ಮುಖ್ಯವಾಗಿ ಈ ಕಾರ್ಯ ಕೈಕೊಂಡರು ಮತ್ತು ಸಮಷ್ಟಿ ಬೇಸಾಯದ ಕಲ್ಪನೆಯಂತೂ ಅವರನ್ನು ಅತಿಶಯವಾಗಿ ಆಕರ್ಷಿಸಿತು ಎಂದು ತಿಳಿಯುತ್ತದೆ.

ಪ್ರೇಮಚಂದರ ಪ್ರಥಮ ಉರ್ದು ಕಥಾ ಸಂಕಲನ 'ಸೋಜ್—ಇ-ವತನ್' ಬ್ರಿಟಿಷ್ ವಸಾಹತುಗಾರರಿಂದ ಬಹಿರಂಗವಾಗಿಯೇ ದಹಿಸಲ್ಪಟ್ಟಿತು. ಇದರಲ್ಲಿಯ ಪ್ರತಿಯೊಂದು ಮಾತೂ ವಿದೇಶಿ ಆಳ್ವಿಕೆಯ ವಿರುದ್ಧ, ನಿರಂಕುಶತೆಯ ವಿರುದ್ಧ, ಸ್ವೇಚ್ಛಾಚಾರದ ವಿರುದ್ಧ ಸಿಡಿಯುತ್ತಿದ್ದುವು. ಆದರೆ ಈ ಪುಸ್ತಕ ದಹನದೊಂದಿಗೆ ಪ್ರೇಮಚಂದರಲ್ಲಿ ತುಂಬಿದ್ದ ದೇಶಪ್ರೇಮವೂ ಸುಟ್ಟುಹೋಗುತ್ತದೆಯೆಂಬ ವಸಾಹತವಾದಿಗಳ ಆಶೆಯೆಲ್ಲ ನಿಷ್ಫಲವಾಗಿತ್ತು. ಈ ರೀತಿಯ ಕಷ್ಟನಷ್ಟಗಳು ಅವರನ್ನು ಇನ್ನಷ್ಟು ಸಜ್ಜುಗೊಳಿಸಿದುವು, ಅವರಲ್ಲಿದ್ದ ಕೆಲವು ಸುಧಾರಣಾವಾದೀ ಕಲ್ಪನೆಗಳಿಂದ ಅವರು ಮುಕ್ತರಾಗಿ, ನಿಷ್ಕರ್ಷವಾದ ಕ್ರಾಂತಿಕಾರಿ ನಿಲುವನ್ನು ತಳೆಯುವಂತೆ ಮಾಡಿದುವು. ಹೋರಾಟವೆ ಸಾಹಿತಿಯ ಜೀವನ ಮಂತ್ರವಾಯಿತು.

"ಪ್ರತಿಯೊಬ್ಬನೂ ಹೋರಾಟಗಾರನೆಂಬ ಪ್ರಜ್ಞೆಯೆ ನಿಜವಾದ ಚಿತ್ತಶಾಂತಿ" ಎಂಬುದಾಗಿ ಪ್ರೇಮಚಂದರು ಬರೆದರು.: "ನನ್ನನ್ನು ನಾನು ಹೋರಾಟಗಾರನೆಂದು—ಇದೇ ಅಸ್ತಿತ್ವದ ಅಳತೆಗೋಲು—ಕರೆದಕೊಳ್ಳಲು ಅರ್ಹನಾಗಿದ್ದೇನೆಯೆ.? ಇನ್ನು ನಾನೆಂದೂ ನನ್ನ ಜೀವನ ನಿಷ್ಪ್ರಯೋಜಕ ಎಂದು ಹೇಳಿಕೊಳ್ಳುವುದಿಲ್ಲ. ಹೋರಾಟಕ್ಕಾಗಿಯೆ ಜೀವನ ನನ್ನನ್ನು ಹುಟ್ಟಿಸಿದೆ, ಮತ್ತೆ ಈ ಹೋರಾಟಕ್ಕೇ ನನ್ನೆಲ್ಲ ಶಕ್ತಿ ಮೀಸಲು."

ಈ ಮಾತುಗಳು ಪರಮಪ್ರಿಯವಾಗಿವೆ. ಯಾಕೆಂದರೆ ಪ್ರೇಮಚಂದರ ಸಮಕಾಲೀನ ಲೇಖಕರೂ, ಯೋಧರೂ ಆದ, ನಿಕೊಲಾಯಿ ಓಸ್ತ್ರೋವೆಸ್ಕಿಯವರೂ ಈ ಮಾತುಗಳನ್ನು ಹೋಲುವಂಥ ನುಡಿಗಳನ್ನೇ ಆಡಿದ್ದರು: "ಜೀವನ ಮನುಷ್ಯನ ಅತ್ಯಮೂಲ್ಯ ಆಸ್ತಿ. ಅದು ಒಮ್ಮೆಯೆ ಸಿಕ್ಕುವಂಥದು. ಅಂತೆಯೆ ಯಾ ಪ್ರಾಂದು ಗೂ ಶಸ್ತ್ರ ಗುರಿಯು ಇಲ್ಲದೆ ವಿಫಲ ಜೀವನ ಕಳೆದೆ ಎಂದು ಪಶ್ಚಾತ್ತಾಪ ಪಡುವಂತ ಯಾರೂ ಬಾಳಬಾರದು. ಸಾಯುವ ಕಾಲಕ್ಕೆ ಆತ ಹೀಗೆ ಹೇಳಲು ಶಕ್ತನಾಗಬೇಕು: ನನ್ನೆಲ್ಲ ಶಕ್ತಿಯೂ ಜೀವನವೂ ಜಗತ್ತಿನಲ್ಲೇ ಅತ್ಯದ್ಭುತ ಸಂಗತಿಯಾದ ಮನುಕುಲದ ವಿಮೋಚನಾ ಸಂಘರ್ಷಕ್ಕೆ ಮೀಸಲಾಗಿತ್ತು."

ಗೋರ್ಕಿಯವರ ಪ್ರಭಾವ

ಪ್ರೇಮಚಂದರ ಸೃಜನ ಶೀಲ ಪರಿಶ್ರಮದ ಮೇಲೆ ಮಾಕ್ಸಿಂ ಗೋರ್ಕಿಯವರ ಪ್ರಭಾವ ತುಂಬಾ ಆಗಿದೆ "ಗೋರ್ಕಿ ಒರ್ವ ಮಹಾನ್‌ಲೇಖಕರಾಗಿದ್ದಾರೆ"ಎಂದು ಪ್ರೇಮಚಂದರು ಬರೆಯುತ್ತ ಹೀಗೆಂದರು "ಅವರ ಕೃತಿಗಳು ಗಡಿಗಳನ್ನು ದಾಟಿ ಬಂದಿವೆ. ಆ ರಾಷ್ಟ್ರದ ಆತ್ಮ ವಿಶ್ವಾಸವನ್ನು ಅಪಾರವಾಗಿ ಬೆಳೆಸಿವೆ. ಮಹಾನ್ ಲೇಖಕರೆಂದರೆ ಅವರು ಕೇವಲ ಭಾರತೀಯರಲ್ಲ, ಯುರೋಪಿಯನ್ನರಲ್ಲ, ಅವರು ಬರೆದುದು ಎಲ್ಲರಿಗಾಗಿ."

ಭಾರತದ ಜನ ಸುಶಿಕ್ಷಿತರಾಗಿ ತಮ್ಮ ತುಲಸೀದಾಸ್ ಮತ್ತು ಸೂರ್‌ದಾಸ್‌ರಷ್ಟೇ ಗೋರ್ಕಿಯವರನ್ನೂ ಅರಿಯುವಂಥ ಕಾಲ ಎಂದು ಬಂದೀತೆಂದು ಪ್ರೇಮಚಂದರು ಕನಸು ಕಾಣುತ್ತಿದ್ದರು.

ಭಾರತ ಮತ್ತು ಸೋವಿಯೆತ್ ಒಕ್ಕೂಟಗಳ ಜನತೆಗಳ ಪರಸ್ಪರ ಹಿತಕಾರಿಯಾದಂಥ ಸಾಂಸ್ಕೃತಿಕ ಸಂಬಂಧಗಳ ಬೆಳವಣಿಗೆಯಲ್ಲಿ ಪ್ರೇಮಚಂದ್ ಮತ್ತು ಮ್ಯಾಕ್ಸಿಂ ಗೋರ್ಕಿ ಅವರ ಹೆಸರುಗಳು ಒಟ್ಟೊಟ್ಟಾಗಿ ನಿಲ್ಲುತವೆ. ಇಂದಿನ ಸ್ವತಂತ್ರ ಭಾರತದಲ್ಲಿ ಮಾಕ್ಸಿಂಗೋರ್ಕಿಯವರ ಜನಪ್ರಿಯತೆ ಅಗಾಧವಾಗಿದೆ ಮತ್ತು ಭಾರತ ಗಣರಾಜ್ಯವು ಶೈಕ್ಷಣಿಕ ಪ್ರಗತಿಯನ್ನು ಸಾಧಿಸಿದಂತೆ ಇದು ಇನ್ನಷ್ಟು ಬೆಳೆಯುತ್ತಿದೆ.

ಪ್ರೇಮಚಂದರು ಹಿಂದೀ ಉರ್ದುಗಳಲ್ಲಿ, ಗೋರ್ಕಿಯವರು ರಷ್ಯನ್ ಭಾಷೆಯಲ್ಲಿ, ಠಾಕೂರರು ಬಂಗಾಳಿಭಾಷೆಯಲ್ಲಿ ಬರೆದರು ಆದರೆ ಇವರೆಲ್ಲರೂ ಬಂಗಾಳೀ ರೈತರಿಗೆ, ಉಕ್ರೇನಿನ ಭೂಸಾಗುವಳಿಗಾರರಿಗೆ ಅಥವಾ ಗುಜರಾತಿನ ಕಸುಬುಗಾರರಿಗೆ ಅಷ್ಟೇ ಪ್ರೀತಿಪಾತ್ರರಾಗಿದ್ದಾರೆ, ಯಾಕೆಂದರೆ ಲೇಖಕನ ಜಾತಿ ಅಥವಾಭಾಷೆಬಿಟ್ಟ ಸಾಹಿತಿಯ ಸ್ಥಾನವನ್ನು ಜೀವನದಲ್ಲಿ ಯಾವತ್ತೂ ನಿರ್ಧರಿಸುವುದಿಲ್ಲ.

ಅಖಿಲ ಭಾರತ ಪುರೋಗಾಮಿ ಲೇಖಕರ ಪ್ರಥಮ ಸಮ್ಮೇಳನದಲ್ಲಿ ಮಾತನಾಡುತ್ತ ಪ್ರೇಮಚಂದರು ಹೀಗೆ ಹೇಳಿದರು. "ಘನವಾದ ಕಲ್ಪನೆಗಳಿರುವ ಸಾಹಿತ್ಯ ಮಾತ್ರವೇ ಬಾಳಬಲ್ಲುದು. ಸ್ವಾತಂತ್ರ್ಯ, ಸೌಂದರ್ಯ ಭಾವನೆ, ನಿರ್ಮಾಣಶೀಲ ಚೇತನ ನಮ್ಮನ್ನು ಹೋರಾಟಕ್ಕೆ ಹುರಿದುಂಬಿಸಿ ಮುನ್ನುಗ್ಗಿಸುವಂತೆ ಜೀವನ ಸತ್ಯತೆಯ ಕಾಂತಿ ಇವೇ ದಿವ್ಯ ಭಾವನೆಗಳಾಗಿವೆ. ಇವೇ ಎಲ್ಲ ಕಷ್ಟನಷ್ಟಗಳೆದುರೂ ನಮ್ಮನ್ನು ದೃಢವಾಗಿ ನಿಲ್ಲಿಸುತ್ತವೆ."

ಬಿಳೀ ತೊನ್ನು ಮಹಾತ್ಮಾ ಪ್ರದತ್ತ- ಬಿಳೀ ತೊನ್ನು ಅದಲ್ಲ
ಹಚ್ಚಿದಲ್ಲಿ ಅದು ಹೋಗಿ ಚರ್ಮದ ಬಣ್ಣ ಬರುವದು. ಬೆಲೆ ರೂ. ೧೦/- Rs. 10/-
Himalaya Ayurved Bhavan (7)
P. O Katri Sarai (Gaya)

ಚಿಕ್ಕ ಹಿಡುವಳಿದಾರರಿಗೆ ಉತ್ತಮ ಕೊಡುಗೆ

ವರ್ಜಿನ್ 3 H. P. ಕ್ರೂಡ್ ಆಯಿಲ್ ಪಂಪು ಸೆಟ್ಟುಗಳು.......

ಧನ ಇಲೆಕ್ಟ್ರಿಕ್ ಮೋಟಾರು ಮತ್ತು ($\frac{1}{4}$ H.P. to 30 H.P.) ಪಂಪು ಸೆಟ್ಟುಗಳು.......

ವಿತರಣೆಗಾರರು —
ನಿತ್ಯಾನಂದ ಇಂಡಸ್ಟ್ರಿಯಲ್ ಏಜನ್ಸೀಸ್
ಕಾರ್ಕಳ (ದ. ಕ.)

ನವಯುಗಕ್ಕೆ
ಚಂದಾದಾರರಾಗಿ ಪ್ರೋತ್ಸಾಹಿಸಿರಿ.
ವಾರ್ಷಿಕ ಚಂದಾ ರೂ. ೧೦

ಕೀಟಗಳ ನಿಯಂತ್ರಣ ದಲ್ಲೊಂದು ಎಚ್ಚರಿಕೆ

(ಒಂಭತ್ತನೇ ಪುಟದಿಂದ)

ಲವನ್ನು ಹಾರಾಟದಲ್ಲೇ ಕಳೆಯುತ್ತದೆ. ನಾವು ಚಿಮುಕಿಸಿದ ವಿಷ ನೆಲದ ಮೇಲಿರುವುದರಿಂದ ವಿಷ ಸಂಪರ್ಕದ ಸಾಧ್ಯತೆ ಬಹು ಕಡಮೆಯಾಗುತ್ತದೆ.

ನಾಲ್ಕು ದಿನ ವಯಸ್ಸಿನ ನೊಣ ಮಾತ್ರ ಕೇವಲ ಅರೆಷ್ಟು ಕಾಲ ಮಾತ್ರ ಹಾರಾಡುತ್ತಿದ್ದು ಮಿಕ್ಕ ಕಾಲವನ್ನು ನೆಲದ ಮೇಲೆ ಕಳೆಯುತ್ತದೆ. ಅವುಗಳು 'ಹುಟ್ಟಿದ' ನಾಲ್ಕನೇ ದಿನವೇ ಸಂಪರ್ಕ ಸಾಧ್ಯತೆಗೆ ಸೂಕ್ತವಾಗಿದೆ.

ಪ್ರಾಣಿಯ ನಡೆವಳಿಕೆಯನ್ನು ತಿಳಿದುಕೊಳ್ಳುವುದೂ ಬಹು ಮಹತ್ವದ್ದಾಗಿದೆ. ಹಾಗೆಂದರೆ ವಿಷಕ್ಕೆ ಅವು ಅಂಜಿಕೊಳ್ಳುವವೆ? ಹೌದು, ಬಹಳಷ್ಟು ಹೆದರುತ್ತವೆಯೆಂದು ಕಂಡು ಬಂದಿದೆ. ವಿಷದ ಕಣಗಳಿಂದ ನೊಣಗಳು ದೂರಿರುತ್ತವೆ. ಇದರಿಂದ ಕ್ಲೋರೊಫಾಸ್ ಸಂಪರ್ಕ ಸಾಧ್ಯತೆ ಐದು ಪಾಲು ಕಡಮೆಯಾಗುತ್ತದೆ.

ಈ ರೀತಿ ನಡೆಸಿದ ಪ್ರಯೋಗಗಳು ಸ್ಪಷ್ಟವಾಗಿ ಕಂಡುಬಂದಿದ್ದು ಅಂತೆಯೆ ಈ ಪ್ರಾಣಿಗಳ ದೈಹಿಕ ಮತ್ತು ಮಾನಸಿಕ ರಚನೆ, ಕ್ರಮ, ವ್ಯಾಪಾರ ಮೊದಲಾದವುಗಳನ್ನು ಅಭ್ಯಸಿಸುವುದು, ಅಂದಾಜು ಮಾಡುವುದು ಅಗತ್ಯವಾಗಿದೆ. ಎಂಜಿನೀಯರಿಂಗ್ ತಾಂತ್ರಿಕತೆಯಿಂದ ಇವುಗಳನ್ನೆಲ್ಲ ಲೆಕ್ಕ ಹಾಕುವ ಸ್ಥಿತಿಯಲ್ಲಿ ಇಂದು ನಾವಿದ್ದೇವೆ. 'ಸೋವಿಯೆಟ್ ಒಕ್ಕೂಟದಲ್ಲೇ ಇದನ್ನು ಸಾಧಿಸಿದೆ'ಯೆಂಬುದು ನಿಜವಾಗಿಯೂ ನಮಗೆ ಸಂತಸದ ಸಂಗತಿಯಾಗಿದೆ. ಬೇರೆ ಬೇರೆ ದ್ರವ-ದ್ರವ್ಯಗಳಿಗೆ ಬೇರೆ ಬೇರೆ ಕ್ರಿಮಿಕೀಟಗಳ ಪ್ರತಿಕ್ರಿಯೆಯೇನು, ತೊಲಗಿಸುವ ಮಟ್ಟದ ನಿರ್ಧಾರ ಮೊದಲಾದವುಗಳನ್ನು ಇಂದು ಲೆಕ್ಕ ಹಾಕಲು ಸಾಧ್ಯವಿದೆ.

ಆದರೆ ಹೊಲಗಳಲ್ಲಿರುವುದು ಕೇವಲ ಬೆಳೆ ನಾಶಕ ಕ್ರಿಮಿಕೀಟಗಳು ಮಾತ್ರವೇ ಅಲ್ಲ. ಉಪಯುಕ್ತ ಜೀವಿಗಳೂ ಇವೆ. ಇವು ಒಂದರ ಪಕ್ಕದಲ್ಲೊಂದು ಮಾತ್ರವೇ ಇಲ್ಲ. ಕೆಲವು ಕೆಲವೊಂದನ್ನು ಮಾತ್ರ ತಿಂದು ಹಾಕುತ್ತವೆ, ಇನ್ನು ಕೆಲವು ಬೇರೆಯವುಗಳಿಗೆ ಸಹಾಯ ಮಾಡುತ್ತವೆ. ಅದರ ಜೈವಿಕ ಒಡನಾಡಿತನದಲ್ಲಿ ಒಂದೊಂದಕ್ಕೂ ಒಂದು ಪ್ರಾಕೃತಿಕ ಸ್ಥಾನವಿದೆ. ಒಂದೇ ಜಾತಿಯನ್ನು ನಾಶ ಮಾಡುವುದೆಂದರೆ ಇವುಗಳನ್ನು ಒಂದುಗೂಡಿಸಿಟ್ಟಿರುವ "ವಿಷ ವರ್ತುಲ"ವನ್ನು ಒಡೆದಂತೆ. ಇಂಥ ಒಂದು ಒರಟು ಹಸ್ತಕ್ಷೇಪದಿಂದ, ಅನಿರೀಕ್ಷಿತವಾಗಿ 'ಖಾಲಿ'ಯಾದ ಸ್ಥಳಕ್ಕೆ ಸರಿಹೋದ 'ಭರ್ತಿ' ಆಗುವವರೆಗೂ ಕೂಟವು ಒಂದು ಅರಾಜಕ ಸ್ಥಿತಿಗೊಳಪಡುತ್ತದೆ. ಇಂಥ ಸ್ಥಾನವೂ ಭರ್ತಿಯಾಯಿತೆಂದಿಟ್ಟುಕೊಳ್ಳಿ. ಆದರೆ ಫಲಿತಾಂಶ ಮಾತ್ರ ಸಂತಸಕರವಾಗಿರುವುದಿಲ್ಲ. ಒಂದು ಕೀಟದ ಮೇಲೆ ನಮ್ಮ ಕೋಪವನ್ನು ಕಾರಿ ಮುಂದೆ ಅದಕ್ಕಿಂತ ಭೀಕರವಾದುದನ್ನೇ ನಾವು ತರಬಹುದು.

ಅಂತೆಯೆ ವಿನಾಶಕಾರಿ ಕ್ರಿಮಿಕೀಟಗಳನ್ನು ಮಾತ್ರವೇ ನಾವು ನಾಶಮಾಡಬೇಕಾಗಿಲ್ಲ, ಸೃಷ್ಟಿಯಲ್ಲಿರುವ ಸಮತೋಲನೆ ನಾಶವಾಗದಂತೆಯೂ ನೋಡಿಕೊಳ್ಳುವುದಗತ್ಯವಾಗಿದೆ.

ಹಾಗಿದ್ದರೆ ನಾವೇನು ಮಾಡುವುದು? ನಿಸರ್ಗದ ಹಿಂದೆಯೆ ನಡೆಯುವುದೆ? ಇಲ್ಲ ಖಂಡಿತವಾಗಿ ನಾವು ವಿವೇಕ ರೀತಿಯಲ್ಲಿ ನಿಸರ್ಗವನ್ನು ಹತೋಟಿಗೆ ತರುವುದನ್ನು ಕಲಿಯಬೇಕು.

ಇಂಥ ಒಂದು ನಿಯಂತ್ರಣಕ್ಕೆ ಸಮುಚಿತವಾದ ಗಣಿತ ರೀತಿಯಲ್ಲಿ ಪಥವನ್ನು ಹುಡುಕುತಿದ್ದಾರೆ. ನಾವು ಅಪೇಕ್ಷಿಸಿದ ಗುರಿಯನ್ನು ತಲ್ಪುವ ಕಾಲವೂ ಬಹಳ ದೂರವೇನಿಲ್ಲ. ಈಗಾಗಲೇ ಅವರ ಬಳಿಯಲ್ಲಿ ಇಂಥ "ಹಸ್ತಕ್ಷೇಪ" ಅದರ ಜೈವಿಕ ಪರಿಣಾಮ ಮೊದಲಾದುವುಗಳ ಬಗ್ಗೆ ಬಹಳಷ್ಟು ಮಾಹಿತಿ ಇದೆ. ಗಣಿತ ರೀತಿಯ ಸೂತ್ರಗಳಲ್ಲಿ ಪ್ರತಿಯೊಂದೂ ಸ್ಪಷ್ಟವಾಗಿದೆಯೆಂದು ಅರ್ಥವಲ್ಲ. ಆದರೆ ಬಹಳಷ್ಟು ಅರ್ಥ ವಿವರಣೆಯನ್ನು ಪಡೆದಿದ್ದಾರೆ.

ಈ ಸೂತ್ರಗಳು ಯಾವ ಕ್ರಿಮಿಕೀಟಗಳನ್ನು ಸಾಯಿಸಬೇಕು, ಯಾವುದಕ್ಕೆ ಸಹಾಯ ನೀಡಬೇಕು ಎಂಬ ಮಾಹಿತಿಯನ್ನು ನೀಡುತ್ತವೆ. ಕೀಟಗಳನ್ನು ಪೂರ್ಣ ಸಾಯಿಸದೆ ಅವುಗಳ ಗುಣಧರ್ಮಗಳನ್ನು ಮಾತ್ರ ಬದಲಾಯಿಸುವಂಥ ರಾಸಾಯನಿಕಗಳಿಂದ ಬೆಳೆಗಳನ್ನು ರಕ್ಷಿಸಬಹುದೆಂದು ಕಂಡು ಬಂದಿದೆ. ಉದಾಹರಣೆಗೆ ಒಂದು ಕೀಟಕ್ಕೆ ಒಂದು ಹಸಿವೆಯಿದೆಯೆಂದು ಇಟ್ಟುಕೊಳ್ಳಿ. ಹಸಿಯು ಬಾಯಿಗೆಬೀಳುವಂತ ಈ ಕೀಟವನ್ನು ತಡೆದರೆ ಸಾಕು. ವಿನಾಶಕಾರೀ ಕೀಟಗಳನ್ನು ಹೋರಾಡಲು ಅನಂತ ಮಾರ್ಗಗಳೇ ಇವೆ. ಮತ್ತೆ ಈ ಕ್ರಮಗಳು ನಿಸರ್ಗಕ್ಕೆ ನಿಕಟವಾಗಿಯೂ ಇವೆ.

ಈಗ ನಮ್ಮ ಈ ವಿನೂತನ ಗಣಿತವು ಬಿಡಿಸಬೇಕಾದ ಸಮಸ್ಯೆಗಳಲ್ಲಿ ಬೆಳೆಗಳನ್ನು ಕ್ರಿಮಿಕೀಟಗಳಿಂದ ರಕ್ಷಿಸುವ ಸಮಸ್ಯೆಯೊಂದೇ ಅಲ್ಲ, ಇನ್ನೂ ಅನೇಕ ಸಮಸ್ಯೆಗಳಿವೆ. ಶಾಸ್ತ್ರೀಯವಾಗಿ ಬೆಳೆ ರಕ್ಷಣೆಯನ್ನು ಪುನರ್‌ವ್ಯವಸ್ಥೆಗೊಳಿಸುವಿಕೆ ಇನ್ನೂ ಪರಿಪೂರ್ಣಗೊಂಡಿಲ್ಲ. ಆದರೆ, ಅದು ಪರಿಪೂರ್ಣವಾಗಬೇಕಾಗಿರುವುದು ಅನಿವಾರ್ಯ ಮತ್ತು ಅದು ಆರಂಭವೂ ಆಗಿದೆ. ನಮ್ಮ ಕಾಲದ ೨೦ನೇ ಶತಮಾನದ ಬೇಡಿಕೆ ಇಂಥವುಗಳೇ.

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

S. C. 372/1966

ವಾದಿ— ಸದಿಯಮ್ಮ ಸೆಡ್ತಿ.

ಪ್ರತಿವಾದಿರು 1. ವೀರಣ್ಣ ಸೆಟ್ಟಿ, ಮಹಾಲಿಂಗ ಸೆಟ್ಟಿ ಅಳಿಯ,

2. ರಾಮಣ್ಣ ಸೆಟ್ಟಿ, 3. ಲಕ್ಷ್ಮಣ ಸೆಟ್ಟಿ, 1ನೇ ಪ್ರತಿವಾದಿ ಅಳಿಯಂದಿರರು.

ಉಡ್ಪಿ ತಾಲ್ಲೂಕು ಅಚ್ಲಾಡಿ ಗ್ರಾಮದಲ್ಲಿರುವವರು—

ಸದ್ರಿ ಪ್ರತಿವಾದಿರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ—

ನೀವು ವಾದಿಗೆ ತಾ. 15-7-1963ರಲ್ಲು ರುಪಾಯು 485-00ಕ್ಕೆ ಬರೆಕೊಟ್ಟ ಒಂದು ನೋಟಿನ ಅಸ್ಲು ಬಡ್ಡಿಯಲ್ಲಿ ಕೋರ್ಟು ಜೊತೆ 1ನ್ನು ಕೊಟ್ಟಂತೆ ವಾದಿಗೆ ಬಂದ ರುಪಾಯಿ 100-00 ಹೋಗ್ತಾ ಮಿಕ್ಕ ಅಸ್ಲು ಬಡ್ಡಿ ರುಪಾಯಿ 453-25 ಕ್ಕೆ ವಾದಿ ಹೂಡಿದ ಮೇಲಿನ ದಾವೆಯು ತಾರೀಕು 6-10-1966ಕ್ಕೆ ತನಿಖೆಗೆ ಇಟ್ಟಿರುತ್ತದೆ. ಕುರಿತು ನಿಮ್ಮದೇನಾದರೂ ಆಕ್ಷೇಪ ಇದ್ದರೆ ಆದಿನ ಬೆಳಿಗ್ಗೆ 11 ಘಂಟೆಗೆ ಮೇಲಿನ ಕೋರ್ಟಿನಲ್ಲಿ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು ಎಂಬ ಸಂಗ್ತಿ ತಿಳಿಸಿಯದೆ.

(ಕೋರ್ಟು ಹುಕ್ಕುಂ ಪ್ರಕಾರ)

Y. Tejappa Shetty
Advocate for Plff.
Coondapoor, 11—10—66.

ಎಲ್ಲೆಲ್ಲಿ ಏನೇನು?

ಉಡುಪಿ ಲೋಕಲ್ ಕೊ-ಒಪರೇಟಿವ್ ಯೂನಿಯನ್ನಿನ ಮಹಾಸಭೆ

ಉಡುಪಿ ತಾಲೂಕಿನ ಸುಮಾರು ಆರುವತ್ತು ಸಹಕಾರಿ ಸಂಘಗಳನ್ನು ಪ್ರತಿನಿಧೀಕರಿಸುವ ಉಡುಪಿ ಲೋಕಲ್ ಕೊ ಒಪರೇಟಿವ್ ಯೂನಿಯನ್ನಿನ ವಾರ್ಷಿಕ ಮಹಾಸಭೆಯು ಇತ್ತೀಚೆಗೆ ಶ್ರೀ ಪಿ. ವಿ. ಆಚಾರ್ಯರ ಅಧ್ಯಕ್ಷತೆಯಲ್ಲಿ ಜರಗಿತು. ಕಾರ್ಯದರ್ಶಿಗಳಾದ ಶ್ರೀ ಬಿ. ಪೈಯವರು ವರದಿಯೊಪ್ಪಿಸಿದರು. ಈ ಕೆಳಗಿನ ಸದಸ್ಯರನ್ನೊಳಗೊಂಡ ಹೊಸ ಆಡಳಿತ ಮಂಡಳಿಯು ಸರ್ವಾನುಮತದಿಂದ ಚುನಾಯಿಸಲ್ಪಟ್ಟಿತು. ಶ್ರೀಗಳಾದ ಪಿ. ವಿ. ಆಚಾರ್ಯ (ಅಧ್ಯಕ್ಷ), ಬಿ. ವೈಕುಂಠ ಪೈ (ಕಾರ್ಯದರ್ಶಿ), ಕೆಮ್ಮಣ್ಣಿನ ವೆಂಕಟಕೃಷ್ಣಯ್ಯ, ಬ್ರಹ್ಮಾವರದ ಬಿ. ವಿ. ಮಾಧವ ರಾವ್, ಬಡದ ಪೈ ಸಿ. ಯಸ್. ಹೆಗ್ಡೆ, ಕುಕ್ಕಾಲಿನ ಗಣಪಯ್ಯ ಶೆಟ್ಟಿ ಮತ್ತು ಶಿರ್ವದ ಕೆ. ವಾಸುದೇವ ಶೆಟ್ಟಿ (ಡೈರೆಕ್ಟರರು) ಶ್ರೀ ಕೆ. ಗಣಪಯ್ಯ ಶೆಟ್ಟಿ ಧನ್ಯವಾದವಿತ್ತರು.

ನಾಟಕ ಮಹೋತ್ಸವ

ಮಣಿಪಾಲ, ಅ. ೬ — ನಿನ್ನೆ ಇಲ್ಲಿನ ಕಸ್ತೂರ್ ಬಾ ಮೆಡಿಕಲ್ ಕಾಲೇಜಿನಲ್ಲಿ ಮುಕ್ತಾಯಗೊಂಡ ಒಂದು ವಾರದ ಕನ್ನಡ ನಾಟಕ ಮಹೋತ್ಸವದಲ್ಲಿ ಉಡುಪಿಯ ಪೂರ್ಣಪ್ರಜ್ಞ ಕಾಲೇಜು ಕೊಪ್ಪೀಕರ್ ಸ್ಮಾರಕ ಫಲಕವನ್ನು ಗೆದ್ದಿತು.

ಸಿಂಡಿಕೇಟ್ ಬ್ಯಾಂಕಿನ ಮುಖ್ಯಾಧಿಕಾರಿ ಶ್ರೀ ಕೆ. ಕೆ. ಪೈಯವರು ಫಲಕವನ್ನೂ, ಸ್ಪರ್ಧೆಯಲ್ಲಿ ಭಾಗವಹಿಸಿದ್ದ ಒಂಭತ್ತು ಕಾಲೇಜುಗಳ ಪೈಕಿ ಗೆದ್ದವರಿಗೆ ಬಹುಮಾನಗಳನ್ನೂ ವಿನಿಯೋಗಿಸಿದರು. ಮೆಡಿಕಲ್ ಕಾಲೇಜ್ ವಿದ್ಯಾರ್ಥಿ ಸಂಘದ ಅಧ್ಯಕ್ಷ ಶ್ರೀ ಬಾಬು ರಾಜೇಂದ್ರನ್ ಅಧ್ಯಕ್ಷತೆ ವಹಿಸಿದ್ದರು. ಮಹೋತ್ಸವದ ವ್ಯವಸ್ಥಾಪಕ ಡಾ|| ಎಚ್. ಶಾಂತರಾಂ ಮತ್ತು ನಿರ್ಣಾಯಕ ಮಂಡಳಿಯ ಸದಸ್ಯರಲ್ಲೊಬ್ಬರಾದ ಶ್ರೀ ಎಸ್. ಎಲ್ ಎನ್. ಭಟ್ ಮಾತನಾಡಿದರು.

ಉದ್ಘಾಟನಾ ಸಮಾರಂಭ

ನವಜ್ಯೋತಿ ಯುವಕ ಮಂಡಳಿ, ಮೂಡುಬೆಳ್ಳೆ ಇದರ ಉದ್ಘಾಟನಾ ಸಮಾರಂಭವು ತಾ

ಪ್ರಥಿಳದ ಡಿಸ್ಟ್ರಿಕ್ಟ್ ಬ್ಲೋಕ್ ಡೆವಲಪ್‌ಮೆಂಟ್ ಆಫೀಸರ್ ಶ್ರೀ ಅಬ್ದುಲ್ ಕುಟ್ಟಿಯವರಿಂದ ವಿಧಾನ ಸಭಾ ಸದಸ್ಯ ಶ್ರೀ ಭಾಸ್ಕರ ಶೆಟ್ಟರ ಅಧ್ಯಕ್ಷತೆಯಲ್ಲಿ ನೆರವೇರಿಸಲ್ಪಟ್ಟಿತು. ಸಂಘದ ಅಧ್ಯಕ್ಷ ಡಾ|| ಆರ್. ಎಮ್ ಕೊಡವಿನ್ಸ್‌ಲ್ ಧ್ವಜಾರೋಹಣ ಗೈದರು. ಶ್ರೀ ಸದಾನಂದ ರಾಯರು ಮಂಡಲದ ವರದಿ ಒಪ್ಪಿಸಿದರು. ಶ್ರೀ, ಶಿಕ್ಷಾರ್ಡಿ ವಿಲಿಯಂ ಪಿಂಟೋ, ಅವರು ರಾಷ್ಟ್ರಪಿತ ಗಾಂಧೀಜಿ ಹಾಗೂ ಸ್ವಾಮಿ ವಿವೇಕಾನಂದರ ಆದರ್ಶಗಳನ್ನು ಮುಂದಿಟ್ಟುಕೊಂಡು ಯುವಕರು ದುಡಿಯಬೇಕೆಂದರು.

ಅಧ್ಯಕ್ಷರು ತಮ್ಮ ಭಾಷಣದಲ್ಲಿ ದೇಶವು ಇಂದು ಎದುರಿಸುತ್ತಿರುವ ಸಂಕಷ್ಟಗಳನ್ನು ವಿವರಿಸಿ ಅವುಗಳ ನಿವಾರಣಾ ಕಾರ್ಯದಲ್ಲಿ ಸಂಘದ ಕರ್ತವ್ಯಗಳನ್ನು ತಿಳಿಸಿದರಲ್ಲದೆ, ಬೆಳ್ಳೆ ಗ್ರಾಮಕ್ಕೆ ಅಗತ್ಯ ಬೇಕಾಗಿದ್ದ ವಿದ್ಯುತ್ ಸೌಕರ್ಯ ಮತ್ತು ಸಾರಿಗೆ ಸಂಪರ್ಕ ವಿಷಯ ತನ್ನಿಂದ ಆದಷ್ಟು ಕೆಲಸಮಾಡುವುದಾಗಿ ಭರವಸೆಯಿತ್ತರು.

ಶ್ರೀ ವಲೇರಿಯನ್ ಡಿ' ಸೋಜರವರು ಧನ್ಯವಾದ ಸಮರ್ಪಿಸಿದರು.

ಶ್ರೀ ಎ. ಸಂಜೀವ ಪೂಂಜರ ನಿಧನ

ಬಂಟ ಸಮಾಜದ ಪ್ರತಿಷ್ಠಿತ ಮುರಕಡ ಕುಟುಂಬದವರೂ ಮಂಗಳೂರಿನ ಜ್ಯೋತಿ ಟಾಕೀಸಿನ ಮೆನೇಜರರೂ ಆದ ಶ್ರೀ ಅತ್ತಾವರ ಸಂಜೀವ ಪೂಂಜರವರು ಇದೇ ತಾ. 12ರಂದು ಕರ್ನಾಟಕ ಥಿಯೇಟರ್ಸ್ ಲಿಮಿಟೆಡ್ ಸಂಸ್ಥೆಯ ಮಹಾ ಸಭೆ ಜರಗುತ್ತಿದ್ದಾಗಲೇ ಹೃದಯ ಸ್ತಂಭನದಿಂದ ನಿಧನರಾದರೆಂದು ವಿಷಾದವಾಗುತ್ತದೆ. ಶ್ರೀ ಪೂಂಜರಿಗೆ 59 ವರ್ಷ ವಯಸ್ಸಾಗಿತ್ತು. ಮದರಾಸಿನ ಪ್ರೆಸಿಡೆನ್ಸಿ ಕಾಲೇಜಿನ ಪದವೀಧರರಾದ ಅವರು ಅಲ್ಲಿಯ ಲಾ ಕಾಲೇಜಿನ ಬಿ ಎಲ್. ಪದವಿಯನ್ನೂ ಪಡೆದ ತರುವಾಯ 1943ರ ವರೆಗೆ ಮದರಾಸು ಹೈಕೋರ್ಟಿನಲ್ಲೇ ನ್ಯಾಯವಾದಿಯಾಗಿದ್ದರು. ಅನಂತರ 1945ರ ವರೆಗೆ ಮಂಗಳೂರಿನಲ್ಲಿ ವಕೀಲಿ ಮಾಡುತ್ತಿದ್ದು ಆ ಬಳಿಕ ಇಂದಿನ ವರೆಗೂ ಕರ್ನಾಟಕ ಥಿಯೇಟರ್ ಸಂಸ್ಥೆಯ ಕಾರ್ಯ ನಿರ್ವಹಿಸುತ್ತಿದ್ದರು. ಅವರ ಅಕಾಲ ನಿಧನದ ಶೋಕ ಸೂಚನಾರ್ಥ ತಾ. 12ರಂದು ಮಂಗಳೂರಿನ ಚಿತ್ರಮಂದಿರಗಳೆಲ್ಲ ಮುಚ್ಚಿದ್ದುವು.

ಶ್ರೀ ಕೆ. ಶ್ರೀಧರ ಶೆಟ್ಟರ ಆಕಸ್ಮಿಕ ನಿಧನ

ಇದೇ ತಾ. 11ರಂದು, ಶ್ರೀ ಕೊಡತ್ತೂರು ಗುತ್ತು ಶ್ರೀಧರ ಶೆಟ್ಟರು, ಕಟೀಲಿನಲ್ಲಿ ಸಂಭವಿಸಿತೆನ್ನಲಾದ ಬಸ್ಸು-ಕಾರು ಡಿಕ್ಕಿ ಅಪಘಾತದಲ್ಲಿ ಆಕಸ್ಮಿಕ ಮೃತ್ಯುಗೊಳಗಾದುದು ಅತ್ಯಂತ ವಿಷಾದಕರವಿದೆ. ಇವರು ಕಟೀಲು ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನದ ಮೋಕ್ತೇಸರರೂ ವಿಶ್ವಾಸವಂತ ಹಾಗೂ ಪ್ರಭಾವಶಾಲಿ ಸಾಮಾಜಿಕ ಕಾರ್ಯಕರ್ತರೂ ಆಗಿದ್ದು ಸರ್ವಾದರಣೀಯರಾಗಿದ್ದರು.

ಇವರ ಅಂತಿಮ ಸಂಸ್ಕಾರವು ಕಿನ್ನಿಗೋಳಿಯ ಅವರ ನಿವಾಸದ ಬಳಿಯಲ್ಲಿ ತಾ. 12 ರಂದು ನೆರವೇರಿತು. ವೈಭವದ ಮೆರವಣಿಗೆಯೊಂದಿಗೆ ಮೃತ ಶರೀರದ ಅಂತಿಮ ಸಂಸ್ಕಾರವು ನೆರವೇರಿತು.

ಶ್ರೀ ಶೆಟ್ಟರ ಗೌರವಾರ್ಥ ತಾ. 11 ಮತ್ತು 12ರಂದು ಕಿನ್ನಿಗೋಳಿ ಹಾಗೂ ಕಟೀಲಿನ ವ್ಯವಹಾರಗಳೆಲ್ಲ ಸ್ತಬ್ಧವಾಗಿತ್ತು. ಊರಿಗೆ ಊರೇ ಮೂಕ ಶೋಕವನ್ನು ಪ್ರದರ್ಶಿಸಿತು.

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

S. C 351/1966

ವಾದಿ— ವೆಂಕಟಾಚಲ ಹತ್ವಾರ

ಪ್ರತಿವಾದಿರು— 1 ಚಿಕ್ಕು ಪೆಂಗ್ಸು, 2. ಮುತ್ತು.

ಮೇಲಿನ ದಾವೆಯ 1ನೇ ಪ್ರತಿವಾದಿಳು ಚಿಕ್ಕು ಪೆಂಗ್ಸು ಬನಾರಿ ಕೃಷ್ಣ ಪೆಂಗ್ಸಿನ ಮಗಳು.

ಕುಂದಾಪುರ ತಾಲ್ಲೂಕು ಕೋಣಿ ಗ್ರಾಮದಲ್ಲಿರುವವಳು— ಇವಳಿಗೆ ಈ ಮೂಲಕ ತಿಳಿಯಪಡಿಸುವದೇನೆಂದರೆ—

ನೀವು ವಗೈರೆರಿಂದ ಬರ ಗೇಣಿಬಾಕಿ ಬಗ್ಗೆ ವಾದಿಯು ದಾಖಲು ಮಾಡಿದ ಮೇಲಿನ ದಾವೆಯು ಮೇಲೆ ಕಾಣಿಸಿದ ಕೋರ್ಟಿನಲ್ಲಿ ತಾ. 16-11-66ನೇ ದಿವಸ ಬೆಳಿಗ್ಗೆ ಗಂಟೆ 11 ಕ್ಕೆ ತನಿಖೆಗೆ ಇಟ್ಟಿರುತ್ತದೆ. ನೀವು ಸ್ವತಹಾ ವ ವಕೀಲರ ಮುಖಾಂತರವಾಗಲೀ ಹಾಜರಾಗದಿದ್ದಲ್ಲಿ ನಿಮ್ಮನ್ನು ಏಕಪಕ್ಷವಾಗಿಯಂತ ತೀರ್ಮಾನ ಮಾಡಲಾಗುವದು ಯೆಂಬ ಸಂಗ್ತಿ ಈ ಮೂಲಕ ತಿಳಿಯಪಡಿಸಿರುತ್ತದೆ.

K. R. Shenai
Advocate for Plff.

ಮೊಕ್ಕಾಂ ಕುಂದಾಪುರ, ತಾ. 14-10-66.

ಬೇಕಾಗಿದೆ

ಅನುಭವಸ್ಥ ಪ್ರಿಂಟರ್ ಓರ್ವ ಬೇಕಾಗಿದೆ.

ವಿಚಾರಿಸಿರಿ—

ನವಯುಗ ಪ್ರೆಸ್, ಉಡುಪಿ

(ಮೂರನೇ ಪುಟದಿಂದ)

ಟಿಗೆಯ ವಿಭಜನೆ ಆಡಳಿತೆಯನ್ನು ಉತ್ತಮಗೊಳಿಸಲು, ಯಶಸ್ವಿಯಾಗಿ ನಿರ್ವಹಿಸಲು ಸಹಕಾರಿಯಾದೀತೆಂದು ಆಶಿಸಲಾಗಿತ್ತು. ಪ್ರಧಾನಿ ನೆಹರುರವರು ಬಯಸುತ್ತಿದ್ದ ರಾಷ್ಟ್ರೀಯ ಐಕ್ಯವನ್ನು ಸಾಧಿಸುವುದಕ್ಕೂ ಇದು ಉಪಯುಕ್ತವೆನಿಸೀತೆಂಬ ನಿರೀಕ್ಷೆಯಿತ್ತು. ರಾಜ್ಯಗಳ ಪುನರ್ಘಟನೆಯಾಗಿ ಹತ್ತು ವರ್ಷಗಳು ಸಂದುವು, ಉದ್ಘಾಟನೆಯ ಹೊತ್ತಿನಲ್ಲೇ ಭಾಷಾವಾರು ರಾಜ್ಯ ವಿಭಜನೆ ನಿರೀಕ್ಷೆಗಳನ್ನು ಈಡೇರಿಸುವುದಿಲ್ಲವೆಂಬ ಸಂದೇಹ ಮೂಡಿತ್ತು, ಆದುದರಿಂದಲೇ "ಇನ್ನು ವಿಭಜನೆಯಿಲ್ಲ' ಎಂಬ ಧೀರವಾಣಿಯೂ ಮೊಳಗಿತ್ತು. ಆದರೆ, ಅದು ಸತ್ಯವಾಗಲಿಲ್ಲ; ಒಂದು ಎರಡಾಗುತ್ತ ಬಂತು, ಎರಡು ನಾಲ್ಕಾಗಬೇಕೆಂಬ ಸಲಹೆ ಸೂಚನೆಗಳೂ ಬರತೊಡಗಿವೆ—ಇರಲಿ. ಹತ್ತು ವರ್ಷಗಳ ಅನುಭವದಿಂದ ಹೇಳುವುದಾದರೆ ಭಾಷಾ ತಳಹದಿಯ ರಾಜ್ಯರಚನೆಯಿಂದ ಏನನ್ನು ನಿರೀಕ್ಷಿಸಲಾಗಿತ್ತೋ ಅವಾವುವೂ ಸಾಧಿತವಾಗಲಿಲ್ಲ. ಮಾತ್ರವಲ್ಲ, ಜತೆಗೆ ಅನೇಕ ಹೊಸ ಸಮಸ್ಯೆಗಳು ಎದ್ದಿವೆ; ರಾಷ್ಟ್ರೀಯತೆಗೆ ಆಘಾತವೊದಗುವಂತಹ ದುರ್ಘಟನೆಗಳೂ ನಡೆದಿವೆ. ಆದುದರಿಂದ ಒಮ್ಮೆ ವ್ಯಷ್ಟಿ ಉತ್ತಮವೆಂದ ಜನತೆ ಸಮಷ್ಟಿ ಬೇಕೆಂದು ಕೇಳಿಕೊಂಡರೂ ಕೊಳ್ಳಬಹುದು. ಹತ್ತು ವರ್ಷ ಮುಂದೆ ನಡೆಯಬಹುದಾದುದನ್ನು ಮಾನ್ಯ ಗಿರಿಯವರು ಇಂದೇ ಹೇಳಿದ್ದರೂ ಇರಬಹುದು. ವಲಯ ರಾಜ್ಯಗಳೇ ನಮ್ಮ ರಾಜ್ಯಗಳ ವಿವಾದಕ್ಕೆ ಪರಿಹಾರ.

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

R. I. A. 203/66
in O. S. 561/62.

ವೈನರ್ ಗೋಪಾಲ ಸಹಾ ಅರ್ಜಿದಾರರು
ಮತ್ತು
ನಾರಾಯಣ ಶೆಟ್ಟಿ ಸಹಾ —ಎದ್ರಿರು.

ಕುಂದಾಪುರ ತಾಲೂಕು ಹೊಸಾಡು ಗ್ರಾಮ ಕಡೆಯವರ ಮನೆಯಲ್ಲಿರುವ ಕಾವೇರಿ ಶೆಡ್ತಿ ಮಗ 2ನೇ ಎದ್ರಿ ಕೃಷ್ಣಪ್ಪ ಶೆಟ್ಟಿ, ವೆಂಕಮ್ಮ ಶೆಡ್ತಿ ಮಗ 10ನೇ ಎದ್ರಿ ಮಂಜ್ಞ ಶೆಟ್ಟಿ ಕೂಡಾ 2ಜನರೀಗೆ ಈ ಮೂಲಕ ತಿಳಿಸುವುದೇನೆಂದರೆ—

ಮೇಲ್ಕಾಣಿಸಿದ O. S. 561/62ನೇಗೆ ಅರ್ಜಿದಾರ-ವಾದಿಗಳು ತಮಗೆ ಬಯಪಾಲಿನ ಕುರಿತು ಪಡೆದ ಡಿಕ್ರಿ ಮೇಲೆ ಫೈನಲ್ ಡಿಕ್ರಿ ಕೊಡಿಸಬೇಕಾಗಿ ಮಾಡಿದ ಸದ್ರಿ ಅರ್ಜಿ ವ್ಯವಹರಣೆಯು ತಾರೀಕು 5—11—66ಕ್ಕೆ ತನಿಕೆಗೆ ಇಟ್ಟಿರುತ್ತದೆ. ಆ ಕುರಿತು ನಿಮ್ಮ ಆಕ್ಷೇಪವಿದ್ದಲ್ಲಿ ನೀವು ಸ್ವತಹಾ ಯಾ ವಕೀಲರ ಮೂಲಕ ಸದ್ರಿ ದಿನ ಹಗಲು 11ಗಂಟೆಗೆ ಕೋರ್ಟಿನ ಮುಂದೆ ಹಾಜರಾಗಿ ಆಕ್ಷೇಪ ತಿಳಿಸುವರೇ ತಪ್ಪಿದಲ್ಲಿ ನಿಮ್ಮ ಗೈರು ಹಾಜರಿಯಿಂದ ಮೇಲಿನ ಅರ್ಜಿಯಲ್ಲಿ ಮುಂದಿನ ಕ್ರಮ ಕೈಕೊಳ್ಳಲಾದೀತು.

(ಕೋರ್ಟಿನ ಅಪ್ಪಣೆ ಪ್ರಕಾರ)

G. Kushala Hegde
ಅರ್ಜಿದಾರ—ವಾದಿರ ಪರ ಎಡ್ವೊಕೇಟ್

ಕುಂದಾಪುರ, 10—10—66.

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

S. C. 317/66.

ರಾಮಯ್ಯ ಶೆಟ್ಟಿ—ವಾದಿ,
ಮತ್ತು
ಮಂಜಿ ಸಹಾ—ಪ್ರತಿವಾದಿರು,

ಕುಂದಾಪುರ ತಾಲೂಕು ಕಾಳಾವರ ಗ್ರಾಮ ಮದಮಟ್ಟಿನ ಹೊಳೆಯಲ್ಲಿರುವ ಶಿವನಮನೆ ಕುಂಬಾರ ನಾಗಿ ಹೆಂಗ್ಸಿನ ಮಗಳು 1ನೇ ಮಂಜಿ, ಇವಳ ಮಗ 2ನೇ ಅಣ್ಣಪ್ಪಗೆ ಕೂಡಾ ಈ ಮೂಲಕ ತಿಳಿಸುವುದೇನೆಂದರೆ—

ನಿಮ್ಮಿಂದ ತಾ. 21—6—63ರ ದಿವಾಂ ಮು ನೋಟಿನ ಪ್ರಕಾರ ಬರತಕ್ಕ ಬಾಬ ಐವೇಜಿಗೆ ವಾದಿಯು ನಿಮ್ಮ ಮೇಲೆ ದಾವಾ ದಾಖಲು ಮಾಡಿದ್ದು, ಅದು ತಾರೀಕು, 3—11—66ಕ್ಕೆ ಅಖೈರಿ ತಕ್ಕಿಗೆ ಇಟ್ಟಿರುತ್ತದೆ. ಅದಕ್ಕೆ ನಿಮ್ಮ ಆಕ್ಷೇಪವಿದ್ದಲ್ಲಿ ಸದ್ರಿ ದಿನ ಹಗಲು 11 ಗಂಟೆಗೆ ಕೋರ್ಟಿನ ಮುಂದೆ ನೀವು ಸ್ವತಹಾ ಯಾ ವಕೀಲರ ಮುಖಾಂತ್ರ ಹಾಜರಾಗಿ ಆಕ್ಷೇಪ ತಿಳಿಸತಕ್ಕದ್ದು ತಪ್ಪಿದಲ್ಲಿ ನಿಮ್ಮ ಗೈರು ಹಾಜರಿಯಲ್ಲಿ ದಾವೆಯನ್ನು ತೀರ್ಮಾನಿಸಲಾದೀತು.

(ಕೋರ್ಟಿನ ಅಪ್ಪಣೆ ಮೇರೆಗೆ)

G. Kushala Hegde
ವಾದಿ ಪರ ಎಡ್ವೊಕೇಟ್

ಕುಂದಾಪುರ, 10—10—66.

ಅಧ್ಯಕ್ಷರು ಹೇಳುವಂತೆ

ಅಮೆರಿಕೆಯ ಪಂಚತತ್ವಗಳು

—ಅಮೆರಿಕದ ವಿದೇಶ ಧೋರಣೆಯ ಐದು ಪ್ರಮುಖ ತತ್ವಗಳನ್ನು ವಿವರಿಸುತ್ತ ಅಧ್ಯಕ್ಷ ಜಾನ್ಸನ್ ಅವರು ಅರ್ಧ ಶತಮಾನದ ಹಿಂದೆ ವಿಲಿಯಂ ಜೇಂಸ್ ಅವರು ಯುದ್ಧಕ್ಕೆ ಸವಾಲು ನೀಡುವ ನೈತಿಕ ವ್ಯವಸ್ಥೆಗೆ ಕರೆ ನೀಡಿದ್ದರು. ಅಂಥ ವ್ಯವಸ್ಥೆಯ ಸ್ಥಾಪನೆಗೆ ಅಮೆರಿಕ ಪ್ರಯತ್ನಿಸುತ್ತಿದೆ ಎಂದು ಹೇಳಿದ್ದಾರೆ.

ಅಧ್ಯಕ್ಷರ ಈ ಮಾತುಗಳು, "ಈ ಅಮೆರಿಕ" ಎಂಬ ಪುಸ್ತಕಕ್ಕೆ ಬರೆದಿರುವ ಮುನ್ನುಡಿಯ ಹಾಗೂ ಹಿನ್ನುಡಿಯ ರೂಪದಲ್ಲಿವೆ. ಛಾಯಾಚಿತ್ರಗಳ ಸಂಕಲನವಿರುವ ಈ ಪುಸ್ತಕದಲ್ಲಿ ಅಮೆರಿಕದ ಸಮಸ್ಯೆಗಳನ್ನು ಹಾಗೂ ಸಾಧ್ಯತೆಗಳನ್ನು ಚಿತ್ರಿಸಲಾಗಿದೆ. ಜಾನ್ಸನ್ ಅವರ ಹಿಂದಿನ ಭಾಷಣಗಳ ಹಾಗೂ ಸಂದೇಶಗಳ ವಾಕ್ಯಗಳನ್ನು ಚಿತ್ರಗಳಿಗೆ ವಿವರಣೆಯಾಗಿ ಕೊಡಲಾಗಿದೆ.

ಅಮೆರಿಕವಿಂದು ಅನುಸರಿಸುತ್ತಿರುವ ಐದು ತತ್ವಗಳನ್ನು ಅವರು ಈ ರೀತಿ ನಿರೂಪಿಸಿದರು:

1—"ಉದ್ದೇಶಪೂರ್ವಕವಾಗಿ, ಆದರೆ ಬಹಳ ಸಂಯಮದಿಂದ" ಶಕ್ತಿಯನ್ನು ಉಪಯೋಗಿಸುವುದು. "ಹಿಂಸಾಚರಣೆಯು ಕೆಲವರ ಮುಖ್ಯ ಧೋರಣೆಯಾಗಿರುವ ಪ್ರಪಂಚದಲ್ಲಿ, ನಾವು ಆಕ್ರಮಣಕಾರರೆದುರಲ್ಲಿ ದೃಢವಾಗಿರುವಾಗಲೂ, ಹಿಂಜರಿದಾಗಲೂ ಭವಿಷ್ಯದ ಮೇಲೆ ಪ್ರಭಾವ ಬೀರುತ್ತೇವೆ".

ಆಕ್ರಮಣವನ್ನೆದುರಿಸಲು ಅಮೆರಿಕದಿಂದ ಸಹಾಯ ಪಡೆದಿರುವ ಯಾವುದೇ ದೇಶದಲ್ಲಾದರೂ ಈಗ ವಿದೇಶೀ ಪ್ರೇರೇಪಿತ ಸರಕಾರವಿಲ್ಲ.

2.—"ನಾವು ಪರಮಾಣು ಶಕ್ತಿಯನ್ನು ವಿನಾಶದ ಬದಲು ನಿರ್ಮಾಣದ ಶಕ್ತಿಯಾಗಿ ಅಳವಡಿಸುವ ಕಾರ್ಯದಲ್ಲಿ ಮುನ್ನಡೆಯಬೇಕು".

3.—ಸರ್ವ ಸಮಾನ ರಕ್ಷಣೆಯನ್ನು ಬಲಪಡಿಸಿ, ವಾಣಿಜ್ಯವನ್ನು ಉತ್ತಮಗೊಳಿಸಿ, ಹಳೆಯ ಬಾಂಧವ್ಯಗಳನ್ನು ದೃಢೀಕರಿಸಿ, ಹೊಸ ಆಶಾವಾದಗಳನ್ನು ಪ್ರೋತ್ಸಾಹಿಸುವುದರ ಮೂಲಕ ಸುವ್ಯವಸ್ಥಿತ ಪ್ರಗತಿಯನ್ನು ಸಾಧಿಸುವ ಅಂತರ್ ರಾಷ್ಟ್ರೀಯ ಸಂಘಗಳಿಗೆ ಬೆಂಬಲ ನೀಡಬೇಕು.

4.—ಪ್ರತಿಯೊಂದು ಜನಾಂಗಕ್ಕೆ ಸ್ವತಃ ತಮ್ಮ ಸಂಸ್ಥೆಗಳನ್ನು ರೂಪಿಸಲು ಇರುವ ಹಕ್ಕಿಗೆ ಪ್ರೋತ್ಸಾಹ ಕೊಡಬೇಕು. ಇಂದು ಸ್ವಾತಂತ್ರ್ಯ ಸಾಧನೆಯ ಪ್ರೇರೇಪಣೆಯು ಪ್ರಾಯಶಃ ಪ್ರಪಂಚದಲ್ಲಿ ಅತ್ಯಂತ ಪ್ರಬಲ ಶಕ್ತಿಯಾಗಿರುತ್ತದೆ. ಪ್ರತಿಯೊಂದು ದೇಶವೂ ಸ್ವತಃ ನಿರ್ಧರಿಸಿದ ಪಥದಲ್ಲಿ ನಡೆದಾಗ ಮಾತ್ರವೇ ಪ್ರಪಂಚ ಶಾಂತಿ ಸಾಧ್ಯವಾಗಬಲ್ಲುದು.

5.—"ಭವಿಷ್ಯದ ಬಗೆಗೆ ಹೆಚ್ಚುತ್ತಿರುವ ಭರವಸೆಯಿರುವ ಜನರು ಮಾತ್ರವೇ ಭದ್ರ, ಶಾಂತಿಯುತ ದೇಶಗಳನ್ನು ನಿರ್ಮಿಸಬಲ್ಲರು ಎಂಬ ಖಚಿತ ಅರಿವಿನಿಂದ" ಮನುಷ್ಯ ಜೀವನವನ್ನು ಉತ್ತಮಗೊಳಿಸಲು ಸಹಾಯ ಮಾಡಬೇಕು. ಕರುಣೆ ಹಾಗೂ ಸ್ವಹಿತ, ಈ ಎರಡು ದೃಷ್ಟಿಗಳಿಂದಲೂ, ನಾವು "ಹಸಿವೆ, ರೋಗ ಹಾಗೂ ಅಜ್ಞಾನದ ವಿರುದ್ಧ ಪ್ರಪಂಚ ವ್ಯಾಪಿ ಕಾರ್ಯಕ್ರಮದಲ್ಲಿ ಪ್ರಮುಖ ಪಾತ್ರ ವಹಿಸಬೇಕಾಗಿದೆ".

"ಮಾನವ ಕುಲವು ಯುದ್ಧಕ್ಕೆ ಸವಾಲು ನೀಡುವ ನೈತಿಕ ವ್ಯವಸ್ಥೆಗೆ ಪ್ರಯತ್ನಿಸಬೇಕು" ಎಂದು ವಿಲಿಯಂ ಜೇಂಸ್ ಅವರು ಹೇಳಿದುದನ್ನು ಅಧ್ಯಕ್ಷ ಜಾನ್ಸನ್ ಉಲ್ಲೇಖಿಸಿದರು. "ಇಂದು ಈ ಅನ್ವೇಷಣೆ ಮುಂದುವರಿಯುತ್ತಿದೆ, ಇತಿಹಾಸದಲ್ಲಿ ಇಂದು ಇದಕ್ಕೆ ಹಿಂದೆಂದಿಗಿಂತಲೂ ಹೆಚ್ಚಿನ ಅಗ್ರ ಪ್ರಾಧಾನ್ಯವಿದೆ. ಮಿತ್ರ ಹಾಗೂ ಶತ್ರು ರಾಷ್ಟ್ರಗಳೆರಡನ್ನೂ ಈ ಹೋರಾಟದಲ್ಲಿ ಸೇರಬೇಕೆಂದು ಪಂಥಾಹ್ವಾನ ನೀಡುವ ಮಹತ್ತರ ಅವಕಾಶ ನಮಗೆ ಒದಗಿದೆ. ನಾವು ನಮ್ಮ ವಿಶ್ವದಲ್ಲಿ ಬೆಳಕನ್ನು ಹೆಚ್ಚಿಸಬಲ್ಲೆವು ಅಥವಾ ಕತ್ತಲು ಅಧಿಕವಾಗಲು ಅವಕಾಶ ಕೊಡಬಲ್ಲೆವು" ಎಂದವರು ಹೇಳಿದರು.

'ಬೆಳಕನ್ನು ಪ್ರಸಾರ ಮಾಡುವುದು ಮಾನವನ ಒಳಗಿನ ಹಾಗೂ ಹೊರಗಿನ ಸ್ವಾತಂತ್ರ್ಯವನ್ನು ವಿಸ್ತರಿಸುವುದು, ನಮ್ಮ ಜನರ ಹಾಗೂ ಎಲ್ಲ ಜನರ ಶಾಂತಿ, ಹಾಗೂ ಆರೋಗ್ಯವನ್ನು ವೃದ್ಧಿಗೊಳಿಸುವುದು"—ಇವು ಮಹಾತ್ವಾಕಾಂಕ್ಷೆಗಳು.

ಅಮೆರಿಕವಿಂದು ಅನುಸರಿಸುತ್ತಿರುವ ಧೋರಣೆಯು, ದ್ವಿತೀಯ ಪ್ರಪಂಚ ಯುದ್ಧದ ಕಾಲದಿಂದ ಅನುಸರಿಸುವ ಧೋರಣೆಯೇ ಆಗಿರುತ್ತದೆ.

'ಈ ಯುದ್ಧದ ಕೊನೆಯಲ್ಲಿ ನಮ್ಮ ಭವಿತವ್ಯವು ಎಲ್ಲರ ಭವಿತವ್ಯದೊಡನೆ ಬದ್ಧವಾಗಿದೆ ಎಂಬ ಖಚಿತ ಅರಿವು ನಮ್ಮಲ್ಲಿ ನೆಲೆಗೊಂಡಿತ್ತು. ಮಾನವರಿಗೆ ಇನ್ನು ಮುಂದೆ ಸಂಕುಚಿತ ರಾಷ್ಟ್ರೀಯ ಗುರಿಗಳ ಅನುಸರಣೆಯಲ್ಲಿ ತೃಪ್ತರಾಗಿರಲು ಸಾಧ್ಯವಿರಲಿಲ್ಲ. ಸ್ವಾತಂತ್ರ್ಯ ಹಾಗೂ ಅಭಿವೃದ್ಧಿಯ ಸರ್ವ ಸಮಾನ ಅನ್ವೇಷಣೆಯಲ್ಲಿ ಮಾನವರು ಭಾಗಿಗಳಾಗಬೇಕು.'

ಈ ಗುರಿಯ ಸಾಧನೆಗಾಗಿ ಅಮೆರಿಕವು ಯೂರೋಪಿನ ಪುನರ್ನಿರ್ಮಾಣಕ್ಕೆ ಸಹಾಯ ಮಾಡಿದೆ, ಗ್ರೀಸ್ ಮತ್ತು ಟರ್ಕಿಗೆ ನೆರವು ನೀಡಿದೆ, ಬರ್ಲಿನ್‌ನ ರಕ್ಷಣೆ ಮಾಡಿದೆ, ಮತ್ತು ಕೊರಿಯ ಹಾಗೂ ವಿಯಟ್ನಾಮಿನಲ್ಲಿ ಆಕ್ರಮವನ್ನೆದುರಿಸಲು ಸಹಾಯ ಮಾಡಿದೆ.

ಈ ಗುರಿಯ ಸಾಧನೆಗಾಗಿ, ಅಮೆರಿಕವು ನೂತನ ರಾಷ್ಟ್ರಗಳ ಸ್ವಾತಂತ್ರ್ಯ ಪ್ರಾಪ್ತಿಗೆ ಸಹಾಯ ಮಾಡಿದೆ, ಶಾಂತಿದಳದ ಮೂಲಕ ನೆರವು ನೀಡಿದೆ. ನೂತನವಾಗಿ ಅಭಿವೃದ್ಧಿಗೊಳ್ಳುತ್ತಿರುವ ದೇಶಗಳಿಗೆ ಅಮೆರಿಕವೀಗಲೂ ಗಣನೀಯ ಆರ್ಥಿಕ ಸಹಾಯ ನೀಡುತ್ತಿದೆ.

ಪುತ್ತೂರು ಎಡಿಶನಲ್ ಮುನ್ಸಿಫ್ ಕೋರ್ಟಿನಲ್ಲಿ

O. S. 384/66.

ನಡುಸಾರು ವಿಷ್ಣು ಭಟ್ಟ —ವಾದಿ
1. ಕೃಷ್ಣ ಭಟ್ಟ— ಶಂಕರನಾರಾಯಣ ಭಟ್ಟರ ಮಗ—2. ಶಂಕರಿ ಅಮ್ಮ—ಕೃಷ್ಣ ಭಟ್ಟರ ಹೆಂಡತಿ —ಪ್ರತಿವಾದಿರು.

ಸದ್ರಿ ಪ್ರತಿವಾದಿರಿಗೆ ಕೋರ್ಟಿನ ಹುಕುಂ ಪ್ರಕಾರ ಈ ಮೂಲಕ ತಿಳಿಯಪಡಿಸುವುದೇನೆಂದರೆ—

ತಾ. 14—10—64ರಲ್ಲು ನೀವು ವಾದಿಗೆ ರೂ 3000ಕ್ಕೆ ಬರಕೊಟ್ಟ ಆಡವು ದಸ್ತಾವೇಜು ಪ್ರಕಾರ ತಾ. 14—4—66ಕ್ಕೆ ಬರಬೇಕಾದ ಒಂದು ವರ್ಷದ ಬಡ್ಡಿ ಬಾಕಿಗೆ ನಿಮ್ಮ ಮೇಲೆ ಮಾಡಿದ ಈ ದಾವೆಯನ್ನು ತಾ. 2—11—66ಕ್ಕೆ ನಿಮ್ಮ ನೋಟೀಸಿನ ಬಗ್ಗೆ ಇಟ್ಟಿರುತ್ತದೆ. ಸದ್ರಿ ದಿವಸ ಈ ಕೋರ್ಟಿನ ಮುಂದೆ ಹಾಜರಾಗಿ ಉದಹರಿಸತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮನ್ನು ಶಿಷ್ಯಾ ಮಾಡಿ ಯುಕ್ತ ಕಂಡಂತೆ ತೀರ್ಮಾನಿಸಲಾದೀತು

(Sd) M. Sadashiva Rao,
Vakil for Plaintiff.

Puttur, 15—10—66.

ಪುತ್ತೂರು ಮುನ್ಸಿಫ್ ಕೋರ್ಟಿನಲ್ಲಿ

R. E. P. 222/66.
O.S. 328/63.

ಪರಮೇಶ್ವರ ಭಟ್ಟ —ಅರ್ಜಿದಾರ
ಸೀತಮ್ಮ ಕೂಡ —ಎದ್ರಿರು.

1ನೇ ಎದ್ರಿ— ಸೀತಮ್ಮ—ಗೋಪಾಲಕೃಷ್ಣ ಭಟ್ಟರ ವಿಧವೆ, ಈಗ ಮಾಣಿಲ ಗ್ರಾಮದಲ್ಲಿರುತ್ತಾಳೆ.

ಸದ್ರಿ 1ನೇ ಎದ್ರಿಗೆ ಕೋರ್ಟಿನ ಹುಕುಂ ಪ್ರಕಾರ ಈ ಮೂಲಕ ತಿಳಿಯಪಡಿಸುವುದೇನೆಂದರೆ:—

ಮೇಲಿನ ಅಮಲ್ಜಾರಿಯಲ್ಲಿ ದಾಖಲಾದ ಯೇಲಂ ಇಸ್ತಿಹಾರಿನ ಶರತ ನಿರ್ಣಯಿಸುವ ಬಗ್ಗೆ, ನಿಮ್ಮ ನೋಟಿಸಿನ ಬಾಬ್ತು ತಾ. 1—11—66ಕ್ಕೆ ಇಟ್ಟಿರುತ್ತದೆ. ಆ ದಿವಸ ಈ ಕೋರ್ಟಿನ ಮುಂದೆ ಹಾಜರಾಗಿ ಉದಹರಿಸತಕ್ಕದ್ದು, ತಪ್ಪಿದ್ದಲ್ಲಿ ನಿಮ್ಮನ್ನು ಶಿಷ್ಯಾ ಮಾಡಿ ಯುಕ್ತ ಕಂಡಂತೆ ತೀರ್ಮಾನಿಸಲಾದೀತು.

(Sd) M. Sadashiva Rao,
Vakil for Petitioner

Puttur, 15—10—66.

ಕಾಲೇಜು ಪಠ್ಯಪುಸ್ತಕ ಪ್ರದರ್ಶನ

ಮಣಿಪಾಲ,— ಅಂಗ್ಲ ಭಾಷಾ ಪುಸ್ತಕ ಸಂಘದವರ ಕಡಿಮೆ ದರದ ಪುಸ್ತಕಗಳ ಪ್ರದರ್ಶನವನ್ನು ಡಾ॥ ಟಿ. ಎಂ. ಎ. ಪೈಯವರು ತಾ. 18ನೇ ಸಂಜೆ ಇಲ್ಲಿಯ ಸಹರೂಪ ಕೇಂದ್ರ ಪುಸ್ತಕ ಭಂಡಾರದಲ್ಲಿ ಉದ್ಘಾಟಿಸಿದರು. ಮದ್ರಾಸಿನ ಬ್ರಿಟಿಷ್ ಕೌನ್ಸಿಲ್‌ನವರ ಸಹಕಾರದಿಂದ ಏರ್ಪಡಿಸಲಾದ ಈ ಪ್ರದರ್ಶನದಲ್ಲಿನ ಕಾಲೇಜು ಪಠ್ಯಪುಸ್ತಕಗಳು ಮತ್ತು ಇತರ ನಾನಾ ವಿಷಯಗಳ ಪುಸ್ತಕಗಳಿಗೆ ಸ್ಥಳೀಯ ಬೇಡಿಕೆಗಳನ್ನು ಅಂಗೀಕರಿಸಲಾಗಿತ್ತು. ಈ ಪ್ರದರ್ಶನವು ಸಾರ್ವಜನಿಕರಿಗಾಗಿ ತಾ. 19ರ ವರೆಗೆ ತೆರೆದಿಡಲಾಗಿತ್ತು.

READ &
ADVERTISE IN
NAVAYUGA WEEKLY

ಒಳಗುಟ್ಟು

(ಎರಡನೇ ಪುಟದಿಂದ)

— ೨ —

ತನ್ನ ಕಛೇರಿಯಲ್ಲಿ ನಕ್ಷೆಯೊಂದನ್ನು ಸಿದ್ಧಪಡಿಸುತ್ತಾ ಕುಳಿತಿದ್ದ ಸದಾನಂದ. ಸ್ವಲ್ಪ ಹೊತ್ತಿನಲ್ಲಿಯೇ ಸಿಪಾಯಿ ವಿಸಿಟಿಂಗ್ ಕಾರ್ಡ್ ಒಂದನ್ನು ತಂದು ಅವನ ಕೈಗಿತ್ತ. ಸದಾನಂದ ನೋಡಿದ. ಅದರಲ್ಲಿ ಸುಧಾ, ಕಲಾ ಶಿಕ್ಷಕಿ, ಭಾರತಿ ಕಲಾ ಶಾಲೆ, ಬೊಂಬಾಯಿ ಎಂದು ಬರೆದಿತ್ತು. ಸಿಪಾಯಿಗೆ ಬಂದಿರುವವರನ್ನು ಕರೆ ತರುವಂತೆ ಸೂಚಿಸಿದ.

ಸುಧಾ ಮೆಲ್ಲಗೆ ಕೋಣೆಯೊಳಕ್ಕೆ ಪ್ರವೇಶಿಸಿದಳು. 'ಕುಳಿತುಕೊಳ್ಳಿ' ಎಂದು ಕುರ್ಚಿಯ ಕಡೆಗೆ ಕೈ ತೋರಿಸಿದ ಸದಾನಂದ. ಅವನು ತನ್ನ ಕೆಲಸದಲ್ಲಿ ಮಗ್ನನಾಗಿದ್ದ. ಸುಧಾಳಿಗೆ ಹತ್ತು ನಿಮಿಷಗಳನ್ನು ಕಳೆದುದು ಹತ್ತು ವರ್ಷಗಳನ್ನು ಕಳೆದಂತಾಗಿತ್ತು. ನಕ್ಷೆಯನ್ನು ಮುಗಿಸಿ "ಕ್ಷಮಿಸಿ, ಕೆಲಸದಲ್ಲಿ ತೊಡಗಿದೆ. ನಿಮ್ಮೊಂದಿಗೆ ಮಾತನಾಡಲಾಗಲಿಲ್ಲ' ಎಂದ.

ಸುಧಾ ಮಾತನಾಡಲಿಲ್ಲ.

ಆಮಂತ್ರಣ ಪತ್ರಿಕೆಯೊಂದನ್ನು ಮೇಲಿಟ್ಟು "ನಾಡಿದ್ದು ಸಂಧ್ಯಾಳ ಹುಟ್ಟು ಹಬ್ಬ. ದಯವಿಟ್ಟು ಬನ್ನಿ. ಸಂಧ್ಯಾ, ಮಾವ ನಿಮ್ಮನ್ನು ತಪ್ಪದೆ ಬರುವಂತೆ ತಿಳಿಸು ಎಂದು ಹೇಳಿದ್ದಾರೆ" ಎಂದಳು.

"ಬಿಡುವು ದೊರೆಯದು. ತುಂಬ ಕೆಲಸ....'

'ಭಾನುವಾರ ರಜೆ ಬೇಕೆ, ಬರಲೇಬೇಕು"

'ದಯ ವಿಟ್ಟು...'

'ಈ ಸಂಕೋಚ ಬೇಡ.' ದಯವಿಟ್ಟು ಬನ್ನಿ, ನನಗಾಗಿ ಬನ್ನಿ' ಎಂದಳು ಸುಧಾ. ಅವಳ ಮಾತಿನಲ್ಲಿ ದುಃಖವೂ ಕೂಡಿದ್ದುದು ಸದಾನಂದನಿಗೆ ಅರಿವಾಯಿತು. ಕತ್ತೆತ್ತಿ ಬರುತ್ತೇನೆ. ಬೇಸರಪಟ್ಟುಕೊಳ್ಳಬೇಡಿ' ಎಂದ.

ಮೊದಲು ಪರಿಚಯವಾಗಿ ಅನಂತರ ಅವರಿಬ್ಬರ ಸ್ನೇಹ ಗಾಢವಾಯಿತು. ಸಂಧ್ಯಾ, ಸುಧಾ, ಅವಳ ಮಾವ ಮತ್ತು ಅತ್ತೆ ಇವರಿಗೂ ಸಹ ಚಿರಪರಿಚಿತನಾಗಿದ್ದ ಸದಾನಂದ ವಾರದಲ್ಲಿ ಒಮ್ಮೆಯಾದರೂ ಅವರನ್ನು ಭೇಟಿ ಕೊಡುತ್ತಿದ್ದ. ಸುಧಾ ಮತ್ತು ಸದಾನಂದ ಇವರ ಸ್ನೇಹ ಬೆಳೆಯುತ್ತಲೇ ಇತ್ತು. ಮನೆಯಲ್ಲಿ ಆಗಾಗ್ಗೆ ನಡೆಯುತ್ತಿದ್ದ ಸಂತೋಷದ ಸಮಾರಂಭಗಳು ಅವರಿಬ್ಬರನ್ನು ಹತ್ತಿರ ಮಾಡಲು ಸಹಕಾರಿಯಾದವು.

ಸುಧಾಳ ಮಾತಿಗೆ ಪ್ರತಿ ಹೇಳದೆ ವಾರದಲ್ಲಿ ಒಮ್ಮೆಯಾದರೂ ಸಮುದ್ರ ತೀರ, ಅಥವಾ ಸಿನಿಮಾಗಳಿಗೆ ಸದಾನಂದ ಭೇಟಿ ನೀಡುತ್ತಿದ್ದ. ಅವರಿಬ್ಬರ ನಡೆ ನುಡಿಯಲ್ಲಿ ಯಾವ ಬಗೆಯ ಸಂಕುಚಿತ ಮನೋಭಾವವೂ, ಸ್ವಾರ್ಥತೆಯೂ ಅಡಗಿರಲಿಲ್ಲ. ಇಬ್ಬರ ಹೃದಯಗಳೂ ದಿನ ದಿನಕ್ಕೆ ಸಮೀಪವಾಗುತ್ತಿದ್ದವು

— ೩ —

ಒಂದು ವರ್ಷದ ಅವಧಿಯೊಳಗಾಗಿ ಸಂಧ್ಯಾ ಮತ್ತು ಪ್ರಸನ್ನ ಇವರ ವಿವಾಹ ನೆರವೇರಿತು. ಸಂಧ್ಯಾ ಪತಿಯೊಂದಿಗೆ ದುರ್ಗಾಪುರಕ್ಕೆ ಪ್ರಯಾಣ ಬೆಳೆಸಿದಳು. ಸುಧಾ ಒಂಟಿಯಾದಳು. ಅವಳಿಗೆ ಸದಾನಂದನ ಸ್ನೇಹ ದೊಡ್ಡ ಮರದಂತೆ ಆಶ್ರಯ ನೀಡಿತು.

ಸದಾನಂದ ಕಾರ್ಖಾನೆಯ ಸೂಚನೆಯಂತೆ ಉಚ್ಚ ಶಿಕ್ಷಣ ಪಡೆಯಲು ರಷ್ಯಾಕ್ಕೆ ಹೊರಡಬೇಕಾಯಿತು. ಎಲ್ಲರಿಂದಲೂ ಬೀಳ್ಕೊಂಡು ಸದಾನಂದ ಮಾಸ್ಕೋಗೆ ಪ್ರಯಾಣ ಬೆಳೆಸಿದ.

ಪ್ರಸನ್ನ ತಂಗಿಯ ಮನದ ಹಂಬಲವನ್ನು ಅರಿತಿದ್ದ. ಸದಾನಂದನೊಂದಿಗೆ ಪ್ರಸ್ತಾಪ ನಡೆಸಿ ವಿವಾಹ ನಡೆಸಬೇಕೆಂದು ಯೋಚಿಸುವ ವೇಳೆಗೆ ಸದಾನಂದ ವಿದೇಶಕ್ಕೆ ತೆರಳಿದ್ದ. ಗೆಳೆಯ ಹಿಂತಿರುಗಿದ ನಂತರ ಅವನೊಂದಿಗೆ ಈ ವಿಷಯವನ್ನು ಪ್ರಸ್ತಾಪಿಸುವುದು ಉಚಿತವೆಂದು ಯೋಚಿಸಿ ಮೌನ ತಾಳಿದ.

ಕೆಲವು ತಿಂಗಳು ರಜೆ ಪಡೆದು ಸುಧಾ ಬೊಂಬಾಯಿಯಿಂದ ಹೊರಟು ತಂದೆ ತಾಯಿಯರಲ್ಲಿಗೆ ಬಂದಳು. ಮಗಳ ವಿವಾಹವನ್ನು ನಡೆಸಬೇಕೆಂದು ಯೋಚಿಸಿದ್ದ ಅವಳ ತಂದೆತಾಯಿಯರು ವರನನ್ನು ಗೊತ್ತು ಪಡಿಸಿದ್ದರು. ಆದರೆ ಸುಧಾಳ ಅಂತರಂಗದ ಅಳಲನ್ನು ಅರಿಯಲು ಅವರು ಸಮರ್ಥರಿರಲಿಲ್ಲ. ಮಗಳ ಮುಂದೆ ವಿವಾಹ ಪ್ರಸ್ತಾಪ ಮಾಡಿದಾಗ, ಸುಧಾ "ಅಣ್ಣನನ್ನು ಕೇಳಿ ಅಮ್ಮ, ಅವನು ಒಪ್ಪಿದರೆ ನನ್ನ ಅಡ್ಡಿ ಇಲ್ಲ' ಎಂದಳು.

ತಂದೆ-ತಾಯಿಯರ ಪತ್ರ ಕಂಡೊಡನೆಯೇ ಪ್ರಸನ್ನ ರಜೆ ಪಡೆದು ಊರಿಗೆ ಬಂದ. ಸುಧಾಳ ಬಾಡಿದ ಮುಖವನ್ನು ಕಂಡಾಗ ಅವನಿಗೆ ಅಪಾರ ವೇದನೆಯಾಯಿತು. ತಾಯಿ 'ಸುಧಾಗೆ ವರನನ್ನು ಗೊತ್ತುಪಡಿಸಿರುವ ಸುದ್ದಿಯನ್ನು ತಿಳಿಸಿದರು

"ಸುಧಾ ಅಭಿಪ್ರಾಯ ಕೇಳಿದ್ದೀರಾ ಅಮ್ಮ?'

'ಅವಳಿಗೇನೋ ತಿಳಿಯುತ್ತದೆ ಹುಡುಗಿ'

"ಇದು ನಿಮ್ಮ ತೊಟ್ಟಿಲ ಮಗುವಿನ ಮದುವೆಯ ಕಾಲವಲ್ಲವಮ್ಮ. ಸುಧಾಗೆ ವಿದ್ಯೆ, ಬುದ್ಧಿ ಎಲ್ಲವೂ ಇದೆ. ಅಂತಹ ಹುಡುಗಿಯನ್ನು ಮದುವೆಯಾಗಲು ಪುಣ್ಯಬೇಕು. ಅವಳಿಗೆ ಮೊದಲೇ ಬೇರೆ ಗಂಡು ಗೊತ್ತಾಗಿದೆ. ಹೆಣ್ಣು ಹುಡುಗಿಯರೆಂದರೆ ಆಟದ ಬೊಂಬೆಯಲ್ಲ, ಅವರಿಗೂ ಹೃದಯ, ಪ್ರೀತಿ, ಅಭಿಪ್ರಾಯ ಇದೆ"

"ನೀನೇ ಹೀಗೆ ಹೇಳಿದರೆ ಹೇಗೋ ಪ್ರಸನ್ನ" ಎಂದರು ತಾಯಿ

ಪ್ರಸನ್ನ ಸುಧಾ ಮತ್ತು ಸದಾನಂದ ಇವರ ಸಂಗತಿ ತಿಳಿಸಿದ.

'ಅಷ್ಟು ದೊಡ್ಡ ಅಧಿಕಾರಿ, ವಿದ್ಯಾವಂತ ಇವಳನ್ನು ಮದುವೆ ಮಾಡಿಕೊಳ್ಳುತ್ತಾನೇನೋ'

"ನಾನು ಸುಳ್ಳು ಹೇಳ್ತೀನೆಯೇ'

"ಕೆಟ್ಟ ಕಾಲವಪ್ಪ, ನಾಳೆ ಹೆಚ್ಚು ಕಡಿಮೆ ಆದರೆ?"

'ನಿಮ್ಮ ಮಗ, ಮಗಳ ಮಾತು ನಡತೆಯಲ್ಲಿ ನಿಮಗೆ ನಂಬಿಕೆ ಇಲ್ಲವಾದರೆ ಹೇಗಮ್ಮ"

'ಆ ಹುಡುಗ ನಿನಗೆ ಗೊತ್ತೇನೋ?'

"ನನ್ನ ಸ್ನೇಹಿತ ಕಣಮ್ಮ. ಪ್ರಾಣ ಕೊಟ್ಟು ಕಾಪಾಡಬಲ್ಲ ಸ್ನೇಹಿತ. ಅವನು ಖಂಡಿತ ಸುಧಾನ ಮದುವೆ ಮಾಡಿಕೊಳ್ಳುತ್ತಾನೆ"

"ಅವನು ಯಾರು?"

'ಒಟ್ಟಿನಲ್ಲಿ ಮನುಷ್ಯ ಕಣಮ್ಮ" ಎಂದ ಸದಾನಂದ

ಸುಧಾ ಅಣ್ಣನ ಮುಂದೆ ಮರೆಮಾಚದೆ ತನ್ನ ದುಃಖವನ್ನು ಹೇಳಿ ಕೊಂಡಳು.

"ಇಷ್ಟಕ್ಕಾಗಿಯೇ ದುಃಖಿಸಬೇಕೇ ಸುಧಾ. ಸದಾನ ಕೈಯಿಂದ ನಿನ್ನ ಕೊರಳಿಗೆ ಮಾಂಗಲ್ಯ ಕಟ್ಟಿಸುವ ಹೊಣೆ ನನ್ನದು. ಸಮಾಧಾನವೇನಮ್ಮ...?' ಎಂದ ಪ್ರಸನ್ನ.

"ನಿನ್ನದು ಯಾವಾಗಲೂ ಹುಡುಗಾಟ ಪ್ರಸನ್ನ" ಎಂದು ನಕ್ಕಳು ಸುಧಾ.

. "ಹೆಣ್ಣು ಹುಡುಗಿಯರು ಹೀಗೆ ನಗುತ್ತಿರಬೇಕು.' ಎಂದ ಪ್ರಸನ್ನ.

ಸುಧಾ ಪ್ರಸನ್ನನೊಂದಿಗೆ ದುರ್ಗಾಪುರಕ್ಕೆ ಪ್ರಯಾಣ ಬೆಳೆಸಿದಳು.

೪

ಪ್ರಸನ್ನ ಗೆಳೆಯ ಸದಾನಂದ ವಿದೇಶದಿಂದ ಹಿಂದಿರುಗುವ ವೇಳೆಗೆ ಅವನಿಗೆ ತಿಳಿಯದಂತೆ ಕೆಲವು ಪೂರ್ವಸಿದ್ಧತೆಗಳನ್ನು ನಡೆಸಿದ್ದ. ಪ್ರಸನ್ನ ನಡೆಸಿದ ಸಿದ್ಧತೆ, ಪ್ರಯತ್ನ ಯಾರಿಗೂ ಗೊತ್ತಿರಲಿಲ್ಲ.

ಸದಾನಂದನ ತಂದೆತಾಯಿಯರನ್ನು ಕಂಡು ಅವರಿಗೆ ಸುಧಾಳನ್ನು ತೋರಿಸಿ— "ದಯವಿಟ್ಟು ಅವನ ವಿವಾಹಕ್ಕೆ ಅನುಮತಿ ಕೊಡಿ" ಎಂದ.

"ಸದಾನ ಅಭಿಪ್ರಾಯ ಕೇಳುವುದು ಬೇಡವೆ?' ಎಂದರು ಅವರು.

"ನನ್ನ ಮಾತಿನಲ್ಲಿ ಅವನಿಗೆ ನಂಬಿಕೆ ಇದೆ. ನೀವು ಒಪ್ಪಿಗೆ ಕೊಡಿ. ನಾನು ಮುಂದಿನ ಏರ್ಪಾಟು ಮಾಡುತ್ತೇನೆ" ಎಂದ.

ಕಡೆಗೆ ಸದಾನಂದನ ತಂದೆ ತಾಯಿ ಸಮ್ಮತಿಸಿದರು.

ಸದಾನಂದ ರಷ್ಯದಿಂದ ಒಂದು ವರ್ಷದ ನಂತರ ಭಾರತಕ್ಕೆ ಹಿಂತಿರುಗಿದ. ಬೊಂಬಾಯಿಯಲ್ಲಿ ಗೆಳೆಯನನ್ನು ಪ್ರಸನ್ನ ಆದರದಿಂದ ಬರಮಾಡಿಕೊಂಡ. ಸುಧಾಳನ್ನು ಕಾಣಲು ಸದಾನಂದ ಕಾತುರನಾಗಿದ್ದ. ಆದರೆ ಅವಳು ಅವನ ಕಣ್ಣಿಗೆ ಗೋಚರಿಸಲಿಲ್ಲ.

ಎರಡು ದಿನಗಳ ವರೆಗೆ ಶಾಮರಾಯರ ಮನೆಯಲ್ಲಿದ್ದು ಅನಂತರ ತನ್ನ ಕೋಣೆಗೆ ಹಿಂದಿರುಗಿದ ಸದಾನಂದ. ಅವನ ಕಾರ್ಯಕ್ಷೇತ್ರ—ಅಧಿಕಾರ ವಿಸ್ತಾರವಾಯಿತು. ಮಾಸ್ಕೋದಿಂದ ಬರೆದ ಮೂರು ಪತ್ರಕ್ಕೆ ಮಾತ್ರ ಸುಧಾ ಉತ್ತರಿಸಿದ್ದಳು. ಮುಂದಿನ ಕೆಲವು ಪತ್ರಗಳಿಗೆ ಉತ್ತರಿಸದಿದ್ದುದರಿಂದ ಸದಾನಂದ ಹಲಬಗೆಯಲ್ಲಿ ಚಿಂತಿಸಿ ಅವಳನ್ನು ಮರೆಯಲು ಪ್ರಯತ್ನಿಸಿದ. ಆದರೆ ಹಳೆಯ ನೆನಪು ಸದಾ ಅವನನ್ನು ಕಾಡುತ್ತಿತ್ತು.

ಗೆಳೆಯನ ಮನಸ್ಸಿನ ಹೊಯ್ದಾಟವನ್ನು ಅರ್ಥಮಾಡಿಕೊಂಡ ಪ್ರಸನ್ನ ಮನದಲ್ಲಿಯೇ ನಕ್ಕ.

"ಸುಧಾ ಎಲ್ಲಿದ್ದಾಳೆ ಪ್ರಸನ್ನ?'

'ದುರ್ಗಾಪುರದಲ್ಲಿ ನನ್ನ ಬಳಿಯೇ ಇದ್ದಾಳೆ"

"ಕಲಾಶಾಲೆಯನ್ನು ಕೈ ಬಿಡಲು ಕಾರಣ"

"ನೀನು ಇಲ್ಲಿಂದ ಮಾಸ್ಕೋಗೆ ತೆರಳಿದ ತರುವಾಯ ಅವಳು ನಮ್ಮೂರಿಗೆ ಹೋಗಿದ್ದಳು. ಅನಂತರ ಅಲ್ಲಿಂದ ಮತ್ತೆ ಇಲ್ಲಿಗೆ ಬರಲಿಲ್ಲ."

"ಅವರನ್ನೊಮ್ಮೆ ಕಾಣಬೇಕಿತ್ತು"

"ಕಾರಣ ಕೇಳಬಹುದಷ್ಟೆ?'

"ಅದು ವಯಕ್ತಿಕ ಸಂಗತಿ"

'ನಾನೇ ಹೇಳಲೇ?"

"ನಿನಗೆ..!'

"ನೀನು ನನ್ನನ್ನು ವಿವಾಹವಾಗುತ್ತೀಯಾ ಸುಧಾ ಎಂದು ಕೇಳಬೇಕು. ಹೌದಷ್ಟೆ ಸದಾ...'



ಅಸ್ತಮಾ ರೋಗಿಗಳ ತಿಳುವಳಿಕೆಗೆ

ರಜಿಸ್ಟರಾದ ಚಿತ್ರಕೋಟ್ ಅಸ್ತಮಾ ನಿವಾರಕ ಬೂಟಿಯನ್ನು ತಾ. ೨೯-೧೦-೬೬ ನೇ ಹುಣ್ಣಿಮೆ ರಾತ್ರಿ ಖೀರಿನೊಂದಿಗೆ ಸೇವಿಸುವುದರಿಂದ ಅಸ್ತಮಾ, ನೇವಸ, ಕೆಮ್ಮು, ನೆಗಡಿ ನಿವಾರಣೆಯಾಗುತ್ತದೆ. ಕೂಡಲೇ ಹುಣ್ಣಿಮೆಯ ಮೊದಲೇ ಬರೆಯಿರಿ.

Manager, Shri Mahatma Naga
Baba Ayurvedashram,
P. O Chitrakot U. P.

Registered with the Registrar
of News Papers for India
under No. R. N. 3516/'57

REGD. No. B. G. 176
LICENCE No. 31
Licensed to Post without Prepayment

"ನನ್ನ ವಿಷಯ?"

"ಗೆಳೆಯನ ಹೃದಯವನ್ನು ಅರ್ಥಮಾಡಿಕೊಳ್ಳುವುದು ಕಷ್ಟವಲ್ಲ'

'ಸುಧಾ ಅಭಿಪ್ರಾಯ...."

"ಅವಳಿಗೂ ಸ್ವಾತಂತ್ರ್ಯವಿದೆ. ಅವಳನ್ನೇ ಕೇಳಬೇಕು"

"ಸರಿ" ಎಂದ ಸದಾನಂದ.

ಕೆಲವು ತಿಂಗಳು ಹಿಂದೆ ಸರಿದವು.

ಸುಧಾಳನ್ನು ಮರೆಯಬೇಕೆಂದು ಪ್ರಯತ್ನಿಸಿದಷ್ಟು ಅವಳ ಸವಿನುಡಿ—ರೂಪ ಸದಾನಂದನ ಮುಂದೆ ಬಂದು ನಿಲ್ಲುತ್ತಿದ್ದವು. ಈ ಬಗೆಯಲ್ಲಿ ಹೇಗೆ ವರ್ತಿಸುವುದು ಎಂದು ತೋಚದೆ ಪ್ರಸನ್ನನನ್ನೇ ಆಶ್ರಯಿಸುವುದು ಸರಿ ಎಂದು ನಿರ್ಧರಿಸಿದ.

ಪ್ರಸನ್ನ ತಂಗಿ ಸುಧಾಳ ವಿವಾಹಕ್ಕೆ ಸಂಬಂಧಿಸಿದ ಎಲ್ಲ ಏರ್ಪಾಡುಗಳನ್ನು ಮಾಡಿದ. ಆದರೆ ಯಾವ ಸಂಗತಿಯನ್ನೂ ಸದಾನಂದನಿಗೆ ತಿಳಿಸದೆ ಅವನನ್ನು ಕಾಣಲು ಬಂದ.

ಪ್ರಸನ್ನ ಗೆಳೆಯ ಸದಾನಂದನನ್ನು ಕಛೇರಿಯಲ್ಲಿ ಭೇಟಿ ಮಾಡಿದ. ಗೆಳೆಯನನ್ನು ಉತ್ಸಾಹದಿಂದಲೇ ಸ್ವಾಗತಿಸಿದ ಸದಾನಂದ. ಪರಸ್ಪರ ಕುಶಲ ಸಂಭಾಷಣೆ ಮುಗಿದ ನಂತರ ಸದಾನಂದ 'ಆಕಸ್ಮಿಕವಾಗಿ ಬಂದಿದ್ದೀಯಲ್ಲ ಪ್ರಸನ್ನ ಏನಾದರೂ ಸಮಾಚಾರವುಂಟೆ? ಸುಧಾ ಬಂದಿದ್ದಾಳೆಯೇ" ಎಂದು ಪ್ರಶ್ನಿಸಿದ.

"ಆ ವಿಷಯವನ್ನೇ ತಿಳಿಸಿ ಹೋಗಲು ಬಂದೆ"

"ಯಾವ ವಿಷಯ?"

"ಸುಧಾಗೆ ಗಂಡು ಗೊತ್ತಾಗಿದೆ. ವಿವಾಹದ ದಿನವೂ ಗೊತ್ತಾಗಿದೆ ಮುಂದಿನ ತಿಂಗಳು 20ನೇ ತಾರೀಕು ಮದುವೆ ನಿನಗೆ ಆಹ್ವಾನ ಪತ್ರಿಕೆ ಕೊಟ್ಟು ಹೋಗಲು ಬಂದೆ" ಎಂದ ಪ್ರಸನ್ನ.

ಸದಾನಂದನ ಮುಖ ಬಾಡಿತು. 'ಸಂತೋಷ" ಎಂದು ನುಡಿದ ಭಾರವಾದ ದನಿಯಲ್ಲಿ.

ಆಮಂತ್ರಣ ಪತ್ರಿಕೆಯೊಂದನ್ನು ಮೇಜಿನ ಮೇಲಿಡುತ್ತಾ 'ದಯವಿಟ್ಟು ಇದನ್ನು ಈಗಲೇ ಬಿಚ್ಚಿ ಓದ ಬೇಡ. ನಿನ್ನ ಕೋಣೆಗೆ ಹೋಗಿ ಬಿಚ್ಚಿ ನೋಡು. ನನಗೆ ತುಂಬ ಕೆಲಸವಿದೆ. ಟೂವನ ಮನೆಯಲ್ಲಿ ಇರುತ್ತೇನೆ ದಯವಿಟ್ಟು ಅಲ್ಲಿಗೆ ತಪ್ಪದೆ ಬಾ" ಎಂದು ನುಡಿದು ಪ್ರಸನ್ನ ಮೇಲೆದ್ದ.

ಸದಾನಂದ ಮಾತನಾಡಲು ಪ್ರಯತ್ನಿಸಿದ.

ಪ್ರಸನ್ನ 'ಭೇಟಿಯಾದಾಗ ಮಾತನಾಡೋಣ" ಎಂದು ನುಡಿದು ನಡೆದ; ಸದಾನಂದನಿಗೆ ಅತೀವ ವೇದನೆಯಾಗಿತ್ತು; ಹಾಗೆಯೇ ಗೆಳೆಯ ಹೇಳಿದ ಮಾತಿನ ರೀತಿಯೂ ಅವನಿಗೆ ವಿಚಿತ್ರವಾಗಿತ್ತು. ತನ್ನ ಅಭಿಪ್ರಾಯವನ್ನು ಮೊದಲೇ ತಿಳಿಸಬೇಕಿತ್ತು, ಕಾಲ ಮಿಂಚಿ ಹೋಯಿತು ಎಂದು ಚಡಪಡಿಸಿದ. ಬೇಸರದಿಂದ ಮಾಡುತ್ತಿದ್ದ ಕೆಲಸವನ್ನು ಅರ್ಧಕ್ಕೆ ನಿಲ್ಲಿಸಿ ಕೋಣೆಯ ಹಾದಿ ಹಿಡಿದ.

"ಕೋಣೆಯಲ್ಲಿ ಬಿಚ್ಚಿ ನೋಡು ಎಂದೇಕೆ ಹೇಳಿದ, ಅಷ್ಟು ಗುಟ್ಟು ಇದರಲ್ಲೇನಿದೆ" ಎಂದು ಯೋಚಿಸುತ್ತಲೇ ಕೋಣೆ ಪ್ರವೇಶಿಸಿದ. ಕುರ್ಚಿಯ ಮೇಲೆ ಕುಳಿತು ಪತ್ರಿಕೆಯನ್ನು ಬಿಚ್ಚಿ ನೋಡಿ ತನ್ನ ಕಣ್ಣನ್ನು ತಾನೇ ನಂಬದಾದ, ಪತ್ರಿಕೆಯಲ್ಲಿ ಸುಧಾ ಮತ್ತು ಸದಾನಂದರ ವಿವಾಹ ಎಂದು ಮುದ್ರಿಸಲ್ಪಟ್ಟಿತ್ತು. ಸದಾನಂದ ಸಂತೋಷದಿಂದ ಗೆಳೆಯನನ್ನು ಭೇಟಿ ಮಾಡಲು ಕೈಗೆ ಕೋಟನ್ನು ಎತ್ತಿಕೊಂಡು ಹೊರಟ. ಅವನ ಬರುವನ್ನೇ ಎದುರು ನೋಡುತ್ತಾ ಪ್ರಸನ್ನ ಗೇಟಿನ ಬಳಿ ನಿಂತಿದ್ದ. ಗೆಳೆಯನನ್ನು ಕಂಡೊಡನೆಯೇ "ಇದು ನನ್ನ ತಪ್ಪಲ್ಲ ಸದಾ, ಸುಧಾಳ ಸಲಹೆ" ಎಂದು ಸಂಕೋಚವಿಲ್ಲದೆ ನುಡಿದ.

ಆ ದಿನವಿನ್ನೂ ದೂರವಿಲ್ಲ

ನೀವೂ ಭೂತರೇಲನ್ನು ಹತ್ತುವಿರಿ

ಬವೇರಿಯಾದ ಹೆಸರನ್ನು ನೀವು ಕೇಳಿದ್ದೀರಿ. ಇದಿರುವುದು ಪಶ್ಚಿಮ ಜರ್ಮನಿಯಲ್ಲಿ. ಅಲ್ಲೇ ಸಮೀಪದಲ್ಲಿದೆ ಸಾಲ್ ಎಂಬಲ್ಲಿ ಒಂದು ಕಾರಖಾನೆ. ಗಣಿಗಳಿಂದ ಕಾರಖಾನೆಗೆ ಸುಣ್ಣದ ಕಲ್ಲನ್ನು ಹೊತ್ತು ಮೂರು ರೇಲು ಗಾಡಿಗಳು ಪ್ರತಿನಿತ್ಯ ಹಲವು ಬಾರಿ ಬರುತ್ತವೆ ಹೋಗುತ್ತವೆ. ಇವುಗಳಿಗೆ ಚಾಲಕನೇ ಇಲ್ಲವೆಂದರೆ ಮಾನವ ಚಾಲಕನಿಲ್ಲ ಎಂದು ಮಾತ್ರ ಅರ್ಥ. ಈ ಸ್ವಯಂಚಾಲಿತ ರೇಲುಗಳು ಹೊರಡುತ್ತವೆ, ನಿಲ್ಲುತ್ತವೆ; ಸಿಗ್ನಲ್‌ಗಳನ್ನು ಅರ್ಥ ಮಾಡಿಕೊಳ್ಳುತ್ತವೆ. ಹೊತ್ತಿಗೆ ಸರಿಯಾಗಿ ಬರುತ್ತವೆ. ಈ ಬಗೆಯ ರೇಲು ಮೊತ್ತ ಮೊದಲ ಬಾರಿಗೆ ಯುರೋಪು ಭೂಖಂಡಕ್ಕೆ ಪದಾರ್ಪಣ ಮಾಡಿದೆ—

ಪ್ರಪಂಚದ ಇತರ ಕೆಲವೆಡೆಯೂ ಈ ಬಗೆಯ ಸ್ವಯಂಚಾಲಿತ ರೇಲುಗಳು ಸಂಚರಿಸುತ್ತವೆ. ಚಾಲಕನಿಲ್ಲದ ಈ ಬಗೆಯ 'ಭೂತರೇಲು'ಗಳು ದಿನದಿಂದ ದಿನಕ್ಕೆ ಅಧಿಕ ಜನಪ್ರಿಯವಾಗುತ್ತ ಬರುವುದು ಖಂಡಿತವೇ. ಕೆನೆಡಾದ ಲೆ ಬ್ರೊ ಡೋರ್ ನಗರದ ಸಮೀಪ ಆರು ಮೈಲುದ್ದದ ಅದಿರು ಕಾರಖಾನೆಯ ರೇಲುದಾರಿಯುದ್ದ ಇಲ್ಲಿಯೂ ನ್ಯೂಯಾರ್ಕ್ ಉಪದಾರಿಯಲ್ಲಿಯೂ ಸ್ವಯಂಚಾಲಿತ ರೇಲುಗಾಡಿಗಳು ಯಶಸ್ವಿಯಾಗಿ ಓಡುತ್ತಿವೆ.

ಆದರೆ, ಈ ಭೂತ ರೇಲುಗಳು ಅದಿರು ಸಾಗಟ, ಸಾಮಾನು ಸರಂಜಾಮುಗಳ ಸರಬರಾಜು ಮೊದಲಾದ ಅಮಾನವಯಾತ್ರಾರ್ಥಿಗಳ ಮಟ್ಟಿಗಷ್ಟೇ ಈಗ ಸೀಮಿತವಿರುವುದು. ಇದೇಕೆ ಹೀಗೆ? ಇಂತಹ ರೇಲುಗಳಲ್ಲಿ ಪ್ರಯಾಣಿಸಲು ಮಾನವರೇಕೆ ಒಪ್ಪುವುದಿಲ್ಲ? ಅಥವಾ ಹಿಂಜರಿಯುತ್ತಾರೆ?

ಇದಕ್ಕಿರುವ ಕಾರಣವೆಂದರೆ ಅತನ ಮಾನಸಿಕ ದೌರ್ಬಲ್ಯ. ಸ್ವಯಂಚಾಲಿತ ರೇಲುಗಳು ಸಾವಿರ ಪಾಲು ಸುರಕ್ಷಿತವಿದ್ದರೂ ಚಾಲಕನಿಲ್ಲದ ಭೂತ ರೇಲುಗಳನ್ನು ಏರುವುದೆಂದರೆ ಆತನಿಗೆ ಎಲ್ಲಿಲ್ಲದ ಭಯ. ಹಾಗಾಗಿ ಚಾಲಕನ ಆವಶ್ಯಕತೆಯಿಲ್ಲವಾದರೂ ಎಂಜಿನ್ ಡ್ರೈವರನೊಬ್ಬನು ಎಂಜಿನ್ ಮುಂದೆ ಕೂತುಕೊಳ್ಳುವುದು ಅತ್ಯಗತ್ಯವಾಗಿದೆ. ಆಗ ಆತ ಡ್ರೈವ್ ಮಾಡದ ಡ್ರೈವರ್. ಎಂದೆಂದೂ ತಪ್ಪುಮಾಡದ ಸ್ವಯಂಚಾಲಿತ ಉಪಕರಣಗಳನ್ನು ನಿರೀಕ್ಷಿಸುವವ ಚಾಲಕನಲ್ಲ, ನಿರೀಕ್ಷಕ.

ಇಂಜಿನಿಯರು ಹೇಳುತ್ತಾರೆ—ಮನುಷ್ಯ ಚಾಲಕನಿಗಿಂತ ಯಂತ್ರ ಚಾಲಕನ ಮೇಲೆ ಹೆಚ್ಚು ವಿಶ್ವಾಸವಿಡಬಹುದು. ಯಂತ್ರಗಳು ಶೀಘ್ರವಾಗಿ ಸಮರ್ಪಕವಾಗಿ ಕೆಲಸ ನಿರ್ವಹಿಸುತ್ತವೆ. ಅವಕ್ಕೆ ದಣಿವಿಲ್ಲ. ಅವು ಮನೋವಿಕಾರಕ್ಕೊಳಗಾಗುವುದೂ ಇಲ್ಲ. ಇಂದು ನಡೆಯುತ್ತಿರುವ ರೇಲು ಅಪಘಾತಗಳಲ್ಲಿ ಹೆಚ್ಚಿನವು ಮಾನವನ ದೋಷಗಳಿಂದಲೇ ಆಗುವಂಥವು. 'ಭೂತ ಚಾಲಕ'ನಲ್ಲಿ ಇಂತಹ ದೋಷಗಳು ಬೇಕೆಂದರೂ ದೊರೆಯವು.

ಸಂಕೇತಗಳನ್ನು ಸರಿಯಾಗಿ ಅನುಸರಿಸುತ್ತಿದ್ದಾನೆಯೋ ಎಂಬುದನ್ನು ಖಚಿತ ಪಡಿಸಲು ಈಗ ಚಲಿಸುವ ಈ ರೇಲುಗಳಲ್ಲಿ ಸ್ವಯಂಚಾಲಿತ ಸಾಧನಗಳಿವೆ. ಏನಾದರೂ ತಪ್ಪು ಅರ್ಥ ಮಾಡಿಕೊಂಡಿದ್ದರೆ, ರೇಲು ಮುಂದುವರಿದಿದ್ದರೆ, ತನಗೆ ತಾನೇ ನಿಂತು ಬಿಡುವುದು. ಮಾನವನು ಹೀಗೆಲ್ಲಿ ಮಾಡಬಲ್ಲ?

ರೇಲು ನಿಲ್ದಾಣ ಹತ್ತಿರಕ್ಕೆ ಬಂತು ಎನ್ನಿ. ಸ್ವಯಂ ಚಾಲಿತ ಸೆಂಟ್ರಲ್ ಡೆಸ್ಕಿನಿಂದ ಆದೇಶ ಪಡೆದ ರೇಲು ತಾನಾಗಿಯೇ ನಿಧಾನವಾಗತೊಡಗುತ್ತದೆ. ನಿಲ್ಲಬೇಕಾದಲ್ಲಿ ತಾನಾಗಿಯೇ ನಿಲ್ಲುತ್ತದೆ. ಎಷ್ಟು ಚೊಕ್ಕ ಎನ್ನುತ್ತೀರಾ?

ಮಾನವನಿಗಿಂತ ಭೂತಗಳು ಮಾಡುವ ಕಾರ್ಯವೇನೋ ಅದ್ಭುತ. ಆದರೆ, ಭೂತಗಳು ಒಂದೊಮ್ಮೆ ತಪ್ಪು ಮಾಡಿದವೆಂದರೆ (ಮಾಡುವುದೇ ಇಲ್ಲ...) ಮತ್ತೆ ಮಾನವ ಅದರಿಂದ ಚೇತರಿಸಿಕೊಳ್ಳಲು ಹಲವು ಕಾಲ ಬೇಕಾಗುವುದು. ಆದುದರಿಂದ ಮಾನವ ಮಾತ್ರ ಭೂತಕ್ಕೆ ಅಂಜುವವನಂತೆ ಭೂತರೇಲಿಗೂ ಹೆದರುತ್ತಾನೆ.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ದಿ| ಶ್ರೀ ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—
ಆಂಗ್ಲ ಸ್ವಯಂಬೋಧಿನಿ

ಸುಲಭದಲ್ಲಿ ಇಂಗ್ಲಿಷ್

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ.ಎರಡು. ಉತ್ತಮ ಪ್ರತಿ: ರೂ.ಎರಡೂವರೆ(ಟ.ಖ. ಪ್ರತ್ಯೇಕ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ

ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ: ರೂ. 1-25 (ಟ.ಖ.ಪ್ರತ್ಯೇಕ)

ಹೊಸಕೆರೆ ಚಿದಂಬರಯ್ಯನವರ
ಶ್ರೀಮದ್ಭಗವದ್ಗೀತೆಯ ಸಮೂಲ ಭಾಷಾಂತರ

ಗೀತೆಯ ಕೈಗನ್ನಡಿ

300 ಪುಟಗಳಿಗೂ ಮಿಕ್ಕಿದೆ. ಕೈಹೊತ್ತಗೆಯ ಆಕಾರದಲ್ಲಿದೆ.
ಬೆಲೆ: ರೂ. ೧—೫೦
ಗೀತೆಯ ಕೈಗನ್ನಡಿಯ ಒಂದು ಪ್ರತಿ ಬೇಕಾದವರು ರೂ. 2-00ನ್ನು
ಮನಿಯಾರ್ಡರು ಮಾಡಿ ತರಿಸಿಕೊಳ್ಳಬಹುದು.
—ಪ್ರತಿಗಳಿಗೆ ಬರೆಯಿರಿ—
ನವಭಾರತ ಪುಸ್ತಕ ಭಂಡಾರ, ಉಡುಪಿ. ಅಥವಾ
ನವಯುಗ ಪ್ರೆಸ್, ಉಡುಪಿ.

"NAVAYUGA" Kannada Weekly is recommended for High Schools and Public Libraries by the Director of Public Instruction in Mysore, Bangalore vide their letter No. CL-4,17-4/65-66 dated 26—4—1966.

Edited, Printed & Published by K. H. Shetty at the Navayuga Press, Udipi. S. India.

నవయుగ

27—10—1966

NAVAYUGA

౨౦ పైసె

Registered with the Registrar
of News Papers for India
under No. R. N. 3546/'57

REGD. No. B.-G. 176
LICENCE No. 31
Licensed to Post without Prepayment

"ನನ್ನ ವಿಷಯ?"

"ಗೆಳೆಯನ ಹೃದಯವನ್ನು ಅರ್ಥಮಾಡಿಕೊಳ್ಳುವುದು ಕಷ್ಟವಲ್ಲ'

'ಸುಧಾ ಅಭಿಪ್ರಾಯ...."

"ಅವಳಿಗೂ ಸ್ವಾತಂತ್ರ್ಯವಿದೆ. ಅವಳನ್ನೇ ಕೇಳಬೇಕು"

"ಸರಿ" ಎಂದ ಸದಾನಂದ.

ಕೆಲವು ತಿಂಗಳು ಹಿಂದೆ ಸರಿದವು.

ಸುಧಾಳನ್ನು ಮರೆಯಬೇಕೆಂದು ಪ್ರಯತ್ನಿಸಿದಷ್ಟು ಅವಳ ನವಿನುಡಿ—ರೂಪ ಸದಾನಂದನ ಮುಂದೆ ಬಂದು ನಿಲ್ಲುತ್ತಿದ್ದವು. ಈ ಬಗೆಯಲ್ಲಿ ಹೇಗೆ ವರ್ತಿಸುವುದು ಎಂದು ತೋಚದೆ ಪ್ರಸನ್ನನನ್ನೇ ಆಶ್ರಯಿಸುವುದು ಸರಿ ಎಂದು ನಿರ್ಧರಿಸಿದ.

ಪ್ರಸನ್ನ ತಂಗಿ ಸುಧಾಳ ವಿವಾಹಕ್ಕೆ ಸಂಬಂಧಿಸಿದ ಎಲ್ಲ ಏರ್ಪಾಡುಗಳನ್ನು ಮಾಡಿದ. ಆದರೆ ಯಾವ ಸಂಗತಿಯನ್ನೂ ಸದಾನಂದನಿಗೆ ತಿಳಿಸದೆ ಅವನನ್ನು ಕಾಣಲು ಬಂದ.

ಪ್ರಸನ್ನ ಗೆಳೆಯ ಸದಾನಂದನನ್ನು ಕಛೇರಿಯಲ್ಲಿ ಭೇಟಿ ಮಾಡಿದ ಗೆಳೆಯನನ್ನು ಉತ್ಸಾಹದಿಂದಲೇ ಸ್ವಾಗತಿಸಿದ ಸದಾನಂದ. ಪರಸ್ಪರ ಕುಶಲ ಸಂಭಾಷಣೆ ಮುಗಿದ ನಂತರ ಸದಾನಂದ 'ಆಕಸ್ಮಿಕವಾಗಿ ಬಂದಿದ್ದೀಯಲ್ಲ ಪ್ರಸನ್ನ ಏನಾದರೂ ಸಮಾಚಾರವುಂಟೆ? ಸುಧಾ ಬಂದಿದ್ದಾಳೆಯೇ" ಎಂದು ಪ್ರಶ್ನಿಸಿದ.

"ಆ ವಿಷಯವನ್ನೇ ತಿಳಿಸಿ ಹೋಗಲು ಬಂದೆ"

"ಯಾವ ವಿಷಯ?"

"ಸುಧಾಗೆ ಗಂಡು ಗೊತ್ತಾಗಿದೆ. ವಿವಾಹದ ದಿನವೂ ಗೊತ್ತಾಗಿದೆ ಮುಂದಿನ ತಿಂಗಳು 20ನೆ ಯ ತಾರೀಕು ಮದುವೆ ನಿನಗೆ ಆಹ್ವಾನ ಪತ್ರಿಕೆ ಕೊಟ್ಟು ಹೋಗಲು ಬಂದೆ" ಎಂದ ಪ್ರಸನ್ನ.

ಸದಾನಂದನ ಮುಖ ಬಾಡಿತು. 'ಸಂತೋಷ" ಎಂದು ನುಡಿದ ಭಾರವಾದ ದನಿಯಲ್ಲಿ.

ಆಮಂತ್ರಣ ಪತ್ರಿಕೆಯೊಂದನ್ನು ಮೇಜಿನ ಮೇಲಿಡುತ್ತಾ 'ದಯವಿಟ್ಟು ಇದನ್ನು ಈಗಲೇ ಬಿಚ್ಚಿ ಓದ ಬೇಡ. ನಿನ್ನ ಕೋಣೆಗೆ ಹೋಗಿ ಬಿಚ್ಚಿ ನೋಡು. ನನಗೆ ತುಂಬ ಕೆಲಸವಿದೆ. ಟೂವನ ಮನೆಯಲ್ಲಿ ಇರುತ್ತೇನೆ ದಯವಿಟ್ಟು ಅಲ್ಲಿಗೆ ತಪ್ಪದೆ ಬಾ"ಎಂದು ನುಡಿದು ಪ್ರಸನ್ನ ಮೇಲೆದ್ದ.

ಸದಾನಂದ ಮಾತನಾಡಲು ಪ್ರಯತ್ನಿಸಿದ.

ಪ್ರಸನ್ನ 'ಭೇಟಿಯಾದಾಗ ಮಾತನಾಡೋಣ" ಎಂದು ನುಡಿದು ನಡೆದ; ಸದಾನಂದನಿಗೆ ಅತೀವ ವೇದನೆಯಾಗಿತ್ತು; ಹಾಗೆಯೇ ಗೆಳೆಯ ಹೇಳಿದ ಮಾತಿನ ರೀತಿಯೂ ಅವನಿಗೆ ವಿಚಿತ್ರವಾಗಿತ್ತು. ತನ್ನ ಅಭಿಪ್ರಾಯವನ್ನು ಮೊದಲೇ ತಿಳಿಸಬೇಕಿತ್ತು. ಕಾಲ ಮಿಂಚಿ ಹೋಯಿತು ಎಂದು ಚಡಪಡಿಸಿದ. ಬೇಸರದಿಂದ ಮಾಡುತಿದ್ದ ಕೆಲಸವನ್ನು ಅರ್ಧಕ್ಕೆ ನಿಲ್ಲಿಸಿ ಕೋಣೆಯ ಹಾದಿ ಹಿಡಿದ.

"ಕೋಣೆಯಲ್ಲಿ ಬಿಚ್ಚಿ ನೋಡು ಎಂದೇಕೆ ಹೇಳಿದ, ಅಷ್ಟು ಗುಟ್ಟು ಇದರಲ್ಲೇನಿದೆ" ಎಂದು ಯೋಚಿಸುತ್ತಲೇ ಕೋಣೆ ಪ್ರವೇಶಿಸಿದ. ಕುರ್ಚಿಯ ಮೇಲೆ ಕುಳಿತು ಪತ್ರಿಕೆಯನ್ನು ಬಿಚ್ಚಿ ನೋಡಿ ತನ್ನ ಕಣ್ಣನ್ನು ತಾನೇ ನಂಬದಾದ. ಪತ್ರಿಕೆಯಲ್ಲಿ ಸುಧಾ ಮತ್ತು ಸದಾನಂದರ ವಿವಾಹ ಎಂದು ಮುದ್ರಿಸಲ್ಪಟ್ಟಿತ್ತು. ಸದಾನಂದ ಸಂತೋಷದಿಂದ ಗೆಳೆಯನನ್ನು ಭೇಟಿ ಮಾಡಲು ಕೈಗೆ ಕೋಟನ್ನು ಎತ್ತಿಕೊಂಡು ಹೊರಟ. ಅವನ ಬರುವನ್ನೇ ಎದುರು ನೋಡುತ್ತಾ ಪ್ರಸನ್ನ ಗೇಟಿನ ಬಳಿ ನಿಂತಿದ್ದ. ಗೆಳೆಯನನ್ನು ಕಂಡೊಡನೆಯೇ "ಇದು ನನ್ನ ತಪ್ಪಲ್ಲ ಸದಾ, ಸುಧಾಳ ಸಲಹೆ" ಎಂದು ಸಂಕೋಚವಿಲ್ಲದೆ ನುಡಿದ.

ಆ ದಿನವಿನ್ನೂ ದೂರವಿಲ್ಲ

ನೀವೂ ಭೂತರೇಲನ್ನು ಹತ್ತುವಿರಿ

ಬವೇರಿಯಾದ ಹೆಸರನ್ನು ನೀವು ಕೇಳಿದ್ದೀರಿ. ಇದಿರುವುದು ಪಶ್ಚಿಮ ಜರ್ಮನಿಯಲ್ಲಿ. ಅಲ್ಲೇ ಸಮೀಪದಲ್ಲಿದೆ ಸಾಲ್ ಎಂಬಲ್ಲಿ ಒಂದು ಕಾರಖಾನೆ. ಗಣಿಗಳಿಂದ ಕಾರಖಾನೆಗೆ ಸುಣ್ಣದ ಕಲ್ಲನ್ನು ಹೊತ್ತು ನೂರು ರೇಲು ಗಾಡಿಗಳು ನಿತ್ಯನಿತ್ಯ ಹಲವುಬಾರಿ ಬರುತ್ತವೆ ಹೋಗುತ್ತವೆ. ಇವುಗಳಿಗೆ ಚಾಲಕನೇ ಇಲ್ಲವೆಂದರೆ ಮಾನವ ಚಾಲಕನಿಲ್ಲ ಎಂದು ಮಾತ್ರ ಅರ್ಥ. ಈ ಸ್ವಯಂಚಾಲಿತ ರೇಲುಗಳು ಹೊರಡುತ್ತವೆ, ನಿಲ್ಲುತ್ತವೆ; ಸಿಗ್ನಲ್‌ಗಳನ್ನು ಅರ್ಥಮಾಡಿಕೊಳ್ಳುತ್ತವೆ. ಹೊತ್ತಿಗೆ ಸರಿಯಾಗಿ ಬರುತ್ತವೆ. ಈ ಬಗೆಯ ರೇಲು ಮೊತ್ತಮೊದಲ ಬಾರಿಗೆ ಯುರೋಪು ಭೂಖಂಡಕ್ಕೆ ಪಾದಾರ್ಪಣ ಮಾಡಿದೆ—

ಪ್ರಪಂಚದ ಇತರ ಕೆಲವೆಡೆಯೂ ಈ ಬಗೆಯ ಸ್ವಯಂಚಾಲಿತ ರೇಲುಗಳು ಸಂಚರಿಸುತ್ತವೆ. ಚಾಲಕನಿಲ್ಲದ ಈ ಬಗೆಯ 'ಭೂತರೇಲು'ಗಳು ದಿನದಿಂದ ದಿನಕ್ಕೆ ಅಧಿಕ ಜನಪ್ರಿಯವಾಗುತ್ತ ಬರುವುದು ಖಂಡಿತವೇ. ಕೆನೆಡಾದ ಲೆಬ್ರೊಡೊರ್ ನಗರದ ಸಮೀಪ ಆರು ಮೈಲುದ್ದದ ಅದಿರು ಕಾರಖಾನೆಯ ರೇಲುದಾರಿಯಿದ್ದು ಇಲ್ಲಿಯೂ ನ್ಯೂಯಾರ್ಕ್ ಉಪದಾರಿಯಲ್ಲಿಯೂ ಸ್ವಯಂಚಾಲಿತ ರೇಲುಗಾಡಿಗಳು ಯಶಸ್ವಿಯಾಗಿ ಓಡುತ್ತಿವೆ.

ಆದರೆ, ಈ ಭೂತ ರೇಲುಗಳು ಅದಿರು ಸಾಗಟ, ಸಾಮಾನು ಸರಂಜಾಮುಗಳ ಸರಬರಾಜು ಮೊದಲಾದ ಅಮಾನವ ಯಾತ್ರಾರ್ಥಿಗಳ ಮಟ್ಟಿಗಷ್ಟೇ ಈಗ ಸೀಮಿತವಿರುವುದು. ಇದೇಕೆ ಹೀಗೆ? ಇಂತಹ ರೇಲುಗಳಲ್ಲಿ ಪ್ರಯಾಣಿಸಲು ಮಾನವರೇಕೆ ಒಪ್ಪುವುದಿಲ್ಲ? ಅಥವಾ ಹಿಂಜರಿಯುತ್ತಾರೆ?

ಇದಕ್ಕಿರುವ ಕಾರಣವೆಂದರೆ ಅವನ ಮಾನಸಿಕ ದೌರ್ಬಲ್ಯ. ಸ್ವಯಂಚಾಲಿತ ರೇಲುಗಳು ಸಾವಿರ ಪಾಲು ಸುರಕ್ಷಿತವಿದ್ದರೂ ಚಾಲಕನಿಲ್ಲದ ಭೂತ ರೇಲುಗಳನ್ನು ಏರುವುದೆಂದರೆ ಅವನಿಗೆ ಎಲ್ಲಿಲ್ಲದ ಭಯ. ಹಾಗಾಗಿ ಚಾಲಕನ ಆವಶ್ಯಕತೆಯಿಲ್ಲವಾದರೂ ಎಂಜಿನ್ ಡ್ರೈವರನೊಬ್ಬನು ಎಂಜಿನ್ ಮುಂದೆ ಕೂತುಕೊಳ್ಳುವುದು ಅತ್ಯಗತ್ಯವಾಗಿದೆ ಆಗ ಆತ ಡ್ರೈವ್ ಮಾಡದ ಡ್ರೈವರ್. ಎಂದೆಂದೂ ತಪ್ಪುಮಾಡದ ಸ್ವಯಂಚಾಲಿತ ಉಪಕರಣಗಳನ್ನು ನಿರೀಕ್ಷಿಸುವವ ಚಾಲಕನಲ್ಲ, ನಿರೀಕ್ಷಕ.

ಇಂಜಿನಿಯರುಗಳು ಹೇಳುತ್ತಾರೆ—ಮನುಷ್ಯ ಚಾಲಕನಿಗಿಂತ ಯಂತ್ರ ಚಾಲಕನ ಮೇಲೆ ಹೆಚ್ಚು ವಿಶ್ವಾಸವಿಡಬಹುದು. ಯಂತ್ರಗಳು ಶೀಘ್ರವಾಗಿ ಸಮರ್ಪಕವಾಗಿ ಕೆಲಸ ನಿರ್ವಹಿಸುತ್ತಿವೆ. ಅವಕ್ಕೆ ದಣಿವಿಲ್ಲ. ಅವು ಮನೋವಿಕಾರಕ್ಕೊಳಗಾಗುವುದೂ ಇಲ್ಲ. ಇಂದು ನಡೆಯುತ್ತಿರುವ ರೇಲು ಅಪಘಾತಗಳಲ್ಲಿ ಹೆಚ್ಚಿನವು ಮಾನವನ ದೋಷಗಳಿಂದಲೇ ಆಗುವಂಥವು. 'ಭೂತ ಚಾಲಕ'ನಲ್ಲಿ ಇಂತಹ ದೋಷಗಳು ಬೇಕೆಂದರೂ ದೊರೆಯುವು.

ಸಂಕೇತಗಳನ್ನು ಸರಿಯಾಗಿ ಅನುಸರಿಸುತ್ತಿದ್ದಾನೆಯೋ ಎಂಬುದನ್ನು ಖಚಿತಪಡಿಸಲು ಈಗ ಶರವೇಗದ ಈ ರೇಲುಗಳಲ್ಲಿ ಸ್ವಯಂಚಾಲಿತ ಸಾಧನಗಳಿವೆ. ಏನಾದರೂ ತಪ್ಪು ಅರ್ಥ ಮಾಡಿಕೊಂಡದಿದ್ದರೆ, ರೇಲು ಮುಂದುವರಿದಿದ್ದರೆ, ತನಗೆ ತಾನೇ ನಿಂತು ಬಿಡುವುದು. ಮಾನವನು ಹೀಗೆಲ್ಲಿ ಮಾಡಬಲ್ಲ?

ರೇಲು ನಿಲ್ದಾಣ ಹತ್ತಿರಕ್ಕೆ ಬಂತು ಎನ್ನಿ. ಸ್ವಯಂ ಚಾಲಿತ ಸೆಂಟ್ರಲ್ ಡೆಸ್ಕಿನಿಂದ ಆದೇಶ ಪಡೆದ ರೇಲು ತಾನಾಗಿಯೇ ನಿಧಾನವಾಗತೊಡಗುತ್ತದೆ. ನಿಲ್ಲಬೇಕಾದಲ್ಲಿ ತಾನಾಗಿಯೇ ನಿಲ್ಲುತ್ತದೆ. ಎಷ್ಟು ಚೊಕ್ಕ ಎನ್ನುತ್ತೀರಾ?

ಮಾನವನಿಗಿಂತ ಭೂತಗಳು ಮಾಡುವ ಕಾರ್ಯವೇನೋ ಅದ್ಭುತ. ಆದರೆ, ಭೂತಗಳು ಒಂದೊಮ್ಮೆ ತಪ್ಪು ಮಾಡಿದವೆಂದರೆ (ಮಾಡುವುದೇ ಇಲ್ಲ...) ಮತ್ತೆ ಮಾನವ ಅದರಿಂದ ಚೇತರಿಸಿಕೊಳ್ಳಲು ಹಲವು ಕಾಲ ಬೇಕಾಗುವುದು. ಆದುದರಿಂದ ಮಾನವ ಮಾತ್ರ ಭೂತಕ್ಕೆ ಅಂಜುವವನಂತೆ ಭೂತರೇಲಿಗೂ ಹೆದರುತ್ತಾನೆ.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ದಿ। ಶ್ರೀ ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—
ಆಂಗ್ಲ ಸ್ವಯಂಬೋಧಿನಿ

ಸುಲಭದಲ್ಲಿ ಇಂಗ್ಲಿಷ್

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ.ಎರಡು. ಉತ್ತಮ ಪ್ರತಿ:ರೂ.ಎರಡೂವರೆ(ಟ.ಖ. ಪ್ರತ್ಯೇಕ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ

ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ
ಬೆಲೆ: ರೂ. 1-25 (ಟ.ಖ.ಪ್ರತ್ಯೇಕ)

ಹೊಸಕೆರೆ ಚಿದಂಬರಯ್ಯನವರ
ಶ್ರೀಮದ್ಭಗವದ್ಗೀತೆಯ ಸಮೂಲ ಭಾಷಾಂತರ

ಗೀತೆಯ ಕೈಗನ್ನಡಿ

300 ಪುಟಗಳಿಗೂ ಮಿಕ್ಕಿದೆ. ಕೈಹೊತ್ತಗೆಯ ಆಕಾರದಲ್ಲಿದೆ.
ಬೆಲೆ: ರೂ. ೧—೫೦
ಗೀತೆಯ ಕೈಗನ್ನಡಿಯ ಒಂದು ಪ್ರತಿ ಬೇಕಾದವರು ರೂ. 2-00ನ್ನು ಮನಿಯಾರ್ಡರು ಮಾಡಿ ತರಿಸಿಕೊಳ್ಳಬಹುದು.
—ಪ್ರತಿಗಳಿಗೆ ಬರೆಯಿರಿ—
ನವಭಾರತ ಪುಸ್ತಕ ಭಂಡಾರ, ಉಡುಪಿ. ಅಥವಾ
ನವಯುಗ ಪ್ರೆಸ್, ಉಡುಪಿ.

"NAVAYUGA" Kannada Weekly is recommended for High Schools and Public Libraries by the Director of Public Instruction in Mysore, Bangalore vide their letter No. CL-4.17-4/65-66 dated 26-4-1966.

Edited, Printed & Published by K. H. Shetty at the Navayuga Press, Udipi, S. India.

నవయుగ

27—10—1966

NAVAYUGA

౨౦ పైస

ಕಥಾ ಪ್ರಪಂಚ

ಕೊಲೆ ಗಡುಕ

ಬರೆದವರು
ಡಾ! ಕೆ. ಎಂ. ಬಲ್ಲಾಳ, ಉಡುಪಿ

ಕ್ರೋಧವೇ ಮೈದಾಳಿದಂತೇ ಕಾಳಾಚಾರಿ ಹಲ್ಲುಗಡಿಯುತ್ತಾ, ಕ್ರುದ್ಧನಾಗಿ, ಕಾಲ ಭೈರವನಂತೇ ಘರಗುಟ್ಟಿ, ನಡುಗುತ್ತಾ ಭಯದಿಂದ ಅವಾಕಾದ ಮಸ್ತಕ ನಡುಗುವ ತನ್ನ ಹೆಂಡತಿ ಸಂಕ್ರಿಯ ತಲೆಗೂದಲನ್ನು ತನ್ನ ಬಿಗಿದ ವಜ್ರ ಮುಷ್ಟಿಯಲ್ಲಿ ಹಿಡಿದು ಎಳೆದು ಹೂಂಕರಿಸುತ್ತಿದ್ದ—ಉದ್ವಿಗ್ನನಾಗಿ, ಪ್ರಜ್ಞಾರಹಿತನಾಗಿ—

ಸಂಕ್ರಿಯ ಅಪರಾಧ ಗುರುತರವಾಗಿತ್ತು; ಮಹತ್ತರವಾಗಿತ್ತು; ಮಾನಕ್ಕಾಗಿ ಜೀವ ಬಿಡುವ ಜಾಯಮಾನ ಕಾಳಾಚಾರಿಯದ್ದಾಗಿತ್ತು; ಊರಿನ ಹಿರಿಯಸ್ಥಾನ ಈ ಮರ್ಯಾದಿಯುತ ಜೀವನದಿಂದ ಕಾಳಾಚಾರಿಗಿತ್ತು, ಊರಿನಲ್ಲಿ ಯಾವ ವ್ಯಾಜ್ಯ, ಪಂಚಾಯತಿಗೆಗೂ ಕಾಳಾಚಾರಿಗೆ ಪ್ರಥಮ ಸ್ಥಾನ; ಅವನ ತೀರ್ಪೇ ವೇದ ವಾಕ್ಯವಾಗಿತ್ತು. ಇದಕ್ಕೆ ಕಾರಣ ಕಾಳಾಚಾರಿ ಸ್ವಲ್ಪವಿದ್ಯಾವಂತನಾಗಿದ್ದ, ಮಾನವಂತನಾಗಿದ್ದ. ನ್ಯಾಯಾನ್ಯಾಯದ ತುಲನಾತ್ಮಕ ದೃಷ್ಟಿಯನ್ನು ತೂಗಿ ನೋಡುವ ಮನಸ್ಸಿದ್ಧತನ ಅವನಲ್ಲಿತ್ತು. ಅಲ್ಲದೆ ಆಚಾರಿ ಬಯಲು ನಾಟಕದಲ್ಲಿ ನಿಸ್ಸೀಮನಾಗಿದ್ದ. ಕಲೆಯ ಮೇಲಿನ ಅವನ ಗುರುತರವಾದ ಭಕ್ತಿ, ಉರುತರವಾದ ಪರಿಶ್ರಮ ಮಹತ್ತರವಾದ ಆಸೀಮ ಪ್ರೇಮ ಅವನನ್ನು ರಂಗ ಭೂಮಿಯಲ್ಲಿ ಸೂತ್ರಧಾರಿಯನ್ನಾಗಿ ಮಾರ್ಪಾಟುಗೊಳಿಸಿತ್ತು. ಹೊಲಗದ್ದೆಗಳ ಕೆಲಸ ಮುಗಿದಾಕ್ಷಣ, ಮಳೆಗಾಲದ ಆರು ತಿಂಗಳಲ್ಲಿ ಸೋಮಾರಿಗಳಾಗಿ ಅತ್ತಿಂದಿತ್ತ ಅಂಡಲೆಯುವ ರೈತರನ್ನು ಒಗ್ಗೂಡಿಸಿದ್ದ ಆಚಾರಿ, ಹಳ್ಳಿಯಲ್ಲಿ ಬಯಲು ನಾಟಕದ ಅಭ್ಯಾಸವನ್ನು ನಿರರ್ಗಳವಾಗಿ ಆರಂಭಿಸಿದ್ದ. ಹೂಳಕ್ಕೆರೆ ನರ್ಸ, ಮೊಗ್ಗೇನಹಳ್ಳೀ ಸಿದ್ಧೇ ಗೌಡ—ಇವರೆಲ್ಲರ ಹಿಮ್ಮೇಳದೊಂದಿಗೆ ಬಯಲು ನಾಟಕದ ಅಭ್ಯಾಸ ಎಂಟು ತಾಸಿನಿಂದ 12 ಗಂಟೆಗಳ ವರೆಗೆ ಅವ್ಯಾಹತವಾಗಿ ನಡೆಯುತಿತ್ತು.—

ಆಚಾರಿ ದಿಗ್ದರ್ಶಕನಾಗಿ ನಟನೆಯ ಸಲಹೆ ಸೂಚನೆಗಳನ್ನು ಈಯುತ್ತಿದ್ದ, ಸ್ವಲ್ಪ ತಪ್ಪಿದಾಗ ವಾಚಾಮ ಗೋಚರವಾಗಿ ಬಯ್ದು ಪುನಃ ಅದೇ ಅಭಿನಯವನ್ನು ನಟರಿಂದ ಮಾಡಿಸಿ ತೃಪ್ತನಾಗುತ್ತಿದ್ದ. ಆದರೂ ನಟರು ನೊಂದುಕೊಳ್ಳುತ್ತಿರಲಿಲ್ಲ. ಕಾರಣ ಕಾಳಾಚಾರಿ ಬಾಕ ಹೊತ್ತಿನಲ್ಲಿ ತನ್ನ ನಟರನ್ನು ಅಷ್ಟು ಪ್ರೀತಿ ನೀಡುತ್ತಿದ್ದ 'ದಂಡಿಸದೆ, ವಿದ್ಯೆ ಹಾಗೂ ಕಲೆ ಅಷ್ಟು ಸುಲಭದಲ್ಲಿ ಬರೋಲ್ಲ ಶ್ರಮ ಶ್ರದ್ಧೆ ಇದ್ದಾಗ, ದಂಡನೆ, ಬೈಗಳು ಆ ಕಲೆಗೆ ಆವಿಷ್ಕಾರವಾಗುತ್ತದೆ"—ಇದವನ ಸಿದ್ಧಾಂತವಾಗಿತ್ತು. ರಾತ್ರಿಯ ಕಾರ್ಗಾಲದಲ್ಲಿ ಅಭ್ಯಾಸ, ಭರದಿಂದ ಸಾಗುವಾಗ ಹಳ್ಳಿಯ ಆಬಾಲ ವೃದ್ಧರು ಪ್ರೇಕ್ಷಕರಾಗಿ ಬಂದು ಕೂಡಿ, ತಮ್ಮ ತೃಪ್ತಿಯನ್ನು ತೋರಿಸುತ್ತಿದ್ದರು ಅವರಲ್ಲರ ಪ್ರೋತ್ಸಾಹ ಕಾಳಾಚಾರಿಗೆ ಉತ್ಸಾಹದ ಹಾದಿ ದೀಪವಾಗುತಿತ್ತು.—

ಹೊರಗಣ ಜಡಿ ಮಳೆ— ಕಿವಿಗಡಚಿಕ್ಕುವ ಗುಡುಗು— ಕಣ್ಣು ಕೋರೈಸುವ ಮಿಂಚಿನ ಬೆಳಕು—ಕಂಪನ ಹುಟ್ಟಿಸುವ ಚಳಿ—ಆಗಾಗ್ಗೆ ಒಣಗುಟ್ಟುವ ಕಪ್ಪೆಗಳ ಗಾರ್ದಭ ಧ್ವನಿ—ಇವ್ಯಾವುವೂ ಅವರ ಗಮನದಲ್ಲಿಲ್ಲ. ಬಯಲು ನಾಟಕದಲ್ಲಿ ಅವರ ಮನಸ್ಸು ತನ್ಮಯವಾಗುತಿತ್ತು; ಪ್ರಣಯೋತ್ಕಳ ಕರೆ, ಮೊರೆ, ಲಾಲಿಸಿ ಓಡಿ ಬಂದ ಪ್ರಿಯಕರನ್ನು ಪ್ರೇಯಸಿಯನ್ನು ಬಾಚಿ ತಬ್ಬಿದಾಗ ಹಳ್ಳಿಯ ಮಂದಿಗೆಲ್ಲಾ ರೋಮಾಂಚನವಾಗುತಿತ್ತು. ಉಗ್ರ ಸನ್ನಿವೇಶದ ದೃಶ್ಯ ಬಂದಾಗ ಹಳ್ಳಿಯವರ ರಕ್ತ ಬಿಸಿ ಏರುತಿತ್ತು. ಜಾನಪದ ನೃತ್ಯವಾಗುವಾಗ ಹಳ್ಳಿಯವರ ಉತ್ಸಾಹ ಉಕ್ರಂದವಾಗಿ, ಕೂತವರೂ ಹೆಜ್ಜೆ ಹಾಕುತ್ತಿದ್ದರು. ಬಯಲು ನಾಟಕದ ಅಭ್ಯಾಸ ಮಳೆಗಾಲದ ಬಿಡುವಿನ ಹೊತ್ತಿನಲ್ಲಿ ಹಳ್ಳಿಯ ಹತ್ತು ಜನರಿಗೆ ಮನರಂಜನೀಯವಾಗಿತು.... ಹೊತ್ತುಗಳೆವ ದಿವ್ಯ ಸಾಧನವಾಗಿತ್ತು!

ರಾತ್ರಿಯ ಬಯಲು ನಾಟಕದ ಅಭ್ಯಾಸ ನಡೆಯುವಾಗ, ಕಾಳಾಚಾರಿಯ ಹೆಂಡತಿ ಸಹಾ ಬಂದು ಪ್ರೇಕ್ಷಕಳಾಗಿ ಕೂರುವುದು ಪಿತ್ರ್ಯದ ವಾಡಿಕೆಯಾಗಿತ್ತು. ಆಗ್ಗಾಗ್ಯೆ ತನ್ನ ಮಧುರ ಕಂಠದಿಂದ, ಕಾಳಾಚಾರಿಯ ಒತ್ತಾಯದಿಂದ ಆಕೆ ಹಾಡುವಾಗ, ಕೂಡಿದ್ದ ಜನವೇಕೆ? ಸ್ವತಃ ನಟರೇ ಮೈ ಮರೆಯುತ್ತಿದ್ದರು. ಕಾಳಾಚಾರಿಗೆ ಎರಡನೇ ಹೆಂಡತಿಯಾಗಿ ಬಂದಿದ್ದ ಸಂಕ್ರಿ ನೋಡಲು ಅಷ್ಟೇನೂ ಸ್ಫುರದ್ರೂಪಿಣಿಯಾಗಿರದಿದ್ದರೂ ತುಂಬಿದ ಮೈಕಟ್ಟಿನಿಂದ ಹಳ್ಳಿಯ ಕಣ್ಮಣಿಯಾಗಿದ್ದಳು. ಕಾಳಾಚಾರಿಗೆ ಪ್ರಾಯ ೬೦ ಆಗಿದ್ದರೂ ತನ್ನ ಹೆಂಡತಿಯನ್ನು ಅಷ್ಟು ಪ್ರೇಮದಿಂದ ಸಲಹುತಿದ್ದನಾದರೂ, [illegible] ಜನ್ಮನೆ ಸಂಕ್ರಿಗೆ ಪತಿಯ ಸಹವಾಸ ಮುಳುವಾಗುತಿತ್ತು. ಆದರೆ ಮಾನಕ್ಕಾಗಿ ಏನು ಮಾಡಲು ಸಿದ್ಧನಿದ್ದ— ಸಂಕ್ರಿಗೆ ಕಾಳಾಚಾರಿ ಸಿಂಹ ಸ್ವಪ್ನನಾಗಿದ್ದ. ಇದಕ್ಕೆ ಸರಿಯಾಗಿ ಸಂಕ್ರಿ—ಕಾಳಾಚಾರಿಗೆ ಲಗ್ನವಾಗಿ ೮—೧೦ ವರುಷಗಳಾದರೂ ಪುತ್ರ ಭಾಗ್ಯ ಆ ದಂಪತಿಗಳಿಗೆ ಇಲ್ಲದಿದ್ದುದು ಸಂಕ್ರಿಗೆ ಉಗುಳಲಾರದ—ನುಂಗಲಾರದ ಬಿಸಿ ತುಪ್ಪವಾಗಿತ್ತು.

ಆ ದಿನ ರಾತ್ರಿ ಎಂದಿನಂತೆ ಬಯಲು ನಾಟಕದ ಅಭ್ಯಾಸ ಅವಿರತವಾಗಿ ನಡೆಯುತಿತ್ತು. ಸೇರಿದ್ದ ಮಂದಿ ನಾಟಕ ನೋಡುವುದರಲ್ಲಿ ತಲ್ಲೀನರಾಗಿದ್ದರು ಕಾಳಾಚಾರಿ ದಿಗ್ದರ್ಶನವೀಯುತ್ತಿದ್ದ. ಸಂಕ್ರಿ ಚಾವಡಿಯ ಮೂಲೆಯೊಂದರಲ್ಲಿ ಕೂತು ನಾಟಕ ನೋಡುತ್ತಿದ್ದಳು. ನಾಟಕದ ನಾಯಕ ರಂಗೇಗೌಡ, ಅತ್ಯುತ್ತಮವಾಗಿ ಆ ದಿನ ಅಭಿನಯಿಸುತ್ತಿದ್ದ— ಯಾವುದೇ ಉತ್ಸಾಹ, ಹುಮ್ಮಸ್ಸು ಅವನ ನರನಾಡಿಗಳಲ್ಲಿ ವಿದ್ಯುದ್ವೇಗದಿಂದ ಸಂಚರಿಸುತಿತ್ತು. ರಂಗೇ ಗೌಡ ಸುರೂಪಿಯಾಗಿದ್ದ. ಒಳ್ಳೇ ಅಜಾನುಬಾಹು, ಕಾಯ, ಅಗಲವಾದ ಹಣೆ, ತಿದ್ದಿ ತೀಡಿದ ಗುಂಗುರು ಕೂದಲು, ಮಿಂಚಿನಂತೆ ಹೊಳೆವ ನೇತ್ರದ್ವಯ, ಗಂಭೀರವಾದ ಮಂದಸ್ಮಿತವದನ, ಗಡಸು ದನಿ. - ಇದರಿಂದ ಆತ ಆ ಹಳ್ಳಿಯ ಜನರ ಮಧ್ಯೆ ಸುಂದರ ಪುರುಷನಾಗಿದ್ದ. ನಾಟಕದ ಅಭ್ಯಾಸ ನಡೆಯುತ್ತಾ ಇರುವಾಗ ರಂಗೇ ಗೌಡನನ್ನು ತದೇಕ ದೃಷ್ಟಿಯಿಂದ ಸಂಕ್ರಿ ನೋಡಿ, ಮುಗುಳ್ನಗೆ ಬೀರಿ, ತನ್ನ ತೃಪ್ತಿಯನ್ನು ತೋರಿಸುತ್ತಿದ್ದಳು— ಬೆಚ್ಚುಗಣ್ಣಿನಿಂದ. ಇದ್ದು ರಂಗೇ ಗೌಡನಿಗೂ ಅರಿವಾಗಿ, ಅವನು ಕಣ್ಣಲ್ಲೇ ಉತ್ತರಿಸುತ್ತಿದ್ದ. ಕಾಳಾಚಾರಿಯ ಗೃಧ್ರ ದೃಷ್ಟಿಗೆ ಇದು ದೃಗ್ಗೋಚರವಾಗದೆ ಹೋಗಲಿಲ್ಲ ಆಗ ಕಾಳಾಚಾರಿ
ಗೂಳಿಯಂತೆ ಹೂಂಕರಿಸಿ, ಮುಖ ಗಂ
ಕ್ಕುತ್ತಿದ್ದ. ಸಂಕ್ರಿ—ರಂಗೇ ಗೌಡ ತೆ
ಗಾಗುತ್ತಿದ್ದರು. ಆದರೆ, ಈರ್ವರ ಹೃ
ಯದಲ್ಲೂ ಉದ್ಭೂತವಾಗಿ, ಮೆಲ್ಲನೆದಾ
ಗೂಡಿ ಇಡುತ್ತಿದ್ದ ಪ್ರೇಮ ಮೋಹ, ದಿನ
ದಿನೇ ಹೃದಯಾಂತರಾಳದಲ್ಲಿ ಬೆಳೆಯು
ತ್ತಲೇ ಇತ್ತು. ಕಾಳಾಚಾರಿ ಪೇಟೆ
ಹೋದಾಗ ರಂಗೇ ಗೌಡ, ಸಂಕ್ರಿಯ
ಮನೆಗೆ ಮಾತನಾಡುವ ನೆಪದಲ್ಲಿ ಬಂದು
ವೀಳ್ಯದೆಲೆ ತಿಂದು, ಹೋಗುತ್ತಿದ್ದ. ಸಂ
ಕ್ರಿಗೆ ಆಗ ಸ್ವರ್ಗ ಸುಖದ ಅನುಭವವಾ
ಗುತಿತ್ತು. ರಂಗೇ ಗೌಡನಿಗೂ ಆ ಅಲ್
ವಧಿಯ ಸುಖ ಪರಮಾನಂದವಾಗು
ತ್ತಿತ್ತು, ಆದರೆ ಸಂದರ್ಭ ಮಾತ್ರ ಇಬ್ಬರಿಗೂ
ಬೇಕಾದಷ್ಟು ಕಾಲ, ಸರಿಯಾಗಿ ಲಭ
ವಾಗುತ್ತಿರಲಿಲ್ಲ. ಅತೃಪ್ತಿ, ಅಸಹನೆ ಇ
ಬ್ಬರ ಎದೆಯೊಳದಲ್ಲೂ ತಾಂಡವವಾಡು
ತ್ತಲೇ ಇತ್ತು.

ಒಂದು ದಿನ ರಾತ್ರಿ ಬಯಲು ನಾಟ
ಕದ ಅಭ್ಯಾಸ ಎಂದಿನಂತೇ ನಡೆಯು
ತ್ತಿತ್ತು. "ದುಷ್ಯಂತ ಶಕುಂತಲೆಯರ' ವಿ
ನದ ದೃಶ್ಯ ರಂಗೇ ಗೌಡ ಚಣಕ್ಕೊ
ಓರೆ ನೋಟ ಬೀರಿ, ಸಂಕ್ರಿ ಎನ್ನು ನಿರೀ
ಕ್ಷಿಸುತ್ತಿದ್ದ. ಚಂಡೆಯ ಮಧುರನಿನಾ
ಮದ್ದಳೆಯ ಗಂಭೀರ ವಾ
ನಟರ ಉತ್ಸಾಹಕ್ಕೆ ಉ
ಗಾಯಕ್ಕೆ ಉಪ್ಪು ಸೇರಿರೆದಂತಾಗಿತ್ತು
ನ ಎಂದಿಗಿಂತ ಹೆಚ್ಚಾಗಿ ಸೇರಿದ್ದರು.
ಕ್ರಿ—ರಂಗೇ ಗೌಡರ ಅಂತರಂಗದ ಪ್ರ
ಮ ಸಂಕೇತ, ಯಾರಿಗೂ ಅರಿವಾಗ
ತೇ ನಡೆಯುತ್ತಲೇ ಇತ್ತು; ಕಾಳಾಚಾ
ಯೂ ಆ ದಿನ ತನ್ನ ಉತ್ಸಾಹದ ಭರದ
ಅತ್ತ ಗಮನವೀಯಲಿಲ್ಲ.

ರಾತ್ರಿಯ ಸುಮಾರು ೧-೨ ತಾಸಿಗೆ
ಯಲು ನಾಟಕದ ಅಭ್ಯಾಸವು ಮುಕ್ತ
ಯವಾಯಿತು. ಹೊರಗೆ ಜೋರಾಗಿ ವ
ಗಾಳಿ ಬರುತ್ತಿತ್ತು; ತೂಕಡಿಸುತ್ತಿದ್ದ ವ
ದಿ ಅಲ್ಲಲ್ಲೇ ದುಪ್ಪಟಿ ಹಾಕಿಕೊಂಡು
ಲಗಿ ಕೊಂಡರು, ಕಾಳಾಚಾರಿಯೂ
ದ್ದು, ತೂಕಡಿಕೆಯಿಂದ ತಕಳಿಸುತ್ತಾ,
ನ್ನ ಕೊರಡಿಯನ್ನು ಸೇರಿ ಮಲಗಿಕೊಂಡ
ಅಭ್ಯಾಸದ ಆಯಾಸದಿಂದ, ನಿದ್ರಾದೇ
ಯ ತೊಳಸೆರೆಗೆ ಆತುಬಿದ್ದ. ಕಾಳಚಾ
ಯ ಗೊರಕೆ ತಾನ ವಿತಾನ ಮಾ

(ಹದಿನೈದನೇ ಪುಟ ನೋಡಿರಿ)

ಅತ್ಯಾಧುನಿಕ ಸಲಕರಣೆ — ಸೌಕರ್ಯಗಳಿಂದ ಕೂಡಿದ
ಭೋಜನ, ಉಪಾಹಾರ ಮತ್ತು ವಸತಿ ಗೃಹ



ಹೋಟೆಲ್ ಶಿವಪ್ರಸಾದ

ಫೋನ್: 77 ಕುಂದಾಪುರ, ದ. ಕ

ಉಡುಪಿ ಕರ್ನಾಟಕ ಸಂಘದ
ಒಂದೊಂದು ರೂಪಾಯಿ ಬೆಲೆಯ
ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
ಯು. ರಾಘವೇಂದ್ರ ಆಚಾರ್ಯ, ಎಂ.

ಸಾಮಾನ್ಯ ರೋಗಗಳು
ಡಾ! ಕೆ. ಎಲ್. ಐತಾಳ, ಎಂ. ಬಿ ಬಿ. ಎಸ್
ಜನರಿಗೆ ತಗಲುವ ಹಲವಾರು ಸಾಮಾನ್ಯ
ರೋಗಗಳ ಹುಟ್ಟು, ಕಾರಣ ಮತ್ತು ನಿವಾ
ರೋಪಾಯ ಸೂಚಿಸುವ ಉಪಯುಕ್ತ ಪುಸ್ತಕ

ಭೌತಿಕ ದರ್ಶನ
ಬಡೆಕ್ಕಿಲ ಕೃಷ್ಣ ಭಟ್ಟ, ಎಲ್. ಎಲ್.
ಉಡುಪಿಯಲ್ಲಿ ಪ್ರತಿಗಳು ಸಿಗುವ ಸ್ಥಳ
ನವಭಾರತ ಪುಸ್ತಕ ಭಂಡಾರ, ಉಡು



ನಲ್ವತ್ತಾರನೆ ವರ್ಷ

Telephone 226.

Estd. 1921

NAVAYUGA

Leading Kannada Weekly

UDIPI, S. Kanara

ಶ್ರೀ ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಉಡುಪಿ, ದ. ಕನ್ನಡ.

ಸಂಚಾಲಕ—ಸಂಪಾದಕ:

ಕೆ. ಹೊನ್ನಯ್ಯ ಶೆಟ್ಟಿ

ವಾರ್ಷಿಕ ಚಂದಾ:

ಮೂರು ವಿಶೇಷ ಸಂಚಿಕೆಗಳು ಸೇರಿ ಅಂಚೆ ವೆಚ್ಚ ಸಹಿತ ಮುಂಗಡ

ಸ್ವದೇಶ ರೂ. ೧೦

ವಿದೇಶ ರೂ. ೧೫

ಜಾಹೀರಾತು ದರಗಳು:

ನಿಯಮಿತ (ಕೆಜುವಲ್)

ಕಾಲಂ ಸೆಂಟಿಮೀಟರಿಗೆ ರೂ. 2-00

ನಿಯಮಿತ (ಕಂಟ್ರಾಕ್ಟ್)

ಕಾಲಂ ಸೆಂಟಿಮೀಟರಿಗೆ ರೂ. 1-50

ಸೂಚನೆಗಳು

ಲೇಖಕ ಬಂಧುಗಳಿಗೆ

ಲೇಖನವು ಕಿರಿದಾಗಿದ್ದು ಹಿರಿದರ್ಥದಿಂದ ಕೂಡಿರಬೇಕು. ಕಾಲು ಕಾವಿನ ಪ್ರಮಾಣ ಕಾಗದದ ಒಂದೇ ಮಗ್ಗುಲಲ್ಲಿ ಬದಿ ಅಂಚುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು. ಅನುವಾದಿತ, ಅನುವಾದಿತವಾದರೆ ಅವುಗಳ ಮೂಲವನ್ನು ತಿಳಿಸಬೇಕು.

ಚಂದಾದಾರರಿಗೆ—

ಚಂದಾಹಣವನ್ನಾಗಲೀ ಜಾಹೀರಾತಿನ ಬಾಬಲಗನ್ನಾಗಲೀ ಸಿಂಡಿಕೇಟ್ ಬ್ಯಾಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚು ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಮುಖಪತ್ರದಲ್ಲಿ:

...ಹತ್ತಿಯ ಗಿಡವು ತಣ್ಣೀರಿಗಿಂತ ಹುಳು ...ಯಾದ ನೀರನ್ನೇ ಮೆಚ್ಚುತ್ತದೆ' ಈ ...ಯದಲ್ಲಿ ಟೆಕ್ಸಾಸಿನ ಹತ್ತಿ ಹೊಲದಲ್ಲಿ ಸಂಶೋಧನೆ ನಡೆಯುತ್ತಿದೆ.

ನವಯುಗ

ಸಂಪುಟ ೪೬	ಉಡುಪಿ	Vol. 46
ಸಂಚಿಕೆ ೯	೨೬—೧೦—೧೯೬೬	No. 9

ದೊಡ್ಡ ತಪ್ಪಾಗದಿರಲಿ

ಕರ್ನಾಟಕ+ಮಹಾರಾಷ್ಟ್ರಗಳ ಮುಖ್ಯಮಂತ್ರಿಗಳು ಯಾವುದೇ ಒಮ್ಮತದ ನಿರ್ಧಾರಕ್ಕೆ ಬರಲು ಅಸಮರ್ಥರಾದುದರಿಂದ ಕೇಂದ್ರ ಸರಕಾರವೇ ಈ ನಡುವೆ ನೇರವಾಗಿ ಕೈ ಹಾಕಬೇಕಾಯಿತು. ಮೊದಲೇ ನಿರ್ಧರಿಸಿದಂತೆ ಏಕಸದಸ್ಯ ಆಯೋಗವು ನೇಮಕವಾಗುವುದು ಅನಿವಾರ್ಯವಾಯಿತು. ವರಿಷ್ಠ ನ್ಯಾಯಾಲಯದ ಹಿಂದಿನ ನ್ಯಾಯಾಧೀಶರಾದ ಶ್ರೀ ಮೆಹರ ಚಂದ ಮಹಾಜನರವರನ್ನು ಕೇಂದ್ರ ಮಂತ್ರಿ ಮಂಡಲವು ಈ ಏಕಸದಸ್ಯ ಆಯೋಗದ ಸದಸ್ಯರಾಗಿ ನೇಮಕ ಮಾಡಿದೆ. ಬಹು ದಿನಗಳಿಂದ ಅನಿರ್ಧಿಷ್ಟ ಸ್ಥಿತಿಯಲ್ಲಿ ನಡೆಯುತ್ತ ಬಂದ ಸಂಗತಿಯೊಂದು ನಿರ್ದಿಷ್ಟ ರೂಪ ಹೊಂದಲು ನೆರವಾಗುವುದೆಂಬ ಏಕಮಾತ್ರ ಆಶಯದಿಂದ ಈ ಆಯೋಗವನ್ನು ಸ್ವಾಗತಿಸ ಬೇಕಾಗಿದೆ. ಶಯ್ಯೆಯಲ್ಲೆ ಮಲಗಿದ ರೋಗಿ ಶಸ್ತ್ರಕ್ರಿಯೆಗೆ ಕೊನೆಗೂ ಅನುಮತಿ ಕೊಟ್ಟು ತನ್ನ ಜೀವದೊಡನೆ ಪಂಥಕ್ಕೆ ನಿಲ್ಲಲು ಸಿದ್ಧನಾಗುವಂತೆ ಕರ್ನಾಟಕ ರಾಜ್ಯವೂ ಅದನ್ನು ಸ್ವಾಗತಿಸಿದೆ. ಮತ್ತೆ ಮಾಡುವುದಾದರೂ ಏನು?

ಆಯೋಗದ ನೇಮಕವಾಗಬೇಕೆಂಬ ವಾದ ಹೊರಟದ್ದು ಮಹಾರಾಷ್ಟ್ರದಿಂದ. ಇದಾಗದೆ ಹೋದರೆ ಮಹಾರಾಷ್ಟ್ರೀಯರು ಸಾರ್ವತ್ರಿಕ ಚುನಾವಣೆಗಳಲ್ಲಿ ಪ್ರತಿಕೂಲ ವಾತಾವರಣವನ್ನೆದುರಿಸಬೇಕಾಗಬಹುದು ಎಂಬ ಎಚ್ಚರಿಕೆಯು ನೋಟೀಸು ಇತ್ತ ಕೇಶರ ಮರಾಠಿಗರದ್ದು. ಕನ್ನಡಿಗರು ಆರಂಭದಿಂದಲೂ ಆಯೋಗವನ್ನು ವಿರೋಧಿಸಿದ್ದಾರೆ. ಗಡಿತಂಟೆಯ ಪರಿಹಾರಕ್ಕೆ ಆಯೋಗ ನೇಮಕವು ಅನಿವಾರ್ಯವೆಂದಾದರೆ, ಬರಿಯ ಕರ್ನಾಟಕ—ಮಹಾರಾಷ್ಟ್ರ ಗಡಿಯನ್ನು ಮಾತ್ರ ಎತ್ತಿಕೊಳ್ಳುವುದು ಸರಿಯಲ್ಲ; ವಿವಾದಗ್ರಸ್ತ ಎಲ್ಲಾ ರಾಜ್ಯಗಳ ಮಟ್ಟಿಗೂ ಆಯೋಗದ ಕಾರ್ಯ ವ್ಯಾಪ್ತಿಯನ್ನು ವಿಸ್ತರಿಸ ಬೇಕು-ಇದು ನ್ಯಾಯ ಸಮ್ಮತವೆಂದಿದ್ದಾರೆ ಕನ್ನಡಿಗರು. ವರಿಷ್ಠ ಕಾಂಗ್ರೆಸ್ ಮತ್ತು ಕೇಂದ್ರಸಚಿವ ಸಂಪುಟದ ಹಿರಿಯ ಸದಸ್ಯರ ಪೂರ್ಣಾನುಗ್ರಹ ಪಡೆದಿರುವ ಮರಾಠಿಗಳು—ಇದಕ್ಕೆ ಕಾರಣ ಏನ್ರಿಯು: ಅವರ ಪುಂಡಾಟಿಕೆಗ ಳಿದಿರುವ ಗುಣವಿದ್ದರೂ ಇರ ಬಹುದು—ಕೊನೆಗೂ ಗೆದ್ದರು—ಆಯೋಗ ನೇಮಕವಾಯಿತು. ಕನ್ನಡಿಗರ ಅಂತಿಮ ಮೊರೆಯೊಂದೇ ಆಯಿತದು—ಆಯೋಗ ನೇಮಿಸಿದರೂ ಅದು ಚುನಾವಣೆಗಳು ಮುಗಿಯುವುದರೊಳಗೆ ಯಾವ ವರದಿಯನ್ನೂ ನೀಡದಿರಲಿ—ಇದಕ್ಕೂ ಅಸ್ತು ಬಿದ್ದಿತು. ಕನ್ನಡಿಗರನ್ನು ಇನ್ನೂ ಸಮಾಧಾನ ಪಡಿಸಲು ಕಾಸರಗೋಡಿನ ಪ್ರಶ್ನೆಯನ್ನೂ ಆಯೋಗಕ್ಕೆ ಒಪ್ಪಿಸಲಾಯಿತು.

ಅಂತೂ ಆಯೋಗವೇನೋ ನೇಮಕವಾಯಿತು. ಅದು ಸಂಬಂಧಪಟ್ಟ ಪಕ್ಷಗಳ ವಾದಗಳನ್ನು ಕೇಳಿಕೊಂಡು ತನ್ನ ಶಿಫಾರಸುಗಳನ್ನು ಸಿದ್ಧಪಡಿಸುವುದು—ಇದನ್ನು ಒಪ್ಪಿಸಲು ಯಾವುದೇ ಅವಧಿಯು ನಿಶ್ಚಯವಿಲ್ಲ. ಆಯೋಗಕ್ಕೆ ಸಾಕಷ್ಟು ನಿರ್ಣಯಾಧಿಕಾರವಿದ್ದು' ತಾನು ಯಾವಾಗ ಕಾರ್ಯಾರಂಭ ಮಾಡಬೇಕು, ತನ್ನ ಕಾರ್ಯ ವ್ಯಾಪ್ತಿಯಾವುದಿರಬೇಕು ಎಂದು ಅದೇ ನಿರ್ಣಯಿಸುವುದು. ಅಂದರೆ, ಚುನಾವಣೆಗಳ ವೇಳೆ ಎಲ್ಲಿಯೂ ಅಪ್ರಿಯತೆಯನ್ನುಂಟು ಮಾಡಲು ಕಾಂಗ್ರೆಸ್ಸು ಸಿದ್ಧವಿಲ್ಲ. ಚುನಾವಣಾ ನಂತರವೇ ಆಯೋಗದ ಕಾರ್ಯ ಆರಂಭವಾದೀತು—ಅಂತೂ ಒಂದೆರಡು ವರ್ಷಗಳ ತನಕ ಆಯೋಗವು ಜೀವಿತವಿರುವ ಸಂಭವವಿದೆ. ಆಯೋಗವನ್ನು ಮಹಾರಾಷ್ಟ್ರದ ಮುಖ್ಯಮಂತ್ರಿ ವಿ. ಪಿ. ನಾಯಕರೂ ಕರ್ನಾಟಕದ ಮುಖ್ಯ ಮಂತ್ರಿ ನಿಜಲಿಂಗಪ್ಪನವರೂ ಸ್ವಾಗತಿಸಿದ್ದಾರೆ. ಮರಾಠಿಗಳು ಮುಖ್ಯವಾಗಿ ಚುನಾವಣೆಗಳ ಮೊದಲೇ ಇದಮಿತ್ಥವಾಗಬೇಕೆಂಬವರು ಅಸಮಾಧಾನಗೊಂಡರೆ ಅಚ್ಚರಿಯಿಲ್ಲ. ಕೇರಳೀಯರು ಕಾಸರಗೋಡನ್ನೂ ಆಯೋಗದ ಕಕ್ಷೆಯೊಳಗೆ ಎಳೆ ತಂದುದಕ್ಕೆ ವಿರೋಧವಿದ್ದಾರೆ. ಇನ್ನುಳಿದವರು – ದುರದೃಷ್ಟಶಾಲಿಗಳಾದ ಕನ್ನಡಿಗರು—ಆಯೋಗ ನೇಮಕದಿಂದ ಯಾವ ಕನ್ನಡಿಗನಿಗೂ ತೃಪ್ತಿಯಾಗಲಾರದು. ಆದರೆ, ಕನ್ನಡಿಗರ ನಾಯಕರು ಇಕ್ಕಟ್ಟಿನಲ್ಲಿ ಸಿಕ್ಕಿ ಬಿದ್ದವರು. ಹೊರಗಿರುವ ವಿವಾದಗ್ರಸ್ತ ಭಾಗಗಳು ಕರ್ನಾಟಕದಲ್ಲಿಯ ವಿವಾದಗ್ರಸ್ತ ಪ್ರದೇಶಗಳೆಂದು ಮರಾಠಿಗಳು ಕರೆಯುವ ಬೆಳಗಾವಿ ಮೊದಲಾದುವುಗಳನ್ನೂ ಪರಿಶೀಲನೆಗೆ ಗುರಿಪಡಿಸಲು ಹಿಂಜರಿಯುವುದು ಸಾಧ್ಯವಿಲ್ಲ. ಒಂದೇ ನ್ಯಾಯ ಎಲ್ಲೆಡೆಯೂ ಅನುಷ್ಠಾನಕ್ಕೆ ಬರಬೇಕು. ಇದಕ್ಕೆಂದೇ ಅನಿವಾರ್ಯವಾಗಿ ಒಪ್ಪಿಗೆಯ ಮುದ್ರೆ ಒತ್ತಿದವರು. ಕನ್ನಡಿಗರ ಅಸಮಾಧಾನ 'ಆಯೋಗದ ಬಹಿಷ್ಕಾರ", 'ಬೆಂಗಳೂರು ಬಂದ್"ಗಳ ಮೂಲಕ ವ್ಯಕ್ತವಾಗ ತೊಡಗಲಿದೆ. ಏಕೆಂದರೆ, ಆಯೋಗದ ಶಿಫಾರಸುಗಳು ನಿಷ್ಪಕ್ಷ ಪಾತವಿರವುದೆಂಬುದು ನಂಬಿಕೆಗೆ ದೂರವಿದೆ. ಮರಾಠಿಗಳು ಸುಳ್ಳು ಅಂಕೆಸಂಖ್ಯೆಗಳನೂ ಸಾಕ್ಷ್ಯಗಳನ್ನೂ ಕೂಡಿಸಿ ತಮ್ಮ ನಾಟಕವನ್ನು ಯಶಸ್ವಿಯಾಗಿಯೇ ಅಭಿನಯಿಸುತ್ತಾರೆ. ಈ ಕುಶಲತೆ ಕನ್ನಡಿಗರಲ್ಲಿ ಎಲ್ಲಿಂದ ಬರಬೇಕು? ಇಂದು, ಕನ್ನಡಿಗರ ಆಶಯವೊಂದೇ—ಘಜಲಅಲಿ ಆಯೋಗವು ಕನ್ನಡಿಗರಿಗೆ ಬಗೆದ ದ್ರೋಹವನ್ನು ತೊಳೆಯಲು ಹೋಗಿ ಮೆಹರ ಚಂದ ಮಹಾಜನ ಆಯೋಗವು ದೊಡ್ಡ ದ್ರೋಹವನ್ನು ಬಗೆಯದಿರಲಿ. ಎಳೆಯ ತಪ್ಪನ್ನು ಸರಿಮಾಡ ಹೋಗಿ ದೊಡ್ಡ ತಪ್ಪನ್ನು ಮಾಡದಿರಲಿ.

ಸೂಕ್ತಿ ಸುಧಾ

ನ ಸ್ವೇ ಸುಖೇ ವೈ ಕುರುತೇ ಪ್ರಹರ್ಷಂ
ನಾನ್ಯಸ್ಯ ದುಃಖೇ ಭವತಿ ಪ್ರಹೃಷ್ಟಃ
ದತ್ವಾ ನ ಪಶ್ಚಾತ್ಕುರುತೇನು ತಾಪಂ
ಸ ಕಥ್ಯತೇ ಸತ್ಪುರುಷಾರ್ಯ ಶೀಲಃ ।

ತನ್ನ ಸುಖದಲ್ಲಿ ಪ್ರಸನ್ನನಾಗದೆ, ಪರರ ದುಃಖ ಕಾಲದಲ್ಲಿ ಸಂತೋಷ ಪಡದೆ ದಾನವಿತ್ತು ಪಶ್ಚಾತ್ತಾಪ ಪಡದೆ ಇರುವವನು ಸಜ್ಜನನು.

ಕಟ್ಟಿಕೊಂಡು ಅಳಬೇಕೆ?

ನವದೆಹಲಿಯಲ್ಲಿ ಸೇರಿದ ತ್ರಿರಾಷ್ಟ್ರ ಕೂಟ ಪರಿಷತ್ತು ಸಾಧಿಸಿದ ಸಂಗತಿಯೇನು? ವಿಯತನಾಮು ಪ್ರಶ್ನೆಯ ಗಂಭೀರತೆಯೊಂದಾದರೆ, ತ್ರಿರಾಷ್ಟ್ರಗಳ ನಡುವಣ ಸರ್ವ ವ್ಯವಹಾರ ಸಂಬಂಧಗಳನ್ನೂ ಹೆಚ್ಚಿಸಿಕೊಳ್ಳುವುದು ಎರಡನೆಯದು. ಯಾವ ಪೂರ್ವನಿಶ್ಚಿತ ಕಾರ್ಯಕ್ರಮವೂ ಇಲ್ಲದೆ ಸೇರಿದ ಈ ಸಮ್ಮೇಳನವು ವಿಯತನಾಮದಲ್ಲಿ ಶಾಂತಿ ಸ್ಥಾಪನೆಯಾಗುವ ಆವಶ್ಯಕತೆಯನ್ನು ಒತ್ತಿ ಹೇಳಿದೆ. ಮನಿಲ್ಲಾದ ಶಾಂತಿ ಸಮ್ಮೇಳನದಲ್ಲಿ

(ಹದಿನಾಲ್ಕನೇ ಪುಟ ನೋಡಿರಿ)

'ನವಯುಗ'ದ ಚಂದಾದಾರರಲ್ಲಿ ವಿನಂತಿ

ಕಳೆದ ಆಗೋಸ್ತು ತಿಂಗಳಾಂತ್ಯಕ್ಕೆ "ನವಯುಗ"ದ 45ನೇ ವರ್ಷವು ಕೊನೆಗೊಂಡು ಸಪ್ಟಂಬರಾದಿಯಿಂದ 46ನೇ ಹೊಸ ವರ್ಷಾರಂಭವಾಗಿರುವುದಷ್ಟೆ! ಈ ಅವಧಿಗೆ ಚಂದಾ ಅವಧಿ ಮುಗಿಯುವ ಹಾಗೂ ಚಂದಾ ಹಣ ಬಾಕಿಯಿರುವ ನಮ್ಮ ಚಂದಾದಾರ ಬಂಧುಗಳು ತಮ್ಮ ಚಂದಾ ಹಣವನ್ನು ದಯಮಾಡಿ ಆದಷ್ಟು ತ್ವರಿತ ಮನಿಯಾರ್ಡರು ದ್ವಾರಾ ಯಾ ಸಿಂಡಿಕೇಟ್ ಬ್ಯಾಂಕಿನ ಸಮೀಪದ ಶಾಖೆಯಲ್ಲಿ "ನವಯುಗ"ದ ಖಾತೆಗೆ ಜಮೆ ಮಾಡುವುದರ ಮೂಲಕ ಈಗಲಾದರೂ ಕಳುಹಿಸಿಕೊಟ್ಟು ಸಹಕರಿಸುವಂತೆ ಇನ್ನೊಮ್ಮೆ ಕಳಕಳಿಯಿಂದ ವಿನಂತಿಸುತ್ತೇವೆ.

ಅಂತೂ ಚಂದಾಹಣವು ಈ ತಿಂಗಳಾಂತ್ಯದ ಒಳಗಾದರೂ ಬಾರದಿದ್ದಲ್ಲಿ ನವಂಬ್ರ ಮೊದಲ ವಾರದ ಸಂಚಿಕೆಯನ್ನು ವಿ. ಪಿ. ಮೂಲಕ ಕಳುಹಿಸುತ್ತೇವೆ. ಅದನ್ನು ಅವಶ್ಯ ಸ್ವೀಕರಿಸುವಂತೆ ಬಿನ್ನಹಿಸುತ್ತೇವೆ.

ಮೆನೇಜರ್,

ನವಯುಗ, ಉಡುಪಿ.

ನರಸಣ್ಣನ ಸರಸ



'ಕೇಂದ್ರ ಸರಕಾರ ತನ್ನ ನೌಕರರ ತುಟ್ಟಿ ಭತ್ತೆ ಏರಿಸಿತಂತೆ...'

'ರಾಜ್ಯ ಸರಕಾರಕ್ಕೆ ತಿರೋವೇದನೆಯಿಂದನೆ ಉದರ ಶೂಲೆಯೂ ಕಾಣಿಸಿಕೊಂಡಿರಬೇಕಲ್ಲಾ...?'

ಮೊಹರು

ಗೇಹರಾಜ್ಯದಲ್ಲಿ

ಕವಿಪ್ರಪಂಚಕ್ಕೆ ತುರ್ತು ಪರಿಸ್ಥಿತಿ

"ಓಯ್, ಇಲ್ಲಿ ಕೇಳ್ರೀಂಪ್ರೆ..."

"ನೋಡು, ನನ್ನ ಕೂಗೋಕೆ ನಿನ್ಗೆ ಬೇರೆ ಹೆಸ್ರೇ ಇಲ್ಲವೇನು?"

"ಅಲ್ರಿ, ಏನೂಂತ ಕೂಗೋದ ?'

"ಏನು ಅಂದ್ರೆ? ಹೊಟ್ಟೆ ಹೊಸ ಹೆಸರೊಂದನ್ನ ಹುಡುಕಿ ಕೊಡಬೇಕು...'

'ಹೌದು, ನರಸಿಂಹ ಸ್ವಾಮಿಯವರು ನಿಮಗಾಗಿ ಒಡುಪಟ್ಟು ಒಂದು ಹೆಸರನ್ನ ಹುಡುಕಿ ಕೊಟ್ರೊಂತ ಈಗ ನನ್ನನ್ನ ಗೇಲಿ ಮಾಡೋಕೆ ಹೊರಟ್ರಿ."

'ಅಯ್ಯೋ, ಇಲ್ಲೇ, ಅಂದ ಹಾಗೆ ನಿನಗೂ ಒಂದು ಹೆಸ್ರು ಸಂಶೋಧಿಸಬಹುದಲ್ಲ?'

"ಅದೇ ಈಗ ಭಾರಿ ಯೋಚಿಸೋದು."

'ಏನು ಯೋಚಿಸಿದ್ರೆ ಏನು ಬಂತು? ಸಂಶೋಧನೆ ಮಾಡೋಕೂ ಬುದ್ಧಿ ಮತ್ತೆ ಬೇಕು, ಪ್ರತಿಭೆ, ಅಭ್ಯಾಸ, ಅನುರಾಗ ಎಲ್ಲಾ ಬೇಕು.'

'ಯಾರು ಬೇಡಂತಾರೆ? ನಮ್ಮವರಲ್ಲಿ ಯೇ ಬುದ್ಧಿವಂತರಿಲ್ಲವೆ?'

"ಅಯ್ಯೋ, ಯಾರು ಇಲ್ಲಾಂತರೆ? ಆದ್ರೆ ನೋಡು, ಒಂದು ಮಾತು. ನೀವರಸುವ ಹೆಸರು ನಮಗೂ ನಿಮಗೂ ಎಲ್ಲರಿಗೂ ಒಪ್ಪಿಗೆಯಾಗುವಂತಿರ ಬೇಕು.'

'ನೀವು ಒಪ್ಪಿದೇನು ಬಂತು? ಕೋಳಿಯತ್ರ ಕೇಳಿ ಮಸಾಲೆ ಅರೆಯುತ್ತಾರೆಯೇ?"

"ಹ್ಞಾಂ.... ಇದೂ ಒಳ್ಳೆ ಪಚೀತಿಕೆ ಬಂತು ಬಿಟ್ರೆ ಕಣೇ... ...'

'ಯಾವುದು'

'ಕೇಳು, ನಮ್ಮ ಪೂರ್ವಪುರುಷರು ಸಾರಿದ್ದಾರೆ ....'

ಹೌದು ಹೌದು, ಇಂದಿನ ಪುರುಷರೂ ಸಾರೋದ್ರಲ್ಲಿ ಏನು ಕಡಮೇಂತ... '

'ಮಾತುಮಾತಿಗೆ ಎರಡು ಬೇಳಬೇಡ, ಮಾತಿಗೆ ಕರೆದು ಈಗ ಜಗಳ ಕಾಯುತ್ತಿದ್ದೀ ನಾನು ಹೀಗೇ ಬಾಯ್ಮುಚ್ಚಬೇಕೆ?

'ಹ್ಞ ಹ್ಞ... ನನಗೂ ಗೊತ್ತಿದೆ. ಯಾರ ಮುಂದೆ ಬಾಯಿಗೆ ಬೀಗ ಬಿದ್ರೆ ನನ್ನಿಂದೆ ಕಂಡಿತಕ್ಕ ಬೀಕೋಲ್ಲ...'

'ಇಲ್ಲ, ಬಿಡ್ತಾನ್ನ...

ನಾನು ತೆರೆಯುತ್ತೇನೆ ..."

ಕೀಲಿಕೈ ನನ್ನ ಕೈಯಲ್ಲೇ ಭದ್ರವಾಗಿರುವಾಗ ನೀನೇನು ಮಾಡಬಲ್ಲೆ ?"

"ಓಹೋ, ಹಾಗೇನು? ಜೀಗದ ಕಲ್ಲೆ ನನ್ನ ಬಳಿಯಲ್ಲೇ ಇರೋವಾಗ...'

"ಹ್ಞಾಂ....ಅಂತೂ ಬರೇ ಕೀಲಿಕೈ ಹಿಡಿಕೊಂಡು ಏನು ತಾನೇ ಮಾಡೋ ಕಾಗ್ತದೆ ಅಲ್ವೆ' ಅದೂ ನೋಡು ..'

"ಏನು?'

"ನಮ್ಮ ಪೂರ್ವಜರು ಹೇಳಿದ್ದಾರೆ—'

"ಆಗ ಪುರುಷರೊಂದ್ರೆ ಈಗ ದುರಾಂತ್ರಿ. ಅದನ್ನು ಒಂದು ಮಾತು ...'

'ಏನದು?"

'ಹಿಂದೆ ಹೇಳಿದವ್ರೆಲ್ಲಾ ಪುರುಷರೇ ಹೊರತು ಸ್ತ್ರೀಯರಲ್ಲ ..."

"ಅಯ್ಯೋ, ಅದಕ್ಕೇನು ಮಾಡೋದು? ಹಿಂದಿನವ್ರು ಇಂದಿನವರಷ್ಟು ಫಾರ್ವರ್ಡ್ ಆಗಿರಲಿಲ್ಲಾಂತ ತೋರುತ್ತೆ..."

"ಆದು ಪುರುಷರಿಗೂ ಅನ್ವಯವಾಗುತ್ತೆ."

"ಯಾಕೆ?"

"ಯಾಕೆ ಅಂದ್ರೆ? ನೋಡಿ ಆ ನಿಮ್ಮ ದುಷ್ಯಂತನ ಬಾಯಿಂದ ಶಕುಂತಲೆಯ ವರ್ಣನೆಮಾಡಿಸಿದ್ದಾನೆ ನೋಡಿ ನಿಮ್ಮ ಕಾಳಿದಾಸ ..."

'ಏನಾಯಿತು? ತನ್ನ ಹೆಂಡತಿಯನ್ನು ಬಾಯ್ತುಂಬ ಹೊಗಳಿದಾನ್ನ...'

'ಹೆಂಡ್ತಿಯನ್ನ ಯಾರು ಹೊಗಳುವುದಿಲ್ಲ? ಆದರೆ, ತಾನು ಬರೀತಿರೋದು ನಾಟಕ, ಇದನ್ನ ಒಂದಲ್ಲ ಒಂದು ದಿನ ಇದ್ದಕ್ಕಿದ್ದಾಗೇನೇ ಅಭಿನಯಿಸುವ ರಸಿಕರು ಹುಟ್ಟಿ ಬಂದ್ರಾರೇಂತ ಕಾಳಿದಾಸ ಅರಿತಿದ್ದ."

'ಹ್ಞಾಂ... ಆತ ತನ್ನ ಕವಿಧರ್ಮವನ್ನ ಅರಿತಿದ್ದ ... ಅದ್ರಿಂದ್ಲೇ ನೀರು ಹೊರುವಾಕೆಯ ಹೆಗಲು ಬಗ್ಗಿದೆ, ಕರತಲಗಳು ಕೆಂಪೇರಿವೆ, ಸ್ತನದ್ವಯವು ಈಗಲೂ ನಡುಗುತ್ತಿದೆ. ಶ್ವಾಸಗಳಧಿಕವಾಗಿ ಬರುತ್ತಿವೆ. ಕರ್ಣದಲ್ಲಿ ತೊಟ್ಟ ಶಿರೀಷ ಕುಸುಮ ಜಾರಿ ಬಿದ್ದಿದೆ, ಮುಖದಲ್ಲಿ ಬೆವರ ಹನಿಗಳು ದೃಷ್ಟಿಗೋಚರವಾಗುತ್ತಿವೆ... ಒಂದೇ ಕೈಯಿಂದ ಅವಸರದಲ್ಲಿ ಕಟ್ಟಿದ ತಲೆಗೂದಲುಗಳು ನೋಡಲು ಅಸ್ತವ್ಯಸ್ತವಾಗಿ ಕಂಡು ಬರುತ್ತವೆ ಎಂದು ಮಾತ್ರ ಬರೆದ ..."

"ಇಲ್ಲ, ಇನ್ನೂ ಮುಂದುವರಿದಿದ್ದಾನೆ: ಶೀತಲ ನಲಿನೀ ಪತ್ರ ಬೀಸಣಿಗೆಯಿಂದ ತಂಗಾಳಿಬೀಸಲೆ? ತೊಡೆಯಲ್ಲಿಟ್ಟುಕೊಂಡು ಪದ್ಮ ಪತ್ರ ಸದೃಶವಾದ ನಿನ್ನ ಪಾದಗಳನ್ನ ಸುಖವಾಗಿ ಒತ್ತಲೇ ಎಂದೂ ಕೇಳಿಸಿದ್ದಾನೆ...."

'ಹ್ಞಾಂ ಹೌದು, ಮಾತ್ರವಲ್ಲ, ಹೂವಿನ ಹಾಸುಗೆಯನ್ನ ತ್ಯಜಿಸಿ, ನಳಿನೀ ದಳ ರಚಿತ ಮೊಲೆಗಟ್ಟನ್ನ ಕಿತ್ತು ಹಾಕಿ ಶ್ರಮದಿಂದ ನೊಂದಿರುವ ಅಂಗವುಳ್ಳವಳು ಎಂದೂ ಹೇಳಿದ್ದಾನೆ.'

ಅದೇ ಅಂದದ್ದು ನಾನು, ಆತ ಮರ್ಯಾದೆಯ ಎಲ್ಲೆಯನ್ನ ಮೀರಿ ನಡೆಯಲಿಲ್ಲ ...'

ಅದನ್ನ ನೋಡು ನಮ್ಮ ಪೂರ್ವಜರು ಅಂದದ್ದು .'

'ಓ, ಏನಂತೆ ಆಗಿನಿಂದ ಪೂರ್ವಜರು—ಪೂರ್ವಜರು ಅನ್ನುತ್ತೀರಿ. ಏನಂದಿದ್ದಾರೆ....?'

'ಆಹಾರ ನಿದ್ರಾಭಯ ಮೈಥುನಂಚ ಸಾಮಾನ್ಯಮೇತತ್ ಪಶುಭಿರ್ನರಾಣಾಂ ಧರ್ಮೋಹಿ ತೇಷಾಮಧಿಕೋ ವಿಶೇಷಃ ಧರ್ಮೇಣ ಹೀನಃ ಪಶುಭಿಃ ಸಮಾನಃ'

"ಅಂದರೆ?'

'ಆಹಾರ ನಿದ್ರೆ ಭಯ ಮೈಥುನ..."

'...ಹ್ಞಾಂ...'

"ಇವು ಮಾನವ – ಪಶುಗಳೆರಡು ಜಾತಿಗೂ ಸಮಾನ ಪ್ರವೃತ್ತಿಗಳು, ಮನುಷ್ಯರಿಗೆ ಧರ್ಮಾಧರ್ಮ ವಿವೇಚನಾ ಶಕ್ತಿಯೊಂದು ಹೆಚ್ಚಿದೆ ಇದಿಲ್ಲದವನು ಪಶು ಸಮಾನನು.'

'ಅದು ಸರಿ. ನಾನು ಅಂದದ್ದೂ ಅದೇ ನೋಡಿ. ಕಾಳಿದಾಸ ಶಕುಂತಳೆಯ ಮೊಲೆಗಟ್ಟಿಲ್ಲದ ಸ್ತನ ದ್ವಯವನ್ನ ಕಂಡೇ ತೃಪ್ತಿಪಟ್ಟ, ಆದರೆ ಈಗಿನವರ ಮುಂದೆ ಆತ ಟೂ ಬ್ಯಾಕ್ವರ್ಡ್ ...'

"ಯಾಕೆ ಹಾಗಂತೀಯ ?'

"ಬೀದಿ ರೋಮಿಯೋಗಳು ಉಬ್ಬೆದೆಯನ್ನ ಕಂಡೇ ತೃಪ್ತರಾಗುತ್ತಾರೆ; ಕಾಲಿದಾಸ ಮೊಲೆಗಟ್ಟನ್ನ ಬಿಚ್ಚಿಸಿ ನಿಸರ್ಗ ಸೌಂದರ್ಯವನ್ನ ಈಕ್ಷಿಸಿ ಬ್ರಹ್ಮಾನಂದ ಸಹೋದರನನ್ನ ಹೊಂದಿದ, ಆದರೆ, ಇಂದಿನ ಕವಿ ಹಾಗಲ್ಲ ನೋಡಿ....'

"ಯಾಕೆ? ಎಂಥದು ಇದು ಒಗಟು?

'ಒಗಟೇನು ಬಂತು? ಇಂದಿನ ಕವಿಗಳು ಆಕೆಯ ಸುಂದರ ಸ್ತನಗಳನ್ನ ಹಿಚುಕಿ ಹಾಲು ಚಿಮ್ಮುವ ಸೌಂದರ್ಯವನ್ನ ಆಸ್ವಾದಿಸ ಬಯಸುತ್ತಾರೆ.'

'ಸ್ವಲ್ಪ ಬಿಡಿಸಿ ಹೇಳಿದ್ರೆ ..'

"ಆಯ್ತಪ್ಪ. ನೋಡಿ ಮೊನ್ನೆ ಎಲ್ಲೋ ಧಾರವಾಡದಲ್ಲಿಯಂತೆ, ನಾಡಹಬ್ಬ ಆಚರಿಸಿದರಂತೆ. ಕವಿ ಸಮ್ಮೇಳನವೊಂದು ಏರ್ಪಟ್ಟಿತ್ತಂತೆ...'

"ಸರಿ. ನಾಡ ಹಬ್ಬದಲ್ಲಿ ಇದು ನಡೆಯುವುದು ಸಹಜ ...'

"ನೋಡಿ, ಒಬ್ಬ ಕವಿ ಪ್ರಖ್ಯಾತ ಸಿನಿಮಾ ನಟಿ ದಿ| ಮರ್ಲಿನ್ ಮನ್ರೋ ಮೇಲೆ ಕವಿತೆ ಬರೆದು ಓದಿದರಂತೆ...

'ಸರಿಯೇ ಆಧುನಿಕ ಯುಗದಲ್ಲಿ ದೇವಿಗಿಂತಲೂ ಅಧಿಕ ಆರಾಧನೆಗೊಂಡವಳಾಕೆ....'

"ಸರಿ ನುಡಿದಿರಿ. ಜೀವಂತವಿದ್ದಾಗ ಆಕೆಗೆ ಅಂಧನ ದೇವಿಗೆ ಹಾಗ್ಲ ನೋಡಿ ..'

'ದೇವಿಗೆ ಮರಣವೇ ಇಲ್ಲ ನೋಡು .

'ಓ . ಇಲ್ಲಿ....'

'ಮುಂದೆ?'

'ಕವಿತ ಪ್ರಾರಂಭವಾಯ್ತಂತೆ: ಓ ಮರ್ಲಿನ್, ನಿನ್ನ ಸೌಂದರ್ಯದ ಆಕರ್ಷಣೆಗೆ ಜೊಲ್ಲು ಸುರಿಸುತ್ತ ನಿನ್ನ ಕಾಲಡಿ ಬಿದ್ದರು ಸಾವಿರಾರು ಯುವಕರು . '

'ಸದ್ಯ ಮುದುಕರು ಅನ್ನಲಿಲ್ಲ ನಾಡು.... ಮತ್ತೆ ಇದು ಯಥಾರ್ಥವಾದ ಸಾಹಿತ್ಯದಲ್ಲಿ ಯಥಾರ್ಥವಾದವೂ ಒಂದು.'

'ಆಯ್ತು, ಮುಂದೆ ಕೇಳಿ: ನಿನ್ನ ಸುಂದರ ಸ್ತನಗಳನ್ನು ಹಿಚುಕಿದರೆ ಹಾಲುಚಿಮ್ಮುವ ಸೌಂದರ್ಯ ನಿನ್ನದು....'

"ಓಹೋ, ಇದನ್ನೇ ನೀನು ದ್ರಾವಿಡ ಪ್ರಾಣಾಯಾಮ ಮಾಡಿದ್ದು? ಸರಿಯಾಯ್ತು. ತಿಳೀತು.'

"ಅಲ್ಲ, ವಾಕ್ ಸ್ವಾತಂತ್ರ್ಯವಿದೆ ಅಂತ ಹೀಗೆಲ್ಲಾ ಅಶ್ಲೀಲ . "

'ಅಶ್ಲೀಲ – ಶ್ಲೀಲ ಯಾವುದೂಂತ ನಿರ್ಧರಿಸುವುದು ಸಮಾಜ.'

"ಯಾಕೆ?'

'ಯಾಕೇಂದ್ರೆ ..ಒಂದು ಕಾಲದಲ್ಲಿ ಬೆತ್ತಲೆಯಿರುವುದೇ ಶೀಲವಾಗಿತ್ತು. ಇಂದು'

'ಅಂದರೆ, ಯಾವ ಕವಿ ಏನು ಬರೆದ್ರೂ ಅದು ಯಥಾರ್ಥವೋ ಆದರ್ಶವೋ ಕಾಲ್ಪನಿಕವೋ, ನಿಯತಿಯೋ, ಪ್ರಗತಿಯೋ ಒಂದು ವಾದಾಂತ ಸಹಿಸಿ ಸುಮ್ಮನಿರಬೇಕೇನು?'

'ನೋಡು, ಇಂದಿನ ಸಿನೆಮಾ ಪ್ರಪಂಚವನ್ನ ನೂರಕ್ಕೆ ತೊಂಬತ್ತು ನಗ್ನಾವಸ್ಥೆಯಲ್ಲಿರುವ ಸ್ತ್ರೀ ಕಾಣಿಸಿಕೊಳ್ಳುವ ಚಿತ್ರ ಭಾರಿ ಚಲೋದೆಂದು ಸಮಾಜ ಹೇಳುತ್ತೆ...'

(ಹದಿನಾಲ್ಕನೇ ಪುಟ ನೋಡಿರಿ)



ವಿಚಿತ್ರ ಸತ್ಯ

ಕೊಕೋವಿಗೆ ಅಲ್ಲಿ ಸಿಹಿಯಿಲ್ಲ

ಕೊಕೋ ರಾಣಿ ಘಾನಾದ ರೈತರು, ಉಳಿದವರಿಗೆ ಸಿಹಿಯಾದ ಕೊಕೋವಿನ ಕಹಿ ಫಲವನ್ನು ಉಣ್ಣುತಿದ್ದಾರೆ!

ಕೊಕೋ ಮೂಲತ: ದಕ್ಷಿಣ ಅಮೇರಿಕದ್ದು. ಆದರೆ ಒಂದು ಆಫ್ರಿಕನ್ ದೇಶವಾದ ಘಾನ ಇಂದು ಕೊಕೋ ಬೀಜಗಳ ಬೆಳೆಯಲ್ಲಿ ಜಗತ್ತಿಗೇ ಮೊದಲನೆ ಸ್ಥಾನ ಪಡೆಯುತ್ತದೆ. ಪಾಪ, ಬಡಪಾಯಿ ಘಾನದ ಜನರಿಗೆ ಮಾತ್ರ ಈ "ಚೊಕಲೇಟ್" ಮರ "ಪರಕೀಯನಾಗಿ"ಯೇ ತೋರುತ್ತದೆ.

೧೮೭೯ರಲ್ಲಿ ಟೆಟ್ಟೆ ಕುವಷೀ ಎಂಬ ಆಫ್ರಿಕನ್ ಕಂಬ ರನೊಬ್ಬ (ನಾಂಪ್ರೊಂಗ್ ಪಟ್ಟಣದವನು) ಫರ್ನಾಂಡೊಪೊ ದ್ವೀಪಗಳಿಂದ ಒಂದು ಸಣ್ಣ ಚೀಲ ತುಂಬ ಕೊಕೊ ಬೀಜಗಳನ್ನು ತುಂಬಿಕೊಂಡು ತನ್ನ ಮೂಲ ದೇಶ ಗೋಲ್ಡ್‌ಕೋಸ್ಟಿಗೆ ಹಿಂತಿರುಗಿದ, ನಾಲ್ಕು ವರ್ಷದ ಬಳಿಕ ಆತ ಮೊಟ್ಟಮೊದಲ ಬಾರಿಗೇ ಆಫ್ರಿಕೆಯ ಮಣ್ಣಿನ ಮೇಲೆ ಕೊಕೊ ಬೆಳೆ ತೆಗೆದ. ಕುವಷೀ ಈ ಬಿಜಗಳನ್ನು ತನ್ನ ಪಕ್ಕದವರಿಗೆ ಮಾರಿಕೊಂಡ. ಅವರೂ ಕೂಡ ಈ "ಚೊಕಲೇಟ್" ಮರವನ್ನು ನೆಟ್ಟರು. ಯೂರೋಪಿಯನ್ ಜನರು ಕೊಕೋಗೆ ಕೈತುಂಬ ಹಣ ಕೊಟ್ಟರು. ಕೊಕೊ ಬೆಳೆ ವರಮಾನದ ಮೂಲವಾಗಿ ಕಾಣತೊಡಗಿತು. ೧೮೯೧ರಲ್ಲಿ ಮೊಟ್ಟಮೊದಲ ಬಾರಿಗೆ ಕೊಕೋ ಗೋಲ್ಡ್‌ಕೋಸ್ಟಿನಿಂದ ನಿರ್ಯಾತ ಮಾಡಲ್ಪಟ್ಟಿತು. ಮುಂದೆ ಆರು ವರ್ಷಗಳ ಬಳಿಕ ರಾನ್‌ಟ್ರೀ ಎಂಬ ಒರ್ವ ಇಂಗ್ಲೀಷ್ ಮನುಷ್ಯ ಯಾರ್ಕ್ ಪಟ್ಟಣದಲ್ಲಿ ಚೊಕಲೇಟ್ ಕಾರ್ಖಾನೆಯನ್ನು ಸ್ಥಾಪಿಸಿದ.

ರಾನ್‌ಟ್ರೀ ಮತ್ತು ಕಂಪನಿ ಲಿಮಿಟೆಡ್ ಬಹುಬೇಗ ದೊಡ್ಡದಾಗಿ ಬೆಳೆಯಿತು. ಅದು ಮುಂದೆ ನ್ಯೂ ಕ್ಯಾಸಲ್ಲಿನಲ್ಲಿ ಇನ್ನೊಂದು ಅಂಗ ಸಂಸ್ಥೆಯನ್ನು ತೆರೆಯಿತು. ಹಾಗೇ ಕೆನಡ, ಐರ್ಲಂಡ್, ಆಸ್ಟ್ರೇಲಿಯ, ನೆದರ್ಲೆಂಡ್ಸ್ ಮೊದಲಾದ ದೇಶಗಳಲ್ಲೂ ಅದರ ಬೇರುಗಳು ಬೆಳೆದುವು. ಜರ್ಮನಿ, ಸ್ವಿಟ್ಸರ್‌ಲೆಂಡ್ ಮತ್ತು ಸಂ. ರಾ. ಅಮೇರಿಕಗಳಲ್ಲಿ ಚೊಕಲೇಟ್ ಕಾರ್ಖಾನೆಗಳು ಕಟ್ಟಲ್ಪಟ್ಟವು.

ಪಶ್ಚಿಮದಲ್ಲಿಯ ಜನ ಚೊಕಲೇಟಿಗೆ ಹುಚ್ಚಾಗಿ ಹೋದರು. ಯೂರೋಪಿಯನ್ನರು ಎಲ್ಲೆಲ್ಲೂ ಕೋಕೋವಿಗೆ ಹುಡುಕಾಡ ತೊಡಗಿದರು. ಸ್ಥಳೀಯ ಜನರನ್ನು ಅವರು ಮಾನಮರ್ಯಾದೆಗಳನ್ನು ಬಿಟ್ಟು ವಂಚಿಸಿ, ಕಚ್ಚಾ ಪದಾರ್ಥವನ್ನು ಒಂದು ಹಾಡು ಹಾಡಿ ಕೂಡ ಕೊಂಡು ತಂದರು. ಕೋಕೋ ಬೀಜಗಳು ಡಾಲರುಗಳೆಂದುವು, ಪೌಂಡುಗಳಾದುವು.

ಆದರೆ ಇದರಿಂದ ಘಾನದ ಬೇಸಾಯ ಮಾತ್ರ ಒಂದೇ ಮುಖದ್ದಾಯಿತು. ಆಹಾರ ಧಾನ್ಯ ಬೆಳೆಗಳಿಗಿಂತ ಕೋಕೋ ಬೆಳೆಯುವ ಕ್ಷೇತ್ರವೇ ದೊಡ್ಡದಾಯಿತು. ಪರಿಣಾಮವಾಗಿ ದೇಶ ಒದ್ದಾಡ ತೊಡಗಿತು. ೧೮೯೫ರಲ್ಲಿ ದಕ್ಷಿಣ ಅಮೇರಿಕನ್ ಮತ್ತು ಆಫ್ರಿಕನ್ ದೇಶಗಳಿಂದ ವ್ಯವಸ್ಥಿತವಾಗಿಯೂ ಭಾರೀ ಪ್ರಮಾಣದಲ್ಲಿ ಯೂರೋಪಿಗೆ ಕೊಕೋವಿನ ನಿರ್ಯಾತ ಆರಂಭವಾಯಿತು. ಆ ವರ್ಷ ಬ್ರಿಟನ್ನು ಬ್ರಾಜಿಲ್ ದೇಶದಿಂದ ೨೭,೦೦೦ ಟನ್ನು, ಇಕ್ವೆಡೋರಿನಿಂದ ೧೮,೯೦೦ ಟನ್ನು, ಟ್ರಿನಿಡಾಡದಿಂದ ೧೩,೫೦೦ ಟನ್ನು ಮತ್ತು ಗೋಲ್ಡ್‌ಕೋಸ್ಟಿನಿಂದ ಕೇವಲ ೧೩,೦೦೦ ಟನ್ನು ಕೋಕೊ ಬೀಜ ಪಡೆಯಿತು. ಆದರೆ ೧೯೫೫ರಲ್ಲಿ, ಬ್ರಿಟನ್ನು ಗೋಲ್ಡ್‌ಕೋಸ್ಟಿನಿಂದ ೬೮೦೦ ಟನ್ನು ಕೋಕೋ ಬೀಜಗಳನ್ನು ಆಯಾತ ಮಾಡಿಕೊಂಡಿತು. ಈ ಲೂಟಿಯ ಕೀರ್ತಿ ಒಂದು ಬ್ರಿಟಿಷ್ ಗುತ್ತಿಗೆ ಕಂಪೆನಿಯಾದ ಯುನೈಟೆಡ ಆಫ್ರಿಕ ಎಂಬುದಕ್ಕೇನೂ ಕಡಮೆ ಸಲ್ಲುವುದಿಲ್ಲ.

ಘಾನ ದೇಶವನ್ನು "ಕೋಕೋ ರಾಣಿ"ಯೆಂದು ಕರೆಯಲಾಗುತ್ತದೆ. ಘಾನದ ಜನ "ಕೋಕೋವೆಂದರೆ ನಮಗೆ, ಈಜಿಪ್ಟಿಯನ್ ಜನರಿಗೆ ನೈಲ್ ನದಿಯಿದ್ದಂತೆ" ಎಂದು ಹೇಳುತ್ತಾರೆ. ಕಳೆದ ೨೦ ವರ್ಷಗಳಲ್ಲಿ ಕೋಕೋ ಬೆಲೆಗಳಲ್ಲಿ ಸಿಕ್ಕಾಬಟ್ಟೆ ಏರಿಳಿತಗಳಾಗುತ್ತಿರುವುದರಿಂದ ಘಾನದ ಈ ಏಕಕೃಷಿ ಬೆಳೆ ಅವರ ಆರ್ಥಿಕತೆಯ ಅತ್ಯಂತ ದುರ್ಬಲಸ್ಥಾನವಾಗಿದೆ. ಇದರ ಅರ್ಥವೆಂದರೆ ೧೯೬೫ರಲ್ಲಿ ಘಾನ ದೇಶವು ಕೋಕೋ ನಿರ್ಯಾತವನ್ನು ಶೇ೫೦ರಷ್ಟು ಹೆಚ್ಚಿಸಬೇಕಾಯಿತು- ಅಷ್ಟೇ ಪ್ರಮಾಣದ ಪದಾರ್ಥಗಳ ಆಮದು ಮಾಡಿಕೊಳ್ಳಲು.

ಕೊಕೋ ಬೆಳೆ ಅತ್ಯಂತ ಸೂಕ್ಷ್ಮವಾದುದು. ಅದಕ್ಕೆ ವಿಶೇಷ ಕಾಳಜೀ ಅವಶ್ಯಕ. ವೈಜ್ಞಾನಿಕ ರೀತಿಯಲ್ಲಿ ಬೆಳೆ ತೆಗೆಯಲು, ಬೆಳೆಯನ್ನು ರೋಗರುಜಿನಗಳಿಂದ ರಕ್ಷಿಸಲು ವಿದೇಶ ಗುತ್ತಿಗೆಯವರ ಮೋಸದಿಂದ ರೈತರನ್ನು ರಕ್ಷಿಸಲೂ ಘಾನ ಸರಕಾರ ಕ್ರಮವಹಿಸಿದೆ. ಕೊಕೋ ನಿರ್ಯಾತ ವ್ಯವಹಾರವನ್ನು ನೋಡಿಕೊಳ್ಳಲು ಸರ್ಕಾರ ಕೊಕೊ ಮಾರ್ಕೆಟಿಂಗ್ ಮಂಡಲಿಯನ್ನು ಸ್ಥಾಪಿಸಿದೆ. ಜಾಗತಿಕ ಬೆಲೆಗಳು ಏನೇ ಇರಲಿ, ರೈತರಿಗೆ ನಿಗದಿಯಾದ ಬೆಲೆಗಳನ್ನು ಇದು ನಿರ್ಧರಿಸುತ್ತದೆ. ಇಂಥ ಕ್ರಮಗಳು ವಿದೇಶಿ ಗುತ್ತಿಗೆದಾರರಿಗೆ ಪ್ರಹಾರಗಳಾದುವು.

ಜಾಗತಿಕ ಕೊಕೋ ಪೇಟೆ ಬೆಲೆಗಳು ಬೇಡಿಕೆ ಮತ್ತು ಸರಬರಾಜುಗಳನ್ನೇ ಅವಲಂಬಿಸಿವೆ. ಇದನ್ನು ವಿದೇಶಿ ಗುತ್ತಿಗೆದಾರರೇ ನಿರ್ದೇಶಿಸುತ್ತಾರೆ. ಉದಾಹರಣೆಗೆ ೧೯೫೪ರಲ್ಲಿ ಲಿವರ್‌ಪೂಲ್ ಪೇಟೆಯಲ್ಲಿ ಒಂದು ಟನ್ನು ಕೋಕೋ ಬೆಲೆ ೧೫೭ ಪೌಂಡುಗಳಿದ್ದರೆ, ೧೯೬೫ರಲ್ಲಿ— ಆರ್ಥಿಕ ಬಿಕ್ಕಟ್ಟು ಪರಾಕಾಷ್ಠೆ ತಲುಪಿದ ಸಮಯದಲ್ಲಿ-ಇದೇ ಬೆಲೆ ೧೯೯ ಪೌಂಡುಗಳಿಗಿಳಿಯಿತು ಮತ್ತು ಯುದ್ಧ ಕಾಲದಲ್ಲಿ ಇದು ೧೩ ಪೌಂಡ್ ಆಯಿತು.

ಈ ವಾರ್ಷಿಕ ಏರುಪೇರುಗಳೊಡನೆ ಜಾಗತಿಕ ಬೆಲೆಗಳೂ ಹಂಗಾಮಿಗನುಸಾರವಾಗಿ ಬದಲಾಗುತ್ತಿರುತ್ತವೆ. ಉದಾಹರಣೆಗೆ ಒಂದು ವರ್ಷದ ಅವಧಿಯಲ್ಲಿ ನ್ಯೂಯಾರ್ಕ್ ಪೇಟೆಯಲ್ಲಿಯ ಬೆಲೆಗಳಲ್ಲಿ ೫೦ರಿಂದ ೧೩೫ ಸೆಂಟುಗಳ ವರೆಗೆ ಹೊಯ್ದಾಟ ಕಂಡು ಬಂದಿದೆ. (೬೦ ಪೌಂಡಿನ ಒಂದು ಮೂಟೆ ಕೋಕೋಗೆ). ಇದು ಕೂಡ ಯೂರೋಪಿಯನ್ ಹಾಗೂ ಇನ್ನಿತರ ವ್ಯಾಪಾರಿಗಳು ಕೊಂಡು ದಾಸ್ತಾನು ಮಾಡುವ ಮೂಲಕವೆ ಹುಟ್ಟಿದುದು. ಇದರಿಂದ ಅವರಿಗೆ ಭಾರೀ ಲಾಭದ ಸಂಧರ್ಭಗಳು ತೋರುತ್ತವೆ. ಸುಗ್ಗಿಯ ಕಾಲದಲ್ಲಿ (ಅಕ್ಟೋಬರ್—ನವೆಂಬರ್) ಅವರು ಕೋಕೋ ಕೊಂಡು, ಅಂದರೆ ನ್ಯೂಯಾರ್ಕ್ ಪೇಟೆಯಲ್ಲಿ ಬೆಲೆಗಳು ಅತ್ಯಂತ ಕಡಮೆ ಮಟ್ಟದಲ್ಲಿದ್ದಾಗ ಕೊಂಡು, ಏರಿದಾಗ ಮಾರಾಟ ಮಾಡುತ್ತಾರೆ.

ಈ ರೀತಿಯ ಮೋಸದಿಂದ ಪಾರಾಗದ್ದ ಕೋಕೋ ಬೆಳೆಗಾರರು ೧೯೩೭ರಲ್ಲಿ ಕೊಕೋ ಕೊಳ್ಳುವ ಯೂರೋಪಿಯನ್ ಕಂಪೆನಿಗಳನ್ನು ಬಹಿಷ್ಕರಿಸಬೇಕಾಯಿತು. ಆದರ ಇತ್ತೀಚೆ ಘಾನದಲ್ಲಿ ಕೊಕೊ ಕೊಳ್ಳುವಿಕೆಗ ಮತ್ತು ಮಾರಾಟಕ್ಕೆ ಆರೆ ಸರ್ಕಾರಿ ವ್ಯವಸ್ಥೆಯೊಂದು ಏರ್ಪಾಡಾಗಿ ಅದು ಕೊಕೋ ಮಾರ್ಕೆಟಿಂಗ್ ಮಂಡಲಿಯಾಗಿ ಬೆಳೆಯಿತು.

ಈ ಹೊಸ ವ್ಯವಸ್ಥೆ ಇನ್ನೂ ಪರಿಣಾಮಕಾರಿಯನ್ನು ಮಾಡಬೇಕಾಗಿದೆ.

(ಹನ್ನೆರಡನೇ ಪುಟ ನೋಡಿರಿ)

ಮೈಸೂರು ರಾಜ್ಯ ಟಿ ಬಿ ಸಮಿತಿಯು ತುಮ್ಕೂರು ಜಿಲ್ಲೆಯಲ್ಲಿ ಸುಮಾರು 400 ಸ್ವಯಂ ಸೇವಕರು ಕ್ಷಯ ರೋಗಿಗಳ ಚಿಕಿತ್ಸೆಯ ಸಂಬಂಧದಲ್ಲಿ ಮೇಲ್ವಿಚಾರಣೆ ಮತ್ತು ವಸತಿ ಕೇಂದ್ರ ಯೋಜನೆಯಲ್ಲಿ ಉಚಿತ ಸೇವೆ ಸಲ್ಲಿಸುತ್ತಿರುವ ಒಂದು ಮಾರ್ಗದರ್ಶಕ ಯೋಜನೆಯನ್ನು ಕಾರ್ಯಗತ ಮಾಡಿದೆ. ಈ ಸಮಿತಿಯು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿಯೂ ಟಿ ಬಿ ನಿರೋಧ ಚಟುವಟಿಕೆಗಳ ನಿರ್ವಹಣೆಗಾಗಿ ಜಿಲ್ಲಾ ಟಿ ಬಿ ಸಮಿತಿಗಳನ್ನು ವ್ಯವಸ್ಥಾಪಿಸುತ್ತಿದೆ. ಈ ಸಮಿತಿಯು ಮುದ್ರೆ ಮಾರಾಟದ ಹಣವನ್ನು ಈ ಕೆಳಗಣ ಉದ್ದೇಶಗಳಿಗಾಗಿ ಉಪಯೋಗಿಸುತ್ತದೆ:



1. ಬಡ ಕ್ಷಯ ರೋಗಿಗಳಿಗೆ ಧರ್ಮಾರ್ಥ ಔಷಧಿಗಳನ್ನು ಒದಗಿಸಲಿಕ್ಕೆ.
2. ಮೂಳೆ ಕ್ಷಯ ರೋಗಿಗಳಿಗೆ ಬೆನ್ನೆಲುಬಿನ ಬಿಗಿ ಪಟ್ಟಿಗಳನ್ನು ಒದಗಿಸಲಿಕ್ಕೆ.
3. ಹಿಂದ ಕ್ಷಯ ರೋಗಿಗಳಾಗಿದ್ದವರ ಪುನರ್ನಿವೇಶನಕ್ಕೆ (ಅವರಿಗೆ ಹೊಲಿಗೆ ಯಂತ್ರ ಮೊದಲಾದುವನ್ನು ಒದಗಿಸುವುದರ ಮೂಲಕ).
4. ಟಿ ಬಿ ಸಂಸ್ಥೆಗಳ ಬಡವರ ನಿಧಿಯನ್ನು ಹೆಚ್ಚಿಸಲಿಕ್ಕೆ.
5. ಕ್ಷಯ ಆಸ್ಪತ್ರೆಯಿಂದ ಬಿಡುಗಡೆ ಹೊಂದಿದ ಬಡ ಕ್ಷಯ ರೋಗಿಗಳ ಪ್ರಯಾಣ ವೆಚ್ಚವನ್ನು ವಹಿಸಲಿಕ್ಕೆ ಇತ್ಯಾದಿ, ಇತ್ಯಾದಿ.

ಅತ್ಯಧಿಕ ಸಂಖ್ಯೆಯಲ್ಲಿ ಟಿ ಬಿ ಮುದ್ರೆಗಳನ್ನು ಕೊಂಡುಕೊಂಡು ಬಡ ಕ್ಷಯ ರೋಗಿಗಳಿಗೆ ಸಹಾಯ ನೀಡಲು ನಿಮ್ಮ ರಾಜ್ಯದ ಟಿ ಬಿ ಸಮಿತಿಗೆ ಸಹಾಯ ಮಾಡಿರಿ. ಒಂದು ಮುದ್ರೆಯ ಬೆಲೆ 10 ಪೈಸೆ ಮಾತ್ರ.

ಮುದ್ರೆಗಳು ದೊರೆಯುವ ಸ್ಥಳಗಳು:— ಮೈಸೂರು ರಾಜ್ಯ ಟಿ ಬಿ ಎಸೋಸಿಯೇಶನ್, ಕುರುಬರ ಸಂಘ ಹೊಸ್ಟೆಲ್ ಬಿಲ್ಡಿಂಗ್, ಗಾಂಧಿನಗರ, ಬೆಂಗಳೂರು. 2. ಬೇರೆ ಬೇರೆ ಜಿಲ್ಲಾ ಟಿ ಬಿ ಎಸೋಸಿಯೇಶನ್ ಮತ್ತು ಅವುಗಳ ವಿವಿಧ ಏಜನ್ಸಿಗಳಲ್ಲಿ.

17ನೇ ಟಿ ಬಿ ಮುದ್ರೆ ಮಾರಾಟ ಚಳವಳ

(ಭಾರತ ಕ್ಷಯ ನಿರೋಧಕ ಸಂಘ, ನವದೆಹಲಿ, ಇವರಿಂದ ಸಂಘಟಿತ)

ಸ್ಥಳದಾನದ ಕೃಪೆಮಾಡಿದವರು:
Indo—Universal Engineering Co. (Private) Ltd., Bombay, and Hindustan Potteries, Calcutta.

ಉಡ್ಪಿ ಮುನ್ಸಿಫ್ ಕೋರ್ಟಿನಲ್ಲಿ

O. S. No. 79/66.

ವೆಂಕಪ್ಪ ಸೆಟ್ಟಿ —ವಾದಿ

ಮತ್ತು

ಮಿಣಕ್ಕ ಸೆಡ್ತಿ ಕೂಡಾ—ಪ್ರತಿವಾದಿರು.

ಇವರೊಳಗೆ

೬ನೇ ಪ್ರತಿವಾದಿ ಜಲಜಾಕ್ಷಿ ಸೆಡ್ತಿ—ಮಾನ್ಯ ನಂದ್ಯಪ್ಪ ಹೆಗ್ಡೆರ ಮಗ, ಉಡ್ಪಿ ತಾಲ್ಲೂಕು ಬಿಲ್ಲಾಡಿ ಗ್ರಾಮದ ಮಾನ್ಯ.

೬ನೇ ಪ್ರತಿವಾದಿಗೆ ತಿಳಿಯ ಪಡಿಸುವುದೇನೆಂದರೆ—

ವಾದಿಗೆ ಪ್ರತಿವಾದಿರಿಂದ ಪಿಕಪ್ಪಿನಸು ಸಲ್ಲತಕ್ಕೆ ಬಹಾಕೊಡುವಿಕೆ ಬಾಕಿಗೆ ವಾದಿಯು ಪ್ರತಿವಾದಿರ ಮೇಲೆ ದಾಖಲು ಮಾಡಿದ ಮೇಲಿನ ದಾವೆಯು ತಾ. 14—11—66ಕ್ಕೆ ೬ನೇ ಪ್ರತಿವಾದಿ ಹಾಜರ ಬಗ್ಗೆಯಿಟ್ಟಿರುತ್ತದೆ. ನೀವು ವಾದಿಸುವುದಿದ್ದರೆ ಮೇಲಿನ ತಾರೀಖು ಹಗಲು ಗಂಟೆ 11ಕ್ಕೆ ಈ ಕೋರ್ಟಿನಮುಂದೆ ಹಾಜರಾಗಿ ವಾದಿಸಿಕೊಳ್ಳತಕ್ಕದ್ದು.

Y. C. S. Hegde
Advocate for Plaintiff.
Udipi, 13—10—66

ಹೀಗೂ ನಡೆದಿತ್ತು

ಮರೆಯಲಾರದ ನೆನಪದು

ಬರೆದವರು
ಶ್ರೀ ಹಳನಾಡು ಸುಬ್ರಾಯ ಭಟ್ಟ

ಈಗಲೂ ನೆನಪಿನ ಪುಟಗಳನ್ನು ತೆರೆದು ಓದುವಾಗ ಕಣ್ಣೆದುರು ಧುತ್ತೆಂದು ನಿಲ್ಲುವ ದೃಶ್ಯವದು. ಇಂದಿನ ಯೋಚನೆಗೂ ಅಂದಿನ ನಡತೆಗೂ ಅದೆಷ್ಟೊಂದು ಅಂತರ! ಆಗಿನ್ನೂ ನಾನು ಇಪ್ಪತ್ತರ ಗಡಿ ದಾಟದ ಯುವಕನಾಗಿದ್ದೆ. ಸಭೆ ಸಮಾರಂಭಗಳ ಮುಂದಾಳು ಎನಿಸಿಕೊಂಡಿದ್ದೆ. ಎಲ್ಲಿಯೋ ಅಲ್ಲೊಂದು ಇಲ್ಲೊಂದು ಲೇಖನ ಬರೆದು ಪತ್ರಿಕೆಗಳಿಗೂ ಕಳಿಸಿದ್ದೆ. ಆದರೆ ಅದು ಅಚ್ಚಾದ ನೆನಪಿಲ್ಲವಾದರೂ ಲೇಖಕನೆಂಬ ಹೆಮ್ಮೆ ಇತ್ತೆಂದರೆ ಅದು ಸುಳ್ಳೆನಿಸಲಾರದು. ಅದು ನನ್ನ ತಪ್ಪೆಂದು ನಾನೀಗ ಎಣಿಸುತ್ತಿಲ್ಲ. ಅದು ಕಾಲದ ತಪ್ಪು. ಇಲ್ಲವೇ ನನ್ನ ವಯಸ್ಸಿನ ಅಚಾತುರ್ಯವಿರಲೇಬೇಕು. ಅಥವಾ ಕಾಫಿಗಿಟ್ಟಿಗಳು ಸದಾ ನನ್ನ ಬೆನ್ನಹಿಂದೆ ತಿರುಗುವ ಮಿತ್ರರ ಹೊಗಳಿಕೆಯ ಫಲವಿರಬೇಕು.

ನನ್ನ ಆಕಾಂಕ್ಷೆಯೇನೂ ಕಡಿಮೆಯಿದ್ದಿಲ್ಲ. ನಾನೂ ಒಬ್ಬ ಸಾಹಿತಿಯಾಗಬೇಕು. ಎಲ್ಲೆಡೆಯೂ ನನಗೆ ಗೌರವಾದರಗಳು ದೊರಕಬೇಕು. ಸಭೆ ಸಮಾರಂಭಗಳ ಅಧ್ಯಕ್ಷಪದ ನನಗೇನೇ ದೊರಕಬೇಕು. ಆಗ ಮಾರುದ್ದ ಭಾಷಣ ಬಿಗಿದು ಎಲ್ಲರಿಂದಲೂ ಸೈ ಎನಿಸಿಕೊಳ್ಳಬೇಕು? ಇದು ಕ್ಷಣವೂ ನನ್ನ ಬೆಂಬಿಡದ ಹಂಬಲವಾಗಿತ್ತು.

ಕಾಲೇಜಿಗೆ ಬಿಡುವಿಲ್ಲದಾಗಲೂ ಚಕ್ಕರ್ ಕೊಟ್ಟು ಸಭೆಗಳಿಗೆ ಹಾಜರಾಗುತ್ತಿದ್ದೆ. ನನ್ನ ಜ್ಞಾನದಾಹವೋ ಇಲ್ಲವೇ ಕೀರ್ತಿಯ ಹಂಬಲವೋ ಅಂತೂ ನನ್ನನ್ನಲ್ಲಿಗೆ ಸೆಳೆಯುತಿತ್ತು. ಆಗಲೂ ಜೊತೆಗೆ ಮಿತ್ರರ ದಂಡು ಜೊತೆಯಾಗಿಯೇ ಹೊರಡುತಿತ್ತು. ಕಾರಣ ನನ್ನ ಕಿಸೆ ಕಾಲಿಯಾದರೂ ಚಿಂತಿಲ್ಲ; ನನ್ನ ಹೆಸರು ಅಲ್ಲಿ ನಾಲ್ಕು ಜನರಿಗೆ ತಿಳಿಯುವಂತೆ ಮಾಡಲು ಅವರೇ ಮುಂದಾಗುತ್ತಿದ್ದರು.

ನನ್ನ ಮನೆತನ ಹೇಳುವಷ್ಟೇನೂ ಶ್ರೀಮಂತಿಕೆಯಿಂದ ಕೂಡಿರಲಿಲ್ಲ. ಆದರೆ ಇದ್ದೊಬ್ಬ ಮಗನ ವಿದ್ಯಾಹಂಬಲವೇ ತಂದೆ ತಾಯಿಗೆ ಹೆಗ್ಗುರಿಯಾಗಿತ್ತು. ಹಾಗಾಗಿ ಒಂದು ದಿನವೂ ನನ್ನ ಖರ್ಚಿನ ಲೆಕ್ಕವನ್ನು ಕೇಳಿರಲಿಲ್ಲ.

ಅಂದು ನನ್ನಲ್ಲಿ ಸಾಹಿತಿಗಿರಬೇಕಾದ ಯಾವ ಗುಣವೂ ಇರಲಿಲ್ಲವೆಂದೇ ಈಗ ನನ್ನ ಭಾವನೆ. ಎಲ್ಲಕ್ಕೂ ಮಿಗಿಲಾಗಿ ನಾನೂ ಒಬ್ಬ ಸಾಹಿತಿ ಎಂಬ ಹೆಮ್ಮೆ ಮಾತ್ರ ಮನದಲ್ಲಿ ಮನೆ ಮಾಡಿತ್ತು.

ಒಂದು ದಿನ ಕವಿಗಳ ಭಾಷಣವಾದರೆ; ಇನ್ನೊಂದು ದಿನ ರಾಜಕೀಯ ಪುಢಾರಿಗಳ ಸಮ್ಮೇಳನ; ಮತ್ತೊಂದು ದಿನ ರಾಷ್ಟ್ರನಾಯಕರ ಒಕ್ಕೂಟ ಸಮಾರಂಭ. ಹೀಗೆ ದಿನವೂ ನನ್ನ ಅಲೆದಾಟ ಸಾಗುತ್ತಲೇ ಇತ್ತು.

ಎಲ್ಲಿ ಹೋದರೂ ಮುಂದಿನ ಸಾಲಿನಲ್ಲಿಯೇ ಎದೆಯುಬ್ಬಿಸಿ ಕುಳಿತು ಕೇಳುತ್ತಲಿದ್ದೆ. ಎದ್ದು ಬರುವಾಗ ಅಂದಿನ ಸಮಾರಂಭದ ಲೋಪದೋಷಗಳನ್ನು ಬಹಿರಂಗವಾಗಿಯೇ ಹೇಳುತ್ತಿದ್ದೆ.

ಕಾಲೇಜಿನ ಬದಲು, ಸಭೆ ಸಮಾರಂಭಗಳ ತಿರುಗಾಟವೇ ಹೆಚ್ಚಾಯಿತು. ಆದರೂ ಕಾಲೇಜಿನಲ್ಲಿ ಹೇಗೋ ಪಾಸಾಗುತ್ತಿದ್ದೆ. ಆದ್ದರಿಂದ ಹೆತ್ತವರ ಆಕ್ಷೇಪಕ್ಕೇನೂ ಎಡೆಯಿರಲಿಲ್ಲ.

ಕಾಲೇಜಿನಿಂದ ಇಪ್ಪತ್ತು ಮೈಲು ದೂರ ಹಿರಿಯೂರು. ಅಲ್ಲಿಗೆ ಅಂದು ಬೆಳಗಿನ ಬಸ್ಸಿಗೇನೇ ಹೊರಡುವುದೆಂಬ ತೀರ್ಮಾನ ಮೊದಲ ದಿನವಾಗಿತ್ತು. ಕಾರಣ ಅಲ್ಲಿ ಹತ್ತು ಗಂಟೆಗೆ ಸಭೆಯ ಆರಂಭ. ಅದೂ ಕೀರ್ತಿಶೇಷರಾದ ರಾಷ್ಟ್ರಕವಿಗಳ ಭಾಷಣ ಎಂದಾಗ ಯಾರಾದರೂ ಬಿಟ್ಟಾರೆಯೇ? ಅದರಲ್ಲೂ ನನ್ನಂತಹವನು ಹೋಗದಿದ್ದರೆ ಹೇಗಾದೀತು?

ಅಂದು ಬೆಳಗಿನ ಬಸ್ಸಿನಲ್ಲಿ ನೂಕು ನುಗ್ಗಲು ಹೆಚ್ಚಾಗಿತ್ತು. ಅರ್ಧ ಗಂಟೆಗೊಂದರಂತೆ ಬಸ್ಸಿದ್ದರೂ ಜನರೆಲ್ಲಾ ಅದೊಂದೇ ಬಸ್ಸೆಂಬಂತೆ ಮುನ್ನುಗ್ಗುತ್ತಿದ್ದರು. ಅರ್ಧ ಗಂಟೆ ತಡೆದರೆ ಇವರ ಮನೆ ಗಂಟೇನು ಖರ್ಚೆಂದು ಮನದಲ್ಲಿಯೇ ಭಾವಿಸಿದೆ. ಹೆಂಗಸರು-ಮಕ್ಕಳೆಂಬ ಭೇದವಿಲ್ಲದೆ ಬಸ್ಸಿನೊಳಗೆ ನುಗ್ಗಿ ಬರುತ್ತಿದ್ದರು. ನಾನು ಹೇಗೂ ತರುಣ. ಅಲ್ಲದೆ ದೇಹವೂ ಕೂಡಾ ಚೆನ್ನಾಗಿಯೇ ಬೆಳೆದಿತ್ತು. ಅದನ್ನು ನಾನೇ ಬೆಳೆಸಿಕೊಂಡುದೋ; ಇಲ್ಲವೇ ತಾನಾಗಿಯೇ ಬೆಳೆದುದೋ ಎಂದು ಖಚಿತವಾಗಿ ಹೇಳಲಾರೆ. ಎಲ್ಲರನ್ನೂ ಹಿಂದಿಟ್ಟು ಮುಂದಿನ ಸೀಟಿನಲ್ಲಿಯೇ ಏರಿ ಕುಳಿತೆ. ಮೆಲ್ಲ ಕಿಸೆಯಿಂದ ಸಿಗರೇಟೊಂದನ್ನು ತೆಗೆದು ಬಾಯಿಗಿಟ್ಟು ಕಡ್ಡಿ ಗೀರಿದೆ. ಮೇಲ್ಗಡೆ 'ಹೊಗೆಬತ್ತಿ ಸೇದಬಾರದು' ಎಂಬ ಬೋರ್ಡು ಕಣ್ಣೆದುರು ತೂಗಾಡುತ್ತಿದ್ದರೂ ಅದರತ್ತ ಲಕ್ಷ್ಯ ನನಗಿರಲಿಲ್ಲ.

ಕೆಲವರು ಕುಳಿತರು. ಸೀಟಿಲ್ಲದವರು ನಿಂತೇ ಇದ್ದರು. ಆದರೂ ಮೊದಲ ಬಸ್ಸಿಗೇನೇ ಹೋಗಬೇಕೆಂಬ ಆತುರದಿಂದಲೇ ತೊಂದರೆಯನ್ನು ಕಡೆಗಣಿಸಿಕೊಂಡಿದ್ದರು.

ದಿನಕ್ಕಿಂತ ಹತ್ತು ಮಿನಿಟು ತಡವಾಗಿಯೇ ಬಸ್ಸು ಹೊರಟಿತು; ಇದು ಡ್ರೈವರನ ಬಾಯಿಂದಲೇ ನಾನು ಕೇಳಿದ ಮಾತಾದ್ದರಿಂದ ಸುಳ್ಳಿರಲಾರದು.

ದಿನಕ್ಕಿಂತ ಹೆಚ್ಚು ಹೇರನ್ನು ಹೇರಿಕೊಂಡ ಬಸ್ಸು ತಿರುಗುತ್ತಲೇ ಮುಂದೆ ಸಾಗಿತು.

ಬಸ್ಸು ನಿಂತಾಗ ಮತ್ತೆ ನೂಕು ನುಗ್ಗಲು. ಕೆಳಗಿಳಿಯಲೂ ಅವಸರ. ಏನು ಕ್ಷಾಳು ಜನವೋ ಎಂದೇ ಭಾವಿಸಿದೆ. ಕೆಳಗಿಳಿದವನೇ ಜೊತೆಗೂಡಿ ಸಭಾಂಗಣದತ್ತ ಸಾಗಿದೆ.

ಆಗಿನ್ನೂ ಹೆಚ್ಚು ಮಂದಿ ಬಂದಿರಲಿಲ್ಲ ಮುಂದಿನ ಸೀಟನ್ನೇ ಮೊದಲು ಆಕ್ರಮಿಸಿ ಕುಳಿತೆ. ಆಗಲೇ ಜನ ಬೆಲ್ಲಕ್ಕೆ ಮುತ್ತುವ ಇರುವೆಯಂತೆ ಬರಹತ್ತಿದ್ದರು. ಎತ್ತರವಾದ ವೇದಿಕೆಯ ಮೇಲೆ ನಾಲ್ಕಾರು ಕುರ್ಚಿಗಳನ್ನಿಟ್ಟಿದ್ದರು. ಮಧ್ಯದಲ್ಲಿ ಗಾಂಧೀಜಿಯ ಫೋಟೋ ಹೂಮಾಲೆಯಿಂದ ಅಲಂಕೃತವಾಗಿತ್ತು.

ಬಹುಮಾನಿತ ಕವಿ; ಕನ್ನಡಿಗರ ಕಣ್ಮಣಿ. ಹಾಗೆಂಬಾಗ ಅವರ ರೂಪ ರೇಷೆಗಳನ್ನು ಮನದಲ್ಲಿಯೇ ಚಿತ್ರಿಸಿಕೊಳ್ಳುತ್ತಿದ್ದೆ. ಆದರೂ ಅದು ನನ್ನ ಭಾವನಾ ಪ್ರಪಂಚಕ್ಕೆ ನಿಲುಕದ ವಿಚಾರವಾಗಿತ್ತು.

ಗಂಟೆ ಹತ್ತು ಬಾರಿಸಿದಾಗಲೇ ಜನರ ಗುಂಪಿನ ಮಧ್ಯದಿಂದ ಮಧ್ಯಮ ವಯಸ್ಕರೊಬ್ಬರು ವೇದಿಕೆಯತ್ತ ಬರುವುದು ಕಂಡಿತು.

ಖಾದಿ ಪಂಚೆಯ ಕಚ್ಚೆ; ಅಂಗಿಯ ಮೇಲೊಂದು ಕೋಟು ಹೆಗಲ ಮೇಲೊಂದು ಗಾಂಧೀ ಶಾಲು; ಮುಖಕೊಪ್ಪುವ ಮೀಸೆ; ತಲೆಗೊಂದು ರುಮಾಲು; ಒಟ್ಟಾರೆ ಸಾದಾ ಉಡುಪು. ನಿರಾಡಂಬರದ ಸಾಮಾನ್ಯ ವ್ಯಕ್ತಿಯಂತೆ ಕಾಣುತ್ತಿದ್ದರು.

ವೇದಿಕೆಯ ಮೇಲೇರಿ ಬಂದಾಗ ಕಾರ್ಯಕರ್ತರು ಪುಷ್ಪಹಾರವನ್ನು ಅರ್ಪಿಸಿದುದನ್ನು ಕಂಡು; ಅವರೇ ಕವಿಗಳೆಂದು ತಿಳಿದ ನನಗೆ ಎಲ್ಲಿಲ್ಲದ ಸಂಶಯ ಹಾಗೂ ಆಶ್ಚರ್ಯ ಉಂಟಾಯಿತು.

ನನ್ನ ಮನೋನಯನದಲ್ಲಿ ಚಿತ್ರಿಸಿಕೊಂಡ ಚಿತ್ರದ ತುಣುಕು ಸಾಮ್ಯವೂ ಅವರಲ್ಲಿದ್ದಿಲ್ಲ.

ಆದರೂ ಚಿಂತಿಲ್ಲ. ಅವರನ್ನು ಎಲ್ಲಿಯೋ ಕಂಡಾಗಿನ ನೆನಪು ಬರತೊಡಗಿತು. ಕ್ಷಣಕಾಲ ನೆನಪಿನ ಪುಟಗಳನ್ನು ತಿರುವಿ ಹಾಕಿದೆ. ಆಗ ಪಕ್ಕನೆ ಹೊಳೆಯಿತು ನಾನಾಗ ನಾಚಿ ಹಣ್ಣಾದೆ. ಜೊತೆಗೆ ಪಶ್ಚಾತ್ತಾಪ ಮೂಡತೊಡಗಿತ್ತು. ಏನು ಮಾಡಲೂ ತೋಚದೆ ಅರೆಗಳಿಗೆ ಸುಮ್ಮನುಳಿದೆ. ಅದೇಕೆಂದು ಕೇಳುವಿರಾ?

ಹೌದು ಹೇಳಲೇ ಬೇಕು. ಹೇಳದಿದ್ದರೆ ಅದರಿಂದ ಹೊಟ್ಟೆಶೂಲೆ ಸುರುವಾದೀತು. ಇಲ್ಲವಾದರೆ ಯೋಚನೆಯಿಂದ ಹುಚ್ಚೇ ಹಿಡಿದೀತು. ಆಗ ನನಗೆ ಮೆಲ್ಲ ಎಚ್ಚರವಾಗಹತ್ತಿತು. ನಿಧಾನ ಕಣ್ಣು ತೆರೆಯಹತ್ತಿತು. ನನ್ನ ಮೊದಲ ಹುಚ್ಚು ಕಲ್ಪನೆ ಕನಸಿನಿಂದ ತಾನಾಗಿ ಕರಗಿ ಹೋಯಿತು. ಆಗ ನನಗೆ ಎಲ್ಲರಲ್ಲಿಯೂ ಗೌರವ ಆದರ ಉಂಟಾಗತೊಡಗಿತು. ನಾನು ಮನುಷ್ಯನಾಗುತ್ತಿದ್ದೇನೆಂಬ ಭಾವನೆ ಬರತೊಡಗಿತು. ಇದೆಲ್ಲವಕ್ಕೂ ಕಾರಣ ಅಂದು ನಡೆದ ಘಟನೆ. ಅದೇ ಈಗ ನನ್ನ ಕಣ್ಣೆದುರು ಬಂದು ನಿಂತಂತಿದೆ.

ನಾನಂದು ಒಬ್ಬಂಟಿಗನಾಗಿಯೇ ಬೆಂಗಳೂರು ಮೇಲನ್ನು ಏರಿದ್ದೆ. ನನ್ನೊಡನೆ ಒಂದು ಸೂಟುಕೇಸು ಮತ್ತು ಬಟ್ಟೆ ತುಂಬಿದ ಟ್ರಂಕೊಂದು ಹೀಗೆ ಎರಡಿದ್ದುವು. ನಾನಿಳಿಯಲಿರುವ ಸ್ಥಳ ಹೇಳುವಷ್ಟು ದೊಡ್ಡದಾಗಿರಲಿಲ್ಲ. ಹಾಗಾಗಿ ಅಲ್ಲಿ ಕೂಲಿ ಸಿಗುತ್ತಲೇ ಇರಲಿಲ್ಲವೆಂದರೂ ಸಮ...

(ಹನ್ನೊಂದನ್ನೇ ಪುಟ ನೋಡಿರಿ)

ಕುಂದಾಪುರ ಮುನ್ಸೀಫ್ ಕೋರ್ಟಿನಲ್ಲಿ

O. S. 210/1966

ವಾದಿ— ಕೊರಗಯ್ಯ ಹೆಗ್ಡೆ

ಪ್ರತಿವಾದಿರು. 1. ಸುಬ್ಬಣ್ಣ ಸೆಟ್ಟಿ, 2. ಕುಮಾರ ಸೆಟ್ಟಿ.

ಕುಂದಾಪುರ ತಾಲ್ಲೂಕು ಕೋಡಿ ಮನೆ ಗ್ರಾಮದಲ್ಲಿರುವ ಕಾವೇರಿ ಸೆಟ್ತಿರ ಮಗ ಸುಬ್ಬಣ್ಣ ಸೆಟ್ರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ—

ಪ್ರತಿವಾದಿರ ಬಗ್ಗೆ ವಾದಿಯು ಕೆತ್ತ ಮೂಲಗೇಣಿ ಗೇಣಿಯನ್ನು ಪಾಲುಪಟ್ಟೆ ಕರ್ತಪ್ರಕಾರ ಪ್ರತಿವಾದಿರಿಂದ ಬರಮಾಡಿ ಕೊಳ್ಳುವರೆ ವಾದಿಯು ಪ್ರತಿವಾದಿರ ಮೇಲೆ ದಾಖ್ಲು ಮಾಡಿದ ಮೇಲಿನ ದಾವೆಯು ತಾರೀಕು 16—11—1066ಕ್ಕೆ ಮೇಲಿನ ಕೋರ್ಟಿನಲ್ಲಿ ತನ್ಖಿಗೆ ಇರುತ್ತದೆ. ಆ ಕುರಿತು ಯೇನಾದರೂ ಆಕ್ಷೇಪಣೆಗಳಿದ್ದರೆ ಸದ್ರಿ ದಿವಸ ಹಗಲು 11ಗಂಟೆಗೆ ಮೇಲಿನ ಕೋರ್ಟಿನಲ್ಲಿ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು. ಎಂಬ ಸಂಗ್ತಿ ಈ ಮೂಲಕ ತಿಳಿಯಪಡಿಸಿಯದೆ.

(Sd) G. V. Aithal
Advocate for Plff.
Date 16—10—66, Coondapoor

Advertise in
Navayuga
Deepavali Special 1966
&
get best value for your money.

ಸಮೀಪಿಸುತಿದೆ ದೀಪಾವಳಿ!
ಮನೆ ಮನೆಗಳಲಿ ದೀಪ ಬೆಳಗಲಿದೆ!
ಹೊರಡಲಿದೆ ನವಯುಗದ ದೀಪಾವಳಿ ಸಂಚಿಕೆ!
ಮನ ಮನಗಳಲಿ ಜ್ಞಾನದೀಪ ಬೆಳಗಲಿದೆ!

ಕರ್ನಾಟಕದ ವಿವಿಧ ಬರಹಗಾರರಿಂದ, ವೈವಿಧ್ಯಪೂರ್ಣ ಲೇಖನಾದಿಗಳಿಂದ ಕೂಡಿ ತಾ. 10—11—1966ಕ್ಕೆ ವಾಚಕರ ಕೈಸೇರಲಿದೆ 'ದೀಪಾವಳಿ ಸಂಚಿಕೆ'.

ಅಖಿಲ ಕರ್ನಾಟಕದಲ್ಲಿ ಪ್ರಸಾರವಾಗುವ ನವಯುಗ ದೀಪಾವಳಿ ಸಂಚಿಕೆ ಜಾಹೀರಾತಿಗೆ ಸುವರ್ಣ ಮಾಧ್ಯಮ.

ಜಾಹೀರಾತು ಕೊಡುವವರು ಜಾಹೀರಾತನ್ನು ಅಕ್ಟೋಬರ ಅಂತ್ಯದೊಳಗೆ ಕಳುಹಿಸುವಂತೆ ಅಪೇಕ್ಷಿಸಲಾಗಿದೆ.

ಮೆನೇಜರ್
ನವಯುಗ, ಉಡುಪಿ

ಮಾವೋ ಬ್ರಹ್ಮನ ಹೊಸ ಸೃಷ್ಟಿ

ಮುಗಿಲು ಮುಟ್ಟಲು ರೆಡ್‌ಗಾರ್ಡ್ಸ್

ಬರೆದವರು
ಡಾ॥ ವಿದ್ಯಾಪ್ರಕಾಶ ದತ್ತ

ಚೀಣಾದ ರೆಡ್‌ಗಾರ್ಡ್‌ಗಳು ಈಗ ಹುಚ್ಚು—ಹುಚ್ಚಾಗಿ ವರ್ತಿಸ ತೊಡಗಿದ್ದಾರೆ. ಅವರ ಈ ಹಿಂಸಾಕೃತ್ಯಗಳಿಗೆ ಚೀಣಾದಲ್ಲಿ ಮಾತ್ರವಲ್ಲ, ಹೊರ ದೇಶಗಳಲ್ಲೂ ವ್ಯಾಪಕ ಸ್ವರೂಪದ ಪ್ರತಿಕ್ರಿಯೆ ವ್ಯಕ್ತಪಟ್ಟಿದೆ.

ಚೀಣಾದಲ್ಲಿ ರೆಡ ಗಾರ್ಡ್‌ಗಳ ಹಾವಳಿಯಿಂದ ಪರಿಸ್ಥಿತಿ ಹದಗೆಟ್ಟಿದೆ. ಅಲ್ಲಿನ ಜನತೆಯು ದಿಗ್ಭ್ರಾಂತವಾಗಿದೆ. ಅಂತರಿಕ ಕಚ್ಚಾಟ ಮಿತಿ ಮೀರುತ್ತಿದೆ. ವಾತಾವರಣ ಪ್ರಕ್ಷುಬ್ಧಗೊಂಡಿದೆ. ಭಯ—ಭೀತಿ ಸುತ್ತಲೂ ಹೆಚ್ಚುತ್ತಿದೆ. ಇದು ಚೀಣಾದ ಇಂದಿನ ಚಿತ್ರ. ವಿದೇಶಿಯರು ಈ ಚಳುವಳಿಯ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಕೆಲವೇ ಜನ ಬೆಂಬಲಿಗರನ್ನು ಬಿಟ್ಟರೆ ಇನ್ನುಳಿದವರು ಯಾರೂ ಈ ಚಳುವಳಿಗೆ ಸಹಾನುಭೂತಿಯನ್ನು ವ್ಯಕ್ತಗೊಳಿಸಿಲ್ಲ.

ಮಾವೋತ್ಸೆತುಂಗರ ಯುವಕ ದಂಗೆಕೋರರಿಗೆ ಹಿಂಸಾಕೃತ್ಯಗಳನ್ನು ನಿಲ್ಲಿಸುವಂತೆ ಕರೆ ನೀಡಲಾಗಿದೆ ಎಂದು ಇತ್ತೀಚಿನ ವರದಿ. ಪೀಕಿಂಗ್‌ನಲ್ಲಿ ನಡೆದಿರುವ ಕಪಟ ನಾಟಕದ ಉದ್ದೇಶವಾದರೂ ಏನು? ಎಂಬುದು ಇಂದಿನ ಪ್ರಶ್ನೆ. ಚೀಣಾದ ಜನ ಸಾಮಾನ್ಯರ ಮನಸ್ಸಿನಲ್ಲಿ ಭಯವನ್ನು ಹುಟ್ಟಿಸುವುದು ಮಾವೋ ವಿರೋಧಿಗಳನ್ನು ಸದೆಬಡೆಯುವುದನ್ನು ಈ ಚಳುವಳಿಯ ಮುಖ್ಯ ಉದ್ದೇಶವಾಗಿದೆ ಎಂದು ಹೇಳಬಹುದು.

ರೆಡ್‌ಗಾರ್ಡ್‌ಗಳ ಅತ್ಯಾಚಾರದಿಂದಾಗಿ ಚೀಣಾದಲ್ಲಿ ದೈನಂದಿನ ಜೀವನ ಪ್ರಕ್ಷುಬ್ಧಗೊಂಡಿವೆ. ಪರಸ್ಪರ ಭಯ, ಭೀತಿ, ಸಂಶಯ ಹೆಚ್ಚುತ್ತಾ ನಡೆದಿವೆ. ಚೀಣಾದ ಜನಸಾಮಾನ್ಯರು ವಿವೇಚನೆಗೊಂಡಿದ್ದಾರೆ. ಮಾವೋ ಅವರ ರೆಡ್‌ಗಾರ್ಡ್‌ಗಳು ಯಾವ ಕ್ಷಣ ಯಾರ ಮೇಲೆ ಧಾಳಿ ಮಾಡುವರು ಎಂಬುದು ತಿಳಿಯದಂತಾಗಿದೆ. ಸಾರ್ವಜನಿಕರ ಕ್ರೋಧವನ್ನು ಕೆರಳಿಸುವುದು, ತಮ್ಮ ತತ್ವಗಳಿಗೆ ಅನುಮೋದನೆ ಪಡೆಯಲು ಮಾವೋ ಅನುಸರಿಸುತ್ತಿರುವ ಒಂದು ವಿಧಾನವಾಗಿದೆ. ಚೀಣಾದಲ್ಲಿ ತತ್ವ ಪ್ರಚಾರದ ಹೆಸರಿನಲ್ಲಿ ಈಗ ನಡೆದಂತೆ ಹಿಂಸಾಕೃತ್ಯಗಳು ಮೊದಲು ಎಂದೂ ನಡೆದಿರಲಿಲ್ಲ.

ಎಂದಿನಂತೆ ಈಗಲೂ ಮಾವೋತ್ಸೆ—ತುಂಗರು ಚೀಣಾದಲ್ಲಿ ಉನ್ನತ ಸ್ಥಾನದಲ್ಲಿದ್ದಾರೆ. ಆದರೆ ಅವರ ಸಂಗಡಿಗರ ಸ್ಥಾನಮಾನಗಳಲ್ಲಿ ಮಾತ್ರ ಬದಲಾವಣೆಯಾಗುತ್ತಿದೆ. ಲಿಯು ಶಾವೊ ಚಿ ಚೀಣಾದಲ್ಲಿ ಈ ವರೆಗೆ ಎರಡನೆಯ ನಾಯಕರಾಗಿದ್ದರು. ಈಗ ಅವರ ಹೆಸರು ಮೊದಲಿನಂತೆ ಕೇಳಿಬರುತ್ತಿಲ್ಲ. ಪೆಂಗ್‌ಚೇನ್ ಅವರು ಮಾವೋತ್ಸೆ—ತುಂಗರ ಸಹಾನುಭೂತಿಯನ್ನು ಕಳೆದುಕೊಂಡಿದ್ದಾರೆ. ಇದೇ ರೀತಿ ಹಿರಿಯ ವ್ಯಕ್ತಿಗಳಾದ ಚೆನ್—ಯಿ ಕ್ಸಿಯೊನ್ ಫಿಯನ್ ಮತ್ತು ಪೊ ಯಿ ಪೋ ಅವರ ಸ್ಥಾನಮಾನಗಳಲ್ಲಿ ವ್ಯತ್ಯಾಸವಾಗಿದೆ.

ಈಗ ಲಿನ್ ಪಿಯಾವೋ ಅವರು ಚೀಣಾದ ಎರಡನೆಯ ಬಲಿಷ್ಠ ವ್ಯಕ್ತಿಯಾಗಿದ್ದಾರೆ. ಚೀಣಾದ ರಾಜಕೀಯ ಕ್ಷೇತ್ರದಲ್ಲಿ ಹೊಸ ಹೊಸ ವ್ಯಕ್ತಿಗಳು ಬೆಳಕಿಗೆ ಬರ ತೊಡಗಿದ್ದಾರೆ. ತಾವೋ ಚು, ಕಾಂಗ್ ಶೆಂಗ್ ಮತ್ತು ಚನ್‌ಪೋಟ ಇವರೇ ಇಂತಹ ವ್ಯಕ್ತಿಗಳಲ್ಲಿ ಮುಖ್ಯರಾಗಿದ್ದಾರೆ. ಈ ಹೊಸ ಯುವಕರು ಹಳೆಯ ರಾಜಕಾರಣಿಗಳನ್ನು ಮೂಲೆಗೊತ್ತಿ, ಮುಂದೆ ಬಂದಿದ್ದಾರೆ. ಅಧಿಕಾರಕ್ಕಾಗಿ ಚೀಣಾದಲ್ಲಿ ನಡೆದಿರುವ ಕಚ್ಚಾಟದಲ್ಲಿ ಚಾಎನ್‌ಲೈ ಅವರು ಮಾತ್ರ ಮೊದಲಿನಂತೆ ತಮ್ಮ ಗೌರವವನ್ನು ಉಳಿಸಿಕೊಂಡು ಬಂದಿದ್ದಾರೆ. ಚೀಣಾದಲ್ಲಿ ನಡೆದಿರುವ ಬದಲಾವಣೆಗಳು ಅವರ ವ್ಯಕ್ತಿತ್ವಕ್ಕೆ ಹಾಗೂ ಸ್ಥಾನಮಾನಕ್ಕೆ ಈ ವರೆಗೆ ಯಾವುದೇ ಚ್ಯುತಿಯನ್ನು ತಂದಿಲ್ಲ.

ಚೀಣಾದ ಇಂದಿನ ನಾಯಕರಿಗೆ ತಮ್ಮ ಗುರಿ ಸಾಧನೆಗೆ ಹೊಸ ಮಾಧ್ಯಮವೊಂದು ಬೇಕಾಗಿದೆ. ಜನ ಸಾಮಾನ್ಯರ ಮೇಲೆ ತಮ್ಮ ಹತೋಟಿಯನ್ನು ಇನ್ನಷ್ಟು ಬಿಗಿಗೊಳಿಸಲು ವಿರೋಧವನ್ನು ಎದುರಿಸಲು ಮತ್ತು ಕಾರ್ಯನೀತಿಗಳನ್ನು ನಿರಾಂತಕವಾಗಿ ಅನುಷ್ಠಾನಕ್ಕೆ ತರಲು ಅವರು ಈ ಹೊಸ ಮಾಧ್ಯಮದ ನಿರ್ಮಾಣಕ್ಕೆ ಯತ್ನಿಸುತ್ತಿದ್ದಾರೆ.

ಸ್ಥೂಲವಾಗಿ ಹೇಳುವುದಾದರೆ, ಚೀಣಾದ ಇಂದಿನ ಕಮ್ಯುನಿಷ್ಟ ಪಕ್ಷವು ಅಲ್ಲಿನ ಗಣ್ಯವ್ಯಕ್ತಿಗಳಿಗೆ ಸಂಮತವೆನಿಸಿಲ್ಲ. ಪಕ್ಷದಲ್ಲಿ ಭಾರಿ ಒಡಕುಗಳು ಕಂಡು ಬಂದಿವೆ. ವೈಯಕ್ತಿಕ ಮತ್ತು ತಾತ್ವಿಕ ಘರ್ಷಣೆಗಳಿಂದ ಪಕ್ಷವು ದುರ್ಬಲವಾಗುತ್ತಿದೆ. ಚೀಣಾದ ಈ ಹೊಸ ಗಣ್ಯವ್ಯಕ್ತಿಗಳಿಗೆ ಚೀಣಾದ ಜನತೆ ಎಷ್ಟು ಮಟ್ಟಿಗೆ ನಿಷ್ಠರಾಗಿದ್ದಾರೆ ಎಂಬುದು ಸಂಶಯಾತ್ಮಕವಾಗಿದೆ. ಚೀಣಿ ನಾಯಕರು ತಮಗೆ ಬೇಡವಾದವರನ್ನು ಮೂಲೆಗುಂಪು ಮಾಡಲು ನಡೆಸಿರುವ 'ಶುದ್ಧಿಕರಣದ' ಜನಪ್ರಿಯತೆಯೂ ಸಂಶಯಾತ್ಮಕವಾಗಿದೆ. ಹೊಸ ವಿಚಾರ ಸರಣಿಯಲ್ಲಿ ಚೀಣಿಯರ ವಿಶ್ವಾಸ ಅಷ್ಟೇ ಅಸ್ಪಷ್ಟವಾಗಿದೆ. ಮಾವೋ ಪರವಾದ ನಾಯಕರು ಪೀಕಿಂಗ್‌ನಲ್ಲಿ ಕಮ್ಯುನಿಸ್ಟ ಪಕ್ಷದ ಕೇಂದ್ರದ ಮೇಲೆ ಬಲವಾದ ಹತೋಟಿಯನ್ನು ಪಡೆದಿದ್ದಾರೆ. ಆದರೆ ಚೀಣಾದಲ್ಲಿ ಈವರೆಗೂ ಅಧಿಕಾರದಲ್ಲಿದ್ದ, ಈಗ ಪದಚ್ಯುತರಾಗಿರುವ ಚೀಣಿ ನಾಯಕರು ಕಮ್ಯುನಿಸ್ಟ ಪಕ್ಷದ ಕೆಳಮಟ್ಟದ ಸಂಘಟನೆಯಲ್ಲಿ ಹೆಚ್ಚಿನ ಪ್ರಭಾವವನ್ನು ಹೊಂದಿದ್ದಾರೆ.

ಮಾವೋ ತ್ಸೆ-ತುಂಗ್ ಮತ್ತು ಅವರ ಸುತ್ತುಮುತ್ತಲು ಇರುವ ಗಣ್ಯ ವ್ಯಕ್ತಿಗಳು ಚೀಣಾದ ಮೇಲೆ ತಮ್ಮ ಹತೋಟಿಯನ್ನು ಬಲಗೊಳಿಸಲು ಹೊಸ ಸಂಸ್ಥೆಯೊಂದನ್ನು ಸ್ಥಾಪಿಸಲು ನಿರ್ಧರಿಸಿದರು. ಪಕ್ಷದಲ್ಲಿನ ವಿರೋಧಿಗಳನ್ನು ಮತ್ತು ಶ್ರದ್ಧಾವಂತರಲ್ಲದ, ಪಕ್ಷದ ಕಾರ್ಯಕರ್ತರನ್ನು ಹೇಳಹೆಸರಿಲ್ಲದಂತೆ ಮಾಡಲು ರೆಡ್‌ಗಾರ್ಡ್ ದಳವನ್ನು ಸ್ಥಾಪಿಸಿದರು.

ಚೀಣಾದಲ್ಲಿ ಈಗ ಆರಂಭವಾಗಿರುವ ಕಾರ್ಮಿಕರ ಸಂಸ್ಕೃತಿಕ ಕ್ರಾಂತಿಗೆ ಕಾರ್ಮಿಕರಾಗಲಿ, ಅಥವಾ ಕಮ್ಯೂನಿಸ್ಟ ಪಕ್ಷದವರಾಗಲಿ ಯಾರೂ ನಾಯಕತ್ವ ವಹಿಸಿಲ್ಲವೆಂಬುದು ಗಮನಾರ್ಹ. ಚೀಣಿ ಯುವಕರು ಮತ್ತು ಸೇನೆ, ಈ ಚಳುವಳಿಗೆ ಸೂತ್ರಧಾರರು.

ಚೀಣಾದ ಇಂದಿನ ಗಣ್ಯವ್ಯಕ್ತಿಗಳು ಪಕ್ಷದ ಮೇಲೆ ಸಂಪೂರ್ಣ ಹತೋಟಿಯನ್ನು ಪಡೆದ ಬಳಿಕ ಪಕ್ಷವೇ ಸರ್ವ ಶ್ರೇಷ್ಠವೆಂದು ಸಾರುವ ಸಂಭವವಿದೆ. ಆದರೆ ಈಗ ಚೀಣಾದಲ್ಲಿ ಕಮ್ಯೂನಿಸ್ಟ ಪಕ್ಷ ಹಿನ್ನೆಲೆಯಲ್ಲಿದೆ. ವಾಸ್ತವವಾಗಿ ಅದು ಟೀಕೆಗೆ ಗುರಿಯಾಗಿದೆ. ರೆಡ್‌ಗಾರ್ಡ್‌ಗಳು ಪಕ್ಷದಲ್ಲಿ ಮಾವೋ ಅವರಿಗೆ ನಿಷ್ಠರಾಗಿರದ ಕಾರ್ಯಕರ್ತರ ಮೇಲೆ ಈಗ ಹರಿಹಾಯುತ್ತಿದ್ದಾರೆ.

ಚೀನಾದಲ್ಲಿ ಇಂದು ನಾಯಕತ್ವದ ವಿವಿಧ ಅಂಶಗಳಲ್ಲಿ ಮೋಸ ವಂಚನೆಗಳೇ ಪ್ರಧಾನವಾಗಿರುವ ಹೋರಾಟ ನಡೆದಿರುವುದು. ಇದು ಸೂಚಿಸುತ್ತಿದೆ. ಅಧಿಕಾರದಲ್ಲಿದ್ದವರಿಂದ ತುಳಿಯಲ್ಪಟ್ಟವರು, ಒಟ್ಟಾಗಿ ವಿರೋಧಿಗಳನ್ನು ಸಂಘಟಿಸುತ್ತಿದ್ದಾರೆ. ಮಾವೋ ಅವರು, ಚೀಣಾದ ರಂಗಸ್ಥಳದಿಂದ ಮರೆಯಾದ ಬಳಿಕ ಚೀಣಾದ ಇಂದಿನ ಗಣ್ಯರ ಸಮೂಹವು ಹೊಸ ವಿರೋಧವನ್ನು ಎದುರಿಸಲು ಸಿದ್ಧವಾಗಿರಬೇಕಾಗುತ್ತದೆ.

ಮಾವೋ ಪಂಥದ ನಾಯಕತ್ವವು ರೆಡ್‌ಗಾರ್ಡ್ಸ್‌ಗಳನ್ನು ಇನ್ನೊಂದು ಉದ್ದೇಶಕ್ಕಾಗಿ ಬಳಸಿಕೊಳ್ಳುತ್ತಿದೆ. ಈ ಚಳುವಳಿಯು ಅಂತಾರಾಷ್ಟ್ರೀಯ ಕಾರಣಕ್ಕಾಗಿ. ಸೋವಿಯತ್ ನಾಯಕರನ್ನು ಮೂದಲಿಸುವುದು ಮೊದಲನೆಯ ಉದ್ದೇಶವಾಗಿದ್ದರೆ, ಮಾವೋ ಪಂಥ ಯಾರೊಂದಿಗೂ ಸಂಧಾನಕ್ಕೆ ಸಿದ್ಧವಿಲ್ಲವೆಂದು ಇಡಿ ಜಗತ್ತಿಗೇ ಮುನ್ನೆಚ್ಚರಿಕೆ ಕೊಡುವುದು ಎರಡನೆಯ ಉದ್ದೇಶವಾಗಿದೆ.

ಸೋವಿಯತ್ ಜನತೆಗೆ ಚೀಣಿಯರ ಈ ಚಳುವಳಿಯ ಅಂತರಂಗ ತಿಳಿದಿದೆ. ಚೀಣಾದ ಕಮ್ಯೂನಿಸ್ಟ ಪಕ್ಷದ ಕೇಂದ್ರ ಸಮಿತಿಯು ತನ್ನ ಇತ್ತೀಚಿನ ನಿರ್ಣಯದಲ್ಲಿ, ಸೋವಿಯತ್ ನಾಯಕತ್ವದ ವಿರುದ್ಧ ನಿರಂತರ ಹೋರಾಟ ನಡೆಸಲಾಗುವುದೆಂದು ಸ್ಪಷ್ಟಗೊಳಿಸಿದೆ. ಮಾವೋ ಅವರು ಬದುಕಿರುವವರೆಗೆ, ಮಾಸ್ಕೋದೊಂದಿಗೆ ಚೀಣೀಯರು ಸಂಧಾನಕ್ಕಾಗಿ ಮುಂದೆ ಬರುವ ಸಾಧ್ಯತೆಯೇ ಇಲ್ಲ.

ಚೀಣಿಯರಲ್ಲಿ ಕ್ರೆಮ್ಲಿನ್ ವಿರೋಧಿ ಭಾವನೆಗಳನ್ನು ಬಡಿದೆಬ್ಬಿಸಲು ಮಾವೋ ಪ್ರಭುತ್ವವು ರೆಡ್‌ಗಾರ್ಡ್ಸ್‌ಗಳನ್ನು ಬಳಸಿಕೊಳ್ಳುತ್ತಿದೆ. ಚೀಣಾದ ಜನ ಸಮೂಹದ ಉದ್ವೇಗ ತೀವ್ರಗೊಂಡಾಗ, ಚೀಣಾ ಮತ್ತು ಸೋವಿಯತ್ ರಷ್ಯಾ ವಿವಾದ ತೀವ್ರಗೊಳ್ಳುತ್ತವೆ. ಮಾಸ್ಕೋ ಮತ್ತು ಪೀಕಿಂಗ್ ನಡುವಣ ಘರ್ಷಣೆಯನ್ನು ಹಾಗೂ ಪ್ರಕ್ಷುಬ್ಧತೆಯನ್ನು ಕಡಿಮೆ ಮಾಡುವುದು ಸಾಧ್ಯವಾಗಲಾರದು. ಚೀಣೀ ನಾಯಕರಿಗೆ ಬೇಕಾಗಿರುವುದಾದರೂ ಇದೇ.

ಚೀಣಾ ಸೋವಿಯತ್ ರಷ್ಯಾದವಿರುದ್ಧ ನಿರಂತರ ಹೋರಾಟ ನಡೆಸಬೇಕೆಂದೂ, ಸಂಧಾನಕ್ಕೆ ಎಡೆಕೊಡಬಾರದೆಂದೂ ಚೀ

(ಪತ್ತನೇ ಪುಟ ನೋಡಿರಿ)

ಸಿಂಡಿಕೇಟ್ ಬ್ಯಾಂಕು

ತನ್ನ ಹೊಸ ಶಾಖೆಯೊಂದನ್ನು
ಈ ಕೆಳಗಿನ ಸ್ಥಳದಲ್ಲಿ ತೆರೆದಿದೆಯೆಂದು ತಿಳಿಸಲು
ಹರ್ಷ ಪಡುತ್ತದೆ.

ನವದೆಹಲಿ | ಸುಪರ್ ಬಜಾರ್, ಕನಾಟ್ ಸರ್ಕಸ್, ನವದೆಹಲಿ—1

ಬ್ಯಾಂಕು ಸದ್ಯದಲ್ಲಿಯೇ ತೆರೆಯಲಿರುವ ಶಾಖೆಗಳು:

ಪೂನಾ | 712, ಖಾರೆ ವಾಡೆ ನಾರಾಯಣ ಪೇಟ್, ಲಕ್ಷ್ಮೀ ರೋಡ್ ಪೂನಾ—2

ಯಾಡಿಕಿ | 8/91, ಮೈನ್ ರೋಡ್, ಯಾಡಿಕಿ (ಅನಂತಪುರ ಜಿಲ್ಲೆ)

FAITHFUL FRIENDLY SB

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್
ರಿಜಿಸ್ಟರ್ಡ್ ಆಫೀಸು: ಮಣಿಪಾಲ, ಮೈಸೂರು ರಾಜ್ಯ.

ಕವಲು ದಾರಿ—ಕೆಂಪು ದೀಪ

ಮಹಾ ನಿರ್ಮಾಣದ ಮೇಲೆ ಗೋರಿ

ಎಲ್ಲೆಲ್ಲಿಯೂ ಪ್ರತಿಧ್ವನಿಸುತ್ತಿರುವ ಒಂದು ಪ್ರಶ್ನೆ—

ವಿದ್ಯಾರ್ಥಿಗಳ ಅಶಿಸ್ತು—ಅವರ ಗಲಭೆ—ಸತ್ಯಾಗ್ರಹ—ದುರಾಗ್ರಹ—ಗೋಲಿಬಾರು—ಗಾಯ—ಸಾವು.

ಇದೇಕೆ ಹೀಗೆ?

ಭಾವಿ ಜನಾಂಗವೆಂಬ ಬಿರುದು ಹೊತ್ತವರು ಹೀಗೆಲ್ಲಾ ವರ್ತಿಸಿದರೆ, ಭವಿಷ್ಯದ ಮಹೋನ್ನತಿಗಾಗಿಯೇ ಜೀವಿಸುತ್ತಿರುವ ಬಡ-ಭಾರತೀಯ ಕೇಳಿಕೊಳ್ಳಬೇಕು—ತಾನು ಯಾಕೆ ಬದುಕಬೇಕು?

ರಾಣಿ ಕಾಲವೇ ಒಳ್ಳೆಯದಿತ್ತು—ಈ ಸ್ವತಂತ್ರ ಬಂದ ಮೇಲೆ ಇದ್ದ ಸುಖಾನೂ ಅಳಿದು ಹೋಯ್ತು ಎಂದು ಗೊಣಗುವವರೂ ಇದ್ದಾರೆ. ಇದೇ ಅಪಸ್ವರವನ್ನು ಮುಗಿಲೆತ್ತರಕ್ಕೊಯ್ವ ವಿರೋಧಿ ಪಕ್ಷಗಳಿಗೆ ನಮ್ಮಲ್ಲಿ ಕೊರತೆಯೇನಿದೆ?

ಬಡ ಭಾರತೀಯ ಕರ್ಮಫಲದಲ್ಲಿ ವಿಶ್ವಾಸವಿಡುವವ. ಹಿಂದಿನ ಜನ್ಮದಲ್ಲಿ ಮಾಡಿದ ಸತ್—ದುಷ್ ಕಾರ್ಯಗಳಿಗನುವಾಗಿ ಇಂದಿನ ಜನ್ಮದಲ್ಲಿ ಆತ ಸುಖವನ್ನೋ ದುಃಖವನ್ನೋ ಉಣ್ಣುತ್ತಾನೆ.

ಪಡೆವಷ್ಟಲ್ಲದೆ ಬರ್ಕುವೇ ಎಂದು ಕೇಳಿದ್ದಾನೆ ಕವಿಪುಂಗವನೊಬ್ಬ.

ವಿದ್ಯಾರ್ಥಿಗಳು ತಮ್ಮ ಶಕ್ತಿಯನ್ನು ಸದುಪಯೋಗಗೊಳಿಸುವ ಅವಕಾಶಗಳು ಹೆಚ್ಚಬೇಕು—

ಇವಿಲ್ಲದೇನೇ ಅದು ದುರುಪಯೋಗವಾಗುತ್ತಿದೆಯೆನ್ನುವವರ ವಾದವಿದು.

ನಿಜ. ವಿದ್ಯಾರ್ಥಿಗಳು ಪರೀಕ್ಷೆಗಳಲ್ಲಿ ನಾಪಾಸಾಗುತ್ತಿರುವ ಪ್ರತಿಶತವನ್ನು ಗಣನೆಗೆ ತಂದರೆ, ಅವರಲ್ಲಿ ಮಾನಸಿಕ ಶಕ್ತಿಯ ಅಭಾವವೇ ಕಂಡು ಬರುತ್ತದೆ.

ಇನ್ನು ದೈಹಿಕ ಶಕ್ತಿ—

ಇದೇ ಮುಳುವಿಗೆ ಕಾರಣ. ದುರಾಲೋಚನೆಗೆ ಮೂಲ. ಪುಸ್ತಕದ ವಿದ್ಯೆಯನ್ನು ಪಡೆಯಲಾರದವರಿಗೆ ಅದನ್ನು ಕೊಡುವ ಸಾಧನೆಯೇಕೆ? ದೈಹಿಕ ಶಿಕ್ಷಣವನ್ನೇ ಕೊಡಬಹುದಲ್ಲ? ವಿಶ್ವವಿದ್ಯಾಲಯಗಳು ಪ್ರವೇಶಕ್ಕೆ ಹಾಕಿದ ಅಂಕಮಿತಿ, ವಯೋಮಿತಿ—ಯಾವುವೂ ಯಾರಿಗೂ ಮೆಚ್ಚಿಕೆಯಾಗುವುದಿಲ್ಲ.

ಎಲ್ಲರೂ ತಮ್ಮ ಮಕ್ಕಳು ಮಾನಸಿಕವಾಗಿ ಬೃಹಸ್ಪತಿಗಳು, ದೈಹಿಕವಾಗಿ ಭೀಮರು ಎಂದೇ ನಂಬುತ್ತಾರೆ.

ವಿಶ್ವವಿದ್ಯಾಲಯದವರಿಗೂ ಇದೇ ಚಿಂತೆ. ಬಲಭೀಮರ ಮುಂದೆ ಬೃಹಸ್ಪತಿಗಳು ವನಸ್ಪತಿಗಳಾಗಿ ಹೋಗುತ್ತಾರಲ್ಲಾ ಅಂತ.

ವಿದ್ಯಾಲಯಕ್ಕೆ ತಾನು ಬಂದ ಮುಖ್ಯ ಉದ್ದೇಶ ವಿದ್ಯಾರ್ಜನೆಯೆಂಬುದನ್ನು ವಿದ್ಯಾರ್ಥಿ ತಿಳಿದಿರಬೇಕು.

ಇದನ್ನು ಮರೆತು ಬಿಟ್ಟರೆ?

ದೇಹಕ್ಕೂ ಕೆಲಸವಿಲ್ಲ, ಮನಸ್ಸಿಗೂ ಇಲ್ಲದಂತಾಯಿತು, ಆರಾಮ ಜೀವನ. ತನ್ನ ಸಂಪೂರ್ಣ ಚಿಂತೆ ಹೊರಲು ಹೊರಗಡೆ ಬೇರೆ ಜನರಿರುವಾಗ ಆತನಿಗಾವುದರ ಚಿಂತೆ?—ಬರಿಯ ಶಕ್ತಿ ಪ್ರದರ್ಶನದ ಚಿಂತೆ ಮಾತ್ರ.

ಆರಾಮ್ ಹರಾಮ್ ಹೈ ಎಂದಿದ್ದರು ಪಂಡಿತ ನೆಹರು.

ಮಾಡು, ಇಲ್ಲವೇ ಮಡಿ ಕರೆ ನೀಡಿದ್ದರು ರಾಷ್ಟ್ರಪಿತ ಗಾಂಧೀಜಿ.

ದುಡಿಯದವನಿಗೆ ತಿನ್ನುವ ಅಧಿಕಾರವಿಲ್ಲ ಎಂದಿದ್ದಾರೆ ವಿನೋಬಾಜಿ.

ನಾವೇನು ಮಾಡುತ್ತೇವೆ?

ಒಲ್ಲದ ಗಂಡನಿಗೆ ಮೊಸರಲ್ಲಿ ಕಲ್ಲು!

ಸಲ್ಲದ ವಿದ್ಯಾರ್ಥಿಗಳು ಬಾಯ್ತುಂಬ ಸೊಲ್ಲು!

ಇದೇ—ಘೋಷಣೆ, ಪ್ರದರ್ಶನ—ಸತ್ಯಾಗ್ರಹ—ದುರಾಗ್ರಹ—ರಾಷ್ಟ್ರ ಘಾತಕ!

ಸಮಸ್ಯೆ ಮಾನವನಿಗೆ ಮೊದಲೇ ಹುಟ್ಟಿರಬೇಕು.

ಪ್ರತಿರಂಗದಲ್ಲೂ ಸಮಸ್ಯೆಗಳಿವೆ. ವಿದ್ಯಾರ್ಥಿಗಳಿಗೂ ಇಲ್ಲವೆನ್ನಲಾಗುವುದಿಲ್ಲ.

ಅವರೂ ಮನುಷ್ಯರು—ನಮ್ಮವರು—ಇದನ್ನೂ ಮರೆಯಲಾಗದು.

ಮಾನವತೆಯ ವ್ಯವಹಾರ ಬೇಕು ಅವರೊಡನೆ. ನಿಜ.

ಆದರೆ?

ದಾನವರಂತಿರುವವರೊಡನೆ ದಾನವೀಯ ವ್ಯವಹಾರವೇ ಬೇಕಾಗುತ್ತದೆ.

ಆದರಿಂದಲೇ ಈ ಎಲ್ಲಾ ಸಮಸ್ಯೆಗಳ ಮೂಲೆಗಳು.

ವಿದ್ಯಾರ್ಥಿಗಳು ಆತ್ಮಶೋಧನೆ ಮಾಡಿಕೊಳ್ಳಬೇಕು, ಎನ್ನುತ್ತಾರೆ ರಾಷ್ಟ್ರಪತಿ ದಾರ್ಶನಿಕ ಡಾ। ರಾಧಾಕೃಷ್ಣನ್.

ವಿದ್ಯಾರ್ಥಿಗಳೊಡನೆ ಪೋಲೀಸರು ವರ್ತಿಸುವಾಗ ಎಚ್ಚರಿರಬೇಕು ಎನ್ನುತ್ತಾರೆ ಪ್ರಧಾನ ಮಂತ್ರಿ ಇಂದಿರಾ ಗಾಂಧಿ.

ಪೋಲೀಸರೂ ವಿದ್ಯಾರ್ಥಿಗಳೂ ಒ

ಮರದ ದಿಮ್ಮಿಯನ್ನು ನೆಗೆದು ಮಕ್ಕಳು ಆಡುತ್ತಿದ್ದಾರೆ.



ಆಟೊ ಟೈಯರ್ ಮತ್ತು ಬ್ಯಾಲನ್ಸ್ ಬಾರ್‌ಗಳಲ್ಲಿ ಆಡುತ್ತಿರುವ ಮಕ್ಕಳು.

ವಾಗಿ ಬೆರೆಯಬೇಕು— ಇದು ಪೋಲೀಸ ಅಧಿಕಾರಿಗಳ ಸಭೆಯ ನಿರ್ಧಾರ.

ವಿಶ್ವವಿದ್ಯಾಲಯಗಳ ಆಡಳಿತೆಯಲ್ಲಿ ಸರಕಾರ ಕೈ ಹಾಕಬಾರದು—ಇದು ಉಪ ಕುಲಪತಿಗಳ ವಾದ.

ಅಧಿಕ ಸ್ವಾಯತ್ತತೆ ಅವುಗಳಿಗೆ ಬೇಕು— ಇದು ತಜ್ಞರ ಅಭಿಪ್ರಾಯ.

ಇವೆಲ್ಲವೂ ಒಂದೊಂದು ದೃಷ್ಟಿಯಿಂದ ಸರಿ.

ರಾಜಕೀಯ ಹಿನ್ನೆಲೆಯೂ ವಿದ್ಯಾರ್ಥಿ ಚಳವಳಿಗೆ ಕಾರಣವೆಂಬುದೂ ನಿಜ.

ಒಂದು ಕಾಲವಿತ್ತು.

ಸೌಕರ್ಯಗಳಿಲ್ಲದೇನೇ ನಮ್ಮಲ್ಲಿ ಮೇಧಾವಿಗಳು ನಿರ್ಮಾಣಗೊಳ್ಳುತಿದ್ದರು— ಪ್ರತಿಕೂಲ ಪರಿಸ್ಥಿತಿಯಲ್ಲೂ ಇಂತಹರು ನಿರ್ಮಿತರಾಗುತಿದ್ದರು. ಇಂದು?

ಸೌಕರ್ಯ ಮಿತಿ ಮೀರಿದೆ. ಏಕೋ ಅರಾಮ ತುಂಬಿ ತುಳುಕಾಡಿದೆ.— ನಾಗರಿಕತೆಯ ಹೆಸರಲ್ಲಿ ಅಸಭ್ಯತೆ ಬೆಳೆಯುತ್ತಿದೆ. ಅರ್ಥ ಅನರ್ಥವಾಗುತ್ತಿದೆ; ವಿದ್ಯೆ ದುರ್ವಿದ್ಯೆಯೆನಿಸುತ್ತಿದೆ; ಜ್ಞಾನ-ಅಜ್ಞಾನ ಅತಿಜ್ಞಾನಗಳಿಂದ ತಕ್ಕರಿಸ ಹತ್ತಿದೆ.

ಮಹಾ ನಿರ್ಮಾಣದ ನಮ್ಮ ಆಶೆಯ ಗೋರಿಯನ್ನು ಇಂದಿನ ವಿದ್ಯಾರ್ಥಿಗಳು ಕಟ್ಟ ತೊಡಗಿದ್ದಾರೆಯೆ ಎನಿಸುತ್ತಿದೆ.

ಇದು ವೈಯಕ್ತಿಕ ಸಮಸ್ಯೆಯಲ್ಲ; ಒಂದು ರಾಷ್ಟ್ರೀಯ ಸಮಸ್ಯೆ—ಇದಕ್ಕಿರುವ ಉತ್ತರ ರಾಷ್ಟ್ರೀಯ ತಳಹದಿಯುದಾದಾಗಿರಬೇಕು.

ಮಳಲು ಕಸಗಳನ್ನು ಗುಡಿಸಿ ಕ್ರೀಡಾಂಗಣವನ್ನು ಸ್ವಚ್ಛವಾಗಿಡುತ್ತಿದ್ದಾರೆ.

ನೀವೂ ಪ್ರಯತ್ನಿಸಿ

ನಾನು ಸಿಗರೇಟು ಬಿಟ್ಟುಬಿಟ್ಟೆ

ನಾನು ಸಿಗರೇಟು ಬಿಟ್ಟುಬಿಟ್ಟಿದ್ದೇನೆಂದು ಎಲ್ಲೆಲ್ಲೂ ಸುದ್ದಿ.

ನಿಜ ಹೇಳಬೇಕಿದ್ದರೆ ಈ ವದಂತಿಗಳನ್ನು ಆರಂಭಿಸಿದವನು ನಾನೇ. ನನ್ನ ಮಿತ್ರರೂ, ಆಪ್ತರೂ ಏನು ಹೇಳುತ್ತಾರೆಂಬುದನ್ನು ನಾನು ತಿಳಿಯ ಬಯಸಿದ್ದೆ.

ಈ ಕೆಟ್ಟ ಚಾಳಿಯನ್ನು ಎಂದೆಂದೂ ಬಿಟ್ಟುಬಿಡುವ ದೃಢನಿರ್ಧಾರವನ್ನೂ ಮಾಡಿಯೆ ಬಿಟ್ಟಿದ್ದೆ.

ಇದಕ್ಕೆ ಬೆಳಗಿನ ಕಾಲವೇ ಉತ್ತಮವೆಂಬುದು ನನಗೆ ಗೊತ್ತಿತ್ತು. ನಾನು ಮಾಡಿದ್ದೂ ಹಾಗೆಯೇ. ಮಲಗುವ ಮುನ್ನ ಊಟ ಒಂದಾದನಂತರ ಒಂದು ಮೂರು ಸಿಗರೇಟುಗಳನ್ನು ಒಂದೇ ಬಾರಿಗೆ ಸೇದಿದೆ. ಯಾಕೆಂದರೆ ಇವೇ ಕೊನೆಯವಲ್ಲವೆ?

ಬೆಳಗಾದಾಗ ಎದ್ದಾಗ ನನಗರಿವಿಲ್ಲದೆಯೆ ಸಿಗರೇಟ್ ಪೆಟ್ಟಿಗೆಗೆ ಕೈ ಚಾಚಿದೆ ನನ ಹಾಗಿ ಜೋರಿನಿಂದ ಮತ್ತೆ ಕೈ ಹಿಂದೆಳೆದು ಕೊಂಡೆ.

ಅಸಮಾಧಾನದಿಂದ ಕಿಟಕಿ ಇಣಕಿ ನೋಡಿದೆ. ಸೇದುವ ಆಶೆ ಬೆಳೆಯುತ್ತಲೇ ಇತ್ತು. ಇನ್ನೂ ನಸುಕು ಹರಿದಿರಲಿಲ್ಲ, ರಸ್ತೆಯಲ್ಲಿ ಜನಕಾಣಿಸುತ್ತಿದ್ದಿಲ್ಲ.

ನನ್ನ ಹೆಂಡತಿ ಎಚ್ಚರಾದಳು.

"ಏನು ಕಂಭದಂತೆ ನಿಂತಿದ್ದೀರಾ" ಆಕೆ ಅರ್ಭಟಿಸಿದಳು.

"ಆಹಾ, ಸಾಕು ಸಾಕು, ಏನು ಮಾತದು" ಪ್ರತಿಯಾಗಿ ನಾನೂ ಅರ್ಭಟಿಸಿದೆ; "ನಾನು ಸಿಗರೇಟು ಬಿಟ್ಟಬಿಟ್ಟಿದ್ದೇನೆ, ಗೊತ್ತೊ?"

"ಶುದ್ಧ ಹಸೀ ಸುಳ್ಳು. ಇನ್ನಾರಿಗಾದರೂ ಹೇಳಿ" ಎಂದಳು ಆಕೆ.

'ಓ, ನನ್ನ ಹೆಂಡತಿ ಕೂಡ ನಂಬುವುದಿಲ್ಲ. ನಾನು ಎಷ್ಟೊಂದು ಚ್ಯತಸ್ತ್ರಪ್ರವರ್ಣನಾಗಿ...ಎಂದು ನನಗೆ ಸೋಜಿಗವೂ ವಿಷಾದವೂ ಉಂಟಾಯಿತು.

ಇನ್ನೂ ಬೇಸರವೆನಿಸತೊಡಗಿತು. ಸಿಗರೇಟ್ ಪೆಟ್ಟಿಗೆಯನ್ನು ಕಿತ್ತುಕೊಂಡು ಅಂಗಳಕ್ಕೆ ಬಂದೆ. ಇದ್ದಕ್ಕಿದ್ದ ಹಾಗೆ ಮಧ್ಯದಲ್ಲೇ ಸಿಗರೇಟು ಬಿಟ್ಟುಬಿಡುವುದು ಒಳ್ಳೆಯದಲ್ಲ ಎಂದು ನಮ್ಮ ಪಕ್ಕದವರು ಹೇಳಿದ ಮಾತು ನೆನಪಾಯಿತು. ಅದರಿಂದ ನರಮಂಡಲದ ಮೇಲೆ ಅಹಿತಕರ ಪರಿಣಾಮ ಉಂಟಾಗುತ್ತದೆ. ಅದನ್ನು ತಪ್ಪಿಸಲೆಂದು ಒಂದು ಸಿಗರೇಟು ಸೇದಿದೆ— ಅರ್ಥಾತ್ ಖುಷಿಯಿಂದೇನಲ್ಲ.

ನೀವು ಏನೆ ಹೇಳಿ, ಸಿಗರೇಟು ಸೇದದವರೇ ಅದೃಷ್ಟವಂತರು. ನನ್ನ ನಿರ್ಧಾರದ ಬಗ್ಗೆ ನನಗೇನೂ ವಿಷಾದವೆನಿಸಿಲ್ಲ. ಅ

(ಹದಿಮೂರನೇ ಪುಟ ನೋಡಿರಿ)

ವಿದ್ಯಾರ್ಥಿಗಳಲ್ಲಿ ದೇಶಪ್ರೇಮ, ಕರ್ತವ್ಯ ಜ್ಞಾನ, ಜೀವನ ಸಾರ್ಥಕ್ಯದ ಬಗ್ಗೆ ಅರಿವೆ ಮೂಡಬೇಕು; ಇದಕ್ಕಾಗಿಯೇ ತಮ್ಮ ದೈಹಿಕ ಮತ್ತು ಮಾನಸಿಕ ಶಕ್ತಿಗಳ ಉಪಯೋಗ ಮಾಡುವಂತಹ ಮನೋವೃತ್ತಿ ಬೆಳೆಯಬೇಕು.

ವಿದ್ಯಾರ್ಥಿ ವಿದ್ಯಾರ್ಥಿ; ಆತನು ಶಿಕ್ಷಾರ್ಥಿಯೂ ಹೌದು. ವಿದ್ಯಾಭ್ಯಾಸದ ಪರ್ಯಾಯ ಪಾಚಕ ಶಿಕ್ಷಾ. ಮಾನಸಿಕ ಶಿಕ್ಷೆ—ದೈಹಿಕ ಶಿಕ್ಷೆ—ಅಥವಾ ತಪಸ್ಸು. ಇದನರಿಯದ ತನಕ, ಇದನಳವಡಿಸದ ತನಕ ಶಿಸ್ತು ಅತಿಸ್ತಾಗಿಯೇ ಉಳಿಯುವುದು.



ಮೊದಲು ಹೊಲಸುಗೇರಿಯಾಗಿದ್ದುದು ಇಂದು ಮಕ್ಕಳ ಆಟದ ಸ್ಥಳವಾಗಿದೆ.

ಚಾರುಚರಿಯನ

ನಮ್ಮ ಪೆಟ್ಟಿಗೆಯೇ ಭರ್ತಿ

ಮಹಾಚುನಾವಣೆಗೆ ಇನ್ನು ಹದಿನಾರೇ ವಾರ. ಎಚ್ಚೆತ್ತ ರಾಷ್ಟ್ರಗಳಲ್ಲಿ ಈ ವೇಳೆಗಾಗಲೇ ಚುನಾವಣೆಯ ಕಾವು ಏರಬೇಕಿತ್ತು.

ಆದರೆ ಭಾರತ ಒಂದು ದೀರ್ಘ ನಿದ್ರೆಯಿಂದ ಎದ್ದ ರಾಷ್ಟ್ರ. ಇನ್ನೂ ಮಂಪರು ಹೋಗಿಲ್ಲ.

ಭಾರತದ ಪಾಡೇ ಹಾಗಾದರೆ, ಮೈಸೂರು ಇನ್ನೂ ದೊಡ್ಡ ನಿದ್ರೆ ಮಾಡಿದ ರಾಜ್ಯ. ಬಹು ಕಷ್ಟ ಇಲ್ಲಿ ಬಿಸಿ ಏರುವುದು.

ನಾಡಿನ ಹಿರಿಯ ರಾಜಕೀಯ ಪಕ್ಷವಾಗಿ, ಸ್ವತಂತ್ರ ಭಾರತದ ಎಲ್ಲೆಡೆಯಲ್ಲಿ ಆಡಳಿತೆಯ ಸೂತ್ರ ಹಿಡಿದ ಕಾಂಗ್ರೆಸ್ಸಿನ ನೀತಿಯೇ ಎಲ್ಲ ರಾಜಕೀಯ ಪಕ್ಷಗಳ ನೀತಿಯೂ ಆಗಿದೆ.

ಅಂದರೆ ವಿರೋಧ ಪಕ್ಷಗಳು ಅಥವಾ ಕಾಂಗ್ರೆಸ್ಸೇತರ ಶಕ್ತಿಗಳು ತಮ್ಮದೇ ಆದ ನಿಲುವು ತಾಳುವುದು ಬಹು ಅಪರೂಪ. ಯಾವುದಾದರೂ ಸಂದರ್ಭದಲ್ಲಿ ಕಾಂಗ್ರೆಸ್ ಏನಾದರೂ ನಿರ್ಣಯ, ನಿರ್ಧಾರ ಕೈಗೊಂಡರೆ ಅದಕ್ಕೆ ಪ್ರತಿಕ್ರಿಯೆ ವ್ಯಕ್ತಪಡಿಸಿದರೆ ಆಯ್ತು ವಿರೋಧ ಪಕ್ಷಗಳ ಕೆಲಸ.

ಇದು ಹಾಸ್ಯಾಸ್ಪದ ಪರಿಸ್ಥಿತಿ. ಆದರೆ ನಿಜ ಪರಿಸ್ಥಿತಿ.

ಚುನಾವಣಾ ಕಣದಲ್ಲೂ ಅಷ್ಟೆ.

ಕಾಂಗ್ರೆಸ್ ರಾಜ್ಯ ಮಟ್ಟದಲ್ಲಿ.... ಜಿಲ್ಲಾ ಮಟ್ಟದಲ್ಲಿ ತನ್ನ ಕೆಲಸ ಆರಂಭಿಸಿದೆ.

ಅಕ್ಟೋಬರ್ ಕೊನೆಯ ವೇಳೆಗೆ ಪ್ರದೇಶ ಸಮಿತಿಯ ಶಿಫಾರಸು, ಅಯ್ಕೆ ಡೆಹಲಿಗೆ ಹೋಗಲೇ ಬೇಕು.

ದಿಲ್ಲಿಯಲ್ಲೇ ಅಂತಿಮ ಆಯ್ಕೆ. ಕೆಲವರ ಪಾಲಿಗೆ ಅದು ಶ್ರೀರಕ್ಷೆ. ಇನ್ನು ಹಲವಂಗೆ ಅಭಿಶಾಪ.

ದಾವಣಗೆರೆಜಿಲ್ಲಾದ ಪ್ರದೇಶ ಚುನಾವಣಾ ಸಮಿತಿಯಲ್ಲಿ ಸಚಿವ ಸಂಪುಟದ ಒಂದು ಉಪಸಮಿತಿಯನ್ನುವಷ್ಟು ಸಚಿವರು ಇರುವುದು, ಅವರೆಲ್ಲರೂ ಒಂದೇ ಗುಂಪು, ನಾವೇಕೆ ಕೈತೋರಿಸಿ ಅವಲಕ್ಷಣ ಅನ್ನಿಸಿಕೊಳ್ಳಬೇಕು? ಅನ್ನುವ ವಾದ ಹೂಡಿ, ಹಳೆಯ ಮೈಸೂರು ಮತ್ತು ಹೈದರಾಬಾದ್, ಕರ್ನಾಟಕದ ಅನೇಕ ಹಿರಿಯ ನಾಯಕರು ಕಾಂಗ್ರೆಸ್ ಟಿಕೆಟ್ ಕೇಳಿಯೇ ಇಲ್ಲ.

ಇದರಿಂದ ಅವರಿಗಲ್ಲದೆ ಬೇರೆ ಯಾರಿಗೂ ನಷ್ಟವಿಲ್ಲವೆನ್ನುವ ಹಾರಿಕೆಯ ಮಾತು ಪ್ರದೇಶ ಕಾಂಗ್ರೆಸ್ ಸಮಿತಿಯ ನಾಯಕರು ಹೇಳಿದರೂ, ಹಳೆಯ ಮೈಸೂರಲ್ಲಂತೂ ಅವರ ಚಿಂತೆಗೆ ಕಾರಣವಾಗಿದೆ.

ಮಹತ್ತರ ಆಸೆ ಆಕಾಂಕ್ಷೆಯಿಂದ ಪ್ರಜಾ ಸೋಷಲಿಸ್ಟ್ ಪಕ್ಷ ಬಿಟ್ಟು ಕಾಂಗ್ರೆಸ್ ಸೇರಿದ ಅತಿರಥ ಮಹಾರಥರಲ್ಲಿ ಶ್ರೀ ಬಿ. ಎಲ್. ಗೌಡ, (ಚಳ್ಳಕೆರೆ) ಅವರನ್ನು ಬಿಟ್ಟರೆ ಬೇರಾರೂ ತಲೆಯೇ ಎತ್ತುವ ಸೂಚನೆ ಇಲ್ಲ.

ಮೈಸೂರು:— ಮಹಾರಾಷ್ಟ್ರಗಡಿ ಕ್ಷೇತ್ರಗಳಲ್ಲಿ ಅರ್ಜಿಯೇ ಬಂದಿಲ್ಲ. ಅಂದರೆ ಸ್ವಲ್ಪ ತಲೆ ತಗ್ಗಿಸಲೇ ಬೇಕಾದ ವಿಷಯ.

ಇಷ್ಟೆಲ್ಲಾ ಇರಲಿ, ಏನೇ ಒಡಕಿರಲಿ... ಚುನಾವಣೆಯಲ್ಲಿ "ನಮ್ಮ ಪೆಟ್ಟಿಗೆಯೇ ಭರ್ತಿ" ಅನ್ನುವ ನಂಬಿಕೆ ಕಾಂಗ್ರೆಸ್ಸಿಗರದು. ಅದು ನಿಜವಿದ್ದರೂ ಇರಬಹುದು; ಉಳಿದವರ ಬಳಿ ಪೆಟ್ಟಿಗೆಯೇ ಇಲ್ಲದಿರುವಾಗ.... ...!

'ವಿಘ್ನ'ಗಳಿಂದ ಪೀಡಿತವಾದ ಬೆಂಗಳೂರು ವಿಶ್ವವಿದ್ಯಾನಿಲಯಕ್ಕೆ 'ವಿನಾಯಕ'ರು ಉಪಕುಲಪತಿಗಳಾಗಿ ನೇಮಕವಾದುದು ಒಂದು ಶುಭಸಂಗತಿಯೇ.

ವಿನಾಯಕ ಕೃಷ್ಣ ಗೋಕಾಕರು ಇದೇ ತಿಂಗಳ ದಿನಾಂಕ ಹತ್ತನೆಯ ಸೋಮವಾರ ತಮ್ಮ ಹೊಸ ಅಧಿಕಾರವನ್ನು ಸ್ವೀಕರಿಸಿದರು.

ಇನ್ನೂ ಶೈಶವಾವಸ್ಥೆಯಲ್ಲಿರುವ ಬೆಂಗಳೂರು ವಿಶ್ವವಿದ್ಯಾನಿಲಯ ಅನೇಕ 'ಬಾಲಗ್ರಹ'ಗಳಿಂದ ಪೀಡಿತವಾಗಿದೆ.

ಎಳೆಯದರಲ್ಲೇ ಮೊದಲ ಉಪಕುಲಪತಿ ಡಾ|| ಬ್ಯಾಲೋಯ ದಿವಂಗತರಾಗಿ ಅದು ಅನಾಥವಾಯಿತು. ತಾತ್ಕಾಲಿಕವಾಗಿ ಉಪಕುಲಪತಿಗಳಾಗಿ ನೇಮಕ ಹೊಂದಿದ್ದ ಇನ್ನೊಬ್ಬರ ಅಧಿಕಾರಾವಧಿಯಲ್ಲಿ ನಡೆದ ಅನೇಕ ಕ್ರಾಂತಿಕಾರಿ ಬದಲಾವಣೆಗಳು ರಿಟ್ ಅರ್ಜಿ, ಚಳುವಳಿಗಳ ಬಳುವಳಿಗೇ ಮಾರ್ಗ ಮಾಡಿಕೊಟ್ಟವು.

ಕಾಲೇಜು ಪ್ರವೇಶಕ್ಕೆ ವಯೋಮಿತಿ ನಿರ್ಣಯ, ಸಂಜೆಕಾಲೇಜು ಅವಧಿಯ ವಿಸ್ತರಣೆ ಬಾಹ್ಯ ಪದವಿಯ ವ್ಯವಸ್ಥೆ— ಇವೇ ಮೊದಲಾದವು ಆ ಕ್ರಾಂತಿಕಾರೀ ಬದಲಾವಣೆಗಳು.

ಹೇಗಿದ್ದರೂ ವಿನಾಯಕರಂಥ ಉನ್ನತ ವ್ಯಕ್ತಿತ್ವದ ಅನುಭವಿಗಳು ಈ ಎಲ್ಲ ಗೊಂದಲಗಳ ಜೇಡರ ಬಲೆಯಿಂದ ವಿಶ್ವವಿದ್ಯಾನಿಲಯವನ್ನು ಬಿಡಿಸಬಲ್ಲರೆಂದು ಆಶಿಸಬಹುದು.

ಹೌದು ವಿನಾಯಕರದು ಉನ್ನತ ವ್ಯಕ್ತಿತ್ವ. ಆರಡಿ ಒಂದಂಗುಲದ ಎತ್ತರದ ಜತೆ, ಉತ್ತಮ ಶಿಕ್ಷಣದ ಹಿನ್ನೆಲೆ, ಸಾಹಿತ್ಯದ ಆಳವಾದ ಅಭ್ಯಾಸದಿಂದ ಬೆಳೆದು ನಿಂದ ವಿಶಾಲ ಹೃದಯ, ನವ್ಯಕಾವ್ಯ ಸೃಷ್ಟಿಸಿ ಹೊಸದನ್ನು ಮಾಡಿ ತೋರುವೆನೆಂಬ ಸಾತ್ವಿಕ ತಳಮಳ —ಇವೆಲ್ಲ ಅವರ ಔನ್ನತ್ಯವನ್ನು ಹೆಚ್ಚಿಸಿದ ಸಂಗತಿಗಳು.

ಬಾಲ್ಯದಲ್ಲಿ ಸವಣೂರು ನವಾಬರ 'ಆಸ್ಥಾನಕವಿ'ಗಳಾಗಿದ್ದ ಗೋಕಾಕರು, ಗಾದೆಯ ಮಾತಿನ "ಕೂಪಮಂಡೂಕ" ವ್ಯಕ್ತಿ ಯವರಲ್ಲ. ಧಾರವಾಡ, ಪುಣೆ, ಆಕ್ಸ್‌ಫರ್ಡ್‌ಗಳಲ್ಲಿ ಕಲಿತು ತಮ್ಮ ಜ್ಞಾನ ಹೆಚ್ಚಿಸಿಕೊಂಡವರು, ತಮ್ಮ ಪ್ರತಿಭೆಯ ಪರಿಚಯವನ್ನು ಆಂಗ್ಲ ಸಾರಸ್ವತ ಲೋಕಕ್ಕೂ ಮಾಡಿ-ಕೊಟ್ಟವರು.

ಅವಿಭಕ್ತ ಮುಂಬೈ ರಾಜ್ಯದ ವೀಸನಗರ, ಕೊಲ್ಹಾಪುರ, ಸಾಂಗ್ಲಿ, ಧಾರವಾಡಗಳಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ ನಿವೃತ್ತರಾದ ಗೋಕಾಕರ ಶಿಕ್ಷಣ ಕ್ಷೇತ್ರದ ಅಪಾರ ಅನುಭವಾಮೃತ ರಾಜಧಾನಿಯ ತರುಣ ತರುಣಿಯರಿಗೆ ಲಭಿಸದೇ ಇರದು.

ಪರಪ್ರಾಂತದಲ್ಲಿ ಸೇವೆ ಸಲ್ಲಿಸಿ, ಪರಕೀಯರ ಹೊಟ್ಟೆಕಿಚ್ಚಿನಲ್ಲಿ ಬೆಂದು ಹದನಾದವರು. ವಿನಾಯಕರು ಆಜೀವನದ ಏಳುಬೀಳು, ಸುಖದುಃಖಗಳ ಅನುಭವದ ಪರಿಪಾಕ ಅವರ "ಸಮರ ಸೇವೇ ಜೀವನ" ವೆಂಬ ಬೃಹತ್ ಕಾದಂಬರಿ.

"ದ್ಯಾವಾ ಪೃಥಿವಿ" ಗೋಕಾಕರಿಗೆ ಚಿರಸ್ಥಾಯಿಯಾದ ಹೆಸರನ್ನೀಯುವ ಕಾವ್ಯ ಸಂಗ್ರಹ. ಬೇಂದ್ರೆಯವರ ನಿಕಟ ಮಿತ್ರರಾಗಿ ಬೆಳೆದ ಗೋಕಾಕರು ಬಿ. ಎಂ. ಶ್ರೀಯವರ ಔನ್ನತ್ಯದ ಕವಿಗಳು. ತರುಣರು ಅಡುಂಬೊಲವಾದ ನವ್ಯ ಕಾವ್ಯದ ಕ್ಷೇತ್ರದಲ್ಲಿ ಸ್ವೇಚ್ಛೆಯಿಂದ ವಿಹರಿಸುತ್ತಿರುವ ಚತುರ ತರುಣರು.

"ಪದ್ಮಶ್ರೀ" ಪ್ರಶಸ್ತಿವಿಜೇತರೂ ಇತ್ತೀಚಿನ ಬಳ್ಳಾರಿ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರೂ ಆಗಿದ್ದ ಗೋಕಾಕರು, ಹೈದರಾಬಾದಿನ ಇಂಗ್ಲಿಷ್ ಅಭ್ಯಾಸ ಬೋರ್ಡಿನ ಡೈರೆಕ್ಟರರಾಗಿದ್ದರು. ಪರಪ್ರಾಂತಕ್ಕೆ ತೆರಳಿದ್ದ ಕನ್ನಡಿಗನನ್ನು ರಾಜಧಾನಿಗೆ ಎಳೆದು ತಂದುದು ಒಂದು ಅಭಿನಂದನೀಯ ಕಾರ್ಯ.

ಗೋಕಾಕರು ಇಂಗ್ಲಿಷ್ ಪ್ರೇಮಿಗಳು ಶೇಕ್ಸ್‌ಪಿಯರ್, ಅವರ ಜೀವದ ಗೆಳೆಯ. ಗೋಕಾಕರ ಇಂಗ್ಲಿಷ್ ಪ್ರೇಮ ವಿಶ್ವವಿದ್ಯಾನಿಲಯದಲ್ಲಿ ಕನ್ನಡಕ್ಕೆ ಯೋಗ್ಯ ಸ್ಥಾನಮಾನ ಒದಗಿಸುವುದರಲ್ಲಿ ಅಡ್ಡಿಯಾಗದಿರಲಿ, ಶೇಕ್ಸ್‌ಪಿಯರ್, ಶೆಲ್ಲಿಗಳು, ಪಂಪ, ರನ್ನರಿಗೆ ಅಂತಕರಾಗಗಳಾಗದಿರಲಿ.

o o o o o o o

ರಸ್ತೆಯಲ್ಲಿನ ಸಾಮಾನು ಸಾಗಿಸುವ ವ್ಯವಸ್ಥೆಯನ್ನು ರಾಷ್ಟ್ರೀಕರಿಸಬೇಕೆಂಬ ಮಾತು ಕೇಳಿಬರುತ್ತಿದೆ.

ದಡ್ಡು ದುಡ್ಡೆಂದು ಬಾಯಿಬಿಡುವ ಸರಕಾರದ ದೃಷ್ಟಿ ಲಾರಿ, ಟ್ರಕ್ಕುಗಳ ಮೇಲೆ ಬಿದ್ದುದು ಆಶ್ಚರ್ಯವೇನಲ್ಲ. ಸಮಾಜವಾದದ ಹೆಸರಲ್ಲಿ ಇಷ್ಟ ಬಿದ್ದುದನ್ನೆಲ್ಲ ರಾಷ್ಟ್ರೀಕರಿಸಿ, ಆಗ ಸ್ಥಾಪನೆಯಾಗುವ ಸರ್ಕಾರೀ ಗುತ್ತಿಗೆಯಿಂದ ಗ್ರಾಹಕರ ಸುಲಿಗೆ ಮಾತ್ರ ನಡೆಯುತ್ತಿದೆಯಲ್ಲದೆ, ಸಮಾಜವೊಂದೇ (ಡಾಗ್ಮಟಿಸಂ) ಎಂದದು ಇಲ್ಲಿ ಹೇಳಬೇಕು.

ಪ್ರಯಾಣಿಕರ ಸಾರಿಗೆ ರಾಷ್ಟ್ರೀಕರಿಸಿದ ನಂತರ ಆಗುತ್ತಿರುವ ಪ್ರಯಾಣಿಕರ ಸುಲಿಗೆ ಮಿತಿಮೀರಿದೆ; ಬೆಂಗಳೂರು ನಾಗರಿಕರಿಗೇ ಇದರ ಅನುಭವ ಸಾಕಷ್ಟಾಗಿದೆ.

ಮುಗಿಲು ಮುಟ್ಟಿಲು ರೆಡ್‌ಗಾರ್ಡ್ಸ್

(೫ನೇ ಪುಟದಿಂದ)

ಣೀ ನಾಯಕನ ಅಪೇಕ್ಷೆ: ಏಕೆಂದರೆ ಸಂಧಾನದಿಂದ ಮಾವೊ ತತ್ವಗಳ ಪರಿಷ್ಕರಣ ಅನಿವಾರ್ಯವಾಗುತ್ತದೆ.

ಚೀಣಾದಲ್ಲಿ ಈಗ ಕಾರ್ಮಿಕರ ಹೆಸರಿನಲ್ಲಿ ಆರಂಭವಾಗಿರುವ— ಕಾರ್ಮಿಕರು ರೂ ನಾಯಕರಾಗಿಲ್ಲದ ಸಾಂಸ್ಕೃತಿಕ ಕ್ರಾಂತಿಯ ಮುಖ್ಯ ಉದ್ದೇಶವೇನು? ಚೀಣಾದ ಆಂತರಿಕ ಹಾಗೂ ಸಂಘಟನಾ ವ್ಯವಸ್ಥೆಯ ಮೇಲೆ ಈ ಕ್ರಾಂತಿಯಿಂದ ಯಾವ ಪರಿಣಾಮವಾಗುತ್ತಿದೆ? ಚೀಣಾದ ಇಂದಿನ ವ್ಯವಹಾರಗಳು, ಅದರ ಆರ್ಥಿಕ ಹಾಗೂ ಆಡಳಿತ ವ್ಯವಸ್ಥೆಯ ಮೇಲೆ ಯಾವ ರೀತಿ ಪ್ರಭಾವ ಬೀರುತ್ತವೆ? ಎಂಬಿವೇ ಮೊದಲಾದ ಪ್ರಶ್ನೆಗಳು ಇಲ್ಲಿ ಸಹಜವಾಗಿ ಉದ್ಭವಿಸಿವೆ.

ಇದು ಚೀನಾದಲ್ಲಿ ಇನ್ನೊಂದು ಭಾರಿ ಮುನ್ನಗೆತಕ್ಕೆ ನಾಂದಿಯಾಗುವುದೋ? ಗ್ರಾಮಾಂತರ ಪ್ರದೇಶಗಳಲ್ಲಿ ಖಾಸಗಿ ಆಸ್ತಿ ವಶಪಡಿಸಿಕೊಳ್ಳಲು ನಡೆಯುವ ಕುತಂತ್ರದ ಸೂಚನೆಯೇ? ಅಥವಾ ರೈತರು ಮತ್ತು ಕಾರ್ಮಿಕ ವರ್ಗಗಳಲ್ಲಿಯಂತೆ ಚೀಣಾದಲ್ಲಿ ಮತ್ತೆ ವಿಪ್ಲವ ಆರಂಭವಾಗುವುದೇ? ಕಾದುನೋಡಬೇಕಾಗಿದೆ.

ರಾಜಕೀಯ ಚಳುವಳಿಯು ಆರ್ಥಿಕ ಅಭಿವೃದ್ಧಿಗೆ ನಾಂದಿಯಾಗುವುದೆಂದೂ, ಸಾಂಸ್ಕೃತಿಕ ಕ್ರಾಂತಿಯು ಆರ್ಥಿಕ ಕ್ಷೇತ್ರಕ್ಕೂ ಹಬ್ಬುವುದೆಂದೂ ಚೀಣೀ ಅಧಿಕಾರಿಗಳು ನುಡಿದಿದ್ದಾರೆ. ಚೀಣಾದ ಇಂದಿನ ಆಡಳಿತ ವರ್ಗವು ಬೇಸಾಯ ಉತ್ಪಾದನೆ ಅಭಿವೃದ್ಧಿಗೆ ವಿಶೇಷ ಮಹತ್ವ ನೀಡಿದೆ. ಚೀನಾದ ಪ್ರಧಾನ ಮಂತ್ರಿ ಚಾವೆನ್ ಲೈ ಅವರು 'ರೆಡ್‌ಗಾರ್ಡ್'ಗಳು ಹಳ್ಳಿಗಳಿಗೆ ಹೋಗಿ, ಸುಗ್ಗಿಯ ಕಾರ್ಯಗಳಲ್ಲಿ ನೆರವಾಗಬೇಕು." ಎಂದೂ ಕರೆ ನೀಡಿದ್ದಾರೆ. ಮಾವೋ ಅವರ ಹೊಸ ಉತ್ತರಾಧಿಕಾರಿ ಲಿನ್ ಪಿಯಾವೋ ಅವರು 'ಕ್ರಾಂತಿಕಾರಿಗಳು ಉತ್ಪಾದನಾ ಮಾಧ್ಯಮಗಳ ಮೇಲೆ ಹತೋಟಿ ಇಟ್ಟುಕೊಳ್ಳಬೇಕು. ಉತ್ಪಾದನೆ ಕುಂಠಿತಗೊಳ್ಳದಂತೆ ನೋಡಿಕೊಳ್ಳಬೇಕು" ಎಂದು ಅಭಿಪ್ರಾಯಪಟ್ಟಿದ್ದಾರೆ.

ಚೀಣೀ ನಾಯಕರ ಈ ಹೊಸ ಸಲಹೆಗಳನ್ನು ಗಮನಿಸಿದಾಗ "ಭಾರೀ ಮುನ್ನಗೆತದ ಯೋಜನೆಯು" ಹೊಸ ರೂಪದಲ್ಲಿ ಮತ್ತೆ ಜಾರಿಗೆ ಬರುವಂತೆ ತೋರುತ್ತಿದೆ. ಕಳೆದ ಆರು ವರ್ಷಗಳಲ್ಲಿನ ಕಷ್ಟ— ಪರಂಪರೆ, ದುರ್ದಿನಗಳನ್ನು ನೆನೆಸಿಕೊಂಡರೆ, ಈ ಯೋಜನೆಯು ಯಶಸ್ವಿಯಾಗುವ ಲಕ್ಷಣಗಳಿಲ್ಲ. ಹಿಂದಿನಂತೆಯೇ ಈ ಸಲವೂ ಈ ಯೋಜನೆ ಸದ್ದು—ಗದ್ದಲವಿಲ್ಲದೆ ಅಂತ್ಯಗೊಳ್ಳುವ ಲಕ್ಷಣಗಳಿವೆ.

ಚೀಣೀ ನಾಯಕರು ರಾಜಕೀಯ ರಂಗದಲ್ಲಿ ಎಷ್ಟೇ ಬಡಾಯಿ ಕೊಚ್ಚಿಕೊಂಡರೂ, ಆರ್ಥಿಕ ರಂಗದಲ್ಲಿ ಮಾತ್ರ ಎಚ್ಚರಿಕೆಯಿಂದ ಹೆಜ್ಜೆ ಇಡುತ್ತಿದ್ದಾರೆ.

(ಆಕಾಶವಾಣಿಯ ಕೃಪೆಯಿಂದ)

"NAVAYUGA" Kannada Weekly is recommended for High Schools and Public Libraries by the Director of Public Instruction in Mysore, Bangalore vide their letter No. CL–4.17–4/65–66 dated 26—4—1966.

READ & ADVERTISE IN
NAVAYUGA WEEKLY

ಮರೆಯಲಾರದ ನೆನಪದು

(ಆರನೇ ಪುಟದಿಂದ)

ಜಸವೆನಿಸಿತು. ಬಸ್ಸಿನಲ್ಲಿ ನನ್ನ ಬಳಿಯೇ ಒಬ್ಬ ಹಳ್ಳಿಯ ಗಮಾರರಂತೆ ಕಾಣುವ ವ್ಯಕ್ತಿ ಕುಳಿತಿತ್ತು. ಇದು ಆಗಿನ ದೃಷ್ಟಿಯಲ್ಲಿ ಹೇಳುವ ಮಾತು. ನಾನು ಅವರೊಡನೆ ಆಗಾಗ ಒಂದೊಂದು ಸಂಭಾಷಣೆ ನಡೆಸುತ್ತಿದ್ದೆ. ಆ ಮೊದಲೇ ನನ್ನ ಪರಿಚಯ ನಾನವರಿಗೆ ಮಾಡಿಕೊಟ್ಟಿದ್ದೆ. ಸಾಹಿತಿ; ಕವಿ; ಲೇಖಕ; ಏನೇನೋ ಹೇಳಿದ್ದೆ. ಅದರಲ್ಲಿ ಅವರಿಗೆಷ್ಟರ್ಥವಾಯಿತೋ, ನಾನದನ್ನು ಆಗ ಯೋಚಿಸಿರಲಿಲ್ಲ. ನನ್ನ ಮಾತಿಗೆಲ್ಲಾ ಸೈಗುಟ್ಟಿ ಕುಳಿತಿದ್ದರು. ನನ್ನ ಭಾಷಣದಿಂದ ಬೇಸರವನ್ನಾಗಲೀ ಸಂತೋಷವನ್ನಾಗಲೀ ವ್ಯಕ್ತಪಡಿಸಲಿಲ್ಲ.

ನಾನಿಳಿಯುವಲ್ಲೇ ಅವರೂ ಕೆಳಗಿಳಿದರು. ಆಗ ಕೂಲಿಗಾಗಿ ನಾನು ಅವರನ್ನು ವಿಚಾರಿಸುತ್ತಿದ್ದಾಗ ತಾವೇ ಮುಂದೆ ಬಂದು ಟ್ರಂಕನ್ನು ಮೇಲೆತ್ತಿದರು. ಆಗ ನನಗಾದ ಸಂತಸ ಹೇಳಿ ತೀರದು. ನನ್ನ ಭಾಷಣದ ಪ್ರಭಾವವೇ ಇದೆಂದು ತಿಳಿದೆ. ದಾರಿಯಲ್ಲಿ ನಾನು ಮುಂದೆ ಅವರು ಹಿಂದೆ. ಹೀಗೆಯೇ ಪಯಣ ಅರ್ಧ ಮೈಲು ಸಾಗಿತು. ಅಲ್ಲಿಯೇ ನನ್ನ ಬಿಡಾರವೆಂದು ಗೊತ್ತಾಗಿತ್ತು.

ಟ್ರಂಕನ್ನು ಕೆಳಗಿಟ್ಟವರೇ ಮರಳಲು ಆರಂಭಿಸಿದಾಗ ಕಿಸೆಯಿಂದ ಚಿಲ್ಲರೆ ತೆಗೆದು ಕೊಡಲು ಮುಂದಾದೆ. ಆಗವರು "ನಿಮ್ಮಂತವರ ಸೇವೆ ಮಾಡುವ ಭಾಗ್ಯಕ್ಕಿಂತಲೂ ಹೆಚ್ಚಿನದೇನೂ ಬೇಕಿಲ್ಲ"ವೆಂದು ಅದೆತ್ತಲೋ ಸಾಗಿದರು. ಇದು ನಡೆದು ಎರಡು ವರ್ಷಗಳು ಕಳೆದಿರಬಹುದು. ಆದರೆ ಅದೇ ರೂಪವನ್ನಿಂದು ಕಣ್ಣೆದುರು ಕಂಡಾಗ ನಾನು ನಾನಾಗಿ ಉಳಿದಿಲ್ಲ. ಅವರೇ ಇಂದಿನ ಅಧ್ಯಕ್ಷ ಪದ ಅಲಂಕರಿಸಿದ್ದಾರೆ. ಅವರ ಸಹನೆ; ಗುಣ; ವಿದ್ಯೆ; ಸೌಜನ್ಯ ಅಳೆಯಲು ನನ್ನಂತಹ ಪಾಮರನಿಂದ ಸಾಧ್ಯವೇ? ಅದೇ ಇಂದು ನನ್ನ ಒಳಗಣ್ಣು ತೆರೆಯಿಸಿತು. ಆಗಲೇ ಅವರಕಾಲ್ಹಿಡಿದು ಕ್ಷಮೆ ಕೇಳಿದೆ. ಆಗ ನಗು ನಗುತ್ತಲೇ ನನ್ನ ಮೇಲೆತ್ತಿ ತಮ್ಮ ವರದಹಸ್ತವನ್ನು ನನ್ನಮಸ್ತಕದ ಮೇಲಿಟ್ಟು ಹರಸಿದರು. ಆಗಲೇ ನನಗೆ ಜ್ಞಾನೋದಯವಾಯಿತು.

ಮುಂದೆ ನನ್ನನ್ನು ನಾನು ಅರಿತು; ಜೀವನದ ಒಳಹೊಕ್ಕು ತಿರುಳನ್ನು ತರಿದು; ಬರೆಯತೊಡಗಿದೆ. ಅವರ ಆಶೀರ್ವಾದ ಫಲವೇ ಇಂದಿನ ನನ್ನ ಲೆಕ್ಕಣಿಯ ಗುರುತು. ಆಗೊಮ್ಮೆ ಈಗೊಮ್ಮೆ ಅಂದಿನ ಘಟನೆ ಮರೆಯಲಾರದ ನೆನಪಾಗಿ ಕಣ್ಣೆದುರು ನಿಲ್ಲುತ್ತಿದೆ.

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

S. C. 104/1966.

ವಾದಿ— ಸಾವಿತ್ರಿ ಅಮ್ಮ

ಪ್ರತಿವಾದಿರು — 1. ರಾಮಕೃಷ್ಣಭಟ್ಟ, 2. ವೆಂಕಪ್ಪಯ್ಯ ಭಟ್ಟ, 3. ಮಂಜುನಾಥ ಭಟ್ಟ, 4. ಮಹಾಬಲೇಶ್ವರ ಭಟ್ಟ, 5. ಗಣಪತಿ ಭಟ್ಟ.

ಕುಂದಾಪುರ ತಾಲ್ಲೂಕು ಉಪ್ಪುಂದ ಗ್ರಾಮದಲ್ಲಿರುವ ಶಂಕರ ಭಟ್ಟರ ಮಕ್ಕಳು ಮಂಜುನಾಥ ಭಟ್ಟ। ಮಹಾಬಲೇಶ್ವರಭಟ್ಟ। ಗಣಪತಿ ಭಟ್ಟ। ಕೂಡಾ 3ಜನರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ—

ಪ್ರತಿವಾದಿರಿಂದ ವಾದಿಳಿಗೆ ಕಳೆದ ಶೋಭಕೃತು ಸಂವತ್ಸರದ ಅದಿ ಲಾಗ್ಯಾತಿನ ಮಿಸ್ತ್ರಿ ಕೃವಜು ಬರಮಾಡಿಕೊಳ್ಳುವರೆ ವಾದಿಯು ಪ್ರತಿವಾದಿರ ಮೇಲೆ ದಾಖಲು ಮಾಡಿದ ಮೇಲಿನ ದಾವೆಯು ತಾ. 4—11—1966ಕ್ಕೆ ಮೇಲಿನ ಕೋರ್ಟಿನಲ್ಲಿ ತಸ್ಮಿಗೆ ಇರುತ್ತದೆ. ಆ ಕುರಿತು ಯೇನಾದರೂ ಆಕ್ಷೇಪಣೆಗಳಿದ್ದರೆ ಸದ್ರಿ ದಿವಸ ಹಗಲು 11ಗಂಟೆಗೆ ಮೇಲಿನ ಕೋರ್ಟಿನ ಮುಂದೆ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು.

N. S. Parameshwariah
Advocate for Plff
Date 8—10—66, Coondapoor

ಪರಿಚಯ

ಶಿಶುಪಾಲ ವಧೆಯ ಮಾಘಕವಿ

ಬರೆದವರು
ಶ್ರೀ ಸ. ನಾರಾಯಣ

ಶಿಶುಪಾಲವಧ ಕಾವ್ಯ ಸಂಸ್ಕೃತ ಸಾಹಿತ್ಯದಲ್ಲಿ ಪ್ರಸಿದ್ಧವಾದುದು. ಪಂಚ ಮಹಾ ಕಾವ್ಯಗಳಲ್ಲಿ ಒಂದು. ರಘುವಂಶ, ಕುಮಾರ ಸಂಭವ, ಕಿರಾತಾರ್ಜುನೀಯ, ಶಿಶುಪಾಲವಧ ಮತ್ತು ನೈಷಧಮ್ ಸಂಸ್ಕೃತ ಸಾಹಿತ್ಯದಲ್ಲಿ ಪಂಚ ಮಹಾಕಾವ್ಯಗಳು. ಶಿಶುಪಾಲವಧ ಕಾವ್ಯದ ಕರ್ತೃ ಮಾಘ ಕವಿ.

ಶಿಶುಪಾಲ ವಧ ಕಾವ್ಯದ ಅಂತ್ಯದಲ್ಲಿ ಕವಿ ಮಾಘ ಅವನ ಕೆಲವು ವೈಯಕ್ತಿಕ ಸಂಗತಿಗಳನ್ನು ತಿಳಿಸುತ್ತಾನೆ. ಕವಿ ಮಾಘ ದತ್ತಕನ ಮಗ. ಅರಸ ಧರ್ಮದೇವನ ಮಂತ್ರಿ ಸುಪ್ರಭಾ ದೇವನ ಮೊಮ್ಮಗ. ಇವನ ಸ್ಥಳ ಗುಜರಾತ. ಸುಪ್ರಸಿದ್ಧ ಪಂಡಿತ, ಮತ್ತು ಸಂಶೋಧಕ ಜಾಕೋಬಿ ಕವಿ ಮಾಘನ ಕಾಲವನ್ನು ಕ್ರಿ. ಶ. ಆರನೆಯ ಶತಮಾನ ಎಂದು ಸೂಚಿಸುತ್ತಾರೆ. ಕೆಲವು ಪಂಡಿತರು ಕವಿ ಕ್ರಿ. ಶ. ೬ನೆಯ ಶತಮಾನಕ್ಕಿಂತಲೂ ಈಚಿನವನು ಎಂದು ವಾದಿಸುತ್ತಾರೆ.

ಕವಿ ಮಾಘನ ಶಿಶುಪಾಲವಧಾ ಕಾವ್ಯದಲ್ಲಿ ಶ್ರೀ ಹರ್ಷನ ನಾಗಾನಂದ ನಾಟಕದ ಕೆಲವು ಶ್ಲೋಕಗಳ ಪ್ರಸ್ತಾಪವಿದೆ. ಶ್ರೀ ಹರ್ಷ ಕ್ರಿ. ಶ. ೬೦೬ರಿಂದ ೬೪೮ರವರೆಗೆ ರಾಜ್ಯ ಭಾರ ಮಾಡಿದ ಎಂಬುದು ಸ್ಪಷ್ಟವಾಗಿದೆ. ಶ್ರೀ ಹರ್ಷ, ಕಾದಂಬರಿಯ ಕರ್ತೃ ಬಾಣಕವಿಯ ಆಶ್ರಯದಾತ. ಶ್ರೀ ಹರ್ಷನ ಜೀವಿತ ಕಾಲ ಸ್ಪಷ್ಟವಾಗಿರುವುದರಿಂದ ಕವಿ ಮಾಘ ಅವನಿಗಿಂತಲೂ ಈಚಿನವನು ಅಂದರೆ ಕ್ರಿ. ಶ. ೭ನೆಯ ಶತಮಾನದಲ್ಲಿ ಇದ್ದಿರಬಹುದೆಂದು ಹೇಳಬಹುದಾಗಿದೆ.

ತಾವದಭ ಭಾರವೇರ್ಭಾತಿ ಯಾವ
ನ್ ಮಾಘಸ್ಯನೋದಯಃ।

ಉದಿತೇತು ಪುನಃ ಮಾಘೋ ಭಾರ
ವೇಃ ಭಾರವೇರಿವಾ॥ ಎಂಬ ಶ್ಲೋಕದ ಮೇರೆಗೆ ಮಾಘ ಭಾರವಿಗಿಂತಲೂ ಈಚಿನವನು ಎಂಬದು ಸ್ಪಷ್ಟವಾಗುತ್ತದೆ.

ಕವಿ ಮಾಘನ ಇನ್ನಿತರ ಕೃತಿಗಳು ಯಾವುವೂ ಉಪಲಬ್ಧವಿಲ್ಲ. ಅವನು ಬರೆದ ಬೇರೆ ಕೃತಿಗಳ ಬಗ್ಗೆ ಎಲ್ಲಿಯೂ ಪ್ರಸ್ತಾಪವೂ ಇಲ್ಲ. ಶಿಶುಪಾಲ ವಧವೊಂದೇ ಅವನ ಏಕೈಕ ಅದ್ವಿತೀಯ ಕಾವ್ಯ. ಕವಿಯ ಕೀರ್ತಿ, ಪ್ರತಿಭೆ ಆ ಒಂದು ಕಾವ್ಯದಿಂದಲೇ ಹೊರಹೊಮ್ಮಿದೆ.

ಚೇದಿ ದೇಶದ ಅರಸು ಕುಮಾರ ಶಿಶುಪಾಲ ಶ್ರೀ ಕೃಷ್ಣನ ಸುದರ್ಶನಕ್ಕೆ ತಲೆ ಒಪ್ಪಿಸಿದ ಕಥೆಯೇ ಶಿಶುಪಾಲವಧ ಕಾವ್ಯದ ಕಥಾವಸ್ತು. ಪಾಂಡವರ ರಾಜಸೂಯ ಯಾಗದ ಅಂತ್ಯದಲ್ಲಿ ಅಗ್ರಪೂಜೆ ಯಾರಿಗೆ ಸಲ್ಲಬೇಕೆಂದು ಚರ್ಚೆ ನಡೆದಾಗ, ಸಭೆ ಶ್ರೀ ಕೃಷ್ಣನಿಗೆ ಅಗ್ರಪೂಜೆ ಸಲ್ಲಬೇಕೆಂದು ಒಮ್ಮತದಿಂದ ಸಮ್ಮತಿಸಿದಾಗ, ಹಾಜರಿದ್ದ ಶಿಶುಪಾಲ ಸಭೆಯ ನಿರ್ಧಾರವನ್ನು ಪ್ರತಿಭಟಿಸಿ, ಶತ ಅಪರಾಧಗಳನ್ನು ಕ್ಷಣ ಮಾತ್ರದಲ್ಲಿ ಮುಗಿಸಿ ಶ್ರೀಕೃಷ್ಣನ ಸುದರ್ಶನಕ್ಕೆ ತಲೆ ಒಪ್ಪಿಸುತ್ತಾನೆ. ಮಹಾ ಭಾರತದ ಆದಿ ಪರ್ವದಲ್ಲಿ ಬರುವ ಈ ಚಿಕ್ಕ ಕಥೆಯನ್ನು ಕವಿ ಮಾಘ ತನ್ನ ಪ್ರತಿಭೆ ಮತ್ತು ಪಾಂಡಿತ್ಯಗಳಿಂದ ಉನ್ನತ ಕಾವ್ಯವನ್ನಾಗಿ ನಿರೂಪಿಸಿದ್ದಾನೆ.

ಕವಿ ಮಾಘ ಶ್ರೇಷ್ಠ ಪಂಡಿತ. ಯೋಚನಾಪರ. ಅವನಿಗೆ ತನ್ನದೇಆದಸ್ವತಂತ್ರ ಶೈಲಿ, ಕಾವ್ಯ ನಿರೂಪಣ ಶಕ್ತಿ ಇದೆ. ಪೌರಾಣಿಕ ಕಥಾವಸ್ತುವನ್ನು ಆಯ್ದುಕೊಂಡು ರಸಮಯ ಕಾವ್ಯವನ್ನು ರಚಿಸಿದ್ದಾನೆ. ಅವನ ಅಮೋಘ ಪಾಂಡಿತ್ಯಕ್ಕೆ ಒಂದೊಂದು ಶ್ಲೋಕವೂ ಉದಾಹರಣೆಯಾಗಿದೆ.

ಶೈಲಿ ಸಂಪ್ರದಾಯಗಳಲ್ಲಿ ಮಾಘನದು ವಿಶಿಷ್ಟ ಸ್ವತಂತ್ರ ಮಾರ್ಗ. ಅವನಿಗೆ ಪೂರ್ವದ ಕವಿಗಳ ಕಾವ್ಯಗಳ ಪರಿಚಯವಿದೆ. ಆದರೆ ಯಾವ ಕವಿಯನ್ನು ಯಾವ ಕಾವ್ಯವನ್ನು ಅವನು ಅನುಸರಿಸಿಲ್ಲ. ಸಂಸ್ಕೃತ ಸಾಹಿತ್ಯ ಕ್ಷೇತ್ರದಲ್ಲಿ ಕವಿ ಮಾಘ ಸಾಮಾನ್ಯ ಕವಿಯಲ್ಲ. ಅಸಮಾನ್ಯ ಕವಿ. ಶ್ರೇಷ್ಠಮಟ್ಟದ ಕವಿ.

ಮಾಘ ಪ್ರತಿಭಾವಂತ ವ್ಯಾಕರಣ ಪಂಡಿತ, ಸರ್ವಜ್ಞನೂ ಹೌದು. ಅವನ ಜ್ಞಾನ, ಪಾಂಡಿತ್ಯ ಅಪಾರವಾದುವು. "ನವಸರ್ಗಗತೇ ಮಾಘೇನವ ಶಬ್ದೋನ ವಿದ್ಯತೆ" ಎಂಬ ಶ್ಲೋಕವೇ ಉಂಟು ಶಿಶುಪಾಲವಧ ಕಾವ್ಯದಲ್ಲಿ ಕೆಲವು ಕಡೆ ಘಂಟಾ ಮಾಘ ಎಂಬ ಪದ ಬರುತ್ತದೆ. ಮಾಘನಿಗೆ ಘಂಟೆಯ ಮರ್ಯಾದೆ ದೊರೆತಿರಬಹುದು. ಆದರಿಂದ ಅವನ ಹೆಸರು ಘಂಟಾ ಮಾಘ ಎಂದು ಪ್ರಸಿದ್ಧವಾಗಿರಬಹುದು. ಪ್ರಾಚೀನ ಭಾರತದಲ್ಲಿ ಪ್ರಸಿದ್ಧ ಪಂಡಿತರಿಗೆ, ಪ್ರತಿಭಾವಂತ ಕವಿಗಳಿಗೆ ಘಂಟಾ ಮರ್ಯಾದೆ ದೊರೆಯುತ್ತಿದ್ದ ಉದಾಹರಣೆಗಳು ದೊರೆಯುತ್ತವೆ. ಘಂಟಾಮರ್ಯಾದೆಯಿಂದಲೂ ಪಂಡಿತರ ಪಾಂಡಿತ್ಯವನ್ನು ಊಹಿಸಬಹುದಿತ್ತು.

ಮಾಘ ಕವಿಯ ಶೈಲಿ ಗಾಂಭೀರ್ಯಯುಕ್ತವಾದುದು. ತೇಜೋಪೂರ್ಣವಾದುದು. ಸಮುದ್ರದ ಮೇಲೆ ತೇಲುವ ನಾವೆಯಂತೆ ಅವನ ಶೈಲಿ ಕಾವ್ಯದಲ್ಲಿ ನಿರಾತಂಕವಾಗಿ, ಗಾಢ ಗಾಂಭೀರ್ಯದಿಂದ ಸಾಗುತ್ತದೆ. ಅವನ ಪದಜೋಡಣೆಯಲ್ಲಿ ತನ್ನದೇ ಆದ ಸೊಗಸಿದೆ. ಶಕ್ತಿ ಇದೆ. ಒಟ್ಟಿನಲ್ಲಿ ಮಾಘ ಕವಿಯ ಶಿಶುಪಾಲವಧಾ ಕಾವ್ಯ ಸಂಸ್ಕೃತ ಸಾಹಿತ್ಯ ಕ್ಷೇತ್ರದಲ್ಲಿ ಅದ್ವಿತೀಯ ಮಹಾ ಕಾವ್ಯಗಳಲ್ಲಿ ಒಂದಾಗಿದೆ. ಅದೊಂದು ಸುಂದರ ಶ್ರೀಮಂತ ಕೃತಿ.

ಉಪಮಾ ಕಾಳಿದಾಸಸ್ಯ ಭಾರ
ವೇರರ್ಥ ಗೌರವಮ್।
ದಂಡಿನಃ ಪದಲಾಲಿತ್ಯ ಮಾಘೇ ಸಂ
ತ್ರಯೋ ಗುಣಾಃ॥

ಎಂಬ ಶ್ಲೋಕಕ್ಕೆ ಅನುಸಾರವಾಗಿ ಕಾಳಿದಾಸನ ಉಪಮಾ ಸಾಮರ್ಥ್ಯ, ಭಾರವಿಯ ಅರ್ಥ ಗೌರವ, ದಂಡಿಯ ಪದ ಹೊಂದಾಣಿಕೆಯ ಸೊಬಗು ಕವಿ ಮಾಘನಲ್ಲಿ ಇವೆ. ಈ ವಿಷಯದಲ್ಲಿ ಅತಿಶಯ ವೇನಿಲ್ಲ.

ದಯಮಾಡಿ ವಿಚಾರಿಸಿರಿ

ಶಾಲೆಗಳಿಗೆ ಬೇಕಾಗುವ
ರಿಜಿಸ್ತ್ರಿ ಫಾರ್ಮುಗಳಿಗೆ—
ವ್ಯಾಪಾರಿಗಳಿಗೆ ಬೇಕಾಗುವ
ವರ್ಗ, ಊಳಿಗ ಮೊದಲಾದ
ಎಕೌಂಟು ಪುಸ್ತಕಗಳಿಗೆ—
ಕೋರ್ಟುಗಳಿಗೆ ಬೇಕಾಗುವ ಎಲ್ಲಾ ತರದ
ಫಾರ್ಮುಗಳಿಗೆ ವಿಚಾರಿಸಿರಿ

ನವಯುಗ ಪ್ರೆಸ್

ಮುದ್ರಕರು ಮತ್ತು ಪ್ರಕಾಶಕರು,
ಪಾಲುಕೋಟೆ ಉಡುಪಿ. ದ. ಕನ್ನಡ.

ವೈಷ್ಣವ ಶಿಖಾಮಣಿ
ಕನಕದಾಸ ರಚಿತ

ಹರಿಭಕ್ತಿಸಾರ

ಎಂಬ ಅಮೂಲ್ಯ ಕೃತಿಯನ್ನು
ನೀವು ಓದಿರುವಿರಾ?

ಚಂಚಲವಾದ ಮನಸ್ಸನ್ನು ಶುಭಕರವಾದ ವಿಷಯದ ಮೇಲೆ ಕೇಂದ್ರೀಕರಿಸಿ ಸತ್ಕಾರ್ಯಗಳಲ್ಲಿಯೇ ತತ್ಪರವಾಗುವಂತೆ ಮಾಡುವ ಕೃತಿ.

ಬೆಲೆ: 0-19 ಪೈಸೆ.

0-30 ಪೈಸೆ ಸ್ಟಾಂಪು ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಿನಿಂದ ಕಳಿಸಲಾಗುವುದು.
ರಖಂ ಪ್ರತಿಗಳಿಗೆ ವಿಚಾರಿಸಿರಿ:-

ನವಯುಗ ಪ್ರೆಸ್, ಉಡುಪಿ.

ಕೊಕೋವಿಗೆ ಅಲ್ಲಿ ಸಿಹಿಯಿಲ್ಲ

(ಐದನೇ ಪುಟದಿಂದ)

ಹಾಕಲು ಶಕ್ತರಾಗಿಲ್ಲ. ಸಟ್ಟಾ ಬಜಾರಿನವರು, 'ಪೇಟೆ ಪ್ರಭು"ಗಳು, ಭಾರೀ ಭೂಮಾಲೀಕರು ಇನ್ನೂ ಈ ಉದ್ದಿಮೆಯಲ್ಲಿ ಪ್ರಧಾನರಾಗಿಯೇ ಉಳಿದಿದ್ದಾರೆ. ಯೂರೋಪಿಯನ್ ಗುತ್ತಿಗೆದಾರರ ಪ್ರತಿಮೂರ್ತಿಗಳಂತಿರುವ ಹಲವು ಹಳ್ಳಿ ದೇಶೀಯ ಗುತ್ತಿಗೆದಾರರು ಸರ್ಕಾರದ ಶಾಸನಗಳನು ಉಲ್ಲಂಘಿಸಿ ಸರ್ಕಾರದ ಆಜ್ಞೆಗಳ ಬೂಡಕ್ಕೆ ಕೊಡಲಿಯೇಟು ಹಾಕುತ್ತಿರುತ್ತಾರೆ.

ಘಾನದ ಈ ಒಂದೇ ಬದಿಯ ಆರ್ಥಿಕ ವಿಕಾಸ ಹೊಸ ನಾಯಕರಿಗೆ ಸಾಕಷ್ಟು ಸಂಕಟವನ್ನುಂಟು ಮಾಡಿದೆ. ಹೊಸ ಹೊಸ ಕೈಗಾರಿಕೆಗಳನ್ನು ಕಟ್ಟಲು ಘಾನ ಸರ್ಕಾರ ಸಪ್ತ ವಾರ್ಷಿಕ ಯೋಜನೆಯೊಂದನ್ನು ತಯಾರಿಸಿದೆಯಾದರೂ ಕೊಕೋವೆ ಅಲ್ಲದ ಬೇರೆ ಆಹಾರಧಾನ್ಯಗಳ ಬೆಳೆ ತೆಗೆಯಲು ಒಮ್ಮೆಲೆ ಎರಡು ಮಿಲಿಯ ಎಕ್ರೆಗಳ ಕೋಕೋ ತೋಟವನ್ನು ಕಡಿದು ಹಾಕುವುದು ಸಾಧ್ಯವಿಲ್ಲ. ಘಾನ ದೇಶದ ಸಾಂಪತ್ತಿಕತೆಯಲ್ಲಿಯ ಈ ದುರ್ಬಲ ಸ್ಥಾನ ವಿದೇಶಿ ಗುತ್ತಿಗೆದಾರರಿಗೆ ಚೆನ್ನಾಗಿ ತಿಳಿದಿದೆ. ಯಾಕೆಂದರೆ ಘಾನದ ಒಟ್ಟು ನಿರ್ಯಾತ ವರಮಾನದಲ್ಲಿ ಶೇ. ೬೦ರಷ್ಟು ಕೋಕೋದಿಂದಲೇ ಬರಬೇಕು.

ಆಫ್ರಿಕೆಯಲ್ಲಿ ಕೊಕೋ ಬೆಳೆಯುತ್ತಿರುವ ದೇಶ ಘಾನ ಒಂದೇ ಅಲ್ಲ. ನೈಜೀರಿಯ, ಕೆಮರೂನ್ಸ್, ಐವರಿ ಕೋಸ್ಟ್ ಮೊದಲಾದ ದೇಶಗಳ ಜನರ ಜೀವನವೂ ಇದನ್ನೇ ಅವಲಂಬಿಸಿದೆ. ಅಂತೆಯೆ ಈ ರಾಜ್ಯಗಳೂ ಕೊಕೋ ಬೆಲೆ ಸಾಧ್ಯವಿದ್ದಷ್ಟೂ ಏರಬೇಕೆಂದು ಆಶಿಸುತ್ತವೆ.

ಆದರೆ ಗುತ್ತಿಗೆದಾರರ ಸವಾಲು ಕೂಗುವ ದಲ್ಲಾಳಿಗಳು ನಾನಾ ರೀತಿಯ ತಂತ್ರಗಳಿಂದ (ಕಾಗದ ಪತ್ರಗಳ ಫೋರ್ಜರಿ, ಲಂಚರುಷುವತ್ತುಗಳಿಂದ, ಅಧಿಕಾರಿಗಳನ್ನು ಸ್ವವಶ ಮಾಡಿಕೊಳ್ಳುವಿಕೆ ಮುಂತಾದವುಗಳಿಂದ) ಬೆಲೆಗಳನ್ನು ಟನ್ ಒಂದಕ್ಕೆ ಏನಿಲ್ಲೆಂದರೂ ಲಕ್ಷ ಪೌಂಡುಗಳಿಗೆ ಇಳಿಸುವಲ್ಲಿ ಸಫಲರಾಗುತ್ತಾರೆ ಘಾನಾದ ರೈತರು ಟನ್ ಒಂದಕ್ಕೆ ೧೦೦ ಪೌಂಡುಗಳನ್ನು ಕಳೆದುಕೊಂಡ ಪ್ರಸಂಗಗಳೂ ಉಂಟು. ಗುತ್ತಿಗೆದಾರರ ನೀಚ ಪ್ರತಿನಿಧಿಗಳಿಂದ ರಕ್ಷಿಸಿಕೊಳ್ಳಲು ಅವರೆಲ್ಲ ಪ್ರಯತ್ನಗಳನ್ನು ಮಾಡಿದ್ದುಂಟು. ಒಮ್ಮೆಯಂತೂ ನೂರಾರು ಟನ್ ಕೋಕೋವನ್ನು ಮಖಾಗಳಲ್ಲೇ ಸುಟ್ಟು ಹಾಕಿದರು ಇದರ ಹೊಗೆಯಿಂದಾದರೂ ದಲ್ಲಾಳಿಗಳ ಹೃದಯ ಕರಗಿ, ಕುಟಿಲೋಪಾಯಗಳನ್ನು ಬಿಟ್ಟು ಹಳೆ ಬೆಲೆಗೇ ಕೊಳ್ಳುತ್ತಾರೇನೊ ಎಂದು ನೋಡಿದರು.

ಆದರೆ ಇದರಿಂದ ಏನೂ ಪ್ರಯೋಜನವಾಗಲಿಲ್ಲ. ಗುತ್ತಿಗೆದಾರರು ತಮ್ಮ ಹಳೆಯ ದಾಸ್ತಾನಿನಿಂದ ಸಹಸ್ರಾರು ಟನ್ನುಗಳಷ್ಟು ಕೊಕೋವನ್ನು ಜಾಗತಿಕ ಪೇಟೆಗೆ ಸುರಿದರು. ಕೋಕೋ ಬೆಲೆಗಳು ತತ್ತರಿಸಿ ದೇಶದ ಆರ್ಥಿಕತೆಗೆ ವಿಪತ್ತು ಒದಗಿತು.

ಘಾನಾದಲ್ಲಿ ನಡೆದ ಈ ಸಂಗತಿ ಒಂದೇ ಬೆಳೆ ಅಥವಾ ಒಂದೇ ಉದ್ದಿಮೆಯ ಸಾಂಪತ್ತಿಕತೆ ಇರುವಂಥ ಅನೇಕ ಅಭಿವೃದ್ಧಿಶೀಲ ಆಫ್ರೊ ಏಷ್ಯನ್ ದೇಶಗಳಿಗೂ ಇರುವ ಲಕ್ಷಣವೇ ಆಗಿದೆ. ರಾಜಕೀಯ ಸ್ವಾತಂತ್ರ್ಯ ಪಡೆದರೂ ಈ ಅನೇಕ ದೇಶಗಳು ಇನ್ನೂ ವಸಾಹತುಗಾರರ, ಗುತ್ತಿಗೆದಾರರ ಭದ್ರಮುಷ್ಟಿಯಲ್ಲೇ ಸಿಲುಕಿವೆ. ತಮ್ಮ ಉತ್ಪಾದನೆಗಳ ಜಾಗತಿಕ ಬೆಳೆಗಳ ಮೇಲೆ ಈ ದೇಶಗಳಿಗೆ ಹತೋಟಿಯೆ ಇಲ್ಲ ಮತ್ತು ಅಂತಾರಾಷ್ಟ್ರೀಯ ಸಟ್ಟಾಬಜಾರಿನವರಿಗೆ ಬಲಿಯಾಗುತ್ತಲೇ ಇರುತ್ತವೆ.

ಜಿನೀವದಲ್ಲಿ ಇತ್ತೀಚೆಗೆ ನಡೆದ ವಾಣಿಜ್ಯ ಮತ್ತು ಅಭಿವೃದ್ಧಿ ಮಂಡಲಿ ಅಧಿವೇಶನದಲ್ಲಿ ಎತ್ತಿದ, ಚರ್ಚಿಸಿದ ಸಮಸ್ಯೆ ಇದೇ ಆಗಿತ್ತು. ಪಶ್ಚಿಮದ ಪ್ರತಿನಿಧಿಗಳು ಎಲ್ಲವೂ ಸರಿಯಾಗಿದೆಯೆಂದು ತೋರಿಸುವ ಪ್ರಯತ್ನ ಮಾಡಿದರು. ಆದರೆ ಸಮಾಜವಾದೀ ದೇಶಗಳ ಪ್ರತಿನಿಧಿಗಳು ಕೊಕೋ ಹಾಗೂ ಇನ್ನೂ ಕೆಲವೊಂದು ಕಚ್ಚಾ ಪದಾರ್ಥಗಳನ್ನು ಬೆಳೆಯುತ್ತಿರುವ ದೇಶಗಳಿಗೆ ಜಾಗತಿಕ ಪೇಟೆಯಲ್ಲಿ ತಲೆದೋರಿರುವ ಈ ಶೋಚನೀಯ ಪರಿಸ್ಥಿತಿಗೆ ಕಾರಣ ಬಂಡವಾಳವಾದೀ ರಾಷ್ಟ್ರಗಳೇ ಪ್ರತ್ಯಕ್ಷ ಕಾರಣವೆಂದು ಸ್ಪಷ್ಟಪಡಿಸಿದರು. ಬಂಡವಾಳವಾದೀ ದೇಶಗಳು ಇಡಿ ಜಗತ್ತಿನ ತುಂಬ ಮಾರಿ ಉದ್ದಿಮೆಯನ್ನು ಊರ್ಜಿತಗೊಳಿಸುವ ಮಾತನ್ನಾಡುತ್ತವೆ, ಆದರೆ ಅನಭಿವೃದ್ಧಿ ದೇಶಗಳಲ್ಲಿಯ ಸಹಸ್ರಾರು ಜನ ಉತ್ಪಾದಕರು ಮಾತ್ರ ಬೆಳೆಯಲು ಅವಕಾಶ ಕೊಡದಿರುವುದು ವಿಚಿತ್ರವೇ ಸರಿ. ಅದೇ ರೀತಿ ಈ ದೇಶಗಳಿಗೆ ತಾವು ಸಹಾಯ ನೀಡುವಲ್ಲಿ ಧಾರಾಳಿಗಳೆಂದು ತೋರಿಸಿಕೊಳ್ಳುತ್ತಾರೆ ಮತ್ತು ಅದೇ ಕಾಲಕ್ಕೆ ಸಹಾಯಕ್ಕಿಂತ ಅನೇಕ ಪಾಲು ಲಾಭವನ್ನು ಶೋಷಣೆಯಿಂದ ಸೂರೆಗೊಳ್ಳುತ್ತಾರೆ.

ಬೆಳ್ತಂಗಡಿ ಮುನ್ಸಿಫ್ ಕೋರ್ಟಿನಲ್ಲಿ

R. I. A. 587/66.
in O. S. 121/64.

ಪೊಟ್ಟಿದಡ್ಕ ಮೊಹಿದೀ ಪುಜೀದಿ ಭಂಡಾರ —ಅರ್ಜಿದಾರ —ವಾದಿ.

ಜೋಸೆಫ್ ಸಹಾ —ಎದುರು ಪ್ರತಿವಾದಿರು.

ಮೇಲಿನ ವ್ಯಾಜ್ಯದ ೩ನೇ ಪ್ರತಿವಾದಿಯೂ ದ ಬೆಳ್ತಂಗಡಿ ತಾಲೂಕು ಇಂದಬೆಟ್ಟು ಗ್ರಾಮದಲ್ಲಿರುವ ಪಳ್ಳಿಯತ್ ಮತ್ತೆ ಕಾಡನ್ ಚಾಕುರವರ ಮಗ ಅವುಸೇಫ್‌ರವರಿಗೆ ಕೋರ್ಟು ಹುಕುಂ ಪ್ರಕಾರ ತಿಳಿಸುವುದೇನೆಂದರೆ

ಮೇಲಿನ ದಾವೆಯಲ್ಲಿ ವಾದಿಯು ಘ್ಯಾನಲ್ ಡಿಕ್ರಿ ಬಗ್ಗೆ ಮಾಡಿದ ಅರ್ಜಿಯು ವಿಮ್ಮ್ ಕಾಪರಾತಿ ಬಗ್ಗೆ ತಾ. ೬—11—1966ಕ್ಕೆ ಇಟ್ಟಿರುತ್ತದೆ. ಸದ್ರಿ ವ್ಯಾಜ ದಿವ್ಸ ನೀವು ಸ್ವತಃ ಯಾ ವಕೀಲರ ಮುಖಾಂತರ ಉಪಹರಿಸತಕ್ಕದ್ದು. ತಪ್ಪಿದರೆ ನಿಮ್ಮನ್ನು [illegible] ಮೇಲಿನ ಅರ್ಜಿಯನ್ನು ಯುಕ್ತ ಕಂಡ ರೀತಿಯಲ್ಲಿ ತೀರ್ಮಾನಿಸಲಾದೀತು.

B. K. Suryanarayana Rao
Advocate, Belthangady, S. K.
ಬೆಳ್ತಂಗಡಿ, ತಾ. 15—10—66.

ಕೃತಿ ಪರಿಚಯ

ವಿಮರ್ಶೆಗಾಗಿ ಪುಸ್ತಕಗಳನ್ನು ಕಳಿಸುವವರು ದಯಮಾಡಿ ಎರಡೆರಡು ಪ್ರತಿಗಳನ್ನು ಕಳಿಸಬೇಕಾಗಿ ವಿನಂತಿ. ಸಂ. ಸ.

ಕಲಾರಾಧನೆ—

ಲೇಖಕರು: ಶ್ರೀ ಎಂ. ರಂಗನಾಥ ಭಟ್.

ಪ್ರಕಾಶಕರು: ವಿಚಾರ ಸಾಹಿತ್ಯಮಾಲೆ, ಕಡಿಯಾಳಿ ದ್ವಾರ, ದ. ಕ.

ಪುಟಗಳು: ೨೨೭, ಬೆಲೆ: ರೂ. ೩-೨೫.

ಪರಿಷ್ಕರಿಸಿದವರು: ಶ್ರೀ ಕೆ. ಎನ್. ಭಟ್, ಶಿರಾಡಿಪಾಲ್.

'ಕರ್ನಾಟಕ ಅಭಿನಯ ವಿಭೂಷಣ', "ನಾಟ್ಯಕಲಾ ವಿಶಾರದ' ಬಿರುದಾಂಕಿತರಾದ ಶ್ರೀ ಎಂ. ರಂಗನಾಥ ಭಟ್ಟರು ತಮ್ಮ ಯೌವನದಲ್ಲಿ ಕರ್ನಾಟಕ ರಂಗಭೂಮಿಯಲ್ಲಿ ಕ್ರಾಂತಿಕಹಳೆಯೂದಿ ವಿಜೇತರಾದವರು. ಇಂದು ವೃದ್ಧಾಪ್ಯದಲ್ಲೀಗ ಶಾಂತ ಜೀವನ ನಡೆಸುತ್ತಿರುವ ಶ್ರೀಯುತರು ತನ್ನ ಆತ್ಮ ಕಥೆಯನ್ನು 'ಕಲಾರಾಧನೆ' ಎಂಬ ಹೆಸರಿನಲ್ಲಿ ಸಂಗ್ರಹಿಸಿದ್ದು, ಇದನ್ನು ಶ್ರೀ ಶಿರಾಡಿಪಾಲರು ಪರಿಷ್ಕರಿಸಿ ತಮ್ಮ ಪ್ರಕಾಶನದ ಮೂಲಕ ಕನ್ನಡಿಗರಿಗೆ ನೀಡಿದ್ದಾರೆ. ಕನ್ನಡದಲ್ಲಿ ಆತ್ಮಕಥೆಗಳೇ ಕಡಿಮೆ; ಓರ್ವ ಕಲಾವಿದನ ಆತ್ಮ ನಿವೇದನೆ ಕಲೆಯಷ್ಟೇ ಸರಸವಲ್ಲದೆ ರೋಮಾಂಚನಕಾರಿಯೂ ಆಗಿರುತ್ತದೆ; ಕುತೂಹಲಕಾರಕವೂ ಹೌದು.

'ಕಲಾರಾಧನೆ' ಹೆಸರೇ ಹೇಳುವಂತೆ ಶ್ರೀ ಭಟ್ಟರ 'ಕಲಾರಾಧನೆ'ಯ ಸ್ವರೂಪ. ಶ್ರೀಯುತರು ನಾಟಕ ಕಂಪೆನಿ ಸೇರಿದಂದಿನಿಂದ ಕಂಪೆನಿಯನ್ನು ನಿಲ್ಲಿಸಿ ಬಿಟ್ಟಂದಿನ ವರೆಗಿನ ತನ್ನ ಕಲೋಪಾಸಕ ಜೀವನದ ಹಲವಾರು ಅನುಭವಗಳನ್ನು ಇಲ್ಲಿ ನಾವು ಕಾಣಬಹುದು. ಕಲಾವಿದನ ಜೀವನವು ಕಹಿ ಅನುಭವಗಳಿಂದ ಮಿಸಲಾದುದೋ ಏನೋ. ಹಾಗಿಲ್ಲವಾಗ ಎಂದಾದರೊಮ್ಮೆ ಸಿಹಿ ದೊರೆತರೂ ಹಿಂದಿನ ದಿನ ಕಹಿಯೆಲ್ಲವೂ ಮರೆತು ಹೋಗುವುದು ಕಂಪೆನಿಯಿಂದ ಕಂಪೆನಿಗೆ ಹಾರುವ ನಟ ವರ್ಗ, ನಟರ ಅಸಭ್ಯ ವರ್ತನೆ, ಕಿರುಕುಳ ಮೊದಲಾದ ಆಂತರಿಕ ಸಮಸ್ಯೆಗಳು, ಊರುಗಳಲ್ಲಿಯ ರಾಜಕೀಯ ಪೈಪೋಟಿ, ದ್ವೇಷಭಾವನೆ, ಉಚ್ಚ—ನೀಚ ಭಾವನೆ ಮೊದಲಾದ ಬಾಹ್ಯ ಗೊಂದಲಗಳು, ಎಲ್ಲಕ್ಕಿಂತ ಹೆಚ್ಚಾಗಿ ಕನ್ನಡ ರಂಗ ಭೂಮಿಯ ಅಂದಿನ ದಯನೀಯ ಪರಿಸ್ಥಿತಿ—ಇವುಗಳಿಂದಾಗಿ ಜರ್ಜರಿತರಾದರೂ ಶ್ರೀ ಭಟ್ಟರೂ ಅನೇಕರ ಸಹಾಯದಿಂದ ಧೈರ್ಯದಿಂದ ೧೯೧೬ರಲ್ಲಿ ಪ್ರಾರಂಭಿಸಿದ ಅಂಬಾ ಪ್ರಸಾದಿಕ ನಾಟಕ ಕಂಪೆನಿ ಇಪ್ಪತ್ತು ವರ್ಷಗಳ ಕಾಲ ಸಾವು ನೋವುಗಳನ್ನುಂಡು ಹಾಲಿದ್ದಾಗ ಹಬ್ಬ ಮಾಚರಿಸಿ ಮುಂದೆ ೧೯೩೬ರಲ್ಲಿ ನಿಂತು ಬಿಟ್ಟಿತು. ಮುಂದೆ ನಿವೃತ್ತ ಜೀವನದಲ್ಲೂ ಶ್ರೀಯುತರ ಕಲಾಸೇವೆ ನಿಲ್ಲಲಿಲ್ಲ. ಹಲವು ಉದಾರಿಗಳ ನೆರವಿಂದ ಬಡತನದಲ್ಲೇ ಸುಖವುಣ್ಣುವ ಇವರನ್ನು ಸರಕಾರವೂ ಅಲ್ಪ ನಿವೃತ್ತ ವೇತನವಿತ್ತು ಗೌರವಿಸುತ್ತಿರುವುದು ಇದ್ದುದರಲ್ಲಿ ಸಂತೋಷ.

ಶ್ರೀ ಭಟ್ಟರು ತಮ್ಮ ನಾಟಕ ಕಂಪೆನಿಯಲ್ಲಿನ ನಡವಳಿಕೆಯನ್ನು ಶಿಸ್ತಿನಲ್ಲಿಟ್ಟುಕೊಂಡವರು; ಶಿಸ್ತಿನ ಜೀವನವನ್ನು ಬದುಕುತ್ತಿರುವವರು. ನಟ ವರ್ಗದ ಮೇಲೆ ಪುತ್ರ ಪ್ರೇಮ, ಕಲಾದೇವಿಯಲ್ಲಿ ಅನನ್ಯ ಶ್ರದ್ಧಾಭಕ್ತಿ, ಅಭಿನಯದಲ್ಲಿ ಅಸಾಧಾರಣ ಪ್ರತಿಭೆ ಪಾಂಡಿತ್ಯ, ಹೊಸತನಗಳೆಯರನ್ನು ಮಾಡಿಕೊಳ್ಳುವ ದೈವೀ ಶಕ್ತಿ, ಮುಗ್ಗರಿಸಿದರೂ ಎದ್ದು ನಿಲ್ಲುವ ಧೀರತೆ ಮೊದಲಾದ ಉತ್ತಮಗುಣಗಳಿಂದಾಗಿಯೇ ಇವರ ಕಲಾ ಜೀವನ ಯಶಗಳಿಸಿದೆ. ಕಲಾರಾಧನೆಯಿಂದಾಗಿ ಇವರು ಕಷ್ಟನಷ್ಟಗಳಿಗೆ ಗುರಿಯಾಗಿದ್ದಾರೆ; ಕಟ್ಟಿದ ಕಂಪೆನಿ ಬಿದ್ದು ಹೋಗಿದೆ—ಎಂದರೆ ಕಲಾರಾಧನೆ ಸೋತಿಲ್ಲ. 'ಜಟ್ಟಿ ಕಾಳಗದಲ್ಲಿ ಗೆಲ್ಲದೊಡೆ ಗರಡಿಯ ಸಾಮು ಪಟ್ಟು ಪರಸೆಗಳೆಲ್ಲ ವ್ಯರ್ಥವಾಗುವುದಿಲ್ಲ. ಅವನ ಮೈ ಕಬ್ಬಿಣಗಟ್ಟಿ. ಈ ಗಟ್ಟಿ ಬಲ—ಗರಡಿಫಲ — ಶ್ರೀ ಭಟ್ಟರು ಇದಕ್ಕೊಂದು ಜ್ವಲಂತ ನಿದರ್ಶನ ಅವರ ಕಲಾರಾಧಕ ತಪಸ್ಸು ಇತರ ಕಲಾವಿದರಿಗೆ ಮಾರ್ಗದರ್ಶಕವಾಗಿದೆಯೆಂದರೆ ತಪ್ಪಲ್ಲ.

'ಕಲಾರಾಧನೆ'ಯೊಂದು ಸ್ವಾಗತಾರ್ಹ ಕೃತಿ. ಸತ್ಯ ಘಟನೆಗಳ ಗೊಂಚಲು. ಇಲ್ಲಿನ ಭಾಷೆ ನವುರಾಗಿದೆ; ಹಿತವಾಗಿದೆ. ಪುಸ್ತಕದ ಮುದ್ರಣ, ಬಳಸಿದ ಕಾಗದ, ರಕ್ಷಾಕವಚ ಸುಂದರವಿವೆ.

—ಗೋರಾ

ಸುವ್ಯವಸ್ಥಿತ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್
ವ್ಯವಹಾರಗಳಿಗೆ ತನ್ನ 62 ಶಾಖೆಗಳಿಂದ ಹಬ್ಬಿರುವ
"ವಿಜಯ ಬ್ಯಾಂಕಿ"ನಲ್ಲಿ ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 8% ವರೆಗಿನ ಬಡ್ಡಿ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿ, ಆಫೀಸು—"ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—3

ನವಯುಗಕ್ಕೆ
ಚಂದಾದಾರರಾಗಿ ಪ್ರೋತ್ಸಾಹಿಸಿರಿ.
ವಾರ್ಷಿಕ ಚಂದಾ ರೂ. ೧೦

ಜೀವವಿಜ್ಞಾನ

ಹುಟ್ಟುಗುಣ ಗಟ್ಟಹತ್ತಿದರೂ . . .

(ಪ್ರಾಣಿಯೊಂದು ಜನ್ಮ ತಳೆದಾಗ ಯಾವ ರೀತಿಯ 'ಜ್ಞಾನವನ್ನು', ಅಂದರೆ ಅಭ್ಯಾಸಗಳನ್ನು ಅದು ಹೊಂದಿರುತ್ತದೆ. ಅದು ಬೆಳೆದು ಬಾಳಲಿರುವಂಥ ಈ ವಿಶಾಲ ಜಗತ್ತಿಗೆ ಬಂದಾಗ ಅದರ ಮೊದಲ ವರ್ತನೆ ಚರ್ಯೆಗಳು ಏನಾಗಿರುತ್ತವೆ? ಜನ್ಮ ತಾಳುವುದಕ್ಕೆ ಮುನ್ನವೇ ಈ ಮೂಲ ಅಭ್ಯಾಸಗಳು ಯಾವ ರೀತಿಯಲ್ಲಿ ರೂಪುಗೊಂಡಿರುತ್ತವೆ? ಇವು ಮಿದುಳಿನ ಯಾವ ಯಾವ ಭಾಗ ಅಥವಾ ರಚನೆಗಳಿಂದ ನಿರ್ಧರಿಸಲ್ಪಡುತ್ತವೆ? ಇವೆಲ್ಲವೂ ಆಧುನಿಕ ಜೀವಶಾಸ್ತ್ರ ಹಾಗೂ ಮನಶ್ಶಾಸ್ತ್ರಗಳ ಅತ್ಯಂತ ಜಟಿಲವಾದ ಸಮಸ್ಯೆಗಳಾಗಿವೆ. ಸಂಶೋಧನಕಾರರುಗಳು ಇವುಗಳಿಗೆ ಉತ್ತರ ಕಂಡು ಹಿಡಿಯಲು ಸತತವಾಗಿ ಯತ್ನಿಸುತ್ತಿದ್ದಾರೆ.)

ಬೆಳೆದ ಜೀವಾಂಗವೊಂದರ ವರ್ತನೆ ಹೇಗೆ ಅಭಿವೃದ್ಧಿಗೊಳ್ಳುತ್ತ ಹೋಗುತ್ತದೆ, ಹೇಗೆ ರೂಪುಗೊಳ್ಳುತ್ತದೆ, ಹೇಗೆ ಬೆಳೆಯುತ್ತದೆ ಎಂಬುದನ್ನು ಅರ್ಥ ಮಾಡಿಕೊಳ್ಳಲು, ಪ್ರಾಣಿಯ ಮೂಲಭೂತ ಚರ್ಯೆಗಳ ಅರಿವು, ಅದು ಸುತ್ತಮುತ್ತಲ ಜಗತ್ತಿನ ಸಂಪರ್ಕ ಹೊಂದಲಿರುವ ಸಾಧ್ಯತೆಗಳ ತಿಳಿವು, ಅತಿ ಮುಖ್ಯ.

ಅನೇಕ ಪ್ರಾಣಿಗಳು ಹುಟ್ಟುವಾಗಲೇ "ಪರಿಪಕ್ವ"ಗೊಂಡು ಹುಟ್ಟುತ್ತವೆ. ಸುತ್ತಮುತ್ತಲ ಜಗತ್ತಿಗೆ ತಕ್ಕಂತೆ ತಮ್ಮ ಚಲನವಲನಗಳನ್ನು ಸ್ವಂತವಾಗಿ ರೂಪಿಸಿಕೊಳ್ಳುವ ಸಾಮರ್ಥ್ಯ ಪಡೆದುಕೊಂಡೇ ಹುಟ್ಟುತ್ತವೆ. ಉದಾಹರಣೆಗೆ ಆದೇ ತಾನೆ ಜನಿಸಿದ ಸೀಲ್ ಪ್ರಾಣಿಯ ಮರಿಯೊಂದು, ಈಜುವ, ನೀರಿನೊಳಕ್ಕೆ ಧುಮುಕುವ ಹಾಗೂ ಸೀಲ್ ಪ್ರಾಣಿಗಳಿಗಷ್ಟೆ ಸಾಧ್ಯವಿರುವಂಥ ರೀತಿಯಲ್ಲಿ ಮುಂಜಿನ ಗಡ್ಡೆಯ ಅಂಚಿನ ಮೇಲೆ ಹಾರಿ ಕುಳಿತು ಕೊಳ್ಳುವ ಸಾಮರ್ಥ್ಯ ಪಡೆದುಕೊಂಡಿರುತ್ತದೆ. ತಕ್ಷಣವಾಗಿ ಅದು ಆಗಲೇ ಸ್ವಲ್ಪ ಮಟ್ಟಿಗೆ "ಜ್ಞಾನ"ದ ದಾಸ್ತಾನನ್ನು ಪಡೆದುಕೊಂಡೇ ಹುಟ್ಟುತ್ತದೆ. ಅದಿಲ್ಲದೆ ಅದು ಜೀವದಿಂದಿರಲು ಸಾಧ್ಯವೇ ಇಲ್ಲ. ಅದು ಮುಂದೆ ಬೆಳೆದು ದೊಡ್ಡದಾಗಲಿರುವ ಪರಿಸ್ಥಿತಿಗಳಿಗನುಗುಣವಾಗಿ ಅವಶ್ಯವಿರುವಂಥ ಚಲನವಲನಗಳ ವಿಧಿಯನ್ನೂ ಅದು ಹೊಂದಿಯೇ ಇರುತ್ತದೆ.

ಪರಸ್ಪರ ವಿರುದ್ಧ ದೃಷ್ಟಿಕೋಣಗಳು

ಅದೇ ತಾನೆ ಜನಿಸಿದ ಪ್ರಾಣಿಯಾಗಲೀ, ಮಗುವಾಗಲೀ ಯಾವಾಗ ಈ ಜ್ಞಾನ ವಿಧಿಯನ್ನು ಪಡೆದುಕೊಳ್ಳುವುದು? ಇದಕ್ಕೆ ಸಂಬಂಧಿಸಿ ವಿಜ್ಞಾನಿಗಳಲ್ಲಿ ಎರಡು ಪರಸ್ಪರ ವಿರುದ್ಧ ಅಭಿಪ್ರಾಯಗಳಿವೆ. ಹುಟ್ಟಿನಿಂದಲೆ ಬರುವ ವರ್ತನೆ ನಿಯಮ ಹಾಗೂ ವಿಧಾನಗಳು ಇಡೀ ಜೀವೋತ್ಪತ್ತಿ ಸೂತ್ರಗಳಿಂದಲೇ ನಿರ್ದಿಷ್ಟವಾಗುತ್ತವೆ. ಇವು ಪ್ರಾಣಿ ಬೆಳೆದ ಹಾಗೆ ಅದು ಪಡೆದುಕೊಳ್ಳುವ ಇತರ ವರ್ತನೆ—ರಚನೆಗಳಿಗೆ ಸಮಾನಾಂತರವಾಗಿ ಬೆಳೆಯುತ್ತ ಹೋಗುತ್ತವೆ, ಎಂದು ಕೆಲವರು ಪರಿಗಣಿಸುತ್ತಾರೆ. ಪ್ರಗಾಢವಾದ ಜೀವೋತ್ಪತ್ತಿ ಶಾಸ್ತ್ರ ಸಂಶೋಧನೆ ಮಾತ್ರವೇ ಇನ್ನೂ ರಹಸ್ಯಾತ್ಮಕವಾಗಿರುವ ಈ ಘಟನಾ ವಿಶೇಷದ ಮೇಲೆ ಬೆಳಕು ಚೆಲ್ಲಬಲ್ಲುದು. ಗರ್ಭ ಬೆಳವಣಿಗೆಯ ಕಾಲದಲ್ಲಿ ನಡೆದ ಅಭ್ಯಾಸಗಳು ವಿಶೇಷ ಪಾತ್ರ ನಿರ್ವಹಿಸುತ್ತವೆ ಎಂದು ಇನ್ನು ಕೆಲವರು ಅಭಿಪ್ರಾಯ ಪಡುತ್ತಾರೆ. ಏನೇ ಆದರೂ ಈ ಹುಟ್ಟಿನಿಂದಲೇ ಬರುವ ವರ್ತನೆಗಳು ಎಳೆಯ ಜೀವಾಂಗ ಬೆಳೆಯಲಿರುವ ಪರಿಸ್ಥಿತಿ ಹಾಗೂ ವಾತಾವರಣದಿಂದ ನಿರ್ಧರಿತವಾಗುತ್ತವೆ, ಅಂದರೆ ಜೀವಿ ಪರಿಸ್ಥಿತಿ ಶಾಸ್ತ್ರವೇ ನಿರ್ಧಾರಕ ಅಂಶ, ಎಂಬುದನ್ನಂತೂ ಎಲ್ಲರೂ ಒಪ್ಪುತ್ತಾರೆ.

ಪ್ರಾಣಿಗಳ ಬೆಳವಣಿಗೆ ಗರ್ಭೋತ್ಪತ್ತಿಯ ಕಾಲದಲ್ಲೇನೂ ಪೂರ್ಣಗೊಳ್ಳುವುದಿಲ್ಲ. ಅದು 'ಕಲಿಯುತ್ತಲೇ' ಹೋಗುತ್ತದೆ. ಒಂದು ಕಡೆ ನಾನಾ ರೀತಿಯ ಕಂಡಿಷನ್ಡ್ ರಿಫ್ಲೆಕ್ಷನ್ ಅದರಲ್ಲಿ ಕಾಣಿಸಿಕೊಳ್ಳುತ್ತವೆ. ಅದೊಂದು ಕಡೆ ನಿರಿಚ್ಛಾ ಪ್ರತಿಕ್ರಿಯೆಯಿಂದಾಗಿ ಹುಟ್ಟಿನಿಂದಲೇ ಬಂದ ವರ್ತನಾ ಕ್ರಮಗಳೂ ಅದರಲ್ಲಿ ಜಾಗೃತಗೊಳ್ಳುತ್ತವೆ. ಉದಾಹರಣೆಗೆ ನಾಯಿ ಮರಿಗಳು ಹುಟ್ಟಿದ ನಂತರ ಮೂರು ದಿನಗಳ ವರೆಗೆ, ಹಸಿವಾಗುತ್ತಿದ್ದಾಗಲೂ ಸಹ ಮಾಂಸದ ಕಡೆಗೆ ಪ್ರತಿಕ್ರಿಯೆ ವ್ಯಕ್ತಪಡಿಸುವುದೇ ಇಲ್ಲ. ಸಂಪೂರ್ಣವಾಗಿ ಹೈನ ಆಹಾರದಿಂದ ಬೆಳೆದ ನಾಯಿಮರಿ ಮೂರನೆಯ ದಿನವಷ್ಟೆ ಮಾಂಸಾಹಾರಕ್ಕಾಗಿ ಹಾತೊರೆಯುತ್ತದೆ— ಆಗ ಅದರಲ್ಲಿ ಮಾಂಸಾಹಾರಿಗಳದ ಅದರ ಪೂರ್ವಿಕರ ನಿರಿಚ್ಛಾ ಪ್ರತಿಕ್ರಿಯೆ ರೂಪುಗೊಳ್ಳುತ್ತದೆ.

ಕುರಿಮರಿಗಳ ವಿಷಯದಲ್ಲಿ ಇದು ಬೇರೆ ತರ. ಹುಟ್ಟಿದ ಮೊದಲ ದಿನಗಳಲ್ಲೇ ಕುರಿಮರಿಯು ಹುಲ್ಲು ಮೇಯುವ ತಾಯಿಯನ್ನನುಸರಿಸಿ ಹೋಗುತ್ತೆ, ತಾನೂ 'ಹುಲ್ಲು ಮೇಯುವ ಚಲನೆಗಳನ್ನು ನಡೆಸುತ್ತದೆ. ತಲೆ ಬಾಗಿಸುತ್ತದೆ; ಮೇಲೆತ್ತುತ್ತದೆ; ಆದರೆ ಅದರ ಹೊಟ್ಟೆಯಲ್ಲಿ ಒಂದು ಗ್ರಾಮಿನಷ್ಟು ಹಸಿರು ಮೇವೂ ಸೇರುವುದಿಲ್ಲ. ಕುರಿಮರಿಯು ತನ್ನ ತಾಯಿಯನ್ನು ಅನುಕರಿಸುತ್ತ ಮೈದಾನದಲ್ಲಿ ಹುಲ್ಲು ಮೇಯುವುದನ್ನು 'ಕಲಿಯುತ್ತದೆ.'

ಆದೇ ತಾನೇ ಜನಿಸಿದ ಕುರಿಮರಿಯೊಂದನ್ನು ಒಂದು ವಿಶೇಷ ಬೋನಿನಲ್ಲಿರಿಸಿ ಅದರಲ್ಲಿರುವ ಒಂದು ರಂಧ್ರದ ಮೂಲಕ ಮರಿಗೆ ಹಾಲನ್ನುಣಿಸುತ್ತಿದ್ದು, ಆರು ತಿಂಗಳ ಕಾಲ ಅದನ್ನು ಹೀಗೆ ಪ್ರತ್ಯೇಕವಾಗಿಸಿದ್ದಲ್ಲಿ ಆ ಕುರಿಮರಿ ಒರಟಾದ ಮೇವು ತಿನ್ನಲಾರದು; ಹುಲ್ಲು ಮೇಯಲಾರದು. ಯಾಕೆಂದರೆ ಅನುಸರಿಸುವ ಅದರ ಅಂತರ್ಗತ ವ್ಯವಸ್ಥೆ ಉಪಯೋಗಿಸಲ್ಪಟ್ಟಿರುವುದಿಲ್ಲ. ಇದ್ದರಿಂದ ಕುರಿಮರಿ ಅದರ ಜಾತಿಗೆ ವಿಶಿಷ್ಟ ಲಕ್ಷಣವಾದ ವರ್ತನೆಯನ್ನು ರೂಪಿಸಿಕೊಂಡಿರುವುದಿಲ್ಲ. ಪರಿಸರದ ಪ್ರಭಾವದಿಂದಾಗಿ ವರ್ತನೆಯಲ್ಲಿ ಬದಲಾವಣೆಗಳಾಗುವುದನ್ನು ಪ್ರಾಣಿ ಜಗತ್ತಿನ ವಿಕಾಸದ ಎಲ್ಲ ಘಟ್ಟಗಳಲ್ಲೂ—ಹುಳು, ಹಕ್ಕಿ, ಮೀನು, ಇತ್ಯಾದಿ—ಕಾಣಬಹುದಾಗಿದೆ.

"ಸೂಕ್ಷ್ಮತೆಯ" ಕಾಲಾವಧಿ....

ಪ್ರಾಣಿಯ ಬೆಳವಣಿಗೆಯ ಆರಂಭದ ಅತ್ಯಂತ ಸೂಕ್ಷ್ಮತೆಯ ಕಾಲಾವಧಿಯನ್ನು ಅಭ್ಯಸಿಸುವುದರಲ್ಲಿ ಸಂಶೋಧನಕಾರರು ಆಸಕ್ತರಾಗಿರುವುದರಲ್ಲಿ ಆಶ್ಚರ್ಯವೇನಿಲ್ಲ. ಯಾಕೆಂದರೆ ಆಗಲೇ ಪ್ರಾಣಿಗಳು ಸುತ್ತಮುತ್ತಲ ಪರಿಸರದೊಂದಿಗೆ ಪ್ರಾಥಮಿಕ ಸಂಬಂಧಗಳನ್ನು ರೂಪಿಸಿಕೊಳ್ಳುವುದು. ಈ ಕಾಲಾವಧಿಯನ್ನು ನಾವು "ಅಚ್ಚೊತ್ತುವಿಕೆ"ಯ ಕಾಲಾವಧಿ ಎಂದೂ ಕರೆಯುತ್ತೇವೆ. ಈ ಕಾಲಾವಧಿಯಲ್ಲಿ ವರ್ತನೆಗಳು ರೂಪುಗೊಳ್ಳುವುದನ್ನು ಅಭ್ಯಸಿಸುವುದರಿಂದ ಮಾನವನಿಗೆ ಪ್ರಾಯೋಗಿಕ ಚಟುವಟಿಕೆಯಲ್ಲಿ ಒಂದು ಪ್ರಯೋಜನವಾಗುತ್ತದೆ— ಉದಾಹರಣೆಗೆ, ಅವನು ಮಕ್ಕಳಿಗೆ ತರಬೇತು ನೀಡುವುದನ್ನು ತರ್ಕಬದ್ಧವಾದ ವಿವೇಕಯುತವಾದ ರೀತಿಯಲ್ಲಿ ಸಂಘಟಿಸ ಬಹುದು. ಅದರಲ್ಲೂ ಮಾನವನಲ್ಲಿ ಮೂಡಿಬರುವ ಕಾಲಾವಧಿ ವಿಶೇಷ ಆಸಕ್ತಿಕರವಾದುದು. ಮಗುವು ಅಪಾರ ಸಂಖ್ಯೆಯಲ್ಲಿ ಪದಗಳನ್ನು ಅತ್ಯಂತ ಶೀಘ್ರವಾಗಿ ನೆನಪಿನಲ್ಲಿಡುತ್ತದೆಂದು ತಿಳಿದ ವಿಷಯವೇ ಆಗಿದೆ. ವ್ಯಾಕರಣ ತಿಳಿಯದೆಯೇ ಅದು ಹಲವಾರು ಭಾಷೆಗಳಲ್ಲಿ ಪರಿಣತಿ ಪಡೆಯುವ ಸಾಮರ್ಥ್ಯ ಹೊಂದಿರುತ್ತದೆ. ವಿವಿಧ ಜನಾಂಗಗಳ ಗಡಿಪ್ರದೇಶದಲ್ಲಿನ ಮಕ್ಕಳು ಎರಡು ಮೂರು ಭಾಷೆಗಳಲ್ಲಿ ಅತ್ಯಮೋಘ ಪರಿಣತಿ ಪಡೆದುಕೊಳ್ಳುತ್ತವೆಂಬ ಅಂಶವನ್ನು ವೀಕ್ಷಿಸಲಾಗಿದೆ.

ಸುತ್ತಮುತ್ತಲ ಪರಿಸರದೊಂದಿಗೆ ಸಂಬಂಧ ಏರ್ಪಡಿಸಿಕೊಳ್ಳುವಂಥ ಕಾಲಾವಧಿಯನ್ನು, ಬೆಳೆಯುತ್ತಿರುವ ಜೀವಾಂಗದಲ್ಲಿ ಹೊಸ ಗುಣಗಳನ್ನು ಉಂಟು ಮಾಡುವುದಕ್ಕಾಗಿ—ಉದಾ ಹರಣೆಗೆ ನೆಗಡಿ ಇತ್ಯಾದಿಗಳಿಗೆ ಪ್ರತಿರೋಧ ಹೆಚ್ಚಿಸುವುದಕ್ಕಾಗಿ—ಉಪಯೋಗಿಸಿಕೊಳ್ಳಬಹುದು.

ಭಿನ್ನಾಭಿಪ್ರಾಯಗಳಿದ್ದಾಗ್ಯೂ ಸಹ, ಇತ್ತೀಚೆಗೆ ಮಾಸ್ಕೋದಲ್ಲಿ ಜರಗಿದ ಮನಶ್ಶಾಸ್ತ್ರಜ್ಞರುಗಳ ಅಂತಾರಾಷ್ಟ್ರೀಯ ಸಮ್ಮೇಳನದಲ್ಲಿ ಏರ್ಪಡಿಸಿದ್ದ ವಿಚಾರ ಗೋಷ್ಠಿಯಲ್ಲಿ ಯೂರೋಪ್ ಮತ್ತು ಅಮೆರಿಕದ ಅನೇಕ ದೇಶಗಳ ಸಂಶೋಧನಕಾರರುಗಳು ಈ ಸಮಸ್ಯೆಗಳನ್ನು ಚರ್ಚಿಸಿ ಒಂದು ತೀರ್ಮಾನಕ್ಕೆ—ಜೀವಾಂಗದ ಬೆಳವಣಿಗೆಯ ವಾತಾವರಣವೇ ಅದರ ವರ್ತನೆಯನ್ನು ವಿಶಿಷ್ಟ ರೀತಿಯಲ್ಲಿ ರೂಪುಗೊಳಿಸುವ ಪ್ರಧಾನ ಅಂಶವಾಗಿದೆ ಎಂಬ ತೀರ್ಮಾನಕ್ಕೆ ಬಂದರು.

ನಾನು ಸಿಗರೇಟು ಬಿಟ್ಟೆಬಿಟ್ಟೆ

(ಒಂಭತ್ತನೇ ಪುಟದಿಂದ)

ಷ್ಟೇಕೆ, ನನ್ನ ಮನೋಚೈತನ್ಯ ಇನ್ನಿಷ್ಟು ಉನ್ನತವಾಯಿತು. ಆಹಾ ನಾನು ಇನ್ನಿಷ್ಟು ಯುವಕನಾದಂತೆಯೂ ಅನಿಸಿತು. ತಾಜಾ ಸೌತೇಕಾಯಿಯಂತೆ ನಾನು ಕಛೇರಿಗೆ ಬಂದೆ. ದಾರಿಯಲ್ಲಿ ಮಿಲ್ಲಿಂಗ್—ಮೆಷಿನ್ ಚಾಲಕ ಭೇಟಿಯಾದ.

"ಹಲ್ಲೊ" ಆತ ಕೂಗಿದ: "ನೀನು ಸಿಗರೇಟು ಬಿಟ್ಟುಬಿಟ್ಟೆಯೆಂದು ಕೇಳಿದೆ."

'ಹೌದು, ಅನುಮಾನವೆ?" ನಾನು ಉತ್ತರಿಸಿದೆ: 'ನೀನೂ ಬಿಟ್ಟುಬಿಡಬೇಕೆಂಬುದೇ ನನ್ನ ಉಪದೇಶ. ಅದೊಂದು ದುರಭ್ಯಾಸ. ನೋಡು ಹೇಗಾಗಿದ್ದೀಯ. ಹೊಗೆಸೊಪ್ಪಿನ ಹೊಗೆಯಲ್ಲಿ ಬಂದ ನಿರ್ಜೀವ ಕಾಯಿಯಂತೆ ಕಾಣಿಸುತ್ತೀ, ನನ್ನ ಮಟ್ಟಿಗೆ ಹೇಳುವುದಾದರೆ ಮತ್ತೆಂದೂ ಸೇದುವುದಿಲ್ಲ. ಎಂದೆಂದೂ ಇಲ್ಲ. ನನ್ನ ಮಾತನ್ನು ನಂಬು."

ಅವನ ಮೇಲೆ ನಾನು ತುಂಬ ಪ್ರಭಾವ ಬೀರಿದಂತೆ ಕಾಣಿಸುತ್ತಿತ್ತು. ಇದೀಗ ಕಕ್ಷೆಯಲ್ಲಿ ಉಡ್ಡಯನ ಮಾಡಿ ಬಂದ ಅಂತರಿಕ್ಷ ಯಾತ್ರಿಯನ್ನು ನೋಡುವಂತೆ ಅಸೂಯೆಯಿಂದಲೇ ಆತ ನನ್ನನ್ನು ನೋಡಿದ.

"ಮುಖ್ಯ ಮಾತೆಂದರೆ ನಮ್ಮ ಮನೋಬಲ. ಈಗ ಸೇದಬೇಕೆಂದು ನನಗೆ ಒಂದಿಷ್ಟೂ ಅನಿಸುವುದಿಲ್ಲ. ಖಂಡಿತ ನನಗೆ ಉಪೇಕ್ಷೆ. ನಂಬುವುದಿಲ್ಲವೆ? ಬೇಕಾದರೆ ಒಂದು ಸಿಗರೇಟು ಕೊಟ್ಟು ನೋಡು."

ಆತನ ಸಿಗರೇಟು ತೆಗೆದುಕೊಂಡು ಕಡ್ಡಿ ಗೀರಿ ಒಂದು ದಮ್ಮು ಎಳೆದು ಜುಗುಪ್ಸೆಯಿಂದ ತುಂಡನ್ನು ಬಿಸಾಕಿ ಬಿಟ್ಟೆ.

"ಇದು ತುಂಬಾ ಸುಲಭ" ಎಂದು ವಿಜಯಧ್ವನಿಯಲ್ಲಿ ಹೇಳಿದೆ: "ಅದರಿಂದ ನನಗೆ ಒಂದಿಷ್ಟು ಖುಷಿಯೆನಿಸಲಿಲ್ಲ, ನೋಡು. ಮಹತ್ವದ ಮಾತೆಂದರೆ ಮನಸ್ಸನ್ನು ಉಕ್ಕು ಮಾಡಬೇಕು."

ಈಗಲೂ ಕೂಡ ಸಿಗರೇಟಿನ ಬಗ್ಗೆ ನನಗಿರುವ ಉಪೇಕ್ಷೆಯನ್ನು ಮಿತ್ರರಲ್ಲೂ, ಆಪ್ತರಲ್ಲೂ ಪ್ರದರ್ಶಿಸುತ್ತಲೇ ಇದ್ದೇನೆ. ನನ್ನ ಖರ್ಚಿನ ಅಂದಾಜೂ ಕಡಿಮೆಯಾಗಿದೆ. ಪ್ರದರ್ಶನಕ್ಕೆಂದು ಮಾತ್ರ ಸಿಗರೇಟನ್ನು ಇಸಿದುಕೊಳ್ಳುತ್ತೇನೆ. ಸಿಗರೇಟು ಬಿಡುವುದು ನಿಜವಾಗಿಯೂ ಸುಲಭ. ನೀವು ನನ್ನ ಮಾತನ್ನು ನಂಬುವುದಿಲ್ಲವೆ? ಕೊಡಿ ಹಾಗಾದರೆ ಒಂದು ಸಿಗರೇಟು.

"ವಲ್ಲರಿ"

ಓಹೋ! ಸುಮವಲ್ಲರೀ !
ಆನಂದದ ಝಲ್ಲರೀ || ಪ ||

ಈಗಾದರೊ ಕಾರ್ಗಾಲ
ನೀ ನಗುವೇ ಕಿಲ—ಕಿಲಾ!
ನಿನ್ನನಾರೆ ಗೆಲ್ಲಲೂ?
ನಕ್ಕರೆ ಹೂ ಚೆಲ್ಲಲೂ!

ಹಬ್ಬಿರುವೇ ಮರಪೆತ್ತರ
ನೀ ಕಾಣುವೆ ಬಹು ವಿಸ್ತರ!
ಪಚ್ಚೆ ಹಸುರು ಮಧ್ಯೆ ಮುತ್ತು
ಕೋಮಲೆ ನಿನದೇನು ಗತ್ತು!?

ಉಂಟಿದೆ ಸೊಗಸನು ಕಣ್ಣು
ನಾಸಿಕ ಪರಿಮಳವನ್ನು!
ಹೀರಲು ಬಂದನು ಭ್ರಮರ
ನಾಣಾಗುವೆ ಬಣ್ಣಗಾರ!

—"ಮಲ್ಲಾರಿ".

ಎಲ್ಲೆಲ್ಲಿ ಏನೇನು?

ಸಂಪೂರ್ಣ ಗೋಹತ್ಯಾ ನಿರೋಧ ಶಾಸನವಾಗಲಿ

ಪೇಜಾವರ ಮಠಾಧೀಶ ಶ್ರೀ ಶ್ರೀ ವಿಶ್ವೇಶ ತೀರ್ಥ ಶ್ರೀಪಾದಂಗಳವರ ಹೇಳಿಕೆ.

ಗೋಸಂರಕ್ಷಣೆಯು ಭಾರತದ ಜನಜೀವನದಲ್ಲಿ ಅತಿಪ್ರಾಚೀನ ಕಾಲದಿಂದಲೂ ಧಾರ್ಮಿಕ ಸಾಂಸ್ಕೃತಿಕ ಹಾಗೂ ರಾಷ್ಟ್ರೀಯ ಮಹತ್ವದ ವಿಷಯವಾಗಿದೆ. ಸ್ವರಾಜ್ಯ ಆಂದೋಲನದ ವಿವಿಧ ಉದ್ದೇಶ್ಯಗಳಲ್ಲಿ ಗೋಸಂರಕ್ಷಣೆಯು ಒಂದಾಗಿದ್ದು, ಸ್ವರಾಜ್ಯ ಬಂದು ಹತ್ತೊಂಭತ್ತು ವರ್ಷಗಳಾದರೂ ಇದು ಕಾರ್ಯಗತವಾಗದೆ ಇರುವುದು ವಿಷಾದಕರವಾಗಿದೆ.

ಭಾರತದ ಸಂವಿಧಾನದಲ್ಲಿ ಸಂಪೂರ್ಣವಾಗಿ ಗೋಹತ್ಯೆಯು ನಿಷೇಧವಾಗಬೇಕೆಂಬ ಆದೇಶವು ಸ್ಪಷ್ಟವಾಗಿದೆ. ಪ್ರಾಂತೀಯಮಟ್ಟದಲ್ಲಿ ಈವರೆಗೆ ಆಗಿರುವ ಶಾಸನಗಳು, ಪಥಾರ್ಹ ಗೋವುಗಳ ವಯಸ್ಸಿನ ನಿರ್ಬಂಧ—ಮುಂತಾದ ಅರ್ಥಮರ್ಥಕ್ರಮಗಳಿಂದ ಗೋಸಂರಕ್ಷಣೆಯ ಮೂಲ ಉದ್ದೇಶ್ಯವು ಸಂಪೂರ್ಣವಾಗಿ ಸಾಧಿತವಾಗದೆಂದು ಈವರೆಗಿನ ಅನುಭವದಿಂದ ಗೊತ್ತಾಗಿದೆ. ಇದಕ್ಕಾಗಿ ಸಂವಿಧಾನದಲ್ಲಿ ಅಗತ್ಯವಾದ ತಾಂತ್ರಿಕ ತಿದ್ದುಪಡಿಯನ್ನು ಮಾಡಿ, ಕೇಂದ್ರೀಯ ಶಾಸನವನ್ನೇ ರಚಿಸುವುದು ಅಗತ್ಯ.

ಕವಿಪ್ರಪಂಚಕ್ಕೆ ತುರ್ತು ಪರಿಸ್ಥಿತಿ

(ನಾಲ್ಕನೇ ಪುಟದಿಂದ)

'ಅದು ಹೇಳೋದು ಮಾತ್ರ. ನೋಡೋಣ, ಅವ್ರು ಮನೆಹೆಂಡ್ತೀನ್ನ ಮಗಳನ್ನ ಹಾಗೆ ಕುಣಿಸಲಿ...'

'ಅದು ಖರೆ. ಸಿನಿಮಾದಲ್ಲಿ ಸ್ನಾನ ಕೆರೆಯಲ್ಲೇ ನಡೀಬೇಕು—ಅದು ಚಂದ. ಮನೆಯಲ್ಲಿ ನಾಲ್ಕು ಗೋಡೆಗಳ ಒಳಗೇನೇ...'

'ಪತ್ನೀಧರ್ಮ? ಸಮಾಜ ಬೇರೆಯ ಹುಚ್ಚರನ್ನು ಕಂಡು ತಾನು ಚಪ್ಪಾಳೆ ತಟ್ಟಿ ಸಂತೋಷ ಪಡುತ್ತದೆ..'

"ಹೌದೂನ್ನ...."

'ಅಂತಹ ಹುಚ್ಚರೂ ಹುಟ್ಟುತ್ತಿರುತ್ತಾರೆ..ಯಥಾರ್ಥವಾದಿಗಳೆಂದು ಕವಿಗಳಾವು ಕರೆಯುತ್ತಾರೆ..."

'ಆದರೆ ನೋಡು, ಮನ್ರೋ ತಾಯಿಯಾಗುವ ಭಾಗ್ಯವನ್ನೇ ಹೊಂದಲಿಲ್ಲ; ಆಕೆಯ ಸ್ತನಗಳಿಂದಲೂ ಹಾಲು ಸುರಿಸುವುದು ಪ್ರಾಯಃ ಮಳಲುವಾದವಿದ್ದರೂ ಇರಬಹುದು....'

"ಹೌದು. ನಿಮ್ಮ ಕವಿಗಳೇನು ಸಾಮಾನ್ಯರೆ? ಕಲ್ಲಲ್ಲಿಯೂ ನಾರಿತ್ವ ಕಾಣುವವರು; ಮಳಲಲ್ಲಿಯೂ ನೀರಿತ್ತುವವರು ಬಂಜೆಯ ಮೊಲೆ ಹಿಡಿದು ಹಾಲು ಉಕ್ಕಿಸುವಷ್ಟು ವಿಷಯ ಲಂಪಟರು...'

'ಸಾಕಮ್ಮ, ನಿನ್ನ ಬೀಗ ತೆಗೆದು ನಿನ್ನ ಬಾಯಿಗೆ ಹಾಕಿಕೋ.... ಯಾರಾದರೂ ಕೇಳಿದರೆ ಮತ್ತೆ ಮನೆಗೆ ಬೆಂಕಿ ಬಿತ್ತೂಂತ....'

'ಸಾಯ್ಲಿ ಬಿಡಿ. ಅವರವರ ಕರ್ಮ ಅವರವರಿಗೆ ಆದರೂ ನನಗನಿಸುತ್ತದೆ: ದೇಶದಲ್ಲಿ ತುರ್ತು ಪರಿಸ್ಥಿತಿ ಹಿಂತೆಗೆದ ಕೂಡಲೆ, ಸಮಾಜದ ಭದ್ರತೆಗಾಗಿ ಕವಿಗಳ ಪ್ರಪಂಚದ ಮೇಲೆ ಅದನ್ನು ಸಾರಬೇಕು ..."

"ಹೇಗೂ ನಿಮ್ಮ ಸರ್ಕಾರ..."

"ಆದರೂ ನಿಮ್ಮಂಥವರು ಬಿಡಬೇಕಲ್ಲ"

"ಓ...."

"ಅಯ್ಯೋ, ಇದೆಂಥದು?"

'ಶ್ಶ್....'' —ಗೋರಾ.

ಇದೆನ್ನ ಸಾಧಿಸಲು ಶ್ರೀ ಪ್ರಭುದತ್ತ ಬ್ರಹ್ಮಚಾರಿ ಮುಂತಾದ ಸಾಧುಸಂತರ ನೇತೃತ್ವದಲ್ಲಿ ದೇಶಾದ್ಯಂತವೂ ಸಂಪೂರ್ಣ ಗೋಹತ್ಯಾ ನಿರೋಧ ಅಭಿಯಾನವು ಈಗ ಪ್ರಾರಂಭವಾಗಿದೆ. ನೂರಾರು ಜನ ಸಾಧುಗಳು ದಿಲ್ಲಿಯಲ್ಲಿ ಪ್ರದರ್ಶನ - ಉಪವಾಸಗಳನ್ನು ನಡೆಸಿ, ಜೈಲುವಾಸವನ್ನು ಅನುಭವಿಸುತ್ತ ಜನಕೋಟಿಯ ಹೃದಯಾಂತರಾಳದ ಭಾವನೆಯನ್ನು ವ್ಯಕ್ತಗೊಳಿಸಿದ್ದಾರೆ. ಬರಲಿರುವ ಕಾರ್ತೀಕ ಶುದ್ಧ ಅಷ್ಟಮಿ ದಿನದಿಂದ ಹಲವು ಹಿರಿಯ ಧಾರ್ಮಿಕ ಮುಖಂಡರು ಈ ಮಹತ್ಕಾರ್ಯದ ಸಲುವಾಗಿ ಆಮರಣ ಉಪವಾಸ ನಡೆಸಲು ನಿಶ್ಚಯಿಸಿರುವುದು ನಮಗೆ ಚಿಂತೆಯನ್ನು ಉಂಟುಮಾಡಿದೆ. ಸ್ವತಂತ್ರ ಭಾರತದಲ್ಲಿ ಗೋಹತ್ಯಾ ನಿರೋಧಕ್ಕಾಗಿ ಸಾಧುಗಳು ಪ್ರಾಣಾರ್ಪಣೆ ಮಾಡಬೇಕಾಗಿ ಬಂದಿರುವುದು ಅತ್ಯಂತ ಶೋಚನೀಯ. ಒಂದು ವೇಳೆ ಈ ದುರಂತವೇನಾದರೂ ಸಂಭವಿಸಿದರೆ ಜನತೆಯ ಭಾವನೆಗಳಿಗೆ ತೀವ್ರವಾದ ಆಘಾತವುಂಟಾಗಿ ದೇಶಾದ್ಯಂತವೂ ಕ್ಷೋಭೆಯುಂಟಾದೀತು. ಹೀಗಾಗುವುದಕ್ಕೆ ಮೊದಲೇ ಸರ್ಕಾರವು ಎಚ್ಚತ್ತು ಜನತೆಯ ಆಳವಾದ ಧಾರ್ಮಿಕ ಭಾವನೆಗಳನ್ನು ಪುರಸ್ಕರಿಸಿ ಆವಶ್ಯಕವಾದ ಶಾಸನ ರಚಿಸಲು ಮುಂದಾಗಬೇಕಾಗಿ ನಾವು ಒತ್ತಾಯಪಡಿಸುತ್ತೇವೆ. ಗೋಹತ್ಯಾನಿರೋಧ ಶಾಸನ ಈಗ ಜಾರಿಯಲ್ಲಿರುವ ಪ್ರದೇಶಗಳಲ್ಲಿ ಅಧಿಕಾರಿಗಳು, ಇದನ್ನು ಕಟ್ಟುನಿಟ್ಟಾಗಿ ಜಾರಿಗೆ ತರಬೇಕು. ಜನತೆಯೂ ಎಚ್ಚರವಹಿಸಿ ಈ ಕಾಯಿದೆ ವಿರುದ್ಧವಾದ ಪಾಪಕೃತ್ಯ ನಡೆಯದಂತೆ ನೋಡಿಕೊಳ್ಳಬೇಕು. ಈಗ ನಡೆಯುತ್ತಿರುವ ಸಂಪೂರ್ಣ ಗೋಹತ್ಯಾನಿರೋಧ ಅಭಿಯಾನದಲ್ಲಿ ಜನತೆಯು ಸಕ್ರಿಯವಾಗಿ ಸಹಯೋಗ ನೀಡಿ ಗೋಸಂರಕ್ಷಣೆಯ ಪವಿತ್ರ ಧ್ಯೇಯವನ್ನು ಸಾಧಿಸಿಗೋಪಾಲಕೃಷ್ಣನ ಅನುಗ್ರಹ ಗಳಿಸಬೇಕೆಂದು ನಾವು ಕರೆ ನೀಡುತ್ತೇವೆ.

ಸಾಹಿತಿ ರಾಜಕಾರಣಿಯ ದಾರಿ ತುಳಿಯಬಾರದು

ತೆನ್ನಿಗೋಳಿ, ಪ್ರಸಿದ್ಧ ಸಾಹಿತಿ ಡಾ॥ ಕೆ. ಶಿವರಾಮ ಕಾರಂತರು ಯುಗಪುರುಷ ಮಾಸಪತ್ರಿಕೆಯ ದಸರಾ ವಿಶೇಷಾಂಕವನ್ನು ಪೇಜಾವರ ಮಠಾಧೀಶ ಶ್ರೀ ವಿಶ್ವೇಶ ತೀರ್ಥ ಶ್ರೀಪಾದಂಗಳವರ ಅಧ್ಯಕ್ಷತೆಯಲ್ಲಿ ಉದ್ಘಾಟಿಸಿ, ಮಾತನಾಡುತ್ತಾ ಬರಹಗಾರರು ರಾಜಕೀಯ ಧುರೀಣರೆಂಬವರ ದಾರಿ ಹಿಡಿಯಬಾರದು ಎಂದು ನುಡಿದರು. ಅಧ್ಯಕ್ಷರು ಎಲ್ಲರಿಗೂ ಸರಿಯಾಗಿರುವ ಶುದ್ಧ ಸಾಹಿತ್ಯವನ್ನು ರಚಿಸಬೇಕೆಂದು 'ಸಾರಿ ಯುಗಪುರುಷ'ಕ್ಕೆ ಶುಭಕೋರಿದರು.

ಶ್ರೀಮತಿ ಸುಮಂಗಲಾ ದೇವಿಯವರ ವೀಣಾವಾದನದ ನಂತರ ಸಂಪಾದಕ ಶ್ರೀ ಕೆ. ಅನಂತ ಪದ್ಮನಾಭ ಉಡುಪರಿಂದ ಆಭಾರ ಮನ್ನಣೆಯಾಯಿತು

ದಂತ ವಿಭಾಗದ ಪ್ರಗತಿ

ಮಣಿಪಾಲ, ಅ.೧೫—ಬಾಯಿಯ ಶಸ್ತ್ರ ಚಿಕಿತ್ಸೆಯ ಬಗ್ಗೆ ಗಣನೀಯ ಸಂಶೋಧನೆ ನಡೆಸಿ ಅಂತರಾಷ್ಟ್ರೀಯ ಗೌರವಗಳನ್ನು ಗಳಿಸಿದ ಡಾ|| ಸುಂದರ್ ಜೆ. ವಝ್ರಾನಿಯವರು ಇಲ್ಲಿಯ ಕಸ್ತೂರ್ಬಾ ಮೆಡಿಕಲ್ ಕಾಲೇಜಿನಲ್ಲಿ ದಂತ ವಿಜ್ಞಾನ ವಿಭಾಗದ ಮುಖ್ಯಾಧಿಕಾರಿಯಾಗಿ ಅಧಿಕಾರ ಸ್ವೀಕರಿಸಿದ್ದಾರೆ.

ಭಾರತದಲ್ಲಿ ದಂತ ಶಸ್ತ್ರ ಚಿಕಿತ್ಸಾ ಶಿಕ್ಷಣವನ್ನು ಕೊಡುವ ಹತ್ತು ಕೇಂದ್ರಗಳಲ್ಲೊಂದಾದ ಈ ಕಾಲೇಜಿನ ದಂತ ವಿಭಾಗವನ್ನು ಕಳೆದ ವರ್ಷ ಆರಂಭಿಸಲಾಗಿತ್ತು.

ಆರೋಗ್ಯ ಸಪ್ತಾಹ ಉದ್ಘಾಟನೆ

ಕಳೆದ ತಾ. 18ರಂದು ಮಂಗಳೂರು ನಗರ ಸಭೆಯ ಆರೋಗ್ಯ ಸಪ್ತಾಹವನ್ನು ಪದ್ಮಶ್ರೀ ಡಾ॥ ಟಿ. ಎಂ. ಎ. ಪೈಯವರು ಉದ್ಘಾಟಿಸುತ್ತಾ ಒಂದು ನಗರ ಅಥವಾ ಪಟ್ಟಣದ ಜನತೆಯ ಆರೋಗ್ಯವು ಅಲ್ಲಿನ ನಗರ ಸಭೆಯ ಗುಣಮಟ್ಟದ ನಿರ್ಣಾಯಕಗಳಲ್ಲೊಂದಾಗಿದೆ ಎಂದು ನುಡಿದರು. ಮುಂದುವರಿಸುತ್ತಾ ಅವರು ಚಿಕಿತ್ಸೆಗಿಂತ ರೋಗವನ್ನು ತಡೆಗಟ್ಟುವುದೇ ಮೇಲು ಎಂಬ ಮಾತನ್ನು ಪ್ರತಿಪಾದಿಸಿದರು.

ಪ್ರಾರಂಭದಲ್ಲಿ ನಗರ ಸಭಾಧ್ಯಕ್ಷ ಶ್ರೀ ಬಿ. ಸೋಮಶೇಖರ ರಾವ್‌ರವರು ಸ್ವಾಗತಿಸಿ ನಗರ ಸಭೆ ಕೈಗೊಂಡ ಕಾರ್ಯಗಳನ್ನು ವಿವರಿಸಿದರು. ಕೊನೆಯಲ್ಲಿ ಆರೋಗ್ಯ ಸಪ್ತಾಹ ಸಮಿತಿಯ ಚೆಯರ್‌ಮೆನ್ ಡಾ|| ಎಂ. ಪಿ. ಪೈಯವರು ಧನ್ಯವಾದ ಸಮರ್ಪಿಸಿದರು.

ದಿ ವಿಜಯಾ ಬೇಂಕ್ ಲಿಮಿಟೆಡ್, ಕಾರ್ಕಳ.

ರಿಜಿಸ್ಟರ್ಡ್ ಆಫೀಸು: ಲೈಟ್ ಹೌಸ್ ಹಿಲ್ ರೋಡು, ಮಂಗಳೂರು-3.

ಏಲಂ ನೋಟೀಸು

ಈ ಕೆಳಗೆ ಹೆಸರು ಕಾಣಿಸಿದ ಮಹನೀಯರು ನಮ್ಮ ಶಾಖೆಯಿಂದ ಚಿನ್ನಾಭರಣ ನಗಗಳ ಈಡಿನ ಮೇಲೆ ಪಡೆದ ಸಾಲವನ್ನು ವ್ಯಾದೆಗೆ ಸರಿಯಾಗಿ ಮರುಪಾವತಿ ಮಾಡದೆ ಇದ್ದುದರಿಂದ ಸದ್ರಿಯವರಿಗೆ ರಿಜಿಸ್ಟ್ರ ನೋಟೀಸು ಮೂಲಕ ಕೇಳಿಕೊಂಡಿದ್ದಕ್ಕೆ ಕೆಲವರಿಗೆ ಬಿಟ್ಟ ರಿಜಿಸ್ಟ್ರ ನೋಟೀಸುಗಳು ಕಾರಣಾಂತರಗಳಿಂದ ನಮಗೇನೇ ವಾಪಾಸು ಬಂದಿರುವುದರಿಂದಲೂ, ಇನ್ನು ಕೆಲವರು ಯಾವುದೇ ರೀತಿಯ ಕ್ರಮ ತೆಗೆದುಕೊಳ್ಳದೆ ಇದ್ದುದರಿಂದಲೂ, ಸದ್ರಿಯವರಿಗೆ—ವ—ಅವರ ವಾರೀಸುದಾರರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ಸಾಲದ ಬಾಬ್ತು ಬೇಂಕಿಗೆ ಸಲ್ಲತಕ್ಕ ಮೊಬಲಗನ್ನು ಇದೇ ತಾರೀಕು 16—11—1966ರ ಒಳಗೆ ಬೇಂಕಿಗೆ ಮರುಪಾವತಿ ಮಾಡಲು ತಪ್ಪಿದಲ್ಲಿ, ಸದ್ರಿಯವರು ನಮ್ಮಲ್ಲಿ ಅಡವಿಟ್ಟ ನಗಗಳನ್ನು ತಾರೀಕು16—11—1966ರಲ್ಲು ಅಪರಾಹ್ನ ಗಂಟೆ 3ಕ್ಕೆ ಸರಿಯಾಗಿ ಬೇಂಕಿನ ಮಾಡರದಲ್ಲಿ ಬಹಿರಂಗ ಹರಾಜು ಮಾಡಲಾದೀತು—ಯಾ—ಬೇಂಕಿಗೆ ಯುಕ್ತ ಕಂಡ ಇತರ ದಿನಗಳಲ್ಲಿ ಪುನಃ ನೋಟೀಸು ಕೊಡದೇನೇ ಬಹಿರಂಗ—ಯಾ—ಖಾಸಗಿಯಾಗಿ ಹರಾಜು ಮಾಡಲಾದೀತು. ಯೀ ಸಂಬಂಧ ಬೇಂಕಿಗೆ ಉಂಟಾಗಬಹುದಾದ ಸಕಲ ಖರ್ಚು—ವ—ನಷ್ಟವನ್ನು ತೆರಲು ಸದ್ರಿ ಸಾಲಗಾರರು ಜವಾಬುದಾರರಾಗುತ್ತಾರೆ. ತಿಳಿದಿರಲಿ.

ಸಾಲದ ಜಂಜ್ರಾ ನಂಬರು	ಸಾಲಗಾರನ ಹೆಸರು ಮತ್ತು ವಿಳಾಸ	ತಾರೀಕು 30—9—66ಕ್ಕೆ ಬಾಕಿ ಇರುವ ಶಿಲ್ಕು
69/65	ಶ್ರೀಮತಿ ಸೇಸಿ ಪೂಜಾರ್ತಿ, ರಂಗು ಪೂಜಾರ್ತಿಯ ಮಗಳು, ಕಂಟಿಬೈಲು, Post ಮಿಯ್ಯಾರು, ಕಾರ್ಕಳ ತಾಲೂಕು.	251—90
105/65	ಶ್ರೀ A. N. ಸನ್ಮತಿ, N. D. ಸದಾನಂದರವರ ಮಗ, ಕ್ಲಾರ್ಕ್, ಪಿ. ಡಬ್ಲ್ಯೂ. ಡಿ. ಕಾರ್ಕಳ.	50—15
187/65	ಶ್ರೀ ಜಯ ಸೆಟ್ಟಿ, ಕರಿಯ ಸೆಟ್ರ ಮಗ, ರೈತ, ದಂಡಿಬೆಟ್ಟು ಮನೆ, ಕುಂಟಾಡಿ, ಪೋಸ್ಟು ಕುಂಟಾಡಿ.	113—65
237/65	ಶ್ರೀ ರತ್ನಪ್ಪ ಪೂಜಾರಿ, ಅಪ್ಪು ಪೂಜಾರಿಯವರ ಮಗ, ಹೊಸಮನೆ, ಪೋಸ್ಟ್ ಕುಂಟಾಡಿ.	69—35
277/65	ಶ್ರೀ ತಿಮ್ಮಪ್ಪ ಪೂಜಾರಿ, ಚ... ಪೂಜಾರಿಯವರ ಮಗ, ಕೊಂಕನಬೆಟ್ಟು ಮನೆ, ಕುಂಟಾಡಿ ಗ್ರಾಮ. ಪೋಸ್ಟ್ ಕುಂಟಾಡಿ	289—30
304/65	ಶ್ರೀಮತಿ ಸುಶೀಲ ಸೆಡ್ತಿ, ಬೋಜ ಸೆಟ್ರ ಪತ್ನಿ, ಜತ್ತಿಬೆಟ್ಟು, ಕಾರ್ಕಳ ಮುಂಡ್ಕೂರು ಗ್ರಾಮ, ಪೋಸ್ಟ್ ಹೆರ್ಮುಂಡೆ.	67—35
468/64	ಶ್ರೀ ಶಾಮ ಸೆಟ್ಟಿ, ಅಂತಯ್ಯ ಸೆಟ್ರ ಅಳಿಯ, ಟೀಚರ್, ಸಾಣೂರು,	548—65
380/65	ಶ್ರೀ ಕೆ. ಶಾಮ ಹೆಗ್ಡೆ, ಹೂವಯ್ಯ ಹೆಗ್ಡೆಯವರ ಮಗ, ಕೊಂಚಲ ಮನೆ, ಕಳ್ಯಾ ಗ್ರಾಮ, ಪೋಸ್ಟು ಕುಂಟಾಡಿ.	238—65

ಸ್ಥಳ: ಕಾರ್ಕಳ
ತಾರೀಕು. 21—10—66

(ಸಹಿ) ಕೆ. ಕೃಷ್ಣ ಸೆಟ್ಟಿ
ಮೆನೇಜರ್

ನಗರ ಸಭಾಪತಿಗಳಾಗಿ ಮಧ್ಯಸ್ಥರ ಆಯ್ಕೆ

ಉಡುಪಿ ನಗರ ಸಭಾಧ್ಯಕ್ಷ ಸ್ಥಾನಕ್ಕೆ ತಾ. 18ರಂದು ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ಸಿಗರೊಳಗೇ ಸ್ಪರ್ಧೆ ನಡೆದು ಶ್ರೀ ಕೆ. ಎಂ. ಮಧ್ಯಸ್ಥರು ಅಧ್ಯಕ್ಷರಾಗಿ ಆಯ್ಕೆಗೊಂಡಿದ್ದಾರೆ. ಶ್ರೀ ಕಚ್ಛಿ ಕೇಶವ ಕಾಮತರು ಪ್ರತಿಸ್ಪರ್ಧಿಯಾಗಿದ್ದರು.

ದೆಹಲಿ ಹೈಕೋರ್ಟಿನ ಮುಖ್ಯ ನ್ಯಾಯಾಧೀಶರಾಗಿ ಸದಾನಂದ ಹೆಗ್ಡೇರ ನೇಮಕ

ಮೈಸೂರು ಹೈಕೋರ್ಟಿನ ಹಿರಿಯ ನ್ಯಾಯಾಧೀಶರಲ್ಲೊಬ್ಬರೂ ದ. ಕನ್ನಡಿಗರೂ ಆದ ಶ್ರೀ ಕೆ. ಸದಾನಂದ ಹೆಗ್ಡೆ ಅವರನ್ನು ಹೊಸತಾಗಿ ರಚನೆಗೊಂಡ ದೆಹಲಿ ಮತ್ತು ಹಿಮಾಚಲ ಪ್ರದೇಶದ ಹೈಕೋರ್ಟಿನ ಮುಖ್ಯ ನ್ಯಾಯಾಧೀಶರನ್ನಾಗಿ ನೇಮಿಸಲಾಗಿದ್ದು, ಇವರು ನವಂಬರ ಒಂದರಂದು ಅಧಿಕಾರ ಸ್ವೀಕರಿಸುವರು. 57 ವರ್ಷ ವಯಸ್ಸಿನ ಹೆಗ್ಡೆಯವರು ಮದ್ರಾಸು ವಿಶ್ವವಿದ್ಯಾನಿಲಯದಿಂದ ಎಂ. ಎ. ಪದವಿಯನ್ನು ಮತ್ತು ಲಾ ಡಿಗ್ರಿಯನ್ನು ಪಡೆದು, 1941ರ ತನಕ ಕಾರ್ಕಳದಲ್ಲಿ ವಕಾಲತು ನಡೆಸಿ ಬಳಿಕ ಮಂಗಳೂರಿಗೆ ತೆರಳಿದರು. 1947ರಲ್ಲಿ ಪಬ್ಲಿಕ್ ಪ್ರೊಸಿಕ್ಯೂಟರರಾಗಿ ನೇಮಕಗೊಂಡರು. 1952ರಲ್ಲಿ ರಾಜ್ಯಸಭೆಗೆ ಆರಿಸಿ ಬಂದಿದ್ದರು. ಸ್ವಲ್ಪ ಕಾಲ ಮದ್ರಾಸಿನಲ್ಲಿ ವಕಾಲತು ನಡೆಸಿದ ಬಳಿಕ ಬೆಂಗಳೂರಿಗೆ ತೆರಳಿದರು. 1957ರಲ್ಲಿ ಮೈಸೂರು ಹೈಕೋರ್ಟಿನ ಓರ್ವ ನ್ಯಾಯಾಧೀಶರಾಗಿ ನೇಮಕಗೊಂಡರು. ಪ್ರತಿಭಾಶಾಲಿಗಳೂ ದಕ್ಷರೂ ಆದ ಶ್ರೀ ಹೆಗ್ಡೆಯವರು ಸಂವಿಧಾನ ಶಾಸನದಲ್ಲಿ ತಜ್ಞರಾಗಿರುವರು

ವಿಜಯ ಬ್ಯಾಂಕಿನ ಉಡುಪಿ ಶಾಖೆಯ ಸ್ಥಳ ಬದಲಾವಣೆ

ತಾ. 24—10—66ರಂದು ವಿಜಯ ಬ್ಯಾಂಕಿನ ಉಡುಪಿ ಶಾಖೆಯು ಚರ್ಚ್ ರೋಡಿನ ಉಡುಪಿ ಬಿಲ್ಡಿಂಗ್ ಎಂಬ ನಗರದ ಕೇಂದ್ರ ಸ್ಥಾನದಲ್ಲಿರುವ ವಿಶಾಲವಾದ ಹೊಸ ಕಟ್ಟಡಕ್ಕೆ ವರ್ಗಾಯಿಸಲ್ಪಟ್ಟಿರುವುದು. ಈ ಸಂಬಂಧ ಸಂಜೆ ಏರ್ಪಡಿಸಲಾದ ಸಮಾರಂಭಕ್ಕೆ ನಗರದ ಹಾಗೂ ಆಸುಪಾಸಿನ ಮಹನೀಯರನೇಕರು ಸಂದರ್ಶನವಿತ್ತರು. ಡಿಪ್ಟಿ ಕಾರ್ಯದರ್ಶಿ ಶ್ರೀ ವಿಠಲ ಶೆಟ್ಟರೂ ಸ್ಥಳೀಯ ಶಾಖಾ ಮೆನೇಜರ್ ಶ್ರೀ ಕೆ. ಶೀನಪ್ಪ ರೈಗಳೂ ಅತಿಥಿ ಅಭ್ಯಾಗತರನ್ನು ಆದರದಿಂದ ಸ್ವಾಗತಿಸಿದರು.

(ಮೂರನೇ ಪುಟದಿಂದ)

ಬಾಂಬುದಾಳಿ ನಿಲ್ಲಿಸುವ ಸಂಬಂಧದಲ್ಲಿ ಯಾವ ಸೂಚನೆಯೂ ಇಲ್ಲವಾದುದರಿಂದ ಅಮೆರಿಕ ತನ್ನ ದಾಳಿನೀತಿಯನ್ನು ಬಿಟ್ಟುಕೊಡುವ ಲಕ್ಷಣವೇನಿಲ್ಲ ಆದರೆ, ಒಂದು ಮಾತು ನಿಜ. ವಿಯತ್ನಾಮದ ಅಶಾಂತಿಯು ಜಾಗತಿಕ ಅಶಾಂತಿಗೆ ಮೂಲವೆಂಬುದನ್ನು ಮನವರಿಕೆ ಮಾಡಿಕೊಂಡಿರುವ ಜಗತ್ತು ಅಲ್ಲಿ ಶಾಂತಿ ನೆಲಸುವಂತೆ ಸರ್ವಪ್ರಯತ್ನವನ್ನೂ ಮಾಡಬೇಕು. ಹಕ್ಕಿಗಳು ಕಾಳು ಹೊತ್ತು ಹೋದ ಮೇಲೆ ತಲೆ ಕುಟ್ಟಿಕೊಂಡು ಅತ್ತರೆ ಲಾಭವಿಲ್ಲ.

ಕೊಲೆ ಗಟುಕ

(ಎರಡನೇ ಪುಟದಿಂದ)

ನಿಶಬ್ದ ನಿಶೆಯ ನೀರವತೆಯಲ್ಲಿ ಬಹು ದೂರಕ್ಕೆ ಕೇಳಿಸುತ್ತಿತ್ತು; ಸಂಕ್ರಿ ಒಳಬದಸಾಲೆಯಲ್ಲಿ ಚಾಪೆಯ ಮೇಲೆ ಹೊರಳಾಡುತ್ತಿದ್ದಳು; ಹೊರಗೆ ಜಗಲಿಯ ಕೋಣೆಯಲ್ಲಿ ರಂಗೇ ಗೌಡ ಅಸವ್ವಸ್ತನಾಗಿ ಹೊರಳಾಡುತ್ತಿದ್ದ; ಇಬ್ಬರ ಹೃದಯದಲ್ಲೂ ಯಾವುದೋ ಮಧುರ ವೇದನೆ ಪುಂಖಾನುಪುಂಖವಾಗಿ ಸುತ್ತಿ ಸುಳಿಯುತಿತ್ತು.

ಕಗ್ಗತ್ತಲೆಯಲ್ಲಿ ಸಂಕ್ರಿ ಮೆಲ್ಲನೆ ಎದ್ದಳು; ಯಾವುದೋ ಪ್ರಚೋದಕ ಧೀಃಶಕ್ತಿ ಅವಳ ಯೌವನದ ಕಾಮದ ಉತ್ಕಟತೆಯನ್ನು ಉದ್ದೀಪನಗೊಳಿಸುತ್ತಿತ್ತು. ಕಳ್ಳಹೆಜ್ಜೆಯನ್ನಿಡುತ್ತಾ ಬಂದ ಸಂಕ್ರಿಯನ್ನು ಮುಖ ಭಯ ವಿಹ್ವಲತೆಯಿಂದ ಬೆವರುತ್ತಿತ್ತು; ಸಂಕ್ರಿಯ ಮಧುರ ಕೈಗಳಸ್ಪರ್ಶ ರಂಗೇ ಗೌಡನಿಗೆ ತಾಕಿದಾಗ ಹಾವು ತುಳಿದಂತಾಯ್ತು ಆತನಿಗೆ. ಕತ್ತಲೆಯಲ್ಲಿ ಸಂಕ್ರಿಯ ಪಿಸು ಮಾತು, ನಸುನಗುವಿನೊಂದಿಗೆ ಕೂಡಿದ, ಎಳಕಾಯ, ಹರೆಯದ ತರುಣ ಅವಿವಾಹಿತ ರಂಗೇ ಗೌಡನನ್ನು ಕಾಪುರುಷನನ್ನಾಗಿ ಮಾಡಿತ್ತು. ಬಾಚಿ ತಬ್ಬಿದ್ದ ಆತನ ಕೈಗಳು ಸಂಕ್ರಿಯನ್ನು ಬಲವಾಗಿ ಆಲಂಗಿಸಿದಾಗ ಆಕೆ ಆನಂದ ತುಂದಿಲಳಾದಳು; ಎರಡು ದೇಹ ಹೊಸೆದುವು—ಎರಡು ಹೃದಯ ಬೆಸೆದುವು. ಇಬ್ಬರೂ ಇಹ ಲೋಕದಿಂದ ದೂರವಾಗಿದ್ದರು.

ಮಳೆ ಜೋರಾಗಿ ಬರುತ್ತಲೇ ಇತ್ತು!...

ಆದರಲ್ಲೂ ಆಚಾರಿಯ ಗೊರಕೆ ಕೇಳುತ್ತಲೇ ಇತ್ತು.

ಬರಸಿಡಿಲೊಂದು ಭೂಮಿ ಬಡೆವಂತೆ ಬಡಿಯಿತು. ಆ ಧ್ವನಿಗೆ, ಗಾಢ ನಿದ್ರೆಯಲ್ಲಿದ್ದ ಆಚಾರಿಗೆ ಹೊಡೆದೆಬ್ಬಿಸಿದಂತೆ ಎಚ್ಚರವಾಯ್ತು; ಕಣ್ಣು ಹೊಸಗಿ, ಎದ್ದು ಬೀಡಿ ಹೊತ್ತಿಸಲು ಎದ್ದ ಆಚಾರಿಗೆ ಹೊರಗೆ ಪಿಸುಧ್ವನಿ ಅಸ್ಪಷ್ಟವಾಗಿ ಕೇಳಿತು. ಸಂದೇಹಗ್ರಸ್ತನಾದ ಆಚಾರಿ, ಕಳ್ಳಹೆಜ್ಜೆಯನ್ನಿಡುತ್ತಾ ಹೊರ ಬಂದ— ಕಡುಗೋಲಿನೊಂದಿಗೆ. ಜಗಲಿಯ ಕೋಣೆಯ ಹತ್ತಿರ ನಿಂತು ಕಿವಿಯಾನಿಸಿ ನಿಂತ. ಹೌದು! ಸಂಕ್ರಿಯ ನಗು; ರಂಗೇ ಗೌಡನ ನಗು. ಆಚಾರಿಯ ಆಪಾದ ಮಸ್ತಕದಲ್ಲಿ ರಕ್ತದ ಬಿಸಿ ಹೊಳೆ ಹರಿಯಿತ್ತು. ಕ್ರೋಧದಿಂದ ಪ್ರಮತ್ತನಾದ ಆಚಾರಿ, ಬಾಗಿಲನ್ನು ಬಲವಾಗಿ ತುಳಿದ; ಒಳಗಿನಲ್ಲಿದ್ದವರ ರಕ್ತ ಕಟ್ಟಿತು. ಆಚಾರಿ ತುಳಿಯುತ್ತಲೇ ಇದ್ದ. ಹಳೆಯ ಬಾಗಿಲು ಜೀರ್ಣ ಶೀರ್ಣವಾಗಿ ತುಂಡಾಯಿತು. ಮಲಗಿದ್ದವರೆಲ್ಲರಿಗೆ ಎಚ್ಚರವಾಯ್ತು; ದೀಪ ಹೊತ್ತಿತು. ಆಚಾರಿ ರುದ್ರ ಭೀಕರ ಅವತಾರ ತಾಳಿದ್ದ.

ಒಳಗೆ ಸಂಕ್ರಿ—ರಂಗೇ ಗೌಡ ಭಯದ ಸಾಕಾರ ಮೂರ್ತಿಯಾಗಿದ್ದರು; ಯಮ ರೂಪಿಯಾಗಿದ್ದ ಆಚಾರಿ, ಒಂದೇ ಸವನೆ ಹಾರಿ, ಬಾಗಿಲಿಗೆ ಅಡ್ಡವಾಗಿ ನಿಂತು, ಕಡುಗೋಲು ಬೀಸಿದ; ಸಂಕ್ರಿಯ ರುಂಡ ಹಾರಿ, ನೆತ್ತರ ಓಕುಳಿ ಚೆಲ್ಲಿತು. ರಂಗೇ ಗೌಡ ಥರ ಗುಟ್ಟಿ ನಡುಗುತ್ತಿದ್ದ. ಕ್ರೋಧದಿಂದ ಪ್ರಮತ್ತನಾದ ಆಚಾರಿ ಪುನಃ ಕುಡುಗೋಲಿನಿಂದ ಬೀಸಿದ. ರಂಗೇ ಗೌಡನ ನೆತ್ತಿಯನ್ನು ಸೀಳಿತದು. ರಕ್ತ ಸಿಕ್ತವಾಗಿದ್ದ ಎರಡೂ ಶವಗಳ ಮಧ್ಯೆ ಆಚಾರಿ ನಗುತ್ತಿದ್ದ; ಆಚಾರಿಯನ್ನು ಎಲ್ಲರೂ ಕಂಡು ಭ್ರಾಂತರಾಗಿ ಸಾಲಭಂಜಿಕೆಯ ಕಡಿ ನೆಲಳಾಗಿದ್ದರು. ನಿಂತಲ್ಲಿಯೇ ನಿಂತಿದ್ದರು; ಅವರೆಲ್ಲಾ!

"ಹ್ಹ....ಹ್ಹ....ಹ್ಹ!" ವಿಕಟವಾಗಿ ನಗುತ್ತಲೇ ಇದ್ದ ಆಚಾರಿ, ಕುಡುಗೋಲಿಗೊಂದು ಮುತ್ತಿಕ್ಕಿ, ತನ್ನ ಕೊರಳಿಗೆ ತಾನು ಇರಿದುಕೊಂಡು ಆಚಾರಿಯ ಶರೀರ ನೆಲವನ್ನಾಕ್ರಮಿಸಿತ್ತು. ರಕ್ತದ ಹೊಳೆ ಹರಿಯುತ್ತಲೇ ಇತ್ತು. ತನ್ನ ಕೊಲೆ ತಾನೇ ಗೈದ!

ಸೇರಿದ್ದ ಮಂದಿ ನಿಂತೇ ಇದ್ದರು! ಹೊರಗೆ ಮಳೆ ಗಾಳಿ ಬರುತ್ತಲೇ ಇತ್ತು.

ಆಚಾರಿಯ ಶವ ಒಂದೆಡೆ, ರಂಗೇ ಗೌಡನ ಶವ ಇನ್ನೊಂದೆಡೆ, ಸಂಕ್ರಿಯ ಹೆಣ ಮತ್ತೊಂದೆಡೆ ಬಿದ್ದು, ರಕ್ತದಿಂದ ತೊಯ್ದು ಹೋಗಿದ್ದುವು. ಜನ ಒಬ್ಬೊಬ್ಬರೇ ಸೇರಿ, ಕಾಲು ಕೀಳಹತ್ತಿದರು. ಹವಾಲ್ದಾರ್ರ ಆಗಮನವಾದೊಡನೆ ಶವ ಪರೀಕ್ಷೆವಾಗಿ ಪಟ್ಟಣಕ್ಕೆ ಚಾಪೆಯಲ್ಲಿ ಸುತ್ತಿ ಕೊಂಡೊಯ್ಯಲಾಯಿತು. "ಕೊಲೆ ಗಟುಕ" ಆಚಾರಿ-ಎಲ್ಲರ ಬಾಯಲ್ಲೂ ಹಳ್ಳಿಯಲ್ಲಿ ಇದೇ ಮಾತು ಪ್ರತಿಧ್ವನಿತವಾಗುತಿತ್ತು.

ಆಚಾರಿ ತಾನೂ ಸತ್ತ ಇಬ್ಬರನ್ನು ಕೊಲೆಗೈದ.

ಹಳ್ಳಿಯ ಬಯಲು ನಾಟಕ ಅಂದು ಮುಗಿದಿತ್ತು.

ಮಲೆನಾಡು

ಯಾವ ಶಿಲ್ಪಿಯು ನಿನ್ನ
ಕೆತ್ತಿಹನು ಈ ತೆರದಿ
ಪೆಸರನಿಟ್ಟಿಹನಾರು
ಮಲೆನಾಡು ಎಂದು ‖ ೧ ‖

ಜಗದಿ ಕಾಣದ ಇನಿತು
ಇಂಚರದಿ ತುಂಬಿಡುವೆ
ಈ ಚೆಲುವ ತುಂಬಿಸಿದ
ರಸಿಕನಾರಿಹನು ‖ ೨ ‖

ಹೇಳು ರಾಜನೇ ನಿನ್ನ
ವನಕೆ ಮನ ಸೋತಿಹನೇ
ಯಾಕಾಗಿ ನಿನ್ನೊಳಗೆ
ತುಂಬಿಹನು ಹೇಳು ‖ ೩ ‖

ಏನಿಹುದು ಏನಿಲ್ಲ
ಅರಿತವನು ಯಾರಿಹನು
ಸಕಲ ಸಂಪದವೆಲ್ಲ
ನಿನ್ನೊಳಗೆ ಇಹುದೇ? ‖ ೪ ‖

ಆವ ಕವಿ ಬಿಟ್ಟಿಹನು
ನಿನ್ನ ರೂಪಕೆ ಸೋತು
ಮಾನವಾರೆ ಹಾಡಿಹರು
ನಿನ್ನ ಚೆಲುವನೇ ನೋಡಿ ‖ ೫ ‖

ಎತ್ತ ನೋಡಿದಡತ್ತ
ತಿಳಿಗಂಗೆ ಹರಿದಿಹಳು
ಧೋರ್ಗರೆದು ಬೀಳುತಿದೆ
ಜಲಪಾತವಾಗಿ ‖ ೬ ‖

ತೆಂಗಾಯ ತಿಳಿನೀರ
ಅಮೃತದಿ ಎನ್ನೊಡಲ
ತುಂಬಿಸಿದೆ ಹೇ! ತಾಯೆ
ಕನ್ನಡಿಗರಾ ಮಾಯೆ ‖ ೭ ‖

—ನಾರಾಯಣ ಮ. ನಾಯಕ,
—ಕಲಗೇರಿ

"ರಣಕಿದಿರು ಬಾರಾ!"

ಕನ್ನಡದ ಕಡು ಜಾಣ
ಬಂದಿದೇ ನಿನ್ನ ಸರದಿ;
ಗಡಿನಾಡ—ರಕ್ಷಣೆಗೆ
ದಾನಕೊಡು ನಿನ್ನ ಪ್ರಾಣ.
ಕೇರಳದ ಸೋದರರು;
ನೆರೆ ರಾಜ್ಯ ಮಹಾಂತಸ್ತ್ರ
ತಾಯ್ನೆಲದ ಸಿರಿ ಮುಡಿಯ
ಪಿಡಿದೆಳೆಯುತಿಹರು.
ಸಾಕು ನಿದ್ದೆಯು; ಕುವರಾ
ಸಾವಿಗಂಜದೆ— ಬಾರಾ
ಕನ್ನಡದ ಕಡುಗಲಿಯೆ
ರಣಕಿದಿರು— ಬಾರಾ.
ತಾಯ್ನೆಲವ ರಕ್ಷಿಸಲು;
ಬಲಿದಾನ— ವರ್ಪಿಸಲು
ನಿನಗೇಕೆ—ಸಂದೇಹ?
ಸ್ವೀಕರಿಸು ನಿನ್ನ ಪಾಲು.
ಕನ್ನಡಿಗರಾ—ಯಜ್ಞ
ಈ ಸಲದಿ—ಪೂರ್ಣ
ಹೂತಿ; ಗೊಳ್ಳುವುದು;
ಬಲಿದಾನಕನ್ನ ನೀನು ಆಜ್ಞ.

—ನಾರಾಯಣ, ಏತಡ್ಕ.

ಶಾಲಾ ಉಪಕಟ್ಟಡದ ಉದ್ಘಾಟನೆ

ಕೋಡ ಪಡವು ವಿಟ್ಲ ಪುತ್ತೂರು ಪಂಚಾಯತ್ ಹಾ. ಪ್ರಾ. ಶಾಲಾ ಉಪಕಟ್ಟಡದ ಉದ್ಘಾಟನೆಯನ್ನು ಅಳಿಕೆ ಲೋಕ ಸೇವಾ ವೃಂದದ ಅಧ್ಯಕ್ಷ ಶ್ರೀ ಎಂ. ನಾರಾಯಣ ಭಟ್ಟರು ಕಳೆದ ತಾ. 7ರಂದು ನೆರವೇರಿಸುತ್ತಾ, ಪ್ರತಿಯೊಂದು ಗ್ರಾಮದಲ್ಲಿಯೂ ವಿದ್ಯೆಯ ಪ್ರಚಾರ ಅಗತ್ಯವಿದೆ; ಉತ್ತಮ ಮಟ್ಟದ ವಿದ್ಯೆಯಿಂದ ಉತ್ತಮ ಜೀವನ ಸಾಗಿಸುವದು ಸಾಧ್ಯ; ಇಂದಿನ ವಿದ್ಯಾರ್ಥಿಗಳ ಅತ್ಯಾಚಾರಕ್ಕೆ ವಿದ್ಯಾರ್ಥಿಗಳಷ್ಟೇ ಕಾರಣರಲ್ಲ ಹೆತ್ತವರೂ ಅಧ್ಯಾಪಕರೂ, ರಾಜಕೀಯ ಧುರೀಣರೂ ವಿದ್ಯಾರ್ಥಿಗಳನ್ನು ಸರಿಯಾದ ದಾರಿಯಲ್ಲಿ ನಡೆಸಿದ್ದರೆ ಇಂಥಹ ಅತ್ಯಾಚಾರ ನಡೆಯಲಾರದು ಎಂದು ಹೇಳುತ್ತಾ, ಇಲ್ಲಿ ಬೇಗನೇ ಒಂದು ಹೈಸ್ಕೂಲು ತೆರೆಯುವಂತಾಗಲಿ ಎಂದು ಹಾರೈಸಿದರು.

ಸಭಾಧ್ಯಕ್ಷತೆಯನ್ನು ವಹಿಸಿದ್ದ ಶ್ರೀಮತಿ, ಲೀಲಾವತಿ, ಕೆ. ರೈಯವರು ಮಾತನಾಡುತ್ತಾ ಶ್ರೀ ನಾರಾಯಣ ಭಟ್ಟರು ಹಾಗೂ ಅವರ ತಾಯಿ ಗೌರಮ್ಮನವರು ತಮ್ಮ ಗ್ರಾಮದ ಏಳಿಗೆಗಾಗಿ ಶ್ರಮಿಸುತ್ತಿರುವುದನ್ನು ಮುಕ್ತ ಕಂಠದಿಂದ ಪ್ರಶಂಸಿಸಿದರು. ಹಾಗೂ ಮಹಿಳೆಯೂ ಗಿದ್ದುಕೊಂಡು ಇಲ್ಲಿಯ ಏಳಿಗೆಗಾಗಿ ದುಡಿಯುತ್ತಿರುವ ಪಂಚಾಯತ್ ಚೇರ್‌ಮೇನ್ ಶ್ರೀಮತಿ ಸಿ. ದೇವಕಿ ಅಮ್ಮರವರನ್ನೂ ಶ್ಲಾಘಿಸಿದರು. ಬಳಿಕ ಅಸಿಸ್ಟೆಂಟ್ ಇಂಜಿನಿಯರ್ ಶ್ರೀ ಗೋವಿಂದ ಭಟ್ಟರು ಕೆಲವು ಹಿತೋಕ್ತಿಗಳನ್ನಾಡಿದರು.

ಆರಂಭದಲ್ಲಿ ಶ್ರೀಮತಿ ಸಿ. ದೇವಕಿ ಅಮ್ಮರವರು ಬಂದ ಅತಿಥಿಗಳನ್ನು ಸ್ವಾಗತಿಸಿದರು. ಕಾರ್ಯದರ್ಶಿ ಶ್ರೀ ಎಸ್. ಸ್ಕಂದರ ಹೊಳ್ಳರು ವರದಿಗಳನ್ನು ಓದಿ ಹೇಳಿದರು. ಕೊನೆಗೆ ಪಂಚಾಯತ್ ವೈಸ್ ಚೇರ್‌ಮೇನ್ ಶ್ರೀ ವಂಜಿಗದ್ದೆ ಈಶ್ವರ ಭಟ್ಟರು ವಂದನಾರ್ಪಣೆ ಸಲ್ಲಿಸಿದರು.

ಬಿಳೀ ತೊನ್ನು

ಮಹಾತ್ಮಾ ಪ್ರದತ್ತ ಬಿಳೀ ತೊನ್ನು ಅದಲ್ಲಿ ಹಚ್ಚಿದಲ್ಲಿ ಅದು ಹೋಗಿ ಚರ್ಮದ ಬಣ್ಣ ಬರುವದು. ಬೆಲೆ ರೂ. ೧೦/- Rs. 10/-

Himalaya Ayurved Bhavan (7)
P. O. Katri Sarai (Gaya)

ಶ್ರೀ ಕೆ.ಕೆ.ಶೆಟ್ಟಿ,ಎಂ.ಎಲ್. ಸಿ.ಯವರ
ನವಕಾಲಕ್ಕೊಪ್ಪುವ ಪುಸ್ತಕಗಳು

ದೇಶ ಭಕ್ತ	1=25
ಪ್ರೇಮ ವಿಜಯ	1=00
ಮುಂದಿನ ದೇವರು	0=25
ವ್ಯಭಿಚಾರಿಣಿ ಯಾರು?	1=00
ಹೆಂಡ್ತಿ ಗಂಡನಾದರೆ?	0=25
ಪುರುಷವಧು	0=25
ಸನ್ಯಾಸಿಯ ಸೋಗಿನಲ್ಲಿ	0=75
ಸಂಶಯ ಪಿಶಾಚಿ	0=75
ಕುಶಲವ	0=50
ಚಿತ್ರಾಂಗದೆ	0=60

ಪ್ರತಿಗಳು ಸಿಗುವ ಸ್ಥಳಗಳು:-
ನವಯುಗ ಪ್ರೆಸ್, ಉಡುಪಿ.
ನವಭಾರತ ಬುಕ್ ಡಿಪೊ, ಉಡುಪಿ.

ರೈತ ಭಾಂದವರ ಜೀವನ ಸಂಗಾತಿ..........

ಇಮಾನಿ ಕ್ರೂಡ್ ಆಯಿಲ್ ಇಂಜಿನ್

(5, 7, 10 & 13 H. P.) ಮತ್ತು ಪಂಪು ಸೆಟ್ಟುಗಳು..........

ಎಸ್. ಇ. ಐ. ಇಲೆಕ್ಟ್ರಿಕ್ ಮೋಟಾರು

(½ H.P. ಯಿಂದ 2. H.P. ವರೇಗೆ) ಮತ್ತು ಪಂಪು ಸೆಟ್ಟುಗಳು......

ಬ್ಲೂ ಸ್ಟಾರ್ ಸ್ಟಾರ್ಟರುಗಳು.........

ಪ್ರಪ್ರಥಮ ವಿಮಾ ರಕ್ಷಣೆಗೆ ಒಳಪಟ್ಟಿರುವ ಸ್ಟಾರ್ಟರ್‌ಗಳು.

ಏಕೈಕ ವಿತರಕರು:—

ಸ್ವಾಮಿ ಇಲೆಕ್ಟ್ರಿಕಲ್ಸ್,

ರಿ. ಆಫೀಸು: ಕಾರ್ಕಳ. ಮಾರಾಟ ವಿಭಾಗ: ಬಲ್ಮಠ ರಸ್ತೆ, ಮಂಗಳೂರು-1

ಅಸ್ಥಮಾ ಪೀಡಿತರ ಗಮನಕ್ಕೆ

ಹಿಮಾಲಯದ ಪ್ರಸಿದ್ಧ ಅಸ್ತಮಾ ನಿವಾರಕ ಮೂಲಿಕೆಯನ್ನು ದಿ. 29-10-66 ಹುಣ್ಣಿಮೆಯ ರಾತ್ರಿ ಹಾಲು ಮತ್ತು ಅಕ್ಕಿಯಿಂದ ತಯಾರಿಸಿದ ಖೀರಿನಲ್ಲಿ ತೆಗೆದು ಕೊಳ್ಳುವದರಿಂದ ಅಸ್ತಮಾ, ಗೂರಲು, ಕೆಮ್ಮು, ಉಬ್ಬಸ, ಮೇಲುಸಿರು ಮತ್ತು ಶ್ವಾಸ ಕಟ್ಟುವಿಕೆ ಇವುಗಳು ನಿವಾರಿಸಲ್ಪಡುತ್ತವೆ. ಕೂಡಲೇ ಇಂಗ್ಲೀಷಿನಲ್ಲಿ ಬರೆಯಿರಿ.

Shri Mahatma Sidh Baba Sewa Ashram
P. O. Chitrkot, (Uttar Pradesh)

Registered with the Registrar
of News Papers for India
under No. K. N. 3546/'57

REGD. No. B. G. 176
LICENCE No. 31
Licensed to Post without Prepayment

ವಿವೇಚನೆ

ಪೂರ್ವ - ಪಶ್ಚಿಮ ಸಂಸ್ಕೃತಿ ಸಂಗಮ - ನೆಹರು

ನೆಹರೂ ಅವರದು ಕ್ಲಿಷ್ಟ ವ್ಯಕ್ತಿತ್ವ. ಈ ಮಾತನ್ನು ನೆಹರೂರನ್ನು ಬಲ್ಲವರೆಲ್ಲ ಒಪ್ಪಿಕೊಳ್ಳುತ್ತಾರೆ. ಜವಾಹರಲಾಲರು ಆಂತರಿಕವಾಗಿ ತಮ್ಮನ್ನು ತಾವೇ ವಿಭಜಿಸಿಕೊಂಡಿದ್ದರು. ಈ ವಿಭಜನೆಯಿಂದ ಅವರ ಉದ್ದೇಶ ಹಾಗೂ ವ್ಯಕ್ತಿತ್ವ ಸಮತೋಲನಕ್ಕೆ ಯಾವುದೇ ಭಂಗ ಬರಲಿಲ್ಲ. ಖ್ಯಾತ ಇಂಗ್ಲೀಷ್ ಲೇಖಕ ಜಾನ್ ಗಂಥರ್ ನೆಹರೂರನ್ನು ೧೯೩೭ರಲ್ಲಿ ಭೇಟಿಯಾದರು. ಅವರು ನೆಹರೂ ಅವರ ಬಗ್ಗೆ ತಮ್ಮ ಅಭಿಪ್ರಾಯ ವ್ಯಕ್ತಪಡಿಸುತ್ತ "ನೆಹರೂ ಪಾಶ್ಚಾತ್ಯನಾದ ಭಾರತೀಯ, ಸಮಾಜವಾದಿಯಾದ ಶ್ರೀಮಂತ ಜನನಾಯಕನಾದ ಮಹಾ ವ್ಯಕ್ತಿ" ಎಂದು ಬಣ್ಣಿಸಿದ್ದಾರೆ.

ಅಂತರಂಗ ಪರಿಶೋಧನೆ, ಅವರ ವ್ಯಕ್ತಿತ್ವದ ವೈಶಿಷ್ಟ್ಯವಾಗಿತ್ತು. ಈ ವೈಶಿಷ್ಟ್ಯದಿಂದಾಗಿ ತಮ್ಮ ಸುತ್ತುಮುತ್ತಲಿನ ವಾತಾವರಣಕ್ಕೆ ಕೂಡಲೇ ಹೊಂದಿಕೊಳ್ಳುತ್ತಿದ್ದರು. ನೆಹರು ಅವರು ಬಾಲ್ಯದ ಬಹುತೇಕ ಸಮಯವನ್ನು ತಾಯಿಯೊಂದಿಗೆ ಹಾಗೂ ಇಂಗ್ಲೀಷ್ ಶಿಕ್ಷಕರೊಂದಿಗೆ ಕಳೆದರು. ತಾಯಿಯಿಂದ ಅವರು ಪುರಾಣ ಪುಣ್ಯಕಥೆಗಳನ್ನೂ, ಜಾನಪದ ಕಥೆಗಳನ್ನೂ ಕೇಳುತ್ತಿದ್ದರು. ಪ್ರಾಧ್ಯಾಪಕ ಬ್ರುಕ್ಸ್ ಬಾಲಕ ನೆಹರೂ ಅವರಲ್ಲಿ ಸಾಹಿತ್ಯ ಅಭಿರುಚಿಯನ್ನೂ ಹಾಗೂ ವಿಜ್ಞಾನ ಮತ್ತು ಅವರ ನಿಗೂಢತೆ ಬಗ್ಗೆ ಕುತೂಹಲವನ್ನೂ ಕೆರಳಿಸಿದರು. ಇವೆಲ್ಲವುಗಳಿಗಿಂತಲೂ ಇಂಗ್ಲಿಷ್ ಶಿಕ್ಷಣ ಪ್ರಭಾವ ಬೀರಿತು. ಪಾಶ್ಚಾತ್ಯ ಶಿಕ್ಷಣವು ಇಂಗ್ಲೀಷರ ವಿಚಾರ ಸರಣಿ, ಜೀವನ ವಿಧಾನ ಮತ್ತು ಪಾಶ್ಚಾತ್ಯ ಸಂಸ್ಕೃತಿ ಹಾಗೂ ನಾಗರಿಕತೆಗಳಲ್ಲಿನ ಉತ್ಕೃಷ್ಟವು ಅಂಶಗಳನ್ನು ಒಳಗೊಂಡಿತ್ತು.

ಕೆಲವು ವರ್ಷಗಳ ನಂತರ ನೆಹರು ಅವರು ಒಂದೆಡೆ ತಮ್ಮ ವ್ಯಕ್ತಿತ್ವವನ್ನು ಕುರಿತು ಬರೆಯುತ್ತಾ "ನಾನು ಪೌರ್ವಾತ್ಯ ಹಾಗೂ ಪಾಶ್ಚಾತ್ಯ ಸಂಸ್ಕೃತಿಗಳ ವಿಲಕ್ಷಣ ಸಮ್ಮಿಶ್ರಣವಾಗಿದ್ದೇನೆ. ಸ್ವದೇಶದಲ್ಲಷ್ಟೇ ಅಲ್ಲ ಎಲ್ಲೆಲ್ಲೂ ಹೊಂದಿಕೊಳ್ಳಲಾರದ ಸ್ವಭಾವದವನಾಗಿದ್ದೇನೆ" ಎಂದು ಹೇಳಿದ್ದಾರೆ. ನೆಹರೂ ಅವರ ಸಾರ್ವಜನಿಕ ಕಾರ್ಯ ಚಟುವಟಿಕೆಗಳಲ್ಲಿ ಅಷ್ಟೇ ಅಲ್ಲ ಜೀವನದಲ್ಲಿಯೂ ಈ ಬಗೆಯ ಒಂದು ವಿಕಾಶನ ವ್ಯಕ್ತಪಟ್ಟಿತು.

ನೆಹರೂ ಅವರಲ್ಲಿನ ಇಬ್ಬಗೆಯ ಪ್ರಜ್ಞೆಯೇ ಅವರು ಬಾಲ್ಯದಿಂದಲೇ ಅಂತಾರಾಷ್ಟ್ರೀಯ ದೃಷ್ಟಿಕೋನವನ್ನು ರೂಢಿಸಿಕೊಳ್ಳಲು ಕಾರಣವಾಯಿತು. ಗ್ಯಾರಿಬಾಲ್ಡಿ, ಲೆನಿನ್, ಸಿಮನ್ ಬೊಲಿವರ್, ಮತ್ತು ಸನ್‌ಯಾತ್ ಸೇನ್ ಇವರೇ ಮೊದಲಾದ ಕ್ರಾಂತಿಕಾರಿಗಳ ಕೃತಿಗಳಿಂದ ಪ್ರಭಾವಿತರಾದ ಅವರು, ಇತಿಹಾಸವನ್ನು ಬದಲಿಸಲು ಯತ್ನಿಸುವವರಿಗೆ ಇತಿಹಾಸ ಅನುಕೂಲವಾಗಿದೆ ಎಂಬ ಸತ್ಯಾಂಶವನ್ನು ಮನನ ಮಾಡಿಕೊಂಡರು. ನೆಹರು ಅವರ ರಾಜಕೀಯ ಚರಿತ್ರಕಾರರಾದ ಮೈಖೆಲ್ ಬ್ರೆಚರ್ ಅವರ ಮಾತಿನಲ್ಲಿ ಹೇಳುವುದಾದರೆ "ಗ್ಲಿಂಪ್ಸಸ್ ಆಫ್ ವರ್ಲ್ಡ್ ಹಿಸ್ಟರಿ" ನೆಹರೂ ಅವರ ರಾಜಕೀಯ ದೃಷ್ಟಿಕೋನದ ವಿಕಾಸದ ದಿಶೆಯಲ್ಲಿ ಒಂದು ಮಹತ್ವದ ಮೈಲಿಗಲ್ಲು. ಅದು ಅವರ ಅಂತರ್ಗತ ಶುದ್ಧ ಆದರ್ಶವಾದದ ಪ್ರತಿರೂಪ.

ಗಾಂಧೀಜಿ ಅವರು ಭಾರತಕ್ಕೆ ತನ್ನತನದ ಅರಿವು ಮಾಡಿಕೊಟ್ಟರೆ, ನೆಹರೂ ಅವರು ಭಾರತೀಯರಿಗೆ ಇತರರ ಅರಿವು ಮಾಡಿಕೊಟ್ಟರು. ನೆಹರೂ ಅವರು ೧೩ ವರ್ಷಗಳ ಬಳಿಕ ಅಂದರೆ ೧೯೨೬ ಮಾರ್ಚ್ ತಿಂಗಳಲ್ಲಿ ಯೂರೋಪಿಗೆ ಪುನಃ ಭೇಟಿ ನೀಡಿದರು. ವಿದೇಶಗಳಲ್ಲಿ ಸುಮಾರು ಎರಡು ವರ್ಷಗಳ ಕಾಲ ಇದ್ದರು. ೧೯೨೭ ಡಿಸೆಂಬರ್ ತಿಂಗಳಲ್ಲಿ ಭಾರತಕ್ಕೆ ಮರಳಿ ಬಂದರು. ಈ ಭೇಟಿಯು ಅವರ ರಾಜಕೀಯ ವಿಚಾರ ಸರಣಿಯ ಮೇಲೆ ಬಹುಮಟ್ಟಿಗೆ ಪ್ರಭಾವ ಬೀರಿತು. ನೆಹರೂ ಅವರು ಅನಂತರ ಕಾಂಗ್ರೆಸ್ ಸಂಸ್ಥೆಯ ವಿಚಾರ ಪ್ರವೃತ್ತಿಯ ಮೇಲೆ ಪ್ರಭಾವ ಬೀರಿದರು. ಭಾರತದ ಸ್ವಾತಂತ್ರ್ಯ ಹೋರಾಟಕ್ಕೆ ವಿಶ್ವವ್ಯಾಪಿ ಮಹತ್ವ ಪ್ರಾಪ್ತವಾಗಬೇಕಾದರೆ, ಭಾರತವು ಇತರ ಕಡೆಗಳಲ್ಲಿ ನಡೆಯುವ ಅನೇಕ ಮಹತ್ವಪೂರ್ಣ ಆಂದೋಲನಗಳೊಂದಿಗೆ ಸಂಪರ್ಕವಿಟ್ಟುಕೊಳ್ಳಬೇಕೆಂದು ನಿರ್ಧಾರಕ್ಕೆ ಬಂದರು. ಭಾರತದ ಸ್ವಾತಂತ್ರ್ಯ ಹೋರಾಟವು, ವಿಶ್ವದ ಪ್ರಗತಿಯ ವಿಶಾಲ ಪ್ರವಾಹದ ಒಂದು ಭಾಗವಾಗಬೇಕೆಂದು ಬಯಸಿದರು. ಮಗಳು ಇಂದಿರಾಗೆ ಬರೆದ ಪತ್ರವೊಂದರಲ್ಲಿ ಈ ಬಗ್ಗೆ ಪ್ರಸ್ತಾಪಿಸುತ್ತ, ಹೀಗೆ ಹೇಳಿದ್ದಾರೆ.

"ಇಂದು ನಾವು ಭಾರತದ ಬಂಧವಿಮೋಚನೆಗೆ ಹೋರಾಡುತ್ತಿದ್ದೇವೆ. ವಾಸ್ತವವಾಗಿಯೂ ಇದು ಮಹತ್ಕಾರ್ಯ. ಆದರೆ ಮಾನವ ಕುಲದ ಮಾರ್ಗ ಇನ್ನೂ ಹೆಚ್ಚಿನ ಮಹತ್ವದ್ದಾಗಿದೆ. ನಮ್ಮ ಸ್ವಾತಂತ್ರ್ಯ ಹೋರಾಟವು ಮಾನವ ಜನಾಂಗದ ದುಃಖ ದುಮ್ಮಾನಗಳನ್ನು ನಿವಾರಿಸಲು ನಡೆದಿರುವ ವಿಶ್ವವ್ಯಾಪೀ ಹೋರಾಟದ ಒಂದು ಅಂಗವಾಗಿದೆ. ವಿಶ್ವದ ಪ್ರಗತಿಗೆ ನಾವು ನಮ್ಮ ಅಳಿಲು ಸೇವೆಯನ್ನು ಸಲ್ಲಿಸುತ್ತಿದ್ದೇವೆಯೆಂದೂ ನಮಗೆ ಸಂತೋಷವಾಗಿದೆ" ಎಂದು ಬರೆದಿದ್ದಾರೆ.

ಭಾರತವು ಸ್ವತಂತ್ರವಾದ ಬಳಿಕ ಅನೇಕ ವರ್ಷಗಳವರೆಗೆ, ನೆಹರೂ ಅವರು, ಎಲ್ಲರಿಗೂ ಸಮಾನ ಅವಕಾಶವಿರುವ ವಿಶ್ವವ್ಯವಸ್ಥೆಯ ಸ್ಥಾಪನೆಗಾಗಿ ನಡೆದ ಹೋರಾಟದಲ್ಲಿ ಹೆಚ್ಚು—ಹೆಚ್ಚಾಗಿ ಭಾಗವಹಿಸಿದರು. ಭಾರತವನ್ನು ಕಾಮನ್‌ವೆಲ್ಥದಿಂದ ಅಥವಾ ವಿಶ್ವದಿಂದ ಪ್ರತ್ಯೇಕಿಸುವ ಯಾವುದೇ ಯತ್ನವನ್ನು ಅವರು ಬಲವಾಗಿ ವಿರೋಧಿಸಿದರು.

"ಭಾರತವು ವಿಶ್ವ ವ್ಯವಹಾರಗಳಿಂದ ಪ್ರತ್ಯೇಕವಿರಲು ಸಾಧ್ಯವೆಂಬುದು ಅವಾಸ್ತವ" ಎಂದು ನೆಹರು ಅಭಿಪ್ರಾಯಪಟ್ಟರು. ಭಾರತವು ಪ್ರತ್ಯೇಕವಾಗಿ ಬಾಳಲಾರದು. ಯಾಕೆಂದರೆ ಇಂದಿನ ವಿಶ್ವದಲ್ಲಿ ಸಣ್ಣ ಅಥವಾ ದೊಡ್ಡ ರಾಷ್ಟ್ರವೇ ಆಗಲಿ ಪ್ರತ್ಯೇಕವಾಗಿರಲು ಸಾಧ್ಯವಿಲ್ಲವೆಂದು ನೆಹರೂ ಸ್ಪಷ್ಟಪಡಿಸಿದರು.

ನೆಹರೂ ಅವರು ಭಾರತದ ಪ್ರಧಾನ ಮಂತ್ರಿಗಳಾದ ಬಳಿಕ ಅವರಿಗೆ ಒಂದೇ ಒಂದು ಮಹತ್ವಾಕಾಂಕ್ಷೆಯಿತ್ತು. ಪ್ರಾಚೀನ ಭಾರತದ ಆದರ್ಶ ಹಾಗೂ ಇಪ್ಪತ್ತನೆಯ ಶತಮಾನದ ಆದರ್ಶಗಳು ಸಮ್ಮಿಳಿತಗೊಂಡ ಜೀವನ ವಿಧಾನವೊಂದನ್ನು ಅವರು ರೂಪಿಸಲು ಬಯಸಿದ್ದರು.

ಭಾರತವು ತನ್ನತನವನ್ನು ಬೆಳೆಸಿಕೊಂಡು ಪಾಶ್ಚಾತ್ಯ ರಾಜಕೀಯ ಹಾಗೂ ಆರ್ಥಿಕ ವ್ಯವಸ್ಥೆಗಳ ಅನುಸಂಧಾನ ಮಾಡಲು ನೆಹರೂ ಅವರೇ ಮುಖ್ಯವಾಗಿ ಕಾರಣರಾದರು.

ಅಂತಾರಾಷ್ಟ್ರೀಯ ಮಟ್ಟದಲ್ಲಿ ನೆಹರೂ ಅವರು ಒಂದೇ ವಿಶ್ವದ ಆದರ್ಶಸಾಧನೆಗೆ ಶ್ರಮಿಸಿದರು. ನೆಹರೂ ರಾಷ್ಟ್ರೀಯತಾವಾದಕ್ಕೆ ಬೆಂಬಲ ನೀಡಿದರು. ಆದರೆ ರಾಷ್ಟ್ರೀಯತಾವಾದವು ಸ್ವರೂಪದಲ್ಲಿ ಆಕ್ರಮಣಕಾರಿಯಾಗಿರಬಾರದೆಂದೂ, ಅಂತಾರಾಷ್ಟ್ರೀಯ ಅಭಿವೃದ್ಧಿಗೆ ಅಂತಕಕಾರಿಯಾಗಬಾರದೆಂದೂ ಒತ್ತಿ ಹೇಳಿದರು. ದೇಶವು ಸ್ವಾತಂತ್ರ್ಯಕ್ಕಾಗಿ ಹೋರಾಟ ನಡೆಸಿದಾಗ ವಿಭಿನ್ನ ಗುಂಪುಗಳನ್ನು ಒಂದುಗೂಡಿಸಲು ರಾಷ್ಟ್ರೀಯತಾವಾದವು ಪ್ರಬಲ ಶಕ್ತಿಯಾಗಿದೆಯೆಂಬುದನ್ನು ನೆಹರೂ ಚೆನ್ನಾಗಿ ಬಲ್ಲವರಾಗಿದ್ದರು.

ಯುರೋಪಿನಲ್ಲಿ ರಾಷ್ಟ್ರೀಯತಾವಾದವು ೧೯ನೆಯ ಶತಮಾನದಲ್ಲಿ ರಾಷ್ಟ್ರಗಳನ್ನು ಕಟ್ಟಲು ಹಾಗೂ ಅವುಗಳನ್ನು ಈಗಿನಂತೆ ಬಲಿಷ್ಠ ರಾಷ್ಟ್ರಗಳನ್ನಾಗಿ ಮಾಡಲು ಯಾವ ರೀತಿ ಕಾರಣವಾಯಿತೆಂಬುದನ್ನು ನೆಹರೂ ವಿವರಿಸಿದರು.

ರಾಷ್ಟ್ರೀಯತಾವಾದವು ಒಂದು ನಿರ್ದಿಷ್ಟ ಹಂತದ ಬಳಿಕ ಸಂಕುಚಿತ ಪ್ರವೃತ್ತಿಯಾಗುವುದೆಂದೂ ದೇಶದ ಹೊರಗಡೆ ಅದು ಹಬ್ಬಿದಾಗ ಅದು ಅತ್ಯಂತ ಅಪಾಯಕಾರಿಯಾಗುವುದೆಂದೂ ನೆಹರೂ ಅವರಿಗೆ ಖಚಿತವಾಗಿತ್ತು.

ನೆಹರೂ ಅವರು ವಿಶ್ವ ಸಂಸ್ಥೆಗೆ ತಮ್ಮ ದೃಢವಾದ ಬೆಂಬಲ ನೀಡಿದರು. ಸ್ವತಂತ್ರ ಪರಮಾಧಿಕಾರವುಳ್ಳ ರಾಷ್ಟ್ರಗಳ ನಡುವೆ ಸಮಾನತೆ ಹಾಗೂ ಮೈತ್ರಿಯ ತಳಹದಿಯ ಮೇಲೆ ಸಹಜೀವನ ಸಾಧ್ಯವೆಂದು ನೆಹರೂ ಪ್ರತಿಪಾದಿಸಿದರು. "ಅಮೇರಿಕ ಏಷ್ಯಾ ಮತ್ತು ಯೂರೋಪಿನ ಸಮಸ್ಯೆಗಳನ್ನು ಪ್ರತ್ಯೇಕವಾಗಿ ಪರಿಗಣಿಸಲು ಸಾಧ್ಯವಿಲ್ಲ. ಯಾಕೆಂದರೆ ಇವು ವಿಶ್ವ ಸಮಸ್ಯೆಯ ಒಂದು ಅಂಗವಾಗಿವೆ" ಎಂದೂ ನೆಹರೂ ಅವರು ಹೇಳಿದರು.

ನೆಹರೂ ಅವರು ಇತಿಹಾಸದಲ್ಲಿ ನಿರ್ವಹಿಸಿದ ಪಾತ್ರದ ಮೌಲ್ಯಾಂಕನ ಮಾಡುತ್ತ ಬ್ರಿಟಿಷ್ ಇತಿಹಾಸಕಾರರೊಬ್ಬರು ಈ ರೀತಿ ಬರೆದಿದ್ದಾರೆ...

"ಈ ವ್ಯಕ್ತಿತ್ವವನ್ನು ಯಾವ ವರ್ಗಕ್ಕೆ ಸೇರಿಸಬೇಕೆಂಬುದೇ ನನಗೆ ತಿಳಿಯದಾಗಿದೆ. ಈ ದಿಶೆಯಲ್ಲಿ ಯತ್ನಿಸುವುದಾದರೆ ನೆಹರೂ, ಪಾಶ್ಚಿಮಾತ್ಯ ಹಾಗೂ ಇತರ ಸಂಸ್ಕೃತಿಗಳ ನಡುವೆ ಸಂಬಂಧ ಕಲ್ಪಿಸುವ ಕೊಂಡಿಯಾಗಿದ್ದಾರೆ; ದೇಶಬಾಂಧವರಿಗೆ ಫಲಪ್ರದ ಹಾಗೂ ವೈಶಿಷ್ಟ್ಯಪೂರ್ಣ ಸೇವೆ ಸಲ್ಲಿಸಿದ ವ್ಯಕ್ತಿಯಾಗಿದ್ದಾರೆಂದು ಮಾತ್ರ ಹೇಳಬಲ್ಲೆ".

ಮೈಸೂರು ಸರಕಾರದಿಂದ ಸಂಭಾವನೆ ಪಡೆದ ಗ್ರಂಥ

ಭಾರತದ ವೀರಾಂಗನೆಯರು

(ಐತಿಹಾಸಿಕ ಜೀವನದ ಘಟನೆಗಳು)

ಗ್ರಂಥಕರ್ತ— ಕೆ. ಎನ್. ಭಟ್, ಶಿರಾಡಿಪಾಲ್

.... "ಈ ಗ್ರಂಥದಲ್ಲಿನ ವೀರ ಮಹಿಳೆಯರಲ್ಲಿ ಝಾನ್ಸಿ ಲಕ್ಷ್ಮೀಬಾಯಿಯ ಹೊರತು ಮಿಕ್ಕವರ ಜೀವನೇತಿಹಾಸ ಇದುತನಕ ಸಮಗ್ರವಾಗಿ ಕನ್ನಡ ಸಾಹಿತ್ಯದ ಮೂಲಕ ಬೆಳಕಿಗೆ ಬಂದಿಲ್ಲ. ಆದುದರಿಂದ ಕನ್ನಡಿಗರಿಗೆ ಈ ಜೀವನ ಘಟನೆಗಳು ಮೆಚ್ಚಿಗೆಯಾಗುವುದೆಂಬುದರಲ್ಲಿ ಸಂದೇಹವಿಲ್ಲ. ಶ್ರೀ ಶಿರಾಡಿಪಾಲರು ತಮ್ಮ ವೀರ ಶೈಲಿಯಲ್ಲಿಯೇ ವೀರಾಂಗನೆಯರ ಕುರಿತು ಬರೆದಿದ್ದಾರೆ..........................."

(ಶ್ರೀ ಕೆ. ಕೆ. ಪೈಗಳ ಮುನ್ನುಡಿಯಿಂದ)

ಕಣ್ಮನ ಸೆಳೆವ ತ್ರಿವರ್ಣ ಮುಖಪತ್ರ

ಬಿಳಿ ಕಾಗದ! 120 ಪುಟಗಳು! ಬೆಲೆ ರೂ. 1-50

ಒಂದು ಪ್ರತಿ ಬೇಕಾದವರು ರೂ. 1—75 ಮ.ನಿ.ಯಾರ್ಡರು ಮಾಡಿ ತರಿಸಿಕೊಳ್ಳಬಹುದು.

ಪ್ರತಿಗಳಿಗೆ ಬರೆಯಿರಿ—

ನವಭಾರತ ಬುಕ್ ಡಿಪೋ, ಪಾಲುಕೋಟೆ, ಉಡುಪಿ.

Edited, Printed & Published by K. H. Shetty at the Navayuga Press, Udipi, S. India.

ನವಯುಗ

3—11—1966



೨೦
ಪೈಸೆ